JC0836

UNIVERSAL
LIBRARY
OU_200836
UNIVERSAL
LIBRARY

OSMANIA UNIVERSITY LIBRARY

Call No A294.11/V46R. Accession No K.5232

Author ವಿರೇಶಾಯ್ H. P.

Title ಶ್ರೀಮದ್ ಪಂಡಿತ ಸ್ತೋತ್ರ. ಭಾಗ. 7

This book should be returned on or before the date last marked below. 1949.

ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ

ಸಂಖ್ಯೆ—೭

RIG-VEDA

ಸಾಯಣ ಭಾಷ್ಯ ಸಮೇತಾ

ಋಗ್ವೇದ ಸಂಹಿತಾ

(ಕರ್ನಾಟಕ ಭಾಷಾರ್ಥಾನುವಾದನಿವರಣೆಗಳೊಡನೆ)

ಭಾಗ—೭

ಪ್ರಥಮಾಷ್ಟಕದಲ್ಲಿ ಆರನೆಯ ಅಧ್ಯಾಯವು.

ಪ್ರಥಮ ಮಂಡಲದ ಸೂಕ್ತಗಳು—೮೧-೯೪

Translated with Exhaustive Critical Notes
by
ASTHANA MAHAVIDWAN
H. P. VENKATA RAO.
Editor.

Printed at
SREE VINAYAK PRINTING WORKS, MYSORE.
1949

Published by the gracious permission of

His Highness

Sri Jayachamarajendra Wadiyar Bahadur,

G.C.V.B., G.C.S.I., Maharaja of Mysore.



ಮೈಸೂರು ವೇಶವನ್ನಾಳುವ ಧರ್ಮಪ್ರಭುಗಳೂ ಆದ ಶ್ರೀಮನ್ಮಹಾರಾಜ
ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್,
ಜಿ.ಸಿ.ಬಿ., ಜಿ.ಸಿ.ಎಸ್.ಐ. ರವರು.

ವೇದಪ್ರಕಟನಕಾರ್ಯಕ್ಕಾಗಿ ನಿಯಮಿತವಾಗಿರುವ

ವೇದವಿಮರ್ಶನ ವಿದ್ವನ್ಮಂಡಲಿ

ಅಧ್ಯಕ್ಷರು :

ಶ್ರೀ ಜಗದ್ಗುರು ನಾಗಲಿಂಗಸರಿವ್ರಾಜಕಾಚಾರ್ಯ ಪೀಠಾಧ್ಯಕ್ಷರಾದ


ಶಿಲ್ಪಿಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳವರು.

Translator & Editor :

ಆಸ್ಥಾನ ಮಹಾವಿದ್ವಾನ್ H. P. ವೆಂಕಟರಾವ್

ಸಹಾಯಕ ವಿದ್ವನ್ಮಂಡಲಿ

1. **ಜಿ. ಕೃಷ್ಣಮೂರ್ತಿಭಟ್ಟ,** ಸ್ಯಾಕರಣವಿದ್ವಾನ್, ಶ್ರೀಮನ್ಮಹಾರಾಜರವರ ಸಂಸ್ಕೃತಮಹಾಪಾಠ ಶಾಲಾ, ಮೈಸೂರು.
2. **ಆಸ್ಥಾನ್ ವಿದ್ವಾನ್ ಬ್ರ।। ಶ್ರೀ।। H. ಗಂಗಾಧರಶಾಸ್ತ್ರಿಗಳು,** ಜ್ಯೌತಿಷ ವಿದ್ವಾನ್ ಮತ್ತು ಕರ್ನಾಟಕ ಭಾಷಾಪಂಡಿತರು,
3. ಬ್ರ।। ಶ್ರೀ।। **ಶ್ರೀನಿವಾಸಶಾಸ್ತ್ರಿಗಳು,** ಋಗ್ವೇದ ಘನಪಾಠಿಗಳು.
4. **ಕ್ರೀ।। ಶ್ರೀ।। ಹಿಟ್ಟುವಳ್ಳಿ ಬಿಳಿಗಿರಿರಂಗಾಜೋಯಿಸರು,** ಶ್ರೌತ ವಿದ್ವಾನ್.
5. ಬ್ರ।। ಶ್ರೀ।। **ಹಿಟ್ಟುವಳ್ಳಿ ದೇವರಭಟ್ಟರು,** ವಿವಾಹಾಂಸಾದರ್ಶನ ಪಂಡಿತರು.
6. ಬ್ರ।। ಶ್ರೀ।। G. N. **ಚಕ್ರವರ್ತಿ** M. A.
   Professor of Sanskrit. St. Philomina's College, Mysore.
7. ಬ್ರ।। ಶ್ರೀ।। **ವೆಂಕಟರಮಣಾಚಾರ್,** M. A., B. T., ಸಾಹಿತ್ಯವಿದ್ವಾನ್.
8. ಬ್ರ।। ಶ್ರೀ।। S. **ರಂಗನಾಥನ್,** ಸಾಹಿತ್ಯವಿದ್ವಾನ್, ಅರಮನೆ ಸರಸ್ವತೀ ಭಂಡಾರ.
9. ಬ್ರ।। ಶ್ರೀ।। **ಪುತ್ತೂರು ಅನಂತಕೃಷ್ಣಾಚಾರ್,** ಸಾಹಿತ್ಯ ವಿದ್ವಾನ್,
   Govt Oriental Research Institute, Mysore.
10. ಬ್ರ।। ಶ್ರೀ।। S. **ಸೀತಾರಾಮಶಾಸ್ತ್ರಿಗಳು,** ವಿಭೈಷ್ಣ ಪಂಡಿತರು.
    Govt Oriental Research Institute, Mysore.



ಶ್ರೀ ಜಗದ್ಗುರು ನಾಗಲಿಂಗಪರಿವ್ರಾಜಕಾಚಾರ್ಯ ಪೀಠಾಧ್ಯಕ್ಷರಾದ
ಶಿಲ್ಪಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳವರು
ವೇದವಿಮರ್ಶನ ವಿದ್ವನ್ಮಂಡಲಿಯ ಅಧ್ಯಕ್ಷರು

ಪೀಠಿಕೆ.

ಋಗ್ವೇದವನ್ನೆ ಅರ್ಥಾನುವಾದವಿವರಣೆಗಳೊಡನೆ ವಿವರಿಸುವಾಗ ಪ್ರತಿಸೂಕ್ತದ ಆದಿಯಲ್ಲಿಯೂ ಆ ಸೂಕ್ತಕ್ಕೆ ಸಂಬಂಧಪಟ್ಟ ಋಷಿದೇವತಾಛಂದಸ್ಸುಗಳನ್ನೂ, ವಿನಿಯೋಗವನ್ನೂ ಹೇಳುವುದು ಆರ್ಷೇಯಕಾಲದಿಂದ ಬಂದ ಪದ್ಧತಿಯು. ಇದನ್ನನುಸರಿಸಿ ಭಾಷ್ಯಕಾರರಾದ ಸಾಯಣಾಚಾರ್ಯರು ಪ್ರತಿಸೂಕ್ತದ ಪ್ರಾರಂಭದಲ್ಲಿ ಋಷಿ ದೇವತಾಛಂದಸ್ಸುಗಳನ್ನು ಅನುಕ್ರಮಣಿಕೆಯಲ್ಲಿರುವಂತೆ ವಿವರಿಸಿ ವಿನಿಯೋಗವನ್ನು ಆಶ್ವಲಾಯನಶ್ರೌತಸೂತ್ರ ದಲ್ಲಿ ಉಕ್ತವಾಗಿರುವಂತೆ ಹೇಳಿರುವರು. ಇಲ್ಲಿ ಅನುಕ್ರಮಣಿಕೆಯೆಂದರೆ ಶೌನಕಋಷಿಗಳಿಂದ ಪ್ರೋಕ್ತವಾದ ಸರ್ವಾನುಕ್ರಮಣಿಯು. ಇದರಲ್ಲಿ ಪ್ರತಿಸೂಕ್ತದಲ್ಲಿರುವ ಋಕ್ಸಂಖ್ಯೆ, ಆ ಋಕ್ಕುಗಳ ದ್ರಷ್ಟೃಗಳಾದ ಋಷಿಗಳ ಹೆಸರು, ಸೂಕ್ತದ ದೇವತೆ ಮತ್ತು ಋಕ್ಕುಗಳ ಛಂದಸ್ಸು ಮೊದಲಾದ ವಿಷಯಗಳ ನಿರೂಪಣೆ ಇದೆ. ಈ ಅನುಕ್ರಮಣಿಕೆಯಲ್ಲದೆ ಋಷಿಗಳ ವಿಷಯಗಳನ್ನು ಹೇಳುವ ಆರ್ಷೇಯಾನುಕ್ರಮಣಿ, ಛಂದಸ್ಸಿನ ವಿಷಯವನ್ನು ಹೇಳುವ ಛಂದೋನುಕ್ರಮಣಿ ಮೊದಲಾದ ಬೇರೆ ಬೇರೆ ಅನುಕ್ರಮಣಿಕೆಗಳಿವೆ. ಇದನ್ನನುಸರಿಸಿ ಭಾಷ್ಯಕಾರರು ಸೂಕ್ತದ ಋಷಿದೇವತಾಛಂದಸ್ಸುಗಳನ್ನು ವಿವರಿಸುವರು. ವಿನಿಯೋಗಕ್ರಮವನ್ನು ಆಶ್ವಲಾಯನಶ್ರೌತಸೂತ್ರ ವನ್ನನುಸರಿಸಿ ಹೇಳಿರುವರು. ಋಷಿಗಳು, ಅನುಕ್ರಮಣಿಕೆಗಳು, ಶ್ರೌತಸೂತ್ರಗಳು ಮೊದಲಾದ ವಿಷಯಗಳನ್ನು ನಾವು ಋಗ್ವೇದಸಂಹಿತೆಯ ಪ್ರಥಮಭಾಗದಲ್ಲಿ ಪೂರ್ವಪೀಠಿಕಾ ಪ್ರಕರಣದಲ್ಲಿ ಹಿಂದೆ ವಿವರಿಸಿದ್ದರೂ ಪ್ರಕೃತಸಂದರ್ಭ ದಲ್ಲಿ ಛಂದಸ್ಸುಗಳ ವಿಷಯವಾಗಿ ಸೂಕ್ಷ್ಮಪರಿಚಯವನ್ನು ಕೊಡುವುದು ವಾಚಕರ ಹಿತದೃಷ್ಟಿಯಿಂದ ಯುಕ್ತ ವಾಗಿರುವುದು. ಏಕೆಂದರೆ ಋಗ್ವೇದವೆಲ್ಲವೂ ಛಂದೋಬದ್ಧವಾದ ಮಂತ್ರಗಳಿಂದ ಕೂಡಿರುವುದು. ಯಜುರ್ವೇದಾದಿ ಗಳಲ್ಲಿರುವಂತೆ ಗದ್ಯರೂಪವಾದ ವಾಕ್ಯಗಳಿಲ್ಲ. ಇದರಲ್ಲಿರುವ ಮಂತ್ರಗಳೆಲ್ಲವೂ ಛಂದಸ್ಸಿನ ನಿಯಮಕ್ಕೆ ಒಳಪಟ್ಟು ಪ್ರೌಢಶೈಲಿಯ ಭಾಷೆಯಿಂದ ಕೂಡಿರುವುದು. ಇಂತಹ ಛಂದೋಬದ್ಧವಾದ ಮಂತ್ರಗಳಿಗೆ ಋಕ್ಕುಗಳೆಂದು ಹೆಸರು. ಈ ಋಕ್ಕುಗಳಲ್ಲಿ ಅಕ್ಷರಸಂಖ್ಯೆ ಮತ್ತು ಪಾದಸಂಖ್ಯೆಗೆ ಅನುಸಾರವಾಗಿ ಅನೇಕ ಭೇದಪ್ರಭೇದ ಗಳಿರುವುವು. ವೇದಮಂತ್ರಗಳಿಗೆ ದ್ರಷ್ಟೃಗಳಾದ ಋಷಿಗಳು ಅನೇಕರಿರುವುದರಿಂದ ಛಂದಸ್ಸುಗಳಲ್ಲಿ ಕಂಡುಬರುವ ವೈವಿಧ್ಯವು ಸಹಜವಾಗಿಯೇ ಇರುವುದು. ವೇದಾಂಗವೆಂಬ ಹೆಸರಿನಿಂದ ಪ್ರಸಿದ್ಧವಾದ ಪಿಂಗಳಕೃತ ಛಂದಸ್ಸೆಂಬ ಗ್ರಂಥದಲ್ಲಿ ಛಂದಸ್ಸಿನ ವಿವರಗಳು ನಿರೂಪಿತವಾಗಿದ್ದರೂ ಆ ಗ್ರಂಥವು ಅಷ್ಟು ಪ್ರಾಚೀನವೆಂದು ಪರಿಗಣಿಸಲ್ಪಡುವುದಿಲ್ಲ. ಏಕೆಂದರೆ ಆ ಗ್ರಂಥದಲ್ಲಿ ವೇದದಲ್ಲಿ ಹೇಳಿರುವ ಛಂದಸ್ಸಿನ ವಿಷಯಗಳ ಜತೆಯಲ್ಲಿ ಆಧುನಿಕ ಸಂಸ್ಕೃತದಲ್ಲಿ ಬಳಕೆ ಯಲ್ಲಿರುವ ಶ್ಲೋಕಗಳ ವೃತ್ತಲಕ್ಷಣಾದಿಗಳ ವಿವರವೂ ಇರುವುದರಿಂದ ಈ ಗ್ರಂಥವು ಅಷ್ಟು ಪ್ರಮಾಣಾರ್ಹವಲ್ಲ. ಈ ವಿಷಯದಲ್ಲಿ ಕಾತ್ಯಾಯನಮಹರ್ಷಿವಿರಚಿತವಾದ ಸರ್ವಾನುಕ್ರಮಣಿಯೆಂಬ ಗ್ರಂಥವು ಪ್ರಾಚೀನವೂ ಪ್ರಮಾಣಾರ್ಹವೂ ಆಗಿರುವುದರಿಂದ ಅದರಲ್ಲಿರುವ ವಿಷಯನಿರೂಪಣೆಯ ಆಧಾರದ ಮೇಲೆ ಋಗ್ವೇದದ ಛಂದಸ್ಸುಗಳ ವಿಷಯವಾಗಿ ಸೂಕ್ಷ್ಮವಿವರಣೆಯನ್ನು ಇಲ್ಲಿ ಕೊಟ್ಟಿರುವೆವು.

ಛಂದಸ್ಸುಗಳನ್ನು ಕ್ರಮಪಡಿಸುವಾಗ ಅದರಲ್ಲಿರುವ ಅಕ್ಷರಸಂಖ್ಯೆಯನ್ನು ಮಾತ್ರವೇ ಪರಿಗಣಿಸಲಾಗುವುದು. ಅಕ್ಷರಗಳಲ್ಲಿ ದೀರ್ಘ, ಹ್ರಸ್ವ, ಸಂಯುಕ್ತಾಕ್ಷರ ಮೊದಲಾದ ವ್ಯತ್ಯಾಸಗಳಿಗೆ ಪ್ರಾಮುಖ್ಯತೆಯಿಲ್ಲ. ಕ್ಲೃಪ್ತವಾದ

ಅಕ್ಷರಗಳ ಸಂಖ್ಯೆ ಮಾತ್ರವೇ ಛಂದಸ್ಸುಗಳ ಕ್ರಮವನ್ನು ನಿರ್ಣಯಿಸುವುದಕ್ಕೆ ಮುಖ್ಯಸಾಧನವಾಗಿರುವುದು. ಈ ವಿಷಯದಲ್ಲಿ **ಯದಕ್ಷರಪರಿಮಾಣಂ ತಚ್ಛಂದಃ** ಎಂದು ಕಾತ್ಯಾಯನ ಮಹರ್ಷಿಗಳು ಹೇಳಿರುವರು.

ಮುಖ್ಯವಾದ ಛಂದಸ್ಸುಗಳು ಏಳು ಇದ್ದರೂ ಅಕ್ಷರಸಂಖ್ಯೆಗೆ ಅನುಸಾರವಾಗಿ ಹದಿನಾಲ್ಕು ಮುಖ್ಯ ಛಂದಸ್ಸುಗಳಿರುವುವೆಂದು ಪರಿಗಣಿಸಬಹುದು. ಇತರ ಛಂದಸ್ಸುಗಳು ಈ ಮುಖ್ಯಛಂದಸ್ಸುಗಳ ಪ್ರಭೇದಗಳು. ಮುಖ್ಯವಾದ ಛಂದಸ್ಸುಗಳ ಹೆಸರುಗಳನ್ನೂ ಅವುಗಳಲ್ಲಿರುವ ಅಕ್ಷರಸಂಖ್ಯೆಯನ್ನೂ ಕೆಳಗೆ ಕೊಟ್ಟಿವೆ.

1.	ಗಾಯತ್ರೀ	24 ಅಕ್ಷರಗಳು	8.	ಅತಿಜಗತೀ	52 ಅಕ್ಷರಗಳು
2.	ಉಷ್ಣಿಕ್	28 ,,	9.	ಶಕ್ವರೀ	56 ,,
3.	ಅನುಷ್ಟುಪ್	32 ,,	10.	ಅತಿಶಕ್ವರೀ	60 ,,
4.	ಬೃಹತೀ	36 ,,	11.	ಅಷ್ಟಿ	64 ,,
5.	ಪಂಕ್ತಿ	40 ,,	12.	ಅತ್ಯಷ್ಟಿ	68 ,,
6.	ತ್ರಿಷ್ಟುಪ್	44 ,,	13.	ಧೃತಿ	72 ,,
7.	ಜಗತೀ	48 ,,	14.	ಅತಿಧೃತಿ	76 ,,

ಇವುಗಳಲ್ಲಿ ಗಾಯತ್ರೀಛಂದಸ್ಸಿನಲ್ಲಿ ಮೂರು ಪಾದಗಳಿರುವುವು. ಪ್ರತಿಪಾದದಲ್ಲಿಯೂ ಎಂಟು ಅಕ್ಷರಗಳಿರುವುವು. ಆರುವರಿಂದ ಒಟ್ಟು ಗಾಯತ್ರೀಛಂದಸ್ಸಿಗೆ ಇಪ್ಪತ್ತುನಾಲ್ಕು ಅಕ್ಷರಗಳು. ಈ ಛಂದಸ್ಸಿನಲ್ಲಿ ಮೊದಲಿನ ಎರಡು ಪಾದಗಳು ಸೇರಿ ಒಂದೇ ವಾಕ್ಯವಾದ ಪೂರ್ವಾರ್ಧವೆಂದೂ ಮೂರನೆಯ ಒಂದು ಪಾದ ಮಾತ್ರ ಉತ್ತರಾರ್ಧವೆಂದೂ ಹೇಳಲ್ಪಡುವುದು.

ಪಂಕ್ತಿ ಎಂಬ ಛಂದಸ್ಸಿನಲ್ಲಿ ಎಂಟು ಅಕ್ಷರಗಳ ಐದು ಪಾದಗಳಿರುವುವು. ಪೂರ್ವಾರ್ಧದಲ್ಲಿ ಎರಡು ಪಾದಗಳೂ ಉತ್ತರಾರ್ಧದಲ್ಲಿ ಮೂರು ಪಾದಗಳೂ ಇರುವುವು. ಶಕ್ವರೀಛಂದಸ್ಸಿನಲ್ಲಿ ಏಳು ಪಾದಗಳಿರುವುವು.

ಉಷ್ಣಿಕ್ ಮೊದಲಾದ ಛಂದಸ್ಸುಗಳಲ್ಲಿ ನಾಲ್ಕು ಪಾದಗಳಿರುವುವು. ಎರಡೆರಡು ಪಾದಗಳಿಗೆ ಒಂದು ಅರ್ಧ ಋಕ್ಕು. ಅಕ್ಷರಸಂಖ್ಯೆಯು ಅದೇ ರೀತಿ ಇರುವುದು. ಕಡೆಯ ಛಂದಸ್ಸಾದ ಅತಿಧೃತಿಯಲ್ಲಿ ಈ ಯಾವ ಕ್ರಮವೂ ಕಂಡುಬರುವುದಿಲ್ಲ. ಎಪ್ಪತ್ತಾರು ಅಕ್ಷರಗಳು ಮಾತ್ರ ಇರುವುವು. ಛಂದಸ್ಸುಗಳ ಅಕ್ಷರಸಂಖ್ಯೆ ಮೊದಲಾದ ವಿಷಯಗಳ ವಿಸ್ತಾರವಾದ ವಿವರಣೆಯು ಉದಾಹರಣೆಸಹಿತವಾಗಿ ಋ. ಸಂ. ಪ್ರಥಮಭಾಗದ ಪೂರ್ವಪೀಠಿಕೆಯ ಹನ್ನೆರಡನೆಯ ಪ್ರಕರಣದಲ್ಲಿ (ಪೇಜುಗಳು 221-231) ವಿವರಿಸಲಾಗಿರುವುದು.

ಋಗ್ವೇದದಲ್ಲಿ ಬಹುಭಾಗವು ಗಾಯತ್ರೀ, ತ್ರಿಷ್ಟುಪ್, ಜಗತೀ ಎಂಬ ಋಕ್ಕುಗಳಿಂದಲೇ ಕೂಡಿರುವುದು. ಶೌನಕಮಹರ್ಷಿವಿರಚಿತವಾದ ಛಂದೋನುಕ್ರಮಣಿಯಲ್ಲಿ ಹೇಳಿರುವಂತೆ ಋಗ್ವೇದದಲ್ಲಿರುವ (ಶಾಕಲಶಾಖೆ) ವಿಧ ವಿಧವಾದ ಛಂದಸ್ಸುಗಳ ಮತ್ತು ಋಕ್ಕುಗಳ ಸಂಖ್ಯೆಯು ಈ ರೀತಿ ಇರುವುದು—

1.	ಗಾಯತ್ರೀ ಛಂದಸ್ಸಿನ ಋಕ್ಕುಗಳು ಒಟ್ಟು	....	೨೪೬೭
2.	ಉಷ್ಣಿಕ್	,, ,,	....	೩೪೧
3.	ಅನುಷ್ಟುಪ್	,, ,,	....	೪೫೫
4.	ಬೃಹತೀ	,, ,,	....	೧೪೧
5.	ಪಂಕ್ತಿ	,, ,,	....	೩೧೨
6	ತ್ರಿಷ್ಟುಪ್	,, ,,	....	೪೨೫೩
7.	ಜಗತೀ	,, ,,	....	೧೩೪೮
8.	ಅತಿಜಗತೀ	,, ,,	....	೧೭
9.	ಶಕ್ವರೀ	,, ,,	....	೧೯
10.	ಅತಿಶಕ್ವರೀ	,, ,,	....	೯
11.	ಅಷ್ಟಿ	,, ,,	..	೬
12.	ಅತ್ಯಷ್ಟಿ	,, ,,	....	೪೪
13.	ಧೃತಿ	,, ,,	.	೨
14.	ಅತಿಧೃತಿ	,, ,,	....	೧

ಮೇಲೆ ಹೇಳಿದ ಈ ಮುಖ್ಯವಾದ ಛಂದಸ್ಸುಗಳಲ್ಲದೆ ಇವುಗಳಲ್ಲಿರುವ ಅನೇಕ ಭೇದಪ್ರಭೇದಗಳೂ ಮಿಶ್ರವಾದ ಛಂದಸ್ಸುಗಳೂ ಅನೇಕವಾಗಿರುವುವು. ಮತ್ತು—

ಒಂದು ಪಾದಮಾತ್ರವಿರುವ ಋಕ್ಕುಗಳು			6
ಎರಡು ಪಾದಗಳಿರುವ	,,	....	17
ಪ್ರಾಕಾಥ ಬಾರ್ಹತಛಂದಸ್ಸಿನ	,,	....	194
ಕಕುಭ	,,	,,	...	55
ಮಹಾಬಾರ್ಹತ	,,	,,	....	257

ಎಂಬ ಋಕ್ಕುಗಳೂ ಇರುವವು. ಎರಡು ಪಾದಗಳಿರುವ ದ್ವಿಪದಾ ವಿರಾಟ್ ಎಂಬ ಛಂದಸ್ಸಿನಲ್ಲಿ ಎರಡು ಪಾದಗಳು ಸೇರಿರುವ ಒಂದು ಅರ್ಧ ಋಕ್ಕುಮಾತ್ರವಿರುವುದೆಂದು ಕೆಲವರು ಹೇಳುವರು. ಮತ್ತೆ ಕೆಲವರು ಅಧ್ಯಯನ ಅನುಕೂಲಕ್ಕಾಗಿ ಈ ದ್ವಿಪಾದ ವಿರಾಟ್ ಛಂದಸ್ಸಿನ ಎರಡು ಅರ್ಧ ಋಕ್ಕುಗಳನ್ನು ಸೇರಿಸಿ ನಾಲ್ಕು ಪಾದಗಳಿರುವ ಒಂದು ಋಕ್ಕೆಂದು ಹೇಳುವರು. ಈ ರೀತಿಯಾದ ಅಭಿಪ್ರಾಯಭೇದದಿಂದ ಒಟ್ಟು ಛಂದಸ್ಸಿನ ಸಂಖ್ಯೆಗಳಲ್ಲಿ ವ್ಯತ್ಯಾಸ ಕಂಡುಬರಬಹುದು. ಆದರೆ ಈ ವ್ಯತ್ಯಾಸವು ಅಷ್ಟು ಗಮನಾರ್ಹವಾದುದಲ್ಲವೆಂದು ಹೇಳಬಹುದು.

ಋಷಿದೃಷ್ಟವಾದ ಋಗ್ವೇದದ ಋಕ್ಕುಗಳಲ್ಲಿ ಕ್ಲಪ್ತಸಂಖ್ಯೆಯ ಅಕ್ಷರಗಳು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಇರುವವು ಎಂದು ಹೇಳುವುದಕ್ಕಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಕ್ಲೃಪ್ತಸಂಖ್ಯೆಗಿಂತ ಒಂದು ಅಕ್ಷರ ಹೆಚ್ಚಾಗಿಯೂ ಅಥವಾ ಕಮ್ಮಿಯಾಗಿಯೂ ಇರಬಹುದು. ಈ ವಿಷಯದಲ್ಲಿ—**ಊನಾಧಿಕೇನೈಕೇನ ನಿಚೃದ್ಭೂರಿಚೌ । ದ್ವ್ಯಭ್ಯಾಂ ವಿರಾಟ್ಸ್ವರಾಜೌ ॥** ಎಂದು ಕಾತ್ಯಾಯನ ಋಷಿಗಳು ಹೇಳಿರುವರು. ಎಂದರೆ ಋಕ್ಕಿನ

ಪಾದದಲ್ಲಿ ಒಂದು ಅಕ್ಷರ ಕಮ್ಮಿಯಾಗಿದ್ದರೆ ಅದಕ್ಕೆ ನಿಚೃತ್ ಎಂದೂ ಹೆಚ್ಚಾಗಿದ್ದರೆ ಭೂರಿ ಎಂದೂ ಹೇಳಲ್ಪಡುವುದು. ಅದರಂತೆ ಎರಡು ಅಕ್ಷರಗಳು ಕಮ್ಮಿಯಾಗಿದ್ದರೆ ವಿರಾಟ್ ಎಂದೂ ಹೆಚ್ಚಾಗಿದ್ದರೆ ಸ್ವರಾಟ್ ಎಂತಲೂ ಹೆಸರು. ಕೆಲವು ಸಂದರ್ಭಗಳಲ್ಲಿ ಉಚ್ಚಾರಣಾ ಕ್ರಮಾನುಸಾರವಾಗಿ ಸಂಯುಕ್ತಾಕ್ಷರವನ್ನು ಎರಡು ಅಕ್ಷರಗಳೆಂದು ಪರಿಗಣಿಸಲಾಗಿರುವುದು. ಗಾಯತ್ರೀ ಛಂದಸ್ಸಿನ ಋಕ್ಕಾದ ತತ್ಸವಿತುರ್ವರೇಣ್ಯಂ ಎಂಬ ಪ್ರಸಿದ್ಧಗ್ರಾಯತ್ರೀಮಂತ್ರದ ಪ್ರಥಮಪಾದದಲ್ಲಿ ಎಂಟು ಅಕ್ಷರಗಳಿಗೆ ಬದಲಾಗಿ ಏಳು ಅಕ್ಷರಗಳು ಮಾತ್ರ ಇರುವವು. ಇದನ್ನು ಸರಿಪಡಿಸುವುದಕ್ಕಾಗಿ ಪಾದದ ಕಡೆಯ ಅಕ್ಷರವಾದ ಣ್ಯಂ ಎಂಬ ಸಂಯುಕ್ತಾಕ್ಷರವು ಣಿ+ಅಂ ಎಂಬ ಎರಡು ಅಕ್ಷರಗಳನ್ನೊಳಗೊಂಡಿರುವುದೆಂದು ಕೆಲವರು ಭಾವಿಸುವರು. ಇಂತಹ ಲೋಪಗಳು ಬೇಕಾದಷ್ಟಿರುವುದರಿಂದ ಅಕ್ಷರಸಂಖ್ಯೆಯ ಕ್ರಮವನ್ನು ಅಷ್ಟು ಕಟ್ಟುನಿಟ್ಟಾಗಿ ಪಾಲಿಸಿದಂತೆ ಕಂಡುಬರುವುದಿಲ್ಲ ಆದುದರಿಂದ ಗಾಯತ್ರೀ ಮಂತ್ರದಲ್ಲಿ ೨೪ ಅಕ್ಷರಗಳು ಮಾತ್ರವಿರುವುದರಿಂದ ಇದನ್ನು ನಿಚೃದ್ಗಾಯತ್ರೀ ಛಂದಸ್ಸಿನ ಋಕ್ಕೆಂದು ಹೇಳುವರು. ಅದರಂತೆ ಗಾಯತ್ರೀ ಛಂದಸ್ಸಿನ ಋಕ್ಕಿನಲ್ಲಿ ಒಂದು ಅಕ್ಷರ ಹೆಚ್ಚಾಗಿದ್ದಲ್ಲಿ ಅದನ್ನು ಭೂರಿಗ್ಗಾಯತ್ರೀ ಎಂದು ಹೇಳುವರು. ಮತ್ತು ಪಂಕ್ತಿಛಂದಸ್ಸಿನಲ್ಲಿ ನಿಯಮಪ್ರಕಾರ ೪೦ ಅಕ್ಷರಗಳಿರುವವು ಎರಡು ಅಕ್ಷರ ಕಮ್ಮಿಯಾಗಿದ್ದರೆ ಎಂದರೆ ಒಂದು ಪಂಕ್ತಿಛಂದಸ್ಸಿನ ಋಕ್ಕಿನಲ್ಲಿ ೩೮ ಅಕ್ಷರಗಳು ಮಾತ್ರವಿದ್ದಲ್ಲಿ ಅದಕ್ಕೆ ವಿರಾಟ್ಪಂಕ್ತಿಯೆಂದೂ, ಎರಡು ಅಕ್ಷರ ಹೆಚ್ಚಾಗಿದ್ದಲ್ಲಿ ಎಂದರೆ ೪೨ ಅಕ್ಷರಗಳಿದ್ದಲ್ಲಿ ಸ್ವರಾಟ್ ಪಂಕ್ತಿಯೆಂದೂ ಹೇಳುವರು. ನಾವು ಹಿಂದೆ ಹೇಳಿದಂತೆ ಛಂದಸ್ಸುಗಳ ವಿಸ್ತಾರವಾದ ವಿವರಣೆಯು ಋ. ಸಂ. ಭಾಗ ೧ರ ಪೂರ್ವಪೀಠಿಕೆಯ ೧೩ನೆಯ ಪ್ರಕರಣದಲ್ಲಿ ಉಕ್ತವಾಗಿರುವುದು.

ಮೇಲಿನ ಪಟ್ಟಿಯಲ್ಲಿ ಕಂಡುಬರುವಂತೆ ತ್ರಿಷ್ಟುಪ್ ಛಂದಸ್ಸಿನ ಋಕ್ಕುಗಳು ಋಗ್ವೇದದಲ್ಲಿ ಹೆಚ್ಚಾಗಿರುವುದರಿಂದ ಎಂದರೆ ೪೦೦೩ ಋಕ್ಕುಗಳಿರುವುದರಿಂದ ಈ ತ್ರಿಷ್ಟುಪ್ ಛಂದಸ್ಸೇ ಹೆಚ್ಚಾಗಿ ಬಳಕೆಯಲ್ಲಿತ್ತೆಂದು ಹೇಳಬಹುದು. ಆಧುನಿಕಸಂಸ್ಕೃತದಲ್ಲಿಯೂ ಸಹ ೩೨ ಅಕ್ಷರಗಳ ಅನುಷ್ಟುಪ್ ವೃತ್ತಕ್ಕೆ ಪ್ರಾಧಾನ್ಯತೆ ಇರುವುದು. ಪುರಾಣಾದಿಯಾವ ಅನೇಕ ಗ್ರಂಥಗಳು ಈ ಅನುಷ್ಟುಪ್ ವೃತ್ತದಲ್ಲಿಯೇ ಬರೆಯಲ್ಪಟ್ಟಿರುವುವು. ವೇದದಲ್ಲಿರುವ ಛಂದಸ್ಸಿನ ಕ್ರಮವನ್ನೇ ಅನುಸರಿಸಿ ಕೆಲವು ವ್ಯತ್ಯಾಸಗಳೊಡನೆ ಆಧುನಿಕಸಂಸ್ಕೃತದಲ್ಲಿ ಅನೇಕ ವೃತ್ತಗಳು ನಿರ್ಮಿತವಾಗಿರುವವು ಹೇಗೆಂದರೆ ೩೨ ಅಕ್ಷರಗಳುಳ್ಳ ಅನುಷ್ಟುಪ್ ಛಂದಸ್ಸನ್ನನುಸರಿಸಿ ೩೨ ಅಕ್ಷರಗಳ ಅನುಷ್ಟುಪ್ವೃತ್ತವೂ ಹನ್ನೊಂದು ಅಕ್ಷರಗಳ ಪಾದಗಳುಳ್ಳ ತ್ರಿಷ್ಟುಪ್ ಛಂದಸ್ಸನ್ನನುಸರಿಸಿ ಇಂದ್ರವಜ್ರ ಮತ್ತು ಉಪೇಂದ್ರವಜ್ರವೆಂಬ ವೃತ್ತಗಳೂ, ಹನ್ನೆರಡು ಅಕ್ಷರಗಳುಳ್ಳ ಪಾದಗಳಿಂದ ಕೂಡಿನ ಜಗತೀ ಛಂದಸ್ಸನ್ನನುಸರಿಸಿ ವಂಶಸ್ಥವೃತ್ತವೂ, ಶಕ್ವರೀ ಛಂದಸ್ಸನ್ನನುಸರಿಸಿ ವಸಂತತಿಲಕಾ ಎಂಬ ವೃತ್ತವೂ ರಚಿಸಲ್ಪಟ್ಟಿರುವವು.

ಅನುಷ್ಟುಪ್ವೃತ್ತದ ಅಕ್ಷರಗಳ ಸಂಯೋಜನೆಯಲ್ಲಿ ಅಷ್ಟು ಕಟ್ಟುನಿಟ್ಟಾದ ನಿಯಮವಿಲ್ಲದ್ದರಿಂದ ಈ ವೃತ್ತವೇ ಅನೇಕ ಆಧುನಿಕ ಸಂಸ್ಕೃತಗ್ರಂಥರಚನೆಯಲ್ಲಿ ಬಳಸಲಾಗಿರುವುದು. ಈ ವೃತ್ತದಲ್ಲಿ ನಾಲ್ಕು ಪಾದಗಳಿದ್ದು ಪ್ರತಿಪಾದದಲ್ಲಿಯೂ ಎಂಟು ಅಕ್ಷರಗಳಿರುವುವು. ಎರಡನೆಯ ಮತ್ತು ನಾಲ್ಕನೆಯ ಪಾದಗಳ ಏಳನೆಯ ಅಕ್ಷರವು ಹ್ರಸ್ವವಾಗಿರಬೇಕು. ಹಾಗೆಯೇ ಮೊದಲನೆಯ ಮತ್ತು ಮೂರನೆಯ ಪಾದಗಳ ಐದನೆಯ ಅಕ್ಷರವು ಹ್ರಸ್ವವಾಗಿರಬೇಕು. ಇಷ್ಟುಮಾತ್ರವಿದ್ದರೆ ಈ ವೃತ್ತರಚನೆಯು ಸಾಧ್ಯವು. ಹೆಚ್ಚು ನಿಯಮಗಳನ್ನು ಅನುಸರಿಸಬೇಕಾಗಿಲ್ಲ. ಆದುದರಿಂದ ಈ ವೃತ್ತವೇ ವಿಶೇಷವಾಗಿ ಬಳಕೆಯಲ್ಲಿರುವುದು.

ಹಿಂದೆ ಹೇಳಿದ ಗಾಯತ್ರ್ಯಾದಿಛಂದಸ್ಸುಗಳು ಬಹಳ ಪುರಾತನವಾದವು. ಅತಿಪ್ರಾಚೀನಕಾಲವಾದ ಋಗ್ವೇದಕಾಲದಲ್ಲಿಯೂ ಸಹ ಋಷಿಗಳು ದೇವತೆಗಳನ್ನು ಛಂದೋಬದ್ಧವಾದ ವಾಕ್ಯಗಳಿಂದಲೇ ಎಂದರೆ ಋಕ್ಕುಗಳಿಂದಲೇ ಸ್ತೋತ್ರಮಾಡುವುದು ಪದ್ಧತಿಯಾಗಿರುವಂತೆ ಋಗ್ವೇದದ ಅನೇಕ ಋಕ್ಕುಗಳಲ್ಲಿ ಕಂಡುಬರುವುದು—

ಅಗ್ನೇರ್ಗಾಯತ್ರ್ಯಭವತ್ಸಯುಗ್ವೋಷ್ಣಿಹಯಾ ಸವಿತಾ ಸಂ ಬಭೂವ ।
ಅನುಷ್ಟುಭಾ ಸೋಮ ಉಕ್ಥೈರ್ಮಹಸ್ವಾನ್ ಬೃಹಸ್ಪತೇರ್ಬೃಹತೀ ವಾಚಮಾವತ್ ॥
ನಿರಾಣ್ಮಿತ್ರಾವರುಣಯೋರಭಿಶ್ರೀರಿಂದ್ರಸ್ಯ ತ್ರಿಷ್ಟುಬಿಹ ಭಾಗೋ ಅಹ್ನಃ ।
ನಿಶ್ಚಾತ್ಸೇವಾನ್ ಜಗತ್ಯಾ ವಿವೇಶ ತೇನ ಚಾಕ್ಲೃಪ್ತ ಋಷಯೋ ಮನುಷ್ಯಾಃ ॥
(ಋ. ಸಂ. ೧೦-೧೩೦-೪ ಮತ್ತು ೫)

ತ್ರಿಷ್ಟುಬ್ಗಾಯತ್ರೀ ಛಂದಾಂಸಿ ಸರ್ವಾ ತಾ ಯಮು ಆಹಿತಾ ।
(ಋ. ಸಂ ೧೦-೧೪-೬)

ಈ ಋಕ್ಕುಗಳಲ್ಲಿ ಗಾಯತ್ರ್ಯಾದಿಛಂದಸ್ಸಿನ ಹೆಸರುಗಳಿರುವುದಲ್ಲದೆ ಅಗ್ನಿಯಿಂದ ಗಾಯತ್ರೀ ಛಂದಸ್ಸೂ, ಸೂರ್ಯನಿಂದ ಉಷ್ಣಿಕ್ ಛಂದಸ್ಸೂ, ಸೋಮನಿಂದ ಅನುಷ್ಟುಪ್ ಛಂದಸ್ಸೂ, ಬೃಹಸ್ಪತಿಯಿಂದ ಬೃಹತೀಛಂದಸ್ಸೂ, ಮಿತ್ರಾವರುಣರಿಂದ ವಿರಾಟ್‌ಛಂದಸ್ಸೂ ಉತ್ಪನ್ನವಾದವೆಂಬ ವಿವರಣೆ ಇರುವುದು. ಮತ್ತು ತ್ರಿಷ್ಟುಪ್ ಛಂದಸ್ಸನ್ನು ಇಂದ್ರನೇ ಕಂಡುಹಿಡಿದಿದ್ದುದರಿಂದ ಆ ಛಂದಸ್ಸಿನಿಂದಲೇ ಇಂದ್ರನನ್ನು ಋಷಿಗಳು ವಿಶೇಷವಾಗಿ ಸ್ತೋತ್ರಮಾಡಿರುವುದು ಕಂಡುಬರುವುದು. ಅದರಂತೆ ವಿಶ್ವೇದೇವತೆಗಳು ಜಗತೀಛಂದಸ್ಸನ್ನು ನಿರ್ಮಿಸಿದರು. ಶಕ್ವರೀಛಂದಸ್ಸನ್ನು ಸಾಮಗಾನಮಾಡುವ ಋತ್ವಿಜರು ವಿಶೇಷವಾಗಿ ಉಪಯೋಗಿಸುವರು ಈ ವಿಷಯದಲ್ಲಿ—

ಋಚಾಂ ತ್ವಃ ಪೋಷಮಾಸ್ತೇ ಪುಪುಷ್ವಾನ್ ಗಾಯತ್ರಂ ತ್ವೋ ಗಾಯತಿ ಶಕ್ವರೀಷು ।
(ಋ ಸಂ. ೧೦-೭೧-೧೧)

ಯೇಚ್ಛಕ್ವರೀಷು ಬೃಹತಾ ರನೇಣೇಂದ್ರೇ ಶುಷ್ಮಮದಧಾತಾ ವಸಿಷ್ಠಾಃ ।
(ಋ. ಸಂ- ೭-೩೩-೫)

ಎಂಬ ಋಕ್ಕುಗಳು ಈ ಅರ್ಥವನ್ನು ಸಮರ್ಥಿಸುವುವು. ಅನುವರಿಂದ ಗಾಯತ್ರೀ, ಮೊದಲಾದ ಛಂದಸ್ಸುಗಳು ಬಹು ಪುರಾತನ ಕಾಲದಿಂದಲೂ ಬಳಕೆಯಲ್ಲಿರುವುದೆಂಬುದು ಸ್ಪಷ್ಟವಾಗಿರುವುದು.

ಅತಿ ಪ್ರಾಚೀನವೂ, ಅತಿಗಹನವೂ, ಅತಿವಿಸ್ತಾರವೂ, ಸರ್ವಶಾಸ್ತ್ರಗಳಿಗೂ ಮೂಲಭೂತವೂ ಆದ ಇಂತಹ ಋಗ್ವೇದಸಂಹಿತೆಯನ್ನು ಸರಳವಾದ ಕನ್ನಡಭಾಷೆಯಲ್ಲಿ ವಿಮರ್ಶಾಸಹಿತವಾಗಿ ಪ್ರಕಾಶಪಡಿಸುವುದು ಸುಲಭವಾದ ಕೆಲಸವಲ್ಲ. ಆದರೂ ಇಂತಹ ಮಹತ್ಕಾರ್ಯದಿಂದ ಸಂಹಿತವಾಮರಾವಿಯಾದ ಸಕಲ ಜನರೂ ಜ್ಞಾನಾಭಿವೃದ್ಧಿಯನ್ನು ಪಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಲೆಂಬ ಘನವಾದ ಉದ್ದೇಶದಿಂದ, ಕರ್ನಾಟಕ ಸಿಂಹಾಸನಾಧೀಶ್ವರರೂ, ವೇದವಿದ್ಯಾಭಿಮಾನಿಗಳೂ, ಸ್ವಯಂ ಪಂಡಿತರೂ, ಪ್ರಜಾನುರಾಗಿಗಳೂ, ದೈವಭಕ್ತಿತತ್ಪರರೂ ಆದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ ಸಿ. ಬಿ, ಜಿ. ಸಿ. ಎಸ್. ಐ.** ಮಹಾ ಪ್ರಭುವರ್ಯರು ಬಹುದ್ರವ್ಯಸಾಧ್ಯವಾದ ಈ ಗ್ರಂಥಪ್ರಕಟನೆಯನ್ನು ತಮ್ಮ ಉದಾರಾಶ್ರಯದಿಂದ ಪ್ರೋತ್ಸಾಹ ಮಾಡುತ್ತಿರುವುದು, ಕರ್ನಾಟಕಜನಕೋಟಿಯ ಸುಕೃತವೆಂದೇ ಹೇಳಬೇಕು. ಇಂತಹ ಉದಾರಮತಿಗಳಾದ ನಮ್ಮ ಪ್ರಭುವರ್ಯರಿಗೂ, ಅವರ ಕುಟುಂಬಕ್ಕೂ (ನೇಮಮಂತ್ರಗಳಲ್ಲಿ ಅತಿಮುಖ್ಯವೆಂದು ಪರಿಗಣಿಸಲ್ಪಟ್ಟಿರುವ ಗಾಯತ್ರೀ

ಎಂಬ ಮಂತ್ರನಾಮಾಂಕಿತರಾದ)ರಾಜಕುಮಾರಿಗೂ, ಸಮಸ್ತ ಪ್ರಜಾಕೋಟಿಗೂ, ವೇದಪುರುಷನಾದ ಸರ್ವೇಶ್ವರನು ಐಹಿಕಫಲಗಳಾದ ಆಯುರಾರೋಗ್ಯೈಶ್ವರ್ಯಾದಿ ಸಕಲಸಂಪತ್ತನ್ನೂ ಪಾರಮಾರ್ಥಿಕವಾದ ಆಧ್ಯಾತ್ಮಜ್ಞಾನವನ್ನೂ ಇತ್ಯೋಪ್ಯತಿಶಯವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು
ವಿಶ್ವಾವಸು ಸಂವತ್ಸರ ಪುಷ್ಯ ಶುದ್ಧ ಏಕಾದಶಿ ಶುಕ್ರವಾರ
30—12—1949

ಅನುವಾದಕ
ಹೆಚ್. ಪಿ. ವೆಂಕಟರಾವ್,
ಆಸ್ಥಾನ ಸಂಸ್ಕೃತ ಪಂಡಿತರು

ಕೆ. ವೆಂಕಟಸುಬ್ಬಯ್ಯ, ಪ್ರಿಂಟರ್, ಶ್ರೀ ವಿನಾಯಕ ಪ್ರಿಂಟಿಂಗ್ ವರ್ಕ್ಸ್, ಮೈಸೂರು

॥ ಶ್ರೀ ॥

ವಿಷಯಾನುಕ್ರಮಣಿಕೆ

ಪ್ರಥಮಾಷ್ಟಕದಲ್ಲಿ ಆರನೆಯ ಅಧ್ಯಾಯವು

ಪ್ರಥಮಮಂಡಲದ ಸೂಕ್ತಗಳು ೮೧—೯೪

		ಪುಟಸಂಖ್ಯೆ
೮೧	**ಇಂದ್ರೋ ಮದಾಯ** ಎಂಬ ಎಂಭತ್ತೊಂದನೆಯ ಸೂಕ್ತವು—	
	ಸೂಕ್ತದ ವಿನಿಯೋಗ	1
	ಸೂಕ್ತದ ಋಷಿದೇವತಾ ಛಂದಸ್ಸುಗಳು	2
	ರಹೂಗಣಪುತ್ರನಾದ ಗೋತಮನ ಪೂರ್ವೇತಿಹಾಸ	11
	ಮರ್ತಭೋಜನಂ ಎಂಬ ಶಬ್ದದ ಅರ್ಥಾನುವಿವರಣೆ ಇತ್ಯಾದಿ	22
೮೨.	**ಉಪೋ ಷು** ಎಂಬ ಎಂಭತ್ತೆರಡನೆಯ ಸೂಕ್ತವು—	
	ಸೂಕ್ತದ ವಿನಿಯೋಗ	33
	ಋಷಿದೇವತಾ ಛಂದಸ್ಸುಗಳು	34
	ಹಾರಿಯೋಜನ ಶಬ್ದವಿವರಣೆ ಇತ್ಯಾದಿ	47
೮೩.	**ಆಶ್ನಾವತಿ** ಎಂಬ ಎಂಭತ್ತಮೂರನೆಯ ಸೂಕ್ತವು—	
	ಸೂಕ್ತದ ವಿನಿಯೋಗ	55
	ಋಷಿದೇವತಾ ಛಂದಸ್ಸುಗಳು	56
	ಪವಿರ್ಧಾನಶಬ್ದಾರ್ಥವಿವರಣೆ, ಛದಿಶಬ್ದಾರ್ಥವಿವರಣೆ ಇತ್ಯಾದಿ	68
	ಗ್ರಾವಶಬ್ದಾರ್ಥವಿವರಣೆ ಇತ್ಯಾದಿ	79
೮೪.	**ಆಸಾವಿ ಸೋಮ** ಎಂಬ ಎಂಭತ್ತನಾಲ್ಕನೆಯ ಸೂಕ್ತವು—	
	ಸೂಕ್ತದ ವಿನಿಯೋಗ	81
	ಋಷಿದೇವತಾ ಛಂದಸ್ಸುಗಳು	82
	ಯೆ ಏಕ ಇದ್ವಿದಯಂತೇ ಎಂಬ ಋಕ್ಕಿನ ವಿಶೇಷವಿನಿಯೋಗವು	98
	ದಧೀಚ ಋಷಿಯ ವೃತ್ತಾಂತವು	115
	ದಧೀಚ ಋಷಿಯ ಪೂರ್ವೇತಿಹಾಸವು	118

ಪುಟಸಂಖ್ಯೆ

ಶರ್ಣಾವತ್ ಎಂಬ ಸರೋವರದ ವಿಚಾರ 119
ಅಪೀಚ್ಯಂ ಎಂಬ ಶಬ್ದದ ಅರ್ಥಾನುವಿವರಣೆ 122
ಕೋ ಅದ್ಯ ಯುಂಕ್ತೇ ಎಂಬ ಋಕ್ಕಿನ ವಿಶೇಷವಿನಿಯೋಗವು 127

೮೫. **ಪ್ರ ಯೇ ಶುಂಭಂತೇ** ಎಂಬ ಎಂಭತ್ತೈದನೆಯ ಸೂಕ್ತವು—

ಸೂಕ್ತದ ವಿನಿಯೋಗ 143
ಋಷಿದೇವತಾ ಛಂದಸ್ಸುಗಳು 144
ಮರುದ್ದೇವತೆಗಳ ವೃತ್ತಾಂತವು 146
ಪೃಶ್ನಿಮಾತರಃ ಎಂಬ ಶಬ್ದದ ಅರ್ಥಾನುವಾದವು 152
ಮರುದ್ದೇವತೆಗಳ ವಾಹನಗಳಾದ ಪೃಷತೀ ಎಂಬ ಚಿಕ್ಕೆಗಳಿಂದ ಕೂಡಿದ ಜಿಂಕೆಗಳ ವಿಷಯ 161
ಆ ವೋ ವಹಂತು ಎಂಬ ಋಕ್ಕಿನ ವಿಶೇಷ ವಿನಿಯೋಗವು 168
ಮರುದ್ದೇವತೆಗಳು ವಿಷ್ಣುವಿನೊಡನೆ ಬಂದು ಇಂದ್ರನಿಗೆ ಯುದ್ಧದಲ್ಲಿ ಸಹಾಯಮಾಡಿದ ವಿಚಾರ 172
ಗೋತಮ ಋಷಿಯು ಜಲಪಾನಾರ್ಥವಾಗಿ ಮರುದ್ದೇವತೆಗಳನ್ನು ಪ್ರಾರ್ಥಿಸಿದ ವಿಚಾರ ಇತ್ಯಾದಿ 183

೮೬. **ಮರುತೋ ಯಸ್ಯ** ಎಂಬ ಎಂಭತ್ತಾರನೆಯ ಸೂಕ್ತವು—

ಸೂಕ್ತದ ವಿನಿಯೋಗವು 192
ಋಷಿದೇವತಾ ಛಂದಸ್ಸುಗಳು 193
ಶರಚ್ಛಬ್ದಕ್ಕೆ ಸಂವತ್ಸರಾರ್ಥವನ್ನು ಹೇಳುವ ವಿಚಾರ 205

೮೭. **ಪ್ರತ್ನೇಷಸಃ** ಎಂಬ ಎಂಭತ್ತೇಳನೆಯ ಸೂಕ್ತವು—

ಸೂಕ್ತದ ವಿನಿಯೋಗವು. 215
ಋಷಿದೇವತಾಛಂದಸ್ಸುಗಳು. 216
ಋಾದಿಶಬ್ದಾರ್ಥವಿವರಣೆ. 239

೮೮. **ಆ ವಿದ್ಯುದಿತ್** ಎಂಬ ಎಂಭತ್ತೆಂಟನೆಯಸೂಕ್ತವು—

ಸೂಕ್ತದ ವಿನಿಯೋಗವು. 241
ಋಷಿದೇವತಾಛಂದಸ್ಸುಗಳು. 242
ಮರುಚ್ಛಬ್ದರೂಪನಿಷ್ಪತ್ತಿವಿಚಾರ ಇತ್ಯಾದಿ. 245
ವರಾಹೂನ್ ಎಂಬ ಶಬ್ದದ ಅರ್ಥವಿವರಣೆ. 260

೮೯. **ಆ ನೋ ಭದ್ರಾ** ಎಂಬ ಎಂಭತ್ತೊಂಭತ್ತನೆಯಸೂಕ್ತವು—

ಸೂಕ್ತದ ವಿನಿಯೋಗವು— 264
ಋಷಿದೇವತಾಛಂದಸ್ಸುಗಳು 265

ಪುಟಸಂಖ್ಯೆ

ಮಿತ್ರಾವರುಣರ ವಿಷಯ. 275
ದಕ್ಷ, ಅರ್ಯಮಾ, ಸೋಮ ಅಶ್ವಿನೀದೇವತೆಗಳು ಸರಸ್ವತೀ ಇವರ ವಿಚಾರ. 277
ತಾರ್ಕ್ಷ್ಯನ ವೃತ್ತಾಂತ. 286
ಅಗ್ನಿಜಿಹ್ವೆಶಬ್ದದ ಅರ್ಥವಿವರಣೆ ಇತ್ಯಾದಿ. 290
ಭಂದ್ರಂ ಕರ್ಣೇಭಿಃ ಎಂಬ ಋಕ್ಕಿನ ವಿಶೇಷವಿನಿಯೋಗವು. 293
ಪಂಚಜನಾಃ ಎಂಬ ಶಬ್ದದ ಅರ್ಥಾನುವಾದ. 300

೯೦. **ಋಜುನೀತಿ ಎಂಬ ತೊಂಭತ್ತನೆಯ ಸೂಕ್ತವು—**

ಸೂಕ್ತದ ವಿನಿಯೋಗ. 303
ಋಷಿದೇವತಾಛಂದಸ್ಸುಗಳು. 303
ಉತ ನೋ ಧಿಯಃ ಎಂಬ ಋಕ್ಕಿನ ವಿಶೇಷವಿನಿಯೋಗವು. 313
ಗೋಅಗ್ರಾಃ ಎಂಬ ಶಬ್ದದ ಅರ್ಥವಿವರಣೆ. 314
ನವಸ್ಪತಿಶಬ್ದಾರ್ಥವಿವರಣೆ. 321
ವಿಷ್ಣುವಿನ ಪಾದವಿಕ್ಷೇಪವರ್ಣನೆ ಇತ್ಯಾದಿ 323

೯೧. **ತ್ವಂ ಸೋಮ ಎಂಬ ತೊಂಭತ್ತೊಂದನೆಯ ಸೂಕ್ತವು—**

ಸೂಕ್ತದ ವಿನಿಯೋಗವು 325
ಋಷಿದೇವತಾಛಂದಸ್ಸುಗಳು. 326
ಸೋಮದೇವತಾಕಮಂತ್ರಗಳ ವಿಭಜನಾಕ್ರಮ ಇತ್ಯಾದಿ. 328
ತ್ವಂ ಸ್ಸೋಮಕ್ರತುಭಿಃ ಎಂಬ ಋಕ್ಕಿನ ವಿಶೇಷವಿನಿಯೋಗವು. 332
ನೃಚಕ್ಷಸಃ ಎಂಬ ಶಬ್ದದ ಅರ್ಥವಿವರಣೆ. 333
ಯಾತೇ ಧಾಮಾನಿ ಎಂಬ ಋಕ್ಕಿನ ವಿಶೇಷವಿನಿಯೋಗ. 340
ತ್ವಂ ಸೋಮಾಸಿ ಎಂಬ ಋಕ್ಕಿನ ವಿಶೇಷವಿನಿಯೋಗ 345
ತ್ವಂ ಚ ಸೋಮ ಎಂಬ ಋಕ್ಕಿನ ವಿಶೇಷವಿನಿಯೋಗ. 348
ತ್ವಂ ಸೋಮ ಮಹೇ ಎಂಬ ಋಕ್ಕಿನ ವಿಶೇಷವಿನಿಯೋಗ. 351
ತ್ವಂ ನಃ ಸೋಮ ಎಂಬ ಋಕ್ಕಿನ ವಿಶೇಷವಿನಿಯೋಗ. 354
ಸೋಮ ಯಾಸ್ತೇ ಎಂಬ ಋಕ್ಕಿನ ವಿಶೇಷವಿನಿಯೋಗ. 356
ಮಯೋಭುವಃ ಎಂಬ ಶಬ್ದದ ವಿವರಣೆ. 357
ಸೋಮ ಗೀರ್ಭಿಃ ಎಂಬ ಋಕ್ಕಿನ ವಿಶೇಷವಿನಿಯೋಗ. 361
ಗಯಸ್ಫಾನಃ ಎಂಬ ಋಕ್ಕಿನ ವಿಶೇಷ ವಿನಿಯೋಗ. 364
ಗಯಸ್ಫಾನ ಶಬ್ದ ವಿವರಣೆ 364
ಆ ಪ್ಯಾಯಸ್ವ ಎಂಬ ಋಕ್ಕಿನ ವಿಶೇಷವಿನಿಯೋಗವು. 375

ಪುಟಸಂಖ್ಯೆ

ಸಂ ತೇ ಪಯಾಂಸಿ ಎಂಬ ಋಕ್ಕಿನ ವಿಶೇಷವಿನಿಯೋಗ. 381
ಯಾ ತೇ ಧಾಮಾನಿ ಎಂಬ ಋಕ್ಕಿನ ವಿಶೇಷವಿನಿಯೋಗ. 384
ಪರಿಭೂಃ ಎಂಬ ಶಬ್ದದ ಅರ್ಥವಿವರಣೆ. 384
ಸೋಮೋ ಧೇನುಂ ಎಂಬ ಋಕ್ಕಿನ ವಿಶೇಷ ವಿನಿಯೋಗವು 388
ಅಷ್ಟಾಳ್ಹಂ ಯುತ್ಸು ಎಂಬ ಋಕ್ಕಿನ ವಿಶೇಷ ವಿನಿಯೋಗ 391
ಓಷಧೀಃ ಎಂಬ ಶಬ್ದದ ಅರ್ಥಾನುವಾದ 395

೯೨. **ಏತಾ ಉ ತ್ಯಾ** ಎಂಬ ತೊಂಭತ್ತೆರಡನೆಯ **ಸೂಕ್ತವು**—

ಸೂಕ್ತದ ವಿನಿಯೋಗ 402
ಋಷಿದೇವತಾ ಛಂದಸ್ಸುಗಳು 403
ಪ್ರತ್ಯರ್ಚಿ ಎಂಬ ಋಕ್ಕಿನ ವಿಶೇಷ ವಿನಿಯೋಗ 419
ಸ್ವರುಶಬ್ದದ ಅರ್ಥವಿವರಣೆ 420
ಪುನಃಪುನರ್ಜಾಯಮಾನಾ ಎಂಬ ಋಕ್ಕಿನ ವಿಶೇಷ ವಿವರಣೆ ಇತ್ಯಾದಿ 440
ಉಪಸ್ತುಚ್ಛಿತ್ರಂ ಎಂಬ ಋಕ್ಕಿನ ವಿಶೇಷ ವಿನಿಯೋಗ 455
ಅಶ್ಲೀನಾವರ್ತಿ ಎಂಬ ಋಕ್ಕಿನ ವಿಶೇಷ ವಿನಿಯೋಗ ಇತ್ಯಾದಿ 462

೯೩. **ಅಗ್ನೀಷೋಮೌ** ಎಂಬ ತೊಂಭತ್ತಮೂರನೆಯ **ಸೂಕ್ತವು**—

ಸೂಕ್ತದ ವಿನಿಯೋಗವು 469
ಋಷಿದೇವತಾ ಛಂದಸ್ಸುಗಳು 470
ಅಗ್ನೀಷೋಮಾ ಯೋ ಎಂಬ ಋಕ್ಕಿನ ವಿಶೇಷ ವಿನಿಯೋಗ 474
ಪಣಿಗಳ ವೃತ್ತಾಂತ 481
ಯುವನೇತಾನಿ ಎಂಬ ಋಕ್ಕಿನ ವಿಶೇಷವಿನಿಯೋಗ 486
ಅನ್ಯಂ ದಿವೋ ಎಂಬ ಋಕ್ಕಿನ ವಿಶೇಷವಿನಿಯೋಗ 488
ಶ್ಯೇನಸಕ್ಷಿಯು ಸೋಮನನ್ನು ಸ್ವರ್ಗದಿಂದ ತಂದ ವೃತ್ತಾಂತ ಇತ್ಯಾದಿ 491
ಅಗ್ನೀಷೋಮಾ ಸನೇದಸಾ ಎಂಬ ಋಕ್ಕಿನ ವಿಶೇಷ ವಿನಿಯೋಗ 500

೯೪. **ಇಮಂ ಸ್ತೋಮಂ** ಎಂಬ ತೊಂಬತ್ತನಾಲ್ಕನೆಯ **ಸೂಕ್ತವು**—

ಸೂಕ್ತದ ವಿನಿಯೋಗವು 509
ಋಷಿದೇವತಾ ಛಂದಸ್ಸುಗಳು 510
ಜಾತವೇದಃಶಬ್ದದ ಅರ್ಥವಿವರಣೆ ಇತ್ಯಾದಿ 512
ಆದಿತ್ಯಶಬ್ದದ ರೂಪನಿಷ್ಪತ್ತಿ ಅರ್ಥವಿವರಣೆ ಇತ್ಯಾದಿ 520
ಕುತ್ಸಋಷಿಯು ಮಿತ್ರಾವರುಣರನ್ನು ಸಮಾಧಾನ ಪಡಿಸಿದ ವೃತ್ತಾಂತ 551
ಅಗ್ನಿಯು ದೇವತೆಗಳ ಮಿತ್ರನೆಂಬ ವಿಚಾರ 554

ಏಳನೆಯ ಭಾಗದ ವಿಷಯಾನುಕ್ರಮಣಿಕೆ ಸಮಾಪ್ತವು.

———— :o: ————



॥ श्रीः ॥

॥ श्री महागणाधिपतये नमः ॥

वागीशाद्याः सुमनसः सर्वार्थानामुपक्रमे ।
यं नत्वा कृतकृत्याः स्युस्तं नमामि गजाननं ॥
यस्य निश्वसितं वेदा यो वेदेभ्योऽखिलं जगत् ।
निर्ममे तमहं वंदे विद्यातीर्थमहेश्वरं ॥
वेदः शिवः शिवो वेदो वेदाध्यायी सदाशिवः ।
तस्मात्सर्वप्रयत्नेन वेदमेव सदा जपेत् ॥

सायणभाष्यसहिता

ऋग्वेद संहिता

भाग—२

॥ प्रथममष्टके षष्ठोऽध्यायः ॥

॥ ಮೊದಲನೆಯ ಅಷ್ಟಕದಲ್ಲಿ ಆರನೆಯ ಅಧ್ಯಾಯವು ॥

यस्य निश्वसितं वेदा यो वेदेभ्योऽखिलं जगत् ।
निर्ममे तमहं वंदे विद्यातीर्थमहेश्वरं ॥
दशतय्याः पंचमोऽयमध्यायो व्याकृतः पुरा ।
भीमता सायणार्येण षष्ठोऽध्यायोऽथ वर्ण्यते ॥

प्रथमे मण्डले त्रयोविंशानुवाके सप्त सूक्तानि व्याकृतानि । इन्द्रो मदायेति नवर्चमष्टमं सूक्तं । अत्रानुक्रम्यते । इन्द्रो नवेति । 'ऋषिश्चान्यस्या-दृषेः (अनु. ७१-२) इति परिभाषया रहूगणपुत्रस्य गोतमस्यानुवृत्तेरस्य सूक्तस्य स ऋषिः । पूर्वसूक्तेऽपि सांकृत्यं हीत्युक्तत्वाच्चतुर्ह्याद्यधिपरिभाषयेदमुत्तरं च सूक्तं

ಸಾಂಕ್ತಂ । ಅನಾದೇಶಪರಿಭಾಷಯೇಂದ್ರೋ ದೇವತಾ ॥ ಪೃಷ್ಠ್ಯಸ್ಯ ಪಂಚಮೇಽಹನಿ ನಿಷ್ಕೇವಲ್ಯಶಸ್ತ್ರ ಇದಂ ಸೂಕ್ತಂ । ಸೂತ್ರಿತಂ ಚ । ಪ್ರೈದಂ ಬ್ರಹ್ಮೇಂದ್ರೋ ಮದಾಯ ಸತ್ರಾ ಮದಾಸ ಇತಿ ನಿಷ್ಕೇವಲ್ಯಂ । ಆ. ೭-೧೨ । ಇತಿ ॥ ಆರಂಭಣೀಯೇ ಚಾತುರ್ಹೌತ್ರಿಕೇಽಹನಿ ಮಾಧ್ಯಂದಿನೇ ಸವನೇ ಬ್ರಾಹ್ಮಣಾಚ್ಛಂಸಿನಃ ಶಸ್ತ್ರ ಇಂದ್ರೋ ಮದಾಯೇತ್ಯಾದ್ಯಸ್ತ್ರ್ಯೃಚೋ ವೈಕಲ್ಪಿಕಃ ಸ್ತೋತ್ರಿಯಃ । ಹೋತ್ರಕಾಣಾಮಿತಿ ಖಂಡೇ ಸೂತ್ರಿತಂ । ಇಂದ್ರೋ ಮದಾಯ ವಾವೃಧೇ ಮದೇ ಮದೇ ಹಿ ನೋ ದದಿಃ । ಆ. ೭-೪ । ಇತಿ ॥ ಮಹಾವ್ರತೇ ನಿಷ್ಕೇವಲ್ಯ ಉತ್ತರಸ್ಮಿನ್ನಹನ್ಯಿಂದ್ರೋ ಮದಾಯೇತ್ಯೇಕಾ ಶಂಸನೀಯಾ । ತಥೈವ ಪಂಚಮಾರಣ್ಯಕೇ ಸೂತ್ರಿತಂ । ಇಂದ್ರೋ ಮದಾಯ ವಾವೃಧ ಇತಿ ಪಂಕ್ತಿಃ ಸೂದದೋಹಾಃ । ಐ. ಆ. ೫-೨-೨ । ಇತಿ ॥

ಅನುವಾದವು— ಪೃಥಮ ಮಂಡಲದ ಹದಿನೂರನೆಯ ಅನುವಾಕದಲ್ಲಿ ಇದುವರೆಗೆ ಏಳು ಸೂಕ್ತಗಳು ಮುಗಿದು ಎಂಟನೆಯ **ಇಂದ್ರೋಮದಾಯ** ಎಂಬ ಸೂಕ್ತವು. ಆರಂಭವಾಗುವುದು. ಇದರಲ್ಲಿ ಒಂಭತ್ತು ಋಕ್ಕುಗಳಿರುವುವು ಅನುಕ್ರಮಣಿಕೆಯಲ್ಲಿ **ಇಂದ್ರೋ ನವ** ಎಂದು ಹೇಳಿರುವುದು (ಅನು. ೧೪-೨) ಈ ಸೂಕ್ತಕ್ಕೆ ರಹೂಗಣ ಪುತ್ರನಾದ ಗೋತಮನೆಂಬುವನು ಋಷಿಯು. ಹಿಂದೆ ಹೇಳಿದಂತೆ ಈ ಸೂಕ್ತವೂ ಮುಂದಿನ ಸೂಕ್ತವೂ ಐಂದ್ರಸ್ತವು. ಇಂದ್ರನೇ ದೇವತೆಯು ಪೃಷ್ಠ್ಯಯಾಗದ ಐದನೆಯ ದಿನದಲ್ಲಿ ನಿಷ್ಕೇವಲ್ಯಶಸ್ತ್ರವನ್ನುಂತ್ರಪರನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದಲ್ಲಿ **ಪ್ರೈದಂ ಬಹ್ಮೇಂದ್ರೋ ಮದಾಯ ಸತ್ರಾ ಮದಾಸ ಇತಿ ನಿಷ್ಕೇವಲ್ಯಂ** ಎಂಬ ಸೂತ್ರದಿಂದ ವಿಸ್ತೃತವಾಗಿರುವುದು. (ಆ. ೭-೧೨) ಆರಂಭಣೀಯದಲ್ಲಿಯೂ ಕೂಡ ಇಪ್ಪತ್ತನಾಲ್ಕನೆಯ ದಿನ ಮಾಧ್ಯಂದಿನ ಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು **ಇಂದ್ರೋ ಮದಾಯ** ಎಂಬ ಮೂರು ಋಕ್ಕುಗಳನ್ನು ಸ್ತೋತ್ರಿಯ ಮಂತ್ರಗಳನ್ನಾಗಿ ಪರಿಸಬೇಕೆಂದು ವೈಕಲ್ಪಿಕವಾಗಿ ಹೇಳಿರುವುದು ಈ ವಿಷಯವು ಆಶ್ವಲಾಯನ ಶ್ರೌತಸೂತ್ರದ **ಹೋತ್ರಕಾಣಾಂ** ಎಂಬ ಖಂಡದಲ್ಲಿ **ಇಂದ್ರೋಮದಾಯ ವಾವೃಧೇ ಮದೇ ಮದೇ ಹಿ ನೋ ದದಿಃ** ಎಂಬ ಸೂತ್ರದಿಂದ ಸಿದ್ಧವಾಗಿರುವುದು. (ಆ. ೭-೪) ಸುತಾವ್ರತದಲ್ಲಿಯೂ ಸಹ ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿ **ಇಂದ್ರೋ ಮದಾಯ** ಎಂಬ ಒಂದು ಋಕ್ಕನ್ನು ಪರಿಸಬೇಕೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ **ಇಂದ್ರೋಮದಾಯ ವಾವೃಧ ಇತಿ ಪಂಕ್ತಿಃ ಸೂದದೋಹಾಃ** ಎಂಬ ವಾಕ್ಯದಲ್ಲಿ ಹೇಳಿರುವುದು (ಐ ಆ ೫ ೨-೨)

॥ ೫೦ ॥

ಸೂಕ್ತ—೮೧

॥ ಮಂಡಲ—೧ ॥ ಅನುವಾಕ—೧೩ ॥ ಸೂಕ್ತ—೮೧ ॥
॥ ಅಷ್ಟಕ— ೧ ॥ ಅಧ್ಯಾಯ— ೬ ॥ ವರ್ಗ—೧, ೨, ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ— ೯ ॥

॥ ಋಷಿಃ—ಗೋತಮೋ ರಾಹೂಗಣಃ ॥

॥ ದೇವತಾ—ಇಂದ್ರಃ ॥

॥ ಛಂದಸ್—ಪಂಕ್ತಿಃ ॥

॥ संहितापाठः ॥

इन्द्रो॑ मदा॑य वावृधे॑ शव॑से वृत्र॒हा नृ॒भिः।
तमिन्म॑हत्सु॒ जिष्व॑रीतेमभ॒र्मे हवामहे॑ स वा॒जेषु॑
प्र नो॑ऽविषत् ॥ ८ ॥

॥ पदपाठः ॥

इन्द्रः॑ । मदा॑य । वावृधे॑ । शव॑से । वृत्र॒ऽहा । नृ॒ऽभिः ।
तं । इत् । म॒हत्ऽसु॑ । आ॒जिषु॑ । उ॒त । ई॒म् । अ॒भ॒र्मे । हवा॑महे ।
सः । वा॒जेषु॑ । प्र । नः॒ । अ॒विष॒त् ॥ ८ ॥

॥ सायणभाष्यं ॥

वृत्रहा॑ वृत्रस्यावरकस्य वृष्टिनिरोधकस्य मेघस्यासुरस्य वा हंता । यद्वा । आवरकाणां शत्रूणां हंतेंद्रो मदाय हर्षार्थं शवसे। बलनाम्नैतत् । बलार्थं च नृभिर्यज्ञस्य नेतृभिर्ऋत्विग्भिर्वावृधे । स्तोत्रशस्त्ररूपाभिः स्तुतिभिः प्रवर्धितो बभूव । स्तुत्या हि देवता प्राप्तबला सती प्रवर्धते । तमित्त्वमेवेंद्रं महत्सु प्रभूतेष्वाजिषु संग्रामेषु हवामहे । अस्माकं रक्षणायाह्वयामहे । उताप्ये वमेनमभर्मेऽल्पे संग्रामे हवामहे । अस्माभिराहूतः स वेंद्रो वाजेषु संग्रामेषु नोऽस्मान् प्राविषत् । प्रावतु । प्रकर्षेण रक्षतु ॥ ववृधे । वृधेः कर्मणि लिट् । संहितायामभ्यासस्यानेषामपि दृश्यत इति दीर्घत्वं । तुजादित्वे हि तूतुजानेति वत्तदकाले दीर्घः श्रूयेत । नृभिः । सावेकाचे इति प्राप्तस्य विभक्त्युदात्तत्वस्य नृ चान्यतरस्यामिति प्रतिषेधः । हवामहे । ह्वयतेर्लटि ह्वे इत्यनुवृत्तौ बहुलं छंदसीति संप्रसारणं । शपि गुणावादेशौ। अविषत्। अव रक्षणे । लेट्यडागमः। इतश्च लोप इतीकारलोपः । सिब्बहुलं लेटीति सिप् । तस्यार्धधातुकत्वाद्ध्वलादिलक्षण इट् ॥ ८ ॥

॥ ಪ್ರತಿಪದಾರ್ಥ ॥

ವೃತ್ರಹಾ—ವೃತ್ರಾಸುರನ ಹಂತಕನಾದ ಅಥವಾ (ಲೋಕವನ್ನು) ಆವರಿಸುವ ಶತ್ರುವಿನ ಹಂತಕನಾದ । **ಇಂದ್ರಃ**—ಇಂದ್ರನು । **ಮದಾಯ**—ಸಂತೃಪ್ತಿಗಾಗಿಯೂ । **ಶವಸೇ**—ಶಕ್ತಿಗಾಗಿಯೂ । **ನೃಭಿಃ**—(ಋತ್ವಿಗ್ರೂಪರಾದ) ಮಾನವರಿಂದ । **ವವೃಧೇ**—(ಸ್ತುತನಾಗಿ) ಪ್ರವೃದ್ಧನಾದನು । **ತಮಿತ್**—ಅದೇ ಇಂದ್ರನನ್ನು । **ಮಹತ್ಸು**—ಪ್ರಬಲಗಳಾದ । **ಆಜಿಷು**—ಯುದ್ಧಗಳಲ್ಲಿ । **ಹವಾಮಹೇ**—(ನಮ್ಮ ರಕ್ಷಣೆಗಾಗಿ) ಕರೆಯುತ್ತೇವೆ । **ಉತ**—ಮತ್ತು । **ಈಂ**—ಆ ಇಂದ್ರನನ್ನೇ । **ಆರ್ಭೇ**—ಸಣ್ಣ ಯುದ್ಧದಲ್ಲೂ (ಕರೆಯುತ್ತೇನೆ) । **ಸಃ**—ಆ ಇಂದ್ರನು । **ನಾಜೀಷು**—ಯುದ್ಧಗಳಲ್ಲಿ । **ನಃ** - ನಮ್ಮನ್ನು । **ಶ್ರವಸ್ಯಾತ್**—ಸಂಪೂರ್ಣವಾಗಿ ಕಾಪಾಡಲಿ ॥

॥ ಭಾವಾರ್ಥ ॥

ವೃತ್ರಾಸುರನ ಹಂತಕನಾದ ಇಂದ್ರನನ್ನು ಋತ್ವಿಕ್ಕುಗಳು ಯಾಗಾಗಲೂ ಅವನಿಗೆ ಸಂತೃಪ್ತಿಯನ್ನುಂಟು ಮಾಡುವುದಕ್ಕೂ ಮತ್ತು ಅವನ ಬಲವನ್ನು ಬೆಳೆಸುವುದಕ್ಕೂ ಸಹ ಸ್ತೋತ್ರಮಾಡುತ್ತಾರೆ. ಆ ಸ್ತೋತ್ರಗಳಿಂದ ಇಂದ್ರನ ಮಹಿಮೆಯು ವೃದ್ಧಿಯಾಗುತ್ತದೆ. ಆ ಇಂದ್ರನನ್ನು ನಾವು ದೊಡ್ಡ ದೊಡ್ಡ ಯುದ್ಧಗಳಲ್ಲೂ ಮತ್ತು ಸಣ್ಣ ಸಣ್ಣ ಯುದ್ಧಗಳಲ್ಲೂ ಸಹ ರಕ್ಷಣೆಗಾಗಿ ಪ್ರಾರ್ಥಿಸಿ ಕರೆಯುತ್ತೇವೆ. ಅವನು ನಮ್ಮನ್ನು ಸಂಪೂರ್ಣವಾಗಿ ಕಾಪಾಡಲಿ.

English Translation

Indra, the slayer of Vritra, acquires vigour by means of men's praises (or is pleased by our praises) We invoke him in great battles as well as in little conflicts ; may he defend us in (all such) battles.

॥ ವಿಶೇಷವಿಷಯಗಳು ॥

ಮುಖ್ಯಾಭಿಪ್ರಾಯವು—ಮನುಷ್ಯರು ಮಾಡುವ ಸ್ತೋತ್ರಾದಿಗಳಿಂದ ದೇವತೆಗಳ ಬಲವು ವೃದ್ಧಿಯಾಗುವುದು ಎಂದರೆ ಹೆಚ್ಚುವುದು ಎಂದು ಪ್ರಸಿದ್ಧಿಯು. ಆದುದರಿಂದ ಮನುಷ್ಯರಾದ ನಾವು ಮಾಡುವ ಸ್ತೋತ್ರಗಳಿಂದ ಇಂದ್ರನ ಬಲವು ಅತಿಶಯವಾಗಿದ್ದರೂ ಇನ್ನೂ ಹೆಚ್ಚಾಗಿ ಅಭಿವೃದ್ಧಿಗೊಳ್ಳಲಿ. ಇಂತಹ ವೃತ್ರಸಂಹಾರಕನಾದ ಇಂದ್ರನನ್ನು ನಾವು ದೊಡ್ಡ ಯುದ್ಧಗಳಲ್ಲಿಯೇ ಆಗಲಿ, ಸಣ್ಣ ಪುಟ್ಟ ಕದನಗಳಲ್ಲಿಯೇ ಆಗಲಿ, ನಮ್ಮನ್ನು ಕಾಪಾಡುವುದಕ್ಕಾಗಿ ನಾವು ಪ್ರಾರ್ಥಿಸಿ ಕರೆಯುತ್ತೇವೆ ಇಂದ್ರನು ನಮ್ಮನ್ನು ಸಣ್ಣದು, ದೊಡ್ಡದು, ಮತ್ತು ಎಲ್ಲಾ ವಿಧವಾದ ಯುದ್ಧಗಳಲ್ಲಿಯೂ ಕಾಪಾಡಲಿ.

ಮದಾಯ ಹರ್ಷಾರ್ಥಂ । ಇಂದ್ರನಿಗೆ ಸಂತೋಷವಾಗುವುದಕ್ಕಾಗಿ. ನಮ್ಮ ಪ್ರಾರ್ಥನೆ ಅಥವಾ ಸ್ತೋತ್ರಗಳಿಂದ ಇಂದ್ರನು ಸಂತೋಷಪಡುವನೆಂದಭಿಪ್ರಾಯವು.

ಶವಸೇ— ಇಂದ್ರನ ಬಲಾಭಿವೃದ್ಧ್ಯರ್ಥವಾಗಿ ಓಜಃ ಸಾಹಃ ಮೊದಲಾದ ಇಪ್ಪತ್ತೆಂಟು ಬಲನಾಗಳ ಮಧ್ಯದಲ್ಲಿ ಶವಃ ಎಂಬ ಶಬ್ದವು ಪಠಿತವಾಗಿರುವುದರಿಂದ ಶವಸೇ ಎಂದರೆ ಬಲಕ್ಕಾಗಿ ಎಂದರ್ಥವು. ಶವ ಎಂಬ ರೂಪವು ಶವಸ್ ಎಂಬ ಸಕಾರಾಂತಶಬ್ದದ ಚತುರ್ಥ್ಯೇಕವಚನವು

ಆಜಿಷು, ವಾಜೇಷು— ಈ ಶಬ್ದಗಳು, ರಣಃ ವಿವಾಕ್ ಮೊದಲಾದ ನಲವತ್ತಾರು ಸಂಗ್ರಾಮನಾಮ ಗಳ ಮಧ್ಯದಲ್ಲಿ ಪಠಿತವಾಗಿರುವುದರಿಂದ ಈ ಶಬ್ದಗಳಿಗೆ ಯುದ್ಧಗಳಲ್ಲಿ ವಿಂದರ್ಥವು. (ನಿ.--೩-೯)

ಅರ್ಭೆ— **ಅರ್ಭ ಇತ್ಯಲ್ಪನಾಮ** । ಸಣ್ಣದಾದ, ಅಲ್ಪವಾದ.

॥ ವ್ಯಾಕರಣಪ್ರಕ್ರಿಯಾ ॥

ವವೃಧೆ—ವೃಧು ವೃದ್ಧೌ ಧಾತು, ಭ್ವಾದಿ. ವೃಧಧಾತುವಿಗೆ ಕರ್ಮಾರ್ಥದಲ್ಲಿ ಲಿಟ್. **ಭಾವಕರ್ಮಣೋಃ** (ಪಾ. ಸೂ. ೧-೩-೧೩) ಈ ಸೂತ್ರದಿಂದ ಆತ್ಮನೇಪದ ಬಂದಿರುತ್ತದೆ. ಇಲ್ಲಿ **ಲಿಟಿ ಧಾತೋರನಭ್ಯಾಸಸ್ಯ** (ಪಾ. ಸೂ. ೬-೧-೮) ಎಂಬ ಸೂತ್ರದಿಂದ ಧಾತುವಿಗೆ ದ್ವಿತ್ವ ಬಂದು **ಹಲಾದಿಃ ಶೇಷಃ** (ಪಾ. ಸೂ. ೭-೪-೬೦) ಎಂಬ ಸೂತ್ರದಿಂದ ಅಭ್ಯಾಸ ಸಂಜ್ಞೆಯುಳ್ಳ ಆದಿಭಾಗದಲ್ಲಿ ವಕಾರಮಾತ್ರ ಉಳಿದು ತಿಪ್ ಸೇರಿಸಿದಾಗ ವವೃಧೆ ಎಂದಾಗು ತ್ತದೆ. **ಅನ್ಯೇಷಾಮಪಿ ದೃಶ್ಯತೆ** (ಪಾ. ಸೂ. ೬-೩-೧೩೭) ಅನುಕ್ತವಾನವುಗಳಿಗೂ ಪೂರ್ವಪದಗಳಿಗೆ ದೀರ್ಘವು ಬರುತ್ತದೆ. ಆದುದರಿಂದ ಮುಂತ್ರಪಾಠದಲ್ಲಿ ಪಾವೃಧೆ ಎಂದು ಅಭ್ಯಾಸಸಂಜ್ಞೆಯುಳ್ಳ ಪೂರ್ವಖಂಡಕ್ಕೆ ದೀರ್ಘವು ಬಂದಿದೆ ಇದು ಐಚ್ಛಿಕವಾದುದು. ತೂತುಜಾನ ಮುಂತಾದ ಶಬ್ದಗಳಲ್ಲಿ ಅಭ್ಯಾಸಕ್ಕೆ **ತುಜಾದೀನಾಂ ದೀರ್ಘೋ೭ಭ್ಯಾಸಸ್ಯ** (ಪಾ. ಸೂ. ೬-೧-೭) ಎಂಬ ಸೂತ್ರದಿಂದ ದೀರ್ಘವು ವಿಹಿತವಾಗಿರುವುದು ಆ ಗಣದಲ್ಲಿ ಈ ಶಬ್ದವನ್ನು ಸೇರಿಸಬಹುದಿತ್ತು. ಆದರೆ ಹಾಗೆ ಸೇರಿಸಿದರೆ ಇದು ನಿತ್ಯವಾಗಿ ಬರುವುದರಿಂದ ಪರಕಾಲದಲ್ಲಿಯೂ ದೀರ್ಘವು ಶ್ರುತವಾಗಬೇಕಾದೀತು. ಪರದಾಲದಲ್ಲಿ ದೀರ್ಘವು ಇಲ್ಲದಿದ್ದುದರಿಂದ ಹಿಂದೆ ಹೇಳಿದಂತೆ ಮುಂತ್ರದಲ್ಲಿ ಮಾತ್ರ ಹೇಳಬೇಕು

ನೃಭಿಃ—ಋಕಾರಾಂತವಾದ ಶಬ್ದದ ಮೇಲೆ ತೃತೀಯಾಬಹುವಚನ ವಿಭಕ್ತಿ. ಇಲ್ಲಿ **ಸಾವೇಕಾಚ ಸ್ತೃತೀಯಾದಿರ್ವಿಭಕ್ತಿಃ** (ಪಾ. ಸೂ. ೬-೧-೬೯) ಎಂಬ ಸೂತ್ರದಿಂದ ಸರ್ವನಾಮಬಹುವಚನ ವಿಷಯದಲ್ಲಿ ಬಂದು ಸ್ವರದಿಂದ ಕೂಡಿರುವ, ಪದದ ಪರದಲ್ಲಿರುವ ತೃತೀಯಾ ಮುಂತಾದ ವಿಭಕ್ತಿಗಳು ಉದಾತ್ತಸ್ವರವನ್ನು ಹೊಂದುತ್ತವೆ ಎಂದಿರುವುದರಿಂದ ಅಂತೋದಾತ್ತವಾಗಬೇಕಿತ್ತು. ಆದರೆ **ನೃಚಾನ್ಯತರಸ್ಯಾಮ್** (ಪಾ. ಸೂ. ೬-೧-೧೯೪) ಎಂಬ ಸೂತ್ರದಿಂದ ನೃಶಬ್ದದ ಮೇಲಿರುವ ಸುಲ್ಲಾದಿಯಾದ ವಿಭಕ್ತಿಯು ವಿಕಲ್ಪವಾಗಿ ಉದಾತ್ತಸ್ವರವನ್ನು ಹೊಂದು ತ್ತದೆ ಎಂಬುದರಿಂದ ಉದಾತ್ತಸ್ವರವು ಬರಲಿಲ್ಲ.

ಹವಾಮಹೆ—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ. ಧಾತು, ಭ್ವಾದಿ, ಲಟ್ ಉತ್ತಮಪುರುಷ ಬಹುವಚನ ಇದಕ್ಕೆ ನಿ ಅಭಿ ಉಪ ವಿ ಎಂಬ ಉಪಸರ್ಗಗಳು ಪೂರ್ವದಲ್ಲಿರುವಾಗ **ಹ್ವಯಃ ಸಂಪ್ರಸಾರಣಂ ಚ ನ್ಯಭ್ಯುಪವಿಷು** (ಪಾ ಸೂ ೩-೩-೭೨) ಎಂಬ ಸೂತ್ರದಿಂದ ಸಂಪ್ರಸಾರಣವು ವಿಹಿತವಾದರೂ ಇಲ್ಲಿ ಹ್ವಯಃ ಎಂಬುದನ್ನು ಚಿನುವೃತ್ತಿ ಮಾಡಿಕೊಂಡು ಬಹುಲಂ ಛಂದಸಿ ಎಂಬುದರಿಂದ ನಿ ಮುಂತಾದ ಉಪಸರ್ಗವಿಲ್ಲದಿದ್ದರೂ ಸಂಪ್ರಸಾರಣ ಬರುತ್ತದೆ ಯಣ್ಸ್ಥಾನದಲ್ಲಿ ಬರತಕ್ಕ ಇಕ್ಕಿಗೆ (ಇ ಉ ಋ ಲೃ) ಸಂಪ್ರಸಾರಣವೆಂದು ತಿಳಿರಿ. ಇಲ್ಲಿ ವಕಾರಕ್ಕೆ ಊಕಾರ ಬಂದರೆ **ಸಂಪ್ರಸಾರಣಾಚ್ಚ** (ಪಾ. ಸೂ. ೬-೧-೧೦೮) ಎಂಬ ಸೂತ್ರದಿಂದ ಮುಂದಿರುವ ವಿಕಾರಕ್ಕೆ ಪೂರ್ವರೂಪ ಬರುತ್ತದೆ. ಹ್ವ+ಮಹೆ ಎಂದಿರುವಾಗ **ಕರ್ತರಿ ಶಪ್** (ಪಾ. ಸೂ ೩-೧-೬೮) ಎಂಬುದರಿಂದ ಶಪ್ವಿಕರಣ ಪ್ರತ್ಯಯ ಬರುತ್ತದೆ. **ಸಾರ್ವಧಾತುಕಾರ್ಧಧಾತುಕಯೋಃ** (ಪಾ ಸೂ. ೭-೩-೮೪) ಸೂತ್ರದಿಂದ ಗುಣ ಬಂದರೆ ಓಕಾರ ಬರುತ್ತದೆ

ಓಕಾರಕ್ಕೆ ತಪ್ಪಿನ ಅಕಾರ ಪರದಲ್ಲಿರುವಾಗ ಅವಾದೇಶಸಂಧಿ ಬಂದರೆ ಹವ+ಮಹೆ ಎಂದಾಗುತ್ತದೆ. ಯಜ್ಞಾದಿ ಪ್ರತ್ಯಯಪರದಲ್ಲಿರುವುದರಿಂದ **ಅತೋದೀರ್ಘೋಯಜ್ಞಿ** (ಪಾ. ಸೂ. ೭-೩-೧೦೧) ಎಂಬುದರಿಂದ ಅಂಗಕ್ಕೆ ದೀರ್ಘಬಂದರೆ ಹವಾಮಹೆ ಎಂದಾಗುತ್ತದೆ.

ಅವಿಷತ್—ಅವ ರಕ್ಷಣೆ ಧಾತು, ಭ್ವಾದಿ. ಲೇಟಿನಲ್ಲಿ ಪ್ರಥಮಪುರುಷ ವಿಕವಚನರೂಪವು. ವಿಧ್ಯಾದ್ಯರ್ಥ ದಲ್ಲಿ ವೇದದಲ್ಲಿ ಮಾತ್ರ ಲೇಟಿನ ಪ್ರಯೋಗ. ಅದನ್ನೇ **ಲಿಙರ್ಥೇ ಲೇಟ್** (ಪಾ. ಸೂ. ೩.೪-೭) ಎಂಬ ಸೂತ್ರದಲ್ಲಿ ಹೇಳಿರುತ್ತಾರೆ. **ಲೇಟೋಽಡಾಟೌ** (ಪಾ. ಸೂ. ೩-೪-೯೪) ಎಂಬ ಸೂತ್ರದಿಂದ ಲೇಟಿಗೆ (ಆದೇಶಕ್ಕೆ ಬಂದಿರತಕ್ಕ ತಿಙಿಗೆ) ಅಡಾಗಮ ಬಂದಿದೆ. ತಿಎಂಬುದರ ಆದಿಗೆ ಬಂದಾಗ **ಇತಶ್ಚ ಲೋಪಃ ಪರಸ್ಮೈಪದೇಷು** (ಪಾ. ಸೂ. ೩-೪-೯೭) ಎಂಬುದರಿಂದ ಲೇಟಿನ ತಿಙಿನ ಇಕಾರಕ್ಕೆ ಲೋಪಬರುತ್ತದೆ. **ಸಿಬ್ಬಹುಲಂ ಲೇಟಿ** (ಪಾ. ಸೂ. ೩-೪-೯೪) ಎಂಬ ಸೂತ್ರದಲ್ಲಿ ಲೇಟ್ ಪರದಲ್ಲಿರುವಾಗ ಧಾತುವಿಗೆ ಸಿಪ್ ಎಂಬ ವಿಕರಣಪ್ರತ್ಯಯವು ಬರುತ್ತದೆ. ತಿಙ್ ಮತ್ತು ಶಿತ್ ಆಗದೆ ಇದ್ದುದರಿಂದ ಸಿಪ್ ಎಂಬುದಕ್ಕೆ ಆರ್ಧಧಾತುಕಸಂಜ್ಞೆ ಇದೆ. ಆದುದರಿಂದ **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಸೂತ್ರದಿಂದ ವಲಾದಿಯಾದುದರಿಂದ ಇಡಾಗಮ ಬರುತ್ತದೆ. ಅವ್+ಇಸ್+ತ ಎಂದಿರುವಾಗ ಪ್ರತ್ಯಯದ ಸಕಾರಕ್ಕೆ ಷತ್ವ ಬರುತ್ತದೆ. ಅವಿಷತ್. ॥ ೮ ॥

॥ ಸಂಹಿತಾಪಾಠಃ ॥

ಅಸಿ ಹಿ ವೀರ ಸೇನ್ಯೋಽಸಿ ಭೂರಿ ಪರಾದದಿಃ ।
ಅಸಿ ದಭ್ರಸ್ಯ ಚಿದ್ವೃಧೋ ಯಜಮಾನಾಯ ಶಿಕ್ಷಸಿ ಸುನ್ವತೇ
ಭೂರಿ ತೇ ವಸು ॥ ೨ ॥

॥ ಪದಪಾಠಃ ॥

ಅಸಿ । ಹಿ । ವೀರ । ಸೇನ್ಯಃ । ಅಸಿ । ಭೂರಿ । ಪರಾ ಽದದಿಃ ।
ಅಸಿ । ದಭ್ರಸ್ಯ । ಚಿತ್ । ವೃಧಃ । ಯಜಮಾನಾಯ । ಶಿಕ್ಷಸಿ । ಸುನ್ವತೇ ।
ಭೂರಿ । ತೇ । ವಸು ॥ ೨ ॥

॥ सायणभाष्यं ॥

हे वीर शत्रुक्षेपणकुशलेन्द्र त्वं सेन्यस्यासि। सेनाहोऽपि भवसि। त्वमेकोऽपि सेनासदृशो भवसीत्यर्थः। हि यस्मादेवं तस्माद्भूरि प्रभूतं शत्रूणां धनं परादादिः परादाता शत्रूणां पराजित्रुखं यथा भवति तथा आदाताऽसि। भवसि। दभ्रस्य चित्। अल्पनामैतत्। अल्पस्यापि तव स्तोतुर्वृधो वर्धयितासि। तथा यजमानायेयागं कुर्वते सुन्वते सोमाभिषवं कुर्वते पुरुषायेति शिक्षसि। अपेक्षितं धनं ददासि। शिक्षतिर्दानकर्मा। यस्मात्ते तव वसु धनं भूरि बहुलमक्षय्यं धनं विद्यते। तस्मात्प्रदासीति भावः॥ परादादिः। डुदाञ् दाने। आदृगमहनजन इति किप्रत्ययः। लिङ्दाभ्वाद्युत्तमवचने हृस्वत्वम्। अतोऽत्र लोपः इटि चेत्यकारलोपः। वृधः। वृधेरन्तर्भावितण्यर्थादिगुपधलक्षणः कः। सुन्वते। शतुरनुम इति विभक्तेरुदात्तत्वम्॥ ७॥

॥ कन्नडभाषार्थ ॥

वीर— सशक्तियुक्तशालियाग इन्द्रनೇ, (नीनु)। **सेन्यः असि**— (दोड्ड सेनेय बलवुळ्ळ) योधनागिद्दीये। **हि**— आदुदरिंदलೇ। **भूरि**— (शत्रुगळ) अत्यधिकवाद धनवन्नु। **परादादिः**— कोळ्ळेहोडेदु तंदु कोडुववनागि। **असि**— आगिद्दीये. । **दभ्रस्य चित्**—अल्पनादरू सह निन्न स्तोतृविगे! **वृधः**—वृद्धियन्नुंटुमाडुववनागि। **असि**— आगिद्दीये. । **यजमानाय**— यज्ञकर्तनू। **सुन्वते**— सोमरसवन्नु हिंडुववनू आद यजमाननिगे। **शिक्षसि**— (अपेक्षितवाद धनवन्नु) कोडुत्तीये (एतक्केंदरे)। **ते**— निनगे। **वसु**— धनवु। **भूरि**— प्रभूतवागि (इदे)।

॥ भाषार्थः ॥

सशक्तियुक्तशालियाद इन्द्रनೇ, नीनु ओब्बनೇ आदरू सह ओंदु दोड्ड सेनेय बलवुळ्ळ योधनागिद्दीये. आदुदरिंदलೇ निन्न शत्रुगळन्नु सदेबडिदु अपर धनवन्नु कोळ्ळेहोडेदु ननगे तंदु कोडुत्तीये. निन्न स्तोतृवु अल्पनादरू अवनन्नु वृद्धिगे तरुत्तीये. निनगे अत्यधिकवाद धनविरुवुदरिंद नीनु, यज्ञकर्तनू सोमरसवन्नु हिंदि अर्पिसुवनन्नू आद यजमाननिगे अवन अपेक्षितवाद धनवन्नु कोडुत्तीये.

English Translation

O Indra, you are a hero, you have the strength of an army ; you are the giver of much booty ; though your worshipper is humble you make him great and you bestow riches upon the sacrificer who offers you Soma-libations , for your wealth is abundant.

॥ ವಿಶೇಷವಿಷಯಗಳು ॥

ಸೇನ್ಯಃ—ಸೇನಾರ್ಹಃ । ತ್ವನ್ಮೇಕೋ೭ಪಿ ಸೇನಾಸದೃಶೋ ಭವಸಿ । ಇಂದ್ರನು ಒಬ್ಬನೇ ಆದರೂ ಒಂದು ಸೇನೆಗೆ ಇರುವಷ್ಟು ಬಲವು ಅವನಿಗಿರುವುದು ಎಂದಭಿಪ್ರಾಯವು.

ಭೂರಿ— ಬಹಳವಾಗಿ, much, abundant

ಪರಾದದಿಃ—ಡುದಾಞ್ ದಾನೇ । ಪರಸ್ಯ ಆದಾತಾ । ಶತ್ರುಗಳಲ್ಲಿರುವ ಧನವನ್ನು ಕೊಡುವವನು. ಎಂದರೆ ನಮ್ಮ ಸ್ತೋತ್ರಗಳಿಂದ ಇಂದ್ರನು ಪ್ರೀತನಾಗಿ ಯುದ್ಧದಲ್ಲಿ ನಮಗೆ ಜಯವನ್ನುಂಟುಮಾಡುವುದರಿಂದ ಆ ಶತ್ರುವಿನಲ್ಲಿರುವ ಧನವು ನಮಗೆ ಲಭಿಸುವುದೆಂದಭಿಪ್ರಾಯವು

ದಭ್ರಸ್ಯ— ಅಲ್ಪಸ್ಯ । ಅಲ್ಪನಾವನನ, ದೊಡ್ಡವನಲ್ಲದವನ, ಪ್ರಸಿದ್ಧನಲ್ಲದವನ. ಋಹನ್, ಹ್ರಸ್ವಃ ನೊದಲಾದ ಹನ್ನೊಂದು ಅಲ್ಪನಾಮಗಳ ಮಧ್ಯದಲ್ಲಿ ದಭ್ರ ಶಬ್ದವು ಪಠಿತವಾಗಿರುವುದು.

ಶಿಕ್ಷಸಿ— ದಾತಿ ದಾಶತಿ ನೊದಲಾದ ಹತ್ತು ದಾನಕರ್ಮನಾಮಗಳ ಮಧ್ಯದಲ್ಲಿ ಶಿಕ್ಷತಿ ಶಬ್ದವು ಪಠಿತ ವಾಗಿರುವುದರಿಂದ ಶಿಕ್ಷತಿ ಎಂದರೆ ಕೊಡುತ್ತಾನೆ ಎಂದರ್ಥವು. (ನಿ. ೩-೧೯)

॥ ವ್ಯಾಕರಣಸ್ಯ ಕ್ರಿಯಾ ॥

ಪರಾದದಿಃ ಡುದಾಞ್ ದಾನೇ, ಧಾತು. ಜುಹೋತ್ಯಾದಿ, ಉಭಯಪದೀ, ಪರಾ ಎಂಬುದು ಉಪಸರ್ಗ. **ಆದ್ಯಗಮಹನಜನಃ ಕಿಕಿನೌ ಲಿಟ್ ಚ** (ಪಾ. ಸೂ ೩-೩-೧೭೧) ಆಕಾರಾಂತ ಧಾತುಗಳ ಮೇಲೂ, ಋಕಾರಾಂತ ಧಾತುಗಳ ಮೇಲೂ, ಗಮಾದಿಗಳ, ಮೇಲೂ ಛಂದಸಿನಲ್ಲಿ ಕಿ ಕಿನ್ ಪ್ರತ್ಯಯಗಳು ಬರುತ್ತವೆ. ಅವು ಲಿಟ್ಟಿನ ಧರ್ಮವನ್ನು ಹೊಂದುತ್ತವೆ ಎಂಬುದರಿಂದ ಇಲ್ಲಿ ದಾ ಎಂಬುದು ಆಕಾರಾಂತ ಧಾತುವಾದುದರಿಂದ ಕಿ ಪ್ರತ್ಯಯ ಬಂದಿದೆ. ಕಿ ಎಂಬಲ್ಲಿ **ಲಶಕ್ವತದ್ಧಿತೇ** (ಪಾ. ಸೂ. ೧-೩-೮) ಎಂಬ ಸೂತ್ರದಿಂದ ಕಕಾರವು ಇತ್ವಾಗಿ ಲೋಪವನ್ನು ಹೊಂದುತ್ತದೆ. ಲಿಟ್ ಪರದಲ್ಲಿರುವಾಗ ಧಾತುವಿಗೆ ದ್ವಿತ್ವವನ್ನು ಹೇಳುವುದರಿಂದ ಇಲ್ಲಿ ಕಿಪ್ರತ್ಯಯಕ್ಕೆ ಲಿಡ್ವದ್ಭಾವ ಹೇಳಿರುವುದರಿಂದ ಧಾತುವಿಗೆ ದ್ವಿತ್ವ ಬರುತ್ತದೆ. ದ್ವಿತ್ವ ಬಂದ ಮೇಲೆ ಸ್ವರ್ವಾಖಂಡಕ್ಕೆ ಅಭ್ಯಾಸಸಂಜ್ಞೆಯಿರುವಾಗ **ಹ್ರಸ್ವಃ** (ಪಾ ಸೂ. ೭-೪-೫೯) ಎಂಬುದರಿಂದ ಹ್ರಸ್ವ ಬರುತ್ತದೆ. ದದಾ+ಇ ಎಂದಿರುವಾಗ **ಆತೋಲೋಪ ಇಟಿ ಚ** (ಪಾ. ಸೂ. ೬-೪-೬೪) ಕಿತ್ ಙಿತ್ ಆದ ಅಜಾದಿಯಾದ ಅರ್ಧಧಾತುಕವು ಪರದಲ್ಲಿರುವಾಗ ಆಕಾರಕ್ಕೆ ಲೋಪ ಬರುತ್ತದೆ ಎಂಬುದರಿಂದ ಇಲ್ಲಿ ಕಿಪ್ರತ್ಯಯ ಪರದಲ್ಲಿರುವುದರಿಂದ ಧಾತುವಿನ ಆಕಾರಕ್ಕೆ ಲೋಪಬರುತ್ತದೆ. ಕೃದಂತವಾದುದರಿಂದ ಪ್ರಾತಿಪದಿಕಸಂಜ್ಞೆ ಬಂದು ಪ್ರಥಮಾ ಏಕವಚನವನ್ನು ಹೊಂದಿದೆ.

ವೃಧಃ—ವೃಧು ವೃದ್ಧೌ ಧಾತು, ಭ್ವಾದಿ. ಕೆಲವು ಧಾತುಗಳು ಪ್ರೇರಣಾರ್ಥಕವಾದ ಣಿಚ್ಚನ್ನು ಹೊಂದಿದ್ದರೂ ಣಿಚ್ಚಿನ ಪ್ರೇರಣಾರ್ಥವನ್ನು ತಮ್ಮ ಅರ್ಥದೊಡನೆ ಗರ್ಭೀಕರಿಸಿ ತಿಳಿಸುತ್ತವೆ. ಇವುಗಳಿಗೆ ಅಂತರ್ಭಾವಿತಣ್ಯರ್ಥಕಧಾತುಗಳೆಂದು ಹೆಸರು. ವೃಧುಧಾತುವು ಅಂತರ್ಭಾವಿತಣ್ಯರ್ಥಕವಾದರೂ ಪ್ರಕರಣವನ್ನನುಸರಿಸಿ ಇಲ್ಲಿ ವೃದ್ಧಿ ಪಡಿಸುವವನು ಎಂದು ಸ್ವೀಕರಿಸಬೇಕಾದುದರಿಂದ ಅಂತರ್ಭಾವಿತಣ್ಯರ್ಥಕನೆಂದು ಭಾವಿಸಬೇಕು. **ಇಗುಪಧ-ಜ್ಞಾಪ್ರೀಕಿರಃ ಕಃ** (ಪಾ.ಸೂ ೩-೧-೧೩೫) ಇತ್ ಉಪಧೆಯುಳ್ಳ ಧಾತು, ಜ್ಞಾ, ಪ್ರೀ, ಕಿರ್ ಇವುಗಳಿಗೆ ಕ ಪ್ರತ್ಯಯ

ಬರುತ್ತದೆ. ಉಪಧೆ ಎಂದರೆ **ಅಲೋಽಂತ್ಯಾತ್ಪೂರ್ವ ಉಪಧಾ** (ಪಾ. ಸೂ. ೧-೧-೬೫) ಎಂಬುದರಿಂದ ಅಂತ್ಯ ವರ್ಣಕ್ಕಿಂತಲೂ ಪೂರ್ವದಲ್ಲಿರುವ ವರ್ಣ. ಇಲ್ಲಿ ಋಕಾರವು ೂ (ಇಕ್) ಉಪಧೆಯಾಗಿರುವುದರಿಂದ ಕಪ್ರತ್ಯಯ ಬಂದಿದೆ. **ಕ**ಕಾರವು **ಲೋಪ**ವಾದರೆ ಉಳಿಯುವುದು ಅಕಾರ. ಕಿತ್ತಾದುದರಿಂದ **ಕ್ಞಿತಿಚ** (ಪಾ. ಸೂ. ೧-೧-೫) ಎಂದು ನಿಷೇಧಮಾಡುವುದರಿಂದ ಧಾತುವಿನ ಋಕಾರಕ್ಕೆ ಗುಣಬರುವುದಿಲ್ಲ　ವೃಧಃ ॥

ಸುನ್ವತೆ—ಷುಞ್ ಅಭಿಷವೆ. ಧಾತು, ಸ್ನಾದಿ, ಇದರ ಮೇಲೆ **ಲಟಃ ಶತೃಶಾನಚಾವಸ್ರಥಮಾಸಮಾನಾಧಿಕರಣೆ** (ಪಾ. ಸೂ. ೩-೨-೧೨೪) ಎಂಬ ಸೂತ್ರದಿಂದ ಶತೃಪ್ರತ್ಯಯ ಬಂದಿದೆ. ಶತೃ ಪ್ರತ್ಯಯದಲ್ಲಿ ಶಕಾರವು ಇತ್ತಾದುದರಿಂದ ವಿಕರಣಪ್ರತ್ಯಯವು ಬರುತ್ತದೆ. ಸ್ನಾದಿಗೆ ಶ್ನು ಎಂಬುದು ವಿಕರಣಪ್ರತ್ಯಯ. ಕೃದಂತವಾದುದರಿಂದ ಪ್ರಾತಿಪದಿಕ ಸಂಜ್ಞೆಯು ಇದೆ. ಸುನ್ವತ್ ಶಬ್ದದ ನೇಲೆ ಚತುರ್ಥೀವಿಭಕ್ತಿ, ಏಕವಚನಪ್ರತ್ಯಯಮಾಡಿದಾಗ ಉಕ್ತರೂಪವಾಗಿದೆ. ಇಲ್ಲಿ **ಅನುದಾತ್ತೌ ಸುಪ್ಪಿತೌ** (ಪಾ. ಸೂ. ೩-೧-೪) ಸೂತ್ರದಿಂದ ವಿಭಕ್ತಿಗೆ ಅನುದಾತ್ತಸ್ವರ ಬರಬೇಕಿತ್ತು. ಆದರೆ ಇದಕ್ಕೆ ಅಪವಾದವಾಗಿ **ಶತುರನುಮೋ ನದ್ಯಜಾದೀ** (ಪಾ. ಸೂ. ೬-೧-೧೭೩) ಎಂದು ನುಮ್ ಇಲ್ಲದಿರುವ ಶತೃಪ್ರತ್ಯಯವೇ ಕೊನೆಯಲ್ಲಿರುವ ಅಂತೋದಾತ್ತವಾದ ಶಬ್ದದ ಪರದಲ್ಲಿರುವ ಅಜಾದಿಯಾದ ಶಸಾದಿವಿಭಕ್ತಿಯು ಉದಾತ್ತವಾಗುತ್ತದೆ ಎಂದು ವಿಧಿಸಿರುವುದರಿಂದ ಇಲ್ಲಿ ನುಮ್ ಇಲ್ಲದಿರುವುದರಿಂದ ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗಿರುವುದರಿಂದಲೂ ಚತುರ್ಥ್ಯೇಕವಚನವು ಅಜಾದಿಯಾಗಿರುವುದರಿಂದ ಉದಾತ್ತವಾಗುತ್ತದೆ. ॥ ೨ ॥

॥ ಸಂಹಿತಾಪಾಠಃ ॥

ಯದುದೀರತ ಆಜಯೋ ಧೃಷ್ಣವೇ ಧೀಯತೇ ಧನಾ ।
ಯುಕ್ಷ್ವಾ ಮದಚ್ಯುತಾ ಹರೀ ಕಂ ಹನಃ ಕಂ ವಸೌ ದಧೋಽ-
ಸ್ಮಾ ಇಂದ್ರ ವಸೌ ದಧಃ ॥ ೩ ॥

ಪದಪಾಠಃ

ಯತ್ । ಉತ್ ಈರತೇ । ಆಜಯಃ । ಧೃಷ್ಣವೇ । ಧೀಯತೇ । ಧನಾ ।
ಯುಕ್ಷ್ವ । ಮದಚ್ಯುತಾ । ಹರೀ ಇತಿ । ಕಂ । ಹನಃ । ಕಂ । ವಸೌ । ದಧಃ ।
ಅಸ್ಮಾನ್ । ಇಂದ್ರ । ವಸೌ । ದಧಃ ॥ ೩ ॥

ಸಾಯಣಭಾಷ್ಯಂ

ಅತ್ರೇದಮಾಖ್ಯಾನಂ । ರಹೂಗಣಸ್ತ್ರೋ ಗೋತಮಃ ಕುರುಸೃಂಜಯಾನಾಂ ರಾಜ್ಞಾಂ ಪುರೋಹಿತ ಆಸೀತ್ । ತೇಷಾಂ ರಾಜ್ಞಾಂ ಪರೈಃ ಸಹ ಯುದ್ಧೇ ಸತಿ ಸ ಋಷಿರನೇನ ಸೂಕ್ತೇನೇಂದ್ರಂ ಸ್ತುತ್ವಾ ಸ್ವಕೀಯಾನಾಂ ಜಯಂ ಪ್ರಾರ್ಥಯಾಮಾಸೇತಿ । ತಸ್ಯ ಚ ತತ್ಪುರೋಹಿತತ್ವಂ ವಾಜಸನೇಯಿಭಿ-ರಾಮ್ನಾತಂ । ಗೋತಮೋ ಹಿ ನೈ ರಾಹೂಗಣ ಉಭಯೇಷಾಂ ಕುರುಸೃಂಜಯಾನಾಂ ಪುರೋಹಿತ ಆಸೀದಿತಿ ॥ ಯದ್ಯದಾಜಯಃ ಸಂಗ್ರಾಮಾ ಉದೀರತೇ ಉದ್ಗಚ್ಛಂತಿ ಉತ್ಪದ್ಯಂತೇ ತದಾನೀಂ ಧನಾ ಧನಂ ಧೃಷ್ಣನೇ ಯೋ ಧೃಷ್ಣುರ್ಧರ್ಷಯಿತಾ ಶತ್ರೂಣಾಂ ಜೇತಾ ಭವತಿ ತಸ್ಮೈ ಧೀಯತೇ । ನಿಧೀಯತೇ । ಜಯತೋ ಧನಂ ಭವತೀತ್ಯರ್ಥಃ । ಹೇ ಇಂದ್ರ ತ್ವಂ ತಾದೃಶೇಷು ಯುದ್ಧೇಷು ಪ್ರವೃತ್ತೇಷು ಮದಚ್ಯುತಾ ಶತ್ರೂಣಾಂ ಮದಸ್ಯ ಗರ್ವಸ್ಯ ಚ್ಯಾವಯಿತಾರೌ ಹರೀ ತ್ವದೀಯಾವಶ್ವೌ ಯುಕ್ಷ್ವ । ರಥೇ ಯೋಜಯ । ಯೋಜಯಿತ್ವಾ ಚ ಕಂ ಕಂಚಿದ್ರಾಜಾನಂ ತವ ಪರಿಚರಣಮಕುರ್ವಂತಂ ಹನಃ । ಹನ್ಯಾಃ । ಕಂಚನ ತ್ವಾಂ ಪರಿಚರಂತಂ ವಸೌ ವಸುನಿ ಧನೇ ದಧಃ । ಸ್ಥಾಪಯಸಿ । ಅತೋ ಜಯೇಪರಾಜಯೌಯೋ-ಸ್ತ್ವಯೈವ ಕಾರಯಿತಾಸಿ । ತಸ್ಮಾತ್ ಹೇ ಇಂದ್ರಾಸ್ಮಾನಸ್ಮದೀಯಾನ್ಯಾಜ್ಞೋ ವಸೌ ಧನೇ ದಧಃ । ಸ್ಥಾಪಯ ॥ ಉದೀರತೇ । ಈರ ಗತೌ । ಆದಾದಿಕಃ । ಅನುದಾತ್ತೇತ್ತ್ವಾಲ್ಲಸಾರ್ವಧಾತುಕಾನುದಾತ್ತತ್ವೇ ಧಾತುಸ್ವರ ಏವ ಶಿಷ್ಯತೇ । ಯದ್ಧೃತ್ತಯೋಗಾದನಿಘಾತಃ । ಧನಾ । ಸುಪಾಂ ಸಲುಗಿತಿ ಡಾದೇಶಃ । ಯುಕ್ಷ್ವ । ಯುಜಿರ್ ಯೋಗೇ । ಅಂತರ್ಭಾವಿತಣ್ಯರ್ಥಾಲ್ಲೋಟಿ ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ದ್ವ್ಯಚೋಽತಸ್ತಿಙ ಇತಿ ಸಂಹಿತಾಯಾಂ ದೀರ್ಘತ್ವಂ । ಹನಃ । ಹಂತೇರ್ಲೇಟಿ ಸಿಪ್ಯಡಾಗಮಃ । ಹನಶ್ಚ ದಧಶ್ಚೇತಿ ಚಾರ್ಥಪ್ರತೀತೇಶ್ಚಾದಿಲೋಪೇ ವಿಭಾಷೇತಿ ಪ್ರಥಮಾಯಾಸ್ತಿಙ್ವಿಭಕ್ತೇರ್ನಿಘಾತಪ್ರತಿಷೇಧಃ । ವಸೌ । ಲಿಂಗವ್ಯತ್ಯಯಃ । ದಧಃ । ದಧ ಧಾರಣೇ ಲೇಟಿ । ನ್ಯತ್ಯಯೇನ ಪರಸ್ಮೈಪದಂ ॥ ೩ ॥

ಪದಾರ್ಥ

ಯತ್—ಯಾವಾಗ । **ಆಜಯಃ**—ಯುದ್ಧಗಳು । **ಉದೀರತೇ**—ಸಂಭವಿಸುತ್ತವೆಯೋ, (ಆಗ) । **ಧನಾ** - ಧನವು । **ಧೃಷ್ಣನೇ**— ಶತ್ರುವನ್ನು ಸೋಲಿಸತಕ್ಕ ವೀರನಿಗೆ । **ಧೀಯತೇ**— ಬಂದು ಸೇರುತ್ತವೆ (ಎಲೈ ಇಂದ್ರನೇ) । **ಮದಚ್ಯುತಾ**—(ಶತ್ರುಗಳ)ಗರ್ವವನ್ನು ಅಡಗಿಸತಕ್ಕ, । **ಹರೀ**—ನಿನ್ನ ಕುದುರೆಗಳನ್ನು । **ಯುಕ್ಷ್ವ**— (ರಥಕ್ಕೆ) ಸೇರಿಸು. । **ಕಂ**— (ನಿನ್ನ ಪೂಜೆಮಾಡದಿರುವ) ಯಾವನನ್ನಾಗಲಿ । **ಹನಃ**—ಕೊಲ್ಲು. । (ನಿನ್ನ ಪೂಜೆ ಮಾಡತಕ್ಕವನನ್ನು) **ವಸೌ**—ಧನದಲ್ಲಿ । **ದಧಃ**—ಸ್ಥಿರವಾಗಿಡು. । **ಇಂದ್ರ**—ಎಲೈ ಇಂದ್ರನೇ, । **ಅಸ್ಮಾನ್** - ನಮ್ಮನ್ನು । **ವಸೌ** ಐಶ್ವರ್ಯದಲ್ಲಿ । **ದಧಃ**— ನ್ಥಾಪಿಸಿಡು. ।

ಭಾವಾರ್ಥ

ಯುದ್ಧಗಳು ಸಂಭವಿಸಿದಾಗ ಶತ್ರುವನ್ನು ಸೋಲಿಸತಕ್ಕ ವೀರನಿಗೆ ಧನವು ಲಭಿಸುತ್ತವೆ. ಆದುದರಿಂದ ಶತ್ರುನಾಶಕನಾದ ಇಂದ್ರನೇ, ಶತ್ರುಗಳ ಗರ್ವವನ್ನು ಅಡಗಿಸತಕ್ಕ ನಿನ್ನ ಕುದುರೆಗಳನ್ನು ರಥಕ್ಕೆ ಕಟ್ಟಿ ಸಿದ್ಧಪಡಿಸು. ನಿನ್ನ ಪೂಜೆಮಾಡದಿರುವ ರಾಜರನ್ನು ನಾಶಮಾಡಿ ನಿನ್ನ ಪೂಜೆಯನ್ನು ಮಾಡತಕ್ಕ ರಾಜರನ್ನು ಐಶ್ವರ್ಯವಂತರನ್ನಾಗಿ ಮಾಡು. ನಮಗೆ ಪ್ರಭೂತವಾದ ಧನವನ್ನು ಕೊಡು

English Translation

When battles arise, wealth will be the rewards of the victor ; O Indra, yoke your horses, humblers of the pride of the enemies, in order that you may kill one and give wealth to another. Place us in possession of wealth.

॥ ವಿಶೇಷವಿಷಯಗಳು ॥

ಭಾಷ್ಯಕಾರರು ಇಲ್ಲಿ ಒಂದು ಉಪಾಖ್ಯಾನವನ್ನು ಹೇಳಿರುವರು—ಈ ಸೂಕ್ತವ ಋಷಿಯಾವ ರಹೂಗಣ ಪುತ್ರನಾದ ಗೋತಮನು ಕುರು ಮತ್ತು ಸೃಂಜಯ ಎಂಬ ಜನಾಂಗದ ರಾಜರುಗಳಿಗೆ ಪುರೋಹಿತನಾಗಿದ್ದನು. ಆಗ ಆ ರಾಜರು ತಮ್ಮ ಶತ್ರುರಾಜರೊಡನೆ ಯುದ್ಧಮಾಡುವ ಕಾಲದಲ್ಲಿ ಈ ಗೋತಮನು ಈ ಸೂಕ್ತದಿಂದ ಇಂದ್ರನನ್ನು ಸ್ತೋತ್ರಮಾಡಿ ಇಂದ್ರನು ಪ್ರಸನ್ನನಾಗುವಂತೆ ಮಾಡಿದನು. ಇಂದ್ರನು ಮೇಲೆ ಹೇಳಿದ ಕುರು ಸೃಂಜಯ ರಾಜರುಗಳಿಗೆ ಯುದ್ಧದಲ್ಲಿ ಜಯವುಂಟಾಗುವಂತೆ ಮಾಡಿದನು. ಈ ವಿಷಯವನ್ನೇ ಈ ಋಕ್ಕಿನಲ್ಲಿ ಋಷಿಯು ಸೂಚಿಸಿರುವನೆಂದು ಭಾಷ್ಯಕಾರರು ಹೇಳಿರುವರು. ಮತ್ತು ಈ ಗೋತಮನು ಕುರುಸೃಂಜಯರಿಗೆ ಪುರೋಹಿತನಾಗಿದ್ದನೆಂಬ ವಿಷಯದಲ್ಲಿ **ಗೋತಮೋ ಹ ವೈ ರಾಹುಗಣ ಉಭಯೇಷಾಂ ಕುರುಸೃಂಜಯಾನಾಂ ಪುರೋಹಿತ ಆಸೀತ್** ಎಂಬ ಶಾಙ್ಖಾಯನೀಯ ಶ್ರುತಿವಾಕ್ಯವನ್ನು ಉದಾಹರಿಸಿರುವರು.

ಉದೀರತೇ ಈರ ಗತೌ । ಪ್ರಾಪ್ತವಾಗುವಾಗ, ಸಂಭವಿಸುವಾಗ, arise, happen.

ಆಜಯೇ— ಯುದ್ಧಗಳು. (ನಿ. ೨-೧೭)

ಧೃಷ್ಣವೇ—ಧಾಷ್ಟ್ರ್ಯಯುಕ್ತಾಯ. ಬಲವತ್ಪ್ರವನಿಗೆ, ಯುದ್ಧದಲ್ಲಿ ಬಲವತ್ಪ್ರವನು ಗೆಲ್ಲುವುದು ಸ್ವಾಭಾವಿಕವು

ಮದಚ್ಯುತಾ—ಶತ್ರುಗಳ ಗರ್ವವನ್ನಡಗಿಸುವ. ಎಂದರೆ ಈ ಕುದುರೆಗಳ ಸಹಾಯದಿಂದ ಇಂದ್ರನು ಶತ್ರುಗಳನ್ನು ಗೆಲ್ಲುವುದರಿಂದ, ಕುದುರೆಗಳು ಶತ್ರುವಿನ ಗರ್ವವನ್ನು ಅಡಗಿಸಲು ಸಹಾಯಮಾಡುವುವು ಆದುದರಿಂದ ಕುದುರೆಗಳನ್ನು ಈ ಶಬ್ದದಿಂದ ಕರೆಯಲಾಗಿದೆ.

ವ್ಯಾಕರಣಸ್ಯ ಕ್ರಿಯಾ

ಉದೀರತೇ—ಈರಗತೌ ಧಾತು. ಅದಾದಿ, ಉತ್ ಉಪಸರ್ಗ. ಉಪಸರ್ಗದಿಂದ ಧಾತ್ವರ್ಥವು ಬೇರೆಯಾಗುವುದು. ಇದನ್ನೆ, "ಉಪಸರ್ಗೇಣ ಧಾತ್ವರ್ಥಃ ಬಲಾದನ್ಯತ್ರ ಪ್ರತೀಯತೆ" ಎಂದು ಹೇಳಿರುವರು. ಅದಾದಿಯಲ್ಲಿ ವಿಕರಣಕ್ಕೆ ಲುಕ್ ಬರುತ್ತದೆ. ಇದು ಅನುದಾತ್ತೇತ್ತಾಗ ಧಾತು. **ತಾಸ್ಯನುದಾತ್ತೇನ್ಙಿ ವದುಪದೇಶಾಲ್ಲಸಾರ್ವಧಾತುಕಮನುದಾತ್ತಮಹ್ನಿ ಙಿಚೋಃ** (ಪಾ. ಸೂ. ೬-೧-೧೮೬) ತಾಸ್, ಅನುದಾತ್ತೇತ್ತಾದ ಧಾತು, ಮುಂತಾದವುಗಳ ಪರದಲ್ಲಿರುವ ಲಕಾರದ ಸ್ಥಾನದಲ್ಲಿ ಬಂದಿರುವ, ಸಾರ್ವಧಾತುಕ ಸಂಜ್ಞೆಯುಳ್ಳ, ತಿಙಿಗೆ ಅನುದಾತ್ತಸ್ವರವು ಬರುತ್ತದೆ ಎಂಬುದರಿಂದ ಇಲ್ಲಿ ಲಙಿನ ಸ್ಥಾನದಲ್ಲಿ ಬಂದಿರುವ ತಿಙಾದೇಶವು ಸಾರ್ವಧಾತುಕ ಸಂಜ್ಞೆಯನ್ನು ಹೊಂದಿರುವುದರಿಂದ ಅನುದಾತ್ತಸ್ವರವನ್ನು ಹೊಂದಿದೆ. ಪ್ರತ್ಯಯಸ್ವರವಿಲ್ಲದಿದುದರಿಂದ

ಧಾತುಸ್ವರವೇ ಉಳಿಯುತ್ತದೆ. ಅಂತೋದಾತ್ತವೇ ಧಾತುಸ್ವರ. ಪೂರ್ವಸೂತ್ರದಿಂದ ಇಲ್ಲಿ ಅನುದಾತ್ತವು **ವಿಹಿತವಾದರೂ** ಅದಕ್ಕೆ ಶ್ರವಣಮಾತ್ರ ಇಲ್ಲ. ಇದಕ್ಕೆ ಅಪವಾದವಾಗಿ **ಯೆದ್ಬೃತ್ತಾನ್ನಿತ್ಯಂ** (ಪಾ. ಸೂ. ೮-೧-೬೭) ಎಂಬ ಸೂತ್ರವು ಆರಬ್ಧವಾಗಿದೆ. ಯಾವ ಸ್ಥಲದಲ್ಲಿಯಾದರೂ ಯಚ್ಛಬ್ದವಿದ್ದರೆ ಅದರ ವರದಲ್ಲಿರುವ ತಿಙಂತವು ಅನುದಾತ್ತವಾಗುವುದಿಲ್ಲವೆಂದಿರುವುದರಿಂದ ಇಲ್ಲಿ ಮಂತ್ರಪಾಠದಲ್ಲಿ ,' ಯದುದೀರತ ' ಎಂದಿರುವುದರಿಂದ ಯಚ್ಛಬ್ದಸಂಬಂಧ ಬಂದಿದೆ. ಆದುದರಿಂದ ಅನುದಾತ್ತವು ನಿಷಿದ್ಧವಾಗಿದೆ

ಧನಾ—ಧನಶಬ್ದದ ಮೇಲೆ ದ್ವಿತೀಯೈಕವಚನ ಬಂದಿದೆ. ಧನ+ಅನ್ ಎಂದಿರುವಾಗ **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬ ಸೂತ್ರದಿಂದ ಅನ್ ವಿಭಕ್ತಿಗೆ ಡಾ ಎಂಬ ಆದೇಶವು ಬಂದಿದೆ. ಡಾ ಎಂಬಲ್ಲಿ ಡಕಾರವು ಇತ್ಸಂಜ್ಞೆಯಿಂದ ಲೋಪವಾಗುವುದರಿಂದ ಆ ಎಂಬುದು ಉಳಿಯುತ್ತದೆ. ಡಾಪರದಲ್ಲಿರುವಾಗ ಧನ ಎಂಬ ಪ್ರಕೃತಿಯಲ್ಲಿರುವ ಕೊನೆಯ ಅಕಾರವು ಲುಪ್ತವಾಗುತ್ತದೆ. ಆಕಾರವನ್ನು ಸೇರಿಸಿದಾಗ ರೂಪಸಿದ್ಧಿಯಾಗುವುದು.

ಯುಕ್ಷ್ವ—ಯುಜಿರ್ ಯೋಗೆ, ಧಾತು, ರುಧಾದಿ, ಉಭಯಪದೀ ಇದು ನಿಚ್ಚಿನ ಪ್ರೇರಣಾರ್ಥವನ್ನು ಗರ್ಭೀಕರಿಸಿದೆ. ಣಿಜರ್ಥವನ್ನೂ ಧಾತ್ವರ್ಥದೊಡನೆ ಸೇರಿಸಿ ಹೇಳಬೇಕು. ವಿಧ್ಯರ್ಥದಲ್ಲಿ ಲೋಟ್ ಬಂದಿದೆ. ರುಧಾದಿಗೆ ಶ್ನಮ್ ಎಂಬ ವಿಕರಣಪ್ರತ್ಯಯವು ವಿಹಿತವಾಗಿದೆ. ಇಲ್ಲಿ **ಬಹುಲಂ ಛಂದಸಿ** (ಪಾ. ಸೂ. ೨-೪-೭೬) ಎಂಬುದರಿಂದ ಸ್ನಾಪ್ತವಾದ ವಿಕರಣಪ್ರತ್ಯಯಕ್ಕೆ ಲುಕ್ ಬಂದಿದೆ. **ಸವಾಭ್ಯಾಂ ವಾಮೌ** (ಪಾ. ಸೂ. ೩-೪-೧೧) ಎಂಬುದರಿಂದ ಏತ್ವವನ್ನು ಹೊಂದಿದ ಮಧ್ಯಮಪುರುಷನ ಸೆ ಪ್ರತ್ಯಯನ ಏಕಾರಕ್ಕೆ ವ ಎಂಬ ಆದೇಶವು ಬರುತ್ತದೆ. ಧಾತುವಿನ ಜಕಾರಕ್ಕೆ **ಚೋಃ ಕುಃ** (ಪಾ. ಸೂ. ೮-೨-೩೦) ಎಂಬುದರಿಂದ ಗಕಾರವೊಂದರೆ ಚರ್ತ್ವದಿಂದ ಅದಕ್ಕೆ ಕಕಾರವೂ, ಕಕಾರದ ಪರದಲ್ಲಿರುವ ಸಕಾರಕ್ಕೆ ಷತ್ವವೂ ಬಂದರೆ ಕಕಾರಷಕಾರಗಳ ಯೋಗದಿಂದ ಕ್ಷಕಾರವಾಗುತ್ತದೆ. ಕ್ಷ ಎಂಬುದು ಬೇರೆ ವರ್ಣವಲ್ಲ. ಯುಕ್ಷ್ವ ಎಂದಿರುವಾಗ, **ದ್ವ್ಯಚೋ೭ತಸ್ತಿಙಃ** (ಪಾ. ಸೂ. ೬-೩-೧೩೫) ಎರಡು ಸ್ವರವಿರುವ ತಿಙಂತದ ಕೊನೆಯ ಅಕಾರಕ್ಕೆ ಮಂತ್ರದಲ್ಲಿ ದೀರ್ಘ ಬರುತ್ತದೆ ಎಂಬುದರಿಂದ ಇಲ್ಲಿ ಮಂತ್ರವಾದರಲ್ಲಿ ಯುಕ್ಷ್ವಾ ಎಂದು ದೀರ್ಘವು ಶ್ರುತವಾಗಿದೆ.

ಹನಃ—ಹನ ಹಿಂಸಾಗತ್ಯೋಃ. ಧಾತು, ಅದಾದಿ, ಪರಸ್ಮೈಪದಿ, ನಿಧ್ಯರ್ಥದಲ್ಲಿ ಲೇಟ್ ಬಂದಿದೆ. ಮಧ್ಯಮ ಪುರುಷದ ಸಿಪ್ ಬಂದಾಗ ಹಿಂದೆ ಹೇಳಿದಂತೆ (೧-೬-೮೯) ಸಿಪ್ಪಿಗೆ ಆಡಾಗಮ ಬರುತ್ತದೆ. ಹನನ್ ಎಂದಿರುವಾಗ ಹಲ್ ವರ್ಣದ ಪರದಲ್ಲಿದ್ದುದರಿಂದ ಸಿಪ್ಪಿಗೆ ಲೋಪಪ್ರಾಪ್ತವಾದರೆ ರುತ್ವವಿಸರ್ಗಗಳು ಬಂದಿವೆ. ಸಿಪ್ಪಿನಲ್ಲಿ ಪಕಾರ ಇತ್ತಾದುದರಿಂದ ಅನುದಾತ್ತಸ್ವರ ಬರಬೇಕಿತ್ತು. ಆದರೆ **ಚಾದಿಲೋಪೇ ವಿಭಾಷಾ** (ಪಾ. ಸೂ. ೮-೧-೬೩) ಚ, ವಾ, ಹಾ, ಅಪ ಇವುಗಳು ಲೋಪವಾದಾಗ ಪ್ರಥಮೋಚ್ಚರಿತವಾದ ತಿಪ್ ವಿಭಕ್ತಿಯು ಅನುದಾತ್ತವಾಗುವುದಿಲ್ಲ ವೆಂಬುದರಿಂದ ಇಲ್ಲಿ ಹನಶ್ಚ, ವಧಶ್ಚ ಎಂದು ಚಾರ್ಥವು ತೋರುವುದರಿಂದ ಚಕಾರಲೋಪವಾಗಿದೆ ಎಂದು ಭಾವಿಸಬೇಕು ಇದರಿಂದ ಅನುದಾತ್ತಸ್ವರವು ಬರುವುದಿಲ್ಲ.

ವಸೌ—ಸಪ್ತಮ್ಯೇಕವಚನ. ವಸುಶಬ್ದವು ಲೋಕದಲ್ಲಿ ನಪುಂಸಕಲಿಂಗ. **ವ್ಯತ್ಯಯೋ ಬಹುಲಂ** (ಪಾ. ಸೂ. ೩-೧-೮೫) ಎಂಬುದರಿಂದ ಛಂದಸ್ಸಿನಲ್ಲಿ ಲಿಂಗಾದಿಗಳು ವ್ಯತ್ಯಾಸವನ್ನು ಹೊಂದುತ್ತವೆ ಎಂಬುದರಿಂದ ಇಲ್ಲಿ ಪುಲ್ಲಿಂಗದ ರೂಪವನ್ನು ಹೊಂದಿದೆ.

'ದಧಃ—ದಧ ಧಾರಣೆ ಧಾತು. ಭ್ವಾದಿ, ಆತ್ಮನೇಪದಿ. ಲೇಟನಲ್ಲಿ ಮಧ್ಯಮಪುರುಷ ಏಕವಚನದ ರೂಪ. ಆತ್ಮನೇಪದದಲ್ಲಿ ದಧಸ್ವ ಎಂದಾಗಬೇಕಾಗುವುದು. ಆದರೆ ಹಿಂದೆ ಹೇಳಿಹಿಂತೆ **ವ್ಯತ್ಯಯೋಬಹುಲಂ** ಎಂಬುದರಿಂದ ಇಲ್ಲಿ ಆತ್ಮನೇಪದಕ್ಕೆ ಬದಲಾಗಿ ಪರಸ್ಮೈಪದವು ಬಂದಿದೆ. ಶಬ್ವಿಕರಣ ಪ್ರತ್ಯಯ ಬರುತ್ತದೆ. ಸಿಸ್ಸಿನ ಸಕಾರಕ್ಕೆ ರುತ್ವವಿಸರ್ಗಗಳು ಬರುತ್ತವೆ. ॥ ೩ ॥

॥ ಸಂಹಿತಾಪಾಠಃ ॥

ಕ್ರತ್ವಾ ಮಹಾ ಅನುಷ್ವಧಂ ಭೀಮ ಆ ವಾವೃಧೇ ಶವಃ।
ಶ್ರಿಯ ಋಷ್ವ ಉಪಾಕಯೋರ್ನಿ ಶಿಪ್ರೀ ಹರಿವಾನ್ದಧೇ ಹಸ್ತ-
ಯೋರ್ವಜ್ರಮಾಯಸಂ ॥ ೪ ॥

ಪದಪಾಠಃ

ಕ್ರತ್ವಾ । ಮಹಾನ್ । ಅನು ೱ ಸ್ವಧಂ । ಭೀಮಃ । ಆ । ವವೃಧೇ । ಶವಃ ।
ಶ್ರಿಯೇ । ಋಷ್ವಃ । ಉಪಾಕಯೋಃ । ನಿ । ಶಿಪ್ರೀ । ಹರಿ ೱ ವಾನ್ । ದಧೇ ।
ಹಸ್ತಯೋಃ । ವಜ್ರಂ । ಆಯಸಂ ॥ ೪ ॥

ಸಾಯಣಭಾಷ್ಯಂ

ಕ್ರತ್ವಾ ಕರ್ಮಣಾ ಪ್ರಜ್ಞಯಾ ವಾ ಮಹಾನ್ ಸರ್ವಾಧಿಕೋ ಭೀಮಃ ಶತ್ರೂಣಾಂ ಭಯಂಕರ ಇಂದ್ರೋ ೱನುಷ್ವಧಂ। ಸ್ವಧೇತ್ಯನ್ನನಾಮ। ಸ್ವಧಾಯಾಂ। ವಿಭಕ್ತ್ಯರ್ಥೇ ೱವ್ಯಯೀಭಾವಃ। ಸೋಮ-ಲಕ್ಷಣಸ್ಯಾನ್ನಸ್ಯ ಪಾನೇ ಸತೀತ್ಯರ್ಥಃ। ಶವ ಆತ್ಮೀಯಂ ಬಲಮಾ ವವೃಧೇ। ಅಭಿಮುಖ್ಯೇನ ಪ್ರಾವರ್ಧಯತ್। ತದನಂತರಮೃಷ್ವೋ ದರ್ಶನೀಯಃ ಶಿಪ್ರೀ। ಶಿಪ್ರೇ ಹನೂ ನಾಕೇಸಿ ವಾ। ತದ್ಯುಕ್ತಃ ಹರಿವಾನ್ ಹರಿನಾಮಕಾಶ್ವೋಪೇತ ಇಂದ್ರ ಉಪಾಕಯೋಃ। ಅಂತಿಕನಾಮೈತತ್। ಸಮೀಪವರ್ತಿನೋ-

ಹಸ್ತ್ಯೋರ್ಬಾಹ್ವೋರಾಯಸಮಯೋಮಯಂ ವಜ್ರಂ ಶ್ರಿಯೇ ಸಂಪದರ್ಥಂ ನಿ ದಧೇ । ನಿದಧಾತಿ । ಸ್ಥಾಪಯತಿ । ಸೋಮಪಾನೇನ ಹೃಷ್ಟಃ ಪ್ರಬಲ ಇಂದ್ರಃ ಶತ್ರೂಣಾಂ ಹನನಾಯ ಹಸ್ತೇ ವಜ್ರಂ ಗೃಹ್ಣಾತೀತಿ ತಾತ್ಪರ್ಯಾರ್ಥಃ ॥ ಕೃತ್ವಾ । ಜಸಾದಿಷು ಛಂದಸಿ ವಾವಚನಮಿತಿ ನಾಭಾವಸ್ಯ ವಿಕಲ್ಪಿತತ್ವಾದ-ಭಾವಃ । ಆಯಸಂ । ತಸ್ಯ ವಿಕಾರ ಇತ್ಯಣ್ಪ್ರತ್ಯಯಃ ॥ ೫ ॥

॥ ಸ್ವರಿತಪದಾರ್ಥ ॥

ಕೃತ್ವಾ—ಕರ್ಮದಿಂದ ಅಥವಾ ಪ್ರಜ್ಞೆಯಿಂದ । **ಮಹಾ**—ಶ್ರೇಷ್ಠನಾದವನೂ । **ಭೀಮಃ**—(ಶತ್ರುಗಳಿಗೆ) ಭಯಂಕರನೂ ಆದ ಇಂದ್ರನು । **ಅನುಷ್ಟಧಂ**—(ಸೋಮರೂಪವಾದ) ಅನ್ನ ಸೇವನೆಯಾದಮೇಲೆ । **ಶವಃ**—(ತನ್ನ) ಬಲವನ್ನು । **ಆ ವವೃಧೇ**—ಸಂಪೂರ್ಣವಾಗಿ ವೃದ್ಧಿಮಾಡಿಕೊಂಡನು । **ಋಷ್ವಃ**—ಮನೋಹರವಾದ ರೂಪವುಳ್ಳವನೂ । **ಶಿಪ್ರೀ**—ಸುಂದರವಾದ ಗಲ್ಲ ಅಥವಾ ಮೂಗುಳ್ಳವನೂ । **ಹರಿವಾ**—ಹರಿಯೆಂಬ ಕುದುರೆಗಳಿಂದ ಕೂಡಿದವನೂ ಆದ ಇಂದ್ರನು । **ಉಪಾಕಯೋಃ**—(ತನ್ನ) ಪಾರ್ಶ್ವಗಳಲ್ಲಿರುವ । **ಹಸ್ತ್ಯೋಃ**—ಕೈಗಳಲ್ಲಿ । **ಆಯಸಂ**—ಉಕ್ಕಿನಿಂದ ಮಾಡಿದ । **ವಜ್ರಂ**—ವಜ್ರಾಯುಧವನ್ನು । **ಶ್ರಿಯೇ**—(ನಮ್ಮ) ಸಂಪತ್ತಿಗಾಗಿ । **ನಿ ದಧೇ**—ಪಿಡಿದುಕೊಂಡಿದ್ದಾನೆ.

ಭಾವಾರ್ಥ

ಯಜ್ಞಕರ್ಮದಿಂದ ಶ್ರೇಷ್ಠನಾದವನೂ ಮತ್ತು ಶತ್ರುಗಳಿಗೆ ಭಯಂಕರನಾದವನೂ ಆದ ಇಂದ್ರನು ಸೋಮರಸರೂಪವಾದ ಅನ್ನಸೇವನೆಯಿಂದ ತನ್ನ ಶಕ್ತಿಯನ್ನು ಬಹಳವಾಗಿ ಬೆಳೆಸಿಕೊಂಡಿದ್ದಾನೆ. ಮನೋಹರವಾದ ರೂಪವುಳ್ಳವನೂ, ಸುಂದರವಾದ ಕೆನ್ನೆಯುಳ್ಳವನೂ ಮತ್ತು ಹರಿಯೆಂಬ ಕುದುರೆಗಳಿಂದ ಕೂಡಿದವನೂ ಆದ ಇಂದ್ರನು ತನ್ನ ಪಾರ್ಶ್ವದಲ್ಲಿರುವ ಕೈಗಳಲ್ಲಿ ಉಕ್ಕಿನಿಂದ ನಿರ್ಮಿತವಾದ ವಜ್ರಾಯುಧವನ್ನು ನಮಗೆ ಸಂಪತ್ತನ್ನು ತಂದುಕೊಡುವುದಕ್ಕಾಗಿ ಹಿಡಿದುಕೊಂಡಿದ್ದಾನೆ.

English Translation

Sacrifices make Indra mighty, he is formidable to the enemies; partaking of the sacrificial food, Indra has increased his strength; he has a handsome chin and is pleasing in appearance. He possesses two good horses; he grasps the iron thunderbolt in his hands for our prosperity.

ವಿಶೇಷವಿಷಯಗಳು

ಕೃತ್ವಾ—ಕರ್ಮಣಾ । ಅಪಃ ಅಪ್ಸಃ ಸೊಲಲಾದ ಇಪ್ಪತ್ತಾರು ಕರ್ಮನಾಮಗಳ ಮಧ್ಯದಲ್ಲಿ ಕ್ರತುಃ ಎಂಬ ಶಬ್ದವು ಹಠಿತವಾಗಿರುವುದರಿಂದ (ನಿ. ೩-೨) ಕೃತ್ವಾ ಎಂದರೆ ಕರ್ಮದಿಂದ ; ಯಜ್ಞಾನುಷ್ಠಾನಾದಿಕರ್ಮಗಳಿಂದ ; ಮನುಷ್ಯರು ಮಾಡುವ ಯಜ್ಞಾದಿ ಕರ್ಮಗಳಲ್ಲಿ ಅರ್ಪಿಸುವ ಹವಿಸ್ಸಿನಿಂದ ದೇವತೆಗಳ ಶಕ್ತಿಯು ಅಭಿವೃದ್ಧಿಗೊಳ್ಳುವುದು ಎಂದು ಹೇಳುವರು.

ಅನುಷ್ಪಧಂ—ಸ್ಪಧಾ ಎಂದರೆ ಅನ್ನವು (ನಿ. ೩–೯) ಅನುಸ್ಪಧಂ ಅನ್ನಸ್ಯ ಎಂದು ಯಾಸ್ಕರ ವಚನವಿರು ವುದು (ನಿ. ೪–೯) ಇಲ್ಲಿ ಅನ್ನವೆಂದರೆ ಹವಿಸ್ಸಿನ ರೂಪದಲ್ಲಿರುವ ಅನ್ನವು. ಈ ಅನ್ನದ ಸೇವನೆಯಿಂದ ಇಂದ್ರನ ಶಕ್ತಿಯು ಅಭಿವೃದ್ಧಿಗೊಳ್ಳುವುದು.

ಋಷ್ಟಿಃ—**ದರ್ಶನೀಯಃ** । ಸುಂದರನಾದವನು

ಉಪಾಕಯೋಃ—ಉಪಾಕವೆಂದರೆ **ಸಮೀಪ.** (ನಿ. ೩–೯) ಇಲ್ಲಿ ಉಪಾಕಯೋಃ ಎಂಬ ಶಬ್ದವು ಹಸ್ತಯೋಃ ಎಂಬ ಶಬ್ದಕ್ಕೆ ವಿಶೇಷಣವಾಗಿದ್ದರೂ **ಈ** ಶಬ್ದವನ್ನು **ವಜ್ರಮಾಯಸಂ** ಎಂಬ ಶಬ್ದಗಳೊಡನೆ ಸಮನ್ವ ಯಮಾಡಿದಲ್ಲಿ ತನ್ನ ಸಮೀಪದಲ್ಲಿರುವ ಉಕ್ಕಿನ ವಜ್ರಾಯುಧವನ್ನು ಕೈಯಿಂದ ತೆಗೆದುಕೊಂಡನು ಎಂದು ಅರ್ಥವು ಸರಿಯಾಗಿ ಹೊಂದುವುದು, ಅಥವಾ ಉಪಾಕಯೋಃ ಎಂದರೆ ಎರಡುಪಾರ್ಶ್ವಗಳಲ್ಲಿರುವ, ಹಸ್ತಯೋಃ ಕೈಗಳಲ್ಲಿ ಎಂದರೆ ಎರಡು ಕೈಗಳಿಂದಲೂ ಎಂಬ ತಾತ್ಪರ್ಯವನ್ನು ಬೇಕಾದರೂ ಹೇಳಬಹುದು.

ಆಯಸಂ—ಕಬ್ಬಿಣ ಅಥವಾ ಉಕ್ಕಿನಿಂದ ಮಾಡಲ್ಪಟ್ಟಿರುವ ಎಂದರ್ಥವು. ಇಂದ್ರನ ವಜ್ರಾಯುಧವನ್ನು ತ್ವಷ್ಟೃವು ಕಬ್ಬಿಣದಿಂದ ಮಾಡಿಕೊಟ್ಟನೆಂದು **ಮಹ್ಯಂ ತ್ವಷ್ಟಾ ವಜ್ರಮತಕ್ಷದಾಯಸಂ** (ಋ.ಸಂ. ೧೦-೪೮-೩) ಎಂಬ ಋಕ್ಕು ಸ್ಪಷ್ಟವಾಗಿ ತಿಳಿಸುವುದು.

ಶ್ರಿಯೇ ವಜ್ರಂ ನಿದಧೇ—(ನಮ್ಯ) ಸಂಪತ್ತಿಗಾಗಿ ವಜ್ರಾಯುಧವನ್ನು ಧರಿಸಿದನು ಎಂದರೆ ಇಂದ್ರನು ವಜ್ರಾಯುಧವನ್ನು ಕೈಗಳಲ್ಲಿ ತೆಗೆದುಕೊಂಡು ನಮ್ಮ ಶತ್ರುಗಳನ್ನು ನಾಶನಮಾಡಿ ಅವರಲ್ಲಿರುವ ಸಂಪತ್ತನ್ನು ನಮಗೆ ಪ್ರಕಿಸಿಕೊಡುವನು ಎಂದರ್ಥವು.

ಸಂಸ್ಕೃತವ್ಯಾಕರಣಪ್ರಕ್ರಿಯಾ

ಕೃತ್ವಾ—ಕ್ತ್ವಾಶಬ್ದದ ಮೇಲೆ ತೃತೀಯಾವಿಭಕ್ತಿ ಬಂದಿದೆ. ಇಲ್ಲಿ ಸಮಾನಜ್ಞ ಇರುವುದರಿಂದ **ಆಜ್ಞೋನಾಸ್ತ್ರಿಯಾಂ** (ಪಾ ಸೂ ೭-೩-೧೭೦) ಎಂಬುದರಿಂದ ನಾ ಭಾಗವು ತೃತೀಯಾವಿಭಕ್ತಿಗೆ ಪ್ರಾಪ್ತವಾಗು ತ್ತದೆ ಆದರೆ ' ಜಸಾದಿಷು ಛಂದಸಿ ವಾ ವಚನಂ ' ಎಂಬ ವಾರ್ತಿಕದಿಂದ ಜಸಾದಿವಿಭಕ್ತಿಗಳಿಗೆ ಛಂದಸ್ಸಿನಲ್ಲಿ ಆದೇಶಗಳು ವಿಕಲ್ಪವಾಗಿ ಬರುತ್ತವೆ ಎಂಬುದರಿಂದ ಇಲ್ಲಿ ನಾಭಾವವಾಗಿಲ್ಲ ಅಥವಾ **ಷಷ್ಠೀಯುಕ್ತೇ ಛಂದಸಿ ವಾ** (ಪಾ ಸೂ. ೧-೪-೦) ಎಂಬ ಸೂತ್ರದಲ್ಲಿ ಯೋಗವಿಭಾಗವನ್ನು ಆಶ್ರಯಿಸಿ ವೈಕಲ್ಪಿಕವನ್ನು ಹೇಳ ಬೇಕು. ಯೋಗವಿಭಾಗವೆಂದರೆ ಒಂದು ಸೂತ್ರವನ್ನೇ ಪ್ರಕರಣಾನುಸಾರವಾಗಿ ಲಕ್ಷ್ಯಸಿದ್ಧಿಗೋಸ್ಕರ ತುಂಡು ಮಾಡಿಕೊಂಡು ಅರ್ಥಾಂತರವನ್ನು ಸ್ವೀಕರಿಸುವುದು. ಇಲ್ಲಿ **ಛಂದಸಿ ವಾ** ಎಂದು ವಿಭಾಗಮಾಡಿಕೊಂಡರೆ ಎಲ್ಲಾ ಕಾರ್ಯಗಳೂ ಛಂದಸ್ಸಿನಲ್ಲಿ ವಿಕಲ್ಪವಾಗಿ ಬರುತ್ತವೆ ಎಂದರ್ಥವಾಗುತ್ತದೆ. ಇದನ್ನೇ ಆಯಾಯ ಕಾರ್ಯವಿಧಿಸುವಲ್ಲಿ **ಬಹುಲಂ ಛಂದಸಿ** ಎಂಬ ಸೂತ್ರವನ್ನು ಆರಂಭಿಸಿ ವೈಕಲ್ಪಿಕವನ್ನು ಹೇಳುತ್ತಾರೆ. ಹೀಗೆ ಯೋಗವಿಭಾಗಮಾಡಿ ಕೊಂಡು ಅರ್ಥ ಹೇಳಿದರೆ ಆಗ ಅವೆಲ್ಲವೂ **ಈ** ಅರ್ಥದ ಸ್ಪಷ್ಟವಿವರಣೆಯಾಗುತ್ತವೆ. ಯೋಗವಿಭಾಗದಿಂದ ಬಂದರ್ಥ ವನ್ನು ಸ್ವೀಕರಿಸಿದಾಗ ಸಿ ಸಂಜ್ಞೆಯೂ ಛಂದಸ್ಸಿನಲ್ಲಿ ವಿಕಲ್ಪವಾಗಿ ಬರುವುದರಿಂದ ಇಲ್ಲಿ ನಾಭಾವ ಬರಲಿಲ್ಲವೆಂದು ಹೇಳಬಹುದು. ವಿಭಕ್ತಿಯೇ ಉಳಿದಿರುವಾಗ ಸುಪ್ ಸಂಧಿ ಬಂದಿದೆ.

ಆಯಸಂ—ದ್ವಿತೀಯೈಕವಚನ. **ತಸ್ಯವಿಕಾರಃ** (ಪಾ. ಸೂ. ೪-೩-೧೩೪) ಅವರ ವಿಕಾರ ಎಂಬರ್ಥದಲ್ಲಿ ಅಣ್ ಪ್ರತ್ಯಯವು ಷಷ್ಯ್ಯಂತದ ಮೇಲೆ ಬರುತ್ತದೆ ಎಂಬುದರಿಂದ ಇಲ್ಲಿ ಲೋಹವಿಕಾರವೆಂಬರ್ಥವಿರುವುದರಿಂದ ಅಯಸ್ ಎಂಬ ಶಬ್ದದ ಮೇಲೆ ಅಣ್ ಪ್ರತ್ಯಯ ಬಂದಿದೆ. ಪ್ರತ್ಯಯದಲ್ಲಿ ಣಕಾರವು ಇತ್ತಾಗುತ್ತದೆ. ಆದುದರಿಂದ **ತದ್ಧಿತೇಷ್ವಚಾಮಾದೇಃ** (ಪಾ. ಸೂ. ೭-೩-೧೧೭) ಸೂತ್ರದಿಂದ ಞಿತ್, ಣಿತ್, ಪ್ರತ್ಯಯವು ಪರವಲ್ಲಿರುವಾಗ ಅಂಗದ ಮೊದಲನೆಯ ಸ್ವರಕ್ಕೆ ವೃದ್ಧಿ ಬರುತ್ತದೆ ಎಂಬುದರಿಂದ ಇಲ್ಲಿ ಅಕಾರಕ್ಕೆ ವೃದ್ಧಿ ಬರುತ್ತದೆ. **ಆದ್ಯುದಾತ್ತಶ್ಚ** (ಪಾ. ಸೂ. ೩-೧-೩) ಎಂಬುದರಿಂದ ಪ್ರತ್ಯಯಸ್ವರವಿರುವಾಗ ಅಂತೋದಾತ್ತವಾಗುತ್ತದೆ. ಇದಕ್ಕೆ ಅರ್ಮ್ ವಿಭಕ್ತಿಯು ಪರದಲ್ಲಿರುವಾಗ **ಅಮ್ಪೂರ್ವಃ** (ಪಾ. ಸೂ. ೬-೧-೧೦೭) ಸೂತ್ರದಿಂದ ಪೂರ್ವರೂಪ ಬರುತ್ತದೆ. ವಿಭಕ್ತಿಯು ಅನುದಾತ್ತವಾದರೂ **ಅನುದಾತ್ತಸ್ಯ ಯತ್ಕೋದಾತ್ತಲೋಪಃ** (ಪಾ. ಸೂ. ೬-೧-೧೫೧) ಎಂಬುವರಿಂದ ಅನುದಾತ್ತಪರದಲ್ಲಿರುವಾಗ, ಉದಾತ್ತಕ್ಕೆ ಲೋಪಬಂದಾಗ, ಪರದ ಅನುದಾತ್ತಕ್ಕೆ ಉದಾತ್ತಸ್ವರವೇ ಬರುತ್ತದೆ ಎಂಬುದರಿಂದ ಇಲ್ಲಿ ಉದಾತ್ತವು ಬಂದಿದೆ.

ಅನುಸ್ವಧಮ್—ಸ್ವಧಾಯಾಂ ಅನುಸ್ವಧಂ. **ಅವ್ಯಯಂ ವಿಭಕ್ತಿಸಮೀಪ** (ಪಾ. ಸೂ. ೨-೧-೬) ಎಂಬ ಸೂತ್ರದಿಂದ ವಿಭಕ್ತ್ಯರ್ಥದಲ್ಲಿ ಅವ್ಯಯೀಭಾವಸಮಾಸ ಬಂದಿದೆ. **ಸಮಾಸಸ್ಯ** (ಪಾ. ಸೂ. ೬-೧-೨೨೩) ಸೂತ್ರದಿಂದ ಸಮಾಸಕ್ಕೆ ಅಂತೋದಾತ್ತ ಬರುತ್ತದೆ ಎಂಬುದರಿಂದ ಇಲ್ಲಿ ಅಂತೋದಾತ್ತವಾಗಿದೆ. ॥ ೪ ॥



ಸಂಹಿತಾಪಾಠಃ

ಆ ಪಪ್ರೌ ಪಾರ್ಥಿವಂ ರಜೋ ಬದ್ಬಧೇ ರೋಚನಾ ದಿವಿ।
ನ ತ್ವಾವಾಁ ಇಂದ್ರ ಕಶ್ಚನ ನ ಜಾತೋ ನ ಜನಿಷ್ಯತೇऽತಿ ವಿಶ್ವಂ
ವವಕ್ಷಿಥ ॥ ೫ ॥

ಪದಪಾಠಃ

ಆ । ಪಪ್ರೌ । ಪಾರ್ಥಿವಂ । ರಜಃ । ಬದ್ಬಧೇ । ರೋಚನಾ । ದಿವಿ ।
ನ । ತ್ವಾವಾನ್ । ಇಂದ್ರ । ಕಃ । ಚನ । ನ । ಜಾತಃ । ನ । ಜನಿಷ್ಯತೇ । ಅತಿ ।
ವಿಶ್ವಂ । ವವಕ್ಷಿಥ ॥ ೫ ॥

ಸಾಯಣಭಾಷ್ಯಂ

ಇಂದ್ರಃ ಸ್ವತೇಜಸಾ ಪಾರ್ಥಿವಂ ಪೃಥಿವ್ಯಾಃ ಸಂಬಂಧಿ ವೈಸ್ತುಜಾತಂ ರಜೋಽಂತರಿಕ್ಷಲೋಕಂ ಚಾ ಪಪ್ರೌ । ಆಪೂರಯತಿ । ತಥಾ ದಿವಿ ದ್ಯುಲೋಕೇ ರೋಚನಾ ರೋಚಮಾನಾನಿ ದೀಪ್ತಾನಿ ನಕ್ಷತ್ರಾಣಿ ಬದ್ಬಧೇ । ಬಬಂಧ । ಸ್ಥಾಪಿತವಾನ್ । ಅತೋ ಹೇ ಇಂದ್ರ ತ್ವಾವಾನ್ ತ್ವತ್ಸದೃಶಃ ಕಶ್ಚನ ನ ಜಾತೋ ನೋತ್ಪನ್ನೋಽಸ್ತಿ । ನ ಚ ಜನಿಷ್ಯತೇ । ಉತ್ಪತ್ಸ್ಯಮಾನೋಽಪಿ ನಾಸ್ತಿ । ತಾದೃಶಸ್ತ್ವಂ ವಿಶ್ವಂ ಸರ್ವಂ ರಕ್ಷಿತವ್ಯಂ ಜಗದತಿ ವವಕ್ಷಿಥ । ಅತಿಶಯೇನ ವೋಢುಮಿಚ್ಛಸಿ । ಸರ್ವಸ್ಯ ಜಗತೋ ನಿರ್ವಾಹಕೋ ಭವಸೀತ್ಯರ್ಥಃ ॥ ಪಪ್ರೌ । ಪ್ರಾ ಪೂರಣೇ । ಲಿಟ್ಯಾತ ಈ ಣಲಃ । । ಪಾ. ೭–೧–೩೪ । ಇತ್ಯಾಕಾರಾದೇಶಃ ಪಾರ್ಥಿವಂ । ಪೃಥಿವ್ಯಾ ಞಾಞೌ । ಪಾ. ೪–೧–೮೫–೨ । ಇತ್ಯಞ್ಪ್ರತ್ಯಯಃ । ಞಿತ್ವಾದಾದ್ಯುದಾತ್ತ ತ್ವಂ । ರಜಃ । ರಜಂತ್ಯಸ್ಮಿನ್ ಗಂಧರ್ವಾದಯ ಇತಿ ರಜೋಽಂತರಿಕ್ಷಂ । ರಂಜ ರಾಗೇ । ಅಸುನಿ ರಜಕರ-ಜನರಜಃಸೂಪಸಂಖ್ಯಾನಂ । ಕಾ. ೬–೪–೨೪–೪ । ಇತಿ ನಲೋಪಃ । ಬದ್ಬಧೇ । ಬಧ ಬಂಧನೇ । ಲಿಟಿ ವ್ಯತ್ಯಯೇನ ಹಲಾದಿಶೇಷಾಭಾವಃ । ಏಕಹಲ್ಮಧ್ಯಗತತ್ವಾಭಾವಾದೇತ್ವಾಭ್ಯಾಸಲೋಪಾವಪಿ ನ ಸ್ತಃ । ಪಾದಾದಿತ್ವಾನ್ನಿಘಾತಾಭಾವಃ । ತ್ವಾವಾನ್ । ವತುಪ್ಪ್ರಕರಣೇ ಯುಷ್ಮದಸ್ಮದ್ಭ್ಯಾಂ ಛಂದಸಿ ಸಾದೃಶ್ಯ ಉಪಸಂಖ್ಯಾನಮಿತಿ ವತುಪ್ । ಆ ಸರ್ವನಾಮ್ನ ಇತ್ಯಾತ್ವಂ । ವವಕ್ಷಿಥ । ವಹ ಪ್ರಾಪಣೇ । ಅಸ್ಮಾದಿಚ್ಛಾ । ಸನಿ ಸನ್ಯತ ಇತೀತ್ವಸ್ಯ ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತ ಇತ್ಯಭಾವಃ । ಸನಂತಾಲ್ಲಿಟ್ಯಮಂತ್ರ ಇತಿ ನಿಷೇಧಾದಾಮ್ಪ್ರತ್ಯಯೋಭಾವಃ ॥ ೫ ॥

॥ ಪ್ರತಿಪದಾರ್ಥ ॥

ಪಾರ್ಥಿವಂ—(ಎಲೈ ಇಂದ್ರನೇ) ಪೃಥ್ವೀ ಲೋಕವನ್ನೂ । **ರಜಃ**—ಅಂತರಿಕ್ಷ ಲೋಕವನ್ನೂ ಸಹ । **ಆ ಪಪ್ರೌ**—(ನಿನ್ನ ಪ್ರಭಾವದಿಂದ) ತುಂಬಿದ್ದೀಯೆ । **ದಿವಿ**—ದ್ಯು ಲೋಕದಲ್ಲಿ । **ರೋಚನಾ**—ಪ್ರಕಾಶಿಸುವ ನಕ್ಷತ್ರಗಳನ್ನು । **ಬದ್ಬಧೇ**—ಭದ್ರವಾಗಿ ನೆಲೆಗೊಳಿಸಿದ್ದೀಯೆ । **ಇಂದ್ರ**—ಎಲೈ ಇಂದ್ರನೇ । **ತ್ವಾವಾನ್**—ನಿನಗೆ ಸದೃಶನಾಗಿ । **ಕಶ್ಚನ**—ಯಾವನೂ ಕೂಡ । **ನ ಜಾತಃ**—ಹುಟ್ಟಿಲ್ಲ । **ನ ಚ ಜನಿಷ್ಯತೇ**—ಹುಟ್ಟುವವನೂ ಇಲ್ಲ. । (ಅಂತಪ ನೀನು) **ವಿಶ್ವಂ**—ಸಕಲ ಜಗತ್ತನ್ನೂ । **ಅತಿ ವವಕ್ಷಿಥ**—ಅತಿಶಯವಾಗಿ ಎತ್ತಿಹಿಡಿಯಲು ಇಚ್ಛಿಸುತ್ತೀಯೆ.

ಭಾವಾರ್ಥ

ಎಲೈ ಇಂದ್ರನೇ, ನೀನು ನಿನ್ನ ಮಹಿಮೆಯಿಂದ ಪೃಥ್ವ್ಯಂತರಿಕ್ಷಲೋಕಗಳನ್ನೆಲ್ಲಾ ತುಂಬಿದ್ದೀಯೆ. ದ್ಯುಲೋಕದಲ್ಲಿ ಪ್ರಕಾಶಿಸುವ ನಕ್ಷತ್ರಗಳನ್ನು ಭದ್ರವಾಗಿ ನೆಲೆಗೊಳಿಸಿದ್ದೀಯೆ. ಎಲೈ ಇಂದ್ರನೇ, ನಿನಗೆ ಸದೃಶನಾವನು ಹಿಂದೆಯೂ ಹುಟ್ಟಿಲ್ಲ, ಮುಂದೆಯೂ ಹುಟ್ಟುವುದಿಲ್ಲ. ಅಂತಪ ಮಹಾನುಭಾವನಾದ ನೀನು ಸಕಲ ಜಗತ್ತನ್ನೂ ಅತಿ ಸುರಕ್ಷಿತವಾಗಿ ಎತ್ತಿ ಹಿಡಿಯಲಿಚ್ಛಿಸುತ್ತೀಯೆ.

English Translation

Indra has filled the Surface of the earth and the firmament with his glory; he has established the constellations in the sky; O Indra, no one like

you (having such powers as you have) has ever been born or nor will be bor
You have sustained the entire Universe.

ವಿಶೇಷವಿಷಯಗಳು

ಪಾರ್ಥಿವಂ—**ಪೃಥಿವ್ಯಾಃಸಂಬಂಧಿ** । ಭೂಮಿಯಲ್ಲಿರುವ ಸಮಸ್ತ ವಸ್ತುಗಳನ್ನು

ರಜಃ—ಅಂತರಿಕ್ಷಲೋಕವು ಎಂದರೆ ಅಂತರಿಕ್ಷದಲ್ಲಿರುವ ವಸ್ತುಸಮೂಹವು.

ತ್ವಾವಾನ್—ನಿನ್ನ ಸಮಾನನಾರಾವನು, ನಿನ್ನಂತಿರುವವನು.

ವ್ಯಾಕರಣಪ್ರಕ್ರಿಯಾ

ಪಸ್ಪ್ರಾ—ಪ್ರಾ ಪೂರಣೇ ಧಾತು. ಜಹ್ಯಾದಿ, ಪರಸ್ಮೈಪದಿ, ಲಿಟ್ ಪ್ರಥಮಪುರುಷೈಕವಚನ ಲಿಟ್ ನಲ್ಲಿರುವಾಗ ಧಾತುವಿಗೆ ದ್ವಿತ್ವಬರುತ್ತದೆ. ಪ್ರಾ ಪ್ರಾ ಎಂದಿರುವಾಗ **ಹಲಾದಿಃ ಶೇಷಃ** (ಪಾ. ಸೂ. ೭-೪-೬೦ ಸೂತ್ರದಿಂದ ಪೂರ್ವಖಂಡದಲ್ಲಿ ಪಾಮಾತ್ರ ಉಳಿಯುತ್ತದೆ. **ಹ್ರಸ್ವಃ** (ಪಾ. ಸೂ ೭-೪-೫೯) ಎಂಬುದರಿಂದ ಅಭ್ಯಾಸಕ್ಕೆ ಹ್ರಸ್ವಬರುತ್ತದೆ. ಲಿಟ್ಟಿನ ಪ್ರಥಮಪುರುಷೈಕ ವಚನವಾದ ತಿಪ್ಪಿಗೆ **ಪರಸ್ಮೈಪದಾನಾಂ ಣಲ್** (ಪಾ ಸೂ ೩-೪-೮೨) ಎಂಬುದರಿಂದ ಣಲ್ ಎಂಬ ಆದೇಶ ಬರುತ್ತದೆ. **ಅತ ಔಣಲಃ** (ಪಾ. ಸೂ. ೭-೧-೩೪) ಆಕಾರಾಂತವಾದ ಧಾತುವಿನ ಪರದಲ್ಲಿರುವ ಣಲ್ಲಿನಿಗೆ ಔಕಾರಾದೇಶ ಬರುತ್ತದೆ ಇಲ್ಲಿ ಪ್ರಾ ಎಂಬ ಆಕಾರಾಂತವಾದುದರಿಂದ ಪರದಲ್ಲಿರುವ ಣಲ್ಲಿನಿಗೆ ಔಕಾರವಾದೇಶ ಪಸ್ಪ್ರಾ+ಔ ಎಂದಾಗುತ್ತದೆ. ವೃದ್ಧಿರೇಚಿ ಎಂಬುದರಿಂದ ವೃದ್ಧಿಯು ಬಂದು ರೂಪಸಿದ್ಧಿಯಾಗಿದೆ.

ಪಾರ್ಥಿವಂ—**ದಿತ್ಯದಿತ್ಯಾದಿತ್ಯಪತ್ಯುತ್ತರಪದಾಣ್ಣ್ಯಃ** (ಪಾ. ಸೂ. ೪-೧-೮೫) ಎಂಬ ಸೂತ್ರವಿಷಯ **ಪೃಥಿವ್ಯಾ ಇಾಞಾ** (ವಾರ್ತಿಕ ೩೫೫೪) ಎಂಬ ವಾರ್ತಿಕವು ಆರಬ್ಧವಾಗಿದೆ. ತಸ್ಯ ಇದಂ (ಅದರಸಂಬ ಎಂಬರ್ಥದಲ್ಲಿ ಇಲ್ಲಿ ಪೃಥಿವೀಶಬ್ದದ ಮೇಲೆ ಅಞ್ ಪ್ರತ್ಯಯ ಬಂದಿದೆ. ಞಾತ್ತಾದುದರಿಂದ ಪ್ರಕೃತಿಯ ಆದ್ಯಚ ಇಕಾರಕ್ಕೆ ವೃದ್ಧಿಬರುತ್ತದೆ. **ಉರಣ್ರಪರಃ** (ಪಾ. ಸೂ. ೧-೧-೫೧) ಎಂಬುದರಿಂದ ಇಕಾರವಾದೇಶಕ್ಕೆ ವೃದ್ಧಿ ಆಕಾರವು ರ ಪರವಾಗಿ ಬರುತ್ತದೆ. **ಯಸ್ಯೇತಿ ಚ** (ಪಾ ಸೂ ೬-೪-೧೪೮) ಎಂಬುದರಿಂದ ತದ್ಧಿತಪ್ರ ಪರದಲ್ಲಿರುವುದರಿಂದ ಪೃಥಿವೀ ಶಬ್ದದಲ್ಲಿರುವ ಈಕಾರವು ಲೋಪವಾಗುತ್ತದೆ. **ಞ್ನಿತ್ಯಾದಿರ್ನಿತ್ಯಂ** (ಪಾ. ೬-೧-೧೯೭) ಞಾಂತವಾದರೂ ನಿತ್ಯಾಂತವಾದರೂ ಆದ್ಯುದಾತ್ತವಾಗುತ್ತದೆ. ಎಂಬುದರಿಂದ ಇಲ್ಲಿ ಪಾರ್ಥಿವಃ ಞಾಂತವಾದುದರಿಂದ ಆದ್ಯುದಾತ್ತವಾಗಿದೆ

ರಜಃ—ರಜಂತಿ ಅಸ್ಮಿನ್ ಗಂಧರ್ವಾದಯಃ ಇತಿ ರಜಃ ಅಂತರಿಕ್ಷಂ. ರಜಸ್ಸೆಂದರೆ ಇಲ್ಲಿ ಆಕಾಶವೆಂ ಗಂಧರ್ವಾದಿದೇವತಗಳು ಇಲ್ಲಿ ವಿಹರಿಸುತ್ತಾರೆ. ದೇವತೆಗಳ ಸಂಚಾರಮಾರ್ಗವೇ ಆಕಾಶವಾಗಿದೆ. ರಂಜ ಧಾತು. ಅಧಿಕರಣಾರ್ಥದಲ್ಲಿ ಅಸುನ್ ಪ್ರತ್ಯಯ ಬಂದಿದೆ. ರಂಜ್+ಅಸುನ್ ಎಂದಿರುವಾಗ **ರಜಕೇರಜಃ ಸ್ನೂಪಸಂಖ್ಯಾನಮ್** (ಕಾ. ೬-೪-೨೪೪) ಎಂಬುದರಿಂದ ಧಾತುವಿನ ನಕಾರಕ್ಕೆ ಲೋಪಬರುತ್ತದೆ. ಅ ಪ್ರತ್ಯಯನಲ್ಲಿ ಅಸ್ ಉಳಿಯುತ್ತದೆ. ಪ್ರತ್ಯಯ ಸೇರಿಸಿದಾಗ ಸಕಾರಾಂತ ಶಬ್ದವಾಗುತ್ತದೆ.

ಬದ್ಬಧೆ—ಬಧ ಬಂಧನೆ, ಧಾತು, ಭ್ವಾದಿ, ಲಿಟ್ ಆತ್ಮನೇಪದ ಪ್ರಥಮಪುರುಷೈಕವಚನ. ಲಿಟ್ ಪರದಲ್ಲಿರು ವಾಗ ಧಾತುವಿಗೆ ದ್ವಿತ್ವ ಬರುತ್ತದೆ. **ಬಧ್+ಬಧ್+ಎ** ಎಂದಿರುವಾಗ **ಹಲಾದಿಃ ಶೇಷಃ** (ಪಾ. ಸೂ. ೭-೪-೬೦) ಎಂಬುದರಿಂದ ಅಭ್ಯಾಸಸಂಜ್ಞೆಯುಳ್ಳ ಪೂರ್ವಖಂಡದಲ್ಲಿ ಆದಿವ್ಯಂಜನ ಮಾತ್ರ ಉಳಿಯಬೇಕಾಗಿತ್ತು. **ವ್ಯತ್ಯಯೋ ಬಹುಲಂ** (ಪಾ. ಸೂ. ೩-೧-೮೫) ಎಂಬುದರಿಂದ ಛಂದಸ್ಸಿನಲ್ಲಿ ವ್ಯತ್ಯಾಸವನ್ನು ಸ್ವೀಕರಿಸಿರುವುದರಿಂದ ಹಿಂದೆ ಹೇಳಿದಂತೆ ಯೋಗವಿಭಾಗದಿಂದ ಎಲ್ಲಾ ಕಾರ್ಯಗಳೂ ವಿಕಲ್ಪವಾಗುತ್ತವೆ ಎಂದು ಸ್ವೀಕರಿಸಿರುವುದರಿಂದಲೂ, ಇಲ್ಲಿ ಆದಿಶೇಷವು ಬಂದಿಲ್ಲ. ಅಭ್ಯಾಸದ ಧಕಾರಕ್ಕೆ **ಝಲಾಂ ಜಶ್ ಝಶಿ** (ಪಾ. ಸೂ ೮-೪-೫೩) ಎಂಬುದರಿಂದ ದಕಾರಾದೇಶ ಬಂದಿದೆ. **ಅತಏಕಹಲ್ಮಧ್ಯೇಽನಾದೇಶಾದೇರ್ಲಿಟಿ** (ಪಾ. ಸೂ. ೬-೪-೧೨೦) ಲಿಟಿನ್ನು ನಿಮಿತ್ತೀಕರಿಸಿ ಯಾವ ಆದೇಶವೂ ಆದಿಯಲ್ಲಿ ಬಾರದೆ ಇರುವ ಅಂಗಗ ಅವಯವವಾದ ಸಂಯುಕ್ತವಿಲ್ಲಧ್ಯದಲ್ಲಿರುವ ಅಕಾರಕ್ಕೆ ವೃದ್ಧಿಯೂ ಅಭ್ಯಾಸಲೋಪವೂ ಬರುತ್ತದೆ ಎಂಬುದರಿಂದ ಇಲ್ಲಿ ವೃತ್ಯಾಭ್ಯಾಸಲೋಪಗಳು ಪ್ರಾಪ್ತವಾಗುತ್ತವೆ. ಆದರೆ ವ್ಯತ್ಯಯದಿಂದ ಅಭ್ಯಾಸದಲ್ಲಿ ಹಲಾದಿಶೇಷವನ್ನು ಮಾಡದಿರುವುದರಿಂದ ಅಂಗದ ಅಕಾರವು ಸಂಯುಕ್ತವಿಲ್ಲಧ್ಯವಾದುದರಿಂದ ವೃತ್ಯಾಭ್ಯಾಸಲೋಪಗಳು ಬರುವುದಿಲ್ಲ. **ಅನುದಾತ್ತೆಂ ಸರ್ವಮಪಾದಾದೌ** (ಪಾ. ಸೂ. (ವಾ. ಸೂ. ೮-೧-೧೮) ಸೂತ್ರದಿಂದ ಪಾದದ ಆದಿಯಲ್ಲಿರುವುದರಿಂದ ಇಲ್ಲಿ ನಿಘಾತಪ್ರತಿಷೇಧ ಬಂದಿದೆ.

ತ್ವಾವಾನ್—ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್ (ಪಾ. ಸೂ. ೫-೧-೯೪) ಸೂತ್ರದಿಂದ ಅದು ಇವನಿಗೆ ಅಥವಾ ಇವನಲ್ಲಿ ಇದೆ ಎಂಬರ್ಥದಲ್ಲಿ ಮತುಪ್ ಪ್ರತ್ಯಯವು ವಿಹಿತವಾಗಿದೆ. ಆದರೆ 'ಮತುಪ್ ಪ್ರಕರಣೆ ಯುಷ್ಮದ ಸ್ಮದ್ಭ್ಯಾಂ ಛಂದಸಿ ಸಾವೃಶ್ಯೆ ಉಪಸಂಖ್ಯಾನಂ (ವಾರ್ತಿಕಂ) ಎಂಬುದರಿಂದ ಛಂಗಸ್ಸಿನಲ್ಲಿ ಯುಷ್ಮದಸ್ಮದ್ ಶಬ್ದಗಳ ಮೇಲೆ ಸಾದೃಶ್ಯಾರ್ಥದಲ್ಲಿಯೂ ಮತುಪ್ ಪ್ರತ್ಯಯ ಬರುತ್ತದೆ. ಇಲ್ಲಿ ಯುಷ್ಮದ್ ಶಬ್ದದ ಮೇಲೆ ಸಾದೃಶ್ಯಾರ್ಥದಲ್ಲಿ ಮತುಪ್ ಪ್ರತ್ಯಯ ಬಂದಾಗ ಆ ಪ್ರತ್ಯಯಪರನಲ್ಲಿರುವಾಗ **ಪ್ರತ್ಯಯೋತ್ತರಪದಯೋಶ್ಚ** (ಪಾ. ಸೂ. ೮-೩-೯೪) ಸೂತ್ರದಿಂದ ಏಕತ್ವಸಂಖ್ಯಾವಿಶಿಷ್ಟಾರ್ಥವನ್ನು ಹೇಳುವ ಯುಷ್ಮದ್ ಶಬ್ದದ ಮಪರ್ಯಂತ ದವರೆಗೆ ತ್ವ ಎಂಬ ಆದೇಶ ಬರುತ್ತದೆ. **ತ್ವ+ಅದ್+ಮತ್** ಎಂದಿರುವಾಗ **ಶೇಷೇಲೋಪಃ** (ಪಾ. ಸೂ. ೬-೩-೯೦) ಎಂಬ ಸೂತ್ರದಿಂದ ಮಪರ್ಯಂತ ಮೇಲಿರುವ ಪ್ರಕೃತಿಭಾಗಕ್ಕೆ ಲೋಪಬರುತ್ತದೆ. **ಮಾದುಪಧಾಯಾಶ್ಚ ಮತೋರ್ವೋ೪ಯವಾದಿಭ್ಯಃ** (ಪಾ. ಸೂ. ೮-೨-೯) ಮಕಾರ, ಅಕಾರ ಕೊನೆಯಲ್ಲಿರುವ ಅಥವಾ ಮಕಾರ, ಅಕಾರ ಉಪಧೆಯಾಗಿರುವ ಯವಾದಿಭಿನ್ನವಾದ ಶಬ್ದಗಳಿಗೆ ಪರವಲ್ಲಿರುವ ಮತುಪಿನ ಮಕಾರಕ್ಕೆ ವಕಾರ ಬರುತ್ತದೆ ಉಪಧೆಯೆಂದರೆ ಅಂತ್ಯವರ್ಣದ ಪೂರ್ವವರ್ಣ. ಇಲ್ಲಿ ಅಕಾರಾಂತದ ಪರವಲ್ಲಿ ಇರುವುದರಿಂದ ಮತುಪಿನ ಮಕಾರಕ್ಕೆ ವಕಾರ ಬಂದಿದೆ. **ಅಸರ್ವನಾಮ್ನಃ** (ಪಾ. ಸೂ. ೬-೩-೯೧) ವೃಕ್, ವೃಜ್, ಮತುಪ್ ಇವುಗಳು ಪರವಲ್ಲಿರುವಾಗ ಸರ್ವನಾಮ ಶಬ್ದಗಳಿಗೆ ಅಕಾರವು ಅಂತಾದೇಶವಾಗಿ ಬರುತ್ತದೆ ಎಂಬುದರಿಂದ ಇಲ್ಲಿ ಮತು ಪರವಲ್ಲಿರುವುದರಿಂದ ತ್ವ ಎಂಬುದಕ್ಕೆ ದೀರ್ಘ ಬಂದಿದೆ. ಮತುಪಿನಲ್ಲಿ ಉಕಾರ ಇತ್ತಾಗುವುದರಿಂದ ಸರ್ವನಾಮಸ್ಥಾನ ಸಂಜ್ಞೆಯುಳ್ಳ ವಿಭಕ್ತಿ ಪರವಲ್ಲಿರುವುದರಿಂದ ನುಮಾಗಮ ಬರುತ್ತದೆ. **ಆತ್ವಸಂತಸ್ಯ ಚಾಧಾತೋಃ** (ಪಾ. ಸೂ ೬-೪-೧೪) ಸೂತ್ರದಿಂದ ಉಸಧೆಗೆ ದೀರ್ಘ ಬರುತ್ತದೆ. ತ್ವಾವಾನ್+ತ್+ಸ್ ಎಂದಿರುವಾಗ ಸುವಿಭಕ್ತಿಗೆ **ಹಲ್ಙ್ಯಾಭ್ಯೋ** (ಪಾ ಸೂ ೬-೧-೬೮) ಸೂತ್ರದಿಂದ ಲೋಪಬಂದರೆ ಕೊನೆಯ ತಕಾರಕ್ಕೆ ಸಂಯೋಗಾಂತಲಕ್ಷಣ ಲೋಪಬರುತ್ತದೆ. ಸಂಯೋಗಾಂತಲೋಪವು ಅಸಿದ್ಧಕಾಂಡದಲ್ಲಿ ಪರಿತವಾದುದರಿಂದ **ನಲೋಪಃ ಪ್ರಾತಿಪದಿಕಾಂತಸ್ಯ** (ಪಾ ಸೂ ೮-೨-೭) ಎಂಬುದರಿಂದ ನಲೋಪ ಬರುವುದಿಲ್ಲ

ವವಕ್ಷಿಥ—ವಹ ಪ್ರಾಪಣೇ ಧಾತು, ಭ್ವಾದಿ. ಇದಕ್ಕೆ ಇಚ್ಛಾರ್ಥದಲ್ಲಿ ಸನ್ ಬಂದಿದೆ. ಸನ್ ಪರದಲ್ಲಿರುವಾಗ **ಸನ್ಯಙೋಃ** (ಪಾ. ಸೂ. ೬-೧-೯) ಸೂತ್ರದಿಂದ ಧಾತುವಿಗೆ ದ್ವಿತ್ವ ಬರುತ್ತದೆ. ಅಭ್ಯಾಸದ ಆದಿಹಲಗೆ ಶೇಷ ಬರುತ್ತದೆ. **ಸನ್ಯತಃ** (ಪಾ. ಸೂ. ೭-೪-೭೯) ಸನ್ ಪರದಲ್ಲಿರುವಾಗ ಅಭ್ಯಾಸದ ಅಕಾರಕ್ಕೆ ಇಕಾರ ಬರುತ್ತದೆ. ಇಲ್ಲಿಯೂ ಪ್ರಾಪ್ತವಾದರೆ ನಾ ಛಂದಸಿ ಎಂದು ಯೋಗವಿಭಾಗದಿಂದ ಸಿದ್ಧವಾದ ' ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತೆ ' ಎಂಬ ವಾಕ್ಯವನ್ನನುಸರಿಸಿ ಇಲ್ಲಿ ಇತ್ವವನ್ನು ಮಾಡಲಿಲ್ಲ. ವವಹ್+ಸ ಎಂದಿರುವಾಗ **ಹೋಢಃ** (ಪಾ ಸೂ. ೮-೩-೩೧) ಸೂತ್ರದಿಂದ ಹಕಾರಕ್ಕೆ ಢಕಾರಾದೇಶ ಬರುತ್ತದೆ. **ಷಢೋಃ ಕಃ ಸಿ** (ಪಾ. ಸೂ. ೮-೩-೪೧) ಎಂಬುದರಿಂದ ಢಕಾರಕ್ಕೆ ಸಕಾರ ಪರದಲ್ಲಿರುವಾಗ ಕಕಾರ ಬರುತ್ತದೆ. ಸನ್ ಪ್ರತ್ಯಯವಾಮದರಿಂದ ಕಕಾರದ ಪರದಲ್ಲಿರುವುದರಿಂದ ಷತ್ವ ಬರುತ್ತದೆ. ಕಕಾರ ಷಕಾರಗಳಿಗೆ ಸಂಬಂಧ ಬಂದರೆ ಕ್ಷಕಾರವಾಗುತ್ತದೆ. ವವಕ್ಷ ಎಂಬುದು ಸನ್ನಂತವಾದುದರಿಂದ **ಸನಾದ್ಯಂತಾ ಧಾತವಃ** (ಪಾ. ಸೂ. ೩-೧-೩೨) ಎಂಬುದರಿಂದ ಧಾತು ಸಂಜ್ಞೆ ಬರುತ್ತದೆ. ಲಿಟ್ ಮಧ್ಯಮಪುರುಷೈಕವಚನ ವಿವಕ್ಷಮಾಡಿದಾಗ ಧಾತುವು ಅನೇಕಾಚ್ಹಾದುದರಿಂದ **ಕಾಸ್ಪ್ರತ್ಯಯಾದಾಮಮಂತ್ರೇ ಲಿಟಿ** (ಪಾ. ಸೂ. ೩-೧-೩೫) ಸೂತ್ರದಿಂದ ಆಮ್ ಪ್ರಾಪ್ತವಾದರೆ ಸೂತ್ರದಲ್ಲಿ ಅಮಂತ್ರೇ ಎಂದು ನಿಷೇಧಮಾಡಿದುದರಿಂದ ಛಂದಸ್ಸಿನಲ್ಲಿ ಆಮ್ ಬರುವುದಿಲ್ಲ. ಲಿಟ್ ಪ್ರತ್ಯಯ ಪರದಲ್ಲಿರುವಾಗ ದ್ವಿತ್ವವು ಪ್ರಾಪ್ತವಾದರೂ ಅನಭ್ಯಾಸಸ್ಯ ಎಂದು ನಿಷೇಧಮಾಡಿದುದರಿಂದ ಪುನಃ ದ್ವಿತ್ವ ಬರುವುದಿಲ್ಲ. ಸಿಪ್ಪಿಗೆ ಥಲ್ ಎಂಬ ಆದೇಶವು ಬರುತ್ತದೆ. ವಲಾದಿಯಾದ ಆರ್ಧಧಾತುಕವಾದುದರಿಂದ ಥ ಎಂಬುದಕ್ಕೆ ಇಡಾಗಮ ಬಂದರೆ ಸಸಿನ ಅಕಾರಕ್ಕೆ **ಅತೋಲೋಪಃ** (ಪಾ ಸೂ. ೬-೪-೪೮) ಎಂಬುದರಿಂದ ಲೋಪ ಬರುತ್ತದೆ. ॥ ೫ ॥

॥ ಸಂಹಿತಾಪಾಠಃ ॥

ಯೋ ಅರ್ಯೋ ಮರ್ತಭೋಜನಂ ಪರಾದದಾತಿ ದಾಶುಷೇ ।
ಇಂದ್ರೋ ಅಸ್ಮಭ್ಯಂ ಶಿಕ್ಷತು ವಿ ಭಜಾ ಭೂರಿ ತೇ ವಸು ಭ-
ಕ್ಷೀಯ ತವ ರಾಧಸಃ ॥ ೬ ॥

॥ ಪದಪಾಠಃ ॥

ಯಃ । ಅರ್ಯಃ । ಮರ್ತ ೫ ಭೋಜನಂ । ಪರಾ ೫ ದದಾತಿ । ದಾಶುಷೇ ।
ಇಂದ್ರಃ । ಅಸ್ಮಭ್ಯಂ । ಶಿಕ್ಷತು । ವಿ । ಭಜ । ಭೂರಿ । ತೇ । ವಸು । ಭಕ್ಷೀಯ ।
ತವ । ರಾಧಸಃ ॥ ೬ ॥

ಸಾಯಣಭಾಷ್ಯಂ

ಆರ್ಯಃ ಸ್ವಾಮೀ ಪಾಲಯಿತಾ ಯ ಇಂದ್ರೋ ಮರ್ತಭೋಜನಂ ಸರ್ವೈರ್ಮನುಷ್ಯೈರುಪ-ಭೋಜ್ಯಮನ್ನಂ ದಾಶುಷೇ ಚರುಪುರೋಡಾಶಾದೀನಿ ದತ್ತವತೇ ಯಜಮಾನಾಯ ಪರಾದದಾತಿ ಪ್ರಯಚ್ಛತಿ ಸ ಇಂದ್ರೋ ೫ಸ್ಮಭ್ಯಂ ಶಿಕ್ಷತು । ತಾದೃಶಮನ್ನಂ ದದಾತು । ಅವಶಿಷ್ಟಪಾದದ್ವಯಂ ಪ್ರತ್ಯಕ್ಷಕೃತಂ । ಹೇ ಇಂದ್ರ ಅಸ್ಮಭ್ಯಂ ದಾತುಂ ಧನಂ ವಿ ಭಜ । ವಿಭಕ್ತಂ ಕುರು । ಯತಸ್ತೇ ತವ ವಸು ಧನಂ ಭೂರಿ ಬಹುಲ-ಮಸಂಖ್ಯಾತಂ ಅತಸ್ತವ ರಾಧಸೋ ಧನಸ್ಯೈಕದೇಶಂ ಭಕ್ಷೀಯ । ಭಜೀಯ । ಪ್ರಾಪ್ನುಯಾಂ ॥ ಪರಾದದಾತಿ । ಅಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ । ತಿಙಾ ಚೋದಾತ್ತವತೀತಿ ಗತೇರನುದಾತ್ತತ್ವಂ । ದಾಶುಷೇ । ದಾಶೃ ದಾನೇ । ದಾಶ್ವಾನ್ ಸಾಹ್ವಾನಿತಿ ಕ್ವಸುಪ್ರತ್ಯಯಾಂತೋ ನಿಪಾತ್ಯತೇ । ಚತುರ್ಥ್ಯೇಕ-ವಚನೇ ವಸೋಃ ಸಂಪ್ರಸಾರಣಮಿತಿ ಸಂಪ್ರಸಾರಣಂ । ಶಾಸಿವಸಿಘಸೀನಾಂ ಚೇತಿ ಷತ್ವಂ । ಭಕ್ಷೀಯ । ಭಜ ಸೇವಾಯಾಂ । ಪ್ರಾರ್ಥನಾಯಾಂ ಲಿಙ್ ತಸ್ಯ ಚ್ಛಂದಸ್ಯುಭಯಥೇತ್ಯಾರ್ಧಧಾತುಕತ್ವಾಚ್ಛಬಭಾವಃ ಸಲೋಪಾಭಾವಶ್ಚ । ಏಕಾಚ ಇತೀಟ್ಪ್ರತಿಷೇಧಃ । ಆಗಮಾನುದಾತ್ತತ್ವೇ ಪ್ರತ್ಯಯಸ್ವರ ಏವ ಶಿಷ್ಯತೇ । ಪೂರ್ವಪದಸ್ಯಾಸಮಾನವಾಕ್ಯಗತತ್ವಾನ್ನಿಘಾತಾಭಾವಃ । ಸಮಾನವಾಕ್ಯೇ ನಿಘಾತಯುಷ್ಮದಸ್ಮದಾದೇಶಾ ವಕ್ತವ್ಯಾ ಇತಿ ವಚನಾತ್ ॥ ೬ ॥

ಪ್ರತಿಪದಾರ್ಥ

ಆರ್ಯಃ— ಪಾಲಕನಾದ । **ಯಃ**— ಯಾವ ಇಂದ್ರನು । **ಮರ್ತಭೋಜನಂ**— ಸಾಮಾನ್ಯರು ಭೋಗಿಸತಕ್ಕ ಅನ್ನವನ್ನು । **ದಾಶುಷೇ**— ಹವಿಸ್ಸನ್ನು ಅರ್ಪಿಸತಕ್ಕ ಯಜಮಾನನಿಗೆ । **ಪರಾದದಾತಿ**— ಕೊಡುತ್ತಾನೆಯೋ । **ಇಂದ್ರಃ**—ಆ ಇಂದ್ರನು । **ಅಸ್ಮಭ್ಯಂ**—ನಮಗೆ । **ಶಿಕ್ಷತು**—(ಅದೇ ಅನ್ನವನ್ನು)ಕೊಡಲಿ । (ಎಲೈ ಇಂದ್ರನೇ) **ವಿಭಜ** - (ನಿನ್ನ ಧನವನ್ನು) ಹಂಚಿ ಭಾಗಮಾಡು । **ತೇ**— ನಿನ್ನ । **ವಸು**— ಧನವು । **ಭೂರಿ**—ಅಧಿಕವಾಮದು (ಆದ್ದರಿಂದ) । **ತವ**—ನಿನ್ನ । **ರಾಧಸಃ**—ಧನದ ಒಂಮ ಭಾಗವನ್ನು । **ಭಕ್ಷೀಯ**-ನಾನೂ ಹೊಂದುವೆನು. ।

ಭಾವಾರ್ಥ

ಪಾಲಕನಾದ ಇಂದ್ರನು ಮಾನವರ ಉಪಭೋಗಕ್ಕೆ ಯೋಗ್ಯವಾದ ಅನ್ನವನ್ನು ಹವಿಸ್ಸನ್ನು ಅರ್ಪಿಸತಕ್ಕ ಯಜಮಾನನಿಗೆ ಕೊಡುವಂತೆಯೇ ನಮಗೂ ಕೊಡಲಿ ಎಲೈ ಇಂದ್ರನೇ ನಿನ್ನ ಧನವು ಅತ್ಯಧಿಕವಾದುದು. ಅದನ್ನು ಪಂಚಿ ವಿಭಾಗಮಾಡು. ಅದರ ಒಂದು ಭಾಗವನ್ನು ನನಗೂ ಸಿಕ್ಕುವಂತೆ ಮಾಡು.

English Translation

Indra, the protector, gives the food that is fit for mortals, to the giver of oblations ; let that Indra bestow food on us ; O Indra, distribute your wealth which is abundant so that I may obtain a portion of your vast riches.

ವಿಶೇಷವಿಷಯಗಳು

ಮರ್ತಭೋಜನಂ— ಸರ್ವೇಮರ್ತನುಷ್ಯೈರುಪಭೋಜ್ಯಮನ್ನಂ । ಮನುಷ್ಯರು ಸೇವಿಸುವುದಕ್ಕೆ ಯೋಗ್ಯವಾದ ಅನ್ನವನ್ನು , ಪ್ರಪಂಚದಲ್ಲಿರುವ ಪ್ರಾಣಿಕೋಟಿಗಳಲ್ಲಿ ಒಂದೊಂದು ಜಾತಿಯ ಪ್ರಾಣಿಗಳ ಆಹಾರವು ಒಂದೊಂದು ವಿಧವಾಗಿರುವುದು. ಗೋಮಹಿಷ್ಯಾದಿಗಳಿಗೆ ತೃಣ (ಹುಲ್ಲು)ನೇ ಮುಖ್ಯವಾದ ಆಹಾರವು. ವ್ಯಾಘ್ರಾದಿಗಳಿಗೆ ಮಾಂಸವು ಆಹಾರವು. ಅದರಂತೆ ಮನುಷ್ಯರಿಗೆ ಯೋಗ್ಯವಾದ ಎಂದರೆ ಸ್ವಾಭಾವಿಕವಾದ ಧಾನ್ಯಾದಿ ಆಹಾರಗಳನ್ನು ಎಂಬಭಿಪ್ರಾಯವು. ಈ ಶಬ್ದಪ್ರಯೋಗವಿರುವ ಕೆಲವು ಉದಾಹರಣೆಗಳನ್ನು ಕೊಡುವೆವು.

ರಾಸ್ವಾ ಚಸೋ ಅಮೃತ ಮರ್ತಭೋಜನಂ ತ್ಮನೇ ತೋಕಾಯ ತನಯಾಯ ಮೃಳ ।
(ಋ. ಸಂ. ೧-೧೮೪-೬)

ವ್ಯ ೧ ರ್ಯಂ ಪೃಥ್ವೀಮಮತಿಂ ಸ್ಯಜಾನ ಆ ನೃಭ್ಯೋ ಮರ್ತಭೋಜನಂ ಸುವಾನಃ ।
(ಋ. ಸಂ. ೭-೩೮-೨)

ವಿಶ್ರಯೆಮಾಣೋ ಅಮತಿಮುರೂಚೀಂ ಮರ್ತಭೋಜನಮಧ ರಾಸತೇ ನಃ ।
(ಋ. ಸಂ. ೭-೪೫-೩)

ಯತ್ತೇ ದಿವೋ ದುಹಿತರ್ಮರ್ತಭೋಜನಂ ತದ್ಯಾಸ್ಯ ಭುನಜಾಮಹೈ ।
(ಋ. ಸಂ. ೭-೭೧-೬)

ವಿಶ್ವಾ ಸೂನೋ ಸಹಸೋ ಮರ್ತಭೋಜನಾ ರಾಸ್ವ ತದ್ಯತ್ತ್ವೇಮಹೇ ।
(ಋ. ಸಂ. ೭-೯೭-೪)

ಶಿಕ್ಷತು— ಶಿಕ್ಷತಿರ್ದಾನಕರ್ಮಾ । (ನಿ. ೩-೨೦) ಶಿಕ್ಷತು ಎಂದರೆ ಕೊಡಲಿ ಎಂದರ್ಥವು.

ರಾಧಸಃ– ಧನನ. ಮಘಂ ರೇಕ್ಣಃ ಸೋನಲಾವ ಇಪ್ಪತ್ತೈಂಟು ಧನನಾಮಗಳ ಮಧ್ಯದಲ್ಲಿ ರಾಧಃ ಎಂಬ ಶಬ್ದವು ಪಠಿತವಾಗಿರುವುದು. (ನಿ. ೩-೯)

ಸ್ವಾಕರಣಪ್ರಕ್ರಿಯಾ

ಪರಾದದಾತಿ—ಪರಾ ಎಂಬುದು ಉಪಸರ್ಗ. ಡುದಾಞ್ ದಾನೇ ಧಾತು. ಜುಹೋತ್ಯಾದಿಗೆ ಶ್ಲುವಿಕರಣ. ಶ್ಲುಪರದಲ್ಲಿರುವಾಗ ಧಾತುವಿಗೆ ದ್ವಿತ್ವ ಬರುತ್ತದೆ. ಅಭ್ಯಾಸಕ್ಕೆ ಹ್ರಸ್ವ ಬರುತ್ತದೆ. **ಉಪಸರ್ಗಾಃ ಕ್ರಿಯಾಯೋಗೇ** (ಪಾ. ಸೂ. ೧-೪-೫೯) **ಗತಿಶ್ಚ** (ಪಾ. ಸೂ. ೧-೪-೬೦) ಎಂಬುದಕ್ಕೆ ಗತಿ ಸಂಜ್ಞೆಯೂ ವಿಹಿತವಾಗಿದೆ. **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೮೯) ಅನಿಟ್ಟಾಗಿಯೂ ಅಜಾದಿಯಾಗಿಯೂ ಇರುವ ಲಸ್ಯಾನಿಕ ಸಾರ್ವಧಾತುಕವು ಪರದಲ್ಲಿರುವಾಗ ಅಭ್ಯಸ್ತದ ಆದಿಯು ಉದಾತ್ತವಾಗುತ್ತದೆ. ಉಭೆ ಅಭ್ಯಸ್ತಂ ಎಂಬುದರಿಂದ ಷಷ್ಠ್ಯಾಧ್ಯಾಯದ ಸೂತ್ರದಿಂದ ವಿಹಿತವಾದ ದ್ವಿತ್ವವನ್ನು ಹೊಂದಿದ ಎರಡು ಖಂಡಗಳಿಗೂ ಅಭ್ಯಸ್ತವೆಂದು ಹೆಸರು. ಈ ಸೂತ್ರದಿಂದ ಇಲ್ಲಿ ಆದ್ಯುದಾತ್ತ ಸ್ವರವು ಬಂದಿದೆ. **ತಿಙಾಶ್ಚೋದಾತ್ತವತಿ** (ಪಾ. ಸೂ. ೮-೧-೭೧) ಉದಾತ್ತವುಳ್ಳ ತಿಙಂತವು ಪರವಲ್ಲಿರುವಾಗ ಗತಿಯು ಅನುದಾತ್ತವಾಗುತ್ತದೆ ಎಂಬುದರಿಂದ ಇಲ್ಲಿ ಪರಾ ಎಂಬ ಗತಿಗೆ "ನಿಪಾತಾ ಆದ್ಯುದಾತ್ತಾ" ಎಂದು ಸಾಮಾನ್ಯಸೂತ್ರದಿಂದ ಪ್ರಾಪ್ತವಾದ ಆದ್ಯುದಾತ್ತವು ಬಾಧಿಸಲ್ಪಟ್ಟು ಅನುದಾತ್ತಸ್ವರವು ಬರುತ್ತದೆ.

ದಾಶುಷೇ—ದಾಶೃ ದಾನೇ, ಧಾತು, ಭ್ವಾದಿ **ದಾಶ್ವಾನ್ ಸಾಹ್ವಾನ್ ಮೀಢ್ವಾಂಶ್ಚ** (ಪಾ ಸೂ ೬-೧-೧೩) ಈ ಮೂರು ಶಬ್ದಗಳು ನಿಪಾತಿತಗಳಾಗಿವೆ. ದಾಶೃಧಾತುವಿಗೆ ಕ್ವಸುಪ್ರತ್ಯಯವು ವಿಹಿತವಾಗದಿದ್ದರೆ ಅದಕ್ಕೆ ವಲಾದಿಲಕ್ಷಣ ಇಟ್ ನಿಷೇಧವೂ ಕ್ವಸು ಪರದಲ್ಲಿರುವಾಗ ಬರಬೇಕಾಗಿದ್ದ ಧಾತುದ್ವಿತ್ವನಿಷೇಧವೂ ನಿಪಾತದಿಂದ ಸಿದ್ಧವಾಗುತ್ತದೆ. ದಾಶ್ವಸ್ ಶಬ್ದದ ಮೇಲೆ ಚತುರ್ಥೀ ಏಕವಚನ ಪ್ರತ್ಯಯವಾಗಿದಾಗ **ವಸೋಃ ಸಂಪ್ರಸಾರಣಂ** (ಪಾ ಸೂ ೬-೪-೧೩೧) ವಸ್ವಂತವಾದ ಭ ಸಂಜ್ಞೆಯುಳ್ಳ ಅಂಗಕ್ಕೆ ಸಂಪ್ರಸಾರಣ ಬರುತ್ತದೆ ಎಂಬುದರಿಂದ ಇಲ್ಲಿ ಙಿ ಎಂಬ ಅಜಾದಿಪ್ರತ್ಯಯ ಪರವಲ್ಲಿರುವುದರಿಂದ ಪೂರ್ವಕ್ಕೆ (ಅಂಗಕ್ಕೆ) ಭಸಂಜ್ಞೆ ಇರುವುದರಿಂದ ಸಂಪ್ರಸಾರಣ ಬಂದಿದೆ. ಯಣ್ಣಿನ ಸ್ಥಾನಕ್ಕೆ ಬರುವ ಇಕ್ ವರ್ಣಕ್ಕೆ ಸಂಪ್ರಸಾರಣವೆಂದು ಹೆಸರು. ಇಲ್ಲಿ ವಕಾರಕ್ಕೆ ಉಕಾರ ರೂಪವಾದ ಸಂಪ್ರಸಾರಣಕ್ಕೆ ಙಿಟ್ ಪರವಲ್ಲಿರುವಾಗ **ಸಂಪ್ರಸಾರಣಾಚ್ಚ** (ಪಾ. ಸೂ ೬-೧-೧೦೮) ಸೂತ್ರದಿಂದ ಪೂರ್ವರೂಪ ಬರುತ್ತದೆ. ದಾಶುಸ್+ಏ ಎಂದಿರುವಾಗ **ಶಾಸಿವಸಿಘುಸೀನಾಂಚ** (ವಾ. ಸೂ. ೮-೩-೬೦) ಇಣ್ ಕವರ್ಗದ ಪರದಲ್ಲಿರುವ ಶಾಸ್, ವಸ್, ಘಸ್ ಸಂಬಂಧಿಯಾದ ಸಕಾರಕ್ಕೆ ಮೂರ್ಧನ್ಯಾದೇಶವು ಬರುವುದು ಎಂಬುದರಿಂದ ಇಲ್ಲಿ ಸಂಪ್ರಸಾರಣದ ಪರವಲ್ಲಿರುವ ವಸ್ ಸಂಬಂಧಿ ಸಕಾರಕ್ಕೆ ಷತ್ವ ಬಂದಿದೆ. ದಾಶುಷೆ ಎಂದಾಗುತ್ತದೆ.

ಭಕ್ಷೀಯ—ಭಜ ಸೇವಾಯಾಂ ಧಾತು, ಭ್ವಾದಿ **ವಿಧಿನಿಮಂತ್ರಣಾ** (ಪಾ ಸೂ. ೩-೩-೧೬) ಸೂತ್ರದಿಂದ ಪ್ರಾರ್ಥನಾರ್ಥವಲ್ಲಿ ಲಿಙ್. ಆಶೀರ್ಲಿಙ್ಗೆ ಆರ್ಧಧಾತುಕಸಂಜ್ಞೆ ಇದ್ದರೂ ವಿಧಿಲಿಙ್ಗೆ ಶೋಕದಲ್ಲಿ ಇಲ್ಲ. ಆದರೆ **ಛಂದಸ್ಯುಭಯಥಾ** ಧಾತ್ವಧಿಕಾರದಲ್ಲಿ ವಿಹಿತವಾದ ಪ್ರತ್ಯಯಗಳೆಲ್ಲವೂ ಛಂದಸ್ಸಿನಲ್ಲಿ ಉಭಯ ಸಂಜ್ಞೆಯನ್ನು ಹೊಂದುತ್ತವೆ ಎಂಬುದರಿಂದ ಇಲ್ಲಿ ವಿಧಿಲಿಙ್ಗೆ ಆರ್ಧಧಾತುಕಸಂಜ್ಞೆ ಬಂದಿದೆ. ಸಾರ್ವಧಾತುಕ ಪರವಲ್ಲಿರುವಾಗ ವಿಹಿತವಾದ ಶಪ್ ವಿಕರಣವು ಬರುವುದಿಲ್ಲ. ಲಙುತ್ತಮಪುರುಷೈಕವಚನಕ್ಕೆ ಇಟ್ಚೋತ್ ಎಂಬ ಸೂತ್ರದಿಂದ ಅತ್ವವು ಬರುತ್ತದೆ. **ಲಿಙಃ ಸೀಯುಟ್** (ಪಾ. ಸೂ. ೩-೪-೧೦೩) ಲಿಙಿಗೆ ಸೀಯುಟಾಗಮವು ಬರುತ್ತದೆ. ಭಜ್+ಸೀಯ್+ಅ ಎಂದಿರುವಾಗ ಧಾತುವಿನ ಜಕಾರಕ್ಕೆ **ಚೋಃ ಕುಃ** (ಪಾ. ಸೂ. ೮-೨-೩೦) ಎಂಬುದರಿಂದ ಕುತ್ವವು ಬಂದರೆ ಗಕಾರ ಬರುತ್ತದೆ. ಗಕಾರಕ್ಕೆ ಚರ್ತ್ವದಿಂದ ಕಕಾರ ಬಂದರೆ ಭಕ್+ಸೀಯ

ಎಂದಾಗುತ್ತದೆ. ಯದಾಗಮನ್ಯಾಯದಿಂದ ಸೀಯುಟ್ ಲಿಙಾಗೆ ಬಂದುದರಿಂದ ಪ್ರತ್ಯಯಾವಯವವಾದುದರಿಂದ ಕವರ್ಗದ ಪರದಲ್ಲಿ ಬಂದುದರಿಂದ ಹಿಂದೆ ಹೇಳಿದಗತೆ ಷತ್ವಬರುತ್ತದೆ. ಕಕಾರ ಷಕಾರಯೋಗದಿಂದ ಕ್ಷಕಾರವಾದಾಗ ಭಕ್ಷೀಯ ಎಂದು ರೂಪಸಿದ್ಧಿಯಾಗುತ್ತದೆ. ಆರ್ಧಧಾತುಕಸಂಜ್ಞೆ ಇರುವುದರಿಂದಲೇ ಲಿಙನ ಸಕಾರಕ್ಕೆ ಬರಬೇಕಾದ ಲೋಪವೂ ಬರುವುದಿಲ್ಲ. ಸೀಯುಡಾಗಮ ಬಂದಮೇಲೆ ವಲಾದಿ ಆರ್ಧಧಾತುಕವಾಗುತ್ತದೆ. ಆದರೆ **ಏಕಾಚ ಉಪದೇಶೇ೨ನುದಾತ್ತಾತ್** (ಪಾ ಸೂ. ೭ ೨-೧೦) ಸೂತ್ರದಿಂದ ಇನ್ನೆಷೇಧ ಬರುತ್ತದೆ ಉಪದೇಶದಲ್ಲಿ ಏಕಾಚ್ಚಾಗಿಯೂ ಅನುದಾತ್ತವಾಗಿಯೂ ಇರುವ ಧಾತುವಿನ ಪರದಲ್ಲಿರುವ ವಲಾದಿ ಆರ್ಧಧಾತುಕಕ್ಕೆ ಇಟ್ ಬರುವುದಿಲ್ಲವೆಂದು ಆ ಸೂತ್ರದ ಅರ್ಥ. ಇಲ್ಲಿ ಭಜಧಾತುವು ಏಕಾಚ್ಚಾಗಿಯೂ ಅನುದಾತ್ತವಾಗಿಯೂ ಇರುವುದರಿಂದ ಇಟ್ ಬರುವುದಿಲ್ಲ. ಆಗಮಾ ಅನುದಾತ್ತಾಃ ಎಂಬುದರಿಂದ ಸೀಯುಡಾಗಮವು ಅನುದಾತ್ತವಾದುದರಿಂದ ಪ್ರತ್ಯಯ ಸ್ವರವು ಸತಿಶಿಷ್ಟಸ್ವರವಾಗಿರುವುದರಿಂದ ಉದಾತ್ತಸ್ವರವೇ ಉಳಿಯುತ್ತದೆ **ಸಮಾನವಾಕ್ಯೆ ನಿಘಾತಯುಷ್ಮದಸ್ಮದಾದೇಶಾ ವಕ್ತವ್ಯಾಃ** (ವಾ ೪-೭-೧೪) ಏಕವಾಕ್ಯದಲ್ಲಿ ಅನುದಾತ್ತವಾದ ಯುಷ್ಮದಸ್ಮದಾದೇಶಗಳು ಬರುತ್ತವೆ ಎಂಬುದರಿಂದ ಇಲ್ಲಿ ಪೂರ್ವಪದವು ಸಮಾನವಾಕ್ಯದಲ್ಲಿರದಿದ್ದುದರಿಂದ ಅನುದಾತ್ತವು ಬರುವುದಿಲ್ಲ. ॥ ೬ ॥

ಸಂಹಿತಾಪಾಠಃ ॥

ಮದೇ॑ಮದೇ ಹಿ ನೋ॑ ದದಿ॒ರ್ಯೂಥಾ॑ ಗವಾಮೃಜು॒ಕ್ರತುಃ॑ ।
ಸಂ ಗೃ॒ಭಾಯ॑ ಪುರೂ ಶ॒ತೋಭ॑ಯಾಹ॒ಸ್ತ್ಯಾ ವಸು॑ ಶಿಶೀ॒ಹಿ
ರಾ॒ಯ ಆ ಭ॑ರ ॥ ೭ ॥

ಪದಪಾಠಃ

ಮದೇ॑ ಮದೇ । ಹಿ । ನ॒ಃ । ದದಿ॑ಃ । ಯೂಥಾ॑ । ಗವಾ॑ಂ । ಋಜು॒ ಕ್ರತುಃ॑ ।
ಸಂ । ಗೃ॒ಭಾಯ॑ । ಪುರು॑ । ಶ॒ತಾ । ಉ॒ಭ॒ಯಾ॒ಹ॒ಸ್ತ್ಯಾ॑ । ವಸು॑ । ಶ॒ಶೀ॒ಹಿ ।
ರಾ॒ಯಃ । ಆ । ಭ॒ರ ॥ ೭ ॥

ಸಾಯಣಭಾಷ್ಯಂ

ಚಾತುರ್ವಿಂಶಿಕೇ೨ಹನಿ ಮಾಧ್ಯಂದಿನಸವನೇ ಬ್ರಾಹ್ಮಣಾಚ್ಛಂಸಿನೋ ಮದೇಮದೇ ಹಿ ನೋ ದದಿರಿತಿ ವೈಕಲ್ಪಿಕೋ೨ನುರೂಪಸ್ತೃಚಃ । ಹೋತ್ರಕಾಣಾಮಿತಿ ಖಂಡೇ ಸೂತ್ರಿತಂ । ಮದೇಮದೇ ಹಿ ನೋ ದದಿಃ ಸುರೂಪಕೃತ್ನುಮೂತಯೇ । ಆ. ೭-೪ । ಇತಿ ॥

ಮದೇ ಮದೇ ಸೋಮಪಾನೇನ ಹರ್ಷೇ ಹರ್ಷೇ ಸತಿ ಋಜುಕ್ರತುರ್ಋಜುಕರ್ಮಾ ಸ ಇಂದ್ರೋ ನೋ೨ಸ್ಮಭ್ಯಂ ಗವಾಂ ಯೂಥಾ ಯೂಥಾನಿ ದದಿರ್ಹಿ ಗೋಯೂಥಾನಾಂ ದಾತಾ ಖಲು । ಹೇ ಇಂದ್ರ ಸ ತ್ವಂ ಪುರು। ಪುರೂಣಿ ಪ್ರಭೂತಾನಿ ಶತಾ ಶತಸಂಖ್ಯಾಕಾನಿ । ಅಪರಿಮಿತಾನೀತ್ಯರ್ಥಃ । ವಸು ವಸೂನಿ ಧನಾನ್ಯುಭಯಾಹಸ್ತ್ಯೇಭಾಭ್ಯಾಂ ಹಸ್ತಾಭ್ಯಾಂ ಸಂ ಗೃಭಾಯ । ಅಸ್ಮಭ್ಯಂ ದಾತುಂ ಸಮ್ಯಗ್ಗೃಹಾಣ । ಶಿಶೀಹಿ। ಅಸ್ಮಾಂಸ್ತೀಕ್ಷ್ಣೀಕುರು । ನಿಶಿತಬುದ್ಧಿಯುಕ್ತಾನ್ ಕುರ್ವಿತ್ಯರ್ಥಃ । ರಾಯೋ ಧನಾನಿ ಹಸ್ತಯೋಃ ಸ್ಥಿತಾನ್ಯಾ ಭರ । ಆಹರ । ಪ್ರಯಚ್ಛ ॥ ದದಿಃ । ಡುದಾಞ್ ದಾನೇ । ಆದೃಗಮಹನಜನ ಇತಿ ಕಿಪ್ರತ್ಯಯಃ ಯೂಥಾ । ಶೇಶ್ಛಂದಸಿ ಬಹುಲಮಿತಿ ಶೇರ್ಲೋಪಃ । ಗವಾಂ । ಸಾವೇಕಾಚ ಇತಿ ಪ್ರಾಪ್ತಸ್ಯ ನ ಗೋಶ್ಪುನ್ಪುವರ್ಣೇತಿ ಪ್ರತಿಷೇಧಃ । ಗೃಭಾಯ । ಗೃಹ ಉಪಾದಾನೇ । ಲೋಟಿ ಹೌ ಛಂದಸಿ ಶಾಯಜಪಿ । । ಪಾ. ೩-೧-೮೬ । ಇತಿ ಶ್ನಾಪ್ರತ್ಯಯಸ್ಯ ಶಾಯಜಾದೇಶಃ । ಹೃಗ್ರಹೋರ್ಭ ಇತಿ ಭತ್ವಂ । ಉಭಯಾಹಸ್ತ್ಯಂ । ಉಭಯಹಸ್ತಶಬ್ದಾದುತ್ತರಸ್ಯ ತೃತೀಯಾದ್ಯುವಚನಸ್ಯ ಸುಪಾಂ ಸುಲುಗಿತಿ ಡ್ಯಾದೇಶಃ । ಅನ್ಯೇಷಾಮಪಿ ದೃಶ್ಯತ ಇತಿ ಪೂರ್ವಪದಸ್ಯ ದೀರ್ಘತ್ವಂ । ಸಮಾಸಾಂತೋದಾತ್ತತ್ವೇ ಉದಾತ್ತನಿವೃತ್ತಿಸ್ವರೇಣ ವಿಭಕ್ತೇರುದಾತ್ತತ್ವಂ। ವಸು । ಸುಪಾಂ ಸುಲುಗಿತಿ ವಿಭಕ್ತೇರ್ಲುಕ್। ಶಿಶೀಹಿ । ಕೋ ತನೂಕರಣೇ । ಬಹುಲಂ ಛಂದಸೀತಿ ವಿಕರಣಸ್ಯ ಶ್ಲುಃ। ಆದೇಚ ಇತ್ಯಾತ್ವಂ । ಇದಿತ್ಯನುವೃತ್ತೌ ಬಹುಲಂ ಛಂದಸೀತ್ಯಭ್ಯಾಸಸ್ಯೇತ್ವಂ । ಈ ಹಲ್ಯಘೋರಿತಿ ಧಾತೋರೀತ್ವಂ । ಪಾದಾದಿತ್ವಾನ್ನಿಘಾತಾಭಾವಃ । ರಾಯಃ। ಊಡಿದಮಿತಿ ವಿಭಕ್ತೇರುದಾತ್ತತ್ವಂ ॥ ೭ ॥

ಶ್ರುತಿಪಾಠ

ಮದೇಮದೇ— (ಸೋಮಸವಾನದಿಂದ) ಪುನಃ ಪುನಃ ಸಂತೋಷಯುಕ್ತನಾಗಿರಲು । **ಋಜುಕ್ರತುಃ**— ಪ್ರಾಮಾಣಿಕವಾದ ಯಜ್ಞಕರ್ಮವುಳ್ಳ ಇಂದ್ರನು । **ನಃ**—ನಮಗೆ । **ಗವಾಂ ಯೂಥಾ** ಗೋವುಗಳ ಸಮೂಹವನ್ನು । **ದದಿ ಹಿ**—ಕೊಡುತ್ತಾನಲ್ಲವೇ ? (ಎಲೈ ಇಂದ್ರನೇ) । **ಪುರು**—ಪ್ರಭೂತವಾದವೂ । **ಶತಾ**—ನೂರಾರು ಬಗೆಯುಳ್ಳವೂ ಆದ । **ವಸು**—ಧನಗಳನ್ನು । **ಉಭಯಂಹಸ್ತ್ಯಾ**— ಎರಡು ಕೈಗಳಿಂದಲೂ । **ಸಂಗೃಭಾಯ**— ಪೂರ್ಣವಾಗಿ ತೆಗೆದುಕೊ. । **ಶಿಶೀಹಿ**—(ನಮ್ಮ ಬುದ್ಧಿಯನ್ನು)ಚುರುಕಾಗುವಂತೆ ಮಾಡು. । **ರಾಯಃ**— (ನಿನ್ನ ಕೈಯಲ್ಲಿರುವ) ಧನಗಳನ್ನು । **ಆ ಭರ**—ತಂದು ಕೊಡು.

ಭಾವಾರ್ಥ

ಪದೇ ಪದೇ ಸೋಮರಸಪಾನದಿಂದ ಅತ್ಯಧಿಕವಾದ ಸಂತೋಷಯುಕ್ತನೂ ಪುನಃ ಪ್ರಾಮಾಣಿಕವಾದ ಯಜ್ಞಕರ್ಮವುಳ್ಳವನೂ ಆದ ಇಂದ್ರನು ನಮಗೆ ಗೋವುಗಳ ಸಮೂಹವನ್ನು ಕೊಡುವನು. ಎಲೈ ಇಂದ್ರನೇ,

ಪ್ರಭೂತವಾದುದೂ ಮತ್ತು ನೂರಾರು ಬಗೆಯುಳ್ಳವೂ ಆದ ಧನಗಳನ್ನು ಎರಡು ಕೈಗಳಲ್ಲೂ ಪೂರ್ಣವಾಗಿ ತುಂಬಿ ಕೊಂಡು ಬಂದು ನನಗೆ ಕೊಡು. ಮತ್ತು ನನ್ನ ಬುದ್ಧಿಯನ್ನು ಚುರುಕಾಗುವಂತೆ ಮಾಡು.

English Translation

(Indra) the performer of pious acts is the giver of herds of cattle to us after being exhilerated with frequent drinking of our Soma ; take up, Indra, with both hands hundreds of wealth ; sharpen (our minds); procure us wealth.

॥ ವಿಶೇಷವಿಷಯಗಳು ॥

ಮದೇ ಮದೇ-- ಸೋಮಪಾನದಿಂದ ಸಂತೋಷವುಳ್ಳವನಾಗಿ. ಮದೇ ಎಂಬ ಶಬ್ದವು ಎರಡಾವರ್ತಿ ಸರಿತನಾಗಿರುವುದರಿಂದ, ಇದಕ್ಕೆ ಬಹಳವಾಗಿ ಅಥವಾ ಪದೇ ಪದೆ ಹರ್ಷಯುಕ್ತನಾಗಿ ಎಂದರ್ಥವು.

ಋಜುಕ್ರತುಃ— **ಋಜು**-ನತ್ಯವಾದ, **ಕ್ರತು**ಃ-ಕರ್ಮವುಳ್ಳವನು ಎಂದರೆ ಇಂದ್ರನು ಮಾತಿಗೆ ತಪ್ಪುವವನಲ್ಲ ಖಂಡಿತನಾಗಿಯೂ ಒಳ್ಳೆಯ ಕೆಲಸಗಳನ್ನೇ ಮಾಡುವವನು

ಶಿಶೀಹಿ-- **ಶೋ ತನೂಕರಣೇ** । ನನ್ನ ಬುದ್ಧಿಯನ್ನು ಚುರುಕಾಗುವಂತೆ ಮಾಡು. ನಮ್ಮನ್ನು ಬುದ್ಧಿವಂತರನ್ನಾಗಿ ಪ ಡು

ವ್ಯಾಕರಣಸಂಕ್ರಿಯಾ

ದದಿಃ—ಡುವಾಞ್ ದಾನೇ. ಧಾತು ಜುಹೋತ್ಯಾದಿ. **ಆದ್ಯೇಗಮಹನಜನಃ ಕಿಕಿನೌ ಲಿಟ್ ಚ** (ಪಾ. ಸೂ. ೩-೩-೧೭೧) ಎಂಬುದರಿಂದ ಆದಂತವಾದ ಧಾತುವಾದುದರಿಂದ ಕಿ ಪ್ರತ್ಯಯವು ಬಂದಿದೆ. ಅದು ಲಿಟ್‌ಭಾವನನ್ನು ಹೊಂದುವುದರಿಂದ ಧಾತುವಿಗೆ ದ್ವಿತ್ವವೂ ಅಭ್ಯಾಸಕ್ಕೆ ಹ್ರಸ್ವವೂ ಬರುತ್ತದೆ. ಕಿತ್ತಾದಪ್ರತ್ಯಯ ಪರದಲ್ಲಿರುವುದರಿಂದ ಆತೋಲೋಪ ಇಟಿ ಚ ಎಂಬುದರಿಂದ ಆಕಾರಲೋಪ ಬರುತ್ತದೆ ಪ್ರತ್ಯಯಸ್ವರವು ಬಂದಿದೆ.

ಯೂಥಾ—ದ್ವಿತೀಯಾಬಹುವಚನ. **ಜಶ್ಶಸೋಃ ಶಿಃ** (ಪಾ. ಸೂ. ೭-೧-೨೦) ಎಂಬುದರಿಂದ ಪ್ರಥಮಾ ದ್ವಿತೀಯಾ ಬಹುವಚನಗಳಿಗೆ ಶಿ ಎಂಬುದು ಸರ್ವಾದೇಶವಾಗಿ ಬರುತ್ತದೆ. ಅನಕ್ಕೆ **ಶೇಶ್ಛಂದಸಿ ಬಹುಲಂ** (ಪಾ. ಸೂ. ೬-೧-೭೦) ಎಂಬುದರಿಂದ ಛಂದಸ್ಸಿನಲ್ಲಿ ವಿಕಲ್ಪವಾಗಿ ಶಿ ಪ್ರತ್ಯಯಕ್ಕೆ **ಲೋಪ** ಬರುತ್ತದೆ ಎಂಬುದರಿಂದ ಲೋಪ ಬರುತ್ತದೆ.

ಗವಾಂ—**ಸಾನೇಕಾಚಸ್ತೃತೀಯಾದಿರ್ನಿಭಕ್ತಿಃ** (ಪಾ ಸೂ. ೬-೧-೧೬೪) ಎಂಬುದರಿಂದ ಇಲ್ಲಿ ಸಪ್ತಮಿಯು ಉದಾತ್ತವಾಗಬೇಕಾಗುತ್ತದೆ. ಆದರೆ ಅದಕ್ಕೆ ಅಪವಾದವಾಗಿ **ನಗೋಶ್ವಸ್ಯಾವವರ್ಣರಾಡಂಕುಂಕೃದ್ಭ್ಯಃ** (ಪಾ. ಸೂ ೬-೧-೧೭೪) ಎಂಬ ಸೂತ್ರವು ಆರಭ್ಯವಾಗಿದೆ. ಇವುಗಳಿಗೆ ಹಿಂದೆ ಹೇಳಿದ ಕಾರ್ಯಗಳು ಬರುವುದಿಲ್ಲ. ಆದುದರಿಂದ ಅಂತೋದಾತ್ತವಾಗಲಿಲ್ಲ.

ಗೃಭಾಯ—ಗ್ರಹ ಉಪಾದಾನೆ ಧಾತು ಕ್ರ್ಯಾದಿ. **ಕ್ರ್ಯಾದಿಭ್ಯಃ ಶ್ನಾ** (ಪಾ. ಸೂ. ೩-೧-೮೧) ಎಂಬುದರಿಂದ ಕ್ರ್ಯಾದಿಗಳಿಗೆ ಶ್ನಾ ಎಂಬ ವಿಕರಣಪ್ರತ್ಯಯವು ಪ್ರಾಪ್ತವಾಗುತ್ತದೆ. ಲೋಟ್ ಮಧ್ಯಮಪುರುಷೈಕ ವಚನದ ಸಿಪ್ಪಿಗೆ ಹಿ ಎಂಬ ಆದೇಶ ಬರುತ್ತದೆ. ಹಿ ಪರದಲ್ಲಿರುವಾಗ ಶ್ನಾವಿಕರಣವು ಪ್ರಾಪ್ತವಾದರೆ **ಛಂದಸಿ ಶಾಯಜಪಿ** (ಪಾ. ಸೂ. ೩-೧-೮೪) ಎಂಬುದರಿಂದ **ಶಾಯಜಪೋದೇಶ** ಬರುತ್ತದೆ. ಶಾಯಚಿನಲ್ಲಿ ಆಯ ಎಂಬುದು ಉಳಿಯುತ್ತದೆ. ಗೃಹಾಯ+ಹಿ ಎಂದಿರುವಾಗ **ಹೃಗೃಹೋರ್ಭಶ್ಛಂದಸಿ** ಎಂಬುದರಿಂದ ಧಾತುಸಂಬಂಧಿ ಹಕಾರಕ್ಕೆ ಭಕಾರಾದೇಶವು ಬರುತ್ತದೆ. ಅಕಾರದ ಪರದಲ್ಲಿ ಹಿ ಬಂದಿರುವುದರಿಂದ **ಅತೋ ಹೇಃ** (ಪಾ. ಸೂ. ೬-೪.೧೦೫) ಎಂಬುದರಿಂದ ಹಿಗೆ ಲುಕ್ ಬರುತ್ತದೆ. ಗೃಭಾಯ ಎಂದು ಉಳಿಯುತ್ತದೆ

ಉಭಯಾಹಸ್ತ್ಯಾ ಯ—ಉಭೌ ಚ ತೌ ಹಸ್ತೌ ಚ ಉಭಯಹಸ್ತೌ. ಉಭಯಹಸ್ತ ಶಬ್ದದ ಮೇಲೆ ತೃತೀಯಾದ್ವಿವಚನ ವಿವಕ್ಷೆನುಮಾಡಿದಾಗ ಉಭಯಹಸ್ತ+ಭ್ಯಾಂ ಎಂದಿರುವಾಗ **ಸುಪಾಂ ಸುಲುಕ್ ಸವರ್ಣ** (ಪಾ. ಸೂ. ೭-೧-೩೯) ಎಂಬುದರಿಂದ ಭ್ಯಾಂ ಎಂಬ ವಿಭಕ್ತಿಗೆ ಡ್ಯಾ ಎಂಬ ಆದೇಶ ಬರುತ್ತದೆ. ಡ್ಯಾ ಎಂಬಲ್ಲಿ ಡಕಾರ ಇತ್ವಾಗುತ್ತದೆ. ಡಿತ್ವಾದುದರಿಂದ ಉಭಯಹಸ್ತ ಎಂಬ ಪ್ರಕೃತಿಯ ಟಿಗೆ (ಅಂತ್ಯವರ್ಣಕ್ಕೆ) ಲೋಪ ಬರುತ್ತದೆ. **ಅನ್ಯೇಷಾಮಪಿ ದೃಶ್ಯತೆ** (ಪಾ. ಸೂ. ೬-೩-೧೩೭) ಎಂಬುದರಿಂದ ನಿಮಿತ್ತವಿಲ್ಲದಿದ್ದರೂ ಪೂರ್ವಪದಕ್ಕೆ ದೀರ್ಘ ಬರುವುದರಿಂದ ಇಲ್ಲಿ ಉಭಯವೆಂಬ ಪೂರ್ವಪದಕ್ಕೆ ದೀರ್ಘಬಂದರೆ ಉಭಯಾಹಸ್ತ್ಯಾ ಎಂತಾಗುತ್ತದೆ. ಇಲ್ಲಿ ವಿಭಕ್ತಿಗೆ **ಅನುದಾತ್ತೌ ಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತಸ್ವರವಿದ್ದರೂ ಇಲ್ಲಿ ಉದಾತ್ತನಿವೃತ್ತಿ ಸ್ವರದಿಂದ ಉದಾತ್ತವೇ ಬರುತ್ತದೆ. **ಸಮಾಸಸ್ಯ** (ಪಾ. ಸೂ. ೬-೧-೨೨೩) ಸೂತ್ರದಿಂದ ಸಮಾಸವು ಅಂತೋದಾತ್ತವಾಗುತ್ತದೆ. ಇದಕ್ಕೆ ಅನುದಾತ್ತವು ಪರದಲ್ಲಿರುವಾಗ ಲೋಪ ಬರುವುದರಿಂದ **ಅನುದಾತ್ತ ಸ್ಯ ಚಯತ್ಯೋದಾತ್ತ ಲೋಪಃ** (ಪಾ ಸೂ. ೬-೧-೧೬೧) ಎಂಬುದರಿಂದ ಅನುದಾತ್ತಸ್ವರವುಳ್ಳ ವಿಭಕ್ತಿಯು ಉದಾತ್ತವಾಗುತ್ತದೆ ಎಂದು ಅಭಿಪ್ರಾಯ ಉಭಯಾಹಸ್ತ್ಯಾ ಎಂಬುದು ಅಂತೋದಾತ್ತವಾಗಿಯೇ ಉಳಿಯುವುದು ಎಂದರ್ಥ.

ವಸು—ವಸು ಶಬ್ದದ ಮೇಲೆ ದ್ವಿತೀಯಾ ಬಹುವಚನ ಬಂದಿದೆ. ವಸು+ಶಸ್ ಎಂದಿರುವಾಗ **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಶಸ್ ವಿಭಕ್ತಿಗೆ ಲುಕ್ ಬಂದಿದೆ.

ಶಿಶೀಹಿ—ಶೋ ತನೂಕರಣೆ ಧಾತು. ದಿವಾದಿ. ಲೋಟ್ ಮಧ್ಯಮಪುರುಷೈಕವಚನ ದಿವಾದಿಯಾಗಿರುವುದರಿಂದ ಶ್ಯನ್ ಪ್ರಾಪ್ತನಾಗಿರೆ **ಬಹುಲಂ ಛಂದಸಿ** ಎಂದು ಆಶ್ರಯಿಸಿ ಹಾಗಿರೆ **ವ್ಯತ್ಯಯೋ ಬಹುಲಂ** (ಪಾ. ಸೂ ೩-೧-೮೫) ಸೂತ್ರದಿಂದ ಛಂದಸ್ಸಿನಲ್ಲಿ ವಿಕರಣಗಳು ವ್ಯತ್ಯಾಸವನ್ನು ಹೊಂದುತ್ತವೆ ಎಂಬುದರಿಂದ ಇಲ್ಲಿ ಶ್ಯನ್ನಿಗೆ ಬದಲಾಗಿ ಶ್ಲುವಿಕರಣ ಬಂದಿದೆ. **ಆದೇಚ ಉಪದೇಶೇ೭ಶಿತಿ** (ಪಾ. ಸೂ. ೬ ೧ ೪೫) ಉಪದೇಶದಲ್ಲಿ ಏಜಂತನಾದ ಧಾತುವಿಗೆ ಆತ್ಮನೆಪದವು ಬರುತ್ತದೆ ಎಂಬುದರಿಂದ ಇಲ್ಲಿ ಧಾತುವಿಗೆ ಆತ್ಮ ಬರುತ್ತವೆ. ಶ್ಲುವಿಕರಣ ಪರದಲ್ಲಿರುವಾಗ **ಶ್ಲೌ** (ಪಾ ಸೂ. ೬-೧-೧೦) ಎಂಬುದರಿಂದ ಧಾತುವಿಗೆ ದ್ವಿತ್ವ ಬರುತ್ತದೆ. ಶಶಾ+ಹಿ ಎಂದಿರುವಾಗ **ಬಹುಲಂ ಛಂದಸಿ** (ಪಾ. ಸೂ ೭-೪-೭೭) ಇತ್ ಎಂದು ಪೂರ್ವಸೂತ್ರದಿಂದ ಅನುವೃತ್ತನಾಗುತ್ತದೆ. ಛಂದಸ್ಸಿನಲ್ಲಿ ಅಭ್ಯಾಸಕ್ಕೆ ಇಕಾರಬರುತ್ತದೆ ಎಂಬುದರಿಂದ ಅಭ್ಯಾಸದ ಶಕಾರಕ್ಕೆ ಇತ್ವ ಬರುತ್ತದೆ **ಈಹಲ್ಯಘೋಃ** (ಪಾ ಸೂ. ೬-೪-೬೫) ಶ್ನಾ ಮತ್ತು ಅಭ್ಯಸ್ತದ ಆಕಾರಕ್ಕೆ ಸಾರ್ವಧಾತುಕಸಂಜ್ಞೆಯಿರುವ ಕಿತ್ ಜಿತ್ವಾದ ಪ್ರತ್ಯಯಪರದಲ್ಲಿರುವಾಗ ಈತ್ವ

ಬರುತ್ತದೆ. ದ್ವಿತ್ವಹೊಂದಿದ ಸಮುದಾಯಕ್ಕೆ ಅಭ್ಯಸ್ತವೆಂದು ಹೆಸರು. ಹಿ ಎಂಬುದು ಸಾರ್ವಧಾತುಕ ಸಂಜ್ಞೆಯುಳ್ಳ ಹಲಾದಿಪ್ರತ್ಯಯವಾಗಿದೆ. ಇದು ಸಿಪ್ಪಿನ ಸ್ಥಾನಕ್ಕೆ ಬಂದರೂ **ಅಪಿಚ್ಚ** ಎಂದು ವಿಧಾನಮಾಡಿರುವುದರಿಂದ ಬಿತ್ತಾಗುತ್ತದೆ. ಆದುದರಿಂದ ಧಾತುವಿನ ಆಕಾರಕ್ಕೆ **ಈತ್ವ**ಬಂದರೆ ಶಿಶೀಹಿ ಎಂದಾಗುತ್ತದೆ. ಪಾದದ ಆದಿಯಲ್ಲಿರುವುದರಿಂದ ಅಪಾದಾದೌ ಎಂದು ನಿಷೇಧಮಾಡಿರುವುದರಿಂದ ಸರ್ವಾನುದಾತ್ತವಾಗುವುದಿಲ್ಲ.

ರಾಯೇಃ—ರೈ ಶಬ್ದದ ಮೇಲೆ ದ್ವಿತೀಯಾಬಹುವಚನ ಬಂದಿದೆ. ಸುಪ್ಪಿಗೆ ಬರುವ ಅನುದಾತ್ತಸ್ವರವು ಇಲ್ಲಿ ಬಂದಿಲ್ಲ. **ಊಡಿದಂ ಪದಾದ್ಯಪ್ಪುನ್ಮ್ರೈದ್ಯುಭ್ಯಃ** (ಪಾ. ಸೂ. ೬-೧-೧೭೬) ಏಕಾಚ್ ಆಂತೋದಾತ್ತವಾಗಿರುವ ಇವುಗಳ ಮೇಲಿರುವ ಸರ್ವನಾಮಸ್ಥಾನ ಸಂಜ್ಞೆ ಇಲ್ಲದ ವಿಭಕ್ತಿಯು ಉದಾತ್ತವಾಗುತ್ತದೆ ಎಂಬುದರಿಂದ ಇಲ್ಲಿ ಶಸ್ಸಿಗೆ ಉದಾತ್ತಸ್ವರ ಬಂದಿದೆ. ಸತಿಶಿಷ್ಟಸ್ವರವಾದುದರಿಂದ ಉಳಿದದ್ದು ಅನುದಾತ್ತವಾಗುತ್ತದೆ. ॥ ೬ ॥

॥ ಸಂಹಿತಾಪಾಠಃ ॥

ಮಾದಯಸ್ವ ಸುತೇ ಸಚಾ ಶವಸೇ ಶೂರ ರಾಧಸೇ।
ವಿದ್ಮಾ ಹಿ ತ್ವಾ ಪುರೂವಸುಮುಪ ಕಾಮಾನ್ತ್ಸಸೃಜ್ಮಹೇ ಽಥಾ
ನೋ ಽವಿತಾ ಭವ ॥ ೮ ॥

॥ ಪದಪಾಠಃ ॥

ಮಾದಯಸ್ವ । ಸುತೇ । ಸಚಾ । ಶವಸೇ । ಶೂರ । ರಾಧಸೇ ।
ವಿದ್ಮ । ಹಿ । ತ್ವಾ । ಪುರು ೪ವಸುಂ । ಉಪ । ಕಾಮಾನ್ । ಸಸೃಜ್ಮಹೇ । ಅಥ । ನಃ ।
ಅವಿತಾ । ಭವ ॥ ೮ ॥

ಸಾಯಣಭಾಷ್ಯಂ

हे शूर शौर्यवन्निन्द्र सुतेऽस्मिन्सोमेऽभिष्टुतेऽसत्यागत्य सचास्माकं सखा सन् मादयस्व । तेन सोमेन तृप्तोऽयं भव । किमर्थं । शवसे बलार्थं राधसेऽस्माकं धनार्थं च । त्वा त्वां पुरूवसुं बहुधनं विद्म हि । वयं जानीमः खलु । अतोऽस्मदीयान् कामान् मात्वा गत्वा वत्सनिव त्वयोप सृजामहे हि । त्वया खल्वेकेकुर्मः । अथानन्तरं नोऽस्माकमविताभिलषितफलप्रदानेन रक्षिता भव ॥ मादयस्व । मद तृप्तियोगे । चुरादिरात्मनेपदी । अदुपदेशाल्लसार्वधातुकानुदात्तत्वे णिच उप सर्ग स्वरः शिष्यते । सृजामहे । सृज विसर्गे । बहुलं छंदसीति विकरणस्य श्लुः । प्रत्ययोदात्तत्वं । अत्रापि हिशब्दानुषंगाच्छंदस्यनेकमपि साकांक्षं (पा. ८-१-३४) इति निघातस्य प्रतिषेधः ॥ ८ ॥

ಕನ್ನಡಾರ್ಥ

ಶೂರ— ಪರಾಕ್ರಮಶಾಲಿಯಾದ ಇಂದ್ರನೇ । **ಸುತೇ**—(ಸೋಮರಸವನ್ನು) ಹಿಂಡಿದಾಗ (ಬಂದು) । **ಸಚಾ**— (ನಮ್ಮ) ಸ್ನೇಹಿತನಾಗಿ । **ಶವಸೇ**—ಶಕ್ತ್ಯುತ್ಪಾದನೆಗಾಗಿಯೂ । **ರಾಧಸೇ**— ಧನಲಾಭಕ್ಕಾಗಿಯೂ । **ಮಾದಯಸ್ವ**—(ಸೋಮರಸಪಾನದಿಂದ) ಸಂತೃಪ್ತನಾಗು. । **ತ್ವಾ**—ನಿನ್ನನ್ನು । **ಪುರೂವಸುಂ**—ಅಧಿಕವಾದ ಧನವಂತನೆಂಬುದಾಗಿ । **ವಿದ್ಮ ಹಿ**— ತಿಳಿದೇ ಇದ್ದೇವೆ. (ಮತ್ತು) । **ಕಾಮಾನ್**—(ನಮ್ಮ)ಇಷ್ಟಾರ್ಥಗಳನ್ನು । **ಉಪ ಸೃಜಾಮಹೇ**—(ನಿನ್ನಲ್ಲಿ) ಒಪ್ಪಿಸಿಕೊಳ್ಳುತ್ತೇವೆ । **ಅಥ**— ಅನಂತರ । **ನಃ**—ನಮಗೆ । **ಅವಿತಾ**—ರಕ್ಷಕನಾಗಿ । **ಭವ** ಆಗು ।

ಭಾವಾರ್ಥ

ಪರಾಕ್ರಮಶಾಲಿಯಾದ ಎಲೈ ಇಂದ್ರನೇ, ನಾವು ಸೋಮರಸವನ್ನು ಹಿಂಡಿದಾಗ ನಮ್ಮ ಸ್ನೇಹಿತನಾಗಿ ಬಂದು ನಮ್ಮ ಶಕ್ತ್ಯುತ್ಪಾದನೆಗಾಗಿಯೂ ಧನಲಾಭಕ್ಕಾಗಿಯೂ ಸೋಮರಸ ಪಾನಮಾಡಿ ಸಂತೃಪ್ತನಾಗು. ನೀನು ಅತ್ಯಧಿಕವಾದ ಧನವಂತನೆಂದು ನಾವು ತಿಳಿದೇ ಇದ್ದೇವೆ. ಆದ್ದರಿಂದ ನಮ್ಮ ಇಷ್ಟಾರ್ಥಗಳನ್ನು ನಿನ್ನಲ್ಲಿ ಒಪ್ಪಿಸಿಕೊಳ್ಳುತ್ತೇವೆ. ಆ ಇಷ್ಟಾರ್ಥಗಳನ್ನು ನೆರವೇರಿಸಿಕೊಡುವುದರಿಂದ ನಮ್ಮ ರಕ್ಷಕನಾಗಿ ಆಗು

English Translation

O hero, enjoy with us the Soma-libation for increasing our strength and wealth ; we know you to be the possesser of vast riches and express our desire to you ; be therefore our protector

ವಿಶೇಷನಿಷಯಗಳು

ಸಚಾ—ಸಚೆ ಸಹೇತ್ಯರ್ಥಃ (ನಿ.೩-೫) ಸಚಾ ಎಂದರೆ ಸಹಿತವಾಗಿ ಎಂದರ್ಥವು.

ಶವಸೇ— ಬಲಾಭಿವೃದ್ಧಿಗಾಗಿ. ಓಜಃ ಪಾಜಃ ಮೊದಲಾದ ಇಪ್ಪತ್ತೈಂಟುಬಲನಾಮಗಳ ಮಧ್ಯದಲ್ಲಿ ಶವಸ್ ಶಬ್ದವು ಪಠಿತವಾಗಿರುವುದು (ನಿ ೩-೯)

ರಾಧಸೇ—ಧನಾರ್ಥವಾಗಿ, ಧನಲಾಭಕ್ಕಾಗಿ. ಮಘಂ ರೇಕ್ಣಃ ಮೊದಲಾದ ಇಪ್ಪತ್ತೈಂಟು ಧನನಾಮಗಳಲ್ಲಿ ರಾಧಸ್ ಶಬ್ದವು ಪಠಿತವಾಗಿದೆ. (ನಿ ೩-೯)

ಪುರುವಸುಂ—ಬಹಳ ಧನವುಳ್ಳವನು.

ಉಪ ಸಸೃಜ್ಮಹೇ— ಸೃಜ ವಿಸರ್ಗೇ । ನಮ್ಮ ಇಷ್ಟಾರ್ಥಗಳನ್ನು ನಿನ್ನಲ್ಲಿ ನಿವೇದಿಸಿಕೊಳ್ಳುತ್ತೇನೆ ಅರಿಕೆಮಾಡಿಕೊಳ್ಳುತ್ತೇನೆ

ಅನಿತಾ—**ಅವ ರಕ್ಷಣೇ** । ಕಾಪಾಡುವವನು, ಸಂರಕ್ಷಕನು.

॥ ವ್ಯಾಕರಣಪ್ರಕ್ರಿಯಾ ॥

ಮಾವಯೇಸ್ವ—ಸುವ ತೃಪ್ತಿಯೋಗೆ ಧಾತು. ಚುರಾದಿ. **ಸತ್ಯಾಪಪಾಶ** (ಪಾ. ಸೂ ೫-೪-೭೦) ಎಂಬುದರಿಂದ ಸ್ವಾರ್ಥದಲ್ಲಿ ಣಿಚ್ ಬರುತ್ತದೆ **ಣಿಚಶ್ಚ** (ಪಾ. ಸೂ. ೧-೩-೭೪) ಎಂಬುದರಿಂದ ಣಿಜಂತವಾದರೂ ಉಭಯಪದಿಯಾದರೂ ಆಕರ್ಮಕಾದ್ಯಾತ್ಮನೇಪದಿನೇ ಎಂದು ವಿಶೇಷವಾಗಿ ವಿಧಿಸಿರುವುದರಿಂದ ಈ ಧಾತುವು ಆತ್ಮನೇಪದಿಯಾಗಿರುವುದರಿಂದ ಕೇವಲ ಆತ್ಮನೇಪದಿಯಾಗಿದೆ. ಸನಾದ್ಯಂತವಾದುದರಿಂದ ಧಾತುಸಂಜ್ಞೆಯನ್ನು ಹೊಂದಿದೆ. ಣಿಚ್ ಪರದಲ್ಲಿರುವಾಗ ಧಾತುವಿನ ಉಪಧೆಗೆ **ಅತ ಉಪಧಾಯಾಃ** (ಪಾ ಸೂ. ೭-೭-೧೧೬) ಸೂತ್ರದಿಂದ ದೀರ್ಘ ಬರುತ್ತದೆ ಣಿಜಂತದ ಮೇಲೆ ಲೋಟ್ ಮಧ್ಯಮಪುರುಷೈಕವಚನ ಪ್ರತ್ಯಯವಾದಾಗ ಮಾದಿ+ಸ್ವ ಎಂದಾಗುತ್ತದೆ- ಶಪ್ ವಿಕರಣಪ್ರತ್ಯಯ ಬಂದಾಗ ಧಾತುವಿನ ಇಕಾರಕ್ಕೆ ಗುಣಾಯಾದೇಶಗಳು ಬರುತ್ತವೆ. **ತಾಸ್ಯನುದಾತ್ತೇತ್** (ಪಾ ಸೂ. ೬-೧-೧೭೬) ಎಂಬುದರಿಂದ ಶಪ್ ವಿಕರಣದಲ್ಲಿ ಶಕಾರಪಕಾರ ಇತ್ತಾಗುವುದರಿಂದ ಅನುಪದೇಶವಾಗಿದೆ ಎಂಬ ತಾತ್ಪರ್ಯದಿಂದ ಅನುಬಂಧಗಳು ಅನವಯವಗಳು ಎಂಬ ತಾಪ್ಪರ್ಯದಿಂದಲೂ ಅನುಪದೇಶದ ಪರದಲ್ಲಿರುವುದರಿಂದ ಲಸ್ವಾನಿಕ ಸಾರ್ವಧಾತುಕವು ಅನುದಾತ್ತನಾಗುತ್ತದೆ ಆಗ ಣಿಚಿನ ಸ್ವರವೇ ಸತಿಶಿಷ್ಟವಾಗುವುದರಿಂದ ಣಿಚ್ಚಿನ ಸ್ವರವೇ ಉಳಿಯುತ್ತದೆ.

ಸಸೃಜ್ಮಹೆ—ಸೃಜ ವಿಸರ್ಗೆ ಧಾತು. ದಿವಾದಿ. **ವ್ಯತ್ಯಯೋ ಬಹುಲಂ** (ಪಾ. ಸೂ. ೩-೧-೮೫) ಎಂಬುದರಿಂದ ಶ್ಯನ್ನಿಗೆ ಬದಲಾಗಿ ಶ್ಲುಸಿಕರಣ ಬರುತ್ತದೆ ಲಟ್ ಉತ್ತಮಪುರುಷ ಬಹುವಚನ ಪರದಲ್ಲಿರುವಾಗ ಶ್ಲು ನಿಮಿತ್ತವಾಗಿ ಧಾತುವಿನಿಗೆ ದ್ವಿತ್ವ ಬರುತ್ತದೆ. ಅಭ್ಯಾಸದ ಆದಿಯಲಿಗೆ ಶೇಷ ಬಂದಾಗ ಸಸೃಜ್ಮಹೆ ಎಂದಾಗುತ್ತದೆ. ಪ್ರತ್ಯಯದ ಆದ್ಯುದಾತ್ತಸ್ವರವು ಸತಿಶಿಷ್ಟವಾದುದರಿಂದ ಪ್ರತ್ಯಯಸ್ವರ ಬಂದಿದೆ. ತಿಜಂತದ ಪರದಲ್ಲಿರುವ ತಿಜಂತಕ್ಕೆ ಅನುದಾತ್ತಸ್ವರವು ಸ್ಥಾನ್ಯಾವಾಗಿ ಬರುತ್ತದೆ. ಆನಂತರ **ಛಂದಸ್ಯನೇಕಮಪಿ ಸಾಕಾಂಕ್ಷಂ** (ಪಾ. ಸೂ ೮-೧-೨೪) ಏ ಎಂಬುದರೊಡನೆ ಕೂಡಿಬರುವ ಸಾಕಾಂಕ್ಷನಾದ ಅನೇಕ ತಿಜಂತಗಳು ಅನುದಾತ್ತವಾಗುವಲ್ಲಿ ಅಪಿ ಶಬ್ದದಿಂದ ಏಕವಾದ ತಿಜಂತಸ್ಥ ನಿಘಾತವನ್ನು ಹೊಂದುವುದಿಲ್ಲ ಎಂಬುದರಿಂದ ಇಲ್ಲಿ ಸ್ಥಾನಿನ ಏ ಎಂಬುದರೊಡನೆ ಸಂಬಂಧವಿರುವುದರಿಂದ ಸರ್ವಾನುದಾತ್ತ ಪ್ರತಿಷೇಧ ಬಂದಿದೆ. ॥ ೮ ॥

ಸಂಹಿತಾಪಾಠಃ

ಏತೇ ತ ಇಂದ್ರ ಜಂತವೋ ವಿಶ್ವಂ ಪುಷ್ಯಂತಿ ವಾರ್ಯಂ।
ಅಂತರ್ಹಿ ಖ್ಯೋ ಜನಾನಾಮರ್ಯೋ ವೇದೋ ಅದಾಶುಷಾಂ
ತೇಷಾಂ ನೋ ವೇದ ಆ ಭರ ॥ ೯ ॥

ಪದಪಾಠಃ

ಏತೇ । ತೇ । ಇಂದ್ರ । ಜಂತವಃ । ವಿಶ್ವಂ । ಪುಷ್ಯಂತಿ । ವಾರ್ಯಂ ।
ಅಂತಃ । ಹಿ । ಖ್ಯಃ । ಜನಾನಾಂ । ಅರ್ಯಃ । ವೇದಃ । ಅದಾಶುಷಾಂ। ತೇಷಾಂ।
ನಃ । ವೇದಃ । ಆ । ಭರ ॥ ೯ ॥

ಸಾಯಣಭಾಷ್ಯಂ

ಹೇ ಇಂದ್ರ ತೇ ತವ ಸ್ವಭೂತಾ ಏತೇ ಜಂತವೋ ಯಜಮಾನಲಕ್ಷಣಾ ಜನಾ ವಿಶ್ವಂ ಸರ್ವಂ ವಾರ್ಯಂ ಸರ್ವೈಃ ಸಂಭಜನೀಯಂ ಹವಿಃ ಪುಷ್ಯಂತಿ। ವರ್ಧಯಂತಿ। ಅದಾಶುಷಾಂ ಹವಿಷಾಮದಾತೄಣಾಂ ಜನಾನಾಮಂತರ್ಮಧ್ಯೇ ವಿದ್ಯಮಾನಂ ವೇದೋ ಧನಮರ್ಯಃ ಸರ್ವೇಷಾಂ ಸ್ವಾಮಿ ತ್ವಂ ಖ್ಯೋ ಹಿ । ಪಶ್ಯಸಿ ಹಿ । ಜಾನಾಸೀತ್ಯರ್ಥಃ। ತೇಷಾಮಯಜಮಾನಾನಾಂ ವೇದೋ ಧನಂ ನೋಽಸ್ಮಭ್ಯಮಾ ಭರ । ಆಹರ । ಪ್ರಯಚ್ಛೇತಿ ಯಾವತ್ । ಆಯಜಮಾನೇಷು ವಿದ್ಯಮಾನಂ ಧನಂ ಯೋಗಾನುಪಯುಕ್ತತ್ವಾ-ದ್ವ್ಯರ್ಥಮೇವ ಭವೇತ್ । ಅತಸ್ತಸ್ಯ ಧನಸ್ಯ ಸಾರ್ಧಕತ್ವಾಯ ತದೀಯಂ ಧನಮುಪಹೃತ್ಯ ಯಜಮಾ-ನೇಭ್ಯಃ ಪ್ರಯಚ್ಛೇತಿ ತಾತ್ಪರ್ಯಾರ್ಥಃ॥ ಖ್ಯಃ । ಖ್ಯಾ ಪ್ರಕಥನೇ । ಆಯಂ ವರ್ತಮಾನಾರ್ಥೋಽಪಿ । ವರ್ತಮಾನೇ ಛಾಂದಸೋ ಲುಙ್ । ಅಸ್ಯತಿವಕ್ತಿಖ್ಯಾತಿನಾ ಚ್ಲೇರಙಾದೇಶಃ । ಆತೋ. ಲೋಪೇ ಇಟಿ ಚೇತ್ಯಾಕಾರಲೋಪಃ । ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ । ಹಿ ಚೇತಿ ನಿಘಾತ-ಪ್ರತಿಷೇಧಃ ।' ೯ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ, । ತೇ—ನಿನಗೆ ಸೇರಿದ । ಏತೇ ಜಂತವಃ—(ಯಜ್ಞಮಾಡತಕ್ಕ) ಈ ಸಕಲ ಜನರೂ । ವಿಶ್ವಂ—ಸಮಸ್ತವಾದುದೂ । ವಾರ್ಯಂ—(ಎಲ್ಲರಿಗೂ) ಜೀಕಾಗುದೂ ಆದ ಹವಿಸ್ಸನ್ನು । ಪುಷ್ಯಂತಿ—

ಬೆಳೆಸುತ್ತಾರೆ. (ಅರ್ಪಿಸುತ್ತಾರೆ) । **अदाशुषाम्**—ಹವಿಸ್ಸನ್ನು ಅರ್ಪಿಸದಿರುವ । **जनानाम् अंतेः**—(ಶತ್ರು) ಜನಗಳಲ್ಲಿರತಕ್ಕ । **वेदः**—ಧನವನ್ನು । **अर्यः**—(ಎಲ್ಲರಿಗೂ ಒಡೆಯನಾದ ನೀನು । **ख्यः हि**—ತಿಳಿದೇ ಇದ್ದೀಯೆ । **तेषाम्**—(ಯಜ್ಞವಮಾಡದಿರುವ) ಆ ಜನಗಳ । **वेदः**—ಧನವನ್ನು । **नः**—ನನಗೆ । **आ भर** ತಂದುಕೊಡು ॥

ಭಾವಾರ್ಥ

ಎಲೈ ಇಂದ್ರನೇ, ನಿನ್ನ ಯಾಜಮಾನ್ಯಕ್ಕೆ ಸೇರಿದ ಈ ಸಕಲ ಯಜ್ಞಕರ್ತರೂ ಸಹ ಎಲ್ಲರಿಗೂ ಭೋಗ್ಯವಾದ ಹವಿಸ್ಸನ್ನು ಸಂಪೂರ್ಣವಾಗಿ ಬೆಳೆಯುವಂತೆ ಮಾಡುತ್ತಾರೆ. ಯಜ್ಞವನ್ನು ಮಾಡದೇ ಹವಿಸ್ಸನ್ನು ಅರ್ಪಿಸದೇ ಇರುವ ಜನರಲ್ಲಿರತಕ್ಕ ಧನವನ್ನು ಎಲ್ಲವಕ್ಕೂ ಒಡೆಯನಾದ ನೀನು ಅರಿತೇ ಇದ್ದೀಯೆ. ಹಾಗೆ ಯಜ್ಞಮಾಡದೇ ವ್ಯರ್ಥ ಮಾಡತಕ್ಕ ಧನವನ್ನು ತಂದು ಯಜ್ಞಮಾಡಿಸಾರ್ಥಕವಾಗಿ ಉಪಯೋಗಿಸತಕ್ಕ ನಮಗೆ ತಂದುಕೊಡು.

English Translation

O Indra, these creatures (men) cherish the libation that may be desired by all, lord of all, you know what riches those men who make no offerings, possess; bring their wealth to us.

॥ ವಿಶೇಷವಿಷಯಗಳು ॥

ತೇ ಜಂತವಃ— ಇಲ್ಲಿ ಜಂತವಃ ಎಂಬ ಶಬ್ದವು ಪ್ರಾಣಿಗಳೆಂಬ ಅರ್ಥವನ್ನು ಸೂಚಿಸುವುದಾದರೂ ಮನುಷ್ಯರೆಂಬ ಅರ್ಥವನ್ನೇ ಹೇಳಬೇಕು. ತೇ ಎಂದರೆ ನಿನ್ನ ಅಥವಾ ಈ ಎಂಬ ಯಾವ ಅರ್ಥವನ್ನು ಬೇಕಾದರೂ ಹೇಳಬಹುದು. ನನಗೆ ಹವಿಸ್ಸರ್ಪಿಸುವ ಯಜಮಾನಸಂಬಂಧಿಯಾದ ಜನರು ಎಂಬರ್ಥವೇ ಯುಕ್ತವು

पुष्यंति—ಪೋಷಿಸುತ್ತಾರೆ. cherish. ಎಂದರೆ ಅಪೇಕ್ಷಿಸುತ್ತಾರೆ

सार्व्यं—सर्व्येः संभजनीयं । ಎಲ್ಲರಿಗೂ ಭೋಕ್ತಾವೆ ; ಎಲ್ಲರೂ ಅಪೇಕ್ಷಿಸುವ.

ख्यः नेदः—**ख्या प्रकथने, ईद ऐश्वर्ये** ಈ ಎರಡು ಶಬ್ದಗಳೂ ಸಮಾನಾರ್ಥ ವಾಚಕಗಳು

अदाशुषाम्—ಕೊಡದಿರುವ ಎಂದರೆ ಇಂದ್ರನಿಗೆ ಹವಿಃ ಪ್ರದಾನಾದಿಗಳನ್ನು ಅರ್ಪಿಸದಿರುವ ; ಯಜ್ಞ ಮಾಡದಿರುವವರ

ನಿರುಕ್ತಪ್ರಕ್ರಿಯಾ

ख्यः—ख्या प्रकथने ಧಾತು. ಅದಾದಿ ಇದು ದರ್ಶನರೂಪಾರ್ಥದಲ್ಲಿಯೂ ಇವೆ. **छंदसि लुङ्-लङ्-लिटः** (ಪಾ. ಸೂ. ೩-೪-೬) ಧಾತ್ವರ್ಥ ಸಂಬಂಧವಿರುವಾಗ ಸರ್ವಕಾಲದಲ್ಲಿಯೂ ಈ ಮೂರು ಲಕಾರಗಳು ಬರುತ್ತವೆ ಎಂಬುದರಿಂದ ಇಲ್ಲಿ ವರ್ತಮಾನಾರ್ಥದಲ್ಲಿ ಲುಙ್ ಬಂದಿದೆ. ಮಧ್ಯಮಪುರುಷೈಕವಚನ ವಿವಕ್ಷಾ ಮಾಡಿದಾಗ ಸಿಪ್ ಪ್ರತ್ಯಯ ಬರುತ್ತದೆ. **च्लिलुङि** (ಪಾ. ಸೂ. ೩-೧-೪೩) ಎಂಬುದರಿಂದ ಲುಙಾನಲ್ಲಿ **च्लि**

ವಿಕರಣವು ಬರುತ್ತದೆ. ಚ್ಲಿಗೆ **ಅಸ್ಯತಿವಕ್ತಿಖ್ಯಾತಿಭ್ಯೋ೭ಙ್** (ಪಾ. ಸೂ. ೩-೧-೫೨) ಎಂಬುದರಿಂದ ಅಙ್ ಎಂಬ ಆದೇಶ ಬರುತ್ತದೆ. ಖ್ಯಾ+ಅ+ಸ್ ಎಂದಿರುವಾಗ **ಆತೋಲೋಪಃ ಇಟಿ ಚ** ಸೂತ್ರದಿಂದ ಧಾತುವಿನ ಆಕಾರಕ್ಕೆ ಲೋಪ ಬರುತ್ತದೆ. ಲುಙ್ನಲ್ಲಿ ಹಲಾದಿಯಾದ ಧಾತುವಿಗೆ ಅಡಾಗಮ ಪ್ರಾಪ್ತವಾಗುತ್ತದೆ. ಆದರೆ **ಬಹುಲಂ ಛಂದಸ್ಯಮಾಙ್ಯೋಗೇ೭ಪಿ** (ಪಾ. ಸೂ. ೬-೪-೭೫) ಛಂದಸ್ಸಿನಲ್ಲಿ ಮಾಙ್ಯೋಗವಿಲ್ಲದಿದ್ದರೂ ಅಟ್ ಆಟ್ ಆಗಮಗಳು ಧಾತುವಿಗೆ ಬರುವುದಿಲ್ಲವೆಂಬುದರಿಂದ ಇಲ್ಲಿ ಯಾವ ಯೋಗವಿಲ್ಲದಿದ್ದರೂ ಅಡಾಗಮವು ಬರುವುದಿಲ್ಲ. **ಓಚಿ** (೪-೧-೩೪) ಓ ಎಂಬುದರಿಂದ ಕೂಡಿಕೊಂಡ ತಿಙಂತವು ಸರ್ವಾನುದಾತ್ತವಾಗುವುದಿಲ್ಲವೆಂಬುದರಿಂದ ಇಲ್ಲಿ ತಿಙತಿಙಃ ಎಂಬ ಸೂತ್ರದಿಂದ ಪ್ರಾಪ್ತವಾದ ಸರ್ವಾನುದಾತ್ತಸ್ವರವು ಬರುವುದಿಲ್ಲ. ॥ ೯ ॥

ಎಂಭತ್ತೈರಡನೆಯ ಸೂಕ್ತವು

ಉಪೋ ಷ್ಣಿತಿ ಷಡ್ಚಂ ನವಮಂ ಸೂಕ್ತಂ ಗೋತಮಸ್ಯಾರ್ಷ್ಟ್ಯೌಂದ್ರಂ । ಅಂತ್ಯಾ ಜಗತೀ । ಆದ್ಯಾಃ ಪಂಕ್ತ್ಯಃ । ಅನುಕ್ರಾಂತಂ ಚ । ಉಪೋಷು ಷಟ್ ಜಗತ್ಯಂತಮಿತಿ ॥ ಸೂಕ್ತವಿನಿಯೋಗೋ ಲೈಂಗಿಕಃ ॥ ಷೋಡಶಿಶಸ್ತ್ರ ಆದ್ಯಾ ಸುಸಂದೃಶಮಿತ್ಯಾದಿಕೇ ದ್ವೇ ಋಚೌ ಚ ವಿನಿಯುಜ್ಯತೇ । ಅಥ ಷೋಡಶೀತಿ ಖಂಡೇ ಸೂತ್ರಿತಂ । ಉಪೋ ಷು ಶೃಣುಹೀ ಗಿರಃ ಸುಸಂದೃಶಂ ತ್ವಾ ವಯಂ ಮಘವನ್ನಿತ್ಯೇಕಾ ದ್ವೇ ಚ ಪಂಕ್ತ್ಯೇ । (ಆ. ೬-೨) ಇತಿ

ತನುವಾದವು— **ಉಪೋ ಷು** ಎಂಬುವುದು ಈ ಹದಿಮೂರನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಈ ಸೂಕ್ತದಲ್ಲಿ ಆರು ಋಕ್ಕುಗಳಿರುವುವು. ಗೋತಮನೇ ಋಷಿಯು. ಇಂದ್ರನು ದೇವತೆಯು. ಪಂಕ್ತಿಛಂದಸ್ಸಿನ ಕೊನೆಯ ಋಕ್ಕು ಮಾತ್ರ ಜಗತೀಛಂದಸ್ಸಿನದು. ಸೂಕ್ತವಿನಿಯೋಗವು ಲೈಂಗಿಕವು. ಷೋಡಶಿ ಎಂಬ ಸೋಮಯಾಗ ವಿಶೇಷದಲ್ಲಿ ಮೊದಲನೆಯ ಋಕ್ಕು ಮತ್ತು **ಸುಸಂದೃಶಂ, ಸ ಘಾತಂ ವೃಷಣಂ** ಎಂಬ ಎರಡು ಋಕ್ಕುಗಳು ಶಸ್ತ್ರಮಂತ್ರಪಠನದಲ್ಲಿ ಪಂಕ್ತಿಛಂದಸ್ಸಿನ ಋಕ್ಕುಗಳನ್ನು ಪರಿಸುವಾಗ ವಿನಿಯೋಗಿಸಲ್ಪಡುವವು. ಈ ವಿಷಯವು ಆಶ್ವಲಾಯನ ಶ್ರೌತಸೂತ್ರದ **ಅಥ ಷೋಡಶೀ** ಎಂಬ ಖಂಡದಲ್ಲಿ **ಉಪೋ ಷು ಶೃಣುಹೀ ಗಿರಃ ಸುಸಂದೃಶಂ ಮಘವನ್ನಿತ್ಯೇಕಾ ದ್ವೇ ಚ ಪಂಕ್ತ್ಯೇ** ಎಂಬ ಸೂತ್ರದಿಂದ ವಿನ್ಯತನಾಗಿರುವುದು. (ಆ. ೬-೬)

॥ ಓಂ ॥

ಸೂಕ್ತ—೮೨

॥ ಮಂಡಲ—೧ ॥ ಅನುವಾಕ—೧೩ ॥ ಸೂಕ್ತ—೮೨ ॥

॥ ಅಷ್ಟಕ—೧ ॥ ಅಧ್ಯಾಯ—೬ ॥ ವರ್ಗ—೩ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ— ೬ ॥

॥ ಋಷಿಃ—ಗೋತಮೋ ರಾಹೂಗಣಃ ॥

॥ ದೇವತಾ—ಇಂದ್ರಃ ॥

॥ ಛಂದಃ—೧-೪ ಪಂಕ್ತಿಃ । ೫, ೬ ಜಗತೀ ॥

ಉಪ್ರೋ ಷು ಶೃಣುಹೀ ಗಿರೋ ಮಘವನ್ಮಾತಥಾ ಇವ ।
ಯದಾ ನಃ ಸೂನೃತಾವತಃ ಕರ ಆದರ್ಥಯಾಸ ಇದ್ಯೋಜಾ
ನ್ವಿಂದ್ರ ತೇ ಹರೀ ॥೧॥

ಪದಪಾಠಃ

ಉಪ್ರೋ ಇತಿ । ಸು । ಶೃಣುಹಿ । ಗಿರಃ । ಮಘವನ್ । ಮಾ । ಅತಥಾಃ ಇವ ।
ಯದಾ । ನಃ । ಸೂನೃತಾವತಃ । ಕರಃ । ಆತ್ । ಅರ್ಥಯಾಸೇ । ಇತ್ ।
ಯೋಜ । ನು । ಇಂದ್ರ । ತೇ । ಹರೀ ಇತಿ ॥೧॥

ಸಾಯಣಭಾಷ್ಯಂ

ಹೇ ಮಘವನ್ ಧನವನ್ನಿಂದ್ರ ಗಿರೋ೨ಸ್ಮದೀಯಾಃ ಸ್ತುತೀರುಪೋ ಉಪೈವ ಸು ಶೃಣುಹಿ । ಉಪಗತ್ಯ ಸಮ್ಯಕ್ ಶೃಣು । ಅತಥಾ ಇವ ಪೂರ್ವಂ ಯಥಾವಿಧಸ್ತ್ವಂ ತದ್ವಿಪರೀತೋ ಮಾ ಭೂಃ । ಅಸ್ಮಾಸು ಪೂರ್ವಂ ಯೆಥಾನುಗ್ರಹಬುದ್ಧಿಯುಕ್ತಸ್ತಥಾವಿಧ ಏವ ಭವೇತ್ಯರ್ಥಃ । ಅಪಿ ಚ ನೋ೨ಸ್ಮಾ-ಸೂನೃತಾವತಃ । ಪ್ರಿಯಸತ್ಯಾತ್ಮಿಕಾ ವಾಕ್ ಸೂನೃತಾ । ತಯಾ ಸ್ತುತಿರೂಪಯಾ ವಾಚಾ ಯುಕ್ತಾನ್ಯಡಾ ಕೆರಃ ಕರೋಷಿ ಆದನಂತರಂ ತ್ವಮಸ್ಮಭ್ಯಮರ್ಥಯಾಸ ಇತ್ । ಅರ್ಥಯಸ ಏವ । ಯಾಚಯಸ ಏವ । ನ ತೂದಾಸ್ಯೇ । ಅಸ್ಮಾಭಿಃ ಪ್ರಯುಕ್ತಾಃ ಸ್ತುತೀಸ್ತ್ವಮಪಿ ಸ್ವೀಕರೋಷೀತ್ಯರ್ಥಃ । ಅತೋ ಹೇ ಇಂದ್ರ ತೇ ಹರೀ ತ್ವದೀಯಾವಶ್ವೌ ನು ಕ್ಷಿಪ್ರಂ ಯೋಜ । ರಥೇ ಯೋಜಯ ॥ ಶೃಣುಹಿ । ಉತಶ್ಚ ಪ್ರತ್ಯಯಾಚ್ಛಂದಸಿ ವಾ ವಚನಮಿತಿ ವಚನಾದುತಶ್ಚ ಪ್ರತ್ಯಯಾದಿತಿ ಹೇರ್ಲುಗಭಾವಃ । ಅತಥಾ ಇವ । ತಥೇನಾಚರತಿ ತಥಾತಿ । ಸರ್ವಪ್ರಾತಿಪದಿಕೇಭ್ಯ ಇತ್ಯೇಕೇ । ಕಾ. ೩-೧-೧೧-೨ । ಇತಿ ಕ್ವಿಪ್ । ತಥಾತೇರಪ್ರತ್ಯಯಃ । ನ ತಥಾ ಇವ ಅತಥಾ ಇವ । ಅವ್ಯಯೆಪೂರ್ವಪದಪ್ರಕೃತಿಸ್ವರತ್ವಂ । ಕರಃ । ಡುಕೃಞ್ ಕರಣೇ । ಲುಙಾ ಕೃಮೃದೃರು-ಹಿಭ್ಯಶ್ಛಂದಸೀತಿ ಚ್ಲೇರಜಾದೇಶಃ । ನನ್ಸಙಾ ಸತಿ ಶಿಷ್ಟತ್ವಾತ್ ಚಿಲ್ಸ್ಪರೇಣಾಂತೋದಾತ್ತೇನ ಭವಿತವ್ಯಂ । ತರ್ಹಿ ಲಙಾ ವ್ಯತ್ಯಯೇನ ಶಪ್ । ನನು ಡುಕೃಞ್ ಕರಣ ಇತಿ ಭೂವಾದಾ ಪಠ್ಯತೇ । ಅತೋ ವ್ಯತ್ಯಯಃ ಕಸ್ಮಾತ್ ಕ್ರಿಯತ ಇತಿ ಚೇತ್ ನೈವಂ । ಯಸ್ಮಾದಸ್ಯ ಧಾತೋಸ್ತತ್ರ ಪಾಠೋ೨ನಾರ್ಷಃ । ತಥಾ ಹಿ । ಕಃ ಕರತ್ಯರತೀತ್ಯತ್ರ ಯೆದಾಹತುರ್ನ್ಯಾಸಕಾರಹರದತ್ತೌ ವ್ಯತ್ಯಯೇನ ಶಬಿತಿ ತಸ್ಮಾದಸ್ಯ ಧಾತೋರ್ಭೂವಾದೌ ಪಾಠೋ ನಾಸ್ತೀತಿ ಗಮ್ಯತೇ । ಕಿಂಚ ಯದ್ಯಯಂ ಪಠ್ಯೇತ ಕರದಿತ್ಯೇವಮಾದಿರೂಪಸಿದ್ಧ್ಯರ್ಥಂ ಕೃಮೃದೃರುಹಿಭ್ಯಶ್ಛಂದಸೀತಿ ಕರೋತೇರಜ್ವಿಧಾನಮನರ್ಥಕಂ ಸ್ಯಾತ್ । ಅಸ್ಮಾಲ್ಲಙಾ ಶಪ್ಯಸ್ಯ ರೂಪಸ್ಯ ಸಿದ್ಧಿಃ । ಲಙ್ಲುಙೋರರ್ಥಭೇದಾಲ್ಲುಙ್ಯೀತದ್ರೂಪಸಿದ್ಧಯೇ ಕರ್ತವ್ಯಮಜ್ವಿಧಾನಮಿತಿ ಚೇನ್ನ । ಛಂದಸಿ ಲುಙ್ಲಙ್ಲಿಟ ಇತಿ ಲುಙಾದೀನಾಮೇಕತ್ರ ವಿಧಾನೇನಾರ್ಥಭೇದಾಭಾವಾದಿತ್ಯನೇನ ಪ್ರಕಾರೇಣಾ-ಸ್ಮಾಭಿರ್ಧಾತುವೃತ್ತ್ಯಾನಯೆಂ ಧಾತುರ್ನಿರಾಕೃತಃ । ಅತೋ ವ್ಯತ್ಯಯೇನೇತಿ ಸಿದ್ಧಂ । ಅರ್ಥ ಯಾಚ್ಞಾಯಾಂ । ಚುರಾದಿರಾತ್ಮನೇಪದೀ । ಲೇಟ್ಯಾಡಾಗಮಃ । ಯೋಜ । ಯುಜಿರ್ ಯೋಗೇ । ಣ್ಯಂತಾಲ್ಲೋಟಿ ಛಂದಸ್ಯುಭಯಥೇತಿ ಶಪ್ ಆರ್ಧಧಾತುಕತ್ವಾಣ್ಣೇರನಿಟೀತಿ ಣಲೋಪಃ । ವ್ಯತ್ಯಯೋ೨-ತಸ್ತಿಙಿ ಇತಿ ಸಂಹಿತಾಯಾಂ ದೀರ್ಘತ್ವಂ ॥ ೧ ॥

ಪದಾರ್ಥಃ ॥

ಮಘವನ್—ಧನವಂತನಾದ ಇಂದ್ರನೇ । **ಗಿರಃ**—(ನಮ್ಮ) ಸ್ತೋತ್ರವಾಕ್ಯಗಳನ್ನು । **ಉಪೋ** ಸನ್ನಿಹಿತನಾಗಿಯೇ ಬಂದು । **ಸು ಶೃಣುಹಿ**—ಚೆನ್ನಾಗಿ ಆಲಿಸಿ ಕೇಳು । **ಅತಥಾ ಇವ**—(ನಮ್ಮ ಪೂರ್ವ ಪ್ರಭೃತಿಗಳ ವಿಂತೆ) ಹಿಂದೆ ಇದ್ದುದಕ್ಕೆ ವ್ಯತ್ಯಾಸವಾಗಿ । **ಮಾ**—ಇರಬೇಡ । **ನಃ**—ನಮ್ಮನ್ನು । **ಸೂನೃತಾವತಃ**—ಪ್ರಿಯ ವಾಗಿಯೂ ಸತ್ಯಾತ್ಮಿಕವಾಗಿಯೂ ಇರುವ ವಾಕ್ಕುಳ್ಳ ವರನ್ನಾಗಿ । **ಯದಾ**—ಯಾವಾಗ । **ಕರಃ**—ಮಾಡುತ್ತೀಯೋ । **ಆತ್**—ಆ ಅನಂತರ । **ಅರ್ಥಯಸೇ ಇತ್**—(ಆ ಸ್ತೋತ್ರವಾಕ್ಯಗಳನ್ನು) ಬಂಡಿತನಾಗಿಯೂ ಅಪೇಕ್ಷಿಸು

ತ್ತೀಯೆ । (ಆನಂದಿಂದ) **ಇಂದ್ರ**— ಎಲೈ ಇಂದ್ರನೇ । **ತೇ**— ನಿನ್ನ । **ಹರೀ**— ಕುದುರೆಗಳನ್ನು । **ನು**— ಜಾಗ್ರತೆಯಾಗಿ । **ಯೋಜ**—(ರಥಕ್ಕೆ) ಸೇರಿಸಿಕಟ್ಟು.

ಭಾವಾರ್ಥ

ಎಲೈ ಧನವಂತನಾದ ಇಂದ್ರನೇ, ನಮ್ಮ ಸ್ತೋತ್ರವಾಕ್ಯಗಳನ್ನು ನಮ್ಮ ಸಮೀಪದಲ್ಲಿಯೇ ಬಂದು ಕೇಳು. ಹಿಂದೆ ನಮ್ಮ ಮೇಲೆ ಅಭಿಮಾನವನ್ನಿಟ್ಟಿದ್ದಂತೆಯೇ ಈಗಲೂ ಇನ್ನು ಮುಂದೆಯೂ ಇಡು. ಅದನ್ನು ಬದಲಾಯಿಸಬೇಡ. ನೀನು ಯಾವಾಗ ನಮ್ಮನ್ನು ಪ್ರಿಯವಾಗಿಯೂ ಸತ್ಯಾತ್ಮಿಕವಾಗಿಯೂ ಇರುವ ವಾಕ್ಯುಳ್ಳವರನ್ನಾಗಿ ಮಾಡುತ್ತೀಯೋ, ಆಗ ಖಂಡಿತವಾಗಿಯೂ ನಮ್ಮ ಸ್ತೋತ್ರಗಳನ್ನು ಅಪೇಕ್ಷಿಸಿಯೇ ತೀರುತ್ತೀಯೆ. ಆದ್ದರಿಂದ ಎಲೈ ಇಂದ್ರನೇ, ನಿನ್ನ ಕುದುರೆಗಳನ್ನು ಜಾಗ್ರತೆಯಾಗಿ ರಥಕ್ಕೆ ಸೇರಿಸಿ ಕಟ್ಟು. ಮತ್ತು ನಮ್ಮಲ್ಲಿಗೆ ದಯಮಾಡು.

English Translation

Indra, come and hear our praises ; do not be different from what you have been ; you have made us truth-speaking men and therefore you are requested to hear our praises. quickly yoke your horses.

ವಿಶೇಷವಿಷಯಗಳು

ಈ ಸೂಕ್ತದ ತಾರ್ಪರ್ಯವು ಸರಿಯಾಗಿ ಹೊಂದುವುದಕ್ಕಾಗಿ ಅನೇಕ ಪದಗಳನ್ನು ಅಧ್ಯಾಹಾರಮಾಡಬೇಕಾಗಿರುವುದು ತಾರ್ಪರ್ಯವು ಸರಿಯಾಗಿ ಹೊಂದುವುದಿಲ್ಲ. **ಈ** ಸೂಕ್ತದ ಮೊದಲನೇ ಐದು ಋಕ್ಕುಗಳಲ್ಲಿ ಕೊನೆಯ ಪಾದವಾದ **ಯೋಜಾ ನ್ವಿಂದ್ರ ತೇ ಹರೀ** ಎಂಬ ವಾಕ್ಯವು ಪುನಃ ಪುನಃ ಪಠಿತವಾಗಿರುವುದು. ಪಂಕ್ತಿಛಂದಸ್ಸಿನಲ್ಲಿ ಐದು ಪಾದಗಳಿರುವಷ್ಟು.

ಉಪೋ—ಸನಿಹಾವನಲ್ಲಿದ್ದುಕೊಂಡು ಅಥವಾ ಸಮೀಪಕ್ಕೆ ಬಂದು ಕೇಳು ಎಂದರ್ಥವು.

ಅತಥಾಇವ—**ನ ತಥಾ ಇವ ಅತಥಾ ಇವ** । ಹಿಂದೆ ಇದ್ದಂತಲ್ಲದೆ, ಬೇರೆ ವಿಧವಾಗಿ ಎಂದರೆ ಇದುವರಿಗೂ ನಮ್ಮಲ್ಲಿ ಅನುಗ್ರಹಬುದ್ಧಿಯನ್ನಿಟ್ಟಂತೆ ಈಗಲೂ ಆದೀತೀತಿ ಇರು. ಬೇರೆ ವಿಧವಾಗಿ ಇರಬೇಡ ಎಂದಭಿಪ್ರಾಯವು

ಸೂನೃತಾವತಃ— **ಸೂನೃತಾ** ಎಂದರೆ **ಪ್ರಿಯಸತ್ಯಾತ್ಮಿಕಾ ವಾಕ್**, ಪ್ರಿಯವೂ ಸತ್ಯವೂ ಆದ ಮಾತುಗಳು. ಅವುಗಳನ್ನುಳ್ಳವರನ್ನಾಗಿ ; ಎಂದರೆ ನಾವು ಮಾಡುವ ಸ್ತೋತ್ರರೂಪವಾದ ವಾಕ್ಯಗಳು ನಿನಗೆ ಪ್ರಿಯವಾಗಿಯೂ ಸತ್ಯದಿಂದ ಕೂಡಿಯೂ ಇರಲಿ ಎಂದಭಿಪ್ರಾಯವು.

ಅರ್ಥಯಾಸೇ— **ಯಾಚ್ಯಸೇ** । ಪ್ರಾರ್ಥಿಸಲ್ಪಡುತ್ತೀಯೆ ಎಂದರೆ ನಾವು ನಿನ್ನನ್ನು ಪ್ರಾರ್ಥಿಸುತ್ತೇವೆ

ಯೋಜ— ಛಂದಸ್ಸಿನ ಅನುಕೂಲಕ್ಕಾಗಿ ಈ ಶಬ್ದದ ಅಂತ್ಯಾಕ್ಷರವು ದೀರ್ಘವಾಗಿರುವುದು

ವ್ಯಾಕರಣಪ್ರಕ್ರಿಯಾ ॥

ಶೃಣುಹಿ—ಶ್ರು ಶ್ರವಣೇ ಧಾತು. ಭ್ವಾದಿ. ಲೋಟ್ ಮಧ್ಯಮಪುರುಷೈಕವಚನದ ಸಿಪ್ಪಿಗೆ ಏ ಆದೇಶ ಬಂದಿದೆ. **ಶ್ರುವಃ ಶೃಚ** (ಪಾ. ಸೂ ೩-೧-೭೪) ಶ್ರು ಧಾತುವಿಗೆ ಶೃ ಎಂಬ ಆದೇಶವೂ ಶಪ್ ಸ್ಥಾನದಲ್ಲಿ ಶ್ನುವಿ ಕರಣವೂ ಬರುತ್ತದೆ. ಶೃಣುಹಿ ಎಂದಿರುವಾಗ **ಉತೆಶ್ಚಪ್ರತ್ಯಯಾದಸಂಯೋಗಪೂರ್ವಾತ್** (ಪಾ. ಸೂ. ೬-೪-೧೦೬) ಎಂಬುದರಿಂದ ಉಕಾರಾಂತಪ್ರತ್ಯಯದ ಪರದಲ್ಲಿರುವ ಹಿಗೆ ಲುಕ್ ಪ್ರಾಪ್ತವಾದರೆ **ಉತೆಶ್ಚಪ್ರತ್ಯಯಾಚ್ಛಂದಸಿ ವನವಚನಂ** (ವಾರ್ತಿಕ) ಎಂಬುದರಿಂದ ವಿಕಲ್ಪವಿಧಾನಮಾಡಿರುವುದರಿಂದ ಹಿಗೆ ಲೋಪ ಬರುವುದಿಲ್ಲ.

ಅತಥಾ ಇವ—ತಥೇನ ಆಚರತಿ, ತದನಂತರ ಆಚರಿಸುತ್ತಾನೆ, ಎಂಬರ್ಥದಲ್ಲಿ ತಥಾತಿ ಎಂದು ಕ್ರಿಯಾಪದವಾಗುತ್ತದೆ **ಸರ್ವಪ್ರಾತಿಪದಿಕೇಭ್ಯಃ ಕ್ವಿಬ್ವಾ ವಕ್ತವ್ಯಃ** (ಕಾ. ವಾ ೩ ೧-೮-೨) ಎಲ್ಲಾ ಪ್ರಾತಿಪದಿಕದ ಮೇಲೂ ಆಚರಿಸುತ್ತಾನೆ ಎಂಬರ್ಥದಲ್ಲಿ ಕ್ವಿಪ್ ಪ್ರತ್ಯಯ ಬರುತ್ತದೆ. ಸನಾದಿಯಲ್ಲಿ ಕ್ವಿಪ್ ಸೇರಿರುವುದರಿಂದ ತದಂತಕ್ಕೆ ಧಾತು ಸಂಜ್ಞೆ ಬರುತ್ತದೆ ಸ್ತ್ರಿಯಾಂ ಕ್ತಿನ್ ಎಂಬ ಅಧಿಕಾರದಲ್ಲಿ, **ಆಪ್ರತ್ಯಯಾತ್** (ಪಾ. ಸೂ. ೩-೩-೧೦೨) ಪ್ರತ್ಯಯಾಂತವಾದ ಧಾತುವಿನ ಮೇಲೆ ಸ್ತ್ರೀಲಿಂಗವಿಷಯಕ್ಕೆ ಇರುವಾಗ ಆ ಎಂಬ ಕೃತ್ಪ್ರತ್ಯಯವು ಬರುತ್ತದೆ ತದಂತವಾದುದರಿಂದ ಟಾಪ್ಪ್ರತ್ಯಯ ಬಂದಿದೆ ಸ ತಥಾ ಇವ ಅತಥಾ ಇವ (ಹಾಗೆ ಆದಂತೆ ಆಚರಿಸದಿರುವುದು.) **ತತ್ಪುರುಷೆ ತುಲ್ಯಾರ್ಥ** (ಪಾ. ಸೂ. ೬-೩-೨) ಎಂಬುದರಿಂದ ಅವ್ಯಯಸ್ವೂರ್ವಪದಪ್ರಕೃತಿ ಸ್ವರವು ಬಂದಿದೆ.

ಕರಃ—ಡುಕೃಞ್ ಕರಣೆ ಧಾತು ಲುಙ್ ಮಧ್ಯಮಪುರುಷೈಕವಚನ. ಲುಙ್ ವರೆಗೆಲ್ಲಿರುವಾಗ ಚ್ಲಿವಿಕರಣ ಬಂದರೆ ಅದಕ್ಕೆ ಸಿಜಾದೇಶ ಪ್ರಾಪ್ತವಾಗುತ್ತದೆ ಇಲ್ಲಿ **ಕೃ ಮೃ ದೃರುಹಿಭ್ಯಶ್ಛಂದಸಿ** (ಪಾ. ಸೂ. ೩-೧-೫೯) ಎಂಬುದರಿಂದ ಚ್ಲಿಗೆ ಅಜಾದೇಶ ಬಂದಿದೆ. **ವ್ಯತ್ಯಯೋ ಬಹುಲಂ** ಎಂಬುದರಿಂದ ಅಜ್ ಇ ತಪ್ಪಾದರೂ ಧಾತುವಿಗೆ ಗುಣಬರುತ್ತದೆ. **ಬಹುಲಂ ಛಂದಸ್ಯಮಾಙ್ ಯೋಗೇಽಪಿ** (ಪಾ. ಸೂ. ೬-೪-೭೫) ಎಂಬುದರಿಂದ ಮಾಙ್ ಯೋಗವಿಲ್ಲದಿದ್ದರೂ ಧಾತುವಿಗೆ ಅಡಾಗಮ ಬಂದಿಲ್ಲ ಕರತ್+ಸ್ ಎಂದಿರುವಾಗ ರುತ್ವವಿಸರ್ಗಗಳು ಬಂದರೆ ಕರಃ ಎಂದಾಗುತ್ತದೆ. ಇಲ್ಲಿ ಚ್ಲಿಪ್ರತ್ಯಾನಕ್ಕೆ ಅಜಾದೇಶ ಬಂದಿದೆ ಆದುದರಿಂದ ಇಲ್ಲಿ ಚಿಣ್ಣ್ಪರದಿಂದ ಅಂತೋದಾತ್ತವಾಗಲಿ ಎಂದು ಶಂಕಿಸಬಹುದು. ಅಜ್ ಸ್ವರಕ್ಕೆ ಇಲ್ಲಿ ಪ್ರಾಬಲ್ಯವಿರುವುದಿಲ್ಲ ಸತಿಶಿಷ್ಯಸ್ವರಬಲೀಯಸ್ತ್ವಮನ್ಯತ್ರ ವಿಕರಣೇಭ್ಯಃ ಎಂದು ವಿಕರಣದಲ್ಲಿ ಆ ನ್ಯಾಯವು ಬರುವುದಿಲ್ಲ. ಆದುದರಿಂದ **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತುದಾತ್ತವಾಗಲಿ ಎನ್ನಲು ಅವಕಾಶವಿದೆ. ಬೇಗೆ ಶಂಕೆ ಬಂದರೆ ಇಲ್ಲಿ ಲಕಾರವ್ಯತ್ಯಾಸದಿಂದ ಸಮಾಧಾನ ಹೇಳಬೇಕು. ಅಂದರೆ ಲಙ್ ಲಕಾರವನ್ನು ಆಶ್ರಯಿಸುವುದರಿಂದ ದೋಷಕ್ಕೆ ಅವಕಾಶವಿಲ್ಲ. ಲುಙ್‌ನಲ್ಲಿ ಚ್ಲಿವಿಕರಣ ಬರುವುದಿಲ್ಲ. ಉವಿಕರಣ ಪ್ರಾಪ್ತವಾದರೆ ವ್ಯತ್ಯಯದಿಂದ ಶಪ್ ವಿಕರಣವನ್ನು ಹೇಳಬೇಕು ಅಡಾಗಮವು ಹಿಂದೆ ಹೇಳಿದಂತೆ ಬರುವುದಿಲ್ಲ. ಇದರಿಂದ ಉಕ್ತರೂಪಸಿದ್ಧಿಯೂ ಅಸಿಷ್ಟಸ್ವರ ನಿರಾಸವೂ ಆಗುವುದು ಆದರೆ ಹೀಗೆ ಮಾಡುವಾಗ ಇನ್ನೊಂದು ತೊಡಕಿರುತ್ತದೆ. ಡುಕೃಞ್‌ಕರಣೆ ಎಂಬುದು ಭ್ವಾದಿಯಲ್ಲಿ ಪಾಠ ಮಾಡಲ್ಪಟ್ಟಿದೆ. ಭ್ವಾದಿಗೆ ಸ್ವಭಾವಸಿದ್ಧವಾದ ಶಪ ವಿಕರಣಪ್ರತ್ಯಯವಿರುವಾಗ ಇಲ್ಲಿ **ವ್ಯತ್ಯಯೋ ಬಹುಲಂ** ಎಂಬುದನ್ನು ಆಶ್ರಯಿಸಿ ಏಕೆ ಶಪ್ ವಿಕರಣವನ್ನು ತ್ಯಜಿಸಬೇಕು? ಎಂದು ಶಂಕಿಸಬಹುದು. ಈ ಶಂಕೆಯು ನಿರ್ಮಾಣರಮಣೀಯವಾದದ್ದು. ಕೃಞ್ ಧಾತುವನ್ನು ಭ್ವಾದಿಯಲ್ಲಿ ಪಾಠಮಾಡಿರುವುದು ಮಂಗಳಸಮನ್ವಿತವಲ್ಲ ಏನು ತಾತ್ಪರ್ಯವಾತ ಆದುದರಿಂದಲೇ **ಕಃ ಕರತ್ ಕರತಿಕೃಧಿಕೃತೇಷ್ವದಿತೇಃ** (ಪಾ ಸೂ ೨-೪-೬೦) ಎಂಬ ಸೂತ್ರ

ನಲ್ಲಿ ಕರತ್ ಕರತಿ ಎಂದು ಪಾಣಿನಿಗಳು ಹೇಳಿದುದು ಅಸಂಗತವಾಗುತ್ತದೆ. ವಾಸ್ತವವಾಗಿಯೂ ಕರೋತಿ ಎಂಬುಚ್ಚರಿಸಬೇಕಿತ್ತು ಎಂದು ಶಂಕಿಸಿ ಕರತಿ ಎಂಬ ರೂಪಸಿದ್ಧಿಗೋಸ್ಕರ ನ್ಯಾಸಕಾರ ಹರದತ್ತರು ವ್ಯತ್ಯಯದಿಂದ ಶಪ್ ಬಂದಿದೆ ಎಂದು ಸಮಾಧಾನ ಹೇಳಿರುವರು. ಸೂತ್ರವೂ ಛಂದಸ್ಸೆಂದೇ ಪರಿಗಣಿಸಲ್ಪಟ್ಟಿದೆ. ಆದುದರಿಂದ ಇವಕ್ಕೆ ಭ್ವಾದಿಯಲ್ಲಿ ಪಾಠವಿಲ್ಲವೆಂದು ತಿಳಿಯುತ್ತದೆ. ಇನ್ನೊಂದು ಜ್ಞಾಪಕವನ್ನೂ ಹೇಳಬಹುದು. ಕರತ್, ಕರತಿ ಇತ್ಯಾದಿರೂಪಸಿದ್ಧಿಗೋಸ್ಕರವೇ ಹಿಂದೆ ಹೇಳಿದಂತೆ **ಕೃಮೃದೃರುಹಿಭ್ಯಶ್ಛಂದಸಿ** ಎಂದು ಕೃಧಾತುವಿಗೆ ಅಜ್ಪ್ರತಿಧಾನ ಮಾಡಿರುವರು. ಇಲ್ಲವಾದರೆ ಹಾಗೆ ಅಜ್ಪ್ರತಿಧಾನಕ್ಕೆ ವೈಯರ್ಥ್ಯ ಬರಬೇಕಾಗುತ್ತದೆ. ಆದುದರಿಂದ ಅಂತೋದಾತ್ತ ಸ್ವರ ಪ್ರಾಪ್ತವಾದರೆ ಹಿಂದೆ ಹೇಳಿದಂತೆ ಲಜನ್ನು ಆಶ್ರಯಿಸಿ ವ್ಯತ್ಯಯದಿಂದ ಶಬ್ಪ್ರಿಕರಣದಿಂದ ರೂಪಸಿದ್ಧಿಯಾಗುತ್ತದೆ. ಇಲ್ಲಿ ಸೂತ್ರಜ್ಞಾಪಕದಿಂದ ಕೃಞ್ ಧಾತುವು ಭ್ವಾದಿಯಲ್ಲಿ ಇಲ್ಲ ಎಂಬುದರಲ್ಲಿ ಪೂರ್ವಪಕ್ಷಿಯು ಆಕ್ಷೇಪಿಸುತ್ತಾನೆ. ಲುಙ್ ಮತ್ತು ಲಙ್ ಲಕಾರಗಳಿಗೆ ವಾಸ್ತವವಾದ ಅರ್ಥಭೇದವಿದೆ. ಆದುದರಿಂದ ಲುಙಂನಲ್ಲಿ ಮಾತ್ರ ರೂಪಸಿದ್ಧಿಯಾಗಬೇಕೆಂದು ಕೃನ್ನು ಸೂತ್ರದಲ್ಲಿ ಅಙ್ವಿಧಾನಮಾಡಿರುತ್ತಾರೆ. ಆದುದರಿಂದ ನ್ಯಾಯಪ್ರಾಪ್ತಿಗೆ ಅವಕಾರನಿಲ್ಲ ಇದರಿಂದ ಭ್ವಾದಿಯಲ್ಲಿ ಇಲ್ಲವೆಂದು ಜ್ಞಾಪಿಸಲು ಎಡೆಯಿಲ್ಲವೆಂದು ಅವನ ಅಭಿಸ್ರಾಯ. ಆದರೆ ಇದು ಸರಿಯಾದುದಲ್ಲ. ಛಂದಸ್ಸಿನಲ್ಲಿ ಕಾಲತ್ರಯವಿಶಿಷ್ಟವೂ ಯಾವ ವ್ಯತ್ಯಾಸವೂ ಇಲ್ಲದೇನೇ **ಛಂದಸಿ ಲುಙ್ಲಙ್ಲಿಟಃ** (ಪಾ. ಸೂ. ೩-೪-೬) ಎಂಬ ಸೂತ್ರದಿಂದ ಮೂರು ಲಕಾರಗಳು ಬರುತ್ತವೆ. ಆದ್ದರಿಂದ ಅರ್ಥಭೇದವು ಎಲ್ಲಿಂದ ಬರಬೇಕು? ಇದನ್ನು ಆಶ್ರಯಿಸಿಯೇ ನ್ಯಾಸಕಾರಹರದತ್ತರ ಮತವನ್ನೂ ಸೂತ್ರಜ್ಞಾಪಕವನ್ನೂ ನಾವು ಆಶ್ರಯಿಸಿ ಭ್ವಾದಿಯಲ್ಲಿ ಈ ಧಾತುಪಾಠವಿಲ್ಲವೆಂದು ನಿರಾಕರಿಸಿದ್ದೇನೆ. ರೂಪಸಿದ್ಧಿಗೋಸ್ಕರ **ವ್ಯತ್ಯಯೋ ಬಹುಲಂ** ಎಂಬುದನ್ನು ಆಶ್ರಯಿಸಿರುತ್ತೇನೆ.

ಅರ್ಥಯಾಸೆ—ಅರ್ಥ ಯಾಚ್ಞಾಯಾಂ ಧಾತು. ಚುರಾದಿ. ಆಕುಸ್ವಾದಾತ್ಮನೇಪದಿನಃ ಎಂದು ಸೀಷನ್ನು ವಿಧಾನಮಾಡಿರುವುದರಿಂದ ಣಿಚ್ಚನ್ನು ಹೊಂದಿದರೂ ಕೇವಲ ಆತ್ಮನೇಪದಪ್ರತ್ಯಯಗಳನ್ನು ಹೊಂದುತ್ತದೆ. ಲೇಟ್ ಮಧ್ಯಮಪುರುಷೈಕವಚನ. **ಲೇಟೋ೭ಡಾಟೌ** (ಪಾ ಸೂ ೩-೪-೯೪) ಸೂತ್ರದಿಂದ ಲೇಟಿನ ತಿಙಿಗೆ ಆಡಾಗಮ ಬಂದಿದೆ ಶಪ್ ವಿಕರಣ ಬಂದಾಗ ಣಿಚ್ಚಿಗೆ ಗುಣಾಯಾದೇಶಗಳು ಬರುತ್ತವೆ.

ಯೋಜ—ಯುಜಿರ್ ಯೋಗೆ ಧಾತು. ರುಧಾದಿ. ಪ್ರೇರಣಾರ್ಥದಲ್ಲಿ **ಹೇತುಮತಿಚ** (ಪಾ. ಸೂ ೩-೧-೨೬) ಎಂಬುದರಿಂದ ಣಿಚ್ ಪ್ರತ್ಯಯ ಬರುತ್ತದೆ. ಣಿಚ್ ಪರವಲ್ಲಿರುವಾಗ **ಪುಗಂತಲಘೂಪಧಸ್ಯ ಚ** (ಪಾ. ಸೂ. ೭-೩-೮೬) ಎಂಬುದರಿಂದ ಧಾತುವಿನ ಉಪಧೆಗೆ ಗುಣಬರುತ್ತದೆ ಯೋಜಿ ಎಂಬ ಣ್ಯಂತರೂಪವು ಸನಾದ್ಯಂತವಾದುದರಿಂದ ಧಾತುಸಂಜ್ಞೆಯನ್ನು ಹೊಂದುತ್ತದೆ. ವಿಧ್ಯರ್ಥದಲ್ಲಿ ಲೋಟ್ ಮಧ್ಯಮಪುರುಷೈಕವಚನಕ್ಕೆ ಸಿ ಎಂಬ ಆದೇಶವು ಬರುತ್ತದೆ ಶಪ್ ವಿಕರಣಪ್ರತ್ಯಯವು ಬರುತ್ತದೆ. **ಛಂದಸ್ಯುಭಯಥಾ** (ಪಾ.ಸೂ. ೩-೪-೧೧೭) ಎಂಬುದರಿಂದ ಶಪ್ ವಿಕರಣಕ್ಕೆ ಆರ್ಧಧಾತುಕಸಂಜ್ಞೆಯು ಬರುತ್ತದೆ ಯೋಜಿ+ಅ+ಸಿ ಎಂದಿರುವಾಗ **ಣೇರನಿಟಿ** (ಪಾ. ಸೂ ೬-೪-೫೧) ಅನಿಟಾದಿಯಾದ ಆರ್ಧಧಾತುಕವು ಪರವಲ್ಲಿರುವಾಗ ಣಿಗೆ ಲೋಪ ಬರುತ್ತದೆ. ಎಂಬುದರಿಂದ ಇಲ್ಲಿ ಣಿಗೆ ಲೋಪ ಬರುತ್ತದೆ ಅತೋ ಹೇಃ ಎಂಬುದರಿಂದ ಅಕಾರನ ಪರವಲ್ಲಿರುವ ಹಿಗೆ ಲೋಪ ಬರುತ್ತದೆ ಯೋಜ್+ಅ ಯೋಜ ಎಂದು ಸಿದ್ಧವಾಗುತ್ತದೆ. **ಧ್ವ್ಯಚೋ೭ತಸ್ತಿಙಃ** (ಪಾ. ಸೂ ೬-೩-೬೫) ಸ್ವಯಚ್ಕನಾದ ತಿಙಂತದ ಕೊನೆಯ ಅಕಾರಕ್ಕೆ ದೀರ್ಘ ಬರುತ್ತದೆ ಎಂಬುದರಿಂದ ನುಂತ್ರದಲ್ಲಿ ಯೋಜಾ ಎಂದು ದೀರ್ಘಬಂದಿದೆ.॥೧೫॥

संहितापाठः

अक्ष॒न्नमी॑मदन्त ह्य॒व प्रि॒या अ॑धूषत ।
अस्तो॑षत स्वभा॒नवो॒ विप्रा॒ नवि॑ष्ठया म॒ती योजा॒
न्विन्द्र॒ ते॒ हरी ॥ ३ ॥

पदपाठः

अक्ष॑न् । अमी॑मदन्त । हि । अ॒व । प्रि॒याः । अ॒धू॒ष॒त॒ ।
अस्तो॑षत । स्व॒ऽभा॒नवः । विप्रा॑ः । नवि॑ष्ठया । म॒ती । योज॑ । नु ।
इन्द्र॑ । ते॒ । हरी॒ इति॑ ॥ ३ ॥

॥ सायणभाष्यं ॥

हे इन्द्र त्वया दत्तान्यन्नान्यक्षन् । यजमाना भुक्तवन्तः । भुक्त्वा चामीमदन्त हि । तृप्ता इत्यर्थः । प्रियाः स्वकीयाः स्तनूरवाधूषत । अकम्पयन् । अतिशयितरसान्यदनेन वक्तुमशक्नुवन्तः शरीराण्यकम्पयन् । तदनन्तरं स्वभानवः स्वायत्तदीप्तयो विप्रा मेधाविनस्ते नविष्ठया नवितमया मतीमत्या स्तुत्याऽस्तोषत । असुवन् । अनित्पूर्ववदोर्ज्यः ॥ अक्षन् । अदेर्लुङ् लुङ्सनोर्घस्लृ । पा. २-४-३७ । इति घसादेशः । मन्त्रे घसेत्यादिना च्लेर्लुक् । गमहनेत्यादिनोपधालोपः । झरि चेति चर्त्वं । शासिवसिघसीनां चेति षत्वं । अडागमः उदात्तः । अमीमदन्त । मदे तृप्तियोगे । चुरादिरात्मनेपदी । लुङ् च्लेश्चङ् णिलोपोपधाह्रस्वस्वप्त्वद्विर्भावसन्वद्भावेत्वदीर्घाः । अधूषत । धूञ् कम्पने । लुङ् सिचि व्यत्ययेन गुणाभावः । यदा । धुंदस्यृभयथेति सिचः सार्वधातुकत्वेन ङित्त्वात् क्ङिति चेति प्रतिषेधः । अथवा धूञ् विधूनने । तौदादिकः । कुटादिः । अस्मात्सर्वधातुभ्यो लुङ् गाङ्कुटादिभ्य इति सिचो ङित्त्वाद्गुणाभावः । नविष्ठया । णु स्तुतौ । करणभूतायया अपि स्तुतेः स्वव्यापारे कर्तृत्वात्तृच् । तदन्तात् तुश्छन्दसीतीष न्प्रत्ययः । तुरिष्ठेमेय-

ಯೋಽಸ್ಮಿತಿ ತೃಲೋಪಃ । ಮತೀ । ಸುಷಾಂ ಸುಲುಗಿತಿ ತೃತೀಯಾಯಾಃ ಪೂರ್ವಸವರ್ಣದೀರ್ಘತ್ವಂ । ಮಂತ್ರೇ ವೃಷೇಷಪಚನುನೇತಿ ಕ್ತಿನ ಉದಾತ್ತತ್ವಂ ॥ ೨ ॥

॥ ಸೃತಿಸದಾರ್ಥ ॥

ಇಂದ್ರ---ಎಲೈ ಇಂದ್ರನೇ । **ಅಕ್ಷನ್**—(ನೀನು ದಯಪಾಲಿಸಿದ ಅನ್ನಗಳನ್ನು) ತಿಂದವರಾಗಿ । **ಅಮೀ-ಮದಂತ ಹಿ**—(ಯಜಮಾನರು) ಸಂಪೂರ್ಣವಾಗಿ ತೃಪ್ತರಾದರು. । **ಪ್ರಿಯಾಃ**— (ತಮ್ಮ) ಪ್ರಿಯವಾದ ದೇಹ ಗಳನ್ನು । **ಅನ ಅಧೂಷತ**— (ಸಂತೋಷಾತಿಶಯದಿಂದ) ಚೆನ್ನಾಗಿ ಕಂಪಿಸುವಂತೆ ಮಾಡಿದರು. (ಎಂದರೆ ಸಂತೋಷದಿಂದ ತಲೆಯೂಗಿದರು) । **ಸ್ವಭಾನವಃ**— ಸ್ವಯಂ ಪ್ರಕಾಶಕರೂ । **ವಿಪ್ರಾಃ**— ಮೇಧಾವಿಗಳೂ ಆದ ಅವರು । **ನವಿಷ್ಠಯಾ**— ಅತ್ಯಂತ ಹೊಸದೂ ಮತ್ತು ಶ್ರೇಷ್ಠವೂ ಆದ । **ಮತೀ**—ಸ್ತೋತ್ರದಿಂದ । **ಅಸ್ತೋ-ಷತ**— (ನಿನ್ನನ್ನು) ಸ್ತುತಿಸಿದ್ದಾರೆ. (ಆದ್ದರಿಂದ) । **(ಇಂದ್ರ**— ಎಲೈ ಇಂದ್ರನೇ) । **ತೇ**— ನಿನ್ನ । **ಹರೀ**— ಕುದುರೆಗಳನ್ನು । **ನು**— ಜಾಗ್ರತೆಯಾಗಿ । **ಯೋಜ**—(ರಥಕ್ಕೆ) ಸೇರಿಸಿಕಟ್ಟು ।

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ದಯಪಾಲಿಸಿದ ಅನ್ನಗಳನ್ನು ತಿಂದು ನಿನ್ನ ಭಕ್ತರಾದ ಯಜಮಾನರು ಸಂಪೂರ್ಣ ವಾಗಿ ತೃಪ್ತರಾದರು ಮತ್ತು ತಮ್ಮ ಅತಿಶಯವಾದ ಸಂತೋಷವನ್ನು ತಮ್ಮ ದೇಹಗಳ ಕಂಪನದ ಮೂಲಕ ವ್ಯಕ್ತಪಡಿಸಿದರು. ಎಂದರೆ ಸಂತೋಷಸೂಚಕವಾಗಿ ತಲೆಯನ್ನಲ್ಲಾಡಿಸಿದರು. ಸ್ವಯಂ ಪ್ರಕಾಶಕರೂ, ಮೇಧಾವಿ ಗಳೂ ಆದ ಆ ಯಜಮಾನರು ಅತ್ಯಂತ ಹೊಸದೂ ಶ್ರೇಷ್ಠವಾದುದೂ ಆದ ಸ್ತೋತ್ರದಿಂದ ನಿನ್ನನ್ನು ಸ್ತುತಿಸಿದ್ದಾರೆ ಆ ಸ್ತೋತ್ರವನ್ನು ಕೇಳುವುದಕ್ಕಾಗಿ ನಿನ್ನ ಕುದುರೆಗಳನ್ನು ರಥಕ್ಕೆ ಕಟ್ಟಿಕೊಂಡು ಜಾಗ್ರತೆಯಾಗಿ ದಯಮಾಡು.

English Translation

Your worshippers have eaten the food which you had given and they are satisfied with it, they have expressed their satisfaction by the movements of their bodies Self-inspired and wise men have glorified you with commendable praises, therefore, Indra quickly yoke your horses.

ವಿಶೇಷವಿಷಯಗಳು

ಅಕ್ಷನ್—ಅವ ಭಕ್ಷಣೇ । ತಿಂದವರು

ಅಧೂಷತ— ಅತಿಶಯಿತರಸಾಸ್ವಾದನೇನ ವಕ್ತುಮಶಕ್ನುವಂತಃ ಶರೀರಾಣ್ಯಕಂಪಯನ್ । ಇಂದ್ರನು ಕೊಟ್ಟ ಆಹಾರವು ಬಹಳ ರುಚಿಕರವಾಗಿದ್ದುದರಿಂದ ಅದನ್ನು ತಿಂದು ತನ್ನು ಮೆಚ್ಚುಗೆಯನ್ನೂ ತೃಪ್ತಿ ಯನ್ನೂ ಸೂಚಿಸುವುದಕ್ಕಾಗಿ ಶರೀರವನ್ನು ಅಥವಾ ತಲೆಯನ್ನಲ್ಲಾಡಿಸಿದರೆಂಬರ್ಥವಾಗುವುದು. ಲೋಕ ವ್ಯವಹಾರದಲ್ಲಿ ಸಂಗೀತಾದಿಪ್ರವಣಕಾರಿಯಾಗಿ ನನು ಮನಸ್ಸಿಗೆ ಉಂಟಾಗುವ ಹರ್ಷಾತಿಶಯವನ್ನು ನಾವು ಬಾಯಿನಿಂದ ಹೇಳುವು

ದಕ್ಕೆ ಬದಲಾಗಿ ನಮ್ಮ ಮೆಚ್ಚುಗೆಯನ್ನು ಸೂಚಿಸುವುದಕ್ಕೆ ತಲೆಯನ್ನಲ್ಲಾಡಿಸುವುದು ರೂಢಿಯಲ್ಲಿದೆ. ಇದರಂತೆ ಇಲ್ಲಿಯೂ ಊಹಿಸಿಕೊಳ್ಳಬೇಕು.

ಸ್ವಭಾನವಃ—ಸ್ವಾಯತ್ತದೀಪ್ತಯಃ । ಸ್ವಪ್ರಕಾಶಮಾನರು ಎಂದರೆ ತಮ್ಮ ಬುದ್ಧಿಯಿಂದಲೇ ಎಲ್ಲವನ್ನು ಗ್ರಹಿಸುವವರು, ಬಹಳ ಬುದ್ಧಿವಂತರು, ಬಹುಚುರುಕಾದ ಬುದ್ಧಿಯುಳ್ಳವರು.

ನವಿಷ್ಯವಾ—ಣು ಸ್ತುತೌ । ಸ್ತುತಿರೂಪವಾದ ಅಥವಾ ಪ್ರಶಂಸೆಯಿಂದ ಕೂಡಿದ.

ವ್ಯಾಕರಣಪ್ರಕ್ರಿಯಾ

ಅಕ್ಷನ್—ಅದ ಭಕ್ಷಣೆ ಧಾತು. ಅದಾಡಿ ಲುಙ್ ಪ್ರಥಮಪುರುಷ ಬಹುವಚನ. ಲುಙ್ ಪರದಲ್ಲಿರುವಾಗ **ಲುಙ್‌ಸನೋರ್ಘಸ್ಲೃ** (ಪಾ.ಸೂ. ೨-೪-೩೬) ಲುಙ್ ನುತ್ತು ಸನ್ ಪರದಲ್ಲಿರುವಾಗ ಅದ ಧಾತುವಿಗೆ ಘಸ್ಲೃ ಆದೇಶ ಬರುತ್ತದೆ ಎಂಬುದರಿಂದ ಇಲ್ಲಿ **ಘಸ್ಲೃ** ಆದೇಶ ಬರುತ್ತದೆ. ಲೃಕಾರವು ಇತ್ಸಂಜ್ಞೆಯನ್ನು ಹೊಂದುತ್ತದೆ ಚ್ಲಿಲುಙಃ ಎಂಬುದರಿಂದ ಸಾಮಾನ್ಯವಾಗಿ ಲುಙನಲ್ಲಿ ಚ್ಲಿನಿಕರಣ ಬಂದರೆ ಅದಕ್ಕೆ **ಮಂತ್ರೇ ಘಸಹ್ವರಣಶ** (ಪಾ.ಸೂ ೨-೪-೮೦) ಎಂಬುದರಿಂದ (ಲೋಪ) ಲುಕ್ ಬರುತ್ತದೆ. ಲುಙ್ ಬಹುವಚನದ ಝಿ ಪ್ರತ್ಯಯಕ್ಕೆ ಝೋಂತಃ ಎಂಬುದರಿಂದ ಅಂತಾದೇಶ ಬಂದು **ಇತಶ್ಚ** (ಪಾ. ಸೂ. ೩-೪-೧೦೦) ಎಂಬುದರಿಂದ ಕೊನೆಯ ಇಕಾರಕ್ಕೆ ಲೋಪಬಂದರೆ ಅನ್ ಎಂದು ಉಳಿಯುತ್ತದೆ. ಸಾರ್ವಧಾತುಕಮಸಿತ್ ಸೂತ್ರದಿಂದ ಇದು ಜಿತ್ವಾಗುತ್ತದೆ. ಘಸ್+ಅನ್ ಎಂದಿರುವಾಗ **ಗಮಹನಜನಖನಘಸಾಂ ಲೋಪಃ ಕ್ಙಿತ್ಯನಙಿ** (ಪಾ. ಸೂ. ೬-೪-೯೮) ಎಂಬುದರಿಂದ ಧಾತುವಿನ ಉಪಧೆಗೆ ಅನಾದಿಯಾದ ತ್ ಪ್ರತ್ಯಯ ಪರದಲ್ಲಿರುವುದರಿಂದ ಲೋಪ ಬರುತ್ತದೆ ಘಸ್+ಅನ್ ಎಂದಿರುವಾಗ ಘಕಾರಕ್ಕೆ ಸಕಾರರೂಪ ಖರ್ ಪರದಲ್ಲಿರುವುದರಿಂದ **ಚರ್ಖ್ಯ** ಬಂದರೆ ಕಕಾರಬರುತ್ತದೆ **ಶಾಸಿವಸಿಘಸೀನಾಂ ಚ** (ಪಾ. ಸೂ. ೮-೩-೬೦) ಇಸ್ ಕವರ್ಗದ ಪರದಲ್ಲಿರುವ ಇವುಗಳ ಸಕಾರಕ್ಕೆ **ಷತ್ವವು** ಬರುತ್ತದೆ ಎಂಬುದರಿಂದ ಇಲ್ಲಿ ಕಕಾರದ ಪರದಲ್ಲಿರುವ ಸಕಾರಕ್ಕೆ ಷತ್ವ ಬಂದರೆ ಕಷಯೋಗದಿಂದ ಕ್ಷಕಾರವಾಗುತ್ತದೆ. ಲುಙ್ ಪರದಲ್ಲಿರುವುದರಿಂದ ಧಾತುವಿಗೆ ಆಡಾಗಮ ಬರುತ್ತದೆ. ಆಗಮವಾದುದರಿಂದ ಉದಾತ್ತವಾಗಿದೆ ಅಕ್ಷನ್ ಎಂದು ಆದ್ಯುದಾತ್ತ ರಬ್ಬುವ ಸಿದ್ಧವಾಗುತ್ತದೆ.

ಅಮೀಮದಂತ—ಮದ ತೃಪ್ತಿಯೋಗೆ ಧಾತು ಚುರಾದಿ ಆಕಾರಾಂತವಾಗಿರುವುದರಿಂದ ನಿತ್ಯವಾಗಿ ಆತ್ಮನೇಪದಿ. ಚುರಾದಿಗೆ ಸ್ವಾರ್ಥಿಕವಾಗಿ ಣಿಚ್ ಬರುತ್ತದೆ. ಲುಙ್ ಪ್ರಥಮಪುರುಷ ಬಹುವಚನದ ಝಿ ಪ್ರತ್ಯಯಕ್ಕೆ ಅಂತಾದೇಶ ಬರುತ್ತದೆ. ಮದ್+ಇ+ಅಂತ ಎಂದಿರುವಾಗ ಲುಙ್ ಪರದಲ್ಲಿರುವಾಗ ಸಾಮಾನ್ಯ ಸ್ವಾಪ್ತವಾದ ಚ್ಲಿಗೆ **ಣೌಶ್ಚಿದ್ಯುಸ್ಯು** (ಪಾ. ಸೂ, ೩-೧-೪೮) ಎಂಬುದರಿಂದ ಚಙಾದೇಶ ಬರುತ್ತದೆ. ಮದ್+ಇ+ಚ+ಅಂತ ಣಿಚನ್ನು ಸಮಿತ್ತೀಕರಿಸಿ ಧಾತುವಿನ ಉಪಧೆಗೆ ದೀರ್ಘ ಬರುತ್ತದೆ. ಚಙ್ ಪರದಲ್ಲಿರುವಾಗ **ಣೇರನಿಟಿ** (ಪಾ.ಸೂ.೬-೪-೫೧) ಎಂಬುದರಿಂದ ಣಿಚ್ಚಿಗೆ ಲೋಪ ಬರುತ್ತದೆ. ಮಾದ್+ಅ+ಅಂತ ಎಂದಿರುವಾಗ **ಣೌ ಚಙ್ಯುಪಧಾಯಾ ಹ್ರಸ್ವಃ** (ಪಾ. ಸೂ. ೭-೪-೧) ಎಂಬುದರಿಂದ ಅಂಗದ ಉಪಧೆಗೆ ಹ್ರಸ್ವ ಬರುತ್ತದೆ. ಚಙ್ ಪರದಲ್ಲಿರುವುದರಿಂದ **ಚಙಿ** (ಪಾ. ಸೂ. ೬-೧-೧೧) ಎಂಬುದರಿಂದ ಧಾತುವಿಗೆ ದ್ವಿತ್ವಬರುತ್ತದೆ. ಹಲಾದಿಶೇಷ ಬಂದರೆ ಮಮದ್+ಅ+ಅಂತ ಎಂದಿರುವಾಗ **ಸನ್ವಲ್ಲಘುನಿ ಚಙ್‌ಪರೇ೨ನಗ್ಲೋಃಸೆ** (ಪಾ. ಸೂ ೭-೪-೯೩) ಎಂಬುದರಿಂದ


ಣಿ ಪರದಲ್ಲಿರುವುದರಿಂದ ಸನ್ನಿದ್ಭಾವ ಬರುತ್ತದೆ. ಸನ್ನಿದ್ಭಾವವಿರುವಾಗ **सनेतः** (ಪಾ. ಸೂ ೭-೪-೪೮) ಎಂಬುದರಿಂದ ಸನ್ ಪರದಲ್ಲಿರುವಾಗ ಬರುವ ಇತ್ವವು ಇಲ್ಲಿಯೂ ಅಭ್ಯಾಸಕ್ಕೆ ಬರುತ್ತದೆ. **दीर्घोऽकितः** (ಪಾ. ಸೂ. ೭-೪-೮೪) ಎಂಬುದರಿಂದ ಇತ್ಸಕ್ಕೆ ದೀರ್ಘವೂ ಬರುತ್ತದೆ. ಆಡಾಗಮ ಬಂದರೆ ಅಮಿಮಾಮದಂತ ಎಂದು ಸಿದ್ಧಿಯಾಗುತ್ತದೆ.

अधूषत—ಧೂಞ್ ಕಂಪನೆ. ಧಾತು. ಸ್ವಾದಿ. ಲುಙ್ ಪ್ರಥಮಪುರುಷ ಬಹುವಚನ. ಅಕಾರದ ಪರದಲ್ಲಿರದಿದ್ದುದರಿಂದ ಝಿ ಎಂಬುದಕ್ಕೆ ಅತಾದೇಶಬಂದಿದೆ. ಸಾಮಾನ್ಯಪ್ರಾಪ್ತವಾದ ಚ್ಲಿಗೆ ಸಿಚ್ ಬರುತ್ತದೆ **व्यत्ययो बहुलम्** ಎಂಬುದರಿಂದ **लङोपध** ಲಕ್ಷಣಗುಣವು ಬರುವುದಿಲ್ಲ. ಇಕ್ಕಿನ ಪರದಲ್ಲಿರುವುದರಿಂದ ಸಿಚ್ಚಿನ ಸಕಾರಕ್ಕೆ ಷತ್ವ ಬರುತ್ತದೆ. ಆಡಾಗಮ ಬಂದರೆ ಅಧೂಷತ ಎಂದು ರೂಪಸಿದ್ಧವಾಗುತ್ತದೆ ಇಲ್ಲಿ **धूदसुभ्यथा** (ಪಾ. ಸೂ. ೩-೪-೧೧೭) ಎಂಬುದರಿಂದ ಆರ್ಧಧಾತುಕವಾದ ಸಿಚ್ಚಿಗೆ ಸಾರ್ವಧಾತುಕತ್ವವನ್ನು ಸ್ವೀಕರಿಸಿದರೆ **सार्वधातुकमपित्** (ಪಾ. ಸೂ ೧-೨-೪) ಎಂಬುದರಿಂದ ಙಿತ್ತಾಗುತ್ತದೆ ಆಗ ಙಿತ್‌ಪ್ರತ್ಯಯ ಪರದಲ್ಲಿರುವುದರಿಂದ **क्ङिति च** (ಪಾ ಸೂ. ೧-೧-೫) ಎಂಬುದರಿಂದ ಗುಣವಾದೇಶವಾಗುತ್ತದೆ ಎಂದು ಮತಾಂತರ ವನ್ನೂ ಸ್ವೀಕರಿಸಬಹುದು. ಅಥವಾ ಧೂ ವಿಧೂನನೆ ಧಾತು. ತುದಾದಿ. ತುದಾದಿಯಲ್ಲಿಯೂ ಕುಟಾದಿಯಲ್ಲಿ ಸೇರಿದೆ. ಆದುದರಿಂದ **गाङ्कुटादिभ्यः** (ಪಾ. ಸೂ. ೧-೨-೧) ಎಂಬುದರಿಂದ ಪರದಲ್ಲಿರುವ ಙಿತ್ತು ಣಿತ್ತು ಆಗದೆ ಇರುವ ಸಿಚ್ ಪ್ರತ್ಯಯಕ್ಕೆ ಙಿತ್ವದ್ಭಾವ ಬರುತ್ತದೆ. ಧಾತುವಿಗೆ ಕರ್ಮಾರ್ಥದಲ್ಲಿ ಲುಙ್ ಬಾಡಿದಾಗ ಪ್ರಕೃತ ರೂಪಸಿದ್ಧಿಯಾಗುತ್ತದೆ. ಕರ್ಮುಲಕಾರದಲ್ಲಿ **भावकर्मणोः** ಎಂಬುದರಿಂದ ಆತ್ಮನೇಪದವು ಸಿದ್ಧವಾಗು ತ್ತದೆ. ಈ ಸಕ್ಷದಲ್ಲಿಯೂ ಪೂರ್ವಸೂತ್ರದಿಂದ ಗುಣಾಭಾವವು ಸಿದ್ಧವಾಗುತ್ತದೆ.

नविष्म्यो—ಣು ಸ್ತುತೌ ಧಾತು. ಅದಾದಿ. ಈ ಧಾತುವಿನ ಮೇಲೆ ಕರ್ತೃರ್ಥದಲ್ಲಿ ತೃಚ್‌ಪ್ರತ್ಯಯ. ಕರ್ತರಿ ಎಂದು ಅನುವೃತ್ತವಾಗುವಾಗ **ण्वुल्तृचौ** (ಪಾ. ಸೂ. ೩-೧-೧೩३) ಎಂಬುದರಿಂದ ವಿಹಿತವಾಗಿದೆ, ಇಲ್ಲಿ ಸ್ತೋತ್ರರೂಪ ಅರ್ಥವಿರುವುದರಿಂದ ಸ್ತುತಿಯು ಕರಣವಾಗುವಾಗ ಕರ್ತರಿತೃಚ್ ಪ್ರತ್ಯಯ ಹೇಗೆ ಬರುತ್ತದೆ ಎಂಬ ಶಂಕೆ ಬರುವುದು. ಆದರೆ ಆಯಾಯ ಕಾರಕಗಳಿಗೆ ಸ್ವಸ್ವವ್ಯಾಪಾರದಲ್ಲಿ ಪ್ರಾಧಾನ್ಯವಿರುವುದರಿಂದ ಇಲ್ಲಿ ಸ್ವವ್ಯಾಪಾರದಲ್ಲಿ ಕರ್ತೃವಾಗಿದೆಯೆಂದು **कर्तृर्धदल्** ಬರಲು ಸಂದೇಹವಿಲ್ಲ. ತೃಚ್ ಪರದಲ್ಲಿರುವಾಗ ಧಾತುವಿಗೆ ಗುಣ ಬರುತ್ತದೆ ಕ್ರೋಷ್ಟದೇಶವಾದುದರಿಂದ ಆದಿಗೆ ಸಕಾರಬರುತ್ತದೆ. ತೃಜಂತನಮೇಲೆ, **तुश्छन्दसि** (ಪಾ. ಸೂ. ೫-೪-೪೯) ತೃನ್ನಂತ ತೃಜಂತದ ಮೇಲೆ ಛಂದಸ್ಸಿನಲ್ಲಿ ಇಷ್ಯನ್ ಈಯಸುನ್ ಪ್ರತ್ಯಯಗಳು ಬರುತ್ತನೆ ಎಂಬುದರಿಂದ ಇಷ್ಯನ್ ಪ್ರತ್ಯಯ ಬರುತ್ತದೆ. ನವ್+ತೃ+ಇಷ್ಯ ಎಂದಿರುವಾಗ **तुरिष्ठेमेयःसु** (ಪಾ ಸೂ. ೬-೪-೧೫೪) ಇಷ್ಠನ್, ಇಮನ್, ಈಯಸುನ್ ಪ್ರತ್ಯಯಗಳು ಪರದಲ್ಲಿರುವಾಗ ತೃನ್ ತೃಚ್‌ಗಳಿಗೆ ಲೋಪಬರುತ್ತದೆ ಎಂಬುದರಿಂದ ಇಲ್ಲಿ ಇಷ್ಯನ್ ಪರದಲ್ಲಿರುವುದರಿಂದ ತೃಚ್ಚಿಗೆ ಲೋಪ ಬಂದರೆ ನವಿಷ್ಯ ಎಂದಾಗುತ್ತದೆ. ಸ್ತ್ರೀತ್ವ ವಿವಕ್ಷಾನವಾಡಿದಾಗ ಟಾಪ್ ಬರುತ್ತದೆ **तृतीयादिकृतेषु** ಉಕ್ತರೂಪಸಿದ್ಧಿಯಾಗುತ್ತದೆ.

मतीः—ತೃತೀಯಾದ್ಯೈಕವಚನವಾದ ಟಾ ಪರದಲ್ಲಿರುವಾಗ **सुसाम् सुलुक् पूर्वसवर्ण** (ಪಾ ಸೂ. ೭-೧-೩೯) ಎಂಬುದರಿಂದ ತೃತೀಯಾವಿಭಕ್ತಿಗೆ ಪೂರ್ವಸವರ್ಣದೀರ್ಘ ಬಂದಿದೆ. ಮನ್ ಧಾತುವಿಗೆ

ಸ್ತ್ರಿಯಾಂಕ್ತಿನ್ (ಪಾ. ಸೂ. ೩-೩-೯೪) ಎಂಬುದರಿಂದ ಕ್ತಿನ್ ಪ್ರತ್ಯಯ ಬಂದರೆ **ಅನುದಾತ್ತೋಪದೇಶ** ಎಂಬ ಸೂತ್ರದಿಂದ ನಲೋಪ ಬಂದರೆ ಮತಿ ಶಬ್ದವಾಗುತ್ತದೆ. **ಜ್ಞಾತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಎಂಬುದರಿಂದ ನಿದಂತವಾದುದರಿಂದ ಆದ್ಯುದಾತ್ತಪ್ರಾಪ್ತವಾದರೆ **ಮಂತ್ರೇ ವೃಷೇಷಪಚಮನವಿದಭೂವೀರಾ ಉದಾತ್ತಃ** (ಪಾ. ಸೂ ೩-೩-೯೬) ಇವುಗಳಿಗೆ ಕ್ತಿನ್ ಪ್ರತ್ಯಯಬರುತ್ತದೆ. ಅದು ಉದಾತ್ತವಾಗುತ್ತದೆ ಎಂಬುದರಿಂದ ಕ್ತಿನ್ ಉದಾತ್ತಸ್ವರವು ಸತಿಶಿಷ್ಟವಾದುದರಿಂದ ಅಂತೋದಾತ್ತನಾಗುತ್ತದೆ. ॥ ೨ ॥



ಸಂಹಿತಾ ೨

ಸುಸಂದೃಶಂ ತ್ವಾ ವಯಂ ಮಘವನ್ವಂದಿಷೀಮಹಿ ।
ಪ್ರ ನೂನಂ ಪೂರ್ಣವಂಧುರಃ ಸ್ತುತೋ ಯಾಹಿ ವಶಾಁ ಅನು
ಯೋಜಾ ನ್ವಿಂದ್ರ ತೇ ಹರೀ ॥ ೩ ॥

ಪದಪಾಠಃ

ಸು ಸಂದೃಶಂ । ತ್ವಾ । ವಯಂ । ಮಘ ವನ್ । ವಂದಿಷೀಮಹಿ ।
ಪ್ರ । ನೂನಂ । ಪೂರ್ಣ ವಂಧುರಃ । ಸ್ತುತಃ । ಯಾಹಿ । ವಶಾನ್ । ಅನು ।
ಯೋಜ । ನು । ಇಂದ್ರ । ತೇ । ಹರೀ ಇತಿ ॥ ೩ ॥

॥ ಸಾಯಣಭಾಷ್ಯಂ ॥

ಮಹಾಪಿತ್ರ್ಯಯಜ್ಞೇ ಸುಸಂದೃಶಮಿತ್ಯೇಷಾಹವನೀಯೋಪಸ್ಥಾಪನೇ ವಿನಿಯುಕ್ತಾ। ಸೂತ್ರಿತಂ ಚ। ಆಹವನೀಯಂ ಸುಸಂದೃಶಂ ತ್ವೇತಿ ಪಂಕ್ತ್ಯಾ । ಅ. ೨-೧೯ । ಇತಿ ॥

ಹೇ ಮಘವನ್ನಿಂದ್ರ ಸುಸಂದೃಶಂ ಸುಷ್ಟ್ವನುಗ್ರಹದೃಷ್ಟ್ಯಾ ಸರ್ವಸ್ಯ ದ್ರಷ್ಟಾರಂ ತ್ವಾ ತ್ವಾಂ ವಯಂ ವಂದಿಷೀಮಹಿ । ಸ್ತವಾಮಹಿ । ಸ್ತುತಿಕರ್ತಾರೋ ಭೂಯಾಸ್ಮೇತ್ಯಾಶಾಸ್ಯತೇ । ಅಸ್ಮಾಭಿರ್ವಂದಿಭಿಃ ಸ್ತುತಸ್ತ್ವಂ ಪೂರ್ಣವಂಧುರಃ ಸ್ತೋತೃಭ್ಯೋ ದೇಯೈರ್ಧನೈಃ ಪೂರಿತೇನ ರಥೇನ ಯುಕ್ತಃ ಸನ್ ವಶಾನ್ ಕಾಮಯಮಾನಾನನ್ಯಾನ್ಯಜಮಾನಾನ್ಪ್ರತಿ ನೂನಂ ಪ್ರ ಯಾಹಿ । ಅವಶ್ಯಂ ಪ್ರತಿಷ್ಠಸ್ವ । ಯೋಜೇತ್ಯಾದಿ ಪೂರ್ವವತ್ ॥ ವಂದಿಷೀಮಹಿ । ವದಿ ಅಭಿವಾದನಸ್ತುತ್ಯೋಃ । ಆಶೀರ್ಲಿಙ್ । ಲಿಙ್ಶಿಷಿ । ಪಾ. ೩-೪-೧೦೩ । ಇತಿ ತಸ್ಯಾರ್ಧಧಾತುಕತ್ವೇನ ಲಸಾರ್ವಧಾತುಕಸ್ವರಾಭಾವೇ ಪ್ರತ್ಯಯಾದ್ಯುದಾತ್ತತ್ವಂ। ಮಘವನ್ನಿತ್ಯಸ್ಯಾಮಂತ್ರಿತಂ ಪೂರ್ವಮನಿದ್ಯಮಾನವದಿತ್ಯನಿದ್ಯಮಾನವತ್ತ್ವೇ ಸತಿ ಪಾದಾದಿತ್ವಾನ್ನಿಘಾತಾಭಾವಃ ॥೩॥

ವ್ಯಾಕರಣಾರ್ಥ

ಮಘವನ್ ಇಂದ್ರ—ಧನವಂತನಾದ ಇಂದ್ರನೇ, । **ಸುಸಂದೃಶಂ**—(ಎಲ್ಲರ ಬೇಲೂ) ಅನುಗ್ರಹ ಬುದ್ಧಿಯಿಂದ ನೋಡತಕ್ಕ । **ತ್ವಾ**—ನಿನ್ನನ್ನು । **ವಯಂ**—ನಾವು । **ವಂದಿಷೀಮಹಿ**—(ನಮಸ್ಕರಿಸಿ) ಸ್ತೋತ್ರ ಮಾಡುತ್ತೇನೆ. । **ಸ್ತುತಃ**— (ನಮ್ಮಿಂದ) ಸ್ತುತನಾದ ನೀನು । **ಪೂರ್ಣವಂಧುರಃ**— (ಧನದಿಂದ) ಪೂರಿತನಾದ ರಥವುಳ್ಳವನಾಗಿ । **ವಶಾನ್**— (ನಿನ್ನನ್ನು) ಅಪೇಕ್ಷಿಸುವ ಯಜಮಾನರಲ್ಲಿಗೆ । **ನೂನಂ**— ಖಂಡಿತವಾಗಿಯೂ । **ಪ್ರ ಯಾಹಿ**—ಹೋಗಿ ಸೇರು. । **ತೇ**—ನಿನ್ನ । **ಹರೀ**—ಕುದುರೆಗಳನ್ನು । **ನು**—ಬೇಗನೆ । **ಅನುಯೋಜ**—(ರಥಕ್ಕೆ) ಸೇರಿಸಿ ಕಟ್ಟು

ಭಾವಾರ್ಥ

ಧನವಂತನಾದ ಇಂದ್ರನೇ. ನೀನು ಭಕ್ತರಾದ ನಮ್ಮೆಲ್ಲರ ಮೇಲೂ ಅನುಗ್ರಹ ಬುದ್ಧಿಯಿಂದ ನೋಡುತ್ತೀಯಿ. ಅಂತಹ ನಿನ್ನನ್ನು ನಾವು ನಮಸ್ಕರಿಸಿ ಸ್ತುತಿಸುತ್ತೇವೆ. ನಮ್ಮಿಂದ ಸ್ತುತನಾದ ನೀನು ಧನದಿಂದ ಪೂರಿತವಾದ ನಿನ್ನ ರಥವೊಡನೆ ನಿನ್ನನ್ನು ಅಪೇಕ್ಷಿಸುವ ಯಜಮಾನರಲ್ಲಿಗೆ ಹೋಗಿ ಸೇರು. ನಿನ್ನ ಕುದುರೆಗಳನ್ನು ಬೇಗನೆ ರಥಕ್ಕೆ ಸೇರಿಸಿ ಕಟ್ಟಿ ಅವರಲ್ಲಿಗೆ ಹೋಗಿ ಧನವನ್ನು ಹೆಂಚು.

English Translation

O Maghavan, we praise you, you look benignly upon all, praised by us go to those who desire your presence in your chariot well filled with riches, Indra, quickly yoke your horses.

ವಿಶೇಷವಿಷಯಗಳು

ಸುಬ್ರಹ್ಮಣ್ಯಪ್ರಯೋಜ್ಯವಲ್ಲಿ **ಸುಸಂದೃಶಂ** ಎಂಬ ಈ ಋಕ್ಕನ್ನು ಆಹವನೀಯಾಗ್ನಿಯನ್ನು ಉಪಸ್ಥಾನಮಾಡುವಾಗ ವಿನಿಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದಲ್ಲಿ—**ಆಹವನೀಯಂ ಸುಸಂದೃಶಂ ತ್ವೇತಿ ಪಂಕ್ತ್ಯಾ** ಎಂಬ ಸೂತ್ರನಲ್ಲಿ ನಿನ್ನ ತಂದಿದೆಯುವುದು (ಆ ೩-೧೯)

· ಸುಸಂದೃಶಂ—ಸುಷ್ಠು ಅನುಗ್ರಹದೃಷ್ಟ್ಯಾ ದೃಷ್ಟಾರಂ । ಸ್ತೋತ್ರಮಾಡುವವರನ್ನು ಅನುಗ್ರಹದೃಷ್ಟಿಯಿಂದ ನೋಡುವ ಇಂದ್ರನನ್ನು

ಪೂರ್ಣವಂಧುರಃ—ಪೂರ್ಣವಾದ ಎಂದರೆ ಸ್ತೋತ್ರಮಾಡುವವರಿಗೆ ಕೊಡಬೇಕಾದ ಧನಾದಿಗಳಿಂದ ಪೂರ್ಣವಾದ ರಥವುಳ್ಳವನು.

ವಶಾನ್—ಕಾಮಯಮಾನಾನನ್ಯಾನ್ । ನಿನ್ನನ್ನು ಅಪೇಕ್ಷಿಸುವ ಇತರ ಯಜಮಾನರನ್ನು ಎಂದರೆ ಯಜಮಾನರ ಬಳಿಗೆ ಹೋಗುವುದಕ್ಕಾಗಿ.

ವ್ಯಾಕರಣಪ್ರಕ್ರಿಯಾ

ವಂದಿಷೀಮಹಿ—ವದಿ ಅಭಿವಾದನಸ್ತುತ್ಯೋಃ ಧಾತು. ಭ್ವಾದಿ ಆಶೀರ್ಲಿಙ್ ಉತ್ತಮಪುರುಷ ಬಹುವಚನರೂಪ. ಧಾತುವು ಇದಿತ್ತಾದುದರಿಂದ **ಇದಿತೋನುಮ್ ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಪ್ರಾಗಮ ಬರುತ್ತದೆ. **ಲಿಙಃಸೀಯುಟ್** (ಪಾ. ಸೂ ೩-೪-೧೦೩) ಎಂಬುದರಿಂದ ಲಿಙ್‌ಗೆ ಸೀಯುಡಾಗಮ ಬರುತ್ತದೆ. **ಲಿಙಾಶಿಷಿ** (ಪಾ. ಸೂ. ೩-೪-೧೧೬) ಆಶೀರರ್ಥದಲ್ಲಿ ಬಂದಿರುವ ಲಿಙ್ ಆರ್ಧಧಾತುಕ ಸಂಜ್ಞೆಯನ್ನು ಹೊಂದುತ್ತದೆ ಎಂಬುದರಿಂದ ಇಲ್ಲಿ ಆರ್ಧಧಾತುಕ ಸಂಜ್ಞೆ ಬಂದಿದೆ. ಸೀಯುಟ್ ವಿಶಿಷ್ಟಲಿಙ್‌ಗೆ ವಲಾದಿಲಕ್ಷಣವಾದ ಇಡಾಗಮ ಬಂದರೆ ಸೀಯುಟಿನ ಯಕಾರಕ್ಕೆ ಲೋಪ್ಯೋಪ್ಯೋರ್ವಲಿ ಎಂಬುದರಿಂದ ಲೋಪ ಬಂದರೆ ವಂದ್+ಇ ಸೀನುಟ್ ಎಂದಾಗುತ್ತದೆ. ಆದೇಶಷಿತ್ವ ಬಂದರೆ (ಆದೇಶಪ್ರತ್ಯಯಯೋಃ) ಪ್ರಕೃತರೂಪಸಿದ್ಧಿಯಾಗುತ್ತದೆ. ವದಿ ಧಾತುವು ಅನುದಾತ್ತೋಪದೇಶವಾಗುವುದರಿಂದ **ತಾಸ್ಯನುದಾತ್ತೇತ್** (ಪಾ ಸೂ. ೬-೧-೧೮೯) ಎಂಬುದರಿಂದ ಲಿಙಿಗೆ ಅನುದಾತ್ತ ಬರಲಿ ಎಂಬ ಶಂಕೆಗೆ ಅವಕಾಶವಿಲ್ಲ. ಮುಂದೆ ಹೇಳಿದಂತೆ ಆಶೀರ್ಲಿಙಿಗೆ ಆರ್ಧಧಾತುಕ ಸಂಜ್ಞೆಯಿರುವುದರಿಂದ ಲಸ್ಯಾನಿಕ ಸಾರ್ವಧಾತುಕವಾಗದಿದ್ದುದರಿಂದ ಅನುದಾತ್ತ ಸ್ವರವು ಬರುವುದಿಲ್ಲ. **ಆದ್ಯುದಾತ್ತಶ್ಚ** (ಪಾ ಸೂ ೩-೧-೩) ಎಂಬುದರಿಂದ ಪ್ರತ್ಯಯದ ಆದ್ಯುದಾತ್ತ ಸ್ವರವೇ ಬರುತ್ತದೆ. **ತಿಙ್ಶಿತಿಙಃ** (ಪಾ. ಸೂ. ೮-೧-೭೮) ಅತಿಙಂತದ ಪರದಲ್ಲಿರುವ ತಿಙಂತವು ಸರ್ವಾನುದಾತ್ತವಾಗುತ್ತದೆ ಎಂಬುದರಿಂದ ಇಲ್ಲಿ ಪ್ರತ್ಯಯಸ್ವರವೂ ಬಾಧಿತವಾಗಿ ಸರ್ವಾನುದಾತ್ತವಾಗಬೇಕಾಗುತ್ತದೆ. ಆದರೆ, **ಆಮಂತ್ರಿತಂ ಪೂರ್ವಮವಿದ್ಯಮಾನವತ್** (ಪಾ. ಸೂ. ೮-೧-೭೨) ಪೂರ್ವದಲ್ಲಿರುವ ಆಮಂತ್ರಿತವು ಇದ್ದರೂ ಇಲ್ಲದಂತಾಗುತ್ತದೆ (ಆಮಂತ್ರಿತವೆಂದರೆ ಸಂಬೋಧನೆಯ ಪ್ರಥಮಾಕ್ಕೆ ಸಂಜ್ಞೆ) ಎಂಬುದರಿಂದ ಇಲ್ಲಿ ಮಘವನ್ ಎಂಬ ಆಮಂತ್ರಿತವು ಪೂರ್ವದಲ್ಲಿರುವುದರಿಂದ ಅದಕ್ಕೆ ಅವಿದ್ಯಮಾನವದ್ಭಾವ ಬರುವುದರಿಂದ **ವಂದಿಷೀಮಹಿ** ಎಂಬುದೇ ಪಾದದ ಆದಿಯಲ್ಲಿ ಬಂದಂತಾಯಿತು ಆನುದರಿಂದ **ಅಸಾದಾದೌ** ಎಂದು ಅನುದಾತ್ತವನ್ನು ನಿಷೇಧಿಸಿರುವುದರಿಂದ **ವಂದಿಷೀಮಹಿ** ಎಂಬುದು ಸರ್ವಾನುದಾತ್ತನಾಗದೆ ಪ್ರತ್ಯಯಸ್ವರವನ್ನು ಹೊಂದಿದೆ.

ಯೋಜ—ಇದರ ಪ್ರಕ್ರಿಯೆಯನ್ನು ಪೊನಲಸೆಯ ಸೂತ್ರದಲ್ಲಿ (೧-೩೬-೧) ವಿವರಿಸಿದೆ. ॥ ೩ ॥

॥ ಸಂಹಿತಾಪಾಠಃ ॥

ಸ ಘಾ ತಂ ವೃಷಣಂ ರಥಮಧಿ ತಿಷ್ಠಾತಿ ಗೋಪತಿಂ ।
ಯಃ ಪಾತ್ರಂ ಹಾರಿಯೋಜನಂ ಪೂರ್ಣಮಿಂದ್ರ ಚಿಕೇತತಿ ।
ಯೋಜಾ ನ್ವಿಂದ್ರ ತೇ ಹರೀ ॥ ೪ ॥

॥ ಪದಪಾಠಃ ॥

ಸಃ । ಘ । ತಂ । ವೃಷಣಂ । ರಥಂ । ಅಧಿ । ತಿಷ್ಠಾತಿ । ಗೋಃ । ಪತಿಂ ।
ಯಃ । ಪಾತ್ರಂ । ಹಾರಿ । ಯೋಜನಂ । ಪೂರ್ಣಂ । ಇಂದ್ರ । ಚಿಕೇತತಿ ।
ಯೋಜ । ನು । ಇಂದ್ರ । ತೇ । ಹರೀ ಇತಿ ॥ ೪ ॥

ಸಾಯಣಭಾಷ್ಯಂ

ಸ ಘ ಸ ಖಲ್ವಿಂದ್ರೋ ವೃಷಣಂ ಕಾಮಾಭಿವರ್ಷಕಂ ಗೋಪತಿಂ ಗವಾಂ ಲಂಭಯಿತಾರಂ ತಂ ರಥಮಧಿ ತಿಷ್ಠಾತಿ । ಈದೃಶೇ ರಥೇ೨ಧಿತಿಷ್ಠತು । ಆರೂಢೋ ಭವತು । ಹೇ ಇಂದ್ರ ಯೋ ರಥೋ ಹಾರಿಯೋಜನಮೇತತ್ಸಂಜ್ಞಕಂ ಧಾನಾಮಿಶ್ರಿತಂ ಪೂರ್ಣಂ ಸೋಮೇನ ಪೂರ್ಣಂ ಪಾತ್ರಂ ಚಿಕೇತತಿ ಜ್ಞಾಪಯತಿ । ತಂ ರಥಮಧಿತಿಷ್ಠೇತಿ ಪೂರ್ವೇಣಾನ್ವಯಃ । ಅಧಿಷ್ಠಾಯ ಚ ತ್ವದೀಯಾವಶ್ವೌ ಕ್ಷಿಪ್ರಂ ಯೋಜಯ ॥ ಘ ಖಚಿ ತನುಷೇತಿ ದೀರ್ಘಃ । ರಥಂ । ಅಧಿಶೀಙ್ಸ್ಥಾಸಾಂ ಕರ್ಮ । ಪಾ. ೧-೪-೪೬ । ಇತ್ಯಧಿಕರಣಸ್ಯ ಕರ್ಮಸಂಜ್ಞಾ । ತಿಷ್ಠಾತಿ । ತಿಷ್ಠತೇರ್ಲೇಟ್ಯಾಡಾಗಮಃ । ಚಿಕೇತತಿ । ಕಿತ ಜ್ಞಾನೇ । ಲೇಟ್ಯಡಾಗಮಃ । ಜುಹೋತ್ಯಾದಿತ್ವಾಚ್ಛಪಃ ಶ್ಲುಃ । ಬಹುಲಂ ಛಂದಸೀತಿ ವಕ್ತವ್ಯಂ । ಕಾ. ೭-೩-೯೬-೧। ಇತಿ ವಚನಾನ್ನಾಭ್ಯಸ್ತಸ್ಯಾಚಿ ಪಿತೀತಿ ಲಘೂಪಧಗುಣಪ್ರತಿಷೇಧೋ ನ ಭವತಿ ॥ ೪ ॥

ಪ್ರತಿಪದ ಭಾ

ಸ ಘ— ಅವೇ ಇಂದ್ರನು । ಯಃ— ಯಾವ ರಥವು । ಹಾರಿಯೋಜನಂ—(') ಧಾನ್ಯದಿಂದ ಕೂಡಿ ನುವಂ । ಪೂರ್ಣಂ— (ಸೋಮರಸದಿಂದ) ತುಂಬದುರೂ ಆದ । ಪಾತ್ರಂ— ಪಾತ್ರವನ್ನು । ಚಿಕೇತತಿ— ತೋರಿಸಿಕೊಡುತ್ತದೆಯೋ ಅಂತಹ (ಮತ್ತು) । ವೃಷಣಂ—(ಇಷ್ಟಾರ್ಥಗಳನ್ನು) ಸುರಿಸತಕ್ಕದ್ದೂ । ಗೋಪತಿಂ-

ಗೋವುಗಳನ್ನು ಹೊಂದಿಸತಕ್ಕದ್ದೂ ಆದ । ತಂ ರಥಂ— ಆ ರಥವನ್ನು । **ಅಧಿ ತಿಷ್ಠತಿ**—ಹತ್ತಿ ಕುಳಿತುಕೊಳ್ಳಲಿ । **ಇಂದ್ರೇ**— ಎಲೈ ಇಂದ್ರನೇ । **ತೇ**—ನಿನ್ನ । **ಹರೀ**— ಕುದುರೆಗಳನ್ನು । **ಆ ನು**— ಜಾಗ್ರತೆಯಾಗಿ । **ಯೋಜ**— (ರಥಕ್ಕೆ) ಕಟ್ಟು.

ಭಾವಾರ್ಥ

ಯಾವ ರಥವು ಧಾನ್ಯದಿಂದ ಕೂಡಿದುದೂ ಮತ್ತು ಸೋಮರಸದಿಂದ ತುಂಬಿದುದೂ ಆದ ಪಾತ್ರವನ್ನು ತಂದು ಕೊಡುತ್ತದೆಯೋ ಮತ್ತು ಯಾವುದು ಭಕ್ತರ ಇಷ್ಟಾರ್ಥಗಳನ್ನು ಸುರಿಸಿ ಗೋವುಗಳನ್ನು ತಂದು ಕೊಡುತ್ತದೆಯೋ ಅಂತಹ ರಥವನ್ನು ಇಂದ್ರನು ಹತ್ತಿ ಕುಳಿತುಕೊಳ್ಳಲಿ. ಎಲೈ ಇಂದ್ರನೇ, ನಿನ್ನ ಕುದುರೆಗಳನ್ನು ಜಾಗ್ರತೆಯಾಗಿ ರಥಕ್ಕೆ ಸೇರಿಸಿಕಟ್ಟು.

English Translation

May he (Indra) ascend that chariot which shower blessings, gives cows and which contains vessel filled with the mixture of Soma-juice and barley flour . Indra, quickly yoke your horses

ವಿಶೇಷವಿಷಯಗಳು

ಘ— ಛಂದಸ್ಸಿನ ಅನುಕೂಲಕ್ಕಾಗಿ ಈ ಅಕ್ಷರವು ಸಂಹಿತಾವಾರದಲ್ಲಿ ದೀರ್ಘವಾಗಿರುವುದು

ಹಾರಿಯೋಜನಂ— ಹಾರಿ ಎಂಬ ಧಾನ್ಯಮಿಶ್ರವಾದ ಸೋಮರಸವು. ಹಾರಿ ಎಂದರೆ ಬಹುಶಃ ಯವ ಧಾನ್ಯವಿರಬಹುದು. ಆ ಧಾನ್ಯದ ಹಿಟ್ಟನ್ನು ಮಿಶ್ರಮಾಡಿದ ಸೋಮರಸವೆಂದರ್ಥವು ಈ ಹಾರಿಯೋಜನವೆಂಬ ಶಬ್ದವು ಋಗ್ವೇದದಲ್ಲಿ—

ಏವಾ ತೇ ಹಾರಿಯೋಜನಾ ಸುವೃಕ್ತೀಂದ್ರ ಬ್ರಹ್ಮಾಣಿ ಗೋತಮಾಸೋ ಅಕ್ರನ್ ।
(ಋ. ಸಂ. ೧-೬೧-೧೬)

ಎಂಬ ಋಕ್ಕಿನಲ್ಲಿ ಪಾತ್ರವಿರುವುದು ಬೇರೆ ಎಲ್ಲಿಯೂ ಇರುವುದಿಲ್ಲ. ಅಲ್ಲಿ ಈ ಶಬ್ದಕ್ಕೆ ಧಾನ್ಯಕಾರರು **ಹರ್ಯೋ-ರಶ್ವಯೋರ್ಯೋಜನಂ ಯಸ್ಮಿನ್ ರಥೇ ಸಃ ತಸ್ಯ ಸ್ಥಾಮ್ನಿತ್ಯೇನ ಸಂಬಂಧೀ ಹಾರಿಯೋಜನಃ**—ಎಂದರೆ ಹರೀ ಎಂಬ ಇಂದ್ರನ ಎರಡು ಕುದುರೆಗಳನ್ನು ಹೂಡಿರುವ ರಥವುಳ್ಳ ಇಂದ್ರನೆಂದು ಬೇರೆ ವಿಧವಾಗಿ ಅರ್ಥಮಾಡಿರುವರು. ಯಜುರ್ವೇದತೈತ್ತಿರೀಯಸಂಹಿತೆಯಲ್ಲಿಯೂ —

ಹರಿರಸಿ ಹಾರಿಯೋಜನೋ ಹರ್ಯೋಃ ಸ್ಥಾತಾ ವಜ್ರಸ್ಯ ಭರ್ತಾ ಪೃಶ್ನೀಃಪ್ರೇತಾ ತಸ್ಯ ತೇ ದೇವ ಸೋಮೇಷ್ಟಯಜುಷಃ ಸ್ತುತಸ್ತೋಮಸ್ಯ ಶಸ್ತೋಕ್ಥಸ್ಯ ಹರಿವಂತಂ ಗ್ರಹಂ ಗೃಹ್ಣಾಮಿ ಹರೀಃ ಸ್ಥ ಹರ್ಯೋರ್ಧಾನಾಃ ಸಹಸೋಮಾ ಇಂದ್ರಾಯ ಸ್ವಾಹಾ ॥
(ತೈ. ಸಂ. ೧-೪-೩೮)

ಎಂದಿರುವುದು. ಈ ಮಂತ್ರದಲ್ಲಿರುವ ಹಾರಿಯೋಜನಃ ಎಂಬ ಶಬ್ದಕ್ಕೆ ಭಟ್ಟಭಾಸ್ಕರಮಿಶ್ರರೆಂಬುವರು ತಮ್ಮ ಭಾಷ್ಯದಲ್ಲಿ—

हरिरिति । सोम एवोच्यते । हरिरिन्द्रः स एव त्वमसीतीन्द्रात्मना सोमः स्तूयतेऽ । यदा वा हरिर्हर्ता अभिमतानां श्रेयसामाहर्ता त्वमसि । हारि-योजनः हरिः अश्वविशेषः योजनो वाहनं यस्य स हरियोजनः इन्द्रः तस्य स्वभूतः हारियोजनः इन्द्रोऽसीत्यर्थः ।

ಎಂದು ಅರ್ಥವಿವರಣೆ ಮಾಡಿರುವರು. ಇಲ್ಲಿ ಹಾರಿಯೋಜನ ಶಬ್ದವನ್ನು ಸೋಮಪರವಾಗಿ ಅರ್ಥಮಾಡಿರುವರು. ಹರೀ ಎಂದರೆ ಇಂದ್ರನ ಕುದುರೆಗಳು. ಆ ಕುದುರೆಗಳೇ ವಾಹನವಾಗಿ ವುಳ್ಳವನಿಗೆ **ಹರಿಯೋಜನ** ಎಂದರೆ ಇಂದ್ರನೆಂದು ಹೆಸರು. ಆ ಇಂದ್ರನ ಸಂಬಂಧವಾದುದಕ್ಕೆ **ಹಾರಿಯೋಜನ** ಎಂದು ಹೆಸರು ಎಂದು ವಿವರಿಸಿರುವರು. ಮುಖ್ಯಾಭಿಪ್ರಾಯವೆನೆಂದರೆ— ಇಂದ್ರನಿಗೆ ಅರ್ಪಿಸುವುದಕ್ಕಾಗಿ ಯವಧಾನ್ಯದ (barley) ಹಿಟ್ಟನ್ನು ಬೆರಸಿ ಸೋಮರಸವನ್ನು ಸಿದ್ಧಪಡಿಸಿರುವರು. ಇಂದ್ರನಿಗೆ ಮಾತ್ರವೇ ಅರ್ಪಿಸುವುದಕ್ಕೆ ಸಿದ್ಧಪಡಿಸಿದ ಇಂತಹ ಸೋಮರಸವನ್ನು **ಹಾರಿಯೋಜನ** ಎಂದು ಹೇಳುವುದು ರೂಢಿಯಾಗಿರಬಹುದು. ಆ ಕಾರಣದಿಂದಲೇ ಪ್ರಸಕ್ತವಾದ ಈ ಋಕ್ಕಿನಲ್ಲಿ **ಹಾರಿಯೋಜನಂ ಪಾತ್ರಂ ಪೂರ್ಣಂ** ಎಂದರೆ ಇಂದ್ರನಿಗಾಗಿ ವಿಶೇಷ ರೀತಿಯಿಂದ ಯವಧಾನ್ಯದ ಹಿಟ್ಟನ್ನು ಬೆರಸಿ ಸಿದ್ಧಪಡಿಸಿದ ಸೋಮರಸವನ್ನು ತುಂಬಿದ ಪಾತ್ರೆಯನ್ನು ಎಂದು ಅರ್ಥ ವಿವರಣೆ ಮಾಡುವುದು ಯುಕ್ತವಾಗಿರುವುದು.

ವ್ಯಾಕರಣಪ್ರಕ್ರಿಯಾ

ಸ್ಥ- ಪರಿಲಿಂಗಾರ್ಥದಲ್ಲಿ ಕ್ತಿಪ್ ಪ್ರತ್ಯಯ. **ಯಚಿ ತುನುಘಮಕ್ರುತಂಕುತ್ರೋರುಷ್ಯಾಣಾಂ** (ಪಾ. ಸೂ. ೬-೪-೬೬) ಎಂಬುದರಿಂದ ಹರ್ಯಾದಿಗಳಲ್ಲಿ **ಸ್ಥಾ** ಮಾತ್ರ **ಷ್ಠ** ಎಂಬುದಕ್ಕೆ ದೀರ್ಘವಾಗುತ್ತದೆ.

ರಥಂ—ದ್ವಿತೀಯೈಕವಚನ. ರಥದಲ್ಲಿ ಕುಳಿತುಕೊಳ್ಳಲಿ ಎಂಬರ್ಥವಿದ್ದರೂ **ಅಧಿಶೀಙ್ಸ್ಥಾಸಾಂ ಕರ್ಮ** (ಪಾ. ಸೂ. ೧-೪-೪೬) ಅಧಿ ಎಂಬ ಉಪ ಎಂಬ ಉಪಸರ್ಗದಿಂದ ಕೂಡಿದ ಶೀಙ್, ಸ್ಥಾ, ಆಸ ಈ ಮೂರು ಧಾತುಗಳ ಅಧಿಕರಣಕ್ಕೆ (ಧಾತ್ವರ್ಥಕ್ರಿಯಾವಲ್ಲಿ ಅಧಿಕರಣವಾಗಿರುವುದಕ್ಕೆ) ಕರ್ಮಸಂಜ್ಞೆಯು ಬರುತ್ತದೆ ಎಂಬುದರಿಂದ ಕರ್ಮಸಂಜ್ಞೆ ಬಂದು **ಕರ್ಮಣಿ ದ್ವಿತೀಯಾ** (ಪಾ. ಸೂ. ೨-೩-೨) ಎಂಬುದರಿಂದ ದ್ವಿತೀಯಾವಿಭಕ್ತಿ ಬಂದಿದೆ.

ತಿಷ್ಠಾತಿ—ಷ್ಠಾ ಗತಿನಿವೃತ್ತೌ ಧಾತು. ಭ್ವಾದಿ. ವಿಧ್ಯರ್ಥದಲ್ಲಿ ಲೇಟ್ ಪ್ರಥಮಪುರುಷೈಕವಚನರೂಪ. **ಲೇಟೋಽಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಆಡಾಗಮ ಬಂದಿದೆ. ಶಪ್‌ವಿಕರಣಪರದಲ್ಲಿರುವಾಗ **ಸಾಹ್ವಾಧ್ವಾಂ** (ಪಾ. ಸೂ. ೮-೩-೭೮) ಎಂಬುದರಿಂದ ಧಾತುವಿನಿಗೆ ಷತ್ವ ಎಂಬ ಆದೇಶ ಬರುತ್ತದೆ.

ಚಿಕೇತತಿ—ಕಿತ ಜ್ಞಾನೇ. ಧಾತು. ಜುಹೋತ್ಯಾದಿ. ಲೇಟ್ ಪ್ರಥಮಪುರುಷೈಕವಚನ ಜುಹೋತ್ಯಾದಿಗಳಿಗೆ ಶ್ಲುವಿಕರಣ ಪ್ರಾಪ್ತವಾದರೆ **ಶ್ಲೌ** ಎಂಬುದರಿಂದ ಧಾತುವಿನಿಗೆ ದ್ವಿತ್ವ ಬರುತ್ತದೆ. ಹಲಾದಿಶೇಷವು ಪ್ರಾಪ್ತವಾದರೆ ಕಿಕಿತ್+ತಿ ಎಂದಾಗುತ್ತದೆ. ಹಿಂದೆ ಹೇಳಿದಂತೆ **ಲೇಟೋಽಡಾಟೌ** ಎಂಬುದರಿಂದ ಲೇಟ್ ಪ್ರತ್ಯ

ೃ ಪ್ರಿಡಾಗಮ ಬರುತ್ತದೆ. ಪೂರ್ವಖಿಂಡ ಅಭ್ಯಾಸಕ್ಕೆ **ಕುಹೋಶ್ನುಃ** (ಪಾ. ಸೂ. ೬-೪-೭೫) ಎಂಬುದರಿಂದ ರ್ಗವು ಪ್ರಾಪ್ತವಾದರೆ ಅಂತರ್ಯದಿಂದ ಚಕಾರ ಬರುತ್ತದೆ **ಪುಗಂತ ಲಘೂಪಧಸ್ಯ ಚ** (ಪಾ. ಸೂ ೭೬) ಎಂಬುದರಿಂದ ಅಂಗದ ಲಘೂಪಧೆಯಾದ ತಕಾರದ ಪೂರ್ವದಲ್ಲಿರುವ ಇಕಾರಕ್ಕೆ ಗುಣ ಬರುತ್ತದೆ. **ಸ್ಯಪಿ ನಾಭ್ಯಸ್ತಸ್ಯಾಚಿ ಪಿತಿ ಸಾರ್ವಧಾತುಕೆ** (ಪಾ. ಸೂ. ೭-೩-೮೬) ಅಜಾದಿಯಾದ ಪಿತ್ತಾಗ ಸಾರ್ವಧಾತುಕ ಲ್ಲಿರುವಾಗ ಅಭ್ಯಸ್ತಕ್ಕೆ ಲಘೂಪಧಗುಣ ಬರುವುದಿಲ್ಲವೆಂದು ನಿಷೇಧವಿದೆ. ದ್ವಿತ್ವವನ್ನು ಹೊಂದಿದ ಎರಡು ತಗಳಿಗೆ ಒಟ್ಟಿಗೆ ಅಭ್ಯಸ್ತವೆಂದು ಹೆಸರು. (ಆದರೇ ಅಧ್ಯಾಯದ ಸೂತ್ರದಿಂದ ಮಾತ್ರ ದ್ವಿತ್ವಹೊಂದಿರಬೇಕು) ೂ ಇಲ್ಲಿ ಬಹುಲಂ ಛಂದಸೀತಿ ವಕ್ತವ್ಯಮ್ (ಪಾ. ಸೂ. ೭-೩-೮೬ ರಲ್ಲಿ ವಾರ್ತಿಕ ೧) ಎಂಬುದರಿಂದ ಲಘೂಪಧಗುಣಪ್ರತಿಷೇಧವು ಬರುವುದಿಲ್ಲ. ॥ ೪ ॥

॥ ಸಂಹಿತಾಪಾಠಃ ॥

ಯುಕ್ತಸ್ತೇ ಅಸ್ತು ದಕ್ಷಿಣ ಉತ ಸವ್ಯಃ ಶತಕ್ರತೋ ।
ತೇನ ಜಾಯಾಮುಪ ಪ್ರಿಯಾಂ ಮಂದಾನೋ ಯಾಹ್ಯಂಧಸೋ
ಯೋಜಾ ನ್ವಿಂದ್ರ ತೇ ಹರೀ ॥ ೫ ॥

॥ ಪದಪಾಠಃ ॥

ಯುಕ್ತಃ । ತೇ । ಅಸ್ತು । ದಕ್ಷಿಣಃ । ಉತ । ಸವ್ಯಃ । ಶತಕ್ರತೋ ಇತಿ ಶತ ೩
ಕ್ರತೋ ।
ನ । ಜಾಯಾಂ । ಉಪ । ಪ್ರಿಯಾಂ । ಮಂದಾನಃ । ಯಾಹಿ । ಅಂಧಸಃ ।
ಯೋಜ । ನು । ಇಂದ್ರ । ತೇ । ಹರೀ ಇತಿ ॥ ೫ ॥

ಹೇ ಶತಕ್ರತೋ ಬಹುಕರ್ಮವನ್ನಿಂದ್ರ ತೇ ತ್ವದೀಯೇ ರಥೇ ದಕ್ಷಿಣೋ ದಕ್ಷಿಣಸಾರ್ಶ್ವಸ್ಥೋ೬ಶ್ವೋ ಯುಕ್ತೋ೬ಸ್ತು । ಉತಾಪಿ ಚ ಸವ್ಯೋ ವಾಮಪಾರ್ಶ್ವಸ್ಥೋ೬ಪಿ ಯುಕ್ತೋ೬ಸ್ತು । ತೇನ ರಥೇನಾಂಧಸಃ ಸೋಮಲಕ್ಷಣಸ್ಯಾನ್ನಸ್ಯ ಪಾನೇನ ಮಂದಾನೋ ಮತ್ತಸ್ತ್ವಂ ಪ್ರಿಯಾಂ ಪ್ರೀಣಯಿತ್ರೀಂ ಜಾಯಾಮುಪ ಯಾಹಿ । ಸಾ ಯತ್ರ ವರ್ತತೇ ತತ್ರ ಗಚ್ಛೇತ್ಯರ್ಥಃ । ತದರ್ಥಂ ಹೇ ಇಂದ್ರ ತ್ವದೀಯೌವಶ್ವೌ ರಥೇ ಕ್ಷಿಪ್ರಂ ಯೋಜಯ । ಆನಯೋತ್ತರಯಾ ಚ ಪೀತಸೋಮಸ್ಯೇಂದ್ರಸ್ಯ ಸ್ವಗೃಹಂ ಪ್ರತಿ ಪ್ರಸ್ಥಾನಂ ಪ್ರತಿಪಾದ್ಯತೇ॥ ಮಂದಾನಃ । ಮದಿ ಸ್ತುತಿಮೋದಮದಸ್ವಪ್ನಕಾಂತಿಗತಿಷು । ಲಿಟಃ ಕಾನಚ್ । ದ್ವಿರ್ವಚನಪ್ರಕರಣೇ ಛಂದಸಿ ನೇತಿ ವಕ್ತವ್ಯಮಿತಿ ದ್ವಿರ್ವಚನಾಭಾವಃ । ಅಂಧಸಃ । ಅದ ಭಕ್ಷಣೇ । ಆದೇರ್ನುಮ್. ಧಶ್ಚ ಉ. ೪-೨೦೫ । ಇತ್ಯಸುನ್ । ಧಾತೋರ್ನುಮಾಗಮೋ ಧಕಾರಾಂತಾದೇಶಶ್ಚ ॥ ೫ ॥

ಪದಪಾರ್ಥ

ಶತಕ್ರತೋ—ಬಹಳವಾದ ಪವಿತ್ರಕರ್ಮಗಳಿಂದ ಯುಕ್ತವಾದ ಇಂದ್ರನೇ, । **ತೇ**—ನಿನ್ನ (ರಥಕ್ಕೆ) **ದಕ್ಷಿಣಃ**—ಬಲಭಾಗದ ಕುದುರೆಯು । **ಯುಕ್ತಃ ಅಸ್ತು**—ಕಟ್ಟಲ್ಪಡಲಿ । **ಸವ್ಯಃ**—ಎಡಭಾಗದ ಕುದುರೆಯೂ (ಕಟ್ಟಲ್ಪಡಲಿ) । **ತೇನ**—ಆ ರಥದಿಂದ । **ಅಂಧಸಃ**—ಸೋಮರಸದ (ಪಾನದಿಂದ)। **ಮಂದಾನಃ**—ಸಂತೃಪ್ತನೂ ಮತ್ತನೂ ಆಗಿ । **ಪ್ರಿಯಾಂ**—ನಿನ್ನ ಪ್ರಣಯಿನಿಯಾಗಿ । **ಜಾಯಾಂ**—ಹೆಂಡತಿಯನ್ನು ಕುರಿತು । **ಉಪ ಯಾಹಿ**—ಹೋಗಿ ಸೇರು (ಆನ್ಮರಿಂದ) । **ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನ । **ಹರೀ**—ಕುದುರೆಗಳನ್ನು । **ನು**—ಜಾಗ್ರತೆಯಾಗಿ । **ಯೋಜ**—(ರಥಕ್ಕೆ) ಕಟ್ಟು ॥

ಭಾವಾರ್ಥ ।

ಬಹಳವಾದ ಪವಿತ್ರಕರ್ಮಗಳಿಂದ ಯುಕ್ತನಾದ ಇಂದ್ರನೇ, ನಿನ್ನ ರಥಕ್ಕೆ ಬಲಬಲಭಾಗಗಳ ಎರಡು ಕುದುರೆಗಳನ್ನೂ ಕಟ್ಟು. ಆ ರಥದಲ್ಲಿ ಸೋಮರಸಪಾನದಿಂದ ಸಂತೃಪ್ತನೂ ಮತ್ತು ಮತ್ತನೂ ಆಗಿ ನಿನ್ನ ಪ್ರಣಯಿನಿಯಾದ ಹೆಂಡತಿಯಲ್ಲಿಗೆ ಹೋಗಿ ಸೇರಿ ಸುಖಿಸುವುದಕ್ಕಾಗಿ ನಿನ್ನ ಕುದುರೆಗಳನ್ನು ಜಾಗ್ರತೆಯಾಗಿ ರಥಕ್ಕೆ ಕಟ್ಟು.

English Translation

O Satakratu, (or perfomer of many acts) let your horses be harnessed on the right and on the left, and exhilerated by the sacrificial food, repair, in your chariot, to your beloved wife ; Indra, quickly yoke your horses.

ವಿಶೇಷವಿಷಯಗಳು

ಈ ಋಕ್ಕನ್ನು ಮುಂದಿನ **ಯುನಜ್ಮಿ ತೇ** ಎಂಬ ಋಕ್ಕನ್ನು ಇಂದ್ರನನ್ನು ತನ್ನ ಸ್ವಸ್ಥಾನಕ್ಕೆ ಸಾಗಕಳುಹಿಸುವಾಗ ಪಠಿಸುವರು.

ದಕ್ಷಿಣಃ, ಸವ್ಯಃ—ಎಡಬಲಭಾಗದಲ್ಲಿ ರಥಕ್ಕೆ ಕಟ್ಟಬೇಕಾದ ಕುದುರೆಗಳು.

ಜಾಯಾಮುಪ ಪ್ರಿಯಾಂ ಯಾಹಿ—ನಿನ್ನ ಪ್ರೀತಿಪಾತ್ರಳಾದ ಪತ್ನಿಯ ಸಮೀಪಕ್ಕೆ ಹೋಗು ಎಂದರೆ ಸ್ವಗೃಹಾಭಿಮುಖನಾಗು ಎಂದರ್ಥವು

ಅಂಧಸಃ ಮಂದಾನಃ - ಸೋಮಪಾನದಿಂದಲೂ ಹವಿಸ್ಸನ್ನು ಭಕ್ಷಿಸಿದ್ದರಿಂದಲೂ ಸಂತೋಷಗೊಂಡ ಇಂದ್ರನು. ಅಂಧಸ್ ಎಂದರೆ ಅನ್ನವು (ನಿ. ೯-೮)

ವ್ಯಾಕರಣ ಪ್ರಕ್ರಿಯೆ

ಮಂದಾನಃ—ಮದಿ ಸ್ತುತಿಮೋದನಸ್ವಪ್ನಕಾಂತಿಗತಿಷು. ಧಾತು. ಸ್ತುತಿಸುವುದು, ಸಂತೋಷ ಪಡುವುದು, ಮದವನ್ನು ತೊಂದುವುದು, ಸ್ವಪ್ನ ನೋಡುವುದು, ಪ್ರಕಾಶಿಸುವುದು, ಹೋಗುವುದು, ಎಂಬರ್ಥಗಳಲ್ಲಿ ಇದೆ. ಭ್ವಾದಿ. ಈ ಧಾತುವಿಗೆ ಲಿಟ್ ಮಾಡಿದಾಗ, **ಲಿಟಃ ಕಾನಜ್ವಾ** (ಪಾ. ಸೂ. ೩-೨-೧೦೬) ಛಂದಸ್ಸಿನಲ್ಲಿ ಭೂತಸಾನೂನ್ಯನಲ್ಲಿ ವಿಹಿತವಾದ ಲಿಟ್ಸ್ಥಿಗೆ ವಿಕಲ್ಪವಾಗಿ ಕಾನಚ್ ಆದೇಶ ಬರುತ್ತದೆ ; ಎಂಬುದರಿಂದ ಇಲ್ಲಿ ಕಾನಚ್ ವಿಧೇಯವಾಯಿತು. ಕಾನಚಿನಲ್ಲಿ ಆನ ಎಂಬುದು ಉಳಿಯುತ್ತದೆ. ಲಿಟ್ ಪರದಲ್ಲಿರುವಾಗ **ಲಿಟಿ ಧಾತೋರನಭ್ಯಾಸಸ್ಯ** (ಪಾ. ಸೂ. ೬-೧-೮) ದ್ವಿತ್ವವು ಪ್ರಾಪ್ತವಾದರೆ **ಛಂದಸಿ ವೇತಿ ವಕ್ತವ್ಯಮ್** (ಪಾ. ಸೂ. ೬-೧-೮ ರಲ್ಲಿ ವಾರ್ತಿಕ ೧) ಎಂಬುದರಿಂದ ದ್ವಿರ್ವಚನವು ಬರುವುದಿಲ್ಲ. ಧಾತುವು ಇದಿತ್ತಾದುದರಿಂದ ನುಮಾಗಮ ಬರುತ್ತದೆ. ಮತ್ತತೆಯನ್ನು ತೊಂದಿನವನು ಎಂಬರ್ಥದಲ್ಲಿ ನುಂದಾನಃ ಎಂದು ರೂಪಸಿದ್ಧಿಯಾಗಿದೆ

ಅಂಧಸಃ—ಅದ ಭಕ್ಷಣೆ ಧಾತು. ಅದಾದಿ, **ಅದೇರ್ನುಮ್ ಧಶ್ಚ** (ಉ. ಸೂ. ೪-೬-೮೮) **ಸರ್ವಧಾತುಭ್ಯೋ೭ಸುನ್** (ಉ. ಸೂ. ೪-೬-೭೮) ಎಂಬುದರಿಂದ ಅಸುನ್ ಎಂಬುದು ಅನುನೃತ್ತವಾಗುತ್ತದೆ. ಈದ್ ಧಾತುವಿಗೆ ಭಕ್ತಂ ಅಂದರೆ ಅನ್ನ ಎಂಬರ್ಥದಲ್ಲಿ ಅಸುನ್ ಪ್ರತ್ಯಯವೂ ಧಾತುವಿಗೆ ನುಮಾಗಮವೂ, ಧಾತುವಿನ ದಕಾರಕ್ಕೆ ಧಕಾರವೂ ಬರುತ್ತದೆ ಅಸುನ್ ಪ್ರತ್ಯಯದಲ್ಲಿ ಅಸ್ ಎಂಬುದು ಉಳಿಯುತ್ತದೆ. ಸಕಾರಾಂತ ಶಬ್ದವಾಗುತ್ತದೆ ಸುಸ್ಸೈಕ್ಯಕವಚನದಲ್ಲಿ ಜಸ್ ಪ್ರತ್ಯಯಮಾಡಿದಾಗ ರೂಪಸಿದ್ಧಿಯಾಗುತ್ತದೆ.

ಉಪ+ಯಾಹಿ—**ಛಂದಸಿ ಪರ್ಯೇಪಿ** (ಪಾ. ಸೂ. ೮-೪-೬೭) **ವ್ಯವಹಿತಾಶ್ಚ** (ಪಾ. ಸೂ. ೮-೪-೫೬) ಎಂಬುದರಿಂದ ಛಂದಸ್ಸಿನಲ್ಲಿ ಪೂರ್ವದಲ್ಲಿಯೇ ಇರಬೇಕೆಂದು ನಿಯಮವಿಲ್ಲ. ವ್ಯವಧಾನವಿದ್ದಾಗಲೂ ಉಪಸರ್ಗಗಳ ಯೋಗ ಬರುತ್ತದೆ [illegible]

॥ संहितापाठः ॥

युनज्मि ते ब्रह्मणा केशिना हरी उप प्र याहि
दधिषे गभस्त्योः ।
उत त्वा सुतासो रभसा अमन्दिषुः पूषण्वान्वज्रि-
न्त्समु पत्न्यामदः ॥ ६ ॥

॥ पदपाठः ॥

युनज्मि । ते । ब्रह्मणा । केशिना । हरी इति । उप । प्र । याहि ।
दधिषे । गभस्त्योः ।
उत् । त्वा । सुतासः । रभसाः । अमन्दिषुः । पूषण्ऽवान् ।
वज्रिन् । सं । ऊं इति । पत्न्या । अमदः ॥ ६ ॥

सायणभाष्य

अन्त्येऽप्युहः सु हारियोजनस्य युनज्मीत्येषा योज्या। सूत्रितं च । युनज्मि ते ब्रह्मणा केशिना हरी इति योज्यानुवाक्ये अन्त्येऽप्युहः सु । अ ६-८८ । इति ॥

हे इन्द्र केशिना केशयुक्तौ शिखावन्तौ ते हरी त्वदीयावश्वौ ब्रह्मणा स्तोत्ररूपेण मन्त्रेण युनज्मि । रथे संयोजयामि । तेन रथेनोप प्र याहि । त्वद्गृहमुपगच्छ । गभस्त्योः। बाहुनामैतत् । बाह्वोरवष्टब्धान् रश्मीन् दधिषे । धारयसि । त्वा त्वां सुतासो यज्ञेष्वभिषुताः सोमा रभसा वेगवन्तः। तीव्राः क्षिप्रं मदकारिण इत्यर्थः । उदमन्दिषुः । उत्कृष्टमदयुक्तमाकार्षुः । हे वज्रिन् अतस्त्वं स्वगृहं गत्वा पूषण्वान् । अत्र पूर्वशब्दः पुष्ट्यै वर्तते । पुष्टिर्वै पूषा पुष्टिमेवानावरुन्द्धे इति श्रुतेः । सोमपानजनितया पुष्ट्या युक्तः सन् पत्न्या

स्वभार्यया सह समु अमदः । सम्यगेव तृप्तो भव ॥ केशिना । केशशब्दान्नृत्तेऽर्थीयः इनिः । सुपां सुलुगिति विभक्तेरराकारः । रभसाः । अर्श आदिभ्योऽच् । अमंदिषुः । व्यत्ययेन परस्मैपदं । पूषण्वान् । पुष पुष्टौ । श्वन्सुश्वन्निति त्यादौ पूषन्निति निपात्यते । तच्चात्र भावसाधनं द्रष्टव्यं । पूषाऽस्यास्तीति पूषण्वान् । मादुषधायाः इति मतुपो वत्वं । नलोपोऽनोः नुट् । सा ८-२-०६ । इति नुट् । ह्रस्वनुड्भ्यां मतुबिति मतुप उदात्तत्वं । अमदः । मदीः हर्षे । भंदसि लुङ्लङ्लिट इति स्वार्थनायां लङ् । श्यनि स्वार्थे व्यत्ययेन शप् ॥

ಪದಾರ್ಥ

ಕೇಶಿನಾ - (ಎಲೈ ಇಂದ್ರನೇ) ಉದ್ದವಾದ ಕೇಸರಗಳಿಂದ ಕೂಡಿದ । **ತೇ**—ನಿನ್ನ । **ಹರೀ**— ಕುದುರೆಗಳನ್ನು । **ಬ್ರಹ್ಮಣಾ**— ಸ್ತೋತ್ರರೂಪವಾಗ ಮಂತ್ರಗಳನ್ನು ಹೇಳಿಕೊಂಡು । **ಯುನಜ್ಮಿ**— (ನಿನ್ನ ರಥಕ್ಕೆ) ಕಟ್ಟುತ್ತೇನೆ. । **ಉಪ ಪ್ರಯೋಹಿ**— (ಆ ರಥದಲ್ಲಿ ಕುಳಿತು) ಮನೆಗೆ ಹೊರಡು. । **ಗಭಸ್ತ್ಯೋಃ**— (ನಿನ್ನ) ಕೈಗಳಿಂದ । **ದಧಿಷೇ** - ಲಗಾಮುಗಳನ್ನು ಹಿಡಿ. । **ತ್ವಾ**—ನಿನ್ನನ್ನು । **ಸುತಾಸಃ**—(ಯಜ್ಞದಲ್ಲಿ) ಹಿಂಡಿದವೂ । **ರಭಸಾಃ**— ತೀವ್ರವಾಗಿ ಉದ್ರೇಕವನ್ನುಂಟುಮಾಡುವುವೂ ಆದ ಸೋಮರಸಗಳು । **ಉದಮಂದಿಷುಃ**—ಅಧಿಕವಾಗಿ ಮದಯುಕ್ತನನ್ನಾಗಿ ಮಾಡಿವೆ (ಆದ್ದರಿಂದ) । **ವಜ್ರಿನ್**— ವಜ್ರಾಯುಧವನ್ನು ಹಿಡಿದಿರುವ ಇಂದ್ರನೇ । **ಪೂಷಣ್ವಾನ್**— (ರಸಪಾನದಿಂದ) ಪುಷ್ಟನಾಗಿ । **ಪತ್ನ್ಯಾ**— ಭಾರ್ಯೆಯೊಡನೆ । **ಸಮು ಅಮದಃ**—ಸಂತೃಪ್ತಿಯನ್ನು ಪಡೆ !

ಭಾವಾರ್ಥ

ಎಲೈ ಇಂದ್ರನೇ, ದೀರ್ಘವಾದ ಕೇಸರಗಳಿಂದ ಕೂಡಿದ ನಿನ್ನ ಕುದುರೆಗಳನ್ನು ಮಂತ್ರಪೂರ್ವಕವಾಗಿ ನಿನ್ನ ರಥಕ್ಕೆ ಕಟ್ಟುತ್ತೇನೆ. ಕೈಯಲ್ಲಿ ಕಡಿವಾಣಗಳನ್ನು ಹಿಡಿದುಕೊಂಡು ಗೃಹಾಭಿಮುಖವಾಗಿ ಹೊರಡು. ಜಾಗ್ರತೆ ಮದುವನ್ನುಂಟುಮಾಡತಕ್ಕ ಸೋಮರಸಗಳು ನಿನ್ನನ್ನು ಮತ್ತನನ್ನಾಗಿ ಮಾಡಿವೆ. ಆ ರಸಪಾನದಿಂದ ಪುಷ್ಟನಾದ ನೀನು ಹಿಂತಿರುಗಿ ಮನೆಗೆ ಹೋಗಿ ನಿನ್ನ ಭಾರ್ಯೆಯೊಡನೆ ರಮಿಸಿ ಸಂತೃಪ್ತನಾಗು.

English Translation

I harness your long-maned horses with proper prayers, take the reins in your hands, the extracted Soma-juices have exhilerated you, O weilder of the thunderbolt, thus filled with nourshing food, rejoice with your wife.

ವಿಶೇಷನಿಘಂಟುಗಳು

ಕೇಶಿನಾ— **ಶಿಖಾವಂತೌ** ॥ ಕೇಸರಯುಕ್ತವಾದ

ಗಭಸ್ತ್ಯೋಃ—**ಹಸ್ತಯೋಃ** । ಕೈಗಳಲ್ಲಿ ; ಆಯತೀ ಚ್ಯವಾನಾ ಮೊದಲಾದ ಪಸ್ಪರಡು ಬಾಹುಸ್ತಾನುಗಳ

ನುಷ್ಯನಲ್ಲಿ ಗಭಸ್ತೀ ಎಂಬ ಶಬ್ದವು ಸಹಿತವಾಗಿರುವುದರಿಂದ ಗಭಸ್ತ್ಯೋಃ ಎಂದರೆ ಕೈಗಳಲ್ಲಿ, ಬಾಹುಗಳಲ್ಲಿ ಎಂದರ್ಥವು

ಪೂಷಣ್ವಾನ್—ಇಲ್ಲಿ ಪೂಷಶಬ್ದಕ್ಕೆ ಭಾಷ್ಯಕಾರರು ಪುಷ್ಟಿಯೆಂದು ಅರ್ಥಮಾಡಿ ಅದನ್ನು ಸಮರ್ಥಿಸು ನುವಕ್ಕಾಗಿ-**ಪುಷ್ಟಿರ್ವೈ ಪೂಷಾ । ಪುಷ್ಟಿಮೇವಾವರುಂಧೇ** (ತೈ. ಬ್ರಾ. ೨-೭-೨-೧) ಎಂಬ ತೈತ್ತಿರೀಯಬ್ರಾಹ್ಮಣ ಶ್ರುತಿವಾಕ್ಯವನ್ನು ಉದಹರಿಸಿರುವರು

ವ್ಯಾಕರಣ ಪ್ರಕ್ರಿಯಾ

ಕೇಶಿನಾ—ಸಕಾರಾಂತ ಶಬ್ದದ ಮೇಲೆ ದ್ವಿತೀಯಾದ್ವಿವಚನದಲ್ಲಿರುವ ರೂಪ ಕೇಶಾಃ ಅನಯೋಃ ಸಂತಿ- ವಿದ್ಯಾಗಳು ಇವುಗಳಿಗೆ ಇವೆ ಎಂಬರ್ಥದಲ್ಲಿ **ಅನ ಇನಿ ಠನೌ** (ಪಾ. ಸೂ. ೫-೨-೧೧೫) ಅದಂತಪ್ರಾತಿಪದಿಕದ ಮೇಲೆ ಮತ್ವರ್ಥದಲ್ಲಿ ಇನಿಪ್ರತ್ಯಯ ಬಂದಿದೆ. **ಯಸ್ಯೇತಿಚ** (ಪಾ. ಸೂ. ೬-೪-೧೪೮) ಎಂಬುದರಿಂದ ಇನಿ ಪರದಲ್ಲಿರುವಾಗ ಕೇಶನೆಂಬುದರ ಅಕಾರಕ್ಕೆ ಲೋಪ ಬರುತ್ತದೆ ಕೇಶಿನ್+ಔ ಎಂದಿರುವಾಗ **ಸುಸಾಂಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ವಿಭಕ್ತಿಗೆ ಆಕಾರಾದೇಶ ಬಂದರೆ ರೂಪಸಿದ್ಧಿಯಾಗುತ್ತದೆ.

ರಭಸಾಃ—ರಭಸ ಶಬ್ದಕ್ಕೆ ವೇಗವೆಂದರ್ಥ. ಇಲ್ಲಿ ವೇಗಸಹಿತವಾದವುಗಳು ಎಂದರ್ಥ. ರಭಸ ಶಬ್ದವು ಆರ್ಚ ಆದಿಯಲ್ಲಿ ಸೇರಿರುವುದರಿಂದ **ಅರ್ಶಆದಿಭ್ಯೋ೨ಚ್** (ಪಾ ಸೂ. ೫-೨-೧೨೭) ಎಂಬುದರಿಂದ ಮತ್ವರ್ಥದಲ್ಲಿ ಅಚ್ಪ್ರತ್ಯಯ ಬರುತ್ತದೆ. ಯಸ್ಯೇತಿ ಚ ಎಂಬುದರಿಂದ ಪ್ರಕೃತಿಯ ಅಕಾರಕ್ಕೆ ಲೋಪವಾಗಿ ರಭಸವೆಂದೇ ಆಗುತ್ತದೆ. ಪ್ರಥಮಾ ಬಹುವಚನದಲ್ಲಿ ರೂಪಸಿದ್ಧಿಯಾಗಿದೆ.

ಅಮಂದಿಷುಃ—ಸುದಿ ಸ್ತುತಿಸೋಮನುದಸ್ಸ್ಪಷ್ಕಾಂತಿಗತಿಷು ಧಾತು ಭ್ವಾದಿ ಆತ್ಮನೇಪದಿ. **ವ್ಯತ್ಯಯೋ ಬಹುಲಂ** (ಪಾ. ಸೂ ೩-೧-೮೫) ಎಂಬುದರಿಂದ ವ್ಯತ್ಯಯದಿಂದ ಇಲ್ಲಿ ಪರಸ್ಮೈಪದದ ಪ್ರತ್ಯಯ ಬರುತ್ತದೆ । ಸುಸ್ತಿಬುಸಗ್ರಪೆ ಲಿಂಗನರಾಣಾಂ ಕಾಲಹಲಚ್ ಸ್ಮರಕರ್ತೃಯಜಾಂಚ । ವ್ಯತ್ಯಯ ಮಿಚ್ಛಂತಿ ಶಾಸ್ತ್ರಕೃದೇಷಾಂ ಸೋ೨ಪಿ ಚ ಸಿದ್ಧ್ಯತಿ ಬಾಮುಲಕೇನ ಎಂಬ ಕಾರಿಕೆಯಲ್ಲಿಯೂ ಉಪಗ್ರಹಪದದಿಂದ ಪರಸ್ಮೈಪದಾತ್ಮನೇಪದಗಳನ್ನು ತೆಗೆದುಕೊಂಡು ವ್ಯತ್ಯಯವನ್ನು ಬೇಕಾದವರು ಬಹುವಚನದ ಝಿ ಪ್ರತ್ಯಯಕ್ಕೆ **ಸಿಚಭ್ಯಸ್ತ ಏದಿಭ್ಯಶ್ಚ** (ಪಾ. ಸೂ ೩-೪-೧೦೯) ಎಂಬುದರಿಂದ ಜುಸಾದೇಶ ಬರುತ್ತದೆ. ಜುಸಿನಲ್ಲಿ ಉಸ್ ಉಳಿಯುತ್ತದೆ. ಲುಙನಲ್ಲಿ ಪ್ರಾಪ್ತವಾಗಿ ಝಿಗೆ ಸಿಚ್ ಬಂದರೆ ಸಿಚಿಗೆ ವಲಾದಿಲಕ್ಷಣ ಇಡಾಗಮ ಬರುತ್ತದೆ. ಇಗಿನ ಪರದಲ್ಲಿರುವ ಸಿಚ್ ಸಂಬಂಧಿ ಸಕಾರಕ್ಕೆ ಷತ್ವ ಬರುತ್ತದೆ. ಧಾತುವಿಗೆ ಲುಙ್ ನಿಮಿತ್ತವಾದ ಅಡಾಗಮ ಬರುತ್ತದೆ. ಅಮದ್+ಇಸ್+ಉಸ್ ಧಾತುವಿಗೆ ಗುಣಾದೇಶ ಬಂದರೆ ರುತ್ವ ವಿಸರ್ಗಗಳು ಬರುತ್ತವೆ.

ಪೂಷಣ್ವಾನ್—ಪುಷ ಪುಷ್ಟೌ ಧಾತು ಈ ಧಾತುವಿನಮೇಲೆ **ಶ್ನುಸ್ಸ್ನಕ್ಸನ್** (ಉ ಸೂ ೧-೧೫೬) ಎಂಬುದರಿಂದ **ಕನಿನ್** ಪ್ರತ್ಯಯವಾಗಿ ನಿಪಾತಿತವಾಗಿದೆ. ಶಾಸ್ತ್ರಾಂತರದಿಂದ ಅಪ್ರಾಪ್ತವಾದ ಕಾರ್ಯಗಳನ್ನು ಸೇರಿಸಿ ಉಚ್ಚರಿಸುವುದೇ ನಿಪಾತನೆನಿಸುತ್ತದೆ. ಇಲ್ಲಿ ಆ ಕನಿನ್ ಪ್ರತ್ಯಯವು ಭಾವಾರ್ಥದಲ್ಲಿ ಬಂದಿದೆ ಎಂದು ಸ್ವೀಕರಿಸ ಬೇಕು. ಪೂಷಾ ಅಸ್ಯ ಅಸ್ತೀತಿ—ಪುಷ್ಟಿಯು (ಬಲ) ಇವನಿಗೆ ಇದೆ ಎಂಬರ್ಥದಲ್ಲಿ **ತದಸ್ಮಾಸ್ತ್ಯಸ್ಮಿನ್ನಿತಿ ಮತುಪ್** (ಪಾ ಸೂ. ೫-೨-೯೪) ಎಂಬುದರಿಂದ ಮತುಪ್ ಪ್ರತ್ಯಯ ಬರುತ್ತದೆ. ಪೂಷನ್+ಮತ್ ಎಂದಿರುವಾಗ

ಮ್ಲಾಹುಸಧಾಯಾಶ್ಚ ಮತೋರ್ವೋಯವಾದಿಭ್ಯಃ (ಪಾ. ಸೂ ೮-೨-೯) ಎಂಬುದರಿಂದ ಇಲ್ಲಿ ಅಕಾರ ಉಪಧೆಯಾಗಿ ಉಳ್ಳ ಶಬ್ದದ ಮೇಲೆ ಮತುಪ್ ಬರುವುದರಿಂದ ಮತುಪಿನ ಮಕಾರಕ್ಕೆ ವಕಾರ ಬರುತ್ತದೆ **ಅನೋನುಟ್** (ಪಾ. ಸೂ. ೮-೨-೬) ಅನ್ನಂತದ ಪರದಲ್ಲಿರುವ ಮತುಪಿಗೆ ನುಟ್ ಬರುತ್ತದೆ ಇಲ್ಲಿ ಪೂಷನ್+ಮತ್ ಎಂದಿರುವಾಗ **ನಲೋಪಃ ಪ್ರಾತಿಪದಿಕಾಂತಸ್ಯ** ಎಂಬ ಸೂತ್ರದಿಂದ ಪೂಷನ್ ಎಂಬಲ್ಲಿರುವ ನಕಾರಕ್ಕೆ ಲೋಪ ಬಂದಮೇಲೆ ಸ್ಥಾನಿವದ್ಭಾವದಿಂದಾಗಲಿ ಭೂತಪೂರ್ವಗತಿಯನ್ನು ಆಶ್ರಯಿಸಿಯಾಗಲೀ ಅನ್ನಂತದ ಪರದಲ್ಲಿ ಮತುಪಿವೆಯೆಂದು ನುಡಾಗಮ ಬರುತ್ತದೆ ಆಗ್ನಿಯುನವಾಗಿ ಬಂದರೆ ಪುನಃ ನಕಾರಶ್ರವಣವಾಗುತ್ತದೆ ಪ್ರಥಮಾ ಸು ಪರದಲ್ಲಿರುವಾಗ ಮತುಪಿನಲ್ಲಿ ಉಗಿತ್ತ್ವವುದರಿಂದ ಸುಪ್ ಬರುತ್ತದೆ. ಅತ್ಸಂತವಾಗುದರಿಂದ ಉಸಧಾ ದೀರ್ಘ ಬರುತ್ತದೆ. ಸಂಯೋಗಾಂತಲೋಪವಾಡಿದಾಗ ಹಲು ಉಳಿದ್ದವಾದುದರಿಂದ ಪುನಃ ಕೊನೆಯ ನುಪಿನ ನಕಾರಕ್ಕೆ ಲೋಪಬರುವುದಿಲ್ಲ **ಹ್ರಸ್ವನುಡ್ಭ್ಯಾಂ ಮತುಪ್** (ಪಾ ಸೂ. ೮-೧-೭೭) ಪ್ರತ್ಯಯಾದ ಅಂತೋದಾತ್ತನ ಪರದಲ್ಲಿರ ನುಟಿನ ಪರದಲ್ಲಿರುವ ಮತುಪ್ ಉದಾತ್ತವಾಗುತ್ತದೆ ಎಂಬುದರಿಂದ ಇಲ್ಲಿ ನುಟಿನ ಪರದಲ್ಲಿ ಮತುಪ್ ಇರುವುದರಿಂದ ಉದಾತ್ತಸ್ವರ ಬಂದಿದೆ

ಆಮುದಃ— ಮದೀ ಹರ್ಷೇ ಧಾತು ದಿವಾದಿ **ಛಂದಸಿ ಲುಙ್‌ಲಙ್‌ಲಿಟಃ** (ಪಾ. ಸೂ ೩-೪-೬) ಎಂಬುದರಿಂದ ಪ್ರಾರ್ಥನಾರೂಪ ಅರ್ಥದಲ್ಲಿ ಲಙ್ ಬಂದಿದೆ. ದಿವಾದಿಗೆ ಶ್ಯನ್ ವಿಕರಣವು ಪ್ರಾಪ್ತವಾದರೆ ವ್ಯತ್ಯಯದಿಂದ ಶಪ್ ಬರುತ್ತದೆ. ಮಧ್ಯಮಪುರುಷೈಕವಚನದಲ್ಲಿ ಸಿಪ್ ಪ್ರತ್ಯಯ ಬಂದಾಗ ಮದ್+ಅ+ಸ್ ಎಂದಾಗುತ್ತದೆ ಲಙ ಪರದಲ್ಲಿರುವಾಗ ಧಾತುವಿಗೆ (ಅಂಗಕ್ಕೆ) ಅಡಾಗಮ ಬರುತ್ತದೆ ॥ ೬ ॥



ಏಂಭತ್ತನೂರನೆಯ ಸೂಕ್ತವು

ಅಶ್ವಾವತೀತಿ ಷಡೃಚಂ ದಶಮಂ ಸೂಕ್ತಂ ಗೋತಮಸ್ಯಾರ್ಷಮೈಂದ್ರಂ ಜಾಗತಂ। ತಥಾ ಚಾನುಕ್ರಾಂತಂ। ಅಶ್ವಾವತಿ ಜಾಗತಮಿತಿ। ಅತಿರಾತ್ರೇ ತೃತೀಯೇ ಪರ್ಯಾಯೇ ಬ್ರಾಹ್ಮಣಾಚ್ಛಂಸಿಶಸ್ತ್ರ ಇದಂ ಸೂಕ್ತಂ। ಸೂತ್ರಿತಂ ಚ। ಅಶ್ವಾವತಿ ಪ್ರೋಗ್ಯಾಂ ಪೀತಿಂ ವೃಷ್ಣ ಇಯರ್ಮಿ ಸತ್ಯಾಮಿತಿ ಯಾಜ್ಯಾ। । ಅ ೬-೪ । ಇತಿ ॥

ಅನುವಾದವು— **ಅಶ್ವಾವತಿ ಪ್ರಥಮಃ**—ಎಂಬ ಸೂಕ್ತವು ಪದಿನೂರನೆಯ ಹನುವಾಕದಲ್ಲಿ ಹತ್ತನೆಯ ಸೂಕ್ತವು ಇದರಲ್ಲಿ ಆರು ಋಕ್ಕುಗಳಿರುವವು ಈ ಸೂಕ್ತಕ್ಕೆ ಗೋತಮನು ಋಷಿಯು, ಇಂದ್ರನು ದೇವತೆಯು,

ಜಗತೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಅಶ್ವಾವತಿ ಜಾಗತಂ** ಎಂದು ಹೇಳಿರುವುದು. ಅತ್ರಿರಾತ್ರವೆಂಬ ಯಾಗದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರದ ತೃತೀಯಪರ್ಯಾಯದಲ್ಲಿ ಈ ಸೂಕ್ತದ ವಿನಿಯೋಗವಿರುವುದು. ಈ ವಿಷಯವನ್ನು ಆಶ್ವಲಾಯನಶ್ರೌತಸೂತ್ರದಲ್ಲಿ **ಅಶ್ವಾವತಿ ಪ್ರೋಗ್ರಾಂ ಪೀತಿಂ ವೃಷ್ಣ ಇಯರ್ಮಿ ಸತ್ಯಾಮಿತಿ ಯಾಜ್ಯಾ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ ೬-೪)

— ೫೮ —

ಸೂಕ್ತ—೬೩

ಮಂಡಲ—೧ ॥ ಅನುವಾಕ—೧೫ ॥ ಸೂಕ್ತ—೬೩ ॥

ಪ್ರಥಮ ಕ—೧ ॥ ಪ್ರಥಮಾಧ್ಯಾಯ—೬ ॥ ವರ್ಗ—೪

ಸೂಕ್ತದಲ್ಲಿರುವ ಋಕ್ಸಂಖ್ಯೆ—೬

॥ ಋಷಿ—ಗೋತಮೋ ರಾಹೂಗಣಃ ॥

॥ ದೇವತಾ—ಇಂದ್ರಃ ॥

॥ ಛಂದಸ್—ಜಗತೀ ॥

ಸಂಹಿತಾಪಾಠಃ

अश्वावति प्रथमो गोषु गच्छति सुप्रावीरिन्द्र मर्त्य-
स्तवोतिभिः ।
तमित्पृणक्षि वसुना भवीयसा सिन्धुमापो यथाभितो विचेतसः ॥ ೧ ॥

ಪದಪಾಠಃ

ಅಶ್ವಾವತಿ । ಪ್ರಥಮಃ । ಗೋಷು । ಗಚ್ಛತಿ । ಸುಪ್ರಾವೀಃ । ಇಂದ್ರ । ಮ-
ರ್ತ್ಯಃ । ತವ । ಊತಿಭಿಃ ।
ತಂ । ಇತ್ । ಪೃಣಕ್ಷಿ । ವಸುನಾ । ಭವೀಯಸಾ । ಸಿಂಧುಂ । ಆಪಃ । ಯಥಾ ।
ಅಭಿತಃ । ವಿ । ಚೇತಸಃ ॥ ೧ ॥

ಸಾಯಣಭಾಷ್ಯಂ ॥

ಹೇ ಇಂದ್ರ ಯೋ ಮರ್ತ್ಯೋ ಮನುಷ್ಯಸ್ತವೋತಿಭಿಸ್ತ್ವದೀಯೈ ರಕ್ಷಣೈಃ ಸುಪ್ರಾವೀಃ ಸುಷು ಪುರಕ್ಷಿತೋ ಭವತಿ ಸ ಮರ್ತ್ಯೋಽಶ್ವಾವತಿ ಬಹುಭಿರಶ್ವೈರ್ಯುಕ್ತೇ ಗೃಹೇ ವರ್ತಮಾನೋ ಗೋಷು ಪ್ರಾಪ್ತವ್ಯೇಷು ಪ್ರಥಮೋ ಗಚ್ಛತಿ । ಸರ್ವೇಭ್ಯೋ ಯಜಮಾನೇಭ್ಯಃ ಪೂರ್ವಮೇವ ಗೋಮಾನ್ ಭವತೀತ್ಯರ್ಥಃ । ತ್ವಂ ತಮಿತ್ ತಮೇವ ಪುರುಷಂ ಭವೀಯಸಾ ಬಹುತರೇಣ ಭವಿತೃತಮೇನ ವಾ ಶತಸಹಸ್ರಾದಿಸಂಖ್ಯಾಯುಕ್ತೇನ ವಸುನಾ ಧನೇನ ಪೃಣಕ್ಷಿ । ಸಂಪೃಕ್ತಂ ಸಂಪೂರ್ಣಂ ಕರೋಷಿ । ತತ್ರ ದೃಷ್ಟಾಂತಃ । ವಿಚೇತಸೋ ವಿಶಿಷ್ಟಜ್ಞಾನಹೇತುಭೂತಾ ಆಪೋ ಯಥಾಭಿತಃ ಸರ್ವಾಸು ದಿಕ್ಷು ಸಿಂಧುಂ ಸಮುದ್ರಂ ಸ್ಯಂದಯಂತಿ ತದ್ವತ್ ॥ ಅಶ್ವಾವತಿ । ಮಂತ್ರೇ ಸೋಮಾಶ್ವೇತಿ ಮತೌ ದೀರ್ಘತ್ವಂ । ಸುಪ್ರಾವೀಃ । ಅವಿತ್ರ್ಯಸ್ತೃತಂತ್ರಿಭ್ಯ ಈಃ । ಉ ಷ-ಣಿಲ । ಇತ್ಯವತೇರೀಕಾರಪ್ರತ್ಯಯಃ । ಊತಿಭಿಃ । ಊತಿಯೂತೀತ್ಯಾದಿನಾ ಕ್ತಿನ ಉದಾತ್ತತ್ವಂ । ಪೃಣಕ್ಷಿ । ಪೃಚೀ ಸಂಪರ್ಕೇ । ರೌಧಾದಿಕಃ । ಭವೀಯಸಾ । ಬಹುಶಬ್ದಾದೀಯಸುನಿ ಬಹೋರ್ಲೋಪೋ ಭೂ ಚ ಬಹೋರಿತಿ ಬಹುಶಬ್ದಸ್ಯ ಭೂಭಾವ ಈಯಸುನ ಈಕಾರಲೋಪಶ್ಚ । ಅತ್ರ ತು ಚ್ಛಾಂದಸತ್ವಾದೀಕಾರಲೋಪೋ ನ ಕ್ರಿಯತೇ ಭೂಭಾವಶ್ಚ ಕ್ರಿಯತೇ । ಅಥವಾ ಭವಿತೃಶಬ್ದಾತ್ತುಶ್ಛಂದಸೀತೀಯಸುನ್ । ತುರಿಷ್ಠೇಮೇಯಃಸ್ವಿತಿ ತೃಲೋಪಃ ॥ ೧ ॥

ಕನ್ನಡವಾಕ್ಯಾರ್ಥ

ಇಂದ್ರ— ಎಲೈ ಇಂದ್ರನೇ । **ಮರ್ತ್ಯಃ**—(ಯಾವ) ಮನುಷನು । **ತವ**— ನಿನ್ನ । **ಊತಿಭಿಃ**— ರಕ್ಷಣೆಗಳಿಂದ । **ಸುಪ್ರಾವೀಃ**— ಚೆನ್ನಾಗಿ ರಕ್ಷಿತನಾಗುತ್ತಾನೋ, (ಅವನು) । **ಅಶ್ವಾವತಿ**— ಕುದುರೆಗಳಿಂದ ಭರಿತವಾದ ಮನೆಯಲ್ಲಿ (ಇದ್ದುಕೊಂಡು) । **ಗೋಷು**— ಗೋವುಗಳಲ್ಲಿ । **ಪ್ರಥಮಂ**— ಮೊದಲಸಲವನಾಗಿ । **ಗಚ್ಛತಿ**— ಸೇರುತ್ತಾನೆ. ಎಲ್ಲರಿಗಿಂತಲೂ ಮೊದಲು ಇಂತಹ ಯಜಮಾನನು ಗೋವುಗಳನ್ನು ಹೊಂದುತ್ತಾನೆ. । **ತ್ವಮಿತ್**—ಅದೇ ಯಜಮಾನನನ್ನು । **ಆಪಃ**— ನೀರುಗಳು ತಥಾ (ನದಿಗಳು) । **ವಿಚೇತಸಃ**— ಚೇತನರಹಿತನಾದರೂ ಕೂಡ । **ಯಥಾ**— ಯಾವರೀತಿ । **ಅಭಿತಃ**— ಎಲ್ಲಾ ದಿಕ್ಕುಗಳಿಂದಲೂ । **ಸಿಂಧುಂ**—

ಇನುದ್ರವನ್ನು (ತುಂಬುತ್ತಿನೆಯೋ)ಹಾಗೆ । **भवीयसा**— ನಾನಾವಿಧವಾದ ಅಥವಾ ಶ್ರೇಷ್ಠವಾದ । **वसव्ना**— ಧನದಿಂದ । **पृणक्षि**— ತುಂಬಿರುವನನ್ನಾಗಿ ಮಾಡುತ್ತೀಯೆ. ।

ಭಾವಾರ್ಥ

ಎಲ್ಲೆ ಇಂದ್ರನೇ, ನಿನ್ನಿಂದ ರಕ್ಷಿತನಾದ ಮಾನವನು ಕುಸುರಿಗಳಿಂದ ಭರಿತವಾದ ಮನೆಯಲ್ಲಿನ್ನುಕೊಂಡು ಬಳಿದವರೆಲ್ಲರಿಗಿಂತಲೂ ಮುಂಚೆಯೇ ಅಧಿಕವಾದ ಗೋವುಗಳನ್ನು ಪಡೆಯುತ್ತಾನೆ. ನೀನೂ ಆ ಯಜಮಾನನಿಗೆ ಚೇತನರಹಿತವಾದರೂ ಸಹ ಯಾವರೀತಿ ನದಿಗಳು ನಾನಾ ದಿಕ್ಕುಗಳಿಂದಲೂ ಸಮುದ್ರವನ್ನು ಸೇರಿಸಿಂದ ತುಂಬುತ್ತವೆಯೋ ಹಾಗೆ ಬಹುವಿಧವಾದ ಧನಗಳನ್ನು ಒದಗಿಸಿ ಅವನನ್ನು ಸಂಪದ್ಯುಕ್ತನನ್ನಾಗಿ ಮಾಡುತ್ತೀಯೆ.

English Translation

Indra, the man who is well protected by you dwells in a house with plenty of horses ; he is the first to go to the place where there are cows. fill him with plenty of riches as the rivers unconsciously flow in all directions to reach the ocean.

॥ ವಿಶೇಷವಿಷಯಗಳು.

अश्वावति – ಅನೇಕ ಕುದುರೆಗಳಿಂದ ಕೂಡಿವ ಗೃಹದಲ್ಲಿ ಇರುವನು ಎಂದರೆ ಇವನ ಗೃಹದಲ್ಲಿ ಬೇಕಾದಷ್ಟು ಕುದುರೆಗಳಿರುವವು. ಇಲ್ಲಿ ಗೃಹಶಬ್ದವಿಲ್ಲದಿದ್ದರೂ ಭಾಷ್ಯಕಾರರು ಅರ್ಥಸಮನ್ವಯಕ್ಕಾಗಿ ಅಧ್ಯಾಹಾರಮಾಡಿರುವರು. **ಈ** ಸೂಕ್ತದಲ್ಲಿರುವ ಋಕ್ಕುಗಳೆಲ್ಲವೂ ಆಪ್ಷಷ್ಟಾರ್ಥದಿಂದ ಕೂಡಿರುವವು ಅನೇಕ ಶಬ್ದಗಳನ್ನು ಅರ್ಥಸಮನ್ವಯಕ್ಕಾಗಿ ಅಧ್ಯಾಹಾರಮಾಡಿಕೊಳ್ಳಬೇಕಾಗಿರುವುದು ಆದರೂ ಆ ರೀತಿ ಕೆಲವು ಶಬ್ದಗಳನ್ನು ಅಧ್ಯಾಹಾರಮಾಡಿ ಬೇರೆ ವಿಧವಾದ ಅರ್ಥವನ್ನು ಹೊಂದಿಸಿದರೂ ಋಷಿಯ ಆಶಯವನ್ನು ಸರಿಯಾಗಿ ನಿಸರಿಸಲಾಗುವುದೆಂದು ಹೇಳುವುದು ಸಂಶಯಾಸ್ಪದವಾಗಿರುವುದು

पृथमो गोषु गच्छति– ಈ ವಾಕ್ಯದ ಅರ್ಥವು ಸಂಶಯಾಸ್ಪದವಾಗಿ ತೋರುವುದಿಲ್ಲ. ಆದರೂ **अश्वावति** ಎಂಬ ಶಬ್ದಕ್ಕೆ ಹೇಳಿದಂತೆ ಇವನ ಗೃಹದಲ್ಲಿ ಅನೇಕ ಗೋವುಗಳಿರುವವು ಎಂಬ ಅರ್ಥವನ್ನೇ ಊಹಿಸಬಹುದು.

सुस्रावीः ऊतिभिः– ಇಲ್ಲಿ ನಿನ್ನ ರಕ್ಷಣೆಗಳಿಂದ ರಕ್ಷಿಸಲ್ಪಟ್ಟಿರುವನು. ಎಂದು ದ್ವಿರುಕ್ತಿಯಿರುವುದು. ಎಂದರೆ ನಿನ್ನ ರಕ್ಷಣೆಗೊಳಪಟ್ಟ ಅಥವಾ ನೀನು ರಕ್ಷಿಸುವ ಮನುಷ್ಯನು ಎಂದು ಮುಖ್ಯಾಭಿಪ್ರಾಯವು.

तमित् पृणक्षि वसुना— ಧನ ಅಥವಾ ಐಶ್ವರ್ಯದಿಂದ ಆ ಮನುಷ್ಯನನ್ನು ತುಂಬಿಸೆ ಎಂದರೆ ಅವನಿಗೆ ಬಹಳ ಐಶ್ವರ್ಯವನ್ನು ಕೊಡುನೆ ಎಂದರ್ಥವು

भवीयसा – **बहुतरेण, भविष्यतेनेन**— ಬಹಳವಾಗಿ, ಯಥೇಚ್ಛವಾಗಿ

अपः विचेतसः – **विचेतसः** ಎಂಬ ಶಬ್ದಕ್ಕೆ ಭಾಷ್ಯಕಾರರು **विशिष्यज्ञानहेतुभूताः**

ಎಂಥಹ ಸಮಸ್ತ ಜ್ಞಾನದಿಂದ ಕೂಡಿದ ನೀರುಗಳು ಅಥವಾ ನದಿಗಳು ಎಂದರ್ಥಮಾಡಿರುವರು. ಅಚೇತನವಾದ ನೀರಿಗೆ ಜ್ಞಾನವಿರುವುದು ಹೇಗೆ? ಇದು ಅಸಂಭವವಾದ್ದರಿಂದ **-ವಿಚೇತಸಃ**—ಎಂಬ ಶಬ್ದದಲ್ಲಿರುವ **ವಿ** ಎಂಬ ಉಪಸರ್ಗಕ್ಕೆ ವಿಗತ ಎಂದು ನಿಷೇಧಾರ್ಥವನ್ನು ಹೇಳಿದಲ್ಲಿ ಅರ್ಥವು ಸ್ವಲ್ಪಮಟ್ಟಿಗೆ ಹೊಂದುವುದು ಆದುದರಿಂದ ವಿಚೇತಸಃ ಎಂದರೆ ಜ್ಞಾನರಹಿತವಾದ ನದಿಗಳು: ಅಥವಾ ನದಿಗಳಿಗೆ ಸಮುದ್ರಕ್ಕೆ ಹೋಗಿ ಸೇರಬೇಕೆಂಬ ಜ್ಞಾನ ವಿಲ್ಲದಿದ್ದರೂ ನಿನ್ನು ಪ್ರದೇಶಗಳಲ್ಲಿ ಹರಿಯುತ್ತಾ ಕೊನೆಗೆ ಸಮುದ್ರನನ್ನು ಸೇರುನಂತೆ ಎಂಬ ಅರ್ಥವನ್ನೇ ಹೇಳಬೇಕಾಗಿರುವುದು

ಅಭಿತಃ—ಎಲ್ಲಾ ಕಡೆಯಲ್ಲಿಯೂ ಎಂಗಳೆ ನದಿಗಳು ಯಾವ ದಿಕ್ಕಿಗಭಿಮುಖವಾಗಿ ಹರಿಯುತ್ತಿದ್ದರೂ ಕೊನೆಗೆ ಸಮುದ್ರನನ್ನೇ ಸೇರುವವು; ಎಲ್ಲಾ ದಿಕ್ಕಿನಲ್ಲಿ ಹರಿಯುವ ನದಿಗಳೂ ಸಮುದ್ರನನ್ನೇ ಸೇರುವವು ಎಂದಭಿವ್ಯಾಯನು.

ಇತಿ ಪ್ರಥಮಸ್ಯ ಕ್ರಿಯಾ ॥

ಅಶ್ವಾವತಿ—ಅಶ್ವಾಃ ಅಸ್ಮಿನ್ ಸಂತಿ (ಕುದುರೆಗಳು ಇಲ್ಲ ಇವೆ) ಎಂಬರ್ಥದಲ್ಲಿ **ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್** (ಪಾ. ಸೂ. ೫-೨-೯೪) ಎಂಬುದರಿಂದ ಮತುಪ್ ಪ್ರತ್ಯಯ ಬರುತ್ತದೆ. ಮಾದುಪಧಾಯಾ—ಎಂಬ ಸೂತ್ರದಿಂದ ಅಕಾರದ ಪರದಲ್ಲಿರುವುದರಿಂದ ಮತುಪಿನ ಮಕಾರಕ್ಕೆ ವಕಾರ ಬರುತ್ತದೆ. **ಮಂತ್ರೇ ಸೋಮಾಶ್ವೇಂದ್ರಿಯ ವಿಶ್ವದೇವ್ಯಸ್ಯ ಮತೌ** (ಪಾ.ಸೂ. ೬-೩-೧೩೧) ಎಂಬುದರಿಂದ ಮತುಪ್ ಪರದಲ್ಲಿರುವುದರಿಂದ ಮಂತ್ರದಲ್ಲಿ ಅಶ್ವಶಬ್ದಕ್ಕೆ ದೀರ್ಘ ಬರುತ್ತದೆ. ಸಪ್ತಮ್ಯೈಕವಚನ ಬಿ ಪ್ರತ್ಯಯಪರದಲ್ಲಿರುವಾಗ ಅಶ್ವಾವತಿ ಎಂದು ಸಿದ್ಧ ವಾಗುತ್ತದೆ.

ಸುಪ್ರಾವೀಃ—ಸು ಪ್ರ ಉಪಸರ್ಗಗಳು ತಪ ರಕ್ಷಣೆ ಧಾತು ಭಕ್ತಿ **ಅವಿತೃಸ್ತೃತಂತ್ರಿಭ್ಯ ಈಃ** (ಉ. ಸೂ ೩-೪೩) ಎಂಬುದರಿಂದ ಅವಧಾತುವಿಗೆ ಈ ಪ್ರತ್ಯಯ ಬರುತ್ತದೆ. ಅವೀ+ಸ್ ಎಂದಿರುವಾಗ ಈ ಪ್ರತ್ಯಯಾಂತವಾದುದರಿಂ ಹಲ್ಜ್ಯಾಭ್ಯೋ ದೀರ್ಘಾತ್ – ಸೂತ್ರದಿಂದ ಸುಲೋಪ ಬರುವುದಿಲ್ಲ **ರುತ್ವವಿಸರ್ಗಯಲೋಪ** ಗಳಿಂದಾಗಿ ಅವೀಃ ಎಂದಾಗುತ್ತದೆ.

ಊತಿಭಿಃ—ಅವ ರಕ್ಷಣೇ ಧಾತು. **ಊತಿಯೂತಿಜೂತಿಸಾತಿಹೇತಿಕೀರ್ತಯಶ್ಚ** (ಉ. ಸೂ ೩-೧-೯೭) ಇವುಗಳಿಗೆ ಕ್ತಿನ್ ಪ್ರತ್ಯಯವು ನಿಪಾತಿತವಾಗಿದೆ. ಊತಿ ಎಂಬಲ್ಲಿ ಅವಧಾತುವಿಗೆ ಕ್ತಿನ್ ಪ್ರತ್ಯಯ ನೂಡಿದಾಗ **ಜ್ವರತ್ವರಸ್ರಿವ್ಯವಿಮವಾಮುಪಧಾಯಾಶ್ಚ** (ವಾ ಸೂ ೬-೪-೨೦) ಎಂಬುದರಿಂದ ವಕಾರಕ್ಕೆ ಊಠ್ ಬರುತ್ತದೆ. ಸೂತ್ರದಿಂದ ರೂಪ ಸಿದ್ಧವಾದರೂ ಊತೀಯತಿ ಎಂಬ ಸೂತ್ರದಿಂದ ಸ್ವರಾರ್ಥವಾಗಿ ನಿಪಾತನಮಾಡಿರುತ್ತಾರೆ. ಕ್ತಿನ್ ನಿತ್ತಾದುದರಿಂದ ಬರತಕ್ಕ ಸ್ವರವನ್ನು ಬಾಧಿಸಿ ಉದಾತ್ತಸ್ವರವು ನಿಪಾತಿತವಾಗಿದೆ.

ಪೃಣಿಕ್ಷಿ—ಪೃಣೀ ನಂಪರ್ಕೆ ಧಾತು. ರುಧಾದಿ. ಇವುಗಳಿಗೆ ಶ್ಯನ್ ವಿಕರಣಪ್ರತ್ಯಯ ಬರುತ್ತದೆ ಮಿತ್ತಾಗುದರಿಂದ ಅಂತ್ಯಾಚಿನ ಪರದಲ್ಲಿ ಬರುತ್ತದೆ. ಪೃಣಶ್+ಸಿ ಎಂದಿರುವಾಗ **ಋವರ್ಣಾನ್ನಸ್ಯಣತ್ವಂನಾಚ್ಯಂ** (ನಾತಿಕ) ಎಂಬುದರಿಂದ ವಿಕರಣಕ್ಕೆ ಣತ್ವವು ಬರುತ್ತದೆ **ಚೋಃ ಕುಃ** ಎಂಬುದರಿಂದ ಕಕಾರವು ಚಕಾರಕ್ಕೆ

ಬರುತ್ತದೆ. **ಕ**ಕಾರದ ಪರದಲ್ಲಿರುವುದರಿಂದ ಪ್ರತ್ಯಯಕ್ಕೆ **ಷ**ತ್ವಬಂದಾಗ **ಕ**ಕಾರ**ಷ**ಕಾರಯೋಗ ಬಂದಿರುವುದರಿಂದ ಕ್ಷಕಾರವಾಗುತ್ತದೆ.

ಭವೀಯಸಾ—ಭವೀಯಸ್ ಶಬ್ದ. ಸಕಾರಾಂತ ತೃತೀಯೈಕವಚನ. **ದ್ವಿವಚನ ವಿಭಜ್ಯೋಪಪದೇ ತರಬೀಯಸುನೌ** (ಪಾ. ಸೂ. ೫-೩-೫೭) ಎಂಬುದರಿಂದ ಅತಿಶಯಾರ್ಥದಲ್ಲಿ ಬಹುಶಬ್ದದ ಮೇಲೆ ಈಯಸುನ್ ಪ್ರತ್ಯಯಬಂದಿದೆ. ಈಯಸುನ್ ಪರದಲ್ಲಿರುವಾಗ **ಬಹೋರ್ಲೋಪೋಭೂಚ ಬಹೋಃ** (ಪಾ. ಸೂ ೬-೪-೧೫೮) ಬಹುಶಬ್ದದ ಮೇಲಿರುವ ಇಮನಿಚ್, ಈಯಸುನ್ ಪ್ರತ್ಯಯಗಳಿಗೆ ಲೋಪಬರುತ್ತದೆ. ಬಹುಶಬ್ದಕ್ಕೆ ಭೂ ಎಂಬ ಆದೇಶ ಬರುತ್ತದೆ. (ಪಂಚಮ್ಯಂತವ ಪರದಲ್ಲಿರುವುದಕ್ಕೆ ಕಾರ್ಯವಿಧಾನಮಾಡಿದರೆ **ಆದೇಃ ಪರಸ್ಯ** (ಪಾ ಸೂ. (ಪಾ. ಸೂ. ೧-೧-೫೪) ಎಂಬ ಪರಿಭಾಷೆಯಿಂದ ಪರದ ಆದಿಭಾಗಕ್ಕೆ ಮಾತ್ರ ಬರುತ್ತದೆ ಎಂಬುದರಿಂದ ಬಹುಶಬ್ದದ ಪರದಲ್ಲಿರುವ ಈಯಸುನಿನ ಈಕಾರಕ್ಕೆ ಮಾತ್ರ ಲೋಪಪ್ರಾಪ್ತವಾಗುತ್ತದೆ. ಬಹುಶಬ್ದಕ್ಕೆ ಭೂಭಾವವು ಪ್ರಾಪ್ತವಾಗುತ್ತದೆ. ಆದರೆ ಇಲ್ಲಿ **ಸರ್ವೇ ವಿಧಯಶ್ಚಂದಸಿ ವಿಕಲ್ಪ್ಯಂತೆ** ಎಂಬ ಯೋಗವಿಭಾಗದಿಂದ ಸಿದ್ಧವಾವ ಅರ್ಥವನ್ನು ಸ್ವೀಕರಿಸಿ ಬಹು ಎಂಬುದಕ್ಕೆ ಭೂಭಾವಮಾತ್ರ ಬರುತ್ತದೆ. ಈಯಸುನಿನ ಈಕಾರಕ್ಕೆ ಲೋಪಮಾತ್ರ ಬರುವುದಿಲ್ಲ. ಈಯಸುನಿನಲ್ಲಿ ಈಯಸ್ ಎಂದು ಉಳಿಯುತ್ತದೆ. ಭೂ+ಈಯಸ್ ಎಂದಿರುವಾಗ **ಓರ್ಗುಣಃ** ಎಂಬುದರಿಂದ ತದ್ಧಿತ ಪರದಲ್ಲಿರುವುದರಿಂದ ಉವರ್ಣಾಂತಕ್ಕೆ ಗುಣ ಬರುತ್ತದೆ. ಭವ್+ಈಯಸ್ ಎಂದಿರುವಾಗ ತೃತೀಯೈಕವಚನ ಟಾವಿಭಕ್ತಿಮಾಡಿದಾಗ ಭವೀಯಸಾ ಎಂದಾಗುತ್ತದೆ. ಅಥವಾ **ಇನ್ನೊಂದು** ರೀತಿಯಿಂದ ಈ ಶಬ್ದವನ್ನು ಸಿದ್ಧಪಡಿಸಬಹುದು. ಭವಿತೃ ಶಬ್ದದ ಮೇಲೆ **ತುಶ್ಛಂದಸಿ** (ಪಾ. ಸೂ. ೫-೩-೫೯) ಎಂಬುದರಿಂದ ತೃನ್ ತೃಜಂತಗಳ ಮೇಲೆ ಛಂದಸ್ಸಿನಲ್ಲಿ ಈಯಸುನ್ ಪ್ರತ್ಯಯವು ಬರುತ್ತದೆ. ಭೂಧಾತುವಿಗೆ ತೃಚ್ ಪ್ರತ್ಯಯಮಾಡಿದಾಗ ಗುಣಾವಾದೇಶಗಳು ಬಂದಾಗ ಭವಿತೃ ಶಬ್ದವಾಗುತ್ತದೆ. ಭವಿತೃ+ಈಯಸ್ ಎಂದಿರುವಾಗ **ತುರಿಷ್ಠೇಮೇಯಃ ಸು** (ಪಾ.ಸೂ ೬-೪-೧೫೪) ಎಂಬುದರಿಂದ ಇಷ್ಠನ್, ಇಮನಿಚ್ ಈಯಸುನ್ ಪ್ರತ್ಯಯಗಳು ಪರದಲ್ಲಿರುವಾಗ ತೃನ್ ತೃಚ್‌ಗಳಿಗೆ **ಲೋಪ** ಬರುತ್ತದೆ ಎಂಬುದರಿಂದ **ತೃ** ಎಂಬುದಕ್ಕೆ ಲೋಪ ಬರುತ್ತದೆ. ಸವರ್ಣದೀರ್ಘ ಬಂದರೆ ಭವೀಯಸ್ ಎಂಬ ರೂಪಸಿದ್ಧಿಯಾಗುತ್ತದೆ. ॥ ೧೦ ॥

॥ संहितापाठः ॥

आपो॑ न दे॒वीरुप॑ यन्ति॒ होत्रि॑यमव॒ः पश्य॑न्ति॒ वित॑-
तं॒ यथा॒ रज॑ः ।
प्रा॒चैर्दे॒वासः॒ प्र ण॑यन्ति॒ देव॑युं॒ ब्रह्म॒प्रिय॑ं
जो॒षय॑न्ते॒ वरा॒ इव ॥ ७ ॥

आप॑ः । न । दे॒वीः । उप॑ । य॒न्ति॒ । होत्रि॑यं । अव॑ः । पश्य॑न्ति । वि । त॒तं॒ । यथा॑ । रज॑ः ।
प्रा॒चैः । दे॒वासः॑ । प्र । न॒य॒न्ति॒ । देव॑ऽयुं । ब्रह्म॑ऽप्रियं । जो॒ष॒य॒न्ते॒ । वरा॑ः । इव ॥ ७ ॥

सायणभाष्यं

आपो॑नप्त्रीयो॑ होत्रे॒चमसे॒ऽद्भिः पूर्यमाण आपो॑ न दे॒वीरित्ये॒षानु॒वक्त॒व्या । सूत्रि॑तं च । आपो॑ न दे॒वीरुप॑ यन्ति॒ होत्रि॑यमिति समाप्य । आ. ब्रा॰ ८ । इति ब्राह्मणं च भवति । आपो॑ न दे॒वीरुप॑ यन्ति॒ होत्रि॑यमिति॒ होत्रे॒चमसे॒ सनु॑ नयीयमानास्तन्त्राह । ऐ. ब्रा. २-२० । इति ॥

होत्रि॑यं॒ होतुः॒ स्वभू॑तं॒ चम॑सं॒ दे॒वीर्दे॒व्यो॒ द्यो॒त॒मा॒नाऽआपो॑ न यो॒ऽथा॒प॒ उप॑ यन्ति॒ उप॑गच्छ॒न्ति॒ तद्व॒दुप॑रि व॒र्त॒मा॒नाऽदे॒वाऽइ॒त॒मे॒व चम॑सं॒ नु॒वो॒ऽवस्तृ॑त्प॒श्य॒न्ति॒ । होत्रे॒चमसे॒ऽस्मा॒कं॒ सो॒मा॒भि॒षु॒णा॒या॒प॒ः पू॒रि॒ता॒ इति॑ तेषा॒ं दृ॒ष्टि॒रप॑स्यस्मिन्॑ संल॒ग्नाभू॑त्॑ । तत्र॒ दृ॒ष्टा॒न्तः॑ । इ॒त॒तं॒ नि॒स्ती॒र्णं॒ र॒जो॒ ज्यो॒तिः॑ सू॒र्यो॑ सं॒बं॒धि॒ यथा॒ निरं॑तरमु॒नस्तृ॒त॒ति॒ तद्व॑त्॑ । देव॑यु॒ं॒ दे॒वान्॑ का॒म॒यं॒मा॒नम॒ेत॑ं॒ चम॑सं॒

ಪ್ರಾಚ್ಯೈಃ ಪ್ರಾಚೀನಂ ಯದ್ವಾ ಪ್ರಾಂಚನ್ಯೈಃ ಪ್ರಗಮನ್ಯೈರುತ್ತರನೇದ್ಯಭಿಮುಖಂ ಹೋಮಕಾಲೇ ಪ್ರಣಯಂತಿ । ಹೋಮಾರ್ಥೇ ಪ್ರಣೀತಂ ಬಹ್ವಪ್ರಿಯಂ ಬ್ರಹ್ಮಣಾ ಸೋಮಲಕ್ಷಣೇನಾನ್ನೇನ ಪ್ರೀತಂ ಸಂತರ್ಪಿತಂ । ಪ್ರೀತಮಿತ್ಯರ್ಥಃ । ಜೋಷಯಂತೇ । ಸರ್ವೇ ದೇವಾಸ್ತಂ ಚಮಸಂ ಸೇವಂತೇ । ವರಾ ಇವ ಕನ್ಯಕಾಂ । ಯಥಾ ವರಾ ನೂನೇಯಂ ಭವಿಷ್ಯತಿ ಮನೋಯಂ ಭವಿಷ್ಯತೀತಿ ಕನ್ಯಕಾಂ ಸೇವಂತೇ । ಏವಂ ದೇವಾ ಅಪಿ ನೂನಾಯಂ ಸೋಮೋ ನೂನಾಯಂ ಸೋಮ ಇತ್ಯಸ್ಯಾರ್ಥೇ ವರ್ತಂತ ಇತ್ಯರ್ಥಃ। ಏವಮುಪೋನಪ್ರೀಯೇವಿನಿಯೋಗಾನುಸಾರೇಣ ಯೋಜಿತಂ ಮಂತ್ರಸ್ಯಾನುಷ್ಠೇಯಾರ್ಥಪ್ರಕಾಶಕತ್ವಾತ್॥ ಯದಾ ತು ರಾತ್ರಿಪರ್ಯಾಯೇಸ್ಯಾ ವಿನಿಯೋಗಸ್ತದಾ ತ್ವೇವಂ ವ್ಯಾಖ್ಯೇಯಂ । ಹೇ ಇಂದ್ರ ದೇವ ಆಪೋ ಯಥಾ ನಿಮ್ನದೇಶಮುಪಗಚ್ಛಂತಿ ಏವಂ ದೇವಾಸ್ತ್ವದೀಯಂ ಸ್ತೋತ್ರಂ ಶುಶ್ರೂಷಮಾಣಾ ಹೋತ್ರಿಯಂ ಹೋತೃಸಂಬಂಧಿ ಧಿಷ್ಣ್ಯಸ್ಥಾನಮುಪಗಚ್ಛಂತಿ । ಉಪಗತ್ಯ ಚಾವಸ್ತಾತ್ಪಶ್ಯಂತಿ ವಿತತಂ ಜ್ಯೋತಿರಿವ । ದೇವಯುಂ ದೇವಾನಾತ್ಮನ ಇಚ್ಛಂತಮೇತಂ ಶಂಸಿತಾರಮಾಗತಾಃ ಸರ್ವೇ ದೇವಾಃ ಸ್ವಾಚೀನಂ ಪ್ರಣಯಂತಿ । ಅಗ್ರತೋ ಧಾರಯಂತಿ । ಬ್ರಹ್ಮಪ್ರಿಯಂ ಸ್ತೋತ್ರಪ್ರಿಯಂ ತ್ವಾಂ ಶಂಸಂತಂ ನರಃ ಕನ್ಯಕಾ ಇವ ಸೇವಂತೇ ॥ ಹೋತ್ರಿಯಂ । ಹೋತೃಶಬ್ದಾತ್ತಸ್ಯೇದಮರ್ಥೇ ಘಪ್ರತ್ಯಯಃ । ಅವಃ। ಸೂರ್ಯಾದಧರಾವರಾಣಿ ಮಸಿ ಪುರಧನಕ್ಷೇತ್ರಾಣಿತ್ಯಸಿಪ್ರತ್ಯಯಾಂತೋದಾತ್ತಃ । ಪ್ರಾಚ್ಯೈಃ। ಉಚ್ಚೈರ್ನೀಚೈರಿತಿವದವ್ಯಯಂ । ಯದ್ವಾ । ಪ್ರಪೂರ್ವಾದಂಚತೇರ್ಘಞರ್ಥೇ ಕವಿಧಾನಂ ಸ್ಥಾನ್ಯಾಪಾವ್ಯಧಿಕನಿಯುಧ್ಯರ್ಧಮಿತಿಪರಿಗಣನಸ್ಯೋಪಲಕ್ಷಣಾರ್ಥತ್ವಾದ್ಭಾವೇ ಕಪ್ರತ್ಯಯಃ । ಅನಿದಿತಾಮಿತಿ ನಲೋಪಃ । ಜೋಷಯಂತೇಜುಷೀ ಪ್ರೀತಿಸೇವನಯೋಃ । ಸ್ವಾತ್ಮನಃ ಪ್ರಯೋಜ್ಯತ್ವಾದ್ಣೇರ್ತುಮತಿ ಣಿಚ್ ॥ ೨ ॥

॥ ಪ್ರತಿಪದಾರ್ಥ ॥

ಹೋತ್ರಿಯಂ - ಸೋತ್ರಪಾತ್ರಿಗೆ ಸಲಿಂದ ಚಮಸಪಾತ್ರೆಯನ್ನು । **ದೇವೀಃ**— ಪ್ರಕಾಶಮಾನಗಳಾದ । **ಆಪೋ ನ**—ತೀರ್ಥಗಳು ಬಂದುಸೇರುವಂತೆ । **ಉಪ ಯಂತಿ**—(ದೇವತೆಗಳು) ಬಂದು ಸೇರುವರು । **ವಿತತಂ**— ವಿಸ್ತಾರವಾಗಿ ಹರಡುವ । **ಜ್ಯೋತಿಃ**—ಸೂರ್ಯನ ಕಾಂತಿಯು । **ಯಥಾ**—ಯಾವ ರೀತಿ ಅಧೋಮುಖವಾಗಿ ಸ್ರವಿಸುವುದೋ ಹಾಗೆ ದೇವತೆಗಳೂ ಸಹ ಈ ರಸಪೂರಿತವಾದ ಸೌಟನ್ನು । **ಅವಃ**— ಅಧೋಮುಖವಾದ ದೃಷ್ಟಿಯಿಂದ । **ಪಶ್ಯಂತಿ**—ನೋಡುತ್ತಾರೆ । **ದೇವಯುಂ**—ದೇವತೆಗಳನ್ನು ಸಿರೀಕ್ಷಿಸಿ ಅವರಿಗೆ ಅರ್ಪಿಸಹಸ್ಸ ಈ ಸೌಟನ್ನು । **ಸ್ವಾಚ್ಯೈಃ**—(ಉತ್ತರವೇದಿಯ) ಸುಂಭಾಗದಲ್ಲಿ । **ದೇವಾಸಃ**—ದೇವತೆಗಳು । **ಪ್ರಣಯಂತಿ**—ತಿಗೆದುಕೊಂಡುಹೋಗುತ್ತಾರೆ । **ಬ್ರಹ್ಮಪ್ರಿಯಂ**— (ಸೋಮರಸರೂಪವಾದ) ಅನ್ನದಿಂದ ತುಂಬಿದಈ ಚಮಸವನ್ನು । **ವರಾ ಇವ**— ಮದುವೆಯ ಗಂಡುಗಳು ತನ್ನ ಹೊಸಪತ್ನಿಯನ್ನು ತಮ್ಮದೆಂಬ ಅಭಿಮಾನದಿಂದ ಅರಿಸಿ ಸೇವಿಸಲು ತವಕಪಡುವಂತೆ । **ಜೋಷಯಂತೇ**—(ತಮ್ಮದೆಂದು) ಅರಿಸಿ ಸೇವಿಸಲು ತವಕಪಡುತ್ತಾರೆ ।

ಅಥವಾ

(ಜಲೈ ತಂಪ್ರಸೇ) **ದೇವೀಃ**—ಪ್ರಕಾಶಮಾನಗಳಾದ । **ಆಪಃ ನ**—ತೀರ್ಥಗಳು ತಗ್ಗಾದ ಪ್ರದೇಶಗಳಲ್ಲಿ ಹೋಗಿ ಸೇರುವಂತೆ । **ಹೋತ್ರಿಯಂ**— ಹೋತೃಸಂಬಂಧನಾದ ಧಿಷ್ಣ್ಯಸ್ಥಾನವನ್ನು । **ಉಪ ಯಂತಿ**—ದೇವತೆಗಳು ನಿನ್ನ ಸ್ತೋತ್ರವನ್ನು ಕೇಳುವ ಆಸೆಯಿಂದ) ಬಂದುಸೇರುತ್ತಾರೆ । ಮತ್ತು **ವಿತತಂ**- ವಿಸ್ತಾರವಾಗಿ ಹರಡುವ । **ರಜಃ ಯಥಾ**— ಜ್ಯೋತಿಯಂತೆ । **ಅವಃ**— ಅಧೋಮುಖವಾಗಿ । **ಪಶ್ಯಂತಿ**— ನೋಡುತ್ತಾರೆ ;

देवत्रयुंम—ದೇವತೆಗಳ ಅನುಗ್ರಹವನ್ನು ಪೇಕ್ಷಿಸುವ ಸ್ತೋತೃವನ್ನು । **प्राच्यै**—ಮುಂಭಾಗದಲ್ಲಿ (ಪೂರ್ವ ಭಾಗದಲ್ಲಿ) । **प्रणयंति**—ಕರೆದುಕೊಂಡು ಹೋಗುತ್ತಾರೆ.। **ब्रह्मप्रियंम**—ಸ್ತೋತೃಪ್ರಿಯನಾದ ನಿನ್ನನ್ನು । **वराइव**—ವರರು (ಕನ್ಯರೆಯರನ್ನು ತಮ್ಮುದೆಂಬ ಅಭಿಮಾನದಿಂದ ಸೇವಿಸುವಂತೆ) । **जोषयंतेः** । (ಆದರ ದಿಂದ) ಸೇವಿಸುತ್ತಾರೆ ।

ಭಾವಾರ್ಥ

ಹೋತೃವಿಗೆ ಸೇರಿದ ಚಮಸಪಾತ್ರೆಗೆ ಪ್ರಕಾಶಮಾನಗಳಾದ ತೀರ್ಥಗಳು ಬಂದು ಸೇರುವಂತೆ ದೇವತೆ ಗಳೂ ಸಹ ಅವನ್ನು ಲಕ್ಷ್ಯದಲ್ಲಿಟ್ಟುಕೊಂಡು ಬಂದು ಸೇರುತ್ತಾರೆ ಯಜ್ಞಭೂಮಿಗೆ ಬಂದನೇಲೆ ವಿಸ್ತಾರವಾಗಿ, ಪರಡತಕ್ಕ ಸೂರ್ಯನ ಕಾಂತಿಯು ಅಧೋಮುಖವಾಗಿ ಪ್ರಸರಿಸುವಂತೆ ದೇವತೆಗಳ ಅಧೋಮುಖವಾದ ದೃಷ್ಟಿಯು ಈ ರಸಪೂರಿತವಾದ ಸೌಟಿನ ಮೇಲೆ ಬೀಳುತ್ತದೆ. ದೇವತೆಗಳನ್ನು ಸೀಕ್ಷಿಸಿ ಅವರಿಗೆ ಆರ್ಪಿಸಬೇಕಾದ ಈ ಸೌಟನ್ನು ಉತ್ತರವೇದಿಯ ಮುಂಭಾಗದಲ್ಲಿ ಶಾಸ್ತ್ರೋಕ್ತವಾಗಿ ತೆಗೆದುಕೊಂಡುಹೋದ ಮೇಲೆ ಸೋಮರಸ ಪೂರಿತವಾದ ಈ ಚಮಸವನ್ನು ಸೇವಿಸಲು, ಹೊಸದಾಗಿ ಮದುವೆಯಾಗುವವರು ತಾವು ಮದುವೆ ಯಾಗಬೇಕೆಂದು ಅಪೇಕ್ಷಿಸುವ ಕನ್ಯೆಯನ್ನು ತಮ್ಮನ್ನು ವರಿಸಬೇಕೆಂಬ ಅಪೇಕ್ಷೆಯಿಂದ ಆದರಿಸಿ ಸೇವಿಸಲು ತವಕ ಪಡುವಂತೆ ಇವರೂ ಆದರದಿಂದ ತವಕಪಡುತ್ತಾರೆ.

English Translation

As the bright waters flow to the sacrificial ladle, so the gods look down upon it; as the sun's rays spread every where and descends to earth so the gods desirous of being presented to them look down upon it; the (Chamasa) vessel filled with Soma-libations is brought to the altar with proper rites and the gods are eager to obtain it as the would-be bridgrooms long for their intended brides

ವಿವರಣೆ

होत्रियंम— ಹೋತೃಸಂಬಂಧವಾದ ಚಮಸಪಾತ್ರೆಯು. ಚಮಸಪಾತ್ರೆ ಎಂದರೆ ಯಜ್ಞದಲ್ಲಿ ಋತ್ವಿಜ್ಞರು ಸೋಮಪಾನಮಾಡುವುದಕ್ಕಾಗಿ ಉಪಯೋಗಿಸುವ ಮರದ ಪಾತ್ರೆಯು ಇದರ ವಿಸ್ತಾರವಾದ ವಿವರಣೆ ಗಾಗಿ ಋಗ್ವೇದ ಸಂ. ಭಾಗ ೨. ಪುಟ 412 ನ್ನು ನೋಡಿ. ಋಕ್ಕಿನಲ್ಲಿ ಹೋತ್ರಿಯಂ— ಹೋತೃಸಂಬಂಧವಾದ ಹೋತೃವಿನ ಎಂಬ ಶಬ್ದ ಮಾತ್ರವಿದ್ದರೂ ಭಾಷ್ಯಕಾರರು ಚಮಸವೆಂಬ ಶಬ್ದವನ್ನು ಅಧ್ಯಾಹಾರಮಾಡಿರುವರು

आपो न देवीरुपयंति होत्रियमवः पश्यंति—ಈ ವಾಕ್ಯದಲ್ಲಿ ದೇವಾಃ ಎಂಬ ಶಬ್ದವನ್ನು ಅಧ್ಯಾಹಾರಮಾಡಿರುವರು. ನೀರು ಎಂದರೆ ರಸರೂಪದಿಂದಿರುವ ಸೋಮರಸವು ಯಾವರೀತಿ ಹೋತೃಚ ಮಸಕ್ಕೆ ಬಂದು ಸೇರುವುದೋ ಅದರಂತೆ ದೇವತೆಗಳ ದೃಷ್ಟಿಯು ಸೋಮಪಾನಕ್ಕಾಗಿ ಆತುರದಿಂದ ಸೋಮರಸಪೂರಿತ ವಾದ ಚಮಸಪಾತ್ರೆಯುನೇಲೆ ಬೀಳುವುದೆಂದರ್ಥವು.

ಏತತಂ ಯಥಾ ರಜಃ—ಮೇಲಿನ ವಾಕ್ಯಕ್ಕೆ ಒಂದು ದೃಷ್ಟಾಂತವನ್ನು ಹೇಳಿರುವುದು. ಬೆಳಕು ಎಂದರೆ ಸೂರ್ಯನ ರಶ್ಮಿಯು ಅಂತರಿಕ್ಷದಿಂದ ಹೊರಹೊರಟು ಎಲ್ಲವನ್ನೂ ವ್ಯಾಪಿಸುತ್ತಾ ಭೂಮಿಯಮೇಲೆ ಬೀಳುವಂತೆ ದೇವತೆಗಳ ದೃಷ್ಟಿಯು ಸಹ ಭೂಮಿಯ ಮೇಲೆ ಯಜ್ಞವೇದಿಯಲ್ಲಿರುವ ಹೋತೃಚಮಸದ ಮೇಲೆ ಬೀಳುವುದು. ಎಂದು ಉಪಸರ್ಗಾರ್ಥವು

ಪ್ರಾಚ್ಯೈರ್ದೇವಾಸಃ ಪ್ರಣಯಂತಿ ದೇವಯುಂ ಬ್ರಹ್ಮಪ್ರಿಯಂ—ಬ್ರಹ್ಮವೆಂದರೆ ಅನ್ನವು (ನಿ. ೩-೯) ಯಜ್ಞನೇದಿಯಲ್ಲಿ ಪೂರ್ವದಿಕ್ಕಿನಲ್ಲಿರುವ ಆವಹನೀಯಾಗ್ನಿಯ ಸಮೀಪಕ್ಕೆ ದೇವತೆಗಳಿಗೆ ಅರ್ಪಿಸುವ ಹವಿಸ್ಸು ಸೋಮರಸ ಮೊದಲಾದ ಹೋಮದ್ರವ್ಯಗಳನ್ನು ತಂದು ಮಂತ್ರಪತನದಿಂದ ಸಂಸ್ಕಾರ ಮಾಡುವುದು ರೂಢಿಯು. ಆದರಂತೆ ದೇವತೆಗಳಿಗೆ ಪ್ರೀತಿಪಾತ್ರವಾದ ಹವಿರ್ಲಕ್ಷಣರೂಪವಾದ ಅನ್ನವನ್ನು ಪೂರ್ವದಿಕ್ಕಿಗೆ ತರುವರು. ಆದನ್ನು ದೇವತೆಗಳು ಅಪೇಕ್ಷಿಸುವರು ಎಂದು ಮುಖ್ಯಾಭಿಪ್ರಾಯವು.

ಜೋಷಯಂತೇ ವರಾ ಇವ—ದೇವತೆಗಳು ಹವಿಸ್ಸನ್ನು ಅಪೇಕ್ಷಿಸುವ ವಿಷಯದಲ್ಲಿ ಒಂದು ದೃಷ್ಟಾಂತವನ್ನು ಹೇಳಿರುವರು. ಓರ್ವ ಸುಂದರಳಾದ ಕನ್ಯೆಯನ್ನು ಮನುಷ್ಯರಾಗಬೇಕೆಂದು ಅಪೇಕ್ಷಿಸುವ ವರರು (ಕನ್ಯಾರ್ಥಿಗಳು) ತಮಗೆ ಆ ಕನ್ಯೆಯು ದೊರೆಯಬೇಕೆಂದು ಆಸೆಪಟ್ಟು ನಾನಾವಿಧ ಉಪಚಾರಗಳಿಂದ ಅವಳ ಮನಸ್ಸನ್ನು ಒಲಿಸಿಕೊಳ್ಳಲು ಅಪೇಕ್ಷಿಸಿದುವಂತೆ ದೇವತೆಗಳು ತಮಗಾಗಿ ಸಿದ್ಧಪಡಿಸಿರುವ ಹವಿಸ್ಸನ್ನು ಮತ್ತು ಸೋಮರಸವನ್ನು ಸೇವಿಸುವುದಕ್ಕಾಗಿ ಹಾತೊರೆಯುತ್ತಿರುವರು ಎಂದು ಅಭಿಪ್ರಾಯವು.

ವ್ಯಾಕರಣಪ್ರಕ್ರಿಯಾ

ಹೋತ್ರಿಯಮ್—ಹು ದಾನಾದನಯೋಃ ಜುಹೋತ್ಯಾದಿ. ಈ ಧಾತುವಿನ ಮೇಲೆ ತೃಚ್ ಪ್ರತ್ಯಯ ಬಂದಿದರೆ ಧಾತುವಿಗೆ ಗುಣವಾಡಿದರೆ ಹೋತೃಶಬ್ದವಾಗುತ್ತದೆ. ಹೋತೃಸಂಬಂಧವಾನುದು ಎಂಬರ್ಥದಲ್ಲಿ **ತಸ್ಯೇದಂ** (ಪಾ. ಸೂ. ೪-೩-೧೨೦) ಎಂಬುದರಿಂದ ಘ ಪ್ರತ್ಯಯ ಬರುತ್ತದೆ. ಘ ಎಂಬುದಕ್ಕೆ **ಆಯನೇಯಿನಿ** (ಪಾ. ಸೂ. ೭-೧-೩) ಸೂತ್ರದಿಂದ ಇಯಾದೇಶ ಬರುತ್ತದೆ. ಯಣಾದೇಶ ಬಂದರೆ ಹೋತ್ರಿಯಶಬ್ದವಾಗುತ್ತದೆ.

ಅನಃ—ಪೂರ್ವಾಧರಾವರಾಣಾಮಸಿ ಪುರಧವಶ್ಚೈಷಾಂ (ಪಾ. ಸೂ. ೫-೩-೩೯) ಅಸಿ ಎಂಬುದು ಲುಪ್ತಪ್ರಥಮಾಕಶಬ್ದ. ಪೂರ್ವ, ಅಧರ, ಅವರ ಈ ಮೂರು ಶಬ್ದಗಳಿಗೆ ಅಸ್ತಾತ್ಯರ್ಥದಲ್ಲಿ ಅಸಿ ಪ್ರತ್ಯಯವು ಬರುತ್ತದೆ. ಅಸಿಪ್ರತ್ಯಯ ಸಂಬಂಧವಿರುವಾಗ ಮೂರು ಪ್ರಕೃತಿಗಳಿಗೆ ಕ್ರಮವಾಗಿ ಪುರ್, ಅಧ್, ಅವ್, ಎಂಬ ಆದೇಶಗಳು ಬರುತ್ತವೆ. ಅಸ್ತಾತಿಯು ಷ್ಠಾರ್ಥದಲ್ಲಿಯೇ ಬರುವುದರಿಂದ ಅಸಿ ಪ್ರತ್ಯಯಕ್ಕೂ ಷ್ಠಾರ್ಥವೇ ಅರ್ಥವಾಗುತ್ತದೆ. ಅರ್ಥವನ್ನು ಬೋಧಿಸುವುದು ಪ್ರತ್ಯಯ ಸಾಮಾನ್ಯಲಕ್ಷಣವಾದುದರಿಂದ ಇವುಗಳಿಗೆ ವಿಶೇಷಾರ್ಥ ಬೋಧನಶಕ್ತಿ ಇಲ್ಲದಿದ್ದರೂ ತಮ್ಮ ಪ್ರಕೃತ್ಯರ್ಥವನ್ನೇ ತಿಳಿಸುವುದರಮೂಲಕ ಸಾರ್ಧಕಗಳೆಂದು ತಿಳಿಯಬೇಕು. ಆದುದರಿಂದ ಇಲ್ಲಿ ಅವರ ಎಂಬರ್ಥದಲ್ಲಿಯೇ ಅಸಿಪ್ರತ್ಯಯ ಬರುತ್ತದೆ. ಪ್ರಕೃತಿಗೆ ಅವ್ ಎಂಬ ಆದೇಶ ಬಂದರೆ **ಅವ್+ಅಸಿ** ಎಂದಾಗುತ್ತದೆ. ಪ್ರತ್ಯಯದಲ್ಲಿ ಇಕಾರ ಉಚ್ಚಾರಣಾರ್ಥವಾದುದರಿಂದ ಸಕಾರಾಂತ ಅವ್ಯಯವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

೨. **ಪ್ರಾಚ್ಚೈಃ**—ಉಚ್ಚೈಃ ನೀಚ್ಚೈಃ ಎಂಬಂತೆ ಇದೂ ಒಂದು ಅವ್ಯಯ. ಅಥವಾ ಪ್ರ ಎಂಬ ಉಪಸರ್ಗಪೂರ್ವಕವಾದ ಅಂಚು ಧಾತುವಿಗೆ ಭಾವಾರ್ಥದಲ್ಲಿ ಕ ಪ್ರತ್ಯಯವಾಗಿದರೆ ರೂಪಸಿದ್ಧಿಯಾಗುತ್ತದೆ ಕ ಎಂಬಲ್ಲಿ ಕಕಾರವು ತದ್ಧಿತಭಿನ್ನ ಪ್ರತ್ಯಯಾದಿಯಾದುದರಿಂದ ಇತ್ಸಂಜ್ಞೆಯನ್ನು ಹೊಂದುತ್ತೆ. ಕಿತ್ ಪ್ರತ್ಯಯ ಪರದಲ್ಲಿರುವುದರಿಂದ **ಅನಿದಿತಾಂ ಹಲ** (ಪಾ ಸೂ. ೬-೪-೨೪) ಎಂಬುದರಿಂದ ಅಂಚುಧಾತುವಿನಲ್ಲಿರುವ ನಕಾರವು ಲೋಪವಾಗುತ್ತದೆ. ಪ್ರತ್ಯಯ ಸೇರಿಸಿದಾಗ ಅಕಾರಾಂತಶಬ್ದವಾಗುತ್ತದೆ ಕಪ್ರತ್ಯಯನುಮಾಡುವ ವಿಷಯದಲ್ಲಿ ಒಂದು ಶಂಕೆ ಬರುತ್ತದೆ ಇಲ್ಲಿ **ಘಞರ್ಥೇ ಕವಿಧಾನಂ** (ವಾರ್ತಿಕ) ಎಂಬುದರಿಂದ ಭಾವಾರ್ಥದಲ್ಲಿ ಕಪ್ರತ್ಯಯವನ್ನು ಹೇಳಬೇಕು. ಆದರೆ ಈ ವಾರ್ತಿಕಶೇಷವಾಗಿ ಭಾಷ್ಯದಲ್ಲಿ '**ಸ್ಥಾಸ್ನಾಪಾವ್ಯಧಿ ಹನಿಯುಧ್ಯರ್ಥಮ್**' ಎಂದು ಪರಿಗಣನವಮಾಡಿರುವರು. ಅಂದರೆ ಇಲ್ಲಿ ಪರಿತವಾನುವುಗಳಿಗೆ ಮಾತ್ರ ಘಞರ್ಥದಲ್ಲಿ ಕಪ್ರತ್ಯಯವು ಬರುತ್ತದೆ ಎಂದು ತಿಳಿಯಬೇಕು. ಹೀಗಿರುವಾಗ ಈ ಧಾತುಪಾಠವನ್ನು ಅಲ್ಲಿ ಮಾಡದಿರುವಾಗ ಹೇಗೆ ಕಪ್ರತ್ಯಯವನ್ನು ಮಾಡಲು ಸಾಧ್ಯ? ಎಂದು ಪ್ರಶ್ನೆ ಬರುತ್ತದೆ. ಆದರೆ ಅಲ್ಲಿ ಪರಿಗಣನದಿಂದ ನಿಯಮಮಾಡಿದುದೆಂದು ತಿಳಿಯಬಾರದು ಅವು ಉಪಲಕ್ಷಣವೆಂದು ತಿಳಿಯಬೇಕು. ಉಪಲಕ್ಷಣವೆಂದರೆ ಪರಿತವಾನುವುಗಳ ಸಮಾನಗಳನ್ನೂ ತೆಗೆದುಕೊಳ್ಳಬೇಕೆಂದು ತಾತ್ಪರ್ಯ **ಕಾಕೇಭ್ಯೋ ದಧಿ ರಕ್ಷ್ಯತಾಂ** ಎಂದು ಒಬ್ಬನು ಹೇಳಿದರೆ ಅಲ್ಲಿ ಮೊಸರನ್ನು ಹಾಳುಮಾಡುವ ಕಾಗೆಯನ್ನು ಮಾತ್ರ ನಿರಾಸಬೇಕೆಂದು ವಕ್ತೃವಿಗೆ ತಾತ್ಪರ್ಯವಲ್ಲ. ಕಾಗೆಯಂತೆ ದಧಿಯನ್ನು ಹಾಳುಮಾಡುವ ಮಾರ್ಜಾಲಾದಿಗಳನ್ನೂ ಓಡಿಸಬೇಕೆಂದು ತಾತ್ಪರ್ಯ. ಅಂತೆಯೇ ಇಲ್ಲಿಯೂ ಧಾತುತ್ವದಿಂದ ಸಾದೃಶ್ಯವನ್ನು ಗ್ರಹಿಸಿ ಬೇರೆ ಧಾತುಗಳಿಗೂ ಘಞರ್ಥದಲ್ಲಿ ಕಪ್ರತ್ಯಯ ಬರುವುದೆಂದು ಊಹಿಸಬೇಕು.

ಜೋಷಯಂತೇ—ಜುಷೀ ಪ್ರೀತಿಸೇವನಯೋಃ ಧಾತು ತುದಾದಿ ಇದಕ್ಕೆ ಹೇತುವ್ಯಾಪಾರ ತೋರುವಾಗ **ಹೇತುಮತಿ ಚ** (ಪಾ. ಸೂ. ೩-೧-೨೬) ಎಂಬುದರಿಂದ ಣಿಚ್ ಪ್ರತ್ಯಯ ಬರುತ್ತದೆ. ಇಲ್ಲಿ ಕೇವಲ ಕರ್ತೃ (ದೇವತೆಗಳು) ವ್ಯಾಪಾರ ತೋರುವುದರಿಂದ ನಿಯೋಜ್ಯನೊಬ್ಬನು ತೋರದಿರುವುದರಿಂದ ಪ್ರಯೋಜ್ಯಗತವ್ಯಾಪಾರವು ಹೇಗೆ ತೋರುವುದು ಎಂಬ ಒಂದು ಶಂಕೆ ಬರುತ್ತದೆ. ಆದರೆ ಸೇವನದಲ್ಲಿ ಸ್ವಾತ್ಯರೇ ಪ್ರಯೋಜ್ಯರಾದುದರಿಂದ ತಮ್ಮಲ್ಲಿರುವ ನಿಯೋಜ್ಯತ್ವನನ್ನು ಸ್ವೀಕರಿಸಿಯೇ **ಣಿಚೆಶ್ಚ** (ಪಾ. ಸೂ. ೧-೩-೭೪) ಎಂಬುದರಿಂದ ಕರ್ತೃಗಾಮಿ. ಕ್ರಿಯಾಫಲವಿರುವಾಗ ಆತ್ಮನೇಪದಪ್ರತ್ಯಯವು ಬರುತ್ತದೆ. ಣಿಚ್ಚಿಗೆ ರಪ್ ಪರದಲ್ಲಿರುವಾಗ ಗುಣಾಯಾದೇಶಗಳು ಬರುತ್ತವೆ. ॥ ೨ ॥

॥ संहितापाठः ॥

अधि द्वयोरदधा उक्थ्यं१ वचो यतस्रुचा मिथुना या सपर्यतः ।
असंयत्तो व्रते ते क्षेति पुष्यति भद्रा शक्तिर्यजमानाय सुन्वते ॥ २ ॥

॥ पदपाठः ॥

अधि । द्वयोः । अदधाः । उक्थ्यं । वचः । यतस्रुचा । मिथुना ।
या । सपर्यतः ।
असंयत्तः । व्रते । ते । क्षेति । पुष्यति । भद्रा । शक्तिः । यजमानाय । सुन्वते ॥ २ ॥

॥ सायणभाष्यं ॥

प्रनर्ग्भिष्वनेऽधि द्वयोरित्यृचा । स्पृणोत्यादेकमिति खण्डे सूत्रितं । अधि द्वयोरदधा उक्थ्यं वचः शुक्रं ते अन्यद्यजतं ते अन्यत् । आ. ४-६ । इति ॥ हविर्धानप्रवर्तनेऽप्येषा । सूत्रितं च । यतो इव यतमाने यदैतमधिद्वयोरदधा उक्थ्यं वच इत्यर्धर्च आरभेत् । आ. ४-६ । इति ॥

हे इन्द्र द्वयोर्हविर्धानयोरुक्थ्यं । उक्थ्यं शस्त्रं । तदर्ह्यं वचो यजुषे त्वामित्यादिमंत्ररूपं वचनमध्यदधाः । निहितवानसि । ननु हविर्धानयोर्द्वयोः कथमेकमेकेन वचोऽधिनिधीयत इत्याशंक्य ब्राह्मणेनैवं व्याख्यातं । अधिद्वयोरदधा उक्थ्यं वच इति द्वयोर्ह्येतत्तृतीयं धदिरधिनिधीयत उक्थ्यं वच इति यदाह यज्ञियं वै कर्मोक्थ्यं वचो यज्ञमेवैतेन समर्धयति । ऐ. ब्रा.

೧-೨೯॥ ಇತಿ। ತತ್ರ ಯಥಾ ಹವಿರ್ಧಾನನ್ನಯ ಏಕಮೇವ ತೃತೀಯಂ ಛದಿರಧಿನಿಧೀಯತೇ ಏವಂ ಸ್ತೋತ್ರಮಪ್ಯುಭಯೋರೇಕಂ ಯುಕ್ತಂ। ಉಕ್ಥಂ ನಾಮ ಯಜ್ಞಸಂಬಂಧಿ ಶಸ್ತ್ರಂ ತದ್ಯೋಗ್ಯಂ ವಚನಮಪಿ ಯಜ್ಞಿಯಂ ಕರ್ಮ। ತಸ್ಯ ಯಜ್ಞರೂಪಯೋರ್ಹವಿರ್ಧಾನಯೋರ್ಯಜ್ಞತ್ವಸಂಪಾದನಾಯಾಧಿನಿಧಾನಾದ್ಯಙ್ಗತ್ವೇಽಪಿ ಸನ್ಮುದ್ಗೋ ಭವತಿ। ಕೀದೃಶಯೋರ್ಹವಿರ್ಧಾನಯೋಃ। ಯತಸ್ರುಚಾ। ಯತಾಃ ಸಂಬದ್ಧಾಃ ಸ್ರುಚೋ ಗ್ರಹಚಮಸಾದಿಲಕ್ಷಣಾನಿ ಪಾತ್ರಾಣಿ ಯಯೋಸ್ತೇ। ಮಿಥುನಾ ಯುಗಲರೂಪೇಣ ವರ್ತಮಾನೇ ಯಾ ಯೇ ಹವಿರ್ಧಾನೇ ತ್ವಾಂ ಸಪರ್ಯತಃ ಪೂಜಯತಸ್ತಯೋರಿತ್ಯರ್ಥಃ। ಕಿಂಚ ಈದೃಗ್ರೂಪಹವಿರ್ಧಾನಯುಕ್ತೋ ಯಜಮಾನೋಽಸಂಯತ್ತಃ ಶತ್ರುಭಿಃ ಸಹ ಯುದ್ಧಾರ್ಥಮನಭಿಗತಃ ಸನ್ ತೇ ವ್ರತೇ ತ್ವದೀಯೇ ಕರ್ಮಣಿ ಕ್ಷೇತಿ। ನಿವಸತಿ। ಪುಷ್ಯತಿ ಚ। ಪ್ರಜಯಾ ಪಶುಭಿಶ್ಚ ಪುಷ್ಟೋ ಭವತಿ ಚ। ಸುನ್ವತೇ ತ್ವದ್ವೇವತ್ಯೇ ಯಾಗೇ ಸೋಮಾಭಿಷವಂ ಕುರ್ವತೋ ಯಜಮಾನಸ್ಯ ಭದ್ರಾ ಕಲ್ಯಾಣೀ ಶಕ್ತಿರುತ್ಕೃಷ್ಟಂ ಬಲಂ ಭವತಿ। ಏತತ್ಸರ್ವಂ ಹವಿರ್ಧಾನಯೋರುಕ್ಥ್ಯಸ್ಯ ವಚಸೋಽಧಿನಿಧಾನೇನ ತ್ವಯಾ ಕೃತಮಿತ್ಯರ್ಥಃ॥ ಯತಸ್ರುಚಾ। ಯಮು ಉಪರಮೇ। ನಿಷ್ಪಾಯಮಾನುದಾತ್ತೋಪದೇಶೇತ್ಯಾದಿನಾನುನಾಸಿಕಲೋಪಃ। ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ। ಇದಮಾದಿಷು ತ್ರಿಷು ಪದೇಷು ಸುಪಾಂ ಸುಲುಗಿತಿ ವಿಭಕ್ತೇರಾಕಾರಃ। ಸಪರ್ಯತಃ। ಸಪರ ಪೂಜಾಯಾಂ। ಕಂಡ್ವಾದಿಭ್ಯೋ ಯಕ್। ಅದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ತಸ್ಯೈವ ಸ್ವರಃ ಶಿಷ್ಯತೇ। ಕ್ಷೇತಿ। ಕ್ಷಿ ನಿವಾಸಗತ್ಯೋಃ। ಬಹುಲಂ ಛಂದಸೀತಿ ವಿಕರಣಸ್ಯ ಲುಕ್। ಸುನ್ವತೇ। ಷಷ್ಠ್ಯರ್ಥೇ ಚತುರ್ಥೀ ವಕ್ತವ್ಯೇತಿ ಚತುರ್ಥೀ। ಶತುರನುಮ ಇತಿ ವಿಭಕ್ತೇರುದಾತ್ತತ್ವಂ ॥ ೩ ॥

ಸ್ವರಿತಪಾಠ

ಯತಸ್ರುಚಾ—(ಎಲೈ ಇಂದ್ರನೇ)ಚಮಸಾದಿಪಾತ್ರೆಗಳಲ್ಲಿ ಒಟ್ಟಿಗೆ ಇಡಲ್ಪಟ್ಟಿವೆ(ಸುತ್ತು) । **ಮಿಥುನಾ**-ಎರಡೆರಡಾಗಿ ಒಟ್ಟಿಗೆ ಇಡಲ್ಪಟ್ಟ । **ಯಾ**—ಯಾವ ಹವಿರ್ಧಾನಗಳು । **ಸಪರ್ಯತಃ**—(ನಿನ್ನನ್ನು) ಪೂಜಿಸುತ್ತವೆಯೋ ಅಂತಹ । **ದ್ಯುಯೋಃ**—ಪಶುಸ್ಸು ಸುತ್ತು ಧಾನ್ಯಗಳಲ್ಲಿ । **ಉಕ್ಥ್ಯಂ**—ಶಸ್ತ್ರರೂಪವಾದ । **ವಚಃ**-ಮಂತ್ರವಾಕ್ಯವನ್ನು । **ಅಧಿ ಅದಧಾಃ**—ನೀರಿಳಲ್ಪಟ್ಟಿದ್ದೀಯೇ, (ಹೀಗೆ ಮಂತ್ರಪೂರಿತಗಳಾದ ಹವಿರ್ಧಾನಗಳನ್ನು ಹೊಂದಿರುವ ಯಜಮಾನನು) । **ಅಸಂಯತ್ತಃ**—(ಶತ್ರುಗಳೊಡನೆ) ಯುದ್ಧಮಾಡುವ ತೊಂದರೆಯಿಲ್ಲದೆ । **ತೇ**—ನಿನ್ನನ್ನು ಉದ್ದೇಶಿಸಿದ । **ವ್ರತೇ**— ಕರ್ಮದಲ್ಲಿ । **ಕ್ಷೇತಿ**—(ಸುಖವಾಗಿ)ನಿರತನಾಗಿರುತ್ತಾನೆ. । **ಪುಷ್ಯತಿ (ಚ)**-(ಪಶುಪುತ್ರಾದಿಗಳಿಂದ) ವೃದ್ಧಿಯನ್ನೂ ಹೊಂದುತ್ತಾನೆ. । **ಸುನ್ವತೇ**— (ನಿನ್ನನ್ನು ಉದ್ದೇಶಿಸಿ ಮಾಡುವ ಯಜ್ಞದಲ್ಲಿ) ಸೋಮರಸವನ್ನು ಹಿಂಡುವ ಯಜಮಾನನಿಗೆ । **ಭದ್ರಾ**— ಮಂಗಳಕರವಾದ । **ಶಕ್ತಿಃ**— ಬಲವು (ಬೆಳೆಯುತ್ತದೆ.) ।

ಪದಾರ್ಥ

ಎಲೈ ಇಂದ್ರನೇ, ಚಮಸಾದಿಪಾತ್ರೆಗಳಲ್ಲಿ ಒಟ್ಟಿಗಿದ್ದು ಯಾವ ಹವಿರ್ಧಾನಗಳು ನಿನ್ನ ಪೂಜೆಗಾಗಿ ಒಟ್ಟಿಗೆ ಅರ್ಪಿತವಾಗುವುವೋ ಅಂತಹ ಹವಿರ್ಧಾನಗಳೆರಡರಲ್ಲೂ ನೀನು ಉಕ್ಥ್ಯರೂಪವಾದ ಮಂತ್ರವನ್ನು ಸೇರಿಸಿಟ್ಟಿದ್ದೀಯೇ. ಹೀಗೆ ಮಂತ್ರಪೂರಿತವಾದ ಹವಿರ್ಧಾನಗಳನ್ನಿಟ್ಟುಕೊಂಡಿರುವ ಯಜಮಾನನು ಶತ್ರು

ಗಳೊಡನೆ ಯುಕ್ತವಾಮಾಡುವ ತೊಂದರೆಯಿಲ್ಲದೆ ನಿನ್ನನ್ನು ಉದ್ದೇಶಿಸಿದ ಕರ್ಮದಲ್ಲಿ ನಿರತನಾಗಿರುತ್ತಾನೆ. ಪಶು ಪುತ್ರಾದಿ ಸಂಪತ್ತನ್ನು ಪಡೆಯುತ್ತಾನೆ. ಮತ್ತು ಯಜ್ಞದಲ್ಲಿ ನಿನಗಾಗಿ ಸೋಮರಸವನ್ನು ಹಿಂಡುವ ಆ ಯಜಮಾನನಿಗೆ ನುಂಗಲಾಕರವಾದ ಬಲವು ಬೆಳೆಯುತ್ತದೆ.

English Translation

Indra, you have placed words of sacred praise with both kinds of oblations consisting of grain and butter ; the two oblations are placed together in ladles and jointly presented to you so that the sacrificer, undistrubed is engaged in your worship and is prosperous ; auspicious power is granted to the sacrificer who offers oblations.

ವಿಷಯನಿರ್ದೇಶಗಳು

ಈ ಋಕ್ಕಿನ ತಾತ್ಪರ್ಯವು ತಿಳಿಸಲಾಗಿರುವುದು.

ದ್ಯಾವೋ— **ಹವಿರ್ಧಾನಯೋಃ** । ಋಕ್ಕಿನಲ್ಲಿ ದ್ವಯೋಃ ಎಂಬ ಶಬ್ದ ಮಾತ್ರವಿರುವುದು. ಇದಕ್ಕೆ ಭಾಷ್ಯಕಾರರು **ಹವಿರ್ಧಾನಯೋಃ** ಎಂದು ತಾತ್ಪರ್ಯವಿವರಣೆ ಮಾಡಿರುವರು. ಯಾಸ್ಕರು ಹವಿರ್ಧಾನ ಶಬ್ದಕ್ಕೆ **ಹವಿರ್ಧಾನೇ ಹವಿಷಾಂ ನಿಧಾನೇ** ಎಂದು ನಿರ್ವಚನವನ್ನು ಹೇಳಿರುವರು. ಎಂದರೆ **ಹವಿಷಾಂ ನಿಧಾನೇ ಸೋಮಾಸ್ತಯೋರ್ನಿಧೀಯಂತೇ** ಹವಿಸ್ಸನ್ನು ಸೋಮವನ್ನು ಇಡುವ ಪಾತ್ರೆ ಅಥವಾ ಸ್ಥಳ ಎಂದರ್ಥವು ಹವಿರ್ಧಾನ ಶಬ್ದವು ಋಗ್ವೇದದಲ್ಲಿ ಎಲ್ಲೆಯೂ ಪ್ರಯೋಗವಾಗಿಲ್ಲ. ಯಜುರ್ವೇದದಲ್ಲಿ ತೈ. ಸಂ. ೩-೧-೩,೧ ; ೬-೩-೯-೧ ; ೬-೩-೯ಳ, ೬-೩-೧೧-೧ಳ ಇತ್ಯಾದಿ ಮಂತ್ರಗಳಲ್ಲಿ ಪ್ರಯೋಗವಾಗಿದೆ. ಅಲ್ಲಿ ಈ ಶಬ್ದವು ಸೋಮಲತೆಯನ್ನು ತುಂಬಿಕೊಂಡು ಹೋಗುವ ಗಾಡಿ ಅಥವಾ ಸೋಮವನ್ನು ಇಡುವ ಗುಡಿಸಲು ಅಥವಾ ಸೋಮವನ್ನು ಇಡುವ ಪಾತ್ರೆ ಎಂಬ ತಾತ್ಪರ್ಯಗಳನ್ನು ಸೂಚಿಸುವುದು. ಸೋಮರಸವನ್ನು ಹವಿರ್ಧಾನಗಳೆಂಬ ಎರಡು ಗಾಡಿಗಳಲ್ಲಿ ತುಂಬಿ, ಛದಿ ಎಂಬ ಒಂದೇ ಆಚ್ಛಾದನೆಯಿಂದ ಎರಡರ ಮೇಲೆ ಮುಚ್ಚಿ, ಅದನ್ನು ಪ್ರಾಚೀನಸಂತಾನಂ ಭಾಗದಿಂದ ಉತ್ತರವೇದಿಗೆ ತೆಗೆದುಕೊಂಡು ಹೋಗುವರು ಛದಿಯು ದರ್ಭೆಗಳಿಂದ ನೂಡಲ್ಪಟ್ಟಿರುವುದು ಇದಕ್ಕೆ ಸಂಬಂಧಪಟ್ಟ ಯಜ್ಞಕರ್ಮವು ವಿಸ್ತಾರವಾಗಿರುವುದರಿಂದಲೂ ಅದರ ವಿವರಣೆಯು ಇಲ್ಲಿ ಅನಾವಶ್ಯಕವಾದುದರಿಂದಲೂ ಅವುಗಳನ್ನು ಇಲ್ಲಿ ವಿವರಿಸಿಲ್ಲ. ಇತರೆಯ ಬ್ರಾಹ್ಮಣದಲ್ಲಿ (೧-೩೦) ಈ ವಿಚಾರವಾಗಿ ನಿರ್ದೇಶವನ್ನು ನೋಡಿ ತಿಳಿದುಕೊಳ್ಳಬಹುದು.

ಉಕ್ಥ್ಯಂ ವಚಃ— ಹವಿರ್ಧಾನವೆಂಬ ಹೆಸರಿನ್ನು ಇಡುವ ಎರಡು ಪಾತ್ರೆಗಳ ಮೇಲೆ ಛದಿ ಎಂಬ ಆಚ್ಛಾದನೆಯನ್ನು (covering, ಮುಚ್ಚುವುದು) ಇರಿಸುವಾಗ ಹೇಳುವ ಶಸ್ತ್ರರೂಪವಾದ ಮಂತ್ರ. ಈ ಮಂತ್ರ ಕ್ಕಾಗಿ ಪ್ರಸಕ್ತವಾದ ಋಕ್ಕಿನ ಸ್ಥೂಲಾರ್ಥವಾದ **ಅಧಿ ದ್ವಯೋರದಧಾ ಉಕ್ಥ್ಯಂ ೧ ವಚೋ ಯೇತಸ್ರುಚಾ ಮಿಥುನಾ ಯಾ ಸಪರ್ಯತಃ** । ಎಂಬ ಮಂತ್ರಪಸ್ಸನ್ನು ಪಠಿಸುವರು. ಎರಡು ಹವಿರ್ಧಾನಗಳ ಮೇಲೆ ಮುಚ್ಚುವು ದಕ್ಕೆ ಒಂದೇ ಛದಿಯನ್ನು ಉಪಯೋಗಿಸುವರು. ಮತ್ತು ಈ ಎರಡು ಹವಿರ್ಧಾನಗಳನ್ನು ಒಂದುಗೂಡಿಸುವುದಕ್ಕಾಗಿ ಆ ಛದಿಯನ್ನು ಉಪಯೋಗಿಸುವುದರಿಂದ ಎರಡು ಹವಿರ್ಧಾನಗಳಿಗೂ ಪ್ರತ್ಯೇಕವಾದ ಎರಡು ಮಂತ್ರ

ಗಳನ್ನು ಉಪಯೋಗಿಸದೆ ಒಂದೇ ಮಂತ್ರವನ್ನು ಹೇಳುವರು. ಆದುದರಿಂದ ಉಕ್ಥ್ಯಂ ವಚಃ ಶಸ್ತ್ರಮಂತ್ರರೂಪವಾದ ವಾಕ್ಯವು ಎಂದು ಏಕವಚನಪ್ರಯೋಗವಿರುವುದು. ಈ ಪದಾರ್ಥಗಳನ್ನು ಒಟ್ಟುಗೂಡಿಸುವಾಗ **ಯುಜೇ ವಾಂ ಬ್ರಹ್ಮ ಪೂರ್ವ್ಯಂ ನಮೋಭಿರ್ವಿ ಶ್ಲೋಕ ಏತು ಪಥ್ಯೇವ ಸೂರೇಃ । ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾ ಆಯೇ ಧಾಮಾನಿ ದಿವ್ಯಾನಿ ತಸ್ಥುಃ ॥** (ಋ ಸಂ. ೧೦-೧೩-೧) ಎಂಬ ಮಂತ್ರವನ್ನು ಪಠಿಸುವರು.

ಯತಸ್ರುಚಾ— ಸ್ರುಕ್ ಎಂಬ ಹೋಮ ಮಾಡುವ ಮರದ ಸೌಟನ್ನು ಕೈಯಲ್ಲಿ ಹಿಡಿದುಕೊಂಡಿರುವ ಎಂದರ್ಥವು. ಭಾಷ್ಯಕಾರರು—ಯತಾಃ ಸಂಬದ್ಧಾಃ ಸ್ರುಚೋ ಗ್ರಹಚಮಸಾದಿಲಕ್ಷಣಾನಿ ಪಾತ್ರಾಣಿ ಯಯೋಸ್ತೇ ಎಂದು ಹೇಳಿರುವರು.

ಮಿಥುನಾ— ಎರಡು ಎಂದರೆ ಎರಡು ವಿಧಾನಗಳು

ಅಸಂಯತ್ತೇ— ಈ ಶಬ್ದದ ಸರಿಯಾದ ಅರ್ಥವು—ಕೈಯಲ್ಲಿದ್ದ ಸ್ರುಕ್ ಮೊದಲಾದ ಪಾತ್ರೆಗಳನ್ನು ಕೆಳಗಿರಿಸಿ ಎಂದಾಗುವುದು. ಭಾಷ್ಯಕಾರರು **ಶತ್ರುಭಿಃ ಸಹ ಯುದ್ಧಾರ್ಥಮನಭಿಗತೇಽಸನ್** ಎಂದು ಹೇಳಿರುವರು.

ವ್ರತೇ—ಯಜ್ಞರೂಪವಾದ ಕರ್ಮದಲ್ಲಿ.

ಕ್ಷೇತಿ—ನಿವಸತಿ । ಪ್ರವರ್ತಕನಾಗಿ ಇರುವನು, ಕರ್ಮಾನುಷ್ಠಾನವಮಾಡುತ್ತಾ ಇರುವನು.

ಪುಷ್ಯತಿ - ಪ್ರಜಯಾ ಪಶುಭಿಶ್ಚ ಪುಷ್ಟೋ ಭವತಿ । ಪ್ರಜೆಗಳು, ಪಶು ಸಂಪತ್ತು ಮೊದಲಾದುವುಗಳಿಂದ ಯುಕ್ತನಾಗಿ ಅಭಿವೃದ್ಧಿಯನ್ನೈದುವನು.

ಭದ್ರಾ ಶಕ್ತಿಃ—ಕಲ್ಯಾಣೀ ಶಕ್ತಿಃ, ಉತ್ಕೃಷ್ಟಂ ಬಲಂ । ಉತ್ಕೃಷ್ಟವಾದ ಅಥವಾ ಹೆಚ್ಚಾದ ಬಲವು.

ಈ ಋಕ್ಕಿಗೆ ವಿಶೇಷ ವಿನಿಯೋಗವಿರುವುದು— ಪ್ರವರ್ಗ್ಯವೆಂಬ ಯಾಗದಲ್ಲಿ **ಅಧಿ ದ್ವಯೋಃ** ಎಂಬ ಈ ಋಕ್ಕನ್ನು ಸ್ತೋತ್ರರೂಪವಾಗಿ ಪಠಿಸುವರು. ಈ ವಿಷಯವು ಆಶ್ವಲಾಯನಶ್ರೌತಸೂತ್ರದ **ಸ್ರುಸ್ಪ್ಯೋದಕಂ** ಎಂಬ ಖಂಡದಲ್ಲಿ **ಅಧಿದ್ವಯೋರದಧಾ ಉಕ್ಥ್ಯಂ ವಚಃ. ಶುಕ್ರಂ ತೇ ಅನ್ಯದ್ಯಜತಂ ತೇ ಅನ್ಯತ್** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ ೪-೬) ಮತ್ತು ಎರಡು ವಿಧಾನಗಳನ್ನೇಳೆ ಭಿದಿಯೆಂಬ ಆಚ್ಛಾದನವನ್ನು ಇಡುವಾಗ ಈ ಋಕ್ಕಿನ ವಿನಿಯೋಗವಿರುವುದು. ಇದನ್ನು ಆಶ್ವಲಾಯನಶ್ರೌತ್ರಸೂತ್ರದಲ್ಲಿ **ಯಮೋ ಇವ ಯತಮಾನೇ ಯದೈತಮಧಿ ದ್ವಯೋರದಧಾ ಉಕ್ಥ್ಯಂ ವಚ ಇತ್ಯರ್ಧರ್ಚ ಆರಮೇತ್** ಎಂಬ ಸೂತ್ರವು ನಿರ್ದೇಶಿಸುವುದು. (ಆ. ೪-೯)

ಸಾಯಣಭಾಷ್ಯಕ್ರಮಃ

ಯತಸ್ರುಚಾ—ಯತಾಃ ಸ್ರುಚೋ ಯಯೋಃ ಸ್ತೇ ಸಂಬಂಧವಾಗಿರುವ ಗ್ರಹ ಚಮಸಾದಿಲಕ್ಷಣ ಪಾತ್ರಗಳು ಎಲ್ಲಿ ಇರುತ್ತವೆಯೋ ಅವುಗಳು ಯತಸ್ರುಚಗಳು ಯಮ ಉಪರಮೆ, ಈ ಧಾತುವಿಗೆ ಕ್ತ ಪ್ರತ್ಯಯಮಾಡಿದರೆ ಯಮ್+ತ ಎಂದಿರುವಾಗ **ಅನುದಾತ್ತೋಪದೇಶವನತಿ** (ಪಾ. ಸೂ. ೬-೪-೩೭) ಎಂಬುದರಿಂದ ಅನುನಾಸಿಕವಾದ ಧಾತುಮಕಾರಕ್ಕೆ ಝಲಾದಿಯಾದ ಕಿತ್ ಪ್ರತ್ಯಯ ಪರವಲ್ಲಿರುವುದರಿಂದ ಲೋಪ ಬರುತ್ತದೆ. ಯತ ಶಬ್ದದಿಂದ

ಹಿಂದೆ ತೋರಿಸಿದಂತೆ ಬಹುವ್ರೀಹೌ ಸಮಾಸವಾಗಿದೆ. **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** (ಪಾ. ಸೂ. ೬-೨-೧) ಉದಾತ್ತ ಸ್ವರಿತದಿಂದ ಕೂಡಿರುವ ಪೂರ್ವಪದವು ಪ್ರಕೃತಿಭಾವವನ್ನು ಹೊಂದುತ್ತದೆ ಪೂರ್ವಪದದಲ್ಲಿರುವ ಉದಾತ್ತಸ್ವರಿತಗಳಿಗೆ ಪ್ರಕೃತಿಭಾವ ಬರುವುದರ ಮೂಲಕ ಪೂರ್ವಪದಕ್ಕೆ ಪ್ರಕೃತಿಭಾವ ಬರುತ್ತದೆಂದು ತಾತ್ಪರ್ಯ. ಈ ಸೂತ್ರದಿಂದ ಇಲ್ಲಿ ಪೂರ್ವಪದಪ್ರಕೃತಿಸ್ವರವು ಬಂದಿದೆ. ಆಗ ಯತ ಎಂಬುದು ಪ್ರತ್ಯಯಸ್ವರದಿಂದ ಅಂತೋದಾತ್ತವಾದುದರಿಂದ ಉದಾತ್ತೋನುದಾತ್ತಸ್ಯ ಸ್ವರಿತಃ ಎಂಬುದರಿಂದ ಸ್ರು ಎಂಬುದಲ್ಲಿರುವ ಅನುದಾತ್ತವು ಸ್ವರಿತವಾಗುತ್ತದೆ. 'ಸ್ವರಿತಾತ್ಸಂಹಿತಾಯಾಮನುದಾತ್ತಾನಾಂ' ಎಂಬುದರಿಂದ ಸ್ರುವಿನ ಪರದಲ್ಲಿರುವುದಕ್ಕೆ ಪ್ರಚಯ ಬರುತ್ತದೆ. ಯತಸ್ರುಚ ಶಬ್ದದ ಮೇಲೆ ದ್ವಿವಚನಪ್ರತ್ಯಯಮಾಡಿದಾಗ **ಸುಪಾಂ ಸುಲುಕ್** (ವಾ. ಸೂ ೭-೧-೩೯) ಎಂಬುದರಿಂದ ವಿಭಕ್ತಿಗೆ ಆಕಾರಾದೇಶ ಬರುತ್ತದೆ.

ಸಪರ್ಯತಃ—ಸಪರ ಸ್ಪರ್ಧಾಯಾಂ ಧಾತು. **ಕಂಡ್ವಾದಿಭ್ಯೋ ಯೆಕ್** (ವಾ. ಸೂ ೩-೧-೨೭) ಕಂಡ್ವಾದಿ ಧಾತುಗಳಿಗೆ ಸ್ವಾರ್ಥದಲ್ಲಿ ನಿತ್ಯವಾಗಿ ಯೆಕ್ ಪ್ರತ್ಯಯ ಬರುತ್ತದೆ. ಕಂಡ್ವಾದಿಯೆಂಬುದು ಆಕೃತಿಗಣ. ಕಂಡ್ವಾದಿಯಲ್ಲಿ ಸಪರಧಾತುವು ಪಠಿತವಾದುದರಿಂದ ಇದರ ಮೇಲೂ ಸ್ವಾರ್ಥದಲ್ಲಿ ಯೆಕ್ ಪ್ರತ್ಯಯ ಬರುತ್ತದೆ. ಯೆಕ್ ಸನಾದಿಯಲ್ಲಿ ಪಠಿತವಾದುದರಿಂದ ಧಾತುಸಂಜ್ಞೆ ಬಂದಾಗ ಪ್ರಥಮಪುರುಷ ದ್ವಿವಚನದಲ್ಲಿ ರೂಪಸಿದ್ಧಿಯಾಗುತ್ತದೆ. ಇಲ್ಲಿ ಧಾತುಸ್ವರದಿಂದ ಯಕಾರೋದಾತ್ತವೂ ಪ್ರತ್ಯಯಸ್ವರದಿಂದ ತಕಾರೋದಾತ್ತವೂ ಆಗಬೇಕಾಗುತ್ತದೆ. ಆದರೆ **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬುದರಿಂದ ಅದುಸದೇಶದ ಪರದಲ್ಲಿರುವ ಲಸಾರ್ವಧಾತುಕವು ಅನುದಾತ್ತವಾಗುತ್ತದೆ ಎಂಬುದರಿಂದ ಅನುದಾತ್ತಸ್ವರವೇ ಸತಿಶಿಷ್ಯವಾದುದರಿಂದ ಪ್ರಬಲವಾಗುತ್ತದೆ. ಎಮು ಧಾತುಸ್ವರದಿಂದ ಉದಾತ್ತವಾದ ಯಕಾರದ ಪರದಲ್ಲಿ ಬಂದಿರುವುದರಿಂದ **ಉದಾತ್ತಾದನುದಾತ್ತಸ್ಯ ಸ್ವರಿತಃ** (ಪಾ. ಸೂ. ೮-೪-೬೬) ಎಂಬುದರಿಂದ ಸ್ವರಿತವಾಗುತ್ತದೆ.

ಕ್ಷೇತಿ— ಕ್ಷಿ ನಿವಾಸಗತ್ಯೋಃ ಧಾತು ತುದಾದಿ. ಕ್ಷಿ+ತಿ ಎಂದಿರುವಾಗ **ತುದಾದಿಭ್ಯಃ ಶಃ** (ಪಾ ಸೂ. ೩-೧-೭೭) ಎಂಬುದರಿಂದ ಶಪ್ರತ್ಯಯವು ಸ್ವಾಸ್ತವಾದರೆ **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್ ಬರುತ್ತದೆ. **ನಲುಮತಾಂಗಸ್ಯ** (ಪಾ ಸೂ. ೧-೧-೬೩) ಎಂಬುದರಿಂದ ಲುಕಿನಿಂದ **ಲುಸ್ತವಾದಲ್ಲಿ** ಸ್ಥಾನಿವದ್ಭಾವದಿಂದ ಸಲ್ಲದಿರುವುದರಿಂದ ಸಾರ್ವಧಾತುಕವನ್ನು ಸಿನಿತ್ತ್ರೀಕರಿಸಿ ಅಂಗಕ್ಕೆ ಗುಣ ಬರುತ್ತದೆ

ಸುಸ್ತತೆ—ಚತುರ್ಥೀ ವಿಕವಚನದ ರೂಪ. ಷುಞ್ ಅಭಿಷವೆ ಧಾತು ಇದರ ಮೇಲೆ ಶತೃಪ್ರತ್ಯಯ ಸಮಾಸವಾದರೆ **ಸ್ವಾದಿಭ್ಯಃ ಶ್ನುಃ** (ಪಾ. ಸೂ. ೩-೧-೭೩) ಎಂಬುದರಿಂದ ವಿಕರಣಪ್ರತ್ಯಯವಾದರೆ ಸು+ನು+ಅತ್ ಎಂದಾಗುತ್ತದೆ. ಶತೃ ಪ್ರತ್ಯಯ ಜುಹೋತ್ಯಾದಿಯದರಿಂದ ವಿಕರಣಕ್ಕೆ ಗುಣ ಬರುವುದಿಲ್ಲ ಯಣ್ ಸಂಧಿ ಬಂದರೆ ಸುನ್ವತ್ ಶಬ್ದವಾಗುತ್ತದೆ. ಇಲ್ಲಿ ಷಷ್ಠ್ಯರ್ಥವಿದ್ದರೂ **ಷಷ್ಠ್ಯರ್ಥೇ ಚತುರ್ಥೀ ವಕ್ತವ್ಯಾ** (ಪಾ ಸೂ. ೨-೩-೬೨ ವಾರ್ತಿಕ ೧) ಎಂಬುದರಿಂದ ಷಷ್ಠ್ಯರ್ಥದಲ್ಲಿ ಚತುರ್ಥೀವಿಭಕ್ತಿ ಬಂದಿದೆ. **ಶತುರನುಮೋ ನದ್ಯಜಾದೀ** (ಪಾ ಸೂ. ೬-೧-೭೩) ನುಮ್ ರಹಿತವಾದ ಶತೃಪ್ರತ್ಯಯಾಂತದ ಪರದಲ್ಲಿರುವ ಅಜಾದಿ ಪ್ರತ್ಯಯವು ಉದಾತ್ತವಾಗುತ್ತದೆ. ಎಂಬುದರಿಂದ ಇಲ್ಲಿ ಜಿ ಎಂಬ ಚತುರ್ಥೀ ವಿಭಕ್ತ್ಯಿಯು ಉದಾತ್ತವಾಗಿದೆ.

ಮಿಥುನಾ ಯಾ—**ಸುಪಾಂ ಸುಲುಕ್**—(ಪಾ ಸೂ. ೭-೧-೩೯) ಎಂಬುದರಿಂದ ಪ್ರಥಮಾ ದ್ವಿವಚನಕ್ಕೆ ಆ ಎಂಬ ಆದೇಶ ಬಂದಿದೆ. ॥ ೩ ॥

संहितापाठः

आदंगिराः प्रथमं दधिरे वय इद्धाग्नयः शम्या
ये सुकृत्यया।
सर्वं पणेः समविंदंत भोजनमश्वावंतं गो-
मंतमा पशुं नरः ॥ ४ ॥

॥ समाप्तः ॥

आत् । अंगिराः । प्रथमं । दधिरे । वयः । इद्ध । अग्नयः । शम्या ।
ये । सु । कृत्यया ।
सर्वं । पणेः । सं । अविंदंत । भोजनं । अश्व । वंतं । गो । -
गो । मंतं । आ । पशुं । नरः ॥ ४ ॥

सायणभाष्यं

ये दा पणिभिर्गावोऽपहृतास्तदानीमंगिरा अंगिरसः प्रथमं पूर्वमग्रतो वयो हविर्लक्षणमन्नं दधिरे । इंद्राार्थं संपादितवंतः । आदनंतरं तादृशा ये ऽंगिरस इद्धाग्नयः प्रज्वलिताग्नियुक्ताः संतः सुकृत्यया शोभनकरणोपेतया शम्या कर्मणा शोभनेन यज्ञगेनेंद्रमयजन्निति शेषः । ते नरो यज्ञस्य नेतारोऽंगिरसः पणेरेतन्नाम्नोऽसुरस्य संबंधि सर्वं भोजनं धनं समविंदंत । समलभंत । कीदृशं । अश्वावंतं अश्व्यर्युक्तं गोमंतं गोभिर्युक्तं । आकारः समुच्चयार्थः । गवाश्वव्यतिरिक्तमन्यत्पशुजातं च समविंदंत ॥ अंगिराः । सुपां सुलुगिति जसः सुः । शम्या । शमीति कर्मनाम । शाम्यत्यनया क्रियया दोषमिति शमी । करणे घाञ् । नोदात्तोपदेशस्य मांतस्यानाचमेः । पा. ७-३-३४ । इति वृद्धिप्रति-

ಸೇಧಃ । ಗೌರಾದಿತ್ವಾತ್ ಙೀಷ್ । ವ್ಯತ್ಯಯೇನಾದ್ಯುದಾತ್ತತ್ವಂ । ಸುಕೃತ್ಯಯಾ । ಶೋಭನಂ ಕೃತ್ಯಂ ಕರಣಂ ಯಸ್ಯಾಂ ಸಾ ತಥೋಕ್ತಾ । ನ ಖ್ಯಭ್ಯಾಮಿತ್ಯುತ್ತರಪದಾಂತೋದಾತ್ತೆತ್ವಂ ॥ ೪ ॥

ಪದಾರ್ಥ

ಆಂಗಿರಾಃ ಅಂಗಿರಸ್ಸುಗಳು । **ಪ್ರಥಮಂ**— ಮೊದಲು । **ವಯಃ**— ಹಸಿಸ್ಸನರೂಪದ ಅನ್ನವನ್ನು । **ವಧಿರೇ**—(ಇಂದ್ರನಿಗಾಗಿ) ಸಂಪಾದಿಸಿದರು । **ಆತ್**—ಅನಂತರ । **ಯೇ**— ಯಾವ ಆಂಗಿರಸ್ಸುಗಳು । **ಇದಾಗ್ನೇಯಃ**—ಅಗ್ನಿಯನ್ನು ಹಚ್ಚಿಕೊಂಡು । **ಸುಕೃತ್ಯಯಾ**—ಶ್ರೇಷ್ಠವಾದ ಉಪಕರಣಗಳುಳ್ಳ । **ಶಮ್ಯಾ**—ಕರ್ಮದಿಂದ (ಇಂದ್ರನನ್ನುದ್ದೇಶಿಸಿ ಯಜ್ಞಮಾಡಿದರೋ) । **ನರಃ**—(ಆ ಯಜ್ಞದ ವ್ಯವಸ್ಥಾಪಕರಾದ) ಆಂಗಿರಸ್ಸುಗಳು । **ಪಣೇಃ**—ಪಣಿಯೆಂಬ ರಾಕ್ಷಸನಿಗೆ ಸೇರಿದ । **ಅಶ್ವಾವಂತಂ**—ಕುದುರೆಗಳೊಡನೆ ಕೂಡಿದುದೂ । **ಗೋಮಂತಂ**—ಗೋವುಗಳಿಂದ ಕೂಡಿದುದೂ ಆದ । **ಸರ್ವಂ ಭೋಜನಂ**—ಸಕಲ ಧನವಷ್ಟನ್ನೂ (ಮತ್ತು) । **ಪಶುಂ** ಆ—ಇತರ ತರುರೂಪ ಪ್ರಾಣಿಗಳನ್ನು ಕೂಡ । **ಸಮವಿಂದಂತ**—ಹೊಂದಿದರು

ಭಾವಾರ್ಥ

ಪಣಿಯಿಂದ ಕೊಂಡರೆಗೊಳಗಾದ ಅಂಗಿರಸ್ಸುಗಳು ಇಂದ್ರನಿಗಾಗಿ ಮೊದಲು ಹಸಿಸ್ಸನರೂಪದ ಅನ್ನವನ್ನು ಸಂಪಾದಿಸಿದರು. ಆನಂತರ ಅಗ್ನಿಯನ್ನು ಹಚ್ಚಿಕೊಂಡು ಶ್ರೇಷ್ಠವಾದ ಕರ್ಮದಿಂದ ಯಜ್ಞವನ್ನಾಡಿದರು ಯಜ್ಞದ ವ್ಯವಸ್ಥಾಪಕರಾದ ಅಂತಹ ಅಂಗಿರಸ್ಸುಗಳು ಇಂದ್ರನ ಅನುಗ್ರಹದಿಂದ ಪಣಿಯೆಂಬ ರಾಕ್ಷಸನಿಗೆ ಸೇರಿದ, ಕುದುರೆಗಳೊಡನೆ ಕೂಡಿದುದೂ, ಗೋವುಗಳಿಂದ ಕೂಡಿದುದೂ ಮತ್ತು ಇತರ ಪ್ರಾಣಿಗಳಿಂದ ಕೂಡಿದುದೂ ಆದ ಸಕಲ ಧನವನ್ನೂ ಹೊಂದಿದರು

English Translation

The Angirasas first prepared the sacrificial food for Indra and then with well-kindled fire worshipped him with well-conducted rites; they, the performers of the sacrifice got all the wealth of Pani, consisting of horses cows and other animals

ವಿಶೇಷಾರ್ಥಗಳು

ಆಂಗಿರಾಃ— ಅಂಗಿರಸರೆಂಬ ಋಷಿಗಳು, ಸ್ವಸಿದ್ಧರಾದ ಆಂಗಿರಸ ಎಂಬ ಋಷಿಯ ವಂಶೋತ್ಪನ್ನರು. ಇವರು ಯಜ್ಞಯಾಗಗಳಲ್ಲಿ ಪ್ರವೀಣರೆಂದು ಪ್ರಸಿದ್ಧಿಯು. ಇವರ ವಿಷಯವಾಗಿ ನಾವು ಹಿಂದೆಯೇ ಅನೇಕಾವರ್ತಿ ಬರೆದಿದ್ದೇವೆ ಋಗ್ವೇದಸಂಹಿತಾ ಭಾಗ ೧ ಪುಟ 640 ನೋಡಿ.

ಶಮ್ಯಾ— ಕರ್ಮಣಾ । ಯಜ್ಞಾದಿಕರ್ಮಗಳಿಂದ. ಆಪಃ ಅಶ್ನುತೇ ಮೊದಲಾದ ಇಸ್ಪತ್ತಾರು ಕರ್ಮನಾಮಗಳ ಮಧ್ಯವಲ್ಲಿ ಶಮಿ ಎಂಬ ಶಬ್ದವು ಸಠಿತವಾಗಿರುವುದು (ನಿ. ೩–೧).

ಸುಕೃತ್ಯಯಾ— ಶೋಭನಕರಣೋಪೇತಯಾ ಉತ್ತಮವಾದ ಸಾಧನಸಾಮಗ್ರಿಗಳಿಂದ ನೆರವೇರಿಸಲ್ಪಟ್ಟ ; well-conducted ; according to the rites.

ಪಣೇಃ—ಪಣಿ ಎಂಬ ಅಸುರನ ಈ ಪಣಿ ಎಂಬ ಅಸುರನು ದೇವತೆಗಳ ಗೋವುಗಳನ್ನು ಅಪಹರಿಸಿ ಗುಹೆಯಲ್ಲಿ ಬಚ್ಚಿಟ್ಟಿದ್ದನು. ಅದನ್ನು ಇಂದ್ರನು ಸರುಪ್ಪೇವತೆಗಳ ಸಹಾಯದಿಂದ ಬಿಡಿಸಿ ತಂದನೆಂದು ಪ್ರಸಿದ್ಧವು. ಪಣಿಯ ವಿಷಯವಾಗಿ ನಾವು ಹಿಂದೆಯೇ ವಿಸ್ತಾರವಾಗಿ ನಿರೂಪಿಸಿದೇವೆ. ಋಗ್ವೇದಸಂಹಿತಾ ಭಾಗ ೩ ಪೇಜು 630 ನೋಡಿ

ಭೋಜನಂ— ಮಘಂ ರೇಕ್ಣಃ ಮೊದಲಾದ ಇಪ್ಪತ್ತೈದು ಧನನಾಮಗಳ ಮಧ್ಯದಲ್ಲಿ ಭೋಜನಂ ಎಂಬ ಶಬ್ದವು ಪಠಿತವಾಗಿರುವುದರಿಂದ ಭೋಜನಂ ಎಂದರೆ ಧನವನ್ನು ಎಂದರ್ಥವು (ನಿ. ೩–೯)

ಅಶ್ವಾವಂತಂ—ಕುದುರೆಗಳಿಂದ ಕೂಡಿದ (ದನ)

ಗೋಮಂತಂ— ಗೋವುಗಳಿಂದ ಸಹಿತವಾದ

ಪಶುಂ— ಅಶ್ವಗಳು, ಗೋವುಗಳು ಮೊದಲಾದವಲ್ಲದ ಇತರ ಪಶುಗಳು ಎಂದರೆ ಕುರಿ, ಮೇಕೆ, ಎಮ್ಮೆ ಇತ್ಯಾದಿ ಪಶುಗಳಿಂದ ಕೂಡಿದ.

ಆ — ಎಂದರೆ ಮತ್ತೂ ಈ ಶಬ್ದವು ಇಲ್ಲಿ ಸಮುಚ್ಚಯಾರ್ಥವನ್ನು ಸೂಚಿಸುವುದು.

ನರಃ—ಸ್ತುತಿಮಾಡುವವನಿಗೆ ತೇ ನರಃ ಎಂದರೆ ಯಜ್ಞಮಾಡಿದ ಆ ಅಂಗಿರಸಋಷಿಗಳು

ವ್ಯಾಕರಣ ವಿಷಯ

ತಿಂಗಿರಾಃ—ಅಂಗಿರಸ್ ಶಬ್ದದ ಮುಂದೆ ಪ್ರಥಮಾ ವಿಭಕ್ತಿವಚನದ ಜಸ್ ವಿಭಕ್ತ್ಯುತ್ಪತ್ತಿಮಾಡಿದಾಗ **ಸುಪಾಂ ಸುಲುಕ್** (ಪಾ. ಸೂ. ೭–೧–೩೯) ಎಂಬುದರಿಂದ ಜಸಿಗೆ ಸು ಆದೇಶ ಬರುತ್ತದೆ. ಅನಂತರವಾದುದರಿಂದ **ಆತ್ಸಂತಸ್ಯ ಚಾಧಾತೋಃ** (ಪಾ. ಸೂ. ೬–೪–೧೪) ಎಂಬುದರಿಂದ ಉಪಧಾದೀರ್ಘ ಬರುತ್ತದೆ. **ಸ್ಯೋಃ ಸಂಯೋಗಾದ್ಯೋಃ** (ಪಾ. ಸೂ. ೮–೨–೨೯) ಎಂಬುದರಿಂದ ಅದಿಸಕಾರಕ್ಕೆ ಲೋಪ ಬರುತ್ತದೆ.

ಶಮ್ಯಾ—ಶಮಿ ಎಂಬುದು ಕರ್ಮಕ್ಕೆ ಹೆಸರು. ಕಾಲವ್ಯತ್ಯಯವಾಗಿ ಕ್ರಿಯೆಯಾ ಮೊಹಣಾತಪುಷಿ ಶಮಿ ಈ ಕರ್ಮದಿಂದ ದೋಷಸಮುದಾಯವು ನಾಶವಾಗುತ್ತದೆ ಆದುದರಿಂದ ಶಮಿ. ಶಮು ಉಪಶಮೆ. ಈ ಧಾತುವಿನ ಮೇಲೆ ಕರಣಾರ್ಥದಲ್ಲಿ ಘಿಞ್ ಪ್ರತ್ಯಯ ಬರುತ್ತದೆ. ಶಮ್+ಇ ಎಂದಿರುವಾಗ ಜ್ಞಾತ್ ಪ್ರತ್ಯಯ ಪರವಲ್ಲಿರುವಾಗ **ಅತ ಉಪಧಾಯಾಃ** (ಪಾ. ಸೂ. ೭–೩–೧೧೮) ಎಂಬುದರಿಂದ ವೃದ್ಧಿಯು ಪ್ರಾಪ್ತವಾಗುತ್ತದೆ ಅದಕ್ಕೆ **ನೋದಾತ್ತೋಪದೇಶಸ್ಯ ಮಾಂತಸ್ಯಾನಾಚಮೇಃ** (ಪಾ. ಸೂ. ೭–೩–೩೪) ಚಮ್ ವ್ಯತಿರಿಕ್ತವಾದ ಅನುದಾತ್ತೋಪದೇಶವಾದ ಸಾಂತ ಧಾತುವಿಗೆ ವೃದ್ಧಿಯು ಬರುವುದಿಲ್ಲವೆಂಬುದರಿಂದ ನಿಷೇಧ ಬರುತ್ತದೆ. ಗುಣ ಯಲ್ಲಿ ಪಾಠಮಾಡಿರುವುದರಿಂದ **ಷಿದ್ಭೋರಾದಿಭ್ಯಶ್ಚ** (ಪಾ. ಸೂ. ೪–೧–೪೧) ಎಂಬುದರಿಂದ ಙೀಷ್ ಬರುತ್ತದೆ

ಯಸ್ಯೇತಿಚ ಎಂಬುದರಿಂದ ಆಕಾರಲೋಪ ಬರುತ್ತದೆ. **ಕರ್ಷಾತ್ವತೋ—**(ಪಾ. ಸೂ. ೬-೧-೧೫೯) ಎಂಬುದರಿಂದ ಅಂತೋದಾತ್ತವು ಪ್ರಾಪ್ತವಾದರೆ **'ನ್ಯತ್ಯಯೋ ಬಹುಲಂ** (೩-೧-೮೫) ಎಂಬುದರಿಂದ ವ್ಯತ್ಯಯದಿಂದ ಆದ್ಯುದಾತ್ತ ಸ್ವರ ಬರುತ್ತದೆ.

ಸುಕೃತ್ಯಯಾ—ಶೋಭನಂ ಕೃತ್ಯಂ ಕರಣಂ ಯಸ್ಯಾಂ ಸಾ ಸುಕೃತ್ಯಾ. ಯಾವ ಕ್ರಿಯೆಯಲ್ಲಿ ಒಳ್ಳೆಯ ಸಾಧನವಿದೆಯೋ ಅದು ಸುಕೃತ್ಯೆ. **ನಞ್‌ಸುಭ್ಯಾಂ** (ಪಾ. ಸೂ. ೬-೨-೧೭೨) ಬಹುವ್ರೀಹಿಯಲ್ಲಿ ನಞ್ ಸು ಇವುಗಳ ಪರದಲ್ಲಿರುವ ಉತ್ತರಪದವು ಅಂತೋದಾತ್ತವಾಗುತ್ತದೆ ಎಂಬುದರಿಂದ ಉತ್ತರಪದಾಂತೋದಾತ್ತ ಬಂದರೆ ಸುಕೃತ್ಯಾ ರಬ್ದವು ಅಂತೋದಾತ್ತವಾಗುತ್ತದೆ. ತೃತೀಯೈಕವಚನ ಟಾ ವಿಭಕ್ತಿಮಾಡಿದಾಗ **ಆಜ್ಞಾಚಾಪಃ** (ಪಾ. ಸೂ. ೭-೩-೧೦೫) ಎಂಬುದರಿಂದ ಅಂಗಕ್ಕೆ ಐಕಾರವು ಅಂತಾದೇಶವಾಗಿ ಬಂದರೆ ಅಯಾದೇಶ ಬರುತ್ತದೆ. ಉದಾತ್ತದ ಪರದಲ್ಲಿರುವುದರಿಂದ ವಿಭಕ್ತಿ ಅನುದಾತ್ತಕ್ಕೆ ಸ್ವರಿತ ಬರುತ್ತದೆ. ॥ ೪ ॥

ಸಂಹಿತಾಪಾಠಃ

ಯುಜ್ಞೈರಥರ್ವಾ ಪ್ರಥಮಃ ಪಥಸ್ತತೇ ತತಃ ಸೂರ್ಯೋ ವ್ರತಪಾ
ವೇನ ಆಜನಿ ।
ಆ ಗಾ ಆಜದುಶನಾ ಕಾವ್ಯಃ ಸಚಾ ಯಮಸ್ಯ ಜಾತಮಮೃತಂ
ಯಜಾಮಹೇ ॥ ೫ ॥

ಪದಪಾಠಃ

ಯುಜ್ಞೈಃ । ಅಥರ್ವಾ । ಪ್ರಥಮಃ । ತತೇ । ತತಃ । ಸೂರ್ಯಃ । ವ್ರತಪಾ ಃ ।
ವೇನಃ । ಆ । ಅಜನಿ ।
ಆ । ಗಾಃ । ಆಜತ್ । ಉಶನಾ । ಕಾವ್ಯಃ । ಸಚಾ । ಯಮಸ್ಯ । ಜಾತಂ । ಅ-
ಮೃತಂ । ಯಜಾಮಹೇ ॥ ೫ ॥

॥ ಸಾಯಣಭಾಷ್ಯಂ ॥

ಪಣಭಿರಪಹೃತಾಸು ಗೋಷ್ವಥರ್ವ್ಯತತ್ಸಂಜ್ಞ ಋಷಿರಿಂದ್ರಜ್ಞೈರಿಂದ್ರದೇವತ್ಯೈರನುಷ್ಠಿತೈರ್ಯಾಗೈಃ ಪಥೋ ಗೋಸಂಬಂಧಿನೋ ಮಾರ್ಗಾನ್ ಪ್ರಥಮಸ್ತತೇ। ತನುತೇ । ಸರ್ವೇಭ್ಯ ಋಷಿಭ್ಯ ಪೂರ್ವಮೇವ ಕೃತವಾನಿತ್ಯರ್ಥಃ । ತತಸ್ತದನಂತರಂ ವ್ರತಪಾ ವ್ರತಾನಾಂ ಕರ್ಮಣಾಂ ಪಾಲಯಿತಾ ವೇನಃ ಕಾಂತಃ ಸೂರ್ಯಃ ಸೂರ್ಯರೂಪ ಇಂದ್ರ ಆಜನಿ । ಗವಾಂ ಪ್ರದರ್ಶನಾಯಾವಿರಭೂತ್ । ತತೋಽಥರ್ವಾ ತಾ ಗಾ ಆಜತ್ । ಆಭಮುಖ್ಯೇನ ಪ್ರಾಪ್ತೋತ್ । ತಾವೃಶಸ್ಯೇಂದ್ರಸ್ಯ ಕಾವ್ಯಃ ಕವೇಃ ಪುತ್ರ ಉಶನಾ ಭೃಗುಃ ಸಚಾಸುರನಿರಸನಾಯ ಸಹಾಯೋಽಭೂತ್ । ಯಮಸ್ಯಾಸುರಾಣಾಂ ನಿಯಮನಾರ್ಥಂ ಜಾತಂ ಪ್ರಾದುರ್ಭೂತಮಮೃತಂ ಮರಣರಹಿತಂ ತಮಿಂದ್ರಂ ಯಜಾಮಹೇ । ಹವಿರ್ಭಿಃ ಪೂಜಯಾಮಃ ॥ ಪಥಃ । ಶಸಿ ಭಸ್ಯ ಟೇರ್ಲೋಪಃ ಇತಿ ಟಿಲೋಪಃ । ಉದಾತ್ತನಿವೃತ್ತಿಸ್ವರೇಣ ವಿಭಕ್ತೇರುದಾತ್ತತ್ವಂ । ತತೇ । ತನು ವಿಸ್ತಾರೇ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್। ಅನುದಾತ್ತೋಪದೇಶೇತ್ಯಾದಿನಾನುನಾಸಿಕಲೋಪಃ । ಆಜನಿ । ಜನೀ ಪ್ರಾದುರ್ಭಾವೇ । ದೀಪಜನಬುಧೇತ್ಯಾದಿನಾ । ಪಾ. ೩೧.೧-೬೧ । ಕರ್ತರಿ ಲುಙಿ ಚ್ಲೇಶ್ಚಿಣ್ । ಆಜತ್ । ಅಜ ಗತಿಕ್ಷೇಪಣಯೋಃ ॥

ಪದಪಾಠಾರ್ಥ

ಅಥರ್ವಾ (ಪಣಿಯಿಂದ ಗೋವುಗಳು ಅಪಹೃತವಾದಾಗ) ಅಥರ್ವನೆಂಬ ಋಷಿಯು । **ಯಜ್ಞೈಃ**— ಇಂದ್ರನನ್ನುದ್ದೇಶಿಸಿ ನೆರವೇರಿಸಿದ) ಯಜ್ಞಗಳಿಂದ । **ಪಥಃ**— (ಗೋವುಗಳು ಅಪಹೃತನಾದ)ಮಾರ್ಗಗಳನ್ನು । **ಪ್ರಥಮಃ**— ಎಲ್ಲರಿಗಿಂತಲೂ ಮೊದಲನೆಯವನಾಗಿ । **ತತೇ**— ಕಂಡುಕೊಂಡನು । **ತತಃ**— ಆ ಮೇಲೆ । **ವ್ರತಪಾಃ**— ವ್ರತಕರ್ಮಗಳ ಪಾಲಕನೂ । **ವೇನಃ**—ಕಾಂತಿಯುತನೂ ಆದ । **ಸೂರ್ಯಃ**—ಸೂರ್ಯರೂಪನಾದ ಇಂದ್ರನು । **ಆ ಅಜನಿ**— (ದಾರಿಯನ್ನು ತೋರಿಸಲು) ಆವಿರ್ಭೂತನಾದನು । (ತದನಂತರ ಅಥರ್ವನು) **ಗಾಃ**— ಪಸುಗಳನ್ನು । **ಆ ಅಜತ್** ಪುನಃ ಹೊಂದಿದನು. (ಅಂತಹ ಇಂದ್ರನಿಗೆ) । **ಕಾವ್ಯಃ**— ಕವಿಪುತ್ರನಾದ । **ಉಶನಾ**—ಭೃಗುವು । **ಸಚಾ**—(ಅಸುರನಾಶಕ್ಕೆ)ಸಹಾಯಕನಾದನು । **ಯಮಸ್ಯ**—(ರಾಕ್ಷಸರನ್ನು ತಡೆಗಟ್ಟಲು । **ಜಾತಂ**—ಉತ್ಪನ್ನನಾದ । **ಅಮೃತಂ**—ಮರಣರಹಿತನಾದ ಇಂದ್ರನನ್ನು । **ಯಜಾಮಹೇ**— (ನಾವು) ಹವಿಸ್ಸುಗಳಿಂದ ಪೂಜಿಸೋಣ. ।

॥ ಭಾವಾರ್ಥ ॥

ಪಣಿಯು ಗೋವುಗಳನ್ನು ಅಪಹರಿಸಿದಾಗ ಅಥರ್ವನೆಂಬ ಋಷಿಯು ಇಂದ್ರನನ್ನುದ್ದೇಶಿಸಿ ಯಜ್ಞನಾಡಿದನು. ಆ ಯಜ್ಞದ ಸಹಾಯದಿಂದ ಗೋವುಗಳು ಅಪಹೃತವಾದ ಮಾರ್ಗಗಳನ್ನು ಎಲ್ಲರಿಗಿಂತಲೂ ಮೊದಲನೆಯವನಾಗಿ ಕಂಡುಕೊಂಡನು. ಆ ಮೇಲೆ ವ್ರತಗಳ ಪಾಲಕನೂ ಕಾಂತಿಯುತನೂ ಆದ ಇಂದ್ರನು ಸೂರ್ಯನರೂಪದಲ್ಲಿ ಆ ದಾರಿಯನ್ನು ತೋರಿಸಿಕೊಡಲು ಆವಿರ್ಭೂತನಾದನು. ಅಥರ್ವನು ಈ ಸಹಾಯದಿಂದ ಪಸುಗಳನ್ನು ಪುನಃ ಹೊಂದಿದನು. ಆ ಕಾಲದಲ್ಲಿ ಕವಿಪುತ್ರನಾದ ಭೃಗುವು ಇಂದ್ರನಿಗೆ ಅಸುರನಾಶಕ್ಕೆ ಸಹಾಯಕನಾದನು ರಾಕ್ಷಸರನ್ನು ತಡೆಗಟ್ಟಲು ಉತ್ಪನ್ನನಾದನೆನೂ ಮರಣರಹಿತನೂ ಆದ ಅಂತಹ ಇಂದ್ರನನ್ನು ಯಜ್ಞಗಳಿಂದ ಪೂಜಿಸೋಣ.

English Translation

Atharvan first discovered the path of the stolen cattles by sacrifices ; then the bright Sun (Indra) the protector of pious performances, was born ; Atharvan regained the cattle with the help of Usanas son of Kavi ; let us worship Indra who was born to destroy Asuras.

ವಿಶೇಷವಿಷಯಗಳು

ಅಮೃತಂ—ಮರಣರಹಿತಂ । ಮರಣ ರಹಿತನಾದ ಇಂದ್ರನನ್ನು

ಅಥರ್ವಾ—ಒಬ್ಬ ಪ್ರಸಿದ್ಧನಾದ ಋಷಿಯು. ಈ ಋಷಿಯ ಹೆಸರು ಅನೇಕ ಋಕ್ಕುಗಳಲ್ಲಿ ಪರಿತವಾಗಿದ್ದರೂ ಇವನ ವಿಷಯವಾಗಿ ಹೆಚ್ಚು ಸಂಗತಿಗಳು ನಮಗೆ ತಿಳಿದಿಲ್ಲ.

ವೇನಃ ಸೂರ್ಯಃ—ಈ ಶಬ್ದಗಳಿಗೆ ಪ್ರಕಾಶವಾನನಾದ ಸೂರ್ಯರೂಪದಿಂದ ಇಂದ್ರನು ಆವಿರ್ಭವಿಸಿದನೆಂದು ಭಾಷ್ಯಕಾರರು ಹೇಳಿರುವರು. ಅಥವಾ ಸೂರ್ಯನು ಉದಯಿಸಿ ಬೆಳಗಾದ ಮೇಲೆ ಅಥರ್ವಋಷಿಯು ಗೋವುಗಳ ಅಪಹೃತಮಾರ್ಗವನ್ನು ಕಂಡುಕೊಂಡನೆಂದು ಹೇಳುವುದರಿಂದ ಅರ್ಥವು ಚೆನ್ನಾಗಿ ಹೊಂದುವುದು

ವ್ರತಪಾಃ—ವ್ರತಾನಾಂ ಕರ್ಮಣಾಂ ಪಾಲಯಿತಾ । ಯಜ್ಞಾದಿಕರ್ಮಗಳ ಪಾಲಕನು.

ಉಶನಾ ಕಾವ್ಯಃ—ಕವೇಃ ಪುತ್ರಃ ಉಶನಾಃ ಭೃಗುಃ । ಕವಿಯ ಪುತ್ರನಾದ ಉಶನಸ್ ಎಂಬುವನು. ಇವನಿಗೆ ಭೃಗುವೆಂಬ ಹೆಸರು. ಇವನು ಒಬ್ಬ ಪ್ರಸಿದ್ಧನಾದ ಋಷಿಯು. ಕಾವ್ಯ ಎಂಬ ಈ ಋಷಿಯ ಹೆಸರು ಋಗ್ವೇದವಲ್ಲಿ—ಋ. ಸಂ. ೧-೫೧-೧೧ ; ೧-೮೩-೫ , ೧-೨೨-೧೪ ; ೬-೨೦-೧೧; ೭-೩೫-೧೭ ; ಅಥರ್ವವೇದ. ೪-೨೯-೬ , ತೈತ್ತಿರೀಯ ಸಂಹಿತಾ ೩-೫-೮-೫ ಇತ್ಯಾದಿ ಮಂತ್ರಗಳಲ್ಲಿ ಪರಿತವಾಗಿರುವುದು

ಯಮಸ್ಯ ಜಾತಂ—ಅಸುರಾಣಾಂ ನಿಯಮನಾರ್ಥಂ ಜಾತಂ । ಅಸುರರನ್ನು ನಿಗ್ರಹಮಾಡುವುದಕ್ಕಾಗಿ ಹುಟ್ಟಿದ.

ವ್ಯಾಕರಣಪ್ರಕ್ರಿಯಾ

ಪಥಃ—ಪಥಿನ್ ಶಬ್ದದ ಮೇಲೆ ದ್ವಿತೀಯಾ ಬಹುವಚನ ಶಸ್ ಪ್ರತ್ಯಯ ಬಂದಾಗ **ಭಸ್ಯ ಟೇರ್ಲೋಪಃ** (ಪಾ. ಸೂ ೬-೧-೬೮) ಭಸಂಜ್ಞೆಯುಳ್ಳ ಪಥಿನ್ ಶಬ್ದದ ಟಿಗೆ ಲೋಪ ಬರುತ್ತದೆ ಎಂಬುದರಿಂದ ಇಲ್ಲಿ ಅಜಾದಿ ಪ್ರತ್ಯಯ ಪರದಲ್ಲಿರುವುದರಿಂದ ಭಸಂಜ್ಞೆಯಿರುವುದರಿಂದ ಟಿಗೆ ಲೋಪ ಬರುತ್ತದೆ. ಇನ್ ಎಂಬ ಟಿಗೆ ಲೋಪ ಬಂದರೆ ಪಥ್+ಅಸ್ ಎಂದಾಗುತ್ತದೆ. ರುತ್ವವಿಸರ್ಗಗಳು ಬಂದರೆ ರೂಪ ಸಿದ್ಧಿಯಾಗುತ್ತದೆ. ಇಲ್ಲಿ **ಅನುದಾತ್ತ ಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ವಿಭಕ್ತಿಯು ಅನುದಾತ್ತವಾಗುತ್ತದೆ. ಪ್ರಾತಿಪದಿಕವು **ಫಿಷೋಂತ ಉದಾತ್ತಃ** (ಫಿ. ಸೂ. ೧) ಎಂಬುದರಿಂದ ಅಂತೋದಾತ್ತವಾಗುತ್ತದೆ. ಅನುದಾತ್ತವು ಪರದಲ್ಲಿರುವಾಗ ಉದಾತ್ತಕ್ಕೆ ಲೋಪ ಹೇಳಿದುದರಿಂದ **ಅನುದಾತ್ತಸ್ಯ ಚ ಯತ್ರೋದಾತ್ತ ಲೋಪಃ** (ಪಾ ಸೂ. ೬-೧-೧೬೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ತತೆ—ತನು ವಿಸ್ತಾರೆ ಧಾತು. ತನಾದಿ. **ಸ್ವರಿತೇತ್**. ತನ್+ತೆ ಎಂದಿರುವಾಗ ಉವಿಕರಣಕ್ಕೆ ಪ್ರಾಪ್ತವಾದರೆ **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ **ಲುಕ್** ಬರುತ್ತದೆ. **ಅನುದಾತ್ತೋಪದೇಶವನತಿ** (ಪಾ. ಸೂ. ೬-೪-೩೭) ಎಂಬುದರಿಂದ ಅನುನಾಸಿಕವಾದ ನಕಾರಕ್ಕೆ ಲೋಪ ಬಂದರೆ ತತೆ ಎಂದಾಗುತ್ತದೆ **ತಿಜ ತಿಜಃ** ಎಂಬುದರಿಂದ ತಿತಿಜಾತನ ಪರವಲ್ಲಿ ಬಂದುದರಿಂದ ಸರ್ವಾನುದಾತ್ತವಾಗುತ್ತದೆ

ಅಜನಿ—ಜನೀ ಪ್ರಾದುರ್ಭಾವೆ. ಧಾತು ಕರ್ತರಿ ಲುಙ ಪ್ರಥಮ ಪುರುಷೈಕವಚನರೂಪ. ಜನ್+ತ ಎಂದಿರುವಾಗ ಸಾಮಾನ್ಯವಾಗಿ ಚ್ಲಿ ಪ್ರಾಪ್ತವಾದಾಗ ಅದಕ್ಕೆ **ದೀಪಜನಬುಧಪೂರಿ** (ಪಾ. ಸೂ. ೩-೧-೬೮) ಇವುಗಳ ಪರದಲ್ಲಿರುವ ಚ್ಲಿಗೆ ಏಕವಚನ ತರಬ್ದ ಪರದಲ್ಲಿರುವಾಗ ಚಿಣ್ ವಿಕಲ್ಪವಾಗಿ ಬರುತ್ತದೆ ಎಂಬುದರಿಂದ ಚಿಣಾದೇಶ ಬರುತ್ತದೆ. ಚಿಣ್ ಬಂದರೆ **ಚಿಣೋ ಲುಕ್** (ಪಾ. ಸೂ. ೬-೪-೧೦೪) ಎಂಬುದರಿಂದ ಚಿಣಿನ ಪರದಲ್ಲಿರುವ ತರಬ್ದಕ್ಕೆ ಲುಕ್ ಬರುತ್ತದೆ ಎಂಬುದರಿಂದ **ಏಕವಚನದ** ತ ಪ್ರತ್ಯಯಕ್ಕೆ ಲುಕ್ ಬರುತ್ತದೆ. ಲುಬ್ ನಿಮಿತ್ತಕವಾದ ಆಟ್ ಧಾತುವಿಗೆ ಬಂದರೆ ತಜನಿ ಎಂದಾಗುತ್ತದೆ.

ಅಜಿತ್—ಅಜ ಗತಿಕ್ಷೇಪಣಯೋಃ ಧಾತು. ಭ್ವಾದಿ. ಶಬ್ಲಿಕರಣ. ಲಙ್ ಪ್ರಥಮಪುರುಷೈಕವಚನ. ತಿಪ್ಪಿನ ಇಕಾರಕ್ಕೆ **ಇತಶ್ಚ** ಎಂಬ ಸೂತ್ರದಿಂದ ಲೋಪ ಬರುತ್ತದೆ. ಅಜಾದಿಯಾದುದರಿಂದ ಧಾತುವಿಗೆ ಆಡಾಗಮ ಬರುತ್ತದೆ ॥೫॥

[illegible]

ಬರ್ಹಿರ್ವಾ ಯತ್ಸ್ವಪತ್ಯಾಯ ವೃಜ್ಯತೇ ಕೃತ್ತಂ ವಾ ಶ್ಲೋಕ-
ಮಾಘೋಷತೇ ದಿವಿ ।
ಗ್ರಾವಾ ಯತ್ರ ವದತಿ ಕಾರುರುಕ್ಥ್ಯಸ್ತಸ್ಯೇದಿಂದ್ರೋ ಅಭಿಪಿ-
ತ್ವೇಷು ರಣ್ಯತಿ ॥೬॥

ಪದಪಾಠಃ

ಬರ್ಹಿಃ । ವಾ । ಯತ್ । ಸುಽಅಪತ್ಯಾಯ । ವೃಜ್ಯತೇ । ಅರ್ಕಃ । ವಾ । ಶ್ಲೋಕಂ । ಆಽಘೋಷತೇ । ದಿವಿ ।
ಗ್ರಾವಾ । ಯತ್ರ । ವದತಿ । ಕಾರುಃ । ಉಕ್ಥ್ಯಃ । ತಸ್ಯ । ಇತ್ । ಇಂದ್ರಃ । ಅಭಿಽಪಿತ್ವೇಷು । ರಣ್ಯತಿ ॥ ೬ ॥

ಸಾಯಣಭಾಷ್ಯಂ

ಸ್ವಪತ್ಯಾಯ ಶೋಭನಾಪತನಹೇತುಭೂತಾಯ ಕರ್ಮಣೇ ಬರ್ಹಿರ್ವಾ ಯದ್ಯದಾ ವೃಜ್ಯತೇ ಛಿದ್ಯತೇ ಅಧ್ವರ್ಯುಣಾ ಯೋಗಾರ್ಥಮಾಹ್ರಿಯತೇ । ಅರ್ಕೋ ವಾ ಸ್ತೋತ್ರನಿಷ್ಪಾದಕೋ ಹೋತಾ ವಾ ಶ್ಲೋಕಂ ಸ್ತುತಿರೂಪಾಂ ವಾಚಂ ದಿವಿ ದ್ಯೋತಮಾನೇ ಯಜ್ಞೇ ಯದಾಘೋಷತೇ ಉಚ್ಚಾರಯತಿ । ಯತ್ರ ಯಸ್ಮಿನ್ಕಾಲೇ ಗ್ರಾವಾಭಿಷವಾರ್ಥಂ ಪ್ರವೃತ್ತ ಉಪಲೋ ವದತಿ ಶಬ್ದಂ ಕರೋತಿ । ತತ್ರ ವೈಷ್ಣವಂತಃ । ಕಾರುರುಕ್ಥ್ಯಃ । ಉಪ್ರೋಪಸಮುತ್ಸೇತಿ । ಉಕ್ಥ್ಯಸ್ಯ ಶಸ್ತ್ರಸ್ಯ ಶಂಸಿತಾ ಕಾರುಃ ಸ್ತೋತಾ ಯಥಾಭಿಮತಶಬ್ದಂ ಕರೋತಿ ತದ್ವತ್ । ತಸ್ಯ ಪೂರ್ವೋಕ್ತಸ್ಯ ಸರ್ವಸ್ಯಾಭಿಪಿತ್ವೇಷ್ವಭಿಪ್ರಾಪ್ತಿಷ್ವಿಂದ್ರೋ ರಣ್ಯತಿ । ರಮತೇ । ಯದ್ವಾ । ಪೂರ್ವೋಕ್ತಾನಾಂ ಬರ್ಹಿರಾದೀನಾಮಭಿಪ್ರಾಪ್ತಿಷು ಸತೀಷ್ವಿಂದ್ರೋ ರಣ್ಯತಿ । ಅಸ್ಮದೀಯೋ ಯಾಗೋ ಭವಿಷ್ಯತೀತಿ ಹರ್ಷಶಬ್ದಂ ಕರೋತಿ ॥ ವೃಜ್ಯತೇ । ವೃಜೀ ವರ್ಜನೇ । ಅಮುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ಯಕ ಏವ ಸ್ವರಃ ಶಿಷ್ಯತೇ । ನಿಪಾತೈರ್ಯದ್ಯದಿಹಂತೇತಿ ನಿಘಾತಪ್ರತಿಷೇಧಃ । ಆಘೋಷತೇ । ಘುಷಿರ್ ವಿಶಬ್ದನೇ । ಭೌವಾದಿಕಃ । ಆತ್ರಾಪಿ ಯದಿತ್ಯಸ್ಯ ನಿಘಾತಸ್ಯಾನುಷಂಗಾನ್ನಿಘಾತಾಭಾವಃ । ರಣ್ಯತಿ । ರಮು ಕ್ರೀಡಾಯಾಂ । ವ್ಯತ್ಯಯೇನ ಶನ್ ಪರಸ್ಮೈಪದಂ ಚ । ಆಂತ್ಯವಿಕಾರಶ್ಛಾಂದಸಃ । ಯದ್ವಾ । ರಣ ಶಬ್ದಾರ್ಥಃ । ವ್ಯತ್ಯಯೇನ ಶನ್ ॥

ಸರಲಾರ್ಥ

ಸ್ವಪತ್ಯಾಯ—ಶ್ರೇಷ್ಠಸಾಧನ ಕರ್ಮಾಭಿವೃದ್ಧಿಗಾಗಿ । **ಯತ್**—ಯಾವಾಗ । **ಬರ್ಹಿಃ**—ಪವಿತ್ರವಾದ ಧರ್ಭವು । **ವೃಜ್ಯತೇ ವಾ**—ಕತ್ತರಿಸಲ್ಪಡುವುದೋ ಆ ಸಮಯದಲ್ಲಾಗಲಿ, । **ಅರ್ಕಃ**—ಸ್ತೋತ್ರ ಸಂಪಾದಕನಾದ ಹೋತೃವು । **ಶ್ಲೋಕಂ**—ಸ್ತುತಿರೂಪವಾದ ವಾಕ್ಯನ್ನು । **ದಿವಿ**—ಪ್ರಕಾಶಮಾನವಾದ ಯಜ್ಞದಲ್ಲಿ । **ಆ ಘೋಷತೇ ವಾ**—ಉಚ್ಚರಿಸುವ ಕಾಲದಲ್ಲಾಗಲಿ । **ಯತ್ರ**—ಯಾವ ಯಜ್ಞಕಾಲದಲ್ಲಿ । **ಗ್ರಾವಾ**—(ಸೋಮರಸವನ್ನು ಹಿಂಡುವ) ಕಲ್ಲು । ಕಾರುರುಕ್ಥ್ಯಃ ರಸ್ತ್ರರೂಪವಾದ ಮಂತ್ರವನ್ನು ಪರಿಸುನ ಸ್ತೋತೃವು ಶಬ್ದಮಾಡುವಂತೆ । **ವದತಿ (ವಾ)**—(ಪ್ರಿಯವಾಗಿ) ಶಬ್ದಮಾಡುವ ಕಾಲದಲ್ಲಾಗಲೀ । **ತಸ್ಯ ಇತ್**—ಈ ಎಲ್ಲಾವಿಧವಾದ । **ಅ ಭಿ**

ಪಿತ್ವೀಷು—ಸಂದರ್ಭಗಳು ಒದಗಿದಾಗಲೂ । **ಇಂದ್ರಃ**—ಇಂದ್ರನು । **ರಣ್ಯತಿ**—ಸಂತೋಷಪಡುತ್ತಾನೆ ಅಥವಾ ಹರ್ಷಸೂಚಕವಾದ ಶಬ್ದವನ್ನು ಮಾಡುತ್ತಾನೆ ॥

ಭಾವಾರ್ಥ

ಶ್ರೇಷ್ಠವಾದ ಕರ್ಮಕ್ಕಾಗಿ ಪವಿತ್ರವಾದ ದರ್ಭಚ್ಛೇದನಕಾಲದಲ್ಲಾಗಲಿ, ಪ್ರಕಾಶಮಾನವಾದ ಯಜ್ಞದಲ್ಲಿ ಸ್ತೋತ್ರ ಸಂಪಾದಕನಾದ ಹೋತೃವು ಸ್ತೋತ್ರಮಾಡತಕ್ಕಕಾಲದಲ್ಲಾಗಲಿ ಮತ್ತು ಸೋಮರಸವನ್ನು ಹಿಂಡತಕ್ಕ ಕಲ್ಲು ಸ್ತೋತೃವಿನಂತೆ ಪ್ರಿಯವಾದ ಶಬ್ದಮಾಡುವಾಗಾಗಲಿ, **ಈ** ಎಲ್ಲಾ ಸಂದರ್ಭಗಳು ಒದಗಿದಾಗಲೂ ಸಹ ಇಂದ್ರನು ತನ್ನನ್ನು ಉದ್ದೇಶಿಸಿದ ಯಜ್ಞವು ಸಮಾಪಿಸಿತೆಂದು ಸಂತೋಷವನ್ನು ವ್ಯಕ್ತಪಡಿಸುತ್ತಾನೆ.

English Translation

Whether the sacred grass is cut for the sacrifice, in order to bring down the blessings, whether the priest recites the sacred hymn in the brilliant sacrifice, whether the stone used to press the soma plant makes a sound like the priest who repeats the hymn, on all these occasions Indra rejoices.

ವಿಶೇಷವಿಷಯಗಳು

ಬರ್ಹಿಃ—ಅಗ್ರಭಾಗವನ್ನು ಕತ್ತರಿಸಿದ ದರ್ಭೆ. ಯಜ್ಞಮಾಡುವಾಗ ದರ್ಭೆಯ ತುದಿಗಳನ್ನು ಕತ್ತರಿಸಿ ಭೂಮಿಯಮೇಲೆ ಮೆತ್ತಗಿರುವಂತೆ ಪರಪರದರಗಳಾಗಿ ಹರಡುವರು. ಇದರಮೇಲೆ ಬಂದು ಕೂಳಿತುಕೊಳ್ಳಬೇಕೆಂದು ದೇವತೆಗಳನ್ನು ಪ್ರಾರ್ಥಿಸುವರು. ದರ್ಭೆಯ ತುದಿಗಳನ್ನು ಕತ್ತರಿಸುವಾಗ ಉಂಟಾಗುವ ಕರಕರನೆಂಬ ಶಬ್ದವು ಯಜ್ಞಾರ್ಥವಾಗಿ ಮಾಡುವುದರಿಂದ ಇಂದ್ರನಿಗೆ ಸಂತೋಷವನ್ನುಂಟುಮಾಡುವುದೆಂದು ಭಾವ್ಯವು.

ಆರ್ಕಃ—ಋಕ್ಕನ್ನು (ಮಂತ್ರವನ್ನು) ಪಠಿಸುವ ಹೋತೃವು ಅಥವಾ ಋತ್ವಿಜನು. ಅರ್ಕ ಎಂಬ ಶಬ್ದಕ್ಕೆ ಬದಲಾಗಿ ಅರ್ಕಶಬ್ದವು ಸ್ವಯೋಗಸಲ್ಲ್ಯರೂಪವುದು ಅರ್ಕಶಬ್ದವು ಈ ಅರ್ಥದಲ್ಲಿ ಋ. ಸಂ. ೧-೧೬೭-೬ರಲ್ಲಿ ಉಸ ಯೋಗಿಸಲ್ಪಟ್ಟಿರುವುದು.

ಶ್ಲೋಕಃ—ಶ್ಲೋಕಃ ಶೃಣೋತೇಃ : (ನಿ. ೯-೪) ಶ್ಲೋಕಃ ಎಂದರೆ ಸ್ತುತಿರೂಪನಾದ ವಾಕ್ಯವು. (ನಿ. ೭ ೫೩).

ದಿವಿ—ಈ ಶಬ್ದಕ್ಕೆ ಭಾಷ್ಯಕಾರರು ಸ್ಪಕಾಶಮಾನವಾದ ಯಜ್ಞದಲ್ಲಿ ಎಂದರ್ಥ ಸಿವರಣೆ ಸಾಡಿರುವರು

ಗ್ರಾವಾ— ಸೋಮಲತೆಯನ್ನು ಜಜ್ಜಿ ಸೋಮರಸವನ್ನು ಹಿಂಡುವುದಕ್ಕಾಗಿ ಉಪಯೋಗಿಸುವ ಕಲ್ಲು. ಗ್ರಾವಾ ಯತ್ರ ವದತಿ ಎಂದರೆ ಸೋಮಲತೆಯನ್ನು ಜಜ್ಜುವಾಗ ಉಂಟಾಗುವ ಶಬ್ದವು ಇಂದ್ರನಿಗೆ ಸ್ತೋತ್ರಕರವಾದುದು ಎಂದರ್ಥವಾಗುವುದು. ಸೋಮಲತೆಯನ್ನು ಕಲ್ಲಿನಿಂದ ಜಜ್ಜುವ ಶಬ್ದವನ್ನು ಗ್ರಾವಾ ವದತಿ ಎಂಬ ಶಬ್ದಗಳಿಂದ ಹೇಳುವ ರೂಢಿಯು ಇದ್ದಂತೆ ಕಾಣುವುದು. **ಯತ್ರ ಗ್ರಾವಾ ವದತಿ ತತ್ರ ಗಚ್ಛತಂ** (ಋ. ಸಂ. ೧-೨೩೫-೮) ಇತ್ಯಾದಿ ಉದಾಹರಣೆಗಳಿರುವವ

कारुः—ಮಾಡುವವನು. ಎಂದರೆ ಸ್ತೋತ್ರಮಾಡುವವನು. ಕವಿ, ಈ ಶಬ್ದವು ಋಗ್ವೇದದಲ್ಲಿ ಋ. ಸಂ.–೧–೧೫೫–೧೪ , ೭–೪೮–೪ , ೯–೧೧೭–೩ , ೧೦–೭೫–೧ , ಎಂಬ ಋಕ್ಕುಗಳಲ್ಲಿ ಪರಿತವಾಗಿದೆ. ಮತ್ತು ಈ ಶಬ್ದದ ರೂಪಾಂತರಗಳಾದ **कारवः कारवे, कारुं** ಮೊದಲಾದ ಶಬ್ದಗಳು ಅನೇಕ ಋಕ್ಕುಗಳಲ್ಲಿ ಇರುವವು.

ऊक्थ्यः— ಶಸ್ತ್ರಮಂತ್ರವನ್ನು ಪಠಿಸುವವನು. ಋತ್ವಿಕ್ಕು.

अभिधित्ये॒षु— **पूर्वोक्तानां बर्हिराद्यानामभिप्राप्तिषु ।** ಹಿಂದೆ ಹೇಳಿದ ವರ್ಹಿ ನಿಷ್ಕ್ರೀಣ ಮೊದಲಾದ ಶಬ್ದಗಳು ಕೇಳಿಸುತ್ತಿರುವಾಗ

रण्यति—**अस्मदीयो योगो भविष्यतीति हर्षशब्दं करोति ।** ಮೇಲೆ ಹೇಳಿದ ವರ್ಹಿ ನಿಷ್ಕ್ರೀಣನಾದಿಶಬ್ದಗಳು ಯಜ್ಞಾನುಷ್ಠಾನ ಸೂಚಕಗಳಾದುದರಿಂದ ಅಂತಹ ಶಬ್ದಶ್ರವಣದಿಂದ ಇಂದ್ರನು ಸಂತೋಷಪಟ್ಟು, ತನ್ನ ಮೆಚ್ಚುಗೆಯನ್ನು ಸೂಚಿಸಲು ಹರ್ಷಧ್ವನಿ ಮಾಡುವನು ಎಂಬಭಿಪ್ರಾಯವು.

॥ ವ್ಯಾಕರಣಾಶ್ರಿತಂ ॥

वृज्यते—ವೃಜೀ ವರ್ಜನೇ ಧಾತು. ರುಧಾದಿ. ಕರ್ಮಣಿ ಲಟ್. ಕರ್ಮ ಲಕಾರ ಪರವಲ್ಲಿರುವಾಗ **सार्वधातुकेऽयक्** (ಪಾ. ಸೂ ೩-೧-೬೭) ಎಂಬುದರಿಂದ ಧಾತುವಿಗೆ ಯಕ್ ಬರುತ್ತದೆ. **भाव कर्मणोः** ಎಂಬುದರಿಂದ ಆತ್ಮನೇಪದಪ್ರತ್ಯಯ ಬರುತ್ತದೆ. ಪ್ರತ್ಯಯಾಂತೋದಾತ್ತವು ಪ್ರಾಪ್ತವಾದರೆ **तास्यनुदात्तेत्** (ಪಾ.ಸೂ. ೬-೧-೧೮೬) ಎಂಬುದರಿಂದ ಅನುದಾತ್ತವೇ (ವೃಜ್ಯ) ಪರವಲ್ಲಿರುವುದರಿಂದ ಲಸಾರ್ವ ಧಾತುಕಕ್ಕೆ ಅನುದಾತ್ತಸ್ವರ ಬರುತ್ತದೆ. ಆಗ ಯಕ್ ಸ್ವರವೇ ಸತಿಶಿಷ್ಟವಾಗುವುದರಿಂದ (ಉದಾತ್ತ) ಉಳಿಯುತ್ತದೆ **तिङ्ङतिङः** ಎಂಬುದರಿಂದ ಸರ್ವಾನುದಾತ್ತವು ಪ್ರಾಪ್ತವಾದರೆ **निघातो र्यद्यदिहंत**—(ಪಾ ಸೂ. ೮-೧-೩೦) ಇವುಗಳ ಯೋಗವಿರುವಾಗ ತಿಙಂತವು ಸರ್ವಾನುದಾತ್ತವಾಗುವುದಿಲ್ಲ ಎಂದು ನಿಷೇಧಿಸಿರುವುದರಿಂದ. ಇಲ್ಲಿ ಪೂರ್ವದಲ್ಲಿ ಯತ್ ಸಂಬಂಧವಿರುವುದರಿಂದ ಸರ್ವಾನುದಾತ್ತ ಬಂದಿಲ್ಲ.

आशूपषते—ಶೀಘ್ರವಾಗಿ ವಿಕಸನೆ. ಧಾತು ಭ್ವಾದಿ. ಅಜ ಉಪಸರ್ಗ. ಇಂದ ಇತ್ಯಾಗುತ್ತದೆ. ಶಪ್ ವಿಕರಣಪ್ರತ್ಯಯ ಬಂದಾಗ ಲಘೂಪಧಗುಣ ಬರುತ್ತದೆ. ಇಲ್ಲಿಯೂ ಹಿಂದಿನಂತೆ ಅದುಪದೇಶದ ಪರವಲ್ಲಿರುವುದರಿಂದ ಪ್ರತ್ಯಯಕ್ಕೆ ಅಂತೋದಾತ್ತಸ್ವರ ಬರುತ್ತದೆ. ಶಪ್ ಪಿತ್ತಾದ್ದರಿಂದ ಅನುದಾತ್ತವಾಗುತ್ತದೆ. ಧಾತುಸ್ವರವು (ಉದಾತ್ತ) ಉಳಿಯುತ್ತದೆ. ಉದಾತ್ತದ ಪರವಲ್ಲಿರುವ ಶಪನುದಾತ್ತಕ್ಕೆ ಸ್ವರಿತ ಬರುತ್ತದೆ. ಸ್ವರಿತದ ಪರವಲ್ಲಿರುವ ಅನುದಾತ್ತವು ಪ್ರಚಯನಾಗುತ್ತದೆ ಹಿಂದಿನಂತೆ ನಿಘಾತವೂ (ಸರ್ವಾನುದಾತ್ತವು) ಬರುವುದಿಲ್ಲ. ಹಿಂದಿನ ಯತ್ ಎಂಬುದನ್ನು ಅನುಸಂಗನಮಾಡಿಕೊಳ್ಳುವುದರಿಂದ ಯತ್ಸಂಬಂಧ ಬರುವುದರಿಂದ ನಿಘಾತಪ್ರತಿಷೇಧ ಬರುತ್ತದೆ.

रण्यति—ರಮು ಕ್ರೀಡಾಯಾಂ ಧಾತು ಭ್ವಾದಿ. ಶಪ್ ವಿಕರಣವು ಪ್ರಾಪ್ತವಾದರೆ **व्यत्ययो बहुलं** (ಪಾ. ಸೂ. ೩-೧-೮೫) ಎಂಬುದರಿಂದ ಛಂದಸ್ಸಿನಲ್ಲಿ ಶ್ನಮ್ ವಿಕರಣ ಬರುತ್ತದೆ. ಅನುದಾತ್ತೇತ್ವಾದರೂ ಅದರಿಂದಲೇ ಪರಸ್ಮೈಪದಪ್ರತ್ಯಯವೂ ಬರುತ್ತದೆ. ಹಾಗಾದರೂ ರಮ್ಯತಿ ಎಂದು ರೂಪವಾಗಬೇಕಾಗುತ್ತದೆ. ಆಗ

ಧಾತುವಿನ ಅಂತ್ಯಕ್ಕೆ ಬಂದಿರುವ ವಿಕಾರವು ಅಂದರೆ ಮಕಾರಕ್ಕೆ ಣಕಾರಾದೇಶವೂ ಭಾಂದಸವೆಂದು ಹೇಳಬೇಕು. ಇದಕ್ಕೆ ಅನುಶಾಸನವ ಅಪೇಕ್ಷೆ ಇಲ್ಲ. ಅಥವಾ ರಣ ಶಬ್ದೇ ಧಾತು. ಇದ್ದೂ ಭ್ವಾದಿಯಾಯುವರಿಂದ ಶಪ್ ಪ್ರಾಪ್ತವಾದರೆ ಹಿಂದಿನಂತೆ ವ್ಯತ್ಯಯದಿಂದ ಶ್ನುಸ್ ವಿಕರಣವನ್ನು ಹೇಳಬೇಕು ಇಲ್ಲಿ ಭಾಂದಸವಿಕಾರವನ್ನು ಕಲ್ಪನೆಮಾಡಿರುವುದರಿಂದ ಲಾಘವವಿದೆ. ಪ್ರಥನುಪುರುಷೈಕವಚನದಲ್ಲಿ ರಣ್ಯತಿ ಎಂದು ರೂಪಸಿದ್ಧವಾಗುತ್ತದೆ. **ತಿಜ್ಜಾತಿಜಃ** ಎಂಬುದರಿಂದ ಅಭಿಪಿತ್ರೇಷು ಎಂಬ ಅತಿಜಗನ ಪರನಲ್ಲಿರುವುದರಿಂದ ಸರ್ವಾನುದಾತ್ತವಾಗುತ್ತದೆ. ॥ ೬ ॥

ಎಂಭತ್ತನಾಲ್ಕನೆಯ ಸೂಕ್ತವು

ಅಸಾವೀತಿ ವಿಂಶತ್ಯೃಚಸ್ಯೇಕಾದಶಂ ಸೂಕ್ತಂ । ಅತ್ರಾನುಕ್ರಮ್ಯತೇ । ಅಸಾವಿ ವಿಂಶತಿಃ **ಪವಮಾನಸ್ಯಾಭಿ ಪಿತ್ರ್ಯಹಪಾಂಕ್ತಗಾಯತ್ರ್ಯೃಷ್ಣುಭಾಸ್ತ್ರಿಚಾಃ ಪ್ರಗಾಥ** ಇತಿ । ಆದಿತಃ **ಪಡನುಷ್ಟುಭಃ ಸಪ್ತಮ್ಯಾದ್ಯಾಸ್ತಿಸ್ರ ಉಷ್ಣಿಹಃ** । **ದಶಮ್ಯಾದ್ಯಾಸ್ತಿಸ್ರಃ ಪಂಕ್ತ್ಯಃ** । **ತ್ರಯೋದಶ್ಯಾದ್ಯಾಸ್ತಿಸ್ರೋ ಗಾಯತ್ರ್ಯಃ** । **ಷೋಡಶಾದ್ಯಾಸ್ತಿಸ್ರಸ್ತ್ರಿಷ್ಟುಭಃ** । **ಏಕೋನವಿಂಶೀ ಬೃಹತೀ ವಿಂಶೀ ಸತೋಬೃಹತೀ** । **ಅನುವರ್ಶನಾದ್ಗೋತಮ ಋಷಿಃ** । **ಅನಾದೇಶಪರಿಭಾಷಯೇಂದ್ರೋ ದೇವತಾ** ॥ **ಸೂಕ್ತವಿನಿಯೋಗೋ ಲಿಂಗಾದವಗಂತವ್ಯಃ** ॥ **ಅವಿಹೃತಷೋಡಶಿಶಸ್ತ್ರ ಆದ್ಯೌ ತೃಚೌ ಸ್ತೋತ್ರಿಯಾನುರೂಪೌ** । **ಸೂತ್ರಿತಂ ಚ** । **ಅಥ ಷೋಡಶ್ಯಸಾವಿ ಸೋಮ ಇಂದ್ರ ತ ಇತಿ ಸ್ತೋತ್ರಿಯಾನುರೂಪೌ** । **ಆ ೬-೨** । **ಇತಿ** ॥ **ಅಭಿಪ್ಲವಿಕೇಷೂಕ್ಥ್ಯೇಷು ತೃತೀಯಸವನೇ೨ಚ್ಛಾವಾಕಸ್ಯೇಮಾನೇವ ತೃಚೌ ನೈಕಲ್ಪಿಕೌ ಸ್ತೋತ್ರಿಯಾನುರೂಪೌ** । **ಏಷ್ಯೂ ಷ್ವಿತಿ ಖಂಡೇ ಸೂತ್ರಿತಂ** । **ಅಸಾವಿ ಸೋಮ ಇಂದ್ರ ತ ಇಮಮಿಂದ್ರ ಸುತಂ ಪಿಬ** । **ಆ. ೭-೮** । **ಇತಿ** ॥

ಅನುಪಾನವು— **ಅಸಾವಿ ಸೋಮ** ಎಂಬ ಸೂಕ್ತವು ಹದಿಮೂರನೆಯ ಅನುವಾಕದಲ್ಲಿ ಹತ್ತೊಂಬತ್ತನೆಯ ಸೂಕ್ತವು. ಇದರಲ್ಲಿ ಇಪ್ಪತ್ತು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ— **ಅಸಾವಿ ವಿಂಶತಿಃ ಪವಮಾನಸ್ಯಾಭಿ ಪಿತ್ರ್ಯಹಪಾಜ್ಯುಗಾಯತ್ರ್ಯೃಷ್ಣುಭಾಸ್ತ್ರಿಚಾಃ ಪ್ರಗಾಥಃ** ಎಂದಿರುವುದು ಎಂದರೆ ಈ ಸೂಕ್ತದ ಮೊದಲಿನ ಆರು ಋಕ್ಕುಗಳು ಅನುಷ್ಟುಪ್ಛಂದಸ್ಸಿನವು, ಏಳರಿಂದ ಮೂರು ಋಕ್ಕುಗಳು ಉಷ್ಣಿಕ್ಛಂದಸ್ಸಿನವು; ಹತ್ತರಿಂದ ಮೂರು ಋಕ್ಕುಗಳು ಪಂಕ್ತಿಛಂದಸ್ಸಿನವು, ಹದಿಮೂರರಿಂದ ಮೂರು ಋಕ್ಕುಗಳು ಗಾಯತ್ರೀಛಂದಸ್ಸಿನವು, ಹದಿನಾರರಿಂದ ಮೂರು ಋಕ್ಕುಗಳು ತ್ರಿಷ್ಟುಪ್ಛಂದಸ್ಸಿನವು, ಹತ್ತೊಂಭತ್ತನೆಯ ಋಕ್ಕು ಬೃಹತೀಛಂದಸ್ಸವು; ಇಪ್ಪತ್ತನೆಯ ಋಕ್ಕು ಸತೋಬೃಹತೀಛಂದಸ್ಸವು. ಈ ಸೂಕ್ತಕ್ಕೆ ಗೋತಮನು ಋಷಿಯು. ಇಂದ್ರನು

ದೇವತೆಯು. ಸೂಕ್ತವಿನಿಯೋಗವು ಅರ್ಥಾನುಸಾರವಾಗಿರುವುದು. ಅವಿಹೃತಷೋಡಶಸ್ತ್ರಮಂತ್ರಪಠನದಲ್ಲಿ ಮೊದಲಿನ ಆರು ಋಕ್ಕುಗಳು (ಎರಡು ತೃಚಗಳು) ಸ್ತೋತ್ರಿಯಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತ ಸೂತ್ರದಲ್ಲಿ **ಅಥ ಷೋಡಶ್ಯಸಾವಿ ಸೋಮ ಇಂದ್ರ ತ ಇತಿ ಸ್ತೋತ್ರಿಯಾನುರೂಪೌ** ಎಂಬ ಸೂತ್ರದಿಂದ ವಿವೃತವಾಗಿರುವುದು. ಮತ್ತೂ ಅಭಿಪ್ಲವಹಡಹಯಾಗದಲ್ಲಿಯೂ ತೃತೀಯಸವನಕರ್ಮದಲ್ಲಿ ಅಚ್ಛಾವಾಕನೆಂಬ ಋತ್ವಿಜನು ಉಕ್ಥಶಸ್ತ್ರಮಂತ್ರಪರನದಲ್ಲಿ **ಈ** ಎರಡು ತೃಚಗಳನ್ನು ಎಂದರೆ ಮೊದಲಿನ ಆರು ಋಕ್ಕುಗಳನ್ನು ವಿಕಲ್ಪವಾಗಿ ಸ್ತೋತ್ರಿಯಮಂತ್ರವನ್ನಾಗಿ ಪಠಿಸಬಹುದೆಂದು ಆಶ್ವಲಾಯನಶ್ರೌತಸೂತ್ರದ **ವಿಹ್ಯೂಷು** ಎಂಬ ಖಂಡದಲ್ಲಿ **ಅಸಾವಿ ಸೋಮ ಇಂದ್ರ ತ ಇಮಮಿಂದ್ರ ಸುತಂ ಪಿಬ** ಎಂಬ ಸೂತ್ರವು ನಿರ್ದೇಶಿಸುವುದು.

॥ ಓಂ ॥

ಸೂಕ್ತ—೪೪

॥ ಮಂಡಲ—೧ ॥ ಅನುವಾಕ—೧೩ ॥ ಸೂಕ್ತ—೪೪ ॥

॥ ಅಷ್ಟಕ—೧ ॥ ಅಧ್ಯಾಯ—೬ ॥ ವರ್ಗ— ೫, ೬, ೭ ೮.॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ— ೮ ॥

॥ ಋಷಿಃ—ಗೋತಮೋ ರಾಹೂಗಣಃ ।

॥ ದೇವತಾ—ಇಂದ್ರಃ ।

॥ ಛಂದಃ—೧–೬ ಆಸುಷ್ಟುಪ್ । ೭–೮ ಔಷ್ಣಿಹ್ । ೧೦ ೧೩. ಪಂಕ್ತಿಃ । ೧೪–೧೫. ಗಾಯತ್ರೀ । ೧೬–೧೮. ತ್ರಿಷ್ಟುಪ್ । ೧೯. ಬೃಹತೀ । ೨೦. ಸತೋಬೃಹತೀ ॥

॥ ಸಂಹಿತಾಪಾಠಃ ॥

ಅಸಾವಿ ಸೋಮ ಇಂದ್ರ ತೇ ಶವಿಷ್ಠ ಧೃಷ್ಣವಾ ಗಹಿ ।
ಆ ತ್ವಾ ಪೃಣಕ್ತ್ವಿಂದ್ರಿಯಂ ರಜಃ ಸೂರ್ಯೋ ನ ರಶ್ಮಿಭಿಃ ॥೧॥

ಪದಪಾಠಃ

ಅಸಾವಿ । ಸೋಮಃ । ಇಂದ್ರ । ತೇ । ಶವಿಷ್ಠ । ಧೃಷ್ಣೋ ಇತಿ । ಆ । ಗಹಿ ।
ಆ । ತ್ವಾ । ಪೃಣಕ್ತು । ಇಂದ್ರಿಯಂ । ರಜಃ । ಸೂರ್ಯಃ । ನ । ರಶ್ಮಿಭಿಃ ॥೧॥

ಸಾಯಣಭಾಷ್ಯಂ

ಹೇ ಇಂದ್ರ ತೇ ತ್ವದರ್ಥಂ ಸೋಮ ಅಸಾವಿ । ಅಭಿಷುತೋಽಭೂತ್ । ಹೇ ಶವಿಷ್ಠಾತಿಶಯೇನ ಬಲವನ್ ಅತ ಏವ ಧೃಷ್ಣೋ ಶತ್ರೂಣಾಂ ಧರ್ಷಯಿತರಿಂದ್ರ ಆ ಗಹಿ । ದೇವಯಜನದೇಶಮಾಗಚ್ಛ । ಆಗತಂ ತ್ವಾಮಿಂದ್ರಿಯಂ ಸೋಮಪಾನೇನೋತ್ಪನ್ನಂ ಪ್ರಭೂತಂ ಸಾಮರ್ಥ್ಯಮಾ ಪೃಣಕ್ತು ಆಪೂರಯತು । ರಜೋಽಂತರಿಕ್ಷಂ ರಶ್ಮಿಭಿಃ ಕಿರಣೈಃ ಸೂರ್ಯೋ ನ । ಯಥಾ ಸೂರ್ಯಃ ಪೂರಯತಿ ತದ್ವತ್ ॥ ಶವಿಷ್ಠ । ಶವಸ್ಶಬ್ದಾದಿಷ್ಠನಿ ವಿನ್ಮತೋರ್ಲುಕ್ । ಟೇರಿತಿ ಟಿಲೋಪಃ । ಸಾದಾದಿತ್ವಾನ್ನಿಘಾತಾಭಾವಃ । ಗಹಿ । ಗಮೇರ್ಲೋಟಿ ಬಹುಲಂ ಛಂದಸೀತಿ ಶಪೋ ಲುಕ್ । ಅನುದಾತ್ತೋಪದೇಶೇತ್ಯಾದಿನಾನುನಾಸಿಕ-ಲೋಪಃ । ತಸ್ಯಾಸಿದ್ಧವದತ್ರಾ ಭಾದಿತ್ಯಸಿದ್ಧವತ್ತ್ವಾದ್ಧೇರ್ಲುಗಭಾವಃ ॥ ೧ ॥

। ಪ್ರತಿಪದಾರ್ಥ ।

ಇಂದ್ರ— ಎಲೈ ಇಂದ್ರನೇ, । ತೇ—ನಿನಗಾಗಿ । **ಸೋಮಃ**— ಸೋಮರಸವು । **ಅಸಾವಿ**— ಹಿಂಡಲ್ಪಟ್ಟಿದೆ । **ಶವಿಷ್ಠ**— ಅತ್ಯಂತಬಲಶಾಲಿಯೂ । **ಧೃಷ್ಣೋ** – (ಆದ್ದರಿಂದಲೇ) ಶತ್ರುವನ್ನು ಮರ್ದನ ಮಾಡುವವನೂ ಆದ ಇಂದ್ರನೇ, । **ಆಗಹಿ**— (ದೇವಯಜ್ಞಪ್ರದೇಶಕ್ಕೆ) ದಯಮಾಡು । (ನಿನ್ನನ್ನು) **ಇಂದ್ರಿಯಂ**—(ಸೋಮರಸಪಾನದಿಂದ ಲಭಿಸಿದ) ಪ್ರಭೂತವಾದ ಬಲವು । **ರಜಃ**—ಅಂತರಿಕ್ಷವನ್ನು । **ರಶ್ಮಿಭಿಃ**–ಕಿರಣಗಳ ಮೂಲಕ । **ಸೂರ್ಯೋ ನ**—ಸೂರ್ಯನು ತುಂಬುವಂತೆ । **ಆ ಪೃಣಕ್ತು**—ಸಂಪೂರ್ಣವಾಗಿ ತುಂಬಿಕೊಳ್ಳಲಿ. ।

ಭಾವಾರ್ಥ

ಎಲೈ ಇಂದ್ರನೇ, ನಿನಗಾಗಿ ಸೋಮರಸವು ಹಿಂಡಿ ಸಿದ್ಧವಾಗಿದೆ. ಅತ್ಯಂತಬಲಶಾಲಿಯೂ, ಆದ್ದರಿಂದಲೇ ಶತ್ರುದಮನವನ್ನು ಮಾಡುವವನೂ ಆದ ಇಂದ್ರನೇ, ನೀನು ದೇವಯಜ್ಞಪ್ರದೇಶಕ್ಕೆ ದಯಮಾಡು. ಸೂರ್ಯನು ತನ್ನ ಕಿರಣಗಳ ಮೂಲಕ ಅಂತರಿಕ್ಷವನ್ನು ತುಂಬುವಂತೆ, ಸೋಮರಸಪಾನದಿಂದ ಲಭಿಸಿದ ಪ್ರಬಲವಾದ ಶಕ್ತಿಯು ನಿನ್ನ ದೇಹವನ್ನೆಲ್ಲಾ ತುಂಬಿಕೊಳ್ಳಲಿ.

English Translation

O Indra, the Soma has been expressed for you, mightiest and brave Indra, come (to our sacrifice), may strength inspired by Soma libations, fill you as the Sun fills the firmament with his rays.

ವಿಶೇಷವಿಷಯಗಳು

ಶವಿಷ್ಠ—ಶವಃ ಎಂದರೆ ಬಲವು (ನಿ. ೩-೯) ಶವಿಷ್ಠ ಎಂದರೆ ಅತಿಶಯವಾಗಿ, ಬಹು ಹೆಚ್ಚಾಗಿ ಬಲವುಳ್ಳ

ಧೃಷ್ಣೋ-ಶತ್ರೂಣಾಂ ಧರ್ಷಯಿತಃ । ಶತ್ರುಗಳ ಗರ್ವವನ್ನು ಅಡಗಿಸುವವನು, ಪರಾಕ್ರಮಶಾಲಿಯು

ಇಂದ್ರಿಯಂ— ವೀರ್ಯ, ಬಲ.

ರಜಃ— ಈ ಶಬ್ದಕ್ಕೆ (ರಜಸೀ) ದ್ಯಾವಾಪೃಥಿವಿಗಳೆಂಬ ಅರ್ಥವಾಗಿರುವುದರಿಂದ (ನಿ ೩--೨೨) ಭೂಮ್ಯಂತರಿಕ್ಷಗಳನ್ನು ಸೂರ್ಯನ ಕಿರಣಗಳು ವ್ಯಾಪಿಸುವಂತೆ ಎಂಬರ್ಥವನ್ನು ಬೇಕಾದರೂ ಹೇಳಬಹುದು


ನೆ—ನ ಎಂಬ ಶಬ್ದವು ಇಲ್ಲಿ ಇವ ಎಂಬ ಉಪಮಾರ್ಥವನ್ನು ಸೂಚಿಸುವುದು.

ವ್ಯಾಕರಣಪ್ರಕ್ರಿಯಾ

ಶವಿಷ್ಠ- ಶವಸ್ವಿನ್ ಶಬ್ದವನ್ನೇಲೆ ಅತಿಶಯಾರ್ಥದಲ್ಲಿ **ಅತಿಶಾಯನೇತಮಬಿಷ್ಠನೌ** (ಪಾ. ಸೂ. ೫-೩-೫೫) ಎಂಬ ಸೂತ್ರದಿಂದ ಇಷ್ಠನ್ ಪ್ರತ್ಯಯ ಬರುತ್ತದೆ. ರನಃ ಅಂದರೆ ಬಲ. **ಅಸ್ಮಾಯಾಮೇಧಾ**- ಎಂಬುದರಿಂದ ವಿನಿಪ್ರತ್ಯಯ ಬಂದಾಗ ಶವಸ್ವಿನ್ ಎಂಬ ಶಬ್ದವಾಗಿದೆ. ಶವಸ್ವಿನ್+ಇಷ್ಠ ಎಂದಿರುವಾಗ **ವಿನ್ಮತೋರ್ಲುಕ್** (ಪಾ ಸೂ. ೫-೩-೬೫) ವಿನ್‌ಮತುಪ್ ಪ್ರತ್ಯಯಗಳಿಗೆ ಇಷ್ಠನ್ ಈಯಸುನ್ ಪ್ರತ್ಯಯಗಳು ಪರವಲ್ಲಿರುವಾಗ ಲುಕ್ ಬರುತ್ತದೆ ಎಂಬುದರಿಂದ ಶವಸ್ವಿನ್ ಎಂಬಲ್ಲಿರುವ ವಿನ್ನಿಗೆ ಲುಕ್ ಬಂದಾಗ ಶವಸ್+ಇಷ್ಠ ಎಂದಿರುತ್ತದೆ. **ಟೇಃ** (ಪಾ. ಸೂ. ೬-೪-೧೫೫) ಭಸಂಜ್ಞೆಯುಳ್ಳ ತಂಗನ, ಟಿಗೆ ಇಷ್ಠನ್, ಇಯಸುಚ್, ಈಯಸುನ್ ಪರವಲ್ಲಿರುವಾಗ ಲೋಪ ಬರುತ್ತದೆ ಎಂಬುದರಿಂದ ಇಲ್ಲಿ ಇಷ್ಠನ್ ಪರವಲ್ಲಿರುವಾಗ ಶವಸ್ ಎಂಬಲ್ಲಿರುವ ಅಸ್ ಎಂಬ ಟಿಗೆ ಲೋಪ ಬರುತ್ತದೆ. ಶವಿಷ್ಠ ಎಂಬುದು ಪಾದನ ಆದಿಯಲ್ಲಿರುವುದರಿಂದ ಆಸಾದಾದೌ ಎಂದು ನಿಷೇಧಿಸಿದ್ದರಿಂದ ಸಿಷ್ಠಾತಸ್ಪರವು ಬರುವುದಿಲ್ಲ

ಗಹಿಂ—ಗಮ್ಲೃ ಗತೌ ಧಾತು, ಭ್ವಾದಿ. ಲೋಟ್ ಪ್ರಥಮಪುರುಷೈಕವಚನದ ಸಿಪ್ಪಿಗೆ ಹಿ ಆದೇಶ ಬಂದಾಗ ಗಮ್+ಹಿ ಎಂದಿರುತ್ತದೆ ಭ್ವಾದಿಯಾದುದರಿಂದ ಶಪ್‌ವಿಕರಣವು ಪ್ರಾಪ್ತವಾದರ **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್ ಬರುತ್ತದೆ. ಲುಕ್ಕಾದುದರಿಂದ ಸ್ವಾಸಿನದ್ಧಾವ ಬರುವುದಿಲ್ಲ. ಆದುದರಿಂದ ಶವ ನಿಮಿತ್ತಕವಾಗಿ ಗಮ್ ಧಾತುವಿಗೆ **ಇಷುಗಮಿಯಮಾಂ ಛಃ** (ಪಾ. ಸೂ. ೭-೩-೭೭) ಎಂಬುದರಿಂದ ಛಾದೇಶವೂ ಬರುವುದಿಲ್ಲ. **ಅನುದಾತ್ತೋಪದೇಶವನತಿತ-** (ಪಾ ಸೂ. ೬-೪-೩೭) ಎಂಬುದರಿಂದ ಹಿ ಆದೇಶಕ್ಕೆ ಅಪಿತ್ತ್ವ ಹೇಳಿದುದರಿಂದ ಜುತ್ತ್ವದುದರಿಂದ ಉಪ ಪರವಲ್ಲಿರುವಾಗ ಗಮಿನ ಉಪಧಾಸಿಕವಾಗ ಮುಕಾದಕ್ಕೆ ಲೋಪ ಬರುತ್ತದೆ. ಗ+ಹಿ ಎಂದಿರುವಾಗ **ಅತೋಹೇಃ** (ಪಾ ಸೂ ೬-೪-೧೦೫) ವ್ಯಾಸ್ತಾಕಾರದ ಪರವಲ್ಲಿರುವಾಗ ಹಿಗೆ ಲುಕ್ ಪ್ರಾಪ್ತವಾಗುತ್ತದೆ. **ಅಸಿದ್ಧವದತ್ರಾಭಾತ್** (ಪಾ. ಸೂ. ೬-೪-೨೨) ಸವರ್ಣಾಶ್ರಯತವಾದ ಭಸಂಜ್ಞಾಧಿಕಾರದಲ್ಲಿ ಒಳಪಟ್ಟ ಕಾರ್ಯವನ್ನು ಮಾಡುವಾಗ ಹಿಂದೆಸೂಡಿದ ಭಸಂಜ್ಞಾಧಿಕಾರದಲ್ಲಿರುವ ಸೂತ್ರದ ಕಾರ್ಯವು ಅಸಿದ್ಧವಾಗುತ್ತದೆ. ಪಾಣಿನಿಗಳ ೬ ನೇ ಅಧ್ಯಾಯದ ನಾಲ್ಕನೇ ಪಾದದಲ್ಲಿ ಭಸಂಜ್ಞೆಯ ಕಾರ್ಯಗಳು ವಿಹಿತವಾಗುತ್ತವೆ. ಇಲ್ಲಿ ಉಪಧಾಸಿಕ ಲೋಪವು ಭಾಧಿಕಾರದಲ್ಲಿ ವಿಹಿತವಾಗಿರುವುದು. ಹಿಲೋಪವೂ ಭಾಧಿಕಾರದಲ್ಲಿ

ವಿಹಿತವಾಗಿರುವುದರಿಂದ ಹಿಲೋಪಮಾಡುವಾಗ ಅನುನಾಸಿಕಲೋಪವು ಅಸಿದ್ಧವಾಗುತ್ತದೆ. ಆದುದರಿಂದ ಮಕಾರ ವಿದ್ದಂತೆಯಾಗುವುದರಿಂದ ಅಕಾರದ ಪರದಲ್ಲಿ ಬಾರದಿದ್ದುರಿಂದ ಹಿ ಎಂಬುದಕ್ಕೆ ಲೋಪ ಬರುವುದಿಲ್ಲ. ॥ ೧ ॥



ಸಂಹಿತಾಪಾಠಃ

ಇಂದ್ರಮಿದ್ಧರೀ ವಹತೋಽಪ್ರತಿಧೃಷ್ಟಶವಸಂ ।
ಋಷೀಣಾಂ ಚ ಸ್ತುತೀರುಪ ಯಜ್ಞಂ ಚ ಮಾನುಷಾಣಾಂ ॥ ೨ ॥

ಪದಪಾಠಃ

ಇಂದ್ರಂ । ಇತ್ । ಹರೀ ಇತಿ । ವಹತಃ । ಅಪ್ರತಿಧೃಷ್ಟಶವಸಂ ।
ಋಷೀಣಾಂ । ಚ । ಸ್ತುತೀಃ । ಉಪ । ಯಜ್ಞಂ । ಚ । ಮಾನುಷಾಣಾಂ ॥೨॥

ಸಾಯಣಭಾಷ್ಯಂ

ಅಪ್ರತಿಧೃಷ್ಟಶವಸಂ ಕೇನಾಪ್ಯಪ್ರತಿಧರ್ಷಿತಬಲಂ । ಅಹಿಂಸಿತಬಲಮಿತ್ಯರ್ಥಃ । ಇಂದ್ರಮಿದಿಂದ್ರಮೇವ ಋಷೀಣಾಂ ವಸಿಷ್ಠಾದೀನಾಂ ಮಾನುಷಾಣಾಮನ್ಯೇಷಾಂ ಮನುಷ್ಯಾಣಾಂ ಚ ಸ್ತುತೀರ್ಯಜ್ಞಂ ಚ ಹರೀ ಅಶ್ವಾವುಪ ವಹತಃ । ಸಮೀಪಂ ಪ್ರಾಪಯತಃ । ಯತ್ರ ಯತ್ರ ಸ್ತುವಂತಿ ಯತ್ರ ಯತ್ರ ಯಜಂತೇ ತತ್ರ ಸರ್ವತ್ರೇಂದ್ರಮಶ್ವೌ ಪ್ರಾಪಯತ ಇತ್ಯರ್ಥಃ ॥ ಮಾನುಷಾಣಾಂ । ಮನೋರ್ಜಾತಾವಿತಿ ಮನುಶಬ್ದಾದಞ್ ಪ್ರತ್ಯಯಮಶ್ಚ ॥ ೨ ॥

ಪ್ರತಿಪದಾರ್ಥಃ

ಅಪ್ರತಿಧೃಷ್ಟಶವಸಂ— (ಯಾರಿಂದಲೂ) ತಡೆಯಲು ಸಾಧ್ಯವಿಲ್ಲದೇ ಇರುವ ಪರಾಕ್ರಮವುಳ್ಳ । **ಇಂದ್ರಮಿತ್**—ಇಂದ್ರನನ್ನೇ । **ಋಷೀಣಾಂ**— (ವಸಿಷ್ಠಾದಿ) ಋಷಿಗಳ । **ಚ**—ಮತ್ತು । **ಮಾನುಷಾಣಾಂ**— (ಇತರ) ಮಾನವರ । **ಸ್ತುತೀಃ**— ಸ್ತೋತ್ರಗಳಿಗೂ । **ಯಜ್ಞಂ ಚ**— ಯಜ್ಞಕ್ಕೂ ಕೂಡ । **ಹರೀ**—(ಅವನ) ಕುಮುರೆಗಳು । **ಉಪ ವಹತಃ**—(ಅವನನ್ನು) ಹೊತ್ತುಕೊಂಡು ಬರುತ್ತವೆ.

ಭಾವಾರ್ಥ

ಎಲ್ಲಿಲ್ಲಿ ವಸಿಷ್ಠಾದಿ ಋಷಿಗಳೂ ಮತ್ತು ಇತರೆ ಮಾನವರೂ ಸ್ತೋತ್ರಮಾಡುತ್ತಾರೋ ಮತ್ತು ಎಲ್ಲೆಲ್ಲಿ ಯಜ್ಞಮಾಡುತ್ತಾರೋ ಅಲ್ಲಿಗೆಲ್ಲಾ ಇಂದ್ರನ ಕುದುರೆಗಳು ಅಪ್ರತಿಹತವಾದ ಪರಾಕ್ರಮವುಳ್ಳ ಇಂದ್ರನನ್ನು ಹೊತ್ತು ಕೊಂಡು ಬರುತ್ತವೆ

English Translation

May his horses bear Indra of unresistable prowess to the praises and sacrifices of Rishis and men

॥ ವಿಶೇಷವಿಷಯಗಳು ॥

ಅಪ್ರತಿಧೃಷ್ಟಶವಸಂ — ಅಪ್ರತಿಹತಸಾಮರ್ಥ್ಯೋಪೇತಂ । ಕೇನಾಪ್ಯಹಿಂಸಿತಬಲಂ । ಯಾರಿಂದಲೂ ಸಹಿಸಲಸಾಧ್ಯವಾದ ಸಾಮರ್ಥ್ಯವುಳ್ಳ, ಅಪ್ರತಿಹತವಾದ ಶಕ್ತಿಯುಳ್ಳ ಇಂದ್ರನನ್ನು

ವ್ಯಾಕರಣಸ್ಯ ಕ್ರಿಯಾ

ನೂನುಷಾಣಾಮ್ — ಮನೋರ್ಜಾತಾವಞ್ಯತೌ ಷುಕ್ ಚ (ಪಾ ಸೂ ೪-೧-೧೬) ಮನು ಶಬ್ದದ ಮೇಲೆ ಅಞ್, ಯತ್, ಎಂಬ ಎರಡು ಪ್ರತ್ಯಯಗಳು ಬರುತ್ತವೆ ಅವುಗಳು ಪರದಲ್ಲಿರುವಾಗ ಪ್ರಕೃತಿಗೆ ಷುಕಾಗಮವೂ ಬರುತ್ತವೆ. ಪ್ರಕೃತಿಪ್ರತ್ಯಯ ಸಮುದಾಯದಿಂದ ಜಾತಿರೂಪಾರ್ಥವು ತೋರುತ್ತಿರಬೇಕು. ಆ ಮೇಲಿನ ಕಾರ್ಯಗಳು ಬರುತ್ತವೆ. ಇಲ್ಲಿ ಅಞ್‌ಪ್ರತ್ಯಯ ಬಂದಿದೆ. ಮನು+ಅ ಎಂದಿರುವಾಗ ಷುಕ್ ಕಿತ್ತಾದುದರಿಂದ ಮನು ಎಂಬುದಕ್ಕೆ ಆಂತಾದೇಶವಾಗಿ ಬರುತ್ತದೆ. ಅಞಾನಲ್ಲಿ ಞಕಾರ ಇತ್ತಾಗುವದರಿಂದ **ತದ್ಧಿತೇಷ್ವಚಾಮಾದೇಃ** (ಪಾ. ಸೂ. ೭-೨-೧೧೭) ಎಂಬುದರಿಂದ ಪ್ರಕೃತಿಯ ಆದಿಗೆ ವೃದ್ಧಿ ಬರುತ್ತದೆ. ನೂನುಷನೆಂದಾದ ಮೇಲೆ ಷಷ್ಠೀಬಹುವಚನ ಆಮ್ ಪರದಲ್ಲಿರುವಾಗ **ಹ್ರುಸ್ನದ್ಯಾಪೋನುಟ್** ಎಂಬುದರಿಂದ ಆಮಿಗೆ ನುಡಾಗಮ ಬರುತ್ತದೆ. **ನಾಮಿ** (ಪಾ. ಸೂ ೬-೪-೩) ನಾಮ್ ಪರದಲ್ಲಿರುವಾಗ ಅಜಂತಾಂಗಕ್ಕೆ ದೀರ್ಘ ಬರುವುದು ಎಂಬುದರಿಂದ ದೀರ್ಘ ಬರುತ್ತದೆ. **ರಷಾಭ್ಯಾಂ** (ಪಾ. ಸೂ. ೮-೪-೧) ರೇಫಷಕಾರಗಳ ಪರದಲ್ಲಿರುವ ನಕಾರಕ್ಕೆ ಣತ್ವವು ಬರುತ್ತದೆ ಎಂಬುದರಿಂದ ಇಲ್ಲಿ ಷಕಾರದ ಪರದಲ್ಲಿ ಬಂದುದರಿಂದ ಣತ್ವಬಂದಿದೆ. ॥೨॥

॥ ಸಂಹಿತಾಪಾಠಃ ॥

ಆ ತಿಷ್ಠ ವೃತ್ರಹನ್ರ್ಥಂ ಯುಕ್ತಾ ತೇ ಬ್ರಹ್ಮಣಾ ಹರೀ।
ಅರ್ವಾಚೀನಂ ಸು ತೇ ಮನೋ ಗ್ರಾವಾ ಕೃಣೋತು ವಗ್ನುನಾ॥

॥ ಪದಪಾಠಃ ॥

ಆ । ತಿಷ್ಠ । ವೃತ್ರಹನ್ । ರಥಂ । ಯುಕ್ತಾ । ತೇ । ಬ್ರಹ್ಮಣಾ । ಹರೀ ಇತಿ । ಅರ್ವಾಚೀನಂ । ಸು । ತೇ । ಮನಃ । ಗ್ರಾವಾ । ಕೃಣೋತು । ವಗ್ನುನಾ॥ ೩ ॥

ಸಾಯಣಭಾಷ್ಯಂ

ಹೇ ವೃತ್ರಹನ್ ಶತ್ರೂಣಾಂ ಹಂತರಿಂದ್ರ ರಥಮಾ ತಿಷ್ಠ । ಆರೋಹ । ಯುಸ್ಮಾತ್ತೇ ಹರೀ ತ್ವದೀಯಾವಶ್ವೌ ಬ್ರಹ್ಮಣಾ ಸ್ತೋತ್ರಲಕ್ಷಣೇನ ಮಂತ್ರೇಣ ಯುಕ್ತಾ ರಥೇಽಸ್ಮಾಭಿರ್ಯೋಜಿತೌ ತಸ್ಮಾತ್ತ್ವಂ ರಥಮಾತಿಷ್ಠ । ತೇ ಮನಸ್ತ್ವದೀಯಂ ಮನಶ್ಚ ಗ್ರಾವಾಭಿಷವಾರ್ಥಂ ಪ್ರವೃತ್ತಃ ಸೋಮಾನೋ ವಗ್ನುನಾ ವಚನೀಯೇನಾಭಿಷವಶಬ್ದೇನಾರ್ವಾಚೀನಮಸ್ಮದಭಿಮುಖಂ ಸು ಕೃಣೋತು । ಸುಷ್ಠು ಕರೋತು ॥ ಯುಕ್ತಾ । ಸುಪಾಂ ಸುಲುಗಿತ್ಯಾಕಾರಃ । ವಗ್ನುನಾ । ವಚೇರ್ಗಶ್ಚ । ಉ. ೩-೩೩ । ಇತಿ ನುಪ್ರತ್ಯಯೋ ಗಕಾರಶ್ಚಾಂತಾದೇಶಃ ॥ ೩ ॥

ಪದವಾಕ್ಯಾರ್ಥ

ವೃತ್ರಹನ್—ವೃತ್ರನಾಶಕನಾದ ಇಂದ್ರನೇ, । **ರಥಂ**—(ನಿನ್ನ) ರಥವನ್ನು । **ಆ ತಿಷ್ಠ**—ಹತ್ತಿಕೊ । **ತೇ**— ನಿನ್ನ । **ಹರೀ**— ಕುದುರೆಗಳು । **ಬ್ರಹ್ಮಣಾ**— ಸ್ತೋತ್ರರೂಪವಾದ ಮಂತ್ರದೊಡನೆ । **ಯುಕ್ತಾ**—(ರಥದಲ್ಲಿ ನಮ್ಮಿಂದ) ಕಟ್ಟಲ್ಪಟ್ಟಿವೆ । **ತೇ**- ನಿನ್ನ । **ಮನಃ**—ಮನಸ್ಸನ್ನು । **ಗ್ರಾವಾ**—(ಸೋಮರಸವನ್ನು ಹಿಂಡತಕ್ಕ) ಕಲ್ಲು । **ವಗ್ನುನಾ**— ಇಂಪಾದ ಹಿಂಡುವ ಶಬ್ದದಿಂದ । **ಅರ್ವಾಚೀನಂ**— (ನಮ್ಮ)ಅಭಿಮುಖವಾಗಿ । **ಸುಕೃಣೋತು**—ಚೆನ್ನಾಗಿ (ತಿರುಗುವಂತೆ) ಮಾಡಲಿ ।

॥ ಭಾವಾರ್ಥ ॥

ವೃತ್ರಹಂತಕನಾದ ಇಂದ್ರನೇ, ನಿನ್ನ ಕುದುರೆಗಳನ್ನು ನಿನ್ನ ರಥಕ್ಕೆ ಮಂತ್ರಸ್ತೋರ್ನಕವಾಗಿ ಕಟ್ಟಿವೆ. ಆ ರಥವನ್ನು ಹತ್ತಿಕೊ. ಸೋಮರಸವನ್ನು ಹಿಂಡುವ ಕಲ್ಲು ತಿವರ ರಸವನ್ನು ಹಿಂಡುವ ಇಂಪಾದ ಶಬ್ದದಿಂದ ನಿನ್ನ ಮನಸ್ಸು ನಮ್ಮ ಕಡೆ ಸಂಪೂರ್ಣವಾಗಿ ತಿರುಗುವಂತೆ ಮಾಡಲಿ.

English Translation

O Slayer of Vritra, ascend your chariot, for your horses have been harnessed by our prayer. May the Soma-pressing stone by its sound attract your mind towards us.

॥ ವಿಶೇಷವಿಷಯಗಳು

ಯುಕ್ತಾ ತೇ ಬ್ರಹ್ಮಣಾ ಹರೀ— ನಾವು ಮಾಡುವ ಸ್ತೋತ್ರಗಳಿಂದ ನಿನ್ನ ಕುದುರೆಗಳು ರಥಕ್ಕೆ ಹೂಡಲ್ಪಟ್ಟಿರುವವು, ಎಂದರೆ ಆ ನೆಯ ಸೂಕ್ತದಲ್ಲಿ ೧, ೨, ೩, ೪ ನೇ ಋಕ್ಕುಗಳಲ್ಲಿ ನಾವು—**ಯೋಜಾನ್ವಿಂದ್ರತೇ ಹರೀ**—ನಿನ್ನ ಕುದುರೆಗಳನ್ನು ರಥಕ್ಕೆ ಹೂಡು ಎಂದು ಪ್ರಾರ್ಥಿಸಿರುವುದನ್ನು ಕೇಳಿ, ನೀನು ನಮ್ಮ ಯಜ್ಞಕ್ಕೆ ಬರುವುದಕ್ಕಾಗಿ ಕುದುರೆಗಳನ್ನು ರಥಕ್ಕೆ ಹೂಡಿರುವುದರಿಂದ ನಮ್ಮ ಸ್ತೋತ್ರದಿಂದ ಕುದುರೆಗಳು ರಥಕ್ಕೆ ಹೂಡಲ್ಪಟ್ಟಿರುವವು ಎಂದು ಇಲ್ಲಿ ಹೇಳಿರುವುದು.

ಅರ್ವಾಚೀನಂ— ಅಭಿಮುಖವಾಗಿ

ಗ್ರಾವಾ ಕೃಣೋತು ವಗ್ನುನಾ— ಯಜ್ಞದಲ್ಲಿ ನಿನಗಾಗಿ ಸೋಮರಸವನ್ನು ಸಿದ್ಧಪಡಿಸುವುದಕ್ಕಾಗಿ ಕಲ್ಲುಗಳಿಂದ ಸೋಮಲತೆಯನ್ನು ಜಜ್ಜುತ್ತಿರುವೆವು. ಆ ಶಬ್ದವು ನಿನಗೆ ಕೇಳಿ ನಿನ್ನ ಮನಸ್ಸನ್ನು ನಮ್ಮ ಕಡೆಗೆ ತಿರುಗಿಸಲೆಂದು ಋಷಿಯು ಪ್ರಾರ್ಥಿಸಿರುವನು

ವ್ಯಾಕರಣ-ಪ್ರಕ್ರಿಯಾ

ಯುಕ್ತಾ—ಯುಜಿರ್ ಯೋಗೇ. ಧಾತು ಇದರ ಸೇಟೆ ಕರ್ಮಾರ್ಧದಲ್ಲಿ ಕ್ತಪ್ರತ್ಯಯ ಬಂದಿದೆ. ಯುಜ್+ತ ಎಂದಿರುವಾಗ **ಚೋಃಕುಃ** ಎಂಬುದರಿಂದ ಕುತ್ವವೂ **ಖರಿ ಚ** ಎಂಬುದರಿಂದ ಛರ್ತ್ವವೂ ಬಂದಿದೆ. ಕೃದಂತವಾದುದರಿಂದ ಪ್ರಾತಿಪದಿಕಸಂಜ್ಞೆಯು ಪ್ರಥಮಾದ್ವಿವಚನ ನಿನಕ್ತೆನವಾಡಿದಾಗ ಸುಪಾಂ ಸುಲುಕ್ (ಪಾ. ಸೂ. ೭-೧-೩೯) ಎಂಬುದರಿಂದ ವಿಭಕ್ತಿಗೆ ಆಕಾರಾದೇಶ ಬಂದಿದೆ

ವಗ್ನುನಾ—ವಚ ಪರಿಭಾಷಣೇ ಧಾತು. **ವಚೇರ್ಗಶ್ಚ** (ಉ. ಸೂ ೩-೩೧೩) ವಚ ಧಾತುವಿಗೆ ನು ಪ್ರತ್ಯಯವು ಬರುತ್ತದೆ ಚಕಾರಕ್ಕೆ ಗಕಾರವು ಅಂತಾದೇಶವಾಗಿ ಬರುತ್ತದೆ. ತೃತೀಯೈಕವಚನ ಪರದಲ್ಲಿರುವಾಗ **ಆಜ್ಞೋನಾಸ್ತ್ರಿಯಾಂ** (ಪಾ. ಸೂ ೭-೩-೧೨೦) ಎಂಬುದರಿಂದ ನಾ ಎಂಬ ಆದೇಶವು ಬರುತ್ತದೆ. ॥ ೩ ॥

ಸಂಹಿತಾಪಾಠಃ

ಇಮಮಿಂದ್ರ ಸುತಂ ಪಿಬ ಜ್ಯೇಷ್ಠಮಮರ್ತ್ಯಂ ಮದಂ।
ಶುಕ್ರಸ್ಯ ತ್ವಾಭ್ಯಕ್ಷರನ್ಧಾರಾ ಋತಸ್ಯ ಸಾದನೇ ॥ ೪ ॥

ಪದಪಾಠಃ

ಇಮಂ । ಇಂದ್ರ । ಸುತಂ । ಪಿಬ । ಜ್ಯೇಷ್ಠಂ । ಅಮರ್ತ್ಯಂ । ಮದಂ ।
ಶುಕ್ರಸ್ಯ । ತ್ವಾ । ಅಭಿ । ಅಕ್ಷರನ್ । ಧಾರಾಃ । ಋತಸ್ಯ । ಸದನೇ ॥ ೪ ॥

ಸಾಯಣಭಾಷ್ಯಂ

ಹೇ ಇಂದ್ರ ಸುತಮಭಿಷುತಮಿಮಂ ಸೋಮಂ ಪಿಬ । ಕೀದೃಶಂ। ಜ್ಯೇಷ್ಠಮತಿಶಯೇನ ಪ್ರಶಸ್ಯಂ ಮದಂ ಮದಕರಂ ಅಮರ್ತ್ಯಮಮಾರಕಂ । ಸೋಮಪಾನಜನ್ಯೋ ಮದೋ ಮದಾಂತರವನ್ಮಾರಕೋ ನ ಭವತೀತ್ಯರ್ಥಃ । ತಥಾ ಋತಸ್ಯ ಯಜ್ಞಸ್ಯ ಸಂಬಂಧಿನಿ ಸದನೇ ಗೃಹೇ ವರ್ತಮಾನಾಃ ಶುಕ್ರಸ್ಯ ದೀಪ್ತಸ್ಯಾಸ್ಯ ಸೋಮಸ್ಯ ಧಾರಾಸ್ತ್ವಾಮಭ್ಯಕ್ಷರನ್ । ಅಭಿಮುಖ್ಯೇನ ಸಂಚಲಂತಿ । ತ್ವಾಂ ಪ್ರಾಪ್ನುವಂತಿ । ಸ್ವಯಮೇವಾಗಚ್ಛಂತೀತ್ಯರ್ಥಃ ॥ ಜ್ಯೇಷ್ಠಂ । ಪ್ರಶಸ್ಯಶಬ್ದಾದಿಷ್ಠನಿ ಜ್ಯ ಚ । ಪಾ. ೫-೩-೬೦ । ಇತಿ ಜ್ಯಾದೇಶಃ । ಅಕ್ಷರನ್ । ಕ್ಷರ ಸಂಚಲನೇ । ಛಾಂದಸೋ ಲಙ್ ॥ ೪ ॥

ಸ್ವರಿತಪಾಠಃ

ಇಂದ್ರ—ಎಲೈ ಇಂದ್ರನೇ, । **ಸುತಂ**—ಹಿಂಡಿರುವುದೂ । **ಜ್ಯೇಷ್ಠಂ**—ಶ್ರೇಷ್ಠವಾದುದೂ । **ಮದಂ**—ಮದ (ಹರ್ಷ)ವನ್ನುಂಟುಮಾಡತಕ್ಕದ್ದೂ । **ಅಮರ್ತ್ಯಂ**—(ಇತರ ಮಾದಕಪದಾರ್ಥವಂತಲ್ಲದೇ)ಮಾದಕವಲ್ಲದ್ದೂ ಆದ । **ಇಮಂ**— ಈ ಸೋಮರಸವನ್ನು । **ಪಿಬ**— ಕುಡಿ. । **ಋತಸ್ಯ**—ಯಜ್ಞಸಂಬಂಧಿಯಾದ । **ಸದನೇ** ಗೃಹದಲ್ಲಿ (ಇರತಕ್ಕ) । **ಶುಕ್ರಸ್ಯ**—ಪ್ರಕಾಶಮಾನವಾದ ಸೋಮರಸದ । **ಧಾರಾಃ**—ಪ್ರವಾಹಗಳು । **ಅಭ್ಯಕ್ಷರನ್**— (ನಿನ್ನ) ಅಭಿಮುಖವಾಗಿ ಪ್ರವಹಿಸುತ್ತಿವೆ ।

ಭಾವಾರ್ಥ

ಎಲೈ ಇಂದ್ರನೇ, ಶ್ರೇಷ್ಠವಾದುದೂ, ಮದ್ಯವನ್ನುಂಟುಮಾಡತಕ್ಕದ್ದೂ ಆದರೆ ಇತರ ಮಾದಕಪದಾರ್ಥಗಳಂತಲ್ಲದೆ ಆನಂದಕರವಾದದ್ದೂ ಆದ ಸೋಮರಸವು ಹಿಂಡಿ ಸಿದ್ಧವಾಗಿದೆ. ಪ್ರಕಾಶಮಾನವಾದ ಈ ಸೋಮರಸದ ಪ್ರವಾಹಗಳು ನಿನ್ನಭಿಮುಖವಾಗಿ ಯಜ್ಞಗೃಹದಲ್ಲಿ ಪ್ರವಹಿಸುತ್ತಿವೆ. ಅವನ್ನು ಕುಡಿ.

English Translation

Indra, drink this excedent, immortal and exhilarating Soma-juice. In this house of sacrifice the streams of brilliant Soma are flowing towards you.

॥ ವಿಶೇಷವಿಷಯಗಳು ॥

ಜ್ಯೇಷ್ಠಂ— ಶ್ರೇಷ್ಠವಾದ, ಅತ್ಯುತ್ತಮವಾದ, excellent.

ಅಮರ್ತ್ಯಂ— ಮರಣರಹಿತವಾದ, ಯಾವವಿಧವಾದ ಬಾಧೆಯನ್ನೂ ಮಾಡದಿರುವ, immortal.

ಮದಂ—ಮದಕರಂ । ಸಂತೋಷವನ್ನುಂಟುಮಾಡುವ, ಹರ್ಷಪ್ರದವಾದ ಬುದ್ಧಿಯನ್ನು ವಿಕಾಸಗೊಳಿಸುವ, exhilarating.

ಶುಕ್ರಸ್ಯ— ಶುಕ್ರವೆಂದರೆ ಉದಕವೆಂದೂ ಅರ್ಥವು (ನಿ ೨-೨೮) ಶುಕ್ರಶಬ್ದಕ್ಕೆ-ಶುಕ್ರಂ ಶೋಚತೇರ್-ಜ್ವಲತಿಕರ್ಮಣಃ ಎಂದು ಯಾಸ್ಕರ ನಿರ್ವಚನವಿರುವುದು (ನಿ. ೮-೧೧) ಈ ಮಟ್ಟಿನಲ್ಲಿ ಪ್ರಕಾಶನವಾಸವಾಗಿ ಬೆಳಗುತ್ತಿರುವ ನೀರು ಎಂದರೆ ಸೋಮರಸವು ಎಂದರ್ಥವು.

ತ್ವಾಂ ಅಭ್ಯಕ್ಷರನ್— ಕ್ಷರ ಸಂಚಲನೇ । ನಿನ್ನ ಸಮೀಪಕ್ಕೆ ಪರಿಮಬರುತ್ತಿರುವುದು ನಿನಗಾಗಿ ಈ ಸೋಮರಸವನ್ನು ನಿನ್ನಪಡಿಸುತ್ತಿರುವುದರಿಂದ ಪರಿಮ ಬರುತ್ತಿರುವ ರಸವು ನಿನ್ನನ್ನೇ ಅಪೇಕ್ಷಿಸುವುದೆಂಬರ್ಥಪ್ರಾಯವು.

ಋತಸ್ಯ—ಯಜ್ಞಸ್ಯ । ಋತ ಶಬ್ದಕ್ಕೆ ಸತ್ಯವೆಂಬ ಅರ್ಥವಿದ್ದರೂ ಯಜ್ಞವೆಂಬ ಅರ್ಥವನ್ನು ಹೇಳುವ ರೂಢಿಯಿರುವುದು ಋತವೆಂದರೆ ಸತ್ಯವಾದ ಕರ್ಮವು. ಎಂದರೆ ಯಜ್ಞವು. ಋತಸ್ಯ ಸಾಧನೇ ಎಂದರೆ ಯಜ್ಞಾನುಷ್ಠಾನವಾಡುವ ಯಜ್ಞಗೃಹದಲ್ಲಿ ಎಂದರ್ಥವು

ವ್ಯಾಕರಣಾತ್ಮಕ

ಜ್ಯೇಷ್ಠಮ್—ಪ್ರಶಸ್ಯ ಶಬ್ದದಮೇಲೆ ಅತಿಶಯ ಎಂಬರ್ಥದಲ್ಲಿ **ಅತಿಶಾಯನೇ ತಮಬಿಷ್ಠನೌ**(ಪಾ ಸೂ. ೫-೩-೫೫) ಎಂಬ ಸೂತ್ರದಿಂದ ಇಷ್ಠನ್ ಪ್ರತ್ಯಯ ಬರುತ್ತದೆ **ಪ್ರಶಸ್ಯಸ್ಯ ಶ್ರ** (ಪಾ. ಸೂ. ೫-೩-೬೦) ಅಜಾದೀ ಗುಣವಚನಾದೇಸ ಎಂಬುದರಿಂದ ಅಜಾದಿಯೆಂಬುದು ತನುವೃತ್ತವಾಗುತ್ತದೆ. ಅಜಾದಿಪ್ರತ್ಯಯ ಪರದಲ್ಲಿರುವಾಗ ಪ್ರಶಸ್ಯ ಶಬ್ದಕ್ಕೆ ಶ್ರ ಎಂಬ ಆದೇಶವು ಬರುತ್ತದೆ **ಜ್ಯಶ್ಚ** (ಪಾ ಸೂ ೫-೩-೬೧) ಇಷ್ಠನ್ ಈಯಸುನ್ ಪರದಲ್ಲಿರುವಾಗ ಪ್ರಶಸ್ಯ ಶಬ್ದಕ್ಕೆ ಜ್ಯ ಎಂಬ ಆದೇಶವು ಬರುತ್ತದೆ. ಜ್ಯಾದೇಸ್ಯ ಎಂದಿರುವಾಗ **ಯಸ್ಯೇತಿ ಚ** ಎಂಬುದರಿಂದ ಅಕಾರಲೋಪ ಪ್ರಾಪ್ತವಾಗಲು **ಪ್ರಕೃತ್ಯೈಕಾಚ್** (ಪಾ ಸೂ ೬-೪-೧೬೩) ಇತ್ಯಾದಿಗಳು ಪರದಲ್ಲಿರುವಾಗ ಏಕಾಕ್ಷರ ಶಬ್ದವು ಪ್ರಕೃತಿಭಾವವನ್ನು ತೊಂದುತ್ತದೆ ಎಂಬುದರಿಂದ ಯಾವ ವಿಕಾರಗಳೂ ಬರುವುದಿಲ್ಲ. ಈ ಪ್ರಕೃತಿಭಾವವು ತದ್ಧಿತಪ್ರಕರಣದಲ್ಲಿರುವ ಎಲ್ಲಾ ಲೋಪಗಳಿಗೂ ಬಾಧಕವಾಗಿ ವಿಹಿತವಾಗಿದೆ ಎಂದು ಭಾಷ್ಯದಲ್ಲಿ ವಿಸ್ತೃತವಾಗಿದೆ. ಗುಣಬಂದರೆ ಜ್ಯೇಷ್ಠ ಎಂದು ಸಿದ್ಧವಾಗುತ್ತದೆ

ಸುತಂ—ಷುಞ್ ಅಭಿಷವೆ ಧಾತು. ಕರ್ಮಾರ್ಥದಲ್ಲಿ ಕ್ತಪ್ರತ್ಯಯ ಬಂದಿದೆ. ಕಿತ್ತಾದುದರಿಂದ ಧಾತುವಿಗೆ ಗುಣ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಪಿಬ—ಪಾ ಪಾನೆ. ಧಾತು ಭ್ವಾದಿ. **ಪಾಘ್ರಾಧ್ಮಾ** (ಪಾ. ಸೂ. ೭-೩-೭೮) ಎಂಬುದರಿಂದ ಶಪ್ ಪರದಲ್ಲಿರುವಾಗ ಪಿಬ ಎಂಬ ಆದೇಶವು ಬಂದಿದೆ. ಪಿಬ ಎಂಬುದು ಅದಂತವಾದ ಆದೇಶ. ಆದುದರಿಂದ ಶಪ್ ಪರದಲ್ಲಿರುವಾಗ ಲಘೂಪಧಗುಣ ಬರಲಿ ಎಂಬ ಶಂಕೆಗೆ ಅವಕಾಶವಿಲ್ಲ. **ಅತೋಗುಣೇ** (ಪಾ. ಸೂ. ೬-೧-೯೭) ಎಂಬುದರಿಂದ ಪರರೂಪವು ಏಕಾದೇಶವಾಗಿ ಬರುತ್ತದೆ. ಅಕಾರದ ಪರದಲ್ಲಿರುವುದರಿಂದ ಮಧ್ಯಮಪುರುಷದ ಸಿಪ್ ಸ್ಥಾನಿಕ ಹಿಗೆ ಲೋಪ ಬರುತ್ತದೆ. ಅತಿಙಂತದ (ಸುತಂ) ಪರದಲ್ಲಿರುವುದರಿಂದ ನಿಘಾತ ಬಂದಿದೆ.

ಅಕ್ಷರನ್—ಕ್ಷರ ಸಂಚಲನೆ ಧಾತು ಭ್ವಾದಿ. **ಛಂದಸಿ ಲುಙ್‌ಲಙ್‌ಲಿಟಃ** (ಪಾ. ಸೂ. ೩-೪-೬) ಎಂಬುದರಿಂದ ವರ್ತಮಾನಾರ್ಥದಲ್ಲಿ ಲಙ್ ಬಂದಿದೆ. ಬಹುವಚನದ ಝಿ ಪ್ರತ್ಯಯಕ್ಕೆ ಅಂತಾದೇಶ ಬರುತ್ತದೆ. **ಇತಶ್ಚ** ಎಂಬುದರಿಂದ ಇಕಾರಲೋಪವಾದರೆ ಸಂಯೋಗಾಂತಲೋಪದಿಂದ ತಕಾರಲೋಪವಾಗುತ್ತದೆ. ಧಾತುವಿಗೆ ಅಡಾಗಮ ಬರುತ್ತದೆ. ಶಬಕಾರಕ್ಕೂ ಪ್ರತ್ಯಯಾಕಾರಕ್ಕೂ ಅತೋಗುಣೆ ಎಂಬ ಹಿಂದೆ ಹೇಳಿದ ಸೂತ್ರದಿಂದ ಪರರೂಪಬಂದರೆ ಉಕ್ತರೂಪಸಿದ್ಧಿಯಾಗುತ್ತದೆ. ತಿಙ್ಶಿತಿಃ ಎಂಬುದರಿಂದ ಸರ್ವಾನುದಾತ್ತವಾಗುತ್ತದೆ

ತ್ವಾ—ತ್ವಾಮ್ । ದ್ವಿತೀಯಾಯಾ (ಪಾ. ಸೂ. ೮-೧-೬೩) ದ್ವಿತೀಯಾಂತವಾದ ಯುಷ್ಮದ್ಅಸ್ಮದ್ ಶಬ್ದಗಳಿಗೆ ತ್ವಾ ಮಾ ಎಂಬ ಆದೇಶಗಳು ಬರುತ್ತವೆ ಎಂಬುದರಿಂದ ಇಲ್ಲಿ ದ್ವಿತೀಯಾಂತ ಯುಷ್ಮಚ್ಛಬ್ದಕ್ಕೆ ತ್ವಾ ಎಂಬ ಆದೇಶವುಂದಿದೆ. ॥ ೪ ॥

ಸಂಹಿತಾಪಾಠಃ ।

ಇಂದ್ರಾಯ ನೂನಮರ್ಚತೋಕ್ಥಾನಿ ಚ ಬ್ರವೀತನ ।
ಸುತಾ ಅಮತ್ಸುರಿಂದವೋ ಜ್ಯೇಷ್ಠಂ ನಮಸ್ಯತಾ ಸಹಃ ॥ ೫ ॥

ಪದಪಾಠಃ

ಇಂದ್ರಾಯ । ನೂನಂ । ಅರ್ಚತ । ಉಕ್ಥಾನಿ । ಚ । ಬ್ರವೀತನ ।
ಸುತಾಃ । ಅಮತ್ಸುಃ । ಇಂದವಃ । ಜ್ಯೇಷ್ಠಂ । ನಮಸ್ಯತ । ಸಹಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಋತ್ವಿಜ ಇಂದ್ರಾಯ ಸುನಂ ಕ್ಷಿಪ್ರಮರ್ಚತ । ಪೂಜನಂ ಕುರುತ । ಏತದೇವ ಸ್ಪಷ್ಟೀಕ್ರಿಯತೇ । ಉಕ್ಥಾನ್ಯಪ್ಯಗೀತಮಂತ್ರಸಾಧ್ಯಾನಿ ಸ್ತೋತ್ರಾಣಿ ಚ ಬ್ರುವೀತನ। ಬ್ರೂತ। ಸುತಾ ಅಭಿಷುತಾ ಇಂದವಃ ಸೋಮಾಶ್ಚಮತ್ಸುಃ । ಆಗತಮೇನಮಿಂದ್ರಂ ಮತ್ತಂ ಕುರ್ವಂತು । ಅನಂತರಂ ಜ್ಯೇಷ್ಠಂ ಪ್ರಶಸ್ಯತಮಂ ಸಹಃ ಸಹಸ್ವಿನಂ ಬಲವಂತಂ ತಮಿಂದ್ರಂ ನಮಸ್ಯತ । ನಮಸ್ಕುರುತ ॥ ಬ್ರುವೀತನ । ಬ್ರುವೀತೇರ್ಲೋಟಿ ತಪ್ತನಪ್ತನಥನಾಶ್ಚೀತಿ ತನಬಾದೇಶಃ । ಅಮತ್ಸುಃ । ಮದೀ ಹರ್ಷೇ ಭ್ವಾದಿಸಃ ಸ್ವಾರ್ಥನಾಯಾಂ ಲುಙ್ । ಆಗಮಾನುಶಾಸನಸ್ಯಾನಿತ್ಯತ್ವಾದಿಡಭಾವಃ । ನಮಸ್ಯತ । ನಮೋವರಿವಶ್ಚಿತ್ರಙ ಇತಿ ಕ್ಯಚ್ । ಸಹಃ ಲುಗಕಾರೇಕಾರರೇಫಾಶ್ಚ ವಕ್ತವ್ಯಾಃ । ಪಾ ೪-೪-೧೩೮-೨ । ಇತಿ ಮತ್ವರ್ಥೀಯಸ್ಯ ಲುಕ್ ॥ ೫ ॥

ಪದಾರ್ಥ

ಇಂದ್ರಾಯ— (ಎಲ್ಲೆ ಋತ್ವಿಕ್ಕುಗಳೇ) ಇಂದ್ರನಿಗೆ । **ನೂನಂ**—ಜಾಗ್ರತೆಯಾಗಿ । **ಅರ್ಚತ**—ಪೂಜೆಯನ್ನು ಆಚರಿಸಿರಿ । **ಉಕ್ಥಾನಿ ಚ**—ಮಂತ್ರರೂಪವಾದ ಸ್ತೋತ್ರಗಳನ್ನೂ ಕೂಡ । **ಬ್ರುವೀತನ**—ಪಠಿಸಿರಿ । **ಸುತಾಃ**—ಹಿಂಡಿದ । **ಇಂದವಃ**—ಸೋಮರಸಗಳು। **ಅಮತ್ಸುಃ**—(ಇಂದ್ರನನ್ನು) ಮತ್ತು ಹರ್ಷಯುಕ್ತನನ್ನಾಗಿ ಮಾಡಲಿ । **ಜ್ಯೇಷ್ಠಂ**—ಅತ್ಯಂತ ಶ್ರೇಷ್ಠನೂ। **ಸಹ**—ಬಲಶಾಲಿಯೂ ಆದ ಇಂದ್ರನನ್ನು । **ನಮಸ್ಯತ**—ನಮಿಸಿರಿ॥

ಭಾವಾರ್ಥ

ಎಲ್ಲೆ ಋತ್ವಿಕ್ಕುಗಳೇ, ಇಂದ್ರನಿಗೆ ಜಾಗ್ರತೆಯಾಗಿ ಪೂಜೆಯನ್ನರ್ಪಿಸಿರಿ ಉಕ್ಥರೂಪವಾದ ಶಸ್ತ್ರ ಮಂತ್ರಗಳನ್ನು ಪಠಿಸಿರಿ ಹಿಂಡಿದ ಸೋಮರಸಗಳು ಇಂದ್ರನನ್ನು ಹರ್ಷಯುಕ್ತನನ್ನಾಗಿ ಮಾಡಲಿ ಅತ್ಯಂತ ಶ್ರೇಷ್ಠನೂ ಮತ್ತು ಬಲಶಾಲಿಯೂ ಆದ ಇಂದ್ರನನ್ನು ವಂದಿಸಿರಿ.

English Translation

Offer worship quickly to Indra ; recite hymns in his honour ; let the distilled Soma drops exhilerate him , adore his great strength.

॥ ವಿಶೇಷವಿಷಯಗಳು ॥

ಸುತಾಃ ಇಂದವಃ—ಹಿಂಡಿ ಸಿದ್ಧಪಡಿಸಲ್ಪಟ್ಟ ಸೋಮರಸಗಳು.

ಅಮತ್ಸುಃ—ಮದೀ ಹರ್ಷೇ । ಹರ್ಷನನ್ನುಂಟುಮಾಡಲಿ.

ಜ್ಯೇಷ್ಠಂ ಸಹಃ—ಅತಿಶಯವಾದ ಶಕ್ತಿಸಾಮರ್ಥ್ಯವು excellent or superior strength,

ನಮಸ್ಯತ—ನಂದನೆಸಾಡಿ, ಭಕ್ತಿಭಾವದಿಂದ ಗೌರವಿಸಿ.

॥ ವ್ಯಾಕರಣಪ್ರಕ್ರಿಯಾ ॥

ಬ್ರುವೀತನ—ಬ್ರೂಞ್ ವ್ಯಕ್ತಾಯಾಂ ವಾಚಿ ಧಾತು. ಅದಾದಿ. ಲೋಟ್ ಮಧ್ಯಮಪುರುಷ ಬಹುವಚನದಲ್ಲಿ ಧ ಎಂಬ ಪ್ರತ್ಯಯವು ಬರುತ್ತದೆ. **ಲೋಟೋ ಲಙ್ವತ್** (ಪಾ ಸೂ. ೩-೪-೮೫) ಎಂಬುದರಿಂದ ಲಙ್ವದ್ಭಾವ ಬರುತ್ತದೆ. ಲಙಿನಲ್ಲಿ ಧ ಎಂಬುದಕ್ಕೆ **ತಸ್ಥಸ್ಥಮಿಪಾಂ ತಾಂತಂ ತಾಮಃ** (ಪಾ. ಸೂ. ೩-೪-೧೦೧) ಎಂಬುದರಿಂದ ತ ಎಂಬ ಆದೇಶ ಬರುತ್ತದೆ. ಬ್ರೂ+ತ ಎಂದಿರುವಾಗ, **ತಪ್ತನಪ್ತನಥನಾಶ್ಚ** (ಪಾ. ಸೂ. ೭-೧-೪೫) ತಸ್ಯತಾತ್ ಎಂಬುದರಿಂದ ತಸ್ಯ ಎಂದು ಆನುವೃತ್ತವಾಗುತ್ತದೆ. ತ ಎಂದರೆ **ಲೋಣ್ಮಧ್ಯಮಪುರುಷ** ಬಹುವಚನ ಪ್ರತ್ಯಯ. ಇದಕ್ಕೆ ಛಂದಸ್ಸಿನಲ್ಲಿ ತಪ್, ತನಪ್, ತನ ಥನ ಆದೇಶಗಳು ಬರುತ್ತವೆ ಎಂಬುದರಿಂದ ಇಲ್ಲಿ ತನಪಾದೇಶ ಬಂದಿದೆ. ವ್ಯತ್ಯಯದಿಂದ ಪಿತ್ವವು ತನ ಎಂಬುದಕ್ಕೆ ಬರುತ್ತದೆ. **ಬ್ರುವಈಟ್** (ಪಾ. ಸೂ. ೩-೪-೮೩) ಎಂಬುದರಿಂದ ತನ ಎಂಬುದಕ್ಕೆ ಈಡಾಗಮ ಬರುತ್ತದೆ. **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಗುಣ ಬಂದು ಅವಾದೇಶ ಬರುತ್ತದೆ.

ಅಮತ್ಸುಃ—ಮದೀ ಹರ್ಷೇ. ಧಾತು ದಿವಾದಿ. **ಛಂದಸಿ ಲುಙ್** (ಪಾ ಸೂ. ೩-೪-೬) ಎಂಬುದರಿಂದ ಪ್ರಾರ್ಥನಾರೂಪ ಅರ್ಥದಲ್ಲಿ ಲುಙ್ ಬರುತ್ತದೆ. ಮದಭರಿತನನ್ನಾಗಿ ಮಾಡಲಿ ಎಂದರ್ಥವಾಗುತ್ತದೆ. ಒಹುವಚನ ಝಿ ಪರವಲ್ಲಿರುವಾಗ ಚ್ಲಿ ವಿಕರಣ ಬರುತ್ತದೆ. ಅದಕ್ಕೆ ಸಿಚಾದೇಶ ಬರುತ್ತದೆ. **ಸಿಚಿಭ್ಯಸ್ತ ಝಿದಿ-ಭ್ಯಶ್ಚ** (ಪಾ ಸೂ. ೩-೪-೧೦೯) ಎಂಬುದರಿಂದ ಸಿಚ್ ಪ್ರತ್ಯಯದ ಪರವಲ್ಲಿರುವ ಲುಙ್ ಸಂಬಂಧಿ ಝಿ ಪ್ರತ್ಯಯಕ್ಕೆ ಜುಸಾದೇಶ ಬರುತ್ತದೆ. ಜುಸಿನಲ್ಲಿ ಉಸ್ ಉಳಿಯುತ್ತದೆ. ಧಾತುಸಿಗೆ ಅಡಾಗಮ ಬರುತ್ತದೆ. ಅಮದ್+ಸ್+ಉಸ್ ಎಂದಿರುವಾಗ ಸಿಚಿಗೆ ವಲಾದಿಲಕ್ಷಣ ಇಡಾಗಮ ಪ್ರಾಪ್ತವಾಗುತ್ತದೆ. **ಆಗಮಶಾಸ್ತ್ರಮನಿತ್ಯಮ್** (ಪರಿಭಾಷಾ ೧೫) ಆಗಮವಿಧಾನವಾಡುವ ಸೂತ್ರವು ಅನಿತ್ಯವೆಂಬುದರಿಂದ ಇಲ್ಲಿ ಇಡಾಗಮವಾಗದಿರುವುದರಿಂದ **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೩-೩೫) ಎಂಬ ತದ್ವಿಧಾಯಕ ಸೂತ್ರವು ಅನಿತ್ಯವಾದುದರಿಂದ ಇಲ್ಲಿ ಇಡಾಗಮವನ್ನು ಆಶ್ರಯಿಸಿರುವುದರಿಂದ ಸಿಚಿಗೆ ಇಡಾಗಮ ಬರುವುದಿಲ್ಲ ಖರಿಚ ಎಂಬುದರಿಂದ ಧಾತುವಿನ ಸಕಾರಕ್ಕೆ ಚರ್ತ್ವ ಬಂದರೆ ಉಕ್ತರೂಪಸಿದ್ಧಿಯಾಗುತ್ತದೆ

ನಮಸ್ಯತ—ನಾಮಧಾತು **ನಮೋವರಿವಶ್ಚಿತ್ರಙಃ ಕ್ಯಚ್** (ಪಾ. ಸೂ ೩-೧-೧೯) ಶಬ್ದಪ್ರೇರ—ಸೂತ್ರದಿಂದ ಕರಣೆ ಎಂಬುದು ಅನುವೃತ್ತವಾಗುತ್ತದೆ ಕರಣನೆಂದರೆ ಕ್ರಿಯಾ. ಇಲ್ಲಿ ಕ್ರಿಯಾವಿಶೇಷದಲ್ಲಿ ಅಂದರೆ ಪೂಜಾ, ಪರಿಚರ್ಯಾ, ಆಶ್ಚರ್ಯವೆಂಬ ಮೂರು ಅರ್ಥದಲ್ಲಿ ಕ್ರಮವಾಗಿ ನಮಸ್, ಪರಿವಸ್, ಚಿತ್ರಙ್ ಶಬ್ದಗಳ ನಿಮಿತ್ತ ಕ್ಯಚ್ ಪ್ರತ್ಯಯ ಬರುತ್ತದೆ. ಕ್ಯಚ್ ಸನಾದಿಯಲ್ಲಿ ಸೇರಿರುವುದರಿಂದ ಕ್ಯಜಂತವಾದ ನಮಸ್ಯ ಎಂಬುದು ಧಾತು ಸಂಜ್ಞೆಯನ್ನು ಹೊಂದುತ್ತದೆ ಲೋಟ್ ಮಧ್ಯಮಪುರುಷ ಬಹುವಚನವಿವಕ್ಷೆಯಾಡಿದಾಗ ಹಿಂದಿನಂತೆ ಧ ಎಂಬುದಕ್ಕೆ ತ ಎಂಬಾದೇಶವು ಬಂದರೆ ಉಕ್ತರೂಪಸಿದ್ಧಿಯಾಗಿದೆ

ಸಹಃ—ಬಲಾರ್ಥದಲ್ಲಿ ಸವಸ್ ಶಬ್ದವಿರುತ್ತದೆ. ಇಲ್ಲಿ ಅನು ಉಳ್ಳವನು ಎಂಬರ್ಥದಲ್ಲಿ ಪ್ರಯುಕ್ತವಾಗಿದೆ **ಮತ್ವರ್ಥೇ ಮಾಸತನ್ಯೋಃ** (ಪಾ. ಸೂ. ೪-೪-೮೭) ಎಂಬ ಸೂತ್ರದಲ್ಲಿ **ಲುಗಕಾರೇಕಾರರೇಫಾಶ್ಚ ವಕ್ತವ್ಯಾಃ** (ವಾ ೬) ಎಂಬ ವಾರ್ತಿಕವು ಪರಿತವಾಗಿದೆ ಮತ್ವರ್ಥದಲ್ಲಿ (ಅನು ಉಳ್ಳವನು) ವಿಹಿತವಾದ ಪ್ರತ್ಯಯಕ್ಕೆ ಲುಕ್ ಬರುತ್ತದೆ ಎಂದು ತದರ್ಥ ಇಲ್ಲಿ ಅಸಂತವಾಗುವುದರಿಂದ ಮತ್ವರ್ಥದಲ್ಲಿ ವಿಸರ್ಗಪ್ರತ್ಯಯವು ಪ್ರಾಪ್ತವಾಗುತ್ತದೆ ಈ ವಾರ್ತಿಕದಿಂದ ಮತ್ವರ್ಥ ತೋರುತ್ತಿರುವಾಗ ಲುಕ್ ಬಂದಿದೆ **ಯಃ ಶಿಷ್ಯತೆ ಸಃ**

ಲುಪ್ಯಮಾನಾರ್ಥಾಭಿಧಾಯೀ ಎಂಬ ನ್ಯಾಯದಂತೆ ಇಲ್ಲಿ ಮತ್ವರ್ಥೀಯ ಪ್ರತ್ಯಯವು ಲುಪ್ತವಾದರೂ ಪ್ರಕೃತಿಯಿಂದ ಅರ್ಥವು ತೋರುವುದು. ॥ ೫ ॥

ಸಂಹಿತಾಪಾಠಃ

ನಕಿಷ್ಟ್ವದ್ರಥೀತರೋ ಹರೀ ಯದಿಂದ್ರ ಯಚ್ಛಸೇ।
ನಕಿಷ್ಟ್ವಾನು ಮಜ್ಮನಾ ನಕಿಃ ಸ್ವಶ್ವ ಆನಶೇ ॥ ೬ ॥

ಪದಪಾಠಃ

ನಕಿಃ। ತ್ವತ್। ರಥಿ ೪ ತರಃ। ಹರೀ ಇತಿ। ಯತ್। ಇಂದ್ರ। ಯಚ್ಛಸೇ।
ನಕಿಃ। ತ್ವಾ। ಅನು। ಮಜ್ಮನಾ। ನಕಿಃ। ಸು ೪ ಅಶ್ವಃ। ಆನಶೇ ॥ ೬ ॥

ಸಾಯಣಭಾಷ್ಯಂ।

ಹೇ ಇಂದ್ರ ಯದ್ಯಸ್ಮಾತ್ತ್ವಂ ಹರೀ ಏತತ್ಸಂಜ್ಞೌ ವಶ್ವೌ ಯಚ್ಛಸೇ ರಥೇ ಯೋಜಯಸಿ ತಸ್ಮಾತ್ತ್ವತ್ತೋ೨ನ್ಯಃ ಕಶ್ಚಿದ್ರಥೀತರೋ೨ತಿಶಯೇನ ರಥವಾನ್ ನಕಿಃ। ನಾಸ್ತಿ। ಅನ್ಯೇಷಾಮಿಾದೃಗಶ್ವ-ಯುಕ್ತರಥಾಭಾವಾತ್। ತ್ವಾ ತ್ವಾಮನುಲಕ್ಷ್ಯ ಮಜ್ಮನಾ। ಬಲನಾಮೈತತ್। ಬಲೇನ ಸದೃಶೋ೨ಪಿ ನಕಿಃ। ನ ಹ್ಯಸ್ತಿ। ಸ್ವಶ್ವಃ ಶೋಭನಾಶ್ವೋ೨ನ್ಯಶ್ಚ ತ್ವಾಂ ನಕಿರಾನಶೇ। ನ ಪ್ರಾಪ। ಇಂದ್ರಸ್ಯ ಬಲಾಶ್ವ-ಯೋರಸಾಧಾರಣತ್ವಾದಿಂದ್ರಸದೃಶೋ ಬಲವಾನಶ್ವವಾನ್ ಲೋಕೇ ಕಶ್ಚಿದಪಿ ನಾಸ್ತೀತ್ಯರ್ಥಃ ॥ ನಕಿಷ್ಟ್ವತ್ ಯುಷ್ಮತ್ತತ್ತತ್ಸಪ್ತಮಃಷ್ಟುಂತಃಪಾದಮಿತಿ ಷತ್ವಂ। ರಥೀತರಃ। ಅತಿಶಯೇನ ರಥೀ। ತರಪೀದ್ರ-ಥಿನಃ। ಪಾ.೪-೨-೪೩-೧। ಇತೀ ಕಾರಾಂತಾದೇಶಃ। ಅವಗ್ರಹಸಮಯೇ ಛಾಂದಸಂ ಹ್ರಸ್ವತ್ವಂ। ಯಚ್ಛಸೇ। ಯಮೇರ್ವ್ಯತ್ಯಯೇನಾತ್ಮನೇಪದಂ। ಸ್ವಶ್ವಃ। ಬಹುವ್ರೀಹಾವಾದ್ಯುದಾತ್ತಂ। ದ್ವ್ಯಚ್ಛಂದಸೀತ್ಯುತ್ತರಪದಾ-ದ್ಯುದಾತ್ತತ್ವಂ। ಆನಶೇ। ಅಶ್ನೋತೇರ್ಲೇತ್ಯಭ್ಯಾಸಾದುತ್ತರಸ್ಯ ನುಟ್ ॥ ೬ ॥

ಪದಾರ್ಥಃ

ಇಂದ್ರ— ಎಲ್ಲೆ ಇಂದ್ರನೇ, । **ಯತ್**—ಯಾವಾಗ । **ಹರೀ**—ಹೆರಿಗಳೆಂಬ ಸನ್ನ ಕುದುರೆಗಳನ್ನು । **ಯಚ್ಛಸೇ**—(ರಥಕ್ಕೆ) ಕಟ್ಟುತ್ತೀಯೋ (ಆಗ) । **ರಥೀತರಃ**—ನಿನಗಿಂತಲೂ ಅಧಿಕನಾದ ಸಾರಥಿಯು । **ನ ಕಿಃ**

ಇಲ್ಲವೇ ಇಲ್ಲ. | **ತ್ವಾ**— ನಿನ್ನನ್ನು (ಲಕ್ಷ್ಯದಲ್ಲಿಟ್ಟು) | **ಮಜ್ಮನಾ**— ಬಲದಲ್ಲಿ ಸಮಾನನಾದವನೂ | **ನಕಿಃ**— ಯಾರೂ ಇಲ್ಲ. | **ಸ್ಪಶ್ಯಃ**— ಶ್ರೇಷ್ಠವಾದ ಕುದುರೆಯನ್ನಿಟ್ಟುಕೊಂಡಿರುವ ಇತರರಾರೇ ಆಗಲಿ | **ನಕಿಃ ಆನಶೇ**— ನಿನ್ನನ್ನು ಹಿಂದೆಹಾಕಿ ಓಡಲಾಗಲಿಲ್ಲ.

॥ ಭಾವಾರ್ಥಃ ॥

ಎಲೈ ಇಂದ್ರನೇ, ನೀನು ಹರಿಗಳೆಂಬ ನಿನ್ನ ಕುದುರೆಗಳನ್ನು ರಥಕ್ಕೆ ಕಟ್ಟಿದಾಗ ನಿನ್ನನ್ನು ಮೀರಿಸಿದ ಸಾರಥಿಯು ಯಾರೂ ಇಲ್ಲ. ನಿನಗೆ ಸದೃಶವಾದ ಬಲವುಳ್ಳವನೂ ಯಾರೂ ಇಲ್ಲ. **ಎಷ್ಟೇ** ಶ್ರೇಷ್ಠವಾದ ಕುದುರೆಯನ್ನಿಟ್ಟುಕೊಂಡಿದ್ದರೂ ಸಹ ನಿನ್ನನ್ನು ಹಿಂದೆ ಹಾಕಿ ರಥವನ್ನು ಓಡಿಸುವವರು ಯಾರೂ ಇಲ್ಲ.

English Translation

Indra, when you harnessed your horses there is no better charioteer than you ; no one is equal to you in strength ; no one although possessed of good horses has surpassed you.

ವಿಶೇಷವಿಷಯಗಳು

ನಕಿಃ—ಹಿಕಂ ನುಕಂ ಮೊದಲಾದ ಒಂಭತ್ತು ಶಬ್ದಗಳು ಸರ್ವಪದಸನ್ನಿಯೋಗಾರ್ಥವಲ್ಲಿ ಸರಿತವಾಗಿರುವುದರಿಂದ ನಕಿಃ ಎಂಬ ಶಬ್ದಕ್ಕೆ ಇಲ್ಲಿ ನಿಷೇಧಾರ್ಥವನ್ನು ಹೇಳಿರುವರು. ನಕಿಃ ಎಂದರೆ ಇಲ್ಲ ಎಂದರ್ಥವು.

ರಥೀತರಃ—ರಥಿಕರಲ್ಲಿ ಶ್ರೇಷ್ಠನಾದವನು.

ಮಜ್ಮನಾ—ಓಜಃ ಪಾಜಃ ಮೊದಲಾದ ಇಪ್ಪತ್ತೈದು ಬಲನಾಮಗಳ ಮಧ್ಯದಲ್ಲಿ ಮಜ್ಮನಾ ಎಂಬ ಶಬ್ದವು ಪಠಿತವಾಗಿರುವುದರಿಂದ ಈ ಶಬ್ದಕ್ಕೆ ಬಲವು, ಶಕ್ತಿಯು ಎಂದರ್ಥವು.

ಸ್ಪಶ್ಯಃ—**ಶೋಭನಾಶ್ವಯುಕ್ತಃ** | ಶ್ರೇಷ್ಠವಾದ ಕುದುರೆಗಳನ್ನು ಹೊಂದಿರುವವನು.

ನ ಆನಶೇ—**ನ ಪ್ರಾಪ** | ಹೊಂದುವುದಿಲ್ಲ ಅಥವಾ ಇರುವುದಿಲ್ಲ.

॥ ವ್ಯಾಕರಣಪ್ರಕ್ರಿಯಾ ॥

ನಕಿಷ್ಟ್ವತ್—ನಕಿಃ+ತ್ವತ್ ಎಂದು ಛೇದ. ನಕಿಸ್ ಎಂಬುದು ಸಕಾರಾಂತ ಅವ್ಯಯ. ನಕಿಸ್+ತ್ವತ್ ಎಂದಿರುವಾಗ, **ಯುಷ್ಮತ್ತತ್ತತಕ್ಷುಷ್ಟಂತಃ ಪಾದಮ್** (ಪಾ. ಸೂ. ೮-೩-೧೦೩) ಪಾದಮಧ್ಯದಲ್ಲಿರುವ ಸಕಾರಕ್ಕೆ ತಕಾರಾದಿಯಾದ ಯುಷ್ಮಚ್ಛಬ್ದದ ಆದೇಶಗಳು, ತತ್, ತತಕ್ಷು ಶಬ್ದಗಳು ಪರವಲ್ಲಿರುವಾಗ ಮೂರ್ಧನ್ಯಾದೇಶವು (ಷತ್ವ) ಬರುತ್ತದೆ ಎಂಬುದರಿಂದ ಸಕಾರಕ್ಕೆ ಷತ್ವ ಬರುತ್ತದೆ. ತ್ವಂ, ತ್ವತ್, ತ್ವಾ, ತೆ, ತವ ಎಂಬವುಗಳೇ ಯುಷ್ಮದಾದೇಶಗಳು. ಇಲ್ಲಿ ತ್ವತ್ ಎಂಬ ತಾದಿ ಆದೇಶವು ಪರದಲ್ಲಿದೆ. ಷತ್ವಬಂದಾಗ ಷಕಾರದ ಪರದಲ್ಲಿ ತಕಾರ ಬಂದುದರಿಂದ **ಷ್ಟುನಾಷ್ಟುಃ** (ಪಾ. ಸೂ. ೮-೪-೪೧) ಎಂಬುದರಿಂದ ಷ್ಟುತ್ವಸಂಧಿ ಬರುತ್ತದೆ

ರಥೀತರಃ—ಅತಿಯೇನ ರಥೀ (ರಥವಾನ್) ರಥೀತರಃ **ದ್ವಿವಚನ ವಿಭಜ್ಯೋಪಪದೇ ತರಬೀಯಸುನೌ** (ಪಾ ಸೂ ೫-೩ ೫೭) ಎಂಬುದರಿಂದ ಅತಿಶಯಾರ್ಥದಲ್ಲಿ ತರಪ್ ಪ್ರತ್ಯಯ ಬರುತ್ತದೆ ರಥಮಸ್ಯಾಸ್ತೀತಿ ರಥೀ. ರಥಶಬ್ದದ ನಿಲೋಪ ಮತ್ವರ್ಥದಲ್ಲಿ **ಅತ ಇನಿಠನ್** (ಪಾ. ಸೂ. ೫-೪-೧೧೫) ಎಂಬುದರಿಂದ ಇನಿಪ್ರತ್ಯಯ ಒಂದರೆ **ಯಸ್ಯೇತಿಚ** ಎಂಬುದರಿಂದ ಅಕಾರಲೋಪವಾದರೆ ರಥೀ ಎಂಬುದು ನಾಂತಶಬ್ದವಾಗುತ್ತದೆ. ಇದಕ್ಕೆ ಮೇಲೆ ಹೇಳಿದಂತೆ ಅತಿಶಯಾರ್ಥದಲ್ಲಿ ತರಪ್ ಪ್ರತ್ಯಯ ಬರುತ್ತದೆ. ರಥಿನ್+ತರ ಎಂದಿರುವಾಗ **ನಲೋಪಃ ಪ್ರಾತಿಪದಿಕಾಂತಸ್ಯ** (ಪಾ. ಸೂ. ೮-೭-೭) ಎಂಬುದರಿಂದ ಪ್ರಾತಿಪದಿಕದ ನಕಾರಕ್ಕೆ ಲೋಪ ಬರುತ್ತದೆ. **ಈದ್ರಥಿನಃ** (ಪಾ. ಸೂ. ೪-೩-೧೭—ಪಾ ೧) ರಥಿನ್ ಶಬ್ದಕ್ಕೆ **ಛ** ಪರವಲ್ಲಿರುವಾಗ ಈಕಾರಾಂತಾ ದೇಶವು ಬರುತ್ತದೆ **ತರಪ್ತಮಪೌಘಃ** (ಪಾ. ಸೂ. ೧-೧-೨೨) ಎಂಬುದರಿಂದ ಎರಡು ಪ್ರತ್ಯಯಗಳಿಗೆ ಛ ಎಂದು ಸಂಜ್ಞೆ. ರಥಿನ+ತರ ಎಂದಿರುವಾಗ ಛ ಪರವಲ್ಲಿರುವುದರಿಂದ ಈಕಾರವು ಅಂತಾದೇಶವಾಗಿ ಬರುತ್ತದೆ. ಇಲ್ಲಿ ನಲೋಪಕ್ಕೆ ಅಪವಾದವಾಗಿ **ಈ**ಕಾರವನ್ನು ಅಂತಾದೇಶವನ್ನಾಗಿ ಹೇಳಿದರೆ ಲಾಘವವಿದೆ ಆದರೆ ಈತ್ವವು ಅಜಿನ್ ಕಾಂಡದಲ್ಲಿ ವಿಹಿತವಾದುದರಿಂದ ನಕಾರಸ್ಥಾನದಲ್ಲಿ ವಿಧಿಸಿದರೆ ಪುನಃ ಸವರ್ಣದೀರ್ಘರೂಪವಾದ ಏಕಾದೇಶವು ಬರಲಾರದು. ಆದುದರಿಂದ ನಲೋಪವಾಡಿದನೆಂಲೆ ಇಕಾರಕ್ಕೇ ಈಕಾರವನ್ನು ಅಂತಾದೇಶವನ್ನಾಗಿ ಹೇಳಬೇಕು. ಇಲ್ಲಿ ಸವರ್ಣಾಲರ್ಥಕ್ಕೆ ಶ್ರುತ್ವವು ಶ್ರುತವಾಗುತ್ತದೆ ಅನಗ್ರಹದಲ್ಲಿ ಕೇವಲ ಭಾಂಡಸಾಮಾನ್ಯ ಪ್ರಸಕ್ತವನ್ನು ಸ್ವೀಕರಿಸಿರುತ್ತಾರೆ.

ಯಚ್ಛಸೇ—ಯಮು ಉಪರಮೇ ಧಾತು. ಪರಸ್ಮೈಪದಿ. ಛ್ವಾದಿ **ನೃತ್ಯಯೋ ಬಹುಲಂ** (ಪಾ ಸೂ. ೬-೧-೬೯) ಎಂಬುದರಿಂದ ನೃತ್ಯಯಿಂದ ಆತ್ಮನೇಪದ ಪ್ರತ್ಯಯ ಬರುತ್ತದೆ. ಶಪ್ ಪರವಲ್ಲಿರುವಾಗ **ಇಷುಗಮಿಯಮಾಂ ಛಿಃ** (ಪಾ ಸೂ ೬-೪-೩೭) ಎಂಬುದರಿಂದ ಛ ಎಂಬುದು ಅಂತಾದೇಶ ಬಂದಿದೆ. ಅಥವಾ ದಾಣ್ದಾನೇ ಧಾತು. ಇದಕ್ಕೆ **ಸಾಛ್ಯಾ**—ಸೂತ್ರದಿಂದ ಯಚ್ಛ ಎಂಬ ಆದೇಶ ಬರುತ್ತದೆ ಇದೂ ಪರಸ್ಮೈಪದಿಯಾದುದರಿಂದ ನೃತ್ಯಯಿಂದಲೇ ಆತ್ಮನೇಪದ ಪ್ರತ್ಯಯವನ್ನು ಹೇಳಬೇಕು. ಲಟ್ ಮುಧ್ಯಮಪುರುಷೈಕವಚನದಲ್ಲಿ ಉಕ್ತರೂಪ ಸಿದ್ಧವಾಗುತ್ತದೆ.

ಸ್ಪೃಶಿ—ಸ್ಪೃಶೋಸಂ ಜಲ್ಪೇ ಪೃಸ್ಯ ಸಕಃ ಸ್ಪರ್ಶಃ ಬಹುವ್ರೀಹಿಪದಮಾಸ. **ನಞಾಸುಭ್ಯಾಂ** (ಪಾ. ಸೂ. ೬-೨-೧೭೨) ಎಂಬುದರಿಂದ ಸು ಎಂಬುದರ ಪರವಲ್ಲಿರುವ ಋಕಾರಬ್ಜುಕ್ಕೆ ಅಂತೋದಾತ್ತವು ಪ್ರಾಪ್ತವಾದರೆ, **ಆದ್ಯುದಾತ್ತಂ ದ್ಯಚ್ಛ್ಛಂದಸಿ** (ಪಾ. ಸೂ. ೬-೨ ೧೭೯) ಸೂತ್ರದ ಪರವಲ್ಲಿರುವ ದ್ವ್ಯಚ್ಛಬ್ದವಾದ ಆದ್ಯುದಾತ್ತವಾದ ವನವು ಛಂದಸ್ಸಿನಲ್ಲಿ ಆದ್ಯುದಾತ್ತವಾಗಿಯೇ ಉಳಿಯುವುದು ಎಂಬುದರಿಂದ ಇಲ್ಲಿ ಉತ್ತರಪದಾದ್ಯುದಾತ್ತ ಸ್ವರವೇ ಇರುತ್ತದೆ **ಅಕೂಪಾರ್ಷ್ಟಿ** (ಋ. ಸೂ. ೧-೪೪೯) ಎಂಬುದರಿಂದ ಅಶ್ವಶಬ್ದವು ಕ್ವನ್ನಂತವಾದುದರಿಂದ ನಿತ್‌ಸ್ವರದಿಂದ ಆದ್ಯುದಾತ್ತವಾಗಿದೆ ದ್ವ್ಯಚ್ಚ್ವಾಗಿರುವುದರಿಂದಲೂ ಸು ಎಂಬುದರ ಪರವಲ್ಲಿ ಬಂದುದರಿಂದ ಆದ್ಯುದಾತ್ತವಾಗಿಯೇ ಶ್ರವಣವಾಗುತ್ತದೆ. ಈ ಸೂತ್ರವು ನಞಾಸ್ವರಕ್ಕೆ ಅಪವಾದವಾಗುತ್ತದೆ

ಆನಶೆ—ಅಶೂ ವ್ಯಾಪ್ತೌ ಧಾತು. ಸ್ವಾದಿ. ಅನುದಾತ್ತೇತ್. ಲಟ್ ಪ್ರಥಮಪುರುಷೈಕವಚನ ವಿವಕ್ಷಾ ಸಮಾಡಿದಾಗ ತಪ್ರತ್ಯಯ ಬರುತ್ತದೆ. **ಲಿಟಸ್ತ್ರಝ ಯೋರೇಶಿರೇಚ್** (ಪಾ. ೩-೪-೮೧) ಸೂತ್ರದಿಂದ ತ ಎಂಬುದಕ್ಕೆ

ಏಶ್ ಆದೇಶ ಬರುತ್ತದೆ. ಲಿಟ್ ನಿಮಿತ್ತೀಕರಿಸಿ ಧಾತುವಿಗೆ ದ್ವಿತ್ವ ಬರುತ್ತದೆ. ಹಲಾದಿಶೇಷ ಬಂದರೆ ಆ+ಆಶ್+ಎ ಎಂದಾಗುತ್ತದೆ. **ಅತ ಆದೇಃ** (ಪಾ. ಸೂ. ೬-೪-೭೦) ಅಭ್ಯಾಸದ ಆದಿಯ ಆಕಾರಕ್ಕೆ ದೀರ್ಘ ಬರುತ್ತದೆ. ಅತೋಗುಣೆ ಎಂಬುದರಿಂದ ಪರರೂಪವು ಪ್ರಾಪ್ತವಾದರೆ ಅದಕ್ಕೆ ಅಪವಾದವಾಗಿ **ಈ** ಸೂತ್ರವು ಆರಬ್ಧವಾಗಿದೆ. ಅಭ್ಯಾಸಕ್ಕೆ ದೀರ್ಘವು ಬಂದರೆ **ಆಶ್ನೋತೇರ್ಹ್ಯಶ್ಞ** (ಪಾ. ಸೂ. ೬-೪-೭೨) ಅಭ್ಯಾಸದ ದೀರ್ಘವಾದ ಆಕಾರದ ಪರದಲ್ಲಿರುವ ಅಶೂಧಾತುವಿಗೆ ನುಡಾಗಮ ಬರುತ್ತದೆ. ಇದರಿಂದ ಧಾತುವಿನ ಆದಿಗೆ ನುಡಾಗಮ ಬಂದರೆ ಆನಶೇ ಎಂದಾಗುತ್ತದೆ. ॥ ೬ ॥

ಯು ಏಕ ಇದ್ವಿದಯತೇ ವಸು ಮರ್ತಾಯ ದಾಶುಷೇ ।
ಈಶಾನೋ ಅಪ್ರತಿಷ್ಕುತ ಇಂದ್ರೋ ಅಂಗ ॥ ೭ ॥

ಪದಪಾಠ.

ಯುಃ । ಏಕಃ । ಇತ್ । ವಿ । ದಯತೇ । ವಸು । ಮರ್ತಾಯ । ದಾಶುಷೇ ।
ಈಶಾನಃ । ಅಪ್ರತಿ । ಸ್ಕುತಃ । ಇಂದ್ರಃ । ಅಂಗ ॥ ೭ ॥

ಸಾಯಣಭಾಷ್ಯ.

ಅಭಿಪ್ಲವಿಕೇಷೂಕ್ಥ್ಯೇಷು ತೃತೀಯಸವನೇ ಬ್ರಾಹ್ಮಣಾಚ್ಛಂಸಿನೋ ಯ ಏಕ ಇದ್ವಿದಯತ ಇತಿ ವೈಕಲ್ಪಿಕಃ ಸ್ತೋತ್ರಿಯಸ್ತೃಚಃ । ಏಹ್ಯೂಷ್ಣಿತಿ ಖಂಡೇ ಸೂತ್ರಿತಂ । ಸಖಾಯ ಆಶಿಷಾಮಹಿ ಯ ಏಕ ಇದ್ವಿದಯತೇ । ಆ. ೭-೮ । ಇತಿ ॥ ಮಹಾವ್ರತೇಽಪಿ ನಿಷ್ಕೇವಲ್ಯ ಔಷ್ಣಿಹತೃಚಾಶೀತಾವಯಂ ತೃಚೋ ವಿನಿಯುಕ್ತಃ । ತಥೈವ ಪಂಚಮಾರಣ್ಯಕೇ ಸೂತ್ರ್ಯತೇ । ಯ ಏಕ ಇದ್ವಿದಯತ ಆ ಯಾಹ್ಯದ್ರಿಭಿಃ ಸುತಂ । ಐ. ಬ್ರಾ. ೫-೨-೫ । ಇತಿ ॥

ಯ ಇಂದ್ರ ಏಕ ಇತ್ ಏಕ ಏವ ದಾಶುಷೇ ಹವಿರ್ದತ್ತವತೇ ಮರ್ತಾಯ ಮನುಷ್ಯಾಯ ಯಜಮಾನಾಯ ವಸು ಧನಂ ವಿದಯತೇ ವಿಶೇಷೇಣ ದದಾತಿ । ಅಂಗೇತಿ ಕ್ಷಿಪ್ರನಾಮ । ಅಪ್ರತಿಷ್ಕುತಃ ಪರೈರಪ್ರತಿಶಬ್ದಿತಃ । ಪ್ರತಿಕೂಲಶಬ್ದರಹಿತ ಇತ್ಯರ್ಥಃ । ಏವಂಭೂತಃ ಸ ಇಂದ್ರಃ ಕ್ಷಿಪ್ರಮಿಶಾನಃ ಸರ್ವಸ್ಯ ಜಗತಃ ಸ್ವಾಮೀ ಭವತಿ ॥ ವಿದಯತೇ । ದಯ ದಾನಗತಿರಕ್ಷಣಹಿಂಸಾದಾನೇಷು । ಶಪಃ ಪಿತ್ತ್ವಾದನುದಾತ್ತತ್ವಂ । ತಿಜಿಶ್ಚ ಲಸಾರ್ವಧಾತುಕಸ್ವರೇಣ ಧಾತುಸ್ವರ ಏವ ಶಿಷ್ಯತೇ । ಯದ್ವೃತ್ತಯೋಗಾದನಿಘಾತಃ । ಅಪ್ರತಿಷ್ಕುತಃ । ಕು ಶಬ್ದೇ । ಪ್ರತಿಕೂಲಂ ಕೂಯತೇ ಶಬ್ದ್ಯತ ಇತಿ ಪ್ರತಿಸ್ಕುತಃ । ಸಾರಸ್ಕರಾದೇರಾಕೃತಿಗಣತ್ವಾತ್ಸುಟ್ । ಸುಷಾಮಾದಿತ್ವಾತ್ಸತ್ವಂ । ನಞ್ಸಮಾಸೇ ವ್ಯಯೇಪೂರ್ವಪದಪ್ರಕೃತಿಸ್ವರತ್ವಂ ॥ ೬ ॥

ಪದಾರ್ಥ ।

ಯಃ—ಯಾವ ಇಂದ್ರನು । **ಏಕ ಇತ್** ಒಬ್ಬನೇ । **ದಾಶುಷೇ**—(ಹವಿಸ್ಸನ್ನು) ತರ್ಪಿಸುವ **ಮರ್ತಾಯ**—ಮಾನವನಿಗೆ । **ವಸು**—ಧನವನ್ನು । **ವಿದಯತೇ**—ವಿಶೇಷವಾಗಿ ಕೊಡುತ್ತಾನೋ । (**ಸಃ**—ಅಂತಹ) । **ಅಪ್ರತಿಷ್ಕುತಃ**—ವಿರೋಧವಚನವಿಲ್ಲದಿರುವ । **ಇಂದ್ರಃ**—ಇಂದ್ರನು । **ಅಂಗ**—ಜಾಗ್ರತೆ । **ಈಶಾನಃ**—(ಸಕಲ ಜಗತ್ತಿಗೂ) ಒಡೆಯನಾಗುತ್ತಾನೆ ।

ತಾತ್ಪರ್ಯ ।

ಹವಿಸ್ಸನ್ನು ತರ್ಪಿಸುವ ಮಾನವನಾದ ಯಜಮಾನನಿಗೆ ವಿಶೇಷವಾಗಿ ಧನವನ್ನು ಅನುಗ್ರಹಿಸುವವನು ಯಾರೊಂದರಿ ಅವನು ವಿರೋಧಿವಚನವಿಲ್ಲದಿರುವವನೂ ಮತ್ತು ಸಕಲ ಜಗತ್ತಿಗೂ ಸ್ವಾಮಿಯಾದವನೂ ಆದ ಇಂದ್ರನೊಬ್ಬನಲ್ಲದೆ ಇನ್ನಾರೂ ಆಗಲಾರರು. ಇದು ಪಂಡಿತ

English Translation

He who alone quickly bestows wealth upon the man who offers him oblations is the undisputed sovereign Indra.

ವಿಶೇಷವಿಷಯಗಳು

ಅಭಿಷ್ಟವಸಡಹಸೆಂಬ ಯಾಗದಲ್ಲಿ ಬ್ರಾಹ್ಮಣಾಚ್ಛಂಸಿಯು ತೃತೀಯಸವನಸಕರ್ಮದಲ್ಲಿ **ಯ ಏಕ ಇದ್ವಿದಯತೇ** ಎಂದು ಮೊದಲಾಗುವ ಮೂರುಋಕ್ಕುಗಳನ್ನು ಸ್ತೋತ್ರಮಂತ್ರಗಳಿಗಾಗಿ ವಿಕಲ್ಪವಾಗಿ ಉಪಯೋಗಿಸ ಬಹುದೆಂದು ಆಶ್ವಲಾಯನಶ್ರೌತಸೂತ್ರದ **ವಿಧೂಷು** ಎಂಬ ಖಂಡದಲ್ಲಿ **ಸಖಾಯ ಆಶಿಷಾಮಹಿ ಯ ಏಕ ಇದ್ವಿದಯತೇ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೭-೭) ಮಹಾವ್ರತದಲ್ಲಿಯೂ ಕೂಡ ನಿಷ್ಕೇವಲ್ಯ ಶಸ್ತ್ರಮಂತ್ರ ಪರಿಸಕಾಲದಲ್ಲಿ ಋತ್ವಿಕ್ಕುಗಳನ್ನಿಸುವ ಮಂತ್ರಗಳಿಗಾಗಿ ಈ ಮೂರು ಋಕ್ಕುಗಳನ್ನು ಪಠಿಸಬೇಕೆಂದು ಐತರೇಯ ಆರಣ್ಯಕದ ಪಂಚಮಾರಣ್ಯಕದಲ್ಲಿ **ಯ ಏಕ ಇದ್ವಿದಧಿತ ಆಯಾಹ್ಯದ್ರಿಭಿಃ** ಎಂಬ ವಾಕ್ಯದಿಂದ ನಿರ್ದಿಷ್ಟವಾಗಿರುವುದು (೫ ಆ ೫ ಖ-೫)

ಅಂಗ— ಈ ಋಕ್ಕಿನಲ್ಲಿಯೂ ಮುಂದಿನ ಎರಡು ಋಕ್ಕುಗಳಲ್ಲಿಯೂ ಕೊನೆಯ ಪಾದದಲ್ಲಿ **ಇಂದ್ರೋ-ಅಂಗ** ಎಂದು ಪಠಿತವಾಗಿರುವುದು. ಅಂಗಶಬ್ದಕ್ಕೆ ಯಾಸ್ಕರು **ಅಂಗೇತಿ ಕ್ಷಿಪ್ರನಾಮ। ಅಂಗಮಂಗನಾದಂಚೆ-ನಾದ್ವಾ**—**ಅಂಗಿತಂ । ತತ್ಕಾಲೇನ ಭವತಿ ಗತಮಿತ್ಯರ್ಥಃ । ಅಂಚೆನಾದ್ವಾ**—**ಅಂಚಿತಮಪಿ ಹಿ ಗತ್ಯರ್ಥ ಏವ-ಧಾತ್ವನ್ಯತ್ವಮರ್ಥ್ಯಕತ್ವಂ** ಎಂದು ಹೇಳಿರುವರು. ಅಂಗಶಬ್ದವೂ ಅಂಗನಾತ್ ಅಂಚನಾತ್ ಎಂಬ ಗತ್ಯರ್ಥವನ್ನು ಸೂಚಿಸುವ ಎರಡು ಶಬ್ದಗಳಲ್ಲಿ ಒಂದರಿಂದ ನಿಷ್ಪನ್ನವಾಗಿರುವುದು. ಎರಡು ಧಾತುಗಳಿಗೂ ಗತ್ಯರ್ಥವೇ ಇರುವುದರಿಂದ ಅಂಗಶಬ್ದಕ್ಕೆ ಗತ್ಯರ್ಥವನ್ನು ಹೇಳಬೇಕು ಧಾನ್ಯಕಾರರು ಈ ಶಬ್ದಕ್ಕೆ **ಕ್ಷಿಪ್ರ** ಬೇಗ ಎಂದು ಅರ್ಥ ವಿವರಣೆ ಮಾಡಿರುವರು ವಾಸ್ತವ್ಯಸಂಹಿತರು ಈ ಶಬ್ದಕ್ಕೆ ಈ ಋಕ್ಕಿನಲ್ಲಿಯೂ ಮುಂದಿನ ಎರಡು ಋಕ್ಕುಗಳಲ್ಲಿಯೂ ನಿರ್ದಿಷ್ಟವಾದ ಯಾವ ಅರ್ಥವನ್ನೂ ಇಲ್ಲದಿರುವುದರಿಂದಲೂ ವಾಕ್ಯಾಂತರಲ್ಲಿ ಇಂದ್ರಶಬ್ದದೊಡನೆ ಪಠಿತವಾಗಿರುವುದರಿಂದಲೂ ಈ ಅಂಗಶಬ್ದವು ಅಶ್ವರ್ಯವಾಚಕವೆಂದು ಭಾವಿಸಿದರು.


ಅಪ್ರತಿಷ್ಕುತಃ— **ಪರೈರಪ್ರತಿಶಬ್ದಿತಃ ಪ್ರತಿಕೂಲಶಬ್ದರಹಿತಃ ।** ಎದುರುಮಾತನಾಡುವವರಿಲ್ಲದವನು. ಇವನು ಹೇಳಿದ್ದಕ್ಕೆ ಪ್ರತಿಯೇ ಇಲ್ಲದ, undisputed, unopposed & c.

ವಾಕ್ಯವಿಶ್ಲೇಷಣೆ

ವಿದಯತೆ— ಸುಷುಪ್ತಗ್ರ ದಾಮುದಾನಗತಿರಕ್ಷಣಹಿಂಸಾದಾನೇಷು ಧಾತು, ಭ್ವಾದಿ. ಆತ್ಮನೇ ಪದ. ಲಕ್ಷಣಿಕರಣಮಾಡಿದರೆ ವಯತೆ ಎಂದಾಗುತ್ತದೆ. ಲಕ್ ಪಿತ್ವಾದುದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತವಾಗುತ್ತದೆ ಪ್ರತ್ಯಯಸ್ವರದಿಂದ ತ ಎಂಬುದು ತಂತೋದಾತ್ತವಾದರೆ **ತಾಸ್ಯನುದಾತ್ತೇತ್** (ಪಾ. ಸೂ ೬-೧-೧೮೬) ಎಂಬುದರಿಂದ ಲಸ್ಯಾ ಸಿಕಸಾರ್ವಧಾತುಕವಾದುದರಿಂದ ಅನುದಾತ್ತವಾಗುತ್ತದೆ. ಆಗ ಧಾತುಸ್ವರವೇ ಪರಿಶಿಷ್ಟವಾಗುವುದರಿಂದ **ಧಾತೋಃ** (ಪಾ ಸೂ. ೬-೧-೧೬೨) ಎಂಬುದರಿಂದ ಅಂತೋದಾತ್ತವಾಗುವುದು. ಉಕಾರೋತ್ತರಾಕಾರ ಉದಾತ್ತನಾದಾಗ ಉದಾತ್ತದ ಪರವಲ್ಲಿರುವ ಯಕಾರೋತ್ತರಾಕಾರವು ಸ್ವರಿತವಾಗುತ್ತದೆ ಸ್ವರಿತದ ಮುಂದಿರುವ ಸ್ವತ್ಯಯವು ಸ್ವರಿತಯಮಾಗುತ್ತದೆ. **ತಿಜ್ಞಿತಿಬಿತ** ಎಂಬುದರಿಂದ ಸರ್ವಾನುದಾತ್ತವು ಪ್ರಾಪ್ತವಾದರೆ **ನಿಘಾತೈರ್ಯದ್ಯದಿ** (ಪಾ ಸೂ ೮-೧-೩೦) ಎಂಬುದರಿಂದ ಯಃ ಎಂದು ಪೂರ್ವದಲ್ಲಿ ಸಂಬಂಧವಿರುವುದರಿಂದ ನಿಘಾತಸ್ವರಿತದಲ್ಲಿ ಇರುತ್ತದೆ.

ಅಪ್ರತಿಷ್ಕುತಃ – ನ ಪ್ರತಿಷ್ಕುತಃ ಅಪ್ರತಿಷ್ಕುತಃ ಪ್ರತಿ ಉಪಸರ್ಗ. ಕುಶಬ್ದೆ. ಅದಾದಿ. ಕರ್ಮಣಿ ಕ್ತಪ್ರತ್ಯಯ ಬಂದಿದೆ. ಕಿತ್ವಾದುದರಿಂದ ಧಾತುವಿಗೆ ಗುಣಬರುವುದಿಲ್ಲ. ಪ್ರತಿಕೂಲಂ ಕೂಯತೆ ಶಬ್ದ್ಯತೆ ಇತಿ ಪ್ರತಿಷ್ಕುತಃ ವಿರುದ್ಧವಾಗಿ ಶಬ್ದಮಾಡಲ್ಪಡುವುದು ಪ್ರತಿಕೂಲಶಬ್ದದಿಂದ ಕೂಡಿರುವುದು. ಅದು ಆಗದಿರುವುದು ಎಂಬರ್ಥದಲ್ಲಿ ಅಪ್ರತಿಷ್ಕುತಃ ಎಂದಾಗಿದೆ. **ಪಾರಸ್ಕರಪ್ರಭೃತೀನಿ ಸಂಜ್ಞಾಯಾಂ** (ಪಾ. ಸೂ ೬-೧-೧೫೭) ಎಂದು ಹೆಸರು ತೋರುವಾಗ ಈ ಗಣದಲ್ಲಿ ನಿರ್ದಿಷ್ಟವಾದ ಶಬ್ದಗಳು ಸುಟ್ ಸಹಿತವಾಗಿ ನಿಪಾತಿತವಾಗುತ್ತದೆ ಇದು ಆಕೃತಿಗಣ. ಅಂದರೆ ಇದರಂತೆ ಪ್ರಯೋಗಕ್ಕಾಗಿ ವಾಸ್ತವ್ಯಂತರದಿಂದ ಬಾರದೆ ಇನ್ನುಳಿದ ಈ ಗಣದಲ್ಲಿ ನಿರ್ದಿಷ್ಟವಾದವುಗಳೆಂದು ಊಹಿಸಬೇಕು. ಹಾಗೆಯೇ ಪ್ರತಿಷ್ಕುತನೆಂಬಲ್ಲಿ ಸುಟ್ ಶ್ರುತವಾಗಿದೆ ಇನಕ್ಕೆ ಬೇರೆ ಯಾವ ಅನುಶಾಸನವೂ ಇಲ್ಲ ಆದುದರಿಂದ ಪಾರಸ್ಕರಗಣದಲ್ಲಿ ಸೇರಿತವಾಗಿದೆ ಎಂದು ತಿಳಿಯಬೇಕು ಮುಂದೆ

ಬುಮು ಆದೇಶವೂ ಪ್ರತ್ಯಯಾವಯವವೂ ಆಲ್ಲದಿರುವುದರಿಂದ **ಆದೇಶಪ್ರತ್ಯಯಯೋಃ** ಎಂಬ ಸೂತ್ರದಿಂದ ಷತ್ವವು ಬರುವುದಿಲ್ಲ. ಆದುದರಿಂದ **ಸುಷಾಮಾದಿಷ್ಷು ಚ** (ಪಾ. ಸೂ. ೮-೩-೯೮) ಎಂಬುದರಿಂದ ಸುಷಾಮಾದಿಯಲ್ಲಿ ಪಾಠವಾಡಿರುವುದರಿಂದ ಷತ್ವಬರುತ್ತದೆ. ನ ಪ್ರತಿಷ್ಕುತಃ ಅಪ್ರತಿಷ್ಕುತಃ ನಞ್‌ಸಮಾಸ. ನಞನ ನಕಾರಕ್ಕೆ **ನಲೋಪೋನಞಃ** (ಪಾ. ಸೂ ೬-೩-೭೩) ಎಂಬುದರಿಂದ ಉತ್ತರಪದ ಪರದಲ್ಲಿರುವಾಗ ಲೋಪ ಬರುತ್ತದೆ. ಅ ಮಾತ್ರ ಉಳಿಯುತ್ತದೆ **ಆನ್ಯಯೆ ನಞಃ ಕು ನಿಪಾತಾನಾಂ** ಎಂಬುದರಿಂದ ಅವ್ಯಯ ಪೂರ್ವಪದಪ್ರಕೃತಿ ಸ್ವರವು ಬರುತ್ತದೆ. ತ ಎಂಬುದು ಉದಾತ್ತವಾಗುತ್ತದೆ ಉದಾತ್ತದ ಪರದಲ್ಲಿರುವುದರಿಂದ ಪ್ರ ಎಂಬಲ್ಲಿರುವ ಅಕಾರವು ಸ್ವರಿತವಾಗುತ್ತದೆ. ಸ್ವರಿತದ ಪರದಲ್ಲಿರುವ ಉಳಿದ ಅನುದಾತ್ತಗಳು ಪ್ರಚಯಗಳಾಗುತ್ತದೆ ॥ ೭ ॥



ಸಂಹಿತಾಪಾಠಃ ।

ಕದಾ ಮರ್ತಮರಾಧಸಂ ಪದಾ ಕ್ಷುಂಪಮಿವ ಸ್ಫುರತ್।
ಕದಾ ನಃ ಶುಶ್ರವದ್ಗಿರ ಇಂದ್ರೋ ಅಂಗ ॥ ೮ ॥

ಪದಪಾಠಃ ।

ಕದಾ । ಮರ್ತಂ । ಅರಾಧಸಂ । ಪದಾ । ಕ್ಷುಂಪಂ । ಇವ । ಸ್ಫುರತ್ ।
ಕದಾ । ನಃ । ಶುಶ್ರವತ್ । ಗಿರಃ । ಇಂದ್ರಃ । ಅಂಗ ॥ ೮ ॥

ಸಾಯಣಭಾಷ್ಯಂ

ಆರಾಧಸಂ ಹವಿರ್ಲಕ್ಷಣೇನ ರಾಧಸಾ ಧನೇನ ರಹಿತಂ । ಅಯೆಷ್ಟಾರಮಿತ್ಯರ್ಥಃ । ಏವಂ ವಿಧಂ ಮರ್ತಂ ಮನುಷ್ಯಮಿಂದ್ರಃ ಪದಾ ಪಾದೇನ ಕ್ಷುಂಪಮಿವಾಹಿಚ್ಛತ್ರುಕಮಿವ ಕದಾ ಸ್ಫುರತ್ । ಸ್ಫುರಿಷ್ಯತಿ । ವಧಿಷ್ಯತಿ । ಯಥಾಹಿಚ್ಛತ್ರುಂ ಮಂಡಲಾಕಾರೇಣ ಶಯಾನಂ ಕಶ್ಚಿದನಾಯಾಸೇನ ಹಂತಿ ಏವಮಿಂದ್ರೋಽಪಿ ಕದಾಽಸ್ಮಚ್ಛತ್ರೂನ್ ಹನಿಷ್ಯತೀತ್ಯೆರ್ಥಃ । ಸ್ಫುರತಿರ್ವಧಕರ್ಮಾ । ಸ್ಫುರತಿ ಸ್ಫುಲತೀತಿ ವಧಕರ್ಮಸು ಪಠಿತತ್ವಾತ್ । ನೋಽಸ್ಮಾಕಂ ಯೆಷ್ಟೄಣಾಂ ಗಿರಃ ಸ್ತುತಿಲಕ್ಷಣಾ ವಾಚ ಇಂದ್ರಃ ಕದಾ

ಕಸ್ಮಿನ್ನಾಲೇ೨ಂಗ ಕ್ಷಿಪ್ರಂ ಶುಶ್ರವತ್ । ಶ್ರೋಷ್ಯತೀತಿ ವಿತರ್ಕ್ಯತೇ । ಅತ್ರ ನಿರುಕ್ತಂ । ಕ್ಷುಂಪಮಹಿಚ್ಛೆ-ತ್ರ್ಯಕಂ ಭವತಿ ಯತ್ ಕ್ಷುಭ್ಯತೇ । ಕದಾ ಮರ್ತಮನಾರಾಧಯಂಶ್ಲೋ ಪಾದೇನ ಕ್ಷುಂಪಮಿವಾವಸ್ಫುರಿಷ್ಯತಿ । ಕದಾ ನಃ ಶ್ರೋಷ್ಯತಿ ಗಿರ ಇಂದ್ರೋ೨ಂಗ । ಆಂಗೇತಿ ಕ್ಷಿಪ್ರನಾಮ । ನಿ. ೫-೧೭ । ಇತಿ ॥ ಪದಾ । ಪಾದ-ಶಬ್ದಸ್ಯ ಪದ್ಭಿನ್ನಿತ್ಯಾದಿನಾ ಪದಾದೇಶಃ । ಊಡಿದಮಿತಿ ವಿಭಕ್ತೇರುದಾತ್ತತ್ವಂ । ಕ್ಷುಂಪಮಿವ । ಕ್ಷುಭ ಸಂಚಲನೇ । ಅಸ್ಮಾತ್ಕರ್ಮಣಿ ಘಞಿ ಬಹುಲವಚನಾದ್ಭಾತೋರ್ನುಮಾಗಮಃ । ವರ್ಣವ್ಯಾಪತ್ತ್ಯಾ ಭಕಾರಸ್ಯ ಪಕಾರಃ । ಸ್ಫುರತ್ । ಸ್ಫುರ ಸಂಚಲನೇ । ಛಂದಸಿ ಲುಙ್ಲಙ್ಲಿಟ ಇತಿ ಲೃಡರ್ಥೇ ಲಙ್ । ಬಹುಲಂ ಛಂದಸ್ಯಮಾಙ್ಯೋಗೇ೨ಪೀತ್ಯಡಭಾವಃ । ಶುಶ್ರವತ್ । ಶ್ರು ಶ್ರವಣೇ । ಲೇಟ್ಯಡಾಗಮಃ । ಬಹುಲಂ ಛಂದಸೀತಿ ಶಪಃ ಶ್ಲುಃ

ಪದಪಾಠ-

ಆರಾಧಸಂ—(ಹವಿಸ್ಸಿನ ರೂಪದ) ಧನರಹಿತನಾದ (ಯಜ್ಞಕರ್ತನಲ್ಲದ) । **ಮರ್ತಂ**—ಮಾನವನನ್ನು । **ಇಂದ್ರಃ**—ಇಂದ್ರನು । **ಪದಾ**—ಕಾಲಿನಿಂದ । **ಕದಾ**—ಯಾವಾಗ । **ಕ್ಷುಂಪಮಿವ**—ಸುರಳಿಸುತ್ತಿಕೊಂಡಿರುವ । ರಾವನ್ನು (ಸುಲಭವಾಗಿ) ಕೊಲ್ಲುವಂತೆ । **ಸ್ಫುರತ್** ಅದುಮಿ ಕೊಲ್ಲುತ್ತಾನೆ ? । **ನಃ**—(ಯಜ್ಞಮಾಡತಕ್ಕ)ನನ್ನು । **ಗಿರಃ**—ಸ್ತುತಿರೂಪಗಳಾದ ವಾಕ್ಯುಗಳನ್ನು । **ಕದಾ**—ಯಾವಾಗ । **ಆಂಗ**—ಚಾಗ್ರತೆಯಾಗಿ । **ಶುಶ್ರವತ್**—ಕೇಳುತ್ತಾನೆ ? ।

ಭಾವಾರ್ಥ

ಸುರಳಿಸುತ್ತಿಕೊಂಡಿರುವ ಹಾವನ್ನು ಅನಾಯಾಸವಾಗಿ ಕೊಲ್ಲುವಂತೆ ಯಜ್ಞಮಾಡಿ ಹವಿಸ್ಸನ್ನರ್ಪಿಸದ ಮಾನವನನ್ನು ಇಂದ್ರನು ಯಾವಾಗ ಅದುಮಿ ಕೊಲ್ಲುತ್ತಾನೆ ? ಯಜ್ಞಕರ್ತರಾದ ನಮ್ಮ ಸ್ತುತಿರೂಪಗಳಾದ ವಾಕ್ಯುಗಳನ್ನು ಇವನು ಯಾವಾಗ ಕೇಳುತ್ತಾನೆ ?

English Translation

When will Indra trample, with his foot unsacrificing mortal like a coiled up snake ? when will Indra hear our praises ?

ಸಂಸ್ಕೃತವ್ಯಾಖ್ಯಾನ

ಆರಾಧಸಂ- ಹವಿರ್ಲಕ್ಷಣೇನ ರಾಧಸಾ ಧನೇನ ರಹಿತಂ ಅಯಜ್ವಾರಮಿತ್ಯರ್ಥಃ । ಹವಿರ್ಲಕ್ಷಣವಾದ ಪೇತವಾದ ಧನದಿಂದ ರಹಿತನಾದವನು ಎಂದರೆ ಯಜ್ಞಮಾಡದಿರುವವನು ಸ್ಕಂದಸ್ವಾಮಿಯು-- **ರಾಧ ಇತಿ ಧನನಾಮ । ಅಧನಂ । ದಾರಿದ್ರ್ಯಾತ್ ಯೆಷ್ಟುಮಸಮರ್ಥಮಿತ್ಯರ್ಥಃ** । ರಾಧವೆಂದರೆ ಧನವು, ಅರಾಧಸಂ ಎಂದರೆ ಧನವಿಲ್ಲದವನನ್ನು, ಅಧವಾ ಧನವಿಲ್ಲದೆ ದರಿದ್ರನಾಗಿರುವುದರಿಂದ ಯಜ್ಞಮಾಡಲಸಮರ್ಥನಾದವನನ್ನು ಎಂದು ಅರ್ಥವಿವರಣೆ ಮಾಡಿರುವರು ಈ ವಿವರಣೆಯು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ ಭಾಷ್ಯಕಾರರ ಸ್ಪಷ್ಟರೇಖೆಯೇ ಸರಿಯಾಗಿರುವುದು.

ಕ್ಷುಂಪಮಿನ—ಕ್ಷುಂಪಮಹಿಚ್ಛತ್ರಕಂ ಭವತಿ। (ನಿ. ೫-೧೭) ಮಂಡಲಾಕಾರವಾಗಿ ಸುತ್ತಿಕೊಂಡಿರುವ ಹಾವು.

ಸ್ಫುರತ್—ಸ್ಫುರತಿರ್ವಧಕರ್ಮಾ। ಸ್ಫುರತಿ ಸ್ಫುಲತಿ (ನಿ. ೩-೧೮) ಕೊಲ್ಲುವನು ಎಂದರ್ಥವು. ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿರುವರು—

ಕದಾ ಮರ್ತಮನಾರಾಧಯಂತಂ ಪಾದೇನ ಷುಂಪಮಿನಾವಸ್ಫುರಿಷ್ಯತಿ ಕದಾನ ಶಯೋತಿ ಚಗಿರ ಇಂದ್ರೋ ಅಂಗ। ಅಂಗೇತಿ ಕ್ಷಿಪ್ರನಾಮ। ಅಂಚಿತಮೇವಾಂಕಿತಂ ಭವತಿ॥ (ನಿ ೩-೧೭)

ಎಂದರೆ— ಸಿಲವೆ ಮೇಲೆ ಸುರಳಿಸುತ್ತಿಕೊಂಡು ಮಲಗಿರುವ ಹಾವನ್ನು ಕಾಲಿನಿಂದ ತುಳಿದು ಕೊಲ್ಲುವಂತೆ ಯಜ್ಞಾದಿಗಳಿಂದ ಇಂದ್ರನನ್ನು ಆರಾಧಿಸದಿರುವ ಮನುಷ್ಯನನ್ನು ಇಂದ್ರನು ಯಾವಾಗ ಕೊಲ್ಲುವನು? ಮತ್ತು ನನ್ನು ಸೋತ್ರರೂಪನಾದನಾಕ್ಯಗಳನ್ನು ಯಾವಾಗ ಕೇಳುವನು? ಅಂಗಶಬ್ದಕ್ಕೆ ಬೇಗನೆ ಎಂದರ್ಥವು.

ವ್ಯಾಕರಣಪ್ರಕ್ರಿಯಾ

ಪದಾ—ಪಾದಶಬ್ದಕ್ಕೆ ತೃತೀಯಾವಿಭಕ್ತಿ ಟಾ ಪರವಾಗಿರುವಾಗ **ಪದ್ಪನ್ನೋಮಾಸ್ ಹೃನ್ನಿಶಸನ್** ಎಂಬುದರಿಂದ ಪಾದಶಬ್ದಕ್ಕೆ ಪದಾದೇಶ. ಪದಾ ಎಂದು ರೂಪನಾಗುತ್ತದೆ. **ಊಡಿದಂಪದಾದಿ** (ಪಾ. ಸೂ. ೬-೧-೬೯) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ಷ್ಟುಂಪಮಿನ— ಷ್ಟುಞ್ ಸಂಚಲನೇ ಧಾತು ಇದಕ್ಕೆ ಕರ್ಮಣಿಯಲ್ಲಿ ಘಞ್ ಪ್ರತ್ಯಯ ಘಞ್ ಪರವಾಗಿ ಬಹುಲಗ್ರಹಣದಿಂದ ಧಾತುವಿಗೆ ಸಮಿತ್ತಿಪ್ಪಿದಿದ್ದರೂ ನುವಾಗಮ ಬರುತ್ತದೆ. ನ್ಯತ್ಯಯದಿಂದ ಧಾತುವಿನ ಭಕಾರಕ್ಕೆ ಪಕಾರಾದೇಶ ಷ್ಟುಂಪಂ ಎಂದು ರೂಪನಾಗುತ್ತದೆ

ಸ್ಫುರತ್—ಸ್ಫುರ ಸಂಚಲನೇ ಧಾತು ಲೃಟಿನ (ಭವಿಷ್ಯತ್) ಅರ್ಥದಲ್ಲಿ **ಭಂದಸಿ ಲುಙ್ಲುಙ್-ಲಿಟಃ** ಎಂಬುದರಿಂದ ಲಙ್ **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ **ತುದಾದಿಭ್ಯಃ ಶಃ** ಎಂಬುದರಿಂದ ಬಂದಿರುವ ಶವಿಕರಣವು **ಸಾರ್ವಧಾತುಕಮಪಿತ್** ಸೂತ್ರದಿಂದ ಜಿತ್ವಾಗುವುದರಿಂದ ಧಾತುವಿಗೆ **ಕ್ಡಿತಿಚ** ಸೂತ್ರದಿಂದ ಗುಣನಿಷೇಧ ಬರುತ್ತದೆ. **ಇತಶ್ಚ** ಸೂತ್ರದಿಂದ ಪ್ರತ್ಯಯದ ಇಕಾರಕ್ಕೆ ಲೋಪ. ಸ್ಫುರತ್ ಎಂದು ರೂಪನಾಗುತ್ತದೆ. **ತಿಜ್ಞಿತಿಜಿಃ** ಸೂತ್ರದಿಂದ ನಿಘಾತಸ್ವರ ಬರುತ್ತದೆ.

ಶುಶ್ರವತ್—ಶ್ರು ಶ್ರವಣೇ ಧಾತು ಲೇಟಿನಲ್ಲಿ ಪ್ರಥಮಪುರುಷ ಏಕವಚನದಲ್ಲಿ ತಿ ಪ್ರತ್ಯಯ. **ಇತಶ್ಚ ಲೋಪಃ ಪರಸ್ಮೈಪದೇಷು** ಎಂಬುದರಿಂದ ಇಕಾರಕ್ಕೆ ಲೋಪ **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲು ವಿಕರಣ ಬರುತ್ತದೆ. **ಲೇಟೋಽಡಾಟೌ** ಸೂತ್ರದಿಂದ ಪ್ರತ್ಯಯಕ್ಕೆ ಅಡಾಗಮ. **ಶ್ಲೌ** ಎಂಬುದರಿಂದ ಧಾತು ದ್ವಿತ್ವ ಅಭ್ಯಾಸಕ್ಕೆ ಸಲಾಪೀಪಪ್ರತ್ಯಯ ನಿಮಿತ್ತವಾಗಿ ಧಾತುವಿಗೆ ಗುಣ. ಅವಾದೇಶ. ಶುಶ್ರವತ್ ಎಂದು ರೂಪನಾಗುತ್ತದೆ ॥೪॥

---

*

ಸಂಹಿತಾಪಾಠ

ಯಶ್ಚಿದ್ಧಿ ತ್ವಾ ಬಹುಭ್ಯ ಆ ಸುತಾವಾಁ ಆವಿವಾಸತಿ।
ಉಗ್ರಂ ತತ್ಪತ್ಯತೇ ಶವ ಇಂದ್ರೋ ಅಂಗ ॥ ೯ ॥

ಪದಪಾಠ

ಯಃ । ಚಿತ್ । ಹಿ । ತ್ವಾ । ಬಹುಽಭ್ಯಃ । ಆ । ಸುತಽವಾನ್ । ಆಽವಿವಾಸತಿ।
ಉಗ್ರಂ । ತತ್ । ಪತ್ಯತೇ । ಶವಃ । ಇಂದ್ರಃ । ಅಂಗ ॥ ೯ ॥

ಸಾಯಣಭಾಷ್ಯ

ಬಹುಭ್ಯೋ ಮನುಷ್ಯೇಭ್ಯಃ ಸಕಾಶಾದ್ಯಶ್ಚಿದ್ಧಿ ಯ ಏವ ಖಲು ಯಜಮಾನಃ ಸುತಾವಾನ್ ಅಭಿಷುತಸೋಮಯುಕ್ತಃ ಸನ್ ಹೇ ಇಂದ್ರ ತ್ವಾ ತ್ವಾಮಾವಿವಾಸತಿ ಪರಿಚರತಿ । ವಿವಾಸತಿಃ ಪರಿಚರಣಕರ್ಮಾ । ತತ್ತಸ್ಮೈ ಯಜಮಾನಾಯ ಯದುಗ್ರಮುದ್ಗೂರ್ಣಂ ಶವೋ ಬಲಮಿಂದ್ರೋಽಂಗ ಕ್ಷಿಪ್ರಂ ಪತ್ಯತೇ । ಪಾತಯತಿ । ಪ್ರಾಪಯತಿ ॥ ತತ್ । ಸುಪಾಂ ಸುಲುಗಿತಿ ಚತುರ್ಥ್ಯಾ ಲುಕ್ । ಪತ್ಯತೇ । ಪತ್ಲೃ ಗತೌ । ಅಸ್ಮಾದಂತರ್ಭಾವಿತಣ್ಯರ್ಥಾದ್ವ್ಯತ್ಯಯೇನ ಶ್ಯನ್ ॥ ೯ ॥

ಪದಾರ್ಥ

ಬಹುಭ್ಯಃ— ಬಹುಸಂಖ್ಯಾತರಾದ ಮಾನವರ ಪೈಕಿ । **ಯಶ್ಚಿದ್ಧಿ**—ಯಾವ ಯಜಮಾನನು । **ಸುತ್ವಾನಾನ್**—ಸೋಮರಸವನ್ನು ಹಿಂಡಿ । **ತ್ವಾ**—ನಿನ್ನನ್ನು । **ಆವಿವಾಸತಿ**—ಉಪಚರಿಸುತ್ತಾನೋ । **ತತ್**—ಆವನಿಗೆ । **ಉಗ್ರಂ**—ದುರ್ದಮ್ಯವಾದ (ಭಯಂಕರವಾದ, ಬಹಳ ಹೆಚ್ಚಾದ) । **ಶವಃ**—ಬಲವನ್ನು । **ಇಂದ್ರಃ**—ಇಂದ್ರನು । **ಪತ್ಯತೇ**—ಹೊಂದಿಸುತ್ತಾನೆ ।

ಭಾವಾರ್ಥ

ಅನೇಕ ಮಾನವರ ಪೈಕಿ ಯಾವ ಮಾನವನು ಯಜ್ಞದಲ್ಲಿ ಸೋಮರಸವನ್ನು ಹಿಂಡಿ ಇಂದ್ರನನ್ನು ಉಪಚರಿಸುತ್ತಾನೆಯೋ ಅಂತಪವನಿಗೆ ಇಂದ್ರನು ದುರ್ದಮ್ಯವಾದ (ಭಯಂಕರವಾದ) ಬಲವನ್ನುಂಟು ಮಾಡುತ್ತಾನೆ.

English Translation

Indra grants formidable strength to him who worships him with prepared Soma-libations.

॥ ವಿಶೇಷವಿಷಯಗಳು ॥

ಆವಿವಾಸತಿ – ಪರಿಚರತಿ । ಏವಾಸತಿಃ ಪರಿಚರಣಕರ್ಮಾ । (ನಿ. ೩-೧೩) ಉಪಚರಿಸುತ್ತಾನೆ, ಸೇವೆ ಮಾಡುತ್ತಾನೆ

ಉಗ್ರಂ—ಉದ್ಗೂರ್ಣಂ । ಭಯಂಕರವಾದ ಎಂದರೆ ಅತಿ ಹೆಚ್ಚಾದ.

ಪತ್ಯತೇ—ಪತ್ಲೃಗತ್ ಪ್ರಾತಯತಿ ಪ್ರಾಪಯತಿ । ಹೊಂದಿಸುತ್ತಾನೆ ಎಂದರೆ ಕೊಡುತ್ತಾನೆ.

ವ್ಯಾಕರಣಪ್ರಕ್ರಿಯಾ

ತ್ವಾ—ಯುಷ್ಮಚ್ಛಬ್ದಕ್ಕೆ ದ್ವಿತೀಯಾ ಏಕವಚನದಲ್ಲಿ **ತ್ವಾಮೌ ದ್ವಿತೀಯಾಯಾಃ** (೮-೧-೨೩) ಎಂಬುದರಿಂದ ವಿಭಕ್ತ್ಯಂತಕ್ಕೆ ತ್ವಾ ಎಂಬ ಅನುದಾತ್ತವಾದ ಆದೇಶ.

ಸುತಾನಾನ್—**ದೀರ್ಘಾದಟಿ ಸಮಾನಪಾದೇ** (ಪಾ. ಸೂ ೮-೩-೯) ಎಂಬುದರಿಂದ ಅಕಾರಪರದಲ್ಲಿರುವ ನಕಾರದಿಂದ ನಕಾರಕ್ಕೆ ರುತ್ವ. **ಆತೋ೭ಟಿ ನಿತ್ಯಂ** (ಪಾ ಸೂ. ೮-೩-೩) ಸೂತ್ರದಿಂದ ರುವಿನ ಪೂರ್ವದ ಆಕಾರಕ್ಕೆ ನಿತ್ಯ ಸಾನಿಕತ್ವವು ಬರುತ್ತದೆ

ಆವಿವಾಸತಿ—ವಿವಾಸ ಚರಪರಿಚರಣಯೋಃ ಧಾತು. ಲಟ್ ಪ್ರಥಮಪುರುಷ ಏಕವಚನ ರೂಪ. ಯಃ ಎಂದು ಹಿಂದೆ ಇರುವುದರಿಂದ ಸಿಘಾತಸ್ವರ ಬರುವುದಿಲ್ಲ. ಶಪ್ ಅನುದಾತ್ತ ಪರದಲ್ಲಿರುವ ಲಸಾರ್ವಧಾತುಕವೂ **ತಾಸ್ಯನುದಾತ್ತೇತ್** ಸೂತ್ರದಿಂದ ಅನುದಾತ್ತ. ಧಾತುಸ್ವರ ಉಳಿಯುತ್ತದೆ.

ತತ್—ಶದ್ ಶಬ್ದಕ್ಕೆ ಪಂಚಮಿಯಾ ಜೀ ಪರವಾದಾಗ **ಸುಪಾಂ ಸುಲುಕ್** ಸೂತ್ರದಿಂದ ವಿಭಕ್ತಿಗೆ ಲುಕ್ ಬರುತ್ತದೆ

ಪತ್ಯತೇ—ಪತ್ಲೃ ಗತೌ ಧಾತು ಧಾತ್ವರ್ಥದಲ್ಲಿ ಣಿಜರ್ಥವೂ ಸೇರಿರುವುದರಿಂದ ಅಂತರ್ಭಾವಿತ ಣ್ಯರ್ಥಕವಾದ ಈ ಧಾತುವಿನ ಮೇಲೆ ಲಟ್ ಪ್ರಥಮಪುರುಷೈಕವಚನದಲ್ಲಿ ತಪ್ರತ್ಯಯ. **ಟಿತ ಆತ್ಮನೇ ಪದಾನಾಂ** ಸೂತ್ರದಿಂದ ಅದಕ್ಕೆ ನಿತ್ಸ. **ವ್ಯತ್ಯಯೋ೭ಬಹುಲಂ** ಎಂಬುದರಿಂದ ಶ್ಯನ್ ವಿಕರಣ ಪತ್ಯತೇ ಎಂದು ರೂಪವಾಗುತ್ತದೆ **ತಿಜ್ಜಿತಿಜೀ** ಎಂಬುದರಿಂದ ಸರ್ವಾನುದಾತ್ತವಾಗುತ್ತದೆ

॥ संहितापाठः ॥

स्वादोरित्था विषूवतो मध्वः पिबन्ति गौर्यः ।
या इन्द्रेण सयावरीर्वृष्णा मदन्ति शोभसे
वस्वीरनु स्वराज्यं ॥ ८० ॥

॥ पदपाठः ॥

स्वादोः । इत्था । विषुऽवतः । मध्वः । पिबन्ति । गौर्यः ।
याः । इन्द्रेण । सऽयावरीः । वृष्णा । मदन्ति । शोभसे ।
वस्वीः । अनु । स्वऽराज्यं ॥ ८० ॥

सायणभाष्यं ।

चातुर्विंशिकेऽहनि माध्यंदिने सवनेऽच्छावाकस्य स्वादोरित्था विषूवत इति वैकल्पिकः स्तोत्रियस्त्र्यृचः । होत्रकाणामिति पिण्डे सूत्रितं । यः सत्राहा विचर्षणिः स्वादोरित्था विषूवतः । आ. ८-५ ॥ पृष्ठ्यस्य पंचमेऽहनि निष्केवल्येऽस्यैयं तृचोऽनुरूपः । स्तोत्रमे वर्धमान इति पिण्डे सूत्रितं । स्वादोरित्था विषूवते उप नो हरिभिः सुतं । आ. ८-८१ । इति ॥

स्वादोः स्वादुभूतस्य रसयुक्तस्येत्था विषूवत इत्थमनेन प्रकारेण सर्वयज्ञेषु व्याप्तियुक्तस्य मध्वो मधुररसस्य सोमस्य । क्रियाग्रहणं कर्तव्यमिति कर्मणः संप्रदानत्वाच्चतुर्थ्यर्थे षष्ठी । एवंविधं सोमं गौर्यो गौरवर्णा गावः पिबन्ति । याः गावः शोभसे शोभार्थं वृष्णा कामाभिवर्षकेणेन्द्रेण सयावरीः सह यान्त्यो गच्छन्त्यः सत्यो मदन्ति हृष्टा भवन्ति । ता इन्द्रपीतस्य सोमस्य शेषं पिबन्तीत्यर्थः । वस्वीः धनयोग्याः प्रदानेन निवासकारिण्यस्ता गावः स्वराज्यं स्वस्य स्वकीयस्येन्द्रस्य यदाधिपत्यं राजत्वं तदनुलक्ष्यावस्थिता इति शेषः । विषूवतः । विष्लृ व्याप्तौ । आसादाद्यादिकः कुप्रत्ययः । ततो मतुप् । हृस्वेनुडाद्यं मतुबिति

ಮತುಪ ಉದಾತ್ತತ್ವಂ । ಅನ್ಯೇಷಾಮಪಿ ದೃಶ್ಯತ ಇತಿ ಸಂಹಿತಾಯಾಂ ದೀರ್ಘಃ । ವ್ಯತ್ಯಯೇನ ಮತೋರ್ವತ್ವಂ ।ಮಧ್ವಃ। ಜಸಾದಿಷು ಚ್ಛಂದಸಿ ನಾವಚನಮಿತಿ ಘೇರ್ಙಿತೀತಿ ಗುಣಾಭಾವೇ ಯಣಾದೇಶಃ। ಗೌರ್ಯಃ । ಷಿದ್ಭ್ಯಾದಿಭ್ಯಶ್ಚೇತಿ ಙೀಷ್ । ಜಸಿ ಯಣಾದೇಶ ಉದಾತ್ತೇ ಸ್ವರಿತಯೋರ್ಯಣ ಇತಿ ಪರಸ್ಯಾನುದಾತ್ತಸ್ಯ ಸ್ವರಿತತ್ವಂ । ಸಯಾವರೀಃ ಯಾ ಪ್ರಾಪಣೇ । ಆತೋ ಮನಿನ್ನಿತಿ ವನಿಪ್ । ವನೋರಚೇತಿ ಙೀಬ್ರೀಫೌ । ಮದಂತಿ । ಮದೀ ಹರ್ಷೇ। ಶ್ಯನಿ ಪ್ರಾಪ್ತೇ ವ್ಯತ್ಯಯೇನ ಶಪ್ । ವಸ್ತೀಃ ವಸ ನಿವಾಸೇ । ಶ್ಯಾಶ್ಯೈಸ್ನಿಹೀತ್ಯಾದಿನಾ ವಸೇರುಪ್ರತ್ಯಯಃ । ಧಾನ್ಯೇ ನಿದಿತ್ಯನುವೃತ್ತೇರಾದ್ಯುದಾತ್ತತ್ವಂ । ವೋತೋ ಗುಣವಚನಾದಿತ್ಯತ್ರ ಗುಣವಚನಾನ್ನೀಬಾದ್ಯುದಾತ್ತಾರ್ಥಂ । ಕಾ. ೪-೧-೪೪-೧ । ಇತಿ ವಚನಾದ್ವಸುಶಬ್ದಾನ್ನೀಪಿ ಯಣಾದೇಶಃ । ಜಸಿ ವಾ ಛಂದಸೀತಿ ಪೂರ್ವಸವರ್ಣದೀರ್ಘತ್ವಂ । ಸ್ವಸ್ಯ ರಾಜ್ಯಂ ಸ್ವರಾಜ್ಯಂ । ಅಕರ್ಮಧಾರಯೇ ರಾಜ್ಯಂ । ಪಾ. ೬-೨-೧೩೦ । ಇತ್ಯುತ್ತರಪದಾದ್ಯುದಾತ್ತತ್ವಂ ॥ ೬ ॥

ಪ್ರತಿಪದಾರ್ಥ

ಸ್ವಾದೋಃ—(ಸಿಹಿ) ರಸಭರಿತವಾಗಿಯೂ । **ಇತ್ಥಾ**—ಈ ರೀತಿ । **ವಿಷೂವತಃ**—(ಎಲ್ಲಾ ಯಜ್ಞಗಳಲ್ಲಿಯೂ (ವ್ಯಾಪಿಸಿರುವ, ಸಿದ್ಧಪಡಿಸುವ) । **ಮಧ್ವಃ**—ಮಧುರವಾದ ಸೋಮರಸವನ್ನು । **ಗೌರ್ಯಃ**—ಶ್ವೇತ ವರ್ಣದ ಗೋವುಗಳು । **ಸಿಬಂತಿ**—ಕುಡಿಯುತ್ತವೆ. । **ಯಾಃ**—ಯಾವ ಅದೇ ಗೋವುಗಳು । **ಶೋಭಸೇ**—(ತಮ್ಮ) ಕಾಂತಿಗಾಗಿ । **ವೃಷ್ಣಾ**—(ಇಷ್ಟಾರ್ಥಗಳನ್ನು) ಸುರಿಸತಕ್ಕ । **ಇಂದ್ರೇಣ ಸಯಾವರೀಃ**—ಇಂದ್ರ ಸೊಡನೆ (ಹಿಂಬಾಲಿಸಿ) ಹೋಗುತ್ತ । **ಮದಂತಿ**—ತೃಪ್ತಿಯನ್ನು ಹೊಂದುತ್ತವೆ (ಅವನು ಕುಡಿದ ಶೇಷವನ್ನು ಕುಡಿದು ತೃಪ್ತಿಹೊಂದುತ್ತವೆ) । **ವಸ್ತೀಃ**—(ಹಾಲು ಕೊಡುವುದರಿಂದ) ತಮ್ಮ ಕೊಟ್ಟಿಗೆಗಳಲ್ಲಿ ವಾಸಮಾಡುತ್ತ **ಸ್ವರಾಜ್ಯಂ ಅನು**—(ತಮ್ಮ ಸನ್ನಿಧಾನ ಇಂದ್ರನ) ಪ್ರಭುತ್ವವನ್ನು (ಗಮನಿಸುತ್ತಾ ಸಂತಸ) ।

॥ ಭಾವಾರ್ಥ ॥

ರಸಭರಿತವಾಗಿಯೂ, ಒಂದೇರೀತಿ ಎಲ್ಲಾ ಯಜ್ಞಗಳಲ್ಲಿಯೂ ವ್ಯಾಪಿಸಿರುವ (ಸಿದ್ಧಪಡಿಸುವ) ಮಧುರವಾದ ಸೋಮರಸವನ್ನು ಶ್ವೇತವರ್ಣದ ಗೋವುಗಳು ಕುಡಿಯುತ್ತವೆ. ತಮಗೆ ಕಾಂತಿ ಬರುವುದಕ್ಕಾಗಿ ಅವುಗಳ ಇಷ್ಟಾರ್ಥಗಳನ್ನು ನೆರವೇರಿಸುವ ಇಂದ್ರನನ್ನೇ ಹಿಂಬಾಲಿಸಿ ಅವನು ಕುಡಿದುಳಿದ ಸೋಮರಸವನ್ನು ಕುಡಿದು ತೃಪ್ತಿಯನ್ನು ಹೊಂದುತ್ತವೆ ಮತ್ತು ಹಾಲು ಕೊಡುತ್ತಾ ತಮ್ಮ ಕೊಟ್ಟಿಗೆಗಳಲ್ಲಿ ವಾಸಮಾಡಿಕೊಂಡು ತಮ್ಮ ಯಜಮಾನನಾದ ಇಂದ್ರನ ಪ್ರಭುತ್ವವನ್ನು ಗಮನಿಸುತ್ತಾ ಸಂತಸ.

English Translation

The white cows drink of the sweet Soma-juice prepared in every sacrifice ; the cows that go with bountiful Indra appear beautiful and are beneficient in accordance with his sovereignty

॥ ವಿಶೇಷನಿಷಯಗಳು ॥

ಇಪ್ಪತ್ತುನಾಲ್ಕುದಿನ ಮಾಡುವ ಯಾಗದ ಕೊನೆಯದಿನ ಮಾಧ್ಯಂದಿನಸವನದಲ್ಲಿ ಅಚ್ಛಾವಾಕನೆಂಬ ಋತ್ವಿಜನು **ಸಾದೋರಿತ್ಥಾ ವಿಷೂವತಃ** ಎಂಬ ತೃಚವನ್ನು (ಮೂರು ಋಕ್ಕುಗಳನ್ನು) ವೈಕಲ್ಪಿಕವಾಗಿ ಪಠಿಸಬಹುದೆಂದು ಆಶ್ವಲಾಯನಶ್ರೌತಸೂತ್ರದ **ಹೋತ್ರಕಾಣಾಂ** ಎಂಬ ಖಂಡದಲ್ಲಿ **ಯಃ ಸತ್ರಾಹಾ ವಿಚರ್ಷಣಿಃ ಸಾದೋರಿತ್ಥಾ ವಿಷೂವತಃ** ಎಂಬ ಸೂತ್ರದಿಂದ ವಿವೃತವಾಗಿರುವುದು. (೪.೭-೪) ಮತ್ತು ಪೃಷ್ಠ್ಯಯಾಗದ ಐದನೆಯ ದಿವಸದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಪಠನಕ್ಕಾಗಿ ಈ ತೃಚವ (ಮೂರು ಋಕ್ಕುಗಳ) ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಸ್ತೋಮೇ ವರ್ಧಮಾನೇ** ಎಂಬ ಖಂಡದ **ಸ್ಯಾದೋರಿತ್ಥಾ ವಿಷೂವತ ಉಪ ನೋ ಪರಿಭಿಃ ಸುತಂ** ಎಂಬ ಸೂತ್ರದಲ್ಲಿ ವಿವೃತವಾಗಿರುವುದು. (೪ -೭-೧೨)

ವಿಷೂವತಃ—ವಿಷ್ವ್ಯ ವ್ಯಾಪ್ತೌ । **ಸರ್ವಯಜ್ಞೇಷು ವ್ಯಾಪ್ತಿಯುಕ್ತಸ್ಯ** । ಎಲ್ಲಾ ಯಜ್ಞಗಳಲ್ಲಿಯೂ ಸ್ಯಾಪಿಸಿರುವ ಎಂದರೆ ಎಲ್ಲಾ ಯಜ್ಞಗಳಲ್ಲಿಯೂ ದೇವತೆಗಳಿಗೆ ಅರ್ಪಿಸುವುದಕ್ಕಾಗಿ ಸಿದ್ಧಪಡಿಸುವ

ಮಧ್ವಃ—ಸಿಹಿಯಾದ ಸೋಮರಸದ ಭಾಗವನ್ನು. ಇಲ್ಲಿ ಸೋಮಸ್ಯ ಎಂಬ ಶಬ್ದವಿಲ್ಲದಿದ್ದರೂ ಮಧ್ವಃ ಎಂಬ ಶಬ್ದಕ್ಕೇ ರುಚಿಕರವಾದ ಸೋಮರಸದ ಎಂಬರ್ಥವನ್ನು ಹೇಳಬೇಕು. ಸೋಮರಸವೆಂಬರ್ಥವನ್ನು ಸೂಚಿಸುವುದಕ್ಕೆ ಮಧುಶಬ್ದವನ್ನು ಪಾತ್ರ ಉಪಯೋಗಿಸುವುದು ಋಗ್ವೇದದಲ್ಲಿ ರೂಢಿಯಾಗಿರುವುದು.

ಗೌರ್ಯಃ—**ಗೌರವರ್ಣಾ ಗಾವಃ** । ಬೆಳ್ಳಗಿರುವ ಹಸುಗಳು. ಅಥವಾ ಶುಭ್ರವರ್ಣದ ಗೋವುಗಳು.

ಸಯಾವರೀಃ—**ಸಹಗಚ್ಛಂತ್ಯಃ** । ಇಂದ್ರನೊಡನೆ ಹೋಗುವ, ಇಂದ್ರನೊಡನಿರುವ.

ವೃಷ್ಣಾ—**ಕಾಮಾಭಿವರ್ಷಕೇಣ** । ಅಭೀಷ್ಟಾರ್ಥಗಳನ್ನು ಸುರಿಸುವ ಇಂದ್ರನಿಂದ.

ವಸ್ವೀಃ—**ವಸ ನಿವಾಸೇ** । ವಾಸಮಾಡುತ್ತಿರುವ ಎಂದರೆ ಕೊಟ್ಟಿಗೆಗಳಲ್ಲಿ ಇರುವ ಗೋವುಗಳು **ಪಯಃಪ್ರದಾನೇನ ನಿವಾಸಕಾರಿಣ್ಯಃ** —ಹಾಲನ್ನು ಕೊಡುವುದರಿಂದ ವಾಸಮಾಡುವುದಕ್ಕೆ ಅನುಕೂಲವನ್ನು ಉಂಟುಮಾಡುವುವು. ಆದುದರಿಂದ ಗೋವುಗಳಿಗೆ ವಸ್ವೀಃ ಎಂದು ಹೆಸರು.

ಸ್ವರಾಜ್ಯಂ— ಇಲ್ಲಿ ಸ್ವರಾಜ್ಯವೆಂದರೆ ಏನೆಂಬುದನ್ನು ಭಾಷ್ಯಕಾರರು ಸ್ಪಷ್ಟವಾಗಿ ನಿವರಿಸಿಲ್ಲ. ಹಾಲನ್ನು ಕೊಡುವ ಹಸುಗಳು ನಿವಾಸಸ್ಥಾನಕ್ಕೆ ಅನುಕೂಲವನ್ನುಂಟುಮಾಡುವುವು—These cows, by giving milk are the means of providing habitation—ಎಂದು ಅರ್ಥವಿವರಣೆ ಮಾಡಿರುವರು. ಇಂದ್ರನ ಆಧಿಪತ್ಯದಲ್ಲಿ ಹಾಲನ್ನು ಕೊಡುವ ಗೋವುಗಳು ಯಥೇಚ್ಛವಾಗಿರುವುದರಿಂದ ಜನಗಳಿಗೆ ವಾಸಮಾಡಲು ಅನುಕೂಲವಾಗಿರುವುದು. ಇಂತಹ ಸಂಪತ್ಸಮೃದ್ಧಿಯಾದ ಸ್ವರಾಜ್ಯವು ಇಂದ್ರನ ಪೋಷಣೆಯಲ್ಲಿರುವುದು ಎಂಬ ಅಭಿಪ್ರಾಯವಿರಬಹುದು ಈ ಋಕ್ಕಿನ ಮತ್ತು ಮುಂದಿನ ಎರಡು ಋಕ್ಕುಗಳ ಕೊನೆಯಲ್ಲಿ **ವಸ್ವೀರನು ಸ್ವರಾಜ್ಯಂ** ಎಂಬ ಶಬ್ದಗಳು ಸ್ವನಃ ಪುನಃ ವರಿತವಾಗಿವೆ. ಈ ಶಬ್ದಗಳ ಪ್ರಯೋಗದಲ್ಲಿ ಋಷಿಯ ಆಶಯ (ಅಭಿಪ್ರಾಯ) ವೇನೆಂಬುದು ಸ್ಪಷ್ಟವಾಗಿಲ್ಲ

॥ ವ್ಯಾಕರಣಪ್ರಕ್ರಿಯಾ ॥

ವಿಷೂವತಃ ವಿಷ್ಲ್ಯ ವ್ಯಾಪ್ತೌ ಧಾತು. ಇದಕ್ಕೆ ಉಣಾದಿ ಕುಪ್ರತ್ಯಯ ಕಿತ್ತಾದುದರಿಂದ ಲಘೂಪಧ ಗುಣ ಬರುವುದಿಲ್ಲ. ವಿಷುಶಬ್ದವಾಗುತ್ತದೆ. **ವಿಷುಃ ಅಸ್ಯ ಅಸ್ತಿ ಇತಿ ವಿಷೂವತ್. ತದಸ್ಯಾಸ್ತ್ಯಸ್ಮಿನ್** ಸೂತ್ರದಿಂದ ಮತುಪ್. ವ್ಯತ್ಯಯದಿಂದ ನಿಮಿತ್ತವಿಲ್ಲದಿದ್ದರೂ ಮತುಪಿನ ಮಕಾರಕ್ಕೆ ವಕಾರಾದೇಶ. **ಹ್ರಸ್ವನುಡ್ಭ್ಯಾಂ ಮತುಪ್** (ಪಾ ಸೂ ೬-೧-೧೭೬) ಎಂಬುದರಿಂದ ಹ್ರಸ್ವದ ಪರದಲ್ಲಿರುವುದರಿಂದ ನುತುಪಿಗೆ ಉದಾತ್ತರಸ್ವರ ಬರುತ್ತದೆ. **ಅನ್ಯೇಷಾಮಪಿ ದೃಶ್ಯತೇ** (ಪಾ. ಸೂ. ೬-೩-೧೩೭) ಎಂಬುದರಿಂದ ಸಂಹಿತಾದಲ್ಲಿ ಮತುಪಿನ ಪೂರ್ವಕ್ಕೆ ದೀರ್ಘ ಬರುತ್ತದೆ. ಪಷ್ಠೀ ಏಕವಚನದಲ್ಲಿ **ವಿಷೂವತಃ** ಎಂದು ರೂಪವಾಗುತ್ತದೆ

ಮಧ್ಯೇ—ಮಧ್ಯ+ಙಿ ಎಂದು ಸಪ್ತಮೀ ಏಕವಚನ ಪರದಲ್ಲಿರುವಾಗ **ಜಸ್ಯಾದಿಷು ಛಂದಸಿ ವಾ ವಚನಮ್** ಎಂಬ ವಚನದಿಂದ **ಘೇರ್ಙಿತಿ** ಸೂತ್ರದಿಂದ ಗುಣ ಬಾರದಿರುವುದರಿಂದ **ಇಕೋ ಯಣಚಿ** ಸೂತ್ರದಿಂದ ಯಣಾದೇಶ. ಪ್ರತ್ಯಯಸ್ವರಕ್ಕೆ ಋತ್ವವಿಸರ್ಗಗಳು ಬಂದಾಗ ಮಧ್ಯೇ ಎಂದು ರೂಪವಾಗುತ್ತದೆ. **ಕ್ರಿಯಾಗ್ರಹಣಂ ಕರ್ತವ್ಯಂ** ಎಂದು ಭಾಷ್ಯದಲ್ಲಿ ಹೇಳಿರುವುದರಿಂದ ದಾ ಧಾತು ಇಲ್ಲದಿದ್ದರೂ ಇಲ್ಲಿ ಕರ್ಮಕ್ಕೆ ಸಂಪ್ರದಾನ ಸಂಜ್ಞೆ ಬರುವುದರಿಂದ ಚತುರ್ಥ್ಯರ್ಥದಲ್ಲಿ ಷಷ್ಠೀ ಬರುತ್ತದೆ.

ಪಿಬಂತಿ— ಪಾ ಪಾನೇ ಧಾತು. ಲಟ್ ಪ್ರಥಮಪುರುಷ ಬಹುವಚನದಲ್ಲಿ **ಪಾಶ್ಯಾಧ್ಮಾಸ್ಥಾ** ಸೂತ್ರದಿಂದ ಪಿಬಾದೇಶ. ಝಿಗೆ ಅಂತಾದೇಶ. ಅತಿಜಿಂತರ ಪರದಲ್ಲಿರುವುದರಿಂದ ನಿಘಾತಸ್ವರ.

ಗೌರ್ಯಃ—ಷಿತ್ ಡ್ಗೌರಾದಿಭ್ಯಶ್ಚ (ಪಾ ಸೂ. ೪-೧-೪೧) ಎಂಬುದರಿಂದ ಸ್ತ್ರೀತ್ವದಲ್ಲಿ ಜೀಷ್ ಪ್ರತ್ಯಯ **ಯಸ್ಯೇತಿ ಚ** ಸೂತ್ರದಿಂದ ಈಕಾರಲೋಪ. ಗೌರೀ+ಜಸ್ ಎಂದಿರುವಾಗ **ದೀರ್ಘಾಜ್ಜಸಿ ಚ** ಎಂಬುದರಿಂದ ಪೂರ್ವಸವರ್ಣದೀರ್ಘವು ನಿಷಿದ್ಧವಾಗುವುದರಿಂದ ಯಣಾದೇಶ. ಆಗ ಉದಾತ್ತವಾದ ಈಕಾರಕ್ಕೆ ಯಣಾದೇಶ ಬರುವುದರಿಂದ **ಉದಾತ್ತಸ್ವರಿತಯೋರ್ಯಣಃ ಸ್ವರಿತೋಽನುದಾತ್ತಸ್ಯ** ಎಂಬುದರಿಂದ ಪರದಲ್ಲಿರುವ ಅನುದಾತ್ತವಾದ ವಿಭಕ್ತಿಯ ಅಕಾರವು ಸ್ವರಿತವಾಗುತ್ತದೆ

ಸಯಾವರೀಃ— ಯಾ ವ್ರಾ ಗತೌ ಧಾತು **ಆತೋ ಮನಿನ್** (ಪಾ ಸೂ. ೩-೨-೭೪) ಎಂಬುದರಿಂದ ಮನಿಪ್ ಪ್ರತ್ಯಯ. ಸ್ತ್ರೀತ್ವದಲ್ಲಿ **ವನೋರ ಚ** ಎಂಬುದರಿಂದ ಜೀಪ್ ಪ್ರತ್ಯಯ ನಕಾರಕ್ಕೆ ರೇಫಾದೇಶ. ಸಪ ಯಾಂತ್ಯಃ ಸಯಾವರ್ಯಃ ಜಸಿನಲ್ಲಿ **ಸುಪಾಂ ಸುಲುಕ್** ಸೂತ್ರದಿಂದ ಪೂರ್ವಸವರ್ಣದೀರ್ಘ ವನಿಪ್ ನಿತ್ತಾದುದರಿಂದ ಅನುವಾತ್ತ. ಆಗ ಧಾತುಸ್ವರ ಉಳಿಯುತ್ತದೆ ಸಮಾಸದಲ್ಲಿ **ಗತಿಕಾರಕೋಪಪದಾತ್ಕೃತ್** ಸೂತ್ರದಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಮದಂತಿ—ಮದೀ ಹರ್ಷೇ ಧಾತು ಏವಾದಿ ಲಟ್ ಪ್ರಥಮಪುರುಷ ಬಹುವಚನ ಪರವಾದಾಗ **ಸ್ವತ್ಯಾದೋ ಬಹುಲಂ** ಎಂಬುದರಿಂದ ಶ್ಯನಿಗೆ ಶಪ್ ಬರುತ್ತದೆ ಯಾಃ ಎಂದು ಹಿಂದೆ ಯಚ್ಛಬ್ದಸಂಬಂಧವಿರುವುದರಿಂದ **ಯೆದ್ವೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಧಾತುಸ್ವರದಿಂದ ತಿಙ್ಗು ದಾತ್ತವಾಗುತ್ತದೆ

ಶೋಭಸೇ—ಶುಭ ದೀಪ್ತೌ ಧಾತು. ತುಮನರ್ಥದಲ್ಲಿ **ತುಮರ್ಥೇ ಸೇನಸೇ**—(ಪಾ. ೩-೪-೯) ಎಂಬುದರಿಂದ ಪ್ರತ್ಯಯಸ್ವರದಿಂದ ಮಧ್ಯೋದಾತ್ತವಾಗುತ್ತದೆ.

ವಸ್ವೀಃ—ವಸ ನಿವಾಸೇ ಧಾತು. **ಶ್ಯ-ಸ್ನ-ಸ್ನು-ಸ್ನಿ-ಹಿ** (ಉ. ಸೂ. ೧-೧೦) ಎಂಬುದರಿಂದ ಉ ಪ್ರತ್ಯಯ. **ಧಾನ್ಯೇನಿತ್** ಎಂಬುದರಿಂದ ನಿತ್ ಎಂದು ಆನುವೃತ್ತವಾಗುತ್ತದೆ. ಆದುದರಿಂದ ವಸುಶಬ್ದವು ಆದ್ಯುದಾತ್ತವಾಗುತ್ತದೆ. ಸ್ತ್ರೀತ್ವದಲ್ಲಿ **ವೋತೋ ಗುಣವಚನಾತ್** ಎಂಬಲ್ಲಿ (ಗುಣವಚನದ ಮೇಲೆ ಜೀಪ್ ಆದ್ಯುದಾತ್ತವಾಗಲು ಹೇಳಬೇಕು) **ಗುಣವಚನಾತ್ ಜೀಪ್ ಆದ್ಯುದಾತ್ತಾರ್ಥಮ್** (ಕಾ. ೪-೧-೪೪) ಎಂಬ ವಚನದಿಂದ ಜೀಪ್ ಬಂದು ಆದ್ಯುದಾತ್ತವಾಗುತ್ತದೆ. ವಸ್ವೀ+ಜಸ್ ಎಂದಿರುವಾಗ **ನಾಭಂದಸಿ** ಎಂಬುದರಿಂದ ಪೂರ್ವಸವರ್ಣ ಬರುತ್ತದೆ

ಸ್ವರಾಜ್ಯಮ್—ಸ್ವಸ್ಯ ರಾಜ್ಯಂ ಸ್ವರಾಜ್ಯಂ. **ಆಕರ್ಮಧಾರಯೇ ರಾಜ್ಯಂ** (ಪಾ. ಸೂ. ೬-೨-೧೩೦) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ. ॥ ೧೦ ॥

॥ ಸಂಹಿತಾಪಾಠಃ ॥

ತಾ ಅ॑ಸ್ಯ ಪೃಶನಾ॑ಯುವಃ ಸೋ॑ಮಂ ಶ್ರೀಣಂತಿ ಪೃ॑ಶ್ನಯಃ ।
ಪ್ರಿ॒ಯಾ ಇಂ॑ದ್ರ॒ಸ್ಯ॒ ಧೇ॒ನವೋ॑ ವ॒ಜ್ರಂ ಹಿ॑ನ್ವಂತಿ॒ ಸಾಯ॑ಕಂ
ವಸ್ವೀ॑ರನು॑ ಸ್ವ॒ರಾಜ್ಯಂ ॥ ೧೧ ॥

॥ ಪದಪಾಠಃ ॥

ತಾಃ । ಅ॒ಸ್ಯ । ಪೃ॒ಶ॒ನ॒ಽಯು॒ವಃ । ಸೋ॒ಮಂ । ಶ್ರೀ॒ಣಂ॒ತಿ॒ । ಪೃ॒ಶ್ನ॒ಯಃ ।
ಪ್ರಿ॒ಯಾಃ । ಇಂ॒ದ್ರ॒ಸ್ಯ । ಧೇ॒ನವಃ॑ । ವ॒ಜ್ರಂ । ಹಿ॒ನ್ವಂ॒ತಿ॒ । ಸಾಯ॑ಕಂ । ವಸ್ವೀಃ॑ ।
ಅ॒ನು॒ । ಸ್ವ॒ಽರಾಜ್ಯಂ ॥ ೧೧ ॥

॥ ಸಾಯಣಭಾಷ್ಯಂ ॥

ತಾಃ ಪೂರ್ವೋಕ್ತಾ ಅಸ್ಯೇಂದ್ರಸ್ಯ ಪೃಶನಾಯುವಃ ಸ್ಪರ್ಶನಕಾಮಾಃ ಪೃಶ್ನಯೋ ನಾನಾವರ್ಣಾ ಗಾವ ಇಂದ್ರೇಣ ಸಾತತ್ಯಂ ಸೋಮಂ ಪಯಸಾ ಶ್ರೀಣಂತಿ । ಮಿಶ್ರೀಕುರ್ವಂತಿ । ಇಂದ್ರಸ್ಯ ಪ್ರಿಯಾಃ ಪ್ರೀತಿಹೇತುಭೂತಾಸ್ತಾ ಧೇನವಃ ಸಾಯಕಂ ಶತ್ರೂಣಾಮಂತಕಾರಕಂ ವಜ್ರಮಾಯುಧಂ ಹಿಂಸ್ತಂತಿ ಶತ್ರುಷು ಪ್ರೇರಯಂತಿ । ಇಂದ್ರೋ ಯಥಾ ಶತ್ರುಷು ವಜ್ರಂ ಪ್ರೇರಯತಿ ತಥೇಂದ್ರಸ್ಯ ಮದಮುತ್ಪಾದಯಂತೀತ್ಯರ್ಥಃ । ಅನ್ಯತ್ಪೂರ್ವವತ್ ॥ ಹಿಂಸ್ತಂತಿ । ಹಿಂಸಿಃ ಪ್ರೀಣನಾರ್ಥಃ । ಇದಿತ್ಪಾನ್ನುಮ್ । ಸಾಯಕಂ ಸೋ ಅಂತಕರ್ಮಣಿ । ಣ್ವುಲ್ತೃಚೌ ಯುಗಾಗಮಃ ॥ ೧೧ ॥

॥ ಕನ್ನಡಾರ್ಥ

ಅಸ್ಯ—ಇಂದ್ರನ । **ಪೃಶನಾಯುವಃ**—ಸ್ಪರ್ಶಕ್ಕೆ ಆಸೆಪಡುವುದೂ । **ಪೃಶ್ನಯಃ**— ನಾನಾ ಬಣ್ಣ ಸ್ಪರ್ಶವೂ ಆದ । **ತಾಃ** — ಆ ಗೋವುಗಳು । **ಸೋಮಂ**— (ಇಂದ್ರನು ಕುಡಿಯತಕ್ಕ) ಸೋಮರಸವನ್ನು । **ಶ್ರೀಣಂತಿ** — (ತಮ್ಮ ಹಾಲಿನೊಡನೆ) ಮಿಶ್ರಮಾಡುತ್ತವೆ । **ಇಂದ್ರಸ್ಯ**—ಇಂದ್ರನಿಗೆ । **ಪ್ರಿಯಾಃ**—ಪ್ರೀತಿಪಾತ್ರವಾದ । **ಧೇನವಃ**—ಆ ಗೋವುಗಳು । **ಸಾಯಕಂ**—ಶತ್ರುಗಳನ್ನು ನಾಶಮಾಡುವ । **ವಜ್ರಂ**—ವಜ್ರಾಯುಧವನ್ನು । **ಹಿಂಸ್ತಂತಿ**—(ಶತ್ರುಗಳ ಅಭಿಮುಖವಾಗಿ ಹೋಗುವಂತೆ) ಪ್ರೇರಿಸುತ್ತವೆ । **ವಸ್ತ್ರೀಃ**—ತಮ್ಮ ಕೊಟ್ಟಿಗೆಗಳಲ್ಲಿ ವಾಸಮಾಡಿಕೊಂಡು । **ಸ್ವರಾಜ್ಯಂ ಅನು**—(ಇಂದ್ರನ) ಪ್ರಭುತ್ವವನ್ನು ಗಮನಿಸಿಸುತ್ತಿವೆ ॥

ಭಾವಾರ್ಥ

ನಾನಾ ಬಣ್ಣವುಳ್ಳ ಆ ಗೋವುಗಳು ಇಂದ್ರನ ಹಿತಕರವಾದ ಸ್ಪರ್ಶಕ್ಕೆ ಆಸೆಪಟ್ಟು ಅವನು ಕುಡಿಯತಕ್ಕ ಸೋಮರಸವನ್ನು ತಮ್ಮ ಹಾಲಿನೊಡನೆ ಮಿಶ್ರಮಾಡುತ್ತವೆ. ಇಂದ್ರನಿಗೆ ಪ್ರೀತಿಪಾತ್ರಗಳಾದ ಆ ಗೋವುಗಳು ಶತ್ರುನಾಶಕಗಳಾದ ವಜ್ರಾಯುಧವನ್ನು ಶತ್ರುಗಳ ಅಭಿಮುಖವಾಗಿ ಹೋಗುವಂತೆ ಅವನನ್ನು ಪ್ರೇರಿಸುತ್ತವೆ. ತಮ್ಮ ಕೊಟ್ಟಿಗೆಗಳಲ್ಲಿ ವಾಸಮಾಡಿಕೊಂಡು ಇಂದ್ರನ ಪ್ರಭುತ್ವವನ್ನು ಗಮನಿಸಿಸುತ್ತಿವೆ

English Translation

Those cows of Indra, many-coloured and affectionate mix the Soma juice with their milk; Indra's beloved cows direct his destructive thunderbolt against his enemies, and are benificient in accordance with his sovereignty

॥ ವಿಶೇಷವಿಷಯಗಳು ॥

ಪೃಶನಾಯುವಃ—ಸ್ಪರ್ಶನಕಾಮಾಃ । ಇಂದ್ರಸ್ಯ ಸ್ಪರ್ಶನಮಿಚ್ಛಂತ್ಯಃ ಇಂದ್ರಸ್ಯ, ಪ್ರಿಯಾ ಇತ್ಯರ್ಥಃ । ಇಂದ್ರನ ಸ್ಪರ್ಶನನ್ನೇಕ್ಷಿಸುವುದರಿಂದ ಇಂದ್ರನಿಗೆ ಪ್ರೀತಿಕರವಾದ.

ಶ್ರೀಣಂತಿ—ಮಿಶ್ರೀಕುರ್ವಂತಿ । ಬೆರಸುವವು.

ಪೃಶ್ನಯಃ—ನಾನಾವರ್ಣಗಳುಳ್ಳ

ಹಿನ್ವಂತಿ—ಶತ್ರುಷು ಪ್ರೇರಯಂತಿ । ಶತ್ರುಗಳನ್ನು ಸಂಹಾರಮಾಡುವುದಕ್ಕಾಗಿ ಪ್ರೇರಿಸುವವು.

ಸಾಯಕಂ—ಶತ್ರುನಾಶಕವಾದ ಇಂದ್ರನ ವಜ್ರಾಯುಧವು.

ವ್ಯಾಕರಣಪ್ರಕ್ರಿಯಾ

ಪೃಶನಾಯುವಃ—ಪೃಶನಮಾತ್ಮನಃ ಇಚ್ಛತಿ ಎಂಬರ್ಥದಲ್ಲಿ **ಸುಪ ಆತ್ಮನಃ ಕ್ಯಚ್** ಎಂಬುದರಿಂದ ಪೃಶನ ಶಬ್ದದ ಮೇಲೆ ಕ್ಯಚ್ ಪೃಶನಾಯತಿ ಇತಿ ಪೃಶನಾಯುಃ **ಕ್ಯಾಚ್ಛಂದಸಿ** (ಪಾ. ಸೂ. ೩–೨–೧೭೦) ಎಂಬುದರಿಂದ ಉಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತ. ಪ್ರಥಮಾಬಹುವಚನದಲ್ಲಿ **ಜಸಿಚ** ಎಂಬುದರಿಂದ ಗುಣ ಅವಾದೇಶ. ಪೃಶನಾಯುವಃ ಎಂದು ರೂಪವಾಗುತ್ತದೆ.

ಶ್ರೀಣಂತಿ—ಶ್ರೀಞ್ ಪಾಕೇ ಧಾತು. ಕ್ರ್ಯಾದಿ. ಲಟ್ ಪ್ರಥಮಪುರುಷ ಬಹುವಚನದಲ್ಲಿ **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಬಂದಿರುವ ಶ್ನಾವಿಕರಣದ ಆಕಾರಕ್ಕೆ **ಶ್ನಾಭ್ಯಸ್ತಯೋರಾತಃ** ಎಂಬುದರಿಂದ ಲೋಪ. ಅತಿ ಬಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಹಿನ್ವಂತಿ—ಹಿವಿ ಪ್ರೀಣನೇ. ಧಾತು. ಭ್ವಾದಿ. **ಇದಿತೋ ನುಮ್ ಧಾತೋಃ** ಎಂಬುದರಿಂದ ನುಮಾಗಮ ಬರುತ್ತದೆ. ಲಟ್ ಪ್ರಥಮಪುರುಷ ಬಹುವಚನದಲ್ಲಿ ಹಿನ್ವಂತಿ ಎಂದು ರೂಪವಾಗುತ್ತದೆ. ತಿಙಂತ ನಿಘಾತಸ್ವರ ಬರುತ್ತದೆ.

ಸಾಯಿಷಮ್—ಷೋ ಅಂತಕರ್ಮಣಿ ಧಾತು. ದಿವಾದಿ. ಣ್ಯುಲ್‌ಪ್ರತ್ಯಯ ಪರದಲ್ಲಿರುವಾಗ **ಆದೇಚ ಉಪದೇಶೇಽಶಿತಿ** ಎಂಬುದರಿಂದ ಧಾತುವಿಗೆ ಆತ್ವ. **ಅತೋ ಯುಕ್ ಚಿಣ್‌ಕೃತೋಃ** (ಪಾ. ಸೂ. ೭–೩–೩೩) ಎಂಬುದರಿಂದ ಆಕಾರಕ್ಕೆ ಯುಕಾಗಮ. ಕಿತ್ತಾದುದರಿಂದ ಅಂತ್ಯಾವಯವವಾಗಿ ಬರುತ್ತದೆ. **ಯುವೋರನಾಕೌ** ಎಂಬುದರಿಂದ ಪ್ರತ್ಯಯಕ್ಕೆ ಅಕಾದೇಶ. ಸಾಯಕ ಎಂದು ಶಬ್ದವಾಗುತ್ತದೆ. **ಅತಿ** ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ॥ ೧೧ ॥

ಸಂಹಿತಾಪಾಠಃ

ತಾ ಅಸ್ಯ ನಮಸಾ ಸಹಃ ಸಪರ್ಯಂತಿ ಪ್ರಚೇತಸಃ ।
ವ್ರತಾನ್ಯಸ್ಯ ಸಶ್ಚಿರೇ ಪುರೂಣಿ ಪೂರ್ವಚಿತ್ತಯೇ ವಸ್ನೀರನು
ಸ್ವರಾಜ್ಯಂ ॥ ೧೨ ॥

ಪದಪಾಠಃ

ತಾಃ । ಅಸ್ಯ । ನಮಸಾ । ಸಹಃ । ಸಪರ್ಯಂತಿ । ಪ್ರ ಚೇತಸಃ ।
ವ್ರತಾನಿ । ಅಸ್ಯ । ಸಶ್ಚಿರೇ । ಪುರೂಣಿ । ಪೂರ್ವ ಚಿತ್ತಯೇ । ವಸ್ನೀಃ । ಅನು ।
ಸ್ವ ರಾಜ್ಯಂ ॥ ೧೨ ॥

ಸಾಯಣಭಾಷ್ಯಂ

ಪ್ರಚೇತಸಃ ಪ್ರಕೃಷ್ಟಪ್ರಜ್ಞಾನಾಸ್ತಾ ಗಾವೋ೭ಸ್ಯೇಂದ್ರಸ್ಯ ಸಹೋ ಬಲಂ ನಮಸಾ ಸ್ವಕೀಯೇನ ಪಯೋರೂಪೇಣಾನ್ನೇನ ಸಪರ್ಯಂತಿ । ಪರಿಚರಂತಿ । ಪುರೂಣಿ ಬಹೂನ್ಯಸ್ಯೇಂದ್ರಸ್ಯ ವ್ರತಾನಿ। ಶತ್ರುವಧಾದಿರೂಪಾಣಿ ವೀರ್ಯಕರ್ಮಾಣಿ ಸಶ್ಚಿರೇ । ಸೇವಿರೇ । ಜ್ಞಾಯಂತ ಇತ್ಯರ್ಥಃ। ಕಿಮರ್ಥಂ । ಪೂರ್ವಚಿತ್ತಯೇ ಯುಯುತ್ಸೂನಾಂ ಶತ್ರೂಣಾಂ ಪೂರ್ವಮೇವ ಪ್ರಜ್ಞಾಪನಾಯ । ಅನೇನ ಯುಧ್ಯಮಾನಾ ವೃತ್ರಾದಯಃ ಸರ್ವೇ ಮರಣಂ ಪ್ರಾಪ್ತಾಃ ಕಿಮರ್ಥಂ ಭವದ್ಭಿಃ ಪ್ರಾಣಾಸ್ತ್ಯಜ್ಯಂತ ಇತಿ ತೇಷಾಂ ಬೋಧನಾಯೇತ್ಯರ್ಥಃ । ಅನ್ಯತ್ ಪೂರ್ವವತ್ ॥ ಸಶ್ಚಿರೇ । ಸಶ್ಚ ಗತೌ । ವ್ಯತ್ಯಯೇನಾತ್ಮನೇಪದಂ । ಪೂರ್ವಚಿತ್ತಯೇ । ಚಿತೀ ಸಂಜ್ಞಾನೇ । ಭಾವೇ ಕ್ತಿನ್ । ಮರುದ್ಭ್ಯೋಧಾದಿತ್ವಾತ್ಪೂರ್ವಪದಾಂತೋದಾತ್ತತ್ವಂ ॥ ೧೨ ॥

ಸ್ವತಿಪದಾರ್ಥ

ಪ್ರಚೇತಸಃ—ಪ್ರಕೃಷ್ಟವಾದ ಜ್ಞಾನವುಳ್ಳ । **ತಾಃ**—ಆ ಗೋವುಗಳು । **ಅಸ್ಯ**—ಈ ಇಂದ್ರನ । **ಸಹಃ**—ಬಲವನ್ನು । **ನಮಸಾ**—(ತಮ್ಮ ಪಯೋರೂಪವಾದ) ಅನ್ನದಿಂದ । **ಸಪರ್ಯಂತಿ**—ಸತ್ಕರಿಸುತ್ತವೆ । **ಪೂರ್ವಚಿತ್ತಯೇ**—(ಮುಂದೆ ಹತರಾಗತಕ್ಕ ಶತ್ರುಗಳ) ತಿಳುವಳಿಕೆಗಾಗಿ । **ಪುರೂಣಿ**—ಬಹು ಸಂಖ್ಯಾಕವಾದ । **ಅಸ್ಯ**—ಇಂದ್ರನ । **ವ್ರತಾನಿ**—ವೀರ್ಯಕರ್ಮಗಳನ್ನು । **ಸಶ್ಚಿರೇ**—ತಿಳಿದುಕೊಂಡು ಪ್ರಶಂಸಿಸುತ್ತವೆ । **ವಸ್ನೀಃ** (ಕೊಟ್ಟಿಗೆಗಳಲ್ಲಿ) ಪಾಷಣವಾಡಿಕೊಂಡು । **ಸ್ವರಾಜ್ಯಂ ಅನು**—(ಇಂದ್ರನ) ಪ್ರಭುತ್ವವನ್ನು ಗಮನಿಸುತ್ತವೆ ॥

ಭಾವಾರ್ಥ

ಗೋವುಗಳು ಪ್ರಕೃಷ್ಟವಾದ ಜ್ಞಾನವುಳ್ಳವುಗಳಾಗಿ ಇಂದ್ರನ ಬಲವನ್ನು ತಮ್ಮ ಪಯಸ್ಸಿನ ಅರ್ಪಣೆಯಿಂದ ಸತ್ಕರಿಸಿ ವೃದ್ಧಿಪಡಿಸುತ್ತವೆ. ಇಂದ್ರನೊಡನೆ ಯುದ್ಧಮಾಡಲಪೇಕ್ಷಿಸಿ ಮುಂದೆ ಹತರಾಗಬಹುದಾದ ಶತ್ರುಗಳ ತಿಳಿವಳಿಕೆಗಾಗಿ ಬಹುಸಂಖ್ಯಾಕವಾದ ಇಂದ್ರನ ವೀರ್ಯಕರ್ಮಗಳನ್ನರಿತು ಪ್ರಶಂಸಿಸುತ್ತವೆ. ಕೊಟ್ಟಗೆಗಳಲ್ಲಿ ವಾಸಮಾಡಿಕೊಂಡು ಅವನ ಸಾರ್ವಭೌಮತ್ವವನ್ನು ಆದರದಿಂದ ಗಮನಿಸುತ್ತವೆ.

English Translation

Those intelligent cows worship his prowess with the adoration of their milk ; they proclaimed his many exploits as an example to later enemies and are beneficient in accordance with his sovereignty.

॥ ವಿಶೇಷವಿಷಯಗಳು ॥

ನಮಸಾ ಸಪರ್ಯಂತಿ— **ಸ್ವಕೀಯೇನ ಪಯೋರೂಪೇಣಾನ್ನೇನ ಪರಿಚರಂತಿ** । ತಮ್ಮ ಹಾಲುಗಳಿಂದ ಇಂದ್ರನನ್ನು ಸೇವಿಸುವವು.

ವ್ರತಾನ್ಯಸ್ಯ—ವ್ರತಾನಿ ಎಂದರೆ ಸಾಹಸಕರ್ಮಗಳು ; ಇಂದ್ರನು ಮಾಡಿದ ನಾನಾವಿಧ ಕೆಲಸಗಳು.

ಸಶ್ಚಿರೇ—**ಸಶ್ಚ ಗತೌ** । **ಜ್ಞಾಯಂತೇ** । ತಿಳಿಯಲ್ಪಡುತ್ತವೆ ಎಂದರೆ ಎಲ್ಲರಿಗೂ ತಿಳಿಯುವಂತೆ ಮಾಡಲ್ಪಡುತ್ತವೆ.

ಪೂರ್ವಚಿತ್ರ್ಯಯೇ— **ಚಿತೀ ಸಂಜ್ಞಾನೇ** । ಯುದ್ಧಾಪೇಕ್ಷಿಗಳಾದ ಶತ್ರುಗಳಿಗೆ ಮೊದಲೇ ಸೂಚನೆ ಕೊಡುವುದಕ್ಕಾಗಿ.

ವ್ಯಾಕರಣಪ್ರಕ್ರಿಯಾ

ಸಪರ್ಯಂತಿ - ಸಪರ ಪೂಜಾಯಾಂ ಧಾತು. ಲಟ್ ಪ್ರಥಮಪುರುಷ ಬಹುವಚನದಲ್ಲಿ **ಕಂಡ್ವಾದಿ-ಭ್ಯೋಯಕ್** (ಪಾ. ಸೂ. ೩-೧-೨೭) ಎಂಬುದರಿಂದ ಯಕ್. ಯಕ್ ಸ್ವರ ಬರುತ್ತದೆ.

ಸಶ್ಚಿರೇ — ಸಶ್ಚ ಗತೌ ಧಾತು. **ವ್ಯತ್ಯಯೋಬಹುಲಂ** ಎಂಬುದರಿಂದ ಆತ್ಮನೇಪದಪ್ರತ್ಯಯ ಬರುತ್ತದೆ. ಲಿಟಿನಲ್ಲಿ **ಲಟಸ್ತ್ರುಯೋರೇಶಿರೇಚ್** ಎಂಬುದರಿಂದ ಇರೇಚ್ ಪ್ರತ್ಯಯ **ತಿಜ್ಜಾತಿಜಿಃ** ಎಂಬುದರಿಂದ ಸಿಘಾತಸ್ವರ ಬರುತ್ತದೆ

ಪೂರ್ವಚಿತ್ತ್ಯಯೇ—ಚಿತೀ ಸಂಜ್ಞಾನೇ ಧಾತು. **ಸ್ತ್ರಿಯಾಂ ಕ್ತಿನ್** ಎಂಬುದರಿಂದ ಭಾವಾರ್ಥದಲ್ಲಿ ಕ್ತಿನ್ ಪ್ರತ್ಯಯ. ಕೃದುತ್ತರಪದ ಪ್ರಕೃತಿಸ್ವರವು ಪ್ರಾಪ್ತವಾದರೆ ಮರುದ್ವೃಧಾದಿಯಲ್ಲಿ ಸೇರಿರುವುದರಿಂದ ಪೂರ್ವಪದಾಂತೋದಾತ್ತಸ್ವರವು ಬರುತ್ತದೆ. ಚತುರ್ಥೀ ಏಕವಚನದಲ್ಲಿ **ಘೇರ್ಙಿತಿ** ಎಂಬುದರಿಂದ ಗುಣ ಅಯಾದೇಶ ಆಗಿ ಪೂರ್ವಚಿತ್ತ್ಯಯೇ ಎಂದು ರೂಪವಾಗುತ್ತದೆ. ॥ ೧೨ ॥

॥ ಸಾಯಣಭಾಷ್ಯಂ ॥

ಇಂದ್ರೋ ದಧೀಚೋ ಅಸ್ಥಭಿರ್ವೃತ್ರಾಣ್ಯಪ್ರತಿಷ್ಕುತಃ ।
ಜಘಾನ ನವತೀರ್ನವ ॥ ೧೩ ॥

ಪದಪಾಠಃ

ಇಂದ್ರಃ । ದಧೀಚಃ । ಅಸ್ಥಭಿಃ । ವೃತ್ರಾಣಿ । ಅಪ್ರತಿಷ್ಕುತಃ ।
ಜಘಾನ । ನವತೀಃ । ನವ ॥ ೧೩ ॥

ಸಾಯಣಭಾಷ್ಯಂ

ಚಾತುರ್ವಿಂಶಿಕೇಽಹನಿ ಪ್ರಾತಃಸವನೇ ಬ್ರಾಹ್ಮಣಾಚ್ಛಂಸಿನಃ ಶಸ್ತ್ರ ಇಂದ್ರೋ ದಧೀಚ ಇತಿ ಸಪಚಹಸ್ತೋತ್ರಿಯಸಂಜ್ಞಕಸ್ತೃಚಃ । ಸೂತ್ರಿತಂ ಚ । ಅದಹ ಸ್ಮಧಾಮನ್ನಿತ್ಯೇಕಾ ದ್ವೇ ಚೇಂದ್ರೋ ದಧೀಚೋ ಅಸ್ಥಭಿಃ । ಆ. ೭-೨ । ಇತಿ ॥

ಅತ್ರ ಶಾಟ್ಯಾಯನಿನ ಇತಿಹಾಸಮಾಚಕ್ಷತೇ । ಆಥರ್ವಣಸ್ಯ ದಧೀಚೋ ಜೀವತೋ ದರ್ಶನೇನಾ-ಸುರಾಃ ಪರಾಬಭೂವುಃ । ಅಥ ತಸ್ಮಿನ್ ಸ್ವರ್ಗತೇಽಸುರೈಃ ಪೂರ್ಣಾ ಪೃಥಿವ್ಯಭವತ್ । ಅಥೇಂದ್ರಸ್ತೈರಸುರೈಃ ಸಹ ಯೋದ್ಧುಮಶಕ್ನುವಂಸ್ತಮೃಷಿಮನ್ತಿಚ್ಛನ್ ಸ್ವರ್ಗಂ ಗತ ಇತಿ ಶುಶ್ರಾವ । ಅಥ ಪಪ್ರಚ್ಛ ತತ್ರತ್ಯಾನ್ ನೇಹ ಕಿಮುಸ್ಯ ಕಿಂಚಿತ್ಪರಿಶಿಷ್ಟಮಂಗಮಸ್ತೀತಿ । ತಸ್ಮಾ ಅವೋಚನ್ ಅಸ್ತ್ಯೇತದಾಶ್ವಂ ಶೀರ್ಷಂ ಯೇನ ಶಿರಸಾಶ್ವಿಭ್ಯಾಂ ಮಧುವಿದ್ಯಾಂ ಪ್ರಾಬ್ರವೀತ್ । ತತ್ತು ನ ವಿದ್ಮ ಯತ್ರಾಭವದಿತಿ । ಪುನರಿಂದ್ರೋಽಬ್ರವೀತ್ । ತವನ್ವಿಚ್ಛತೇತಿ । ತದ್ಧಾನ್ವೈಷಿಷುಃ । ತಚ್ಛರ್ಯಣಾವತ್ಯನುವಿದ್ಯಾಜಹ್ರುಃ । ಶರ್ಯಣಾವದ್ಧ ವೈ ನಾಮ ಕುರುಕ್ಷೇತ್ರಸ್ಯ ಜಘನಾರ್ಧೇ ಸರಃ ಸ್ಯಂದತೇ । ತಸ್ಯ ಶಿರಸೋಽಸ್ಥಿಭರಿಂದ್ರೋಽಸುರಾಞ್ಜಘಾನೇತಿ ॥ ಅಪ್ರತಿಷ್ಕುತಃ ಪರೈರಪ್ರತಿಶಬ್ದಿತಃ ಪ್ರತಿಕೂಲಶಬ್ದರಹಿತ ಇಂದ್ರ ಆಥರ್ವಣಸ್ಯ ದಧೀಚ ಏತತ್ಸಂಜ್ಞಕಸ್ಯ ಋಷೇರಸ್ಥಭಿರಶ್ವಶಿರಃಸಂಬಂಧಿಭಿರಸ್ಥಿಭಿರ್ನವತೀರ್ನವ ನವಸಂಖ್ಯಾಕಾ ನವತೀರ್ದಶೋತ್ತರಾಷ್ಟಶತ-ಸಂಖ್ಯಾಕಾಃ । ತಥಾ ಹಿ । ಲೋಕತ್ರಯೇವರ್ತಿನೋ ದೇವಾಞ್ಜೇತುಮಾದಾವಾಸುರೀ ಮಾಯಾ ತ್ರಿಧಾ ಸಂಪದ್ಯತೇ । ತ್ರಿವಿಧಾತೀತಾನಾಗತವರ್ತಮಾನಕಾಲಭೇದೇನ ತತ್ಕಾಲವರ್ತಿನೋ ದೇವಾಞ್ಜೇತುಂ ಪುನರಪಿ ಪ್ರತ್ಯೇಕಂ ತ್ರಿಗುಣಿತಾ ಭವತಿ । ಏವಂ ನವ ಸಂಪದ್ಯತೇ । ಪುನರಪ್ಯುತ್ಸಾಹಾದಿಶಕ್ತಿತ್ರಯರೂಪೇಣ ತ್ರೈಗುಣ್ಯೇ ಸತಿ ಸಪ್ತವಿಂಶತಿಃ ಸಂಪದ್ಯತೇ । ಪುನಃ ಸಾತ್ತ್ವಿಕಾದಿಗುಣತ್ರಯಭೇದೇನ ತ್ರೈಗುಣ್ಯೇ ಸತ್ಯೇ-ಕೋತ್ತರಾಶೀತಿಃ ಸಂಪದ್ಯತೇ । ಏವಂ ಚತುರ್ಭಿಸ್ತ್ರಿಕೈರ್ಗುಣಿತಾಯಾ ಮಾಯಾಯಾ ದಶಸು ದಿಕ್ಷು ಪ್ರತ್ಯೇಕಮವಸ್ಥಾನೇ ಸತಿ ನವ ನವತಯಃ ಸಂಪದ್ಯಂತೇ । ಏವಂವಿಧಮಾಯಾರೂಪಾಣಿ ವೃತ್ರಾಣ್ಯಾವರ-

ಕಾಣ್ಯಸುರಜಾತಾನಿ ಜಘಾನ । ಹತವಾನ್ ॥ ದಧೀಚಃ । ದಧ್ಯಂಚತೀತಿ ದಧ್ಯಙ್ । ಅಂಚತೇರ್ಯತ್ವಿ-ಗಿತ್ಯಾದಿನಾ ಕ್ವಿನ್ । ಅನಿದಿತಾಮಿತಿ ನಲೋಪಃ । ಷಷ್ಠ್ಯೇಕವಚನೇ ಽಚ ಇತ್ಯಕಾರಲೋಪೇ ಚಾವಿತಿ ದೀರ್ಘತ್ವಂ । ಉದಾತ್ತನಿವೃತ್ತಿಸ್ವರೇಣ ವಿಭಕ್ತ್ಯುದಾತ್ತತ್ವೇ ಪ್ರಾಪ್ತೇ ತದಪವಾದತಯಾ ಚಾವಿತಿ ಪೂರ್ವಪದಸ್ಯಾಂತೋದಾತ್ತತ್ವಂ ಪ್ರಾಪ್ತಂ । ಅಂಚೇಶ್ಛಂದಸ್ಯಸರ್ವನಾಮಸ್ಥಾನಂ । ಪಾ. ೬-೧-೧೭೦ । ಇತಿ ಪುನರ್ವಿಭಕ್ತ್ಯುದಾತ್ತತ್ವವಿಧಾನೇನ ತದ್ಬಾಧ್ಯತೇ । ಅಸ್ಥಭಿಃ । ಛಂದಸ್ಯಪಿ ದೃಶ್ಯತೇ । ಪಾ. ೭-೧-೭೬ । ಇತ್ಯನಜಾದಾವಪ್ಯಸ್ಥಿಶಬ್ದಸ್ಯಾನಜಾದೇಶಃ ಸ ಚೋದಾತ್ತಃ

॥ ಪ್ರತಿಪದಾರ್ಥ ॥

ಅಪ್ರತಿಷ್ಕುತಃ—ವಿರೋಧವಾದ ಶಬ್ದವಿಲ್ಲದಿರುವ । **ಇಂದ್ರಃ**—ಇಂದ್ರನು । **ದಧೀಚಃ**—ದಧೀಚಿ ಋಷಿಯ । **ಅಸ್ಥಭಿಃ**—ಮೂಳೆಗಳಿಂದ । **ನವತೀರ್ನವ**—(ಮಾಯಾಶಕ್ತಿಯಿಂದ) ಎಂಟ್ನೂರಹತ್ತು ಪ್ರಕಾರ ನಾಗಿ ಪರಡಿರುವುದೂ। **ವೃತ್ರಾಣಿ**—(ಲೋಕತ್ರಯವನ್ನೂ) ಆವರಿಸಿರುವುದೂ ಆದ ಶತ್ರುಪ್ರಭಾವವನ್ನು। **ಜಘಾನ**-ನಾಶಮಾಡಿದನು.

ಭಾವಾರ್ಥ

ಅಪ್ರತಿಹತವಾದ ಶಕ್ತಿಯಿಂದ ಕೂಡಿಕೊಂಡು ಪ್ರತಿಶಬ್ದವಿಲ್ಲದಿರುವ ಇಂದ್ರನು ದಧೀಚಿಋಷಿಯ ಮೂಳೆ ಗಳಿಂದ ಎಂಟ್ನೂರಹತ್ತು ವಿಧವಾಗಿ ಪರಡಿರುವುದೂ ಲೋಕತ್ರಯವನ್ನೂ ಆವರಿಸಿರುವುದೂ ಆದ ಮಾಯಾರೂಪನ ಶತ್ರುಪ್ರಭಾವವನ್ನು ನಾಶಮಾಡಿದನು

English Translation

Indra with the bones of Dadhyanch, slew, ninety times nine, Vritra

ವಿಶೇಷವಿಷಯಗಳು.

ದಧೀಚಃ—ದಧ್ಯಂಚ್ ಅಥವಾ ದಧೀಚಿ ಎಂಬ ಋಷಿಯು ಸ್ವಾಯಾಂಭುವಮನ್ವಂತರದಲ್ಲಿ ಪ್ರಸಿದ್ಧನಾದವನು. ಭಾಷ್ಯಕಾರರು ಇಲ್ಲಿ ಒಂದು ಉಪಾಖ್ಯಾನವನ್ನು ಹೇಳಿರುವರು—ಅಥರ್ವನೆಂಬುವನ ಪುತ್ರನಾದ ದಧ್ಯಂಚ್ ಎಂಬ ಋಷಿಯು ಜೀವಿಸಿದ್ದಾಗ ಅವನ ದರ್ಶನದಿಂದ ಅಸುರರು ಭೀತರಾಗಿ ಓಡಿಹೋಗಿದ್ದರು. ಅವನು ಮೃತನಾಗಿ ಸ್ವರ್ಗಕ್ಕೆ ಹೋದ ಬಳಿಕ ಅಸುರರು ನಿರ್ಭಯವಾಗಿ ಭೂಮಿಯೆಲ್ಲವನ್ನೂ ವ್ಯಾಪಿಸಿದರು. ಬಳಿಕ ಇಂದ್ರನು ಈ ಅಸುರರೊಡನೆ ಯುದ್ಧಮಾಡಲಶಕ್ತನಾಗಿ ಆ ಋಷಿಯನ್ನು ಹುಡುಕಿದನು. ಋಷಿಯು ಸ್ವರ್ಗಸ್ಥನಾದನೆಂದು ತಿಳಿಯಬಂದಿತು. ಆಗ ಇಂದ್ರನು ಸಮೀಪದಲ್ಲಿದ್ದವರನ್ನು ಕುರಿತು ಆ ಋಷಿಯ ಅಂಗಗಳಲ್ಲಿ ಯಾವುದಾದರೂ ಅವಶೇಷವಿದೆಯೇ ಎಂದು ಕೇಳಲು ಆಗ ಅವರು—ದಧೀಚಿಋಷಿಯು ಒಂದಾನೊಂದು ಕಾಲದಲ್ಲಿ ಅಶ್ವಿನೀದೇವತೆ ಗಳಿಗೆ ಮಧುವಿದ್ಯವನ್ನು ಕಲಿಸಿದ ಕುದುರೆಯ ತಲೆಬುರುಡೆಯು ಮಾತ್ರ ಇರುವುದೆಂದೂ, ಅದೂ ಸಹ ಎಲ್ಲಿರುವುದೋ ಗೊತ್ತಿಲ್ಲವೆಂದೂ ಹೇಳಿದರು. ಆಗ ಇಂದ್ರನು ಅದನ್ನು ಹುಡುಕುವಂತೆ ಅವರಿಗೆ ಹೇಳಲು, ಅವರು ಅದು ಕುರುಕ್ಷೇತ್ರದ ಸಮೀಪದಲ್ಲಿರುವ ಶರ್ಯಣಾವತ್ ಎಂಬ ಸರೋವರದಲ್ಲಿ ಬಿದ್ದಿರುವುದನ್ನು ಹುಡುಕಿ ತೆಗೆದುಕೊಂಡುಬಂದರು.

ಇಂದ್ರನು ಆ ತಲೆಬುರುಡೆಯ ಮೂಳೆಗಳಿಂದ ಅಸುರರನ್ನು ಜಯಿಸಿದನು ಎಂದರೆ, ಒಂಬತ್ತು ಸಲ ತೊಂಭತ್ತು ಎಂದರೆ ಎಂಟನೂರು ಹತ್ತಾವರ್ತಿ ಅಸುರರ ಮಾಯಾಜಾಲವನ್ನು ವಿಫಲಗೊಳಿಸಿದನು. ಇಲ್ಲಿ ಒಂಭತ್ತ್ಯಸಲ ತೊಂಭತ್ತು ಎಂಬ ಸಂಖ್ಯೆಯನ್ನು ವಿವರಿಸುವಾಗ ಭಾಷ್ಯಕಾರರು—ಮೂರು ಲೋಕಗಳಲ್ಲಿರುವ ದೇವತೆಗಳನ್ನು ಜಯಿಸಲು ನೊದಲು ಅಸುರರಿಗೆ ಮೂರುವಿಧವಾದ ಮಾಯಾಭೇದಗಳಿದ್ದವು. ಅವುಗಳಲ್ಲಿ ಒಂದೊಂದೂ ವರ್ತಮಾನ ಭೂತ ಭವಿಷ್ಯತ್ ಎಂದು ಮೂರುವಿಧವಾಗಿದ್ದುದರಿಂದ ಒಟ್ಟು ಒಂಭತ್ತು ವಿಧಗಳಾದುವು. ಮತ್ತೆ ಆ ಒಂಭತ್ತು ಮಾಯೆಗಳು ಉತ್ಸಾಹಾದಿಶಕ್ತಿತ್ರಯಗಳಿಂದ ಕೂಡಿ ೯x೩=೨೭ ಆದುವು. ಮತ್ತೆ ಅವು ಸಾತ್ವಿಕಾದಿ ಗುಣತ್ರಯಗಳಿಂದ ಕೂಡಿ ೨೭x೩=೮೧ ಆದುವು. ಈ ಎಂಭತ್ತೊಂದು ಮಾಯೆಗಳು ದಶದಿಕ್ಕುಗಳಲ್ಲಿ ಆಚರಿಸಲ್ಪಡುವುದರಿಂದ ಒಟ್ಟು ೮೧x೧೦=೮೧೦ ಅಥವಾ ಒಂಭತ್ತು ಸಲ ತೊಂಭತ್ತು ೯x೯೦=೮೧೦ ಆದುವು. ಈ ವಿಧವಾದ ವೈತ್ರರೂಪವಾದ ಅಸುರರ ಮಾಯಾಜಾಲಗಳನ್ನು ಇಂದ್ರನು ನಿರರ್ಥಕಗೊಳಿಸಿದನು ಎಂದು ವಿವರಿಸಿರುವರು.

ಸ್ಕಂದಸ್ವಾಮಿಯು ಬೇರೊಂದು ಇತಿಹಾಸವನ್ನು ಹೇಳಿರುವರು—ಪೂರ್ವದಲ್ಲಿ ಕಾಲಕಂಜರೆಂಬ ಅಸುರರಿದ್ದರು. ಅವರು ಪ್ರಬಲರಾಗಿ ದೇವತೆಗಳನ್ನು ಕೊಲ್ಲುತ್ತಾ ತುಂಬಾ ತೊಂದರೆ ಕೊಡುತ್ತಿದ್ದರು. ಆಗ ದೇವತೆಗಳು ಬ್ರಹ್ಮನ ಸವಿಾಪಕ್ಕೆ ಹೋಗಿ ಈ ಅಸುರರನ್ನು ಸಂಹಾರಮಾಡಲು ಉಪಾಯವನ್ನು ತಿಳಿಸಬೇಕೆಂದು ಪ್ರಾರ್ಥಿಸಲು ಬ್ರಹ್ಮನು—ಎಲ್ಲಿ ದೇವತೆಗಳಿರಾ, ದಧ್ಯಙ್ ಎಂಬ ಋಷಿಯು ಇರುವನು. ನೀವು ಅವನ ಸವಿಾಪಕ್ಕೆ ಹೋಗಿರಿ. ಅವನು ಅಸುರರ ಸಂಹಾರ ವಿಷಯದಲ್ಲಿ ತಕ್ಕ ಉಪಾಯವನ್ನು ತಿಳಿಸುವನು ಎಂದನು ದೇವತೆಗಳು ಬ್ರಹ್ಮನ ಮಾತಿನಂತೆ ದಧೀಚಿ ಋಷಿಯ ಸವಿಾಪಕ್ಕೆ ಹೋಗಿ ಬ್ರಹ್ಮನು ತಮ್ಮನ್ನು ಕಳುಹಿಸಿರುವನೆಂದು ಅರಿಕೆಮಾಡಿದರು. ಆ ಋಷಿಯು ಯೋಗದೃಷ್ಟಿಯಿಂದ ಇವರು ಬಂದ ಕಾರ್ಯವನ್ನು ತಿಳಿದು ಯೋಗಸಮಾಧಿಯಿಂದ ತನ್ನ ಪ್ರಾಣಗಳನ್ನು ವಿಸರ್ಜಿಸಿದನು ಆಗ ಆ ಋಷಿಯ ಮೂಳೆಗಳಿಂದ ಇಂದ್ರನು ಅಸುರರನ್ನು ಸಂಹಾರಮಾಡಿದನು. ಈ ವಿಷಯವನ್ನೇ ಈ ಋಕ್ಕಿನಲ್ಲಿ ವಿವರಿಸಲ್ಪಟ್ಟಿರುವುದೆಂದು ಸ್ಕಂದಸ್ವಾಮಿಯು ಹೇಳಿರುವರು.

ಈ ಋಷಿಯ ಹೆಸರು ಋಗ್ವೇದ ಸಂಹಿತೆಯಲ್ಲಿ ೧-೮೦-೧೬ , ೧-೮೪-೧೩ , ೧-೮೪-೧೪ ; ೧-೧೧೬-೧೨ , ೧-೧೧೭-೨ ನೊದಲಾದ ಋಕ್ಕುಗಳಲ್ಲಿಯೂ ತೈತ್ತಿರೀಯ, ಸಂಹಿತಾ ೫-೧-೪-೪ ; ೫-೬-೬-೩ ಕಾಠಕ ಸಂಹಿತಾ ೧೯-೪ , ಶತಪಥ ಬ್ರಾಹ್ಮಣ ೪-೧-೫-೧೮ , ೬-೪-೩-೩ , ೧೪-೧-೧-೧೮ ; ೧೪-೧-೧-೩೦ ; ೧೪-೧-೧-೩೫ , ೧೪-೧-೪-೧ , ಬೃಹದಾರಣ್ಯ ಕೋಪನಿಷತ್ ೨-೫-೨೨ ; ೪-೫-೨೪ ಮೊದಲಾದ ಸ್ಥಳಗಳಲ್ಲಿ. ನಿರ್ದಿಷ್ಟವಾಗಿದೆ

ವ್ಯಾಕರಣಪ್ರಕ್ರಿಯಾ

ದಧೀಚೇ—ದಧ್ಯಙ್ ಅಂಚತಿ ಇತಿ ದಧ್ಯಙ್. **ಅಂಚುಗತಿಪೂಜನಯೋಃ** ಧಾತು, **ಋತ್ವಿಗ್‌ದಧೃಗ್** (ಪಾ. ಸೂ. ೩-೨-೫೯) ಸೂತ್ರದಿಂದ ಸುಬಂತವು ಉಪಪದವಾಗಿರುವಾಗ ಕ್ವಿನ್ ಪ್ರತ್ಯಯ. ಕಿತ್ವಾದುದರಿಂದ **ಅನಿಟಿತಾಂ ಹಲಾಉ** ಎಂಬುದರಿಂದ ಧಾತುವಿನ ಉಪಧಾನಕಾರಕ್ಕೆ ಲೋಪ. ಷಷ್ಠೀ ಏಕವಚನದ ಜಸ್ ಪರವಲ್ಲರುವಾಗ **ಅಚಿಃ** ಎಂಬುದರಿಂದ ಧಾತುವಿನ ಕಕಾರಕ್ಕೆ ಲೋಪ. **ಚಾ** ಎಂಬುದರಿಂದ ಲುಪ್ತಾಕಾರ ಅಂಚು ಧಾತು ಪರವಲ್ಲರುವುದರಿಂದ ಪೂರ್ವಪದಕ್ಕೆ ದೀರ್ಘ. ಇಲ್ಲಿ ಸಿತ್ ಪ್ರತ್ಯಯಾಂತವಾದುದರಿಂದ ಧಾತುವಿನ ಅಕಾರವು ಕೃದುತ್ತರಪದಪ್ರಕೃತಿಸ್ವರದಿಂದ ಉದಾತ್ತವಾಗಿರುವಾಗ ಅದರ ಲೋಪಕ್ಕೆ ವಿಭಕ್ತಿಯು ನಿಮಿತ್ತವಾದುದರಿಂದ **ಅನುದಾತ್ತಸ್ಯ ಯತ್ರೋದಾತ್ತಲೋಪಃ** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರವು ಪ್ರಾಪ್ತವಾದರೆ ಅದಕ್ಕೆ ಅಪ

ವಾದವಾಗಿ **ಚೌ** (ಪಾ. ಸೂ. ೬-೧-೨೨೨) ಎಂಬುದರಿಂದ ಪೂರ್ವಪದಕ್ಕೆ ಅಂತೋದಾತ್ತಸ್ವರ ಪ್ರಾಪ್ತವಾಗುತ್ತದೆ. ಅದನ್ನು ಬಾಧಿಸಿ **ಅಸರ್ವನಾಮಸ್ಥಾನವಿಭಕ್ತಿಯು ಪರದಲ್ಲಿರುವುದರಿಂದ ಆಂಚೇಶ್ಚಂದಸ್ಯಸರ್ವನಾಮಸ್ಥಾನಮ್** (ಪಾ. ಸೂ. ೬-೧-೧೭೦) ಎಂಬುದರಿಂದ ತಿರುಗಿ **ವಿಭಕ್ತಿಗೆ** ಉದಾತ್ತಸ್ವರ ಬರುತ್ತದೆ. ಆಗ ಅಂತೋದಾತ್ತವಾದ ಪದವಾಗುತ್ತವೆ.

ಅಸ್ಥಭಿಃ—ಅಸ್ಥಿ ಶಬ್ದಕ್ಕೆ ಅಜಾದಿವಿಭಕ್ತಿ ಪರವಾದಾಗ ಅನಜಾದೇಶ ಹೇಳಿದರೂ **ಭಸ್** ಪರವಾದಾಗ ಹೆಲಾದಿಯಲ್ಲಿಯೂ **ಛಂದಸ್ಯಪಿ ದೃಶ್ಯತೇ** (ಪಾ. ಸೂ. ೭-೧-೭೬) ಎಂಬುದರಿಂದ ಇದಕ್ಕೆ ಅನಜಾದೇಶ ಬರುತ್ತದೆ. ಇದೂ ಉದಾತ್ತವಾಗುತ್ತದೆ. ಙಿತ್ತಾದುದರಿಂದ ಅಂತಾದೇಶವಾಗುತ್ತದೆ. **ನಲೋಪಃ ಪ್ರಾತಿಪದಿಕಾಂತಸ್ಯ** ಎಂಬುದರಿಂದ ನಲೋಪ ಬರುತ್ತದೆ. ಅಸ್ಥಭಿಃ ಎಂದು ಮಧ್ಯೋದಾತ್ತವಾದ ಶಬ್ದವಾಗುತ್ತದೆ.

ಅಪ್ರತಿಷ್ಕುತಃ—(೧-೬-೪೪-೭) ಹಿಂದಿನ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ.

ಜಘಾನ—ಹನ ಹಿಂಸಾಗತ್ಯೋಃ ಧಾತು. ಅದಾದಿ. ಲಿಟ್ ಪ್ರಥಮಪುರುಷ ಏಕವಚನದಲ್ಲಿ ಣಲಾದೇಶ **ಅಭ್ಯಾಸಾಚ್ಚ** ಎಂಬುದರಿಂದ ಅಭ್ಯಾಸದ ಪರದಲ್ಲಿರುವ ಹಕಾರಕ್ಕೆ ಕುತ್ವದಿಂದ ಘಕಾರಾದೇಶ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ಲಿತಿ** ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ॥೧೩॥

ಸಂಹಿತಾಪಾಠಃ

ಇಚ್ಛನ್ನಶ್ವಸ್ಯ ಯಚ್ಛಿರಃ ಪರ್ವತೇಷ್ವಪಶ್ರಿತಂ ।
ತದ್ವಿದಚ್ಛರ್ಯಣಾವತಿ ॥ ೧೪ ॥

ಪದಪಾಠಃ

ಇಚ್ಛನ್ । ಅಶ್ವಸ್ಯ । ಯತ್ । ಶಿರಃ । ಪರ್ವತೇಷು । ಅಪ ಽ ಶ್ರಿತಂ ।
ತತ್ । ವಿದತ್ । ಶರ್ಯಣಾ ಽ ವತಿ ॥ ೧೪ ॥

ಸಾಯಣಭಾಷ್ಯಂ

ಪರ್ವತೇಷು ಪರ್ವತಸ್ಯ ಗಿರಿಷ್ವಪಶ್ರಿತಮಪಗತ್ಯ ಸ್ಥಿತಮಶ್ವಸ್ಯಾಶ್ವಸಂಬಂಧಿ ದಧೀಚೋ ಯಚ್ಛಿರ ಇಚ್ಛನ್ನಿಂದ್ರೋ ವರ್ತತೇ ಶರ್ಯಣಾವತ್ಯೇತತ್ಸಂಜ್ಞೇ ಸರಸಿ ತಚ್ಛಿರೋ ವಿದತ್। ಆಜ್ಞಾಸೀತ್। ಜ್ಞಾತ್ವಾ ತದಾಹೃತ್ಯ ತದೀಯೈರಸ್ಥಿಭಿರ್ವೃತ್ರಾಣಿ ಜಘಾನೇತಿಪೂರ್ವಸ್ಯಾಮೃಚಿ ಸಂಬಂಧಃ॥ ಇಚ್ಛನ್। ಇಷು ಇಚ್ಛಾಯಾಂ। ತುದಾದಿತ್ವಾಚ್ಛಪ್ರತ್ಯಯಃ। ವಿದತ್। ವೇತ್ತೇರ್ಲುಙಿ ವ್ಯತ್ಯಯೇನ ಚ್ಲೇರಙಾದೇಶಃ। ಶರ್ಯಣಾವತಿ। ಶರ್ಯಣಾ ನಾಮ ದೇಶಾಃ। ತೇಷಾಮದೂರಭವಂ ಸರಃ ಶರ್ಯಣಾವತ್। ಮಧ್ವಾದಿಷು ಶರ್ಯಣಶಬ್ದಸ್ಯ ಪಾಠಾನ್ಮಧ್ವಾದಿಭ್ಯಶ್ಚ। ಪಾ. ೪-೨-೮೬। ಇತಿ ಚಾತುರ್ಥಿಕೋ ಮತುಪ್। ಸಂಜ್ಞಾಯಾಮಿತಿ ಮತುಪೋ ವತ್ವಂ। ಮತೌ ಬಹ್ವಚೋಽನಜಿರಾದೀನಾಂ। ಪಾ. ೬-೩-೧೧೯। ಇತಿ ದೀರ್ಘಃ॥ ೧೪॥

ಪದಾರ್ಥ

ಪರ್ವತೇಷು—ಪರ್ವತಸಂಕ್ಲೃಪ್ತವಾದ ಪರ್ವತಗಳಲ್ಲಿ। **ಅಪಶ್ರಿತಂ** - ಮರೆಸಿಕೊಂಡಿದ್ದ। **ಅಶ್ವಸ್ಯ**-ಕುದುರೆಯ (ತತ್ಸಂಬಂಧಿಯಾದ ದಧೀಚಿ ಋಷಿಯ)। **ಯಚ್ಛಿರಃ**—ಯಾವ ತಲೆಯನ್ನು। **ಇಚ್ಛನ್**—ಅಪೇಕ್ಷಿಸುತ್ತಿದ್ದನೋ। **ತತ್**—ಅದನ್ನು। **ಶರ್ಯಣಾವತಿ**—ಶರ್ಯಣಾವತ್ತೆಂಬ ಸರಸ್ಸಿನಲ್ಲಿ। **ವಿದತ್**—ಕಂಡುಕೊಂಡನು।

ಭಾವಾರ್ಥ

ವೃತ್ರನ ವಧೆಗೆ ಸಹಾಯಕನಾಗಿ ಇಂದ್ರನು ದಧೀಚಿಋಷಿಯ ಕುದುರೆಯ ಸಂಬಂಧಿಯಾದ ತಲೆಯನ್ನು ಇಚ್ಛಿಸಿದನು. ಅದು ಪರ್ವತದ ಮರೆಯಲ್ಲಿ ಮರೆಸಿಕೊಂಡಿದ್ದಿತು. ಅದನ್ನು ಶರ್ಯಣಾವತ್ತೆಂಬ ಸರಸ್ಸಿನಲ್ಲಿ ಕಂಡು ಅದನ್ನು ತಂದು ಅದರಿಂದ ವೃತ್ರಾಸುರವಧೆಯನ್ನು ಮಾಡಿದನು.

English Translation

Wishing for the horse's head hidden in the mountains, he found it in the lake called Sarvanavat.

ವಿಶೇಷವಿಷಯಗಳು

ಅಶ್ವಸ್ಯ ಶಿರಃ—ಕುದುರೆಯ ತಲೆ, ದಧೀಚಿಋಷಿಯ ತಲೆಯು ಕುದುರೆಯ ತಲೆಯಹಾಗಿದ್ದಿತ್ತೆಂದೂ ಅದು ಅಶ್ವಿನೀದೇವತೆಗಳಿಂದ ಅವನಿಗೆ ಕೊಡಲ್ಪಟ್ಟಿದ್ದಿತೆಂದೂ ಪ್ರತೀತಿ ಇರುವುದು. ದಧೀಚಿಋಷಿಯು ಮೃತನಾದ ಮೇಲೆ ಕುದುರೆಯ ತಲೆಯಂತಿದ್ದ ಅವನ ಶಿರಸ್ಸನ್ನು ಇಂದ್ರನು ಹುಡುಕಿದನು. ಅದು ಒಂದು ಪರ್ವತದ ಮರೆಯಲ್ಲಿ ಶರ್ಯಣಾವತಿಯೆಂಬ ಒಂದು ಸರೋವರದಲ್ಲಿ ಸಿಕ್ಕಿತೆಂದು ಈ ಋಕ್ಕಿನಲ್ಲಿ ವಿವರಿಸಲಾಗಿರುವುದು.

ದಧೀಚಿಋಷಿಗೆ ಕುದುರೆಯ ಶಿರಸ್ಸು ಹೇಗೆ ಬಂದಿತೆಂಬ ವಿಚಾರದಲ್ಲಿ ಸ್ಕಂದಪುರಾಣವು ಒಂದು ಪೂರ್ವೇತಿಹಾಸವನ್ನು ಹೇಳಿರುವರು—ಅಥರ್ವಣ ಪುತ್ರನಾದ ದಧೀಚಿಋಷಿಗೆ ಇಂದ್ರನು ಮಧುವೆಂಬ ಪರಬ್ರಹ್ಮನ ಸ್ವರೂಪ

ವನ್ನು ಉಪದೇಶಮಾಡಿ ಇದನ್ನು ಯಾರಿಗೂ ಹೇಳಕೂಡದೆಂದೂ ಹಾಗೆ ಒಂದು ವೇಳೆ ಹೇಳಿದರೆ ನಿನ್ನ ತಲೆಯು ಬಿದ್ದೆಹೋಗುವುದೆಂದೂ ಹೇಳಿದ್ದನು. **ಕೆಲವು ಕಾಲದ ಮೇಲೆ** ಅಶ್ವಿನೀದೇವತೆಗಳು ಆ ದಧೀಚಿಋಷಿಯ ಸವಿಾಪಕ್ಕೆ ಬಂದು, ಇಂದ್ರನು ನಿನಗೆ ತಿಳಿಸಿದ ಬ್ರಹ್ಮಸ್ವರೂಪವನ್ನು ವಿವರಿಸೆನಲು, ದಧೀಚಿಯು ಅವನನ್ನು ಕುರಿತು ಈ ವಿಷಯವನ್ನು ನಾನು ನಿಮಗೆ ತಿಳಿಸಿದಲ್ಲಿ ನನ್ನ ತಲೆಯು ಬಿದ್ದುಹೋಗುವುದೆಂದು ಇಂದ್ರನು ಹೇಳಿರುವನು. ಆ ಭಯ ದಿಂದ ನಾನು ಹೇಳುವುದಿಲ್ಲವೆನೆಲು, ಅಶ್ವಿನೀದೇವತೆಗಳು ಅದಕ್ಕಾಗಿ ಚಿಂತಿಸಬೇಡ, ನಿನ್ನ ತಲೆಯು ಬಿದ್ದುಹೋದರೆ ನಮ್ಮ ತಲೆಯನ್ನು ನಿನಗೆ ಕೊಡುವುವೆಂದರು. ದಧೀಚಿಯು ಅದಕ್ಕೆ ಸಮ್ಮತಿಸಿ ಹೇಳಿದನು. ಆದರಿಂದ ದಧೀಚಿ ಋಷಿಯ ಶಿರಸ್ಸು ಬಿದ್ದುಹೋಗಲು ಅಶ್ವಿನೀದೇವತೆಗಳು ಒಂದು ಕುದುರೆಯ ಶಿರಸ್ಸನ್ನು ಕತ್ತರಿಸಿ ತಂದು ದಧೀಚಿ ಋಷಿಯ ಶರೀರಕ್ಕೆ ನೇರಿಸಿದರು. ಆದರಿಂದ ದಧೀಚಿಋಷಿಯ ಶಿರಸ್ಸು ಕುದುರೆಯ ಶಿರಸ್ಸಿನಂತಿರುವುದು ಎಂದು ವರ್ಣಿತವಾಗಿದೆ. **ಈ** ವಿಷಯವನ್ನು ಕಕ್ಷೀವಾನ್ ಎಂಬ ಋಷಿಯು ಋ. ಸಂ. ೧-೧೧೭-೨೨ ಋಕ್ಕಿನಲ್ಲಿ ವರ್ಣಿಸಿರುವನು.

ಅಪಶ್ರಿತಂ—**ಅಪಗತ್ಯ ಸ್ಥಿತಂ** । ಕಾಣದಂತೆ ಮರೆಯಾಗಿದ್ದ

ಶರ್ಯಣಾವತಿ—ಸಪ್ತಮ್ಯೇಕವಚನ. ಶರ್ಯಣಾವತ್ ಎಂಬ ಸರೋವರವಲ್ಲಿ , ಈ ಶಬ್ದವು ಋಗ್ವೇದದಲ್ಲಿ ೧ ೪೪-೧೪ ; ೭-೬-೩೯ ; ೭-೭-೨೯ , ೭-೬೪-೧೧ ; ೯-೬೫-೨೨ , ೯-೧೧೩-೧ ; ೧೦-೪೫-೨ ಇತ್ಯಾದಿ ಋಕ್ಕುಗಳಲ್ಲಿ ಪರಿತನವಾಗಿರುವುದು. ಈ ಸ್ಥಳಗಳಲ್ಲೆಲ್ಲಾ ಭಾಷ್ಯಕಾರರು ಇದನ್ನು ಸರೋವರವೆಂದೇ ಹೇಳಿರುವರು. **ಈಗಿನ** Delhi ಎಂಬ ಪ್ರದೇಶದಲ್ಲಿ ಕುರುಕ್ಷೇತ್ರವೆಂಬ ಪ್ರದೇಶದಲ್ಲಿ **ಈ** ಸರೋವರವಿತ್ತೆಂದು ತಿಳಿದುಬರುವುದು. ಪಾಶ್ಚಾತ್ಯರು **ಈ** ಶಬ್ದಕ್ಕೆ ವಿಧವಿಧವಾಗಿ ಅರ್ಥವನ್ನು ಕಲ್ಪಿಸುವರು. **ಶರ್ಯಣಿ** ಎಂಬುದು ಒಂದು ಸ್ಥಳದ ಹೆಸರೆಂದೂ ಅಲ್ಲಿರ್ನ ಸರೋವರಕ್ಕೆ **ಶರ್ಯಣಾವನ್** ಎಂದು ಹೆಸರು ಬಂದಿರಬಹುದೆಂದೂ ಅವರ ಅಭಿಪ್ರಾಯವು. ಮತ್ತೆ ಕೆಲವರು ಶರ್ಯಣ ಎಂದರೆ ಜೊಂಡು ಹುಲ್ಲೆಂದೂ, ಅಂತಹ ಜೊಂಡು ಹುಲ್ಲು ಬೆಳೆದಿರುವ ನೀರಿನ ಜಲಾಶಯಕ್ಕೆ **ಶರ್ಯಾಣಾವನ್** ಎಂದು ಹೆಸರಿರಬಹುದೆಂದೂ ಊಹಿಸುತ್ತಾರೆ. **ಮತ್ತೆ** ಕೆಲವರು ಕಾಶ್ಮೀರದೇಶದಲ್ಲಿ ಪರ್ವತಗಳ ಮಧ್ಯದಲ್ಲಿರುವ ಅನೇಕ ಸರೋವರಗಳಲ್ಲಿ ಇದು ಒಂದಾಗಿರಬಹುದೆಂದು ಅಭಿಪ್ರಾಯಪಡುವರು.

॥ ವ್ಯಾಕರಣಪ್ರಕ್ರಿಯಾ ॥

ಇಚ್ಛನ್—ಇಷು ಇಚ್ಛಾಯಾಂ ಧಾತು. ತುದಾದಿ ಲಡರ್ಥವಲ್ಲಿ ಶತೃಪ್ರತ್ಯಯ **ತುದಾದಿಭ್ಯಃ ಶಃ** ಎಂಬುದರಿಂದ ಶವಿಕರಣ. **ಇಷುಗಮಿಯಮಾಂ ಛಿಃ** ಎಂಬುದರಿಂದ ಛಾದೇಶ ಇಚ್ಛತ್ ಶಬ್ದವಾಗುತ್ತದೆ ವಿಕರಣಸ್ವರ ಬರುತ್ತದೆ. ಪ್ರಥಮಾ ಸು **ಪರವಾದಾಗ ನುಮಾಗಮ:** ಸುಲೋಪ. ಅಂತ್ಯತಕಾರಲೋಪ.

ಅಪಶ್ರಿತಮ್—ಶ್ರಿಞ್ ಸೇವಾಯಾಂ ಧಾತು. ಕ್ತಿನ್ ಪ್ರತ್ಯಯ. **ತಾದೌಚ ನಿತಿ ಕೃತ್ಯೆತೌ** (ಪಾ. ಸೂ. ೬-೩-೬೦) ಎಂಬುದರಿಂದ ಗತಿಗೆ ಪ್ರಕೃತಿಸ್ವರ ಬರುತ್ತದೆ.

ವಿದತ್ – ವಿದ ಜ್ಞಾನೇ ಧಾತು. ಲುಙ್ ಪ್ರಥಮಪುರುಷ ಏಕವಚನ ಪರವಲ್ಲಿರುವಾಗ ಸ್ಯತ್ಯಯದಿಂದ ಚ್ಲಿಗೆ ಅಙಾದೇಶ ಬರುತ್ತದೆ. ಜುತ್ತಾದುದರಿಂದ ಲಘೂಪಧಗುಣ ಬರುವುದಿಲ್ಲ. **ಬಹುಲಂ ಛಂದಸ್ಯಮಾಙ್ಯೋಗೇ೨ಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ.

ಶರ್ಯಣಾವತಿ—ಶರ್ಯಣಾಃ ಎಂಬುದು ಒಂದು ದೇಶದ ಹೆಸರು. ಶರ್ಯಣಾನಾಂ ಅದೂರಭವಂ ಸರಃ ಶರ್ಯಣಾವತ್. ಮಧ್ವಾದಿಗಣದಲ್ಲಿ ಶರ್ಯಣಶಬ್ದವನ್ನು ಪಾಠಮಾಡಿರುವುದರಿಂದ **ಮಧ್ವಾದಿಭ್ಯಶ್ಚ** (ಪಾ. ಸೂ ೪-೩-೮೬) ಎಂಬುದರಿಂದ ಚಾತುರರ್ಥಿಕದಲ್ಲಿ ಅಣಿಗೆ ಅಪವಾದವಾಗಿ ಮತುಪ್ ಪ್ರತ್ಯಯ ಬರುತ್ತದೆ. ಸಂಜ್ಞಾ ತೋರುವುದರಿಂದ **ಸಂಜ್ಞಾಯಾಂ** ಎಂಬುದರಿಂದ ಮತುಪಿನ ಮಕಾರಕ್ಕೆ ವಕಾರಾದೇಶ. ಶರ್ಯಣಾವತ್ ಎಂದಿರುವಾಗ **ಮತೌ ಬಹ್ವಚೋ೨ನಜಿರಾದೀನಾಮ್** (ಪಾ. ಸೂ. ೬-೩-೧೧೯) ಎಂಬುದರಿಂದ ಮತುಪ್ ಪರವಲ್ಲಿರುವಾಗ ಪೂರ್ವಕ್ಕೆ ದೀರ್ಘ. ಶರ್ಯಣಾವತ್ ಶಬ್ದದ ಸಪ್ತಮಿಯ ಏಕವಚನದಲ್ಲಿ ಶರ್ಯಣಾವತಿ ಎಂದು ರೂಪ ಸಾಗುತ್ತದೆ ॥ ೧೪ ॥

ಋಕ್ಸಂಹಿತಾಪಾಠಃ ।

ಅತ್ರಾಹ ಗೋರಮನ್ವತ ನಾಮ ತ್ವಷ್ಟುರಪೀಚ್ಯಂ ।
ಇತ್ಥಾ ಚಂದ್ರಮಸೋ ಗೃಹೇ ॥ ೧೫ ॥

॥ ಪದಪಾಠಃ ॥

ಅತ್ರ । ಅಹ । ಗೋಃ । ಅಮನ್ವತ । ನಾಮ । ತ್ವಷ್ಟುಃ । ಅಪೀಚ್ಯಂ ।
ಇತ್ಥಾ । ಚಂದ್ರಮಸಃ । ಗೃಹೇ ॥ ೧೫ ॥

ಸಾಯಣಭಾಷ್ಯಂ

ಅಶಮೂರ್ತಿನಾಮ್ನ್ಯೇಕಾಹೇ ಕರ್ತವ್ಯೇ ಪೂರ್ವಮೇವೈಕಂ ಮಾಸಂ ಸೌರ್ಯಾಚಾಂದ್ರಮಸೀಭ್ಯಾಮಿಷ್ಟಿಭ್ಯಾಂ ಯಜೇತ್ಯುಕ್ತಂ । ತತ್ರ ಪೂರ್ವಪಕ್ಷೇ ಚಾಂದ್ರಮಸೀಷ್ಟಿಃ । ಅತ್ರಾಹ ಗೋರಿತಿ ತಸ್ಯಾಂ

ಪ್ರಧಾನಸ್ಯಾನುವಾಕ್ಯಾ । ಅತಿಮೂರ್ತಿನೇತಿ ಖಂಡೇ ಸೂತ್ರಿತಂ । ಅತ್ರಾಹ ಗೋರಮನ್ವತ ನವೋನವೋ ಭವತಿ ಜಾಯಮಾನಃ । ಅ. ೯-೮ । ಇತಿ ॥

ಅತ್ರಾಹಾಸ್ಮಿನ್ನೇವ ಗೋರ್ಗಂತುಶ್ಚಂದ್ರಮಸೋ ಗೃಹೇ ಮಂಡಲೇ ತ್ವಷ್ಟುರ್ದೀಪ್ತಸ್ಯಾದಿತ್ಯಸ್ಯ ಸಂಬಂಧ್ಯಪೀಚ್ಯಂ ರಾತ್ರಾವಂತರ್ಹಿತಂ ಸ್ವಕೀಯಂ ಯೆನ್ನಾಮ ತೇಜಸ್ತದಾದಿತ್ಯಸ್ಯ ರಶ್ಮಯ ಇತ್ಥೇತ್ಥ-ಮನೇನ ಪ್ರಕಾರೇಣಾಮನ್ವತ । ಅಜಾನನ್ । ಉದಕಮಯೇ ಸ್ವಚ್ಛೇ ಚಂದ್ರಬಿಂಬೇ ಸೂರ್ಯಕಿರಣಾಃ ಪ್ರತಿಫಲಂತಿ । ತತ್ರ ಪ್ರತಿಫಲಿತಾಃ ಕಿರಣಾಃ ಸೂರ್ಯೇ ಯಾದೃಶೀಂ ಸಂಜ್ಞಾಂ ಲಭಂತೇ ತಾದೃಶೀಂ ಚಂದ್ರೇ೭ಪಿ ವರ್ತಮಾನಾ ಲಭಂತ ಇತ್ಯರ್ಥಃ । ಏತದುಕ್ತಂ ಭವತಿ । ಯದ್ಯಾತ್ರಾವಂತರ್ಹಿತಂ ಸೌರಂ ತೇಜಸ್ತಚ್ಚಂದ್ರಮಂಡಲಂ ಪ್ರವಿಶ್ಯಾಹನೀವ ನೈಶಂ ತಮೋ ನಿವಾರ್ಯ ಸರ್ವಂ ಪ್ರಕಾಶಯತಿ । ಈದೃಗ್ಭೂತತೇಜಸಾ ಯುಕ್ತಃ ಸೂರ್ಯಶ್ಚೇಂದ್ರ ಏವ ದ್ವಾದಶಸ್ವಾದಿತ್ಯೇಷ್ವಿಂದ್ರಸ್ಯಾಪಿ ಪರಿಗಣಿತತ್ವಾತ್ । ಅತೋ೭ಹೋರಾತ್ರಯೋಃ ಪ್ರಕಾಶಕ ಇಂದ್ರ ಏವೇತೀಂದ್ರಸ್ತುತೇಃ ಪ್ರತೀಯಮಾನತ್ವಾದಿಂದ್ರೋ-ದೇವತ್ಯೇತದುಪಪನ್ನಂ ಭವತಿ । ಈದೃಗ್ಭೂತಸ್ಯ ತೇಜಸ ಆಶ್ರಯತ್ವೇನ ಚಂದ್ರಮಸಃ ಪ್ರಾಧಾನ್ಯ-ವಿವಕ್ಷಯಾ ಚಾಂದ್ರಮಸ್ಯಾಮಿಷ್ಟ್ಯಾಮಿನೀಯೋಗೋ೭ಪ್ಯುಪಪದ್ಯತೇ । ಅತ್ರ ನಿರುಕ್ತಂ । ಅಥಾಸ್ಯೈಕೋ ರಶ್ಮಿಶ್ಚಂದ್ರಮಸಂ ಪ್ರತಿದೀಪ್ಯತೇ । ತದೇತೇನೋಪೇಕ್ಷಿತವ್ಯಮಾದಿತ್ಯತೋ೭ಸ್ಯ ದೀಪ್ತಿರ್ಭವತೀತಿ । ಸುಷುಮ್ಣಃ ಸೂರ್ಯರಶ್ಮಿಶ್ಚಂದ್ರಮಾ ಗಂಧರ್ವ ಇತ್ಯಪಿ ನಿಗಮೋ ಭವತಿ । ಸೋ೭ಪಿ ಗೌರುಚ್ಯತೇ । ಅತ್ರಾಹ ಗೋರಮನ್ವತೇತಿ । ನಿ. ೨-೬ । ಅತ್ರ ಹ ಗೋಃ ಸಮನುಸಂಸತಾದಿತ್ಯೆರಶ್ಮಯಃ ಸ್ವಂ ನಾಮಾಪೀಚ್ಯಮಪಚಿತಮಪಗತಮಪಿಹಿತಮಂತರ್ಹಿತಂ ನಾ । ನಿ. ೪-೨೫ । ಇತಿ ॥ ಅಮನ್ವತ । ಮನು ಅವಬೋಧನೇ । ಅಪೀಚ್ಯಂ । ಅಪಪೂರ್ವಾಚ್ಚಿನೋತೇರಥ್ಪ್ರತ್ಯಯೆಶ್ಚ । ಉ. ೪-೧೧೧ । ಇತಿ ನಿಪಾತನಾದ್ಯತ್ । ಅತ ಏವಾಭಿಮತರೂಪಸಿದ್ಧಿಃ । ಯದ್ವಾ । ಅಪಿಪೂರ್ವಾದಂಚತೇರ್ಯತ್ಪ್ರತ್ಯಯಾ-ದಿನಾ ಕ್ವಿನ್ । ಅನಿದಿತಾಮಿತಿ ನಲೋಪಃ । ಅಪಿಗತೇ ನಿಗತೇ ಭವಮಪೀಚ್ಯಂ । ಭವೇ ಛಂದಸೀತಿ ಯತ್ । ಅಚ ಇತ್ಯಕಾರಲೋಪೇ ಚಾವಿತಿ ದೀರ್ಘತ್ವಂ । ತಿತ್ಸ್ವರಿತಃ । ಅಪೀಚ್ಯೋ೭ಪ್ರಕಾಶ ಇತಿ ಭಟ್ಟ-ಭಾಸ್ಕರಮಿಶ್ರಃ । ಇತ್ಥಾ । ಇದಂಶಬ್ದಾತ್ಥಾ ಹೇತೌ ಚ ಚ್ಛಂದಸೀತಿ ಪ್ರಕಾರವಚನೇ ಥಾಪ್ರತ್ಯಯಃ । ಯದಿ ತತ್ರೇದಂಶಬ್ದೋ ನಾನುವರ್ತತೇ ತದಾನೀಮಿದಮಸ್ಥಮುಃ । ಪಾ. ೫-೩-೨೪ । ಇತಿ ಥಮುಪ್ರತ್ಯಯಃ । ಅವ್ಯಯಾದಾಪ್ಸುಪಃ । ಪಾ. ೨-೪-೮೨ । ಇತಿ ಸುಬ್ಲುಕಂ ಬಾಧಿತ್ವಾ ಸುಪಾಂ ಸುಲುಗಿತಿ ಡಾದೇಶಃ । ಚಂದ್ರಮಸಃ । ಚಂದ್ರಮಾಹ್ಲಾದನಂ ಮಿಮೀತೇ ನಿರ್ಮಿಮೀತ ಇತಿ ಚಂದ್ರಮಾಃ । ಚಂದ್ರೇ ಮಾಜುಕೋ ಡಿತ್ । ಉ. ೪-೨೨೬ । ಇತ್ಯಸಿಪ್ರತ್ಯಯೇ ದಾಸೀಭಾರಾದಿಷು ಪಠಿತತ್ವಾತ್ಪೂರ್ವಪದಪ್ರಕೃತಿಸ್ವರತ್ವಂ । ಪೂರ್ವಪದಂ ಚ ಸ್ಥಾಯಿತಂಬೀತ್ಯಾದಿನಾ ರಕ್ಷತ್ಯಯಾಂತಮುಂತೋದಾತ್ತಂ ॥

ಪ್ರತಿಪದಾರ್ಥ

ಅತ್ರಾಹ---ಇಲ್ಲೀನೆ । **ಗೋಃ**---ಸಂಚರಿಸುತ್ತಿರುವ । **ಚಂದ್ರಮಸಃ**---ಚಂದ್ರನ । **ಗೃಹೇ**---ಮಂಡಲ ದಲ್ಲಿ । **ತ್ವಷ್ಟುಃ**---ಪ್ರಕಾಶಕನಾದ ಆದಿತ್ಯನ । **ಅಪೀಚ್ಯಂ**---(ರಾತ್ರಿಕಾಲದಲ್ಲಿ) ಮರೆಯಾಗಿರುವ । **ನಾಮ**---ತೇಜಸ್ಸನ್ನು । **ಇತ್ಥಾ**---ಈ ವಿಧದಲ್ಲಿ । **ಅಮನ್ವತ**---ತಿಳಿದರು ॥

ಭಾವಾರ್ಥ

ರಾತ್ರಿಕಾಲದಲ್ಲಿ ಮರೆಯಾಗಿರುವ ಪ್ರಕಾಶಕನಾದ ಆದಿತ್ಯನ ತೇಜಸ್ಸನ್ನು ಇಲ್ಲೇ ಸಂಚರಿಸುತ್ತಿರುವ ಚಂದ್ರಮಂಡಲದಲ್ಲಿ ಕಂಡುಕೊಂಡರು

English Translation

Thus did the solar rays perceive in this mansion of the travelling moon, the hidden light of the Sun.

॥ ವಿಶೇಷವಿಷಯಗಳು ॥

ಅತಿಸೂರ್ತಿ ಎಂಬ ಒಂದು ದಿನದಲ್ಲಿ ಮಾಡುವ ಯಾಗದಲ್ಲಿ ಒಂದು ತಿಂಗಳ ಮುಂಚೆ ಸೌರ್ಯಾ ಚಾಂದ್ರಮಸೀಷ್ಟಿಗಳನ್ನು ಮಾಡಬೇಕು. ಆಗ ಮೊದಲು ಚಾಂದ್ರಮಸೀಷ್ಟಿಯನ್ನು ಮಾಡುವಾಗ **ಅತ್ರಾಹ ಗೋರಮನ್ವತ** ಎಂಬ ಋಕ್ಕನ್ನು **ಪುರೋನುವಾಕ್ಯಾಮಂತ್ರವನ್ನಾಗಿ** ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಅತಿಮೂರ್ತಿನಾ** ಎಂಬ ಖಂಡದಲ್ಲಿ **ಅತ್ರಾಹ ಗೋರಮನ್ವತ ನವೋನವೋ ಭವತಿ ಜಾಯಮಾನಃ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೯-೮) .

ಅತ್ರ ಅಹ—ಇಲ್ಲಿಯೇ, ಈ ಪ್ರದೇಶದಲ್ಲಿಯೇ.

ಗೋಃ—**ಗಂತುಃ** । ಚಲಿಸುತ್ತಿರುವ

ತೃಷ್ಣುಃ— ಪ್ರಕಾಶಿಸುತ್ತಿರುವ ಆದಿತ್ಯನ ; ದ್ಯೌರಾದಿತ್ಯರುಗಳ ಹೆಸರುಗಳಲ್ಲಿ ತೃಷ್ಣುಸ್ಥಾನ ಒಂದು ನಿರ್ವಚನವು.

ಅಪೀಚ್ಯಂ— ಅಪಿಗತೇ ನಿಗತೇ ಭವಮಪೀಚ್ಯಂ । ಅಪೀಚ್ಯೋ೭ಪ್ರಕಾಶ ಇತಿ ಭಟ್ಟಭಾಸ್ಕರ-ಮಿಶ್ರಃ । ಪ್ರಕಾಶರಹಿತವಾದ ತೇಜಸ್ಸು. ಸೂರ್ಯನ ಕಿರಣಗಳು ಚಂದ್ರಮಂಡಲದ ಮೇಲೆ ಬಿದ್ದು ಪ್ರತಿಫಲಿತವಾಗುವವು. ಆಗ ಆ ಕಿರಣಗಳು ನೇರವಾದ ಸೂರ್ಯನ ಕಿರಣಗಳಂತೆ ಅತಿ ಪ್ರಕಾಶಮಾನವಾಗಿರದೆ ಸಾಧಾರಣ ಪ್ರಕಾಶದಿಂದ ಕೂಡಿರುವವು. ಯಾಸ್ಕರ ನಿರ್ವಚನವು-

ಅತ್ರ ಹ ಗೋಃ ಸಮಮಂಸತಾದಿತ್ಯರಶ್ಮಯಃ ಸ್ವಂ ನಾಮಾಪೀಚ್ಯಮಪಚಿತಮುಪಗತಮಪಿಹಿತಮಂತರ್ಹಿತಂ ವಾಮುತ್ರ ಚಂದ್ರಮಸೋ ಗೃಹೇ ॥ (ನಿ. ೪-೨೫)

ಇಲ್ಲಿ **ಅಪೀಚ್ಯಂ** ಎಂಬ ಶಬ್ದಕ್ಕೆ ಯಾಸ್ಕರು **ಅಪಚಿತಂ, ಅಪಗತಂ ಅಪಹಿತಂ ಅಂತರ್ಹಿತಂ ವಾ ॥** ಎಂದು ಅರ್ಥ ನಿರೂಪಣೆ ಮಾಡಿರುವರು. ಸೂರ್ಯನ ರಶ್ಮಿಗಳು ಸೂರ್ಯಮಂಡಲದಿಂದ ಹೊರಹೊರಟು ಚಂದ್ರಮಂಡಲದಲ್ಲಿ ಪ್ರವೇಶಿಸಿ ಅದರಲ್ಲಿ ಅಂತರ್ಹಿತವಾಗಿರುವವು. ಎಂದರೆ ಒಳಭಾಗದಲ್ಲಿ ಸೇರಿರುವುದರಿಂದ ಕಣ್ಣಿಗೆ ಕಾಣಿಸುವುದಿಲ್ಲ. ಇನ್ನೂ ಆ ರಶ್ಮಿಗಳ ಪ್ರಕಾಶವು ಅತಿಪ್ರಕಾಶಯುಕ್ತವಿಲ್ಲದೆ ಸಾಧಾರಣ ಬೆಳಕಿನಿಂದ ನಮ್ಮ ಕಣ್ಣಿಗೆ ಕಾಣಿಸುವುದು. **ಅಪೀಚ್ಯಂ** ಎಂದರೆ **ಅಂತರ್ಹಿತಂ**—ಒಳಗೆ ಸೇರಿರುವ ಎಂದರ್ಥವು

ಇತ್ಥಾ—ಈ ಪ್ರಕಾರವಾಗಿ ಎಂದರೆ ಸೂರ್ಯನ ಕಿರಣಗಳು ಚಂದ್ರ ಮಂಡಲದ ಮೇಲೆ ಬಿದ್ದು ಪ್ರತಿಬಿಂಬಿತವಾಗಿರುವುದನ್ನು ಎಂದಭಿಪ್ರಾಯವು. ರಾತ್ರಿಯಲ್ಲಿ ಸೂರ್ಯನು ಕಾಣಿಸುವುದಿಲ್ಲ. ಆಗ ಆ ಸೂರ್ಯ ಸಂಬಂಧವಾದ ತೇಜಸ್ಸು ಉದಕಮಯವಾದ ಚಂದ್ರಬಿಂಬದ ಮೇಲೆ ಬಿದ್ದು ರಾತ್ರಿಕಾಲದಲ್ಲಿ ಹಗಲಿನಂತೆ ಕತ್ತಲೆಯನ್ನು ಹೋಗಲಾಡಿಸಿ ಬೆಳಕನ್ನುಂಟುಮಾಡುವುದು. ಆದುದರಿಂದ ಈ ವಿಧವಾದ ಬೆಳಕಿನಿಂದ ಕೂಡಿದ ಚಂದ್ರನೇ ಸೂರ್ಯನಾಗಿರುವನು (ಚಂದ್ರನ ಬೆಳಕು ಸೂರ್ಯನಿಂದ ಬಂದಿರುವುದರಿಂದ) ಎಂದು ಜನರು ತಿಳಿಯುವರು. ದ್ವಾದಶಾದಿತ್ಯರಲ್ಲಿ ಇಂದ್ರನೂ ಒಬ್ಬನೆಂದು ಪರಿಗಣಿಸಲ್ಪಟ್ಟು ಇಂದ್ರನೇ ಅಹೋ ರಾತ್ರಿಗಳಲ್ಲಿಯೂ ಪ್ರಕಾಶವನ್ನುಂಟುಮಾಡುವುದರಿಂದ ಈ ಋಕ್ಕು ಇಂದ್ರದೇವತಾಕವೆಂದು ತಿಳಿಯಬೇಕೆಂದು ಭಾಷ್ಯಕಾರರು ಹೇಳಿರುವರು. ಈ ಋಕ್ಕಿನಲ್ಲಿ ಚಂದ್ರನ ತೇಜಸ್ಸಿಗೇ ಪ್ರಾಧಾನ್ಯವಿರುವುದರಿಂದ ಚಾಂದ್ರಮಾಸ್ಯೇಷ್ಟಿಯಲ್ಲಿ ಈ ಋಕ್ಕಿನ ವಿನಿಯೋಗವಿರುವುದು.

ಯಾಸ್ಕರು ತಮ್ಮ ನಿರುಕ್ತದಲ್ಲಿ ಈ ರೀತಿ ಹೇಳಿರುವರು.

ಅಥಾಸ್ಯೈಕೋ ರಶ್ಮಿರ್ಚಂದ್ರಮಸಂ ಪ್ರತಿ ದೀಪ್ಯತೇ ತದೇತೇನೋಪೇಕ್ಷಿತವ್ಯಂ। ಆದಿತ್ಯೋ೭ಸ್ಯ ದೀಪ್ತಿರ್ಭವತಿ। ಸುಷುಮ್ನಃ ಸೂರ್ಯರಶ್ಮಿರ್ಚಂದ್ರಮಾ ಗಂಧರ್ವಃ ಇತ್ಯಪಿ ನಿಗಮೋ ಭವತಿ॥ (ನಿ. ೨-೬).

ಎಂದರೆ ಸೂರ್ಯನ ರಶ್ಮಿಗಳಲ್ಲಿ ಸುಷುಮ್ನವೆಂಬ ಒಂದು ರಶ್ಮಿಯು ಚಾಂದ್ರಮಂಡಲದ ಮೇಲೆ ಬಿದ್ದು ಅದನ್ನು ಪ್ರಕಾಶಗೊಳಿಸುವುದು. ಇದನ್ನು ಮಂತ್ರದೃಷ್ಟಿಯಿಂದ ನೋಡಿ ತಿಳಿದುಕೊಳ್ಳಬೇಕು. ಸೂರ್ಯನ ರಶ್ಮಿಯಿಂದ ಚಂದ್ರನು ಬೆಳಗುವುದರಿಂದ ಚಂದ್ರನಲ್ಲಿರುವ ಬೆಳಕು ಸೂರ್ಯನಿಂದಲೇ ಉಂಟಾಗುವುದೆಂದು ತಿಳಿಯಬೇಕು. **ಆದಿತ್ಯೋ೭ಪಿ ಗೌರುಚ್ಯತೆ** (ನಿ ೨-೬) ಎಂದು ಹೇಳಿರುವುದರಿಂದ ಇಲ್ಲಿ **ಗೋಃ** ಎಂದರೆ ಆದಿತ್ಯನಿಗೆ ಹೆಸರು ಆಗುತ್ತದೆ. **ಸರ್ವೇ೭ಪಿ ರಶ್ಮಯೋ ಗಾವ ಉಚ್ಯಂತೆ** (ನಿ. ೨-೬) ಗಾವಃ ಎಂದರೆ ಸೂರ್ಯರಶ್ಮಿಗಳಿಗೂ ಹೆಸರು.

॥ ವ್ಯಾಕರಣಸ್ವಕ್ರಿಯಾ ॥

ಅನುನ್ಯತ— ಮನು ಅವಬೋಧನೇ ಧಾತು. ಲಙ್ ಪ್ರಥಮಪುರುಷ ಒಬ್ಬನಜಸನಲ್ಲಿ **ಅತ್ಮನೇಪದೇಷ್ವನತಃ** ಎಂಬುದರಿಂದ ಅತಾಪೇಶ ಬರುವುದರಿಂದ ಅನುನ್ಯತ ಎಂದು ರೂಪವಾಗುತ್ತದೆ. ತಿಜಂತನಿಘಾತಸ್ವರ ಬರುತ್ತದೆ.

ಅಪೀಚ್ಯಮ್—ಚಿಞ್ ಚಯನೇ ಧಾತು. ಅಪಿಪೂರ್ವವಾಗಿರುವಾಗ **ಅಶ್ಮಾಯದಯಶ್ಚ** (ಉ ಸೂ. ೪-೧೫೮) ಎಂಬುದರಿಂದ ನಿಪಾತನಮಾಡಿರುವುದರಿಂದ ಯತ್ ಪ್ರತ್ಯಯ ಬರುತ್ತದೆ. ನಿಪಾತದಿಂದಲೇ ಇಷ್ಟರೂಪ ಸಿದ್ಧಿಯಾಗುತ್ತದೆ. ಅಥವಾ ಅಪಿಪೂರ್ವಕವಾದ ಅಂಚುಧಾತುವಿಗೆ **ಋತ್ವಿಕ್ದಧೃಕ್** ಎಂಬುದರಿಂದ ಕ್ವಿನ್ ಪ್ರತ್ಯಯ. ಅನಿದಿತಾಂಹಲಉಪ ಎಂಬುದರಿಂದ ನಲೋಪ- **ಅಪಿಗತೇ ನಿಗತೇ ಭವಂ ಅಪೀಚ್ಯಮ್ ಭವೇ ಛಂದಸಿ** ಎಂಬುದರಿಂದ ಯತ್ ಪ್ರತ್ಯಯ. **ಅಚಃ** ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ ಬಂದಮೇಲೆ **ಚೌ** ಎಂಬುದರಿಂದ ಪೂರ್ವಪದಕ್ಕೆ ದೀರ್ಘ. **ತಿತ್ಸ್ವರಿತಮ್** (ಪಾ. ಸೂ ೬-೧-೧೮೫) ಎಂಬುದರಿಂದ ಸ್ವರಿತಸ್ವರ ಬರುತ್ತದೆ. **ಅಪೀಚ್ಯೋ೭ಪ್ರಕಾಶಃ** (ಅಪೀಚ್ಯ ಎಂದರೆ ಪ್ರಕಾಶಿಸದಿರುವುದು) ಎಂದು ಭಟ್ಟಭಾಸ್ಕರ ಮಿಶ್ರರು ಹೇಳಿರುತ್ತಾರೆ.

ಇತ್ಥಾ—ಇದಂ ಶಬ್ದದ ಮೇಲೆ ಪ್ರಕಾರರೂಪಾರ್ಥವು ತೋರುತ್ತಿರುವಾಗ **ಥಾ ಹೇತೌ ಚ ಛಂದಸಿ** (೫-೩-೨೬) ಎಂಬುದರಿಂದ ಥಾ ಪ್ರತ್ಯಯ. ಆ ಸೂತ್ರದಲ್ಲಿ ಇದಂ ಶಬ್ದವು ಅನುವೃತ್ತವಾಗುವುದಿಲ್ಲ ಎಂದು ಸಕ್ಷಾಂತರವಿದೆ ಆಗ **ಇದಮಸ್ಥಮುಃ** (ಪಾ. ೫-೩-೨೪) ಎಂಬುದರಿಂದ ಥಮುಪ್ರತ್ಯಯ. **ಸ್ವರಾದಿ ನಿಪಾತಮವ್ಯಯಂ** ಎಂದು ಈ ಪ್ರತ್ಯಯಾಂತವಾದ ಶಬ್ದಕ್ಕೆ ಅವ್ಯಯಸಂಜ್ಞಾ ಬರುತ್ತದೆ. ಆಗ ವ್ಯತ್ಯಯದಿಂದ **ಅವ್ಯಯೋದಾಪ್ ಸುಪಃ** (ಪಾ. ಸೂ. ೨-೪-೮೨) ಎಂಬುದರಿಂದ ಬರುವ ಸುಬ್ಲುಕನ್ನು ಬಾಧಿಸಿ **ಸುಪಾಂಸುಲುಕ್** ಸೂತ್ರದಿಂದ ವಿಭಕ್ತಿಗೆ ಡಾದೇಶ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಚಂದ್ರಮಸಃ—ಚಂದ್ರಮಾಹ್ಲಾದನಂ ಮಿಮೀತೇ ನಿರ್ಮಿಮೀತೇ ಇತಿ ಚಂದ್ರಮಾಃ **ಚಂದ್ರೋ ಮಾಜಶೋ ಡಿತ್** (ಉ. ಸೂ. ೪-೬೬೭) ಎಂಬುದರಿಂದ ಚಂದ್ರಶಬ್ದವು ಉಪಪದವಾಗಿರುವಾಗ ಮಾಜ್ ಧಾತುವಿಗೆ ಅಸಿ ಪ್ರತ್ಯಯ ಬರುತ್ತದೆ. ಚಂದ್ರಮಸ್ ಶಬ್ದವಾಗುತ್ತದೆ. **ಪಷ್ಠೀಏಕವಚನಾಂತರೂಪ**. ಕೃದುತ್ತರಪದ ಪ್ರಕೃತಿಸ್ವರವು ಪ್ರಾಪ್ತವಾದರೆ ದಾಸೀಭಾರಾದಿಯಲ್ಲಿ ಪಠಿತವಾಗಿರುವುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ ಪೂರ್ವದಲ್ಲಿರುವ **ಚಂದ್ರ** ಪದವಾದರೋ **ಸ್ಫಾಯಿತಂಚಿ** (ಉ. ಸೂ. ೩-೧೭೦) ಸೂತ್ರದಿಂದ ವಿಧಿಸಲ್ಪಡುವ ರಕ್ ಪ್ರತ್ಯಯಾಂತವಾಗುವುದರಿಂದ ಅಂತೋದಾತ್ತವಾಗುತ್ತದೆ. ॥ ೧೬ ॥

ಸಂಹಿತಾಪಾಠಃ

ಕೋ ಅದ್ಯ ಯುಂಕ್ತೇ ಧುರಿ ಗಾ ಋತಸ್ಯ ಶಿಮೀವತೋ ಭಾಮಿನೋ ದುರ್ಹಣಾಯೂನ್ ।
ಆಸನ್ನಿಷೂನ್ಹೃತ್ಸ್ವಸೋ ಮರ್ಯೋಭೂನ್ನ ಏಷಾಂ ಭೃತ್ಯಾಮೃಣಧ್ರಸ್ಯ ಚೀವಾತ್ ॥ ೧೭ ॥

॥ पदपाठः ॥

कः । अद्य । युंक्ते । धुरि । गाः । ऋतस्य । शिमीऽवतः । भामिनः।
दुःऽहृणायून् ।
आसन्ऽइषून् । हृत्सुऽअसः । मयुःऽभून् । यः । अस्मान् ।
भृत्याम् । ऋणधत् । सः । जीवातत् ॥ ८६ ॥

सायणभाष्यं

सर्वस्मिन्नाप्रियाख्ये काण्वेऽस्य हविषः कोऽद्येति द्वे ऋचौ योज्यानुवाक्ये। सूत्रितं च। काण्वं दशमं कोऽद्य युंक्ते धुरि गा ऋतस्येति द्वे इति॥

अद्यास्मिन्कर्मणि ऋतस्य गच्छत इन्द्रसंबन्धिनोऽद्य रथस्य धुर्यश्ववहनप्रदेशे गा गामतिमतोऽश्वान् कोऽयुंक्ते। कोऽयुंक्ते। कोऽ नामायोक्तुं शक्नोतीति। स कोऽपीत्यर्थः। कीदृशानश्वान्। शिमीवतोऽतीव कर्मवतोऽतीव भामिनस्तेजसा युक्तान् दुर्हृणायून् परैर्दुःसहेन क्रोधेन युक्तान्। हृणीयतिः कुप्यतिकर्मा। आसन्निषून् येषामाशानास्यानां मुखप्रदेशे शत्रूणां प्रहरणार्थानिषवो बाणा वर्तन्ते तान् हृत्सुऽसः। हृत्सु शत्रूणां हृदयेष्वस्यन्ति स्वकीयं क्षपयन्तीति हृत्सुऽसः। मयोभून् मयसः सुखस्य भावयितॄन्। स्वकीयानां सुखप्रदानित्यर्थः। योऽयं यजमान एषामाशानामश्वानां भृत्यां भरणक्रियां रथवाहनक्रियामृणधत् समर्धयति। स्तौतीति यावत्। स योऽयं यजमानोऽद्य जीवात्। जीवनवान्भवेत्॥ यद्वा। क इति प्रजापतिरुच्यते। कोऽ ह वै नाम प्रजापतिरिति श्रुतेः। ऋतस्य। यज्ञस्य धुरि निर्वाहे गा वेदरूपान्पाप्मनिरासेषानदीप्तानद्य युंक्ते। संयोजयति। कीदृशान्। शिमीवतः प्रतिपाद्यैः कर्मभिर्युक्तान् भामिन ऊर्जस्वलान् दुर्हृणायून्। हृणीयतिर्हानिकर्मा। हातुमशक्यान् वेदाध्ययनस्य नित्यत्वात्। आसन्निषून् आसन्यास्य इषुरीषणं गमनमुच्चारणं येषां तान् हृत्सु हृदयेषु दीप्यमानान्। प्रकाशमानानित्यर्थः। मयोभून् मयसोऽध्ययनप्रभवस्य सुखसाधनस्याध्यापयितॄन्। योऽयं यजमान एषां वचसां भृत्यां भरणक्रियामृणधत् ऋद्धिमतीं करोति स जीवात्। स एव जीवति। अन्ये जीवन्मृता इत्यर्थः॥ दुर्हृणायून्। हृणीङ् लज्जायां। कण्ड्वादित्वात्कः। बहुलवचनादस्मादुण्प्रत्ययः।

ತ್ಯಯೆಃ। ಅತೋ ಲೋಪೇ ಸತಿ ವರ್ಣವ್ಯಾಪತ್ತ್ಯಾ ಯಕಾರಃ। ಮೃಗಯ್ವಾದಿರ್ವಾ ದ್ರಷ್ಟವ್ಯಃ। ಆಸನ್ನಿಷೂನ್। ಪದ್ಯನ್ನಿತ್ಯಾದಿನಾಸ್ಯಶಬ್ದಸ್ಯಾಸನ್ನಾದೇಶಃ। ಇಷ ಗತಾವಿತ್ಯಸ್ಮಾದಿಷೇಃ ಕಿಚ್ಚ ।ಉ. ೧-೧೪। ಇತ್ಯುಪ್ರತ್ಯಯಃ। ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ। ಹೃತ್ಸ್ವಸಃ। ಅಸು ಕ್ಷೇಪಣೇ। ಅಸ ಗತಿದೀಪ್ತ್ಯಾದಾನೇಷು। ಕ್ವಿಪ್ಚೇತಿ ಕ್ವಿಪ್। ತತ್ಪುರುಷೇ ಕೃತಿ ಬಹುಲಮಿತ್ಯಲುಕ್। ಕೃದುತ್ತರಪದಪ್ರಕೃತಿಸ್ವರತ್ವಂ। ಮಯೋಭೂನ್। ವ್ಯತ್ಯಯೇನ ಹ್ರಸ್ವತ್ವಂ। ಯದ್ವಾ। ಮಿತದ್ವ್ಯಾದಿಭ್ಯ ಉಪಸಂಖ್ಯಾನಂ। ಪಾ. ೩-೨-೧೪೦-೧। ಇತಿ ಡುಪ್ರತ್ಯಯಃ। ಭೃತ್ಯಾಂ। ಭೃಞ್ ಭರಣೇ। ಸಂಜ್ಞಾಯಾಂ ಸಮಜನಿಷದ।। ಪಾ. ೩-೩-೯೯। ಇತಿ ಕ್ಯಪ್। ಉದಾತ್ತ ಇತ್ಯನುವೃತ್ತೇಃ ಪ್ರತ್ಯಯಸ್ಯೋದಾತ್ತತ್ವಂ। ಯುಣಧತ್। ಯುಧು ವೃದ್ಧೌ। ಲೇಟ ವ್ಯತ್ಯಯೇನ ಶ್ನಮ್। ಲೇಡೋಽಡಾಟಾವಿತ್ಯಡಾಗಮಃ। ಇತಶ್ಚ ಲೋಪ ಇತೀಕಾರಲೋಪಃ। ಜೀವಾತ್। ಜೀವ ಪ್ರಾಣಧಾರಣೇ। ಪೂರ್ವವಲ್ಲೇಟ್ಯಾಡಾಗಮಃ।।

ಪ್ರತಿಪದಾರ್ಥ

ಅದ್ಯ—ಈ ಯಜ್ಞಕರ್ಮದಲ್ಲಿ। **ಯತಸ್ಯ**—(ಇಂದ್ರನ) ರಥದ। **ಧುರಿ**—ನುಂಭಾಗವನ್ನ (ನೊಗಕ್ಕೆ)। **ಶಿಮಿವತಃ**—ವೀರ್ಯಕರ್ಮಗಳಿಂದ ಕೂಡಿದವೂ। **ಭಾಮಿನಃ**—ತೇಜೋಯುತವಾದವೂ। **ದುರ್ಯಾಣಾಯೂನ್**—(ಶತ್ರುಗಳಿಂದ) ಸಹಿಸಲಸಾಧ್ಯವಾದ ಕೋಪವುಳ್ಳವೂ। **ಆಸನ್ನಿಷೂನ್**—ಮುಖಗಳಲ್ಲಿ ಬಾಣಗಳನ್ನಿಟ್ಟುಕೊಂಡಿರುವವೂ। **ಹೃತ್ಸ್ವಸಃ**—(ಶತ್ರುಗಳ) ಎದೆಗಳ ಮೇಲೆ ಕಾಲಿನಿಂದ ಅದುಮಿ ಪೆಟ್ಟುತಕ್ಕವೂ। **ಮಯೋಭೂನ್**—(ಮಿತ್ರರಿಗೆ) ಸುಖಸಂಪಾದಕವಾದವೂ ಆದ। **ಗಾಃ**—ಸಂಚರಿಸುವ (ಸ್ವಭಾವವುಳ್ಳ) ಅಶ್ವಗಳನ್ನು। **ಕಃ**—ಯಾವನು (ತಾನೇ)। **ಯುಂಕ್ತೇ**—ಕಟ್ಟುತ್ತಾನೆ। **ಯಃ**—ಯಾವ ಯಜಮಾನನು। **ವಿಷಾಂ**—ಈ ಅಶ್ವಗಳ। **ಭೃತ್ಯಾಂ**—(ಇಂದ್ರನ ರಥವನ್ನು) ನಿರ್ವಹಿಸುವ ಕರ್ಮವನ್ನು। **ಯುಣಧತ್**—ಹೊಗಳುತ್ತಾನೆಯೋ। **ಸಃ**—ಆ ಯಜಮಾನನು। **ಜೀವಾತ್**—(ದೀರ್ಘವಾದ) ಆಯುಸ್ಸನ್ನು ಪಡೆಯುತ್ತಾನೆ।

ಅಥವಾ

ಕಃ—ಪ್ರಜಾಪತಿಯು। **ಯತಸ್ಯ**—ಯಜ್ಞನ। **ಧುರಿ**—ನಿರ್ವಹಣದಕಾರ್ಯಗಳಲ್ಲಿ। **ಶಿಮಿವತಃ**—ಪ್ರತಿಸಾಧ್ಯವಾದ ಕರ್ಮಗಳಿಂದ ಕೂಡಿದವೂ। **ಭಾಮಿನಃ**—ಪ್ರಕಾಶಮಾನವಾದವೂ। **ದುರ್ಯಾಣಾಯೂನ್**—ತ್ಯಾಜ್ಯವಲ್ಲದೇ ನಿಯತವಾಗಿರುವವೂ। **ಆಸನ್ನಿಷೂನ್**—ಮುಖದಿಂದ ಉಚ್ಚರಿಸಲ್ಪಡುವವೂ। **ಹೃತ್ಸ್ವಸಃ**—ಹೃದಯದಲ್ಲಿ ಕಾಂತಿಯನ್ನು ಬೀರುವವೂ। **ಮಯೋಭೂನ್**—ಸುಖಸಾಧನವಾದ ಅದೃಷ್ಟವನ್ನು ಉಂಟುಮಾಡುವವೂ ಆದ। **ಗಾಃ**—ವೇದರೂಪಗಳಾದ ವಾಕ್ಯುಗಳನ್ನು। **ಅದ್ಯ**—ಈ ಯಜ್ಞಕಾಲದಲ್ಲಿ। **ಯುಂಕ್ತೇ**—ಸೇರಿಸುತ್ತಾನೆ। **ಯಃ**—ಯಾವ ಯಜಮಾನನು। **ವಿಷಾಂ**—ಈ ವೇದವಾಕ್ಯುಗಳ। **ಭೃತ್ಯಾಂ**—ಸಂದೇಶ ಕೃತ್ಯಗಳನ್ನು। **ಯುಣಧತ್**—ಪರಿಪಾಲಿಸುತ್ತಾನೆಯೋ। **ಸಃ**—ಆ ಯಜಮಾನನು (ಅವನೇ)। **ಜೀವಾತ್**—ದೀರ್ಘಾಯುಷ್ಯವಾಗಿ ಜೀವಿಸುತ್ತಾನೆ।

ಭಾವಾರ್ಥ

ಈ ಯಜ್ಞಕರ್ಮದಲ್ಲಿ ಇಂದ್ರನ ರಥದ ನೊಗಕ್ಕೆ, ವೀರ್ಯಕೃತ್ಯಗಳಿಂದ ಕೂಡಿದುವೂ, ತೇಜೋಯುತವಾದುವೂ, ಶತ್ರುಗಳಿಂದ ಸಹಿಸಲಸಾಧ್ಯವಾದ ಕೋಪವುಳ್ಳವೂ, ಮುಖಗಳಲ್ಲಿ ಬಾಣಗಳನ್ನಿಟ್ಟುಕೊಂಡಿರುವುವೂ, ಶತ್ರುಗಳ ಎದೆಗಳ ಮೇಲೆ ಕಾಲನ್ನಿಟ್ಟು ಮೆಟ್ಟತಕ್ಕವೂ, ಮಿತ್ರರಿಗೆ ಸುಖಸಂಪಾದಕವೂ, ಆದ ಅಶ್ವಗಳನ್ನು ಯಾವನು ಕಟ್ಟುತ್ತಾನೆ? ಯಾವ ಯಜ್ಞಕರ್ತನು ಈ ಅಶ್ವಗಳ ಅಸಾಧಾರಣವಾದ ಇಂದ್ರನ ರಥವಾಹನಕ್ರಿಯೆಗಳನ್ನು ಹೊಗಳುತ್ತಾನೆಯೋ ಅವನು ದೀರ್ಘಾಯುವಾಗಿ ಜೀವಿಸುತ್ತಾನೆ.

English Translation

Who yokes to-day to the pole of the chariot (of Indra) his vigorous and radient horses, whose fury is unbearable,* who have arrows in their mouths, who trample on the hearts of enemies and who give happiness to friends? The sacrificer who praises the performance of these horses obtains long life.

ವಿಶೇಷವಿವರಣೆಗಳು

ಸರ್ವಪೈಷ್ಯನೆಂಬ ಇಷ್ಟಿಯಲ್ಲಿ **ಕೋ ಅದ್ಯ ಯುಂಕ್ತೇ** ಎಂಬ ಎರಡು ಋಕ್ಕುಗಳನ್ನು ಯಾಜ್ಯಾನುವಾಕ್ಯ ಮಂತ್ರಗಳನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದಲ್ಲಿ **ಕಾಯಂ ದಶಮಂ ಕೋ ಅದ್ಯ ಯುಂಕ್ತೇ ಧುರಿ ಗಾ ಋತಸ್ಯೇತಿ ದ್ವೇ ಇತಿ** ಎಂಬ ವಾಕ್ಯದಿಂದ ನಿರ್ದೇಶಿಸಲ್ಪಟ್ಟಿರುವುದು.

ಋತಸ್ಯ—ಋ ಗತೌ। ಗಚ್ಛತಿ ಇಂದ್ರಸಂಬಂಧಿನೋ ರಥಸ್ಯ। ಚಲಿಸುತ್ತಿರುವ ಇಂದ್ರನ ರಥದ

ಧುರಿ—ಕುದುರೆಯನ್ನು ಕಟ್ಟುವ ರಥದ ಭಾಗದಲ್ಲಿ ಎಂದರೆ ನೊಗದಲ್ಲಿ ಅಥವಾ ನೊಗಕ್ಕೆ

ಗಾಃ—ಇಲ್ಲಿ ಗಾಃ ಎಂದರೆ ಕುದುರೆಗಳನ್ನು ಎಂದರ್ಥವನ್ನು ಹೇಳಬೇಕು. ಈ ವಿಷಯವನ್ನು ಅರ್ಥವನ್ನು—

ಏತೌ ಮೇ ಗಾವೌ ಪ್ರಮರಸ್ಯ ಯುಕ್ತೌ ಮೋಷು ಪ್ರ ಸೇಧೀರ್ಮುಹುರಿನ್ಮಮಂಥಿ।

(ಋಂ. ಸಂ. ೧೦-೭೭-೨೦)

ಎಂಬ ಋಕ್ಕು ಸಮರ್ಥಿಸುವುದು.

ಶಿಮಿವತಃ—**ವೀರ್ಯಕರ್ಮೋಪೇತಾನ್**। ಸಾಹಸಕರ್ಮಗಳನ್ನು ಮಾಡುವ. ಶಿಮಿವಾ ಎಂದರೆ ಕರ್ಮ (ನಿ. ೩-೧)

ಭಾಮಿನಃ—**ಭಾ ದೀಪ್ತೌ**। ಪ್ರಕಾಶಮಾನವಾದ ಎಂದರೆ ಧಸ್ಮರಪುಷ್ಟರಾಗಿ ನೋಡುವುದಕ್ಕೆ ಸುಂದರರಾಗಿ ಕಾಣುತ್ತಿರುವ.

ದುರ್ಹಣಾಯೂನ್—ಹೃಣೀಯತೇಃ ಕ್ರುಧ್ಯತಿಕರ್ಮಾ । ರೇಳತೆ ಹೇಳತೆ ಮೊದಲಾದ ಕ್ರೋಧ ಕರ್ಮವನ್ನು ಸೂಚಿಸುವ ಹತ್ತು ಧಾತುಗಳ ಮಧ್ಯದಲ್ಲಿ ಹೃಣೀಯತೇ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೯) **ದುರ್ಹಣಾಯೂನ್** ಎಂದರೆ ಶತ್ರುಗಳ ಮೇಲೆ ಕ್ರೋಧದಿಂದ ಕೂಡಿರುವ ಎಂದರ್ಥವು.

ಆಸನ್ನಿಷೂನ್—ಅಸ್ಯೇ ಮುಖಸ್ಯದೇಶೇ ಶತ್ರೂಣಾಂ ಪ್ರಹರಣಾರ್ಥಮಿಷವೋ ಬಾಣಾ ಬದ್ಧಾ-ಸ್ತಾನ್ । ಶತ್ರುಗಳನ್ನು ಕೊಲ್ಲುವುದಕ್ಕಾಗಿ ಮುಖಭಾಗದಲ್ಲಿ ಬಾಣಗಳನ್ನು ಕಟ್ಟಿರುವ ಕುದುರೆಗಳನ್ನು. ಈ ಶಬ್ದದ ಅರ್ಥವು ಸ್ಪಷ್ಟವಾಗಿಲ್ಲ.

ಹೃತ್ಸ್ವಸಃ—ಹೃತ್ಸು ಶತ್ರೂಣಾಂ ಹೃದಯೇಷ್ವಸಂತಿ ಸ್ವಕೀಯಂ ಪಾದಂ ಕ್ಷಿಪಂತೀತಿ ಹೃತ್ಸ್ವಸಃ ತಾನ್ । ಶತ್ರುಗಳ ಎದೆಯಮೇಲೆ ತಮ್ಮ ಪಾದಗಳನ್ನಿಡತಕ್ಕ ಎಂದರೆ ಯುದ್ಧದಲ್ಲಿ ಶತ್ರುಗಳನ್ನು ತುಳಿದುಕೊಲ್ಲತಕ್ಕ.

ಮಯೋಭೂನ್—ಮಯಃ ಎಂದರೆ ಸುಖವು (ನಿ. ೩-೧೩) ತಮ್ಮ ಜನರಿಗೆ ಸುಖವನ್ನುಂಟುಮಾಡುವ ಸ್ವಕೀಯಜನರ ವಿಷಯದಲ್ಲಿ ಕ್ರೋಧಾದಿಗಳಿಲ್ಲದೆ ಸೌಮ್ಯಸ್ವಭಾವದಿಂದ ಪ್ರವರ್ತಿಸುವ.

ಭೃತ್ಯಾಂ—ಭೃಞ್ ಭರಣೇ । ಭರಣಕ್ರಿಯಾಂ ರಥವಾಹನಕ್ರಿಯಾಂ । ರಥವನ್ನು ಎಳೆಯುವ ಕೆಲಸವನ್ನು.

ಶುಣಧತ್—ಶುಧು ವೃದ್ಧೌ । ಸಮರ್ಥನೆ ಮಾಡುವನೋ ಅಣವಾ ಪ್ರಶಂಸೆಮಾಡುವನೋ.

ಈ ಋಕ್ಕಿನಲ್ಲಿರುವ ಅನೇಕ ಶಬ್ದಗಳು ಕ್ಲಿಷ್ಟವಾಗಿರುವುವು. ಅರ್ಥವು ಸರಿಯಾಗಿ ಹೊಂದುವುದಿಲ್ಲ ಋಕ್ಕಿಗೆ ಭಾಷ್ಯಕಾರರು ಎರಡು ವಿಧವಾದ ಅರ್ಥವನ್ನು ಹೇಳಿರುವರು. ಕಃ ಎಂಬ ಶಬ್ದಕ್ಕೆ ಸಾಮಾನ್ಯವಾದ ಯಾವ ಪುರುಷನು ಎಂಬ ಅರ್ಥವನ್ನೂ, ಕಃ=ಪ್ರಜಾಪತಿ ಎಂಬ ಅರ್ಥವನ್ನೂ ಅನುಸರಿಸಿ ಅದಕ್ಕನುಸಾರವಾಗಿ ಬೇರೆ ಬೇರೆ ಅರ್ಥ ವಿವರಣೆಮಾಡಿರುವರು.

ವ್ಯಾಕರಣಪ್ರಕ್ರಿಯಾ

ಯುಂಕ್ತೇ—ಯುಜಿರ್ ಯೋಗೇ ಧಾತು. ರುಧಾದಿ. ಲಟ್ ಪ್ರಥಮಪುರುಷ ಏಕವಚನದಲ್ಲಿ ಯುಂಕ್ತೇ ಎಂದು ರೂಪವಾಗುತ್ತದೆ. ತಿಜಂತಸಿಘಾತಸ್ವರ ಬರುತ್ತದೆ.

ದುರ್ಹಣಾಯೂನ್—ಹೃಣೀಙ್ ಲಜ್ಜಾಯಾಂ. ಧಾತು ಕಂಡ್ವಾದಿಯಲ್ಲಿ ಸೇರಿರುವುದರಿಂದ **ಕಂಡ್ವಾದಿ-ಭ್ಯೋಯಕ್** ಎಂಬುದರಿಂದ ಸ್ವಾರ್ಥದಲ್ಲಿ ಯಕ್ ಬರುತ್ತದೆ. ಉಣಾದಿಯಲ್ಲಿ ಬಹುಲವಚನವಿರುವುದರಿಂದ ಇದಕ್ಕೂ ಉಣ್ ಪ್ರತ್ಯಯ ಬರುತ್ತದೆ. **ಅತೋಲೋಪಃ** ಎಂಬುದರಿಂದ ಯಕಿನ ಅಕಾರಕ್ಕೆ ಲೋಪ ವರ್ಣ ವ್ಯತ್ಯಯದಿಂದ **ಈ**ಕಾರಕ್ಕೆ ಆಕಾರಾದೇಶ. ಅಥವಾ ಮೃಗಯ್ವಾದಿಯಲ್ಲಿ ಸೇರಿರುವುದರಿಂದ **ಮೃಗಯ್ವಾದಿಭ್ಯಶ್ಚ** (ಉ. ಸೂ. ೧-೩೭) ಎಂಬುದರಿಂದ ಆಕಾರ ಬರುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ದ್ವಿತೀಯಾ ಬಹುವಚನಾಂತರೂಪ.

ಆಸನ್ನಿಷೂನ್—ಪದ್ದನ್ನೋಮಾಸ್ (ಪಾ. ಸೂ ೬-೧-೬೩) ಎಂಬುದರಿಂದ ಆಸ್ಯ ಶಬ್ದಕ್ಕೆ ಆಸನಾದೇಶ. ಇಷ ಗತೌ ಧಾತು. ಇದಕ್ಕೆ **ಇಷೇಃ ಕಿಚ್ಚಿ** (ಉ. ಸೂ. ೧-೧೩) ಎಂಬುದರಿಂದ ಉ ಪ್ರತ್ಯಯ. ಕಿತ್ವ ವಿಧಾನದಿಂದ ಲಘೂಪಧಗುಣ ಬರುವುದಿಲ್ಲ. ಆಸನಿ ಇಷವಃ ಯೇಷಾಂ. ಬಹುವ್ರೀಹಿ ಸಮಾಸದಲ್ಲಿ **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

ಹೃತ್ಸ್ವಸಃ— ಅಸು ಕ್ಷೇಪಣೇ ಅಥವಾ, ಅಸ ಗತಿದೀಪ್ತ್ಯಾದಾನೇಷು ಧಾತು. ಇದಕ್ಕೆ **ಕ್ವಿಪ್ಚ** ಎಂಬುದರಿಂದ ಕ್ವಿಪ್ ಪ್ರತ್ಯಯ. ಹೃತ್ಸು ಆಸಃ ಎಂದು ಸಮಾಸವಾದಾಗ **ತತ್ಪುರುಷೇ ಕೃತಿ ಬಹುಲಂ** ಎಂಬುದರಿಂದ ವಿಭಕ್ತಿಗೆ ಅಲುಕ್. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ಮುಯೋಭೂನ್—ವ್ಯತ್ಯಯೋ ಬಹುಲಂ ಎಂಬುದರಿಂದ ವ್ಯತ್ಯಯದಿಂದ ಭೂಎಂಬುದಕ್ಕೆ ಹ್ರಸ್ವ ಬರುತ್ತದೆ. ಅಥವಾ **ಯಾತದ್ರ್ಧಾದಿಭ್ಯ ಉಪಸಂಖ್ಯಾನಮ್** (ಪಾ. ಸೂ. ೩-೨-೧೮೦-೧) ಎಂಬುದರಿಂದ ಆ ಗಣದಲ್ಲಿ ಸೇರಿರುವುದರಿಂದ ಡುಪ್ರತ್ಯಯ ಬಂದಾಗ ಟಿಲೋಪದಿಂದ ಉಕ್ತರೂಪವಾಗುತ್ತದೆ. ಇಲ್ಲಿಯೂ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ. ದ್ವಿತೀಯಾ ಬಹುವಚನಾಂತರೂಪ

ಭೃತ್ಯಾಮ್—ಭೃಞ್ ಭರಣೇ ಧಾತು. **ಸಂಜ್ಞಾಯಾಂ ಸಮಜನಿಷದ**—(ಪಾ. ಸೂ. ೩-೩-೯೯) ಎಂಬುದರಿಂದ ಸಂಜ್ಞಾ ತೋರುವಾಗ ಕ್ಯಪ್ ಪ್ರತ್ಯಯ. **ಹ್ರಸ್ವಸ್ಯ ಪಿತಿ ಕೃತಿ ತುಕ್** ಎಂಬುದರಿಂದ ಧಾತುವಿನ ಹ್ರಸ್ವಕ್ಕೆ (ಋಕಾರಕ್ಕೆ) ತುಕಾಗಮ. ಕ್ಯಪ್ ವಿಧಾಯಕ ಸೂತ್ರದಲ್ಲಿ ಉದಾತ್ತಃ ಎಂದು ಅನುವೃತ್ತವಾಗುವುದರಿಂದ ಪಿತ್ಸ್ವರವು ಬಾಧಿತವಾಗಿ ಪ್ರತ್ಯಯಕ್ಕೆ ಉದಾತ್ತಸ್ವರ ಬರುತ್ತದೆ.

ಋಣಧತ್— ಋಧು ವೃದ್ಧೌ ಧಾತು. ಲೇಟನಲ್ಲಿ ಪ್ರಥಮಪುರುಷಏಕವಚನದಲ್ಲಿ ತಿ ಪ್ರತ್ಯಯ. **ಇತಶ್ಚ ಲೋಪಃ** ಸೂತ್ರದಿಂದ ಅದರ ಇಕಾರಕ್ಕೆ ಲೋಪ. **ಲೇಟೋಽಡಾಟೌ** ಎಂಬುದರಿಂದ ಅಡಾಗಮ. **ವ್ಯತ್ಯಯೋ ಬಹುಲಂ**ಎಂಬುದರಿಂದ ಶ್ನಮ್ ವಿಕರಣ. ಮಿತ್ವಾದುದರಿಂದ ಅಂತ್ಯಾಚಿನ ಪರಕ್ಕೆ ಬರುತ್ತದೆ ಋಣಧತ್ ಎಂದು ರೂಪವಾಗುತ್ತವೆ. ಯಃ ಎಂದು ಹಿಂದೆ ಸಂಬಂಧವಿರುವುದರಿಂದ ನಿಘಾತಸ್ವರ ಪ್ರತಿಷಿದ್ಧವಾಗಿ ವಿಕರಣಸ್ವರ ಉಳಿಯುತ್ತದೆ.

ಜೀವಾತ್—ಜೀವ ಪ್ರಾಣಧಾರಣೇ ಧಾತು. ಹಿಂದಿನಂತೆಯೇ ಲೇಟನಲ್ಲಿ ರೂಪವಾಗುತ್ತದೆ. ಇಲ್ಲಿ ಆಡಾಗಮಮಾತ್ರ ವಿಶೇಷ. ಆತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೬ ॥

संहितापाठः

क ईषते तुज्यते को बिभाय को मंसते संत-
मिन्द्रं को अंति ।
कस्तोकाय क इभायोत रायेऽधि ब्रवत्तन्वे दधे
को जनाय ॥ ८२ ॥

पदपाठः

कः । ईषते । तुज्यते । कः । बिभाय । कः । मंसते । संतं ।
इन्द्रं । कः । अंति ।
कः । तोकाय । कः । इभाय । उत । रायेः । अधि । ब्रवत् ।
तन्वे । कः । जनाय ॥ ८२ ॥

सायणभाष्य

अनुगृहीतरक्षेन्द्र आगते सति क ईषते । शत्रोरभ्येतः सन् कोः निर्गच्छति । न कोऽपीत्यर्थः । कस्तुज्यते । कः हिंस्यते । शत्रुभिर्हिंस्योऽपि कश्चिन्नास्तीत्यर्थः । कः यजमानोः बिभाय । बिभेति । इन्द्रे रक्षके सति भयमपि नोत्पद्यते दूरे तस्य शत्रुकृता हिंसा । अत्यंतिके सखिभावे संतमस्माकं रक्षकत्वेन वर्तमानमिन्द्रं कः पुरुषोः मंसते । जानाति । वयमेव जानीमोः नान्य इत्यर्थः । एकः कः पूरकः । युद्धे सहायार्थमिन्द्रे आगते सति कोः यजमानस्तोकाय पुत्राय रायोऽधिब्रवत् । हे इन्द्रास्मदीयं पुत्रं रक्षेत्येवंरूपमधिवचनं सप्तम्यर्थेन वचनं ब्राह्मणायाधिब्रूयादिति यथा एवंरूपमधिवचनं कोः यजमानः कुर्यात् । स्वयमेवेन्द्रो रक्षतीति भावः । इभाय गजाय कोऽधि ब्रवत् । उताऽपि च रायेः शत्रुभिरपहृतस्य धनाय कोऽधि ब्रवत् ।

ಅಪಹ್ರಿಯಮಾಣಮಸ್ಮದೀಯಂ ಧನಂ ರಕ್ಷೇತ್ಯಧಿವಚನಮಪಿ ಕೋ ಯಜಮಾನಃ ಕುರ್ಯಾತ್ । ನ ಕೋಽಪೀತ್ಯರ್ಥಃ । ಅಪಿ ಚ ತನ್ವೇ ಸ್ವಕೀಯಾಯೈ ಶರೀರಾಯ ಜನಾಯೈ ಪರಿಜನಾಯೈ ಚ ಕೋಽಧಿ ಬ್ರವತ್ । ಸ್ವಶರೀರರಕ್ಷಾರ್ಥಂ ಪರಿಜನರಕ್ಷಾರ್ಥಂ ಚೇಂದ್ರಸ್ಯಾಧಿವಚನಂ ನಾಪೇಕ್ಷಿತಂ । ಸ್ತುತ್ಯಾ ಪ್ರೀತ ಇಂದ್ರಃ ಸ್ವಯಮೇವ ರಕ್ಷತೀತ್ಯರ್ಥಃ ॥ ಯದಾ ತು ಕಶಬ್ದಾಭಿಧೇಯಸ್ಯ ಪ್ರಜಾಪತೇಃ ಸಂಬಂಧಿನಿ ಕರ್ಮಣಿ ವಿನಿಯೋಗಃ ತದಾನೀಂ ಪರಮೈಶ್ವರ್ಯಯೋಗಾದಿಂದ್ರಶಬ್ದೇನ ಪ್ರಜಾಪತಿರೇವಾಭಿಧೀಯತೇ । ಯಥ್ಸೈಂದ್ರ್ಯಾ ಗಾರ್ಹಪತ್ಯಮುಪತಿಷ್ಠತ ಇತಿ ವಿನಿಯೋಗಾನುಸಾರೇಣ ಕದಾ ಚನೇತ್ಯಸ್ಯಾಮೃಚಿ ವಿದ್ಯಮಾನ ಇಂದ್ರೋ ಗಾರ್ಹಪತ್ಯಪರತಯಾ ನೀಯತೇ ತದ್ವತ್ ॥ ಈಷತೇ । ಈಷ ಗತಿಹಿಂಸಾದರ್ಶನೇಷು । ಭೌವಾದಿಕ ಆತ್ಮನೇಪದೀ । ತುಜ್ಯತೇ । ತುಜ ಹಿಂಸಾಯಾಂ । ಕರ್ಮಣಿ ಯೆಕ್ । ಅದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇ ಯಕ ಏವ ಸ್ವರಃ ಶಿಷ್ಯತೇ । ಅತಿಜ ಇತಿ ಪರ್ಯುದಾಸಾನ್ನಿಘಾತಾಭಾವಃ । ಮಂಸತೇ । ಲೇತ್ಯುಡಾಗಮಃ । ಸಿಬ್ಬಹುಲಂ ಲೇಟೀತಿ ಸಿಪ್ । ಅಂತಿ । ಅಂತಿಕಸ್ಯ ಕಾದಿಲೋಪೋ ಬಹುಲಮಿತಿ ಕಲೋಪಃ । ಬ್ರವತ್ । ಬ್ರೂಙೀತೇರ್ಲಟ್ಯುಡಾಗಮಃ । ತನ್ವೇ । ತನುಶಬ್ದಾಚ್ಚತುರ್ಥ್ಯೇಕವಚನೇ ಜಸಾದಿಷು ಚ್ಛಂದಸಿ ವಾ ವಚನಮಿತಿ ಘೇರ್ಙಿತೀತಿ ಗುಣಾಭಾವೇ ಯಣಾದೇಶಃ । ಉದಾತ್ತಸ್ವರಿತಯೋರ್ಯಣ ಇತಿ ವಿಭಕ್ತೇಃ ಸ್ವರಿತತ್ವಂ

ಸ್ವರಸದಾಸ್ಯ-

(ರಕ್ಷಕನಾದ ಇಂದ್ರನು ಸಮಿಾಪದಲ್ಲಿರುವಾಗ) **ಕಃ**—ಯಾವ ಯಜಮಾನನು (ತಾನೇ) । **ಈಷತೇ**—(ಶತ್ರುವಿನಿಂದ ಭೀತನಾಗಿ) ದೂರವಾಗಿ ಓಡುತ್ತಾನೆ । **ಕಃ**—ಯಾವನು । **ತುಜ್ಯತೇ**—(ಶತ್ರುವಿನಿಂದ) ಹಿಂಸಿತನಾಗುತ್ತಾನೆ । **ಕಃ**—ಯಾವನು । **ಬಿಭಾಯ**—ಭೀತನಾಗುತ್ತಾನೆ. । **ಆಂತಿ**—ನಮ್ಮ ಸಮಿಾಪದಲ್ಲಿ । **ಸಂತಂ**—(ರಕ್ಷಕನಾಗಿ) ಇರುವ । **ಇಂದ್ರಂ**—ಇಂದ್ರನನ್ನು । **ಕಃ**—(ನಾವಲ್ಲದೇ ಇತರ) ಯಾವನು ತಾನೇ । **ಮಂಸತೇ**—ತಿಳಿದುಕೊಳ್ಳುತ್ತಾನೆ. । **ಕಃ**—ಯಾವ ಯಜಮಾನನು ತಾನೇ । **ತೋಕಾಯ**—ಪುತ್ರಸಂತಾನಕ್ಕಾಗಿ । **ಅಧಿಬ್ರವತ್**—(ಇಂದ್ರನನ್ನು) ಪೀಡಿಸಬೇಕಾಗಿದೆ. (ಒತ್ತಾಯಪಡಿಸಬೇಕಾಗಿಯೇ ಇಲ್ಲ. ಅವನೇ ಅನುಗ್ರಹಿಸುತ್ತಾನೆ.) । **ಇಭಾಯ**—ಆನೆಗಾಗಿ । **ಕಃ**—ಯಾವನು (ನಿರ್ಬಂಧಮಾಡಬೇಕಾಗಿದೆ) । **ಉತ**—ಮತ್ತು । **ರಾಯೇ**—(ಶತ್ರುಗಳಿಂದ ಅಪಹೃತವಾದ)ಧನಕ್ಕಾಗಿ (ಯಾವನು ಒತ್ತಾಯಪಡಿಸಬೇಕಾಗಿದೆ.) । **ತನ್ವೇ**—ತನ್ನ ಶರೀರ ರಕ್ಷಣೆಗಾಗಿಯೂ । **ಜನಾಯೆ**—ಪರಿಜನಕ್ಕಾಗಿಯೂ । **ಕಃ**—ಯಾವನು ತಾನೇ (ಇಂದ್ರನನ್ನು ನಿರ್ಬಂಧಿಸಬೇಕಾಗಿದೆ.)

ಭಾವಾರ್ಥ

ರಕ್ಷಕನಾದ ಇಂದ್ರನು ಸಮಿಾಪದಲ್ಲಿರುವಾಗ ಯಾವ ಯಜಮಾನನು ತಾನೇ ಶತ್ರುವಿನಿಂದ ಭೀತನಾಗಿ ದೂರ ಸರಿಯುತ್ತಾನೆ ? ಯಾವನು ಶತ್ರುವಿನಿಂದ ಹಿಂಸಿತನಾಗುತ್ತಾನೆ ? ನಮ್ಮ ಸಮಿಾಪದಲ್ಲಿ ರಕ್ಷಣೆಗಾಗಿ ನಿಂತಿರುವ ಇಂದ್ರನನ್ನು ನಾವಲ್ಲದೇ ಇತರನಾವನು ತಿಳಿಯಬಲ್ಲನು ? ಯಾವ ಯಜಮಾನನು ತಾನೇ, ಪುತ್ರಸಂತಾನಕ್ಕಾಗಲಿ, ಆನೆಗಾಗಲಿ, ಶತ್ರುಗಳಿಂದ ಅಪಹೃತವಾದ ಧನಕ್ಕಾಗಲೀ, ತನ್ನ ಆತ್ಮರಕ್ಷಣೆಗಾಗಲಿ ಅಥವಾ ಪರಿಜನರಿಗಾಗಲೀ ಇಂದ್ರನನ್ನು ಒತ್ತಾಯಪಡಿಸಿ ಪೀಡಿಸಬೇಕಾಗಿದೆ. ಈ ಒತ್ತಾಯವಿಲ್ಲದೇ ಇಂದ್ರನು ತಾನೇ ಎಲ್ಲವನ್ನೂ ಅನುಗ್ರಹಿಸುತ್ತಾನೆ

English Translation

When Indra is at hand who flees through fear of enemies ? who is harmed ? who is terrified ? who is aware that Indra is present though he is near ? what need is there that any one should importune Indra for his son, his elephant, his property, his person, or his people ?

ವಿಶೇಷವಿಷಯಗಳು

ಈ ಋಕ್ಕಿನಲ್ಲಿಯೂ ಕಃ ಎಂಬ ಶಬ್ದಕ್ಕೆ ಪ್ರಜಾಪತಿಯೆಂದು ಅರ್ಥವಾಡಿ ಅದರಂತೆ ಭಾಷ್ಯಕಾರರು ಅರ್ಥಾಂತರವನ್ನು ಹೇಳಿರುವರು.

ಈಷತೇ—ಈಷ ಗತಿಹಿಂಸಾದರ್ಶನೇಷು । ಭ್ವಾದಿಕ ಆತ್ಮನೇಪದೀ । ಹೋಗುತ್ತಾನೆ ಎಂದರೆ ಶತ್ರುಗಳ ಭಯದಿಂದ ಓಡಿಹೋಗುತ್ತಾನೆ. ಇಂದ್ರನು ನಮ್ಮ ಸಮೀಪದಲ್ಲಿದ್ದು ನಮ್ಮನ್ನು ರಕ್ಷಿಸುತ್ತಿರುವುದರಿಂದ ಯಾವ ಮನುಷ್ಯನೂ ಶತ್ರುವಿಗೆ ಹೆದರಿ ಓಡಿಹೋಗಬೇಕಾಗಿಲ್ಲ ಎಂದಭಿಪ್ರಾಯವು.

ಮಂಸತೇ ಸಂತಮಿಂದ್ರಂ ಕೋ ಅಂತಿ—ಇಂದ್ರನು ರಕ್ಷಣಾರ್ಥವಾಗಿ ನಮ್ಮ ಸಮೀಪದಲ್ಲಿದ್ದರೂ ಸಹ ಆ ವಿಷಯವನ್ನು ಯಾರು ತಾನೇ ತಿಳಿಯಬಲ್ಲರು ? ಇಂದ್ರನು ಸಮೀಪದಲ್ಲಿರುವುದು ಯಾರಿಗೂ ಗೊತ್ತಾಗುವುದಿಲ್ಲ. ಅದರೂ ಇಂದ್ರನು ಸಮೀಪವರ್ತಿಯಾಗಿ ಇದ್ದೇ ಇರುವನೆಂದಭಿಪ್ರಾಯವು.

ಇಭಾಯ—ಗಜಾಯ । ಭಾಷ್ಯಕಾರರು **ಈ** ಶಬ್ದಕ್ಕೆ ಗಜ ಅಥವಾ ಆನೆಯೆಂದು ಅರ್ಥಮಾಡಿರುವರು ಋಗ್ವೇದದಲ್ಲಿ ಆನೆಯ ವಿಷಯವಾಗಿ ವಿಶೇಷವಾಗಿ ಎಲ್ಲಿಯೂ ಹೇಳಿಲ್ಲ. ಇದಲ್ಲದೆ ಸಾಧಾರಣ ಜನರ ಬಳಿಯಲ್ಲಿ ಆನೆ ಇರುವುದು ಅಸಂಭವವು. ಆದುದರಿಂದ **ಈ** ಶಬ್ದಕ್ಕೆ ಭಯರಹಿತ ಎಂಬ ಅರ್ಥವನ್ನು ಹೇಳುವುದು ಯುಕ್ತವೆಂದು ಪಾಶ್ಚಾತ್ಯಪಂಡಿತರು ಅಭಿಪ್ರಾಯಪಡುವರು. ಭಾಷ್ಯಕಾರರು ಸಹ **ಈ** ಅರ್ಥವನ್ನು ಅನೇಕಕಡೆ ಹೇಳಿರುವರು.

ಅಧಿ ಬ್ರುವತ್—ಅಧಿವಚನಂ ಕುರ್ಯಾತ್ ಜ್ಞಾಪಯೇತ್ಕೀಂದ್ರಮಿತ್ಯರ್ಥಃ । ಪುತ್ರಾದಿಗಳನ್ನು ರಕ್ಷಿಸಬೇಕೆಂದು ಇಂದ್ರನನ್ನು ಜ್ಞಾಪಕಮಾಡಬೇಕಾದ ಅವಶ್ಯಕತೆ ಇಲ್ಲ. ಅವನೇ ಎಲ್ಲವನ್ನು ತಿಳಿದು ರಕ್ಷಿಸುವನೆಂದರ್ಥವು.

ವ್ಯಾಕರಣಪ್ರಕ್ರಿಯಾ

ಈಷತೇ—ಈಷ ಗತಿಹಿಂಸಾದರ್ಶನೇಷು ಧಾತು. ಭ್ವಾದಿ ಆತ್ಮನೇಪದೀ. ಲಟ್ ಪ್ರಥಮಪುರುಷ ಏಕವಚನದಲ್ಲಿ **ಟಿತಆತ್ಮ**— ಸೂತ್ರದಿಂದ ಏತ್ವ. ಶಪ್ ವಿಕರಣ. **ತಿಙ್ಶಿತಿಙಃ** ಎಂಬುದರಿಂದ ನಿಘಾತಸ್ವರ ಬರುತ್ತದೆ.

ತುಜ್ಯತೇ—ತುಜ ಹಿಂಸಾಯಾಂ ಧಾತು. ಕರ್ಮಣಿಯಲ್ಲಿ ಲಟ್ ಪ್ರಥಮಪುರುಷಏಕವಚನದಲ್ಲಿ ಹಿಂದಿನಂತೆಯೇ ಏತ್ವ. **ಸಾರ್ವಧಾತುಕೇ ಯಕ್** ಎಂಬುದರಿಂದ ವಿಕರಣಸ್ಥಾನದಲ್ಲಿ ಯಕ್. ಕಿತ್ತಾದುದರಿಂದ

ಲಘೂಪಧಗುಣ ಬರುವುದಿಲ್ಲ. **ಅತಿಜಃ** ಎಂದು ಪರ್ಯುದಾಸಮಾಡಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು (ತೇ) **ತಾಸ್ಯನುದಾತ್ತೇತ್** ಸೂತ್ರದಿಂದ ಅನುದಾತ್ತ ವಾಗುವುದರಿಂದ ಯಕಿನ ಉದಾತ್ತಸ್ವರವು ಉಳಿಯುತ್ತದೆ.

ಬಿಭಾಯೆ—ಞಿಭೀ ಭಯೇ ಧಾತು. ಲಿಟ್ ಪ್ರಥಮಪುರುಷ ಏಕವಚನನಲ್ಲಿ ಣಲಾದೇಶ. ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹ್ರಸ್ವಜಶ್ತ್ವ. ಧಾತುವಿನ **ಈ**ಕಾರಕ್ಕೆ ವೃದ್ಧಿ ಆಯಾದೇಶ. ತಿಙಂತನಿಘಾತಸ್ವರ ಬರುತ್ತದೆ.

ಮಂಸತೇ—ಮನ ಜ್ಞಾನೇ ಧಾತು. ಲೇಟನಲ್ಲಿ ಪ್ರಥಮಪುರುಷಏಕವಚನಪ್ರತ್ಯಯ **ಲೇಟೋಽಡಾಟೌ** ಸೂತ್ರದಿಂದ ಅದಕ್ಕೆ ಅಡಾಗಮ. **ಸಿಬ್ಬಹುಲಂ ಲೇಟಿ** (ಪಾ. ಸೂ. ೩-೪-೩೪) ಎಂಬುದರಿಂದ ಸಿಪ್ ಧಾತುವಿನ ನಕಾರಕ್ಕೆ **ನಶ್ಚಾಪದಾಂತಸ್ಯ ಝಲಿ** ಎಂಬುದರಿಂದ ಅನುಸ್ವಾರ. ನಿಘಾತಸ್ವರ ಬರುತ್ತದೆ.

ಆಂತಿ—ಅಂತಿಕ ಶಬ್ದದಲ್ಲಿ, **ಕಾದಿಲೋಪೋ ಬಹುಲಂ** ಎಂಬುದರಿಂದ ಕಕಾರಲೋಪ.

ಬ್ರವತ್—ಬ್ರೂಞ್ ವ್ಯಕ್ತಾಯಾಂ ವಾಚಿ. ಧಾತು. ಲೇಟ್ ಪ್ರಥಮಪುರುಷ ಏಕವಚನದಲ್ಲಿ ಹಿಂದಿನಂತೆಯೇ ಅಡಾಗಮ ಇಕಾರಲೋಪ. ಧಾತುವಿಗೆ ಸಾರ್ವಧಾತುನಿಮಿತ್ತವಾಗಿ ಗುಣ. ಅವಾದೇಶ. ತಿಙಂತ ನಿಘಾತಸ್ವರ ಬರುತ್ತದೆ.

ತನ್ವೇ—ತನು ಶಬ್ದಕ್ಕೆ ಚತುರ್ಥೀಏಕವಚನ (ಙೀ) ಪರದಲ್ಲಿರುವಾಗ **ಜಸಾದಿಷು ಛಂದಸಿ ವಾವಚನಮ್** ಎಂಬುದರಿಂದ **ಘೇರ್ಙಿತಿ** ಸೂತ್ರದಿಂದ ಗುಣ ಬರುವುದಿಲ್ಲ. ಆಗ **ಇಕೋಯಣಚಿ** ಸೂತ್ರದಿಂದ ಯಣಾದೇಶ. ಉದಾತ್ತಕ್ಕೆ ಯಣಾದೇಶ ಬಂದುದರಿಂದ **ಉದಾತ್ತಸ್ವರಿತಯೋರ್ಯಣಃ ಸ್ವರಿತೋನುದಾತ್ತಸ್ಯ** ಎಂಬುದರಿಂದ ಅನುದಾತ್ತವಾದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ. ॥ ೧೭ ॥

॥ ಸಂಹಿತಾಪಾಠಃ ।

ಕೋ ಅಗ್ನಿಮಾಟ್ಟೇ ಹವಿಷಾ ಘೃತೇನ ಸ್ರುಚಾ ಯಜಾತಾ ಋತುಭಿರ್ಧ್ರುವೇಭಿಃ ।
ಕಸ್ಮೈ ದೇವಾ ಆ ವಹಾನಾಶು ಹೋಮ ಕೋ ಮಂಸತೇ ವೀತಿಹೋತ್ರಃ ಸುದೇವಃ ॥ ೧೮ ॥

॥ पदपाठः ॥

कः । अग्निं । ईट्टे । हविषा । घृतेन । स्रुचा । यजाते । ऋतुऽ-
भिः । ध्रुवेभिः ।

कस्मै । देवाः । आ । वहान् । आशु । होनुं । कः । मंसते । वीतिऽ
होत्रः । सुऽदेनवः ॥ ८४ ॥

सायणभाष्यं

कोऽयं यजमानोऽग्निमीट्टे । इन्द्रार्थं हविर्निरुप्याग्निं स्तौति । इन्द्रायं हविर्निर्वापोऽपि समृक्कर्तुं न शक्यते । इन्द्रस्य दुर्विज्ञानत्वात् । कोऽयं वेन्द्रयोगार्थमग्निं स्रुचा जुह्वा ध्रुवेभिर्ध्रुवैर्निर्वृत्यैर्ऋतुभिर्वसंतादिकालैरुपलक्षितेन घृतेन हविषा यजाते । यजेत । यद्वा । ऋतवः प्रयाजदेवताः । ऋतवो वै प्रयाजा इति श्रुतेः । ताभिर्ध्रुवैः प्रकृतैर्विकृतैश्चानुष्ठेयतया निष्ठलैर्ऋतुभिः सहाग्निमाज्यभागदेवतां घृतेन हविषा कोऽयं यजेत् । न कोऽपीत्यर्थः । कस्मै यजमानाय होमं हुतव्यं प्रशस्यं धनमाशु शीघ्रं देवा आ वहान् । आवहंति । प्रयच्छंति । न कस्मा अपीत्यर्थः । इन्द्र एव धनस्य दाता नान्ये देवा इतीन्द्रं स्तूयते । वीतिहोत्रः प्राप्तयज्ञः सुदेवः शोभनदेवताकः कोऽयं यजमानो मंसते । इन्द्रं समृग्वानाति । न कोऽपीत्यर्थः । बहुविधेन स्तोत्रेण चिरकालोपासनेन चेन्द्रः प्रत्यक्षो भवति नान्येन प्रकारेणेति तात्पर्यार्थः ॥ ईट्टे । ईड स्तुतौ । अदादित्वाच्छपो लुक् । स्रुचा । सावेकाचेति विभक्तेरुदात्तत्वं । यजाते । यजतेर्लेट्याडागमः । वैतोऽन्यत्रेत्यैकारः । वहान् । वहतेर्लेट्याडागमः । इतश्च लोपः इतीकारलोपः । संयोगान्तस्येति तकारलोपः । होमं । हूयतेः कृताद्यस्यातो मनिन्निति मनिन् । हु इत्यनुवृत्तौ बहुलं छंदसीति संप्रसारणं । यद्वा । नामन्सीमन्निति त्याद्यौ । उ. ४-१३८ । होमशब्दोऽयं मनिन्प्रत्ययांतो निपात्यते । मनजन्तौ । लेट्यडागमः । सिब्बहुलं लेटीति सिप् । वीतिहोत्रः । वी गत्यादिषु । अस्मात्कर्मणि मंत्रे वृषेत्यादिना क्तिन् स चोदात्तः । होत्रं होमं । हुयोमाशुभसिभ्यस्त्रन् । उ. ४-१६२ । इति त्रन्प्रत्ययः । वीतिः प्राप्तो होमो येन । बहुव्रीहौ पूर्वपदप्रकृतिस्वरत्वं । सुदेवः । नञ्सुभ्यामित्युत्तरपदांतोदात्तत्वं ॥

॥ ಪ್ರತಿಪದಾರ್ಥ ॥

ಕಃ—ಯಾವ ಯಜಮಾನನು । **ಅಗ್ನಿಂ**—ಅಗ್ನಿಯನ್ನು । **ಈಟ್ಟೇ**—(ಇಂದ್ರನಿಗಾಗಿ ಹೊತ್ತಿಸಿ ಸಮರ್ಪಕವಾಗಿ) ಸ್ತುತಿಸುತ್ತಾನೆ. । (**ಕೋವಾ**—ಯಾವನು ತಾನೇ) । **ಸ್ರುಚಾ** ಸೌಟಿನಿಂದ । **ಧ್ರುವೇಭಿಃ**—ಶಾಶ್ವತಗಳಾದ । **ಋತುಭಿಃ**—ವಸಂತಾದಿಋತುಗಳಿಂದ ಉಪಲಕ್ಷಿತವಾದುದೂ । **ಘೃತೇನ**—ಘೃತರೂಪವಾದದ್ದೂ ಆದ । **ಹವಿಷಾ**— ಹವಿಸ್ಸಿನಿಂದ । **ಯಜಾತೈ**—ಪೂಜಿಸಬಲ್ಲನು ? **ಕಸ್ಮೈ**—ಯಾವ ಯಜಮಾನನಿಗೆ । **ಹೋಮ**—ಪ್ರಾರ್ಥಿತವಾದ ಧನವನ್ನು । **ಅಶು**—ಜಾಗ್ರತೆಯಾಗಿ । **ದೇವಾಃ**—(ಇಂದ್ರನಲ್ಲದೆ ಇತರ ಯಾವ) ದೇವತೆಗಳು । **ಆ ವಹಾನ್**—ತಂದೊದಗಿಸುವರು ? । **ವೀತಿಹೋತ್ರಃ**—ಯಜ್ಞ ಮಾಡಿದವನೂ । **ಸುದೇವಃ**-ನುಂಗಳಕರರಾದ ದೇವತೆಗಳ ಅನುಗ್ರಹವುಳ್ಳವನೂ ಆದ । **ಕಃ**—ಯಾವ ಯಜಮಾನನು । **ಮಂಸತೇ**—(ಇಂದ್ರನನ್ನು ಸಂಪೂರ್ಣವಾಗಿ) ತಿಳಿಯುತ್ತಾನೆ. ।

ಅಥವಾ

ಕಃ—ಯಾವ ಯಜಮಾನನು । **ಅಗ್ನಿಂ**—ಅಗ್ನಿಯನ್ನು । **ಈಟ್ಟೇ**—(ಇಂದ್ರನಿಗಾಗಿ ಹೊತ್ತಿಸಿ ಸಮರ್ಪಕವಾಗಿ) ಸ್ತುತಿಸುತ್ತಾನೆ. । (**ಕೋವಾ**—ಯಾವನು ತಾನೆ) । **ಸ್ರುಚಾ**—ಸೌಟಿನಿಂದ । **ಧ್ರುವೇಭಿಃ**—ನಿಶ್ಚಲರಾವ । **ಋತುಭಿಃ**—ಋತುದೇವತೆಗಳೋಡನೆ । **ಘೃತೇನ**—ಘೃತರೂಪದ । **ಹವಿಷಾ**—ಹವಿಸ್ಸಿನಿಂದ । **ಯಜಾತೈ**—ಪೂಜಿಸಬಲ್ಲನು ? । **ಕಸ್ಮೈ**—ಯಾವ ಯಜಮಾನನಿಗೆ । **ಹೋಮ**—ಪ್ರಾರ್ಥಿತವಾದ ಧನವನ್ನು । **ಅಶು**—ಜಾಗ್ರತೆಯಾಗಿ । **ದೇವಾಃ**—(ಇಂದ್ರನಲ್ಲದೇ ಇತರಯಾವ) ದೇವತೆಗಳು । **ಆ ವಹಾನ್**—ತಂದೊದಗಿಸುವರು ? । **ವೀತಿಹೋತ್ರಃ**—ಯಜ್ಞ ಮಾಡಿದವನೂ । **ಸುದೇವಃ**— ಮಂಗಳಕರರಾದ ದೇವತೆಗಳ ಅನುಗ್ರಹವುಳ್ಳವನೂ ಆದ । **ಕಃ**—ಯಾವ ಯಜಮಾನನು । **ಮಂಸತೇ**—(ಇಂದ್ರನನ್ನು ಸಂಪೂರ್ಣವಾಗಿ)ತಿಳಿಯುತ್ತಾನೆ ।

॥ ಭಾವಾರ್ಥ ॥

ಯಾವ ಯಜಮಾನನು ಇಂದ್ರನಿಗಾಗಿ ಅಗ್ನಿಯನ್ನು ಹತ್ತಿಸಿ ಸಮರ್ಪಕವಾಗಿ ಸ್ತುತಿಸಬಲ್ಲನು ? ಯಾವನು ತಾನೇ ವಸಂತಾದಿ ಶಾಶ್ವತವಾದ ಋತುಗಳಿಂದ ಉಪಲಕ್ಷಿತವಾದುದೂ ಮತ್ತು ಘೃತರೂಪವಾದುದೂ, ಆದ ಹವಿಸ್ಸಿನಿಂದ ಸೌಟುಗಳ ಮೂಲಕ ಪೂಜಿಸಬಲ್ಲನು ? ಇಂದ್ರನಲ್ಲದೇ ಇತರ ಯಾವ ದೇವತೆಗಳು ತಾನೇ ಯಜ್ಞ ಕರ್ತನಾದ ಯಾವನಿಗಾಗಲೀ ಪ್ರಾರ್ಥಿತವಾದ ಧನವನ್ನು ತಂದೊದಗಿಸಬಲ್ಲರು. ? ಯಜ್ಞ ಮಾಡಿದವನೂ ಮಂಗಳಕರರಾದ ಇತರ ದೇವತೆಗಳ ಅನುಗ್ರಹವಿರತಕ್ಕ ಯಾವ ಯಜಮಾನನು ತಾನೇ ಇಂದ್ರನನ್ನು ಸಂಪೂರ್ಣವಾಗಿ ತಿಳಿಯಬಲ್ಲನು ? ಅಂದರೆ ಇಂದ್ರನೇ ಸಕಲ ದೇವತೆಗಳಿಗಿಂತಲೂ ಶ್ರೇಷ್ಠನು. ಅವನನ್ನು ಸಾಕ್ಷಾತ್ಕರಿಸಬೇಕಾದರೆ ಅತ್ಯುತ್ತಮವಾದ ಉಪಾಸನೆಯಿಲ್ಲದೇ ಸಾಧ್ಯವಿಲ್ಲವೆಂದರ್ಥವು.

English Translation

Who praises Agni or sacrificial fire lighted for Indra or worships him with the oblation of clarified butter, presented in the ladle according to the seasons ? to whom the gods quickly bring the wealth that has been called

for ? what sacrificer, engaged in offering oblations and favoured by the gods, thoroughly knows Indra ?

ವಿಶೇಷವಿಷಯಗಳು

ಸ್ರುಚಾ— ಘೃತಾದಿಗಳನ್ನು ಹೋಮ ಮಾಡುವ ಮರದ ಸೌಟು ; ladle

ಋತುಭಿಃ—ಸಂವತ್ಸರದ ವಿಭಾಗಗಳು, ವಸಂತಾದಿ ಋತುಗಳು ಅಥವಾ ಹೋಮಾಭಿಮಾನಿದೇವತೆಗಳು. **ಋತವೋ ವೈ ಪ್ರಯಾಜಾಃ** ಎಂದರೆ ಋತುಗಳು ಅಥವಾ ಋತ್ವಭಿಮಾನಿದೇವತೆಗಳು. ಮುಖ್ಯ ಹೋಮಗಳಿಗೆ ಅಧಿಪತಿಗಳು ಎಂದು ಶ್ರುತಿವಾಕ್ಯವಿರುವುದು.

ಧ್ರುವೇಭಿಃ—ಪ್ರಕೃತಿ ವಿಕೃತಿಗಳೆಂಬ ಎರಡು ವಿಧವಾದ ಯಾಗಗಳು.

ವೀತಿಹೋತ್ರಃ—**ವೀ ಗತ್ಯಾದಿಷು । ಹೋತ್ರಂ ಹೋಮಃ ವೀತಿಃ ಸ್ಯಾತ್ಪ್ರೋ ಹೇಮೋ ಯೇನ ।** ಹೋಮ ಮಾಡಿದ ಅಥವಾ ಯಜ್ಞ ಮಾಡಿದ

ಸುದೇವಃ—**ಶೋಭನದೇವತಾಕಃ ।** ಶ್ರೇಷ್ಠವಾದ ದೇವತೆಯನ್ನು ಆರಾಧಿಸುವ ಯಜಮಾನನು.

॥ ವ್ಯಾಕರಣಪ್ರಕ್ರಿಯಾ ॥

ಈಟ್ಟೇ—ಈಡ ಸ್ತುತೌ ಧಾತು. ಅದಾದಿ. ಲಟ್ ಪ್ರಥಮಪುರುಷಏಕವಚನದ ತ ಪ್ರತ್ಯಯಕ್ಕೆ **ಟಿತ ಆತ್ಮನೇ** ಸೂತ್ರದಿಂದ ಏತ್ವ. **ಆದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪಿಗೆ ಲುಕ್. ಷ್ಟುತ್ವದಿಂದ ಪ್ರತ್ಯಯ ತಕಾರಕ್ಕೆ ಟಕಾರಾದೇಶ. ಈಟ್ಟೇ ಎಂದು ರೂಪವಾಗುತ್ತದೆ. ತಿಙಂತನಿಘಾತಸ್ವರ ಬರುತ್ತದೆ.

ಸ್ರುಚಾ—ಸ್ರುಚ್ ಶಬ್ದದ ತೃತೀಯಾ ಏಕವಚನದರೂಪ. **ಸಾವೇಕಾಚಸ್ತೃತೀಯಾದಿಃ** (ಪಾ. ಸೂ. ೬-೧-೧೬೮) ಎಂಬುದರಿಂದ ಏಕಾಚಿನ ಪರದಲ್ಲಿರುವುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಯಜಾತ್ಯೈ—ಯಜ ದೇವಪೂಜಾಸಂಗತಿಕರಣದಾನೇಷು ಧಾತು. ಲೇಟ್ ಪ್ರಥಮಪುರುಷ ಏಕವಚನದಲ್ಲಿ **ಲೇಟೋಽಡಾಟೌ** ಎಂಬುದರಿಂದ ಆಡಾಗಮ. **ವೈತೋಽನ್ಯತ್ರ** (ಪಾ. ಸೂ. ೩-೪-೯೬) ಎಂಬುದರಿಂದ ಅದಕ್ಕೆ ಏಕಾರಾಂತಾದೇಶ. ನಿಘಾತಸ್ವರ ಬರುತ್ತದೆ.

ವಹಾನ್—ವಹ ಪ್ರಾಪಣೇ ಧಾತು. ಲೇಟ್ ಪ್ರಥಮಪುರುಷ ಬಹುವಚನದಲ್ಲಿ ಝ ಪ್ರತ್ಯಯಕ್ಕೆ **ಝೋಂತಃ** ಎಂಬುದರಿಂದ ಅಂತಾದೇಶ. **ಲೇಟೋಽಡಾಟೌ** ಸೂತ್ರದಿಂದ ಅದಕ್ಕೆ ಅಡಾಗಮ. **ಇತಶ್ಚ ಲೋಪಃ ಪರಸ್ಮೈಪದೇಷು** ಎಂಬುದರಿಂದ ಕೊನೆಯ ಇಕಾರಕ್ಕೆ ಲೋಪ. ಆಗ **ಸಂಯೋಗಾಂತಸ್ಯ ಲೋಪಃ** ಎಂಬುದರಿಂದ ಕೊನೆಯ ತಕಾರಕ್ಕೆ ಲೋಪ. ವಹಾನ್ ಎಂದು ರೂಪವಾಗುತ್ತದೆ. ತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಹೋಮ—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ. ಧಾತು. **ಆತೋ ಮನಿನ್** (ಪಾ. ಸೂ. ೩-೨-೭೪) ಎಂಬುದರಿಂದ ಇದಕ್ಕೆ **ಆತೋ ಲೋಪ ಇಟಿ ಚ** ಸೂತ್ರದಿಂದ ಆತ್ವ ಬಂದ ಮೇಲೆ ಮನಿನ್ ಪ್ರತ್ಯಯ. ಹ್ವಾ+ಮನ್ ಎಂದಿರುವಾಗ **ಹ್ವಃ** ಎಂದು ಅನುವೃತ್ತವಾಗುವಾಗ **ಬಹುಲಂ ಛಂದಸಿ** ಎಂಬುದರಿಂದ ಸಂಪ್ರಸಾರಣ ಬರುತ್ತದೆ. **ಸಂಪ್ರಸಾರಣಾಚ್ಚ** ಸೂತ್ರದಿಂದ ಪೂರ್ವರೂಪ. ಉಕಾರಕ್ಕೆ ಆರ್ಧಧಾತುಕನಿಮಿತ್ತವಾಗಿ ಗುಣ. ಹೋಮನ್ ಶಬ್ದವಾಗುತ್ತದೆ. ಅಥವಾ **ನಾಮನ್ ಸೀಮನ್** (ಉ ಸೂ. ೪-೫೯೦) ಎಂಬಲ್ಲಿ ಹೋಮನ್ ಶಬ್ದವು ಮನಿನ್ ಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ನಿತ್ ಪ್ರತ್ಯಯಾಂತವಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಸೂತ್ರದಿಂದ ಆದ್ಯುದಾತ್ತವಾಗುತ್ತದೆ.

ಮಂಸತೇ—ಮನ ಜ್ಞಾನೇ ಧಾತು. ಲೇಟಿನಲ್ಲಿ ಏಕವಚನಕ್ಕೆ **ಲೇಟೋಽಡಾಟೌ** ಸೂತ್ರದಿಂದ ಅಡಾಗಮ. **ಸಿಬ್ಬಹುಲಂ ಲೇಟಿ** (ಪಾ. ಸೂ. ೩-೧-೩೪) ಎಂಬುದರಿಂದ ಸಿಪ್. **ನಶ್ಛಾಪದಾಂತಸ್ಯ ಝಲಿ** ಸೂತ್ರದಿಂದ ನಕಾರಕ್ಕೆ ಅನುಸ್ವಾರ. **ತಿಙ್ಶಿತಿಜಿಃ** ಸೂತ್ರದಿಂದ ನಿಘಾತಸ್ವರ ಬರುತ್ತದೆ.

ವೀತಿಹೋತ್ರಃ—ವೀ ಧಾತುವು ಗತ್ಯಾದ್ಯರ್ಥದಲ್ಲಿ ಉಕ್ತವಾಗಿದೆ. ಇದಕ್ಕೆ **ಮಂತ್ರೇ ವೃಷೇಷಪಚ** (ಪಾ. ಸೂ. ೩-೩-೯೬) ಎಂಬುದರಿಂದ ಕರ್ಮಣಿಯಲ್ಲಿ ಉದಾತ್ತವಾದ ಕ್ತಿನ್ ಪ್ರತ್ಯಯ. ಕಿತ್ತಾದುದರಿಂದ ಗುಣ ಬರುವುದಿಲ್ಲ. ಹೋತ್ರಂ ಹೋಮಃ **ಹುಯಾಮಾಶ್ರುಭಸಿಭ್ಯಶ್ತ್ರನ್** (ಉ. ಸೂ. ೪-೬೦೭) ಎಂಬುದರಿಂದ ಹುಧಾತುವಿಗೆ ತ್ರನ್ ಪ್ರತ್ಯಯ. **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿನ ಉಕಾರಕ್ಕೆ ಗುಣ. ವೀತಿಃ ಪ್ರಾಪ್ತಃ ಹೋತ್ರಂ ಹೋಮಃ ಯೇನ ಸಃ ವೀತಿಹೋತ್ರಃ (ಹೊಂದಲ್ಪಟ್ಟ ಹೋಮವುಳ್ಳವನು) **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಸಮಾಸದಲ್ಲಿ ಪೂರ್ವಪದಪ್ರಕೃತಿಸ್ವರ ಬರುತ್ತದೆ.

ಸುದೇವಃ — ಶೋಭನೋ ದೇವೋ ಯಸ್ಯ ಸಃ ಸುದೇವಃ **ನಞ್‌ಸುಭ್ಯಾಂ** (ಪಾ. ಸೂ. ೬-೭-೧೭೨) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ. ॥ ೧೪ ॥

॥ ಸಂಹಿತಾಪಾಠಃ ॥

ತ್ವಮಂಗ ಪ್ರ ಶಂಸಿಷೋ ದೇವಃ ಶವಿಷ್ಠ ಮರ್ತ್ಯಂ।
ನ ತ್ವದನ್ಯೋ ಮಘವನ್ನಸ್ತಿ ಮರ್ಡಿತೇಂದ್ರ ಬ್ರವೀಮಿ ತೇ ವಚಃ ॥

॥ ಪದಪಾಠಃ ॥

ತ್ವಂ । ಅಂಗ । ಪ್ರ । ಶಂಸಿಷಃ । ದೇವಃ । ಶವಿಷ್ಠ । ಮರ್ತ್ಯಂ ।
ನ । ತ್ವತ್ । ಅನ್ಯಃ । ಮಘವನ್ । ಅಸ್ತಿ । ಮರ್ಡಿತಾ । ಇಂದ್ರ । ಬ್ರವೀಮಿ ।
ತೇ । ವಚಃ ॥ ೧೯ ॥

ಸಾಯಣಭಾಷ್ಯಂ

ಅಂಗೇತ್ಯಭಿಮುಖೀಕರಣೇ । ಅಂಗ ಶವಿಷ್ಠ ಹೇ ಬಲವತ್ತಮೇಂದ್ರದೇವೋ ದ್ಯೋತಮಾನಸ್ತ್ವಂ ಮರ್ತ್ಯಂ ಮರಣಧರ್ಮಾಣಂ ತ್ವಾಂ ಸ್ತುತವಂತಂ ಪುರುಷಂ ಪ್ರ ಶಂಸಿಷಃ । ಸಮ್ಯಗನೇನ ಸ್ತುತಮಿತಿ ಪ್ರಶಂಸ । ಹೇ ಮಘವನ್ ಧನವನ್ನಿಂದ್ರ ತ್ವದನ್ಯಸ್ತ್ವತ್ತೋಽನ್ಯಃ ಕಶ್ಚಿನ್ಮರ್ಡಿತಾ ಸುಖಯಿತಾ ನಾಸ್ತಿ । ಅತಃ ಕಾರಣಾತ್ತೇ ತುಭ್ಯಮಿದಂ ಸ್ತುತಿಲಕ್ಷಣಂ ವಚೋ ಬ್ರವೀಮಿ । ಉಚ್ಚಾರಯಾಮಿ ॥ ಶಂಸಿಷಃ । ಶಸ್ಸು ಸ್ತುತೌ । ಲೇಟಿ ಸಿಪ್ಯಡಾಗಮಃ । ಸಿಬ್ಬಹುಲಂ ಲೇಟೀತಿ ವಿಕರಣಶ್ಚ ಸಿಪ್ । ತಸ್ಯಾರ್ಧಧಾತುಕತ್ವಾದಿಡಾಗಮಃ । ಶವಿಷ್ಠ । ಅತಿಶಯೇನ ಶವಸ್ವೀ ಶವಿಷ್ಠಃ । ಇಷ್ಠನಿ ವಿನ್ಮತೋರ್ಲುಕ್ । ಟೇರಿತಿ ಟಿಲೋಪಃ । ಮರ್ಡಿತಾ । ಮೃಡ ಸುಖನೇ । ತೃಚ ಇಡಾಗಮಃ ॥

ಪ್ರತಿಪದಾರ್ಥ

ಅಂಗ ಶವಿಷ್ಠ—ಅತ್ಯಂತ ಬಲಶಾಲಿಯಾದ ಎಲೈ ಇಂದ್ರನೇ । **ದೇವಃ**—ಪ್ರಕಾಶಮಾನನಾದ । **ತ್ವಂ**—ನೀನು । **ಮರ್ತ್ಯಂ**—(ನಿನ್ನನ್ನು ಸ್ತುತಿಸುವ) ಮಾನವನನ್ನು । **ಪ್ರ ಶಂಸಿಷಃ**—(ನಿನ್ನ ತೃಪ್ತಿಸೂಚಕವಾದ) ಪ್ರಶಂಸೆಯಿಂದ ಅನುಗ್ರಹಿಸು । **ಮಘವನ್**—ಧನನಂತನಾದ । **ಇಂದ್ರ**—ಎಲೈ ಇಂದ್ರನೇ । **ತ್ವದನ್ಯಃ**—ನಿನ್ನನ್ನು ಬಿಟ್ಟು ಇತರ ಯಾವನೂ । **ಮರ್ಡಿತಾ**—ಸುಖದಾತನಾಗಿ । **ನ ಅಸ್ತಿ**—ಇಲ್ಲವು (ಆದ್ದರಿಂದ) । **ತೇ**—ನಿನಗೆ । **ವಚಃ**—(ಈ ಸ್ತೋತ್ರರೂಪವಾದ) ವಾಕ್ಯನ್ನು । **ಬ್ರವೀಮಿ**—ಪಠಿಸುತ್ತೇನೆ ॥

ಭಾವಾರ್ಥ

ಅತ್ಯಂತ ಬಲಶಾಲಿಯಾದ ಎಲೈ ಇಂದ್ರನೇ, ಪ್ರಕಾಶಮಾನನಾದ ನೀನು ನಿನ್ನನ್ನು ಸ್ತುತಿಸುವ ಮಾನವನನ್ನು ನಿನ್ನ ತೃಪ್ತಿಸೂಚಕವಾದ ಪ್ರಶಂಸೆಯಿಂದ ಅನುಗ್ರಹಿಸು. ಧನನಂತನಾದ ಇಂದ್ರನೇ, ನೀನಲ್ಲದೇ ನಮಗೆ ಸುಖದಾತನು ಇನ್ನಾರೂ ಇಲ್ಲವು. ಆದ್ದರಿಂದ ನಿನಗೆ ಅಭಿಮುಖವಾಗಿ ಈ ಸ್ತೋತ್ರರೂಪವಾದ ವಾಕ್ಯನ್ನು ಪಠಿಸುತ್ತೇನೆ.

English Translation

O powerful Indra, be present and be favourable to the mortal who adores you; there is no other giver of felicity, O Maghavan, than you; therefore I recite your praise.

ವಿಶೇಷವಿಷಯಗಳು

ಅಂಗ—ಅಭಿಮುಖೀಕರಣೇ । ಇಂದ್ರನು ತನ್ನ ಎದುರಿಗೆ ನಿಂತಿರುವಂತೆ ಎಂದರೆ ಅಭಿಮುಖವಾಗಿರುವಂತೆ ಭಾವಿಸಿ ಸ್ತೋತ್ರಮಾಡುವಾಗ ಅಂಗಶಬ್ದದ ಪ್ರಯೋಗವಿರುವುದೆಂದು ಭಾಷ್ಯಕಾರರ ಅಭಿಪ್ರಾಯವು.

ಶವಿಷ್ಮ—ಶವಃ ಎಂದರೆ ಬಲವು. (ನಿ. ೩-೯) ಶವಿಷ್ಮ ಎಂದರೆ ಅತ್ಯಂತ ಬಲಶಾಲಿಯು. **ಅತಿಶಯೇನ ಶವಸ್ವೀ ಶವಿಷ್ಮಃ ।**

ಮರ್ಡಿತಾ—ಮೃಡ ಸುಖನೇ । ಸುಖವನ್ನುಂಟುಮಾಡುವವನು.

ಬ್ರವೀಮಿ ತೇ ವಚಃ—ನಿನ್ನನ್ನು ಸ್ತುತಿರೂಪವಾದ ವಾಕ್ಯಗಳಿಂದ ಪ್ರಶಂಸೆಮಾಡುತ್ತೇನೆ.

ವ್ಯಾಕರಣಪ್ರಕ್ರಿಯಾ

ಶಂಸಿಷಃ—ಶಂಸು ಸ್ತುತೌ ಧಾತು. ಲೇಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. **ಇತಶ್ಚ-ಲೋಪಃ** ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಲೇಟೋಽಡಾಟೌ** ಸೂತ್ರದಿಂದ ಪುನಃ ಅಡಾಗಮ **ಸಿಬ್ಬಹುಲಂ ಲೇಟಿ** ಎಂಬುದರಿಂದ ವಿಕರಣಕ್ಕೆ ಸಿಪ್. ಅದಕ್ಕೆ ಆರ್ಧಧಾತುಕಸಂಜ್ಞೆ ಇರುವುದರಿಂದ **ಆರ್ಧ-ಧಾತುಕಸ್ಯೇಡ್ವಲಾದೇಃ** ಎಂಬುದರಿಂದ **ಇಡಾಗಮ. ಆದೇಶಪ್ರತ್ಯಯಯೋಃ** ಸೂತ್ರದಿಂದ ಷತ್ವ. ಪ್ರತ್ಯಯ ಸಕಾರಕ್ಕೆ ರುತ್ವವಿಸರ್ಗಗಳು ಬಂದಾಗ ಶಂಸಿಷಃ ಎಂದು ರೂಪವಾಗುತ್ತದೆ. **ತಿಜ್ಜತಿಜಃ** ಎಂಬುದರಿಂದ ಸಿಘಾತಸ್ವರ ಬರುತ್ತದೆ.

ಶವಿಷ್ಮ—ಅತಿಶಯೇನ ಶವಸ್ವೀ ಶವಿಷ್ಮಃ । **ಅತಿಶಾಯನೇ ತಮಬಿಷ್ಠನೌ** ಎಂಬುದರಿಂದ ಶವಸ್ವಿನ್ ಶಬ್ದಕ್ಕೆ ಇಷ್ಠನ್ ಪ್ರತ್ಯಯ. **ವಿನ್‌ಮತೋರ್ಲುಕ್** (ಪಾ. ೬-೪-೬೫) ಎಂಬುದರಿಂದ ಇಷ್ಠನ್ ಪರವಾದಾಗ ವಿನ್‌ಪ್ರತ್ಯಯಕ್ಕೆ ಲುಕ್. **ಟೇಃ** (ಪಾ. ಸೂ. ೬-೪-೧೫೫) ಎಂಬುದರಿಂದ ಶವಸ್ ಶಬ್ದದ ಟಿಗೆ (ಅಸ್) ಲೋಪ. ಶವಿಷ್ಠ ಶಬ್ದವಾಗುತ್ತದೆ. ಸಂಬುದ್ಧಿಯಲ್ಲಿ **ಏಜೋಽಸ್ವಾತ್ ಸಂಬುದ್ಧೇಃ** ಎಂಬುದರಿಂದ ಸುಲೋಪ. **ಆಮಂ-ತ್ರಿತಸ್ಯ ಚ** ಎಂಬುದರಿಂದ ಸಿಘಾತಸ್ವರ ಬರುತ್ತದೆ

ಅಸ್ತಿ—ಅಸ ಭುವಿ ಧಾತು. ಲಟ್ ಪ್ರಥಮಪುರುಷಏಕವಚನರೂಪ. **ತಿಜ್ಜತಿಜಃ** ಎಂಬುದರಿಂದ ಸಿಘಾತಸ್ವರ ಬರುತ್ತದೆ.

ಮರ್ಡಿತಾ—ಮೃಡ ಸುಖನೇ ಧಾತು. ಕರ್ತೃರ್ಧದಲ್ಲಿ ತೃಚ್ ಪ್ರತ್ಯಯ. **ಆರ್ಧಧಾತುಕಸ್ಯೇಟ್** ಸೂತ್ರದಿಂದ ಅದಕ್ಕೆ ಇಡಾಗಮ. ಆರ್ಧಧಾತುಕ ನಿಬಂಧನವಾಗಿ ಧಾತುವಿಗೆ (ಲಘೂಪಧೆಗೆ) ಗುಣ. ಮರ್ಡಿತೃ ಶಬ್ದವಾಗುತ್ತದೆ **ಚಿತಃ** ಎಂಬುದರಿಂದ ಅಂತೋದಾತ್ತವಾಗುತ್ತದೆ. ಪ್ರಥಮಾ ಸು ಪರವಾದಾಗ **ಋದುಶನಸ್ಪು** ಸೂತ್ರದಿಂದ ಅನಙಾದೇಶ. **ಅಪ್‌ತೃನ್** ಸೂತ್ರದಿಂದ ಉಪಧಾದೀರ್ಘ **ಹಲ್‌ಙ್ಯಾಭ್ಯೋ** ಸೂತ್ರದಿಂದ ಸುಲೋಪ **ನಲೋಪಃ ಪ್ರಾತಿಪದಿಕಾಂತಸ್ಯ** ಎಂಬುದರಿಂದ ನಲೋಪ ಮರ್ಡಿತಾ ಎಂದು ರೂಪವಾಗುತ್ತದೆ.

ಬ್ರವೀಮಿ—ಬ್ರೂಞ್ ವ್ಯಕ್ತಾಯಾಂ ವಾಚಿ. ಧಾತು. ಅದಾದಿ. ಉತ್ತಮಪುರುಷ ಏಕವಚನದ ಮಿಪಿಗೆ ಬ್ರುವಈಟ್ (ಪಾ. ಸೂ. ೭-೩-೯೩) ಎಂಬುದರಿಂದ ಈಟಾಗಮ. ಸಾರ್ವಧಾತುಕನಿಬಂಧನವಾಗಿ ಧಾತು ವಿನ ಉಕಾರಕ್ಕೆ ಗುಣ. ಅವಾದೇಶ.

ವಚಃ—ವಚ ಪರಿಭಾಷಣೇ ಧಾತು. **ಸರ್ವಧಾತುಭ್ಯೋ ಽಸುನ್** ಎಂಬುದರಿಂದ ಅಸುನ್ ಪ್ರತ್ಯಯ. ನಿತ್ವಾದುದರಿಂದ ಆದ್ಯುದಾತ್ತವಾಗುತ್ತದೆ. ॥ ೧೯ ॥

॥ ಸಂಹಿತಾಪಾಠಃ ॥

ಮಾ ತೇ ರಾಧಾಂಸಿ ಮಾ ತ ಊತಯೋ ವಸೋ೪ ಸ್ಮಾನ್ಕದಾ
ಚನಾ ದಭನ್ ।
ವಿಶ್ವಾ ಚ ನ ಉಪಮಿಮೀಹಿ ಮಾನುಷ ವಸೂನಿ ಚರ್ಷಣಿಭ್ಯ
ಆ ॥ ೨೦ ॥

॥ ಪದಪಾಠಃ ।

ಮಾ । ತೇ । ರಾಧಾಂಸಿ । ಮಾ । ತೇ । ಊತಯಃ । ವಸೋ ಇತಿ । ಅಸ್ಮಾನ್ ।
ಕದಾ । ಚನ । ದಭನ್ ।
ವಿಶ್ವಾ । ಚ । ನಃ । ಉಪ ೪ ಮಿಮೀಹಿ । ಮಾನುಷ । ವಸೂನಿ । ಚರ್ಷಣಿ ೪ ಭ್ಯಃ ।
ಆ ॥೨೦॥

॥ ಸಾಯಣಭಾಷ್ಯಂ ॥

ಹೇ ವಸೋ ನಿವಾಸಯಿತರಿಂದ್ರ ತೇ ತವ ಸಂಬಂಧೀನಿ ರಾಧ್ನೋತ್ಯೇಭಿರಿತಿ ರಾಧಾಂಸಿ ಭೂತಾನ್ಯಸ್ಮಾನ್ಕದಾ ಚನ ಕದಾಚಿದಪಿ ಮಾ ದಭನ್। ಮಾ ವಿನಾಶಯಂತು। ತಥೋತಯೋ ಗಂತಾರಃ। ಯೆದ್ವಾ। ಧೂತಯ ಇತ್ಯತ್ರ ವರ್ಣಲೋಪಃ। ಧೂತಯಃ ಕಂಪಯಿತಾರಸ್ತೇ ತ್ವದೀಯಾ ಮರುತಶ್ಚ ಮಾ ದಭನ್। ಹೇ ಮಾನುಷ ಮನುಷ್ಯಹಿತೇಂದ್ರ ಚರ್ಷಣಿಭ್ಯೋ ಮಂತ್ರದ್ರಷ್ಟೃಭ್ಯೋ ನೋಽಸ್ಮಭ್ಯಂ ವಿಶ್ವಾ ವಿಶ್ವಾನಿ ಸರ್ವಾಣಿ ವಸೂನಿ ಧನಾನಿ ಚ ಆ ಉಪಮಿಮೀಹಿ। ಸರ್ವತ ಆಹೃತ್ಯಾಸ್ಮತ್ಸಮೀಪೇ ಕುರು। ಸರ್ವತ್ರ ವರ್ತಮಾನಂ ಧನಮಸ್ಮಭ್ಯಂ ಪ್ರಯಚ್ಛೇತ್ಯರ್ಥಃ॥ ಕದಾ। ಕಿಂಶಬ್ದಾತ್ಸರ್ವೈಕಾನ್ಯಕಿಂಯತ್ತದಃ ಕಾಲೇ ದೇತಿ ದಾಪ್ರತ್ಯಯಃ। ಕಿಮಃ ಕ ಇತಿ ಕಾದೇಶಃ। ವ್ಯತ್ಯಯೇನಾದ್ಯುದಾತ್ತತ್ವಂ। ದಭನ್। ದನ್ಭು ದಂಭೇ। ಲೋಡರ್ಥೇ ಛಾಂದಸೇ ಲಙ್ ಬಹುಲಂ ಛಂದಸೀತಿ ವಿಕರಣಸ್ಯ ಲುಕ್। ನ ಮಾಙ್ಯೋಗ ಇತ್ಯಡಭಾವಃ। ಮಿಮೀಹಿ। ಮಾಙ್ ಮಾನೇ ಶಬ್ದೇ ಚ। ವ್ಯತ್ಯಯೇನ ಪರಸ್ಮೈಪದಂ। ಜುಹೋತ್ಯಾದಿತ್ವಾತ್ ಶ್ಲುಃ। ಭೃಞಾಮಿದಿತ್ಯಭ್ಯಾಸಸ್ಯೇತ್ವಂ। ಹೇರ್ಜುತ್ವಾತ್ ಘುಮಾಸ್ಥೇತೀತ್ವಂ॥

ಪ್ರತಿಪದಾರ್ಥ

ವಸೋ—ವಾಸಸ್ಥಾನದಾತನಾದ ಇಂದ್ರನೇ। **ತೇ**—ನಿನ್ನ (ನಿನ್ನಿಂದ ಅನುಗೃಹೀತವಾದ)। **ರಾಧಾಂಸಿ**—ಸಂಪತ್ತುಗಳೂ (ಮತ್ತು)। **ತೇ** – ನಿನ್ನ। **ಊತಯಃ**—ರಕ್ಷಣಾದಿ ಉಪಕಾರಗಳೂ। **ಅಸ್ಮಾನ್**—ನಮ್ಮನ್ನು। **ಕದಾ ಚನ** - ಯಾವಾಗಲೂ। **ಮಾ ದಭನ್**—ನಾಶವಾಗದಿರಲಿ। **ಮಾನುಷ**—ಮಾನವರ ಹಿತಕಾರಿಯಾದ ಇಂದ್ರನೇ। **ಚರ್ಷಣೀಭ್ಯಃ**—ಮಂತ್ರದ್ರಷ್ಟೃಗಳಾದ। **ನಃ**—ನಮಗೆ। **ವಿಶ್ವಾ ಚ ವಸೂನಿ**—ಸಮಸ್ತವಾದ ಧನಗಳನ್ನೂ ಕೂಡ। **ಆ ಉಪಮಿಮೀಹಿ**—ತಂದೊದಗಿಸು.।

ಭಾವಾರ್ಥ

ಎಲೈ ಇಂದ್ರನೇ, ನೀನು ನಮ್ಮೆಲ್ಲರಿಗೂ ವಾಸಸ್ಥಾನದಾತನು. ನಿನ್ನಿಂದ ಅನುಗೃಹೀತಗಳಾದ ಸಂಪತ್ತುಗಳೂ ಮತ್ತು ನಿನ್ನ ರಕ್ಷಣಾದಿಉಪಕಾರಗಳೂ ನಮ್ಮನ್ನು ಯಾವಾಗಲೂ ನಾಶವಾಗದಿರಲಿ ಮಾನವರ ಹಿತಕಾರಿಯಾದ ಇಂದ್ರನೆ, ಮಂತ್ರದ್ರಷ್ಟೃಗಳಾದ ನಮಗೆ ಸಮಸ್ತವಾದ ಧನಗಳನ್ನೂ ತಂದೊದಗಿಸು.

English Translation

O Indra, let not your gifts of riches fail us, let not your protection fail us at any time ; lover of mankind, measure out (bring to us who praise you) all sorts of riches.

॥ ವಿಶೇಷವಿಷಯಗಳು ॥

ಮಾ—ಈ ಶಬ್ದವು ನಿಷೇಧಾರ್ಥವಾಚಕವು. ಇತರ ಅರ್ಥವು ಬೇಡ, ಮಾಡಬೇಡ ಎಂದಿರುವುದು. ಈ ಶಬ್ದದ ಪ್ರಯೋಗವು ಋಗ್ವೇದದಲ್ಲಿ ವಿಶೇಷವಾಗಿರುವು.

ವಸೋ—ನಿವಾಸಯಿತರಿಂದ್ರ। ವಾಸಸ್ಥಾನಗಳನ್ನು ಕೊಡುವವನು ; granter of dwellings.

कदा चन—ಯಾವಾಗಲೂ, ಎಂದಿಗೂ.

दभ्नैः—दभ्नु हिंसायाम् । ನಾಶವಾಗು, ಕ್ಷೀಣಿಸು. **मा दभन्** ಎಂದರೆ ಎಂದೆಂದಿಗೂ ಕ್ಷೀಣಿಸದಂತೆ ಆಗಲಿ.

आ ऊतयेमिमीहि— माङ् माने शब्दे च । ಅಳತೆಮಾಡು, ಎಂದರೆ ಹಂಚು. ಎಲ್ಲಾಕಡೆಯಿಂದಲೂ ತಂದು ನಮಗೆ ಕೊಡು ಎಂದಭಿಪ್ರಾಯವು.

मानुष—मनुष्यहितेन्द्रे । ಮನುಷ್ಯರಿಗೆ ಹಿತವನ್ನುಂಟುಮಾಡುವ ಇಂದ್ರನು.

ऊतयेः—ರಕ್ಷಣೆಗೆಲು. ಭಾಷ್ಯಕಾರರು **ईः** ಶಬ್ದಕ್ಕೆ—ಊತಯಃ ಎಂಬಲ್ಲಿ ವರ್ಣಲೋಪವಾಗಿರುವುದೆಂದು ಹೇಳಿ **धूतयः** ಎಂಬ ಪದವನ್ನು ಇಟ್ಟುಕೊಂಡು ಅದಕ್ಕೆ—**धूतयः कंपयितारस्ते त्वदीया मरुतश्च मा दभन् ।** ಕಂಪನಮಾಡುವ ಎಂದರೆ ವೇಗವಾಗಿ ಬೀಸುವ ನಿನ್ನ ಸಂಬಂಧವಾದ ಮರುತ್ತುಗಳು (ಗಾಳಿ) ನಮಗೆ ತೊಂದರೆಯನ್ನು ಮಾಡದಿರಲಿ ಎಂದು ಅರ್ಥವಿವರಣೆ ಮಾಡಿರುವರು. ಇದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ.

ವ್ಯಾಕರಣಸಕ್ರಿಯಾ

राधांसि—ರಾಧ್ನೋತಿ ನಿಷ್ಪತಿ ರಾಧಾಂಸಿ. ಅಸುನ್ ಪ್ರತ್ಯಯ ಹಿಂದೆ ಹೇಳಿದಂತೆ ಧಾತು (ಸಂಸಿದ್ಧಾ) ಧಾತುವಿಗೆ ಬಂದಾಗ ರಾಧಸ್ ಶಬ್ದವಾಗುತ್ತದೆ. ನಪುಂಸಕದಲ್ಲಿ ಜಸಿಗೆ ಬಂದ ಶಿ ಪರವಾದಾಗ **नपुंसकस्य झलचः** ಎಂಬುದರಿಂದ ನುಮಾಗಮ. **नश्छापदान्तस्य झलि** ಸೂತ್ರದಿಂದ ಅದಕ್ಕೆ ಅನುಸ್ವಾರ. ಆದ್ಯುದಾತ್ತಸ್ವರ ಬರುತ್ತದೆ.

कदा—ಕಿಮ್ ಶಬ್ದ. **सर्व्वैकान्यकिंयत्तदः कालेदा** (ಪಾ. ಸೂ. ೫-೩-೧೫) ಎಂಬುದರಿಂದ ದಾಪ್ರತ್ಯಯ. ಪ್ರಾಗ್ದಿಶೀಯದಲ್ಲಿ ಸೇರಿರುವುದರಿಂದ **प्राग्दिशो विभक्तिः** ಎಂಬುದರಿಂದ ಇದಕ್ಕೆ ವಿಭಕ್ತಿ ಸಂಜ್ಞಾ ಬರುತ್ತದೆ. ಆಗ **किमः कः** ಎಂಬುದರಿಂದ ಕಾದೇಶ. ಕದಾ ಎಂದು ರೂಪವಾಗುತ್ತದೆ. ಪ್ರತ್ಯಯ ಸ್ವರದಿಂದ ಅಂತೋದಾತ್ತವು ವ್ಯಾಪ್ತನಾದರೆ ಪ್ಯತ್ಯಯದಿಂದ ಆದ್ಯುದಾತ್ತಸ್ವರ ಬರುತ್ತದೆ.

दभ्नैः—ನಂಭು ದಂಭೇ. ಧಾತು **भंदसि लुङ्लङ्लिटः** ಎಂಬುದರಿಂದ ಲೋಡರ್ಥದಲ್ಲಿ ಲಙ್. ಪ್ರಥಮಪುರುಷ ಬಹುವಚನದಲ್ಲಿ **झोऽन्तः** ಎಂಬುದರಿಂದ ಅಂತಾದೇಶ. **इतश्च** ಸೂತ್ರದಿಂದ ಅಂತ್ಯಲೋಪ. **बहुलं भंदसि** ಎಂಬುದರಿಂದ ವಿಕರಣಕ್ಕೆ ಲುಕ್. **अनिदितां** ಸೂತ್ರದಿಂದ ಧಾತುವಿನ ಉಪಧಾನಕಾರಕ್ಕೆ ಲೋಪ. **नमाङ्योगे** (ಪಾ. ಸೂ. ೬-೪-೭೪) ಎಂಬುದರಿಂದ ಆಡಾಗಮ ಬರುವುದಿಲ್ಲ. **तिङन्तनिघात** ಸ್ವರ ಬರುತ್ತದೆ.

ऐश्वा—ನಪುಂಸಕದಲ್ಲಿ ದ್ವಿತೀಯಾಬಹುವಚನದ **शसि** ಗೆ **जश्शसोः शिः** ಎಂಬುದರಿಂದ ಶಿ ಆದೇಶ. **शेश्छंदसि बहुलं** ಎಂಬುದರಿಂದ ಶಿಗೆ ಲೋಪ.

ಉಪಮಿಮೀಹಿ—ಮಾಙ್ ಮಾನೇ ಶಬ್ದೇ ಚ. ಧಾತು. **ವ್ಯತ್ಯಯೋ ಬಹುಲಂ** ಎಂಬುದರಿಂದ ಪರಸ್ಮೈಪದಪ್ರತ್ಯಯ ಬರುತ್ತದೆ. **ಜುಹೋತ್ಯಾದಿಭ್ಯಃ ಶ್ಲುಃ** ಸೂತ್ರದಿಂದ ಶ್ಲು ವಿಕರಣ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ **ಸೇರ್ಹ್ಯಪಿಚ್ಚ** ಎಂಬುದರಿಂದ ಲೋಟಿನ ಸಿಪಿಗೆ ಹಿ ಆದೇಶ. **ಭೃಞಾಮಿತ್** (ಪಾ. ಸೂ. ೪-೭೬) ಎಂಬುದರಿಂದ ಅಭ್ಯಾಸಾಕಾರಕ್ಕೆ ಇತ್ವ. **ಸಾರ್ವಧಾತುಕಮಪಿತ್** ಸೂತ್ರದಿಂದ ಹಿ ಆದೇಶವು ಙಿತ್ತಾಗುವುದರಿಂದ **ಘುಮಾಸ್ಥಾ**—(ಪಾ.ಸೂ.೬-೪-೬೬) ಎಂಬುದರಿಂದ ಆಕಾರಕ್ಕೆ **ಈ**ಕಾರಾದೇಶ. ಮಿಮೀಹಿ ಎಂದು ರೂಪವಾಗುತ್ತದೆ **ಚವಾಯೋಗೇ ಪ್ರಥಮಾ** (ಪಾ. ಸೂ. ೮-೧-೫೯) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ. **ತಿಙಾಙೋದಾತ್ತವತಿ** ಎಂಬುದರಿಂದ ಗತಿಗೆ ನಿಘಾತಸ್ವರ ಬರುತ್ತದೆ.

ಮಾನುಷ—**ಮನೋರ್ಜಾತಾವಞ್ಯತೌ ಷುಕ್ ಚ** ಎಂಬುದರಿಂದ ಮನುಶಬ್ದಕ್ಕೆ ಅಞ್ ಪ್ರತ್ಯಯ. ತತ್ಸನ್ನಿಯೋಗದಿಂದ ಷುಕಾಗಮ. **ತದ್ಧಿತೇಷ್ವಚಾಮಾದೇಃ** ಎಂಬುದರಿಂದ ಆದಿವೃದ್ಧಿ. ಮಾನುಷಶಬ್ದವಾಗುತ್ತದೆ. ಸಂಬುದ್ಧಿಯಲ್ಲಿ **ಏಙ್ಪ್ರಸ್ವಾತ್ ಸಂಬುದ್ಧೇಃ** ಎಂಬುದರಿಂದ ಸುಲೋಪ. **ಆಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರ ಬರುತ್ತದೆ. ॥ ೨೦ ॥

ಏಂಭತ್ತೆರ್ಡನೆಯ ಸೂಕ್ತವು

ಚತುರ್ದಶೇಽನುವಾಕೇ ನವ ಸೂಕ್ತಾನಿ । ತತ್ರ ಪ್ರ ಯೇ ಇತಿ ದ್ವಾದಶರ್ಚಂ ಪ್ರಥಮಂ ಸೂಕ್ತಂ ಗೋತಮಸ್ಯಾರ್ಷಂ । ಪಂಚಮ್ಯಾದ್ಯಾದಶ್ಯೌ ತ್ರಿಷ್ಟುಭೌ । ಶಿಷ್ಟಾ ಜಗತ್ಯಃ । ಮರುತೋ ದೇವತಾ । ತಥಾ ಚಾನುಕ್ರಾಂತಂ । ಪ್ರ ಯೇ ದ್ವಾದಶ ಮಾರುತಂ ಹ ಪಂಚಮ್ಯಂತ್ಯೇ ತ್ರಿಷ್ಟುಭಾವಿತಿ । ಹಶಬ್ದಪ್ರಯೋಗಾದಿದಮಾದೀನಿ ಚತ್ವಾರಿ ಸೂಕ್ತಾನಿ ಮರುದ್ದೇವತ್ಯಾನಿ ॥ ಅಭಿಪ್ಲವಷಡಹಸ್ಯ ಚತುರ್ಥೇಽಹನ್ಯಾಗ್ನಿಮಾರುತ ಏತತ್ಸೂಕ್ತಂ ಮಾರುತನಿವಿದ್ವಾನೀಯಂ । ಸೂಶ್ರಿತಂ ಚ । ಪ್ರ ಯೇ ಶುಂಭಂತೇ ಜನಸ್ಯ ಗೋಪಾ ಇತ್ಯಾಗ್ನಿಮಾರುತಂ ॥ ಅ. ೬-೭ । ಇತಿ ॥

ಅನುವಾದವು—ಈ ಸೂಕ್ತದಿಂದ ಹದಿನಾಲ್ಕನೆಯ ಅನುವಾಕವು ಪ್ರಾರಂಭವಾಗುವುದು. ಈ ಅನುವಾಕದಲ್ಲಿ ಒಂಭತ್ತು ಸೂಕ್ತಗಳಿರುವುವು. (೮೫-೯೩) ಅವುಗಳಲ್ಲಿ **ಪ್ರ ಯೇ ಶುಂಭಂತೇ** ಎಂಬ ಮೊದಲನೆಯ ಸೂಕ್ತದಲ್ಲಿ ಹನ್ನೆರಡು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಗೋತಮನು ಋಷಿಯು. ಮರುದ್ದೇವತೆಗಳು, ಐದನೆಯ ಮತ್ತು ಹನ್ನೆರಡನೆಯ ಋಕ್ಕುಗಳು ತ್ರಿಷ್ಟುಪ್ಛಂದಸ್ಸಿನವು. ಉಳಿದ ಋಕ್ಕುಗಳು ಜಗತೀಛಂದಸ್ಸಿನವು. ಅನುಕ್ರಮಣಿಕೆಯಲ್ಲಿ—**ಪ್ರ ಯೇ ದ್ವಾದಶ ಮಾರುತಂ ಹ ಪಂಚಮ್ಯಂತೇ ತ್ರಿಷ್ಟುಭಾವಿತಿ** ಎಂದು ಹೇಳಿರುವುದು. ಈ ವಾಕ್ಯದಲ್ಲಿರುವ ಹ ಶಬ್ದಪ್ರಯೋಗವು ಈ ಸೂಕ್ತದಿಂದ ಸೊಲಾಗುವ ಮುಂದಿನ ನಾಲ್ಕುಸೂಕ್ತಗಳು ಮರು

ದ್ವೇವತಾಕವೆಂದು ಸೂಚಿಸುವುದು. **ಅಭಿಪ್ಲವಷಡಹವೆಂಬ** ಯಾಗದ ನಾಲ್ಕನೆಯ ದಿವಸ ಆಗ್ನಿಮಾರುತಶಸ್ತ್ರ ಮಂತ್ರಪಠನಕಾಲದಲ್ಲಿ ಮಾರುತನಿವಿದ್ಧಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದು. ಈ ವಿಷಯವು ಆಶ್ವಲಾಯನಶ್ರೌತಸೂತ್ರದಲ್ಲಿ **ಪ್ರ ಯೇ ಶುಂಭಂತೇ ಜನಸ್ಯ ಗೋಪಾ ಇತ್ಯಾಗ್ನಿಮಾರುತಂ** ಎಂಬ ಸೂತ್ರದಿಂದ ವಿವೃತವಾಗಿರುವುದು (ಅ. ೭-೭)



॥ ಓಂ ॥

ಸೂಕ್ತ—೬೫

॥ ಮಂಡಲ—೧ ॥ ಅನುವಾಕ—೧೪ ॥ ಸೂಕ್ತ—೬೫ ॥

॥ ಅಷ್ಟಕ— ೧ ॥ ಅಧ್ಯಾಯ— ೬ ॥ ವರ್ಗ— ೯, ೧೦ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ— ೧೨ ॥

॥ ಋಷಿಃ—ಗೋತಮೋ ರಾಹೂಗಣಃ ॥

॥ ದೇವತಾ—ಮರುತಃ ॥

॥ ಛಂದಸ್— ೧-೪, ೬,೧೧, ಜಗತೀ, ೫-೭, ೮-೧೦, ತ್ರಿಷ್ಟುಪ್ ॥

ಸಂಹಿತಾಪಾಠಃ

ಪ್ರ ಯೇ ಶುಂಭಂತೇ ಜನಯೋ ನ ಸಪ್ತಯೋ ಯಾಮನ್ರುದ್ರಸ್ಯ ಸೂನವಃ ಸುದಂಸಸಃ ।
ರೋದಸೀ ಹಿ ಮರುತಶ್ಚಕ್ರಿರೇ ವೃಧೇ ಮದಂತಿ ವೀರಾ ವಿದಥೇಷು ಘೃಷ್ವಯಃ ॥೧॥

॥ ಪದಪಾಠಃ ॥

ಪ್ರ । ಯೇ । ಶುಂಭಂತೇ । ಜನಯಃ । ನ । ಸಪ್ತಯಃ । ಯಾಮನ್ । ರುದ್ರಸ್ಯ ।
ಸೂನವಃ । ಸುದಂಸಸಃ ।
ರೋದಸೀ ಇತಿ । ಹಿ । ಮರುತಃ । ಚಕ್ರಿರೇ । ವೃಧೇ । ಮದಂತಿ । ವೀರಾಃ । ವಿ-
ದಥೇಷು । ಘೃಷ್ವಯಃ ॥ ೧ ॥

ಸಾಯಣಭಾಷ್ಯಂ

ಹೇ ಮರುತೋ ಯಾಮನ್ ಯಾಮನಿ ಗಮನೇ ನಿಮಿತ್ತಭೂತೇ ಸತಿ ಪ್ರ ಶುಂಭಂತೇ ಪ್ರಕರ್ಷೇಣ ಸ್ವಕೀಯಾನ್ಯಂಗಾನ್ಯಲಂಕುರ್ವಂತಿ ಜನಯೋ ನ ಜಾಯಾ ಇವ । ಯಥಾ ಯೋಷಿತಃ ಸ್ವಕೀಯಾನ್ಯಂಗಾನ್ಯಲಂಕುರ್ವಂತಿ ತದ್ವತ್ । ಕೀದೃಶಾ ಮರುತಃ । ಸಪ್ತಯಃ ಸರ್ಪಣಶೀಲಾಃ ರುದ್ರಸ್ಯ ಸೂನವಃ । ರೋದಯತಿ ಸರ್ವಮಂತಕಾಲ ಇತಿ ರುದ್ರಃ ಪರಮೇಶ್ವರಃ । ತಸ್ಯ ಪುತ್ರಾಃ । ಸುದಂಸಸಃ ಶೋಭನಕರ್ಮಾಣಃ । ಏತದೇವೋಪಪಾದಯತಿ । ಹಿ ಯಸ್ಮಾನ್ಮರುತೋ ರೋದಸೀ ದ್ಯಾವಾಪೃಥಿವ್ಯೌ ವೃಧೇ ವೃಷ್ಟಿಪ್ರದಾನಾದಿನಾ ವರ್ಧನಾಯೈ ಚಕ್ರಿರೇ ಕೃತವಂತಃ । ಅತಃ ಸುದಂಸಸ ಇತ್ಯರ್ಥಃ । ವೀರಾ ವಿಶೇಷೇಣ ಶತ್ರುಕ್ಷೇಪಣಶೀಲಾಃ ಘೃಷ್ವಯೋ ಘರ್ಷಣಶೀಲಾಃ । ಮಹೀರುಹಶಿಲೋಚ್ಚಯಾದೇರ್ಭಂಜಕಾ ಇತ್ಯರ್ಥಃ । ಏವಂಭೂತಾಸ್ತೇ ಮರುತೋ ವಿದಥೇಷು । ವಿದಂತ್ಯೇಷು ಯಷ್ವನುತಯಾ ದೇವಾನಿತಿ ವಿದಥಾ ಯಜ್ಞಾಃ । ತೇಷು ಮದಂತಿ । ಸೋಮಪಾನೇನ ಹೃಷ್ಯಂತಿ ॥ ಶುಂಭಂತೇ । ಶುಭ ಶುಭ್ಲ ದೀಪ್ತೌ । ಭ್ವಾದಿಕಃ । ಜನಯಃ । ಜಾಯಂತ ಅಸ್ಮಪತ್ಯಾನೀತಿ ಜನಯೋ ಜಾಯಾಃ । ಇನ್ಸರ್ವಧಾತುಭ್ಯ ಇತೀನ್ಪ್ರತ್ಯಯಃ । ಯಾಮನ್ । ಯಾ ಪ್ರಾಪಣೇ । ಕೃತ್ಯಲ್ಯುಟೋ ಬಹುಲಮಿತಿ ಬಹುಲವಚನಾದಾತ್ತೋ ಮನಿನ್ನಿತಿ ಭಾವೇ ಮನಿನ್ । ಸುಪಾಂ ಸುಲುಗಿತಿ ಸಪ್ತಮ್ಯಾ ಲುಕ್ । ಸುದಂಸಸಃ । ದಂಸ ಇತಿ ಕರ್ಮನಾಮ । ಶೋಭನಂ ದಂಸೋ ಯೇಷಾಂ । ಸೋರ್ಮನಸೀ ಅಲೋಪೋಪಧಸೀ ಇತ್ಯುತ್ತರಪದಾದ್ಯುದಾತ್ತತ್ವಂ । ಚಕ್ರಿರೇ । ಹಿ ಚೇತಿ ನಿಘಾತಪ್ರತಿಷೇಧಃ । ವೃಧೇ । ವೃಧು ವೃದ್ಧೌ । ಸಂಪದಾದಿಲಕ್ಷಣೋ ಭಾವೇ ಕ್ವಿಪ್ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ ಮದಂತಿ । ಮದೀ ಹರ್ಷೇ । ಶ್ಯನಿ ಪ್ರಾಪ್ತೇ ವ್ಯತ್ಯಯೇನ ಶಪ್ । ಪಾದಾದಿತ್ವಾನ್ನಿಘಾತಾಭಾವಃ । ವಿದಥೇಷು ವಿದ ಜ್ಞಾನೇ ರುವಿದಿಭ್ಯಾಂ ಕಿದಿತ್ಯಥಪ್ರತ್ಯಯಃ । ಘೃಷ್ವಯಃ । ಘೃಷು ಸಂಘರ್ಷೇ । ಕ್ವಿಘೃಷ್ವಿರಿತ್ಯಾದಿನಾ ವಿನ್ಪ್ರತ್ಯಯಾಂತೋ ನಿಪಾತ್ಯತೇ ॥

॥ ಪ್ರತಿಪದಾರ್ಥ ॥

ಸಪ್ತಯಃ—ನುಸುಳಿಹೋಗತಕ್ಕವೂ । **ರುದ್ರಸ್ಯ ಸೂನವಃ**—ರುದ್ರಪುತ್ರರೂ. । **ಹಿ**—ಯಾವ ಕಾರಣದಿಂದ । **ರೋದಸೀ**—ದ್ಯಾವಾಪೃಥಿವಿಗಳಿರಡನ್ನೂ । **ವೃಧೇ**—(ವೃಷ್ಟಿ ಪ್ರದಾನಾದಿಗಳಿಂದ) ವೃದ್ಧಿಯಾಗುವಂತೆ ।

ಚಕ್ರಿರೇ—ಮಾಡಿದರೊ (ಆದ್ದರಿಂದ) । **ಸುದಂಸಸಃ**—ಮಂಗಳಕರಗಳಾದ ಕೃತಿಗಳುಳ್ಳವರೂ । **ವೀರಾಃ**—ಪರಾಕ್ರಮಶಾಲಿಗಳೂ । **ಪೃಷ್ನಯಃ**—(ಪರ್ವತಶಿಲೆಗಳನ್ನು) ಪುಡಿಮಾಡುವವರೂ ಆದ । **ಯೇ ಮರುತಃ**—ಯಾವ ಮರುತ್ತುಗಳು । **ಯಾಮನ್**— ತಮ್ಮ ಸಂಚಾರ ಕಾಲದಲ್ಲಿ । **ಜನಯೋ ನ**—(ಸುಂದರ) ಸ್ತ್ರೀಯರಂತೆ । **ಪ್ರ ಶುಂಭಂತೇ**—(ತಮ್ಮ ದೇಹಗಳನ್ನು) ಚೆನ್ನಾಗಿ ಅಲಂಕಾರ ಮಾಡಿಕೊಳ್ಳುತ್ತಾರೊ (ಅಂತಹ ಮರುತ್ತುಗಳು) **ವಿದಥೇಷು**—ಯಜ್ಞಗಳಲ್ಲಿ । **ಮದಂತಿ**—(ಸೋಮರಸಪಾನದಿಂದ) ಸಂತೃಪ್ತರಾಗುತ್ತಾರೆ. ।

ಭಾವಾರ್ಥ

ಸರಿದುಹೋಗತಕ್ಕವೂ, ರುದ್ರಪುತ್ರರೂ, ದ್ಯಾವಾಪೃಥಿವಿಗಳೆರಡನ್ನೂ ವೃಷ್ಟಿಸ್ರದಾನಾದಿಗಳಿಂದ ವೃದ್ಧಿಯಾಗುವಂತೆ ಮಾಡುವುದರಿಂದ ಮಂಗಳಕರಗಳಾದ ಕೃತಿಗಳುಳ್ಳವರೂ, ಪರಾಕ್ರಮಶಾಲಿಗಳೂ ಮತ್ತು ಪರ್ವತ ಶಿಲೆಗಳನ್ನು ಪುಡಿಮಾಡುವವರೂ ಆದ ಮರುತ್ತುಗಳು ತಮ್ಮ ಸಂಚಾರಕಾಲದಲ್ಲಿ ಸ್ತ್ರೀಯರು ತಮ್ಮ ದೇಹಗಳನ್ನು ಅಲಂಕರಿಸಿಕೊಳ್ಳುವಂತೆ ಅಲಂಕರಿಸಿಕೊಳ್ಳುತ್ತಾರೆ. ಮತ್ತು ಯಜ್ಞಗಳಲ್ಲಿ ಸೋಮರಸಪಾನದಿಂದ ಸಂತೃಪ್ತರಾಗುತ್ತಾರೆ

English Translation

The Maruts who are going forth decorate themselves like females; they are the brave sons of Rudra and the doers of good work by which they promote the welware of earth and heaven; they are heroes who crush the solid rocks and they delight in sacrifices

॥ ವಿಶೇಷವಿಷಯಗಳು ॥

ಮರುತಃ ಎಂಬ ಶಬ್ದಕ್ಕೆ ಯಾಸ್ಕನ ವಿವರಣೆಯು ಈ ರೀತಿ ಇರುವುದು—

ಮರುತೋ ಮಿತರಾವಿಣೋ ವಾ ಮಿತರೋಚಿನೋ ವಾ ಮರುದ್ರವಂತೀತಿ ವಾ ॥

ಮಿತಂ ಎಂದರೆ ಸುಶ್ಲಿಷ್ಟವೆಂದರ್ಥವು. ಸುಶ್ಲಿಷ್ಟವಾಗಿ ಶಬ್ದಮಾಡುವುದರಿಂದ ಎಂದರೆ ಶಬ್ದಮಾಡುತ್ತಾ ಬೀಸುವುದರಿಂದ ಅಥವಾ ಚೆನ್ನಾಗಿ ಪ್ರಕಾಶಿಸುವುದರಿಂದ ಅಥವಾ ಬಹಳವಾಗಿ ಶಬ್ದಮಾಡುವುದರಿಂದ ಇವರಿಗೆ **ಮರುತಃ** ಎಂದು ಹೆಸರು. ಇಲ್ಲಿ ಕೆಲವರು ಮರುತೋ ಮಿತರಾವಿಣೋ ವಾ ಎಂಬ ಸ್ಥಳದಲ್ಲಿ **ಮರುತಃ ಅಮಿತರಾವಿಣಃ** ಎಂದು ಪದಚ್ಛೇದಮಾಡಬೇಕೆಂದೂ ಹಾಗೆ ಮಾಡಿದರೆ ಅಮಿತ ಎಂದರೆ ಬಹಳವಾಗಿ, ರಾವಿಣಃ—ಶಬ್ದಮಾಡುವುದರಿಂದ ಎಂದರ್ಥಮಾಡುವರು. ಅದರಂತೆಯೇ **ಅಮಿತರೋಚಿನಃ** ಎಂದೂ ಪದಚ್ಛೇದಮಾಡಿ ಬಹಳ ಪ್ರಕಾಶವುಳ್ಳವರು ಎಂಬರ್ಥವನ್ನು ಹೇಳಬಹುದು

ಮರುದ್ದೇವತೆಗಳು ಅನೇಕ ಸಂದರ್ಭಗಳಲ್ಲಿ ಇಂದ್ರನೊಡನೆ ಸೇರಿ ಸ್ತುತಿಸಲ್ಪಡುವರು. **ಮರುದ್ಭಿರಿಂದ್ರ ಸಖ್ಯಂ ತೇ ಅಸ್ತು** (ಋ. ಸಂ. ೮-೯೬-೭) ಎಂದು ಇಂದ್ರನ ಸ್ತುತಿಯಿರುವುದರಿಂದ ಇಂದ್ರನಂತೆ ಇವರಿಗೂ ಶ್ರೇಷ್ಠತೆ ಇದೆ. ಋಗ್ವೇದದಲ್ಲಿ ಮೂವತ್ತುಮೂರು ಸೂಕ್ತಗಳು ಸಂಪೂರ್ಣವಾಗಿ ಮರುದ್ದೇವತಾಕವಾಗಿವೆ.

ಇದಲ್ಲದೆ ಇಂದ್ರನೊಡನೆ ಸೇರಿ ಸ್ತುತಿಸಲ್ಪಡುವ ಏಳು ಸೂಕ್ತಗಳೂ, ಪೂಷಾ ಮತ್ತು ಅಗ್ನಿಯೊಡನೆ ಸ್ತುತಿಸಲ್ಪಡುವ ಒಂದೊಂದು ಸೂಕ್ತಗಳೂ ಇವೆ. ಈ ಮರುದ್ದೇವತೆಗಳು ಅನೇಕರಿರುವರು. ಕೆಲವು ಸ್ಥಳಗಳಲ್ಲಿ **ತ್ರಿಸಪ್ತೈಃ** (ಋ. ಸಂ. ೧-೧೭೩-೬) ಎಂದರೆ ಸಪ್ತಸಂಖ್ಯಾಕವಾದ ಮೂರು ವರ್ಗ ಅಥವಾ ಗುಂಪುಗಳೆಂದೂ, ಮತ್ತೆ ಕೆಲವು ಸ್ಥಳಗಳಲ್ಲಿ **ತ್ರಿ ಷಷ್ಟಿಸಾಪ್ತ್ಯ ಮರುತೋ** (ಋ. ಸಂ. ೮-೯೬ ೮) ಮೂರು ಆರವತ್ತು ಎಂದರೆ ನೂರ ಎಂಭತ್ತು ಮರುದ್ದೇವತೆಗಳಿರುವರೆಂದೂ ಹೇಳಿದೆ. ಇವರು ರುದ್ರರ ಪುತ್ರರೆಂದೂ ಆದುದರಿಂದ ಇವರಿಗೆ ರುದ್ರಿಯಾಃ ಎಂಬ ಹೆಸರಿನಿಂದ ಕರೆಯಲ್ಪಡುವರೆಂದೂ ಪ್ರಸಿದ್ಧಿಯು. ಈ ಮರುದ್ದೇವತೆಗಳಿಗೆ ಪೃಶ್ನಿಯು (ಸ್ವರ್ಗಲೋಕದ ಹಸುವು) ತಾಯಿಯೆಂದೂ ಆದುದರಿಂದ ಇವರು ಪೃಶ್ನಿಮಾತರಃ—ಎಂದರೆ ಪ್ರಶ್ನಿಯೇ ತಾಯಿಯಾಗಿವುಳ್ಳವರು ಎಂಬ ಅರ್ಥವಿರುವುದರಿಂದ ಪೃಶ್ನಿಮಾತರಃ ಎಂಬ ಹೆಸರಿನಿಂದಲೂ ಕರೆಯಲ್ಪಡುವರು. ಇಲ್ಲಿ ಪೃಶ್ನಿಯೆಂದರೆ ಮೇಘ ಗಳಾಗಿರಬಹುದು. ಮೇಘಗಳು ಮಳೆಯನ್ನು ಸುರಿಸುವಾಗ ಸಾಧಾರಣವಾಗಿ ಗಾಳಿಯು ವೇಗವಾಗಿಯೂ ಶಬ್ದ ಸಹಿತವಾಗಿಯೂ ಬೀಸುತ್ತಿರುವುದರಿಂದ ಈ ದೇವತೆಗಳಿಗೆ ಈ ಹೆಸರು ಬಂದಿರಬಹುದು ಅಗ್ನಿಯಿಂದಲೂ ಮಿಂಚಿ ನಿಂದಲೂ ಇವರು ಉತ್ಪನ್ನರಾದವರೆಂದೂ ಮತ್ತು ವಾಯುವಿನಿಂದಲೂ, ಸ್ವರ್ಗದಿಂದಲೂ ಉತ್ಪನ್ನರಾದವರೆಂದೂ, ಸ್ವತಃ ಉತ್ಪನ್ನರೆಂದೂ ಅಲ್ಲಲ್ಲಿ ಹೇಳಿದೆ. ರೋದಸೀ ಎಂಬ ದೇವತೆಯು ಇವರ ಪತ್ನಿಯೆಂದೂ ಇಂದ್ರಾಣೀ ಮತ್ತು ಸರಸ್ವತಿಯರಿಗೂ ಇವರಿಗೂ ವಿಶೇಷ ಸಂಬಂಧವಿದೆಯೆಂದೂ ಅಲ್ಲಲ್ಲಿ ಸೂಚಿತವಾಗಿರುವುದು

ಮರುದ್ದೇವತೆಗಳ ಸ್ಥಾನವು ಸ್ವರ್ಗಾಂತರಿಕ್ಷಭೂಮಿಗಳೆಂಬ ಮೂರು ಲೋಕಗಳು. ವಿದ್ಯುಲ್ಲತೆ ಮಿಂಚಿನೊಡನೆ ಸುರಿಯುವ ಮಳೆಯಲ್ಲಿ ಇವರ ಸಂಬಂಧವು ವಿಶೇಷವಾಗಿರುವುದರಿಂದ ಇವರು ಬಹಳ ಪ್ರಕಾಶಮಾನರಾಗಿರುವರೆಂದು ಕರೆಯುವುದು ರೂಢಿಯಾಗಿದೆ. ಮಿಂಚೇ ಇವರ ಆಯುಧವಾಗಿರುವುದು ಶಿರಸ್ಸು, ಪಾದಗಳು, ಪೃಷ್ಠಯ ಮೊದಲಾದ ಅವಯವಗಳಲ್ಲಿ ಸುವರ್ಣಾಭರಣಗಳನ್ನು ಧರಿಸಿರುವಂತೆಯೂ ಕೈಯಲ್ಲಿ ಚಿನ್ನದ ಕೊಡಲಿಯನ್ನು ಹಿಡಿದಿರುವಂತೆಯೂ ಇರುವ ವರ್ಣನೆಗಳನೇಕವಿವೆ ಪೃಷತೀ ಅಥವಾ ಚಿಕ್ಕೆಗಳಿಂದ ಕೂಡಿದ ಜಿಂಕೆಯನ್ನು (spotted deer) ಕಟ್ಟಿದ ರಥದಲ್ಲಿ ಕುಳಿತು ಸಂಚರಿಸುವ ವರ್ಣನೆಯೂ ಇವೆ.

ಈ ಮರುದ್ದೇವತೆಗಳು ಮೊಡ್ಡವರು, ಶ್ರೇಷ್ಠರು ತರುಣರು, ನುಷ್ಟವ್ಯಗಳಂತೆ ಕ್ರೂರರಾದವರು. ಆದರೆ ಮಕ್ಕಳಂತೆ ಆಟಪಾಟಗಳಲ್ಲಿ ಆಸಕ್ತರಾದವರು. ಅವರು ಸಂಚರಿಸುವ ರಭಸವು ಶಿಡಿಲಿನಂತೆ ಮಹಾ ಭಯಂಕರ ವಾಗಿರುವುದು. ಅವರು ತಮ್ಮ ಜತೆಯಲ್ಲಿಯೇ ವೃಷ್ಟಿಯನ್ನು ಎಂದರೆ ಮಳೆಯನ್ನು ತರುವರು ಮರುದ್ವೃಧೇ ಎಂಬ ಪ್ರಸಿದ್ಧವಾದ ನದಿಯು ಇವರ ಸಾಹಸಕ್ಕೆ ಹೆಗ್ಗುರುತಾಗಿರುವುದು. ಇವರು ಉಂಟುಮಾಡುವ ವೃಷ್ಟಿಯು ಜೇನುತುಪ್ಪ, ಹಾಲು, ತುಪ್ಪ ಎಂದು ವಿಧವಿಧವಾದ ಹೆಸರುಗಳಿಂದ ಕರೆಯಲ್ಪಡುವುದು. ಇವರು ತಮ್ಮ ಜತೆಯಲ್ಲಿ ವೃಷ್ಟಿಯನ್ನು ತರುವುದಲ್ಲದೆ ಕತ್ತಲೆಯನ್ನು ಹೋಗಲಾಡಿಸುವರೆಂದು ಪ್ರಸಿದ್ಧಿಯು. ಇವರ ಗಾನವು ಇಂದ್ರನಿಗೆ ವೃತ್ರಾಸುರನ ಸಂಹಾರಕಾಲದಲ್ಲಿ ಶಕ್ತಿಯನ್ನು ಕೊಡುವುದು ಕೆಲವು ಮೇಳ ಇವರು ಸೋಮಪಾನಮಾಡುವರೆಂದೂ, ಗಾನಮಾಡುವರೆಂದೂ ಯಜ್ಞಗಳನ್ನು ಸಹ ಮಾಡುವರೆಂದೂ ವಿಧವಿಧವಾದ ಅನೇಕ ವರ್ಣನೆಗಳಿವೆ.

ಮರುದ್ದೇವತೆಗಳ ಮುಖ್ಯ ಪರಾಕ್ರಮವೆಂದರೆ ವೃತ್ರಾಸುರನನ್ನು ಸಂಹಾರಮಾಡುವಾಗ ಇಂದ್ರನಿಗೆ ಸಹಾಯ ಮಾಡುವುದೇ ಆಗಿದೆ. ಕೆಲವು ಕಡೆ ಇವರನ್ನು ಇಂದ್ರನ ಪುತ್ರರು ಅಥವಾ ಸಹೋದರರೆಂದು ಸಂಬೋಧಿಸಿದ್ದರೂ ಇಂದ್ರನಿಗೆ ಮುಖ್ಯವಾದ ಕೆಲವು ಸಂದರ್ಭದಲ್ಲಿ ಸಹಾಯಮಾಡಲೆ ಕೈಬಿಟ್ಟರೆಂದೂ ಅವಕ್ಕಾಗಿ ಇಂದ್ರನು ಇವರ

ಮೇಲೆ ಪ್ರತೀಕಾರಕ್ರಮವನ್ನು ಕೈಗೊಂಡು ಸಂಹಾರಮಾಡಲುಯುಕ್ತನಾದನೆಂದೂ, ಅಗಸ್ತ್ಯಋಷಿಯು ಬಹಳ ಪ್ರಯತ್ನದಿಂದ ಇಂದ್ರನನ್ನು ಸಮಾಧಾನ ಮಾಡಬೇಕಾಯಿತೆಂದೂ ನಿರ್ದೇಶಿಸಿರುವ ಒಂದೆರಡು ಸೂಕ್ತಗಳಿವೆ. (ಋ.ಸಂ. ೧೦೮೫, ೧೦೮೬)

ಮರುತ್ತುಗಳೊಡನೆ ರುದ್ರನು ಇರುವ ಸಂಬಂಧದಲ್ಲಿ ಈ ಮರುದ್ದೇವತೆಗಳು ತಮ್ಮ ಆಯುಧವನ್ನು(ಕೊಡಲಿ, ಭರ್ಜಿ) ಉಪಯೋಗಿಸಿರುವ ವರ್ಣನೆ ಇದೆ. (ಋ. ಸಂ. ೭-೫೬-೧೮ , ೭-೫೬-೧೯ , ೭-೫೭-೪ , ೧-೧೬೮-೧ ; ೧-೧೭೨-೨ , ೧-೧೬೪-೫ , ೧-೧೬೪-೮)

ಯಜ್ಞಾನುಷ್ಠಾನಕರ್ಮಗಳ ವಿಷಯದಲ್ಲಿ ಅಗ್ನಿಯಲ್ಲಿಯೂ ಸೋಮಯಾಗದಲ್ಲಿ ಮರುದ್ದೇವತೆಗಳಿಗೂ ವಾಯುದೇವತೆಗೂ ಅನೇಕ ಸ್ವತ್ಯಾಸಗಳಿವೆ ವಾಯುಸನ್ನ ಪ್ರಾತಸ್ಸವನದಲ್ಲಿಯೂ ಮರುದ್ದೇವತೆಗಳನ್ನು ಮಾಧ್ಯಂದಿನ ಮತ್ತು ತೃತೀಯಸವನಗಳಲ್ಲಿಯೂ ಆಹ್ವಾನಮಾಡುವುದು ರೂಢಿಯಾಗಿದೆ. ಚಾತುರ್ಮಾಸ್ಯವೆಂಬ ಯಾಗದಲ್ಲಿ ಮರುದ್ದೇವತೆಗಳ ಪಾತ್ರವು ವಿಶೇಷವಾಗಿರುವುದು

ಮರುದ್ದೇವತೆಗಳ ಸ್ವರೂಪವನ್ನು ಸಂಕ್ಷೇಪವಾಗಿ ವಿಚಾರಮಾಡೋಣ. ವಾಯುವಿಗೂ ಮರುತ್ತುಗಳಿಗೂ ಇರುವ ಸ್ವತ್ಯಾಸವೇನೆಂದರೆ—ವಾಯುವು ಸಾಧಾರಣವಾಗಿ ಬೀಸುವ ಗಾಳಿಯು ; ಮರುತ್ತುಗಳು ವರ್ಷಾಕಾಲದಲ್ಲಿ ಗುಡುಗು, ಸಿಡಿಲು, ಮಿಂಚುಗಳಿಂದ ಕೂಡಿ ಮಳೆಯು ಹುಯ್ಯುವಕಾಲದಲ್ಲಿ ಮಹಾ ಆರ್ಭಟದೊಡನೆ ವೇಗವಾಗಿಯೂ, ಭಯಂಕರವಾಗಿಯೂ ಬೀಸುವ ಗಾಳಿಯು. ಆದುದರಿಂದಲೇ ಮರುದ್ದೇವತೆಗಳು ಪ್ರಕಾರವಾನೆಂದೂ, ಶಬ್ದ ಮಾಡುವವರೆಂದೂ, ಕ್ರೂರವಾನರೆಂದೂ, ಬಹಳ ಶಕ್ತಿ ಸಾಮರ್ಥ್ಯಗಳುಳ್ಳವರೆಂದೂ, ಅಂತರಿಕ್ಷದ (ಸ್ವರ್ಗದ) ಪುತ್ರರೆಂದೂ, ಅಂತರಿಕ್ಷದಲ್ಲಿ ಸದಾ ಬೀಸುತ್ತಿರುವುದರಿಂದ ಯಾಗಾಗ್ನಿಗಳ ಕ್ರೀಡೆಗಳಲ್ಲಿ (ತಿರುಗಳಲ್ಲಿ) ಅವಶ್ಯಕರಾದವರೆಂದೂ ವಿವಿಧವಿಧವಾದ ವರ್ಣನೆಗಳು ಕಂಡುಬರುವವು.

ಜನಯೇಃ—ಜಾಯೆಂತ ಅಸ್ಮಪತ್ಯಾನೀತಿ ಜನಯೋ ಜಾಯಾಃ । ಸ್ವತ್ರಾದಿಸಂತತಿಯನ್ನು ಉತ್ಪತ್ತಿ ಮಾಡುವುದರಿಂದ ಜನಯಃ ಎಂದರೆ ಜಾಯಾಃ ಸ್ತ್ರೀಯರು, ಧರ್ಮಪತ್ನಿಯರು

ಶುಂಭಂತೇ—ಶುಭ ಶುನ್ಧ ದೀಪ್ತೌ । ಅಲಂಕರಿಸಿಕೊಳ್ಳುತ್ತಾರೆ

ಸಪ್ತಯೇಃ—ಸರ್ಪಣಶೀಲಾಃ । ಚಲಿಸುವ, ವೇಗವಾಗಿ ಬೀಸುವ ಸ್ವಭಾವವುಳ್ಳ.

ಯೌಮನ್—ಯೌಮನಿ ಗಮನೇ ನಿಮಿತ್ತಭೂತೇ ಸತಿ । ಹೊರಡುವಾಗ ಸಂಚರಿಸುವಾಗ, ಬೀಸುವಾಗ

ರುದ್ರಸ್ಯ ಸೂನವಃ—ಮರುದ್ದೇವತೆಗಳನ್ನು ರುದ್ರಪುತ್ರರೆಂದು ಹೇಳುವ ರೂಢಿಯಿರುವುದು. **ಸತ್ಯಂ ತ್ವೇಷಾ ಅಮವಂತೋ ಧನ್ವನ್ ಚಿದಾ ರುದ್ರಿಯಾಸಃ ।** (ಋ ಸಂ. ೧-೪೫-೭) ಮೊದಲಾದ ಋಕ್ಕುಗಳಲ್ಲಿ ರುದ್ರಿಯಾಸಃ ಎಂದರೆ ಮರುತ್ತುಗಳು ರುದ್ರಪುತ್ರರೆಂದು ವಿವರವಾಗಿ ಹೇಳಿರುವುದು. ಅಥವಾ ಭಾಷ್ಯಕಾರರು ಇಲ್ಲಿ ಹೇಳಿರುವಂತೆ **ರುದ್ರಸ್ಯ ಸೂನವಃ । ರೋದಯತಿ ಸರ್ವಮಂತಕಾಲ ಇತಿ ರುದ್ರಃ ಪರಮೇಶ್ವರಃ । ತಸ**

ಪುತ್ರಾಃ । ಸರ್ವರನ್ನೂ ಪ್ರಳಯಕಾಲದಲ್ಲಿ ದುಃಖದಿಂದ ರೋದಿಸುವಂತೆ ಮಾಡುವವನಾದುದರಿಂದ ಪರಮೇಶ್ವರನಿಗೆ ರುದ್ರನೆಂದು ಹೆಸರು. ಅವನ ಪುತ್ರರು ಮರುದ್ದೇವತೆಗಳು ಎಂಬರ್ಥವನ್ನೂ ಹೇಳಬಹುದು.

ಸುದಂಸಸಃ—ದಂಸಃ ಎಂದರೆ ಕರ್ಮವು (ನಿ. ೩-೧) ಸುದಂಸಸಃ ಎಂದರೆ ಒಳ್ಳೆಯ ಕೆಲಸಗಳನ್ನು ಮಾಡುವವರು

ರೋದಸೀ—ಸ್ಪಧೇ, ಪುರಂಧಿ ಮೊದಲಾದ ಇಪ್ಪತ್ತುನಾಲ್ಕು ದ್ಯಾವಾಪೃಥಿವೀನಾಮಗಳ ಮಧ್ಯದಲ್ಲಿ ರೋದಸೀ ಎಂಬ ಶಬ್ದವು ಪಠಿತವಾಗಿರುವುದರಿಂದ ರೋದಸೀ ಎಂದರೆ ದ್ಯಾವಾಪೃಥಿವಿಗಳು.

ವೃಧೇ—ವೃಧು ವೃದ್ಧೌ । ವರ್ಧನಾಯ । ಅಭಿವೃದ್ಧಿಗಾಗಿ ; ಅಭಿವೃದ್ಧಿಯಾಗುವಂತೆ ಮಾಡಿದರು.

ವಿದಥೇಷು—ವಿದಂತ್ಯೇಷು ಯೇಷ್ವ್ಯತಯಾ ದೇವಾನಿತಿ ವಿದಥಾಃ ಯಜ್ಞಾಃ । ದೇವತೆಗಳ ಮಹಿಮೆಯನ್ನು ತಿಳಿದು ಆರಾಧಿಸುವ ಕರ್ಮಕ್ಕೆ ಯಜ್ಞವೆಂದು ಹೆಸರು. ವಿದಥೇಷು ಎಂದರೆ ಯಜ್ಞಕರ್ಮಗಳಲ್ಲಿ

ಶ್ನಥ್ನಯಃ—ಶ್ನಥು ಸಂಘರ್ಷೇ । ಶ್ನಥನಶೀಲಾಃ । ಮಹೀರುಹತಿಲೋಚ್ಚಯನದೇಭ್ಯಂಜಕಾ ಇತ್ಯರ್ಥಃ । ವೇಗವಾಗಿ ಬೀಸುವುದರಿಂದ ವೃಕ್ಷಸಾಷಾಣಾದಿಗಳನ್ನು ಧ್ವಂಸಮಾಡುವ ಎಂದರ್ಥವು

॥ ವ್ಯಾಕರಣಪ್ರಕ್ರಿಯಾ ॥

ಶುಂಭಂತೇ—ಶುಭ ಶುಂಭ ದೀಪ್ತೌ ಧಾತು. ಭ್ವಾದಿ. ಲಟ್ ಪ್ರಥಮಪುರುಷ ಬಹುವಚನದ ರೂಪ. ಯೇ ಎಂದು ಹಿಂದೆ ಇರುವುದರಿಂದ **ಯೇಷ್ವೇ ೃತ್ತಾನ್ನಿತ್ಯಂ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಶಪ್ ಪಿತ್ವಾದುದರಿಂದ ಅನುದಾತ್ತ. ಲಸಾರ್ವಧಾತುಕವು **ತಾಸ್ಯನುದಾತ್ತೇತ್** ಸೂತ್ರದಿಂದ ಅನುದಾತ್ತ. ಧಾತು ಸ್ವರ ಉಳಿಯುತ್ತದೆ.

ಜನಯಃ—ಜನೀ ಪ್ರಾದುರ್ಭಾವೇ ಧಾತು. ಜಾಯಂತೇ ಅಸು ಅಸತ್ಯಸ್ಮಿ ಇತಿ ಜನಯಃ ಜಾಯಾಃ **ಇನ್‌ಸರ್ವಧಾತುಭ್ಯಃ** (ಉ. ಸೂ. ೪-೧೧೭) ಎಂಬುದರಿಂದ ಇನ್ ಪ್ರತ್ಯಯ. **ಞ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತವಾಗುತ್ತದೆ. ಪ್ರಥಮಾಬಹುವಚನದಲ್ಲಿ **ಜಸಿ ಚ** ಎಂಬುದರಿಂದ ಗುಣ. ಅಯಾದೇಶ. ಜನಯಃ ಎಂದು ರೂಪವಾಗುತ್ತದೆ.

ಯಾಮನ್—ಯಾ ಪ್ರಾಪಣೇ ಧಾತು **ಕೃತ್ಯಲ್ಯುಟೋಬಹುಲಂ** ಎಂಬಲ್ಲಿ ಬಹುಲವಚನದಿಂದ **ಆತೋಮನಿನ್ ಕ್ವನಿಬ್ವನಿಪಶ್ಚ** ಎಂಬುದರಿಂದ ಭಾವಾರ್ಥದಲ್ಲಿ ಮನಿನ್ ಪ್ರತ್ಯಯ ಬರುತ್ತದೆ. ಯಾಮನ್ ಶಬ್ದವಾಗುತ್ತದೆ. ಸಪ್ತಮೀ ಏಕವಚನ ಪರವಾದಾಗ **ಸುಪಾಂ ಸುಲುಕ್** ಸೂತ್ರದಿಂದ ವಿಭಕ್ತಿಗೆ ಲುಕ್. ನಿತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತವಾಗುತ್ತದೆ.

ಸುದಂಸಸಃ—ದಂಸಃ ಎಂಬುದು ಕರ್ಮದ ಹೆಸರು. ಶೋಭನಂ ದಂಸೋ ಯೇಷಾಂ ತೇ ಸುದಂಸಸಃ ಬಹುವ್ರೀಹಿಯಲ್ಲಿ **ಸೋರ್ಮನಸೀ ಅಲೋಮೋಷಸೀ** (ಪಾ. ಸೂ. ೬-೩-೧೧೭) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

ಚಕ್ರಿರೇ—ಡುಕೃಞ್ ಕರಣೇ ಧಾತು. ಲಿಟ್‌ಪ್ರಥಮಪುರುಷ ಬಹುವಚನದಲ್ಲಿ **ಲಿಟಸ್ತ್ರಯುಯೋರೇಶಿರೇಚ್** ಸೂತ್ರದಿಂದ ಇರೇಚ್ ಆದೇಶ. ಯಣಾದೇಶ. **ಹಿಚ** (ಪಾ. ಸೂ. ೪-೧-೩೪) ಎಂಬುದರಿಂದ ಹಿಂದೆ ಹಿಯೋಗವಿರುವುದರಿಂದ ನಿಘಾತಸ್ವರಪ್ರತಿಷೇಧ ಬರುತ್ತದೆ. ಇರೇಚ್ ಚಿತ್ವಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ವೃಧೇ—ವೃಧು ವೃದ್ಧೌ ಧಾತು. **ಸಂಪದಾದಿಭ್ಯಃ ಕ್ವಿಪ್** ಎಂಬ ವಚನದಿಂದ ಆಲಿ ಸೇರಿರುವುದರಿಂದ ಇದಕ್ಕೆ ಕ್ವಿಪ್. ವೃಧ್ ಶಬ್ದವಾಗುತ್ತದೆ. **ಚತುರ್ಥೀಏಕವಚನಾಂತರೂಪ**. ಸುಸರವಾದಾಗ ಏಕಾಚಾದುದರಿಂದ **ಸಾನೇಕಾಚಸ್ತೃತೀಯಾದಿಃ** ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಮದಂತಿ—ಮದೀ ಹರ್ಷೇ ಧಾತು. ದಿವಾದಿ. ಲಟ್‌ಪ್ರಥಮವುಷ ಬಹುವಚನದಲ್ಲಿ ಅಂತಾದೇಶ **ವ್ಯತ್ಯಯೋಬಹುಲಂ** ಎಂಬುದರಿಂದ ಶ್ಯನಿಗೆ ಶಪ್ ವಿಕರಣ. ಮದಂತಿ ಎಂಬುದು ಪಾದಾದಿಯಲ್ಲಿ ಇರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರದಿಂದ ಆದ್ಯುದಾತ್ತವಾಗುತ್ತದೆ.

ವಿದಥೇಷು—ವಿದ ಜ್ಞಾನೇ ಧಾತು **ರುವಿದಿಭ್ಯಾಂ ಕಿತ್** (ಉ. ಸೂ ೩-೯೫) ಎಂಬುದರಿಂದ ಆಥ ಪ್ರತ್ಯಯ. ಕಿತ್ವಾತಿದೇಶದಿಂದ ಲಘೂಪಧಗುಣ ಬರುವುದಿಲ್ಲ. ಪ್ರತ್ಯಯಸ್ವರದಿಂದ ದಕಾರೋತ್ತರಾಕಾರ ಉದಾತ್ತವಾಗುತ್ತದೆ. ಸಪ್ತಮಿ ಬಹುವಚನಾಂತರೂಪ

ಘೃಷ್ವಯಃ—ಘೃಷು ಸಂಘರ್ಷೇ. ಧಾತು. **ಕೃವಿಘೃಷ್ವಿ** (ಉ. ಸೂ. ೪-೪೬) ಎಂಬುದರಿಂದ ಇಷ್ಣು ಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ನಿತ್ವಾದುದರಿಂದ ಆದ್ಯುದಾತ್ತವಾಗುತ್ತದೆ. ಪ್ರಥಮಾ ಬಹುವಚನಾಂತರೂಪ. ॥ ೧ ॥

ಸಂಹಿತಾಪಾಠಃ ।

ತ ಉಕ್ಷಿತಾಸೋ ಮಹಿಮಾನಮಾಶತ ದಿವಿ ರುದ್ರಾಸೋ ಅಧಿ
ಚಕ್ರಿರೇ ಸದಃ ।
ಅರ್ಚಂತೋ ಅರ್ಕಂ ಜನಯಂತ ಇಂದ್ರಿಯಮಧಿ ಶ್ರಿಯೋ
ದಧಿರೇ ಪೃಶ್ನಿಮಾತರಃ ॥ ೨ ॥

पदपाठः

तेऽ। उक्षितासः। महिमानं। आशत। दिवि। रुद्रासः। अधि। चक्रिरे।
सदः।
अर्चन्तः। अर्कं। जनयन्तः। इन्द्रियं। अधि। श्रियः। दधिरे।
पृश्निऽमातरः ॥ ७ ॥

सायणभाष्यम् ॥

ये पूर्वोक्तैर्गुणैर्विशिष्टास्ते मरुत उक्षितासो देवैरभिषिक्ताः सन्तो महिमानं महत्त्वमाशत। अश्नुवन्। रुद्रासो रुद्रस्य पुत्राः। उपचाराज्जन्यैः जनकशब्दः। ते रुद्रपुत्रा मरुतो दिवि द्योतमाने नभसि सदः सदनं स्थानमधि चक्रिरे। अधिकं सर्वोत्कृष्टं कृतवन्तः। अर्कमर्चनीयमिन्द्रमर्चन्तः पूजयन्त इन्द्रियमिन्द्रस्य लिंगं वीर्यं जनयन्तः। प्रहर भगवो जहि वीरयस्व। ऐ. ब्रा. ३-२०। इत्येवंरूपेण वाक्येनोत्पादयन्तः। पृश्निमातरः पृश्नेर्नानारूपायाः भूमेः पुत्रा मरुतः श्रिय ऐश्वर्याण्यधि दधिरे। आधिक्येनाधारयन्॥ उक्षितासः। उक्ष सेचने। कर्मणि निष्ठा। आज्जसेरसुक्। महिमानं। महच्छब्दात् पृथ्वादिलक्षण इमनिच्। टेरिति टिलोपः। आशत। अशू व्याप्तौ। लङ्। बहुलं छन्दसीति विकरणस्य लुक्। इन्द्रियं। इन्द्रियमिन्द्रलिंगमिन्द्रदृष्टं। पा.सू.५-२-९३। इति घच्प्रत्ययान्तो निपात्यते। पृश्निमातरः। स्पृशतेर्वर्णे रूपाणीति पृश्निर्भूमिः। श्रूयते च। इयं वै पृश्निः। तै. ब्रा. १-४-१-४। पृणातेः पृश्निरित्यादौ निपातनादभिमतरूपसिद्धिः। पृश्निर्मातरा येषां ते तथोक्ताः। ऋतश्छन्दसि। पा. सू. ४-१-१३७। इति समासान्तस्य ङीषः प्रतिषेधः॥

शब्दार्थः

तेऽ—(ऊपर वर्णितगण) वे मरुत्गण। **उक्षितासः**—(देवतोंद्वारा) अभिषिक्त होकर। **महिमानं**—महिमा को। **आशत**—पाते हुए। **रुद्रासः**—रुद्रपुत्र मरुत्गण। **दिवि**—प्रकाशमान आन्तरिक्ष में। **सदः**—(अपने) स्थान को। **अधि चक्रिरे**—उत्तम रीति से बनाते हैं। **अर्कं**—पूजनीय इन्द्र को। **अर्चन्तः**—पूजते हुए। **इन्द्रियं**—इन्द्र के पराक्रम को। **जनयन्तः**—प्रेरित करते हुए। **पृश्निमातरः**—नाना रूपों को धारण करनेवाली

ಭೂಮಿಯೇ ತಾಯಿಯಾಗಿ ಉಳ್ಳ ಮರುತ್ತುಗಳು । **ಶ್ರಿಯಃ**— ಐಶ್ವರ್ಯಗಳನ್ನು । **ಅಧಿ ದಧಿರೇ**—ಅಧಿಕವಾಗಿ ಹೊಂದಿದರು.

॥ ಭಾವಾರ್ಥಃ ॥

ಮರುತ್ತುಗಳು ದೇವತೆಗಳಿಂದ ಅಭಿಷಿಕ್ತರಾಗಿ ಮಹತ್ವವನ್ನು ಹೊಂದಿದರು. ರುದ್ರಪುತ್ರರಾದ ಮರುತ್ತುಗಳು ಪ್ರಕಾಶಮಾನವಾದ ಅಂತರಿಕ್ಷದಲ್ಲಿ ತಮ್ಮ ಸ್ಥಾನವನ್ನು ಉತ್ಕೃಷ್ಟವಾಗಿ ನೆಲೆಗೊಳಿಸಿದರು. ಪೃಶ್ನಿಪುತ್ರರಾದ ಮರುತ್ತುಗಳು ಪೂಜ್ಯನಾದ ಇಂದ್ರನನ್ನು ಪೂಜಿಸುತ್ತ ಇಂದ್ರನ ಪರಾಕ್ರಮವನ್ನು ಪ್ರೇರಿಸುವವರಾಗಿ ಅಧಿಕವಾದ ಐಶ್ವರ್ಯಗಳನ್ನು ಹೊಂದಿದರು.

English Translation

They (Maruts) inaugurated by the Gods have attained majesty ; the Sons of Rudra have established their dwelling above the sky ; glorifying him (Indra) who merits to be glorified they have inspired him with vigour ; the Sons of Prisni (earth) have acquired glory.

॥ ವಿಶೇಷವಿಷಯಗಳು ॥

ಉಕ್ಷಿತಾಸಃ—**ಉಕ್ಷ ಸೇಚನೆ ದೆವೈರಭಿಷಿಕ್ತಾಃ** । ದೇವತೆಗಳಿಂದ ಪಟ್ಟಾಭಿಷಿಕ್ತರಾದವರು.

ರುದ್ರಾಸಃ—**ರುದ್ರಪುತ್ರಾಃ** । ಇಲ್ಲಿ ರುದ್ರಾಸಃ ಎಂದು ರುದ್ರರ ಹೆಸರನ್ನೇ ಹೇಳಿದ್ದರೂ **ಉಪಚಾರಾಜ್ಜನ್ಯೇ ಜನಕಶಬ್ದಃ** ಗೌರವವನ್ನು ಸೂಚಿಸುವುದಕ್ಕಾಗಿ **ಪುತ್ರ**ನನ್ನು ತಂದೆಯ ಹೆಸರಿನಿಂದಲೇ ಸಂಬೋಧನೆ ಮಾಡಿರುವರು.

ಅಧಿ ಚಕ್ರಿರೇ ಸದಃ—ಮರುದ್ದೇವತೆಗಳ ವಾಸಸ್ಥಾನವು ಅಂತರಿಕ್ಷದಲ್ಲಿ ಬಹು ಮೇಲುಭಾಗದಲ್ಲಿರುವುದು ಎಂದಭಿಪ್ರಾಯವು.

ಅರ್ಚಂತೋ ಅರ್ಕಂ ಇಂದ್ರಿಯಂ—ಇಂದ್ರನ ಸಂಬಂಧವಾದ ಸ್ತೋತ್ರವನ್ನು ಮಾಡುವವರಾಗಿ ಎಂದರೆ ಇಂದ್ರನನ್ನು ಸ್ತುತಿಸುತ್ತಾ ಇರುವವರಾಗಿ.

ಪೃಶ್ನಿಮಾತರಃ—ಪೃಶ್ನಿ ಎಂದರೆ ಭೂಮಿ, ಗೋವು. ಪೃಶ್ನಿಮಾತರಃ ಎಂದರೆ ಭೂಮಿಯ ಪುತ್ರರು ಅಥವಾ ಗೋವಿನ ಪುತ್ರರು. ಈ ಶಬ್ದಕ್ಕೆ ಭಾಷ್ಯಕಾರರು ನಾನಾವಿಧವರ್ಣಯುಕ್ತವಾದ ಭೂಮಿಯ ಪುತ್ರರು ಎಂದರ್ಥ ಮಾಡಿರುವರು. ಮತ್ತು ಉದಾಹರಣೆಗಾಗಿ—

ಪೃಶ್ನೇಃ ಪುತ್ರಾ ಉಪಮಾಸೋ ರಭಿಷ್ಠಾಃ ಸ್ವಯಾ ಮತ್ಯಾ ಮರುತಃ ಸಂ ಮಿಮಿಕ್ಷುಃ ॥

(ಋ. ಸಂ. ೫-೫೯-೫)

ಎಂಬ ಋಕ್ಕನ್ನು ಕೊಟ್ಟು ಆ ಋಕ್ಕನ್ನು ವ್ಯಾಖ್ಯಾನ ಮಾಡುವಾಗ **ಪೃಶ್ನೀಃ ಪುತ್ರಾಃ** ಎಂಬ ಶಬ್ದಗಳಿಗೆ **ಗೋರೂಪಾಯಾ ಅಂತರಿಕ್ಷಸ್ಯ ವಾ ಪುತ್ರಸ್ಥಾನೀಯಾಃ**—ಎಂದರೆ ಗೋರೂಪವಾದ ಭೂಮಿಯ ಅಥವಾ ಅಂತರಿಕ್ಷದ ಪುತ್ರರೆಂದು ಅರ್ಥವಿವರಣೆಮಾಡಿರುವರು. ಸ್ಕಂದಸ್ವಾಮಿಯು—**ಪೃಶ್ನಿರಿತಿ ದ್ಯುನಾಮ। ದ್ಯೌರ್ಮಾತಾ ಯೇಷಾಂ ಮರುತಾಂ ತೇ ಪೃಶ್ನಿಮಾತರಃ। ದಿವಃ ಪುತ್ರಾ ಇತ್ಯರ್ಥಃ॥** ಪೃಶ್ನಿಯೆಂದರೆ ಸ್ವರ್ಗವು, ಅಂತರಿಕ್ಷದ ಪುತ್ರರು ಎಂದು ಹೇಳಿರುವರು. ಅಂತರಿಕ್ಷದಲ್ಲಿಯೇ ಮರುತ್ತುಗಳ ಸಂಚಾರವಿರುವುದರಿಂದ ಇದರಿಂದ ಹುಟ್ಟಿದವರು ಎಂದು ಹೇಳುವುದು ಯುಕ್ತವಾಗಿದೆ. ಯಾಸ್ಕರು ಈ ಶಬ್ದಕ್ಕೆ ಈ ರೀತಿ ಅರ್ಥವಿವರಣೆ ಮಾಡಿರುವರು—

ಸ್ಯಃ। ಪೃಶ್ನಿಃ। ನಾಕಃ। ಗೌಃ। ವಿಷ್ಣುಂ। ನಭ ಇತಿ ಷಟ್
ಸಾಧಾರಣಾನಿ॥ ಸಾಧಾರಣಾನ್ಯುತ್ತರಾಣಿ ದಿವಶ್ಚಾದಿತ್ಯಸ್ಯ॥
(ನಿ. ೨-೧೩)

ಎಂದರೆ **ಸ್ಯಃ ಪೃಶ್ನಿಃ ನಾಕಃ ಗೌಃ ವಿಷ್ಣುಂ ನಭಃ** ಎಂಬ ಆರು ಶಬ್ದಗಳೂ ಸ್ವರ್ಗಃ (ದಿವಃ) ಮತ್ತು ಆದಿತ್ಯರನ್ನು ಸೂಚಿಸುವ ಸಾಧಾರಣ ಶಬ್ದಗಳು. ಮತ್ತು—

ಪೃಶ್ನಿರಾದಿತ್ಯೋ ಭವತಿ। ಪ್ರಾಶ್ನುತ ಏನಂ ವರ್ಣ ಇತಿ ನೈರುಕ್ತಾಃ
ಸಂಸ್ಪೃಷ್ಟಾ ರಸಾನ್। ಸಂಸ್ಪೃಷ್ಟಾ ಭಾಸಂ ಜ್ಯೋತಿಷಾಂ॥
ಸಂಸ್ಪೃಷ್ಟೋ ಭಾಸೇತಿ ವಾ॥
ಅಥ ದ್ಯೌಃ ಸಂಸ್ಪೃಷ್ಟಾ ಜ್ಯೋತಿಭಿಃ ಪುಣ್ಯಕೃದ್ಭಿರ್ಹ॥
(ನಿ. ೨-೧೪)

ಪೃಶ್ನಿಯೆಂದರೆ ಆದಿತ್ಯನು ಉತ್ಕೃಷ್ಟವಾದ ಕಾಂತಿಯು ಇವನನ್ನು ಸುತ್ತಲೂ ವಾಪಿಸಿರುವುದರಿಂದ ಪೃಶ್ನಿಯೆಂದರೆ ಆದಿತ್ಯನೆಂದು ನೈರುಕ್ತರು (ನಿರುಕ್ತಕಾರರು) ಹೇಳುವರು. **ಸಂಸ್ಪೃಷ್ಟಾ ರಸಾನ್** ಎಂದರೆ **ಸಹಿ ನಿತ್ಯಕಾಲಮೇವ ರಸಾನಾಂ ಸಂಸ್ಪೃಷ್ಟಾ ಭವತಿ। ಅಥಾಸ್ಯೈಕರ್ಮ ರಸಾದಾನಂ।** ರಸವೆಂದರೆ ಉದಕವನ್ನು ಮಳೆಯ ರೂಪದಲ್ಲಿ ಕೊಡುವುದಕ್ಕೆ ಕಾರಣಭೂತನಾದುದರಿಂದ ಆಧಿತ್ಯನಿಗೆ ಪೃಶ್ನಿಯೆಂದು ಹೆಸರು. ಅಥವಾ **ಸಂಸ್ಪೃಷ್ಟಾ ಭಾಸಂ ಜ್ಯೋತಿಷಾಂ**—ಗ್ರಹನಕ್ಷತ್ರಚಂದ್ರಾದಿಗಳ ಪ್ರಕಾಶವು **ಸೂರ್ಯನ ಪ್ರಕಾಶಾಧಿಕ್ಯದಿಂದ** ಮಲಿನವಾಗುವುದು ಅಥವಾ **ಸಂಸ್ಪೃಷ್ಟೋ ಭಾಸೇತಿ ವಾ**— ತನ್ನ ಕಾಂತಿಯಿಂದ ಎಲ್ಲೆಲ್ಲಿಯೂ ವ್ಯಾಪಿಸುವವನು ಆದುದರಿಂದ ಪೃಶ್ನಿಯೆಂದರೆ ಆದಿತ್ಯನು.

ಇನ್ನು ಪೃಶ್ನಿಯೆಂದರೆ ದ್ಯೌ ಎಂಬರ್ಥವು ಏಕೆಂದರೆ **ಸಂಸ್ಪೃಷ್ಟಾಃ ಜ್ಯೋತಿರ್ಭಿಃ ಪುಣ್ಯಕೃದ್ಭಿರ್ಹ**—ಪ್ರಕಾಶದಿಂದಲೂ, ಪುಣ್ಯನಂತರಿಂದಲೂ ಹೊಂದಲ್ಪಡುವುದರಿಂದ ಪೃಶ್ನಿಯೆಂದರೆ ದ್ಯೌಃ (ಸ್ವರ್ಗವು) ಎಂದರ್ಥವು.

ಇದು ಯಾಸ್ಕರ ವಿವರಣೆಯು, ಆದುದರಿಂದ ಪೃಶ್ನಿಯೆಂದರೆ ದ್ಯೌಃ—ಸ್ವರ್ಗ, ಅಂತರಿಕ್ಷ ಎಂಬರ್ಥವನ್ನೇ ಸ್ವೀಕರಿಸಿ ಪೃಶ್ನಿಮಾತರಃ ಎಂಬ ಶಬ್ದಕ್ಕೆ ದಿವಸ್ಪುತ್ರಾಃ—ಅಂತರಿಕ್ಷದಲ್ಲಿ ಉತ್ಪನ್ನರಾದವರು ಎಂದು ಹೇಳುವುದೇ ಯುಕ್ತವಾಗಿರುವುದು.

ಯದ್ಯೂಯಂ ಪೃಶ್ನಿಮಾತರೋ ಮರ್ತಾಸಃ ಸ್ಯಾತನ ॥
(ಋ ಸಂ ೧-೩೪-೪)

ಎಂಬ ಋಕ್ಕಿನ ಅರ್ಥವಿವರಣೆಮಾಡುವಾಗ **ಪೃಶ್ನಿಮಾತರಃ** ಎಂಬ ಶಬ್ದಕ್ಕೆ **ಪೃಶ್ನಿನಾಮಕಧೇನುಪುತ್ರಾ ಮರುತಃ** ಎಂದು ಅರ್ಥ ಮಾಡಿರುವರು. ಮರುದ್ದೇವತೆಗಳನ್ನು ಸ್ತೋತ್ರಮಾಡುವ ಅನೇಕ ಸಂದರ್ಭಗಳಲ್ಲಿ ಪೃಶ್ನಿಮಾತರಃ ಎಂಬ ಶಬ್ದದ ಪ್ರಯೋಗವು ವಿಶೇಷವಾಗಿ ಕಂಡುಬರುವುದು. ಆದುದರಿಂದ ಈ ಶಬ್ದಕ್ಕೆ ಒಂದು ನಿರ್ದಿಷ್ಟವಾದ ಅರ್ಥವು ರೂಢಿಯಲ್ಲಿತ್ತೆಂದು ಧಾರಾಳವಾಗಿ ಹೇಳಬಹುದು. ಋಗ್ವೇದದಲ್ಲಿ ಈ ಶಬ್ದಪ್ರಯೋಗವಿರುವ ಋಕ್ಕುಗಳನ್ನು ಕೆಳಗೆ ಕೊಟ್ಟಿರುವೆನು.

ಯದ್ಯೂಯಂ ಪೃಶ್ನಿಮಾತರೋ ಮರ್ತಾಸಃ ಸ್ಯಾತನ ॥
(ಋ ಸಂ. ೧-೩೪-೪)

ಆರ್ಚಂತೋ ಆರ್ಕಂ ಜನಯಂತ ಇಂದ್ರಿಯಮಧಿ ಶ್ರಿಯೋ ದಧಿರೇ ಪೃಶ್ನಿಮಾತರಃ ॥
(ಋ ಸಂ. ೧ ೮೫-೨)

ಪೃಷದಶ್ವಾ ಮರುತಃ ಪೃಶ್ನಿಮಾತರಃ ಶುಭಂಯಾವಾನೋ ವಿದಥೇಷು ಜಗ್ಮಯಃ ॥
(ಋ. ಸಂ ೧-೮೮-೪)

ಸುಜಾತಾಸೋ ಜನುಷಾ ಪೃಶ್ನಿಮಾತರೋ ದಿವೋ ಮರ್ಯಾ ಆ ನೋ ಅಚ್ಛಾ ಜಿಗಾತನ
(ಋ. ಸಂ ೫-೫೯-೭)

ಉದೀರಯಂತ ವಾಯುಭಿರ್ವಾಶ್ರಾಸಃ ಪೃಶ್ನಿಮಾತರಃ ॥
(ಋ ಸಂ ೮-೭-೨೩)

ಉದು ಸ್ವಾನೇಭಿರೀರತೇ ಉಗ್ರಹೈರುದು ವಾಯುಭಿಃ । ಉತ್ಸ್ವಾತ್ಯೈಃ ಪೃಶ್ನಿಮಾತರಃ ॥
(ಋ. ಸಂ. ೮-೭-೨೮)

ಅಭೀಮೃತಸ್ಯ ವಿಷ್ಪಶಂ ದುಹತೇ ಪೃಶ್ನಿಮಾತರಃ ॥
(ಋ. ಸಂ ೯-೭೪-೨)

ಸ್ವಶ್ವಾಃ ಸ್ಥ ಸುರಥಾಃ ಪೃಶ್ನಿಮಾತರಃ ಸ್ವಾಯುಧಾ ಮರುತೋ ಯಾಥನಾ ಶುಭಂ ॥
(ಋ ಸಂ. ೫೫-೫೭-೬)

ಕೋಪಯಥ ಪೃಥಿವೀಂ ಪೃಶ್ನಿಮಾತರಃ ಶುಭೇ ಯದುಗ್ರಾಃ ಪೃಷತೀರಯುಗ್ಧ್ವಂ ॥
(ಋ. ಸಂ. ೫೫-೫೭-೫)

ಪೃಶ್ನಿಮಾತರಃ ಎಂಬ ಶಬ್ದಪ್ರಯೋಗವಿರುವ ಋಕ್ಕುಗಳನ್ನೆಲ್ಲಾ ಮೇಲೆ ಕೊಟ್ಟಿರುತ್ತೆ. ಈ ಋಕ್ಕುಗಳಲ್ಲಿ ಪೃಶ್ನಿಮಾತರಃ ಎಂಬ ಶಬ್ದಕ್ಕೆ ಮರುತ್ತುಗಳಿಂದೇ ಅರ್ಥವಿವರಣೆ ಇರುವುದರಿಂದ ಈ ಶಬ್ದವು ಈ ದೇವತೆಗಳ ವಿಷಯದಲ್ಲಿ ಮಾತ್ರ ಒಂದು ನಿರ್ದಿಷ್ಟವಾದ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದೆಂದು ಧಾರಾಳವಾಗಿ ಹೇಳಬಹುದು.

ವ್ಯಾಕರಣಪ್ರಕ್ರಿಯಾ

ಉಕ್ಷಿತಾಸಃ—ಉಕ್ಷ ಸೇಚನೇ ಧಾತು. ಕರ್ಮಣಿಯಲ್ಲಿ **ನಿಷ್ಠಾ** ಎಂಬುದರಿಂದ ಕ್ತ ಪ್ರತ್ಯಯ. **ಅರ್ಧಧಾತುಕಸ್ಯೇಡ್ವಲಾದೇಃ** ಎಂಬುದರಿಂದ ಅದಕ್ಕೆ ಇಡಾಗಮ. ಉಕ್ಷಿತಶಬ್ದವು ಪ್ರತ್ಯಯಸ್ವರದಿಂದ ಅಂತೋದಾತ್ತ. ಜಸ್‌ಪರದಲ್ಲಿರುವಾಗ **ಆಜ್ಜಸೇರಸುಕ್** ಎಂಬುದರಿಂದ ಜಸಿಗೆ ಅಸುಕಾಗಮ ರುತ್ವವಿಸರ್ಗಗಳಿಂದ ಉಕ್ಷಿತಾಸಃ ಎಂದು ರೂಪನಾಗುತ್ತದೆ.

ಮಹಿಮಾನಮ್—ಪೃಥ್ವಾದಿಯಲ್ಲಿ ಮಹಶಬ್ದವು ಸೇರಿರುವುದರಿಂದ **ಪೃಥ್ವಾದಿಭ್ಯ ಇಮನಿಜ್ವಾ** (೫-೧-೧೨೨) ಎಂಬುದರಿಂದ ಇಮನಿಚ್ ಪ್ರತ್ಯಯ. **ಟೇಃ** ಎಂಬುದರಿಂದ ಮಹೆಶಬ್ದದ ಟಿಗೆ (ಅ) **ಲೋಪ.** ಮಹಿಮನ್ ಶಬ್ದವಾಗುತ್ತದೆ. ದ್ವಿತೀಯಾಏಕವಚನದಲ್ಲಿ **ಸರ್ವನಾಮಸ್ಥಾನೇಚಾಸಂಬುದ್ಧೌ** ಎಂಬುದರಿಂದ ನಾಂತದ ಉಪಧೆಗೆ ದೀರ್ಘ. ಮಹಿಮನ್‌ಶಬ್ದವು **ಚಿತಃ** ಎಂಬುದರಿಂದ ಚಿತ್‌ಪ್ರತ್ಯಯಾಂತವಾದುದರಿಂದ ಅಂತೋದಾತ್ತವಾಗುತ್ತದೆ.

ಆತತ—ಅಶೂ ವ್ಯಾಪ್ತೌ ಧಾತು. ಲಜ್‌ಪ್ರಥಮಪುರುಷಬಹುವಚನಕ್ಕೆ ಅನಕಾರದ ಪರದಲ್ಲಿರುವುದರಿಂದ ಅತಾದೇಶ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. ಅತಿಜುಂತದ ಪರದಲ್ಲಿರುವುದರಿಂದ ನಿಘಾತ ಸ್ವರ ಬರುತ್ತದೆ.

ದಿವಿ—ಸಪ್ತಮ್ಯೇಕವಚನಾಂತರೂಪ. **ಊಡಿದಂಪದಾದಿ**—ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ರುದ್ರಾಸಃ—ಹಿಂದಿನಂತೇ ಜಸಿನಲ್ಲಿ **ಆಜ್ಜಸೇರಸುಕ್** ಎಂಬುದರಿಂದ ಅಸುಕಾಗಮ

ಅರ್ಚಂತಃ—ಅರ್ಚ ಪೂಜಾಯಾಂ ಧಾತು. ಲಡರ್ಥದಲ್ಲಿ ಶತೃಪ್ರತ್ಯಯ. ಧಾತುಸ್ವರ ಉಳಿಯುತ್ತದೆ ಸ್ಯಧನಾಬಹುವಚನಗಳಲ್ಲಿ ಉಗಿತ್ವಾದುದರಿಂದ ನುಮಾಗಮ ಬರುತ್ತದೆ.

ಇಂದ್ರಿಯಮ್—ಇಂದ್ರಿಯಮಿಂದ್ರಲಿಂಗಮಿಂದ್ರದೃಷ್ಟ—(ಪಾ.ಸೂ.೫-೨-೯೩) ಎಂಬುದರಿಂದ ಘಚ್ ಪ್ರತ್ಯಯಾಂತವಾಗಿ ನಿಪಾತಿತವಾಗಿದೆ **ಆಯನೇಯೀ**—ಸೂತ್ರದಿಂದ ಘಕ್ಕೆ ಇಯಾದೇಶ.

ವಧಿರೇ—ಡುಧಾಞ್ ಧಾರಣಪೋಷಣಯೋಃ ಧಾತು ಲಿಟ್‌ಪ್ರಥಮಪುರುಷಬಹುವಚನಾಂತರೂಪ. ತಿಜಂತನಿಘಾತಸ್ವರ ಬರುತ್ತದೆ

ಪೃಶ್ನಿಮಾತರಃ—ಪ್ರಾಶ್ನುತೇ ಸರ್ವಾಣಿ ರೂಪಾಣಿ ಇತಿ ಪೃಶ್ನಿಃ ಭೂಮಿಃ (ಎಲ್ಲಾ ರೂಪವನ್ನು ಹೊಂದುವುದು) **ಇಯಂ ವೈ ಪೃಶ್ನಿಃ** (ತೈ. ಬ್ರಾ. ೧-೪-೧-೫) ಎಂದು ಶ್ರುತವಾಗಿದೆ **ಪೃಣಿಃ ಪೃಶ್ನಿಃ** ಎಂಬಲ್ಲಿ ನಿಪಾತಿತವಾದುದರಿಂದ ಅಭಿಮತರೂಪಸಿದ್ಧಿಯಾಗುತ್ತದೆ. **ಪೃಶ್ನಿಃ ಮಾತಾ ಯೇಷಾಂ ತೇ ಪೃಶ್ನಿಮಾತರಃ ಋತಶ್ಛಂದಸಿ** (ಪಾ. ಸೂ. ೫-೪-೧೫೪) ಎಂಬುದರಿಂದ ಸಮಾಸಾಂತವಾದ ಬಹುವ್ರೀಹಿಯಲ್ಲಿ ಬರುವ ಕಪಿಗೆ ನಿಷೇಧ. ಅಸ್ಕೃತ್ ಸೂತ್ರದಲ್ಲಿ ನಿಯಮಮಾಡಿರುವುದರಿಂದ ಉಪಧಾದೀರ್ಘ ಬರುವುದಿಲ್ಲ.

ಜನಯಂತಃ—ಜನೀ ಪ್ರಾದುರ್ಭಾವೇ ಧಾತು. ಣಿಜಂತದಮೇಲೆ ಶತೃಪ್ರತ್ಯಯ. ಶಪ್‌ವಿಕರಣ. ಶಪನ್ನು ನಿಮಿತ್ತೀಕರಿಸಿ ಣಿಚಿಗೆ ಗುಣ ಆಯಾದೇಶ. ಶಪ್‌ಪಿತ್ತಾದುದರಿಂದ ಅನುದಾತ್ತ. ಲಸಾರ್ವಧಾತುಕವು (ಶತೃ) **ತಾಸ್ಯನುದಾತ್ತೇತ್** ಸೂತ್ರದಿಂದ ಅನುದಾತ್ತ. ಣಿಚ್‌ಸ್ವರದಿಂದ ನಕಾರೋತ್ತರಾಕಾರವು ಉದಾತ್ತವಾಗುತ್ತದೆ. ಜಸಿನಲ್ಲಿ ಉಗಿತ್ತಾದುದರಿಂದ ನುಮಾಗನು ಬರುತ್ತದೆ. ॥ ೨ ॥

ಸಂಹಿತಾಪಾಠಃ

ಗೋಮಾತರೋ ಯಚ್ಛುಭಯಂತೇ ಅಂಜಿಭಿಸ್ತನೂಷು ಶುಭ್ರಾ ದಧಿರೇ ವಿರುಕ್ಮತಃ।
ಬಾಧಂತೇ ವಿಶ್ವಮಭಿಮಾತಿನಮಪ ವರ್ತ್ಮಾನ್ಯೇಷಾಮನು ರೀಯತೇ ಘೃತಂ ॥ ೩ ॥

ಪದಪಾಠಃ

ಗೋಽಮಾತರಃ । ಯತ್ । ಶುಭಯಂತೇ । ಅಂಜಿಽಭಿಃ । ತನೂಷು । ಶುಭ್ರಾಃ । ದಧಿರೇ । ವಿರುಕ್ಮತಃ ।
ಬಾಧಂತೇ । ವಿಶ್ವಂ । ಅಭಿಽಮಾತಿನಂ । ಅಪ । ವರ್ತ್ಮಾನಿ । ಏಷಾಂ । ಅನು । ರೀಯತೇ । ಘೃತಂ ॥ ೩ ॥

ಸಾಯಣಭಾಷ್ಯ

ಗೋಮಾತರೋ ಗೋರೂಪಾ ಭೂಮಿರ್ಮಾತಾ ಯೇಷಾಂ ತೇ ಮರುತ ಅಂಜಿಭೀ ರೂಪಾಭಿವ್ಯಂಜಕೈರಾಭರಣೈರ್ಯದ್ಯದಾ ಶುಭಯಂತೇ ಸ್ವಕೀಯಾನ್ಯಂಗಾನಿ ಶೋಭಾಯುಕ್ತಾನಿ ಕುರ್ವಂತಿ ತದಾನೀಂ ಶುಭ್ರಾ ದೀಪ್ತಾ ಮರುತಸ್ತನೂಷು ಸ್ವಕೀಯೇಷು ಶರೀರೇಷು ವಿರುಕ್ಮತೋ ವಿಶೇಷೇಣ

ರೋಚಮಾನಾನಲಂಕಾರಾನ್ಪಧಿರೇ । ಧಾರಯಂತಿ । ಅಪಿ ಚ ವಿಶ್ವಂ ಸರ್ವಮಭಿಮಾತಿನಂ ಶತ್ರುಮಪ ಬಾಧಂತೇ । ಹಿಂಸಂತಿ । ಏಷಾಂ ಮರುತಾಂ ವರ್ತ್ಮನಿ ಮಾರ್ಗಾನನುಸೃತ್ಯ ಘೃತಂ ಕ್ಷರಣಶೀಲಮುದಕಂ ರೀಯತೇ । ಸ್ರವತಿ । ಯತ್ರ ಮರುತೋ ಗಚ್ಛಂತಿ ವೃಷ್ಟ್ಯುದಕಮಪಿ ತದನುಸಾರೇಣ ತತ್ರ ಗಚ್ಛತೀತ್ಯರ್ಥಃ ॥ ಶುಭಯಂತೇ । ಸಂಜ್ಞಾಪೂರ್ವಕಸ್ಯ ವಿಧೇರನಿತ್ಯತ್ವಾಲ್ಲಘೂಪಧಗುಣಾಭಾವಃ । ಅಂಜಿಭಿಃ । ಅಞ್ಜೂ ವ್ಯಕ್ತಿಮ್ರಕ್ಷಣಗತಿಷು । ಋನಿಕಷಿಕಸ್ಯಂಜ್ಯಸಿವಸಿಪ್ವನಿಸ್ತನಿವನಿಸನಿಗ್ರಂಥಿಚರಿಭ್ಯಶ್ಚ । ಉ. ೪-೧೫೯ । ಇತೀಪ್ರತ್ಯಯಃ । ಶುಭ್ರಾಃ । ಶುಭ ದೀಪ್ತೌ । ಸ್ಫಾಯಿತಂಚೀತ್ಯಾದಿನಾ ರಕ್ । ನಿರುಕ್ಕತಃ । ವಿಶಿಷ್ಟಾ ರುಕ್ ನಿರುಕ್ । ತದ್ವಂತೋ ನಿರುಕ್ಮಂತಃ । ಮತುಪ್ಯಯಸ್ಮಯಾದಿತ್ವೇನ ಪದತ್ವಾತ್ಮತ್ವಂ । ಭತ್ವಾತ್ ಜಶ್ತ್ವಾಭಾವಃ । ರೀಯತೇ ರೀಙ್ । ಸ್ರವಣೇ । ದೈವಾದಿಕಃ ॥೩॥

॥ ಪ್ರತಿಪದಾರ್ಥ ॥

ಗೋಮಾತರಃ—ಗೋರೂಪವುಳ್ಳ ಪೃಥ್ವಿಯೇ ತಾಯಿಯಾಗಿ ಉಳ್ಳ ಮರುತ್ತುಗಳು । **ಅಂಜಿಭಿಃ**—ಸೌಂದರ್ಯವನ್ನು ವ್ಯಕ್ತಪಡಿಸತಕ್ಕ ಆಭರಣಗಳಿಂದ । **ಯತ್**—ಯಾವಾಗ । **ಶುಭಯಂತೇ**—(ತಮ್ಮ ಶರೀರಗಳನ್ನು) ಸಿಂಗರಿಸಿಕೊಳ್ಳುತ್ತಾರೋ (ಆಗ) । **ಶುಭ್ರಾಃ**—ಪ್ರಕಾಶಮಾನಗಳಾದ ಮರುತ್ತುಗಳು । **ತನೂಷು**—ತಮ್ಮ ಶರೀರಗಳಲ್ಲಿ । **ನಿರುಕ್ಮತಃ**—ಕಂಗೊಳಿಸುವ ಆಲಂಕಾರಗಳನ್ನು । **ದಧಿರೇ**—ಹೊಂದಿರುತ್ತಾರೆ । **ವಿಶ್ವಂ**—ಸಮಸ್ತವಾದ । **ಅಭಿಮಾತಿನಂ**—ಶತ್ರುವನ್ನೂ । **ಅಪಬಾಧಂತೇ**—ಹಿಂಸಿಸುತ್ತಾರೆ । **ಏಷಾಂ**—ಈ ಮರುತ್ತುಗಳ । **ವರ್ತ್ಮನಿ**—ದಾರಿಯಲ್ಲಿ (ದಾರಿಯನ್ನನುಸರಿಸಿ) । **ಘೃತಂ**—ಪರಿಯುವ ಸ್ವಭಾವವುಳ್ಳ ನೀರು । **ರೀಯತೇ**—ಸ್ರವಿಸುತ್ತದೆ.

ಭಾವಾರ್ಥ

ಗೋರೂಪವುಳ್ಳ ಪೃಥ್ವಿಯು ಪುತ್ರರಾದ ಮರುತ್ತುಗಳು ತಮ್ಮ ಸೌಂದರ್ಯವನ್ನು ವ್ಯಕ್ತಪಡಿಸತಕ್ಕ ಆಭರಣಗಳಿಂದ ಯಾವಾಗ ತಮ್ಮ ಶರೀರಗಳನ್ನು ಸಿಂಗರಿಸಿಕೊಳ್ಳುತ್ತಾರೋ ಆಗ ಅವರು ಪ್ರಕಾಶಮಾನರಾಗಿ ತಮ್ಮ ಶರೀರಗಳಲ್ಲಿ ಕಂಗೊಳಿಸುವ ಆಲಂಕಾರಗಳನ್ನು ಹೊಂದಿರುತ್ತಾರೆ. ಮತ್ತು ಅವರ ಪಕಲ ಶತ್ರುಗಳನ್ನೂ ಹಿಂಸಿಸುತ್ತಾರೆ ನೀರಿನ ಸ್ರವಣಾಹವು ಈ ಮರುತ್ತುಗಳ ಸಂಚಾರಮಾರ್ಗವನ್ನೇ ಅನುಸರಿಸುತ್ತದೆ

English Translation

When the sons of the earth (Marnts) decorate themselves with ornaments they shine resplendent in their persons with brilliant decorations; they drive away every adversary from their path and the waters follow their path.

॥ ವಿಶೇಷವಿಷಯಗಳು ॥

ಗೋಮಾತರಃ—ಗೌಃ ಎಂದರೆ ಭೂಮಿಯು (ಸಿ. ೧-೧) ಭೂಮಿಯೇ ತಾಯಿಯಾಗಿವುಳ್ಳವರು ಎಂದರೆ ಭೂಮಿಯ ಪುತ್ರರು ಅಥವಾ ಸ್ಪಶ್ನಿಯೆಂಬ ದೇವಲೋಕದ ಧೇನುವಿನ ಪುತ್ರರು. ಮರುತ್ತುಗಳಿಗೆ **ಪೃಶ್ನಿಮಾತರಃ** ಎಂದೂ ಹೆಸರಿರುವುದು.

ಅಂಜಿಭಿಃ—ಅಂಜೂ ವ್ಯಕ್ತಿಮ್ರಕ್ಷಣಗತಿಷು ರೂಪಾಭಿವ್ಯಂಜಕೈರಾಭರಣೈಃ। ಅಂಜನ (ಕಪ್ಪು) ನೊನಲಾನ ರೂಪಾತಿಶಯವನ್ನು ಹೆಚ್ಚಿಸುವುನಕ್ಯಾಗಿ ಉಪಯೋಗಿಸುನ ಅಲಂಕಾರಾದಿಗಳಿಂನ.

ಶುಭ್ರಾಃ—ಶುಭ ದೀಪ್ತೌ। ಪ್ರಕಾಶನಾನರಾದ, ಸೌಂದರ್ಯಾತಿಶಯದಿಂದ ಚೆನ್ನಾಗಿ ಬೆಳಗುತ್ತಿರುವ.

ವಿರುಕ್ಮತಃ—ವಿಶೇಷೇಣ ರೋಚಮಾನಾನಲಂಕಾರಾನ್। ಬಹಳವಾಗಿ ಪ್ರಕಾಶಿಸುತ್ತಿರುವ ಅಲಂಕಾರಾದ್ಯಾಭರಣಗಳನ್ನೂ.

ಅಪ ಬಾಧಂತೆ ವಿಶ್ವಮಭಿಮಾತಿನಂ—ತಾವು ಚಲಿಸತಕ್ಕ ಮಾರ್ಗದಲ್ಲಿ ಅಡ್ಡವಾಗಿ ಬರುವ ಶತ್ರುಗಳನ್ನು (ವೃಕ್ಷಾದಿಗಳನ್ನು) ಧ್ವಂಸಗೊಳಿಸುವ. ಗಾಳಿಯು ವೇಗವಾಗಿ ಬೀಸುವಾಗ ಎದುರಿಗೆ ಸಿಕ್ಕುನ ವೃಕ್ಷಾದಿಗಳನ್ನು ಉರುಳಿಸುವುವು ಎಂದಭಿಪ್ರಾಯವು.

ವಿಷಾಂ ಅನು ರೀಯತೇ ಘೃತಂ—ಘೃತವೆಂದರೆ ಉದಕವು. (ನಿ. ೨-೨೪) ಮರುತ್ತುಗಳು ಬೀಸಿನ ಕೂಡಲೆ ಅವರ ಹಿಂದೆಯೇ ನೀರು ಸುರಿಯುವುದು ಎಂದರೆ ಸುಳಿಬರುವುದು ಎಂದಭಿಪ್ರಾಯವು

ವ್ಯಾಕರಣ-ಪ್ರಕ್ರಿಯೆ

ಶುಭಯಂತೇ—ತತ್ಕರೋತಿ ತದಾಚಷ್ಟೇ ಎಂಬುದರಿಂದ ಣಿಚ್. **ಸಂಜ್ಞಾಪೂರ್ವಕೋ ವಿಧಿರನಿತ್ಯಃ** ಎಂಬ ವಚನದಿಂದ ಣಿಚ್‌ನಿಮಿತ್ತಕವಾಗಿ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. ಲಟ್ ಸ್ಥಥಮಪುರುಷಬಹುವಚನನಲ್ಲಿ ಝಿಕ್ಕೆ ಅಂತಾದೇಶ ಏತ್ವ. **ಕರ್ತರಿಶಪ್** ಎಂಬುದರಿಂದ ಶಪ್. ಶಪ್ ನಿಮಿತ್ತವಾಗಿ ಣಿಚಿಗೆ ಗುಣ. ಅಯಾದೇಶ. ಯಕ್ಕೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಣಿಚ್‌ಸ್ವರದಿಂದ ಭಕಾರೋತ್ತರಾಕಾರ ಉದಾತ್ತವಾಗುತ್ತದೆ

ಅಂಜಿಭಿಃ—ಅಂಜೂ ವ್ಯಕ್ತಿಮ್ರಕ್ಷಣಕಾಂತಿಗತಿಷು. ಧಾತು. **ಖನಿಕಷಿಚಕ್ಷಂಜ್ಯಸಿವಸಿ ಧ್ವನಿಸ್ತನಿ ವನಿ ಸನಿ ಗ್ರಂಥಿ ಚರಿಭ್ಯಶ್ಚ** (ಉ. ಸೂ ೪೫೭) ಎಂಬುದರಿಂದ ಇಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತ. ತೃತೀಯಾಬಹುವಚನಾಂತರೂಪ.

ಶುಭ್ರಾಃ—ಶುಭ ದೀಪ್ತೌ ಧಾತು. **ಸ್ಫಾಯಿತಂಚಿವಂಚಿಶಕಿ**—(ಉ. ಸೂ. ೨-೧೭೦) ಎಂಬುದರಿಂದ ರಕ್ ಪ್ರತ್ಯಯ ಕಿತ್ತಾದುದರಿಂದ ಲಘೂಪಧಗುಣಬರುವುದಿಲ್ಲ ಅಂತೋದಾತ್ತವಾಗುತ್ತದೆ. ಪ್ರಥಮಾಬಹುವಚನಾಂತರೂಪ

ವಿರುಕ್ಮತಃ- ವಿಶಿಷ್ಪೂರುಕ್ ವಿರುಕ್. ವಿರುಕ್ ವಿಷಾಂ ಅಸ್ತಿ ಇತಿ ವಿರುಕ್ಮಂತಃ ರುಚ್ ದೀಪ್ತೌ ಧಾತು. ಕ್ವಿಪ್‌ಪ್ರತ್ಯಯ. **ತದಸ್ಯಾಸ್ತ್ಯಸ್ಮಿನ್**—ಸೂತ್ರದಿಂದ ಮತುಪ್ **ಅಯಸ್ಮಯಾದೀನಿ ಛಂದಸಿ** ಎಂಬಲ್ಲಿ ಇದು ನೇರಿರುವುದರಿಂನ ಪದಸಂಜ್ಞೆ ಇರುವುದರಿಂನ **ಚೋಃ ಕುಃ** ಎಂಬುದರಿಂನ ಚಕಾರಕ್ಕೆ ಕುತ್ವದಿಂದ ಕಕಾರಾದೇಶ. ಭಸಂಜ್ಞೆ ಇರುವುದರಿಂದ ಅವಕ್ಕೆ ಜಸ್ತ್ವ ಬರುವುದಿಲ್ಲ. ಮತುಪ್ ಪಿತ್ತಾದುದರಿಂದ ಅನುದಾತ್ತ. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ರೇಫೋತ್ತರ ಉಕಾರ ಉದಾತ್ತವಾಗುತ್ತದೆ.

ಬಾಧಂತೇ—ಬಾಧೃ ಲೋಡನೇ ಧಾತು. ಭ್ವಾದಿ. ಲಟ್ ಪ್ರಥಮಪುರುಷ ಬಹುವಚನರೂಪ। ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರದಿಂದ ಆದ್ಯುದಾತ್ತವಾಗುತ್ತದೆ.

ರೀಯತೇ—ರೀಙ್ ಸ್ರವಣೇ ಧಾತು. ದಿವಾದಿ. ಲಟ್ ಪ್ರಥಮಪುರುಷಏಕವಚನಕ್ಕೆ **ಟಿತ ಆತ್ಮನೇ-ಪದಾನಾಂ** ಸೂತ್ರದಿಂದ ಏತ್ವ. **ದಿವಾದಿಭ್ಯಃ ಶ್ಯನ್** ಸೂತ್ರದಿಂದ ಶ್ಯನ್‌ವಿಕರಣ. ಆತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೩ ॥

॥ ಸಂಹಿತಾಪಾಠಃ ॥

ವಿ ಯೇ ಭ್ರಾಜಂತೇ ಸುಮಖಾಸ ಋಷ್ಟಿಭಿಃ ಪ್ರಚ್ಯಾವಯಂತೋ ಅಚ್ಯುತಾ ಚಿದೋಜಸಾ।
ಮನೋಜುವೋ ಯನ್ಮರುತೋ ರಥೇಷ್ವಾ ವೃಷವ್ರಾತಾಸಃ ಪೃಷತೀರಯುಗ್ಧ್ವಂ ॥ ೪ ॥

॥ ಪದಪಾಠಃ ॥

ವಿ । ಯೇ । ಭ್ರಾಜಂತೇ । ಸುಽಮಖಾಸಃ । ಋಷ್ಟಿಽಭಿಃ । ಪ್ರಽಚ್ಯವಯಂತಃ ।
ಅಚ್ಯುತಾ । ಚಿತ್ । ಓಜಸಾ ।
ಮನಃಽಜುವಃ । ಯತ್ । ಮರುತಃ । ರಥೇಷು । ಆ । ವೃಷಽವ್ರಾತಾಸಃ ।
ಪೃಷತೀಃ । ಅಯುಗ್ಧ್ವಂ ॥ ೪ ॥

ಸಾಯಣಭಾಷ್ಯಂ

ಸುಮಖಾಸಃ ಶೋಭನಯಜ್ಞಾ ಯೇ ಮರುತ ಋಷ್ಟಿಭಿರಾಯುಧೈರ್ನಿ ಭ್ರಾಜಂತೇ ವಿಶೇಷೇಣ ದೀಪ್ಯಂತೇ ತೇ ಮರುತೋಽಚ್ಯುತಾ ಚಿತ್ ಚ್ಯಾವಯಿತುಮಶಕ್ಯಾನಿ ದೃಢಾನಿ ಪರ್ವತಾದೀನ್ಯಪ್ಯೋಜಸಾ ಸ್ವಕೀಯೇನ ಬಲೇನ ಪ್ರಚ್ಯಾವಯಂತಃ ಪ್ರಕರ್ಷೇಣ ಚ್ಯಾವಯಿತಾರಃ ಪ್ರೇರಯಿತಾರೋ ಭವಂತಿ । ಉತ್ತರಾರ್ಧಃ ಪ್ರತ್ಯಕ್ಷಕೃತಃ । ಹೇ ಮರುತೋ ಮನೋಜುವೋ ಮನೋವದ್ವೇಗಗತಯೋ ವೃಷವ್ರಾತಾಸೋ ವೃಷ್ಟ್ಯುದಕಸೇಚನಸಮರ್ಥಸಪ್ತಸಂಘಾತ್ಮಕಾ ಯೂಯಂ ರಥೇಷ್ವಾತ್ಮೀಯೇಷು ಪೃಷತೀಃ । ಪೃಷತ್ಯ ಇತಿ ಮರುದ್ಗಾಹನಾನಾಂ ಸಂಜ್ಞಾ ಪೃಷತ್ಯೋ ಮರುತಾಮಿತ್ಯುಕ್ತ್ವಾತ್ । ಪೃಷದ್ಭಿಃ ಶ್ವೇತಬಿಂದುಭಿರ್ಯುಕ್ತಾ ಮೃಗೀರ್ಯದ್ಯದಾಯುಗ್ಭ್ವಂ ಆಭಿಮುಖ್ಯೇನ ನಿಯುಕ್ತಾ ಅಕೃಧ್ವಂ । ತದಾನೀಂ ಪರ್ವತಾದಿಕಂ ಪ್ರಚ್ಯವತ ಇತ್ಯರ್ಥಃ ॥ ಸುಮಖಾಸಃ । ಸರ್ವೇ ವಿಧಯೇಶ್ಚಂದಸಿ ವಿಕಲ್ಪ್ಯಂತ ಇತಿ ನಞ್ಸ್ಸುಭ್ಯಾಮಿತ್ಯಸ್ಯ ಪೂರ್ವಪದಪ್ರಕೃತಿಸ್ವರತ್ವಂ । ಅಚ್ಯುತಾ । ಶೇಶ್ಛಂದಸಿ ಬಹುಲಮಿತಿ ಶೇರ್ಲೋಪಃ । ಮನೋಜುವಃ । ಜು ಇತಿ ಸೌತ್ರೋ ಧಾತುರ್ಗತ್ಯರ್ಥಃ । ಕ್ವಿಬ್ವಚೀತ್ಯಾದಿನಾ ಕ್ವಿಬ್ವಿಕಲ್ಪೌ । ಆಯುಗ್ಭ್ವಂ । ಯುಜಿರ್ ಯೋಗೇ । ಲುಙಿ ಚ । ಪಾ. ೬-೪-೭೫ । ಇತಿ ಸಕಾರಲೋಪಃ ॥

ಪ್ರತಿಪದಾರ್ಥ

ಸುಮಖಾಸಃ— ಶ್ರೇಷ್ಠವಾದ ಯಜ್ಞವುಳ್ಳ । **ಯೇ**— ಯಾವ ಮರುತ್ತುಗಳು । **ಋಷ್ಟಿಭಿಃ**— ಆಯುಧಗಳಿಂದನೆ । **ವಿಭ್ರಾಜಂತೇ**— ವಿಶೇಷವಾಗಿ ಪ್ರಕಾಶಿಸುತ್ತಾರೋ । (ಅವರು) **ಅಚ್ಯುತಾ ಚಿತ್**— ಅಲ್ಲಾಡಿಸಲಸಾಧ್ಯವಾದ ಪರ್ವತಾದಿಗಳನ್ನೂ ಕೂಡ । **ಓಜಸಾ**— ತಮ್ಮ ಬಲದಿಂದ । **ಪ್ರಚ್ಯಾವಯಂತಃ**— ಅಲ್ಲಾಡಿಸುತ್ತಾರೆ- । **ಮರುತಃ**— ಎಲ್ಲೆ ಮರುತ್ತುಗಳೇ । **ಮನೋಜುವಃ**— ಮನೋವೇಗವುಳ್ಳವರಾಗಿಯೂ । **ವೃಷವ್ರಾತಾಸಃ**— ಮಳೆಯನ್ನು ಸುರಿಸುವುದೇ ಮೊದಲಾದ ಕರ್ತವ್ಯತತ್ಪರರಾಗಿಯೂ ಇದ್ದು । **ರಥೇಷು**— ನಿಮ್ಮ ರಥಗಳಲ್ಲಿ । **ಪೃಷತೀಃ**— ಬಿಂದುಗಳಿಂದ ಕೂಡಿದ ಜಿಂಕೆಗಳನ್ನು । **ಯತ್**— ಯಾವಾಗ । **ಆ ಅಯುಗ್ಭ್ವಂ**— (ರಥಕ್ಕೆ) ಅಭಿಮುಖವಾಗಿ ಕಟ್ಟುತ್ತೀರೋ (ಆಗ ಪರ್ವತಾದಿಗಳೂ ಸಪ ಚಲಿಸುತ್ತವೆ.) ।

ಭಾವಾರ್ಥ

ಶ್ರೇಷ್ಠವಾದ ಯಜ್ಞಯುಕ್ತರಾದ ಯಾವ ಮರುತ್ತುಗಳು ತಮ್ಮ ಆಯುಧಗಳಿಂದನೆ ವಿಶೇಷವಾಗಿ ಪ್ರಕಾಶಿಸುತ್ತಾರೆಯೋ, ಆ ಮರುತ್ತುಗಳು ಅಲ್ಲಾಡಿಸಲಸಾಧ್ಯವಾದ ಪರ್ವತಾದಿಗಳನ್ನೂ ಸಹ ತಮ್ಮ ಬಲದಿಂದ ಕಂಪಿಸುವಂತೆ ಮಾಡುತ್ತಾರೆ. ಎಲ್ಲೆ ಮರುತ್ತುಗಳೇ, ಮನೋವೇಗವುಳ್ಳವರಾಗಿಯೂ ಮಳೆಯನ್ನು ಸುರಿಸುವುದೇ ಮೊದಲಾದ ಕರ್ತವ್ಯತತ್ಪರರಾಗಿಯೂ ಇದ್ದು ನೀವು ನಿಮ್ಮ ರಥಗಳಲ್ಲಿ ಬಿಂದುಗಳಿಂದ ಕೂಡಿದ ಜಿಂಕೆಗಳನ್ನು ಯಾವಾಗ ಕಟ್ಟುತ್ತೀರೋ ಆಗ ಪರ್ವತಾದಿಗಳನ್ನೆಲ್ಲಾ ಚಲಿಸುವಂತೆ ಮಾಡುತ್ತೀರಿ.

English Translation

They (Maruts) who are well worshipped shine with various weapons ; through their might, they are shakers of even unshakable (mountains & c.) Maruts, entrusted with the duty of sending rain, yoke the spotted deer to your cars.

ವಿಶೇಷವಿಷಯಗಳು

ಸುಮಖಾಸಃ—ಶೋಭನಯಜ್ಞಾಃ । ಉತ್ತಮವಾದ ಯಜ್ಞಗಳಲ್ಲಿ ಆರಾಧಿಸಲ್ಪಡುವವರು.

ಋಷ್ಟಿಭಿಃ—ಆಯುಧೈಃ । ಆಯುಧಗಳಿಂದ, ಭರ್ಜಿಗಳಿಂದ.

ಪ್ರಚ್ಯಾವಯಂತಃ—ಪ್ರಕರ್ಷೇಣ ಚ್ಯಾವಯಿತಾರಃ ಪ್ರೇರಯಿತಾರೋ ಭವಂತಿ । ತಮ್ಮ ಶಕ್ತಿಯಿಂದ ಪ್ರೇರಿಸುವವರು, ಅಲ್ಲಾಡಿಸುವವರು

ಆಚ್ಯುತಾಃ—ಅಲ್ಲಾಡಿಸುವುದಕ್ಕೆ ಅಶಕ್ಯವಾದ ಪರ್ವತಾದಿಗಳನ್ನು.

ಓಜಸಾ—ತಮ್ಮ ಶಕ್ತಿಸಾಮರ್ಥ್ಯಗಳಿಂದ.

ಮನೋಜುವಃ—ಜು ಇತಿ ಸೌತ್ರೋ ಧಾತುರ್ಗತ್ಯರ್ಥಃ । ಮನೋವೇಗವುಳ್ಳವರು. ನಾವು ಯಾವರೀತಿ ಮನಸ್ಸಿನಲ್ಲಿ ಅತ್ಯಂತ ದೂರದಲ್ಲಿರುವ ವಸ್ತುವನ್ನು ಕ್ಷಣಮಾತ್ರದಲ್ಲಿ ಆಲೋಚಿಸುತ್ತೇನೆಯೋ ಅದರಂತೆ ಅತಿಶಯವಾದ ವೇಗವುಳ್ಳವರು ಎಂಬಭಿಪ್ರಾಯವು.

ವೃಷವ್ರಾತಾಸಃ—ಮಳೆಹುಯ್ಯುವ ಕೆಲಸದಲ್ಲಿ ಸಮರ್ಥರಾದ.

ಪೃಷತೀಃ—ಮರುದ್ದೇವತೆಗಳ ವಾಹನಗಳಿಗೆ ಪೃಷತೀಃ ಎಂದು ಹೆಸರು. ಪೃಷತೀಃ ಎಂಬರೆ ಬಿಳಿಚಿಕ್ಕೆಗಳುಳ್ಳ ಜಿಂಕೆಗಳು. ಬೇರೆ ಬೇರೆ ದೇವತೆಗಳಿಗೆ ಬೇರೆ ಬೇರೆ ವಾಹನಗಳಿರುವುವು ಈ ವಿಷಯದಲ್ಲಿ ಯಾಸ್ಕರು—

ಹರೀ ಇಂದ್ರಸ್ಯ । ರೋಹಿತೋಽಗ್ನೇಃ । ಹರಿತ ಆದಿತ್ಯಸ್ಯ । ರಾಸಭಾವಶ್ವಿನೋಃ । ಅಜಾಃ ಪೂಷ್ಣಃ । ಪೃಷತ್ಯೋ ಮರುತಾಂ । ಅರುಷ್ಯೋ ಗಾವಃ ಉಷಸಃ । ಶ್ಯಾವಾ ಸವಿತುಃ। ವಿಶ್ವರೂಪಾ ಬೃಹಸ್ಪತೇಃ। ನಿಯುತೋ ವಾಯೋಃ ॥

(ನಿ ೭-೨೮)

ಎಂದು ಹೇಳಿರುವರು.

ಸ್ಕಾಕಂಣಪ್ರಕ್ರಿಯಾ

ಭ್ರಾಂಜತೇ—ಭ್ರಾಜೃ ದೀಪ್ತೌ ಧಾತು. ಭ್ವಾದಿ. ಯೇ ಎಂದು ಹಿಂದೆ ಇರುವುದರಿಂದ **ಯದ್ಧ್ಯತ್ಯಾನ್ನಿತ್ಯಂ** ಎಂಬುದರಿಂದ ನಿಘಾತಪ್ರತಿಷೇಧ. ಧಾತುಸ್ವರ ಉಳಿಯುತ್ತದೆ.

ಸುಮಖಾಸಃ— ಶೋಭನಾಃ ಮಖಾಃ ಯೇಷಾಂ ತೇ ಸುಮಖಾಸಃ. **ನಞ್ಸುಭ್ಯಾಂ** ಎಂಬುದರಿಂದ ಉತ್ತರಪದ ಆಂತೋದಾತ್ತಸ್ವರವು ವಾಸ್ತವವಾಗಿ ಬಹುವ್ರೀಹಿಯಲ್ಲಿ ಬರಬೇಕಾಗುತ್ತದೆ. ಆದರೆ **ಷಷ್ಠೀಯುಕ್ತಃ ಛಂದಸಿ ವಾ** ಎಂಬ ಸೂತ್ರದ ಯೋಗವಿಭಾಗದಿಂದ ಸಿದ್ಧವಾದ **ಸರ್ವೇ ವಿಧಯಃ ಛಂದಸಿ ವಿಕಲ್ಪ್ಯಂತೇ** ಎಂಬ ವಚನದಿಂದ ಇಲ್ಲಿ ಪೂರ್ವೋಕ್ತಸ್ವರವು ಬಾರದೆ **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಸಾಮಾನ್ಯವಾಗಿ ಬರುವ ಪೂರ್ವಪದಪ್ರಕೃತಿಸ್ವರವೇ ಬರುತ್ತದೆ. ಪ್ರಥಮಾಬಹುವಚನದಲ್ಲಿ ಜಸಿಗೆ **ಆಜ್ಜಸೇರಸುಕ್** ಎಂಬುದರಿಂದ ಅಸುಕಾಗಮ ಬರುತ್ತದೆ.

ಪ್ರಚ್ಯಾವಯೆಂತಃ— ಚ್ಯುಬ್ ಗತೌ ಧಾತು. ಪ್ರೇರಣಾರ್ಥೋರುವಾಗ ಣಿಚ್. ಣಿಜಂತದಮೇಲೆ ಲಡರ್ಥದಲ್ಲಿ ಶತೃ ಪ್ರತ್ಯಯ. ಶಬ್ಬಿಕರಣ. ಶಬ್ನಿಮಿತ್ತಕವಾಗಿ **ಣೆಚಿಗೆ ಗುಣ** ಆಯಾದೇಶ. ಣಿಚ್ನಿಮಿತ್ತವಾಗಿ ಧಾತುವಿಗೆ ವೃದ್ಧಿ ಆವಾದೇಶ. ಣಿಚ್ಸ್ವರ ಬರುತ್ತದೆ.

ಅಚ್ಯುತಾ— ಶಸಿಗೆ ನಪುಂಸಕದಲ್ಲಿ ಆದೇಶವಾಗಿ ಬಂದ ಶಿಗೆ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಲೋಪ

ಮನೋಜುವಃ— ಜು ಎಂಬುದು ನೌತ್ರನಾದ ಧಾತು ಗತ್ಯರ್ಥದಲ್ಲಿ ಇದೆ. **ಕ್ವಿಬ್ಬಹಿಶ್ರಿ**—(ಪಾ. ಸೂ. ೩-೨-೧೭೮ ವಾ ೨) ಎಂಬುದರಿಂದ ಕ್ವಿಪ್ಪ್ರತ್ಯಯ. ತತ್ಸನ್ನಿಯೋಗದಿಂದ ಧಾತುವಿಗೆ ದೀರ್ಘ. ಮನೋಜೂ ಶಬ್ದವಾಗುತ್ತದೆ ಕೃದುತ್ತರಪದವಲ್ಲ ಕೃತಿಸ್ವರ ಬರುತ್ತದೆ ಪ್ರಥಮಾಬಹುವಚನದಲ್ಲಿ **ಅಚಿಶ್ನುಧಾತು**— ಸೂತ್ರದಿಂದ ಉವಙಾದೇಶ.

ವೃಷವ್ರಾತಾಸಃ— ಜಸಿಗೆ **ಆಜ್ಜಸೇರಸುಕ್** ಎಂಬುದರಿಂದ ಅಸುಕಾಗಮ ಬರುತ್ತದೆ.

ಆಯುಗ್ಭ್ಯಸ್ಮಿನ್ — ಯುಜಿರ್ ಯೋಗೇ ಧಾತು. ಲುಜ್ ಮಧ್ಯಮಪುರುಷ ಬಹುವಚನದಲ್ಲಿ ಧ್ವಮ್ ಪ್ರತ್ಯಯ. **ಚ್ಲೇಃಸಿಚ್** ಎಂಬುದರಿಂದ ಸಿಚಾದೇಶ. ಅದಕ್ಕೆ ಧಕಾರಾದಿಪ್ರತ್ಯಯ ಪರದಲ್ಲಿರುವುದರಿಂದ **ಧಿಚ** (ಪಾ. ಸೂ. ೮-೨-೪೦) ಎಂಬುದರಿಂದ ಲೋಪ **ಚೋಃಕುಃ** ಎಂಬುದರಿಂದ ಧಾತುವಿನ ಜಕಾರಕ್ಕೆ ಕುತ್ವ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾದ ಪದವಾಗುತ್ತದೆ ॥ ೪ ॥

॥ संहितापाठः ॥

प्र यद्रथेषु पृषतीरयुग्ध्वं वाजे अद्रिं मरुतो रंहयंतः ।
उतारुषस्य वि ष्यंति धारा अर्मेवोदभिर्व्युंदंति भूम ॥ ५ ॥

॥ पदपाठः ॥

प्र । यत् । रथेषु । पृषतीः । अयुग्ध्वं । वाजे । अद्रिं । मरुतः । रंहयंतः ।
उत । अरुषस्य । वि । स्यंति । धाराः । चर्मेव । उदभिः । वि । उंदंति । भूम ॥ ५ ॥

॥ सायणभाष्यं ॥

हे मरुतः पृषतीर्यद्यदा रथेषु प्रायुग्ध्वं प्रायुंक्ष्वं युजत । किं कुर्वंतः । वाजेऽन्ने निमित्तभूते सत्यद्रिं मेघं रंहयंतो वर्षणार्थं प्रेरयंतः । उत तदानीमरुषस्यारोचमानस्य सूर्यस्य वैद्युताग्नेर्वा सकाशाद्वृष्ट्युदकधारा भवंतो वि ष्यंति विमुंचंति । विमुक्ताश्च धारा उदभिरुदकैश्चर्मेव परिमितमल्पं चर्म यथाप्रयोजनेन क्लेदयते एवं भूम सर्वां भूमिं व्युंदंति निशेषेणार्द्रां कुर्वंति ॥ रंहयंतः । रहि गतौ । वि ष्यंति । षो अंतकर्मणि । दैवादिकः । ओतः श्यनि । पा. ६-४-२० । इत्योकारलोपः । उपसर्गात्सुनोतीति षत्वं । उदभिः । पद्दन्नित्यादिनोदकशब्दस्योदन्नादेशः । व्युंदंति । उन्दी क्लेदने । भूम । सुपां सुलुगिति भूमिशब्दादुत्तरस्यामो डादेशः । छांदसं ह्रस्वत्वं ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ । **ವಾಜೇ**—ಅನ್ನಾರ್ಥವಾಗಿ । **ಅದ್ರಿಂ**—ಮೇಘವನ್ನು । **ರಂಹಯೆಂತಃ**—(ಮಳೆಯನ್ನು ಸುರಿಸುವುದಕ್ಕಾಗಿ) ಪ್ರೇರಿಸುತ್ತ । **ಪೃಷತೀಃ**—ಜಿಂಕೆಗಳನ್ನು । **ರಥೇಷು**—(ನಿಮ್ಮ) ರಥಗಳಲ್ಲಿ । **ಯತ್**—ಯಾವಾಗ । **ಪ್ರಯುಗ್ವ್ವಂ**—ಚೆನ್ನಾಗಿ ಕಟ್ಟುತ್ತೀರೋ । **ಉತ**—ಆಗ । **ಅರುಷಸ್ಯ**—ಕಾಂತಿಯುತನಾದ ಸೂರ್ಯನ ಅಥವಾ ಮಿಂಚಿನ ರೂಪನ ಅಗ್ನಿಯ (ಸಕಾಶದಿಂದ ವೃಷ್ಟಿಧಾರೆಗಳು) । **ವಿಷ್ಯಂತಿ**—ಬೀಳುತ್ತವೆ. । **ಧಾರಾಃ**—ಆ ವೃಷ್ಟಿಧಾರೆಗಳು । **ಉದಭಿಃ**—ನೀರುಗಳಿಂದ । **ಚರ್ಮೇವ**—ಸಣ್ಣ ಚರ್ಮವನ್ನು (ಶ್ರಮವಿಲ್ಲದೇ) ನೆನೆಸುವಂತೆ । **ಭೂಮು**—ಸಕಲ ಭೂಪ್ರದೇಶವನ್ನೂ । **ವ್ಯುಂದಂತಿ**—ಒದ್ದೆಯಾಗುವಂತೆ ಮಾಡುತ್ತವೆ. ।

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಅನ್ನಾರ್ಥವಾಗಿ ಮಳೆಯನ್ನು ಸುರಿಸಲು ನೀವು ಮೇಘವನ್ನು ಪ್ರೇರಿಸುತ್ತ ಯಾವಾಗ ನಿಮ್ಮ ಜಿಂಕೆಗಳನ್ನು ರಥಕ್ಕೆ ಕಟ್ಟುತ್ತೀರೋ ಆಗ ಕಾಂತಿಯುತನಾದ ಸೂರ್ಯನ ಹತ್ತಿರದಿಂದ ಧಾರಾರೂಪವಾಗ ಮಳೆಯು ಬೀಳುತ್ತವೆ. ಆ ವೃಷ್ಟಿಧಾರೆಯು ಸಣ್ಣ ಚರ್ಮವನ್ನು ಕೊಂಚಸೀರಿನಿಂದ ಶ್ರಮವಿಲ್ಲದೇ ನೆನೆಸುವಂತೆ ಸಕಲ ಭೂಪ್ರದೇಶವನ್ನೂ ಒದ್ದೆಯಾಗುವಂತೆ ಮಾಡುತ್ತದೆ

English Translation

O Maruts, when for the sake of providing food, you have yoked the spotted deer to your chariots the drops (of water) fall from the radian (Sun) and drench the earth with waters like a hide.

ವಿಶೇಷವಿಷಯಗಳು

ಪೃಷತೀಃ—ಬಿಳಿಚುಕ್ಕೆಗಳುಳ್ಳ ಜಿಂಕೆಗಳು. ಇವು ಮರುದ್ದೇವತೆಗಳ ವಾಹನಗಳು. spotted deer or antelopes ಈ ಶಬ್ದದ ಅರ್ಥವಿವರಣೆಯನ್ನು ಹಿಂದಿನ ಋಕ್ಕಿನಲ್ಲಿ ಕೊಟ್ಟಿರುತ್ತೆ.

ವಾಜೇ—**ಅನ್ನೇ ನಿಮಿತ್ತಭೂತೇ** । ಅನ್ನ ಅಥವಾ ಆಹಾರಪ್ರಾಪ್ತಿಗಾಗಿ ಮಳೆ ಹುಯ್ಯುವಂತೆ ಮಾಡುವುದಕ್ಕೆ

ಅದ್ರಿಂ—**ಮೇಘಂ** । ಅದ್ರಿಃ ಗ್ರಾವಾ ಮೊದಲಾದ ಮೂವತ್ತು ಮೇಘನಾಮಗಳ ಮಧ್ಯದಲ್ಲಿ ಅದ್ರಿ ಶಬ್ದವು ಪಠಿತವಾಗಿರುವುದರಿಂದ ಅದ್ರಿಂ ಎಂದರೆ ಮೇಘವನ್ನು ಎಂದರ್ಥವು. (ನಿ. ೨-೨೨) **ಅದ್ರಿ**ಶಬ್ದಕ್ಕೆ ಮಿಂಚೆಂಬೂ (ನಿ. ೫-೪) ಪರ್ವತವೆಂದೂ (ನಿ. ೩-೪) ಬೇರೆ ಅರ್ಥಗಳಿರುವುವು.

ರಂಹಯೆಂತಃ—**ವರ್ಷಣಾರ್ಥಂ ಪ್ರೇರಯೆಂತಃ** । ಮಳೆಯನ್ನು ಹುಯ್ಯುವಂತೆ ಪ್ರೇರಿಸುವ.

ಅರುಷಸ್ಯ—ಅರೋಚಮಾನಸ್ಯ ಸೂರ್ಯಸ್ಯ ವೈದ್ಯುತಾಗ್ನೇರ್ವಾ ಸಕಾಶಾದ್ಧ್ರಷ್ವ್ಯದಕಧಾರಾ ಭವಂತೋ ವಿಷ್ಯಂತಿ । ಪ್ರಕಾಶಮಾನನಾದ ಸೂರ್ಯನ ಅಥವಾ ಮಿಂಚಿನ (ಅಗ್ನಿಯ) ಬಳಿಯಿಂದ ಮಳೆಯು ನೀರು ಹುಯ್ಯುವುದೆಂದರ್ಥವು. ಗುಡುಗು, ಮಿಂಚು, ಇವುಗಳ ಆರ್ಭಟದಿಂದ ಮಳೆಯು ಹುಯ್ಯುತ್ತಿರುವಾಗ ಗಾಳಿಯು ಜೋರಾಗಿ ಬೀಸುತ್ತಿರುವುದರಿಂದ ಇಲ್ಲಿ ಋಷಿಯು ಮರುತ್ತುಗಳು (ಗಾಳಿಯು) ವೇಗವಾಗಿ ಚಲಿಸುತ್ತಾ ಮಿಂಚಿನ ಬಳಿಯಿಂದ ಉದಕವನ್ನು ಭೂಮಿಯಮೇಲೆ ಬೀಳುವಂತೆ ಸೋಳೆಗಳನ್ನು ಪ್ರೇರಿಸುವವು ಎಂದು ನಿರ್ಣಯಮಾಡಿರುವನು.

ಮರುದ್ದೇವತೆಗಳು ಎಲ್ಲೆಲ್ಲಿ ಸಂಚಾರಮಾಡಿ ಸ್ಪರ್ಶಿಯನ್ನು ಸುರಿಯುವಂತೆ ನೂಡುತ್ತಾರೋ ಅಲ್ಲೆಲ್ಲಾ ಅಗ್ನಿ (ವಿದ್ಯುತ್) ಉತ್ಪತ್ತಿಯಾಗುವುದೆಂದು ಪ್ರಸಿದ್ಧವು. ಈ ವಿಷಯವು ಅನೇಕ ಋಕ್ಕುಗಳಲ್ಲಿ ಉಕ್ತವಾಗಿರುವುದು-

ಅಧ ಕ್ಷರಂತಿ ಸಿಂಧವೋ ನ ಸೃಷ್ಟಾಃ ಪ್ರ ನೀಚೀರಗ್ನೇ ಅರುಷೀರಜಾನನ್
(ಋ. ಸಂ. ೧-೬೭-೧೦)

ಈಶಾನಕೃತೋ ಧುನಯೋ ರಿಶಾದಸೋ ವಾತಾನ್ ವಿದ್ಯುತಸ್ತವಿಷೀಭಿರಕ್ರತ ।
ದುಹಂತ್ಯೂಧರ್ದಿವ್ಯಾನಿ ಧೂತಯೋ ಭೂಮಿಂ ಪಿನ್ವಂತಿ ಪಯಸಾ ಪರಿಜ್ರಯಃ ॥
(ಋ. ಸಂ. ೧-೬೪-೫)

ಅಗ್ನಿಭ್ರಾಜಸೋ ವಿದ್ಯುತೋ ಗಭಸ್ತ್ಯೋಃ ಶಿಪ್ರಾಃ ಶೀರ್ಷಸು ವಿತತಾ ಹಿರಣ್ಯಯಾಃ ।
(ಋ. ಸಂ. ೫.೫೪-೧೧)

ಇತ್ಯಾದಿ ಅನೇಕಋಕ್ಕುಗಳಲ್ಲಿ ಈ ವಿಷಯವು ಸ್ಪಷ್ಟವಾಗಿ ಸಮರ್ಥಿಸಲ್ಪಟ್ಟಿರುವುದು.

ಸ್ಯಂತಿ—ಸೋ ಅಂತಕರ್ಮಣಿ । ವಿಷ್ಯಂತಿ ವಿಮುಂಚಂತಿ । ಸುರಿಸುವವು, ಮಳೆಯನ್ನು ಮುಯ್ಯುವವು

ಚರ್ಮಇವ ಉದಭಿಃ—ಚರ್ಮವು, ಉದಕದಿಂದ ಹೇಗೆ ನೆನೆಯಿಸಲ್ಪಡುವುದೋ ಹಾಗೆ.

ಉಂದಂತಿ ಭೂಮ—ಭೂಮಿಯನ್ನು ನೆನೆಯಿಸುವವು.

ವ್ಯಾಕರಣಪ್ರಕ್ರಿಯಾ

ಅಯುಗ್ಧ್ವಮ್—ಪ್ರಕ್ರಿಯಾ ಹಿಂದಿನ ಮಂತ್ರವಲ್ಲಿ ಉಕ್ತವಾಗಿದೆ. ಇಲ್ಲಿಯೂ ಯೋಜ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ.

ಮರುತಃ—ಆಮಂತ್ರಿತಸ್ಯ ಚ ಎಂಬುದರಿಂದ ನಿಘಾತಸ್ವರ ಬರುತ್ತದೆ.

ರಂಹಯಂತಃ—ರಹಿ ಗತೌ ಧಾತು. **ಇದಿತೋನುಮ್ಧಾತೋಃ** ಎಂಬುದರಿಂದ ನುನಾಗವು ಪ್ರೇರಣಾ ತೋರುವುದರಿಂದ ಣಿಜಂತದ ಮೇಲೆ ಲಡರ್ಥದಲ್ಲಿ ಶತೃಪ್ರತ್ಯಯ. ಶಪ್‌ವಿಕರಣ. ಇದನ್ನು ನಿಮಿತ್ತೀ ಕರಿಸಿ ಣಿಚಿಗೆ ಗುಣ ಅಯಾದೇಶ. ರಹಯತ್ ಶಬ್ದವಾಗುತ್ತದೆ. ಣಿಚ್‌ಸ್ವರದಿಂದ ಹೆಕಾರೋತ್ತರ ಅಕಾರವು ಉದಾತ್ತವಾಗುತ್ತದೆ. ಪ್ರಥಮಾಬಹುವಚನದಲ್ಲಿ ಉಗಿತ್ತಾದುದರಿಂದ ನುನಾಗವು ಬರುತ್ತದೆ.

ವಿಶ್ಯಂತಿ—ಪೋ ಅಂತಕರ್ಮಣಿ ಧಾತು. ದಿವಾದಿ. **ಧಾತ್ವಾದೇಃ ಷಃ ಸಃ** ಎಂಬುದರಿಂದ ಸತ್ವ ಲಟ್‌ಪ್ರಥಮಪುರುಷ ಬಹುವಚನದಲ್ಲಿ ಅಂತಾದೇಶ. **ದಿವಾದಿಭ್ಯಃ ಶ್ಯನ್** ಎಂಬುದರಿಂದ ಶ್ಯನ್ ವಿಕರಣ ಇದು ಪರವಾದಾಗ **ಓತಃ ಶ್ಯನಿ** (ಪಾ. ಸೂ. ೭-೩-೭೧) ಎಂಬುದರಿಂದ ಧಾತುವಿನ ಓಕಾರಕ್ಕೆ ಲೋಪ. **ಅತೋಗುಣೇ** ಸೂತ್ರದಿಂದ ಪರರೂಪ. ಸ್ಯಂತಿ ಎಂದು ರೂಪವಾಗುತ್ತದೆ ವಿಉಪಸರ್ಗ ಸಂಬಂಧ ಬಂದಾಗ **ಉಪಸರ್ಗಾತ್‌ಸು-ನೋತಿ**—(ಪಾ. ಸೂ. ೮-೩-೬೫) ಎಂಬುದರಿಂದ ಧಾತುಸಕಾರಕ್ಕೆ ಷತ್ವ. ತಿಙಂತನಿಘಾತಸ್ವರ ಬರುತ್ತದೆ.

ಉದಭಿಃ—ಉದಕ+ಭಿಸ್ ಎಂದಿರುವಾಗ **ಪದ್ದನ್ನೋಮಾಸ್‌ಹೃತ್**—(ಪಾ.ಸೂ. ೬-೧-೬೩) ಎಂಬುದರಿಂದ ಪ್ರಕೃತಿಗೆ ಉದನ್ ಎಂಬ ಆದೇಶ ಬರುತ್ತದೆ. ಪದಸಂಜ್ಞಾ ಇರುವುದರಿಂದ **ನಲೋಪಃ ಪ್ರಾತಿಪದಿಕಾಂತಸ್ಯ** ಎಂಬುದರಿಂದ ನಲೋಪ ಬರುತ್ತದೆ. ಅದು ಅಸಿದ್ಧವಾದುದರಿಂದ ಏತ್ವಾದಿಗಳು ಬರುವುದಿಲ್ಲ.

ವ್ಯುಂದಂತಿ—ಉಂದೀ ಕ್ಲೇದನೇ ಧಾತು. ಪ್ರಥಮಪುರುಷಬಹುವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

ಭೂಮ—ಭೂಮಿ+ಅಮ್ ಎಂದಿರುವಾಗ **ಸುಪಾಂ ಸುಲುಕ್** ಸೂತ್ರದಿಂದ ಅಮಿಗೆ ಡಾದೇಶ ಬರುತ್ತದೆ ಡಿತ್ವಸಾಮರ್ಥ್ಯದಿಂದ ಪ್ರಕೃತಿಯ ಟಿಗೆ (ಇ) ಲೋಪ ಬರುತ್ತದೆ ಭಾಂನಸವಾಗಿ ಹ್ರಸ್ವ ಬರುತ್ತದೆ ॥ ೫ ॥

ಸಂಹಿತಾ. ಸ್ವ ೫೫

ಆ ವೋ ವಹಂತ್ವರುಣಾಸೋ ರಘುಷ್ಯದೋ ರಘುಪತ್ವಾನ್ತಃ
ಪ್ರ ಜಿಗಾತ ಬಾಹುಭಿಃ ।
ಸೀದತಾ ಬರ್ಹಿರುರು ವಃ ಸದಸ್ಕೃತಂ ಮಾದಯಧ್ವಂ ಮರುತೋ ಮಧ್ವೋ ಅಂಧಸಃ ॥ ೬ ॥

॥ ಪದಪಾಠಃ ॥

ಆ । ವಃ । ವಹಂತು । ಸಪ್ತಯಃ । ರಘುಷ್ಯದಃ । ರಘುಷ್ಯದಃ । ರಘುಪತ್ವಾನಃ । ಪ್ರ ।
ಜಿಗಾತ । ಬಾಹುಭಿಃ ।
ಸೀದತ । ಆ । ಬರ್ಹಿಃ । ಉರು । ವಃ । ಸದಃ । ಕೃತಂ । ಮಾದಯಧ್ವಂ । ಮರುತಃ । ಮಧ್ವಃ । ಅಂಧಸಃ ॥ ೬ ॥

॥ ಸಂಹಿತಾಪಾಠಃ ॥

ತೃತೀಯಸವನ ಆ ವೋ ವಹಂತ್ವಿತಿ ಪೋತುಃ ಪ್ರಸ್ಥಿತಯಾಜ್ಯಾ । ಸೂತ್ರಿತಂ ಚ । ಆ ವೋ ವಹಂತು ಸಪ್ತಯೋ ರಘುಷ್ಯದೋಽಮೇವ ನಃ ಸುಹವಾ ಆ ಹಿ ಗಂತನ । ಆ ೫-೫ । ಇತಿ ॥

ಹೇ ಮರುತೋ ವೋ ಯುಷ್ಮಾನ್ ಸಪ್ತಯಃ ಸರ್ಪಣಶೀಲಾ ಅತ್ಯಾ ಆ ವಹಂತು । ಅಸ್ಮದ್ಯಜ್ಞಂ ಪ್ರಾಪಯಂತು । ಕೀದೃಶಾಃ ಸಪ್ತಯಃ । ರಘುಷ್ಯದೋ ಲಘು ಶೀಘ್ರಂ ಸ್ಯಂದಮಾನಾಃ । ವೇಗೇನ ಗಚ್ಛಂತ ಇತ್ಯರ್ಥಃ । ರಘುಪತ್ವಾನೋ ಲಘು ಶೀಘ್ರಂ ಪತಂತೋ ಗಚ್ಛಂತೋ ಯೂಯಂ ಬಾಹುಭಿಃ ಸ್ವಕೀಯೈರ್ಹಸ್ತೈರಸ್ಮಭ್ಯಂ ದಾತವ್ಯಂ ಧನಮಾಹೃತ್ಯ ಪ್ರ ಜಿಗಾತ । ಪ್ರಕರ್ಷೇಣ ಗಚ್ಛತ । ಹೇ ಮರುತೋ ವೋ ಯುಷ್ಮಾಕಂ ಸದಃ ಸದನಂ ವೇದಿಲಕ್ಷಣಂ ಸ್ಥಾನಮುರು ವಿಸ್ತೀರ್ಣಂ ಕೃತಂ । ತತ್ರ ಯದಾಸ್ತೀರ್ಣಂ ಬರ್ಹಿಸ್ತದಾ ಸೀದತ । ತಸ್ಮಿನ್ಬರ್ಹಿಷ್ಯುಪವಿಶತ । ಉಪವಿಶ್ಯ ಚ ಮಧ್ವೋ ಮಧುರಸ್ಯಾಂಧಸಃ ಸೋಮಲಕ್ಷಣಸ್ಯಾನ್ನಸ್ಯ ಪಾನೇನ ಮಾದಯಧ್ವಂ । ತೃಪ್ತಾ ಭವತ ॥ ರಘುಷ್ಯದಃ । ರಘು ಸ್ಯಂದಂತ ಇತಿ ರಘುಷ್ಯದಃ । ಸ್ಯಂದೂ ಪ್ರಸ್ರವಣೇ । ಕ್ವಿಪ್ತ್ವೇತಿ ಕ್ವಿಪ್ । ಅನಿದಿತಾಮಿತಿ ನಲೋಪಃ । ಕೃದುತ್ತರಪದಪ್ರಕೃತಿಸ್ವರತ್ವಂ । ರಘುಪತ್ವಾನಃ । ಪತ್ಲೃ ಗತೌ । ಆನ್ಯೇಭ್ಯೋಽಪಿ ದೃಶ್ಯಂತ ಇತಿ ವನಿಪ್ । ಜಿಗಾತ । ಗಾ ಸ್ತುತೌ । ಜುಹೋತ್ಯಾದಿಕಃ । ಜಿಗಾತೀತಿ ಗತಿಕರ್ಮಸು ಪಾಠಾದತ್ರ ಗತ್ಯರ್ಥಃ । ಲೋಣ್ಮಧ್ಯಮಬಹುವಚನಸ್ಯ ತಪ್ತನಪ್ತನಥನಾಶ್ಚೇತಿ ತಬಾದೇಶಃ । ತಸ್ಯ ಪಿತ್ತ್ವೇನ ಜುತ್ವಾಭಾವಾದೀ ಹಲ್ಯಶೋರಿತೀತ್ವಾಭಾವಃ । ಸದಃ । ಆತಃ ಕೃಕಮಿತಾಮಿತಿ । ಪಾ. ೮-೩-೪೬ । ವಿಜಸರ್ತನೀಯಸ್ಯ ಸತ್ವಂ । ಮಾದಯಧ್ವಂ ಮದ ತೃಪ್ತಿಯೋಗೇ । ಚುರಾದಿರಾತ್ಮನೇಪದೀ ॥

ಪ್ರತಿಪದಾರ್ಥ

ವಃ—(ಎಲ್ಲೆ ಮರುತ್ತುಗಳೇ) ನಿಮ್ಮನ್ನು । **ರಘುಷ್ಯದಃ**— ಸುಲಭವಾಗಿ ಸರಿಯುಹೋಗತಕ್ಕವೂ । **ರಘುಪತ್ವಾನಃ**—ವೇಗವಾಗಿ ನೆಗೆಯತಕ್ಕವೂ ಆದ । **ಸಪ್ತಯಃ**—ಕುದುರೆಗಳು । **ಆ ವಹಂತು**—(ನಮ್ಮ ಯಜ್ಞ ಭೂಮಿಗೆ) ಕರೆತರಲಿ. । (ನೀವು) **ಬಾಹುಭಿಃ**—ನಿಮ್ಮ ಕೈಗಳಿಂದ (ನನಗೆ ಅನುಗ್ರಹಿಸಬೇಕಾದ ಧನವನ್ನು

ತುಂಬಿಕೊಂಡು) । **ಪ್ರಜಿಗಾತ**—ಒಡನೆ ಬನ್ನಿರಿ. । **ಮರುತಃ**—ಎಲೈ ಮರುತ್ತುಗಳೇ, । **ವಃ**—ನಿಮಗೆ । **ಸದಃ**—ವೇದಿರೂಪವಾದ ಸ್ಥಾನವು । **ಉರು**—ವಿಸ್ತಾರವಾಗಿ । **ಕೃತಂ**—ಮಾಡಿ (ಸಿದ್ಧವಾಗಿ)ದೆ. । **ಬರ್ಹಿಃ**—ದರ್ಭಾಸನದ ಮೇಲೆ । **ಆ ಸೀದತ**—ಕುಳಿತುಕೊಳ್ಳಿ. । **ಮಧ್ವಃ**—ಮಧುರವಾದ । **ಅಂಧಸಃ**—(ಸೋಮರಸ ರೂಪವಾದ) ಅನ್ನದ (ಪಾನದಿಂದ) । **ಮಾದಯಧ್ವಂ**—ಸಂತೃಪ್ತಿಯನ್ನು ಪಡೆಯಿರಿ. ।

ಭಾವಾರ್ಥ

ಎಲೈ ಮರುತ್ತುಗಳೇ, ಸುಲಭವಾಗಿ ಸರಿದುಹೋಗತಕ್ಕವೂ ವೇಗವಾಗಿ ನಿಗೆಯತಕ್ಕವೂ ಆದ ಕುದುರೆಗಳು ನಿಮ್ಮನ್ನು ನಮ್ಮ ಯಜ್ಞಭೂಮಿಗೆ ಕರೆತರಲಿ. ನಿಮ್ಮ ಕೈಗಳ ತುಂಬ ನಮಗೆ ಅನುಗ್ರಹಿಸಬೇಕಾದ ಧನವನ್ನು ತುಂಬಿಕೊಂಡು ಒಡನೆಯೇ ಬನ್ನಿರಿ. ನಿಮಗೆ ವೇದಿರೂಪವಾದ ಸ್ಥಾನವು ವಿಸ್ತಾರವಾಗಿ ಸಿದ್ಧಮಾಡಿದೆ. ಬಂದು ದರ್ಭಾಸನದ ಮೇಲೆ ಕುಳಿತುಕೊಂಡು ಮಧುರವಾದ ಸೋಮರಸಪಾನದಿಂದ ಸಂತೃಪ್ತಿಯನ್ನು ಪಡೆಯಿರಿ.

English Translation

Let your swift-going horses bear you hither, and moving swiftly come with your hands (filled with good things); sit, Maruts upon the broad seat made of clipped sacred grass and be delighted with the sweet sacrificial food.

ವಿಶೇಷವಿಷಯಗಳು

ತೃತೀಯಸವನದಲ್ಲಿ ಪ್ರೌಢೃವೆಂಬ ಋತ್ವಿಜನು ಆ ವೋ ಸಹಂತು ಎಂಬ ಈ ಋಕ್ಕನ್ನು ಯಾಜ್ಯಾನುಮಂತ್ರಣಾರ್ಥವಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ ಆ ವೋ ವಹಂತು ಸಪ್ತಯೋ ರಘುಷ್ಯದೋ ಮೇವ ನಃ ಸುಹವಾ ಆ ಜಿ ಗಂತನ ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೫-೫)

ಸಪ್ತಯಃ— **ಸರ್ಪಣಶೀಲಾ ಅಶ್ವಾಃ** । ವೇಗವಾಗಿ ಚಲಿಸುವ ಕುದುರೆಗಳು. ಇಲ್ಲಿ ಮರುದ್ದೇವತೆಗಳ ವಾಹನವಾದ ಪೃಷತೀ ಎಂಬ ಜಿಂಕೆಗಳೆಂದು ತಿಳಿಯಬೇಕು.

ರಘುಷ್ಯದಃ—ರಘು ಎಂದರೆ ಲಘು. ವರ್ಣವ್ಯತ್ಯಯದಿಂದ ಲಕಾರಕ್ಕೆ ರಕಾರದ ಪ್ರಯೋಗವಿರುವುದು. **ಲಘು ಶೀಘ್ರಂ ಸ್ಯಂದಮಾನಾಃ ವೇಗೇನ ಗಚ್ಛಂತ ಇತ್ಯರ್ಥಃ** । ವೇಗವಾಗಿ ಚಲಿಸುವ (ಕುದುರೆಗಳು)

ರಘುಪತ್ವಾನಃ—ಈ ಶಬ್ದಕ್ಕೂ ರಘುಷ್ಯದಃ ಎಂಬ ಶಬ್ದದ ಅರ್ಥವೇ ಇರುವುದು. ಆದರೆ ಈ ಶಬ್ದವು ಮರುದ್ದೇವತೆಗಳನ್ನು ಸೂಚಿಸುವುದು. ಲಘು ಶೀಘ್ರಂ ಪತಂತೋ ಗಚ್ಛಂತೋ ಯೂಯಂ । ವೇಗವಾಗಿ ಸಂಚರಿಸತಕ್ಕ ಮರುದ್ದೇವತೆಗಳಾದ ನೀವು ಎಂದರ್ಥವು.

ಜಿಗಾತ—**ಗಾ ಸ್ತುತೌ** । **ಜೌಹೋತ್ಯಾದಿಕಃ** । **ಜಿಗಾತೀತಿ ಗತಿಕರ್ಮಸು ಪಾಠಾದತ್ರ ಗತ್ಯರ್ಥಃ** । ಬನ್ನಿ ಅಥವಾ ಹೋಗಿ ಎಂದರ್ಥವು.

ಉರು—ವಿಸ್ತಾರವಾದ, ದೊಡ್ಡದಾದ.

ಮಧ್ವಃ—ಸಿಹಿಯಾದ, ರುಚಿಕರವಾದ.

ಅಂಧಸಃ—**ಸೋಮಲಕ್ಷಣಸ್ಯಾನ್ನಸ್ಯ** । ಸೋಮಪಾನರೂಪವಾದ ಹವಿಸ್ಸಿನ ಅಥವಾ ಹವಿರ್ಲಕ್ಷಣೋ ಸೇತವಾದ ಅನ್ನದ

" ವ್ಯಾಕರಣಪ್ರಕ್ರಿಯಾ "

ವಹಂತು—ವಹ ವ್ರಾಪಣೇ ಧಾತು. ಲೋಟ್ ಪ್ರಥಮಪುರುಷ ಬಹುವಚನದಲ್ಲಿ **ಏರುಃ** ಎಂಬುದರಿಂದ ಉತ್ತ ಂತಾದೇಶ. ತಿಜಂತನಿಘಾತಸ್ವರ ಬರುತ್ತದೆ.

ರಘುಷ್ಯದಃ—ರಘು ಸ್ಯಂದಂತೇ ಇತಿ ರಘುಷ್ಯನಃ ಸ್ಯಂದೂ ಪ್ರಸ್ರವಣೇ ಧಾತು. **ಕ್ವಿಪ್ ಚ** (ಪಾ. ಸೂ ೩-೨ ೭೬) ಎಂಬುದರಿಂದ ಕ್ವಿಪ್. ಕೆತ್ತಾದುದರಿಂದ **ಅನಿದಿತಾಂ ಹಲಃ** ಸೂತ್ರದಿಂದ ಉಪಧಾನಕಾರಲೋಪ. ಕಾಪಿಲಕಾದಿಯಲ್ಲಿ ಸೇರಿರುವುದರಿಂದ ರಘು ಎಂಬಲ್ಲಿ ಲತ್ವವಿಕಲ್ಪ. **ರಘುಷ್ಯದ್** ಶಬ್ದವಾಗುತ್ತದೆ. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ. ಪ್ರಥಮಾಬಹುವಚನಾಂತರೂಪ

ರಘುಪತ್ವಾನಃ—ರಘು ಪತಂತಃ ರಘುಪತ್ವಾನಃ ಪತ್ಲೃ ಗತೌ ಧಾತು **ಅನ್ಯೇಭ್ಯೋಽಪಿ ದೃಶ್ಯಂತೇ** (ಪಾ. ಸೂ. ೩-೨-೭೫) ಎಂಬುದರಿಂದ ವನಿಪ್ ಪ್ರತ್ಯಯ. ರಘುಪತ್ವನ್ ಶಬ್ದವಾಗುತ್ತದೆ. ವನಿಪ್ ಪಿತ್ತಾದುದರಿಂದ ಧಾತುಸ್ವರ ಉಳಿಯುತ್ತದೆ. ಸಮಾಸದಲ್ಲಿ ಹಿಂದಿನಂತೆಯೇ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ಜಸ್‌ಪರ ನಾದಾಗ **ಸರ್ವನಾಮಸ್ಥಾನೇ ಚಾಸಂಬುದ್ಧೌ** ಎಂಬುದರಿಂದ ಉಪಧಾದೀರ್ಘ ಬರುತ್ತದೆ.

ಜಿಗಾತ—ಗಾ ಸ್ತುತೌ ಧಾತು. ಜುಹೋತ್ಯಾದಿ. **ಜಿಗಾತಿ** (ಸಿರು. ೨-೧೪-೧೧೩) ಎಂದು ಗತಿಕರ್ಮಕ ಧಾತುಗಳ ಮಧ್ಯದಲ್ಲಿ ಪಠಿತವಾದುದರಿಂದ ಇಲ್ಲಿ ಗತ್ಯರ್ಥದಲ್ಲಿ ಬರುತ್ತದೆ. ಲೋಟ್ ಮಧ್ಯಮಪುರುಷಬಹುವಚನಕ್ಕೆ **ತಪ್ತನಪ್ತನಥನಾಶ್ಚ** (ಪಾ. ಸೂ. ೭-೧ ೪೫) ಎಂಬುದರಿಂದ ತಬಾದೇಶ. ಆದು ಪಿತ್ತಾದುದರಿಂದ ಜಿತ್ವಾತಿದೇಶ ಒರುವುದಿಲ್ಲ. ಆದುದರಿಂದ **ಶ್ಲೌ** ಎಂಬುದರಿಂದ ದ್ವಿತ್ವಾದಿಕಾರ್ಯಗಳು ಬಂದಾಗ **ಈ ಹಲ್ಯಘೋಃ** (ಪಾ. ಸೂ. ೬-೪-೧೧೩) ಎಂಬುದರಿಂದ ಆಕಾರಕ್ಕೆ ಈತ್ವ ಬರುವುದಿಲ್ಲ. **ಬಹುಲಂ ಛಂದಸಿ** (ಪಾ ಸೂ. ೭-೪-೭೮) ಎಂಬುದರಿಂದ ಅಭ್ಯಾಸಕ್ಕೆ ಇತ್ವ ಬರುತ್ತದೆ. ತಿಜಂತನಿಘಾತಸ್ವರ ಬರುತ್ತದೆ.

ಸೀದತ—ಷದ್ಲೃ ವಿಶರಣಗತ್ಯವಸಾದನೇಷು ಧಾತು. ಲೋಣ್ಮಧ್ಯಮಪುರುಷ ಬಹುವಚನದಲ್ಲಿ ಲಘು ದ್ಭಾವವಿರುವುದರಿಂದ **ತಸ್ಥಸ್**—ಸೂತ್ರದಿಂದ ತಾದೇಶ. **ಪಾಘ್ರಾಧ್ಮಾ**— ಎಂಬುದರಿಂದ ಧಾತುವಿಗೆ ಸೀದಾದೇಶ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ **ಸ್ಯತ್ಯಯವು ತಾಸ್ಯನುದಾತ್ತೇತ್** ಸೂತ್ರದಿಂದ ಅನುದಾತ್ತ ವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

ಸದಃ—ಸದಃ+ಕೃತಮ್ ಎಂದಿರುವಾಗ ಕೃಞ್ ಧಾತು ಸರದಲ್ಲಿರುವುದರಿಂದ **ಅತಃಕೃಕಮಿ**—(ಪಾ ಸೂ ೮-೩-೪೬) ಎಂಬುದರಿಂದ ವಿಸರ್ಗಕ್ಕೆ ಸತ್ವ ಬರುತ್ತದೆ.

ಮಾದಯಧ್ವಮ್—ಮದ ತೃಪ್ತಿಯೋಗೇ ಧಾತು. ಚುರಾದಿ ಆತ್ಮನೇಪದೀ. **ಸತ್ಯಾಪಪಾಶ**-ಸೂತ್ರದಿಂದ ಸ್ವಾರ್ಥದಲ್ಲಿ ಣಿಚ್. **ಅತ ಉಪಧಾಯಾಃ** ಎಂಬುದರಿಂದ ಧಾತುವಿನ ಉಪಧೆಗೆ ದೀರ್ಘ. ಲೋಟ್ ಮಧ್ಯಮಪುರುಷಬಹುವಚನದಲ್ಲಿ ಧ್ವಮ್ ಪ್ರತ್ಯಯ. ಶಪ್‌ವಿಕರಣ. ತನ್ನಿಮಿತ್ತವಾಗಿ ಣಿಚಿಗೆ ಗುಣ. ಅಯಾದೇಶ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಣಿಚ್‌ಸ್ವರದಿಂದ ಧಕಾರೋತ್ತರಾಕಾರ ಉದಾತ್ತನಾಗುತ್ತದೆ ॥ ೬ ॥

॥ ಸಂಹಿತಾಪಾಠಃ ।

ತೇ೫ವರ್ಧಂತ ಸ್ವತವಸೋ ಮಹಿತ್ವನಾ ನಾಕಂ ತಸ್ಥುರುರು
ಚಕ್ರಿರೇ ಸದಃ।
ವಿಷ್ಣುರ್ಯದ್ಧಾವದ್ವೃಷಣಂ ಮದಚ್ಯುತಂ ವಯೋ ನ ಸೀದನ್ನ-
ಧಿ ಬರ್ಹಿಷಿ ಪ್ರಿಯೇ ॥ ೭ ॥

॥ ಪದಪಾಠಃ ॥

ತೇ । ಅವರ್ಧಂತ । ಸ್ವ೫ತವಸಃ । ಮಹಿ೫ತ್ವನಾ । ಆ । ನಾಕಂ । ತಸ್ಥುಃ । ಉರು । ಚಕ್ರಿರೇ । ಸದಃ ।
ವಿಷ್ಣುಃ । ಯತ್ । ಹ । ಆವತ್ । ವೃಷಣಂ । ಮದ೫ಚ್ಯುತಂ । ವಯಃ । ನ ।
ಸೀದನ್ । ಅಧಿ । ಬರ್ಹಿಷಿ । ಪ್ರಿಯೇ ॥ ೭ ॥

ಸಾಯಣಭಾಷ್ಯಂ

ತೇ ಮರುತೋ೨ವರ್ಧಂತ । ವೃದ್ಧಿಂ ಗತಾಃ । ಕೀದೃಶಾಃ । ಸ್ವತವಸಃ ಸ್ವಾಶ್ರಯಬಲಾಃ । ನಾನ್ಯಸ್ಯ ಕಸ್ಯಚಿದ್ಬಲಮಪೇಕ್ಷಂತೇ । ವೃದ್ಧಿಂ ಪ್ರಾಪ್ಯ ಚ ಮಹಿಮ್ನಾ ಮಹಿಮ್ನಾ ಮಹತ್ತ್ವೇನ ನಾಕಂ ಸ್ವರ್ಗಮಾತಸ್ಥುಃ ಆಸ್ಥಿತವಂತಃ । ಸದಃ ಸದನಂ ನಭೋಲಕ್ಷಣಂ ಸ್ಥಾನಂ ಚ ಸ್ವಕೀಯನಿವಾಸಾಯೋರು ವಿಸ್ತೀರ್ಣಂ ಚಕ್ರಿರೇ । ಯದ್ಯೇಭ್ಯೋ ಮರುದ್ಭ್ಯೋ ಯದರ್ಥಂ ವೃಷಣಂ ಕಾಮಾಭಿವರ್ಷಕಂ ಮದಚ್ಯುತಂ ಮದಸ್ಯ ಹರ್ಷಸ್ಯಾಸೇಕ್ತಾರಂ ಯಜ್ಞಂ ವಿಷ್ಣುರ್ಹಾವತ್ ವಿಷ್ಣುರೇವಾಗತ್ಯ ರಕ್ಷತಿ ತೇ ಮರುತೋ ವಯೋ ನ ಪಕ್ಷಿಣೋ ಯಥಾ ಶೀಘ್ರಮಾಗಚ್ಛಂತಿ ಏವಂ ಶೀಘ್ರಮಾಗತ್ಯ ಬರ್ಹಿಷ್ಯಧ್ಯಸ್ಮದೀಯೇ ಯಜ್ಞೇ ಪ್ರಿಯೇ ಪ್ರೀತಿಕರೇ ಸೀದನ್ । ಸೀದಂತು । ಉಪವಿಶಂತು ॥ ತೇ೨ವರ್ಧಂತ । ಸ್ವರಿತೋ ವಾನುದಾತ್ತೇ ಪದಾದೌ । ಪಾ. ೮-೪-೬ । ಇತ್ಯೇಕಾದೇಶಸ್ಯ ಸ್ವರಿತತ್ವಂ । ಮಹಿತ್ವನಾ । ಭಾವಪ್ರತ್ಯಯಾದುತ್ತರಸ್ಯಾಜ್ಞೋ ವ್ಯತ್ಯಯೇನ ನಾಭಾವ ಉದಾತ್ತತ್ವಂ ಚ । ಯದ್ವಾ । ಸುಪಾಂ ಸುಲುಗಿತ್ಯಾಜಾದೇಶೋ ನಕಾರೋಪಜನಶ್ಚ । ತಸ್ಥುಃ । ನಾಕಮಾತಸ್ಥುಶ್ಚ ಸದಶ್ಚ ವಿಸ್ತೀರ್ಣಂ ಚಕ್ರಿರ ಇತಿ ಚಾರ್ಥಪ್ರತೀತೇಶ್ಚಾದಿಲೋಪೇ ವಿಭಾಷೇತಿ ಪ್ರಥಮಾಯಾಸ್ತಿಜ್‌ವಿಭಕ್ತೇರ್ನಿಷ್ಧಾತಪ್ರತಿಷೇಧಃ । ಯತ್ । ಸುಪಾಂ ಸುಲುಗಿತಿ ಚತುರ್ಥ್ಯಾ ಲುಕ್ । ಆವತ್ । ಛಾಂದಸೋ ವರ್ತಮಾನೇ ಲಙ್ । ವೃಷಣಂ । ವಾ ಷಪೂರ್ವಸ್ಯ ನಿಗಮ ಇತ್ಯನುಷಧಾದೀರ್ಘಾಭಾವಃ । ಮದಚ್ಯುತಂ । ಮದಂ ಚ್ಯೋತತೀತಿ ಮದಚ್ಯುತ್ । ಚ್ಯುತಿರ್ ಆಸೇಚನೇ । ಕ್ವಿಪ್ಪ್ರತ್ಯಯಃ । ಸೀದನ್ । ಲಿಙರ್ಥೇ ಲೇಟ್ಯಡಾಗಮಃ ॥

ಪ್ರತಿಪದಾರ್ಥ

ತೇ—ಆ ಮರುತ್ತುಗಳು । **ಸ್ವತವಸಃ**—(ಇತರ ಆಶ್ರಯವಿಲ್ಲದೇ) ತಮ್ಮದೇ ಬಲವುಳ್ಳವರಾಗಿ (ತಮ್ಮ ಸ್ವಬಲದ ಆಶ್ರಯದಿಂದಲೇ) । **ಅವರ್ಧಂತ**—ವೃದ್ಧಿಯನ್ನು ಹೊಂದಿದರು । **ಮಹಿತ್ವನಾ**—(ತಮ್ಮ) ಮಹಿಮೆಯಿಂದ । **ನಾಕಂ**—ಸ್ವರ್ಗವನ್ನು । **ಆ ತಸ್ಥುಃ**—ಸೇರಿದರು । **ಸದಃ**—(ಅಂತರಿಕ್ಷರೂಪವಾದ) ತಮ್ಮ ವಾಸಸ್ಥಾನವನ್ನು । **ಉರು**—ವಿಸ್ತಾರವಾಗಿ । **ಚಕ್ರಿರೇ**—ಮಾಡಿಕೊಂಡರು । **ಯತ್**—ಯಾವ ಮರುತ್ತುಗಳಿಗೋಸ್ಕರ । **ವೃಷಣಂ**—(ಇಷ್ಟಾರ್ಥಗಳನ್ನು) ಸುರಿಸತಕ್ಕದ್ದೂ । **ಮದಚ್ಯುತಂ**—ಹರ್ಷದಾಯಕವಾದದ್ದೂ ಆದ ಯಜ್ಞವನ್ನು । **ವಿಷ್ಣುಃ**—ವಿಷ್ಣುವು । **ಹ ಆವತ್**—ಗಮನವಿಟ್ಟು ಕಾಪಾಡುತ್ತಾನೋ (ಆ ಮರುತ್ತುಗಳು) । **ವಯೋ ನ**—ಪಕ್ಷಿಗಳಂತೆ ವೇಗವಾಗಿ (ಬಂದು) । **ಪ್ರಿಯೇ**—ಪ್ರಿಯವಾದದ್ದೂ । **ಬರ್ಹಿಷಿ ಅಭಿ**—ಶ್ರೇಷ್ಠವಾದದ್ದೂ ಆದ ದರ್ಭಾಸನದಮೇಲೆ । **ಸೀದನ್**—ಕುಳಿತುಕೊಳ್ಳಲಿ ॥

ಭಾವಾರ್ಥ

ಆ ಮರುತ್ತುಗಳು ಇತರ ಆಶ್ರಯವಿಲ್ಲದೇ ತಮ್ಮ ಸ್ವಬಲದ ಆಶ್ರಯದಿಂದಲೇ ವೃದ್ಧಿಯನ್ನು ಹೊಂದಿದರು. ತಮ್ಮದೇ ಆದ ಮಹಿಮೆಯಿಂದ ಸ್ವರ್ಗವನ್ನು ಸೇರಿ ತಮ್ಮ ವಾಸಸ್ಥಾನವನ್ನು ವಿಸ್ತಾರಪಡಿಸಿಕೊಂಡರು. ವಿಷ್ಣುವು, ಇಷ್ಟಾರ್ಥಪ್ರದವಾದದ್ದೂ ಹರ್ಷದಾಯಕವಾದದ್ದೂ ಆದ ಯಜ್ಞವನ್ನು ಯಾವ ಮರುತ್ತುಗಳಿಗಾಗಿ ಗಮನವಿಟ್ಟು ಕಾಪಾಡುತ್ತಾನೋ ಆ ಮರುತ್ತುಗಳು ಪಕ್ಷಿಗಳಂತೆ ವೇಗವಾಗಿ ಬಂದು ಪ್ರಿಯವಾದದ್ದೂ, ಶ್ರೇಷ್ಠವಾದದ್ದೂ ಆದ ದರ್ಭಾಸನದಮೇಲೆ ಕುಳಿತುಕೊಳ್ಳಲಿ.

English Translation

Having confidance in their own strength they have increased in power; they have attained heaven by their greatness, and have made for themselves a spacious dwelling; may they (Maruts) for whom 'Vishnu' gave his aid in the sacrifice that bestows all desires and confers delight, come quickly like birds, and sit down upon their beloved Kusa grass.

॥ ವಿಶೇಷವಿಷಯಗಳು ॥

ಸ್ವತವಸಃ— ಓಜಃ ಪಾಜಃ ಮೊದಲಾದ ಇಪ್ಪತ್ತೆಂಟು ಬಲನಾಮಗಳ ಮಧ್ಯದಲ್ಲಿ ತವಃ ಎಂಬ ಶಬ್ದವು ಪಠಿತವಾಗಿರುವುದರಿಂದ ತವಸ್ ಎಂದರೆ ಬಲವು. **ಸ್ವತವಸಃ** ಎಂದರೆ— **ಸ್ವಾಶ್ರಯಬಲಾಃ ನಾನ್ಯಸ್ಯ ಕಸ್ಯಚಿದ್ಬಲಮಪೇಕ್ಷಂತೇ** । ಇನ್ನೊಬ್ಬರ ಸಹಾಯವನ್ನಪೇಕ್ಷಿಸದೆ ತನ್ನ ಶಕ್ತಿಸಾಮರ್ಥ್ಯಗಳಲ್ಲಿಯೇ ದೃಢವಾದ ನಂಬಿಕೆಯುಳ್ಳವರು ಎಂದರ್ಥವು.

ವಿಷ್ಣುಃ ಯೆತ್ ಹ ಆವತ್ ಋಷಣಂ ಮದಚ್ಯುತಂ— ಇಷ್ಟಾರ್ಥಗಳನ್ನು ಕೊಡುವುದೂ, ಸಂತೋಷವನ್ನುಂಟುಮಾಡುವುದೂ ಆದ ಮಾನವ ಯಜ್ಞವೆಲ್ಲಿ ವಿಷ್ಣುವು ಬಂದು ಅದನ್ನು ರಕ್ಷಿಸಿದನೋ ಅಂತಹ ಯಜ್ಞವೆಲ್ಲಿ ಎಂದರ್ಥವು ಈ ವಿಷಯದಲ್ಲಿ ಒಂದು ಉಪಾಖ್ಯಾನವಿರುವುದು—

ಯದಾ ವಿಷ್ಣುನಾ ಸಹ ಮರುತ ಇಂದ್ರಸ್ಯ ವೃತ್ರಹನನೇ ಸಾಹಾಯ್ಯಂ ಚಕ್ರುಸ್ತತಃ ಪ್ರೃತೇ ಮಹತ್ತ್ವಮಾಪುಃ ಸ್ವಬಲವಂತಶ್ಚ ಬಭೂವುಃ ಶ್ರೇಷ್ಠಾ ದೇವಾಶ್ಚ ಭೂತ್ವಾ ಸ್ವರ್ಗಮಧಿಷ್ಠಿತವಂತಃ । ತತಃ ಪ್ರಭೃತಿ ಚ ಯೆಜಮಾನಾಸ್ತೇಷಾಮರ್ಥೇ ಯಜ್ಞಂ ಕುರ್ವಂತಿ ತೇ ಚ ಯಜಮಾನಾನಾಂ ಯಜ್ಞಂ ಪೆಕ್ಷವಚ್ಛೇಷ್ಯಮಾಗತ್ಯ ಬರ್ಹಿಷಿ ನಿಷೀದಂತೀತಿ ॥

ಮರುದ್ದೇವತೆಗಳು ವಿಷ್ಣುವಿನೊಡನೆ ಬಂದು ವೃತ್ರಸಂಹಾರಕಾರ್ಯದಲ್ಲಿ ಇಂದ್ರನಿಗೆ ಸಹಾಯಮಾಡಿದರು. ಆಗಿನಿಂದ ಈ ಮರುದ್ದೇವತೆಗಳ ಮಹಿಮೆಯು ಹೆಚ್ಚಾಯಿತು. ಇವರ ಬಲವೂ ಅಭಿವೃದ್ಧಿಗೊಂಡು ದೇವತೆಗಳಲ್ಲಿ ಶ್ರೇಷ್ಠರೆನಿಸಿ ಸ್ವರ್ಗದಲ್ಲಿ ತಮ್ಮ ವಾಸಸ್ಥಾನವನ್ನು ಮಾಡಿಕೊಂಡರು ಇದರಿಂದ ಯಜ್ಞಮಾಡತಕ್ಕ ಯಜಮಾನರು ಈ ಮರುದ್ದೇವತೆಗಳ ಪ್ರೀತ್ಯರ್ಥವಾಗಿ ಯಜ್ಞಗಳನ್ನು ಮಾಡುವರು. ಈ ದೇವತೆಗಳೂ ಯಜಮಾನರನ್ನು ಅನುಗ್ರಹಿಸುವುದಕ್ಕಾಗಿ ಅವರು ಮಾಡುವ ಯಜ್ಞಾದಿಗಳಲ್ಲಿ ಸಿದ್ಧಪಡಿಸಿರುವ ಗರ್ಭಾಸನದಮೇಲೆ ಪಕ್ಷಿಗಳಂತೆ ಜೇಗನೆ ಬಂದು ಕುಳಿತುಕೊಳ್ಳುವರು ಎಂದು. ಇಲ್ಲಿ ಮರುದ್ದೇವತೆಗಳು ಇಂದ್ರನ ಸ್ನೇಹಿತರು. **ಮರುದ್ಭಿರಿಂದ್ರಸಖ್ಯಂ ತೇ ಅಸ್ತು** ಮೊದಲಾದ ವಾಕ್ಯಗಳು ಈ ವಿಷಯವನ್ನು ಸಮರ್ಥಿಸುವವು. ವಿಷ್ಣುವು ಇಂತಹ ಮರುದ್ದೇವತೆಗಳ ಮಿತ್ರನಾದ ಇಂದ್ರನಿಗೆ ಸಹಾಯಮಾಡಿದನೆಂದು—

ಸಖೇ ವಿಷ್ಣೋ ವಿತರಂ ವಿಕ್ರಮಸ್ವ ದ್ಯೌರ್ದೇಹಿ ಲೋಕಂ ವಜ್ರಾಯ ವಿಷ್ಕಭೇ ।
ಹನಾವ ವೃತ್ರಂ ರಿಣಚಾವ ಸಿಂಧೂನಿಂದ್ರಸ್ಯ ಯಂತು ಪ್ರಸವೇ ವಿಸೃಷ್ಟಾಃ ॥

(ಋ. ಸಂ. ೮-೧೦೦-೧೩)

ದಿವೋ ನ ತುಭ್ಯಮಸ್ತಿಂದ್ರ ಸತ್ರಾಸುರ್ಯಂ ದೇವೇಭಿರ್ಧಾಯಿ ವಿಶ್ವಂ ।
ಅಹಿಂ ಯದ್ಧೃತ್ರಮಪೋ ವವ್ರಿವಾಂಸಂ ಹನ್ನೃಜೀಷಿನ್ ವಿಷ್ಣುನಾ ಸಚಾನಃ ॥
(ಋ. ಸಂ. ೬-೨೦-೨)
ತಮಸ್ಯ ವಿಷ್ಣುರ್ಮಹಿಮಾನಮೋಜಸಾಂಶುಂ ದಧನ್ವಾನ್ಮಧುನೋ ವಿ ರಪ್ಶತೇ ।
ದೇವೇಭಿರಿಂದ್ರೋ ಮಘವಾ ಸಯಾವಭಿರ್ವೃತ್ರಂ ಜಘನ್ವಾ ಅಭವದ್ವರೇಣ್ಯಃ ॥
(ಋ. ಸಂ. ೧೦-೧೧೩-೨)

ಇತ್ಯಾದಿ ಋಕ್ಕುಗಳಲ್ಲಿ ವಿಷ್ಣುವು ಇಂದ್ರನಿಗೆ ಸಹಾಯನಾಡಿರುವ ವಿಷಯವು ಪ್ರಸ್ತಾಪಿಸಲ್ಪಟ್ಟಿದೆ. ಇದಲ್ಲದೆ ಋ. ಸಂ. ೮-೨೬-೮ ; ೮-೮೫-೭ ; ೧೦೯೨-೧೧ ; ೯-೩೩-೩ ; ೯-೩೪-೨ ; ೯-೫೬-೪ ; ೯-೬೪೩ ; ೯-೬೫-೨೦ ; ೬-೩೭-೯ ; ೮-೧೨-೧೬ ; ೫-೮೭-೧ ; ೫-೮೭-೮ ಎಂಬ ಋಕ್ಕುಗಳಲ್ಲಿ ವಿಷ್ಣುವು ಮರುದ್ದೇವತೆಗಳು ಅಥವಾ ಇತರ ದೇವತೆಗಳೊಡನೆ ಸೋಮಪಾನಾರ್ಥವಾಗಿ ಪ್ರಾರ್ಥಿಸಲ್ಪಟ್ಟಿರುವನು.

ವಿಷ್ಣುಃ—ವಿಷ್ಣುವಿನ ವಿಷಯವಾಗಿ ನಾವು ಹಿಂದೆಯೇ ಬರೆದಿದ್ದೇವೆ. ಋ. ಸಂ. ಭಾಗ ೩. 119, 124, 125. ನೇ ಪೇಜುಗಳನ್ನು ನೋಡಿ. ಈ ಋಕ್ಕಿನಲ್ಲಿರುವ ವಿಷ್ಣುಶಬ್ದಕ್ಕೆ ಸ್ವಂದಸ್ವಾಮಿಯು ಯಜ್ಞ ವೆಂದು ಅರ್ಥವಿವರಣೆ ಮಾಡಿರುನರು. ವಿಷ್ಣುರ್ವೈ ಯಜ್ಞಃ ಎಂದು ಶ್ರುತಿವಾಕ್ಯವಿರುವುದು.

ವಯೋ ನ—ಪಕ್ಷಿಯಂತೆ ಎಂದರೆ ಪಕ್ಷಿಯು ವೇಗನೆ ಹಾರಿಬರುವಂತೆ ಶೀಘ್ರವಾಗಿ ಬರಬೇಕೆಂದು ಋಷಿಯು ಪ್ರಾರ್ಥಿಸಿರುವನು

ಬರ್ಹಿಷಿ ಪ್ರಿಯೇ— ಯಜ್ಞವನ್ನು ದೇವತೆಗಳನ್ನು ಆಹ್ವಾನನಮಾಡಿ ಅವರು ಬಂದು ಕುಳಿತುಕೊಳ್ಳುವು ದಕ್ಕಾಗಿ ಒಂದೆಡೆಯಲ್ಲಿ ಅಗ್ರಭಾಗವನ್ನು ಕತ್ತರಿಸಿದ ಕುಶವೆಂಬ ದರ್ಭೆಗಳನ್ನು ಪದರಪದರವಾಗಿ ಮೆತ್ತಗಿರು ವಂತೆ ಹಾಸಿ ಆಸನಾರ್ಥವಾಗಿ ಸಿದ್ಧಪಡಿಸುನರು. ಈ ದರ್ಭಾಸನದ ಮೇಲೆ ದೇವತೆಗಳು ಬಂದು ಕುಳಿತು ಕೊಳ್ಳಬೇಕೆಂದು ಋಷಿಗಳು ಅನೇಕ ಋಕ್ಕುಗಳಲ್ಲಿ ಸ್ತೋತ್ರಮಾಡಿರುನರು. ಇಲ್ಲಿ ಪ್ರಿಯೇ ಎಂಬ ಶಬ್ದವು ಇಂತಹ ದರ್ಭಾಸನವು ದೇವತೆಗಳಿಗೆ ಪ್ರೀತಿಪಾತ್ರವಾದುದೆಂದು ತಿಳಿಸುವುದು

ವ್ಯಾಕರಣಪ್ರಕ್ರಿಯಾ

ತೇ ವರ್ಧಂತ—ತೇ+ಅವರ್ಧಂತ ಎಂದಿರುವಾಗ **ಏಜಿಃ ಪದಾಂತಾದತಿ** ಎಂಬುದರಿಂದ ಪೂರ್ವರೂಪ ಏಕಾದೇಶವಾಗಿ ಬರುತ್ತದೆ. ಆಗ **ಸ್ವರಿತೋ ವಾನುದಾತ್ತೇ ಪದಾದೌ** (ಪಾ. ಸೂ. ೮-೪-೬) ಪದಾದಿಯಲ್ಲಿರುವ ಅನುದಾತ್ತವು ಉದಾತ್ತದೊಡನೆ ಏಕಾದೇಶವಾದಾಗ ಸ್ವರಿತವು ವಿಕಲ್ಪವಾಗಿ ಆಗುತ್ತದೆ ಎಂಬುದರಿಂದ ಇಲ್ಲಿ ಉದಾತ್ತದೊಡನೆ ಏಕಾದೇಶ ಬಂದುದರಿಂದ ಸ್ವರಿತವಾಗುತ್ತದೆ ವೃಧು ವೃದ್ಧೌ ಧಾತು ಲಙ್ ಪ್ರಥಮಪುರುಷ ಬಹುವಚನಾಂತರೂಪ.

ಸ್ವತವಸಃ—ಸ್ವಕೀಯಂ ತವಃ ಯೇಷಾಂ ತೇ ಸ್ವತವಸಃ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

ಮಹಿತ್ವನಾ — ಭಾವಾರ್ಥದಲ್ಲಿ ತ್ವ ಪ್ರತ್ಯಯ. ಭಾವಪ್ರತ್ಯಯದ ಮುಂದಿರುವ ಅಜ್‌ನ ಆಕಾರಕ್ಕೆ ವ್ಯತ್ಯಯದಿಂದ ನಾಭಾವ ಬರುತ್ತದೆ. ಉದಾತ್ತಸ್ವರವೂ ವ್ಯತ್ಯಯದಿಂದಲೇ ಬರುತ್ತದೆ. ಅಥವಾ **ಸುಪಾಂ ಸುಲುಕ್** ಎಂಬುದರಿಂದ ವಿಭಕ್ತಿಗೆ ಆಜಾದೇಶ. ನಕಾರಾಗಮ. ಮಹಿತ್ವನಾ ಎಂಬುದು **ಚಿತಃ** ಎಂಬುದರಿಂದ ಅಂತೋದಾತ್ತವಾಗುತ್ತದೆ.

ತಸ್ಥುಃ—ಷ್ಠಾ ಗತಿನಿವೃತ್ತ್ಯೌ ಧಾತು. ಲಿಟ್ ಪ್ರಥಮಪುರುಷ ಬಹುವಚನದಲ್ಲಿ **ಪರಸ್ಮೈಪದಾನಾಂ**-ಸೂತ್ರದಿಂದ ಉಸಾದೇಶ. ದ್ವಿತ್ವ ಬಂದಾಗ **ಶರ್ಪೂರ್ವಾಃ ಖಯಃ** ಎಂಬುದರಿಂದ ಅಭ್ಯಾಸದಲ್ಲಿ ಥಕಾರ ಉಳಿದಾಗ ಅದಕ್ಕೆ **ಅಭ್ಯಾಸೇ ಚರ್ಚ** ಎಂಬುದರಿಂದ ತಕಾರಾದೇಶ. **ಅತೋಲೋಪಃ ಇಟಿ ಚ** ಎಂಬುದರಿಂದ ಆಕಾರಲೋಪ. ಇಲ್ಲಿ ನಾಕಮಾತಸ್ಥುಶ್ಚ ಸದಶ್ಚ ವಿಸ್ತೀರ್ಣಂ ಚಕ್ರಿರೇ ಎಂದು ಅನ್ವಯವಿರುವುದರಿಂದ ಚಾರ್ಥತೋರುವುದರಿಂದ **ಚಾದಿಲೋಪೇ ವಿಭಾಷಾ** (ಪಾ. ಸೂ. ೮-೧-೬೩) ಎಂಬುದರಿಂದ ಮೊದಲು ಇರುವ ತಿಙ್‌ವಿಭಕ್ತಿಗೆ ನಿಘಾತಪ್ರತಿಷೇಧ ಬರುತ್ತದೆ. ಆಗ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಯೆತ್—ಚತುರ್ಥೀಬಹುವಚನ ಪರವಾದಾಗ **ಸುಪಾಂ ಸುಲುಕ್** ಸೂತ್ರದಿಂದ ಅದಕ್ಕೆ ಲುಕ್.

ಅವತ್—ವರ್ತಮಾನಾರ್ಥದಲ್ಲಿ ಅವ ರಕ್ಷಣೇ. ಈ ಧಾತುವಿಗೆ **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲಙ್ ಪ್ರಥಮಪುರುಷಏಕವಚನದ ತಿಪಿಗೆ **ಇತಶ್ಚ** ಎಂಬುದರಿಂದ ಅಂತ್ಯಲೋಪ. **ಅಡಜಾದೀನಾಂ** ಎಂಬುದರಿಂದ ಆಡಾಗಮ **ಆಟಶ್ಚ** ಸೂತ್ರದಿಂದ ವೃದ್ಧಿ. ಹೆ ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಆಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ

ವೃಷಣಮ್—ವೃಷನ್ ಎಂಬುದು ಕಸಿನ್‌ಪ್ರತ್ಯಯಾಂತವಾಗಿ ಆದ್ಯುದಾತ್ತ ನಾಂತಶಬ್ದ. ದ್ವಿತೀಯಾ ಏಕವಚನಪರವಾದಾಗ **ನಾ ಷಪೂರ್ವಸ್ಯನಿಗಮೆ** (ಪಾ. ಸೂ. ೬-೪-೯) ಎಂಬುದರಿಂದ ಸಂಹಿತಾವನ್ನಲ್ಲಿ ಉಪಧಾದೀರ್ಘ ಬರುವುದಿಲ್ಲ. **ಆಟ್‌ಕುಪ್ವಾಙ್** ಸೂತ್ರದಿಂದ ನಕಾರಕ್ಕೆ ಣತ್ವ

ಮದಚ್ಯುತಮ್—ಮದಂ ಚ್ಯೋತತಿ ಇತಿ ಮದಚ್ಯುತ್. ಚ್ಯುತಿರ್ ಆಸೇಚನೇ ಧಾತು **ಕ್ವಿಪ್ ಚ** ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ ದ್ವಿತೀಯಾಏಕವಚನಾಂತರೂಪ

ಸೀದನ್—ಷದ್‌ಲೃ ವಿಶರಣಗತ್ಯವಸಾದನೇಷು ಧಾತು. ಲೇಟ್ ಪ್ರಥಮಪುರುಷ ಬಹುವಚನದಲ್ಲಿ **ಸಾಹ್ವಾಧ್ಯಾ**—ಸೂತ್ರದಿಂದ ಧಾತುವಿಗೆ ಸೀದಾದೇಶ ಬರುತ್ತದೆ. **ಇತಶ್ಚ ಲೋಪಃ ಪರಸ್ಮೈಪದೇಷು**—ಎಂಬುದರಿಂದ ಪ್ರತ್ಯಯದ ಇಕಾರಕ್ಕೆ ಲೋಪ. ತಿಙಂತನಿಘಾತಸ್ವರ ಬರುತ್ತದೆ. ॥ ೬ ॥

ಸಂಹಿತಾಪಾಠಃ

ಶೂರಾ ಇವೇದ್ಯುಯುಧಯೋ ನ ಜಗ್ಮಯಃ ಶ್ರವಸ್ಯವೋ ನ
ಪೃತನಾಸು ಯೇತಿರೇ ।
ಭಯಂತೇ ವಿಶ್ವಾ ಭುವನಾ ಮರುದ್ಭ್ಯೋ ರಾಜಾನ ಇವ ತ್ವೇಷ-
ಸಂದೃಶೋ ನರಃ ॥ ೮ ॥

ಪದಪಾಠಃ

ಶೂರಾಃ । ಇವ । ಇತ್ । ಯುಯುಧಯಃ । ನ । ಜಗ್ಮಯಃ । ಶ್ರವಸ್ಯವಃ । ನ ।
ಪೃತನಾಸು । ಯೇತಿರೇ ।
ಭಯಂತೇ । ವಿಶ್ವಾ । ಭುವನಾ । ಮರುತ್ । ಭ್ಯಃ । ರಾಜಾನಃ । ಇವ । ತ್ವೇಷ-
ಸಂದೃಶಃ । ನರಃ ॥ ೮ ॥

ಸಾಯಣಭಾಷ್ಯಂ

ಇದಿತ್ಯೇತತ್ಸಮುಚ್ಚಯೇ । ಶೂರಾ ಇವೇತ್ ಶೌರ್ಯೇಪೇತಾ ಯುಯುಧ್ವಸಃ ಪುರುಷಾ ಇವ ಚ ಯುಯುಧಯಃ ಶತ್ರುಭಿರ್ಯುಧ್ಯಮಾನಾಃ ಪುರುಷಾ ಇವ ಚ ಜಗ್ಮಯಃ ಶೀಘ್ರಂ ಗಚ್ಛಂತೋ ಮರುತಃ ಶ್ರವಸ್ಯವೋ ನ ಶ್ರವೋಽನ್ನಮಾತ್ಮನ ಇಚ್ಛಂತಃ ಪುರುಷಾ ಇವ ಪೃತನಾಸು ಸಂಗ್ರಾಮೇಷು ಯೇತಿರೇ । ಪ್ರಯತಂತೇ । ಪುತ್ರಾದಿಭಿರ್ಯುದ್ಧೇ ವ್ಯಾಪ್ರಿಯಂತೇ । ತಾದೃಶೇಭ್ಯೋ ಮರುದ್ಭ್ಯೋ ವಿಶ್ವಾ ಭುವನಾ ಸರ್ವಾಣಿ ಭೂತಜಾತಾನಿ ಭಯಂತೇ । ಬಿಭ್ಯತಿ । ಯೇ ನರೋ ವೃಷ್ಟ್ಯಾದೇರ್ನೇತಾರೋ ಮರುತೋ ರಾಜಾನ ಇವ ರಾಜಮಾನಾ ನೃಪತಯ ಇವ ತ್ವೇಷಸಂದೃಶೋ ದೀಪ್ತಸಂದರ್ಶನಾ ಉಗ್ರ-ರೂಪತಯಾ ದ್ರಷ್ಟುಮಶಕ್ಯಾ ಭವಂತಿ । ತೇಭ್ಯ ಇತ್ಯರ್ಥಃ ॥ ಯುಯುಧಯಃ । ಯುಧ ಸಂಪ್ರಹಾರೇ । ಅದ್ಯಗಮಹನಜನ ಇತ್ಯತ್ರೋತ್ಸರ್ಗಶ್ಛಂದಸಿ । ಪಾ. ೩-೨-೧೩೧-೨ । ಇತಿ ವಚನಾತ್ಕ್ತಿನ್ಪ್ರತ್ಯಯಃ । ಲಿಡ್ವದ್ಭಾವಾದ್ದ್ವಿರ್ಭಾವಾದಿ । ಕಿತ್ತ್ವಾದ್ಗುಣಾಭಾವಃ । ನಿತ್ತ್ವಾದಾದ್ಯುದಾತ್ತತ್ವಂ । ಜಗ್ಮಯಃ । ತೇನೈವ ಸೂತ್ರೇಣ ಕಿನ್ಪ್ರತ್ಯಯಃ । ಗಮಹನೇತ್ಯಾದಿನೋಪಧಾಲೋಪಃ । ಸ್ಥಾನಿವದ್ಭಾವಾದ್ದ್ವಿರ್ಭಾವಾದಿ । ಶ್ರವಸ್ಯವಃ । ಶ್ರವ ಇಚ್ಛತಿ ಶ್ರವಸ್ಯತಿ । ಕ್ಯಾಚ್ಛಂದಸೀತ್ಯುಪ್ರತ್ಯಯಃ । ಯೇತಿರೇ । ಯತೀ ಪ್ರಯತ್ನೇ । ಛಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಲಿಟ್ । ಭಯಂತೇ । ಞಿಭೀ ಭಯೇ । ಬಹುಲಂ ಛಂದಸೀತಿ

ಶಪಃ ಶ್ಲೋರಭಾವಃ । ತ್ವೇಷಸಂದೃಶಃ । ತ್ವಿಷ ದೀಪ್ತೌ । ಪಚಾದ್ಯಚ್ । ದೃಶಿರ್ ಪ್ರೇಕ್ಷಣೇ । ಸಂಪೂರ್ವಾದಸ್ಮಾತ್ಸಂಪದಾದಿಲಕ್ಷಣೋ ಭಾವೇ ಕ್ವಿಪ್ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ಶೂರಾ ಇವೇತ್—ವೀರರಂತೆಯೂ । **ಯುಯುಧಯೇ ನ**—ಯೋಧರಂತೆಯೂ ಇರುವ ಮರುತ್ತುಗಳು । **ಶ್ರವಸ್ಯವೋ ನ** — ಅನ್ನವನ್ನು ಅಪೇಕ್ಷಿಸುವ ಜನರಂತೆ । **ಜಗ್ಮಯೇ**—ವೇಗವಾದ ಗಮನವುಳ್ಳವರಾಗಿ । **ಪೃತನಾಸು**—ಯುದ್ಧಗಳಲ್ಲಿ । **ಯೇತಿರೇ** — ಉದ್ಯುಕ್ತರಾಗುತ್ತಾರೆ । **ನರಃ** — ವೃಷ್ಟ್ಯಾದಿಗಳಿಗೆ ಮಾರ್ಗದರ್ಶಕರಾಗಿಯೂ । **ರಾಜಾನ ಇವ**—ಪ್ರಕಾಶಮಾನರಾದ ದೊರೆಗಳಂತೆ । **ತ್ವೇಷಸಂದೃಶಃ** — ಉಗ್ರವಾದ ತೇಜಸ್ಸುಳ್ಳವರಾಗಿಯೂ (ಇರುವ ಯಾವ ಮರುತ್ತುಗಳುಂಟೋ) । **ಮರುದ್ಭ್ಯಃ**—(ಅಂತಹ) ಮರುತ್ತುಗಳಿಗೆ (ಗಳಿಂದ) । **ವಿಶ್ವಾ ಭುವನಾ**—ಪ್ರಸಂಚದ ಸಕಲ ಪ್ರಾಣಿಗಳೂ । **ಭಯಂತೇ**—ಭಯಪಡುತ್ತವೆ

॥ ಭಾವಾರ್ಥ ॥

ವೀರರಂತೆಯೂ ಯೋಧರಂತೆಯೂ ಇರುವ ಮರುತ್ತುಗಳು ಅನ್ನವೇಕ್ಷಿಗಳಾದ ಜನರಂತೆ ವೇಗವಾದ ಗಮನವುಳ್ಳವರಾಗಿ ಯುದ್ಧಗಳಲ್ಲಿ ಉದ್ಯುಕ್ತರಾಗುತ್ತಾರೆ ವೃಷ್ಟ್ಯಾದಿಗಳಿಗೆ ಮಾರ್ಗದರ್ಶಕರಾಗಿಯೂ, ಪ್ರಕಾಶಮಾನರಾದ ದೊರೆಗಳಂತೆ ಇತರರಿಗೆ ಭೀತಿಯನ್ನುಂಟುಮಾಡುವ ಉಗ್ರವಾದ ತೇಜಸ್ಸುಳ್ಳವರಾಗಿಯೂ ಇರುವ ಮರುತ್ತುಗಳಿಗೆ ಪ್ರಸಂಚದ ಸಕಲ ಪ್ರಾಣಿಗಳೂ ಭಯಪಟ್ಟು ನಡಗುತ್ತವೆ.

English Translation

Like heroes, like warriors, like men eager for food, the swift-moving (Maruts) have engaged in battles ; all beings fear the Maruts who are the leaders (of the rain) and who are of awful appearance like kings.

ವಿಶೇಷವಿಷಯಗಳು.

ಯುಯುಧಯೇ—**ಯುಧ ಸಂಪ್ರಹಾರೇ । ಯುಯೌತ್ಸವಃ ಪುರುಷಾಃ ।** ಯುದ್ಧಾಪೇಕ್ಷಿಗಳಾದ ಪುರುಷರು, ಯುದ್ಧಭಟರು, ಸೈನಿಕರು, warriors, combatants etc ,

ಶ್ರವಸ್ಯವಃ—ಶ್ರವಃ ಎಂದರೆ ಅನ್ನವು (ನಿ. ೧೦-೩) **ಶ್ರವ ಇಚ್ಛತಿ ಶ್ರವಸ್ಯತಿ ।** ಅನ್ನವನ್ನು ಅಪೇಕ್ಷಿಸುವ.

ಪೃತನಾಸು—**ಸಂಗ್ರಾಮೇಷು ।** ರಥಾಃ ವಿವಾಕ್ ಮೊದಲಾದ ನಲವತ್ತಾರು ಸಂಗ್ರಾಮನಾಮಗಳ ಮಧ್ಯದಲ್ಲಿ ಪೃತನಾಃ ಎಂಬ ಶಬ್ದವು ಪಠಿತವಾಗಿರುವುದರಿಂದ ಪೃತನಾಸು ಎಂದರೆ ಯುದ್ಧಗಳಲ್ಲಿ ಎಂದರ್ಥವು. ಈ ಶಬ್ದವು ಯಾವಾಗಲೂ ಬಹುವಚನದಲ್ಲಿಯೇ ಉಪಯೋಗಿಸಲ್ಪಡುವುದು.

ರಾಜಾನ ಇವ—ರಾಜರನ್ನು ಕಂಡರೆ ಜನರು ಭಯಪಡುವಂತೆ

ತ್ವೇಷಸಂದೃಶಃ— **ತ್ವಿಷ ದೀಪ್ತೌ । ದೀಪ್ತಸಂದರ್ಶನಾ ಉಗ್ರರೂಪತಯಾ ದ್ರಷ್ಟುಮಶಕ್ಯಾ ಭವಂತಿ ।** ಪ್ರಕಾಶಮಾನರೆಂದು ಎಂದರೆ ಕ್ರೂರವಾದ ರೂಪವುಳ್ಳವರಾದುದರಿಂದ ನೋಡುವುದಕ್ಕೆ ಭಯಂಕರವಾಗಿ

ಕಾಣಿಸುತ್ತಿರುವರು. ಮರುದ್ದೇವತೆಗಳು ಬಹಳ ರಭಸದಿಂದ **ಚಲಿಸುವಾಗ** (ಬೀಸುವಾಗ) ಉಗ್ರರೂಪವುಳ್ಳವರಾದ್ದರಿಂದ ಜನರು ಇವರನ್ನು **ನೋಡಿ ಭಯಪಡುವರೆಂದಭಿಪ್ರಾಯವು.**

ನರಃ—ವೃಷ್ಟ್ಯಾದೇರ್ನೇತಾರಃ । ಮಳೆ ಹುಯ್ಯುವಕಾರ್ಯಗಳಲ್ಲಿ ಅಗ್ರಗಣ್ಯರಾದವರು ಎಂದರೆ ಮರುದ್ದೇವತೆಗಳ ಸಹಾಯವಿಲ್ಲದೆ ಮಳೆಯು ಹುಯ್ಯುವುದು ಅಸಂಭವವು.

॥ ಸ್ಕಾಕರಣಸ್ಯಕ್ರಿಯಾ ॥

ಯುಯುಧಯೇಃ—ಯುಧ ಸಂಪ್ರಹಾರೆ ಧಾತು **ಆದೃಗಮಹನಜನಃ ಕಿಕಿನೌ ಲಿಟ್ ಚ**—ಎಂಬಲ್ಲಿ **ಉತ್ಸರ್ಗಶ್ಛಂದಸಿ** (ಪಾ ಸೂ. ೩-೨-೧೭೦) ಎಂಬುದರಿಂದ ಇದಕ್ಕೂ ಕಿನ್‌ಪ್ರತ್ಯಯ ಬರುತ್ತದೆ. ಆದಕ್ಕೆ ಲಿಡ್ವದ್ಭಾವ ಹೇಳಿರುವುದರಿಂದ ಧಾತುವಿಗೆ ದ್ವಿತ್ವ. ಕಿತ್ವಾದುದರಿಂದ ಆರ್ಧಧಾತುಕನಿಬಂಧನವಾಗಿ ಧಾತುವಿಗೆ ಗುಣ ಬರುವುದಿಲ್ಲ. ಯುಯುಧಿ ಶಬ್ದವಾಗುತ್ತದೆ. ನಿತ್ ಪ್ರತ್ಯಯಾಂತವಾದುದರಿಂದ **ಞ್ನಿತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತವಾಗುತ್ತದೆ ಪ್ರಥಮಬಹುವಚನದಲ್ಲಿ **ಜಸಿ ಚ** ಎಂಬುದರಿಂದ ಗುಣ. ಆಯಾದೇಶ.

ಜಗ್ಮಯಃ ಗಮ್‌ಲ್ಲ ಗತೌ ಧಾತು. ಹಿಂದಿನಸೂತ್ರದಿಂದ ಕಿನ್‌ಪ್ರತ್ಯಯ. ದ್ವಿತ್ವ. ಅಭ್ಯಾಸಕೆ ಹಲಾದಿಶೇಷ. **ಕುಹೋಶ್ಚುಃ**—ಎಂಬುದರಿಂದ ಚುತ್ವ. **ಗಮಹನಜನ** (ಪಾ. ಸೂ. ೬-೪-೯೮) ಎಂಬುದರಿಂದ ಉಪಧಾಲೋಪ. ಅಂತರಂಗವಾದುದರಿಂದ ಮೊದಲು ಉಪಧಾಲೋಪ ಬಂದಾಗ ಸ್ಥಾನಿವದ್ಭಾವದಿಂದ ದ್ವಿರ್ಭಾವಾದಿಗಳನ್ನು ಹೇಳಬೇಕು. ಜಗ್ಮಿ ಶಬ್ದವಾಗುತ್ತದೆ ಹಿಂದಿನಂತೆಯೇ ಆದ್ಯುದಾತ್ತವಾಗುತ್ತದೆ. ಪ್ರಥಮಾ ಬಹುವಚನಾಂತರೂಪ.

ಶ್ರವಸ್ಯವಃ—ಶ್ರವಃ ಆತ್ಮನಃ ಇಚ್ಛತಿ ಶ್ರವಸ್ಯತಿ. **ಸುಪ ಆತ್ಮನಃ ಕ್ಯಚ್**—ಎಂಬುದರಿಂದ ಕ್ಯಚ್ ಪ್ರತ್ಯಯ. **ಶ್ರವಸ್ಯತೀತಿ ಶ್ರವಸ್ಯುಃ ಕ್ಯಾಚ್ಛಂದಸಿ** (ಪಾ ಸೂ. ೩-೨-೧೭೦) ಎಂಬುದರಿಂದ ಕ್ಯಜಂತದ ಮೇಲೆ ಉಪ್ರತ್ಯಯ. **ಅತೋಲೋಪಃ** ಎಂಬುದರಿಂದ ಕ್ಯಚಿನ ಅಕಾರಕ್ಕೆ ಲೋಪ. ಪ್ರತ್ಯಯಸ್ವರದಿಂದ ಶ್ರವಸ್ಯು ಶಬ್ದವು ಅಂತೋದಾತ್ತವಾಗುತ್ತದೆ. ಜಸಿನಲ್ಲಿ **ಹ್ರಸ್ವಸ್ಯಗುಣಃ**—ಎಂಬುದರಿಂದ ಗುಣ. ಅವಾದೇಶ.

ಯೇತಿರೆ — ಯತೀ ಪ್ರಯತ್ನೇ ಧಾತು ವರ್ತಮಾನಾರ್ಥದಲ್ಲಿ **ಛಂದಸಿ ಲುಙ್‌ಲಙ್‌ಲಿಟಃ**—ಎಂಬುದರಿಂದ ಲಿಟ್. ಬಹುವಚನಕ್ಕೆ ಇರೇಚ್ ಆದೇಶ. ದ್ವಿತ್ವ ಬಂದಾಗ ಅಸಂಯುಕ್ತಹೆಲ್‌ಮಧ್ಯವರ್ತಿಯಲ್ಲಿ ಅಕಾರ ಇರುವುದರಿಂದ **ಅತಏನಿಗಹಲ್‌ಮಧ್ಯೇ** (ಪಾ. ಸೂ. ೬-೪-೧೨೦) ಸೂತ್ರದಿಂದ ಏತ್ವ, ಅಭ್ಯಾಸಲೋಪ ಬರುತ್ತದೆ ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತವೆ.

ಭಯಂತೇ—ಞಿಭೀ ಭಯೇ ಧಾತು. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲು ವಿಕರಣ ಬರುವುದಿಲ್ಲ. ಆಗ ಶಪ್ ಉಳಿಯುತ್ತದೆ. ಬಹುವಚನದಲ್ಲಿ ಶಪ್ ನಿಮಿತ್ತವಾಗಿ ಧಾತುವಿನ ಇಕಾರಕ್ಕೆ ಗುಣ ಅಚ್ ಪರದಲ್ಲಿರುವುದರಿಂದ ಅಯಾದೇಶ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಲಸಾರ್ವಧಾತುಕವು (ಅಂತೆ) **ತಾಸ್ಯನುದಾತ್ತೇತ್**— ಸೂತ್ರದಿಂದ ಅನುದಾತ್ತವಾಗುವುದರಿಂದ ಧಾತುಸ್ವರದಿಂದ ಆದ್ಯುದಾತ್ತವಾಗುತ್ತದೆ.

ವಿಶ್ವಾ ಭುವನಾ—ಶೇಶ್ಛಂದಸಿ ಬಹುಲಂ ಎಂಬುದರಿಂದ ನಪುಂಸಕದಲ್ಲಿ ಆದೇಶವಾಗಿ ಬಂದ ಶಿಗೆ ಲೋಪ

ತ್ವೇಷಸಂದೃಶಃ—ತ್ವಿಷ ದೀಪ್ತೌ ಧಾತು. ಪಚಾದಿಯಲ್ಲಿ ಸೇರಿರುವುದರಿಂದ **ನಂದಿಗ್ರಹಪಚಾದಿಭ್ಯ**—ಎಂಬುದರಿಂದ ಅಚ್ ಪ್ರತ್ಯಯ. ಪ್ರತ್ಯಯಪರವಾದಾಗ **ಪುಗಂತಲಘೂಪಧಸ್ಯ ಚ** ಎಂಬುದರಿಂದ ಲಘೂಪಧ ಗುಣ. ತ್ವೇಷ ಎಂದು ರೂಪವಾಗುತ್ತದೆ ದೃಶಿರ್ ಪ್ರೇಕ್ಷಣೇ ಧಾತು ಸನ್ ಉಪಸರ್ಗ ಪೂರ್ವದಲ್ಲಿರುವಾಗ **ಸಂಪದಾದಿಭ್ಯಃ ಕ್ವಿಪ್** ಎಂಬ ವಚನದಿಂದ ಭಾವಾರ್ಥದಲ್ಲಿ ಕ್ವಿಪ್. ಬಹುವ್ರೀಹಿಯಲ್ಲಿ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ. ॥ ೪ ॥

॥ ಸಂಹಿತಾಪಾಠಃ ॥

ತ್ವಷ್ಟಾ ಯದ್ವಜ್ರಂ ಸುಕೃತಂ ಹಿರಣ್ಯಯಂ ಸಹಸ್ರಭೃಷ್ಟಿಂ ಸ್ವ-
ಪಾ ಅವರ್ತಯತ್ ।
ಧತ್ತ ಇಂದ್ರೋ ನರ್ಯಪಾಂಸಿ ಕರ್ತವೇಽಹನ್ವೃತ್ರಂ ನಿರಪಾ
ಮೌಬ್ಜದರ್ಣವಂ ॥ ೯ ॥

॥ ಪದಪಾಠಃ ॥

ತ್ವಷ್ಟಾ । ಯತ್ । ವಜ್ರಂ । ಸು ಽ ಕೃತಂ । ಹಿರಣ್ಯಯಂ । ಸಹಸ್ರ ಽ ಭೃಷ್ಟಿಂ ।
ಸು ಽ ಅಪಾಃ । ಅವರ್ತಯತ್ ।
ಧತ್ತೇ । ಇಂದ್ರಃ । ನರಿ । ಅಪಾಂಸಿ । ಕರ್ತವೇ । ಅಹನ್ । ವೃತ್ರಂ । ನಿಃ । ಅ-
ಪಾಂ । ಔಬ್ಜತ್ । ಅರ್ಣವಂ ॥ ೯ ॥

सायणभाष्य

स्वसाः शोभनकर्मा त्वष्टा विश्वनिर्माता यद्वज्रमवर्तयत् इन्द्रं प्रत्यगमयत् । दत्तवानित्यर्थः । कीदृशं । सुकृतं सम्यङ्निष्पादितं हिरण्ययं सुवर्णमयं सहस्रभृष्टिमनेकाभिर्धाराभिर्युक्तं । तद्वज्रमिन्द्रो धत्ते । धारयति । किमर्थं । नरि । अत्र नृसंबन्धान्नृशब्देन संग्रामोऽभिधीयते । संग्रामे ऽपांसि शत्रुहननादिलक्षणानि कर्माणि कर्तव्ये कर्तुं । एवं वज्रं धृत्वा तेन वज्रेण वृत्रं वृष्ट्युदकस्यावरकमुर्णवमुर्णसोदकेन युक्तं मेघमहन् । अवधीत् । अपां तेन निरुद्धा आपश्च स निरौब्जत् । निःशेषेणाधोमुखमपातयत् । प्रवृष्टा अकरोदित्यर्थः ॥ सुकृतं । सुपूर्वात्कृञो तेः कर्मणि निष्ठा । गतिरनंतर इति गतेः प्रकृतिस्वरत्वं । हिरण्ययं । हिरण्यशब्दाम्तुरस्य मयटोः मकारस्य लोपः यत्वयवावास्त्वयवा स्त्वेत्याद्यौ निपात्येते । स्वसाः । सोर्मनसि अलोपोपधसी इत्युत्तरपदादाद्युदात्तत्वं । कर्तवे । तुमर्थे सेसेनिति केरोतेरस्तवेन्प्रत्ययः । अपां । क्रियाग्रहणं कर्तव्यमिति कर्मणः संप्रदानत्वाच्छतुर्थ्यर्थे षष्ठी । ऊर्णुदमिति विभक्तेरुदात्तत्वं । औब्जत् । उब्ज आर्जवे । अर्णवं । अर्णसो लोपश्च । का. ७-२-८०-३ । इति मत्वर्थीयो वः सलोपश्च ॥

पदार्थ

स्वसाः—श्रेष्ठವಾದ ಕರ್ಮಗಳುಳ್ಳ । त्वष्टा—ದೇವಶಿಲ್ಪಿಯು । सुकृतं—ಉತ್ತಮವಾದ ನಿರ್ಮಾಣವುಳ್ಳದ್ದೂ । हिरण्ययं—ಸುವರ್ಣಮಯವಾದದ್ದೂ । सहस्रभृष्टिं—ಅನೇಕ ಅಲಗುಗಳುಳ್ಳದ್ದೂ ಆದ । यं वज्रं—ಯಾವ ವಜ್ರಾಯುಧವನ್ನು । अवर्तयत्—(इन्द्रನಿಗೆ) ಕೊಟ್ಟನೋ (ಆ ವಜ್ರಾಯುಧವನ್ನು) । इन्द्रः—ಇಂದ್ರನು । नरि—ಸಂಗ್ರಾಮದಲ್ಲಿ । अपांसि—(ಶತ್ರುನಾಶವೇ ಮೊದಲಾದ) ಕೆಲಸಗಳನ್ನು । कर्तवे—ಮಾಡುವುದಕ್ಕಾಗಿ । धत्ते—ಹಿಡಿಯುತ್ತಾನೆ (ಇದರಿಂದ) । वृत्रं—ವೃಷ್ಟ್ಯುದಕಗಳನ್ನು ಆವರಿಸುವ । अर्णवं—ಉದಕದಿಂದ ಕೂಡಿರ ಮೇಘವನ್ನು । अहन्—ಸೀಳಿದನು अपां—ನೀರುಗಳನ್ನು । निः औब्जत्—ಸುಂಪೂರ್ಣವಾಗಿ ಸುರಿಸಿದನು.

ಭಾವಾರ್ಥ

ಶೋಭನಕರ್ಮಗಳುಳ್ಳ ದೇವಶಿಲ್ಪಿಯು ಉತ್ತಮವಾದ ನಿರ್ಮಾಣವುಳ್ಳದ್ದೂ, ಸುವರ್ಣಮಯವಾದದ್ದೂ ಮತ್ತು ಅನೇಕ ಅಲಗುಗಳುಳ್ಳದ್ದೂ ಆದ ಯಾವ ವಜ್ರಾಯುಧವನ್ನು ಇಂದ್ರನಿಗೆ ಕೊಟ್ಟನೋ ಆ ವಜ್ರಾಯುಧವನ್ನು ಇಂದ್ರನು ಯುದ್ಧದಲ್ಲಿ ಶತ್ರುನಾಶಾದಿಕಾರ್ಯಗಳನ್ನು ನೆರವೇರಿಸಲು ಹಿಡಿಯುತ್ತಾನೆ. ಮತ್ತು ಅದರಿಂದ ವೃಷ್ಟ್ಯುದಕಾದಿಗಳನ್ನು ಆವರಿಸುವ ಮೇಘವನ್ನು ಸೀಳಿದನು. ಧಾರಾರೂಪದಲ್ಲಿ ನೀರನ್ನು ಸುರಿಸಿದನು

English Translation

Indra weilds the well-made, golden and thousand edged thunderbolt, which the skillful Twashtri has framed for him that he may achieve great exploits in war. He has slain Vritra and sent down a flood of waters.

॥ ವಿಶೇಷವಿಷಯಗಳು ॥

ತ್ವೆಷ್ಟಾ—ದೇವಶಿಲ್ಪಿಯು. ತ್ವಷ್ಟೃವಿನ ವಿಚಾರದಲ್ಲಿ ಋ. ಸಂ. ಭಾಗ ೩. ಪೇಜು 25 ರಲ್ಲಿ ನಾವು ಬರೆದಿರುವುದನ್ನು ನೋಡಿ.

ಸಹಸ್ರಭೃಷ್ಟಿಂ—ಅನೇಕಾಭಿರ್ಧಾರಾಭಿರ್ಯುಕ್ತಂ । ಸಾವಿರಾರು ಅಲಗುಗಳಿಂದ ಕೂಡಿದ.

ಸ್ವಪಾಃ—ಶೋಭನಕರ್ಮಾ । ಒಳ್ಳೆಯ ಕೆಲಸಗಳನ್ನು ಮಾಡುವ, ಕೆಲಸಗಳಲ್ಲಿ ಕುಶಲನಾದ.

ನರಿ—ಮನುಷ್ಯರ ವಿಷಯದಲ್ಲಿ, ಎಂದರೆ ಮನುಷ್ಯರ ಅಥವಾ ಶತ್ರುಗಳ ಮೇಲೆ ಉಪಯೋಗಿಸುವ ಸಂದರ್ಭದಲ್ಲಿ : ಯುದ್ಧದಲ್ಲಿ.

ಕರ್ತ್ವೇ—ಸಾಹಸಕೃತ್ಯಗಳನ್ನು ಮಾಡುವುದಕ್ಕಾಗಿ, ಶತ್ರುಗಳೊಡನೆ ಯುದ್ಧಮಾಡುವುದಕ್ಕಾಗಿ.

ನಿಃ ಔಬ್ಜತ್—ಉಬ್ಜ ಆರ್ಜನೇ । **ನಿಶ್ಯೇಷೇಣಾಧೋಮುಖಮಪಾತಯತ್** । ಚೆನ್ನಾಗಿ ಕೆಳಕ್ಕೆ ಸುರಿಯುವಂತೆ ಮಾಡಿದನು

ವ್ಯಾಕರಣಸಕ್ರಿಯಾ

ಸುಕೃತಮ್—ಸು ಪೂರ್ವನಾಗಿರುವಾಗ, ಡುಕೃಞ್ಕರಣೇ ಧಾತು. ಇದಕ್ಕೆ ಕರ್ಮಣಿಯಲ್ಲಿ ನಿಷ್ಠಾ ಪ್ರತ್ಯಯ. **ಗತಿರನಂತರಃ** (ಪಾ ಸೂ. ೬-೨-೪೯) ಎಂಬುದರಿಂದ ಗತಿಸಂಜ್ಞೆಯುಳ್ಳ ಸುವಿಗೆ ಪ್ರಕೃತಿಸ್ವರ ಬರುತ್ತದೆ.

ಹಿರಣ್ಮಯಮ್—ಹಿರಣ್ಯಸ್ಯ ವಿಕಾರಃ ಎಂಬರ್ಥದಲ್ಲಿ ಮಯಟ್ ಪ್ರತ್ಯಯ. ಹಿರಣ್ಮ+ಮಯ ಎಂದಿರುವಾಗ **ಋತ್ಸ್ಯೃವಾಸ್ತ್ಯೃವಾಸ್ತ್ಯೃ** (ಪಾ. ೬-೪-೧೨೫) ಎಂಬುದರಿಂದ ಮಯಟಿನ ಮಕಾರಕ್ಕೆ ಲೋಪವು ನಿಪಾತಿತನಾಗಿದೆ.

ಸ್ವಪಾಃ—ಸೋರ್ಮನಸೀ ಅಲೋಪೋಪಸೀ (ಪಾ. ಸೂ. ೬-೪-೧೩೭) ಎಂಬುದರಿಂದ ಉತ್ತರ ಪದಾದ್ಯುದಾತ್ತಸ್ವರ ಬರುತ್ತದೆ.

ಆವರ್ತಯತ್—ವೃತು ವರ್ತನೇ ಧಾತು. ಣಿಜಂತದಮೇಲೆ ಲಙ್ ಪ್ರಥಮಪುರುಷಏಕವಚನದಲ್ಲಿ ಉಕ್ತರೂಪವಾಗುತ್ತದೆ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

ಧತ್ತೈ—ಡುಧಾಞ್ ಧಾರಣಪೋಷಣಯೋಃ ಧಾತು. ಜುಹೋತ್ಯಾದಿ. ಲಟ್ ಪ್ರಥಮಪುರುಷ ಏಕವಚನದರೂಪ. ಪಾದಾದಿಯಲ್ಲಿ ಬಂದುದರಿಂದ ನಿಘಾತಸ್ವರ ಬರುವುದಿಲ್ಲ ಪ್ರತ್ಯಯಸ್ವರದಿಂದ ಅಂತೋದಾತ್ತ ವಾಗುತ್ತದೆ.

ಕರ್ತವೇ—ಡುಕೃಞ್ ಕರಣೇ ಧಾತು. ತುಮರ್ಥದಲ್ಲಿ **ತುಮರ್ಥೇ ಸೇಸೇನಸೇ** (ಪಾ. ಸೂ ೩-೪-೯) ಎಂಬುದರಿಂದ ತವೇನ್ ಪ್ರತ್ಯಯ. **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಆ ಪ್ರತ್ಯಯ ನಿಮಿತ್ತ ವಾಗಿ ಧಾತುವಿನ ಇಕಿಗೆ ಗುಣ. ಕರ್ತವೇ ಎಂದು ರೂಪವಾಗುತ್ತದೆ. ನಿತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತವಾಗುತ್ತದೆ.

ಅಹನ್—ಹನ ಹಿಂಸಾಗತ್ಯೋಃ ಧಾತು. ಲಙ್ ಪ್ರಥಮಪುರುಷಏಕವಚನದಲ್ಲಿ **ಆದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಬ್ಲುಕ್ ಆದಾಗ **ಹಲ್‌ಙ್ಯಾಭ್ಯೋ**. ಸೂತ್ರದಿಂದ ಪ್ರತ್ಯಯಕ್ಕೆ ಲುಕ್ ಬಂದರೆ ಉಕ್ತರೂಪಸಿದ್ಧಿಯಾಗುತ್ತದೆ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

ಅಪಾಮ್—**ಕರ್ಮಣಾ ಯಮಭಿಪ್ರೈತಿ ಸ ಸಂಪ್ರದಾನಮ್**—ಎಂಬಲ್ಲಿ **ಕ್ರಿಯಾಗ್ರಹಣಂ ಕರ್ತವ್ಯಂ** ಎಂದು ವಚನವಿರುವುದರಿಂದ ಕರ್ಮಕ್ಕೂ ಸಂಪ್ರದಾನಸಂಜ್ಞೆ ಬರುವುದರಿಂದ ಚತುರ್ಥ್ಯರ್ಥದಲ್ಲಿ ಷಷ್ಠೀ ಬಂದಿದೆ. ಷಷ್ಠೀ ಬಹುವಚನಾಂತರೂಪ. **ಊಡಿದಂಪದಾದಿ**—(ಪಾ. ಸೂ. ೬-೧-೧೬೧) ಎಂಬುದರಿಂದ ವಿಭಕ್ತಿಗೆ ಉದಾತ್ತ ಸ್ವರ ಬರುತ್ತದೆ.

ಔಬ್ಜತ್—ಉಬ್ಜ ಆರ್ಜವೇ ಧಾತು. ಲಙ್ ಪ್ರಥಮಪುರುಷಏಕವಚನಾಂತರೂಪ. ಆತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅರ್ಣವಮ್—ಅರ್ಣಾಂಸಿ ಅಸ್ಮಿನ್ ಸಂತಿ ಇತಿ ಅರ್ಣನಃ ಮತ್ವರ್ಥದಲ್ಲಿ **ಅರ್ಣಸೋ ಲೋಪಶ್ಚ** (ಕಾ. ೫-೨-೧೦೯-೨) ಎಂಬುದರಿಂದ ವ ಪ್ರತ್ಯಯ. ತತ್ಸಂನಿಯೋಗದಿಂದ ಅರ್ಣಸಿನ ಸಕಾರಕ್ಕೆ ಲೋಪ. ಪ್ರತ್ಯಯಸ್ವರದಿಂದ ಅಂತೋದಾತ್ತ. ॥ ೯ ॥

ಸಂಹಿತಾಪಾಠಃ

ಊರ್ಧ್ವಂ ನುನುದ್ರೋ ವತಂ ತ ಓಜಸಾ ದಾದೃಹಾಣಂ ಚಿದ್ಭಿ-
ಭಿದುರ್ನಿ ಪರ್ವತಂ ।

ಧಮಂತೋ ವಾಣಂ ಮರುತಃ ಸುದಾನವೋ ಮದೇ ಸೋಮಸ್ಯ ರಣ್ಯಾನಿ ಚಕ್ರಿರೇ ॥ ೧೦ ॥

ಊರ್ಧ್ವಂ । ನುನುದ್ರೇ । ಅನತಂ । ತೇ । ಓಜಸಾ । ದದೃಹಾಣಂ । ಚಿತ್ । ಬಿಭಿದುಃ । ಗಿ । ಪರ್ವತಂ ।

ಧಮಂತಃ । ವಾಣಂ । ಮರುತಃ । ಸುದಾನವಃ । ಮದೇ । ಸೋಮಸ್ಯ । ರಣ್ಯಾನಿ । ಚಕ್ರಿರೇ ॥ ೧೦ ॥

ಸಾಯಣಭಾಷ್ಯಂ

ಅತ್ರೇಯನುಖ್ಯಾಯಿಕಾ । ಗೋತಮ ಋಷಿಃ ಪಿಪಾಸಯಾ ಪೀಡಿತಃ ಸನ್ ಮರುತ ಉದಕಂ ಯಯಾಚೇ । ತದನಂತರಂ ಮರುತೋಽಪೂರಸ್ಥಂ ಕೂಪಮುದ್ಭೃತ್ಯ ಯತ್ರ ಸ ಗೋತಮ ಋಷಿಸ್ತಿಷ್ಠತಿ ತಾಂ ದಿಶಂ ನೀತ್ವಾ ಋಷಿಸಮೀಪೇ ಕೂಪಮವಸ್ಥಾಪ್ಯ ತತ್ಪಾರ್ಶ್ವ ಆಹಾವಂ ಚ ಕೃತ್ವಾ ತಸ್ಮಿನ್ನಾಹಾವೇ ಕೂಪಮುತ್ಸಿಚ್ಯ ತಮೃಷಿಂ ತೇನೋದಕೇನ ತರ್ಪಯಾಂ ಚಕ್ರುಃ । ಅಯಮಥೋಽನಯೋತ್ತರಯಾ ಚ ಪ್ರತಿಪಾದ್ಯತೇ ॥ ತೇ ಮರುತೋಽವತಂ । ಅವಸಾಽತ್ತತೋ ಭವತೀತ್ಯವತಃ ಕೂಪಃ । ಕೂಪನಾಮಸು ಚಾವತೋಽವಟ ಇತಿ ಪಠಿತಂ । ತಮೂರ್ಧ್ವಮುಪರಿ ಯಥಾ ಭವತಿ ತಥೌಜಸಾ ಸ್ವಕೀಯೇನ ಬಲೇನ ನುನುದ್ರೇ । ಪ್ರೇರಿತವಂತಃ । ಉತ್ಪಾತಿತವಂತ ಇತ್ಯರ್ಥಃ । ಏವಂ ಕೂಪಮುತ್ಪಾಯ ಋಷೇರಾಶ್ರಮಂ ಪ್ರತಿ ನಯಂತೋ ಮರುತೋ ಮಾರ್ಗಮಧ್ಯೇ ದೃಢಹಾಣಂ ಪ್ರವೃದ್ಧಂ ಗತಿನಿರೋಧಕಂ ಪರ್ವತಂ ಚಿತ್ ಪರ್ವತಂ ಶಿಲೋಚ್ಚಯಮಪಿ ಗಿ ಬಿಭಿದುಃ । ನಿಶೇಷೇಣ ಬಭಂಜುಃ । ಸುದಾನವಃ ಸೋಭನದಾನಾಸ್ತೇ ಮರುತೋ ವಾಣಂ ಶತಸಂಖ್ಯಾಭಿಸ್ತಂತ್ರೀಭಿರ್ಯುಕ್ತಂ ವೀಣಾವಿಶೇಷಂ ಧಮಂತೋ ವಾದಯಂತಃ ಸೋಮಸ್ಯ ಮದೇ ಸೋಮಪಾನೇನ ಹರ್ಷೇ ಸತಿ ರಣ್ಯಾನಿ ಸ್ತುತ್ಯಾನಿ ರಮಣೀಯಾನಿ ಧನಾನಿ ಚಕ್ರಿರೇ । ಸ್ತೋತೃಭ್ಯಃ ಕುರ್ವಂತಿ ॥ ನುನುದ್ರೇ । ಣುದ ಪ್ರೇರಣೇ । ಲಿಟೀರಂಭೋ ರ ಇತಿ ರೇಽದೇಶಃ । ದದೃಹಾಣಂ । ದೃಹ ದೃಹಿ ವೃದ್ಧೌ । ಲಿಟಃ ಕಾನಚ್ । ಧಮಂತಃ । ಧ್ಮಾ ಶಬ್ದಾಗ್ನಿಸಂಯೋಗಯೋಃ । ಪಾಘ್ರೇತ್ಯಾದಿನಾ ಧಮಾದೇಶಃ । ವಾಣಂ । ಅಣ ರಣ ವಣ ಶಬ್ದಾರ್ಥಾಃ । ಕರ್ಮಣಿ ಘಞ್ । ಕರ್ಷಾತ್ವತ ಇತ್ಯಂತೋದಾತ್ತತ್ವಂ । ರಣ್ಯಾನಿ । ರಣತೇರ್ಭಾವೇ ವಶಿರಣ್ಯೋರುಪಸಂಖ್ಯಾನಂ । ಪಾ ೩-೩-೫೬-೩ । ಇತ್ಯಪ್ । ತತೋ ಭವೇ ಛಂದಸೀತಿ ಯತ್ । ಯತೋಽನಾವ ಇತ್ಯಾದ್ಯುದಾತ್ತತ್ವಂ ॥

ಪ್ರತಿಪದಾರ್ಥ

ತೇ—ಆ ಮರುತ್ತುಗಳು । **ಅವತಂ**—ಬಾವಿಯನ್ನು । **ಊರ್ಧ್ವಂ**—ಮೇಲುಗಡೆ (ನೀರು) ಇರುವಂತೆ **ನುನುದ್ರೇ**—ಅಗೆದರು। **ದದೃಹಾಣಂ**—(ತಮ್ಮ) ಗಮನಕ್ಕೆ ಪ್ರತಿಬಂಧಕವಾದ। **ಪರ್ವತಂಚಿತ್**—ಬಂಡೆಗಳಿಂದ ಕೂಡಿದ ಪರ್ವತವನ್ನೂ ಕೂಡ । **ವಿಬಿಭಿದುಃ**—ಚೆನ್ನಾಗಿ ಸೀಳಿದರು । **ಸುದಾನವಃ**—ಶ್ರೇಷ್ಠವಾದ ದಾತೃಗಳಾದ । **ಮರುತಃ**—ಆ ಮರುತ್ತುಗಳು । **ವಾಣಂ**—ನೂರಾರು ತಂತಿಗಳುಳ್ಳ ತಮ್ಮ ವೀಣಾ ವಾದ್ಯವನ್ನು । **ಧಮಂತಃ**—ಬಾರಿಸುತ್ತ । **ಸೋಮಸ್ಯ**—ಸೋಮರಸದ (ಪಾನದಿಂದ) । **ಮದೇ**—ತೃಪ್ತಿಯುಂಟಾದಾಗ । **ರಣ್ಯಾನಿ**—ಶ್ಲಾಘ್ಯಗಳಾದ ಧನಗಳನ್ನು । **ಚಕ್ರಿರೇ**—(ಭಕ್ತರಿಗೆ) ಕೊಟ್ಟಿದ್ದಾರೆ ॥

ಭಾವಾರ್ಥ

ಆ ಮರುತ್ತುಗಳು ಗೋತಮಋಷಿಗಾಗಿ ಮೇಲುಗಡೆಯೇ ನೀರಿರುವಂತೆ ಬಾವಿಯನ್ನು ಅಗೆದರು. ಬಂಡೆಗಳಿಂದ ಕೂಡಿ ತಮ್ಮ ಗಮನಕ್ಕೆ ಪ್ರತಿಬಂಧಕಗಳಾದ ಪರ್ವತ ಪ್ರದೇಶಗಳನ್ನು ಸೀಳಿದರು. ಶ್ರೇಷ್ಠವಾದ ದಾತೃಗಳಾದ ಆ ಮರುತ್ತುಗಳು ನೂರಾರು ತಂತಿಗಳುಳ್ಳ ತಮ್ಮ ವೀಣಾವಾದ್ಯವನ್ನು ಬಾರಿಸುತ್ತ ಸೋಮರಸದ ಪಾನದಿಂದ ತಮಗೆ ತೃಪ್ತಿಯುಂಟಾದಾಗ ಭಕ್ತರಿಗೆ ಶ್ಲಾಘ್ಯವಾಗಿಯೂ ರಮ್ಯವಾಗಿಯೂ ಇರತಕ್ಕ ಧನವನ್ನು ಕೊಟ್ಟಿದ್ದಾರೆ.

English Translation

By their power they bore the well and clove asunder the mountain that obstructed their path ; the liberal Maruts blowing upon their pipe have conferred desirable gifts upon the sacrificer, when exhilarated by the Soma-juice.

॥ ವಿಶೇಷವಿಷಯಗಳು ॥

ಭಾಷ್ಯಕಾರರು ಇಲ್ಲಿ ಒಂದು ಉಪಾಖ್ಯಾನವನ್ನು ಹೇಳಿರುವರು—ಗೋತಮಋಷಿಯು ಒಂದಾನೊಂದುಕಾಲದಲ್ಲಿ ತನಗೆ ತುಂಬಾ ಬಾಯಾರಿಕೆಯಾದಾಗ ಪಾನಾರ್ಥವಾಗಿ ಮರುದ್ದೇವತೆಗಳನ್ನು ಉದಕವನ್ನು ಕೊಡುವಂತೆ ಪ್ರಾರ್ಥಿಸಿದನು. ಆಗ ಮರುದ್ದೇವತೆಗಳು ಅನತಿದೂರದಲ್ಲಿದ್ದ ಒಂದು ನೀರಿನ ಭಾವಿಯನ್ನು ಕಿತ್ತು ತಂದು ಗೋತಮ ಋಷಿಯ ಆಶ್ರಮದಲ್ಲಿ ಸ್ಥಾಪಿಸಿ ಆ ಋಷಿಯನ್ನು ಉದಕದಿಂದ ತೃಪ್ತಿಪಡಿಸಿದರು ಎಂದು. ಈ ಅಭಿಪ್ರಾಯವೇ ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ಪ್ರತಿಪಾದಿತವಾಗಿರುವುದು.

ಅವತಂ—ಅವಸ್ತಾತ್ಕೂಪೋ ಭವತೀತ್ಯವತಃ ಕೂಪಃ । ಕೂಪಃ ಕಾತುಃ ಮೊದಲಾದ ಪದನಾಲ್ಕು ಕೂಪನಾಮಗಳ ಮಧ್ಯದಲ್ಲಿ ಅವತಃ ಎಂಬ ಶಬ್ದವು ಪಠಿತವಾಗಿರುವುದರಿಂದ ಅವತಂ ಎಂದರೆ ಭಾವಿಯನ್ನು ಎಂದರ್ಥವು. ಪ್ರಾಯೇಣ ಇಲ್ಲಿ ಮೇಳವು ನಿರ್ದೇಶಿಸಲ್ಪಟ್ಟಿರಬಹುದು.

ನುನುದ್ರೇ ಣುದ ಪ್ರೇರಣೇ । ಪ್ರೇರಿಸಿದರು, ಎತ್ತಿಹಾಕಿದರು.

ದದೃಹಾಣಂ— **ಪ್ರನ್ಯದ್ಧಂ ಗತಿನಿರೋಧಕಂ ।** ದಾರಿಯಲ್ಲಿ ಅಡ್ಡಲಾಗಿ ಹೋಗುವುದಕ್ಕೆ ಅಡಚಣೆ ಯಾಗಿರುವ.

ಧಮಂತೋ ವಾಣಂ — ಶತಸಂಖ್ಯಾಭಿಸ್ತಂತ್ರೀಭಿರ್ಯುಕ್ತಂ ವಿಣಾವಿಶೇಷಂ ವಾದಯಂತಃ । ನೂರಾರುತಂತಿಗಳಿಂದ ಕೂಡಿದ ವೀಣೆಯನ್ನು ಬಾರಿಸುತ್ತಾ ಎಂದರೆ ಗಾಯಿಯು ರಭಸವಾಗಿ ಬೀಸುವಾಗ ವಾದ್ಯಧ್ವನಿ ಯಂತೆ ನಾನಾವಿಧವಾಗಿ ಶಬ್ದಗಳನ್ನು ಮಾಡುತ್ತಿರುವುದು ಎಂದಭಿಪ್ರಾಯವು.

ರಣ್ಯಾನಿ ಚಕ್ರಿರೇ— ರಮಣೀಯಾನಿ ಧನಾನಿ ಸ್ತೋತೃಭ್ಯಃ ಕುರ್ವಂತಿ । ಉತ್ತಮವಾದ ಧನಗಳನ್ನು ಸ್ತೋತ್ರವನ್ನಾಡುವವರಿಗೆ ಕೊಡುವರು ಎಂದಭಿಪ್ರಾಯವು.

ನಿರುಕ್ತಪ್ರಕ್ರಿಯಾ

ನುನುದ್ರೇ—ಣುದ ಪ್ರೇರಣೇ ಧಾತು. ಲಟ್ ಪ್ರಥಮಪುರುಷ ಬಹುವಚನದಲ್ಲಿ **ಲಿಟಿಸ್ತ್ರುಯೋರೇಶಿರೇಚ್**— ಎಂಬುದರಿಂದ ಇರೇಚ್ ಆದೇಶ. ಅದಕ್ಕೆ ಛಂದಸಿನಲ್ಲಿ **ಇರಯೋರೇ** (ಪಾ. ಸೂ. ೬-೪-೭೬) ಎಂಬುದರಿಂದ ರೇ ಆದೇಶ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ನುನುದ್ರೇ ಎಂದು ರೂಪವಾಗುತ್ತದೆ.

ದದೃಹಾಣಮ್—ವೃಹ ವೃಹಿ ಪ್ರದ್ಧೌ ಧಾತು. **ಲಿಟಃ ಕಾನಜ್ವಾ** ಎಂಬುದರಿಂದ ಕಾನಚ್. ಧಾತು ವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ **ಉರತ್** ಎಂಬುದರಿಂದ ಅತ್ವ. ರಪರವಾಗಿ ಬಂದಾಗ ಪುನಃ ಹಲಾದಿ ಶೇಷದಿಂದ ದಕಾರ ಉಳಿಯುತ್ತದೆ. ಕಿತ್ತಾದುದರಿಂದ ಪ್ರತ್ಯಯವನ್ನು ನಿಮಿತ್ತೀಕರಿಸಿ ಲಘೂಪಧಗುಣ ಬರು ವುದಿಲ್ಲ **ಅಟ್‌ಕುಪ್ವಾಙ್**—ಸೂತ್ರದಿಂದ ನಕಾರಕ್ಕೆ ಣತ್ವ. ದ್ವಿತೀಯಾವಿಕವಚನದಲ್ಲಿ ದದೃಹಾಣಮ್ ಎಂದು ರೂಪವಾಗುತ್ತದೆ **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ಬಿಭಿದುಃ—ಭಿದಿರ್ ವಿದಾರಣೇ ಧಾತು. ಲಿಟ್ ಪ್ರಥಮಪುರುಷ ಬಹುವಚನರೂಪ ತಿಙಂತಸ್ವಭಾತ ಸ್ವರ ಬರುತ್ತದೆ.

ಧಮಂತಃ—ಧ್ಮಾ ಶಬ್ದಾಗ್ನಿಸಂಯೋಗಯೋಃ ಧಾತು. ಲಡರ್ಥದಲ್ಲಿ ಶತೃಪ್ರತ್ಯಯ. **ಸಾಹ್ವಾಧ್ಮಾಸ್ಥಾ-** (ಪಾ. ಸೂ. ೭-೩-೭೮) ಎಂಬುದರಿಂದ ಧಮ ಎಂಬ ಆದೇಶವು ಧಾತುವಿಗೆ ಬರುತ್ತದೆ. ಶಬ್ವಿಕರಣ. ಧಮತ್ ಶಬ್ದವಾಗುತ್ತದೆ. ಪ್ರಥಮಾಬಹುವಚನ ಜಸ್ ಪರವಾದಾಗ **ಉಗಿದಚಾಂ**—ಸೂತ್ರದಿಂದ ನುಮಾಗಮ. **ನಶ್ಚಾಪದಾಂತಸ್ಯ**—ಎಂಬುದರಿಂದ ಅದಕ್ಕೆ ಅನುಸ್ವಾರ. **ಆನುಸ್ವಾರಸ್ಯಯಯಿ**—ಸೂತ್ರದಿಂದ ಪರಸವರ್ಣದಿಂದ ನಕಾರಾದೇಶ. **ತಾಸ್ಯನುದಾತ್ತೇತ್**—ಸೂತ್ರದಿಂದ ಲಸಾರ್ವಧಾತುಕವು (ಅತ್) ಅನುದಾತ್ತವಾಗುತ್ತದೆ. ಧಾತು ಸ್ವರದಿಂದ ಆದ್ಯುದಾತ್ತವಾದ ಪದವಾಗುತ್ತದೆ.

ವಾಣಂಮ್—ಅಣ, ರಣ, **ವಣ** ಶಬ್ದಾರ್ಥಾಃ. ಕರ್ಮಣಿಯಲ್ಲಿ ಘಞ್ ಪ್ರತ್ಯಯ. **ಅತಉಪಧಾಯಾಃ** ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ. ಆದ್ಯುದಾತ್ತಸ್ವರಪ್ರಾಪ್ತವಾದರೆ **ಕರ್ಮಾಣ್ವತಃ** (ಪಾ. ಸೂ. ೬-೧-೧೫೯) ಎಂಬ ಸೂತ್ರದಿಂದ ಅಂತೋದಾತ್ತಸ್ವರ ಬರುತ್ತದೆ.

ರಣ್ಯಾನಿ—ಧಾತುವು ಹಿಂದೆ ಉಕ್ತವಾಗಿದೆ. ಭಾವಾರ್ಥದಲ್ಲಿ **ವಶಿರಣ್ಯೋರುಪಸಂಖ್ಯಾನಮ್** (ಪಾ. ಸೂ. ೩-೩-೫೮-೩) ಎಂಬುದರಿಂದ ಅಪ್ ಪ್ರತ್ಯಯ. ರಣಾ ಎಂದು ರೂಪವಾಗುತ್ತದೆ. **ಭವೇ ಛಂದಸಿ** (ಪಾ. ಸೂ. ೪-೪-೧೧೦) ಎಂಬುದರಿಂದ ಅದರ ಮೇಲೆ ಯತ್ ಪ್ರತ್ಯಯ. **ಯಸ್ಯೇತಿಚ** ಸೂತ್ರದಿಂದ ಆಕಾರ **ಲೋಪ**. ರಣ್ಯ ಎಂದು ರೂಪವಾಗುತ್ತದೆ. **ಯತೋಽನಾವಃ** (ಪಾ. ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತಸ್ವರವು ಸ್ವರಿತವನ್ನು ಬಾಧಿಸಿ ಬರುತ್ತದೆ. ದ್ವಿತೀಯಾಬಹುವಚನಾಂತರೂಪ.

ಚಕ್ರಿರೇ—ಡುಕೃಞ್ ಕರಣೇ. ಧಾತು. ಲಿಟ್ ಪ್ರಥಮಪುರುಷಬಹುವಚನರೂಪ. ತಿಙಂತನಿಘಾತ ಸ್ವರ ಬರುತ್ತದೆ. ॥ ೧೦ ॥



ಸಂಹಿತಾಪಾಠಃ

ಜಿಹ್ಮಂ ನುನುದ್ರೇಽವತಂ ತಯಾ ದಿಶಾಸಿಂಚನ್ನುತ್ಸಂ ಗೋತ-
ಮಾಯ ತೃಷ್ಣಜೇ।
ಆ ಗಚ್ಛಂತೀಮವಸಾ ಚಿತ್ರಭಾನವಃ ಕಾಮಂ ವಿಪ್ರಸ್ಯ ತರ್ಪ-
ಯಂತ ಧಾಮಭಿಃ ॥ ೧೧ ॥

ಪದಪಾಠಃ

ಜಿಹ್ಮಂ । ನುನುದ್ರೇ । ಅವತಂ । ತಯಾ । ದಿಶಾ । ಅಸಿಂಚನ್। ಉತ್ಸಂ। ಗೋತ-
ಮಾಯ। ತೃಷ್ಣಽಜೇ।
ಆ। ಗಚ್ಛಂತಿ। ಈಂ। ಅವಸಾ। ಚಿತ್ರಽಭಾನವಃ। ಕಾಮಂ। ವಿಪ್ರಸ್ಯ। ತರ್ಪ-
ಯಂತ। ಧಾಮಽಭಿಃ ॥ ೧೧ ॥

ಸಾಯಣಭಾಷ್ಯಂ

ಮರುತೋಽವತಮುದ್ಭೃತಂ ಕೂಪಂ ಯಸ್ಯಾಂ ದಿಶಿ ಋಷಿರ್ಗಸತಿ ತಯಾ ದಿಶಾ ಜಿಹ್ಮಂ ವಕ್ರಂ ತಿರ್ಯಂಚಂ ನುನುದ್ರೇ । ಪ್ರೇರಿತವಂತಃ । ಏವಂ ಕೂಪಂ ನೀತ್ವಾ ಋಷ್ಯಾಶ್ರಮೇಽವಸ್ಥಾಪ್ಯ ತೃಷ್ಣಜೇ ತೃಷಿತಾಯ ಗೋತಮಾಯ ಋಷಯೇ ತದರ್ಥಮುತ್ಸಂ ಜಲಪ್ರವಾಹಂ ಕೂಪಾದುದ್ಧೃತ್ಯಾಸಿಂಚನ್ । ಆಹಾವೇಽವಾನಯನ್ । ಏವಂ ಕೃತ್ವೇಮೇನಂ ಸ್ತೋತಾರಮೃಷಿಂ ಚಿತ್ರಭಾನವೋ ವಿಚಿತ್ರದೀಪ್ತಯಸ್ತೇ ಮರುತೋಽವಸೇದೃಶೇನ ರಕ್ಷಣೇನ ಸಹಾ ಗಚ್ಛಂತಿ । ತತ್ಸಖಿಭಾವಂ ಪ್ರಾಪ್ನುವಂತಿ । ಪ್ರಾಪ್ಯ ಚ ವಿಪ್ರಸ್ಯ ಮೇಧಾವಿನೋ ಗೋತಮಸ್ಯ ಕಾಮಮಭಿಲಾಷಂ ಧಾಮಭಿರಾಯುಧೈರ್ ಧಾರಕೈರುದಕೈಸ್ತರ್ಪಯಂತ । ಅತರ್ಪಯನ್ ॥ ತಯಾ । ನ ಗೋಶ್ಚನ್ನಾವವರ್ಣೇತಿ ಸಾವೇಕಾಚ ಇತಿ ಪ್ರಾಪ್ತಸ್ಯ ವಿಭಕ್ತ್ಯುದಾತ್ತಸ್ಯ ಪ್ರತಿಷೇಧಃ । ದಿಶಾ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ । ತೃಷ್ಣಜೇ ಘಾತೃಷಾ ಪಿಪಾಸಾಯಾಂ । ಸ್ಪಶಿತೃಷೋರ್ನಜಿಜ್ । ಪಾ ೩-೨-೧೭೨ । ಪ್ರತ್ಯಯೋದ್ಯುದಾತ್ತತ್ವಂ । ಪದಕಾರಸ್ಯ ಶಾಕಲ್ಯಸ್ಯ ತ್ವಯಮಭಿಪ್ರಾಯಃ । ಅನ್ಯೇಷ್ವಪಿ ದೃಶ್ಯತ ಇತಿ ದೃಶಿಗ್ರಹಣಾತ್ಕೇವಲಾದಪಿ ಜನೇರ್ಡಪ್ರತ್ಯಯಃ । ತೃಷ್ಣಾ ಜಾತಾ ಯಸ್ಯ ಸ ತಥೋಕ್ತಃ । ಜ್ಯಾಪೋಃ ಸಂಜ್ಞಾಚ್ಛಂದಸೋರ್ಬಹುಲಮಿತಿ ಹ್ರಸ್ವತ್ವಂ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಧಾಮಭಿಃ । ದಧಾತೇರಾತೋ ಮನಿನ್ನಿತಿ ಮನಿನ್ ॥

ಪದಾರ್ಥಃ

ಜಿಹ್ಮಂ—ಕುಟಿಲವಾದ । **ಅವತಂ**—(ತಾವು) ಅಗೆದ ಬಾವಿಯನ್ನು । (**ಮರುತಃ**—ಮರುತ್ತುಗಳು) । **ತಯಾ ದಿಶಾ**—(ಗೋತಮಋಷಿಯು ವಾಸಮಾಡುತ್ತಿದ್ದ) ಆ ದಿಕ್ಕಿನಿಂದ । **ನುನುದ್ರೇ**—ಸರಿಯುವಂತೆ ಮಾಡಿದರು. । (ಅನಂತರ ಋಷ್ಯಾಶ್ರಮದಲ್ಲಿಡಿಸಿ) **ತೃಷ್ಣಜೇ**—ಬಾಯಾರಿದ । **ಗೋತಮಾಯ**—ಗೋತಮಋಷಿ ಗೋಸ್ಕರ । **ಉತ್ಸಂ**—ಜಲಪ್ರವಾಹವನ್ನು । **ಅಸಿಂಚನ್**—ಪರಿಸಿದರು. । **ಚಿತ್ರಭಾನವಃ**—ನಾನಾವಿಧವಾದ ಪ್ರಕಾಶವುಳ್ಳ ಮರುತ್ತುಗಳು । **ಈಮ್**—(ಭಕ್ತನಾದ) ಈ ಋಷಿಯನ್ನು । **ಅವಸಾ**—(ಇಂತಹ) ರಕ್ಷಣೆಯಿಂದ । **ಅಗಚ್ಛಂತಿ**—ಸಖಿಭಾವಿಸುತ್ತಾರೆ. । **ವಿಪ್ರಸ್ಯ**—ಮೇಧಾವಿಯಾದ ಗೋತಮನ । **ಕಾಮಂ**—ಇಷ್ಟಾರ್ಥವನ್ನು । **ಧಾಮಭಿಃ**—ಆಯುಧಾರ್ಥಕಗಳಾದ ಉದಕಗಳಿಂದ । **ತರ್ಪಯಂತ**—ತೃಪ್ತಿಪಡಿಸಿದರು ।

ಭಾವಾರ್ಥಃ

ಮರುತ್ತುಗಳು ತಾವು ಕುಟಿಲವಾಗಿ ಅಗೆದ ಬಾವಿಯನ್ನು ಗೋತಮಋಷಿಯು ವಾಸಮಾಡುತ್ತಿದ್ದ ದಿಕ್ಕಿನಲ್ಲಿ ಸರಿಯುವಂತೆ ಮಾಡಿದರು ಅನಂತರ ಅವನ್ನು ಋಷ್ಯಾಶ್ರಮದಲ್ಲಿಡಿಸಿ ಬಾಯಾರಿದ ಗೋತಮಋಷಿಗೋಸ್ಕರ ಜಲಪ್ರವಾಹವನ್ನು ಹರಿಸಿದರು. ನಾನಾ ವಿಧವಾದ ಪ್ರಕಾಶವುಳ್ಳ ಮರುತ್ತುಗಳು ಭಕ್ತನಾದ ಗೋತಮನನ್ನು ತಮ್ಮ ಇಂತಹ ರಕ್ಷಣೆಯಿಂದ ಸಖಿಭಾವಿಸಿ ಮೇಧಾವಿಯಾದ ಅವನ ಇಷ್ಟಾರ್ಥವನ್ನು ಆಯುಧಾರ್ಥಕಗಳಾದ ಉದಕಗಳಿಂದ ತೃಪ್ತಿಪಡಿಸಿದರು.

English Translation

They brought the crooked well to the place (where Gotama was) and sprinkled the water upon the thirsty Gotama ; the variously radiant Maruts come to his succour, gratifying the desire of the Sage with life-sustaining waters.

ವಿಶೇಷವಿಷಯಗಳು

ಬಿಹ್ಮಂ—ವಕ್ರಂ । ವಕ್ರವಾಗಿರುವ, ನೆಟ್ಟಗಿಲ್ಲದ.

ಉತ್ಸಂ—ಜಲಸ್ರಾವವನ್ನು ।

ತೃಷ್ಣಜೇ—ತೃಷಿತಾಯ ಗೋತಮಾಯ । ಬಾಯಾರಿದ.

ಚಿತ್ರಭಾನವಃ—ನಾನಾವಿಧವಾದ ಕಾಂತಿಗಳುಳ್ಳ.

ಧಾಮಭಿಃ—ಧಾರಕೈರುದಕೈಃ । ಧಾರಾಕಾರವಾಗಿ ಸುರಿಯುತ್ತಿರುವ ಉದಕಗಳಿಂದ.

" ವ್ಯಾಕರಣಸ್ಯಕ್ರಿಯಾ "

ತಯಾ—ತದ್ ಶಬ್ದ. ಸ್ತ್ರೀಲಿಂಗ ತೃತೀಯಾವಿಕವಚನದಲ್ಲಿ ತಯಾ ಎಂದು ರೂಪವಾಗುತ್ತದೆ. **ಸಾವೇಕಾಚಸ್ತೃತೀಯಾದಿಃ** ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರವು ಪ್ರಾಪ್ತವಾದರೆ **ನಗೋಶ್ವನ್ಸಾವನಡ್ವಾ**— (ಪಾ.ಸೂ. ೬-೧-೧೭೬) ಎಂಬುದರಿಂದ ಆದೇಶ ವಿಧಿಸಲ್ಪಡುತ್ತದೆ.

ದಿಶಾ—ದಿಶ್ ಶಬ್ದ. ನಿತ್ಯಸ್ತ್ರೀಲಿಂಗ ತೃತೀಯಾವಿಕವಚನಾಂತರೂಪ. ಸುಪರವಾದಾಗ ಏಕಾಚಾಗುವುದರಿಂದ **ಸಾವೇಕಾಚಸ್ತೃತೀಯಾದಿಃ** ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಅಸಿಂಚನ್—ಷಿಚ ಕ್ಷರಣೇ ಧಾತು. ತುದಾದಿ. ಲಙ್ ಪ್ರಥಮಪುರುಷಬಹುವಚನದಲ್ಲಿ **ಝೋಂತಃ** ಸೂತ್ರದಿಂದ ಅಂತಾದೇಶ. ಅಂತ್ಯಇಕಾರಲೋಪ. **ಶೇಮುಚಾದೀನಾಂ** (ಪಾ. ಸೂ. ೭-೧-೫೯) ಎಂಬುದರಿಂದ ನುಮಾಗಮ ಶವಿಕರಣ. ಸಂಯೋಗಾಂತಲೋಪ ಅಡಾಗಮ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

ತೃಷ್ಣಜೇ— ಜೃತೃಷಾ ಪಿಪಾಸಾಯಾಂ ಧಾತು ಇದಕ್ಕೆ **ಸ್ಫಾಯಿ ತೃಷೋರ್ನಜಿಜ್** (ಪಾ. ಸೂ ೩-೨-೧೭೬) ಎಂಬುದರಿಂದ ನಜಿಜ್ಪ್ರತ್ಯಯ. **ರಷಾಭ್ಯಾಂನೋಣಃ**—ಸೂತ್ರದಿಂದ ಪ್ರತ್ಯಯನಕಾರಕ್ಕೆ ಣತ್ವ. ತೃಷಿನ ಉಪಧೆಗೆ ಪ್ರತ್ಯಯ ಬಿತ್ತಾದುದರಿಂದ ಗುಣ ಬರುವುದಿಲ್ಲ. ತೃಷ್ಣಜ್ ಶಬ್ದವಾಗುತ್ತದೆ. ಪ್ರತ್ಯಯಸ್ವರದಿಂದ ಷ್ಣ ಎಂಬಲ್ಲಿರುವ ಅಕಾರ ಉದಾತ್ತವಾಗುತ್ತದೆ. ಚತುರ್ಥೀವಿಕವಚನದಲ್ಲಿ ತೃಷ್ಣಜೇ ಎಂದು ರೂಪವಾಗು

ತ್ತದೆ. ಈ ಪದದ ಪ್ರಕ್ರಿಯೆಯಲ್ಲಿ ಪದಕಾರರಾದ ಶಾಕಲ್ಯರಿಗೆ ಬೇರೆ ಅಭಿಪ್ರಾಯವಿದೆ. **ಅನ್ಯೇಷ್ವಪಿ ದೃಶ್ಯತೇ** ಎಂಬ ಸೂತ್ರದಲ್ಲಿ ವ್ಯಶಿಗ್ರಹಣದಿಂದ ನಿರುಪಸರ್ಗವಾದ (ಕೇವಲ) ಜನ್‌ಧಾತುವಿಗೆ ಡ ಪ್ರತ್ಯಯ ಬರುತ್ತದೆ. ಡಿತ್ವಸಾಮರ್ಥ್ಯದಿಂದ ಜನಿಸ ಟಿಗೆ (ಅನ್)ಲೋಪ ಬರುತ್ತದೆ. **ತೃಷ್ಣಾ ಜಾತಾ ಯಸ್ಯ ಸಃ ತೃಷ್ಣಜಃ ಜ್ಯಾಪೋಃ ಸಂಜ್ಞಾಚ್ಛಂದಸೋರ್ಬಹುಲಂ** ಎಂಬುದರಿಂದ ಸಮಾಸದಲ್ಲಿ ಆಬಂತಕ್ಕೆ ಹ್ರಸ್ವ ಬಹುವ್ರೀಹಿಸಮಾಸ ನಾಮದಿಂದ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್**—ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

ಗಚ್ಛಂತಿ — ಗಮ್‌ಲ್ಲ ಗತೌ ಧಾತು ಲಟ್ ಪ್ರಥಮಪುರುಷಬಹುವಚನದಲ್ಲಿ ಅಂತಾದೇಶ. ಶಪ್ ವಿಕರಣ. **ಇಷುಗಮಿಯಮಾಂ ಛಃ** ಎಂಬುದರಿಂದ ಛಾದೇಶ ತಿಪಂತನಿಘಾತಸ್ವರ ಬರುತ್ತದೆ.

ಚಿತ್ರಭಾನವಃ—ಚಿತ್ರಾಃ ಭಾನವೋ ಯಸ್ಯ ಸಃ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್**—ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

ತರ್ಪಯಂತ—ತೃಪ ತೃಪ್ತೌ ಧಾತು. ಲಜ್‌ಪ್ರಥಮಪುರುಷ ಬಹುವಚನರೂಪ. **ಬಹುಲಂ ಛಂದಸ್ಯಮಾಙ್‌ಯೋಗೇಽಪಿ** ಎಂಬುದರಿಂದ ಅಡಾಗಮ ಬರುವುದಿಲ್ಲ. ತಿಪಂತನಿಘಾತಸ್ವರ ಬರುತ್ತದೆ.

ಧಾಮಭಿಃ — ಡುಧಾಞ್ ಧಾರಣಪೋಷಣಯೋಃ ಧಾತು. **ಆತೋಮನಿನ್ ಕ್ವನಿಪ್ ವನಿಬಶ್ಚ** ಎಂಬುದರಿಂದ ಮನಿನ್ ಪ್ರತ್ಯಯ. ಧಾಮನ್ ಶಬ್ದವಾಗುತ್ತದೆ. ನಿತ್ ಪ್ರತ್ಯಯಾಂತವಾದುದರಿಂದ ಆದ್ಯುದಾತ್ತವಾಗುತ್ತದೆ. ತೃತೀಯಾಬಹುವಚನದಲ್ಲಿ **ನಲೋಪಃ ಪ್ರಾತಿ**—ಸೂತ್ರದಿಂದ ನಲೋಪ. ॥ ೧೧ ॥



ಸಂಹಿತಾಪಾಠಃ

ಯಾ ವಃ ಶರ್ಮ ಶಶಮಾನಾಯ ಸಂತಿ ತ್ರಿಧಾತೂನಿ ದಾಶುಷೇ ಯಚ್ಛತಾಧಿ।
ಅಸ್ಮಭ್ಯಂ ತಾನಿ ಮರುತೋ ವಿ ಯಂತ ರಯಿಂ ನೋ ಧತ್ತ ವೃಷಣಃ ಸುವೀರಂ ॥೧೨॥

पदपाठः

या । वः । शर्म । शशमानाय । सन्ति । त्रिऽधातूनि । दाशुषे ।
यच्छत । अधि ।
अस्मभ्यम् । तानि । मरुतः । वि । यन्त । रयिम् । नः । धत्त । वृषणः ।
सुऽवीरम् ॥ ८७ ॥

सायणभाष्यं

मारुतेऽपशौ या वः शर्मेति हविषो याज्या । प्रदानानामिति खण्डे सूत्रितम् । अरा इवेऽपचेरमा अहेव या वः शर्म शशमानाय सन्ति । अ. ३-२ । इति ॥

हे मरुतो वो युष्माकं संबन्धिनि या यानि शर्म शर्माणि सुखानि गृहाणि वा । कीदृशानि । त्रिधातूनि पृथिव्यादिषु त्रिषु स्थानेष्ववस्थितानि शशमानायं युष्मान्स्तुभिर्भजमानायं दातुं संपादितानि । पूर्वोक्तलक्षणानि शर्माणि यानि सन्ति यानि च दाशुषे हविर्दत्तवते यजमानायाधि यच्छत अधिकं प्रयच्छथ हे मरुतस्तानि सर्वाणि शर्माण्यस्मभ्यं वि यन्त । विशेषेण प्रयच्छत । किंच हे वृषणः कामानां वर्षितारो मरुतो नोऽस्मभ्यं सुवीरं शोभनैर्वीरैः पुत्रादिभिर्युक्तं रयिं धनं धत्त । दत्त॥ या । शेश्छन्दसि बहुलमिति शेर्लोपः । शर्म । सुपां सुलुगिति जसो लुक् । शशमानायं । शश प्लुतगतौ । ताच्छीलिकश्चानश् । यच्छत । छान्दसे लङि बहुलं छन्दस्यमाङ्योगेऽपीत्यडभावः । यन्त । यमेर्लोटि बहुलं छन्दसीति शपो लुक् । तप्तनप्तनथनाश्चेति तस्य तबादेशः । अतस्तस्य पित्त्वेन ङित्त्वाभावादनुदात्तोपदेशेत्यादिनानुनासिकलोपो न भवति । वृषणः । वा षपूर्वस्य निगद इत्युपधादीर्घभावः । सुवीरं । बहुव्रीहौ वीरवीर्यौ चेत्युत्तरपदादुदात्तत्वं॥

॥ प्रतिपदार्थः ॥

वः—(ಎಲೈ ಮರುತ್ತುಗಳೇ) ನಿಮಗೆ ಸೇರಿನವೂ (ನಿಮ್ಮಿಂದ ಅನುಗೃಹೀತವಾಗುವುದೂ) । त्रिधातूनि—ಪೃಥಿವ್ಯಾದಿ ಮೂರು ಲೋಕಗಳಲ್ಲೂ ಇರತಕ್ಕವೂ । शशमानायं—(ನಿಮ್ಮನ್ನು) ಸ್ತೋತ್ರಮಾಡುವ ಭಕ್ತನಿಗಾಗಿ (ಸಂಪಾದಿತವಾದುವೂ) ಆದ । या—ಯಾವ । शर्म—ಸುಖಗಳಾಗಲಿ ಅಥವಾ ಗೃಹಗಳಾಗಲಿ ।

ಸಂತಿ—ಇರುವುವೋ । (ಮತ್ತು) **ದಾಶುಷೇ**—ಹವಿರ್ದಾತನಾದ ಯಜಮಾನನಿಗೆ । **ಅಧಿ ಯಚ್ಛತ**—(ಯಾವ ಸುಖಗಳನ್ನಾಗಲಿ ಅಥವಾ ಗೃಹಗಳನ್ನಾಗಲಿ) ಕೊಡುತ್ತೀರೊ । **ಮರುತಃ**—ಎಲೈ ಮರುತ್ತುಗಳೇ । **ತಾನಿ**—ಆ ಸಕಲ ಸುಖಗಳನ್ನೂ ಅಥವಾ ಗೃಹಗಳನ್ನೂ । **ಅಸ್ಮಭ್ಯಂ**—ನಮಗೆ । **ವಿ ಯಂತ**—ಅಧಿಕವಾಗಿ ಕೊಡಿರಿ. । **ವೃಷಣಃ**—ಇಷ್ಟಾರ್ಥಗಳನ್ನು ಸುರಿಸತಕ್ಕ ಮರುತ್ತುಗಳೇ । **ನಃ**—ನನಗೆ । **ಸುವೀರಂ**—ಶ್ರೇಷ್ಠವಾದುವೂ ವೀರರಾದವರೂ ಆದ ಪುತ್ರಾದಿಗಳಿಂದುಳ್ಳ । **ರಯಿಂ**—(ಮುಕ್ತಳೇ ಮೊದಲಾದ ರೀತಿಯಿಂದ ಕೂಡಿ ಇರುವ) ಧನವನ್ನು । **ದತ್ತ**—ಕೊಡಿರಿ ।

ಭಾವಾರ್ಥ

ಎಲೈ ಮರುತ್ತುಗಳೇ, ನಿಮಗೆ ಸೇರಿದುವೂ, ನಿಮ್ಮಿಂದ ಅನುಗ್ರಹೀತವಾಗಿರುವುವೂ, ಪೃಥಿವ್ಯಾದಿಮೂರು ಲೋಕಗಳಲ್ಲಿ ಇರತಕ್ಕವೂ, ನಿಮ್ಮನ್ನು ಸ್ತೋತ್ರಮಾಡುವ ಭಕ್ತನಿಗಾಗಿ ಸಂಪಾದಿತವೂ ಆದ ಯಾವ ಸುಖಗಳನ್ನಾಗಲಿ, ಅಥವಾ ಗೃಹಗಳನ್ನಾಗಲಿ ಯಜಮಾನನಿಗೆ ಕೊಡುತ್ತೀರೋ, ಆ ಸಕಲಸುಖಗಳನ್ನೂ ಅಥವಾ ಗೃಹಗಳನ್ನೂ ನಮಗೂ ಅಧಿಕವಾಗಿ ಕೊಡಿರಿ. ಇಷ್ಟಾರ್ಥಗಳನ್ನು ಸುರಿಸತಕ್ಕ ಮರುತ್ತುಗಳೇ, ನನಗೆ ಶ್ರೇಷ್ಠವಾದುವೂ ವೀರರಾದವರೂ ಆದ ಪುತ್ರಾದಿಗಳಿಂದ ಕೂಡಿದ ಧನವನ್ನು ಕೊಡಿರಿ.

English Translation

Whatever blessings and happiness there are in the three worlds which are in your power to grant, give them to the offerer of oblations who adresses you with praise ; O Maruts, bestowers of all good, grant us those, blessings, and riches accompanied by brave sons and followers.

" ವಿಶೇಷನಿಷಯಗಳು "

ಶಶಮಾನಾಯ—ಶಶ ಪ್ಲುತಗತೌ । **ಶಶತಿರರ್ದತಿಕರ್ಮಾಯಂ** । **ಸ್ತುತಿಕರಣಶೀಲಾಯ** ಸ್ತೋತ್ರಮಾಡುವ ಯಜಮಾನನಿಗೆ

ಶರ್ಮ—ಸುಖ ಅಥವಾ ಗೃಹ.

ತ್ರಿಧಾತೂನಿ—**ಪೃಥಿವ್ಯಾದಿಷು ತ್ರಿಷು ಸ್ಥಾನೇಷ್ವವಸ್ಥಿತಾನಿ** । ಪೃಥಿವ್ಯಾದಿಮೂರುಲೋಕಗಳಲ್ಲಿರುವ, ಸ್ಕಂದಸ್ವಾಮಿಯು ಈ ಶಬ್ದಕ್ಕೆ—**ತ್ರಿಧಾತೂನಿ** । **ಧೀಯಂತೇ ಪ್ರಾಣಿನಾಂ ದೇಹೇಷ್ವಿತಿ ಧಾತವಃ ಅನ್ನರಸಾಃ** ಪ್ರಾಣಿಗಳ ದೇಹದಲ್ಲಿರುವ ಅನ್ನರಸಾದಿಗಳೆಂದು ಅರ್ಥ ಮಾಡಿರುವರು.

ದಾಶುಷೇ—**ಹವಿರ್ದತ್ತವತೇ ಯಜಮಾನಾಯ** । ಹವಿಸ್ಸನ್ನರ್ಪಿಸುವ ಯಜಮಾನನಿಗೆ.

ವಿ ಯಂತ—**ವಿಶೇಷೇಣ ಪ್ರಯಚ್ಛತ** । ವಿಶೇಷವಾಗಿ ಕೊಡಿ

ವೃಷಣಃ—**ಕಾಮಾನಾಂ ವರ್ಷಿತಾರಃ** । ಇಷ್ಟಾರ್ಥಗಳನ್ನು ಕೊಡುವ ಮರುತ್ತೇವತೆಗಳು.

ವ್ಯಾಕರಣಪ್ರಕ್ರಿಯಾ

ಯಾ—ನಪುಂಸಕದಲ್ಲಿ ಶಿ ಆದೇಶ ಬಂದಾಗ **ಶೇಶ್ಛಂದಸಿ ಬಹುಲಂ** ಎಂಬುದರಿಂದ ಶಿಗೆ ಲೋಪ.

ಶರ್ಮ—ಶರ್ಮ ಶಬ್ದನಿತ್ಯನಪುಂಸಕಲಿಂಗ ಇದಕ್ಕೆ ಜಸ್ ಪರವಾದಾಗ **ಸುಪಾಂಸುಲುಕ್**—ಸೂತ್ರದಿಂದ ಜಸಿಗೆ ಲುಕ್ ಬರುತ್ತದೆ.

ಶಶಮಾನಾಯ—ಶರ ಪ್ಲುತಗತೌ. ಧಾತು. **ತಾಚ್ಛೀಲ್ಯವಯೋ**—(ಪಾ.ಸೂ. ೩-೨-೧೨೯) ಎಂಬುದರಿಂದ ತಾಚ್ಛೀಲ್ಯಾರ್ಥದಲ್ಲಿ ಚಾನಶ್. **ಆನೇ ಮುಕ್** ಎಂಬುದರಿಂದ ಪ್ರತ್ಯಯಪರವಾದಾಗ ಮುಕಾಗಮ. ಪ್ರತ್ಯಯಚಿತ್ವಾದುದರಿಂದ **ಚಿತಃ** ಸೂತ್ರದಿಂದ ಅಂತೋದಾತ್ತಸ್ವರ ಬರುತ್ತದೆ. ಚತುರ್ಥೀಏಕವಚನದಲ್ಲಿ ಶಶಮಾನಾಯ ಎಂದು ರೂಪವಾಗುತ್ತದೆ.

ಯಚ್ಛತ—ದಾಣ್ ದಾನೇ ಧಾತು. ಲೋಡರ್ಥದಲ್ಲಿ **ಛಂದಸಿ ಲುಙ್ಲಙ್ಲಿಟಃ**— ಎಂಬುದರಿಂದ ಲಙ್. **ಸಾಹ್ವಾಧ್ಮಾಸ್ಥಾ**—ಸೂತ್ರದಿಂದ ಧಾತುವಿಗೆ ಯಚ್ಚಾದೇಶ. ಮಧ್ಯಮಪುರುಷ ಬಹುವಚನಕ್ಕೆ **ತಸ್ಥಸ್ಥ**-ಸೂತ್ರದಿಂದ ತಾದೇಶ. **ಬಹುಲಂ ಛಂದಸ್ಯಮಾಙ್ಯೋಗೇಽಪಿ** ಸೂತ್ರದಿಂದ ಅಡಾಗಮ ಬರುವುದಿಲ್ಲ. ಅತಿಜಂತರ ಸರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಯಂತ—ಯಮ ಉಪರಮೇ ಧಾತು. ಲೋಟ್ ಮಧ್ಯಮಪುರುಷ ಬಹುವಚನದಲ್ಲಿ **ತಪ್ತನಪ್ತನಥನಾಶ್ಚ** (ಪಾ. ಸೂ. ೩-೪-೧೦೧) ಎಂಬುದರಿಂದ ಅದಕ್ಕೆ ತಬಾದೇಶ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಲುಕ್. ತಬಾದೇಶವು ಪಿತ್ವಾದುದರಿಂದ ಙಿತ್ವಾದ್ಗುಣ ಬರುವುದಿಲ್ಲ. ಆಗುದರಿಂದ **ಅನುದಾತ್ತೋಪದೇಶವನತಿ** (ಪಾ. ಸೂ. ೬-೪-೩೭) ಎಂಬುದರಿಂದ ಧಾತುವಿನ ಅನುನಾಸಿಕವಾದ ಮಕಾರಕ್ಕೆ ಲೋಪ ಬರುವುದಿಲ್ಲ. **ನಶ್ಚಾಪದಾಂತಸ್ಯ ಝಲಿ** ಎಂಬುದರಿಂದ ಮಕಾರಕ್ಕೆ ಅನುಸ್ವಾರ. ಯಯ್ ಪರವಲ್ಲಿರುವುದರಿಂದ ಪರಸವರ್ಣ ತಿಙಂತ ನಿಘಾತಸ್ವರ ಬರುತ್ತದೆ.

ಧತ್ತ—ಡುಧಾಞ್ ಧಾರಣಪೋಷಣಯೋಃ ಧಾತು. ಲೋಟ್ ಮಧ್ಯಮಪುರುಷ ಬಹುವಚನರೂಪ. ತಿಙಂತನಿಘಾತಸ್ವರ ಬರುತ್ತದೆ

ವೃಷಣಂ—ವೃಷನ್ ಶಬ್ದವು ಕಸಿನ್ ಪ್ರತ್ಯಯಾಂತವಾಗಿ ಆದ್ಯುದಾತ್ತವಾಗಿರುತ್ತದೆ. ಸಂಬೋಧನಾ ಬಹುವಚನ ಪರವಾದಾಗ **ಸರ್ವನಾಮಸ್ಥಾನೇ** ಸೂತ್ರದಿಂದ ಉಪಧಾದೀರ್ಘ ಪ್ರಾಪ್ತವಾದರೆ **ವಾ ಷಪೂರ್ವಸ್ಯ ನಿಗಮೇ** (ವಾ ಸೂ. ೬-೪-೯) ಎಂಬುದರಿಂದ ಛಂದಸ್ಸಿನಲ್ಲಿ ಉಪಧಾದೀರ್ಘವಿಕಲ್ಪವಾದುದರಿಂದ ಇಲ್ಲಿ ಬರುವುದಿಲ್ಲ. **ಆಮಂತ್ರಿತಸ್ಯ ಚ** (ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ.

ಸುವೀರಮ್—ಶೋಭನಾಃ ವೀರಾಃ ಯಸ್ಯ ಸುವೀರಃ ತತ್. ಪೂರ್ವಪದ ಪ್ರಕೃತಿಸ್ವರವು ಬಾಧಿತವಾಗಿ **ನಞ್ಸುಭ್ಯಾಂ** ಎಂಬುದರಿಂದ ಉತ್ತರಪದಾಂತೋದಾತ್ತಸ್ವರವು ಪ್ರಾಪ್ತವಾದರೆ ಅದನ್ನು ಬಾಧಿಸಿ **ವೀರವೀರ್ಯೌ ಚ** (ಪಾ. ಸೂ. ೬-೩-೧೨೦) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ. ॥ ೧೭ ॥

ಎಂಭತ್ತಾರನೆಯ ಸೂಕ್ತವು

ಮರುತೋ ಯಸ್ಯೇತಿ ದಶರ್ಚಂ ದ್ವಿತೀಯಂ ಸೂಕ್ತಂ ಗೋತಮಸ್ಯಾರ್ಷಂ ಗಾಯತ್ರಂ ಮರುದ್ದೇವತಾಕಂ । ಅನುಕ್ರಮ್ಯತೇ ಚ । ಮರುತೋ ದಶ ಗಾಯತ್ರಮಿತಿ ॥ ವ್ಯೂಹ್ಯೇ ತೃತೀಯೇ ಛಂದೋಮ ಆಗ್ನಿಮಾರುತೇ ಶಸ್ತ್ರ ಏತತ್ಸೂಕ್ತಂ । ತೃತೀಯಸ್ಯಾಗನ್ನ ಮಹೇತಿ ಖಂಡೇ ಸೂತ್ರಿತಂ । ಮರುತೋ ಯಸ್ಯ ಹಿ ಪ್ರಾಗ್ನಯೇ ವಾಚಮಿತ್ಯಾಗ್ನಿಮಾರುತಂ । ಆ. ೪-೧೧ । ಇತಿ ॥ ಐಂದ್ರಾಮಾರುತ್ಯಾಂ ಪ್ರಧಾನಸ್ಯ ಹವಿಷೋ ಮರುತೋ ಯಸ್ಯೇತ್ಯೇಷಾನುವಾಕ್ಯಾ । ಸೂತ್ರಿತಂ ಚ । ಐಂದ್ರಾಮಾರುತೀಂ ಭೇದಕಾಮಾ ಮರುತೋ ಯಸ್ಯ ಹಿ ಕ್ಷಯೇ। ಆ. ೨-೧೧ । ಇತಿ॥ ಏಷೈವ ವರುಣಪ್ರಘಾಸೇಷು ಮಾರುತಾ ಆಮಿಕ್ಷಾಯಾ ಅನುವಾಕ್ಯಾ । ಸೂತ್ರಿತಂ ಚ । ಮರುತೋ ಯಸ್ಯ ಹಿ ಕ್ಷಯೇ೨ರಾ ಇವೇದಚರಮಾ ಅಹೇವ । ಆ. ೨-೧೭ । ಇತಿ ॥ ತಥಾ ಪ್ರಾತಃಸವನೇ ಪ್ರೋತುರೇಷಾ ಪ್ರಸ್ಥಿತಯಾಜ್ಯಾ । ಸೂತ್ರಿತಂ ಚ । ಮರುತೋ ಯಸ್ಯ ಹಿ ಕ್ಷಯೇ೨ಗ್ನೇ ಪತ್ನೀರಿಹಾ ವಹ । ಆ ೫-೫ । ಇತಿ ॥

ಅನುವಾದವು—**ಮರುತೋ ಯಸ್ಯ** ಎಂಬ ಸೂಕ್ತವು ಪ್ರಥಮಮಂಡಲದ ಹದಿನಾಲ್ಕನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು ಇದರಲ್ಲಿ ಹತ್ತು ಋಕ್ಕುಗಳಿರುವುವು ಈ ಸೂಕ್ತಕ್ಕೆ ಗೋತಮನು ಋಷಿಯು. ಗಾಯತ್ರೀ ಛಂದಸ್ಸು, ಮರುದ್ದೇವತೆಗಳು ಅನುಕ್ರಮಣಿಕೆಯಲ್ಲಿ—ಮರುತೋ ದಶ ಗಾಯತ್ರಮಿತಿ ಎಂದು ಹೇಳಿರುವುದು. ವ್ಯೂಹ್ಯೆಯಾಗದಲ್ಲಿ ತೃತೀಯಛಂದೋಮಾಮಂತ್ರಗಳಿಗಾಗಿ ಆಗ್ನಿಮಾರುತಶಸ್ತ್ರಮಂತ್ರಪಠನಮಾಡುವಾಗ ಈ ಸೂಕ್ತದ ವಿನಿಯೋಗವಿರುವುದು. ಈ ವಿಷಯವು ಆಶ್ವಲಾಯನಶ್ರೌತಸೂತ್ರದ **ತೃತೀಯಸ್ಯಾಗನ್ನ ಮಹೇತಿ** ಎಂಬ ಖಂಡದಲ್ಲಿ **ಮರುತೋ ಯಸ್ಯ ಹಿ ಪ್ರಾಗ್ನಯೇ ವಾಚಮಿತ್ಯಾಗ್ನಿಮಾರುತಂ** ಎಂಬ ಸೂತ್ರದಿಂದ ವಿಸ್ತೃತವಾಗಿರುವುದು (೪ ೪-೧೧) ಮತ್ತು ಐಂದ್ರಮಾರುತೀ ಎಂಬ ಪ್ರಧಾನಹೋಮದಲ್ಲಿ ಹವಿರ್ನಿರ್ವಾಪಣ ಮಾಡುವಾಗ **ಮರುತೋ ಯಸ್ಯ** ಎಂಬ ಈ ಋಕ್ಕನ್ನು ಪುರೋನುವಾಕ್ಯವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಐಂದ್ರಾಮಾರುತೀಂ ಭೇದಕಾಮಾ ಮರುತೋ ಯಸ್ಯ ಹಿ ಕ್ಷಯೇ** ಎಂಬ ಸೂತ್ರವು ನಿರ್ದೇಶಿಸುವುದು. (ಆ. ೨-೧೧) ಮತ್ತು ವರುಣಪ್ರಘಾಸದಲ್ಲಿಯೂ ಮರುತ್ಸಂಬಂಧವಾದ ಆಮಿಕ್ಷಾನಿರ್ವಪನದಲ್ಲಿ ಈ ಋಕ್ಕನ್ನು ಪುರೋನುವಾಕ್ಯಾನುಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಮರುತೋ ಯಸ್ಯ ಹಿ ಕ್ಷಯೇ೨ರಾ ಇವೇದಚರಮಾ ಅಹೇವ** ಎಂಬ ಸೂತ್ರದಲ್ಲಿ ವಿಸ್ತೃತವಾಗಿರುವುದು. (ಆ. ೨-೧೭) ಮತ್ತು ಪ್ರಾತಸ್ಸವನದಲ್ಲಿಯೂ ಪ್ರೋತೃವು ಈ ಋಕ್ಕನ್ನು ಪ್ರಸ್ಥಿತಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಮರುತೋ ಯಸ್ಯ ಹಿ ಕ್ಷಯೇ೨ಗ್ನೇ ಪತ್ನೀರಿಹಾ ವಹ** ಎಂಬ ಸೂತ್ರದಲ್ಲಿ ಹೇಳಿರುವುದು (ಆ. ೫-೫)

॥ ओं ॥

सूक्त—९६

॥ मण्डल—८ ॥ अनुवाक—८४ ॥ सूक्त—९६ ॥

॥ अष्टक— ८ ॥ अध्याय— ६ ॥ वर्ग— ८८, ८९ ॥

॥ सूक्तदल्लिरुव ऋक्संख्ये— ८० ॥

॥ ऋषिः—गोतमोः राहूगणः ॥

॥ देवता—मरुतः ॥

॥ छन्दः— गायत्री ॥

संहितापाठः

मरुतो यस्य हि क्षये पाथा दिवो विमहसः ।
स सुगोपातमो जनः ॥ ८ ॥

॥ पदपाठः ॥

मरुतः । यस्य । हि । क्षये । पाथ । दिवः । वि ऽ महसः ।
सः । सु ऽ गोपातमः । जनः ॥ ८ ॥

सायणभाष्यं

हे विमहसो विशिष्टस्फूर्तयो मरुतो दिवोऽन्तरिक्षलोकादागत्य यस्य हि यस्य खलु यजमानस्य क्षये यज्ञगृहे पाथ सोमं पिबथ स जनो जातो यजमानः सुगोपातमः शोभनैः पालकैरत्यंतं युक्तो भवति ॥ पाथ । पा पाने । लटि बहुलं छंदसीति शपो लुक् । यद्वृत्तयोगादनिघातः। विमहसः।विशिष्टं महस्तेजो येषां ते तथोक्ताः। सुगोपातमः । शोभनो गोपा रक्षको यस्य स सुगोपाः सुगोपातमः । तमपः पित्वादनुदात्तेऽपि सहि बहुव्रीहौ नञ्सुभ्याम्यित्युत्तरपदादान्तोदात्तत्वमेव शिष्यते ॥

ಸ್ವರಿತಪಾಠ

ವಿ ಮಹಸಃ—ವಿಶೇಷವಾದ ಪ್ರಕಾಶದಿಂದ ಕೂಡಿದ । **ಮರುತಃ**—ಎಲೈ ಮರುತ್ತುಗಳೇ । **ದಿವಃ**—ಅಂತರಿಕ್ಷದಿಂದ (ಬಂದು) । **ಯಸ್ಯ ಹಿ**—ಯಾವುದೇ ಆದ ಯಜಮಾನನ । **ಕ್ಷಯೇ**—(ಯಜ್ಞ) ಗೃಹದಲ್ಲಿ । **ಪಾಥ**—(ಸೋಮರಸವನ್ನು) ಕುಡಿಯುತ್ತಿರೋ । **ಸ ಜನಃ**—ಆ ಯಜ್ಞಕರ್ತನಾದ ಮನುಷ್ಯನು । **ಸುಗೋಪಾತಮಃ**—ಶ್ರೇಷ್ಠವಾದ ರಕ್ಷಣೆಗಳಿಂದ ಕೂಡಿಕೊಂಡಿರುತ್ತಾನೆ. ।

ಭಾವಾರ್ಥ

ಅತ್ಯಂತ ಪ್ರಕಾಶದಿಂದ ಕೂಡಿದ ಎಲೈ ಮರುತ್ತುಗಳೇ, ನೀವು ಅಂತರಿಕ್ಷಲೋಕದಿಂದ ದಯಮಾಡಿಸಿ ಯಾವ ಯಜಮಾನನ ಯಜ್ಞಗೃಹದಲ್ಲಿ ಸೋಮರಸವನ್ನು ಪಾನಮಾಡುತ್ತೀರೋ ಆ ಮನುಷ್ಯನಿಗೆ ಶ್ರೇಷ್ಠವಾದ ರಕ್ಷಣೆಗಳಿರುತ್ತವೆ.

English Translation

O resplendent Maruts, that man in house you drink the Soma-libation is provided with most able protectors.

ವಿಶೇಷನಿಶ್ಚಯ

ವಿಮಹಸಃ—**ವಿಶಿಷ್ಟಪ್ರಕಾಶಾಃ** । ಅತ್ಯಂತ ಪ್ರಕಾಶಮಾನರಾದ ।

ಕ್ಷಯೇ—**ಯಜ್ಞಗೃಹೇ** । ಯಜ್ಞಮಾಡುವ ಗೃಹದಲ್ಲಿ.

ಪಾಥ—ಸೋಮರಸವನ್ನು ಕುಡಿಯುತ್ತೀರೊ.

ಸುಗೋಪಾತಮಃ—**ಶೋಭನೋ ಗೋಪಾ ರಕ್ಷಕೋ ಯಸ್ಯಸ ಸುಗೋಪಾಃ । ಅತಿಶಯೇನ ಸುಗೋಪಾಃ ಸುಗೋಪಾತಮಃ** । ಶ್ರೇಷ್ಠರಾದ ರಕ್ಷಕರನ್ನು ಹೊಂದಿರುವವನು.

ನಾಕರಣಕ್ರಿಯಾ

ಪಾಥ—ಪಾ ಪಾನೇ ಧಾತು. ಲಟ್ ಮಧ್ಯಮಪುರುಷ ಬಹುವಚನದಲ್ಲಿ ಥ ಪ್ರತ್ಯಯ. **ಬಹುಲಂ ಛಂದಸಿ**—ಎಂಬುದರಿಂದ ಶಪ್ ವಿಕರಣಕ್ಕೆ **ಲುಕ್**. ಶಿತ್‌ಪ್ರತ್ಯಯ **ಪರದಲ್ಲಿಲ್ಲದಿರುವುದರಿಂದ ಸಾಹ್ವಾಧ್ಮಾ**—ಸೂತ್ರದಿಂದ ಪಿಬಾದೇಶ ಬರುವುದಿಲ್ಲ. ಯಸ್ಯ ಎಂದು ಹಿಂದೆ ಸಂಬಂಧವಿರುವುದರಿಂದ **ಯಜ್ಞ್ಯಾತ್ಸ್ವಿತ್ಯಂ**—ಎಂಬುದರಿಂದ **ನಿಘಾತಸ್ವರ** ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. **ವ್ಯಚೋಽತಸ್ತಿಙಃ** (ಪಾ. ಸೂ. ೬-೩-೧೩೫) ಎಂಬುದರಿಂದ ಪುಂತ್ರಗಲ್ಲಿ ವ್ಯಚ್ ಅಚ್ಚುವಾದುದರಿಂದ ದೀರ್ಘ ಬರುತ್ತದೆ

ದಿವಃ—**ಊಡಿದಂ ಪದಾದಿ**—ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ವಿಮಹಸಃ—ವಿಶಿಷ್ಟಂ ಮಹಃ (ತೇಜಃ) ಯೇಷಾಂ ತೇ ವಿಮಹಸಃ ಸಂಬೋಧನಾ ಬಹುವಚನದಲ್ಲಿಯೂ ವಿಮಹಸಃ ಎಂದು ರೂಪವಾಗುತ್ತದೆ. **ಆಮಂತ್ರಿತಸ್ಯ ಚ**—ಎಂಬುದರಿಂದ ನಿಘಾತಸ್ವರ ಬರುತ್ತದೆ.

ಸುಗೋಪಾತಮಃ—ಶೋಭನೋ ಗೋಪಾ ರಕ್ಷಕೋ ಯಸ್ಯ ಸಃ ಸುಗೋಪಾಃ (ಸಮರ್ಥನಾದ ರಕ್ಷಣೆ ಯುಳ್ಳವನು) ಅತಿಶಯೇನ ಸುಗೋಪಾಃ ಸುಗೋಪಾತಮಃ **ಅತಿಶಾಯನೇ ತಮಬಿಷ್ಠನೌ** ಸೂತ್ರದಿಂದ ತಮಪ್ ಪ್ರತ್ಯಯ. ಅದು ಪಿತ್ತಾದುದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತವಾಗುತ್ತದೆ. ಆಗ ಸುಗೋಪಾಃ ಎಂಬ ಬಹುವ್ರೀಹಿಸಮಾಸದಲ್ಲಿ **ನಞ್ಸುಭ್ಯಾಂ** (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರ ಪದಾಂತೋದಾತ್ತಸ್ವರವೇ ಉಳಿಯುತ್ತದೆ. ಪಕಾರೋತ್ತರಾಕಾರ ಉದಾತ್ತವಾಗುತ್ತದೆ. ॥ ೧ ॥

[illegible]

[illegible]

ಯಜ್ಞೈರ್ವಾ ಯಜ್ಞವಾಹಸೋ ವಿಪ್ರಸ್ಯ ವಾ ಮತೀನಾಂ ।
ಮರುತಃ ಶೃಣುತಾ ಹವಂ ॥ ೨ ॥

[illegible]

ಯಜ್ಞೈಃ । ವಾ । ಯಜ್ಞವಾಹಸಃ । ವಿಪ್ರಸ್ಯ । ವಾ । ಮತೀನಾಂ ।
ಮರುತಃ । ಶೃಣುತ । ಹವಂ ॥ ೨ ॥

ಸಾಯಣಭಾಷ್ಯಂ

ಹೇ ಯಜ್ಞವಾಹಸೋ ಯಜ್ಞಸ್ಯ ವೋಢಾರೋ ಮರುತೋ ಯೂಯಂ ಯಜ್ಞೈರ್ವಾ । ವಾಶಬ್ದಃ ಸಮುಚ್ಚಯೇ । ಯಜ್ಞೈಶ್ಚ ಯಜಮಾನಸ್ಯ ಮತೀನಾಂ ಸ್ತುತೀನಾಂ ಸಂಬಂಧಿನೋ ವಿಪ್ರಸ್ಯ ವಾ ಯಜಮಾನಸ್ಯ ಮೇಧಾವಿನಶ್ಚ ಹವಮಾಹ್ವಾನಂ ಶೃಣುತ । ಯಜ್ಞವತೋ ಯಜಮಾನಸ್ಯ ಯಾಗರಹಿತಸ್ಯ ಸ್ತೋತುಶ್ಚಾಹ್ವಾನಮವಶ್ಯಂ ಭವದ್ಭಿಃ ಶ್ರೋತವ್ಯಂ ಯತೋ ಭವಂತೋ ಯಜ್ಞಸ್ಯ ವೋಢಾರಃ

स्तुतिप्रियाश्चेति भावः ॥ यज्ञवाहसः । गतिकारकयोरपि पूर्वपदप्रकृतिस्वरत्वं चेति वचनाद्यज्ञंवहिर्हाधाग्भ्यश्छंदसीति कारकपूर्वाद्धेतेरसुन् । णिदित्यनुवृत्तेरुपधावृद्धिः। मतीनां मत ज्ञाने । अस्मात्करणे क्तिन्। नामन्यतरस्यामिति नामु उदात्तत्वं । शृणुत। श्रुवः शृच्चेति शृ्नुः । सति शिष्टस्य स्वरबलीयस्त्वमन्यत्र विकरणेभ्य इति वचनात्तिङ एव स्वरः शिष्यते । मरुत इत्यस्यामंत्रितस्यामंत्रितं पूर्वमविद्यमानवदित्यविद्यमानवत्त्वेन पदादपरत्वान्निघातभावः । हवं । भावेऽनुपसर्गस्येति ह्वयतेरप् संप्रसारणं च ॥

ಪ್ರತಿಪದಾರ್ಥ

ಯಜ್ಞವಾಹಸಃ — ಯಜ್ಞವಾಪಕರಾದ । **ಮರುತಃ**— ಎಲೈ ಮರುತ್ತುಗಳೇ (ನೀವು) । **ಯಜ್ಞೈರ್ವಾ**—ಯಜ್ಞಗಳಿಂದ ಕೂಡಿನ (ಯಜಮಾನನದಾಗಲಿ) ಅಥವಾ । **ಮತೀನಾಂ**—ಸ್ತೋತ್ರಗಳ (ಪಾಠಕನೂ) । **ವಿಪ್ರಸ್ಯ ವಾ**—(ಯಜ್ಞಕರ್ತನಲ್ಲದಿದ್ದರೂ ಸಹ) ಮೇಧಾವಿಯೂ ಆದ ಭಕ್ತನ । **ಹವಂ**—ಆಹ್ವಾನವನ್ನು । **ಶೃಣುತ**—ಕೇಳಿರಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನೀವು ಯಜ್ಞವಾಪಕರೂ ಮತ್ತು ಸ್ತೋತ್ರಪ್ರಿಯರೂ ಆದ್ದರಿಂದ ನಿಮ್ಮ ಭಕ್ತನು ಎಂದರೆ ಯಜ್ಞಮಾಡತಕ್ಕ ಯಜಮಾನನ ಅಥವಾ ಯಜ್ಞಕರ್ತನಲ್ಲದ ಸ್ತೋತ್ರಪಾಠಕರ, ಇಬ್ಬರ ಆಹ್ವಾನವನ್ನೂ ಒಂದೇ ವಿಧವಾದ ಪ್ರೀತಿಯಿಂದ ಆಲಿಸಿಕೇಳಿ.

English Translation

O Maruts, bearers of oblations, hear the invocations of the praises of the worshipper with or without sacrifices.

॥ ವಿಶೇಷವಿಷಯಗಳು ॥

ಯಜ್ಞವಾಹಸಃ—ಯಜ್ಞನಿರ್ವಾಹಕರು, ಯಜ್ಞದಲ್ಲಿ ಭಾಗವಹಿಸುವ ಋತ್ವಿಗ್ಜನರು.

ಮತೀನಾಂ—**ಸ್ತುತೀನಾಂ** । ಸ್ತೋತ್ರಸಂಬಂಧವಾದ, ಸ್ತೋತ್ರಗಳಿಂದ ಆಹ್ವಾನಿಸಲ್ಪಡುವ.

ಯಜ್ಞೈರ್ವಾ—ಯಜ್ಞಮಾಡುವ ಯಜಮಾನನು ಯಜ್ಞದಲ್ಲಿ ಮಾಡುವ ಆಹ್ವಾನವನ್ನಾಗಲಿ ಅಥವಾ ಯಜ್ಞನಿಲ್ಲದೆ ಹಾಗೆಯೇ ಮಾಡುವ ಆಹ್ವಾನವನ್ನಾಗಲೀ ಗಮನಿಸಿ ಕೇಳಬೇಕೆಂಬ ಅರ್ಥವನ್ನು ವಾ ಎಂಬ ಶಬ್ದವು ಸೂಚಿಸುವುದು.

॥ ವ್ಯಾಕರಣಪ್ರಕ್ರಿಯಾ ॥

ಯಜ್ಞವಾಹಸಃ—**ಗತಿಕಾರಕಯೋರಪಿ ಪೂರ್ವಪದಪ್ರಕೃತಿಸ್ವರತ್ವಂಚ** (ಉ. ಸೂ. ೪-೨೨೬) ಎಂಬ ವಚನವಿರುವುದರಿಂದ ಯಜ್ಞ ಎಂಬ ಕಾರಕವು ಉಪಪದವಾಗಿರುವಾಗ **ವಹಿ ಹಾ ಧಾಞ್ಭ್ಯಶ್ಛಂದಸಿ**

(ಉ. ಸೂ. ೪-೬೬೦) ಎಂಬುದರಿಂದ ವಹ ಧಾತುವಿಗೆ ಅಸುನ್ ಪ್ರತ್ಯಯ. **ವಸೇರ್ನಿತ್** (ಉ. ಸೂ. ೬-೬೫೭) ಎಂಬುದರಿಂದ ಣಿತ್ ಎಂದು ಅನುವೃತ್ತವಾಗುವುದರಿಂದ ಅಸುನಿಗೆ ಣಿದ್ವದ್ಭಾವ ಬರುತ್ತದೆ. ಆಗ **ಅತ ಉಪ ಧಾಯಾಃ** ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ ಬರುತ್ತದೆ. **ಯಜ್ಞವಾಹಸ್** ಶಬ್ದವಾಗುತ್ತದೆ. ಸಂಬೋಧನಾ ಬಹುವಚನಾಂತದಲ್ಲಿ ಯಜ್ಞವಾಹಸಃ ಎಂದು ರೂಪವಾಗುತ್ತದೆ. **ಆಮಂತ್ರಿತಸ್ಯ ಚ** ಸೂತ್ರದಿಂದ ನಿಘಾತಸ್ವರ ಬರುತ್ತದೆ.

ಮತೀನಾಂ– ಮನ ಜ್ಞಾನೇ ಧಾತು. **ಸ್ತ್ರಿಯಾಂ ಕ್ತಿನ್**—ಸೂತ್ರದಿಂದ ಕರಣಾರ್ಥದಲ್ಲಿ ಕ್ತಿನ್ ಪ್ರತ್ಯಯ ಮನ್+ತಿ ಎಂದಿರುವಾಗ **ಅನುದಾತ್ತೋಪದೇಶವನತಿ**—ಸೂತ್ರದಿಂದ ಧಾತುವಿನ ಅನುನಾಸಿಕನಾದ ನಕಾರಕ್ಕೆ ಲೋಪ. ಷಷ್ಠೀಬಹುವಚನದಲ್ಲಿ **ಹ್ರಸ್ವನದ್ಯಾಪ್ನೋನುಟ್** ಎಂಬ ಸೂತ್ರದಿಂದ ಆಮಿಗೆ ನುಟ್ಆಗಮ **ನಾಮಿ** ಎಂಬುದರಿಂದ ಅಂಗಕ್ಕೆ ದೀರ್ಘ. ಮತೀನಾಮ್ ಎಂದು ರೂಪವಾಗುತ್ತದೆ. **ನಾಮನ್ಯತರಸ್ಯಾಮ್** (ಪಾ. ಸೂ. ೬-೧-೧೭೬) ಎಂಬುದರಿಂದ ನಾಮಿಗೆ ಉದಾತ್ತಸ್ವರ ಬರುತ್ತದೆ.

ಶೃಣುತ—ಶ್ರು ಶ್ರವಣೇ. ಧಾತು ಲೋಟ್ ಮಧ್ಯಮಪುರುಷಬಹುವಚನದಲ್ಲಿ ಲಜ್ವದ್ಭಾವವಿರುವುದರಿಂದ **ತಸ್ಥಸ್ಥ**—ಸೂತ್ರದಿಂದ ತಾದೇಶ. **ಶ್ರುವಃ ಶೃ ಚ** (ಪಾ.ಸೂ. ೩-೧-೭೪) ಶ್ರುಧಾತುವಿಗೆ ಶ್ನುವಿಕರಣವೂ ಪ್ರಕೃತಿಗೆ ಶೃ ಆದೇಶವೂ ಬರುತ್ತದೆ ಎಂಬುದರಿಂದ ಶ್ರುಧಾತುವಿಗೆ ಶೃ ಆದೇಶ. ಪರಿಗೆ ಶ್ನುವಿಕರಣ. **ಸಾರ್ವಧಾತುಕಮಪಿತ್**—ಎಂಬುದರಿಂದ ಙಿತ್ತಾಗುವುದರಿಂದ ಉಕಾರಕ್ಕೆ ಗುಣ ಬರುವುದಿಲ್ಲ. **ಸತಿಶಿಷ್ಟಸ್ವರಬಲೀಯಸ್ತ್ವಮನ್ಯತ್ರ ವಿಕರಣೇಭ್ಯಃ** ಎಂಬ ಪರಿಭಾಷೆಯಿಂದ ವಿಕರಣಸ್ವರವನ್ನು ಬಾಧಿಸಿ ತಿಙ್‌ನ ಸ್ವರನೇ ಉಳಿಯುತ್ತದೆ. ಅಂತೋದಾತ್ತವಾದ ಪದವಾಗುತ್ತದೆ. ಯದ್ಯಪಿ ಅತಿಙಂತವಾನುದು ಪೂರ್ವಪದವಾಗಿದೆ. ಆದುದರಿಂದ ನಿಘಾತಸ್ವರ ಬರಬೇಕಾಗುತ್ತದೆ. ಆದರೆ ಅದಕ್ಕೆ ಆಮಂತ್ರಿತಸಂಜ್ಞೆ ಇರುವುದರಿಂದ **ಆಮಂತ್ರಿತಂ ಪೂರ್ವಮವಿದ್ಯಮಾನವತ್** ಎಂಬುದರಿಂದ ಅವಿದ್ಯಮಾನವದ್ಭಾವ (ಇದ್ದರೂ ಇಲ್ಲದಂತಿರುವುದು) ವಿರುದ್ಧವರಿಂದ ಪದದ ಪರದಲ್ಲಿ ಬಂದಂತಾಗಲಿಲ್ಲ ಆದುದರಿಂದ ನಿಘಾತಸ್ವರ ಬರುವುದಿಲ್ಲ.

ಹವಮ್—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ. ಧಾತು. ಇದಕ್ಕೆ **ಭಾವೇನುಪಸರ್ಗಸ್ಯ** (ಪಾ ಸೂ. ೩-೩-೫೫) ಎಂಬುದರಿಂದ ಭಾವಾರ್ಥದಲ್ಲಿ ಅಪ್ ಪ್ರತ್ಯಯ ಮತ್ತು ಸಂಪ್ರಸಾರಣ ಬರುತ್ತದೆ. **ಸಂಪ್ರಸಾರಣಾಚ್ಚ** ಎಂಬುದರಿಂದ ಧಾತುವಿನ ಏಕಾರಕ್ಕೆ ಪೂರ್ವರೂಪ. ಹು+ಅ ಎಂದಿರುವಾಗ **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಗುಣ ಅವಾದೇಶ. ಅಪ್ ಪಿತ್ತಾದುದರಿಂದ ಅನುದಾತ್ತ. ಧಾತುಸ್ವರ ಉಳಿಯುತ್ತದೆ. ॥ ೨ ॥

॥ ಸಂಹಿತಾಪಾಠಃ ॥

ಉತ ವಾ ಯಸ್ಯ ವಾಜಿನೋ ಽನು ವಿಪ್ರಮತಕ್ಷತ ।
ಸ ಗಂತಾ ಗೋಮತಿ ವ್ರಜೇ ॥ ೩ ॥

॥ ಪದಪಾಠಃ

ಉತ । ವಾ । ಯಸ್ಯ । ವಾಜಿನಃ । ಅನು । ವಿಪ್ರಂ । ಅತಕ್ಷತ ।
ಸಃ । ಗಂತಾ । ಗೋಽಮತಿ । ವ್ರಜೇ ॥ ೩ ॥

॥ ಸಾಯಣಭಾಷ್ಯಂ ॥

ಉತ ವಾಪಿ ಚ ಯಸ್ಯ ಯಜಮಾನಸ್ಯ ವಾಜಿನೋ ಹವಿರ್ಲಕ್ಷಣಾನ್ನೋಪೇತಾ ಋತ್ವಿಜೋ ವಿಪ್ರಂ ಮೇಧಾವಿನಂ ಮರುದ್ಗಣಮನ್ವತಕ್ಷತ ಹವಿಷ್ಪ್ರದಾನಾದಿನಾ ತೀಕ್ಷ್ಣೀಕುರ್ವಂತಿ ಸ ಯಜಮಾನೋ ಗೋಮತಿ ಬಹುಭಿರ್ಗೋಭಿರ್ಯುಕ್ತೇ ವ್ರಜೇ ಗೋಷ್ಠೇ ಗಂತಾ ಗಮನಶೀಲೋ ಭವತಿ ॥ ಅತಕ್ಷತ । ತಕ್ಷೂ ತ್ವಕ್ಷೂ ತನೂಕರಣೇ । ಛಾಂದಸೋ ಲಙ್ । ವ್ಯತ್ಯಯೇನ ಮಧ್ಯಮಃ । ಗಂತಾ । ಗಮೇಸ್ತಾಚ್ಛೀಲಿಕಸ್ತೃನ್ ॥

ಪದಕೃತ್ಯಾರ್ಥ

ಉತ ವಾ—ಅಥವಾ ಅಲ್ಲದೇ । **ಯಸ್ಯ**—ಯಾವ ಯಜಮಾನನಿಗಾಗಿ । **ವಾಜಿನಃ**—ಹವಿಸ್ಸಿನರೂಪದ ಅನ್ನದಿಂದ ಕೂಡಿದ ಋತ್ವಿಕ್ಕುಗಳು । **ವಿಪ್ರಂ**—ಮೇಧಾವಿಯಾದ ಮರುದ್ಗಣವನ್ನು । **ಅನು ಅತಕ್ಷತ**—(ಪವಿತ್ರದಾನಾದಿಗಳಿಂದ) ಚುರುಕಾಗುವಂತೆ ಮಾಡುತ್ತಾರೋ, । **ಸಃ**— ಆ ಯಜಮಾನನು । **ಗೋಮತಿ**—(ಪ್ರಭೂತವಾದ) ಗೋವುಗಳಿಂದ ಕೂಡಿದ । **ವ್ರಜೇ**—ಕೊಟ್ಟಿಗೆಯಲ್ಲಿ । **ಗಂತಾ**—ಸಂಚರಿಸುವವನಾಗುತ್ತಾನೆ. ।

॥ ಭಾವಾರ್ಥಃ ॥

ಯಾವ ಯಜಮಾನನಿಗಾಗಿ ಋತ್ವಿಕ್ಕುಗಳು ಹವಿಸ್ಸಿನ ರೂಪದ ಅನ್ನಗಳನ್ನು ಅರ್ಪಿಸಿ ಪ್ರಾಜ್ಞರಾದ ಮರುತ್ತುಗಳನ್ನು ಚುರುಕಾಗುವಂತೆ ಮಾಡುತ್ತಾರೋ, ಆ ಯಜಮಾನನು ಗೋರೂಪವಾದ ಸಂಪತ್ತನ್ನು ಸಮೃದ್ಧವಾಗಿ ಹೊಂದಿ ಯಾವಾಗಲೂ ಗೋವಿನ ಕೊಟ್ಟಿಗೆಯಲ್ಲಿಯೇ ಸಂಚರಿಸುವವನಾಗುತ್ತಾನೆ.

English Translation

And may he for whom the priests with oblations have sharpened (the hunger of the Maruts) walk among pastures crowded with cattle.

ವಿಶೇಷವಿಷಯಗಳು

ವಿಪ್ರಂ—ಬುದ್ಧಿಪಂತರಾದ ಮರುದ್ಗಣವನ್ನು, ಮರುತ್ಸಮೂಹವನ್ನು, ಇಲ್ಲಿ ವಿಪ್ರಂ ಎಂದು ಏಕವಚನ ಪ್ರಯೋಗವಿರುವುದರಿಂದ ಮರುದ್ದೇವತೆಗಳ ಸಮೂಹವೆಂಬ ಅರ್ಥವನ್ನು ಹೇಳಬೇಕು.

ಅತಕ್ಷತ— ಹವಿಷ್ಪ್ರದಾನಾದಿನಾ ತೀಕ್ಷ್ಣೀಕುರ್ವಂತಿ । ತಕ್ಷೂ ತ್ವಕ್ಷೂ ತನೂಕರಣೇ । ಹವಿಷ್ಪ್ರದಾನಾದಿಗಳಿಂದ ಮರುದ್ದೇವತೆಗಳ ಕ್ಷುತ್ತನ್ನು ಚುರುಕುಗೊಳಿಸಿ ಯಜಮಾನನು ಅರ್ಪಿಸುವ ಹವಿಸ್ಸು ಸೋಮ ಮೊದಲಾದ ದ್ರವ್ಯಗಳಲ್ಲಿ ಆಸಕ್ತಿಯುಂಟಾಗುವಂತೆ ಮಾಡುವರು ಎಂದಭಿಪ್ರಾಯವು

ಸ ಗಂತಾ ಗೋಮತಿ ವ್ರಜೇ—ಗೋವುಗಳಿಂದ ಕೂಡಿರತಕ್ಕ ಕೊಟ್ಟಿಗೆಯಲ್ಲಿ ಯೋಗುವನು ಎಂದರೆ ಅನೇಕ ಗೋವುಗಳನ್ನು ಪಡೆದು ಸುಖಿಸುವನು. ಮರುದ್ದೇವತೆಗಳ ಅನುಗ್ರಹದಿಂದ ಅನೇಕ ಗೋವುಗಳು ಲಭಿಸುವವು ಎಂದಭಿಪ್ರಾಯವು.

ವ್ಯಾಕರಣಪ್ರಕ್ರಿಯಾ

ವಾಜಿನಃ — ವಾಜಮಸ್ಯಾಸ್ತೀತಿ ವಾಜೀ. **ಅತ ಇನಿಠನೌ**— ಎಂಬುದರಿಂದ ಮತ್ವರ್ಥದಲ್ಲಿ ಇನಿ ಪ್ರತ್ಯಯ. ವಾಜಿನ್ ಶಬ್ದವಾಗುತ್ತದೆ. ಬಹುವಚನಾಂತರೂಪ. ಪ್ರತ್ಯಯಸ್ವರದಿಂದ ಇಕಾರ ಉದಾತ್ತವಾಗುತ್ತದೆ.

ಅತಕ್ಷತ—ತಕ್ಷೂ ತ್ವಕ್ಷೂ ತನೂಕರಣೇ ಧಾತು. ವರ್ತಮಾನಾರ್ಥದಲ್ಲಿ **ಛಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲಙ್. **ವ್ಯತ್ಯಯೋ ಬಹುಲಂ**—ಎಂಬುದರಿಂದ ಪ್ರಥಮಪುರುಷ ಬಹುವಚನಕ್ಕೆ ಮಧ್ಯಮಪುರುಷ ಬಹುವಚನ ಪ್ರತ್ಯಯ ಬರುತ್ತದೆ **ಶಪ್** ವಿಕರಣ. ಯಸ್ಯ ಎಂದು ಹಿಂದೆ ಸಂಬಂಧಪಟ್ಟಿರುವುದರಿಂದ **ಯಿದ್ಯವತ್ತಾದ್ಯುತ್ತ್ವಾದ್ಯಂ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾದ ಪದವಾಗುತ್ತದೆ.

ಗಂತಾ—ಗಮ್ಲೃ ಗತೌ ಧಾತು. ತಾಚ್ಛೀಲ್ಯಾರ್ಥದಲ್ಲಿ ತೃಸ್ ಪ್ರತ್ಯಯ. ಸುಕಾರಕ್ಕೆ ಅನುಸ್ವಾರ ಪರಸವರ್ಣ ಬರುತ್ತದೆ. ಗನ್ತೃ ಶಬ್ದವಾಗುತ್ತದೆ ಪ್ರಥಮಾ ಸುವಿನಲ್ಲಿ **ಯಮಹನಸ್ಸು**—ಸೂತ್ರದಿಂದ ಅನುಪದೇಶ. **ಅಸ್‌ತೃನ್‌ತೃಚ್**—ಸೂತ್ರದಿಂದ ಉಪಧಾದೀರ್ಘ. **ಹಲ್‌ಜ್ಯಾಭ್ಯೋ**—ಸೂತ್ರದಿಂದ ಸುಲೋಪ **ನಲೋಪಃ ಪ್ರಾತಿ** — ಎಂಬುದರಿಂದ ನಲೋಪ. ನಿತ್ ನ್ಯತ್ಯಯಾಂತವಾದುದರಿಂದ ಞ್ನಿತ್ಯಾದಿರ್ನಿತ್ಯಂ ಎಂಬುದರಿಂದ ಆದ್ಯುದಾತ್ತವಾಗುತ್ತದೆ. ॥ ೩ ॥

॥ ಸಂಹಿತಾಪಾಠಃ ॥

ಅ॒ಸ್ಯ ವೀ॒ರಸ್ಯ॑ ಬ॒ರ್ಹಿಷಿ॑ ಸು॒ತಃ ಸೋ॒ಮೋ ದಿ॒ವಿಷ್ಟಿ॑ಷು ।
ಉ॒ಕ್ಥಂ ಮ॒ದಶ್ಚ॑ ಶ॒ಸ್ಯತೇ ॥ ೪ ॥

ಪದಪಾಠಃ

ಅ॒ಸ್ಯ । ವೀ॒ರಸ್ಯ॑ । ಬ॒ರ್ಹಿಷಿ॑ । ಸು॒ತಃ । ಸೋ॒ಮಃ । ದಿ॒ವಿಷ್ಟಿ॑ಷು ।
ಉ॒ಕ್ಥಂ । ಮ॒ದಃ । ಚ॒ । ಶ॒ಸ್ಯತೇ ॥ ೪ ॥

ಸಾಯಣಭಾಷ್ಯಂ

ದಿವಿಷ್ಟಿಷು ಯಜನೀಯೇದಿವಸೇಷು ಬರ್ಹಿಷಿ ಯಜ್ಞೇ ವೀರಸ್ಯ ಶತ್ರುಕ್ಷೇಪಣಕುಶಲಸ್ಯಾಸ್ಯ ಮರುದ್ಗಣಸ್ಯ ಯಾಗಾಯ ಸೋಮಃ ಸುತಃ । ಋತ್ವಿಗ್ಭಿರಭಿಷುತೋ ಭವತಿ । ಉಕ್ಥಂ ಮರುದ್ದೇವತಾಕಂ ಶಸ್ತ್ರಂ ಮದಶ್ಚ ಮದಿಧಾತುನಾ ಯುಕ್ತಾ ಮರುತೋ ದೇವಾಃ ಸೋಮಸ್ಯ ಮತ್ಸನ್ನಿತ್ಯಾದಿಕಾ ಮಾರುತೀ ನಿವಿಚ್ಚಾಸ್ಯ ಮರುದ್ಗಣಸ್ಯ ಹರ್ಷಾಯ ಶಸ್ಯತೇ । ಹೋತ್ರಾ ಪಠ್ಯತೇ ॥ ಅಸ್ಯ । ಊಡಿದಮಿತಿ ವಿಭಕ್ತೇರುದಾತ್ತತ್ವಂ । ದಿವಿಷ್ಟಿಷು । ಇಷ್ಟಯ ಏಷಣಾನಿ ಗಮನಾನಿ । ದಿವೋ ದ್ಯೋತಮಾನಸ್ಯ ಸೂರ್ಯಸ್ಯೇಷ್ಟಯೋ ಯೇಷು ದಿವಸೇಷು ತೇ ತಥೋಕ್ತಾಃ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ವ್ಯತ್ಯಯೇನೋತ್ತರಭಾವಃ ॥

ಪ್ರತಿಪದಾರ್ಥ ।

ದಿವಿಷ್ಟಿಷು—ಯಜ್ಞದಿವಸಗಳಲ್ಲಿ । **ಬರ್ಹಿಷಿ**—ಯಜ್ಞವಷ್ಟಿ । **ವೀರಸ್ಯ**—ಪರಾಕ್ರಮಶಾಲಿಯಾದ । **ಅಸ್ಯ**—ಈ ಮರುದ್ಗಣಕ್ಕಾಗಿ । **ಸೋಮಃ**—ಸೋಮರಸವು । **ಸುತಃ** – ಹಿಂಡಿದೆ. । **ಉಕ್ಥಂ**—(ಮರುದ್ದೇವತೆಗಳನ್ನು ಉದ್ದೇಶಿಸಿದ) ಶಸ್ತ್ರರೂಪವಾದ ಸ್ತೋತ್ರವು । **ಶಸ್ಯತೇ**—ಪಠಿತವಾಗುತ್ತದೆ. । **ಮದಶ್ಚ** (ಅವರ)ಹರ್ಷವೂ ಕೂಡ ಉಲ್ಬಣವಾಗುತ್ತದೆ. ।

ಭಾವಾರ್ಥ

ಪರಾಕ್ರಮಶಾಲಿಯಾದ ಮರುದ್ಗಣಕ್ಕಾಗಿ ಯಜ್ಞದಿನಗಳಲ್ಲಿ ಪ್ರತಿಯಜ್ಞನಲ್ಲೂ ಸಹ ಸೋಮರಸವು ಹಿಂಡಲ್ಪಡುವುದು. ಮರುದ್ದೇವತೆಗಳನ್ನು ಉದ್ದೇಶಿಸಿದ ಸ್ತೋತ್ರವು ಪಠಿತವಾಗುತ್ತದೆ. ಅವರ ಹರ್ಷವೂ ಕೂಡ ಉಲ್ಬಣವಾಗುತ್ತದೆ.

English Translation

The libation is poured out for the heroic band of Maruts at the sacrifice on the appointed days and the hymn repeated causes joy to the Maruts.

ವಿಶೇಷವಿಷಯಗಳು

ವೀರಸ್ಯ—ಶತ್ರುಕ್ಷೇಪಣಕುಶಲಸ್ಯಾಸ್ಯ ಮರುದ್ಗಣಸ್ಯ । ಶತ್ರುಗಳನ್ನು ಜಯಿಸುವ ಸಾಮರ್ಥ್ಯವುಳ್ಳ ಮರುದ್ಗಣಕ್ಕೆ.

ದಿವಿಷ್ಟಿಷು—ಇಷ್ಟಯೇ ಏಷಣಾನಿ ಗಮನಾನಿ । ದಿವೋ ದ್ಯೋತಮಾನಸ್ಯ ಸೂರ್ಯಸ್ಯೇಷ್ಟಯೋ ಯೇಷು ದಿವಸೇಷು ತೇ । ಯಜನೀಯೇ ದಿವಸೇಷು ಯಜ್ಞಮಾಡುವ ದಿವಸಗಳಲ್ಲಿ.

ಉಕ್ಥಂ—ಮರುದ್ವೀರತಾಕವಾದ ಸ್ತೋತ್ರವು

ಶಸ್ಯತೇ—ಹೋತ್ರಾ ಪಠ್ಯತೇ । ಹೋತೃವೆಂಬ ಋತ್ವಿಜನಿಂದ ಪಠಿಸಲ್ಪಡುವುದು.

ಸ್ಮಾಕರಣಪ್ರಕ್ರಿಯಾ

ಆಸ್ಯ—ಇದಮ್ ಶಬ್ದ. ಷಷ್ಠ್ಯೇಕವಚನದಲ್ಲಿ ಙಸ್ ಪ್ರತ್ಯಯ. **ತ್ಯದಾದೀನಾಮಃ** ಎಂಬುದರಿಂದ ಅತ್ವ. **ಅತೋ ಗುಣೇ** ಎಂಬುದರಿಂದ ಪರರೂಪ. ಅದಂತವಾದುದರಿಂದ ವಿಭಕ್ತಿಗೆ ಸ್ಯ ಆದೇಶ. ಹಲಾದಿ ವಿಭಕ್ತಿ ಪರದಲ್ಲಿ ಬಂದುದರಿಂದ **ಹಲಿ ಲೋಪಃ** (ಪಾ.ಸೂ. ೭-೩-೧೧೩) ಎಂಬುದರಿಂದ ಇದ್ ಎಂಬುದಕ್ಕೆ **ಲೋಪ** ಆಸ್ಯ ಎಂದು ರೂಪವಾಗುತ್ತದೆ. **ಊಡಿದಂ ಪದಾದಿ**—(ಪಾ.ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತ ಸ್ವರ ಬರುತ್ತದೆ.

ದಿವಿಷ್ಟಿಷು—ಇಷ್ಟಯಃ ಏಷಣಾನಿ ಗಮನಾನಿ. ಇಷ ಗತೌ ಧಾತು. ದಿವಾದಿ ಭ್ವಾರ್ಥದಲ್ಲಿ ಕ್ತಿನ್ ಪ್ರತ್ಯಯ. ಷ್ಟುತ್ವದಿಂದ ಪ್ರತ್ಯಯಕ್ಕೆ ಟಕಾರಾದೇಶ. ದಿವಃ ದ್ಯೋತಮಾನಸ್ಯ ಸೂರ್ಯಸ್ಯ ಇಷ್ಟಯೋ ಯೇಷು ದಿವಸೇಷು ತೇ ದಿವಿಷ್ಟಯಃ (ಹಗಲು ಎಂದರ್ಥ.) **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ. ಸಮಾಸವಾದಾಗ ಸುಬ್ಲುಕ್ ಆಗುವುದರಿಂದ ದಿವ್ ಎಂಬುದಕ್ಕೆ ಪದಾಂತತ್ವ ಬರುವುದರಿಂದ **ದಿವ ಉತ್** ಸೂತ್ರದಿಂದ ಉತ್ವ ಬರಬೇಕಾಗುತ್ತದೆ. ಆದರೆ **ವ್ಯತ್ಯಯೋ ಬಹುಲಂ** ಎಂಬುದರಿಂದ ಇಲ್ಲಿ ಬರುವುದಿಲ್ಲ. ಸಪ್ತಮೀ ಬಹುವಚನಾಂತ ರೂಪ.

ಶಸ್ಯತೇ—ಶಂಸು ಸ್ತುತೌ ಧಾತು. ಕರ್ಮಣಿಯಲ್ಲಿ ಲಟ್ ಪ್ರಥಮಪುರುಷ ಏಕವಚನರೂಪ. ಯತ್ ಕಿತ್ತ್ವದಿಂದ **ಅನಿದಿತಾಂ ಹಲ**—ಎಂಬ ಸೂತ್ರದಿಂದ ಧಾತುವಿನ ಉಪಧಾನಕಾರಕ್ಕೆ ಲೋಪ. ತಿಙಂತ ನಿಘಾತಸ್ವರಬರುತ್ತದೆ. ॥ ೪ ॥

ಸಂಹಿತಾಪಾಠಃ

ಅಸ್ಯ ಶ್ರೋಷನ್ತ್ವಾ ಭುವೋ ವಿಶ್ವಾ ಯಶ್ಚರ್ಷಣೀರಭಿ।
ಸೂರಂ ಚಿತ್ಸುಷ್ಮೀರಿಷಃ ॥ ೫ ॥

ಪದಪಾಠಃ

ಅಸ್ಯ । ಶ್ರೋಷಂತು । ಆ । ಭುವಃ । ವಿಶ್ವಾಃ । ಯಃ । ಚರ್ಷಣೀಃ । ಅಭಿ ।
ಸೂರಂ । ಚಿತ್ । ಸುಸ್ರುಷೀಃ । ಇಷಃ ॥ ೫ ॥

ಸಾಯಣಭಾಷ್ಯಂ

ಅಸ್ಯ ಯಜಮಾನಸ್ಯ ಸ್ತುತಿಂ ಮರುತ ಆ ಅಭಿಮುಖ್ಯೇನ ಶ್ರೋಷಂತು । ಶೃಣ್ವಂತು । ಯೋ ಮರುದ್ಗಣೋ ವಿಶ್ವಾಶ್ಚರ್ಷಣೀಃ ಸರ್ವಾನ್ ಶತ್ರುಭೂತಾನ್ಮನುಷ್ಯಾನಭಿ ಭುವಃ ಅಭಿಭವತಿ । ತಾದೃಗ್ಗಣಾಕಾರಾ ಮರುತಃ ಶೃಣ್ವಂತ್ವಿತ್ಯರ್ಥಃ । ಸೂರಂ ಚಿತ್ ಸ್ತುತೇಃ ಪ್ರೇರಯಿತಾರಂ ಯಜಮಾನಮಪೀಮೋ ಮರುದ್ಭಿಃ ಪ್ರತ್ಯಾನ್ಯನ್ಯಾನಿ ಸಸ್ರುಷೀಃ ಪ್ರಾಪ್ತಾನಿ ಭವಂತು ॥ ಶ್ರೋಷಂತು । ಶ್ರು ಶ್ರವಣೇ । ಲೋಟಿ ಸಿಬ್ಬಹುಲಂ ಲೇಟೀತಿ ಬಹುಲವಚನಾತ್ಸಿಪ್ । ಭುವಃ । ಭವತೇರ್ಲೇಟಿ ತಿಪಸ್ತಿಜಾಂ ತಿಜಿರ್ಭವಂತೀತಿ ಸಿಪ್ । ಲೇಟೋಽಡಾಟೌಸಿತ್ಯಡಾಗಮಃ । ಬಹುಲಂ ಛಂದಸೀತಿ ಶಪೋ ಲುಕ್ । ಭೂಸುವೋಸ್ತಿಙೀತಿ ಗುಣಪ್ರತಿಷೇಧಃ । ಸೂರಂ । ಷೂ ಪ್ರೇರಣೇ । ಸುಸೂಧಾಗೃಧಿಭ್ಯಃ ಕ್ರನ್ನಿತಿ ಕ್ರನ್ಪ್ರತ್ಯಯಃ । ಸಸ್ರುಷೀಃ । ಸ್ರು ಗತೌ । ಅಸ್ಮಾಲ್ಲಿಟಃ ಕ್ವಸುಃ । ಉಗಿತಶ್ಚೇತಿ ಙೀಪ್ । ಭಸಂಜ್ಞಾಯಾಂ ವಸೋಃ ಸಂಪ್ರಸಾರಣಮಿತಿ ಸಂಪ್ರಸಾರಣಂ । ಶಾಸಿವಸಿಘುಷೀನಾಂ ಚೇತಿ ಷತ್ವಂ । ಜಸಿ ವಾ ಛಂದಸೀತಿ ಪೂರ್ವಸವರ್ಣದೀರ್ಘತ್ವಂ ॥

ಪದಾರ್ಥಃ

ಯಃ—ಯಾವ ಮರುದ್ಗಣವು । **ವಿಶ್ವಾಃ ಚರ್ಷಣೀಃ**—ಮಾನವರಲ್ಲಿ ಶತ್ರುರೂಪರಾದ ಸಕಲರನ್ನೂ । **ಅಭಿಭುವಃ**—ಸೋಲಿಸಿ ದಮನಸಾಮರ್ಥ್ಯವೋ, (ಆ ಮರುತ್ತುಗಳ ಗಣವು) । **ಅಸ್ಯ**—ಈ ಯಜಮಾನನ (ಸ್ತೋತ್ರವನ್ನು) । **ಆ ಶ್ರೋಷಂತು**—ಚೆನ್ನಾಗಿ ಕೇಳಲಿ. । **ಸೂರಂ ಚಿತ್**—ಸ್ತೋತ್ರಪಾಠಕನಾದ ಯಜಮಾನನನ್ನೂ ಸಹ । **ಇಷಃ**—(ಮರುತ್ತುಗಳಿಂದ ದತ್ತವಾದ) ಅನ್ನಗಳು । **ಸಸ್ರುಷೀಃ**—ಸೇರಿಕೊಳ್ಳಲಿ. ।

ತಾತ್ಪರ್ಯಂ ॥

ಮಾನವರಲ್ಲಿ ಶತ್ರುರೂಪರಾದ ಸಕಲರನ್ನೂ ಸೋಲಿಸಿ ದಮನಸಾಮರ್ಥ್ಯವು ಮರುದ್ಗಣವು ಯಜಮಾನನ

ಸ್ತೋತ್ರವನ್ನು ಚೆನ್ನಾಗಿ ಕೇಳಲಿ. ಆ ಮರುತ್ತುಗಳಿಂದ ದತ್ತವಾದ ಅನ್ನಗಳೂ ಸಹ ಯಜಮಾನನನ್ನೂ ಸಮೃದ್ಧನನ್ನಾಗಿ ಮಾಡಲಿ.

English Translation

May the Maruts, victorious over all men, hear the praises of this (their worshipper) and may abundant food be obtained by him who praises them.

ವಿಶೇಷವಿಷಯಗಳು.

ಅಭಿ ಭುವಃ—ಯಜಮಾನನ ಶತ್ರುಗಳನ್ನು ಸೋಲಿಸುವ.

ಸೂರಂ—ಸ್ತುತೇಃ ಶ್ವೇರಯಿತಾರಂ । ಸ್ತೋತ್ರಮಾಡುವ ಯಜಮಾನನನ್ನು.
ವಿಶ್ವಾಃ ಚರ್ಷಣೀಃ—ಸಮಸ್ತಮನುಷ್ಯರನ್ನೂ ಎಂದರೆ ಶತ್ರುಭೂತರಾದ ಸಮಸ್ತ ಮನುಷ್ಯರನ್ನು.
ಸಸ್ರುಷೀಃ—ಸ್ರು ಗತೌ । ಪ್ರಾಪ್ತಾನಿ ಭವಂತು । ಸೇರಲಿ, ಬಂದು ತುಂಬಿಕೊಳ್ಳಲಿ.

ವ್ಯಾಕರಣಪ್ರಕ್ರಿಯಾ

ಶ್ರೋಷಂತು—ಶ್ರು ಶ್ರವಣೇ ಧಾತು. ಲೋಟ್ ಪ್ರಥಮಪುರುಷ ಬಹುವಚನದಲ್ಲಿ ಅಂತಾದೇಶ ಉತ್ವ. **ಸಿಬ್ಬಹುಲಂ ಲೇಟಿ** (ಪಾ. ಸೂ. ೩-೧-೩೪) ಸೂತ್ರದಲ್ಲಿ ಬಹುಲಗ್ರಹಣವಿರುವುದರಿಂದ ಲೋಟಿನಲ್ಲಿಯೂ ಸಿಪ್ ಬರುತ್ತದೆ. ಧಾತುವಿಗೆ ಗುಣ. ಪ್ರತ್ಯಯಸಕಾರಕ್ಕೆ **ಆದೇಶಪ್ರತ್ಯಯಯೋಃ** ಎಂಬುದರಿಂದ ಷತ್ವ. ಶ್ರೋಷಂತು ಎಂದು ರೂಪವಾಗುತ್ತದೆ ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಭುವಃ—ಭೂ ಸತ್ತಾಯಾಂ ಧಾತು ಲೇಟ್ ಪ್ರಥಮಪುರುಷದಲ್ಲಿ ತಿಪ್ ಬಂದಾಗ **ತಿಜಾಂ ತಿಜ್ಯೋ ಭವಂತಿ** ಎಂಬ ವಚನದಿಂದ ಸಿಪ್ ಆದೇಶ ಬರುತ್ತದೆ. **ಲೇಟೋ ಡಾಟೌ** ಎಂಬುದರಿಂದ ಅದಕ್ಕೆ ಆಡಾಗಮ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಲುಕ್. ಕೇವಲ ತಿಜ್ ಪರವಾದುದರಿಂದ **ಭೂಸುವೋಸ್ತಿಙಿ** (ಪಾ. ಸೂ. ೭-೩-೮೮) ಎಂಬುದರಿಂದ ಗುಣ ಪ್ರತಿಷೇಧ ಬರುತ್ತದೆ **ಇತಶ್ಚ ಲೋಪಃ ಪರಸ್ಮೈಪದೇಷು** ಎಂಬುದರಿಂದ ಪ್ರತ್ಯಯದ ಇಕಾರಕ್ಕೆ ಲೋಪಬಂದಾಗ ರುತ್ವವಿಸರ್ಗ ಬಂದು, ಧಾತುವಿನ ಉಕಾರಕ್ಕೆ ಉವಙಾದೇಶ ಒಂದರೆ, ಭುವಃ ಎಂದು ರೂಪವಾಗುತ್ತದೆ.

ಸೂರಮ್—ಷೂ ಪ್ರೇರಣೇ ಧಾತು. **ಸುಸೂಧಾಗೃಧಿಭ್ಯಃ ಕ್ರನ್** (ಉ. ಸೂ. ೩-೧೪೩) ಎಂಬುದರಿಂದ ಕ್ರನ್ ಪ್ರತ್ಯಯ. **ಧಾತ್ವಾದೇಃ ಷಃ ಸಃ**—ಸೂತ್ರದಿಂದ ಆದಿಗೆ ಸತ್ವ. ಪ್ರತ್ಯಯ ಕಿತ್ತಾದುದರಿಂದ ಗುಣ ಬರುವುದಿಲ್ಲ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

ಸಸ್ರುಷೀಃ—ಸ್ರು ಗತೌ ಧಾತು. ಇವಕ್ಕೆ ಲಿಟ್ ಬಂದಾಗ ಅವಕ್ಕೆ **ಕ್ವಸುಶ್ಚ** ಎಂಬುದರಿಂದ ಕ್ವಸು ಪ್ರತ್ಯಯ. ಧಾತುವಿಗೆ ದ್ವಿತ್ವ., ಅಭ್ಯಾಸಕ್ಕೆ ಹಲಾದಿಶೇಷ. ಸಸ್ರುವಸ್ ಶಬ್ದವಾಗುತ್ತದೆ. ಸ್ತ್ರೀತ್ವವಿವಕ್ಷಾ

ಮಾಡಿದಾಗ **ಉಗಿತಶ್ಚ** ಎಂಬುದರಿಂದ ಜಿಪ್. ಅಜಾದಿಪ್ರತ್ಯಯ ಬಂದುದರಿಂದ ಭಸಂಜ್ಞಾಬರುವುದರಿಂದ **ವಸೋಃ ಸಂಪ್ರಸಾರಣಮ್** ಎಂಬುದರಿಂದ ವಕಾರಕ್ಕೆ ಸಂಪ್ರಸಾರಣ. (ಉಕಾರಾದೇಶ) **ಸಂಪ್ರಸಾರಣಾಚ್ಚಿ** ಎಂಬ ಸೂತ್ರದಿಂದ ವಸಿನ ಅಕಾರಕ್ಕೆ ಪೂರ್ವರೂಪ. **ಶಾಸಿವಸಿಘೀನಾಂ ಚ** (ಪಾ ಸೂ ೮-೩-೬೦) ಎಂಬುದರಿಂದ ವಸಿನ ಸಕಾರಕ್ಕೆ ಷತ್ವ. ಸಸ್ರುಷೀಃ ಎಂದು ರೂಪಸವಾಗುತ್ತದೆ. ಪ್ರಥಮಾಬಹುವಚನದ ಜಸ್ ಪರವಾದಾಗ **ವಾ ಛಂದಸಿ** (ಪಾ. ಸೂ. ೬-೧-೧೦೬) ಎಂಬುದರಿಂದ ಪೂರ್ವಸವರ್ಣದೀರ್ಘ. ಸಸ್ರುಷೀಃ ಎಂದು ರೂಪ ವಾಗುತ್ತದೆ. ॥ ೫ ॥

॥ ಸಂಹಿತಾಪಾಠಃ ॥

ಪೂರ್ವೀಭಿರ್ಹಿ ದದಾಶಿಮ ಶರದ್ಭಿರ್ಮರುತೋ ವಯಂ ।
ಅವೋಭಿಶ್ಚರ್ಷಣೀನಾಂ ॥ ೬ ॥

ಪದಪಾಠಃ

ಪೂರ್ವೀಭಿಃ । ಹಿ । ದದಾಶಿಮ । ಶರತ್ಸ್ಭಿಃ । ಮರುತಃ । ವಯಂ ।
ಅವಃಸ್ಭಿಃ । ಚರ್ಷಣೀನಾಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ಮರುತಃ ಪೂರ್ವೀಭಿರಿತ್ಯೇಭಿಃ ಶರದ್ಭಿಃ ಸಂವತ್ಸರೈರ್ಹರ್ಷಣೀನಾಂ ಸರ್ವಸ್ಯ ದ್ರಷ್ಟೃಣಾಂ ಸರ್ವಜ್ಞಾನಾಂ ಭವತಾಂ ಸಂಬಂಧಿಭಿರವೋಭೀ ರಕ್ಷಣೈರ್ಯುಕ್ತಾಃ ಸಂತೋ ವಯಂ ದದಾಶಿಮ । ಯುಷ್ಮಭ್ಯಂ ಹವೀಂಷಿ ದತ್ತವಂತಃ । ಹಿ ಯಸ್ಮಾದರ್ಥೇ । ಯಸ್ಮಾದೇವಂ ತಸ್ಮಾದಿದಾನೀಮಪ್ಯಸ್ಮದೀಯಹವಿಃಸ್ವೀಕರಣಾಯಾಗಚ್ಛತೇತ್ಯರ್ಥಃ ॥ ಪೂರ್ವೀಭಿಃ । ಪುರುಶಬ್ದಾದ್ವೋತೋ ಗುಣವಚನಾದಿತಿ ಜೀಷ್ । ಯಣಾದೇಶೇ ಹಲಿ ಚೇತಿ ದೀರ್ಘತ್ವಂ । ದದಾಶಿಮ । ದಾಶೃ ದಾನೇ । ಲಿಟೀಡಾಗಮಃ । ಹಿ ಚೇತಿ ನಿಘಾತಪ್ರತಿಷೇಧಃ । ಚರ್ಷಣೀನಾಂ । ನಾಮನ್ಯತರಸ್ಯಾಮಿತಿ ನಾಮು ಉದಾತ್ತತ್ವಂ ॥೬

॥ ಪ್ರತಿಪದಾರ್ಥ ॥

ಮರುತಃ—ಎಲೈ ಮರುತ್ತುಗಳೇ, । **ಪೂರ್ವೀಭಿಃ ಶರದ್ಭಿಃ**—ಅನೇಕ ವರ್ಷಗಳಿಂದ । **ಚಿರ್ಷಣೀನಾಂ**—ಸರ್ವಜ್ಞರಾದ ನಿಮ್ಮ । **ಅನೇಭಿಃ**—ರಕ್ಷಣೆಗಳಿಂದ (ಕೂಡಿದವರಾಗಿ) । **ವಯಂ**—ನಾವು । **ದದಾಶಿಮ**—(ನಿಮಗೆ ಹವಿಸ್ಸುಗಳನ್ನು) ಅರ್ಪಿಸಿದ್ದೇವೆ. । **ಹಿ**—ಆ ಕಾರಣದಿಂದಲೇ (ಈಗಲೂ ನಮ್ಮ ಹವಿಸ್ಸಿನ ಸ್ವೀಕಾರಕ್ಕಾಗಿ ದಯಮಾಡಿರಿ.) ।

ಭಾವಾರ್ಥ

ಎಲೈ ಮರುತ್ತುಗಳೇ, ನಾವು ಅನೇಕ ವರ್ಷಗಳಿಂದ ಸರ್ವಜ್ಞರಾದ ನಿಮ್ಮ ರಕ್ಷಣೆಗಳನ್ನು ಪಡೆದು ನಿಮಗೆ ಹವಿಸ್ಸುಗಳನ್ನು ಅರ್ಪಿಸುತ್ತಿದ್ದೇವೆ. ಈಗಲೂ ಸಹ ನಮ್ಮ ಹವಿಸ್ಸಿನ ಸ್ವೀಕಾರಕ್ಕಾಗಿ ದಯಮಾಡಿ.

English Translation

O Maruts, enjoying the protection of you who behold all things we have offered you oblations for many years.

॥ ವಿಶೇಷವಿಷಯಗಳು ॥

ಪೂರ್ವೀಭಿಃ—ಪುರು ಎಂದರೆ ಬಹು. **ಬಹ್ವೀಭಿಃ** ಅನೇಕವಾದ, ಬಹಳವಾದ, ಎಂದರ್ಥವು.

ಶರದ್ಭಿಃ—ಈ ಶಬ್ದಕ್ಕೆ ಶರದೃತುಗಳಿಂದ ಎಂದು ಅರ್ಥವಿದ್ದರೂ ಶರದೃತುವು ಒಂದು ಸಂವತ್ಸರದಲ್ಲಿ ಒಂದಾವರ್ತಿ ಮಾತ್ರ ಇರುವುದರಿಂದ ಈ ಶಬ್ದವನ್ನು ಸಂವತ್ಸರಾರ್ಥವನ್ನು ಸೂಚಿಸುವುದಕ್ಕಾಗಿ ಪ್ರಯೋಗಿಸುವುದು ಋಗ್ವೇದದಲ್ಲಿಯೂ ಇತರ ವೇದಗಳಲ್ಲಿಯೂ ಬಳಿಕೆಯಲ್ಲಿದೆ. ಆದುದರಿಂದ ಶರದ್ಭಿಃ ಎಂದರೆ ಸಂವತ್ಸರಗಳಿಂದ ಎಂಬ ಅರ್ಥವನ್ನು ಇಲ್ಲಿ ಹೇಳಬೇಕು. ಈ ಶಬ್ದವು ಈ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವ ಒಂದೆರಡು ಋಕ್ಕುಗಳನ್ನು ಉದಾಹರಣೆಗಾಗಿ ಕೆಳಗೆ ಕೊಟ್ಟಿದೆ—

ತಚ್ಚಕ್ಷುರ್ದೇವಹಿತಂ ಶುಕ್ರಮುಚ್ಚರತ್ ।
ಪಶ್ಯೇಮ ಶರದಃ ಶತಂ ಜೀವೇಮ ಶರದಃ ಶತಂ ॥
(ಋ. ಸಂ. ೭-೬೬-೧೬)

ಶತಂ ಜೀವ ಶರದೋ ವರ್ಧಮಾನಃ ಶತಂ ಹೇಮಂತಾಞ್ಛತಮು ವಸಂತಾನ್ ।
ಶತಮಿಂದ್ರಾಗ್ನೀ ಸವಿತಾ ಬೃಹಸ್ಪತಿಃ ಶತಾಯುಷಾ ಹವಿಷೇಮಂ ಪುನರ್ದುಃ ॥
(ಋ. ಸಂ. ೧೦-೧೬೧-೪)

ಇತ್ಯಾದಿ. ಎರಡನೆಯ ಉದಾಹರಣೆಯಲ್ಲಿ ವಸಂತಋತುವನ್ನು ಸಹ ಉಪಯೋಗಿಸಲಾಗಿದೆ. ಸಾಧಾರಣವಾಗಿ ಸಂವತ್ಸರವನ್ನು ಸೂಚಿಸುವುದಕ್ಕಾಗಿ ಶರದೃತುವನ್ನೇ ಉಪಯೋಗಿಸುವುದು ರೂಢಿಯಾಗಿದೆ.

ದದಾಶಿಮ—ದಾಶೃ ದಾನೇ । ಹವೀಂಷಿ ದತ್ತವಂತಃ । ಹವಿಸ್ಸನ್ನರ್ಪಿಸಿದ್ದೇವೆ.

ಚರ್ಷಣೀನಾಂ ಸರ್ವಸ್ಯ ದ್ರಷ್ಟೃಣಾಂ ಸರ್ವಜ್ಞಾನಾಂ ಭವತಾಂ । ಸಮಸ್ತವನ್ನೂ ನೋಡುವ ಅಥವಾ ಸಮಸ್ತವನ್ನೂ ತಿಳಿದಿರುವ, ಸರ್ವಜ್ಞರಾದ.

ವ್ಯಾಕರಣಪ್ರಕ್ರಿಯಾ

ಪೂರ್ವೀಭಿಃ—ಪುರು ಶಬ್ದ. ಇದಕ್ಕೆ ಸ್ತ್ರೀತ್ವದಲ್ಲಿ **ವೋತೋಗುಣವಚನಾತ್** (ಪಾ. ಸೂ. ೪-೧-೪೪) ಎಂಬುದರಿಂದ ಙೀಷ್ ಪ್ರತ್ಯಯ. **ಇಕೋ ಯಣಚಿ**—ಸೂತ್ರದಿಂದ ಯಣಾದೇಶ ಬಂದಾಗ **ಹಲಿ ಚ** (ಪಾ. ಸೂ. ೮-೨-೭೭) ಎಂಬುದರಿಂದ ರೇಫದ ಪೂರ್ವಕ್ಕೆ ದೀರ್ಘ ಬರುತ್ತದೆ. ತೃತೀಯಾಏಕವಚನಾಂತದ ರೂಪ. ಪ್ರತ್ಯಯ ಸ್ವರದಿಂದ ಈಕಾರ ಉದಾತ್ತವಾಗುತ್ತದೆ.

ದದಾತಿಮ— ದಾಞ್ ದಾನೇ ಧಾತು. ಲಿಟ್ ಉತ್ತಮಪುರುಷಬಹುವಚನದಲ್ಲಿ ಮಸ್ ಪ್ರತ್ಯಯ **ಆರ್ಧಧಾತುಕಸ್ಯೇಡ್ವಲಾದೇಃ** ಎಂಬುದರಿಂದ ಅದಕ್ಕೆ ಇಡಾಗಮ. ಧಾತುವಿಗೆ ಲಿಣ್ನಿಮಿತ್ತವಾಗಿ ದ್ವಿತ್ವ ಅಭ್ಯಾಸಕ್ಕೆ ಹೆಲಾದಿಶೇಷ ಹ್ರಸ್ವ. ದದಾತಿಮ ಎಂದು ರೂಪವಾಗುತ್ತದೆ. ಹಿಂದೆ ಹಿ ಎಂಬ ನಿಪಾತವಿರುವುದರಿಂದ **ಹಿಚ** (ಪಾ. ಸೂ. ೮-೧-೩೪) ಎಂಬುದರಿಂದ ನಿಘಾತ ಪ್ರತಿಷೇಧ ಬರುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾದ ಪದವಾಗುತ್ತದೆ.

ಅವೋಭಿಃ—ಅವ ರಕ್ಷಣೇ ಧಾತು. ಸರ್ವಧಾತುನಿಬಂಧನವಾದ **ಅಸುನ್** ಪ್ರತ್ಯಯ ಅವಸ್ ಶಬ್ದವಾಗುತ್ತದೆ. ತೃತೀಯಾಬಹುವಚನದಲ್ಲಿ ಸಕಾರಕ್ಕೆ ರುತ್ವ ಉತ್ವ. ಗುಣ ನಿತ್ಸ್ವ.ತ್ಯಯಾಂತವಾದುದರಿಂದ ಆದ್ಯುದಾತ್ತವಾಗುತ್ತದೆ.

ಚರ್ಷಣೀನಾಂ—ಷಷ್ಠೀ ಬಹುವಚನದಲ್ಲಿ ಆಮಿಗೆ ನುಡಾಗಮ. **ನಾಮಿ** ಎಂಬ ಸೂತ್ರದಿಂದ ಅಂಗಕ್ಕೆ ದೀರ್ಘ. **ನಾಮನ್ಯತರಸ್ಯಾಂ** (ಪಾ. ಸೂ. ೬-೧-೧೭೬) ಎಂಬುದರಿಂದ ನಾಮಿಗೆ (ವಿಭಕ್ತಿಗೆ) ಉದಾತ್ತಸ್ವರಬರುತ್ತದೆ. ॥ ೬ ॥

ಸಂಹಿತಾಪಾಠ

ಸುಭಗಃ ಸ ಪ್ರಯಜ್ಯವೋ ಮರುತೋ ಅಸ್ತು ಮರ್ತ್ಯಃ।
ಯಸ್ಯ ಪ್ರಯಾಂಸಿ ಪರ್ಷಥ ॥ ೭ ॥

ಪದಪಾಠಃ

ಸು॒ऽಭಗಃ । ಸಃ । ಪ್ರ॒ऽಯಜ್ಯವಃ । ಮರುತಃ । ಅ॒ಸ್ತು॒ । ಮ॒ರ್ತ್ಯಃ ।
ಯಸ್ಯ । ಪ್ರ॒ಯಾಂಸಿ । ಪರ್ಷ॑ಥ ॥ ೬ ॥

॥ ಸಾಯಣಭಾಷ್ಯಂ ॥

ಹೇ ಪ್ರಯಜ್ಯವಃ ಪ್ರಕರ್ಷೇಣ ಯೇಷ್ಟವ್ಯಾ ಮರುತಃ ಸ ಮರ್ತ್ಯೋ ಮನುಷ್ಯೋ ಯಜಮಾನಃ ಸುಭಗೋಽಸ್ತು । ಶೋಭನಧನೋ ಭವತು । ಯಸ್ಯ ಯಜಮಾನಸ್ಯ ಪ್ರಯಾಂಸಿ ಹವಿರ್ಲಕ್ಷಣಾನ್ಯನ್ನಾನಿ ಪರ್ಷಥ ಆತ್ಮನಿ ಸಿಂಚಥ । ಸ್ವೀಕುರುಥೇತ್ಯರ್ಥಃ ॥ ಸುಭಗಃ ಭಗ ಇತಿ ಧನನಾಮ । ಶೋಭನೋ ಭಗೋ ಯಸ್ಯ । ಕೃತ್ವಾದಯಶ್ಛೇತ್ಯುತ್ತರಪದಾದ್ಯುದಾತ್ತತ್ವಂ । ಪರ್ಷಥ । ಪೃಷು ವೃಷು ಮೃಷು ಸೇಚನೇ । ಭ್ವಾದಿಕಃ । ಯದ್ವೃತ್ತಾನ್ನಿತ್ಯಮಿತಿ ನಿಘಾತಪ್ರತಿಷೇಧಃ ॥

ಪ್ರತಿಪದಾರ್ಥ

ಪ್ರಯಜ್ಯವಃ-- ಶ್ರೇಷ್ಠವಾದ ಯಜ್ಞಗಳಿಗೆ ಅರ್ಹರಾದ । **ಮರುತಃ**—ಎಲೈ ಮರುತ್ತುಗಳೇ, । **ಯಸ್ಯ**, ಯಾವ ಯಜಮಾನನ । **ಪ್ರಯಾಂಸಿ**— ಹವಿಸ್ಸಿನರೂಪದ ಅನ್ನಗಳನ್ನು । **ಪರ್ಷಥ**—ಪಾನಾರ್ಥವಾಗಿ ಸ್ವೀಕರಿಸುತ್ತೀರೋ । **ಸಃ**—ಆ ಮಾನವನಾದ ಯಜಮಾನನು । **ಸುಭಗಃ**—ಶ್ರೇಷ್ಠವಾದ ಧನವುಳ್ಳವನಾಗಿ । **ಅಸ್ತು**—ಆಗಲಿ. ।

ಭಾವಾರ್ಥ

ಎಲೈ ಮರುತ್ತುಗಳೇ, ನೀವು ಶ್ರೇಷ್ಠವಾದ ಯಜ್ಞಗಳಿಗೆ ಅರ್ಹರಾಗಿದ್ದೀರಿ. ಯಾವ ಯಜಮಾನನ ಹವಿಸ್ಸಿನ ರೂಪದ ಅನ್ನಗಳನ್ನು ಪಾನಾರ್ಥವಾಗಿ ಸ್ವೀಕರಿಸುತ್ತಿರೋ ಆ ಮಾನವನಾದ ಯಜಮಾನನು ಶ್ರೇಷ್ಠವಾದ ಸಂಪತ್ತುಗಳಿಂದ ಕೂಡಿರಲಿ —

English Translation

O Maruts, who are to be especially worshipped, may the man whose offering you accept be ever prosperous.

॥ ವಿಶೇಷವಿಷಯಗಳು ॥

ಪ್ರಯಜ್ಯವಃ— ಪ್ರಕರ್ಷೇಣ ಯೇಷ್ಟವ್ಯಾಃ । ಚೆನ್ನಾಗಿ ಯಜ್ಞಗಳಿಂದ ಆರಾಧಿಸಲ್ಪಡುವ, ಯಜ್ಞಾರ್ಹರಾದ-

ಪ್ರಯಾಂಸಿ—ಅಂಘಃ ವಾಜಃ ಮೊದಲಾದ ಇಪ್ಪತ್ತೈಂಟು ಅನ್ನನಾಮಗಳ ಮಧ್ಯದಲ್ಲಿ ಪ್ರಯಃ ಎಂಬ ಶಬ್ದವು ಪಠಿತವಾಗಿರುವುದರಿಂದ ಪ್ರಯಾಂಸಿ ಎಂದರೆ ಹವಿರ್ಲಕ್ಷಣೋಪೇತವಾದ ಅನ್ನಗಳನ್ನು ಎಂದರ್ಥವು. (ನಿ. ೩-೯)

ಪರ್ಷಥ—ಪೃಷು, ವೃಷು ಮೃಷು ಸಿಂಚನೇ । ಸಿಂಚಥ । ಪ್ರಾಪ್ನುಥ । ಸ್ವೀಕರಿಸಿ ಎಂದರ್ಥವು.

ಸುಭಗಃ—ಮಘಂ ರೇಕ್ಣಃ ಮೊದಲಾದ ಇಪ್ಪತ್ತೈಂಟು ಧನನಾಮಗಳ ಮಧ್ಯದಲ್ಲಿ ಭಗಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೯) ಸುಭಗಃ ಎಂದರೆ ಉತ್ತಮವಾದ ಧನವುಳ್ಳವನು.

ವ್ಯಾಕರಣಪ್ರಕ್ರಿಯಾ

ಸುಭಗಃ—ಶೋಭನೋ ಭಗೋ (ಧನಂ) ಯಸ್ಯ ಸುಭಗಃ **ನಞ್‌ಸುಭ್ಯಾಂ** ಎಂಬುದರಿಂದ ಬರುವ ಸ್ವರವು ಬಾಧಿತವಾಗಿ **ಕ್ರತ್ವಾದಯಶ್ಚ** (ಪಾ. ಸೂ. ೬-೨-೧೮೪) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

ಪ್ರಯೇಜ್ಯವಃ—ಆಮಂತ್ರಿತಸ್ಯ ಚ ಎಂಬುದರಿಂದ ನಿಘಾತಸ್ವರ ಬರುತ್ತದೆ.

ಆಸ್ತು—ಅಸ ಭುವಿ ಧಾತು. ಅದಾದಿ. ಲೋಟ್ ಪ್ರಥಮಪುರುಷ ಬಹುವಚನದಲ್ಲಿ **ಏರುಃ** ಎಂಬುದರಿಂದ ಉತ್ವ. ತಿಜಂತನಿಘಾತಸ್ವರ ಬರುತ್ತದೆ

ಪರ್ಷಥ—ಪೃಷು ವೃಷು ಮೃಷು ಸೇಚನೇ ಧಾತು. ಭ್ವಾದಿ. ಲೇಟ್ ಮಧ್ಯಮಪುರುಷ ಬಹುವಚನ ಪರವಾದಾಗ ಧಾತುವಿನ ಲಘೂಪಧೆಗೆ ಗುಣ ಬರುತ್ತದೆ. ಯಸ್ಯ ಎಂದು ಹಿಂದೆ ಯಚ್ಛಬ್ದ ಸಂಬಂಧವಿರುವುದರಿಂದ **ಯದ್ಧೃತ್ವಾನ್ನಿತ್ಯಂ** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಅದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು (ಥ) **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುತ್ತದೆ. ಆಗ ಧಾತುಸ್ವರ ಉಳಿಯುತ್ತದೆ. ॥ ೭ ॥



ಸಂಹಿತಾಪಾಠಃ

ಶಶಮಾನಸ್ಯ ವಾ ನರಃ ಸ್ವೇದಸ್ಯ ಸತ್ಯಶವಸಃ ।
ವಿದಾ ಕಾಮಸ್ಯ ವೇನತಃ ॥ ೮ ॥

ಪದಪಾಠ

ಶಶಮಾನಸ್ಯ । ವಾ । ನರಃ । ಸ್ವೇದಸ್ಯ । ಸತ್ಯ । ಶವಸಃ ।

ವಿದ । ಕಾಮಸ್ಯ । ವೇನತಃ ॥ ೯ ॥

ಸಾಯಣಭಾಷ್ಯಂ

ಹೇ ಸತ್ಯಶವಸೋ ಽವಿತಥಬಲಾ ನರೋ ನೇತಾರೋ ಮರುತಃ ಶಶಮಾನಸ್ಯ ಯುಷ್ಮಾನ್ಸ್ತುತಿಭಿಃ ಸಂಭಜಮಾನಸ್ಯ ಸ್ವೇದಸ್ಯ ಸ್ತಾವಕಮಂತ್ರೋಚ್ಚಾರಣಜನಿತೇನ ಶ್ರಮೇಣ ಸ್ರಿದ್ಯಮಾನಗಾತ್ರಸ್ಯ ವೇನತಃ । ವೇನತಿಃ ಕಾಂತಿಕರ್ಮಾ । ಕಾಮಯಮಾನಸ್ಯ । ವಾಶಬ್ದಃ ಸಮುಚ್ಚಯೇ । ಏವಂಭೂತಸ್ಯ ಸ್ತೋತುಶ್ಚ ಕಾಮಸ್ಯ ಕಾಮಮಭಿಲಾಷಂ ವಿದ । ಲಂಭಯತ । ಪ್ರಯಚ್ಛತೇತ್ಯರ್ಥಃ ॥ ಶಶಮಾನಸ್ಯ । ಶಶ ಪ್ಲುತಗತೌ । ತಾಚ್ಛೀಲಿಕಶ್ಚಾನಶ್ । ಸ್ವೇದಸ್ಯ । ಞಿಷ್ವಿದಾ ಗಾತ್ರಪ್ರಕ್ಷರಣೇ ಅಂತರ್ಭಾವಿತಣ್ಯರ್ಥಾತ್ಕರ್ಮಣಿ ಘಞ್ । ಞಿತ್ವಾದ್ಯುದಾತ್ತತ್ವಂ । ವಿದ । ವಿದ್ಲೃ ಲಾಭೇ । ಲೋಟಿ ಮಧ್ಯಮಪುರುಷಬಹುವಚನಸ್ಯ ವ್ಯತ್ಯಯೇನ ಝಾದೇಶಃ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಝಸ್ಯಾದಾದೇಶಃ । ಲೋಪಸ್ತ ಆತ್ಮನೇಪದೇಷ್ವಿತಿ ತಲೋಪಃ । ಪ್ರತ್ಯಯಾದ್ಯುದಾತ್ತತ್ವಂ । ಪಾದಾದಿತ್ವಾನ್ನಿಘಾತಾಭಾವಃ । ವ್ಯತ್ಯಯೋ ಽತಸ್ತಿಙ ಇತಿ ಸಂಹಿತಾಯಾಂ ದೀರ್ಘಃ । ಕಾಮಸ್ಯ । ವೃಷಾದಿಷು ಪಾಠಾದಾದ್ಯುದಾತ್ತತ್ವಂ । ಕ್ರಿಯಾಗ್ರಹಣಂ ಕರ್ತವ್ಯಮಿತಿ ಕರ್ಮಣಃ ಸಂಪ್ರದಾನತ್ವಾಚ್ಚತುರ್ಥ್ಯರ್ಥೇ ಷಷ್ಠೀ ॥

ಪ್ರತಿಪದಾರ್ಥ

ಸತ್ಯಶವಸಃ—ನಿಜವಾದ ಬಲವುಳ್ಳವರೂ । **ನರಃ**—ನೇತೃಗಳೂ ಆದ ಎಲ್ಲಾ ಮರುತ್ತುಗಳೇ, । **ಶಶಮಾನಸ್ಯ**—(ನಿಮ್ಮನ್ನು) ಸ್ತೋತ್ರಗಳಿಂದ ಪೂಜಿಸುವವನೂ । **ಸ್ವೇದಸ್ಯ**—(ನಿಮ್ಮ ಪೂಜಾಕರ್ಮಗಳಿಂದ) ಶ್ರಮಿಸಿ ಬೆವರು ಸುರಿಸುವವನೂ । **ವೇನತಃ**—(ನಿಮ್ಮ ಅನುಗ್ರಹವನ್ನು) ಅಪೇಕ್ಷಿಸುವವನೂ ಆದ ಭಕ್ತನ । **ಕಾಮಸ್ಯ**—ಇಷ್ಟಾರ್ಥವನ್ನು । **ವಿದ**—ತಿಳಿದುಕೊಂಡು (ಒದಗಿಸಿ) ।

ಭಾವಾರ್ಥ

ನಿಜವಾದ ಬಲವುಳ್ಳವರೂ, ನೇತೃಗಳೂ ಆದ ಎಲ್ಲಾ ಮರುತ್ತುಗಳೇ, ನಿಮ್ಮನ್ನು ಸ್ತೋತ್ರಗಳಿಂದ ಪೂಜಿಸುವವನೂ, ನಿಮ್ಮ ಪೂಜಾಕರ್ಮಗಳಿಂದ ಯಾವಾಗಲೂ ಶ್ರಮಿಸುವವನೂ ಮತ್ತು ನಿಮ್ಮ ಅನುಗ್ರಹವನ್ನು ಅಪೇಕ್ಷಿಸುವವನೂ ಆದ ನಿಮ್ಮ ಭಕ್ತನ ಇಷ್ಟಾರ್ಥವೇನೆಂದು ತಿಳಿದುಕೊಂಡು ಅವನ್ನು ಅನುಗ್ರಹಿಸಿರಿ.

English Translation

Possessors of true vigor, pay attention to the wishes of him who praises you and toils in your service desiring your favour.

ವಿಶೇಷವಿಷಯಗಳು

ಶಶಮಾನಸ್ಯ—ಶನ್ಸು ಸ್ತುತೌ । ಸ್ತುತಿಕರಣಶೀಲಸ್ಯ । ನಿಮ್ಮನ್ನು ಸ್ತೋತ್ರಮಾಡುವ ಯಜಮಾನನ.

ನರಃ—ನೇತಾರಃ । ನಾಯಕರು, ಮುಖಂಡರು.

ಸತ್ಯಶವಸಃ—ಏಜಃ ಪಾಜಃ ಮೊದಲಾದ ಇಪ್ಪತ್ತೈಂಟು ಬಲನಾಮಗಳ ಮಧ್ಯದಲ್ಲಿ ಶವಸ್ ಎಂಬ ಶಬ್ದವು ಸಹಿತಣಾಗಿರುವುದರಿಂದ ಶವಃ ಎಂದರೆ ಬಲವು. **ಸತ್ಯಂ ಶವಃ ಯೇಷಾಂತೇ ಸತ್ಯಶವಸಃ** ನಿಜವಾದ ಅಥವಾ ಶ್ರೇಷ್ಠವಾದ ಬಲವುಳ್ಳವರು ಎಂದಭಿಪ್ರಾಯವು.

ಸ್ನೇದಸ್ಯ—ಸ್ನೇದ ಎಂದರೆ ಬೆವರು. ಸ್ನೇದಸ್ಯ ಎಂದರೆ ನಿಮ್ಮನ್ನು ಸ್ತೋತ್ರಾದಿಗಳಿಂದ ಆರಾಧನೆಮಾಡಿ ತ್ರಮದಿಂದ ಬಂಟಾದ ಬೆವರಿನಿಂದ ಕೂಡಿದ ಯಜಮಾನನ ಎಂದರ್ಥವು

ನೇನತಃ—ನೇನತಿಃ ಕಾಂತಿಕರ್ಮಾ । ಅಪೇಕ್ಷಿಸುವ, ಎಂದರೆ ನಿಮ್ಮನ್ನು ಸ್ತೋತ್ರಮಾಡಲಪೇಕ್ಷಿಸುವ ಯಜಮಾನನ

ವ್ಯಾಕರಣಪ್ರಕ್ರಿಯಾ

ಶಶಮಾನಸ್ಯ—ಶಸ ಸ್ತುತೌಗತೌ ಧಾತು ತಾಚ್ಛೀಲ್ಯಾರ್ಥದಲ್ಲಿ **ತಾಚ್ಛೀಲ್ಯವಯೋ**—(ಪಾ. ಸೂ. ೩-೨-೧೨೯) ಎಂಬುದರಿಂದ ಚಾನಶ್. **ಆನೇಮುಕ್** ಎಂಬುದರಿಂದ ಮುಕಾಗಮ. **ಙಿತಃ** ಎಂಬುದರಿಂದ ತಂತೋವಾತ್ತ್ವಸ್ಯ ಬರುತ್ತದೆ ಷಷ್ಠೀ ವಿಕವಚನಾಂತರೂಪ.

ಸ್ನೇದಸ್ಯ—ಷ್ಟುಷ್ವಿದಾ ಗಾತ್ರಪ್ರಕ್ಷರಣೇ ಧಾತು. ನಿಜರ್ಥವು (ಪ್ರೇರಣಾ) ಧಾತ್ವರ್ಥದಲ್ಲಿ ಅಂತರ್ಭೂತವಾಗಿರುವಾಗ ಕರ್ಮಣಿಯಲ್ಲಿ **ಘೆಞ್** ಪ್ರತ್ಯಯ. ಆರ್ಧಧಾತುಕ ನಿಬಂಧನವಾಗಿ ಧಾತುವಿನ ಲಘೂಪಧೆಗೆ ಗುಣ. ಧಾತ್ವಾದಿಗೆ ಸಲ್ಲ **ಇಗ್ಯಾತ್ಯಾದಿರ್ನಿತ್ಯಂ** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಸತ್ಯಶವಸಃ— ಸತ್ಯಂ ವಸಃ ಯೇಷಾಂ ತೇ ಸತ್ಯಶವಸಃ ಸಂಬೋಧನಬಹುವಚನಾಂತರೂಪ **ಆಮಂತ್ರಿತಸ್ಯ ಚ** ಎಂಬುದರಿಂದ ನಿಘಾತಸ್ವರ ಬರುತ್ತದೆ

ನಿಣಾ ಸದಾಲ್ಲ ಲಾಭೇ ಧಾತು ಲೋಟಿ ಸಂಖ್ಯಾಸುರಾಣ ಬಹುವಚನ ಪ್ರತ್ಯಯಕ್ಕೆ ವ್ಯತ್ಯಯದಿಂದ ಮಾನೇ **ಬಹುಲಂ ಛಂದಸಿ** ಎಂಬುದರಿಂದ ಶಿಕಾರಾದೇಶ ಬಕ **ಆತ್ಮನೇಪದೇಷ್ವನತಃ** ಎಂಬುದರಿಂದ ತಕಾರವನ್ನ ಸರದಲ್ಲಿಲ್ಲದಿರುವುದರಿಂದ ಝಸ್ರತ್ಯಯಕ್ಕೆ ಆತಾದೇಶ. **ಸಾರ್ವಧಾತುಕಮಪಿತ್**— ಸೂತ್ರದಿಂದ ಪ್ರತ್ಯಯವು ಜುತ್ವಾತ್ವಾದಿಗಳಿಂದ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ ವಿಸತ ಎಂದಿರುವಾಗ **ಲೋಪಸ್ತ ಆತ್ಮನೇಪದೇಷು**—ಎಂಬುದರಿಂದ ಪ್ರತ್ಯಯಾವಯವ ತಕಾರಕ್ಕೆ ಲೋಪ ಪಾದಾದಿಯಲ್ಲಿರುವುದರಿಂದ ನಿಘಾತ ಸ್ವರ ಬರುವುದಿಲ್ಲ. ಪ್ರತ್ಯಯದ ಆದ್ಯುದಾತ್ತಸ್ವರದಿಂದ ನಕಾರೋತ್ತರಾಕಾರವು ಉದಾತ್ತವಾಗುತ್ತದೆ. ವಿವ ಎಂದಿರುವಾಗ **ದ್ವ್ಯಚೋ೭ತಸ್ತಿಙಃ** (ಪಾ. ಸೂ. ೬-೩-೧೩೫) ಎಂಬುದರಿಂದ ದ್ವ್ಯಚ್ಕವಾಗಿರುವುದರಿಂದ ಕಂತ್ಯ ಯಣಾದೇಶ ಬರುತ್ತದೆ

ಕಾಮಸ್ಯ—ಸಷ್ಠೀ ಏಕವಚನಾಂತರೂಪ. ವೃಷಾದಿಯಲ್ಲಿ ಪಾಠಮಾಡಿರುವುದರಿಂದ **ವೃಷಾದೀನಾಂ ಚ** (ಪಾ. ಸೂ. ೬-೧-೨೦೩) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಸಂಪ್ರದಾನವಿಧಾಯಕಸೂತ್ರದಲ್ಲಿ **ಕ್ರಿಯಾಗ್ರಹಣಂ ಕರ್ತವ್ಯಂ** ಎಂಬ ವಚನದಿಂದ ಕರ್ಮಕ್ಕೆ ಸಂಪ್ರದಾನ ಸಂಜ್ಞೆ ಬರುವುದರಿಂದ ಚತುರ್ಥ್ಯರ್ಥದಲ್ಲಿ ಸಷ್ಠೀ ಬರುತ್ತದೆ ॥ ೮ ॥

ಸಂಹಿತಾಪಾಠಃ

ಯೂಯಂ ತತ್ಸತ್ಯಶವಸ ಆವಿಷ್ಕರ್ತ ಮಹಿತ್ವನಾ।
ವಿಧ್ಯತಾ ವಿದ್ಯುತಾ ರಕ್ಷಃ ॥ ೯ ॥

ಪದಪಾಠಃ ॥

ಯೂಯಂ । ತತ್ । ಸತ್ಯ ೱ ಶವಸಃ । ಆವಿಃ । ಕರ್ತ । ಮಹಿ ೱ ತ್ವನಾ ।
ವಿಧ್ಯತ । ವಿ ೱ ದ್ಯುತಾ । ರಕ್ಷಃ ॥ ೯ ॥

ಸಾಯಣಭಾಷ್ಯಂ

ಹೇ ಸತ್ಯಶವಸಃ ಸತ್ಯಬಲಾ ಅನ್ಯೈರಪ್ರಧೃಷ್ಯಬಲಾ ಮರುತೋ ಯೂಯಂ ತದ್ಯುಷ್ಮತ್ಪ್ರಸಿದ್ಧಂ ಮಾಹಾತ್ಮ್ಯಮಾವಿಷ್ಕರ್ತ । ಆವಿಷ್ಕುರುತ । ಪ್ರಕಾಶಯತ । ವಿದ್ಯುತಾ ವಿದ್ಯೋತಮಾನೇನ ಮಹಿತ್ವನಾ ತೇನ ಮಹತ್ತ್ವೇನ ಮಾಹಾತ್ಮ್ಯೇನ ರಕ್ಷೋಽಸ್ಮಾಕಮುಪದ್ರವಕಾರಿಣಂ ರಾಕ್ಷಸಾದಿಕಂ ವಿಧ್ಯತ । ತಾಡಯತ । ನಾಶಯತೇತ್ಯರ್ಥಃ ॥ ಕರ್ತ । ಕರೋತೇರ್ಲೋಟಿ ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ತಪ್ತನಪ್ತನಥನಾಶ್ಚೇತಿ ತಬಾದೇಶಃ । ಗುಣಃ। ಇದುದುಪಧಸ್ಯ ಚಾಪ್ರತ್ಯಯಸ್ಯ । ಪಾ. ೮-೩-೪೧ । ಇತ್ಯಾವಿಃಶಬ್ದೇ ವಿಸರ್ಜನೀಯಸ್ಯ ಸತ್ವಂ । ಮಹಿತ್ವನಾ । ಭಾವಪ್ರತ್ಯಯಾಮುತ್ತರಸ್ಯಾಜ್ಞೋ ವ್ಯತ್ಯಯೇನ ನಾಭಾವ ಉದಾತ್ತತ್ವಂ ಚ । ಯದ್ವಾ । ಸುಪಾಂ ಸುಲುಗಿತಿ ತೃತೀಯಾಯಾ ಆಜಾದೇಶೋ ನಕಾರೋಪಜನಶ್ಚ । ವಿಧ್ಯತ । ವ್ಯಧ ತಾಡನೇ । ಶ್ಯನಿ ಗ್ರಹಿಜ್ಯಾದಿನಾ ಸಂಪ್ರಸಾರಣಂ । ತಶಬ್ದಸ್ಯ ಸಾರ್ವಧಾತುಕಮಪಿದಿತಿ ಙಿತ್ತ್ವೇ ಸತಿ ಯುಚಿ ತುನುಘಮಕ್ಷುತಶಙ್ವಿತಿ ಸಂಹಿತಾಯಾಂ ದೀರ್ಘಃ ॥

ಪ್ರತಿಪದಾರ್ಥ

ಸತ್ಯಶವಸಃ—(ಶತ್ರುಗಳಿಂದ ಅಪ್ರತಿಹತವಾದ) ನಿಜವಾದ ಪರಾಕ್ರಮವುಳ್ಳ ಮರುತ್ತುಗಳೇ, । **ಯೂಯಂ**—ನೀವು । **ತತ್**—(ವೃತ್ರವಧಾದಿಕಾಲಗಳಲ್ಲಿ ಪ್ರಸಿದ್ಧವಾದ) ಆ ಮಹಾತ್ಮ್ಯವನ್ನು । **ಆವಿಷ್ಕರ್ತಾ**—ಪ್ರಕಾಶಪಡಿಸಿದ್ದೀರಿ. । **ವಿದ್ಯುತಾ**—ಪ್ರಕಾಶಮಾನವಾದ । **ಮಹಿತ್ವನಾ**—ಆ ಮಾಹಾತ್ಮ್ಯದಿಂದ । **ರಕ್ಷಸಃ**—(ನನುಗೆ ಹಿಂಸಕರಾದ) ರಾಕ್ಷಸರನ್ನು । **ವಿಧ್ಯತ**—ನಾಶಮಾಡಿರಿ.

ಭಾವಾರ್ಥ

ಎಲೈ ಮರುತ್ತುಗಳೇ, ನಿಮ್ಮ ನಿಜವಾದ ಬಲವು ಶತ್ರುಗಳಿಂದ ಅಪ್ರತಿಹತವಾದದ್ದು. ವೃತ್ರವಧಾದಿ ಕಾಲಗಳಲ್ಲಿ ನೀವು ನಿನ್ನು ಮಾಹಾತ್ಮ್ಯವನ್ನು ಪ್ರಕಾಶಪಡಿಸಿದ್ದೀರಿ. ಪ್ರಕಾಶಮಾನವಾದ ಆ ಮಹಾತ್ಮ್ಯದಿಂದ ನಮಗೆ ಹಿಂಸಕರಾದ ರಾಕ್ಷಸರನ್ನು ನಾಶಮಾಡಿರಿ.

English Translation

Possessors of true vigor, you have displayed your might with the brilliance of which you have destroyed the Rakshas.

ವಿಶೇಷ ವಿಷಯಗಳು

ಸತ್ಯಶವಸಃ—ಈ ಶಬ್ದದ ವಿವರಣೆಯು ಹಿಂದಿನ ಋಕ್ಕಿನಲ್ಲಿ ಉಕ್ತವಾಗಿದೆ. ಇತರರಿಂದ ಎಂದರೆ ಶತ್ರುಗಳಿಂದ ಸಹಿಸಲಶಕ್ಯವಾದ ಬಲವುಳ್ಳವರು ಎಂದರೆ ಅತ್ಯಂತ ಪರಾಕ್ರಮಯುತರಾದವರು ಎಂದರ್ಥವು.

ಆವಿಷ್ಕರ್ತ— ಆವಿಷ್ಕುರುತ, ಪ್ರಕಾಶಯತ । ಪ್ರಕಾಶಪಡಿಸಿದ್ದೀರಿ ಎಂದರೆ ಎಲ್ಲರಿಗೂ ತಿಳಿಯುವಂತೆ ಸ್ಪಷ್ಟಪಡಿಸಿದ್ದೀರಿ

ಮಹಿತ್ವನಾ—ಮಾಹಾತ್ಮ್ಯದಿಂದ, ಶ್ರೇಷ್ಠತೆಯಿಂದ

ವಿಧ್ಯತ—ವ್ಯಧ ತಾಡನೇ । **ತಾಡಯತ ನಾಶಯತೇತ್ಯರ್ಥಃ** । ತಾಡನಮಾಡಿ ಎಂದರೆ ನಾಶಮಾಡಿ ಈ ಶಬ್ದದ ಜಂತ್ಯಾಕ್ಷರವು ಛಂದಸ್ಸಿನ ಅನುಕೂಲಕ್ಕಾಗಿ ಸಂಹಿತಾಪಾಠದಲ್ಲಿ ದೀರ್ಘವಾಗಿರುವುದು.

ರಕ್ಷಸಃ—ರಾಕ್ಷಸಾದಿಗಳು, ಪಿಶಾಚಿಗಳು, ಮನುಷ್ಯರಿಗೆ ಕೇಡನ್ನು ಬಯಸುವ ದುಷ್ಟಭೂತಗಳು, evil spirits.

ವ್ಯಾಕರಣಪ್ರಕ್ರಿಯಾ

ಕರ್ತ—ಡುಕೃಞ್ ಕರಣೇ ಧಾತು. ಜೋಣ್ಯಧ್ಯಮಪುರುಷ ಬಹುವಚನಕ್ಕೆ ಲಜ್ವಿದ್ಭಾವವಿರುವುದರಿಂದ ತಾದೇಶ. **ಬಹುಲಂ ಛಂದಸಿ**—ಸೂತ್ರದಿಂದ ವಿಕರಣಕ್ಕೆ (ಶು) ಲುಕ್. **ತಪ್ತನಪ್ತನಥನಾಶ್ಚ** (ಪಾ. ಸೂ.

೮-೧-೪೫) ಎಂಬುದರಿಂದ ವಿಭಕ್ತಿಗೆ ತಬಾದೇಶ. ಪಿತ್ವಾದುದರಿಂದ ಜುಚ್ವಿದ್ಭಾವ ಬರುವುದಿಲ್ಲ. ಆಗ **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿನ ಇಕ್ಕಿಗೆ ಗುಣ. **ತಿಜ್ಜಿತಿಜಿಃ**—ಎಂಬುದರಿಂದ ನಿಘಾತ ಸ್ವರ ಬರುತ್ತದೆ. ಕರ್ತ ಎಂದು ರೂಪವಾಗುತ್ತದೆ. ಆವಿಸ್ ಎಂಬುದು ಪೂರ್ವದಲ್ಲಿರುವಾಗ ಸಕಾರಕ್ಕೆ ರುತ್ವ. ವಿಸರ್ಗ. **ಇದುದುಪಧಸ್ಯ ಚಾಪ್ರತ್ಯಯಸ್ಯ** (ಪಾ. ಸೂ. ೮-೩-೪೧) ಎಂಬುದರಿಂದ ಪ್ರತ್ಯಯಭಿನ್ನ ಸಂಬಂಧಿ ವಿಸರ್ಗವಾದುದರಿಂದ ಪತ್ವ ಬರುತ್ತದೆ. ಆವಿಷ್ಕರ್ತ ಎಂದು ರೂಪನಾಗುತ್ತದೆ.

ಮಹಿತ್ವನಾ — ಮಹಿತ್ವ+ಟಾ ಎಂದಿರುವಾಗ ವ್ಯತ್ಯಯದಿಂದ ತೃತೀಯಾವಿಕರಣಚನಕ್ಕೆ ನಾಭಾನವೂ ಉದಾತ್ತಸ್ವರವೂ ಬರುತ್ತದೆ. ಅಥವಾ **ಸುಪಾಂ ಸುಲುಕ್**—ಸೂತ್ರದಿಂದ ತೃತೀಯಾವಿಭಕ್ತಿಗೆ ಆಚ್ ಆದೇಶ. ನಕಾರಾಗಮ. ಚಿತ್ವಾದುದರಿಂದ ಅಂತೋದಾತ್ತವಾಗುತ್ತದೆ.

ವಿಧ್ಯತಾ—ವ್ಯಧ ತಾಡನೇ ಧಾತು. ಲೋಟ್ ಮಧ್ಯಮಪುರುಷ ಬಹುವಚನಕ್ಕೆ **ತಸ್ಥಸ್ಥ**—ಸೂತ್ರದಿಂದ ತಾದೇಶ. **ದಿವಾದಿಭ್ಯಃ ಶ್ಯನ್** ಎಂಬುದರಿಂದ ಶ್ಯನ್‌ವಿಕರಣ. **ಸಾರ್ವಧಾತುಕಪಿತ್**—ಸೂತ್ರದಿಂದ ಇದು ಪಿತ್ತಾಗುವುದರಿಂದ **ಗ್ರಹಿಜ್ಯಾವಯಿ**—(ಪಾ. ಸೂ. ೬-೧-೧೬) ಎಂಬುದರಿಂದ ಧಾತುವಿಗೆ (ಯಕಾರಕ್ಕೆ) ಸಂಪ್ರಸಾರಣ. **ಸಂಪ್ರಸಾರಣಾಚ್ಚಿ** ಎಂಬುದರಿಂದ ಪೂರ್ವರೂಪ. ವಿಧ್ಯತ ಎಂದು ರೂಪನಾದಾಗ ಪ್ರತ್ಯಯ ಪಿತ್ತಾದುದರಿಂದ **ಋಚಿ ತುನುಘ ಮಕ್ಷು ತಜ್**—(ಪಾ. ಸೂ. ೬-೩-೧೩೩) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅನುಪದೇಶದ ಸರನಲ್ಲಿರುವುದರಿಂದ ಸ್ವತ್ಯಯವು ಅನುದಾತ್ತವಾಗುತ್ತದೆ. ಆಗ ಧಾತುಸ್ವರ ಉಳಿಯುತ್ತದೆ ॥ ೯ ॥

ಸಂಹಿತಾಪಾಠ:

ಗೂಹತಾ ಗುಹ್ಯಂ ತಮೋ ವಿ ಯಾತ ವಿಶ್ವಮತ್ರಿಣಂ।
ಜ್ಯೋತಿಷ್ಕರ್ತಾರ ಯದುಶ್ಮಸಿ ॥ ೧೦ ॥

ಪದಪಾಠ:

ಗೂಹತ । ಗುಹ್ಯಂ । ತಮಃ । ವಿ । ಯಾತ । ವಿಶ್ವಂ । ಅತ್ರಿಣಂ ।
ಜ್ಯೋತಿಃ । ಕರ್ತ । ಯತ್ । ಉಶ್ಮಸಿ ॥ ೧೦ ॥

ಸಾಯಣಭಾಷ್ಯ

ಹೇ ಮರುತೋ ಗುಹ್ಯಂ ಗುಹಾಯಾಂ ಸ್ಥಿತಂ ಸರ್ವತ್ರ ವ್ಯಾಪ್ಯ ವರ್ತಮಾನಂ ತಮೋಽಂಧಕಾರಂ ಗೂಹತ । ಸಂವೃತಂ ಕುರುತ । ಯಥಾಸ್ಮಾಭಿರ್ನ ದೃಶ್ಯತೇ ತಥಾಽದರ್ಶನಂ ಪ್ರಾಪಯತ । ವಿನಾಶಯತೇತ್ಯರ್ಥಃ । ವಿಶ್ವಂ ಸರ್ವಮತ್ರಿಣಮತ್ತಾರಂ ರಾಕ್ಷಸಾದಿಕಂ ವಿ ಯಾತ । ವಿವಿಧಂ ಯಾಪಯತ । ಅಸ್ಮತ್ಸಕಾಶಾನ್ನಿರ್ಗಮಯತ । ಯಜ್ಜ್ಯೋತಿಃ ಸೂರ್ಯಾದಿಕಂ ವಯಮುಶ್ಮಸಿ ಕಾಮಯಾಮಹೇ ತತ್ಕರ್ತ । ಕುರುತ । ಯದ್ವಾ । ಗುಹ್ಯಂ ಗುಹಾಯಾಂ ಶರೀರಾಂತರ್ಗತಗುಹಾರೂಪೇ ಹೃದಯೇ ಭವನಂ ತಮೋ ಭಾವರೂಪಾಜ್ಞಾನಂ । ತದ್ಗೂಹತ । ವಿನಾಶಯತ । ಅತ್ರಿಣಂ ಪುರುಷಾರ್ಥಸ್ಯಾತ್ತಾರಂ ಕಾಮ-ಕ್ರೋಧಾದಿಕಂ ಸರ್ವಂ ವಿನಿರ್ಗಮಯತ । ಯಜ್ಜ್ಯೋತಿಃ ಪರತತ್ತ್ವಸಾಕ್ಷಾತ್ಕಾರರೂಪಂ ಜ್ಞಾನಂ ಕಾಮಯಾಮಹೇ ಪ್ರಾಣಾಪಾನಾದಿಪಂಚವೃತ್ತಿರೂಪಾ ಹೇ ಮರುತಸ್ತತ್ಕರ್ತ । ಕುರುತ ॥ ಗೂಹತ । ಗುಹೂ ಸಂವರಣೇ । ಶಪಿ ಲಘೂಪಧಗುಣ ಊದುಪಧಾಯಾ ಗೋಹಃ । ಪಾ. ೬ ೪ ೮೯ । ಇತ್ಯುಪ-ಧಾಯಾ ಊಕಾರಃ । ಯಾತ । ಯಾ ಪ್ರಾಪಣೇ । ಅಸ್ಮಾದಂತರ್ಭಾವಿತಣ್ಯರ್ಥಾಲ್ಲೋಟ್ । ಅತ್ರಿಣಂ । ಅದೇಸ್ತ್ರಿನಿ ಚ । ಉ. ೪-೬೮ । ಇತಿ ತ್ರಿನಿಪ್ರತ್ಯಯಃ । ಉಶ್ಮಸಿ । 'ವಶ ಕಾಂತೌ । ಇದಂತೋ ಮಸಿಃ । ಆದಾದಿತ್ವಾಚ್ಛಪೋ ಲುಕ್ । ಗ್ರಹಿ ಜ್ಯಾದಿನಾ ಸಂಪ್ರಸಾರಣಂ ॥೧೦

॥ ಸೃಷ್ಟಿಪದಾರ್ಥ ॥

ಗುಹ್ಯಂ—(ಎಲೈ ಮರುತ್ತುಗಳೇ) ಗುಹೆಯಲ್ಲಿ ಮರೆಸಿಕೊಂಡು (ಅನಂತರ ಸಕಲ ಜಾಗವನ್ನೂ ವ್ಯಾಪಿಸತಕ್ಕ) **ತಮಃ**—ಕಗ್ಗತ್ತಲೆಯನ್ನು । **ಗೂಹತ**- (ನಮ್ಮಿಂದ ಮರೆಯಾಗುವಂತೆ ಮಾಡಿರಿ. (ನಾಶಮಾಡಿರಿ) **ವಿಶ್ವಂ ಅತ್ರಿಣಂ**—ಸರ್ವಭಕ್ಷಕರಾದ ರಾಕ್ಷಸಾದಿಗಳನ್ನು । **ವಿ ಯಾತ**—ನಾನಾ ದಿಕ್ಕುಗಳಿಗೆ ಓಡಿಸಿರಿ । **ಯತ್ ಜ್ಯೋತಿಃ**—ಸೂರ್ಯಾದಿ ಯಾವ ತೇಜಸ್ಸುಗಳನ್ನು । **ಉಶ್ಮಸಿ**—(ನಾವು) ಅಪೇಕ್ಷಿಸುತ್ತೇವೆಯೋ, । **ಕರ್ತ**—ಅವೆಲ್ಲ ನನಗೂ ಉಂಟುಮಾಡಿರಿ ।

ಅಥವಾ

ಗುಹ್ಯಂ—(ಎಲೈ ಮರುತ್ತುಗಳೇ ಶರೀರದೊಳಗೆ) ಗುಹಾರೂಪವಾದ ಹೃದಯದಲ್ಲಿ ಇರತಕ್ಕ । **ತಮಃ**-ಅಜ್ಞಾನರೂಪವಾದ ಕತ್ತಲೆಯನ್ನು । **ಗೂಹತ**—ನಾಶಮಾಡಿರಿ. । **ಅತ್ರಿಣಂ**—ಪುರುಷಾರ್ಥಗಳನ್ನು ಮರೆಸುವ ಕಾಮಕ್ರೋಧಾದಿಗಳನ್ನು । **ವಿ ಯಾತ**—ದೂರ ಓಡಿಸಿರಿ. । **ಯತ್ ಜ್ಯೋತಿಃ**—ಯಾವ ಪರತತ್ತ್ವದ ಸಾಕ್ಷಾತ್ಕಾರಕ್ಕೆ ಸಾಧನವಾದ ಜ್ಯೋತಿಯನ್ನು । **ಉಶ್ಮಸಿ**—ಅಪೇಕ್ಷಿಸುತ್ತೇವೆಯೋ, । **ಕರ್ತ**—ಅದನ್ನು ನಮಗೆ ಉಂಟುಮಾಡಿರಿ ।

ಭಾವಾರ್ಥ

ಎಲೈ ಮರುತ್ತುಗಳೇ, ಗುಹೆಯಲ್ಲಿ ಮರೆಸಿಕೊಂಡು ಅನಂತರ ಸರ್ವಪ್ರದೇಶಗಳಲ್ಲಿಯೂ ವ್ಯಾಪಿಸತಕ್ಕ ಕಗ್ಗತ್ತಲೆಯನ್ನು ನಾಶಮಾಡಿರಿ ಸರ್ವಭಕ್ಷಕರಾದ ರಾಕ್ಷಸಾದಿಗಳನ್ನು ನಾನಾ ದಿಕ್ಕಿಗೆ ಓಡಿಸಿರಿ. ನಾವು ಸೂರ್ಯನೆ ಮೊದಲಾದ ಯಾವ ಯಾವ ತೇಜಸ್ಸುಗಳನ್ನು ಅಪೇಕ್ಷಿಸುತ್ತೇವೆಯೋ ಅವೆಲ್ಲವನ್ನೂ ಉಂಟುಮಾಡಿರಿ.

English Translation

Disperse the darkness concealing every where ; drive away every devouring enemy : show us the light we long for.

ವಿಶೇಷವಿಷಯಗಳು :

ಈ ಋಕ್ಕಿಗೆ ಭಾಷ್ಯಕಾರರು ಎರಡು ವಿಧವಾದ ಅರ್ಥಗಳನ್ನು ಹೇಳಿರುವರು. ತಮಃ ಎಂಬ ಶಬ್ದಕ್ಕೆ ಸಾಧಾರಣಾರ್ಥವಾದ ಕತ್ತಲೆಯೆಂದೂ ಅಜ್ಞಾನವೆಂದೂ ಅರ್ಥಮಾಡಿ ಅದಕ್ಕನುಸಾರವಾಗಿ ವಿವರಣೆ ಮಾಡಿರುವರು.

ಗುಹ್ಯಂ—ಗುಹಾಯಾಂ ಸ್ಥಿತಂ। ಸರ್ವತ್ರ ವ್ಯಾಪ್ಯಮಾನಂ । ಅವಿತುಕೊಂಡಿರತಕ್ಕ ಎಂದರೆ ಯಾರಿಗೂ ಕಾಣಿಸದಂತೆ ರಹಸ್ಯಪ್ರದೇಶದಲ್ಲಿರುವ. ಋಗ್ವೇದದಲ್ಲಿಯೂ ಇತರ ವೇದಗಳಲ್ಲಿಯೂ ರಹಸ್ಯವಾಗಿರುವ ಎಂಬ ಅರ್ಥವನ್ನು ಸೂಚಿಸುವ ಸಂದರ್ಭದಲ್ಲಿ **ಗುಹ್ಯಂ, ಗುಹಾ ಹಿತಂ** ಎಂಬ ಶಬ್ದಗಳ ಪ್ರಯೋಗವು ವಿಶೇಷವಾಗಿರುವುದು.

ಗೂಹತ—ಸಂವೃತಂ ಕುರುತ। ಗುಹೂ ಸಂವರಣೇ। ಅಪನಯೇತ್ಯರ್ಥಃ । ನಿವಾರಣೆ ಮಾಡಿ ಕತ್ತಲನ್ನು ಹೋಗಲಾಡಿಸಿ.

ಅತ್ತ್ರಿಣಂ—ಸರ್ವಮತ್ತಾರಂ ರಾಕ್ಷಸಾದಿಕಂ । ಎಲ್ಲ ಪ್ರಾಣಿಗಳನ್ನು ಭಕ್ಷಿಸುವ ರಾಕ್ಷಸಾದಿಗಳನ್ನು.

ವ್ಯಾಕರಣಸ್ಯ ಕ್ರಿಯಾ

ಗೂಹತ—ಗುಹೂ ಸಂವರಣೇ ಧಾತು. ಭ್ವಾದಿ. ಲೋಟ್ ಮುಧ್ಯಮಪುರುಷ ಬಹುವಚನಕ್ಕೆ ತಾದೇಶ **ಕರ್ತರಿಶಪ್** ಎಂಬುದರಿಂದ ಶಪ್ ವಿಕರಣ. ಸಾರ್ವಧಾತುಕ ನಿಬಂಧನವಾಗಿ **ಪ್ರಗಂತೇಲಘೂಪಧಸ್ಯ ಚ** ಎಂಬುದರಿಂದ ಲಘೂಪಧಗುಣ ಬಂದಾಗ **ಊದುಪಧಾಯಾ ಗೋಹಃ** (ಪಾ. ಸೂ. ೬-೪-೮೬) ಎಂಬುದರಿಂದ ಊಪಧೆಗೆ ಊಕಾರಾದೇಶ. 'ಗೂಹತ ಎಂದು ರೂಪವಾಗುತ್ತದೆ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಘಾತುಸ್ವರದಿಂದ ಆದ್ಯುದಾತ್ತವಾದ ಪದವಾಗುತ್ತದೆ.

ಯೋತ—ಯೂ ವ್ಯಾಪನೇ ಧಾತು. ಇದಕ್ಕೆ ನಿಜರ್ಥವು (ಪ್ರೇರಣಾ) ಧಾತ್ವರ್ಥಾಂತರ್ಭೂತವಾಗಿರುವಾಗ ಲೋಟ್. ಮಧ್ಯಮಪುರುಷಬಹುವಚನದಲ್ಲಿ ತಾದೇಶ. **ಆದಿಪ್ರಭೃತಿಭ್ಯಃ ಶಪಃ**—ಎಂಬುದರಿಂದ ವಿಕರಣಕ್ಕೆ ಲುಕ್. ಅತಿಙಂತವು ಪದದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಅತ್ತ್ರಿಣಮ್—ಅದ ಭಕ್ಷಣೇ ಧಾತು. **ಅದೇಸ್ತ್ರಿನಿ ಚ** (ಉ. ಸೂ. ೪-೧೧೦) ಎಂಬುದರಿಂದ ತ್ರಿನಿ ಪ್ರತ್ಯಯ. ಅತ್ತ್ರಿನ್ ಶಬ್ದವಾಗುತ್ತದೆ. ಪ್ರತ್ಯಯಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

ಉಶ್ಮಸಿ—ವಶ ಕಾಂತೌ ಧಾತು ಅದಾದಿ ಲಟ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ. **ಸಾರ್ವಧಾತುಕಮಪಿತ್** ಎಂಬುದರಿಂದ ಆದು ಙಿತ್ತಾದುದರಿಂದ **ಗ್ರಹಿಜ್ಯಾವಯಿ**—(ಪಾ ಸೂ. ೬-೧-೧೬) ಎಂಬುದರಿಂದ ಧಾತುವಿಗೆ (ವಕಾರಕ್ಕೆ) ಸಂಪ್ರಸಾರಣ. ಅದಾದಿಯಾದುದರಿಂದ ಶಪಿಗೆ ಲುಕ್. **ಇದಂತೋಮಸಿ** (ಪಾ ಸೂ. ೭-೧-೪೬) ಎಂಬುದರಿಂದ ಪ್ರತ್ಯಯಕ್ಕೆ ಇಕಾರಾಗಮ. ಉಶ್ಮಸಿ ಎಂದು ರೂಪವಾಗುತ್ತದೆ ಯೆನ್ನೋಗ

ವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯದ ಆದ್ಯುದಾತ್ತಸ್ವರದಿಂದ ಮಕಾರೋತ್ತರಾಕಾರವು ಉದಾತ್ತವಾಗುತ್ತದೆ. ॥ ೧೦ ॥

ಎಂಭತ್ತೇಳನೆಯ ಸೂಕ್ತವು

ಪ್ರತ್ನವಕ್ಷಸ ಇತಿ ಷಡೃಚಂ ತೃತೀಯಂ ಸೂಕ್ತಂ ಗೋತಮಸ್ಯಾರ್ಷಂ ಜಾಗತಂ ಮಾರುತಂ । ತಥಾ ಚಾನುಕ್ರಾಂತಂ । ಪ್ರತ್ನವಕ್ಷಸಃ ಷಡ್ಜಾಗತಮಿತಿ ॥ ಅಗ್ನಿಷ್ಟೋಮ ಆಗ್ನಿಮಾರುತಶಸ್ತ್ರ ಇದಂ ಸೂಕ್ತಂ ಮಾರುತನಿವಿದ್ಧಾನಂ । ಅಥ ಯಥೇತಮಿತಿ ಖಂಡೇ ಸೂತ್ರಿತಂ। ಪ್ರತ್ನವಕ್ಷಸಃ ಪ್ರತವಸೋ ಯೆಜ್ಞಾ ಯೆಜ್ಞಾವೋ ಅಗ್ನಯೇ । ಆ. ೫-೨೦- । ಇತಿ ॥

ಅನುವಾದವು-- **ಪ್ರತ್ನವಕ್ಷಸಃ** ಎಂಬುವುದು **ಈ** ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವುವು ಈ ಸೂಕ್ತಕ್ಕೆ ಗೋತಮನು ಋಷಿಯು, ಮರುದ್ದೇವತೆಗಳು, ಜಗತೀಛಂದಸ್ಸು. ಅನುಕ್ರಮಣಿಕೆಯಲ್ಲಿ **ಪ್ರತ್ಯಕ್ಷಸಃ ಷಡ್ಜಾಗತಂ** ಎಂದು ಹೇಳಿರುವುದು. ಅಗ್ನಿಷ್ಟೋಮಯಾಗದಲ್ಲಿ ಆಗ್ನಿಮಾರುತಶಸ್ತ್ರಮಂತ್ರ ಪಠನಕಾಲದಲ್ಲಿ ಮಾರುತನಿವಿದ್ಧಮಂತ್ರಗಳಿಗಾಗಿ **ಈ** ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತ ಸೂತ್ರದ **ಅಥ ಯಥೇತಂ** ಎಂಬ ಖಂಡದಲ್ಲಿ **ಪ್ರತ್ನವಕ್ಷಸಃ ಪ್ರತವಸೋ ಯೆಜ್ಞಾ ಯೆಜ್ಞಾವೋ ಅಗ್ನಯೇ** ಎಂಬ ಸೂತ್ರದಿಂದ ವಿನಿಯುಕ್ತವಾಗಿರುವುದು. (ಆ-೫-೭೦)

॥ ೫೦ ॥

ಸೂಕ್ತ—೮೭

ಮಂಡಲ—೧ ॥ ಅನುವಾಕ—೧೪ ॥ ಸೂಕ್ತ—೮೭ ॥

ಚಕ್ರಕ—೧ ॥ ಅಧ್ಯಾಯ—೬ ॥ ವರ್ಗ—೧೩ ।

ಸೂಕ್ತದಲ್ಲಿರುವ ಋಕ್ಸಂಖ್ಯೆ—೬

॥ ಋಷಿಃ—ಗೋತಮೋ ರಾಹೂಗಣಃ ॥

॥ ದೇವತಾ—ಇಂದ್ರಃ ॥

॥ ಛಂದಃ—ಜಗತೀ ॥

॥ संहितापाठः ॥

प्रत्त्सक्षसः प्रतवसो विरप्शिनोऽनानता अविथुरा ऋजीषिणः ।
जुष्टतमासो नृतमासो अञ्जिभिर्व्यानज्रे केचिदुस्राइव स्तृभिः ॥ ८ ॥

पदपाठः

प्रऽत्त्सक्षसः । प्रऽतवसः । विऽरप्शिनः । अनानताः । अविथुराः । ऋजीषिणः ।
जुष्टऽतमासः । नृऽतमासः । अञ्जिऽभिः । वि । आनज्रे । केः । चित् ।
उस्राःऽइव । स्तृभिः ॥ ८ ॥

॥ सायणभाष्यं ॥

प्रत्त्सक्षसः शत्रूणां प्रकर्षेण तनूकर्तारः । शत्रुघातिन इत्यर्थः । ऋजीषिणः प्रतवसः प्रकृष्टबलोपेता अत एव विरप्शिनो विविधेन जयशब्देनोपेताः । यद्वा । महान्तोऽपि विविधैः शब्दैः प्रशस्यन्ते । अत एवानानता आनतिरहिताः । सर्वोत्कृष्टा इत्यर्थः । अविथुरा अविथुक्ताः । सप्तगणरूपेण संघीभूता इत्यर्थः । ऋजीषिणः । त्रैष्टीयसवनेऽृजीषस्याभिषवात् तत्र च मरुतः स्तूयन्त इति तेषामृजीषित्वम् । यद्वा । ऋजीषिणः प्रार्ज्जयितारो रसानाम् । जुष्टतमासोऽतिशयेन यैर्जुष्टाः सेविताः नृतमासोऽतिशयेन मेघादेर्नेतारः एवंभूता मरुतः स्तृभिः स्वशरीरस्याच्छादकैरंजिभिः रूपाभिव्यंजकैरलंकारैर्व्यानजिरे । नभसि व्यक्ता दृश्यन्ते । तत्र दृष्टान्तः । केचिदुस्रा इव । ये केचन सूर्यरश्मयो यथा नभसि दीप्यन्ते तद्वत् ॥ प्रत्त्सक्षसः । प्रकर्षेण त्सक्षन्ते तनूकुर्वन्तीति प्रत्त्सक्षसः ।

वः—(ಎಲೈ ಮರುತ್ತುಗಳೇ) ನಿಮ್ಮ । **तनूषु**—ಶರೀರ (ಭುಜ) ಗಳಲ್ಲಿ । **वाशीः**—(ಶತ್ರುಗಳನ್ನು ಭಯಗೊಳಿಸುವಂತೆ) ಶಬ್ದಮಾಡುವ ಆಯುಧವು । **श्रियेऽ कं**—ಐಶ್ವರ್ಯಸಂಪಾದನೆಗಾಗಿಯೇ (ಇದೆ.) । (ಆ ಮರುತ್ತುಗಳು) **वनाऽ न**—ವೃಕ್ಷಸಮೂಹಗಳನ್ನು ಬೆಳೆಸುವಂತೆ । **मेधाऽ**—ಯಜ್ಞಗಳನ್ನು । **ऊर्ध्वाऽ**—ವೃದ್ಧಿಯಾಗಿ ಬೆಳೆಯುವಂತೆ । **कृणवन्ते**—(ಯಜಮಾನರಿಂದ) ಮಾಡಿಸುತ್ತಾರೆ. । **सुजाताः**—ಶ್ರೇಷ್ಠವಾದ ಜನ್ಮವುಳ್ಳ । **मरुतः**—ಎಲೈ ಮರುತ್ತುಗಳೇ । **युष्मभ्यंऽ**—ನಿಮಗಾಗಿಯೇ । **कंऽ**—ಸುಖಕರವಾದ । **अद्रिं** (ಸೋಮರಸವನ್ನು ಹಿಂಡುವ) ಕಲ್ಲನ್ನು । **तुविद्युम्नाः सः**—ಪ್ರಭೂತವಾದ ಧನವುಳ್ಳ ಯಜಮಾನರು । **धनयंतेऽ**—(ಸೋಮರಸದಿಂದ) ತುಂಬಿದುದನ್ನಾಗಿ ಮಾಡುತ್ತಾರೆ. ।

ಭಾವಾರ್ಥ

ಎಲೈ ಮರುದ್ದೇವತೆಗಳೇ, ನಿಮ್ಮ ಬಾಹುಗಳಲ್ಲಿ ಶತ್ರುಭಯೋತ್ಪಾದಕವಾದ ಆಯುಧಗಳಿರುವುವು. ವೃಕ್ಷಾದಿಗಳು ಎತ್ತರವಾಗಿ ಬೆಳೆಯುವಂತೆ ಯಜ್ಞಗಳನ್ನು ಅಭಿವೃದ್ಧಿಯಾಗುವಂತೆ ಮಾಡುವಿರಿ. ಶ್ರೇಷ್ಠವಾದ ಜನ್ಮವುಳ್ಳ ಎಲೈ ಮರುತ್ತುಗಳೇ, ನಿಮಗಾಗಿ ಯಜಮಾನರು ಸೋಮರಸವನ್ನು ಹಿಂಡುವ ಕಲ್ಲುಗಳನ್ನು ಧನಯುಕ್ತವಾಗುವಂತೆ ಮಾಡುತ್ತಾರೆ ಎಂದರೆ ಕಲ್ಲುಗಳಿಂದ ಸೋಮಲತೆಯನ್ನು ಜಜ್ಜಿ ಸೋಮರಸವನ್ನು ನಿಮ್ಮ ಪಾನಾರ್ಥವಾಗಿ ಸಿದ್ಧಪಡಿಸುತ್ತಾರೆ.

English Translation

O Maruts, the threatening weapons are in your bodies (hands) able to win; to you they raise lofty sacrifices like tall trees ; well born Maruts, for you, the wealthy worshippers enrich the stone (that presses the Soma plant)

ವಿಶೇಷವಿಷಯಗಳು

तनूषु—ಶರೀರಗಳಲ್ಲಿ ಎಂದರೆ ಬಾಹುಗಳಲ್ಲಿ.

वाशीः— ಆಯುಧವಿಶೇಷಗಳು. ಶತ್ರುಗಳಿಗೆ ಭಯೋತ್ಪಾದನೆಮಾಡುವ ಶಬ್ದಗಳಿಂದ ಕೂಡಿದ ಆಯುಧಾದಿಗಳು.

मेधा—ಯಜ್ಞಗಳನ್ನು

ತುವಿದ್ಯುಮ್ನಾಸಃ–ಪ್ರಭೂತಧನವುಳ್ಳ ಯಜಮಾನರು.

ಧನಯಂತೆ ಅದ್ರಿಂ—ಸೋಮಾಭಿಷವೇ ಪ್ರವೃತ್ತಂ ಗ್ರಾವಾಣಂ ಧನಂ ಕುರ್ವಂತಿ। ಸೋಮಾಭಿಷವಕ್ಕಾಗಿ ಉಪಯೋಗಿಸುವ ಕಲ್ಲನ್ನು ಧನವುಳ್ಳದ್ದನ್ನಾಗಿ ಎಂದರೆ ಚಿನ್ನಾಗಿ ರಸ ಹಿಂಡುವಂತೆ ಮಾಡುತ್ತಾರೆ.

ಕಂ—ಈ ಋಕ್ಕಿನಲ್ಲಿ ಕಂ ಎಂಬ ಶಬ್ದವು ಎರಡಾವರ್ತಿ ಪಠಿತವಾಗಿರುವುದು. ಪೂರ್ವಾರ್ಧದಲ್ಲಿರುವ ಕಂ ಎಂಬ ಶಬ್ದವು ಕೇವಲ ಪಾದಪೂರಣಕ್ಕಾಗಿ ಉಪಯೋಗಿಸಲ್ಪಟ್ಟಿರುವುದು. **ಅಥಾಪಿ ಪಾದಪೂರಣಾ ಕಮಿಮಾಮಿ–ದ್ವಿತೀತಿ** ಎಂದು ಯಾಸ್ಕರ ವಚನವಿರುವುದು. (ನಿ ೧-೯) ಎಂದರೆ ಕಂ, ಈಂ, ಇತ್, ಉ ಎಂಬ ಶಬ್ದಗಳು ಕೇವಲ ಪಾದಪೂರಣಮಾಡುವುದಕ್ಕಾಗಿ ಎಂದರೆ ಪಾದಗಳಲ್ಲಿರಬೇಕಾದ ಕ್ಲಪ್ತ ಸಂಖ್ಯೆಯ ಅಕ್ಷರಗಳು ಕಮ್ಮಿಯಾದಲ್ಲಿ ಅದನ್ನು ಸರಿಪಡಿಸುವುದಕ್ಕಾಗಿ ಈ ಶಬ್ದಗಳನ್ನು ಸೇರಿಸುವರು. ಅಂತಹ ಸಂದರ್ಭದಲ್ಲಿ ಈ ಶಬ್ದಗಳಿಗೆ ಯಾವ ನಿರ್ದಿಷ್ಟಾರ್ಥವೂ ಇರುವುದಿಲ್ಲ. ಉತ್ತರಾರ್ಧದಲ್ಲಿರುವ ಕಂ ಎಂಬ ಶಬ್ದಕ್ಕೆ ಸುಖಕರವಾದ ಎಂದರ್ಥವನ್ನು ಭಾಷ್ಯಕಾರರು ಹೇಳಿರುವರು

ವ್ಯಾಕರಣಸ್ಯ ಕ್ರಿಯಾ

ಶ್ರಿಯೇ—ಸಾವೇಕಾಚಸ್ತೃತೀಯಾದಿಃ—ಎಂಬುದರಿಂದ ಚತುರ್ಥೀವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ವಾಶೀಃ—ರತ್ನಾನಾಂ ಭಯೋತ್ಪಾದನೇನ ಆಕ್ರೋಶಶಬ್ದಕರಣಂ ವಾರಃ. ವಾಶಃ ಅಸ್ಯ ಅಸ್ತಿ ಎಂಬ ಮತ್ವರ್ಥದಲ್ಲಿ **ಛಂದಸೀವನಿಪೌ**—ಎಂಬುದರಿಂದ ಈಕಾರ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತತ್ವವು ಪ್ರಾಪ್ತವಾದರೆ **ವ್ಯತ್ಯಯೋ ಬಹುಲಂ**—ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

ನೇಧಾಃ–ನೇಧ+ಶಸ್ ಎಂದಿರುವಾಗ **ಸುಪಾಂ ಸುಲುಕ್**—ಎಂಬುದರಿಂದ ಶಸಿಗೆ ಡಾದೇಶ.

ವನಾ—ವನ ಶಬ್ದ ನಿತ್ಯನಪುಂಸಕಲ್ಲಿಂಗ. ಬಹುವಚನದಲ್ಲಿ ಆದೇಶವಾಗಿ ಬಂದ ತಿಗೆ **ಶೇಶ್ಛಂದಸಿ ಬಹುಲಮ್**—ಎಂಬುದರಿಂದ ಲೋಪ.

ಕೃಣವಂತೇ—ಕೃವಿ ಹಿಂಸಾಕರಣಯೋಶ್ಚ ಧಾತು. ಲಟ್‌ಪ್ರಥಮಪುರುಷ ಬಹುವಚನದಲ್ಲಿ ಝಿಪ್ರತ್ಯಯ **ವ್ಯತ್ಯಯೋ ಬಹುಲಮ್**—ಎಂಬುದರಿಂದ ಇಲ್ಲಿ ಆತ್ಮನೇಪದಪ್ರತ್ಯಯ ಬರುತ್ತದೆ. **ಧಿನ್ವಿಕೃಣ್ವ್ಯೋರ್ಚ** (ಪಾ. ಸೂ. ೩-೧-೮೦) ಎಂಬುದರಿಂದ ಉಕಾರವು ಅಂತಾದೇಶವಾಗಿಯೂ ಶಿಗೆ ಉ ಪ್ರತ್ಯಯವೂ ಬರುತ್ತದೆ. **ಇದಿತೋನುಮ್ ಧಾತೋಃ**—ಎಂಬುದರಿಂದ ಧಾತುವಿಗೆ ನುಮಾಗಮ. ಕೃಣ್ವ್+ಅ ಎಂದಿರುವಾಗ **ಅಲೋಂತ್ಯಸ್ಯ** ಎಂಬ ಪರಿಭಾಷೆಯಿಂದ ವಕಾರಕ್ಕೆ ಉಕಾರವು ಅಂತಾದೇಶವಾಗಿ ಬರುತ್ತದೆ ಕೃಣ ಉ ಝಿ ಎಂದಿರುವಾಗ **ಅತೋ–ಲೋಪಃ**—ಎಂಬುದರಿಂದ ಅಕಾರಕ್ಕೆ ಲೋಪ. ಯಮ್ಯಸಿ ಹ್ರಸ್ವಾಕಾರಭಿನ್ನವಾದುದರ ಪರದಲ್ಲಿರುವುದರಿಂದ ಝಿ ಪ್ರತ್ಯಯಕ್ಕೆ **ಆತ್ಮನೇಪದೇಷ್ವನತಃ**—ಎಂಬುದರಿಂದ ಅತಾದೇಶ ಬರಬೇಕಾಗುತ್ತದೆ. ಇದರಿಂದ ಹಿಂದಿನಂತೆಯೇ ವ್ಯತ್ಯಯದಿಂದ **ಝೋಂತಃ**—ಎಂಬುದರಿಂದಲೇ ಅಂತಾದೇಶ ಬರುತ್ತದೆ. **ಛಂದಸ್ಯುಭಯಥಾ**—(ಪಾ. ಸೂ.

೩-೪-೧೧೭) ಎಂಬುದರಿಂದ ಪ್ರತ್ಯಯಕ್ಕೆ ಆರ್ಧಧಾತುಕಸಂಜ್ಞೆ ಬರುವುದರಿಂದ **ಸಾರ್ವಧಾತುಕಮಪಿತ್**—ಎಂಬ ಸೂತ್ರದಿಂದ ಆದಕ್ಕೆ ಙಿದ್ವದ್ಭಾವ ಬರುವುದಿಲ್ಲ. ಆಗ **ಸಾರ್ವಧಾತುಕಾರ್ಧಧಾತಕಯೋಃ**—ಎಂಬುದರಿಂದ ಉಕಾರಕ್ಕೆ ಗುಣ. ಅವಾದೇಶ. ಕೃಣವಂತೇ ಎಂದು ರೂಪವಾಗುತ್ತದೆ. ಆತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಊರ್ಧ್ವಾ—ಹಿಂದಿನಂತೆ ಶಸ್ವಿಭಕ್ತಿಗೆ **ಸುಪಾಂ ಸುಲುಕ್**—ಸೂತ್ರದಿಂದ ಡಾದೇಶ.

ಸುಜಾತಾಃ—ಅಮಂತ್ರಿತಸ್ಯ ಚ—(ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ.

ಧನಯಂತೇ—ಧನಂ ಕುರ್ವಂತಿ ಧನಯಂತೇ **ತತ್ಕರೋತಿ ತದಾಚಷ್ಟೇ**—ಎಂಬುದರಿಂದ ಪ್ರಾತಿಪದಿಕದ ಮೇಲೆ ಧಾತ್ವರ್ಥ ವಿವಕ್ಷಾಮಾಡಿದಾಗ ಣಿಚ್ ಬರುತ್ತದೆ. ಇದಕ್ಕೆ **ಇಷ್ಮವಚ್ಚೇ**—ಎಂದು ಇಷ್ಮವದ್ಭಾವ ಅತಿದೇಶ ಮಾಡಿರುವುದರಿಂದ ಣಿಚ್ ಪರವಾದಾಗ ಟಿಲೋಪ ಬರುತ್ತದೆ. ಧನಿ ಎಂದು **ಸನಾದ್ಯಂತಾ ಧಾತವಃ**—ಎಂಬುದರಿಂದ ಧಾತುಸಂಜ್ಞೆಯನ್ನು ಹೊಂದುತ್ತದೆ. ಲಟ್ ಪ್ರಥಮಪುರುಷಬಹುವಚನದಲ್ಲಿ ಅಂತಾದೇಶ. ಶಪ್ವಿಕರಣ. ಶಪ್ನಿಮಿತ್ತವಾಗಿ ಣಿಚಿಗೆ ಗುಣ ಅಯಾದೇಶ. ಆತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥೩॥

॥ ಸಂಹಿತಾಪಾಠಃ ॥

ಅಹಾನಿ ಗೃಧ್ರಾಃ ಪರ್ಯಾ ವ ಆಗುರಿಮಾಂ ಧಿಯಂ ವಾರ್ಕಾ-
ರ್ಯಾಂ ಚ ದೇವೀಂ।
ಬ್ರಹ್ಮ ಕೃಣ್ವಂತೋ ಗೋತಮಾಸೋ ಅರ್ಕೈರೂರ್ಧ್ವಂ ನುನು-
ದ್ರ ಉತ್ಸಧಿಂ ಪಿಬಧ್ಯೈ ॥ ೪ ॥

ಪದಪಾಠಃ

ಅಹಾನಿ । ಗೃಧ್ರ್ಯಾಃ । ಪರಿ । ಆ । ವಃ । ಆ । ಅಗುಃ । ಇಮಾಂ । ಧಿಯಂ ।
ವಾಕ್ರ್ಯಾರ್ಯಾಂ । ಚ । ದೇವೀಂ ।
ಬ್ರಹ್ಮ । ಕೃಣ್ವಂತಃ । ಗೋತಮಾಸಃ । ಅರ್ಕೈಃ । ಊರ್ಧ್ವಂ । ನುನುದ್ರೇ ।
ಉತ್ಸಧಿಂ । ಪಿಬಧ್ಯೈ ॥ ೪ ॥

ಸಾಯಣಭಾಷ್ಯಂ ॥

ತೃಷಿತೈರ್ಗೋತಮೈಃ ಸ್ತುತಾ ಮರುತಸ್ತೇಭ್ಯೋ ಗೋತಮೇಭ್ಯೋ ದೇಶಾಂತರೇ ವರ್ತಮಾನಂ ಕೂಪಮುತ್ಪಾಯಾನೀಯ ಪ್ರದದುಃ। ಏತದ್ಬೃಷ್ಟ್ವಾ ಕಶ್ಚಿದೃಷಿರ್ಬ್ರೂತೇ । ಹೇ ಗೋತಮಾ ಗೃಧ್ರ್ಯಾ ಜಲಾಭಿಕಾಂಕ್ಷಾಯುಕ್ತಾನ್ವೋ ಯುಷ್ಮಾನಹಾನಿ ಶೋಭನೋದಕೋಪೇತಾನಿ ದಿನಾನಿ ಪರ್ಯಾಗುಃ । ಪರ್ಯಾಗತಾನಿ । ಪರಿತ ಅಭಿಮುಖ್ಯೇನ ಪ್ರಾಪ್ತಾನಿ । ಪ್ರಾಪ್ಯ ಚ ವಾಕ್ರ್ಯಾರ್ಯಾಂ ವಾರ್ಭಿರುದಕೈರ್ನಿಷ್ಪಾದ್ಯಾಂ ಧಿಯಂ ಜ್ಯೋತಿಷ್ಟೋಮಾದಿಲಕ್ಷಣಂ ಕರ್ಮ ಚ ದೇವೀಂ ದ್ಯೋತಮಾನಮಕುರ್ವನ್ । ಯೇಷ್ವಹಸ್ಸು ಬ್ರಹ್ಮ ಹವಿರ್ಲಕ್ಷಣಮನ್ನಮರ್ಕೈರ್ಮಂತ್ರಸಾಧ್ಯೈಃ ಸ್ತೋತ್ರೈಃ ಸಹ ಕೃಣ್ವಂತೋ ಮರುದ್ಭ್ಯಃ ಕುರ್ವಂತೋ ಗೋತಮಾಸೋ ಗೋತಮಾ ಋಷಯ ಊರ್ಧ್ವಂ ನುನುದ್ರೇ । ಉತ್ಸೋ ಜಲಸ್ರವಾ-ಹೋಽಸ್ಮಿನ್ನೀಯತ ಇತ್ಯುತ್ಸಧಿಃ ಕೂಪಂ । ತಂ ಪಿಬಧ್ಯೈ ಸ್ವಕೀಯಪಾನಾಯೋರ್ಧ್ವಂ ನುನುದ್ರೇ ನುನುದಿರೇ ದೇಶಾಂತರೇ ವರ್ತಮಾನಂ ಕೂಪಮುತ್ಪಾತವಂತಃ । ಏತದೀಯಸ್ತೋತ್ರೈಃ ಸ್ತುತಾ ಮರುತಃ ಕೂಪಮುತ್ಪಾತವಂತ ಇತಿ ಯತ್ತದೇತದೀಯಸ್ತೋತ್ರಕಾರಿತಮಿತ್ಯೇತೇಷೂಪಚರ್ಯತೇ ॥ ಗೃಧ್ರ್ಯಾಃ । ಗೃಧು ಅಭಿಕಾಂಕ್ಷಾಯಾಂ । ಸುಸೂಧಾಗೃಧಿಭ್ಯಃ ಕ್ಯನ್ನಿತಿ ಕ್ಯನ್ಪ್ರತ್ಯಯಃ । ಸುಪಾಂ ಸುಪೋ ಭವಂತೀತಿ ಶಸೋ ಜಸ್ । ನಿತ್ತ್ವಾದಾದ್ಯುದಾತ್ತತ್ವಂ । ಅಗುಃ। ಏತೇರ್ಲುಙೀಣೋ ಗಾ ಲುಙೀತಿ ಗಾದೇಶಃ । ಆತ ಇತಿ ರೀಙ್ಜಸ್ । ವಾಕ್ರ್ಯಾರ್ಯಾಂ । ಡುಕೃಞ್ ಕರಣೇ । ಋಹಲೋರ್ಣ್ಯತ್ । ವಾರ್ಭಿಃ ಕಾರ್ಯಾ ವಾಕ್ರ್ಯಾರ್ಯಾ। ತ್ರಿಚಕ್ರಾದಿತ್ವಾದುತ್ತರಪದಾಂತೋದಾತ್ತತ್ವಂ। ನನುದ್ರೇ। ಣುದ ಪ್ರೇರಣೇ । ಇರಯೋರ ಇತಿ ರೇಆದೇಶಃ। ಉತ್ಸಧಿಂ । ಕರ್ಮಣ್ಯಧಿಕರಣೇ ಚೇತಿ ದಧಾತೇರಧಿಕರಣೇ ಕಿಪ್ರತ್ಯಯಃ । ಪಿಬಧ್ಯೈ । ಪಾ. ಪಾನೇ । ತುಮರ್ಥೇ ಸೇಸೇನಿತಿ ಶಧ್ಯೈನ್ಪ್ರತ್ಯಯಃ । ಪಾಘ್ರೇತ್ಯಾದಿನಾ ಪಿಬಾದೇಶಃ ॥

ಕನ್ನಡಪದಾರ್ಥ

ಗೃಧ್ರ್ಯಾಃ— (ಎಲ್ಲಿ ಗೋತಮಪುತ್ರರೇ) ನೀರನ್ನು ಬಹಳವಾಗಿ ಬಯಸಿದ । **ವಃ**—ನಿಮ್ಮನ್ನು । **ಅಹಾನಿ**—(ಶ್ರೇಷ್ಠವಾದ ನೀರುಗಳಿಂದ ಕೂಡಿದ) ದಿನಗಳು । **ಪರಿ ಆ ಅಗುಃ**—(ನಿನ್ನುನ್ನು) ಎದುರುಗೊಂಡು ಬಂದಿವೆ ಎಂದರೆ ಸಮೀಪಿಸಿ ಬಂದಿವೆ. । (ಮತ್ತು) **ವಾಕ್ರ್ಯಾರ್ಯಾಂ**—ನೀರುಗಳಿಂದ (ಲೇ) ಸಂಪಾದಿತವಾಗ

ಬೇಕಾದ । ಧಿಯಂ—ಜ್ಯೋತಿಷ್ಟೋಮಾದಿರೂಪವಾದ ಕರ್ಮವನ್ನು । **ದೇವೀಂ ಚ**—ಪ್ರಕಾಶಿಸುವಂತೆಯೂ ಮಾಡಿದವು. (ಈ ದಿವಸಗಳಲ್ಲಿ) । **ಬ್ರಹ್ಮ**—ಹವಿಸ್ಸಿನರೂಪದ ಅನ್ನವನ್ನು । **ಅರ್ಕೈಃ**—ಮಂತ್ರರೂಪವಾದ ಸ್ತೋತ್ರಗಳಿಂದ ಕೂಡಿಸಿ । **ಕೃಣ್ವಂತಃ**—(ಮರುತ್ತುಗಳಿಗೆ) ಅರ್ಪಿಸುತ್ತ । **ಗೋತಮಾಸಃ**—ಗೋತಮ ಪುತ್ರರಾದ ಋಷಿಗಳು । **ಉತ್ಸಧಿಂ**—ನೀರಿನ ಆಶ್ರಯವಾದ ಭಾವಿಯನ್ನು । **ಪಿಬಧ್ಯೈ**—ತಮ್ಮ ಪಾನಕ್ಕಾಗಿ । **ಊಧ್ವ್ಯಂ ನುನುದ್ರೇ**—ಮೇಲಕ್ಕೆ (ನೀರು) ಬರುವಂತೆ ಅಗೆದು ತಂದನು. ।

ಭಾವಾರ್ಥ

ಎಲೈ ಗೋತಮಪುತ್ರರೇ, ನೀವು ನೀರಿನಾಗಿ ಉತ್ಕಟವಾಗಿ ಬಯಸಿದಿರಿ ನಿಮಗೆ ಬೇಕಾದ ನೀರುಗಳಿಂದ ಕೂಡಿದ ದಿನಗಳು ನಿಮ್ಮನ್ನು ಎದುರುಗೊಂಡು ಬಂದಿವೆ. ಮತ್ತು ನೀರುಗಳಿಂದಲೇ ಸಂಪಾದಿತವಾಗಬೇಕಾದ ಜ್ಯೋತಿಷ್ಟೋಮಾದಿರೂಪವಾದ ಕರ್ಮವನ್ನು ಪ್ರಕಾಶಿಸುವಂತೆ ಮಾಡಿವೆ. ಇಂತಹ ದಿನಗಳಲ್ಲಿ ಗೋತಮಪುತ್ರರಾದ ನೀವು ಹವಿಸ್ಸಿನರೂಪದ ಅನ್ನವನ್ನು ಮಂತ್ರರೂಪವಾದ ಸ್ತೋತ್ರಗಳಿಂದ ಕೂಡಿಸಿ ಮರುತ್ತುಗಳಿಗೆ ಅರ್ಪಿಸುತ್ತ ನೀರಿನ ಆಶ್ರಯವಾದ ಭಾವಿಯನ್ನು ನಿಮ್ಮ ಪಾನಕ್ಕಾಗಿ ನೀರು ಮೇಲಕ್ಕೆ ಬರುವಂತೆ ಅಗೆದು ತಂದಿರಿ ಮರುತ್ತುಗಳೂ ಸಹ ದೂರದೇಶದಿಂದ ಆ ಬಾವಿಯನ್ನು ಅಗೆದು ನಿಮಗಾಗಿ ತಂದರು.

English Translation

Fortunate days have befallen you, (sons of Gotama), when thirsty and having sung about you in the sacrifice for which water was essential ; the sons of Gotama, offering oblations with sacred hymns have raised aloft the well provided for their dwelling

ವಿಶೇಷನಿಷಯಗಳು

ಬಾಯಾರಿಕೆಯಿಂದ ಬಳಲಿದ ಗೋತಮಋಷಿಯಿಂದಲೂ ಅವನ ಪುತ್ರರಿಂದಲೂ ಸ್ತುತಿಸಲ್ಪಟ್ಟ ಮರುದ್ದೇವತೆಗಳು ದೇಶಾಂತರದಲ್ಲಿದ್ದ ಒಂದು ನೀರಿನ ಬಾವಿಯನ್ನು ಎತ್ತಿಕೊಂಡು ಬಂದು ಗೋತಮಋಷಿಗೆ ಕೊಟ್ಟರು. ಇದನ್ನು ನೋಡಿದ ಒಬ್ಬ ಋಷಿಯು ಈ ಋಕ್ಕನ್ನು ಹೇಳಿರುವನು.

ಗೃಧ್ರಾಃ—**ಗೃಧು** ಅಭಿಕಾಂಕ್ಷಾಯಾಂ । (ನೀರನ್ನು) ಅಪೇಕ್ಷಿಸುತ್ತಿರುವ.

ವಾರ್ಕಾರ್ಯ್ಯಂ—**ಡುಕೃಞ್ ಕರಣೇ** । **ವಾರ್ಭಿಃ ಕಾರ್ಯಂ ವಾರ್ಕಾರ್ಯ್ಯಂ ತಾಂ** । ನೀರಿನಿಂದ ಮಾಡಲ್ಪಡಬೇಕಾದ, ಅವಶ್ಯಕವಾಗಿ ನೀರು ಬೇಕಾದ.

ಧಿಯಂ—ಕರ್ಮವನ್ನು ಎಂದರೆ ಜ್ಯೋತಿಷ್ಟೋಮಾದಿಯಜ್ಞಕರ್ಮವನ್ನು. ಅಪ್ ಅಪ್ನಃ ಮೊದಲಾದ ಇಪ್ಪತ್ತಾರು ಕರ್ಮನಾಮಗಳ ಮಧ್ಯದಲ್ಲಿ ಧೀಃ ಎಂಬ ಶಬ್ದವು ಪಠಿತವಾಗಿರುವುದರಿಂದ ಧಿಯಂ ಎಂದರೆ ಕರ್ಮವನ್ನು ಎಂದರ್ಥವು. (ನಿ-೩-೧)

ದೇವೀಂ ಚಿ—ದ್ಯೋತಮಾನಮಕುರ್ವನ್ । ಪ್ರಕಾಶಮಾನವಾಗುವಂತೆ ಅಥವಾ ಯಶಸ್ವಿಯಾಗುವಂತೆ ಮಾಡಿದವು.

ಬ್ರಹ್ಮ—ಹವಿರ್ಲಕ್ಷಣಮನ್ನಂ । ಹವಿಸ್ಸಿನ ರೂಪದಲ್ಲಿ ದೇವತೆಗಳಿಗೆ ಅರ್ಪಿಸಬೇಕಾದ ಅನ್ನವನ್ನು

ಆರ್ಕ್ಯೈಃ—ಋಕ್ಕುಗಳಿಂದ, ಮಂತ್ರಗಳಿಂದ, ಸ್ತೋತ್ರಗಳಿಂದ.

ಗೋತಮಾಸಃ—ಗೋತಮಋಷಿಯ ಪುತ್ರರು ಅಥವಾ ವಂಶಸ್ಥರು.

ಉತ್ಸಧಿಂ—ಜಲಪ್ರವಾಹೋಽಸ್ಮಿನ್ಪೀಯತ ಇತ್ಯುತ್ಸಧಿಃ ಕೂಪಂ । ಜಲಪ್ರವಾಹವಿರುವ ನೀರಿನ ಬಾವಿಯನ್ನು.

ಸ್ಕಾಕರಣಪ್ರಕ್ರಿಯಾ

ಗೃಧ್ಯಾಃ—ಗೃಧು ಅಭಿಕಾಂಕ್ಷಾಯಾಮ್. ಧಾತು. ಇದಕ್ಕೆ **ಸುಸೂಧಾಗೃಧಿಭ್ಯಃ ಕ್ರನ್** (ಉ. ಸೂ ೩೧೪೩) ಎಂಬುದರಿಂದ ಕ್ರನ್‌ಪ್ರತ್ಯಯ. ಕಿತ್ತಾದುದರಿಂದ **ಲಘೂಪಧಗುಣ** ಬರುವುದಿಲ್ಲ. ಗೃಧ್ರಶಬ್ದವಾಗುತ್ತದೆ. **ಸುಪಾಂ ಸುಪೋ ಭವಂತಿ** ಎಂಬ ವಚನದಿಂದ ಶಸಿಗೆ ಜಸ್ ಪ್ರತ್ಯಯ ಬರುತ್ತದೆ. ಕ್ರನ್‌ನಿತ್ತಾದುದರಿಂದ ಆದ್ಯುದಾತ್ತವಾಗುತ್ತದೆ.

ಅಗುಃ—ಇಙ್ ಗತೌ ಧಾತು. ಲುಙಿನಲ್ಲಿ **ಇಣೋಗಾಲುಙಿ** (ಪಾ. ಸೂ. ೭-೪-೪೫) ಎಂಬುದರಿಂದ ಧಾತುವಿಗೆ ಗಾ ಆದೇಶ. ಪ್ರಥಮಪುರುಷಬಹುವಚನದಲ್ಲಿ ಝಿಪ್ರತ್ಯಯ. **ಆತಃ** (ಪಾ. ಸೂ. ೩-೪-೧೧೦) ಆಕಾರದಲ್ಲಿರುವ ಝಿಗೆ ಜುಸಾದೇಶ ಬರುತ್ತದೆ ಎಂಬುದರಿಂದ ಝಿಗೆ ಜುಸಾದೇಶ. **ಉಸ್ಯಪದಾಂತಾತ್** (ಪಾ. ಸೂ. ೬-೧-೯೪) ಎಂಬುದರಿಂದ ಪರರೂಪ ಏಕಾದೇಶವಾಗಿ ಬರುತ್ತದೆ. ಅಂಗಕ್ಕೆ ಅಡಾಗನು. **ತಿಙ್ಶಿತಿಙಃ**—ಎಂಬುದರಿಂದ ಸಿಘಾತಸ್ವರ ಬರುತ್ತದೆ.

ಇಮಾಮ್—ಇದಮ್ ಶಬ್ದ. ಸ್ತ್ರೀಲಿಂಗದಲ್ಲಿ ದ್ವಿತೀಯಾಏಕವಚನಾಂತರೂಪ. **ಊಡಿದಂಪದಾದಿ**—ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ವಾರ್ಕಾರ್ಯೋರ್ಮ್—ಡು ಕೃಞ್ ಕರಣೇ ಧಾತು. **ಋಹಲೋರ್ಣ್ಯತ್** (ಪಾ. ಸೂ. ೩-೧-೧೨೪) ಎಂಬುದರಿಂದ ಇದಕ್ಕೆ ಣ್ಯತ್ ಪ್ರತ್ಯಯ. ಣಿತ್ತಾದುದರಿಂದ **ಅಚೋಞ್ಣಿತಿ**—ಎಂಬುದರಿಂದ ವೃದ್ಧಿ. **ಉರಣ್ರಪರಃ**—ಎಂಬುದರಿಂದ ರಪರವಾಗಿ ಬರುತ್ತದೆ. ಸ್ತ್ರೀತ್ವ ವಿವಕ್ಷಾಮಾಡಿದಾಗ **ಅಜ್ಯಾದ್ಯತಷ್ಟಾಪ್**—ಎಂಬುದರಿಂದ ಟಾಪ್ ಬರುತ್ತದೆ. ವಾರ್ಭಿಃ ಕಾರ್ಯಾ ವಾರ್ಕಾರ್ಯಾ. ತ್ರಿಚಕ್ರಾದಿಗಣದಲ್ಲಿ ಸೇರಿರುವುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

ಗೋತಮಾಸಃ—ಪ್ರಥಮಾಬಹುವಚನದಲ್ಲಿ **ಆಜ್ಜಸೇರಸುಕ್**—ಎಂಬುದರಿಂದ ಜಸಿಗೆ ಜಸುಕಾಗಮ.

ನುನುದ್ರೆ—ಣುದ ಪ್ರೇರಣೇ ಧಾತು. ಲಿಟ್‌ಪ್ರಥಮಪುರುಷಬಹುವಚನದಲ್ಲಿ **ಲಿಟಸ್ತ್ರುಞೋರೇಶಿರೇಚ್** ಎಂಬುದರಿಂದ ಇರೇಚ್ ಆದೇಶ. ಅದಕ್ಕೆ ಛಂದಸ್ಸಿನಲ್ಲಿ **ಇರಯೋರೇ** (ಪಾ. ಸೂ. ೬-೪-೭೬) ಎಂಬುದರಿಂದ ರೇ

ಆದೇಶ ಧಾತುವಿನ ಣಕಾರಕ್ಕೆ **ನೋಣಃ**—ಎಂಬುದರಿಂದ ನತ್ವ. ಲಿನ್ನಿಮಿತ್ತವಾಗಿ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಅಸಂಯೋಗಾಲ್ಲಿಟ್ ಕಿತ್**—ಎಂಬುದರಿಂದ ಕಿತ್ವವಿರುವುದರಿಂದ ಪ್ರತ್ಯಯನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. ಅತಿಜಂತದ ಸರವಪ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಉತ್ಸಧಿಮ್—ಡುಧಾಞ್ ಧಾರಣಸ್ಪೋಷಣಯೋಃ ಧಾತು ಇದಕ್ಕೆ **ಕರ್ಮಣ್ಯಧಿಕರಣೇ ಚ** (ಪಾ. ಸೂ. ೩-೩-೯೩) ಎಂಬುದರಿಂದ ಅಧಿಕರಣಾರ್ಥದಲ್ಲಿ ಕಿ ಪ್ರತ್ಯಯ. ಉತ್ಸಃ ಅಸ್ಮಿನ್ ಧೀಯತೇ ಇತಿ ಉತ್ಸಧಿ ಪ್ರತ್ಯಯ ಕಿತ್ತಾದುದರಿಂದ **ಆತೋ ಲೋಪ ಇಟಿ ಚ** (ಪಾ.ಸೂ. ೬-೪-೬೪) ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. ನ್ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಪಿಬಧ್ಯೈ—ಪಾ ಪಾನೇ ಧಾತು. ತುಮುನರ್ಥ ತೋರುವಾಗ **ತುಮರ್ಥೇ ಸೇಸೇನಸೇ**—(ಪಾ. ಸೂ. ೩-೪-೯) ಎಂಬುದರಿಂದ ಕಧ್ಯೈನ್ ಪ್ರತ್ಯಯ. ಪ್ರತ್ಯಯ ಶಿತ್ತಾದುದರಿಂದ **ಪಾಘ್ರಾಧ್ಮಾಸ್ಥಾ**—(ಪಾ. ಸೂ ೭-೩-೭೮) ಎಂಬುದರಿಂದ ಧಾತುವಿಗೆ ಪಿಬ ಎಂಬ ಆದೇಶ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತವಾಗುತ್ತದೆ. ॥ ೪ ॥

ಸಂಹಿತಾಪಾಠಃ

ಏತತ್ತ್ಯನ್ನ ಯೋಜನಮಚೇತಿ ಸಸ್ಯರ್ಹ ಯನ್ಮರುತ್ತೋ
ಗೋತಮವೋ ವಃ ।
ಪಶ್ಯನ್ಹಿರಣ್ಯಚಕ್ರಾನಯೋದಂಷ್ಟ್ರಾನ್ವಿಧಾವತೋ ನರಾ-
ಹೂನ್ ॥ ೫ ॥

ಪದಪಾಠಃ

ಏತತ್ । ತ್ಯತ್ । ನ । ಯೋಜನಂ । ಅಚೇತಿ । ಸಸ್ಯಃ । ಪ । ಯತ್ । ಮರುತಃ ।
ಗೋತಮಃ । ವಃ ।
ಪಶ್ಯನ್ । ಹಿರಣ್ಯ ಚಕ್ರಾನ್ । ಅಯಃ ದಂಷ್ಟ್ರಾನ್ । ವಿ ಧಾವತಃ । ನರಾ-
ಹೂನ್ ॥ ೫ ॥

॥ ಸಾಯಣಭಾಷ್ಯಂ ॥

ಹೇ ಮರುತ ಏತದ್ಯೋಜನಂ । ಯುಜ್ಯತೇ೨ನೇನ ದೇವತೇತಿ ಯೋಜನಮೇತತ್ಸೂಕ್ತಸಾಧ್ಯಂ ಸ್ತೋತ್ರಂ । ತ್ಯನ್ನ ತ್ಯತ್ ಪ್ರಸಿದ್ಧಮನ್ಯದುತ್ಕೃಷ್ಟಂ ಸ್ತೋತ್ರಮಿವಾಚೇತಿ । ಸರ್ವೇಜ್ಞಾಯತೇ। ವೋ ಯುಷ್ಮದರ್ಥಂ ಯತ್ ಯದೇತತ್ಸೂಕ್ತರೂಪಂ ಸ್ತೋತ್ರಂ ಗೋತಮ ಋಷಿಃ ಸಸ್ಮರ್ಹ ಉಚ್ಚಾರಿತವಾನ್ ಖಲು । ಕಿಂ ಕುರ್ವನ್ । ಹಿರಣ್ಯಚಕ್ರಾನ್ ಹಿರಣ್ಮಯಚಕ್ರರಥಾರೂಢಾನ್ ಹಿತರಮಣೀಯಕರ್ಮಯುಕ್ತಾನ್ಸಾಯೋದಂಷ್ಟ್ರಾನ್ । ದಶತೀತಿ ದಂಷ್ಟ್ರಾ । ಚಕ್ರಧಾರಾ । ಅಯೋಮಯಾಭಿಶ್ಚಕ್ರಧಾರಾಭಿರ್ಯುಕ್ತಾನ್ । ಯದ್ವಾ । ದಂಶನಸಾಧನಾ ಋಷ್ಟಯೋ ದಂಷ್ಟ್ರಾಃ । ಅಯೋಮಯಾ ಋಷ್ಟಯೋ ಯೇಷಾಂ । ತಾನ್ಸಿಧಾವತೋ ನಿವಿಧಮಿತಸ್ತತಃ ಪ್ರವರ್ತಮಾನಾನ್ಸರಾಹೂನ್ ವರಸ್ಯೋತ್ಕೃಷ್ಟಸ್ಯ ಶತ್ರೋರ್ಹಂತೃನ್ । ಯದ್ವಾ । ಉತ್ಕೃಷ್ಟಸ್ಯ ವೃಷ್ಟ್ಯುದಕಸ್ಯಾಹರ್ತೄನ್ । ಅಥವಾ ಉತ್ಕೃಷ್ಟಾನಾಂ ದೇವತಾನಾಮಾಹ್ವಾತೄನ್ ವರಸ್ಯ ಹವಿಷೋ ಭಕ್ಷಯಿತೄನ್ವಾ। ಏವಂಭೂತಾನ್ಮರುತಃ ಪಶ್ಯನ್ ಸಮ್ಯಗ್ಜ್ಞಾನೇನ ಗೋತಮೋ ಯತ್ಸ್ತೋತ್ರಂ ಕೃತವಾನ್ ತದೇತತ್ಸರ್ವೋತ್ಕೃಷ್ಟಂ ಸದಸ್ಮಾಭಿಃ ಸರ್ವೈರುಪಲಭ್ಯತ ಇತ್ಯರ್ಥಃ । ಅತ್ರ ನಿರುಕ್ತಂ । ಅಥಾಪ್ಯೇತೇ ಮಾಧ್ಯಮಕಾ ದೇವಗಣಾ ವರಾಹವ ಉಚ್ಯಂತೇ ಪಶ್ಯನ್ಹಿರಣ್ಯಚಕ್ರಾನ್ । ನಿ. ೫-೪ । ಇತಿ ॥ ಅಚೇತಿ । ಚಿತೀ ಸಂಜ್ಞಾನೇ । ಛಾಂದಸೋ ವರ್ತಮಾನೇ ಕರ್ಮಣಿ ಲುಙ್ । ಸಸ್ಮರ್ । ಸ್ಮೃ ಶಬ್ದೋಪತಾಪಯೋಃ । ಲಙಃ ತಿಪಿ ಬಹುಲಂ ಛಂದಸೀತಿ ಶಪಃ ಶ್ಲುಃ । ಗುಣೇ ಹಲ್ಙ್ಯಾಬ್ಭ್ಯ ಇತಿ ತಲೋಪಃ । ಧಾತುಸ್ವರೇಣಾಂತೋದಾತ್ತತ್ವಂ । ವರಾಹೂನ್ । ವರಶಬ್ದೋಪಪದಾದಾಙ್ಪೂರ್ವಾದ್ಧ್ವಂತೇರ್ವಾ ಹರತೇರ್ವಾ ಹ್ವಯತೇರ್ವಾ ಜುಹೋತೇರದನಾರ್ಥಾದ್ವಾ । ಹು ಇತ್ಯೇತಸ್ಯ ನಿಷ್ಪತ್ತಿರಿತಿ ಸ್ಕಂದಸ್ವಾಮಿ । ಅಸ್ಯ ಪೃಷೋದರಾದಿತ್ವಾದಭಿಮತಸಿದ್ಧಿಃ ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ, । **ಹಿರಣ್ಯಚಕ್ರಾನ್**—ಚಿನ್ನದ ಚಕ್ರವುಳ್ಳ ರಥದಲ್ಲಿ ಕುಳಿತಿರುವವರೂ ಒಳ್ಳೆಯ ಹಿತವಾಗಿಯೂ ರಮಣೀಯವಾಗಿಯೂ ಇರುವ ಕರ್ಮಯುಕ್ತರಾಗಿರುವವರೂ । **ಅಯೋದಂಷ್ಟ್ರಾನ್**—ಉಕ್ಕಿನ ಆಯುಧಗಳನ್ನು ಹಿಡಿದಿರುವವರೂ, । **ನಿಧಾವತಃ**—ಎಲ್ಲಾ ಕಡೆಯಲ್ಲಿಯೂ ರಭಸದಿಂದ ಓಡಾಡುವವರೂ । **ವರಾಹೂನ್**—ಪ್ರಬಲರಾದ ಶತ್ರುನಾಶಕರಾದವರೂ, ಅಥವಾ ಶ್ರೇಷ್ಠವಾದ ಮಳೆಯ ನೀರನ್ನು ತರುವವರೂ, ಅಥವಾ ಶ್ರೇಷ್ಠರಾದ ದೇವತೆಗಳನ್ನು (ಯಜ್ಞಕ್ಕೆ) ಕರೆಯುವವರೂ ಅಥವಾ ಶ್ರೇಷ್ಠವಾದ ಹವಿಸ್ಸಿನ ಭಕ್ಷಕರೂ ಆದ ಸೈನ್ಯವನ್ನು । **ಪಶ್ಯನ್**—ಚೆನ್ನಾಗಿ ಗಮನಿಸುತ್ತಾ । **ಮಃ**—ನಮಗಾಗಿ । **ಯತ್**—ಯಾವ ಸೂಕ್ತರೂಪವಾದ ಸ್ತೋತ್ರವನ್ನು । **ಗೋತಮಃ**—ಗೋತಮಋಷಿಯು । **ಸಸ್ಮರ್ಹ**—ಪಠಿಸಿದನೋ, । **ಏತತ್ ಯೋಜನಂ**—ಈ ಸೂಕ್ತರೂಪವಾದ ಸ್ತೋತ್ರವೂ ಸಹ । **ತ್ಯನ್ನ**—ಪ್ರಸಿದ್ಧವಾದ ಆ ಸ್ತೋತ್ರವನ್ನುವಾದರೂ ಎಂದು । **ಅಚೇತಿ**. (ಎಲ್ಲರಿಂದಲೂ) ತಿಳಿಯಲ್ಪಟ್ಟಿದೆ. ।

ಭಾವಾರ್ಥ

ಎಲೈ ಮರುತ್ತುಗಳೇ, ಚಿನ್ನದ ಚಕ್ರವುಳ್ಳ ರಥದಲ್ಲಿ ಕುಳಿತಿರುವವರೂ, ಉಕ್ಕಿನ ಆಯುಧಗಳನ್ನು ಹಿಡಿದಿರುವವರೂ, ಎಲ್ಲಾ ಕಡೆಯಲ್ಲಿಯೂ ರಭಸದಿಂದ ಓಡಾಡುವವರೂ, ಮತ್ತು ಪ್ರಬಲರಾದ ಶತ್ರುಗಳನ್ನು ನಾಶಮಾಡು

ವನರೂ ಆದ ನಿಮ್ಮನ್ನು ಚೆನ್ನಾಗಿ ಗಮನಿಸುತ್ತಾ ಗೋತಮಋಷಿಯು ಯಾವ ಸೂಕ್ತರೂಪವಾದ ನಿಮ್ಮನ್ನು ದ್ದೇಶಿಸಿ ಸ್ತೋತ್ರವನ್ನು ಪರಿಸಿದನೋ, ಈ ಸೂಕ್ತವೂ ಸಹ ಆ ಪ್ರಸಿದ್ಧವಾದ ಸ್ತೋತ್ರಸಮವಾದುದೇ ಎಂದು ಎಲ್ಲರಿಗೂ ಚೆನ್ನಾಗಿ ಅರಿಕೆಯಾಗಿದೆ.

English Translation

Maruts, this hyman is known to be the same as that which Gotama recited, in your praise, when he beheld you seated in your chariots with golden wheels, armed with iron weapons, hurying hither and thither and destroying your mightiest foes.

॥ ವಿಶೇಷವಿಷಯಗಳು ॥

ಏತತ್ ತ್ಯತ್ ನ—ಇದು ಪ್ರಸಿದ್ಧವೂ ಉತ್ಕೃಷ್ಟವೂ ಆದ ಸ್ತೋತ್ರದಂತಿರುವುದು

ಯೋಜನಂ—**ಏತತ್ಸೂಕ್ತಸಾಧ್ಯಂ ಸ್ತೋತ್ರಂ** । ಈ ಸೂಕ್ತದಿಂದ ಮಾಡಲ್ಪಡುವ ಸ್ತೋತ್ರವು. ಸ್ಕಂದ ಸ್ವಾಮಿಯು ಯೋಜನಶಬ್ದಕ್ಕೆ—**ಯುಜ್ಯಂತೇ ಪ್ರಾಣಿನಿಯೋಗಾದಿನಾ ಅನೇನ ಶತ್ರವ ಇತಿ ಯೋಜನಂ ಸೇನಾಲಕ್ಷಣಂ ಬಲಮಿಹಾಭಿಪ್ರೇತಂ** । ಇದರಲ್ಲಿ ಶತ್ರುಗಳ ಸಂಹಾರವಾಗುವುದರಿಂದ ಯೋಜನಂ ಎಂದರೆ ಸೇನಾರೂಪವಾದ ಬಲವು ಎಂದು ವಿವರಿಸಿರುವರು.

ಅಚೇತಿ—**ಚಿತೀ ಸಂಜ್ಞಾನೇ** । **ಸರ್ವೈರ್ಜ್ಞಾಯತೇ** । ಸರ್ವರಿಂದಲೂ ತಿಳಿಯಲ್ಪಡುವುದು.

ಸಸ್ವಃ—**ಸ್ವೃ ಶಬ್ದೋಪತಾಪಯೋಃ** । ಉತ್ಪರಿಸಿದನು.

ಹಿರಣ್ಯಚಕ್ರಾನ್—ಸುವರ್ಣನುಯವಾದ ರಥದಲ್ಲಿ ಕುಳಿತಿರುವ ಅಥವಾ ಹಿತವಾದ ಮತ್ತು ರಮಣೀಯವಾದ ಕಾರ್ಯಗಳನ್ನು ಮಾಡುವ.

ಆಯೋದಂಷ್ಟ್ರಾನ್—**ದಶತೀತಿ ದಂಷ್ಟ್ರಾ ಚಕ್ರಧಾರಾ** । **ಅಯೋಮಯಾಭಿಶ್ಚಕ್ರಧಾರಾಭಿರ್ಯುಕ್ತಾನ್** । **ಯದ್ವಾ ದಂಶನಸಾಧನಾ ಋಷ್ಟಯೋ ದಂಷ್ಟ್ರಾಃ ಅಯೋಮಯಾ ಋಷ್ಟಯೋ ಯೇಷಾಂ** । ಕಬ್ಬಿಣದಿಂದ ಮಾಡಿದ ಚಕ್ರಗಳಿಂದ ಯುಕ್ತವಾದ ಅಥವಾ ಕಬ್ಬಿಣದಿಂದ ಮಾಡಲ್ಪಟ್ಟ ಆಯುಧಗಳಿಂದ ಕೂಡಿರುವ.

ವಿಧಾವತಃ—ವಿವಿಧಮಿತಸ್ತತಃ **ಪ್ರವರ್ತಮಾನಾನ್** । ಇಲ್ಲಿಂದಲ್ಲಿಗೆ ಬಹುಪ್ರಕಾರವಾಗಿ ಓಡಾಡುತ್ತಿರುವ.

ವರಾಹೂನ್—**ವರಸ್ಯೋತ್ಕೃಷ್ಟಸ್ಯ ಶತ್ರೋರ್ಹಂತೄನ್** । ಪ್ರಬಲರಾದ ಶತ್ರುಗಳನ್ನು ನಾಶ ಮಾಡುವ. ಅಥವಾ **ಉತ್ಕೃಷ್ಟಸ್ಯ ವೃಷ್ಟೇ ರುದಕಸ್ಯಾಹರ್ತೄನ್** । ಉತ್ತಮವಾದ ವೃಷ್ಟಿರೂಪದ ಜಲವನ್ನು ತಂದೊದಗಿಸುವ. ಅಥವಾ **ಉತ್ಕೃಷ್ಟಾನಾಂ ದೇವತಾನಾಮಾಹ್ವಾತೄನ್**—ಶ್ರೇಷ್ಠರಾದ ದೇವತೆಗಳನ್ನು ಯಜ್ಞ ಭೂಮಿಗೆ ಕರೆತರುವ. ಅಥವಾ **ವರಸ್ಯ ಹವಿಷೋ ಭಕ್ಷಯಿತೄನ್**—ಉತ್ತಮವಾದ ಹವಿಸ್ಸನ್ನು ಭಕ್ಷಿಸುವ ಮರುದ್ದೇವತೆಗಳನ್ನು ಎಂದರ್ಥವು. ಯಾಸ್ಕಮಹರ್ಷಿಗಳು—**ಅಥಾಸ್ಯೇತೇ ಮಾಧ್ಯಮಕಾ ದೇವಗಣಾ ವರಾಹವ**

ಉಚ್ಚೈಂತೇ ಪಶ್ಯನ್ ಹಿರಣ್ಯಚಕ್ರಾನ್ (ನಿ.೫-೪) ಸ್ವರ್ಗಾಂತರಿಕ್ಷಭೂಮಿಯೆಂಬ ಮೂರು ಪ್ರದೇಶಗಳಲ್ಲಿ ಮಧ್ಯಮ ನಾದ •ಅಂತರಿಕ್ಷಸ್ಥಾನೀಯರಾದ ದೇವತೆಗಳಿಗೆ ವರಾಹವಃ ಎಂದು ಹೇಳುವರು. ಮರುದ್ದೇವತೆಗಳು ಈ ಅಂತರಿಕ್ಷ ದೇವತೆಗಳ ಗುಂಪಿಗೆ ಸೇರಿದವರಾದುದರಿಂದ ಇವರನ್ನು ವರಾಹವಃ ಎಂಬ ಹೆಸರಿನಿಂದ ವ್ಯವಹರಿಸುವರು ಎಂದು ವರಾಹವಃ ಎಂಬ ಶಬ್ದಕ್ಕೆ ಮರುದ್ದೇವತೆಗಳೆಂಬ ಅರ್ಥವನ್ನು ಸ್ಪಷ್ಟಪಡಿಸಿರುವರು.

ವ್ಯಾಕರಣಸ್ಯ ಕ್ರಿಯಾ

ಆಚೇತಿ—ಚಿತೀ ಸಂಜ್ಞಾನೇ ಧಾತು. ಸರ್ವನಾಮಾರ್ಥತೋದ್ದೇಶವಾಗ ಕರ್ಮಣಿಯಲ್ಲಿ **ಥಂದಸಿಲುಙ್ ಲುಙ್‌ಲಿಟಃ**—ಎಂಬುದರಿಂದ ಲುಙ್. ಪ್ರಥಮಪುರುಷ ಏಕವಚನದಲ್ಲಿ ತ ಪ್ರತ್ಯಯ. **ಚಿಣ್ ಭಾವಕರ್ಮಣೋಃ** (ಪಾ. ಸೂ. ೩-೧-೬೬) ಎಂಬುದರಿಂದ ಕರ್ಮಣಿಯಲ್ಲಿ ಚ್ಲಿಗೆ ಚಿಣ್. **ಪುಗಂತಲಘೂಪಧಸ್ಯ ಚ**—ಎಂಬುದರಿಂದ ಧಾತುವಿನ ಲಘೂಪಧೆಗೆ ಚಿಣ್ ನಿಮಿತ್ತವಾಗಿ ಗುಣ. **ಚಿಣೋಲುಕ್** (ಪಾ. ಸೂ. ೬-೪-೧೦೪) ಎಂಬುದರಿಂದ ಚಿಣೆನಪರದಲ್ಲಿರುವ ತಶಬ್ದಕ್ಕೆ ಲುಕ್. ಅಂಗಕ್ಕೆ ಲುಙ್ ನಿಮಿತ್ತವಾಗಿ ಅಡಾಗಮ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸಸ್ರುಃ—ಸ್ರೃ ಶಬ್ದೋಪತಾಪಯೋಃ ಧಾತು. ಲಙ್ ಪ್ರಥಮಪುರುಷಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ**—ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಬಹುಲಂ ಛಂದಸಿ**—ಎಂಬುದರಿಂದ ಶಬ್ವಿಕರಣಕ್ಕೆ ಶ್ಲು ಆದೇಶ. **ಶ್ಲೌ**—ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಉರತ್**—ಎಂಬುದರಿಂದ ಅತ್ವವು ರಪರವಾಗಿ ಬಂದಾಗ ಪುನಃ ಹಲಾದಿಶೇಷ. ಸಸ್ರೃ+ತ್ ಎಂದಿರುವಾಗ ತಿಪ್ ನಿಮಿತ್ತವಾಗಿ ಧಾತುವಿನ ಋಕಾರಕ್ಕೆ ಗುಣ ರಪರವಾಗಿ ಬರುತ್ತದೆ. **ಹಲ್‌ಙ್ಯಾಭ್ಯೋ**—ಸೂತ್ರದಿಂದ ತಿಪಿಗೆ ಲೋಪ. ಅಂತ್ಯರೇಫಕ್ಕೆ ವಿಸರ್ಗ. **ಅತಿಜಃ**—ಎಂದು ಪರ್ಯುದಾಸಮಾಡಿರುವುದರಿಂದ ಇಲ್ಲಿ ಹಿಂದೆ ತಿಜಂತವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರದಿಂದ ಅಂತೋದಾತ್ತವಾಗುತ್ತದೆ.

ಪಶ್ಯನ್—ದೃಶಿರ್ ಪ್ರೇಕ್ಷಣೇ ಧಾತು. ಲಡರ್ಥದಲ್ಲಿ ಶತೃಪ್ರತ್ಯಯ. ತಿತ್ವಾತ್ಸ್ವರದಿಂದ ಇದು ಪರ ಸ್ವರಾದಾಗ **ಪಾಘ್ರಾಧ್ಮಾಸ್ಥಾ**—ಎಂಬುದರಿಂದ •ಪಶ್ಯ ಆದೇಶ. ಲಸಾರ್ವಧಾತುಕವು ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ.

ವಿ ಧಾವತಃ—ಧಾವು ಗತಿಶುದ್ಧ್ಯೋಃ ಧಾತು. ಶತೃಪ್ರತ್ಯಯ. ಹಿಂದಿನಂತೆಯೇ ಧಾತುಸ್ವರ ಉಳಿಯುತ್ತದೆ. ದ್ವಿತೀಯಾಬಹುವಚನಾಂತರೂಪ.

ವರಾಹೂನ್—ಹನ ಹಿಂಸಾಗತ್ಯೋಃ ಅಥವಾ ಹೃಞ್ ಹರಣೇ ಧಾತು ಆಬ್ ಉಪಸರ್ಗಪೂರ್ವವಾಗ ಇದಕ್ಕೆ ವರಶಬ್ದ ಉಪಪದವಾಗಿರುವಾಗ ಹು ಎಂಬ ರೂಪಸಿದ್ಧಿಯಾಗುತ್ತದೆ. ಅಥವಾ ಹ್ವೇಞ್ ಸ್ವರ್ಧಾಯಾಂ, ಅಥವಾ ಹು ದಾನಾದನಯೋಃ ಈ ಧಾತುಗಳಿಂದ ಹು ಎಂಬ ರೂಪಸಿದ್ಧಿಯಾಗುತ್ತದೆ. ಹುಧಾತುವಿನಿಂದ ಎಂದು ಹೇಳುವುದಾದರೆ ಆಗ ಅದನಾರ್ಥವನ್ನು ಮಾತ್ರ ಹೇಳಬೇಕು. ಇಷ್ಟು ಧಾತುಗಳಿಂದಲೂ ಸ್ಪಷೋದರಾದಿತ್ವ ಕಲ್ಪನೆ ಯಿಂದಲೇ ರೂಪಸಿದ್ಧಿಯಾಗುತ್ತದೆ. ದ್ವಿತೀಯಾಬಹುವಚನಾಂತರೂಪ. ॥ ೫ ॥

॥ ಸಂಹಿತಾಪಾಠಃ ॥

ಏಷಾ ಸ್ಯಾ ವೋ ಮರುತೋಽನುಭರ್ತ್ರೀ ಪ್ರತಿ ಷ್ಟೋಭತಿ
ವಾಷತೋ ನ ವಾಣೀ ।
ಅಸ್ತೋಭಯದ್ವೃಥಾಸಾಮನು ಸ್ವಧಾಂ ಗಭಸ್ತ್ಯೋಃ ॥ ೬ ॥

॥ ಪದಪಾಠಃ ॥

ಏಷಾ । ಸ್ಯಾ । ವಃ । ಮರುತಃ । ಅನು । ಅಭರ್ತ್ರೀ । ಪ್ರತಿ । ಸ್ತೋಭತಿ । ವಾಷತಃ ।
ನ । ವಾಣೀ ।
ಅಸ್ತೋಭಯತ್ । ವೃಥಾ । ಆಸಾಂ । ಅನು । ಸ್ವಧಾಂ । ಗಭಸ್ತ್ಯೋಃ ॥ ೬ ॥

ಸಾಯಣಭಾಷ್ಯಂ

ಹೇ ಮರುತಃ ಸ್ಯಾ ಸೈಷಾಸ್ಮದೀಯಾ ಸ್ತುತಿರ್ವೋ ಯುಷ್ಮಾಕಮನುಭರ್ತ್ರೀ ಯುಷ್ಮಾನನುಹರಂತೀ ಯುಷ್ಮದ್ಗುಣಸದೃಶೀ ಪ್ರತಿ ಷ್ಟೋಭತಿ । ಪ್ರತ್ಯೇಕಂ ಸ್ತೌತಿ । ಸ್ತೋಭತಿಃ ಸ್ತುತಿಕರ್ಮಾ । ತಥಾ ವಾಷತೋ ನ ವಾಣೀ । ನಶಬ್ದಃ ಸಂಪ್ರತ್ಯರ್ಥೇ । ತದುಕ್ತಂ ಯಾಸ್ಕೇನ । ಅಸ್ತ್ಯುಪಮಾರ್ಥಸ್ಯ ಸಂಪ್ರತ್ಯರ್ಥೇ ಪ್ರಯೋಗಃ । ನಿ. ೬-೩೧ । ಇತಿ । ಇದಾನೀಮೃತ್ವಿಕ್ಸಂಬಂಧಿನೀ ವಾಗಪಿ ವೃಥಾನಾಯಾಸೇನಾಸಾಮಾಘರ್ಗ್ಯಿರಸ್ತೋಭಯತ್ । ಅಸ್ತೌತ್ । ಇದಾನೀಮಿಶ್ಯುಕ್ತೇ ಕದೇತ್ಯಾಹ । ಗಭಸ್ತ್ಯೋರಸ್ಮದೀಯಯೋರ್ಬಾಹ್ವೋಃ ಸ್ವಧಾಂ । ಅನ್ನನಾಮೈತತ್ । ಯದಾ ಬಹುವಿಧಮನ್ನಂ ಮರುತಃ ಸ್ಥಾಪಯಂತಿ । ತಾಮನುಲಕ್ಷ್ಯೇತ್ಯರ್ಥಃ ॥ ಅನುಭರ್ತ್ರೀ । ಹೃಞ್ ಹರಣೇ । ತೃಚ್ । ಋನ್ನೇಭ್ಯ ಇತಿ ಙೀಪ್ । ಉದಾತ್ತಯಣೋ ಹಲ್ಪೂರ್ವಾದಿತಿ ನದ್ಯಾ ಉದಾತ್ತತ್ವಂ ॥

॥ ಪ್ರತಿಪದಾರ್ಥಃ ॥

ಮರುತಃ—ಎಲ್ಲೆ ಮರುತ್ತುಗಳೇ, । ಸ್ಯಾ ಏಷಾ— ಆ ನಮ್ಮ ಸ್ತುತಿಯು । ವಃ—ನಿಮ್ಮನ್ನು । ಅನುಭರ್ತ್ರೀ—ನುಹಿಮೆಗನುಗುಣವಾಗಿ । ಪ್ರತಿ ಷ್ಟೋಭತಿ—ಹೊಗಳುತ್ತದೆ. । ಗಭಸ್ತ್ಯೋಃ—ನಮ್ಮ ಕೈಗಳಲ್ಲಿ । ಸ್ವಧಾಂ—(ನಾನಾವಿಧವಾದ) ಅನ್ನವನ್ನು (ಮರುತ್ತುಗಳು ಅನುಗ್ರಹಿಸುವುದರಿಂದ) । ನ—ಈಗ । ವಾಷತಃ-ವಾಣೀ—ಋತ್ವಿಕ್ಕಿನಿಂದ ಪಠಿತವಾದ ವಾಕ್ಯು. । ವೃಥಾ—ಶ್ರಮವಿಲ್ಲದೇ । ಆಸಾಂ—ಆ ನುಕ್ತುಗಳೊಂದಿಗೆ । ಅಸ್ತೋಭಯತ್—ಸ್ತೋತ್ರಮಾಡಿತು. ।

ಭಾವಾರ್ಥ

ಎಲೈ ಮರುತ್ತುಗಳೇ, ನಮ್ಮ ಸ್ತುತಿಯು ನಿಮ್ಮ ಮಹಿಮೆಗನುಗುಣವಾಗಿ ವ್ಯಾಪಿಸಿ ನಿಮ್ಮಲ್ಲಿ ಒಬ್ಬೊಬ್ಬರನ್ನೂ ಪ್ರತ್ಯೇಕವಾಗಿ ಹೊಗಳುತ್ತದೆ. ಮರುತ್ತುಗಳು ನಮ್ಮೆರಡುಕೈಗಳಲ್ಲೂ ನಾನಾವಿಧವಾದ ಅನ್ನವನ್ನು ಅನುಗ್ರಹಿಸುವುದರಿಂದ ಈಗ ಋತ್ವಿಕ್ಕಿನಿಂದ ಪಠಿತವಾದ ವಾಕ್ಯು ಆ ಋಕ್ಕುಗಳೊಂದಿಗೆ ಶ್ರಮವಿಲ್ಲದೇ ಸ್ತೋತ್ರವಾಯಿತು.

English Translation

O Maruts, this is that praise which suited to your merits glorifies every one of you. The speech of the priest has now glorified you, without difficulty, with sacred verses since you have placed food in our hands.

ವ್ಯಾಕರಣವಿಷಯಗಳು

ಸ್ಯಾ—**ಸೈಷಾ** । ಆ, ಅದೇ.

ಅನುಭರ್ತ್ರೀ—**ಹೃಞ್ ಹರಣೇ** । **ಯುಷ್ಮಾನನುಹರಂತೀ, ಯುಷ್ಮದ್ಗಣಸದೃಶೀ** । ನಿಮ್ಮನ್ನು ಅನುಸರಿಸುತ್ತಾ ಎಂದರೆ ನಿಮ್ಮ ಮಹಿಮೆಗೆ ಅನುಗುಣವಾಗಿ, ನಿಮ್ಮ ಮಹಿಮೆಗೆ ತಕ್ಕಂತೆ.

ಸ್ತೋಭತಿ (ಸ್ತೋಭತಿ)— ಅರ್ಚತಿ, ಗಾಯತಿ ಮೊದಲಾದ ನಲವತ್ತನಾಲ್ಕು ಅರ್ಚತಿಕರ್ಮಗಳ ಮಧ್ಯದಲ್ಲಿ ಸ್ತೋಭತಿಶಬ್ದವು ಪಠಿತವಾಗಿರುವುದರಿಂದ ಸ್ತೋಭತಿ ಎಂದರೆ ಸ್ತುತಿಸುವುದು ಎಂದರ್ಥವು. (ನಿ. ೩-೧೯)

ವಾಘತಃ—**ಭಾರತಾಃ ಕೇರವಃ** ಮೊದಲಾದ ಎಂಟು ಋತ್ವಿಜ್ಞಾಮಗಳ ಮಧ್ಯದಲ್ಲಿ ವಾಘತಃ ಎಂಬ ಶಬ್ದವು ಪಠಿತವಾಗಿರುವುದರಿಂದ ವಾಘತಃ ಎಂದರೆ ಋತ್ವಿಕ್ಕುಗಳು. ಇಲ್ಲಿ ವಾಘತಃ ಪಾಣೀ ಎಂದರೆ ಋತ್ವಿಕ್ಕುಗಳು ಪಠಿಸುವ ಸ್ತೋತ್ರರೂಪವಾದ ವಾಕ್ಯವು ಎಂದರ್ಥ.

ನ—ಈ ಶಬ್ದಕ್ಕೆ ಯಾಸ್ಕರು—**ಅಸ್ತ್ಯುಪಮಾರ್ಥಸ್ಯ ಸಂಪ್ರತ್ಯರ್ಥೇ ಪ್ರಯೋಗಃ** (ನಿ. ೭-೩೧) ನಶಬ್ದಕ್ಕೆ ಉಪಮಾರ್ಥವೂ ಸಂಪ್ರತ್ಯರ್ಥವೂ (ಈಗ ಎಂಬ) ಇರುವುದೆಂದೂ ಹೇಳಿರುವ ಪ್ರಕಾರ ಭಾಷ್ಯಕಾರರು ಇಲ್ಲಿ ಸಂಪ್ರತ್ಯರ್ಥವನ್ನೇ ಹೇಳಿರುವರು ಸ್ಕಂದಸ್ವಾಮಿಯು ಉಪಮಾರ್ಥವನ್ನು ಹೇಳಿರುವರು

ವೃಥಾ—ಅನಾಯಾಸಕಾಗಿ, ಶ್ರಮವಿಲ್ಲದೆ.

ಸ್ಪಧಾಂ—ಅಂಧಃ ನಾಜಃ ಮೊದಲಾದ ಇಪ್ಪತ್ತೆಂಟು ಅನ್ನನಾಮಗಳ ಮಧ್ಯದಲ್ಲಿ ಸ್ಪಧಾಶಬ್ದವು ಪಠಿತವಾಗಿರುವುದರಿಂದ ಸ್ಪಧಾಂ ಎಂದರೆ ಅನ್ನವನ್ನು ಅಥವಾ ಹವಿಸ್ಸಿನರೂಪದಲ್ಲಿರುವ ಅನ್ನವನ್ನು ಎಂದರ್ಥವು.

ಗಭಸ್ತ್ಯೋಃ—ಆಯತೀ, ಜ್ಯೇವಾನಾ ಮೊದಲಾದ ಬಾಹುನಾಮಗಳ ಮಧ್ಯದಲ್ಲಿ ಗಭಸ್ತಿಶಬ್ದವು ಪಠಿತವಾಗಿರುವುದರಿಂದ ಗಭಸ್ತ್ಯೋಃ ಎಂದರೆ ಬಾಹುಗಳಲ್ಲಿ ಅಥವಾ ಕೈಗಳಲ್ಲಿ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಸ್ಯಾ—ತ್ಯದ್ ಶಬ್ದ. ಇವಕ್ಕೆ ಪ್ರಥಮಾ ಸುಪರವಾದಾಗ **ತ್ಯದಾದೀನಾಮಃ**—ಎಂಬುದರಿಂದ ಅತ್ವ. ಸ್ತ್ರೀತ್ವದಲ್ಲಿ **ಆಜಾದ್ಯತಷ್ಟಾಪ್**—ಎಂಬುದರಿಂದ ಅದಂತವಾದುದರಿಂದ ಟಾಪ್. ತ್ಯಾ ಎಂದಿರುವಾಗ **ತದೋ ಸಃ ಸಾವನಂತ್ಯಯೋಃ** (ಪಾ. ಸೂ. ೭-೨-೧೦೬) ಎಂಬುದರಿಂದ ತಕಾರಕ್ಕೆ ಸಕಾರಾದೇಶ. **ಹಲ್ಙ್ಯಾಭ್ಯೋ**—ಸೂತ್ರದಿಂದ ಸುಲೋಪ. ಸ್ಯಾ ಎಂದು ರೂಪವಾಗುತ್ತದೆ.

ಅನುಭರ್ತ್ರೀ- ಭೃಞ್ ಭರಣೇ ಧಾತು. ತೃಚ್‌ಪ್ರತ್ಯಯ. ಪ್ರತ್ಯಯನಿಮಿತ್ತವಾಗಿ ಧಾತುವಿಗೆ ಗುಣ. ಭರ್ತೃಶಬ್ದವಾಗುತ್ತದೆ. ಸ್ತ್ರೀತ್ವ ವಿವಕ್ಷಾಮಾಡಿದಾಗ **ಋನ್ನೇಭ್ಯೋ ಙೀಪ್** (ಪಾ. ಸೂ. ೪-೧-೫) ಎಂಬುದರಿಂದ ನಾಂತವಾದುದರಿಂದ ಙೀಪ್. ಯಣಾದೇಶ. ತೃಜಂತವಾದುದು **ಚಿತಃ** ಎಂಬುದರಿಂದ ಅಂತೋದಾತ್ತವಾದುದರಿಂದ ಉದಾತ್ತಸ್ವಾನದಲ್ಲಿ ಯಣ್ ಬಂದಿರುವುದರಿಂದ, **ಉದಾತ್ತಯಣೋ ಹಲ್‌ಪೂರ್ವಾತ್** (ಪಾ. ಸೂ. ೬-೧-೧೭೪) ಎಂಬುದರಿಂದ, ಯಣಿನ ಪೂರ್ವದಲ್ಲಿ ಹಲ್‌ವರ್ಣ (ತಕಾರ) ವಿರುವುದರಿಂದ ನದೀ ಸಂಜ್ಞೆಯುಳ್ಳ ಈಕಾರಕ್ಕೆ ಉದಾತ್ತಸ್ವರ ಬರುತ್ತದೆ.

ಸ್ತೋಭತಿ—ಷ್ಟುಭು ಸ್ತಂಭೇ ಧಾತು. ಇಲ್ಲಿ ಸ್ತೋತ್ರಾರ್ಧದಲ್ಲಿ ಪ್ರಯುಕ್ತವಾಗಿದೆ. ಲಟ್‌ಪ್ರಥಮ ಪುರುಷಏಕವಚನರೂಪ. ತಿಜಂತನಿಘಾತಸ್ವರ ಬರುತ್ತದೆ.

ಅಸ್ತೋಭಯೆತ್—ಸ್ವಾರ್ಥದಲ್ಲಿ ಣಿಚ್. ಣಿಜಂತದನಂತರ ಲಙ್‌ಪ್ರಥಮಪುರುಷಏಕವಚನರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತ ಬರುತ್ತದೆ. ॥ ೬ ॥

ಎಂಭತ್ತೊಂಭತ್ತನೆಯ ಸೂಕ್ತವು

ಆ ನೋ ಭದ್ರಾ ಇತಿ ದಶರ್ಚಂ ಪಂಚಮಂ ಸೂಕ್ತಂ । ಗೋತಮಸ್ಯಾರ್ಷಂ ವೈಶ್ವದೇವಂ ಆದಿತಃ ಪಂಚರ್ಚಃ ಸಪ್ತಮೀ ಚ ಜಗತ್ಯಃ ಷಷ್ಠೀ ಸ್ವಸ್ತಿನ ಇಂದ್ರೇತ್ಯೇಷಾ ವಿರಾಟ್‌ಸ್ಥಾನಾ । ನವಕ ವೈರಾಜಸ್ತ್ರೈಷ್ಟುಭಶ್ಚ । ಆನು೯ಶ । ಇತ್ಯುಕ್ತಲಕ್ಷಣಯೋಗಾತ್ । ಅಷ್ಟಮ್ಯಾದ್ಯಾಸ್ತಿಸ್ರಸ್ತ್ರಿಷ್ಟುಭಃ ತಥಾ ಚಾನುಕ್ರಾಂತಂ । ಆ ನೋ ದಶ ವೈಶ್ವದೇವಂ ತು ಪಂಚಾದ್ಯಾಃ ಸಪ್ತಮೀ ಚ ಜಗತ್ಯಃ ಷಷ್ಠೀ ವಿರಾಟ್‌ಸ್ಥಾನೇತಿ । ಆಗ್ನಿಷ್ಟೋಮೇ ವೈಶ್ವದೇವಶಸ್ತ್ರ ಉತ್ತಮಾವರ್ಜಮೇತತ್ಸೂಕ್ತಂ ವೈಶ್ವದೇವನಿಷ್ಕೇವಲ್ಯೇ । ಸಾ ತು ಪ್ರಕೃತೌ ವಿಕೃತೌ ಚ ವೈಶ್ವದೇವಶಸ್ತ್ರಸ್ಯ ಪರಿಧಾನೀಯಾ। ತಥಾ ಚ ಸೂತ್ರಿತಂ ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತ ಇತಿ ನವ ವೈಶ್ವದೇವಂ । ಆ. ೫-೧೪। ಇತಿ । ಅದಿತಿರ್ದ್ಯೌರ

ಅತಿರಂತರಿಕ್ಷಮಿತಿ ಪರಿದಧ್ಯಾತ್ಸರ್ವತ್ರ ವೈಶ್ವದೇವೇ । ಆ. ೫-೧೪ । ಇತಿ ಚ । ಬ್ರಾಹ್ಮಣಂ ಚ ಭವತಿ । ಕದೈವ ಪಂಚಜನೀಯಯೋ ಪರಿದಧ್ಯಾತ್ । ಐ. ಬ್ರಾ. ೩-೩೧ । ಇತಿ ॥ ಮಹಾವ್ರತೇ ನಿಷ್ಕೇವಲ್ಯ ಏತತ್ಸೂಕ್ತಂ । ತಥಾ ಚ ಪಂಚಮಾರಣ್ಯಕೇ ಸೂತ್ರ್ಯತೇ। ಆನೋಭದ್ರೀಯಂ ಚ ತಸ್ಯ ಸ್ಥಾನೇ । ಐ.ಬ್ರಾ. ೫-೩-೨ । ಇತಿ ॥

ಅನುವಾದವು—**ಆ ನೋ ಭದ್ರಾ** ಎಂಬ ಈ ಸೂಕ್ತವು ಹದಿನಾಲ್ಕನೆಯ ಅನುವಾಕದಲ್ಲಿ ಐದನೆಯಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಗೋತಮನು ಋಷಿಯು. ವಿಶ್ವೇದೇವತೆಗಳು ದೇವತೆಗಳು ಮೊದಲಿನ ಐದು ಋಕ್ಕುಗಳೂ, ಏಳನೆಯ ಋಕ್ಕೂ ಜಗತೀಛಂದಸ್ಸಿನವು. **ಸ್ವಸ್ತಿನ ಇಂದ್ರ** ಎಂಬ ಆರನೆಯ ಋಕ್ಕು ವಿರಾಟ್‌ಸ್ಥಾನಾ ಎಂಬ ಛಂದಸ್ಸಿನದು. ಎಂಟರಿಂದ ಹತ್ತನೆಯ ಋಕ್ಕಿನವರೆಗಿನ ಮೂರು ಋಕ್ಕುಗಳು ತ್ರಿಷ್ಟುಪ್‌ಛಂದಸ್ಸಿನವು. ಅನುಕ್ರಮಣಿಕೆಯಲ್ಲಿ—**ಆ ನೋ ದಶ ವೈಶ್ವದೇವಂ ತು ಪಂಚಾದ್ಯಾಃ ಸಪ್ತಮಾ ಚ ಜಗತ್ಯಃ ಷಷ್ಠೀ ವಿರಾಟ್‌ಸ್ಥಾನೇತಿ** ಎಂದು ಹೇಳಿರುವುದು. ಅಗ್ನಿಷ್ಟೋಮಯಾಗದಲ್ಲಿ ವೈಶ್ವದೇವಶಸ್ತ್ರಮಂತ್ರವನ್ನು ಪರಿಸುವಾಗ ಈ ಸೂಕ್ತದ ಕೊನೆಯ ಒಂದು ಋಕ್ಕನ್ನು ಬಿಟ್ಟು ಉಳಿದ ಋಕ್ಕುಗಳನ್ನು ವೈಶ್ವದೇವಸಿವಿದ್ವಾನೀಯಮಂತ್ರವನ್ನಾಗಿ ಪರಿಸಬೇಕೆಂದೂ ಮತ್ತು ಪ್ರಕೃತಿವಿಕೃತಿ ರೂಪಗಳಾದ ಯಾಗಗಳಲ್ಲಿಯೂ ವೈಶ್ವದೇವ ಶಸ್ತ್ರಪರಿಧಾನೀಯಾ ಎಂಬ ಮಂತ್ರಗಳಿಗಾಗಿ ಉಪಯೋಗಿಸಬೇಕೆಂದೂ ಆಶ್ವಲಾಯನಶ್ರೌತಸೂತ್ರದ **ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತ ಇತಿ ನವ ವೈಶ್ವದೇವಂ** ಎಂಬ ಸೂತ್ರದಿಂದಲೂ(ಆ. ೫-೧೪) **ಅದಿತಿರ್ದ್ಯೌ-ರದಿತಿರಂತರಿಕ್ಷಮಿತಿ ಪರಿದಧ್ಯಾತ್ಸರ್ವತ್ರ ವೈಶ್ವದೇವೇ** ಎಂಬ ಸೂತ್ರದಿಂದಲೂ (ಆ. ೫-೧೪) ವಿವೃತವಾಗಿರುವುದು. ಈ ವಿಷಯದಲ್ಲಿ **ಕದೈವ ಪಂಚಜನೀಯಾ ಪರಿದಧ್ಯಾತ್** ಎಂದು ಐತರೇಯಬ್ರಾಹ್ಮಣವಚನವಿರುವುದು. (ಐ. ಬ್ರಾ. ೩-೩೧) ಮತ್ತು ಮಹಾವ್ರತದಲ್ಲಿಯೂ ನಿಷ್ಕೇವಲ್ಯಶಸ್ತ್ರಮಂತ್ರ ಪಠನದಲ್ಲಿಯೂ ಈ ಸೂಕ್ತದ ವಿನಿಯೋಗ ವಿರುವುದೆಂದು ಐತರೇಯಬ್ರಾಹ್ಮಣದ ಪಂಚಮಾರಣ್ಯಕದಲ್ಲಿ—**ಆ ನೋ ಭದ್ರೀಯಂ ಚ ತಸ್ಯ ಸ್ಥಾನೇ** ಎಂಬ ವಾಕ್ಯವು (ಐ. ಬ್ರಾ. ೫-೩-೨) ನಿರ್ದೇಶಿಸುವುದು.

॥ ೭೦ ॥

ಸೂಕ್ತ—೬೯

॥ ಮಂಡಲ—೧ ॥ ಅನುವಾಕ—೧೪ ॥ ಸೂಕ್ತ—೬೯ ॥

॥ ಅಷ್ಟಕ—೧ ॥ ಅಧ್ಯಾಯ—೬ ॥ ವರ್ಗ—೧೫, ೧೬ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ- ೧೦ ॥

॥ ಋಷಿಃ—ಗೋತಮೋ ರಾಹೂಗಣಃ ॥

॥ ದೇವತಾ—ವಿಶ್ವೇದೇವಾಃ ॥

॥ ಛಂದಃ— ೧-೫, ೭ ಜಗತೀ । ೬ ವಿರಾಟ್‌ಸ್ಥಾನಾ । ೮-೧೦ ತ್ರಿಷ್ಟುಪ್ ॥

॥ संहितापाठः ॥

आ नो भद्राः क्रतवो यन्तु विश्वतोऽदब्धा-
सो अपरीतास उद्भिदः ।
देवा नो यथा सदमिद्वृधे असन्नप्रायुवो
रक्षितारो दिवेदिवे ॥ ८ ॥

॥ पदपाठः ॥

आ । नः । भद्राः । क्रतवः । यन्तु । विश्वतः । अदब्धासः । अपरिऽइ-
तासः । उत्ऽभिदः ।
देवाः । नः । यथा । सदम् । इत् । वृधे । असन् । अप्रऽआयुवः ।
रक्षितारः । दिवेऽदिवे ॥ ८ ॥

सायणभाष्यम्

नोऽस्मान् क्रतवोऽग्निहोत्रमादयो महायज्ञा विश्वतः सर्वस्मादपि दिग्भागादा यन्तु । आगच्छन्तु । कीदृशाः क्रतवः । भद्राः सम्यगाचीनफलसाधनत्वेन कल्याणा भजनीया वा अदब्धासोऽसुरैरहिंसिताः अपरीतासः शत्रुभिरपरिगताः । अप्रयुवो ह्यद्धा इत्यर्थः । उद्भिदः शत्रूणामुद्भेत्तारः । ईदृशाः क्रतवोऽस्मान्तथा-गच्छन्तु । अप्रायुवोऽप्रगच्छन्तः स्वकीयं रक्षितव्यमपरित्यजन्तः अत एव दिवे दिवे प्रतिदिवसं रक्षितारो रक्षन्तः कुर्वन्त एवंगुणविशिष्टाः सर्वे देवा नोऽस्माकं सदमित् सदैव वृधे वर्धनायासन् । भवन्तु ॥ अदब्धासः दम्भू दंभे । दंभो हिंसा । निष्ठायां यस्य विभाषेटिट्प्रतिषेधः । नञ्समासेऽव्ययपूर्वपदप्रकृति-स्वरत्वं । अपरीतासः । इण् गतौ । पूर्ववत्क्तमर्णि निष्ठा । उभयत्राज्झसेरसुक् ।

ವೃಧೇ । ವೃಧು ವೃದ್ಧೌ । ಸಂಪದಾದಿಲಕ್ಷಣೋ ಭಾವೇ ಕ್ವಿಪ್ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ । ಅಸನ್ । ಅಸ ಭುವಿ । ಲೇಟ್ಯಡಾಗಮಃ ಬಹುಲಂ ಛಂದಸೀತಿ ಶಪೋ ಲುಗಭಾವಃ । ತಸ್ಯಾಜುತ್ತ್ವಾತ್ ಶ್ನಸೋರಲ್ಲೋಪ ಇತ್ಯಕಾರಲೋಪಾಭಾವಃ । ಅಸ್ಮಾಯುವಃ । ಇಣ್ ಗತೌ । ಅಸ್ಮಾತ್ಪ್ರಪೂರ್ವಾಚ್ಛಂದಸೀಣ ಇತ್ಯುಣ್ಪ್ರತ್ಯಯಃ । ನಜ್ಸುಮಾಸೇ್ವವ್ಯಯಪೂರ್ವಪದಪ್ರಕೃತಿಸ್ವರತ್ವಂ । ಜಸಿ ಜಸಾದಿಷು ಛಂದಸಿ ವಾವಚನಮಿತಿ ಗುಣಸ್ಯ ವಿಕಲ್ಪಿತತ್ವಾದಭಾವೇ ತನ್ಪಾದಿತ್ವಾದುವಙ್ ॥

॥ ಪ್ರತಿಪದಾರ್ಥ ॥

ಯಥಾ—ಯಾವರೀತಿಯಿಂದ । **ಅಸ್ಮಾಯುವಃ**—(ಕಾಪಾಡಬೇಕಾದ ಭಕ್ತರನ್ನು) ತ್ಯಜಿಸದಿರುವವರೂ । **ದಿವೇದಿವೇ**—ಪ್ರತಿದಿನವೂ । **ರಕ್ಷಿತಾರಃ**—(ಯಜ್ಞಕರ್ತರನ್ನು) ರಕ್ಷಿಸುವವರೂ ಆದ । **ದೇವಾಃ**—(ಸಕಲ) ದೇವತೆಗಳೂ । **ನಃ**—ನಮಗೆ । **ಸದಮಿತ್**—ಯಾವಾಗಲೂ । **ವೃಧೇ**—ಅಭಿವೃದ್ಧಿಗೆ ಕಾರಣರಾಗಿ । **ಅಸನ್**—ಆಗುವರೋ । **ತಥಾ**—ಆ ರೀತಿಯಾಗಿ । **ಭದ್ರಾಃ**—ಮಂಗಳಕರವಾದವೂ ಅಥವಾ ಪೂಜ್ಯವಾದವೂ । **ಅದಬ್ಧಾಸಃ**—(ಶತ್ರುಗಳಿಂದ) ಹಿಂಸಿಸಲ್ಪಡದಿರುವುವೂ । **ಅಪರೀತಾಸಃ**—(ಶತ್ರುಗಳಿಂದ) ತಡೆಯಲ್ಪಡದಿರುವುವೂ । **ಉದ್ಭಿದಃ**—ಶತ್ರುನಾಶಕಗಳೂ ಆದ । **ಕ್ರತವಃ**—(ಅಗ್ನಿಷ್ಟೋಮಾದಿ) ಮಹಾಯಜ್ಞಗಳು । **ನಃ**—ನಮ್ಮನ್ನು ಉದ್ದೇಶಿಸಿ । **ವಿಶ್ವತಃ**—ಸಕಲದಿಕ್ಕುಗಳಿಂದಲೂ । **ಆ ಯಂತು**—ಬರಲಿ ॥

॥ ಭಾವಾರ್ಥ ॥

ಭಕ್ತರಾದ ಯಜ್ಞಕರ್ತರನ್ನು ತ್ಯಜಿಸದೇ ಪ್ರತಿದಿನವೂ ಅವರನ್ನು ರಕ್ಷಿಸುವ ದೇವತೆಗಳು ಯಾವರೀತಿ ಯಾವಾಗಲೂ ತಮ್ಮ ಅಭಿವೃದ್ಧಿಗೆ ಕಾರಣರಾಗಿ ಆಗುವರೋ ಆ ರೀತಿಯಲ್ಲಿ ಮಂಗಳಕರವಾದವೂ, ಶತ್ರುಗಳಿಂದ ಹಿಂಸಿಸಲ್ಪಡದಿರುವುವೂ, ಶತ್ರುಗಳಿಂದ ತಡೆಯಲ್ಪಡದಿರುವುವೂ ಮತ್ತು ಶತ್ರುನಾಶಕಗಳೂ ಆದ ಅಗ್ನಿಷ್ಟೋಮಾದಿ ಮಹಾಯಜ್ಞಗಳು ನಮ್ಮನ್ನು ಉದ್ದೇಶಿಸಿ ಸಕಲದಿಕ್ಕುಗಳಿಂದಲೂ ಬರಲಿ.

English Translation

May auspicious work (or excellent wisdom) unmolested, unimpeded, and unconquered come to us from every quarter ; may the gods not turning away from us but granting us protection day by day be, ever with us for our advancement

ವಿಶೇಷನಿಷಯಗಳು.

ಈ ಸೂಕ್ತಕ್ಕೂ ಮುಂದಿನ ಸೂಕ್ತಕ್ಕೂ ವಿಶ್ವೇದೇವತೆಗಳೇ ದೇವತೆಗಳು. ಕೆಲವರು ವಿಶ್ವೇದೇವತೆಗಳೆಂದರೆ ಪ್ರತ್ಯೇಕವಾದ ಒಂದು ದೇವತೆಗಳ ಪಂಗಡವೆಂದು ಹೇಳುವರು ಮತ್ತೆ ಕೆಲವರು ವಿಶ್ವೇದೇವತೆಗಳೆಂದರೆ ಎಲ್ಲಾ ದೇವತೆಗಳು ಎಂದು ಹೇಳುವರು. ಯಾಸ್ಕರು ವಿಶ್ವೇ ದೇವಾಃ ಸರ್ವೇ ದೇವಾಃ (ನಿ. ೧೨-೩೯) ಎಂದು ಹೇಳಿರುವರು. ಈ ವಿಷಯದಲ್ಲಿ ನಾವು (ಋ. ಸಂ. ಭಾಗ ೨ ಪೀಜಿ 49-50)ರಲ್ಲಿ ಬರೆದಿರುವುದನ್ನು ನೋಡಿ ಈ ಸೂಕ್ತವನ್ನು ಶಾಂತಿ ಮಂತ್ರವನಕ್ಕಾಗಿ ಉಪಯೋಗಿರುವರು.

ಋಗ್ವೇದದಲ್ಲಿ ವಿಶ್ವೇದೇವತೆಗಳ ಪರವಾದ ಋಕ್ಕುಗಳು ಅಲ್ಲಲ್ಲಿ ಬರುವುದಲ್ಲದೆ ವಿಶ್ವೇದೇವತಾಕವಾದ ಪ್ರತ್ಯೇಕ ಸೂಕ್ತಗಳೇ ೫೮ ಇರುವವು—ಋ. ಸಂ. ಪ್ರಥಮಮಂಡಲದಲ್ಲಿ ೧೪, ೪೯, ೯೦, ೧೦೫, ೧೦೬, ೧೦೭. ೧೫೧, ೧೫೨ನೇ ಸೂಕ್ತಗಳು ; ಎರಡನೆಯ ಮಂಡಲದಲ್ಲಿ-೨೯, ೩೧ನೆಯ ಸೂಕ್ತಗಳು ; ಮೂರನೆಯ ಮಂಡಲದಲ್ಲಿ-೫೪ನೆಯ ಸೂಕ್ತವು ; ನಾಲ್ಕನೆಯ ಮಂಡಲದಲ್ಲಿ—೫೫ನೆಯ ಸೂಕ್ತವು ; ಐದನೆಯ ಮಂಡಲದಲ್ಲಿ—೪೧, ೪೨, ೪೩, ೪೪, ೪೫, ೪೬, ೪೭, ೫೦, ೫೧; ಆರನೆಯ ಮಂಡಲದಲ್ಲಿ-೪೯, ೫೦, ೫೧, ೫೨; ಏಳನೆಯ ಮಂಡಲದಲ್ಲಿ-೩೫, ೩೬, ೩೮, ೩೯, ೪೦, ೪೨, ೪೩ ; ಎಂಟನೆಯ ಮಂಡಲದಲ್ಲಿ-೨೭, ೨೮, ೨೯, ೩೦, ೫೮, ೮೩ ; ಹತ್ತನೆಯ ಮಂಡಲದಲ್ಲಿ-೩೧, ೩೨, ೩೫, ೩೬, ೬೪, ೬೫, ೬೬, ೯೨, ೯೩, ೧೦೦, ೧೦೧, ೧೦೯, ೧೧೪, ೧೧೫, ೧೧೭, ೧೧೮, ೧೨೧, ೧೨೯ ಎಂಬ ಸೂಕ್ತಗಳು ವಿಶ್ವೇದೇವತಾಕವು.

ಅದಬ್ಧಾಸಃ—ದನ್ನು ದಂಭೇ । ದಂಭೋ ಹಿಂಸಾ । ಅದಬ್ಧಾಸೋ೭ಸುರೈರಹಿಂಸಿತಾಃ । ಅಸುರರಿಂದ ಹಿಂಸಿಸಲ್ಪಡದಿರುವ ಅಸುರರು ವಿಘ್ನವನ್ನುಂಟುಮಾಡದಿರುವ.

ಅಪರೀತಾಸಃ—ಇಣ್ ಗತೌ । ಶತ್ರುಭಿರಪರಿಗತಾಃ । ಶತ್ರುಬಾಧಾರಹಿತವಾದ, ಶತ್ರುಗಳು ಸಮೀಪಿಸುವುದಕ್ಕೆ ದುಸ್ಸಾಧ್ಯವಾದ.

ಉದ್ಧಿದಃ—ಶತ್ರೂಣಾಮುದ್ಧೇತ್ತಾರಃ । ಶತ್ರುಗಳನ್ನು ನಾಶಮಾಡುವ- ಸ್ಕಂದಸ್ವಾಮಿಯು ಈ ಶಬ್ದಕ್ಕೆ **ಉದ್ಧಿದಃ । ಉದ್ಧಿನ್ನಾನ್ಯೇಕಾಹಃ । ತತ್ತೃತೀಯಯಃ । ಅಥವಾ ಉದ್ಧಿಂದಂತಿ ಫಲಾನೀತ್ಯುದ್ಧಿದಃ । ಜನಯಿತಾರಃ ಫಲಾನಾಮಿತ್ಯರ್ಥಃ ॥** ಉದ್ಧಿನ್ನವೆಂಬ ಒಂದು ದಿನದಲ್ಲಿ ಮಾಡುವ ಯಜ್ಞವಿಶೇಷವೇ ಮೊದಲಾದುವು ಅಥವಾ (ಯಜ್ಞಾದಿಕರ್ಮಗಳಿಗೆ) ಫಲಸನ್ನುಂಟುಮಾಡುವವರು ಎಂದು ಅರ್ಥವಿವರಣೆ ಮಾಡಿರುವರು.

ಸದಮಿತ್—ಸದೈವ । ಸದಾಕಾಲದಲ್ಲಿಯೂ, ಯಾವಾಗಲೂ.

ಅಸ್ಕಾಯುವಃ—ಇಣ್ ಗತೌ । ಅಪ್ರಗಚ್ಛಂತಃ ಸ್ವಕೀಯಂ ರಕ್ಷಿತವ್ಯಮಪರಿತ್ಯಜಂತಃ । ತಾವು ರಕ್ಷಿಸಬೇಕಾದ ಯಜಮಾನರನ್ನು ತ್ಯಜಿಸದಿರುವವರು, ಅಲಕ್ಷ್ಯಮಾಡದಿರುವವರು.

ವ್ಯಾಕರಣಪ್ರಕ್ರಿಯಾ

ಯೆಂತು—ಇಣ್ ಗತೌ ಧಾತು. ಅದಾದಿ. ಲೋಟ್ ಪ್ರಥಮಪುರುಷಬಹುವಚನದಲ್ಲಿ **ಝೋಂತಃ**—ಎಂಬುದರಿಂದ ಅಂತಾದೇಶ. **ಇರುಃ**—ಎಂಬುದರಿಂದ ಇಕಾರಕ್ಕೆ ಉತ್ವ. **ಇಣೋಯಣ್** (ಪಾ. ಸೂ. ೬-೪-೮೧) ಎಂಬುದರಿಂದ ಧಾತುವಿನ ಇಕಾರಕ್ಕೆ ಯಣಾದೇಶ. ತಿಙಂತನಿಘಾತಸ್ವರ ಬರುತ್ತದೆ.

ಅದಬ್ಧಾಸಃ—ದಂಭು ದಂಭೀ ಧಾತು. ದಂಭನೆಂದರೆ ಹಿಂಸಾ ಇದಕ್ಕೆ ಕ್ತ ಪ್ರತ್ಯಯ ಪರವಾದಾಗ **ಯಸ್ಯವಿಭಾಷಾ** (ಪಾ. ಸೂ. ೭-೪-೩೫) ಎಂಬುದರಿಂದ ಪ್ರತ್ಯಯಕ್ಕೆ ಇಡಾಗಮ ಬರುವುದಿಲ್ಲ. **ಅನಿದಿತಾಂ-ಹಲಉ**—ಎಂಬುದರಿಂದ ಉಪಧಾನಕಾರಕ್ಕೆ ಲೋಪ. ನ ದಬ್ಧಃ ಅದಬ್ಧಃ ನಞ್‌ತತ್ಪುರುಷ ಸಮಾಸದಲ್ಲಿ **ಅವ್ಯಯೋ ನಞ್ ಕುನಿಪಾತಾನಾಮ್**—ಎಂಬುದರಿಂದ ಅವ್ಯಯಪೂರ್ವಪದಪ್ರಕೃತಿಸ್ವರ ಬರುತ್ತದೆ. ಪ್ರಥಮಾ ಬಹುವಚನ ಪರವಾದಾಗ ಅದಕ್ಕೆ **ಅಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಅಸುಗಾಗಮ. ಸಕಾರಕ್ಕೆ ರುತ್ವ ವಿಸರ್ಗ

ಅಪರೀತಾಸಃ—ಇಣ್ ಗತೌ ಧಾತು. ಹಿಂದಿನಂತೆ ಕರ್ಮಣಿಯಲ್ಲಿ ಕ್ತ ಪ್ರತ್ಯಯ. ಪರಿ ಉಪಸರ್ಗ ಪರೀತ ಎಂದು ರೂಪವಾಗುತ್ತದೆ. ಹಿಂದಿನಂತೆಯೇ ಅವ್ಯಯಪೂರ್ವಪದಪ್ರಕೃತಿಸ್ವರ. ಜಸಿನಲ್ಲಿ ಅಸುಕಾಗಮ.

ವೃಧೇ—ವೃಧ ವೃದ್ಧೌ. ಧಾತು. ಸಂಪದಾದಿಯಲ್ಲಿ ಸೇರಿರುವುದರಿಂದ **ಸಂಪದಾದಿಭ್ಯಃ ಕ್ವಿಪ್** ಎಂಬುದರಿಂದ ಇದಕ್ಕೆ ಭಾವಾರ್ಥದಲ್ಲಿ ಕ್ವಿಪ್ ಪ್ರತ್ಯಯ. ವೃಧ್ ಶಬ್ದವಾಗುತ್ತದೆ. **ಚತುರ್ಥೀಏಕವಚನಾಂತ** ರೂಪ. ಏಕಾಚಾದುದರಿಂದ **ಸಾವೇಕಾಚಸ್ತೃತೀಯಾದಿಃ** (ಪಾ. ಸೂ. ೬-೧-೧೮೪) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಅಸನ್—ಅಸ ಭುವಿ. ಧಾತು. ಲೇಟ್‌ಪ್ರಥಮಪುರುಷಬಹುವಚನದಲ್ಲಿ ಝಿ ಪ್ರತ್ಯಯ. **ಝೋಂತೇಃ**—ಎಂಬುದರಿಂದ ಅಂತಾದೇಶ. **ಇತಶ್ಚಲೋಪಃ ಪರಸ್ಮೈಪದೇಷು**—ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಲೇಟೋಡಾಟ್**—ಸೂತ್ರದಿಂದ ಅಡಾಗಮ. **ಬಹುಲಂ ಛಂದಸಿ**—ಎಂಬುದರಿಂದ ಶಪಿಗೆ ಲುಕ್ಲಾಗುವುದಿಲ್ಲ. ಅದು ಬತ್ತಾಗದಿರುವುದರಿಂದ ಅದು ಪರವಾದಾಗ **ಶ್ನಸೋರಲ್ಲೋಪಃ** (ಪಾ. ಸೂ. ೬-೪-೧೧೧) ಎಂಬುದರಿಂದ ಧಾತುವಿನ ಅಕಾರಕ್ಕೆ ಲೋಪ ಬರುವುದಿಲ್ಲ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರಬರುವುದಿಲ್ಲ. ಶಪ್ ಪಿತ್ತಾದುದರಿಂದ ಅನುದಾತ್ತ. ಲಸಾರ್ವಧಾತುಕವೂ (ಅನ್) **ತಾಸ್ಯನುದಾತ್ತೇತ್**—ಸೂತ್ರದಿಂದ ಧಾತುಸ್ವರ ದಿಂದ ಆದ್ಯುದಾತ್ತವಾಗುತ್ತದೆ.

ಅಪ್ರಾಯುವಃ—ಇಣ್ ಗತೌ ಧಾತು. ಪ್ರ ಎಂಬ ಉಪಸರ್ಗ ಪೂರ್ವದಲ್ಲಿರುವಾಗ ಇವಕ್ಕೆ **ಛಂದಸೀಣಃ** (ಉ. ಸೂ. ೧-೩) ಎಂಬುದರಿಂದ ಸಂಹಿತಾದಲ್ಲಿ ಉಸ್ ಪ್ರತ್ಯಯ. ಣಿತ್ತಾದುದರಿಂದ **ಆಚ್ಛೋಣ್ಣಿತಿ**—ಎಂಬುದರಿಂದ ಧಾತುವಿಗೆ ವೃದ್ಧಿ. ಆಯಾದೇಶ. ಪ್ರಾಯು ಶಬ್ದವಾಗುತ್ತದೆ. ನ ಪ್ರಾಯುಃ ಅಪ್ರಾಯುಃ. ನಞ್ ತತ್ಪುರುಷ ಸಮಾಸದಲ್ಲಿ **ತತ್ಪುರುಷೇ ತುಲ್ಯಾರ್ಥ**—ಎಂಬುದರಿಂದ ಅವ್ಯಯಪೂರ್ವಪದಪ್ರಕೃತಿಸ್ವರ ಬರುತ್ತದೆ. ಅಪ್ರಾಯು ಎಂಬುದಕ್ಕೆ ಜಸ್ ಪರವಾದಾಗ **ಜಸಾದಿಷು ಛಂದಸಿ ವಾ ವಚನಮ್**—ಎಂಬುದರಿಂದ **ಜಸಿ ಚ**—ಎಂಬುದರಿಂದ **ಗುಣ** ಬಾರದಿರುವುದರಿಂದ ತಸ್ಕಾದಿಯಲ್ಲಿ ಪಾಠಮಾಡಿರುವುದರಿಂದ ಉವಙಾದೇಶ. ಅಪ್ರಾಯುವಃ ಎಂದು ರೂಪವಾಗುತ್ತದೆ. ॥ ೧ ॥

ಸಂಹಿತಾಪಾಠ.

ದೇವಾನಾಂ ಭದ್ರಾ ಸುಮತಿರ್ಋಜೂಯತಾಂ ದೇವಾನಾಂ
ರಾತಿರಭಿ ನೋ ನಿ ವರ್ತತಾಂ।
ದೇವಾನಾಂ ಸಖ್ಯಮುಪ ಸೇದಿಮಾ ವಯಂ ದೇವಾ ನ ಆಯುಃ
ಪ್ರ ತಿರಂತು ಜೀವಸೇ ॥ ೨ ॥

ಪದಪಾಠಃ

ದೇವಾನಾಂ । ಭದ್ರಾ । ಸುऽಮತಿಃ। ಋಜುऽಯತಾಂ । ದೇವಾನಾಂ । ರಾತಿಃ ।
ಅಭಿ । ನಃ । ನಿ । ವರ್ತತಾಂ ।

ದೇವಾನಾಂ । ಸಖ್ಯಂ । ಉಪ । ಸೇದಿಮ । ವಯಂ । ದೇವಾಃ । ನಃ । ಆಯುಃ ।
ಪ್ರ । ತಿರಂತು । ಜೀವಸೇ ॥ ೨ ॥

ಸಾಯಣಭಾಷ್ಯಂ

ಭದ್ರಾ ಸುಖಯಿತ್ರೀ ಭಜನೀಯಾ ವಾ ದೇವಾನಾಂ ಸುಮತಿಃ ಶೋಭನಾ ಮತಿರನುಗ್ರಹಾತ್ಮಿಕಾ ಬುದ್ಧಿರಸ್ಮಾಕಮಸ್ತ್ವಿತಿ ಶೇಷಃ । ಕೀದೃಶಾನಾಂ । ಋಜೂಯತಾಮೃಜು ಮಾರ್ಜವಮಿಚ್ಛತಾಂ ಸಮ್ಯಗನುಷ್ಠಾತಾರಂ ಯಜಮಾನಮಾತ್ಮನ ಇಚ್ಛತಾಂ। ತಥಾ ದೇವಾನಾಂ ರಾತಿರ್ದಾನಂ ನೋऽಸ್ಮಾನಭಿಮುಖ್ಯೇನ ನಿತರಾಂ ವರ್ತತಾಂ । ತದಭಿಮತಫಲಪ್ರದಾನಮುಪಕ್ರಮಸ್ಯಾಕಂ ಭವತ್ವಿತ್ಯರ್ಥಃ । ವಯಂ ಚ ತೇಷಾಂ ದೇವಾನಾಂ ಸಖ್ಯಂ ಸಖಿತ್ವಂ ಸಖ್ಯುಃ ಕರ್ಮ ವೋಪಸೇದಿಮ । ಪ್ರಾಪ್ನುವಾಮ । ತಾಶ್ಚೇಶಾ ದೇವಾ ನೋऽಸ್ಮಾಕಮಾಯುರ್ಜೀವಸೇ ಜೀವಿತುಂ ಪ್ರ ತಿರಂತು । ವರ್ಧಯಂತು ॥ ಭದ್ರಾ । ಭದಿ ಕಲ್ಯಾಣೇ ಸುಖೇ ಚ । ಋಜ್ರೇಂದ್ರಾಗ್ರೇತ್ಯಾದೌ । ಉ. ೨-೨೮ । ರನ್ಪ್ರತ್ಯಯಾಂತೋ ನಿಪಾತಿತಃ। ಋಜೂಯತಾಂ। ಋಜುಮಾತ್ಮನ ಇಚ್ಛತಿ ಋಜೂಯತಿ । ಸುಪ ಆತ್ಮನಃ ಕ್ಯಚ್ । ತದಂತಾಲ್ಲಟಿಃ ಶತೃ । ಶತುರನುಮ ಇತ್ಯಾದಿವಿಭಕ್ತೇರುದಾತ್ತ ತ್ವಂ । ರಾತಿಃ । ರಾ ದಾನೇ । ಮಂತ್ರೇ ವೃಷೇತಿ ಕ್ತಿನ ಉದಾತ್ತತ್ವಂ । ಸಖ್ಯಂ । ಸಖ್ಯುರ್ಯ ಇತಿ ಭಾವೇ ಕರ್ಮಣಿ ವಾ ಯಪ್ರತ್ಯಯಃ । ಸೇದಿಮ । ಷದ್ಲೃ ವಿಶರಣಗತ್ಯವಸಾದನೇಷು । ಭಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಸ್ಪಾರ್ಹನಾಯಾಂ ಲಿಟ್ । ಸತ್ಸ್ಯಾನ್ಯೈಮಿತ್ತಿಕತ್ವೇನ ಲಿಟಿ ಪರತ ಆದೇಶಾದಿತ್ವಾಭಾವಾದತ ಏಕಹಲ್ಮಧ್ಯ ಇತ್ಯೇತ್ವಾಭ್ಯಾಸಲೋಪೌ । ಆನ್ಯೇಷಾಮಪಿ ದೃಶ್ಯತ ಇತಿ ಸಂಹಿತಾಯಾಂ ದೀರ್ಘತ್ವಂ । ಪ್ರ ತಿರಂತು । ಪ್ರಪೂರ್ವಸ್ತಿರತಿರ್ವರ್ಧನಾರ್ಥಃ । ತಥಾ ಚ ಯಾಸ್ಕೋ ವ್ಯಾಚಖ್ಯೌ । ದೇವಾನಾಂ ಸಖ್ಯಮುಪಸೀದೇಮ ವಯಂ ದೇವಾ ನ ಆಯುಃ ಪ್ರವರ್ಧಯಂತು ಚಿರಂ ಜೀವನಾಯೇ । ನಿ. ೧೨-೩೯ । ಇತಿ ॥

ಪ್ರತಿಪದಾರ್ಥ

ಋಜೂಯತಾಂ—ಪ್ರಾಮಾಣಿಕನಾದ ಯಜ್ಞಕರ್ತನನ್ನು ಪಡೆಯಲಿಚ್ಛೆಯುಳ್ಳ । **ದೇವಾನಾಂ**—ದೇವತೆಗಳ । **ಭದ್ರಾ**—ಪೂಜ್ಯವಾದುದೂ । **ಸುಮತಿಃ**—ಶ್ರೇಷ್ಠವಾದುದೂ ಆದ ಬುದ್ಧಿಯು (ನಮಗೆ ಅನುಗ್ರಹವನ್ನುಂಟುಮಾಡುವಂತಾಗಲಿ) । **ದೇವಾನಾಂ**—ದೇವತೆಗಳ । **ರಾತಿಃ**—ಉದಾರವಾದ ದಾನವು । **ನಃ**—ನಮ್ಮ ಅಭಿಮುಖವಾಗಿ । **ವರ್ತತಾಂ**—ಇರಲಿ. । **ವಯಂ**—ನಾವೂ (ಕೂಡ) । **ದೇವಾನಾಂ**—(ಆ) ದೇವತೆಗಳ ।

ಸಖ್ಯಂ—ಸ್ನೇಹವನ್ನು । **ಉಪಸೇದಿಮ**—ಹೊಂದೋಣ. । **ದೇವಾಃ**—ಆ ದೇವತೆಗಳು । **ನಃ**— ನಮ್ಮ। **ಆಯುಃ**—ಆಯಸ್ಸನ್ನು । **ಜೀವಸೇ**—ನಮ್ಮ ಬದುಕಿಗಾಗಿ। **ಪ್ರ ತಿರಂತು**—ಬೆಳೆಸಲಿ ।

॥ ಭಾವಾರ್ಥ ॥

ಪ್ರಾಮಾಣಿಕನಾದ ಯಜ್ಞಕರ್ತನನ್ನು ಪಡೆಯಲಿಚ್ಛೆಯುಳ್ಳ ದೇವತೆಗಳ ಪೂಜ್ಯವಾದುದೂ ಮತ್ತು ಶ್ರೇಷ್ಠವಾದುದೂ ಆದ ಬುದ್ಧಿಯು ನಮಗೆ ಅನುಗ್ರಹವನ್ನುಂಟುಮಾಡುವಂತಾಗಲಿ. ದೇವತೆಗಳ ಉದಾರವಾದ ದಾನವು ನಮಗೆ ಅಭಿಮುಖವಾಗಿರಲಿ. ನಾವೂ ಸಹ ಆ ದೇವತೆಗಳ ಸ್ನೇಹವನ್ನು ಬೆಳೆಸೋಣ. ಆ ದೇವತೆಗಳು ನಮ್ಮ ಆಯಸ್ಸನ್ನು ಬೆಳೆಯುವಂತೆ ಮಾಡಲಿ.

English Translation

May the auspicious favour of the gods be ours ; may the bounty of the gods, ever approving of the upright, light upon us ; may we obtain the friendship of the gods and may the gods extend our life that we may live.

ವಿಶೇಷವಿಷಯಗಳು

ದೇವಾನಾಂ ಭದ್ರಾ ಸುಮತಿಃ—ನಮಗೆ ಒಳ್ಳೆಯದನ್ನು ಮಾಡಬೇಕೆಂಬ ದೇವತೆಗಳ ಬುದ್ಧಿಯು ಅಥವಾ ಅನುಗ್ರಹವು.

ಋಜೂಯತಾಂ—**ಯಜುಮಾರ್ಜವಯುಕ್ತಂ ಸಮ್ಯಗನುಷ್ಠಾತಾರಂ ಆತ್ಮನ ಇಚ್ಛತಾಂ** । ಋಜುಮಾರ್ಗದಲ್ಲಿರುವ ಎಂದರೆ ಯಜ್ಞಾದಿಸತ್ಕರ್ಮಾನುಷ್ಠಾನಗಳಲ್ಲಿ ತೊಡಗಿರುವ ಯಜಮಾನರನ್ನು ಅಪೇಕ್ಷಿಸುವ. ಯಜಮಾನರು ಮಾಡುವ ಯಜ್ಞಗಳನ್ನು ಸ್ತೋತ್ರಗಳನ್ನು ದೇವತೆಗಳು ಅನುಮೋದಿಸುವರೆಂದಭಿಪ್ರಾಯವು

ರಾತಿಃ—**ರಾ ದಾನೇ** । ದೇವತೆಗಳು ಅನುಗ್ರಹಿಸುವ ಅಥವಾ ಕೊಡುವ ಐಶ್ವರ್ಯಾದಿದಾನಗಳು.

ಉಪ ಸೇದಿಮ—**ಷದ್ಲೃ ವಿಶರಣಗತ್ಯವಸಾದನೇಷು** । ಹೊಂದೋಣ, ಪಡೆಯೋಣ.

ಪ್ರ ತಿರಂತು—**ಪ್ರಪೂರ್ವಸ್ತಿರತಿರ್ವರ್ಧನಾರ್ಥಃ** । (ನಮ್ಮ ಆಯಸ್ಸನ್ನು) ಅಭಿವೃದ್ಧಿಮಾಡಲಿ ಯಾಸ್ಕರು—**ದೇವಾನ ಆಯುಃ ಪ್ರವರ್ಧಯಿತುಂ ಚಿರಂ ಜೀವನಾಯ** (ನಿ. ೧೨-೩೯) ದೇವತೆಗಳು ನಮ್ಮ ಆಯಸ್ಸನ್ನು ಬಹಳಕಾಲ ಬದುಕಿರುವಂತೆ ವೃದ್ಧಿಪಡಿಸಲಿ ಎಂದು ಹೇಳಿರುವರು

ವ್ಯಾಕರಣಪ್ರಕ್ರಿಯಾ

ಭದ್ರಾ—ಭದಿ ಕಲ್ಯಾಣೇ ಸುಖೇ ಚ. ಧಾತು. **ಋಜ್ರೇಂದ್ರಾಗ್ರವಜ್ರ**—(ಉ. ಸೂ. ೨-೧೦೬) ಎಂಬುದರಿಂದ ರನ್ ಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ವ್ಯತ್ಯಯದಿಂದ ಅಂತೋದಾತ್ತವಾಗುತ್ತದೆ. **ಸ್ತ್ರೀತ್ವ** ವಿವಕ್ಷಾನಾಡಿದಾಗ **ಅಜಾದ್ಯತಷ್ಟಾಪ್**—ಎಂಬುದರಿಂದ ಟಾಪ್ ಪ್ರತ್ಯಯ. ಪ್ರಥಮಾ ಸುವಿಗೆ **ಹಲ್ಙ್ಯಾಭ್ಯೋ**—ಸೂತ್ರದಿಂದ ಲೋಪ.

ಋಜೂಯತಾಮ್—ಋಜುಂ ಆತ್ಮನಃ ಇಚ್ಛತಿ ಎಂದು ಅರ್ಥವಿವಕ್ಷಾಮಾಡಿದಾಗ **ಸುಪ ಆತ್ಮನಃ ಕ್ಯಚ್** (ಪಿಾ. ೩-೧-೮) ಎಂಬುದರಿಂದ ಋಜು ಎಂಬ ಸುಬಂತದ ಮೇಲೆ ಕ್ಯಚ್‌ಪ್ರತ್ಯಯ. **ಅಕೃತ್‌ಸಾರ್ವಧಾತುಕಯೋರ್ದೀರ್ಘಃ**—ಎಂಬುದರಿಂದ ಕ್ಯಚಿನ ಯಕಾರ ಪರವಾದಾಗ ಪೂರ್ವದ ಅಜಂತಕ್ಕೆ ದೀರ್ಘ. **ಸನಾದ್ಯಂತಾ ಧಾತವಃ**-ಎಂಬುದರಿಂದ ಋಜೂಯ ಎಂಬ ಕ್ಯಜಂತವು ಧಾತುಸಂಜ್ಞೆಯನ್ನು ಹೊಂದುತ್ತದೆ. ಇದಕ್ಕೆ ಲಡರ್ಥದಲ್ಲಿ ಶತೃಪ್ರತ್ಯಯ ಶಪ್‌ವಿಕರಣ. **ಅತೋ ಗುಣೇ** ಸೂತ್ರದಿಂದ ಪರರೂಪ. ಋಜೂಯಚ್ಛಬ್ದವಾಗುತ್ತದೆ. ಷಷ್ಠೀಬಹುವಚನಾಂತರೂಪ. ನುಮ್‌ರಹಿತವಾದ ಶತೃಪ್ರತ್ಯಯದ ಪರದಲ್ಲಿ ಆಜಾದಿಪ್ರತ್ಯಯ ಬಂದುದರಿಂದ **ಶತುರನುಮೋನದ್ಯಜಾದೀ** (ಪಾ. ಸೂ. ೬-೧-೧೭೩) ಎಂಬುದರಿಂದ ಅಜಾದಿಯಾದ ಆಮಿಗೆ ಉದಾತ್ತಸ್ವರ ಬರುತ್ತದೆ.

ರಾತಿಃ—ರಾ ದಾನೇ ಧಾತು. ಇದಕ್ಕೆ ಭಾವಾರ್ಥದಲ್ಲಿ **ಸ್ತ್ರಿಯಾಂ ಕ್ತಿನ್**—ಎಂಬುದರಿಂದ ಕ್ತಿನ್ ಪ್ರತ್ಯಯ. ಆದ್ಯುದಾತ್ತಪ್ರಾಪ್ತವಾದರೆ **ಮಂತ್ರೇವೃಷೇಷಪಚ**—(ಪಾ. ಸೂ ೩-೩-೯೬) ಎಂಬುದರಿಂದ ಕ್ತಿನಿಗೆ ಉದಾತ್ತಸ್ವರವು ಬರುತ್ತದೆ.

ವರ್ತಾಮ್-ವೃತು ವರ್ತನೇ ಧಾತು. ಲೋಟ್‌ಪ್ರಥಮಪುರುಷ ಏಕವಚನದಲ್ಲಿ ತಪ್ರತ್ಯಯ. **ಆಮೇತಃ**—ಎಂಬುದರಿಂದ ಟಿತ್ಕರಿಸಿದ್ದರಿಂದ ಪ್ರಾಪ್ತವಾದ ಏತ್ವಕ್ಕೆ ಆಮ್ ಆದೇಶ. ತಿಙಂತನಿಘಾತಸ್ವರ ಬರುತ್ತದೆ.

ಸಖ್ಯಮ್—ಸಖ್ಯುಃ ಭಾವಃ ಸಖ್ಯಮ್. **ಸಖ್ಯುರ್ಯಃ** (ಪಾ. ಸೂ. ೫-೧-೧೨೪) ಎಂಬುದರಿಂದ ಭಾವಾರ್ಥದಲ್ಲಿ ಅಧವಾ ಕರ್ಮಾರ್ಥದಲ್ಲಿ ಯ ಪ್ರತ್ಯಯ. **ಯಸ್ಯೇತಿ ಚ** ಎಂಬುದರಿಂದ ಇಕಾರಕ್ಕೆ ಲೋಪ ಪ್ರತ್ಯಯಸ್ವರದಿಂದ ಅಂತೋದಾತ್ತನಾಗುತ್ತದೆ

ಸೇದಿಮಾ—ಷದ್ಲೃ ವಿಶರಣಗತ್ಯವಸಾದನೇಷು. ಧಾತು. **ಛಂದಸಿ ಲುಙ್‌ಲಙ್‌ಲಿಟಃ**—ಎಂಬುದರಿಂದ ಪ್ರಾರ್ಥನಾರೂಪ ಅರ್ಥದಲ್ಲಿ ಲಿಟ್. ಧಾತುವಿನ ಆದಿಗೆ **ಧಾತ್ವಾದೇಃ ಷಃ ಸಃ**-ಎಂಬುದರಿಂದ ಸಕಾರಾದೇಶ. ಲಿಣ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. ಇಲ್ಲಿ ಲಿಣ್ನಿಮಿತ್ತವಾಗಿ ಧಾತುವಿನ ಆದಿಗೆ ಯಾವ ಆದೇಶವೂ ಬಾರದಿರುವುದರಿಂದ **ಅತ ಏಕಹಲ್‌ಮಧ್ಯೇಽನಾದೇಶಾದೇರ್ಲಿಟಿ** (ಪಾ ಸೂ. ೬-೪-೧೨೦) ಎಂಬುದರಿಂದ ಅಸಂಯುಕ್ತಹಲ್ ಮಧ್ಯವಲ್ಲಿರುವ ಧಾತುವಿನ ಅಕಾರಕ್ಕೆ ಏತ್ವವೂ ಅಭ್ಯಾಸಕ್ಕೆ ಲೋಪವೂ ಬರುತ್ತದೆ. ಮಿಪಿಗೆ ಇಡಾದೇಶ **ಅನ್ಯೇಷಾಮಪಿ ದೃಶ್ಯತೇ**—ಎಂಬುದರಿಂದ ಸಂಹಿತಾದಲ್ಲಿ ಧಾತುವಿನ ಅಂತ್ಯಕ್ಕೆ ದೀರ್ಘ.

ಪ್ರ ತಿರಂತು—ಪ್ರ ಎಂಬ ಉಪಸರ್ಗ ಸಹಿತವಾದ ತಿರ ಧಾತುವು ವರ್ಧನರೂಪಾರ್ಥದಲ್ಲಿ ಇದೆ. ಇದೇ ರೀತಿಯಾಗಿ ಯಾಸ್ಕರು ವ್ಯಾಖ್ಯಾನಸಾಡಿರುತ್ತಾರೆ. ದೇವಾನಾಂ ಸಖ್ಯಮುಪಸೀದೇಮ ವಯಂ ದೇವಾ ನ ಆಯುಃ **ಪ್ರತಿರಂತು ಜೀವಸೇ** ಚಿರಂ ಜೀವನಾಯ. (ದೇವತೆಗಳ ಸಖ್ಯವನ್ನು ನಾವು ಹೊಂದೋಣ ದೇವತೆಗಳು ನಾವು ಬಹುಕಾಲ ಬದುಕಿರಲು ನಮ್ಮ ಆಯಸ್ಸನ್ನು ಹೆಚ್ಚಿಸಲಿ) (ನಿರು. ೧೨-೩೯) ಇತಿ ಲಟ್‌ಪ್ರಥಮಪುರುಷ ಬಹುವಚನ ರೂಪ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಜೀವಸೇ—ತುಮುನರ್ಥ ತೋರುವಾಗ **ತುಮರ್ಥೇಸೇಸೇನಸೇ**—ಎಂಬುದರಿಂದ ಅಸೇ ಪ್ರತ್ಯಯ. ॥೨॥

ಸಂಹಿತಾಪಾಠಃ

ತಾನ್ಪೂರ್ವಯಾ ನಿವಿದಾ ಹೂಮಹೇ ವಯಂ ಭಗಂ ಮಿತ್ರ-
ಮದಿತಿಂ ದಕ್ಷಮಸ್ರಿಧಂ ।
ಅರ್ಯಮಣಂ ವರುಣಂ ಸೋಮಮಶ್ವಿನಾ ಸರಸ್ವತೀ ನಃ ಸು-
ಭಗಾ ಮಯಸ್ಕರತ್ ॥ ೩ ॥

ಪದಪಾಠಃ

ತಾನ್ । ಪೂರ್ವಯಾ । ನಿ ೩ ವಿದಾ । ಹೂಮಹೇ । ವಯಂ । ಭಗಂ । ಮಿತ್ರಂ ।
ಅದಿತಿಂ । ದಕ್ಷಂ । ಅಸ್ರಿಧಂ ।
ಅರ್ಯಮಣಂ । ವರುಣಂ । ಸೋಮಂ । ಅಶ್ವಿನಾ । ಸರಸ್ವತೀ । ನಃ । ಸು ೩ ಭ-
ಗಾ । ಮಯಃ । ಕರತ್ ॥ ೩ ॥

। ಸಾಯಣಭಾಷ್ಯಂ ।

ತಾನಿತ್ಯಾನ್ವೇನಾನ್ಪೂರ್ವಯಾ ಪೂರ್ವೈಕಾಲೀನಯಾ ನಿತ್ಯಯಾ ನಿವಿದಾ ವೇದಾತ್ಮಿಕಯಾ ವಾಚಾ। ನಿವಿದಿತಿ ವಾಙ್ನಾಮ । ಯದ್ವಾ । ನಿವಿದಾ ನಿಶ್ಚೇ ದೇವಾಃ ಸೋಮಸ್ಯ ಮತ್ಸನ್ನಿತ್ಯಾದಿಕಯಾ ನೈಶ್ವದೇವಾ ನಿವಿದಾ ವಯಂ ಹೂಮಹೇ। ಆಹ್ವಯಾಮಃ। ದೇವಾನಿತಿ ಯೆತ್ಸಾಮಾನ್ಯೇನೋಕ್ತಂ ತದೇವ ವಿಪ್ರಿಯತೇ। ಭಗಂ ಭಜನೀಯಂ ದ್ವಾದಶಾನಾಮಾದಿತ್ಯಾನಾಮನ್ಯತಮಂ ಮಿತ್ರಂ ಪ್ರಮಿತೇಸ್ತ್ರಾಯಕಮಹರಭಿಮಾನಿನಂ ದೇವಂ । ಮೈತ್ರಂ ವಾ ಅಹಃ ।ತೈ. ಬ್ರಾ. ೧-೭-೧೦-೧ । ಇತಿ ಶ್ರುತೇಃ। ಅದಿತಿಮಖಂಡನೀಯಾಮದೀನಾಂ ವಾ ದೇವಮಾತರಂ ದಕ್ಷಂ ಸರ್ವಸ್ಯ ಜಗತೋ ನಿರ್ಮಾಣೇ ಸಮರ್ಥಂ ಪ್ರಜಾಪತಿಂ । ಯದ್ವಾ ೩ ಪ್ರಾಣರೂಪೇಣ ಸರ್ವೇಷು ಪ್ರಾಣಿಷು ವ್ಯಾಪ್ಯ ವರ್ತಮಾನಂ ಹಿರಣ್ಯಗರ್ಭಂ । ಪ್ರಾಣೋ ವೈ ದಕ್ಷ ಇತಿ। ಶ್ರುತೇಃ । ಅಸ್ರಿಧಂ ಶೋಷಣರಹಿತಂ ಸರ್ವದೈಕರೂಪೇಣ ವರ್ತಮಾನಂ ಮರುದ್ಗಣಂ । ಆರ್ಯಮಣಂ । ಅರೀನ್ ಮಂದೇಹಾದೀನಸುರಾನ್ಯಚ್ಛತಿ ನಿಯಚ್ಛತೀತ್ಯರ್ಯಮಾ ಸೂರ್ಯಃ । ಅಸೌ ನಾ ಆದಿತ್ಯೋ-

र्यमेति श्रुतेः । तं । वरुणं । वृणोति पापैकृतः स्वकीयैः पाशैरावृणोतीति रात्र्यभिमानिदेवो वरुणः । श्रूयतेः च । वारुणीं रात्रिः । तै. ब्रा. ७-३-७७-७ । इति । सोमं द्युस्थानात्मानं विभज्य पृथिव्यां लतारूपेण दिवि च चंद्रात्मना देवतारूपेण वर्तमानं । अश्विनाश्वंतौ । यद्वा । सर्वं व्याप्नुवंतौ । तथा च यास्कः । अश्विनौ यदेवश्नुवाते सर्वं रसेनान्योन्यं ज्योतिषान्योन्यं श्रयेते रश्मिनावित्यौर्णवाभस्तत्त्वश्विनौ द्यावापृथिव्यावित्येकेऽहोरात्रावित्येकेः सूर्याचंद्रमसावित्येकेः राजानौ पुण्यकृतावित्यैतिहासिकाः । नि. १२-१ । इति । एवंभूतान् सर्वान्देवानस्मद्रक्षणार्थं-माह्वयामि इति पूर्वत्र संबंधः। अस्माभिराहूता सुभगा शोभनधनोपेता सरस्वतीनोऽस्मभ्यं मयः सुखं करत् । करोतु ॥ हूमहे ह्वेञाह्वोः लटि ह्वे इत्यनुवृत्तौ बहुलं छंदसीति संप्रसारणं । परपूर्वत्वे हल इति दीर्घत्वं । बहुलं छंदसीति शपो लुक् । असिधं । सिधु शोषणे । संपदादिलक्षणोः भावे क्विप् । बहुवचनाच्छ्याभावमित्युत्तरपदांतोदात्तत्वं । मयस्करत् । करोतेर्लेट्यडागमः । बहुलं छंदसीति विकरणस्य लुक् । अतः कृकमिकंसकुंभपात्रकुशाकर्णीष्वनित्यसिति प्रकृतिभावः ॥

॥ पदार्थ ॥

वयं—ನಾವು । **भगं**—ಭಗನನ್ನೂ । **मित्रं**—ಮಿತ್ರನನ್ನೂ । **अदितिं**—ಅದಿತಿಯನ್ನೂ । **दक्षं**—ದಕ್ಷನನ್ನೂ । **असिधं**—ಅಸಿಧನನ್ನೂ । **अर्यमणं**—ಅರ್ಯಮನನ್ನೂ । **वरुणं**—ವರುಣನನ್ನೂ । **सोमं**—ಸೋಮನನ್ನೂ । **अश्विना**—ಅಶ್ವಿನೀದೇವತೆಗಳನ್ನೂ । **तान्**—ಈ ಎಲ್ಲಾ ದೇವತೆಗಳನ್ನೂ । **पूर्वया**—ಪ್ರಾಚೀನಕಾಲದಿಂದ (ಅನಾದಿಯಾಗಿ) ಬಂದ । **निविदा**—ವೇದಾತ್ಮಕವಾದ ವಾಕ್ಯಿಸಿಂದ । **हूमहे**—ಪ್ರಾರ್ಥಿಸಿ ಕರೆಯುತ್ತೇನೆ । **सुभगा**—ಶ್ರೇಷ್ಠವಾದ ಧನದಿಂದ ಕೂಡಿದ । **सरस्वती**—ಸರಸ್ವತಿಯು । **नः**—ನನಗೆ । **मयः**—ಸುಖವನ್ನು । **करत्**-ಉಂಟುಮಾಡಲಿ ।

ಭಾವಾರ್ಥ

ನಾವು ದೇವತೆಗಳ ಗುಂಪಿಗೆ ಸೇರಿದ ಭಗನನ್ನೂ, ಮಿತ್ರನನ್ನೂ, ಅದಿತಿಯನ್ನೂ, ದಕ್ಷನನ್ನೂ, ಅಸಿಧನನ್ನೂ, (ಪುರುದ್ಗಣವನ್ನು) ಅರ್ಯಮನನ್ನೂ, ವರುಣನನ್ನೂ, ಸೋಮನನ್ನೂ, ಅಶ್ವಿನೀದೇವತೆಗಳನ್ನೂ ಅನಾದಿಯಾಗಿ ಬಂದ ವೇದಾತ್ಮಕವಾದ ವಾಕ್ಯಿಸಿಂದ ಪ್ರಾರ್ಥಿಸಿ ಕರೆಯುತ್ತೇವೆ. ಶ್ರೇಷ್ಠವಾದ ಧನದಿಂದ ಕೂಡಿದ ಸರಸ್ವತಿಯು ನನಗೆಸುಖವನ್ನುಂಟುಮಾಡಲಿ.

English Translation

We invoke them with an ancient speech Bhaga, Mitra, Aditi, Daksha, Asridh, Aryaman, Varuna, Soma, the Aswins; and may the gracious Saraswati grant us happiness.

॥ ವಿಶೇಷವಿಷಯಗಳು ॥

ನಿವಿದಾ—ಶ್ಲೋಕಃ ಧಾರಾ ಮೊದಲಾದ ಐವತ್ತೇಳು ವಾಜ್ಞಾಮಗಳ ಮಧ್ಯದಲ್ಲಿ ನಿವಿತ್ ಎಂಬ ಶಬ್ದವು ಪಠಿತವಾಗಿರುವುದರಿಂದ ನಿವಿದಾ ಎಂದರೆ ವಾಕ್ಯದಿಂದ ಅಥವಾ ವೇದಾತ್ಮಕವಾದ ವಾಕ್ಯದಿಂದ ಎಂದರ್ಥವು. (ನಿ. ೨-೨೩) ಅಥವಾ ವೈಶ್ವದೇವಶಸ್ತ್ರಮಂತ್ರಪಠನದಲ್ಲಿ ನಿವಿತ್ ಎಂಬ ಮಂತ್ರದಿಂದ.

ಭಗಂ—**ಭಜನೀಯಂ** । ಭಜಿಸಲ್ಪಡಲರ್ಹನಾದ. ಅಥವಾ ದ್ವಾದಶಾದಿತ್ಯರಲ್ಲಿ ಒಬ್ಬನು.

ಮಿತ್ರಂ—ಮಿತ್ರನು ಅಹರಭಿಮಾನಿದೇವತೆಯು. ಈ ವಿಷಯದಲ್ಲಿ **ಮೈತ್ರಂ ವಾ ಅಹಃ** (ತೈ. ಬ್ರಾ. ೧-೭-೧೦-೧) ಎಂದು ಶ್ರುತಿವಾಕ್ಯವಿರುವುದು. ಈ ಶಬ್ದಕ್ಕೆ ಯಾಸ್ಕರು—**ಮಿತ್ರಃ ಪ್ರಮಿನೋತೇಸ್ತ್ರಾಯತೇ । ಸಮ್ಮಿನ್ವಾನೋ ದ್ರವತೀತಿ ವಾ । ಮೇದಯತೇರ್ವಾ** ॥ ಎಂದರೆ ಮರಣದಿಂದ ಕಾಪಾಡುವನಾದುದರಿಂದ ಈ ದೇವತೆಗೆ ಮಿತ್ರನೆಂದು ಹೆಸರು. ಅಥವಾ ಸುತ್ತಲೂ ಚೆನ್ನಾಗಿ ಅಂತರಿಕ್ಷದಲ್ಲಿ ಉದಕ ರೂಪವಾದ ಮಳೆಯನ್ನು ಸುರಿಸಿ ಎಲ್ಲ ವನ್ನೂ ನೆನೆಯುವಂತೆ ಮಾಡುವವನಾದುದರಿಂದ ಮಿತ್ರನೆಂದು ಹೆಸರು. ಸಮಸ್ತವನ್ನೂ ಉದಕದಿಂದ ಸೇಚನೆಮಾಡು ವುದರಿಂದ ಮಿತ್ರನೆಂದು ಹೆಸರು ಎಂದು ಹೇಳಿ—

ಮಿತ್ರೋ ಜನಾನ್ ಯಾತಯತಿ ಬ್ರುವಾಣೋ ಮಿತ್ರೋ ದಾಧಾರ ಪೃಥಿವೀಮುತ ದ್ಯಾಂ ।
ಮಿತ್ರಃ ಕೃಷ್ಟೀರನಿಮಿಷಾ ೞಭಿಚಷ್ಟೇ ಮಿತ್ರಾಯ ಹವ್ಯಂ ಘೃತವಜ್ಜುಹೋತ ॥
(ಋ. ಸಂ. ೩-೫೯-೧)

ಎಂಬ ಉದಾಹರಣೆಯನ್ನು ಅರ್ಥಸಮರ್ಥನೆಗಾಗಿ ಕೊಟ್ಟಿರುವರು.

ಅದಿತಿಂ—**ದೇವಮಾತರಂ** । ದೇವತೆಗಳಿಗೆ ತಾಯಿಯಾದ ಅದಿತಿಯು. ಈ ಶಬ್ದಕ್ಕೆ ಯಾಸ್ಕರ ನಿರ್ವಚನವು ಈ ರೀತಿ ಇರುವುದು.

ಅಥಾತೋ ಮಧ್ಯಸ್ಥಾನಾಃ ಸ್ತ್ರಿಯಃ । ತಾಸಾಮದಿತಿಃ ಪ್ರಥಮಾಗಾಮಿನೀ ಭವತಿ । ಅದೀನಾ ದೇವಮಾತಾ ।

ಸ್ತ್ರೀದೇವತೆಗಳು ಮಧ್ಯಮಸ್ಥಾನ ದೇವತೆಗಳು (ಅಂತರಿಕ್ಷದೇವತೆಗಳು) ಅವರಲ್ಲಿ ಅದಿತಿಯೇ ಹೊದಲನೆಯವಳು. ಅದಿತಿ ಎಂದರೆ ದೀನಳಲ್ಲದ ದೇವಮಾತೆಯೆಂದರ್ಥವು. ಮತ್ತು ಅದಿತಿಯ ವಿಚಾರವಾಗಿ—

ಅದಿತಿರ್ದ್ಯೌರದಿತಿರಂತರಿಕ್ಷಮದಿತಿರ್ಮಾತಾ ಸ ಪಿತಾ ಸ ಪುತ್ರಃ ।
ವಿಶ್ವೇ ದೇವಾ ಅದಿತಿಃ ಪಂಚಜನಾ ಅದಿತಿರ್ಜಾತಮದಿತಿರ್ಜನಿತ್ವಂ ॥
(ಋ. ಸಂ. ೧-೮೯-೧೦)

ಇತ್ಯದಿತೇರ್ವಿಭೂತಿಮಾಚಷ್ಟೇ । **ಏನಾನ್ಯದೀನಾನೀತಿ ವಾ** ॥ (ನಿ. ೪-೨೩) ಎಂದು ಹೇಳಿ ಅದಿತಿಯ ಮಹಿಮೆಯನ್ನು ಈ ಋಕ್ಕು ವಿಶದಪಡಿಸುವುದೆಂದು ಹೇಳಿರುವರು.

ದಕ್ಷಂ—**ಸರ್ವಸ್ಯ ಜಗತೋ ನಿರ್ಮಾಣೇ ಸಮರ್ಥಂ ಪ್ರಜಾಪತಿಂ** । ಸಮಸ್ತಜಗತ್ತನ್ನೂ ಸೃಷ್ಟಿಸುವ ಸಾಮರ್ಥ್ಯವುಳ್ಳ ಪ್ರಜಾಪತಿಯು. ಅಥವಾ **ಪ್ರಾಣರೂಪೇಣ ಸರ್ವೇಷು ಪ್ರಾಣಿಷು ವ್ಯಾಪ್ಯ ವರ್ತಮಾನಂ ಹಿರಣ್ಯಗರ್ಭಂ** । **ಪ್ರಾಣೋ ವೈ ದಕ್ಷ ಇತಿ ಶ್ರುತೇಃ** ॥ ದಕ್ಷ ಎಂದರೆ ಪ್ರಾಣನೆಂದು ಶ್ರುತಿವಾಕ್ಯವಿರುವುದು. ಆದು

ದರಿಂದ ಪ್ರಾಣರೂಪದಿಂದ ಸರ್ವಪ್ರಾಣಿಗಳಲ್ಲಿಯೂ ವ್ಯಾಪಿಸಿ ಇರುವವನಾದುದರಿಂದ ಹಿರಣ್ಯಗರ್ಭನೆಂದೂ ಹೇಳ ಬಹುದು. ಯಾಸ್ಕರು ದಕ್ಷ ಶಬ್ದಕ್ಕೆ ಇನ್ನೊಂದು ಅರ್ಥವನ್ನು ಹೇಳಿರುವರು—

ಆದಿತ್ಯೋ ದಕ್ಷ ಇತ್ಯಾಹುರಾದಿತ್ಯಮುಪ್ಯೇ ಚ ಸ್ತುತಃ । (ನಿ. ೧೧-೨೪) ದಕ್ಷ ಎಂದರೆ ಆದಿತ್ಯ ನಿಗೂ ಹೆಸರು. ಏಕೆಂದರೆ ದ್ವಾದಶಾದಿತ್ಯರ ಮಧ್ಯದಲ್ಲಿ ದಕ್ಷನೂ ಸೇರಿದವನು. ಉದಾಹರಣೆಗಾಗಿ—

ಅದಿತೇರ್ದಕ್ಷೋ ಅಜಾಯತ ದಕ್ಷಾದ್ವದಿತಿಃ ಪರಿ ॥
(ಋ. ಸಂ. ೧೦-೭೨-೪)

ಎಂಬ ಋಕ್ಕನ್ನು ಕೊಟ್ಟಿರುವರು.

ಅರ್ಯಮಣಂ—ಅರೀನ್ ಮಂದೇಹಾದೀನಸುರಾನ್ಯಚ್ಛತಿ ನಿಯಚ್ಛತೀತ್ಯರ್ಯಮಾ ಸೂರ್ಯಃ । ಮಂದೇಹ ಎಂಬ ಹೆಸರಿನ ಅಸುರರಾದ ಶತ್ರುಗಳನ್ನು ನಿಗ್ರಹಮಾಡುವುದರಿಂದ ಈ ದೇವನಿಗೆ ಅರ್ಯಮಾ ಎಂದು ಹೆಸರು. **ಅಸೌ ವಾ ಆದಿತ್ಯೋ೨ರ್ಯಮಾ** ಎಂದು ಶ್ರುತಿವಾಕ್ಯವಿರುವುದು. ಅರ್ಯಮಾ ಎಂದರೆ ಸೂರ್ಯನು, ದ್ವಾದಶಾದಿತ್ಯರಲ್ಲಿ ಒಬ್ಬನು.

ಅಸ್ರಿಧಂ—ಶೋಷಣರಹಿತಂ ಸರ್ವದೈಕರೂಪೇಣ ವರ್ತಮಾನಂ ಮರುದ್ಗಣಂ । ಶೋಷಣರಹಿತವಾದ ಮತ್ತು ಯಾವಾಗಲೂ ಒಂದೇರೂಪದಿಂದ ಇರುವ ಮರುದ್ಗಣವು.

ವರುಣಂ—ವೃಣೋತಿ ಪಾಪಕೃತಃ ಸ್ವಕೀಯೈಃ ಪಾಶೈರಾವೃಣೋತೀತಿ ರಾತ್ರ್ಯಭಿಮಾನಿದೇವೋ ವರುಣಃ । **ಶ್ರೂಯತೇ ಚ** । **ವಾರುಣೀ ರಾತ್ರಿಃ** (ತೈ. ಬ್ರಾ. ೧-೭-೧೦-೧) ಪಾಪಮಾಡಿದವರನ್ನು ತನ್ನ ಪಾಶಗಳಿಂದ ಆವರಿಸುವವನು. ಮತ್ತು ಈ ವರುಣನು ರಾತ್ರ್ಯಭಿಮಾನಿದೇವತೆಯೆಂದು ಶ್ರುತಿವಾಕ್ಯವಿರುವುದು.

ಸೋಮಂ—ದ್ಯೋಧಾತ್ಮಾನಂ ವಿಭಜ್ಯ ಪೃಥಿವ್ಯಾಂ ಲತಾರೂಪೇಣ ದಿವಿ ಚ ಚಂದ್ರಾತ್ಮನಾ ದೇವತಾ ರೂಪೇಣ ವರ್ತಮಾನಂ । ಸೋಮದೇವತೆಯು ತನ್ನನ್ನು ಎರಡಾಗಿ ವಿಭಾಗಿಸಿಕೊಂಡು ಪೃಥಿವಿಯಲ್ಲಿ ಸೋಮವೆಂಬ ಬಳ್ಳಿಯರೂಪದಿಂದಲೂ ಸ್ವರ್ಗದಲ್ಲಿ (ಅಂತರಿಕ್ಷದಲ್ಲಿ) ಚಂದ್ರನೆಂಬ ದೇವತಾರೂಪದಿಂದಲೂ ಇರುವನು.

ಅಶ್ವಿನಾ—ಅಶ್ವಿನಾಶ್ವವಂತೌ । **ಯದ್ವಾ ಸರ್ವಂ ವ್ಯಾಪ್ನುವಂತೌ** । ಅಶ್ವಗಳುಳ್ಳವರಾದುದರಿಂದ ಇವರಿಗೆ ಅಶ್ವಿನೀದೇವತೆಗಳೆಂದು ಹೆಸರು ಅಥವಾ ಸರ್ವವನ್ನೂ ವ್ಯಾಪಿಸಿ ಇರುವವರಾದ್ದರಿಂದ ಇವರಿಗೆ ಅಶ್ವಿನೀದೇವತೆಗಳೆಂದು ಹೆಸರು. ಯಾಸ್ಕರು—

ಅಶ್ನಿನೌ ಯದ್ವ್ಯಶ್ನುತೇ ಸರ್ವಂ ರಸೇನಾನ್ಯೋ ಜ್ಯೋತಿಷಾನ್ಯಃ । **ಅಶ್ವಿರಶ್ನಿನಾವಿತ್ಯೌರ್ಣವಾಭಃ** । **ತತ್ತ್ವವಶ್ವಿನೌ ದ್ಯಾವಾಪೃಥಿವೀತ್ಯೇಕೇ** । **ಅಹೋರಾತ್ರಾವಿತ್ಯೇಕೇ** । **ಸೂರ್ಯಾಚಂದ್ರಮಸಾವಿತ್ಯೇಕೇ** ।

ರಾಜಾನೌ ಪುಣ್ಯಕೃತಾವಿತ್ಯೈತಿಹಾಸಿಕಾಃ । (ನಿ. ೧೨-೧)

ಎಂದರೆ ಅಶ್ವಿನೀದೇವತೆಗಳು ಸಮಸ್ತವನ್ನೂ ಬುವಕದಿಂದ ವ್ಯಾಪಿಸುವವರಾದುದರಿಂದ ಇವರಿಗೆ ಅಶ್ವಿನೀದೇವತೆಗಳೆಂಬ ಹೆಸರು ಬಂದಿರುವುದೆಂದು ಕೆಲವರೂ, ಪ್ರಕಾಶದಿಂದ ಸರ್ವವನ್ನೂ ವ್ಯಾಪಿಸುವವರಾದ್ದರಿಂದ

ಅಶ್ವಿನೀದೇವತೆಗಳೆಂದು ಮತ್ತೆ ಕೆಲವರೂ ಹೇಳುವರು. ಅಶ್ವಗಳುಳ್ಳ (ಕುದುರೆ) ವರಾದುರಿಂದ ಇವರು ಅಶ್ವಿನೀ ದೇವತೆಗಳೆಂದು ಕರೆಯಲ್ಪಡುವರೆಂದು ಔರ್ಣವಾಭನೆಂಬ ಋಷಿಯು ಹೇಳುವನು. ಈ ಅಶ್ವಿನೀದೇವತೆಗಳು ಯಾರು ? ಯಾವ ದೇವತೆಗಳು ಎಂದರೆ, ದ್ಯಾವಾಪೃಥಿವೀ-ಸ್ವರ್ಗಭೂಮಿಗಳು ಎಂದು ಕೆಲವರೂ, ಅಹೋರಾತ್ರಿಗಳೆಂದು ಲವರೂ, ಸೂರ್ಯಚಂದ್ರರೆಂದು, ಕೆಲವರೂ ಹೇಳುವರು. ವಿಶೇಷವಾಗಿ ಪುಣ್ಯಕಾರ್ಯಗಳನ್ನು ಮಾಡಿದ ಇಬ್ಬರು ರಾಜರುಗಳ ಹೆಸರೆಂದು ಇತಿಹಾಸಕಾರರು ಹೇಳುವರು.

ಸರಸ್ವತೀ—ಸರಸ್ವತೀ ಎಂಬ ದೇವತೆಯು. ಈ ದೇವತೆಯ ವಿಷಯವಾಗಿ ನಾವು ಋ. ಸಂ. ಭಾಗ ೨. ಪೇಜು 69-77 ಗಳಲ್ಲಿ ವಿಸ್ತಾರವಾಗಿ ಬರೆದಿರುವ ವಿವರಣೆಯನ್ನು ನೋಡಿ

ಮಯಃ—ಶಂಬಾತಾ, ಶತರಾ ಮೊದಲಾದ ಇಪ್ಪತ್ತು ಸುಖನಾಮಗಳ ಮಧ್ಯದಲ್ಲಿ ಮಯಃಶಬ್ದವು ಪಠಿತವಾಗಿರುವುದರಿಂದ ಮಯಃ ಎಂದರೆ ಸುಖವೆಂದರ್ಥವು (ನಿ. ೩-೧೩)

ವ್ಯಾಕರಣಪ್ರಕ್ರಿಯಾ

ಹೂನುಹೇ — ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ. ಧಾತು. ಲಟ್‌ಉತ್ತಮಪುರುಷಬಹುವಚನದ ಮಹಿಙ್ ಪ್ರತ್ಯಯ. **ಟಿತ ಆತ್ಮನೇ**—ಎಂಬುದರಿಂದ ಏತ್ವ. **ಹ್ವ೯ಃ ಸಂಪ್ರಸಾರಣಮ್**—ಸೂತ್ರದಿಂದ ಹ್ವಯಃ ಎಂದು ಅನುವೃತ್ತವಾಗುವಾಗ **ಬಹುಲಂ ಛಂದಸಿ**—ಎಂಬುದರಿಂದ ಧಾತುವಿಗೆ ಸಂಪ್ರಸಾರಣ. **ಸಂಪ್ರಸಾರಣಾಚ್ಚ**—ಎಂಬುದರಿಂದ ಪೂರ್ವರೂಪ. ಹುಮಹೆ ಎಂದಿರುವಾಗ **ಹಲಃ** (ಪಾ. ಸೂ. ೬-೪-೨) ಆಂಗಾವಯವವಾದ ಹಲಿನ ಪರವಲ್ಲಿರುವ ಸಂಪ್ರಸಾರಣಕ್ಕೆ ದೀರ್ಘ ಬರುತ್ತದೆ ಎಂಬುದರಿಂದ ಉಕಾರಕ್ಕೆ ದೀರ್ಘ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಲುಕ್. ಅತಿಜಂತರ ಪರವಲ್ಲಿರುವುದರಿಂದ ತಿಜಂತನಿಘಾತಸ್ವರ ಬರುತ್ತದೆ

ಅಸ್ಮಿಧಮ್—ಸ್ಮಿಧು ಶೋಷಣೇ ಧಾತು. ಸಂಪದಾದಿಯಲ್ಲಿ ಸೇರಿರುವುದರಿಂದ ಭಾವಾರ್ಥದಲ್ಲಿ **ಸಂಪದಾದಿಭ್ಯಃ ಕ್ವಿಪ್**—ಎಂಬುದರಿಂದ ಕ್ವಿಪ್‌ಪ್ರತ್ಯಯ. ಸ್ಮಿಧ್‌ಶಬ್ದವಾಗುತ್ತದೆ. ನ ವಿದ್ಯತೇ ಸ್ಮಿಧ್ ಯಸ್ಯ ಸ ಅಸ್ಮಿಧ್ ತಮ್ ಅಸ್ಮಿಧಮ್ ಬಹುವ್ರೀಹಿ ಸಮಾಸವಾದಾಗ **ನಞ್‌ಸುಭ್ಯಾಮ್**—ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ

ಅಶ್ವಿನಾ—ಅಶ್ವಿನ್‌ಶಬ್ದ. ದ್ವಿತೀಯಾ ದ್ವಿವಚನ ಪರವಾದಾಗ **ಸುಪಾಂ ಸುಲುಕ್**—ಎಂಬುದರಿಂದ ವಿಭಕ್ತಿಗೆ ಆಕಾಂಆದೇಶ

ಮಯಸ್ಕರತ್—ಮಯಃ ಕರತ್. ಡುಕೃಞ್ ಕರಣೇ ಧಾತು. ಲೇಟ್ ಪ್ರಥಮಪುರುಷಏಕವಚನದಲ್ಲಿ ತಿಪ್‌ಪ್ರತ್ಯಯ. **ಇತಶ್ಚ ಲೋಪಃ ಪರಸ್ಮೈಪದೇಷು** (ಪಾ. ಸೂ. ೩-೪-೯೭) ಎಂಬುದರಿಂದ ಅದರ ಇಕಾರಕ್ಕೆ ಲೋಪ **ಲೇಟೋಽಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಅಡಾಗಮ. **ಬಹುಲಂ ಛಂದಸಿ**—ಎಂಬುದರಿಂದ ವಿಕರಣಕ್ಕೆ (ಉ) ಲುಕ್. ಪ್ರತ್ಯಯನಿಮಿತ್ತವಾಗಿ **ಸಾರ್ವಧಾತುಕಾರ್ಧಧಾತುಕಯೋಃ**—ಎಂಬುದರಿಂದ ಧಾತುವಿನ ಇಕಿಗೆ ಗುಣ. ಮಯಃ+ಕರತ್ ಎಂದಿರುವಾಗ ಜಿಹ್ವಾಮೂಲೀಯವು ಪ್ರಾಪ್ತವಾದರೆ

ಅತಃಕೃಕಮಿಕಂಸ—(ಪಾ. ಸೂ. ೮-೩-೪೬) ಎಂಬುದರಿಂದ ಅಕಾರದ ಪರದಲ್ಲಿರುವುದರಿಂದ ವಿಸರ್ಗಕ್ಕೆ ಸತ್ವ ಮುಯಸ್ಪರತ್ ಎಂಬಲ್ಲಿ ತಿಙಂತಕ್ಕೆ **ತಿಙ್ಶಿತಿಙಃ**–ಎಂಬುದರಿಂದ ನಿಘಾತಸ್ವರ ಬರುತ್ತದೆ. ॥ ೩ ॥

ಸಂಹಿತಾಪಾಠಃ

ತನ್ನೋ ವಾತೋ ಮಯೋಭು ವಾತು ಭೇಷಜಂ ತನ್ಮಾತಾ
ಪೃಥಿವೀ ತತ್ಪಿತಾ ದ್ಯೌಃ।
ತದ್ಗ್ರಾವಾಣಃ ಸೋಮಸುತೋ ಮಯೋಭುವಸ್ತದಶ್ವಿನಾ ಶೃ-
ಣುತಂ ಧಿಷ್ಣ್ಯಾ ಯುವಂ ॥ ೪ ॥

॥ ಪದಪಾಠಃ ॥

ತತ್ । ನಃ । ವಾತಃ । ಮಯಃ ಽ ಭು । ವಾತು । ಭೇಷಜಂ । ತತ್ । ಮಾತಾ ।
ಪೃಥಿವೀ । ತತ್ । ಪಿತಾ । ದ್ಯೌಃ ।

ತತ್ । ಗ್ರಾವಾಣಃ । ಸೋಮು ಽ ಸುತಃ । ಮಯಃ ಽ ಭುವಃ । ತತ್ । ಅಶ್ವಿನಾ ।
ಶೃಣುತಂ । ಧಿಷ್ಣ್ಯಾ । ಯುವಂ ॥ ೪ ॥

ಸಾಯಣಭಾಷ್ಯಂ

ವಾತೋ ವಾಯುಸ್ತದ್ಭೇಷಜಮೌಷಧಂ ನೋ ಽಸ್ಮಾನ್ವಾತು। ಪ್ರಾಪಯತು। ಯದ್ಭೇಷಜಂ ಮಯೋಭು ಮಯಸಃ ಸುಖಸ್ಯ ಭಾವಯಿತೃ। ಮಾತಾ ಸರ್ವೇಷಾಂ ಜನನೀ ಪೃಥಿವೀ ಭೂಮಿರಪಿ ತದ್ಭೇಷಜಮಸ್ಮಾನ್ಪ್ರಾಪಯತು। ಪಿತಾ ವೃಷ್ಟಿಪ್ರದಾನೇನ ಸರ್ವೇಷಾಂ ರಕ್ಷಿತಾ ದ್ಯೌರ್ದ್ಯುಲೋಕೋ ಽಪಿ ತದ್ಭೇಷಜಮಸ್ಮಾನ್ಪ್ರಾಪಯತು। ಸೋಮಸುತಃ ಸೋಮಾಭಿಷವಂ ಕೃತವಂತೋ ಮಯೋಭುವೋ ಮಯಸೋ ಯಾಗಫಲಭೂತಸ್ಯ ಸುಖಸ್ಯ ಭಾವಯಿತಾರೋ ಗ್ರಾವಾಣೋ ಽಭಿಷವಸಾಧನಾಃ ಪಾಷಾಣಾಶ್ಚ ತದ್ಭೇಷಜಮಸ್ಮಾನ್ಪ್ರಾಪಯಂತು। ಹೇ ಧಿಷ್ಣ್ಯಾ। ಧಿಷಣಾ ಬುದ್ಧಿಃ। ತದಧಿಷ್ಠಾತೃತ್ವಾದ್ಯುವಾಂ ಅಶ್ವಿನೌ

युवाम् तद्भेषजं शृणुतं । आकर्णयेतं । यद्भेषजमस्माभिर्वाय्यादिषु स्वार्थ्यतेः। तद्भेषजं देवानां भिषजौ युवामस्माकमनुकूलं येथा भवति तथा जानीतमित्यर्थः ॥ मयोभु । हुस्वो नपुंसकेः प्रातिपदिकस्य । पा.१-२-४८ । इति ह्रस्वत्वं । वातु । वा गतिगंधनयोः । अंतर्भावितण्यर्थात्कर्तृर्थनायां लोट् । सोमसुतः । सोममे सुञः । पा. ३-२-९० । इति भूतेः क्विप् । धिष्ण्या। धिषणाशब्दादर्हार्थे ण्यंदसि चेति यः । वर्णलोपश्छांदसः । सुपां सुलुगित्याकारः ॥

ಪದಾರ್ಥ

ವಾತಃ—ವಾಯುವು। **ಮಯೋಭು**—ಸುಖದಾಯಕವಾದ। **ತತ್ ಭೇಷಜಂ**—ಆ ಔಷಧವನ್ನು। **ನಃ**—ನಮಗೆ । **ವಾತು**—ಸಾಗಿಸಿಕೊಂಡು ಬಂದು ಸೇರಿಸಲಿ । **ಮಾತಾ**—(ಸಕಲರಿಗೂ) ಜನನಿಯಾದ । **ಪೃಥಿವೀ**—ಭೂಮಿಯು । **ತತ್**—ಆ ಔಷಧವನ್ನು (ನಮಗೆ ಹೊಂದಿಸಲಿ) । **ಪಿತಾ**—(ಸಕಲರಿಗೂ) ರಕ್ಷಕನಾದ । **ದ್ಯೌಃ**—ದ್ಯುಲೋಕವೂ ಕೂಡ । **ತತ್**—ಆ ಔಷಧವನ್ನು(ನಮಗೆ ಹೊಂದಿಸಲಿ)। **ಸೋಮಸುತಃ**—ಸೋಮರಸವನ್ನು ಹಿಂಡುವುವೂ । **ಮಯೋಭುವಃ**—ಸುಖದಾಯಕವಾದವೂ ಆದ। **ಗ್ರಾವಾಣಃ**—ಹಿಂಡುವ ಕಲ್ಲುಗಳು। **ತತ್**—ಆ ಔಷಧವನ್ನು (ನಮಗೆ ಹೊಂದಿಸಲಿ) । **ಧಿಷ್ಣ್ಯಾ**—ಧ್ಯಾನಕ್ಕೆ ಯೋಗ್ಯರಾದ ಅಶ್ವಿದೇವತೆಗಳೇ। **ಯುವಂ**—ನೀವೂ ಸಹ । **ಶೃಣುತಂ**—(ಆ ಔಷಧಿಗಾಗಿ ಮಾಡುವ ನಮ್ಮ ಪ್ರಾರ್ಥನೆಯನ್ನು) ಕೇಳಿರಿ. ॥

ಭಾವಾರ್ಥ

ವಾಯುವು ಸುಖದಾಯಕವಾದ ಆ ಔಷಧವನ್ನು ನಮಗೆ ಸಾಗಿಸಿಕೊಂಡು ಬಂದು ಸೇರಿಸಲಿ. ಸಕಲರಿಗೂ ಜನನಿಯಾದ ಭೂಮಿಯೂ, ರಕ್ಷಕವಾದ ದ್ಯುಲೋಕ, ಸುಖದಾಯಕವಾದ, ಸೋಮರಸವನ್ನು ಹಿಂಡುವ ಕಲ್ಲುಗಳೂ ಆ ಔಷಧವನ್ನು ನಮಗೆ ತಂದು ಸೇರಿಸಲಿ. ಧ್ಯಾನಕ್ಕೆ ಯೋಗ್ಯರಾದ ಅಶ್ವಿನೀದೇವತೆಗಳೇ, ನೀವೂ ಸಹ ಆ ಔಷಧಿಗಾಗಿ ಮಾಡುವ ನಮ್ಮ ಪ್ರಾರ್ಥನೆಯನ್ನು ಕೇಳಿರಿ.

English Translation

May the wind waft to us the grateful medicament ; may mother earth, may father heaven, convey it to us ; may the stones that express the Soma-juice and are productive of pleasure bring it to us ; Aswins, who are to be meditated upon hear our prayer.

ವಿಶೇಷ ವಿಷಯಗಳು

ಮಯೋಭು—ಸುಖಸ್ಯ ಭಾವಯಿತೃ । ಸುಖವನ್ನುಂಟುಮಾಡುವ

ತದ್ಭೇಷಜಂ—ಆ ಔಷಧವನ್ನು ಎಂದರೆ, ಯಾವ ಔಷಧದಿಂದ ನಮಗೆ ಸುಖವುಂಟಾಗುವುದೋ ಆ ಔಷಧವನ್ನು. ಇಲ್ಲಿ ತಚ್ಛಬ್ದಮಾತ್ರ ವಿರುವುದರಿಂದ ಯತ್ ತಚ್ಛಬ್ದವನ್ನು ಅಧ್ಯಾಹಾರಮಾಡಿಕೊಳ್ಳಬೇಕು. ಭೇಷಜ

ಶಬ್ದಕ್ಕೆ ಭಾಷ್ಯಕಾರರು ಅರ್ಥವಿವರಣೆಯನ್ನು ಕೊಟ್ಟಿಲ್ಲ. **ಭೇಷಜಂ** ಎಂಬ ಶಬ್ದಕ್ಕೆ ಔಷಧವೆಂಬ ಅರ್ಥವಲ್ಲದೆ ಬೇರೆ ಬೇರೆ ಅರ್ಥಗಳನ್ನು ಹೇಳಬಹುದು.

ಮಾತಾ ಪೃಥಿವೀ ಪಿತಾ ದ್ಯೌಃ—ಪೃಥಿವಿಯನ್ನು ತಾಯಿಯೆಂದೂ, ದ್ಯೌಃ ಎಂದರೆ ಸ್ವರ್ಗವನ್ನು ತಂದೆಯೆಂದೂ ಕರೆಯುವ ಪದ್ಧತಿಯು ಋಗ್ವೇದದಲ್ಲಿ ವಿಶೇಷವಾಗಿರುವುದು. ಭೂಮಿಯು ಸಸ್ಯಾದಿಗಳನ್ನು ಉತ್ಪತ್ತಿ ಮಾಡುವುದರಿಂದಲೂ, ದ್ಯೌಃ (ಅಂತರಿಕ್ಷವು) ಮಳೆಯನ್ನು ಸುರಿಸುವುದರಿಂದಲೂ, ಇವರಿಬ್ಬರೂ ಪ್ರಪಂಚದಲ್ಲಿರುವ ಪ್ರಾಣಿಗಳನ್ನು ಪೋಷಿಸುವರೆಂಬಭಿಪ್ರಾಯವು.

ಗ್ರಾವಾಣಃ ಸೋಮಸುತಃ—ಸೋಮಲತೆಯನ್ನು ಜಜ್ಜುವುದಕ್ಕಾಗಿ ಉಪಯೋಗಿಸುವ ಕಲ್ಲುಗಳು.

॥ ವ್ಯಾಕರಣಸ್ಯಕ್ರಿಯಾ ॥

ಮುಯೋಭು—ಮುಯಸಃ ಭೂಃ ಮುಯೋಭೂಃ ಭೂ ಸತ್ತಾಯಾಂ ಧಾತು. ಡಜಂತರ ಮೇಲೆ ಕ್ವಿಪ್ ಪ್ರತ್ಯಯ. **ಡೇರನಿಟಿ**-ಸೂತ್ರದಿಂದ ಡಲೋಪ. ಮುಯೋಭೂ ಎಂದಿರುವಾಗ **ಹ್ರಸ್ವೋನಪುಂಸಕೇ ಪ್ರಾತಿಪದಿಕಸ್ಯ** (ಪಾ. ಸೂ. ೧-೨-೪೭) ಎಂಬುದರಿಂದ ನಪುಂಸಕದಲ್ಲಿ ಹ್ರಸ್ವ ಬರುತ್ತದೆ ಇದಕ್ಕೆ ಸುಪರವಾದಾಗ **ಸ್ವೌರ್ನಪುಂಸಕಾತ್**-ಎಂಬುದರಿಂದ ಸುವಿಗೆ ಲುಕ್. **ಗತಿಕಾರಕೋಪಪದಾತ್ಕೃತ್**-ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ವಾತು—ವಾ ಗತಿಗಂಧನಯೋಃ ಧಾತು. ಅದಾದಿ. ಡಜಂತರ್ಥವು (ಪ್ರೇರಣಾ) ಧಾತ್ವರ್ಥಾಂತರ್ಭೂತವಾಗಿರುವಾಗ ಪ್ರಾರ್ಥನಾರೂಪ ಅರ್ಥದಲ್ಲಿ ಲೋಟ್. **ಏರುಃ**-ಎಂಬುದರಿಂದ ಪ್ರತ್ಯಯ ಇಕಾರಕ್ಕೆ ಉತ್ವ. **ಆದಿಪ್ರಭೃತಿಭ್ಯಃಶಪಃ**-ಎಂಬುದರಿಂದ ಶಪಿಗೆ ಲುಕ್. ಅತಿಜಂತರ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸೋಮಸುತಃ—ಸುಙ್ ಅಭಿಷವೇ ಧಾತು. **ಧಾತ್ವಾದೇಃ ಷಃಸಃ**-ಎಂಬುದರಿಂದ ಆದಿಗೆ ಸತ್ವ. **ಸೋಮೇ ಸುಞಃ** (ಪಾ. ಸೂ. ೩-೩-೯೦) ಎಂಬುದರಿಂದ ಇದಕ್ಕೆ ಸೋಮಶಬ್ದ ಉಪಪದವಾಗಿರುವಾಗ ಭೂತಾರ್ಥದಲ್ಲಿ ಕ್ವಿಪ್.ಪಿತ್ ಪ್ರತ್ಯಯ ಸರದಲ್ಲಿರುವುದರಿಂದ **ಹ್ರಸ್ವಸ್ಯ ಪಿತಿ ಕೃತಿ ತುಕ್** ಎಂಬುದರಿಂದ ಧಾತುವಿನ ಉಕಾರಕ್ಕೆ ತುಗಾಗಮ. ಸೋಮಸುತ್ ಶಬ್ದವಾಗುತ್ತದೆ. **ಗತಿಕಾರಕೋಪಪದಾತ್ಕೃತ್**—ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ. ಪ್ರಥಮಾಬಹುವಚನಾಂತರೂಪ.

ಅಶ್ವಿನಾ—ಪ್ರಥಮಾದ್ವಿವಚನಕ್ಕೆ **ಸುಪಾಂ ಸುಲುಕ್**-ಎಂಬುದರಿಂದ ಆಕಾರಾದೇಶ.

ಶೃಣುತಮ್—ಶ್ರು ಶ್ರವಣೇ ಧಾತು. ಲೋಟ್ ಮಧ್ಯಮಪುರುಷ ದ್ವಿವಚನಕ್ಕೆ **ತಸ್ಥಸ್ಥ**—ಸೂತ್ರದಿಂದ ತಮಾದೇಶ. **ಶ್ರುವಃ ಶೃಚೆ** (ಪಾ. ಸೂ. ೩-೧-೭೪) ಎಂಬುದರಿಂದ ಶ್ನುವಿಕರಣ. ಪ್ರಕೃತಿಗೆ ಶೃಆದೇಶ. **ಋವರ್ಣಾನ್ನಸ್ಯ ಣತ್ವಂ ವಾಚ್ಯಮ್**—ಎಂಬುದರಿಂದ ನಕಾರಕ್ಕೆ ಣತ್ವ. **ಸಾರ್ವಧಾತುಕಮಪಿತ್**—ಎಂಬುದರಿಂದ ಪ್ರತ್ಯಯಕ್ಕೆ ಪಿತ್ವವಿರುವುದರಿಂದ ತಸ್ಸಿಗೆ ಮಿತ್ತ್ವವಾಗಿ ಗುಣ ಬರುವುದಿಲ್ಲ. ತಿಜಂತನಿಘಾತಸ್ವರ ಬರುತ್ತದೆ.

ಧಿಷ್ಣ್ಯಾ—ಧಿಷಣಾಶಬ್ದ. ಇದಕ್ಕೆ ಅರ್ಹಾರ್ಥದಲ್ಲಿ **ಛಂದಸಿ ಚ** (ಪಾ. ಸೂ ೫-೧-೬೭) ಎಂಬುದರಿಂದ ಯಪ್ರತ್ಯಯ ಛಾಂದಸವಾಗಿ ಷಕಾರೋತ್ತರಾಕಾರ ಲೋಪವಾಗುತ್ತದೆ. ಸಂಬೋಧನೆ ಪ್ರಥಮಾದ್ವಿವಚನಕ್ಕೆ **ಸುಪಾಂ ಸುಲುಕ್**—ಎಂಬುದರಿಂದ ಆಕಾರಾದೇಶ. **ಆಮಂತ್ರಿತಸ್ಯ ಚ**—ಎಂಬುದರಿಂದ ನಿಘಾತಸ್ವರ ಬರುತ್ತದೆ.

ಯುವಮ್—ಯುಷ್ಮಚ್ಛಬ್ದ. ಇದಕ್ಕೆ ಪ್ರಥಮಾದ್ವಿವಚನ ಪರವಾದಾಗ **ಜಸ್ಶಸೋಃ ಶಿ**—ಎಂಬುದರಿಂದ ಅಮಾದೇಶ. **ಯುವಾವೌದ್ವಿವಚನೇ**—ಸೂತ್ರದಿಂದ ಪ್ರಕೃತಿಯ ಮಪರ್ಯಂತಕ್ಕೆ ಯುವಾದೇಶ. **ಪ್ರಥಮಾಯಾಶ್ಚಾರ್ಥೇ**—(ಪಾ. ಸೂ. ೭-೩-೮೮) ಎಂಬಲ್ಲಿ ಛಾಂದಸಾಯಾಂ ಎಂಬುದರಿಂದ ಛಂದಸಿನಲ್ಲಿ ಆತ್ವ ಬರುವುದಿಲ್ಲ. **ಶೇಷೇ ಲೋಪಃ**–ಎಂಬುದರಿಂದ ಮಪರ್ಯಂತದ ಪರಕ್ಕೆ ಲೋಪ. ॥ ೪ ॥

[redacted]

॥ ಸಂಹಿತಾಪಾಠಃ ॥

ತಮೀಶಾನಂ ಜಗತಸ್ತಸ್ಥುಷಸ್ಪತಿಂ ಧಿಯಂಜಿನ್ವಮವಸೇ ಹೂಮಹೇ ವಯಂ ।
ಪೂಷಾ ನೋ ಯಥಾ ವೇದಸಾಮಸದ್ವೃಧೇ ರಕ್ಷಿತಾ ಪಾಯುರದಬ್ಧಃ ಸ್ವಸ್ತಯೇ ॥ ೫ ॥

॥ ಪದಪಾಠಃ ॥

ತಂ । ಈಶಾನಂ । ಜಗತಃ । ತಸ್ಥುಷಃ । ಪತಿಂ । ಧಿಯಂಜಿನ್ವಂ । ಅವಸೇ ।
ಹೂಮಹೇ । ವಯಂ ।
ಪೂಷಾ । ನಃ । ಯಥಾ । ವೇದಸಾಂ । ಅಸತ್ । ವೃಧೇ । ರಕ್ಷಿತಾ । ಪಾಯುಃ ।
ಅದಬ್ಧಃ । ಸ್ವಸ್ತಯೇ ॥ ೫ ॥

ಸಾಯಣಭಾಷ್ಯಂ

ಪೂರ್ವಾರ್ಧೇನೇಂದ್ರಃ ಸ್ತೂಯತೇ । ಅಪರಾರ್ಧೇನ ಪೂಷಾ । ಈಶಾನಮೈಶ್ವರ್ಯವಂತಂ ಅತ ಏವ ಜಗತೋ ಜಂಗಮಸ್ಯ ಪ್ರಾಣಿಜಾತಸ್ಯ ತಸ್ಥುಷಃ ಸ್ಥಾವರಸ್ಯ ಚ ಪತಿಂ ಸ್ವಾಮಿನಂ ಧಿಯಂಜಿನ್ವಂ, ಧೀಭಿಃ ಕರ್ಮಭಿಃ ಪ್ರೀಣಯಿತವ್ಯಂ ಏವಂಭೂತಂ ತಮಿಂದ್ರಮವಸೇ ರಕ್ಷಣಾಯ ವಯಂ ಹೂಮಹೇ । ಆಹ್ವಯಾಮಃ । ಪೂಷಾ ನೋಽಸ್ಮಾಕಂ ವೇದಸಾಂ ಧನಾನಾಂ ವೃಧೇ ವರ್ಧನಾಯ ರಕ್ಷಿತಾ ಯಥಾಸತ್ ಯೇನ ಪ್ರಕಾರೇಣ ಭವತಿ ತೇನೈವ ಪ್ರಕಾರೇಣಾವಬ್ಧಃ ಕೇನಾಪ್ಯಹಿಂಸಿತಃ ಪೂಷಾ ಸ್ತಸ್ತಯೇಽಸ್ಮಾಕಮವಿನಾಶಾಯ ಸಾಯುಃ ರಕ್ಷಿತಾ ಭವತು ॥ ತಸ್ಥುಷಃ । ತಿಷ್ಠತೇರ್ಲಿಟಃ ಕ್ವಸುಃ । ಷಷ್ಠ್ಯೇಕವಚನೇ ವಸೋಃ ಸಂಪ್ರಸಾರಣಮಿತಿ ಸಂಪ್ರಸಾರಣಂ । ಶಾಸಿವಸಿಘುಸೀನಾಂ ಚೇತಿ ಷತ್ವಂ । ಷಷ್ಠ್ಯಾಃ ಪತಿಪುತ್ರೇತಿ ವಿಸರ್ಜನೀಯಸ್ಯ ಸತ್ವಂ । ಧಿಯಂಜಿನ್ವಂ । ಜಿನಿಃ ಪ್ರೀಣನಾರ್ಥಃ । ಕೃತ್ಯಲ್ಯುಟೋ ಬಹುಲಮಿತಿ ಬಹುಲವಚನಾತ್ಕರ್ಮಣಿ । ಇಚ ಏಕಾಚೋಽಮ್ ಪ್ರತ್ಯಯವಚ್ಚ । ಪಾ. ೬-೩-೬೮ । ಇತ್ಯಮಾಗಮಃ । ಅಸತ್ । ಅಸ ಭುವಿ । ಲೇಟ್ಯಡಾಗಮಃ । ಬಹುಲಂ ಛಂದಸೀತಿ ಶಪೋ ಲುಗಭಾವಃ । ಪಾಯುಃ । ಪಾ ರಕ್ಷಣೇ । ಕೃವಾಪಾಜೀತ್ಯುಣ್ । ಸ್ತಸ್ತಯೇ । ಸುಪೂರ್ವಾದಸ್ತೇರ್ಭಾವೇ ಕ್ತಿನ್ ಛಂದಸ್ಯುಭಯಥೇತಿ ತಸ್ಯ ಸಾರ್ವಧಾತುಕತ್ವಾದಸ್ತೇರ್ಭೂಃ । ಪಾ. ೨-೪-೫೨ । ಇತಿ ಭೂಭಾವಾಭಾವ ಇತಿ ವೃತ್ತಾವುಕ್ತಂ ॥

॥ ಪ್ರತಿಪದಾರ್ಥ ॥

ಈಶಾನಂ—ಐಶ್ವರ್ಯವಂತನೂ (ಅದ್ದರಿಂದಲೇ) । **ಜಗತಃ**—ಸಂಚರಿಸುವ ಪ್ರಾಣಿಗಳಿಗೂ । **ತಸ್ಥುಷಃ**—ಸ್ಥಾವರಜಗತ್ತಿಗೂ । **ಪತಿಂ**—ಒಡೆಯನೂ । **ಧಿಯಂಜಿನ್ವಂ**—ಶ್ರೇಷ್ಠವಾದ ಕರ್ಮಗಳಿಂದ ತೃಪ್ತಿಗೊಳಿಸಲ್ಪಡುವವನೂ ಆದ । **ತಂ**—ಆ ಇಂಪ್ರನನ್ನು । **ಅವಸೇ**—ರಕ್ಷಣೆಗಾಗಿ । **ವಯಂ**—ನಾವು । **ಹೂಮಹೇ**—ಪ್ರಾರ್ಥಿಸಿ ಕರೆಯುತ್ತೇವೆ. । **ಪೂಷಾ**—ಪೂಷದೇವನು । **ನಃ**—ನಮ್ಮ । **ವೇದಸಾಂ**—ಧನಗಳ । **ವೃಧೇ**—ಅಭಿವೃದ್ಧಿಗಾಗಿ । **ರಕ್ಷಿತಾ**—ರಕ್ಷಕನಾಗಿ । **ಯಥಾ ಅಸತ್**—ಯಾವಪ್ರಕಾರವಾಗಿ ಆಗಿರುವನೋ, (ಹಾಗೆಯೇ) । **ಅದಬ್ಧಃ**—(ಯಾರಿಂದಲೂ) ಹಿಂಸಿಸಲ್ಪಡದಿರುವವನಾಗಿ । **ಸ್ತಸ್ತಯೇ**—ನಮ್ಮ ಮಂಗಳಕ್ಕಾಗಿ । **ಪಾಯುಃ**—(ನಮ್ಮ) ರಕ್ಷಕನಾಗಲಿ. ।

॥ ಭಾವಾರ್ಥ ॥

ಐಶ್ವರ್ಯವಂತನೂ, ಸಕಲಸ್ಥಾವರಜಂಗಮಜಗತ್ತಿಗೆಲ್ಲ ಒಡೆಯನೂ ಮತ್ತು ಶ್ರೇಷ್ಠವಾದ ಕರ್ಮಗಳಿಂದ ತೃಪ್ತಿಗೊಳಿಸಲ್ಪಡುವವನೂ ಆದ ಆ ಇಂಪ್ರನನ್ನು ನಾವು ರಕ್ಷಣೆಗಾಗಿ ಪ್ರಾರ್ಥಿಸಿ ಕರೆಯುತ್ತೇವೆ. ಪೂಷದೇವನು ನಮ್ಮ ಧನಗಳ ಅಭಿವೃದ್ಧಿಗಾಗಿ ಯಾವ ಪ್ರಕಾರದಲ್ಲಿ ರಕ್ಷಕನಾಗಿರುವನೋ, ಹಾಗೆಯೇ ಯಾರಿಂದಲೂ ಹಿಂಸಿಸಲ್ಪಡದಿರುವನನಾಗಿ ನಮ್ಮ ಮಂಗಳಕ್ಕಾಗಿ ನಮ್ಮ ರಕ್ಷಕನಾಗಲಿ.

English Translation

We invoke that lord of living beings, that protector of things immovable, Indra, who is to be propitiated by pious rites for our protection ;

as Pushan has ever been our defender for the increase of our riches, so he may continue to be the unmolested gaurdian of our welfare.

ವಿಶೇಷವಿಷಯಗಳು

ಈ ಋಕ್ಕಿನ ಪೂರ್ವಾರ್ಧದಲ್ಲಿ ಇಂದ್ರನೂ ಉತ್ತರಾರ್ಧದಲ್ಲಿ ಪೂಷನೂ ಸ್ತುತಿಸಲ್ಪಟ್ಟಿರುವರು.

ಜಗತಃ ತಸ್ಥುಷಃ ಪತಿಂ—ಜಗತಃ ಜಂಗಮಸ್ಯ ಪ್ರಾಣಿಜಾತಸ್ಯ । ತಸ್ಥುಷಃ ಸ್ಥಾವರಸ್ಯ । ಚಲಿಸುವ ಪ್ರಾಣಿವರ್ಗಗಳ, ಚಲಿಸದಿರುವ ವೃಕ್ಷಪರ್ವತಾದಿಗಳ ಸ್ವಾಮಿಯು.

ಈಶಾನಂ—ಈಶ ಐಶ್ವರ್ಯೇ । ಐಶ್ವರ್ಯವಂತನಾದ ಇಂದ್ರನನ್ನು.

ವೇದಸಾಂ—ಮಳೆಂ ರೇಕ್ಣಃ ಮೊದಲಾದ ಇಪ್ಪತ್ತೈಂಟು ಧನನಾಮಗಳ ಮಧ್ಯದಲ್ಲಿ ವೇದಸ್ ಶಬ್ದವು ಸಠಿತವಾಗಿರುವುದರಿಂದ ವೇದಸಾಂ ಎಂದರೆ ಧನಗಳ ಎಂದರ್ಥವು. (ನಿ. ೩-೯)

ಧಿಯಂಜಿನ್ವಂ—ಧೀಶಬ್ದಃ ಕರ್ಮನಾಮಕಃ । ಜಿವಿಃ ಪ್ರೀಣನಾರ್ಥಃ । ಕರ್ಮಭಿಃ ಪ್ರೀಣಯಿತವ್ಯಃ । ಯಜ್ಞಾದಿಕರ್ಮಗಳಿಂದ ತೃಪ್ತಿಪಡಿಸಲರ್ಹನಾದ.

ಪಾಯುಃ—ಪಾ ರಕ್ಷಣೇ । ರಕ್ಷಿತಾ । ರಕ್ಷಿಸುವವನು, ಕಾಪಾಡುವವನು.

ಸ್ವಸ್ತಯೇ—ಅವಿನಾಶಾಯ । ನಾಶವಿಲ್ಲದಿರುವುದಕ್ಕಾಗಿ, ಮಂಗಳಕ್ಕಾಗಿ, ಒಳ್ಳೆಯದನ್ನು ಅಥವಾ ಶುಭವನ್ನುಂಟುಮಾಡುವುದಕ್ಕಾಗಿ, for our welfare.

ವ್ಯಾಕರಣಪ್ರಕ್ರಿಯಾ

ತಸ್ಥುಷಃ—ಷ್ಠಾ ಗತಿನಿವೃತ್ತೌ ಧಾತು. ಇದಕ್ಕೆ ಲಿಟ್‌ಪರವಾದಾಗ ಅದಕ್ಕೆ **ಕ್ವಸುಶ್ಚ**–ಎಂಬುದರಿಂದ ಕ್ವಸುವಾದೇಶ. ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ. **ಶರ್ಪೂರ್ವಾಃ ಖಯಃ**–ಎಂಬುದರಿಂದ ಅಭ್ಯಾಸದಲ್ಲಿ ಧಕಾರಕ್ಕೆ ತೇಷ. **ಅಭ್ಯಾಸೇ ಚರ್ಚ**–ಸೂತ್ರದಿಂದ ಅದಕ್ಕೆ ತಕಾರಾದೇಶ. **ಆರ್ಧಧಾತುಕಸ್ಯೇಡ್ವಲಾದೇಃ**—ಎಂಬುದರಿಂದ ಪಕಾರಕ್ಕೆ ಇಡಾಗಮ. **ಆತೋಲೋಪೇಽಟಿಚ**— (ಪಾ. ಸೂ. ೬-೪-೬೪) ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. ತಸ್ಥಿವಸ್ ಶಬ್ದವಾಗುತ್ತದೆ. ಇದಕ್ಕೆ ಷಷ್ಠೀ ಏಕವಚನಪರವಾಗ **ವಸೋಃಸಂಪ್ರಸಾರಣಮ್** (ಪಾ. ಸೂ. ೬-೪-೧೩೧) ಎಂಬುದರಿಂದ ವಕಾರಕ್ಕೆ ಸಂಪ್ರಸಾರಣ. **ಸಂಪ್ರಸಾರಣಾಚ್ಚೆ**–ಎಂಬುದರಿಂದ ಪೂರ್ವರೂಪ. **ಅಕೃತವ್ಯೂಹಾಃ ಪಾಣಿನೀಯಾಃ**—ಎಂಬುದರಿಂದ ಸಂಪ್ರಸಾರಣದಿಂದ ಇಡಾಗಮಕ್ಕೆ ನಿಮಿತ್ತವಾದ ನಕಾರವು ಸಂಪ್ರಸಾರಣದಿಂದ ಅಪಹಾರವಾಗುವುದರಿಂದ ಇಡಾಗಮ ಬರುವುದಿಲ್ಲ. **ಶಾಸಿವಸಿಘಸೀನಾಂಚ** (ಪಾ. ಸೂ. ೮-೩-೬೦)–ಎಂಬುದರಿಂದ ವಸಿಸ ಸಕಾರಕ್ಕೆ ಷತ್ವ. ತಸ್ಥುಸಸ್ ಎಂದಿರುವಾಗ **ಖರವಸಾನಯೋಃ ವಿಸರ್ಜನೀಯಃ**–ಎಂಬುದರಿಂದ ಸಕಾರಕ್ಕೆ ರುತ್ವಬಂದಾಗ ವಿಸರ್ಗ. **ತಸ್ಥುಷಃ+ಪತಿಂ** ಎಂದಿರುವಾಗ **ಷ್ಟುನಾ ಷ್ಟುಃ ಪತಿಪುತ್ರ** (ಪಾ. ಸೂ. ೮-೩-೫೩) ಎಂಬುದರಿಂದ ಪತಿಶಬ್ದ ಪರವಲ್ಲಿರುವುದರಿಂದ ವಿಸರ್ಗಕ್ಕೆ ಷತ್ವ.

ಧಿಯಂಜಿನ್ವಮ್—ಜಿವಿ ಧಾತುವು ಪ್ರೀಣನಾರ್ಥದಲ್ಲಿದೆ. **ಕೃತ್ಯಲ್ಯುಟೋ ಬಹುಲಮ್** (ಪಾ. ಸೂ. ೩-೩-೧೧೩) ಎಂಬಲ್ಲಿ ಬಹುಲಗ್ರಹಣವಾಡಿರುವುದರಿಂದ ಇದಕ್ಕೆ ಖಚ್ ಕೃತ್ಯವು. **ಇದಿತೋ ನುಮ್**

ಧಾತೋಃ—ಎಂಬುದರಿಂದ ಧಾತುವಿಗೆ ನುಮಾಗಮ. **ಇಚ ಏಕಾಚೋಽಮ್ ಅಮ್ಪ್ರತ್ಯಯವಚ್ಚ** (ಪಾ. ಸೂ. ೬-೩-೬೮) ಶಿತ್‌ಪ್ರತ್ಯಯಾಂತವು ಪರದಲ್ಲಿರುವಾಗ ಇಚಂತವಾದ ಏಕಾಚಾದಪೂರ್ವಪದಕ್ಕೆ ಅಮ್ ಬರುತ್ತದೆ. ಅದು ವಿಭಕ್ತಿಘಟಕವಾದ ಅಮಿನಂತೆಯೇ ಆಗುತ್ತದೆ ಎಂಬುದರಿಂದ ಧೀಶಬ್ದಕ್ಕೆ ಅಮ್ ಬರುತ್ತದೆ. ವಿಭಕ್ತಿಭಾವ ತೋರುವುದರಿಂದ **ಅಚಿಶ್ನುಧಾತುಭ್ರುವಾಂ**—ಎಂಬುದರಿಂದ ಈಕಾರಕ್ಕೆ ಇಯಬಾದೇಶ ಬರುತ್ತದೆ. ಧಿಯಂಜಿನ್ನ ಶಬ್ದವು **ಜಿತೆಃ**—ಎಂಬುದರಿಂದ ಅಂತೋದಾತ್ತವಾಗುತ್ತದೆ.

ಅವಸೇ—ಅವ ರಕ್ಷಣೇ ಧಾತು. ಅಸುನ್‌ಪ್ರತ್ಯಯ. ನಿತ್ವಾದುದರಿಂದ ಆದ್ಯುದಾತ್ತವಾಗುತ್ತದೆ. ಚತುರ್ಥೀವಿಭಕ್ತಿಏಕವಚನದರೂಪ.

ಹೂಮಹೇ—ಮೂರನೇಮಂತ್ರದಲ್ಲಿ ವ್ಯಾಖ್ಯಾತವಾಗಿದೆ.

ಅಸತ್—ಅಸ ಭುವಿ ಧಾತು. ಲೇಟ್ ಪ್ರಥಮಪುರುಷಏಕವಚನದಲ್ಲಿ ತಿಪ್‌ಪ್ರತ್ಯಯ. **ಇತಶ್ಚ-ಲೋಪಃ**—ಸೂತ್ರದಿಂದ ಅದರ ಇಕಾರಕ್ಕೆ ಲೋಪ. **ಲೇಟೋಽಡಾಟೌ** ಎಂಬುದರಿಂದ ಅಡಾಗಮ. **ಬಹುಲಂ-—ಛಂದಸಿ** ಸೂತ್ರದಿಂದ ಶಪಿಗೆ ಲುಕ್ ಬರುವುದಿಲ್ಲ. ಆದುದರಿಂದ ಛಿನ ಆಕಾರಕ್ಕೆ ಲೋಪ ಬರುವುದಿಲ್ಲ. **ನಿಷಾತ್ಯೈರ್ಯದ್ಯದಿ**—ಎಂಬುದರಿಂದ ನಿಘಾತನಿಷೇಧ ಬರುವುದರಿಂದ ಧಾತುಸ್ವರ ಉಳಿಯುತ್ತದೆ.

ವೃಧೇ—ವೃಧು ವೃದ್ಧೌ ಧಾತು. ಕ್ವಿಪ್‌ಪ್ರತ್ಯಯ. ವೃಧ್‌ಶಬ್ದವಾಗುತ್ತದೆ. ಚತುರ್ಥೀಏಕವಚನ ಸಾಂತರೂಪ.

ಪಾಯವೇ—ವಾ ರಕ್ಷಣೇ ಧಾತು **ಕೃವಾಪಾಜಿ** (ಉ. ಸೂ. ೧-೧) ಎಂಬುದರಿಂದ ಉಸ್‌ಪ್ರತ್ಯಯ. **ಆತೋ ಯುಕ್ ಚಿಣ್‌ಕೃತೋಃ** (ಪಾ. ಸೂ. ೭-೩-೩೩) ಎಂಬುದರಿಂದ ಆಕಾರಕ್ಕೆ ಯುಕ್‌ಆಗಮ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

ಸ್ವಸ್ತಯೇ—ಇಸ ಭುವಿ ಧಾತು. ಸುಪೂರ್ವನಾಗಿರುವಾಗ ಇದಕ್ಕೆ ಭಾವಾರ್ಥದಲ್ಲಿ ಕ್ತಿನ್‌ಪ್ರತ್ಯಯ ಯದ್ಯಪಿ ಕ್ತಿನ್ ಆರ್ಧಧಾತುಕವಾದುದರಿಂದ ಧಾತುವಿಗೆ ಭೂಭಾವ ಬರಬೇಕಾಗುತ್ತದೆ. ಆದರೆ **ಛಂದಸ್ಯುಭಯಥಾ** ಎಂಬುದರಿಂದ ಅದಕ್ಕೆ ಸಾರ್ವಧಾತುಕತ್ವವು ಬರುವುದರಿಂದ **ಅಸ್ತೇರ್ಭೂಃ** (ವಾ. ಸೂ. ೨-೪-೫೨) ಎಂಬುದರಿಂದ ಭೂಭಾವ ಬರುವುದಿಲ್ಲ. ಇದೇ ಸಮಾಧಾನವನ್ನು ನೃತ್ತಿಕಾರರೂ ತೋರಿರುತ್ತಾರೆ. ॥ ೫ ॥

॥ ಸಂಹಿತಾಪಾಠಃ ॥

ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ ಸ್ವಸ್ತಿ ನಃ ಪೂಷಾ ವಿಶ್ವ-ವೇದಾಃ ।

स्वस्ति नस्तार्क्ष्यो अरिष्टनेमिः स्वस्ति नो बृहस्पतिर्दधातु ॥ ६ ॥

॥ पदपाठः ॥

स्वस्ति । नः । इन्द्रः । वृद्धश्रवाः । स्वस्ति । नः । पूषा । विश्ववेदाः ।
स्वस्ति । नः । तार्क्ष्यः । अरिष्टनेमिः । स्वस्ति । नः । बृहस्पतिः । दधातु ॥

सायणभाष्यं

वृद्धश्रवा वृद्धं प्रभूतं श्रवः श्रवणं स्तोत्रं हविर्लक्षणमन्नं वा यस्य तादृश इन्द्रो नोऽस्माकं । 'स्वस्तीत्यविनाशनाम । नि. ३-२१ । स्वस्त्यविनाशं दधातु । विदधातु । करोतु । विश्ववेदाः । विश्वानि वेत्तीति विश्ववेदाः । यद्वा । विश्वानि सर्वाणि वेदांसि ज्ञानानि धनानि वा यस्य । तादृशः पूषा पोषकरो देवो नोऽस्माकं स्वस्ति विदधातु । अरिष्टनेमिः । नेमिरित्यायुधनाम । अरिष्टान्यहिंसितो नेमिर्यस्य । यद्वा । रथचक्रस्य धारा नेमिः । यत्संबन्धिनो रथस्य नेमिर्न हिंस्यते सोऽरिष्टनेमिः । एवंभूतस्तार्क्ष्यस्यैषस्य पुत्रो गरुत्मान् नोऽस्माकं स्वस्त्यविनाशं विदधातु । तथा बृहस्पतिर्बृहतां देवानां पालयिता नोऽस्माकं स्वस्त्यविनाशं विदधातु ॥ वृद्धश्रवाः । बहुप्रीहौ पूर्वपदप्रकृतिस्वरत्वं । विश्ववेदाः । विद ज्ञाने । विद्लृलाभे अभ्यासुसुनत्वित्यौणादिको वेदसशब्दः । बहुव्रीहौ विश्वं संज्ञायामिति पूर्वपदादन्तोदात्तत्वं । तार्क्ष्यः । तृक्षस्यापत्यं गर्गादिभ्यो यञिञौ । पा ४-१-१०५ । इञन्त्वादाद्युदात्तत्वं । अरिष्टनेमिः । न रिष्टाऽरिष्टा । अन्येपूर्वपदप्रकृतिस्वरत्वं । अरिष्टा नेमिर्यस्य स तथोक्तः बृहस्पतिः । तद्व्यहतोः करपतौ । पा. ६-१-१७६ । इति सुडितलोपः । उभेवनस्पत्यादिषितीति पूर्वोत्तरपदयोर्यगपत्प्रकृतिस्वरत्वं

॥ पदार्थः ॥

वृद्धश्रवाः— स्तुतिरूपವಾದ ಸ್ತೋತ್ರವುಳ್ಳ ಅಥವಾ ಹವಿಸ್ಸಿನರೂಪದ ಅನ್ನವುಳ್ಳ । ಇಂದ್ರಃ— ಇಂದ್ರನು । ನಃ— ನಮಗೆ । ಸ್ವಸ್ತಿ— ನಾಶರಹಿತವಾದ ಮಂಗಳವನ್ನು । ವಿದಧಾತು — ಉಂಟುಮಾಡಲಿ । ವಿಶ್ವವೇದಾಃ— ಸಕಲವನ್ನೂ ತಿಳಿಯುವ ಅಥವಾ ಸಕಲವಾದ ಜ್ಞಾನಸಸನ್ನೂ ಹೊಂದಿರುವ । ಪೂಷಾ— ಪೂಷದೇವನು । ನಃ— ನಮಗೆ । ಸ್ವಸ್ತಿ— ಮಂಗಳವನ್ನು (ಉಂಟುಮಾಡಲಿ) । ಅರಿಷ್ಟನೇಮಿಃ — ಅಕುಂಠಿತನಾದ ಆಯುಧವುಳ್ಳ ಅಥವಾ ಸಮೆಯದಿರುವ ರಥಚಕ್ರವುಳ್ಳ । ತಾರ್ಕ್ಷ್ಯಃ— ತಾರ್ಕ್ಷ್ಯನು (ಗರುತ್ಮಂತನು)

ನಃ— ನಮಗೆ । **స్వస్తి**— ಮಂಗಳವನ್ನು (ಉಂಟುಮಾಡಲಿ) । **బృహస్పతిಃ**—ದೇವತೆಗಳ ಪಾಲಕನಾದ ಬೃಹಸ್ಪತಿಯು । **ನಃ**—ನಮಗೆ । **స్వస్తి**— ಮಂಗಳವನ್ನುಂಟುಮಾಡಲಿ.

ಭಾವಾರ್ಥ

ಪ್ರಭೂತವಾದ ಹವಿಸ್ಸಿನ ರೂಪದ ಅನ್ನವುಳ್ಳ ಇಂದ್ರನೂ, ಸಕಲವನ್ನೂ ತಿಳಿಯುವ ಶಕ್ತಿಯುಳ್ಳ ಪೂಷನೂ, ಅಕುಂಠಿತವಾದ ಆಯುಧವುಳ್ಳ ಗರುತ್ಮಂತನೂ ಮತ್ತು ದೇವತೆಗಳ ಪಾಲಕನಾದ ಬೃಹಸ್ಪತಿಯೂ ನಮಗೆ ನಾಶರಹಿತವಾದ ಮಂಗಳವನ್ನುಂಟುಮಾಡಲಿ.

English Translation

May Indra, who listens to much praise gaurd our welfare ; may Pushan who knows all things gaurd our welfare ; may Tarkshya with uninjured fellies, and Brihaspati the protector of gods (lord of prayer) gaurd our welfare.

॥ ವಿಶೇಷವಿಷಯಗಳು ॥

వృద్ధశ్రవాಃ—**వృద్ధం ప్రభూతం శ్రవಃ శ్రవణం స్తోత్రం హవిర్లక్షణమన్నం వా యస్య** । ನಾವು ಮಾಡುವ ಅನೇಕ ಸ್ತೋತ್ರಗಳನ್ನು ಕೇಳುವ ಅಥವಾ ನಾವು ಅರ್ಪಿಸುವ ಹವಿರ್ಲಕ್ಷಣರೂಪವಾದ ಅನ್ನವನ್ನು ಸ್ವೀಕರಿಸುವ

విశ్వవేదాಃ—**విశ్వాని వేత్తీతి విశ్వవేదాಃ** । ಸಮಸ್ತವನ್ನೂ ತಿಳಿದವನು.

పూషా—ಪೂಷನೆಂಬ ದೇವತೆಯು ಮಾರ್ಗಪ್ರದರ್ಶಕನಾದ ಓರ್ವ ದೇವತೆಯು. ಪೂಷನು ತಮಗೆ ಸರಿಯಾದ ದಾರಿಯನ್ನು ತೋರಿಸಬೇಕೆಂದು ಅನೇಕ ಋಕ್ಕುಗಳಲ್ಲಿ ಪ್ರಾರ್ಥಿಸಲ್ಪಟ್ಟಿರುವನು. ಪೂಷನ್ ಎಂಬುದು ದ್ವಾದಶಾದಿತ್ಯರ ಹೆಸರುಗಳಲ್ಲಿ ಒಂದಾಗಿರುವುದರಿಂದ ಸೂರ್ಯನೆಂದೂ ಅರ್ಥವಾಗುವುದು.

తార్క్ష్యಃ—ತೃಕ್ಷನ ಪುತ್ರನು. ಭಾಷ್ಯಕಾರರು ಗರುತ್ಮಾನ್-ಗರುಡನು ಎಂದು ಅರ್ಥವನ್ನು ಹೇಳಿರುವರು. ಈ ಶಬ್ದವೂ ಆದಿತ್ಯನನ್ನೇ ಸೂಚಿಸುವುದು. ತೃಕ್ಷನೆಂದರೆ ಕಶ್ಯಪನೆಂದು ಕೆಲವರು ಹೇಳುವರು. ಅವನ ಪುತ್ರನಾದುದರಿಂದ ಆದಿತ್ಯನೇ ತಾರ್ಕ್ಷ್ಯನೆಂದು ಕರೆಯಲ್ಪಡುವನು. ತಾರ್ಕ್ಷ್ಯವೆಂದರೆ ದೇವಲೋಕದ ಕುದುರೆಯೆಂದೂ, ಸೂರ್ಯನೇ ಈ ರೂಪದಿಂದ ಸ್ತುತಿಸಲ್ಪಡುವನೆಂದೂ ಕೆಲವರು ಅಭಿಪ್ರಾಯಪಡುವರು. ಮತ್ತೆ ಕೆಲವರು ತ್ರಸದಸ್ಯು ಎಂಬವನ ವಂಶಸ್ಥನಾದ ತೃಕ್ಷಿ ಎಂಬವನ ಪುತ್ರನೆಂದೂ ಹೇಳುವರು. ಖಿಲಮಂತ್ರಗಳಲ್ಲಿಯೂ (೨.೪-೧) ಆಶ್ವಲಾಯನ ಶ್ರೌತಸೂತ್ರವಲ್ಲಿಯೂ (೪. ೧೦-೭) ತಾರ್ಕ್ಷ್ಯ ಎಂಬ ಶಬ್ದಕ್ಕೆ ಪಕ್ಷಿಶ್ರೇಷ್ಠವು, ಪಕ್ಷಿವಿಶೇಷವು ಎಂಬ ಅರ್ಥವು ಸೂಚಿತವಾಗಿರುವುದು. ಈ ಶಬ್ದದ ಅರ್ಥವು ಸಂದಿಗ್ಧವಾಗಿಯೇ ಇದೆ. ಋ.ಸಂ. ೧೦-೧೭೪ ನೇ ಸೂಕ್ತವು ತಾರ್ಕ್ಷ್ಯ ದೇವತಾಕವಾಗಿದೆ.

అరిష్టనేమిಃ—**రథచక్రస్యధారా నేమిಃ । అరిష్ట్వేఽహింసకో నేమిర్యస్య । యేత్సేంబంధినో రథస్య నేమిర్న హింస్యతే సోఽరిష్టనేమిಃ ॥** ನೇಮಿಃ ಎಂದರೆ ರಥಚಕ್ರವು. ಹಿಂಸಿಸಲ್ಪಡ

ದಿರುವ ಎಂದರೆ ತಡೆಯಿಲ್ಲದ, ಅಪ್ರತಿಹತವಾದ ಗಮನವುಳ್ಳ ರಥಚಕ್ರಗಳುಳ್ಳವನು ಎಂದಭಿಪ್ರಾಯವು. ಸ್ಕಂದ ಸ್ವಾಮಿಯು ನೇಮಿ ಶಬ್ದಕ್ಕೆ ವಜ್ರಾಯುಧವೆಂದು ಅರ್ಥಮಾಡಿರುವರು. ಅರಿಷ್ಟನೇಮಿ ಎಂಬುವುದು ತೃಕ್ಷನ ಮಗನಾದ ಒಬ್ಬ ಋಷಿಯ ಹೆಸರಿರಬಹುದು (ಋ. ಸಂ. ೧೦-೧೭೮).

ಬೃಹಸ್ಪತಿಃ—ಸ್ತೋತ್ರಗಳಿಗೆ ಅಧಿಪತಿಯಾದ ದೇವತೆಯು ಅಥವಾ ದೇವತೆಗಳ ಪಾಲಕನು.

ವ್ಯಾಕರಣಪ್ರಕ್ರಿಯಾ

ವೃದ್ಧಶ್ರವಾಃ—ವೃದ್ಧಂ ಶ್ರವಃ ಯಸ್ಯ ಸಃ ವೃದ್ಧಶ್ರವಾಃ **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್**—ಎಂಬುದರಿಂದ ಸಮಾಸಸ್ವರವು ಬಾಧಿತವಾಗಿ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ವಿಶ್ವವೇದಾಃ—ವಿದ ಜ್ಞಾನೇ ಧಾತು. ಅಥವಾ ವಿದ್‌ಲೃಲಾಭೇ **ಸರ್ವಧಾತುಭ್ಯೋ೭ಸುನ್**—ಎಂಬುದರಿಂದ ಅಸುನ್‌ಪ್ರತ್ಯಯ. **ಪುಗಂತಲಘೂಪಧಸ್ಯ ಚ**-ಎಂಬುದರಿಂದ ಧಾತುವಿನ ಲಘೂಪಧೆಗೆ ಈ ಪ್ರತ್ಯಯನಿಮಿತ್ತವಾಗಿ ಗುಣ. ವೇದಸ್ ಶಬ್ದವಾಗುತ್ತದೆ. **ವಿಶ್ವಾನಿ ಸರ್ವಾಣಿ ವೇದಾಂಸಿ ಜ್ಞಾನಾನಿ ಯಸ್ಯಸಃ ವಿಶ್ವಾವೇದಾಃ ಬಹುವ್ರೀಹೌ. ವಿಶ್ವಂ ಸಂಜ್ಞಾಯಾಮ್** (ಪಾ. ಸೂ. ೬-೩-೧೦೬) ಎಂಬುದರಿಂದ ಇಲ್ಲಿ ದೇವತಾಸಂಜ್ಞೆ ತೋರುವುದರಿಂದ ಪೂರ್ವಪದಾಂತೋದಾತ್ತಸ್ವರ ಬರುತ್ತದೆ.

ತಾರ್ಕ್ಷ್ಯಃ—ತೃಕ್ಷಸ್ಯ ಅಪತ್ಯಮ್ ತಾರ್ಕ್ಷ್ಯಃ **ಗರ್ಗಾದಿಭ್ಯೋ ಯೆಞ್** (ಪಾ.ಸೂ.೪-೧-೧೦೫) ಎಂಬುದರಿಂದ ಗರ್ಗಾದಿಗಣದಲ್ಲಿ ಪಠಿತವಾದುದರಿಂದ ಅಪತ್ಯ (ಮಗ) ಎಂಬರ್ಥದಲ್ಲಿ ಯೆಞ್ ಪ್ರತ್ಯಯ. ಞಿತ್ವಾದುದರಿಂದ **ತದ್ಧಿತೇಷ್ವಚಾಮಾದೇಃ**—ಎಂಬುದರಿಂದ ಆದಿವೃದ್ಧಿ. **ಉರಣ್‌ರಪರಃ** ಪರಿಭಾಷೆಯಿಂದ ರಪರವಾಗಿ ಬರುತ್ತದೆ. **ಞ್ನಿತ್ಯಾದಿರ್ನಿತ್ಯಂ**—ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಅರಿಷ್ಟನೇಮಿಃ—ನ ರಿಷ್ಟಾ ಅರಿಷ್ಟಾ. ನಞ್ ತತ್ಪುರುಷಸಮಾಸ. ಆಗ **ತತ್ಪುರುಷೇ ತುಲ್ಯಾರ್ಥ** (ಪಾ. ಸೂ. ೬-೧-೨) ಎಂಬುದರಿಂದ ಅವ್ಯಯಪೂರ್ವಪದಪ್ರಕೃತಿಸ್ವರ ಬರುತ್ತದೆ. ಅರಿಷ್ಟಾ ನೇಮಿರ್ಯಸ್ಯ ಸಃ ಅರಿಷ್ಟನೇಮಿಃ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್**—ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

ಬೃಹಸ್ಪತಿಃ—ಬೃಹತಾಂ ಪತಿಃ **ತದ್‌ಬೃಹತೋಃ ಕರಪತ್ಯೋಃ** (ಪಾ. ಸೂ. ೬-೩-೬೫) ತತ್ ಮತ್ತು ಬೃಹತ್ ಶಬ್ದಗಳಿಗೆ ಕ್ರಮವಾಗಿ ಕರ, ಪತಿ ಶಬ್ದಗಳು ಪರವಾದಾಗ ಜೋರ, ದೇವತೆ ಎಂದು ಅರ್ಥತೋರುವಾಗ ಸುಡಾಗಮ. ತತ್ಪನ್ನಿಯೋಗದಿಂದ ತಕಾರಲೋಪ ಎಂಬುದರಿಂದ ಇಲ್ಲಿ ಸುಡಾಗನು ತಲೋಪ. **ಉಭೇ-ವನಸ್ಪತ್ಯಾದಿಷು** (ಪಾ. ಸೂ. ೬-೩-೧೪೦) ಎಂಬುದರಿಂದ ಸಮಾಸಸ್ವರ ಬಾಧಿತವಾಗಿ ಪೂರ್ವೋತ್ತರಪದಗಳಿಗೆ ಏಕಕಾಲದಲ್ಲಿ ಪ್ರಕೃತಿಸ್ವರ ಬರುತ್ತದೆ.

ದಧಾತು—ಡುಧಾಞ್ ಧಾರಣಪೋಷಣಯೋಃ ಧಾತು. ಜುಹೋತ್ಯಾದಿ. ಪ್ರಾರ್ಥನಾರ್ಥದಲ್ಲಿ ಲೋಟ್. **ಏರುಃ**—ಸೂತ್ರದಿಂದ ತಿ ಎಂಬುದಕ್ಕೆ ತು ಆದೇಶ. ಧಾತುವಿಗೆ ಶ್ಲುನಿಮಿತ್ತವಾಗಿ ದ್ವಿತ್ವ. ಅಭ್ಯಾಸಕ್ಕೆ ಹ್ರಸ್ವ. ಜಸ್ತ್ವ. ತಿಙಂತನಿಘಾತಸ್ವರ ಬರುತ್ತದೆ. ॥ ೬ ॥

ಸಂಹಿತಾಪಾಠಃ

ಪೃಷದಶ್ವಾ ಮರುತಃ ಪೃಶ್ನಿಮಾತರಃ ಶುಭಂಯಾವಾನೋ
ವಿದಥೇಷು ಜಗ್ಮಯಃ।
ಅಗ್ನಿಜಿಹ್ವಾ ಮನವಃ ಸೂರಚಕ್ಷಸೋ ವಿಶ್ವೇ ನೋ ದೇವಾ
ಅವಸಾ ಗಮನ್ನಿಹ ॥ ೭ ॥

ಪದಪಾಠಃ

ಪೃಷತ್ಽಅಶ್ವಾಃ । ಮರುತಃ । ಪೃಶ್ನಿ ಽಮಾತರಃ । ಶುಭಂ ಽಯಾವಾನಃ । ವಿದ-
ಥೇಷು । ಜಗ್ಮಯಃ ।
ಅಗ್ನಿ ಽಜಿಹ್ವಾಃ । ಮನವಃ । ಸೂರ ಽಚಕ್ಷಸಃ । ವಿಶ್ವೇ । ನಃ । ದೇವಾಃ। ಅವಸಾ ।
ಆ । ಗಮನ್ । ಇಹ ॥ ೭ ॥

ಸಾಯಣಭಾಷ್ಯಂ

ಪೃಷದಶ್ವಾಃ। ಪೃಷದ್ಭಿಃ ಶ್ವೇತಬಿಂದುಭಿರ್ಯುಕ್ತಾ ಆಶ್ವಾ ಯೇಷಾಂ ತೇ ತಥೋಕ್ತಾಃ। ಪೃಶ್ನಿಮಾ-
ತರಃ । ಪೃಶ್ನಿರ್ನಾನಾವರ್ಣಾ ಗೌರ್ಮಾತಾ ಯೇಷಾಂ । ಶುಭಂಯಾವಾನಃ । ಶುಭಂ ಯಾಂತಿ ಗಚ್ಛಂತೀತಿ
ಶುಭಂಯಾವಾನಃ । ಶೋಭನಗತಯ ಇತ್ಯರ್ಥಃ । ವಿದಥೇಷು ಯಜ್ಞೇಷು ಜಗ್ಮಯೋ ಗಂತಾರಃ
ಅಗ್ನಿಜಿಹ್ವಾ ಅಗ್ನೇರ್ಜಿಹ್ವಾಯಾಂ ವರ್ತಮಾನಾಃ । ಸರ್ವೇ ಹಿ ದೇವಾ ಹವಿಃಸ್ವೀಕರಣಾಯಾಗ್ನೇರ್ಜಿ-
ಹ್ವಾಯಾಂ ವರ್ತಂತೇ । ತಾತ್ಸ್ಥಾಕ್ತಾಚ್ಚಬ್ದ್ಲುಕ್ । ಮನವಃ ಸರ್ವಸ್ಯ ಮಂತಾರಃ ಸೂರಚಕ್ಷಸಃ ಸೂರ್ಯ-
ಪ್ರಕಾಶ ಇವ ಚಕ್ಷುಃ ಪ್ರಕಾಶೋ ಯೇಷಾಂ ತ ಏವಂಭೂತಾ ಮರುತೋ ಮರುತ್ಸಂಜ್ಞಕಾ ವಿಶ್ವೇ ದೇವಾಃ
ಸರ್ವೇ ದೇವಾ ನೋಽಸ್ಮಾನಿಹಾಸ್ಮಿನ್ಯಾಗೇಽವಸಾ ರಕ್ಷಣೇನ ಸಹಾ ಗಮನ್ । ಆಗಚ್ಛಂತು ॥ ಶುಭಂಯಾ-
ವಾನಃ । ಯಾ ಪ್ರಾಪಣೇ । ಅತೋ ಮನಿನ್ನಿತಿ ವನಿಪ್ । ತತ್ಪುರುಷೇ ಕೃತಿ ಬಹುಲಮಿತಿ
ಬಹುಲವಚನಾದ್ದ್ವಿತೀಯಾಯಾ ಅಸ್ಯಲುಕ್ । ಗಮನ್ । ಗಮೇಃ ಪ್ರಾರ್ಥನಾಯಾಂ ಲೇಟ್ಯಡಾಗಮಃ ।
ಇತಶ್ಚ ಲೋಪೇ ಇತೀಕಾರಲೋಪಃ । ಬಹುಲಂ ಛಂದಸೀತಿ ಶಪೋ ಲುಕ್ ॥

ಸಕಲಪಾರ್ಥ

ಪೃಷದಶ್ವಾಃ—ಬಿಂದುಗಳಿಂದ ಕೂಡಿದ ಅಶ್ವ (ಜಿಂಕೆ) ವಾಹನಗಳುಳ್ಳವರೂ । **ಪೃಶ್ನಿಮಾತರಃ**—ಪೃಶ್ನಿಯೇ ತಾಯಿಯಾಗಿ ಉಳ್ಳವರೂ, (ನಾನಾಬಣ್ಣದ ಗೋವೇ ತಾಯಿಯಾಗಿ ಉಳ್ಳವರೂ)। **ಶುಭಂಯಾವಾನಃ**—ಶ್ರೇಷ್ಠವಾದ ಗಮನವುಳ್ಳವರೂ । **ವಿದಥೇಷು**—ಯಜ್ಞಗಳಲ್ಲಿ । **ಜಗ್ಮಯಃ**—ಸಂಚರಿಸುವವರೂ । **ಅಗ್ನಿಜಿಹ್ವಾಃ**—ಅಗ್ನಿಯನಾಲಿಗೆಯಲ್ಲಿ ಇರುವವರೂ । **ಮನವಃ**—(ಎಲ್ಲವನ್ನೂ) ಲಕ್ಷಿಸಿ ಗಮನಿಸುವವರೂ । **ಸೂರಚಕ್ಷಸಃ**—ಸೂರ್ಯನಂತೆ ಕಾಂತಿಯುತರೂ ಆದ । **ಮರುತಃ**—ಮರುತ್ತುಗಳೂ । **ವಿಶ್ವೇದೇವಾಃ**—ಸಕಲ ದೇವತೆಗಳೂ । **ನಃ**—ನಮ್ಮನ್ನು ಕುರಿತು । **ಇಹ**—ಈ ಯಜ್ಞಪ್ರದೇಶಕ್ಕೆ (ಯಜ್ಞ ಕಾಲಗಳಲ್ಲಿ) । **ಅವಸಾ**—ರಕ್ಷಣೆಯೊಂದಿಗೆ । **ಆ ಗಮನ್**—ದಯಮಾಡಲಿ. ।

ಭಾವಾರ್ಥ

ಬಿಂದುಗಳಿಂದ ಕೂಡಿದ ಜಿಂಕೆಗಳೇ ವಾಹನವಾಗಿವುಳ್ಳವರೂ, ಪೃಶ್ನಿಯೆ ತಾಯಿಯಾಗಿ ಉಳ್ಳವರೂ, ಯಜ್ಞಗಳಲ್ಲಿ ಸಂಚರಿಸುವವರೂ, ಅಗ್ನಿಯ ನಾಲಿಗೆಯಲ್ಲಿರುವವರೂ, ಎಲ್ಲವನ್ನೂ ಲಕ್ಷಿಸಿ ಗಮನಿಸುವವರೂ, ಸೂರ್ಯ ನಂತೆ ಕಾಂತಿಯುತರೂ ಆದ ಮರುತ್ತುಗಳೂ, ಸಕಲದೇವತೆಗಳೂ ಈ ಯಜ್ಞಭೂಮಿಗೆ (ಈ ಯಜ್ಞಕಾಲದಲ್ಲಿ) ನಮಗಾಗಿ ತಮ್ಮ ರಕ್ಷಣೆಯೊಂದಿಗೆ ದಯಮಾಡಲಿ.

English Translation

May the Maruts whose horses are spotted deer, who are the sons of Prisni, gracefully moving frequenters of sacrifices, seated on the tongue of Agni regarders of all, and radient as the Sun, may all the gods come hither for our protection.

ವಿಶೇಷವಿಷಯಗಳು

ಪೃಷದಶ್ವಾಃ—ಪೃಷತ್ಯಃ ಅಶ್ವಾ ಯೇಷಾಂ ತೇ ಪೃಷತ್ಯಃ । ಶ್ವೇತಬಿಂದುಯುಕ್ತವಾದ ಜಿಂಕೆಗಳೇ ಅಶ್ವಗಳಾಗಿವುಳ್ಳ. ಮರುದ್ದೇವತೆಗಳ ವಾಹನಗಳಿಗೆ ಪೃಷತ್ಯಃ ಎಂದು ಹೆಸರು- **ಪೃಷತ್ಯೋ ಮರುತಾಂ** ಎಂದು ನಿರುಕ್ತವಚನವಿರುವುದು.

ಪೃಶ್ನಿಮಾತರಃ—ಪೃಶ್ನಿರ್ನಾನಾವರ್ಣಾ ಗೌರ್ಮಾತಾ । ನಾನಾವಿಧವಾದ ಬಣ್ಣಗಳುಳ್ಳ ಗೋವಿನ ಪುತ್ರರು. ಅಥವಾ ಸ್ಕಂದಸ್ವಾಮಿಯು ಹೇಳುವಂತೆ **ಪೃಶ್ನಿಃ ದ್ಯೌಃ ಸಾ ಮಾತಾ** । ಆಂತರಿಕ್ಷದ ಪುತ್ರರು ಎಂದೂ ಹೇಳಬಹುದು. ಪೃಶ್ನಿಮಾತರಃ ಶಬ್ದದ ವಿಸ್ತಾರವಾದ ಅರ್ಥವಿವರಣೆಗಾಗಿ ಋ. ಸಂ. ಭಾಗ ೩ ಪೇಜು 179-180 ನೋಡಿ.

ಶುಭಂಯಾವಾನಃ—ಶುಭಂ ಶೋಭನಂ ಯಾಂತಿ ಗಚ್ಛಂತೀತಿ ಶುಭಂಯಾವಾನಃ । ಶೋಭನವಾದ ಗಮನವುಳ್ಳ. ಸ್ಕಂದಸ್ವಾಮಿಯು—**ಶುಭಮಿತ್ಯುದಕಂ । ತದರ್ಥಂ ಮೇಘಾನ್ಪ್ರತಿ ಗಂತಾರಃ** । ಶುಭವೆಂದರೆ

ಉದಕವು. ಉದಕಕ್ಕಾಗಿ ಎಂದರೆ ವೃಷ್ಟ್ಯರ್ಥವಾಗಿ ಮೇಘಗಳ ಸಮೀಪಕ್ಕೆ ಹೋಗುವವರಾದ್ದರಿಂದ ಮರುತ್ತುಗಳಿಗೆ ಶುಭಂಯಾವಾನಃ ಎಂದು ಹೆಸರು.

ಅಗ್ನಿಜಿಹ್ವಾಃ—ಅಗ್ನೇರ್ಜಿಹ್ವಾಯಾಂ ವರ್ತಮಾನಾಃ । ಸರ್ವೇ ಹಿ ದೇವಾ ಹವಿಃಸ್ವೀಕರಣಾ-ಯಾಗ್ನೇರ್ಜಿಹ್ವಾಯಾಂ ವರ್ತಂತೇ । ಸಮಸ್ತ ದೇವತೆಗಳಿಗೂ ಅರ್ಪಿಸುವ ಹವಿಸ್ಸನ್ನು ಅವರಿಗೆ ಸೇರುವಂತೆ ಮಾಡುವುದಕ್ಕಾಗಿ ಅಗ್ನಿಯಲ್ಲಿ ಹೋಮ ಮಾಡುವರು. ಆದುದರಿಂದ ದೇವತೆಗಳು ಅಗ್ನಿಯ ಜಿಹ್ವೆಯಲ್ಲಿ ಇರುವರೆಂದು ಹೇಳುವುದು ರೂಢಿಯಾಗಿದೆ. ಸ್ಕಂದಸ್ವಾಮಿಯು—**ಆಗ್ನೌ ಪ್ರಕ್ಷಿಪ್ತಂ ಹವಿರ್ದೇವಾ ಅಶ್ನಂತಿ ತೇನೈಷಾ-ಮಗ್ನಿಜಿಹ್ವಾಸ್ಥಾನೀಯಃ । ವಕ್ಷ್ಯಮಾಣಾನಾಂ ವಿಶ್ವೇಷಾಂ ದೇವಾನಾಮೇತದ್ವಿಶೇಷಣಂ ನ ಮರುತಾಂ ॥** ಅಗ್ನಿಯಲ್ಲಿ ಹೋಮಮಾಡಿದ ಹವಿಸ್ಸು ದೇವತೆಗಳನ್ನು ಸೇರುವುದರಿಂದ ದೇವತೆಗಳು ಅಗ್ನಿಜಿಹ್ವಾಸ್ಥಾನೀಯರೆಂದು ಹೇಳುವರು. ಈ ಶಬ್ದವು ಮುಂದೆ ಇರುವ ವಿಶ್ವೇದೇವಾಃ ಎಂಬ ಶಬ್ದಗಳಿಗೆ ವಿಶೇಷಣವು, ಮರುತಃ ಎಂಬ ಶಬ್ದಕ್ಕೆ ಇಲ್ಲ. ಎಂದು ಹೇಳಿರುವರು. **ಅಗ್ನಿಜಿಹ್ವಾ—** ಎಂಬ ಶಬ್ದವಿರುವ ಒಂದೆರಡು ಋಕ್ಕುಗಳನ್ನು ಉದಾಹರಣೆಗಾಗಿ ಕೊಡುತ್ತೇವು—

ಶೃಣ್ವಂತು ಸೋಮಂ ಮರುತಃ ಸುದಾನವೋಽಗ್ನಿಜಿಹ್ವಾ ಋತಾವೃಧಃ ।
(ಋ. ಸಂ. ೧೦-೪೪-೧೪)

ಇಮಂ ಸ್ತೋಮಂ ರೋದಸೀ ಪ್ರ ಬ್ರವೀಮ್ಯೃದೂದರಾಃ ಶೃಣವನ್ನಗ್ನಿಜಿಹ್ವಾಃ ॥
(ಋ. ಸಂ. ೩-೫೪-೧೦)

ಯೋಽಗ್ನಿಜಿಹ್ವಾ ಋತಸಾಪ ಆಸುರ್ಯೋ ಮನುಂ ಚಕ್ರುರುಪರಂ ದಸಾಯ ॥
(ಋ. ಸಂ ೬-೨೧-೧೧)

ದ್ವಿಜನ್ಮಾನೋ ಯ ಋತಸಾಪ ಸತ್ಯಾಃ ಸ್ವರ್ಮಂತೋ ಯಜತಾ ಅಗ್ನಿಜಿಹ್ವಾಃ ।
(ಋಸಂ, ೬-೫೦-೨)

ಯೇ ಅಗ್ನಿಜಿಹ್ವಾ ಉತ ವಾ ಯಜತ್ರಾ ಆಸದ್ಯಾಸ್ಮಿನ್ ಬರ್ಹಿಷಿ ಮಾದಯಧ್ವಂ ।
(ಋ. ಸಂ. ೬-೫೨-೧೩)

ಬಹವಃ ಸೂರಚಕ್ಷಸೋಽಗ್ನಿಜಿಹ್ವಾ ಋತಾವೃಧಃ ॥
(ಋ. ಸಂ. ೭-೬೬-೧೦)

ವಿಪಕ್ಷಸೋ ಅಗ್ನಿಜಿಹ್ವಾ ಋತಾವೃಧ ಋತಸ್ಯ ಯೋನಾ ಕ್ಷಯಿತಃ ಸನೋಕಸಾ ॥
(ಋಂ. ಸಂ ೧೦-೬೫-೭)

ಈ ಋಕ್ಕುಗಳಲ್ಲಿ ಮಾತ್ರ ಈ ಅಗ್ನಿಜಿಹ್ವಾಃ ಎಂಬ ಶಬ್ದಪ್ರಯೋಗವಿರುವುದು. ಇನ್ನೆಲ್ಲಿಯೂ ಇರುವುದಿಲ್ಲ.

ಮನವಃ—ಮಂತಾರಃ ಜ್ಞಾತಾರಃ । ತಿಳಿವಳಿಕೆಯುಳ್ಳವರು.

ಸೂರಚಕ್ಷಸಃ—ಸೂರ್ಯಪ್ರಕಾಶದಂತೆ ಕಾಂತಿಯುಕ್ತರಾದವರು. **ಸೂರ್ಯಸ್ಯೇವ ಚಕ್ಷುರ್ದರ್ಶನಂ ಯೇಷಾಂ ತೇ ಸೂರಚಕ್ಷಸಃ ॥**

॥ ವ್ಯಾಕರಣಪ್ರಕ್ರಿಯಾ ॥

ಪೃಷದಶ್ವಾಃ—ಪೃಷದ್ಭಿಃ ಯುಕ್ತಾಃ ಅಶ್ವಾಃ ಯೇಷಾಂ ತೇ ಪೃಷದಶ್ವಾಃ **ಬಹುವ್ರೀಹೌ ಪ್ರಕೃತ್ಯಾ-ಪೂರ್ವಪದಮ್**—ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ. ಹೀಗೆಯೇ ಪೃಶ್ನಿಮಾತರಃ ಎಂಬಲ್ಲಿಯೂ ಸ್ವರ ಬರುತ್ತದೆ.

ಶುಭಂಯಾವಾನಃ—ಯಾ ಪ್ರಾಪಣೇ ಧಾತು. ಇದಕ್ಕೆ **ಆತೋಮನಿನ್‌ವನಿಬ್‌ಕ್ವನಿಬಶ್ಚ** (ಪಾ. ಸೂ. ೩-೨-೭೪) ಎಂಬುದರಿಂದ ಆದಂತವಾಗುವುದರಿಂದ ವನಿಪ್ ಪ್ರತ್ಯಯ. ಯಾವನ್ ಶಬ್ದವಾಗುತ್ತದೆ. ಶುಭಂ ಯಾಂತಿ-ಗಚ್ಛಂತಿ ಇತಿ ಶುಭಂ ಯಾವಾನಃ **ತತ್ಪುರುಷೇ ಕೃತಿ ಬಹುಲಂ** (ಪಾ. ಸೂ. ೬-೩-೧೪) ಎಂಬಲ್ಲಿ ಬಹುಲಗ್ರಹಣದಿಂದ ದ್ವಿತೀಯಾವಿಭಕ್ತಿಗೂ ಸಮಾಸದಲ್ಲಿ ಅಲುಕ್. **ಗತಿಕಾರಕೋಪಪದಾತ್ ಕೃತ್**—ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಜಗ್ಮ್ಯಃ—ಗಮ್‌ಲೃ ಗತೌ ಧಾತು. ಇದಕ್ಕೆ **ಅದೃಗಮಹನಜನಃ ಕಿಕಿನೌಲಿಟ್ ಚ** (ಪಾ. ಸೂ ೩-೨-೧೭೧) ಎಂಬುದರಿಂದ ಕಿನ್ ಪ್ರತ್ಯಯ. ಇದಕ್ಕೆ ಲಿತ್ವದ್ಭಾವ ಹೇಳಿರುವುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. **ಕುಹೋಶ್ಚುಃ** ಎಂಬುದರಿಂದ ಚುತ್ವ. **ಗಮಹನಜನ**—ಎಂಬುದರಿಂದ ಪ್ರತ್ಯಯ ಕಿತ್ತಾದುದರಿಂದ ತನ್ನಿಮಿತ್ತವಾಗಿ ಧಾತುವಿನ ಉಪಧೆಗೆ ಲೋಪ. ಜಗ್ಮಿಶಬ್ದವಾಗುತ್ತದೆ. ಪ್ರಥಮಾಬಹುವಚನವಲ್ಲಿ **ಜಸಿ ಚ**–ಎಂಬುದರಿಂದ ಗುಣ. ಅಯಾದೇಶ. ಪ್ರತ್ಯಯ ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಅವಸಾ—ಅವ ರಕ್ಷಣೇ ಧಾತು. ಅಸುನ್ ಪ್ರತ್ಯಯ. ಅವಸ್ ಶಬ್ದವಾಗುತ್ತದೆ. ತೃತೀಯಾವಿಕವಚನಾಂತರೂಪ.

ಗಮನ್—ಗಮ್‌ಲೃ ಗತೌ ಧಾತು. ಪ್ರಾರ್ಥನಾರೂಪ ಅರ್ಥತೋರುವಾಗ ಲೇಟ್. ಪ್ರಥಮಪುರುಷ ಬಹುವಚನವಲ್ಲಿ ಝಿಪ್ರತ್ಯಯ. **ಝೋಂತಃ**—ಎಂಬುದರಿಂದ ಅಂತಾದೇಶ. **ಇತಶ್ಚ ಲೋಪಃ ಪರಸ್ಮೈಪದೇಷು** ಎಂಬುದರಿಂದ ಅದರ ಇಕಾರಕ್ಕೆ ಲೋಪ. **ಲೇಟೋಽಡಾಟೌ** ಸೂತ್ರದಿಂದ ಅಡಾಗಮ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಲುಕ್. ಆದುದರಿಂದ ಧಾದೇಶ ಬರುವುದಿಲ್ಲ. ಅತಿಜಂತದ ಪರದಲ್ಲಿರುವುದರಿಂದ ನಿಘಾತ ಸ್ವರ ಬರುತ್ತದೆ. ಸಂಯೋಗಾಂತಲೋಪದಿಂದ ಅಂತ್ಯತಕಾರಲೋಪ. ॥ ೬ ॥

॥ ಸಂಹಿತಾಪಾಠಃ ॥

ಭದ್ರಂ ಕರ್ಣೇಭಿಃ ಶೃಣುಯಾಮ ದೇವಾ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿರ್ವ್ಯಶೇಮ ದೇವಹಿತಂ ಯದಾಯುಃ ॥ ೮ ॥

॥ ಪದಪಾಠಃ ॥

ಭದ್ರಂ । ಕರ್ಣೇಭಿಃ । ಶೃಣುಯಾಮ । ದೇವಾಃ । ಭದ್ರಂ । ಪಶ್ಯೇಮ । ಅಕ್ಷಭಿಃ । ಯಜತ್ರಾಃ ।

ಸ್ಥಿರೈಃ । ಅಂಗೈಃ । ತುಷ್ಟುವಾಂಸಃ । ತನೂಭಿಃ । ವಿ । ಅಶೇಮ । ದೇವಹಿತಂ । ಯತ್ । ಆಯುಃ ॥ ೮ ॥

ಸಾಯಣಭಾಷ್ಯಂ

ಅಸ್ತಿ ಸೌಮ್ಯಚರುಸ್ತ್ವತೀಯಸವನೇ । ತೇನ ಚರುಣಾ ದೇವತಾಮಿಷ್ಟ್ವೋತ್ಪನ್ನಶೇಷೇ ತಸ್ಮಿನ್ಪಶುಪುರೋಡಾಶೇ ತಸ್ಮಿನ್ಪಶೌ ಹೃತಮವನೀಯ ತಸ್ಮಿನ್ಪಷಟ್‌ಕರ್ತ್ರಾ ಸ್ವಕೀಯಾ ಛಾಯಾ ದ್ರಷ್ಟವ್ಯಾ । ಸಾ ಯದಿ ನ ದೃಶ್ಯೇತ ತದಾನೀಂ ಭದ್ರಮಿತ್ಯೇಕಾ ಪಠಿತವ್ಯಾ । ತ್ವಂ ಸೋಮೇತಿ ಖಂಡೇ ತಥೈವ ಸೂತ್ರ್ಯತೇ । ರಾಜ್ಞಾ ಸೋಮೇನ ತದ್ವಯಮಸ್ಮಾಸು ಧಾರಯಾಮಸಿ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾ ಇತಿ ಚ । ಆ. ೫-೧೯ । ಇತಿ ॥ ಮಹಾನಾಮ್ನ್ಯೋವ್ರತೇಽಪ್ಯೇಷಾ ಭೂಮಿಸ್ಪರ್ಶನೇ ಜಪ್ಯಾ । ಸೂತ್ರಿತಂ ಚೈತದ್ಭದ್ರಮಿತಿ ಖಂಡೇ । ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ಶಂ ನ ಇಂದ್ರಾಗ್ನೀ ಭವತಾಮವೋಭಿಃ । ಆ. ೮-೧೪ । ಇತಿ ॥

ಹೇ ದೇವಾ ಜ್ಞಾನಾದಿಗುಣಯುಕ್ತಾಃ ಸರ್ವೇ ದೇವಾಃ ಕರ್ಣೇಭಿರಸ್ಮದೀಯೈಃ ಶ್ರೋತ್ರೈರ್ಭದ್ರಂ ಭಜನೀಯಂ ಕಲ್ಯಾಣಂ ವಚನಂ ಶೃಣುಯಾಮ । ಯುಷ್ಮತ್ಪ್ರಸಾದಾಚ್ಛ್ರೋತುಂ ಸಮರ್ಥಾಃ ಸ್ಯಾಮ । ಅಸ್ಮಾಕಂ ಬಾಧಿರ್ಯಂ ಕದಾಚಿದಪಿ ಮಾ ಭೂತ್ । ಹೇ ಯಜತ್ರಾ ಯಾಗೇಷು ಚರುಪುರೋಡಾಶಾದಿಭಿರ್ಯಷ್ಟವ್ಯಾ ದೇವಾ ಅಕ್ಷಭಿರಕ್ಷಿಭಿರಾತ್ಮೀಯೈಶ್ಚಕ್ಷುರ್ಭಿರ್ಭದ್ರಂ ಶೋಭನಂ ಪಶ್ಯೇಮ । ದ್ರಷ್ಟುಂ ಸಮರ್ಥಾಃ ಸ್ಯಾಮ । ಅಸ್ಮಾಕಂ ದೃಷ್ಟಿಶಕ್ತಿರಪಿ ಮಾ ಭೂತ್ । ಸ್ಥಿರೈರ್ದೃಢೈರಂಗೈರ್ಹಸ್ತಪಾದಾದಿಭಿರವಯವೈಸ್ತನೂಭಿಃ ಶರೀರೈಶ್ಚ ಯುಕ್ತಾ ವಯಂ ತುಷ್ಟುವಾಂಸೋ ಯುಷ್ಮಾನ್ ಸ್ತುವಂತೋ ಯದಾಯುಃ ಷೋಡಶಾಧಿಕಶತಪ್ರಮಾಣಂ ವಿಂಶತ್ಯಧಿಕಶತಪ್ರಮಾಣಂ ವಾ ದೇವಹಿತಂ ದೇವೇನ ಪ್ರಜಾಪತಿನಾ ಸ್ಥಾಪಿತಂ ತದ್ವ್ಯಶೇಮ । ಪ್ರಾಪ್ನುಯಾಮ ॥ ಕರ್ಣೇಭಿಃ । ಬಹುಲಂ ಛಂದಸೀತಿ ಭಿಸ ಐಸಭಾವಃ । ಅಕ್ಷಭಿಃ । ಛಂದಸ್ಯಪಿ ದೃಶ್ಯತ ಇತ್ಯನಜ್ ಸ ಚೋದಾತ್ತಃ । ಯಜತ್ರಾಃ । ಅಮಿನಕ್ಷೀತ್ಯಾದಿನಾ ಯಜೇರತ್ರನ್‌ಸ್ಪ್ರತ್ಯಯಃ । ತುಷ್ಟುವಾಂಸಃ । ಷ್ಟುಞ್ ಸ್ತುತೌ । ಲಿಟಃ ಕ್ವಸುಃ । ಶರ್ಪೂರ್ವಾಃ ಖಯ ಇತಿ ತಕಾರಃ ಶಿಷ್ಯತೇ । ಅಶೇಮ । ಅಶೂ ವ್ಯಾಪ್ತೌ । ಲಿಙ್ಯಾಶಿಷ್ಯಙ್ । ಯದಿ ತು ತತ್ರ ಪರಿಗಣನಮನ್ಯವ್ಯಾವೃತ್ತ್ಯರ್ಥಂ ತದಾನೀಂ ಲಿಙಃ ವ್ಯತ್ಯಯೇನ ಶಪ್ । ದೇವಹಿತಂ । ತೃತೀಯಾ ಕರ್ಮಣೀತಿ ಪೂರ್ವಪದಪ್ರಕೃತಿಸ್ವರತ್ವಂ ॥

ಪ್ರತಿಪದಾರ್ಥ

ದೇವಾಃ—(ದಾನಾದಿಗುಣಯುಕ್ತರಾದ) ಎಲೈ ದೇವತೆಗಳೇ । **ಕರ್ಣೇಭಿಃ**— (ನಮ್ಮ) ಕಿವಿಗಳಿಂದ । **ಭದ್ರಂ**—ಕಲ್ಯಾಣರೂಪವಾದ ವಾರ್ತೆಯನ್ನು । **ಶೃಣುಯಾಮ**—ಕೇಳುವ (ಸಾಮರ್ಥ್ಯವುಳ್ಳ)ವರಾಗಿ ಆಗೋಣ । **ಯಜತ್ರಾಃ**—**ಯ**ಜ್ಞದಲ್ಲಿ ಪೂಜಾರ್ಹರಾದ ಎಲೈ ದೇವತೆಗಳೇ । **ಅಕ್ಷಭಿಃ** (ನಮ್ಮ) ಕಣ್ಣುಗಳಿಂದ । **ಭದ್ರಂ**—ಮಂಗಳಕರವಾದುದನ್ನು । **ಪಶ್ಯೇಮ**—ನೋಡುವ (ಸಾಮರ್ಥ್ಯವುಳ್ಳ)ವರಾಗಿ ಆಗೋಣ. । **ಸ್ಥಿರೈಃ**—ದೃಢಗಳಾದ । **ಅಂಗೈಃ**—ಹಸ್ತಪಾದಾದ್ಯಂಗಗಳಿಂದಲೂ । **ತನೂಭಿಃ**—ಶರೀರಗಳಿಂದಲೂ **ಕೂಡಿ** (ನಾವು) । **ತುಷ್ಟುವಾಂಸಃ**—ನಿಮ್ಮನ್ನು ಸ್ತುತಿಸುತ್ತಾ । **ಯತ್ ಆಯುಃ**—ಯಾವ ಆಯುಃಪರಿಮಿತಿಯು। **ದೇವಹಿತಂ**—ಪ್ರಜಾಪತಿಯಿಂದ ಅನುಗೃಹೀತವಾಗಿದೆಯೋ ಅದನ್ನು । **ವ್ಯಶೇಮ**—ಹೊಂದೋಣ. (ಅನುಭವಿಸೋಣ) ।

॥ ಭಾವಾರ್ಥ ॥

ಯಜ್ಞಗಳಲ್ಲಿ ಪೂಜಾರ್ಹರಾದ ಎಲೈ ದೇವತೆಗಳೇ, ನಮ್ಮ ಕಿವಿಗಳಿಂದ ಯಾವಾಗಲೂ ಕಲ್ಯಾಣರೂಪವಾದ ವಾರ್ತೆಯನ್ನು ಕೇಳುವ ಸಾಮರ್ಥ್ಯವುಳ್ಳವರಾಗುವಂತೆಯೂ ಮತ್ತು ನಮ್ಮ ಕಣ್ಣುಗಳಿಂದ ಮಂಗಳಕರವಾದುದನ್ನೇ ನೋಡುವ ಸಾಮರ್ಥ್ಯವುಳ್ಳವರಾಗುವಂತೆಯೂ ಅನುಗ್ರಹಿಸಿ. ದೃಢಗಳಾದ ಅವಯವಗಳಿಂದ ಕೂಡಿದ ನಮ್ಮ ಶರೀರಗಳೊಂದಿಗೆ ನಿಮ್ಮನ್ನು ಸ್ತುತಿಸುತ್ತಾ ಪ್ರಜಾಪತಿಯಿಂದ ಅನುಗ್ರಹೀತವಾದ ನಮ್ಮ ಆಯುಃಪರಿಮಿತಿಯನ್ನು ಅನುಭವಿಸುವಂತೆ ಅನುಗ್ರಹಿಸಿ.

English Translation

O Gods, let us hear with our ears what is good ; objects of sacrifice, let us see with our eyes what is good ; engaged in your praises let us enjoy with firm limbs and sound bodies the term of life granted by the gods,

ವಿಶೇಷವಿಷಯಗಳು

ತೃತೀಯಸವನದಲ್ಲಿ ಸೌಮ್ಯಚರುವೆಂಬ ಸೋಮದೇವತೆಗೆ ಆಹುತಿಯನ್ನು ಪಶುಪ್ಯಾಸಪೂರ್ವಕವಾಗಿ ಅಗ್ನಿಯಲ್ಲಿ ಹೋಮ ಮಾಡುವುದು ರೂಢಿಯಲ್ಲಿರುವುದು. ದೇವತೆಯನ್ನುದ್ದೇಶಿಸಿ ಹೋಮವಾಡಿದಮೇಲೆ ಉಳಿದ ಹೋಮ ಶೇಷಕ್ಕೆ ಹೆಚ್ಚಾಗಿ ತುಪ್ಪವನ್ನು ಬೆರಸಿ ಆದರಲ್ಲಿ ಪಶುಪ್ಯತರ್ಕವಾದ ಯಜಮಾನನು ತನ್ನ ಪ್ರತಿಬಿಂಬವನ್ನು ನೋಡಿಕೊಳ್ಳಬೇಕು. ಆ ಘೃತದಲ್ಲಿ ತನ್ನ ಪ್ರತಿಬಿಂಬವು ಚೆನ್ನಾಗಿ ಕಾಣದಿದ್ದರೆ ಆಗ **ಭದ್ರಂ ಕರ್ಣೇಭಿಃ** ಎಂಬ ಈ ಪ್ರಸಕ್ತವಾದ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ತ್ರಂ ಸೋಮ** ಎಂಬ ಖಂಡದಲ್ಲಿ **ರಾಜ್ಞಾ ಸೋಮೇನ ತದ್ವಯಮಸ್ಮಾಸು ಧಾರಯಾಮಸಿ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾ ಇತಿಚೆ** ಎಂಬ ಸೂತ್ರದಿಂದ ನಿರ್ದೇಶಿಸಲ್ಪಟ್ಟಿರುವುದು. (ಆ. ೫-೧೯) ಮಹಾನಾಮ್ನೀವ್ರತದಲ್ಲಿಯೂ ಕೂಡ ಭೂಮಿಸ್ಪರ್ಶನ ಮಾಡುವಾಗ ಈ ಋಕ್ಕನ್ನು ಜಪಿಸಬೇಕೆಂದು **ಏತದ್ವಿದಂ** ಎಂಬ ಖಂಡದಲ್ಲಿ **ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ಶಂನ ಇಂದ್ರಾಗ್ನೀ ಭವತಾಮವೋಭಿಃ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ- ೮-೧೪)

ಭದ್ರಂ—ಒಳ್ಳೆಯದನ್ನು, ಮಂಗಳಕರವಾದ ವಿಷಯವನ್ನು ; ಭದ್ರಶಬ್ದವನ್ನು **ಶೃಣುಯಾಮ** ಎಂಬ ಕ್ರಿಯಾಪದದೊಡನೆ ಸಮನ್ವಯಮಾಡುವಾಗ **ಭದ್ರಂ**—ಮಂಗಳಕರವಾದ ವಚನವನ್ನು ಅಥವಾ ಮಾತನ್ನು ಎಂದೂ, **ಪಶ್ಯೇಮ** ಎಂಬ ಕ್ರಿಯೆಯೊಡನೆ ಸೇರಿಸುವಾಗ ಮಂಗಳಕರವಾದ ಕಾರ್ಯಗಳನ್ನು ಎಂದೂ ಅರ್ಥಗಳನ್ನು ಹೇಳಬೇಕು.

ಯಜತ್ರಾಃ—**ಯೋಗೇಷು ಚ ಪುರೋಡಾಶಾದಿಭಿರ್ಯಷ್ಟವ್ಯಾ ದೇವಾಃ** । ಯಜ್ಞಗಳಲ್ಲಿ ಪುರೋಡಾಶಾದಿಹವಿರ್ದ್ರವ್ಯಗಳಿಂದ ಆರಾಧಿಸಲ್ಪಡುವ ದೇವತೆಗಳು.

ವ್ಯಶೇಮ—**ಅಶೂ ವ್ಯಾಪ್ತೌ** । **ಪ್ರಾಪ್ನುಯಾಮ** । ಹೊಂದೋಣ, ಅನುಭವಿಸೋಣ, ಜೀವಿಸಿರೋಣ.

ದೇವಹಿತಂ ಯದಾಯುಃ—**ದೇವೇನ ಪ್ರಜಾಪತಿನಾ ಉಪಕಲ್ಪಿತಂ ಕೃತ್ಸ್ನಂ ಷೋಡಶಾಧಿಕಶತಸ್ರಮಾಣಂ ವಿಂಶತ್ಯಧಿಕಶತಸ್ರಮಾಣಂ ವಾ ಆಯುಃ** । ಬ್ರಹ್ಮನಿಂದ ಮನುಷ್ಯರ ವಿಷಯದಲ್ಲಿ ಕ್ಲೃಪ್ತವಾಗಿ ನಿರ್ಣಯಿಸಲ್ಪಟ್ಟ ಸಂಪೂರ್ಣ ಆಯುಸ್ಸು ಎಂದರೆ ಭಾಷ್ಯಕಾರರು ಹೇಳಿರುವಂತೆ ನೂರಹದಿನಾರು ಅಥವಾ ನೂರ ಇಪ್ಪತ್ತು ವರ್ಷಗಳ ಆಯುಃಪರಿಮಾಣವು. ಮುಂದಿನ ಋಕ್ಕಿನಲ್ಲಿ ನೂರು ವರ್ಷಗಳು ಮನುಷ್ಯರ ಆಯುಃಪ್ರಮಾಣ ನೆಂದು ಹೇಳಲ್ಪಟ್ಟಿರುವುದು.

ವ್ಯಾಕರಣಪ್ರಕ್ರಿಯಾ

ಕರ್ಣೇಭಿಃ—ಕರ್ಣಶಬ್ದಕ್ಕೆ ತೃತೀಯಾಬಹುವಚನ ಭಿಸ್ ಪರವಾದಾಗ **ಬಹುಲಂ ಛಂದಸಿ** (ಪಾ. ಸೂ. ೭-೧-೧೦) ಎಂಬುದರಿಂದ ಭಿಸಿಗೆ ಐಸಾದೇಶ ಬರುವುದಿಲ್ಲ. ಆಗ **ಬಹುವಚನೇ ಝಲ್ಯೇತ್**—ಎಂಬುದರಿಂದ ಅದಂತಾಂಗಕ್ಕೆ ಏತ್ವ. ಭಿಸಿನ ಸಕಾರಕ್ಕೆ ರುತ್ವವಿಸರ್ಗ.

ಶೃಣುಯಾಮ—ಶ್ರು ಶ್ರವಣೇ ಧಾತು. ಲಿಙ್ ಉತ್ತಮಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ. **ನಿತ್ಯಂ ಙಿತಃ**—ಎಂಬುದರಿಂದ ಸಕಾರಕ್ಕೆ ಲೋಪ. **ಶ್ರುವಃ ಶೃ ಚ** (ಪಾ. ಸೂ. ೩-೧-೭೪) ಎಂಬುದರಿಂದ ಪ್ರಕೃತಿಗೆ ಶೃ ಆದೇಶ. ಶ್ನುವಿಕರಣ. ಲಿಙಿಗೆ ಯಾಸುಡಾಗಮ. 'ತಿಙಂತನಿಘಾತಸ್ವರ ಬರುತ್ತದೆ.

ಅಕ್ಷಭಿಃ—ಅಕ್ಷಿಶಬ್ದ. ತೃತೀಯಾಬಹುವಚನ ಪರವಾದಾಗ **ಛಂದಸ್ಯಪಿ ದೃಶ್ಯತೇ**—ಎಂಬುದರಿಂದ ಉದಾತ್ತಸ್ವರವಿಶಿಷ್ಟವಾದ ಅನಙ್ ಆದೇಶ. ಜಾತ್ವಾದುದರಿಂದ ಅಂತಾದೇಶವಾಗಿ ಬರುತ್ತದೆ. ಅಕ್ಷನ್+ಭಿಸ್ ಎಂದಿರುವಾಗ **ನಲೋಪಃ ಪ್ರಾತಿಪದಿಕಾಂತಸ್ಯ**—ಎಂಬುದರಿಂದ ನಲೋಪ.

ಯಜತ್ರಾಃ—ಯಜ ದೇವಪೂಜಾಸಂಗತಿಕರಣದಾನೇಷು. ಧಾತು. ಇದಕ್ಕೆ **ಅಮಿನಕ್ಷಿಯಜಿವಧಿ**—ಎಂಬುದರಿಂದ (ಉ. ಸೂ. ೩-೨೮೫) ಅತ್ರನ್ ಪ್ರತ್ಯಯ. ಸಂಬೋಧನಾ ಬಹುವಚನಾಂತರೂಪ. **ಆಮಂತ್ರಿತಸ್ಯ ಚ** (ಪಾ. ಸೂ. ೬-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ.

ತುಷ್ಟುವಾಂಸಃ—ಷ್ಟುಞ್ ಸ್ತುತೌ ಧಾತು. **ಕ್ವಸುಶ್ಚ** (ಪಾ. ಸೂ. ೩-೨-೧೦೭) ಎಂಬುದರಿಂದ ಲಿಟ್ ಸ್ಥಾನದಲ್ಲಿ ಕ್ವಸುಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ ಬಂದಾಗ **ಶರ್ಪೂರ್ವಾಃ ಖಯಃ** (ಪಾ. ಸೂ.

೭-೪-೬೧) ಎಂಬುದರಿಂದ ಅಭ್ಯಾಸದಲ್ಲಿ ಋಯ್‌ವರ್ಣವಾದ ತಕಾರ ಉಳಿಯುತ್ತದೆ. ತುಷ್ಟುವಸ್ ಶಬ್ದವಾಗುತ್ತದೆ. ಪ್ರಥಮಾಜಸಿನಲ್ಲಿ **ಉಗಿದಚಾಂ ಸರ್ವ**—ಎಂಬುದರಿಂದ ನುಮಾಗಮ. **ಅತ್ವಸಂತಸ್ಯ ಚಾಧಾತೋಃ**—ಎಂಬುದರಿಂದ ಉಪಧಾದೀರ್ಘ. ನಕಾರಕ್ಕೆ ಅನುಸ್ವಾರ. ಪ್ರತ್ಯಯಸ್ವರದಿಂದ ಆಕಾರ ಉದಾತ್ತವಾಗುತ್ತದೆ.

ಆಶೇಮ— ಅಶೂ ವ್ಯಾಪ್ತೌ ಧಾತು. ಇದಕ್ಕೆ ಆಶೀರ್ಲಿಙಿನ ಉತ್ತಮಪುರುಷಬಹುವಚನ ಮಸ್ ಪ್ರತ್ಯಯ. ಸಕಾರಲೋಪ. ಆಶೀರ್ಲಿಙ್ ಪರವಾದಾಗ ಧಾತುವಿಗೆ **ಲಿಙ್ಯಾಶಿಷ್ಯಙ್** (ಪಾ. ಸೂ. ೩-೧-೪೬) ಎಂಬುದರಿಂದ ಆಙ್. ಆ ಸೂತ್ರದಲ್ಲಿ ಇತರ ವ್ಯಾವೃತ್ತಿಗೋಸ್ಕರ ಪರಿಗಣನವಿರುವುದಾದರೆ **ವ್ಯತ್ಯಯೋಬಹುಲಂ** ಎಂಬುದರಿಂದ ಶ್ನುಗೆ ಶಪ್. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ದೇವಹಿತಮ್—ಡುಧಾಞ್ ಧಾರಣಪೋಷಣಯೋಃ ಧಾತು. ಕರ್ಮಣಿಯಲ್ಲಿ ಕ್ತಪ್ರತ್ಯಯ. **ದಧಾತೇರ್ಹಿಃ** (ಪಾ. ಸೂ. ೭-೪-೪೨) ಎಂಬುದರಿಂದ ಪ್ರಕೃತಿಗೆ ಹಿ ಆದೇಶ. ದೇವೇನ ಹಿತಮ್. ದೇವಹಿತಮ್ **ತೃತೀಯಾಕರ್ಮಣಿ** (ಪಾ. ಸೂ. ೬-೨-೪೮) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ. ॥ ೮ ॥



ಸಂಹಿತಾಪಾಠಃ

ಶತಮಿನ್ನು ಶರದೋ ಅಂತಿ ದೇವಾ ಯತ್ರಾ ನಶ್ಚಕ್ರಾ ಜರಸಂ
ತನೂನಾಂ ।
ಪುತ್ರಾಸೋ ಯತ್ರ ಪಿತರೋ ಭವಂತಿ ಮಾ ನೋ ಮಧ್ಯಾ-
ರೀರಿಷತಾಯುರ್ಗಂತೋಃ ॥ ೯ ॥

॥ ಪದಪಾಠಃ ॥

ಶತಂ । ಇತ್ । ನು । ಶರದಃ । ಅಂತಿ । ದೇವಾಃ । ಯತ್ರ । ನಃ । ಚಕ್ರ । ಜರಸಂ । ತನೂನಾಂ ।
ಪುತ್ರಾಸಃ । ಯತ್ರ । ಪಿತರಃ । ಭವಂತಿ । ಮಾ । ನಃ । ಮಧ್ಯಾ । ರಿರಿಷತ । ಆಯುಃ । ಗಂತೋಃ ॥ ೯ ॥

॥ ಸಾಯಣಭಾಷ್ಯಂ ॥

ಹೇ ದೇವಾ ಅತ್ಯಂತಿಕೇ ಮನುಷ್ಯಾಣಾಂ ಸಮೀಪ ಆಯುಷ್ಟ್ವೇನ ಭವದ್ಭಿಃ ಕಲ್ಪಿತಾಃ ತರದಃ ಸಂವತ್ಸರಾಃ ಶತಮಿನ್ನು ಶತಂ ಖಲು । ಯಸ್ಮಾತ್ಸೃಷ್ಟಿಕಾಲೇ ಮನುಷ್ಯಾಣಾಂ ಶತಂ ಸಂವತ್ಸರಾ. ಆಯುರಿತಿ ಯುಷ್ಮಾಭಿಃ ಪರಿಕಲ್ಪಿತಂ ತೆಸ್ಮಾನ್ನೋ೭ಸ್ಮಾಕಮಾಯುರ್ಗಂತೋಃ ಕ್ಲೃಪ್ತಸ್ಯಾಯುಷೋ ಗಮನಾತ್ಪೂರ್ವಂ ಮಧ್ಯಾ ಮಧ್ಯೇ ಮಾ ರೀರಿಷತ । ಮಾ ಹಿಂಸಿಷ್ಟ । ಕೀದೃಶಾನ್ । ನೋ೭ಸ್ಮಾಕಂ ತನೂನಾಂ ಶರೀರಾಣಾಂ ಜರಸಂ ಜರಾಂ ಯೆತ್ರ ಯಸ್ಯಾಮವಸ್ಥಾಯಾಂ ಚಕ್ರ ಕೃತವಂತೋ ಯೂಯಂ । ಯತ್ರ ಚ ಪುತ್ರಾಸಃ ಪುತ್ರಾಃ ಪಿತರೋ೭ಸ್ಮಾಕಂ ರಕ್ಷಿತಾರೋ ಭವಂತಿ । ಈದೃಗ್ಜರಾಪನ್ನಾನಿತ್ಯರ್ಥಃ ॥ ಅಂತಿ । ಅಂತಿಕಶಬ್ದಸ್ಯ ಕಾದಿಲೋಪೋ ಬಹುಲಮಿತಿ ವಕ್ತವ್ಯಮಿತಿ ಕಲೋಪಃ । ಯತ್ರ । ಋಚಿ ತನುಘಮಕ್ಷುತಜ್ಕುತ್ರೇತಿ ಸಂಹಿತಾಯಾಂ ದೀರ್ಘಃ । ಚಕ್ರ । ಲಿಟಿ ಮಧ್ಯಮಬಹುವಚನಸ್ಯ ಕಿತ್ತ್ವಾದ್ಧುಗಾಭಾವೇ ಯಣಾದೇಶಃ । ದ್ವ್ಯಚೋ೭ತಸ್ತಿಙ ಇತಿ ಸಂಹಿತಾಯಾಂ ದೀರ್ಘತ್ವಂ । ಜರಸಂ । ಜರಾಯಾ ಜರಸನ್ಯತರಸ್ಯಾಂ । ಪಾ. ೬-೩-೧೦೧ । ಇತಿ ಜರಸಾದೇಶಃ । ಮಧ್ಯಾ । ಸುಪಾಂ ಸುಲುಗಿತಿ ಸಪ್ತಮ್ಯಾ ಡಾದೇಶಃ । ರೀರಿಷತ । ರಿಷ ರುಷ ಹಿಂಸಾಯಾಂ । ಅಸ್ಮಾಣ್ಣ್ಯಂತಾತ್ ಮಾಙಃ ಲುಙಿ ಮಧ್ಯಮಬಹುವಚನೇ ಚ್ಲೇಶ್ಚಜಿ ಣಿಲೋಪೋಪಧಾಹ್ರಸ್ವದ್ವಿರ್ವಚನಹಲಾದಿಶೇಷಸನ್ವದ್ಭಾವೇತ್ವ-ದೀರ್ಘಾಃ । ಛಾಂದಸಃ ಪದಕಾಲೀನೋ ಹ್ರಸ್ವಃ । ಗಂತೋಃ । ಭಾವಲಕ್ಷಣೇ ಸ್ಥೇಣ್ । ಪಾ. ೩-೪-೭೬ । ಇತಿ ಗಮೇಸ್ತೋಸುನ್ಪ್ರತ್ಯಯಃ ॥

ಪದಪಾಠಾರ್ಥ

ದೇವಾಃ—ಎಲೈ ದೇವತೆಗಳೇ । **ಅಂತಿ**—(ಮಾನವರ) ಜೀವಿತದಲ್ಲಿ ಕಲ್ಪಿತಗಳಾದ । **ತರದಃ**—ಸಂವತ್ಸರಗಳು । **ಶತಂ ಇತ್ ನು**—ನೂರೇ ಅಷ್ಟೇ. (ಆದ್ದರಿಂದ) । **ನಃ**—ನಮ್ಮ । **ತನೂನಾಂ**—ಶರೀರಗಳಿಗೆ । **ಯತ್ರ**—ಯಾವ ನಮ್ಮ ಆಯುಸ್ಸಿನಕಾಲದಲ್ಲಿ । **ಜರಸಂ** (ದುರ್ಬಲವಾದ) ನುಪ್ಪನ್ನು । **ಚಕ್ರ**—ಉಂಟು ಮಾಡೋಣದರಿಂದ । **ಯತ್ರ**—ಯಾವ ನಮ್ಮ ಆದೇ ಆಯುಃಕಾಲದಲ್ಲಿ । **ಪುತ್ರಾಸಃ**—ನಮ್ಮ ಪುಕ್ಕಳು । **ಪಿತರಃ**—(ನಮ್ಮ) ತಂದೆಗಳಂತೆ ರಕ್ಷಕರಾಗಿ ಅಥವಾ ತಮ್ಮ ಪುತ್ರರಿಗೆ ತಂದೆಗಳಾಗಿ । **ಭವಂತಿ**—ಆಗುತ್ತಾರೆಯೋ (ಹಾಗೆ ಮಾಡಿ) । **ನಃ**—ನಮ್ಮನ್ನು । **ಆಯುರ್ಗಂತೋಃ**— ನಮ್ಮ ಪೂರ್ಣವಾದ ಆಯಸ್ಸು ಮುಗಿಯುವುದರೊಳಗೆ । **ಮಧ್ಯಾ**—ನಡುನೆ । **ಮಾ ರೀರಿಷತ**—ತಡೆಗಟ್ಟಿ ಹಿಂಸಿಸಬೇಡಿ.

ಭಾವಾರ್ಥ

ಎಲೈ ದೇವತೆಗಳೇ, ಮಾನವರಿಗೆ ಜೀವಿತದಲ್ಲಿ ನೂರುವರ್ಷ ಆಯುಸ್ಸೆಂದು ನಿಶ್ಚರ್ಷವಾಗಿಯೇ ಇದೆ. ಆದರೆ ಆ ನೂರುವರ್ಷಗಳ ಆಯುಸ್ಸನ್ನೂ ಸಂಪೂರ್ಣವಾಗಿ ಅನುಭವಿಸುತ್ತಿರುವ ಕಾಲವಲ್ಲೇ ಮಧ್ಯದಲ್ಲಿ ನಮ್ಮ ಶರೀರಗಳಿಗೆ ಮುಪ್ಪಿನಂತಹ ದೌರ್ಬಲ್ಯವನ್ನು ಉಂಟುಮಾಡಿ ಆದರಿಂದ ನಮ್ಮ ಸ್ವಾಧೀನವಿಲ್ಲದೇ ನಮ್ಮ ಶರೀರರಕ್ಷಣೆಯ ಭಾರವು ನಮ್ಮ ಮಕ್ಕಳಿಂದ ಆಗುವಂತೆಮಾಡಿ ನಮ್ಮ ಆಯಸ್ಸಿನ ಮಧ್ಯಕಾಲದಲ್ಲಿ ನಮ್ಮ ಬೆಳೆವಣಿಗೆಗೆ ತಡೆಗಟ್ಟನಮ್ಮನ್ನು ಹಿಂಸಿಸಬೇಡಿ.

English Translation

O Gods, since only a hundred years were oppointed for the life of man at the close of which you cause old age to our bodies and at the close of which the sons become fathers, may you never destroy our life while it is yet running its course.

॥ ವಿಶೇಷವಿಷಯಗಳು ॥

ಶತಂ ಶರದಃ—ನೂರು ಸಂವತ್ಸರಗಳು. ಶರದೃತುವು ಒಂದು ಸಂವತ್ಸರದಲ್ಲಿ ಒಂದಾವರ್ತಿ ಮಾತ್ರ ಬರುವುದರಿಂದ ನೂರು ಶರದೃತುಗಳೆಂದರೆ ನೂರು ವರ್ಷಗಳೆಂದರ್ಥವು. ಋಗ್ವೇದದಲ್ಲಿಯೂ ಇತರ ವೇದಗಳಲ್ಲಿಯೂ ಸಂವತ್ಸರವನ್ನು ಸೂಚಿಸುವುದಕ್ಕಾಗಿ ಶರತ್ ಶಬ್ದದ ಪ್ರಯೋಗವು ವಿಶೇಷವಾಗಿರುವುದು.

ಅಂತಿ—**ಅಂತಿಕೇ** । ಶರೀರದಲ್ಲಿ ವಯೋಧರ್ಮಕ್ಕನುಸಾರವಾಗಿ ತಲೆದೋರುವ ವೃದ್ಧಾಪ್ಯವು, ಮುಪ್ಪು.

ಜರಸಂ ತನೂನಾಂ—ಸಮೀಪದಲ್ಲಿ

ಪುತ್ರಾಸೋ ಯತ್ರ ಪಿತರೋ ಭವಂತಿ—ಭಾಷ್ಯಕಾರರು ಈ ವಾಕ್ಯಕ್ಕೆ—**ಯತ್ರ ಚ ಪುತ್ರಾಃ ಪಿತರೋಽಸ್ಮಾಕಂ ರಕ್ಷಿತಾರೋ ಭವಂತಿ** । ಯಾವ ವೃದ್ಧಾಪ್ಯದಲ್ಲಿ ನಮ್ಮ ಪುತ್ರರು ನಮ್ಮನ್ನು ರಕ್ಷಿಸಬೇಕಾಗುವುದೋ ಅಂತಹ ಮುಪ್ಪು ಉಂಟಾಗದಿರಲಿ—let us not become so feeble and infirm as to be as it were, and to require the paternal care of our own sons ಎಂಬರ್ಥವನ್ನು ಹೇಳಿರುವರು. ಈ ವಿಧವಾದ ಅರ್ಥಕ್ಕಿಂತಲೂ ನಮ್ಮ ಆಯುಷ್ಯಕಾಲದಲ್ಲಿ ಅಥವಾ ಆಯುಷ್ಯದ ಕೊನೆಯ ಭಾಗದಲ್ಲಿ ನಮಗೆ ಪುತ್ರರಾಗಿರುವವರು (ಪುತ್ರಾದಿಗಳನ್ನು ಉತ್ಪತ್ತಿಮಾಡುವುದರಿಂದ) ತಂದೆಗಳಾಗುವರೋ ಅಂತಹ ವೃದ್ಧಾಪ್ಯವನ್ನು ಎಂಬ ಅರ್ಧವೇ ಈ ಋಕ್ಕಿನಲ್ಲಿ ಭಾಸವಾಗಿರುವುದು.

ಆಯುರ್ಗಂತೋಃ— **ಕ್ಲೃಪ್ತಸ್ಯಾಯುಷೋ ಗಮನಾತ್ಪೂರ್ವಂ** । ಕ್ಲೃಪ್ತವಾದ ನೂರುವರ್ಷಗಳ ಆಯುಃ ಪರಿಮಿತಿಗೆ ಮುಂಚೆಯೇ ಎಂದರ್ಥವು.

ವ್ಯಾಕರಣಪ್ರಕ್ರಿಯಾ

ಅಂತಿ—ಅಂತಿಕ ಶಬ್ದ. ಇದರ ಕೊನೆಯ ಕಕಾರಕ್ಕೆ **ಕಾದಿಲೋಪೋ ಬಹುಲಮಿತಿ ವಕ್ತವ್ಯಮ್**—ಎಂಬ ವಚನದಿಂದ ಲೋಪ ಬರುತ್ತದೆ.

ಯತ್ರ—ಯಚ್ಛಬ್ದ. ಸಪ್ತಮಿಯಲ್ಲಿ **ಸಪ್ತಮ್ಯಾಸ್ತ್ರಲ್**—ಎಂಬುದರಿಂದ ತ್ರಲ್ ಪ್ರತ್ಯಯ. ಇದಕ್ಕೆ ವಿಭಕ್ತಿಸಂಜ್ಞೆ ಇರುವುದರಿಂದ **ತ್ಯದಾದೀನಾಮಃ** ಎಂಬುದರಿಂದ ತಕಾರಕ್ಕೆ ಅತ್ವ ಪರರೂಪ. **ಯಚಿತುನು-ಘುಮಸ್ಲುತಶ್ಚ ಕುತ್ರ**—(ಪಾ. ಸೂ. ೬-೩-೧೩೩) ಎಂಬುದರಿಂದ ಸಂಹಿತಾವಸ್ಥೆಯಲ್ಲಿ ದೀರ್ಘ ಬರುತ್ತದೆ.

ಚಕ್ರ—ಡುಕೃಞ್ ಕರಣೇ ಧಾತು. ಲಿಟ್ ಮಧ್ಯಮಪುರುಷ ಬಹುವಚನದಲ್ಲಿ ಥ ಪ್ರತ್ಯಯಕ್ಕೆ ಅ ಆದೇಶ. ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಉರದತ್ವ. ಚುತ್ವ. ಚಕ್ರ+ಅ ಎಂದಿರುವಾಗ ಯಣಾದೇಶ. ಯತ್ರ ಎಂದು ಹಿಂದೆ ಸಂಬಂಧವಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ವ್ಯೃಜೋತಸ್ತಿಙಿಃ**— (ಪಾ. ಸೂ ೬-೩-೧೩೫) ಎಂಬುದರಿಂದ ಸಂಹಿತಾವಸ್ಥೆಯಲ್ಲಿ ದೀರ್ಘ ಬರುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಜರಸೆಮ್— ಜರಾ ಶಬ್ದ. ಇದಕ್ಕೆ ದ್ವಿತೀಯಾ ಏಕವಚನ ಅಮ್ ಪರವಾದಾಗ **ಜರಾಯೊ ಜರಸೆನ್ಯತರಸ್ಯಾಮ್**—(ಪಾ ಸೂ. ೭-೩-೧೧೧) ಎಂಬುದರಿಂದ ಜರಸ್ ಆದೇಶ.

ಪುತ್ರಾಸಃ—ಪುತ್ರ ಶಬ್ದಕ್ಕೆ ಜಸ್ ಪರವಾದಾಗ **ಅಜ್ಜಸೇರಸುಕ್**—ಎಂಬುದರಿಂದ ಜಸಿಗೆ ಅಸುಗಾಗಮ.

ಭವಂತಿ— ಭೂ ಸತ್ತಾಯಾಂ ಧಾತು. ಪ್ರಥಮಪುರುಷ ಬಹುವಚನರೂಪ. ಯತ್ರ ಎಂದು ಹಿಂದೆ ಸಂಬಂಧವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ತಪ್ ಅನುದಾತ್ತ. ಸಾರ್ವಧಾತುಕವು (ಅಂತಿ) ಅದುಪದೇಶದ ಪರದಲ್ಲಿ ಬಂದುದರಿಂದ **ತಾಸ್ಯನುದಾತ್ತ್ರೇತ್**—ಸೂತ್ರದಿಂದ ಅನುದಾತ್ತ. ಆಗ ಧಾತುಸ್ವರ ಉಳಿಯುತ್ತದೆ.

ಮಧ್ಯಾ—ಇದಕ್ಕೆ ಸಪ್ತಮೀವಿಭಕ್ತಿ ಪರವಾದಾಗ **ಸುಸಾಂಸುಲುಕ್**— ಎಂಬುದರಿಂದ ಅದಕ್ಕೆ ಡಾ ಆದೇಶ

ರೀರಿಷತ—ರಿಷ ರುಷ ಹಿಂಸಾಯಾಮ್ ಧಾತು. ಪ್ರೇರಣಾರ್ಥೋರುವುದರಿಂದ **ಹೇತುಮತಿ ಚ**—ಎಂಬುದರಿಂದ ಣಿಚ್. **ಪುಗಂತಲಘೂಪಧಸ್ಯ ಚ**—ಎಂಬುದರಿಂದ ಧಾತುವಿನ ಲಘೂಪಧಕ್ಕೆ ಗುಣ. **ಸನಾದ್ಯಂತಾ-ಧಾತವಃ**— ಸೂತ್ರದಿಂದ ರೇಷಿ ಎಂಬುದು ಧಾತುಸಂಜ್ಞೆಯನ್ನು ಹೊಂದುತ್ತದೆ ಭೂತಾರ್ಥದಲ್ಲಿ ಇದಕ್ಕೆ ಲುಙ್ ಪ್ರಥಮಪುರುಷ ಏಕವಚನದಲ್ಲಿ ತ ಪ್ರತ್ಯಯ. **ಣೆಶ್ರಿದ್ರುಸ್ರುಭ್ಯಃ ಕರ್ತರಿ ಚಙ್**— (ಪಾ ಸೂ. ೩-೧-೪೮) ಎಂಬುದರಿಂದ ಲುಙಿನಲ್ಲಿ ಪ್ರಾಪ್ತವಾದ ಚ್ಲಿಗೆ ಚಙಾದೇಶ. **ಚಙಿ**— (ಪಾ. ಸೂ. ೬-೧-೧೧) ಎಂಬುದರಿಂದ ಧಾತುವಿನ ಪ್ರಥಮೈಕಾಚಿಗೆ ದ್ವಿತ್ವ- ಅಭ್ಯಾಸಕ್ಕೆ ಹಲಾದಿಶೇಷ. **ಜೌಚಙ್ಯುಪಧಾಯಾ ಹ್ರಸ್ವಃ**—(ಪಾ.ಸೂ. ೭-೪-೧) ಎಂಬುದರಿಂದ ಧಾತುವಿನ ಉಪಧೆಗೆ ಹ್ರಸ್ವ. ಆಗ **ಸನ್ಯಙೊಸುಸಿಚಙ್ಪರೇ೪ನಗ್ಲೋಪೇ**—(ಪಾ.ಸೂ. ೭-೪-೭೩) ಎಂಬುದರಿಂದ ಚಙ್ ಪರವಾದ ಣಿ ಪರವಾದ ಅಂಗಾವಯವ ಅಭ್ಯಾಸಕ್ಕೆ ಲಘು ಪರವಾದುದರಿಂದ ಸನ್ವದ್ಭಾವ ಬರುತ್ತದೆ. ಆದ್ದರಿಂದ **ಸನ್ಯತಃ** ಎಂಬುದರಿಂದ ಅಭ್ಯಾಸದ ಇಕಾರಕ್ಕೆ **ದೀರ್ಘೋ ಲಘೋಃ** ಎಂಬುದರಿಂದ ದೀರ್ಘ **ಣೇರನಿಟಿ** ಸೂತ್ರದಿಂದ ಚಙ್ ನಿಮಿತ್ತವಾಗಿ ಣಿಗೆ ಲೋಪ. ಮಾಙ್‌ಯೋಗವಿರುವುದರಿಂದ **ನಮಾಙ್‌ಯೋಗೇ**—(ಪಾ.ಸೂ. ೬-೪-೭೪) ಎಂಬುದರಿಂದ ಅಂಗಕ್ಕೆ ಆಡಾಗಮ ಬರುವುದಿಲ್ಲ. ಅತಿಜಂತವ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ಭಾಂವಸವಾಗಿ ಪದಕಾಲದಲ್ಲಿ ಹ್ರಸ್ವ ಬರುತ್ತದೆ.

ಗಂತೋಃ—ಗಮ್‌ಲೃ ಗತೌ ಧಾತು. ಇದಕ್ಕೆ **ಭಾವಲಕ್ಷಣೇಸ್ತೋಣ್**—(ಪಾ. ಸೂ. ೩-೪-೧೭) ಎಂಬುದರಿಂದ (ಗಮನ) ಭಾವಾರ್ಥದಲ್ಲಿ ತೋಸುನ್ ಪ್ರತ್ಯಯ. **ಕ್ತ್ವಾತೋಸುನ್‌ಕಸುನಃ**— (ಪಾ. ಸೂ. ೧-೧-೪೦) ಎಂಬುದರಿಂದ ಅವ್ಯಯಸಂಜ್ಞೆ ಬರುತ್ತದೆ. **ಇತ್ಯಾದಿರಿತ್ಯಮ್**—ಎಂಬುದರಿಂದ ಪ್ರತ್ಯಯ ನಿತ್ಯಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ॥ ೯ ॥

॥ संहितापाठः ॥

अदितिर्द्यौरदितिरन्तरिक्षमदितिर्मातासपितासपुत्रः।
विश्वेदेवाअदितिःपञ्चजनाअदितिर्जातमदितिर्जनित्वं
॥ ८० ॥

पदपाठः

अदितिः। द्यौः। अदितिः। अन्तरिक्षं। अदितिः। मातासः। पितासः। पुत्रः।
विश्वेदेवाः। अदितिः। पञ्च। जनाः। अदितिः। जातं। अदितिः। जनित्वं
॥ ८० ॥

सायणभाष्यं

अदितिर्द्यौरदितिरित्येषाऽदितिदेवताकेऽष्टौ हविषोऽयाज्या। सूत्रितं च। अदितिर्द्यौरदितिरन्तरिक्षं स तेऽविष्णोऽजायमानोऽसि जातः। अ. ३-८ ! इति ॥

अदितिरदीनाखण्डनीयाऽसि वा पृथिवी देवमाता वा सैव द्यौर्द्योतनशीलोऽसि नाकः। सैवान्तरिक्षमन्तरा द्यावापृथिव्योर्मध्ये ईक्ष्यमाणं व्योम। सैव माता निर्मात्री जगतोऽसि जनित्री। सैव पितोत्पादकः। ततश्च स पुत्रोऽसि माताऽपि पितोर्जातः पुत्रोऽसि सैव। विश्वेदेवाः। अदितिः। पञ्च। जनाः। अदितिः। जातं। अदितिः। जनित्वं
॥ ८० ॥

सायणभाष्यं

अदितिर्द्यौरदितिरित्येषाऽदितिदेवताकेऽष्टौ हविषोऽयाज्या। सूत्रितं च। अदितिर्द्यौरदितिरन्तरिक्षं न तेऽविष्णोऽजायमानोऽसि जातः। अ. ३-८ ! इति ॥

अदितिरदीनाखण्डनीयाऽसि वा पृथिवी देवमाता वा सैव द्यौर्द्योतनशीलोऽसि नाकः। सैवान्तरिक्षमन्तरा द्यावापृथिव्योर्मध्ये ईक्ष्यमाणं व्योमासि। सैव माता निर्मात्री जगतोऽसि जनित्री। सैव पितोत्पादकः। ततश्च स पुत्रोऽसि माताऽपि पितोर्जातः पुत्रोऽसि सैव। विश्वेदेवाः सर्वेऽपि देवा अदितिरेव। पञ्च जनाः निषादपञ्चमाश्चत्वारोऽपि वर्णाः। यदाह। गन्धर्वाः पितरो देवा असुरा रक्षांसि। तदुक्तं यास्केन। गन्धर्वाः पितरोदेवा असुरा रक्षांसीत्येके चत्वारोऽपि वर्णा निषादः पञ्चम इत्यौपमन्यवः। नि. ३-८। इति। ब्राह्मणेऽप्येवमाम्नातं। सर्वेषां वा एतत्पञ्चजनानामुक्थं देवमनुष्याणां गन्धर्वाप्सरसां सर्पाणां च पित्र्याणां च। ऐ. ब्रा. ३-३०। इति। तत्र गन्धर्वाप्सरसाम्मैक्याप्पञ्चजनत्वं। एवंविधाः पञ्च जना अस्यादितिरेव। जातं जननं प्रजानामुत्पत्तिः साप्यदितिरेव। जनित्वं जन्याधिकरणं तदप्यदितिरेव। एवं सकलजगदात्मनाऽदितिः स्तूयतेऽसौ। उक्तं च यास्केन। इत्यदितेरेवैर्विभूतिमाचष्टेऽसौ। नि.४-२३। इति ॥ अदितिः। दोऽवखण्डनेऽस्मात्क्तिनि दितिशितिमास्थां। पा. ६-४-४०। इतीत्वं। यास्कस्तपक्षेऽसौ तु दीङ् क्षयेऽस्मात् क्तिनि व्यत्ययेन ह्रस्वत्वं। नञ्सुमासेत्यव्ययपूर्वपदप्रकृतिस्वरत्वं। स पिता। निर्दिश्यमानस्य निर्दिश्यमानयोरेकतामापादयन्ति सर्वनामानि पर्यायेण तल्लिंगतामुपादधत इत्युद्देश्यलिंगतया पुल्लिंगत्वं। जनित्वं। जनेरौणादिकस्त्वन्प्रत्ययः ॥

ಪ್ರತಿಪದಾರ್ಥ

ಅದಿತಿಃ—ಅದಿತಿಯು। **ದ್ಯೌಃ**—ಪ್ರಕಾಶಮಾನವಾದ ಸ್ವರ್ಗವು। **ಅದಿತಿಃ**—ಅದಿತಿಯು। **ಅಂತರಿಕ್ಷಂ**—ಅಂತರಿಕ್ಷವು। **ಅದಿತಿಃ**—ಅದಿತಿಯು। **ಮಾತಾ**—(ಜಗತ್ತಿಗೆಲ್ಲಾ) ಜನನಿಯು। **ಸ ಪಿತಾ**—(ಅವಳೇ ಜಗತ್ತಿಗೆಲ್ಲ) ಜನಕನು। **ಸ ಪುತ್ರಃ**—(ಅವಳೇ ತಂದೆತಾಯಿಗಳಿಗೆ ಹುಟ್ಟಿದ) ಮಗನು। **ವಿಶ್ವೇದೇವಾಃ**—ಸಕಲ ದೇವತೆಗಳೂ। **ಅದಿತಿಃ**—ಅದಿತಿಯೇ। **ಪಂಚಜನಾಃ**—ನಿಷಾದರನ್ನೂ ಕೂಡಿಕೊಂಡ ಉಳಿದ ನಾಲ್ಕು ವರ್ಣಗಳೂ ಅಥವಾ ಗಂಧರ್ವರೂ, ಪಿತೃಗಳೂ, ದೇವತೆಗಳೂ, ಅಸುರರೂ ಮತ್ತು ರಾಕ್ಷಸರೂ ಆದ ಐದು ಜಾತಿಯವರೂ। **ಅದಿತಿಃ**—ಅದಿತಿಯು। **ಜಾತಂ**—ಹುಟ್ಟಿರುವುದು। **ಅದಿತಿಃ**—ಅದಿತಿಯು। **ಜನಿತ್ವಂ**—(ಮುಂದಕ್ಕೆ) ಹುಟ್ಟುವುದೂ ಅಥವಾ ಉತ್ಪತ್ತಿ ಸ್ಥಾನವೂ (ಅದಿತಿಯು) ॥

ಭಾವಾರ್ಥ

ಅಖಂಡಳಾದ ಅದಿತಿಯು ಸಕಲವಿಶ್ವಕ್ಕೂ ಜನ್ಮದಾತೆಯು. ಅವಳೇ ಜಗಜ್ಜನನಿಯು, ಜಗಜ್ಜನಕನು. ಉತ್ಪನ್ನವಾದ ಸಕಲವಸ್ತುವೂ ಅವಳೇ, ಅದಿತಿಯೇ ಉತ್ಪತ್ತಿ ಸ್ಥಾನವು. ವರ್ಣಾತ್ಮಕವಾದ ಮತ್ತು ನಿಷಾದರಿಂದ ಕೂಡಿದ ಐದು ಜಾತಿಯ ಜನರೂ ಅವಳೇ. ಅದಿತಿಯೇ ಸಕಲ ದೇವತೆಗಳು, ಅವಳೇ ಪ್ರಕಾಶಮಾನವಾದ ಸ್ವರ್ಗವು, ಅವಳೇ ಅಂತರಿಕ್ಷವು, ಅವಳೇ ಸಕಲ ವಿಶ್ವವು, ಅವಳೇ ವಿಶ್ವಸಿಯಾಮಕಳು.

English Translation

Aditi is heaven ; Aditi is firmament ; Aditi is mother, father and son ; Aditi is all the gods ; Aditi is the five classes of men ; Aditi is what is born, Aditi is what shall be born.

ವಿಶೇಷವಿಷಯಗಳು

ಅದಿತಿರ್ದ್ಯೌರದಿತಿಃ—ಎಂಬ ಈ ಋಕ್ಕನ್ನು ಅದಿತಿದೇವತಾಕವಾದ ಪಶುಯಾಗದಲ್ಲಿ ಹವಿಸ್ಸನ್ನು ಹೋಮಮಾಡುವ ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಅದಿತಿರ್ದ್ಯೌರದಿತಿರಂತರಿಕ್ಷಂ ನ ತೇ ವಿಷ್ಣೋ ಜಾಯಮಾನೋ ನ ಜಾತಃ** ಎಂಬ ಸೂತ್ರದಿಂದ ವಿನಿಯೋಗವಾಗಿರುವುದು (೨. ೩-೮).

ಅದಿತಿಂ—ಅದಿತಿಯು ವಿಷಯವಾಗಿ ಈ ಸೂಕ್ತದ ೩ನೆಯ ಋಕ್ಕಿನ ವಿಶೇಷವಿಷಯಗಳಲ್ಲಿ ಬರೆದಿರುವುದನ್ನು ನೋಡಿ.

ಪಂಚ ಜನಾಃ—ಐದು ಜನಾಂಗಗಳು. ಋಗ್ವೇದಕಾಲದಲ್ಲಿ ಪ್ರಸಿದ್ಧವಾದ ಐದು ಜನಾಂಗಗಳ ವಿಷಯಗಳು ಋಗ್ವೇದದಲ್ಲಿ ಅಲ್ಲಲ್ಲಿ ಸೂಚಿತವಾಗಿರುವುದಲ್ಲದೆ ವತರೇಯಬ್ರಾಹ್ಮಣ ೩-೩೧ ; ೪-೨೬ ; ತೈತ್ತಿರೀಯಸಂಹಿತಾ ೧-೬-೧-೪ ; ಕಾಠಕಸಂಹಿತಾ ೫-೬ ; ೩೨-೬ ; ಬೃಹದಾರಣ್ಯಕೋಪನಿಷತ್ ೪-೨-೯ ಇತ್ಯಾದಿ ಸ್ಥಳಗಳಲ್ಲಿ ಪಠಿತವಾಗಿವೆ ಋಗ್ವೇದದಲ್ಲಿ ಪಂಚಜನಾಃ ಎಂಬ ಶಬ್ದಗಳಲ್ಲದೆ ಅದೇ ಅರ್ಥವನ್ನು ಹೇಳುವ **ಪಂಚಮಾನುಷಾಃ**

(ಋ. ಸಂ. ೮-೯-೨) **ಜನಾಃ** (ಋ. ಸಂ. ೩-೩೭-೯ ; ೩-೫೯-೮ ; ೬-೧೪-೪ ; ೮-೩೨-೨ ; ೯-೬೫-೫೫ ; ೯-೯೨-೩ ; ೧೦-೪೫-೬ ;) **ಕೃಷ್ಟಯಃ** (ಋ. ಸಂ. ೨-೨-೧೦ ; ೩-೫೩-೧೬; ೪-೩೮-೧೦) ೧೦-೬೦-೪ ; ೧೦-೧೧೯-೬ ;) **ಕ್ಷಿತಯಃ** (ಋಂ. ಸಂ ೧-೭-೯ ; ೧-೧೭೬-೩ ; ೫-೫೫-೨ ; ೬-೪೬-೭ ; ೭-೭೫-೪ ; ೭-೭೯-೧) **ಚರ್ಷಣ್ಯಃ** (ಋ. ಸಂ. ೫-೪೬-೨ ; ೭-೧೫೫-೨ ; ೯-೧೦೧-೯) ಎಂಬ ಶಬ್ದಗಳ ಪ್ರಯೋಗವಿರ.ವುದು-

ಪಾಶ್ಚಾತ್ಯರಲ್ಲಿ ಕೆಲವರು—**ಪಂಚಜನರೆಂದರೆ ಸರಸ್ವತೀನದಿಯ ತೀರದಲ್ಲಿ ವಾಸವಾಗಿದ್ದ ಪ್ರಸಿದ್ಧರಾದ ಅನು, ದ್ರುಹ್ಯು, ಯದು, ತುರ್ವಶ, ಪುರು ಎಂಬ ಐದು ಆರ್ಯಜನಾಂಗಗಳೆಂದು ಅಭಿಪ್ರಾಯಪಡುವರು.** ಇವರು ತಮ್ಮ ಅಭಿಪ್ರಾಯ ಸಮರ್ಥನೆಗಾಗಿ ಋ. ಸಂ. ೧-೧೦೮-೮ ; ೮-೧೦-೫ ಎಂಬ ಋಕ್ಕುಗಳನ್ನು ಉದಾಹರಿಸಿರುವರು. ಶತಪಥಬ್ರಾಹ್ಮಣದಲ್ಲಿಯೂ (ಶ. ಬ್ರಾ ೧೩-೫-೪-೧೧) ಐತರೇಯಬ್ರಾಹ್ಮಣದಲ್ಲಿಯೂ (ಐ. ಬ್ರಾ. ೪-೨೩) ಈ ಪಂಚಜನರು ಭರತರೆಂಬುವರ ವೈರಿಗಳೆಂದು ಉಕ್ತವಾಗಿರುವುದು.

ಪಂಚಜನಾಃ ಎಂಬ ಶಬ್ದಕ್ಕೆ ಭಾಷ್ಯಕಾರರು **ನಿಷಾದಪಂಚಮಾಃ** ಎಂದೂ, ಸ್ಕಂದಸ್ವಾಮಿಯು **ಗಂಧರ್ವಾಃ ಪಿತರೋ ದೇವಾಃ** ಎಂದೂ ವೆಂಕಟಮಾಧವರು—**ಮನುಷ್ಯಾಣಾಂ ಪಂಚಾನಾಂ ಕ್ಷಿತೀನಾಂ ನಿವ ಸತಾಂ ಗಂಧರ್ವಾಃ ಪಿತರೋ ದೇವಾ ಅಸುರಾ ರಕ್ಷಾಂಸೀತಿ ಪಂಚತ್ರಂ** ಎಂದೂ ಅರ್ಥವಿವರಣೆ ಮಾಡಿದ್ದಾರೆ. ಸಾಯಣರ ಅಭಿಪ್ರಾಯದಂತೆ ಪಂಚಜನಾಃ ಎಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದ ಎಂಬ ಐದು ಜಾತಿಯ ಜನರೆಂದು ಅರ್ಥವಾಗುವುದು. ನಿಷಾದರೆಂದರೆ ಬ್ರಾಹ್ಮಣಾದಿನಾಲ್ಕುವರ್ಣಗಳಲ್ಲಿ ಸೇರದಿರುವ ಮತ್ತು ಪ್ಯುಗಗಳ ಬೇಟೆಯಿಂದಲೇ ಜೀವಿಸುವ ಜನರೆಂದರ್ಥವು. ಈ ದೇಶದ ಪೂರ್ವನಿವಾಸಿಗಳಾದ ಗೊಂಡರು, ಕೋಲರು, ಭಿಲ್ಲರು ಮೊದಲಾದವರು ಈ ಜಾತಿಗೆ ಸೇರಿದವರು. ಇವರು ಮಧ್ಯಪ್ರಾಂತ್ಯ ಮೊದಲಾದ ಕೆಲವು ಸ್ಥಳಗಳಲ್ಲಿ ಮಾತ್ರ ಈಗಲೂ ಬಹುಸಂಖ್ಯೆಯಲ್ಲಿ ಬೆಟ್ಟಗುಡ್ಡಗಳಲ್ಲಿ ಅನಾಗರಿಕರಂತೆ ವಾಸಿಸುತ್ತಿರುವರು. ಪಂಚ ಜನಾಃ ಮತ್ತು ಪಂಚಕೃಷ್ಟೀಃ ಎಂಬ ಶಬ್ದಪ್ರಯೋಗವಿರುವ ಒಂದೆರಡು ಋಕ್ಕುಗಳನ್ನು ಉದಾಹರಣೆಗಾಗಿ ಕೊಟ್ಟಿರುತ್ತೇವೆ—

ತದದ್ಯ ವಾಚಃ ಪ್ರಥಮಂ ಮಸೀಯ ಯೇನಾಸುರಾಂ ಅಭಿ ದೇವಾ ಅಸಾಮ ।
ಉರ್ಜಾದ ಉತ ಯಜ್ಞಿಯಾಸಃ ಪಂಚಜನಾ ಮಮ ಹೋತ್ರಂ ಜುಷಧ್ವಂ ॥
(ಋ. ಸಂ. ೧೦-೫೩-೪)

ಪಂಚ ಜನಾ ಮಮ ಹೋತ್ರಂ ಜುಷಂತಾಂ ಗೋಜಾತಾ ಉತ ಯೇ ಯಜ್ಞಿಯಾಸಃ ॥
(ಋ. ಸಂ. ೧೦-೫೩-೫)

ಸದ್ಯಶ್ಚಿದ್ಯಃ ಶವಸಾ ಪಂಚಕೃಷ್ಟೀಃ ಸೂರ್ಯ ಇವ ಜ್ಯೋತಿಷಾಪಸ್ತತಾನ ॥
(ಋ. ಸಂ. ೧೦-೧೭೮-೩)

ಈ ಋಕ್ಕುಗಳಲ್ಲಿರುವ **ಪಂಚ ಜನಾಃ** ಮತ್ತು **ಪಂಚಕೃಷ್ಟೀಃ** ಎಂಬ ಶಬ್ದಗಳಿಗೆ ಯಾಸ್ಕರು ತಮ್ಮ ನಿರುಕ್ತದಲ್ಲಿ ಈ ರೀತಿ ಅರ್ಥವಿವರಣೆ ಮಾಡಿರುವರು—

ಪಂಚ ಜನಾ ಮಮ ಹೋತ್ರಂ ಜುಷಧ್ವಂ ಗಂಧರ್ವಾಃ ಪಿತರೋ ದೇವಾ ಅಸುರಾ ರಕ್ಷಾಂಸೀತ್ಯೇಕೇ । ಚತ್ವಾರೋ ವರ್ಣಾ ನಿಷಾದಃ ಪಂಚಮ ಇತ್ಯೌಪಮನ್ಯವಃ । ನಿಷಾದಃ ಕಸ್ಮಾನ್ನಿಷದನೋ ಭವತಿ ನಿಷಣ್ಣಮಸ್ಮಿನ್ ಪಾಪಕಮಿತಿ ನೈರುಕ್ತಾ ಇತಿ ॥ (ನಿ ೩-೮)

ಎಂದರೆ ಪಂಚಜನನೆಂದರೆ ಗಂಧರ್ವರು, ಪಿತೃಗಳು, ದೇವತೆಗಳು, ಅಸುರರು, ರಾಕ್ಷಸರು ಎಂದು ಐದು ವಿಧ ಜನರೆಂದು ಕೆಲವರು ಹೇಳುವರು. ಬ್ರಾಹ್ಮಣಾದಿ ನಾಲ್ಕುವರ್ಣದವರೂ ನಿಷಾದ ಎಂಬ ಬೇಡರಜ್ಞಾತಿಗೆ ಸೇರಿದ ಜನರೂ ಸೇರಿ ಐದುವಿಧ ಜನರೆಂದು ಉಪಮನ್ಯು ಮುಂತಾದವರ ಮತವು. ಇದನ್ನೇ ಸಾಯಣರು ಅನುಮೋದಿಸಿರುವರು. ನಿಷಾದರೆಂದರೆ ಪ್ರಾಣಿಗಳನ್ನು ಕೊಲ್ಲುವವರು ಅಥವಾ ಇವರಲ್ಲಿ ಪಾಪವು ತುಂಬಿರುವುದರಿಂದ ಇವರನ್ನು ನಿಷಾದರೆಂದು ನೈರುಕ್ತಕಾರರು ಹೇಳುವರು. ಇದಲ್ಲದೆ ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ಅನು, ದ್ರುಹ್ಯು, ಯದು, ತುರ್ವಶ, ಪುರು ಎಂಬ ಮುಖ್ಯವಾದ ಐದು ಆರ್ಯ ಜನಾಂಗಗಳ ಹೆಸರುಗಳನ್ನು ಒಟ್ಟುಗೂಡಿಸಿ ಪಂಚ ಜನಾಃ—ಐದು ಪಂಗಡಗಳು (tribes) ಎಂದು ಹೇಳುವ ರೂಢಿಯಿದ್ದಿರಬಹುದು. ಹೇಗಾದರೂ ಈ ವಿಚಾರದಲ್ಲಿ ನಿರುಕ್ತಕಾರರಾದ ಯಾಸ್ಕರ ಕಾಲದಲ್ಲಿಯೂ ಸಹ ಅಭಿಪ್ರಾಯಭೇದವಿದ್ದಿತೆಂಬುದು ಸ್ಪಷ್ಟವಾಗಿದೆ.

ವ್ಯಾಕರಣಪ್ರಕ್ರಿಯಾ

ಅದಿತಿಃ—ಮೋ ಅಪಖಂಡನೇ ಧಾತು. ಕರ್ಮಣಿಯಲ್ಲಿ ಇದಕ್ಕೆ **ಸ್ತ್ರಿಯಾಂ ಕ್ತಿನ್**—ಎಂಬುದರಿಂದ ಕ್ತಿನ್ ಪ್ರತ್ಯಯ. ಇದು ಪರವಾದಾಗ **ವ್ಯತಿಷ್ಯತಿಮಾಸ್ಥಾಮಿತ್ತಿಕಿತಿ** (ಪಾ. ಸೂ ೭-೪-೪೦) ಎಂಬುದರಿಂದ ಧಾತುವಿಗೆ ಇತ್ವ. ಯಾಸ್ಕರ ಪಕ್ಷದಲ್ಲಿ ದೀಙ್ ಕ್ಷಯೇ. ಧಾತು. ಇದಕ್ಕೆ ಭಾವಾರ್ಥದಲ್ಲಿ ಹಿಂದಿನಂತೆ ಕ್ತಿನ್ ಪ್ರತ್ಯಯ. ವ್ಯತ್ಯಯದಿಂದ ಧಾತುವಿಗೆ ಪ್ರತ್ಯಯಪರವಾದಾಗ ಹ್ರಸ್ವ. ನ ದಿತಿಃ ಅದಿತಿಃ. ನಞ್ ತತ್ಪುರುಷಸಮಾಸ. **ತತ್ಪುರುಷೇ ತುಲ್ಯಾರ್ಥ**—(ಪಾ. ಸೂ. ೬-೩-೭) ಎಂಬುದರಿಂದ ಅವ್ಯಯಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ಸ ಪಿತಾ—ಇಲ್ಲಿ ಸಃ ಎಂಬುದರಿಂದ ಹಿಂದೆ ಪ್ರಸಕ್ತವಾದುದನ್ನು ತೆಗೆದುಕೊಳ್ಳಬೇಕು. ಹಿಂದೆ ಪ್ರಸಕ್ತವಾದುದು. ದೇವನಮಾತಾ ಇತ್ಯಾದಿ. ಅದು ಸ್ತ್ರೀಲಿಂಗವಾಗಿದೆ. ಆಗ ಇಲ್ಲಿಯೂ ಸಾ ಎಂದು ಸ್ತ್ರೀಲಿಂಗದಿಂದಲೇ ಹೇಳಬೇಕಲ್ಲವೇ ಎಂದು ಆಶಂಕೆಯು ಉಂಟಾಗುತ್ತದೆ. ಅದಕ್ಕೆ ಅಭಿಜ್ಞರು ಹೀಗೆ ಸಮಾಧಾನ ಹೇಳಿರುತ್ತಾರೆ. ನಿರ್ದಿಶ್ಯಮಾನಪ್ರತಿನಿರ್ದಿಶ್ಯಪಾನಯೋರೇಕತಾಮಾಪಾದಯಂತಿ ಸರ್ವನಾಮಾನಿ ಪರ್ಯಾಯೇಣ ತಲ್ಲಿಂಗತಾಮಪಿ ಪಾದತ್ತೇ ಇತಿ ಉದ್ದೇಶ್ಯಲಿಂಗತಯಾ ಪುಲ್ಲಿಂಗತ್ವಮ್. ಸರ್ವನಾಮಶಬ್ದಗಳು ಉದ್ದೇಶ್ಯವಿಧೇಯಗಳಿಗೆ ಐಕ್ಯವನ್ನು ಬೋಧಿಸುತ್ತವೆ. ಆಗ ವಿವಕ್ಷಾಧೀನವಾಗಿ ಕೆಲವುವೇಳೆ ವಿಧೇಯಲಿಂಗವೂ ಕೆಲವು ಕಡೆ ಉದ್ದೇಶ್ಯಲಿಂಗವೂ ಬರುತ್ತದೆ. ಇಲ್ಲಿ ಉದ್ದೇಶ್ಯಲಿಂಗವನ್ನನುಸರಿಸಿ ಪುಲ್ಲಿಂಗದಲ್ಲಿ ನಿರ್ದೇಶವಾಡಿರುತ್ತಾರೆ.

ಜನಿತ್ವಮ್—ಜನೀ ಪ್ರಾದುರ್ಭಾವೇ ಧಾತು. ಇದಕ್ಕೆ ಅಧಿಕರಣಾರ್ಥದಲ್ಲಿ ಔಣಾದಿಕವಾದ ತ್ವನ್ ಪ್ರತ್ಯಯ. **ಆರ್ಧಧಾತುಕಸ್ಯೇಡ್ವಲಾದೇಃ**—ಎಂಬುದರಿಂದ ಅದಕ್ಕೆ ಇಡಾಗಮ. ಪ್ರತ್ಯಯ ನಿತ್ತಾದುದರಿಂದ **ಞ್ನಿತ್ಯಾದಿರ್ನಿತ್ಯಮ್**—ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ॥ ೧೦ ॥

ತೊಂಭತ್ತನೆಯ ಸೂಕ್ತವು

ಋಜುನೀತೀತಿ ನವರ್ಚಂ ಷಷ್ಠ್ಯಂ ಸೂಕ್ತಂ ಗೋತಮಸ್ಯಾರ್ಷಂ । ಅತ್ರಾನುಕ್ರಮ್ಯತೇ । ಋಜು-ನೀತೀ ನವ ಗಾಯತ್ರಮಂತ್ಯಾನುಷ್ಟುಬಿತಿ । ಪೂರ್ವತ್ರ ವೈಶ್ವದೇವಂ ತ್ರಿತ್ಯುಕ್ತತ್ರಾತ್ತು ಹ್ಯಾದಿಪರಿಭಾಷ-ಯೇದಮಪಿ ಸೂಕ್ತಂ ಬಹುದೇವತಾಕಂ । ಸೂಕ್ತವಿನಿಯೋಗೋ ಲೈಂಗಿಕಃ । ಚಾತುರ್ವಿಂಶಿಕೇ೭ಹನಿ ಪ್ರಾತಃಸವನೇ ಮೈತ್ರಾವರುಣಸ್ಯ ಋಜುನೀತೀ ನ ಇತ್ಯೇಷಾರಂಭಣೀಯಾ । ಚತುರ್ವಿಂಶ ಇತಿ ಖಂಡೇ ಸೂತ್ರಿತಂ । ಋಜುನೀತೀ ನೋ ವರುಣ ಇಂದ್ರಂ ವೋ ವಿಶ್ವತಸ್ಪರಿ । ಆ. ೭-೨ । ಇತಿ ॥ ಆಹರ್ಗಣೇಷು ದ್ವಿತೀಯಾದಿಷ್ವಹಃಸ್ವಪ್ಯೇಷಾರಂಭಣೀಯಾ ಶಂಸನೀಯಾ । ಸೂತ್ರಿತಂ ಚ । ಆರಂಭಣೀಯಾಃ ಪರ್ಯೋ-ಸಾನ್ಯದ್ವತೋ೭ಹರಹಃ ಶಸ್ಯಾನೀತಿ ಹೋತ್ರಕಾ ದ್ವಿತೀಯಾದಿಷ್ವೇವ । ಆ. ೭-೧ । ಇತಿ ॥

ಅನುವಾದವು—**ಋಜುನೀತೀ** ಎಂಬುವುದು ಈ ಹದಿನಾಲ್ಕನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಗೋತಮನು ಋಷಿಯು ಅನುಕ್ರಮಣಿಕೆಯಲ್ಲಿ—**ಋಜು ನೀತೀ ನವ ಗಾಯತ್ರಮಂತ್ಯಾನುಷ್ಟುಬಿತಿ**—ಎಂದರೆ ಒಂಭತ್ತು ಋಕ್ಕುಗಳಿರುವ ಋಜುನೀತೀ ಎಂಬ ಸೂಕ್ತ ದಲ್ಲಿ ಮೊದಲಿನ ಎಂಟುಋಕ್ಕುಗಳು ಗಾಯತ್ರೀಛಂದಸ್ಸಿನವು, ಕೊನೆಯ ಋಕ್ಕು ಅನುಷ್ಟುಪ್ಛಂದಸ್ಸುವು ಎಂದು ಹೇಳಿರುವುದು. ಈ ಸೂಕ್ತಕ್ಕೂ ವಿಶ್ವೇದೇವತೆಗಳೇ ದೇವತೆಗಳು. ಸೂಕ್ತವಿನಿಯೋಗವು ಲೈಂಗಿಕವು. ಯಜ್ಞದ ಇಪ್ಪತ್ತನಾಲ್ಕನೆಯ ದಿನದಲ್ಲಿ ಪ್ರಾತಃಸವನಕಾಲದಲ್ಲಿ ಮೈತ್ರಾವರುಣಮಂತ್ರಪಠನವನ್ನು **ಋಜುನೀತೀ** ಎಂಬ ಋಕ್ಕಿನಿಂದ ಆರಂಭಮಾಡಬೇಕೆಂದು ಆಶ್ವಲಾಯನಶ್ರೌತಸೂತ್ರದ **ಚತುರ್ವಿಂಶೇ** ಎಂಬ ಖಂಡದ **ಋಜುನೀತೀ ನೋ ವರುಣ, ಇಂದ್ರಂ ವೋ ವಿಶ್ವತಸ್ಪರಿ** ಎಂಬ ಸೂತ್ರದಿಂದ ವಿವೃತನಾಗಿರುವುದು. (ಆ. ೭-೨) ಮತ್ತು ಆಹರ್ಗಣವೆಂಬ ಯಾಗವಿಶೇಷದಲ್ಲಿ ಎರಡನೆಯ ದಿನಸದಿಂದ ಮುಂದಕ್ಕೆ **ಈ** ಋಕ್ಕಿನಿಂದ ಪ್ರಾರಂಭವಾಗುವ ಮಂತ್ರ ಗಳನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದಲ್ಲಿ **ಆರಂಭಣೀಯಾಃ ಪರ್ಯೋಸಾನ್ಯದ್ವತೋ ಅಹರಹಃ ಶಸ್ಯಾನೀತಿ ಹೋತ್ರಕಾ ದ್ವಿತೀಯಾದಿಷ್ವೇವ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೭-೧)

॥ ೫೦ ॥

ಸೂಕ್ತ—೯೦

॥ ಮಂಡಲ—೧ ॥ ಅನುವಾಕ—೧೪ ॥ ಸೂಕ್ತ—೯೦ ॥

॥ ಅಷ್ಟಕ—೧ ॥ ಅಧ್ಯಾಯ—೬ ॥ ವರ್ಗ—೧೩, ೧೪ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥

॥ ಋಷಿಃ—ಗೋತಮೋ ರಾಹೂಗಣಃ ॥

॥ ದೇವತಾ—ವಿಶ್ವೇದೇವಾಃ ॥

॥ ಛಂದಸ್—೧-೮ ಗಾಯತ್ರೀ । ೯. ಅನುಷ್ಟುಪ್ ॥

ಸಂಹಿತಾಪಾಠಃ

ಋಜುನೀತೀ ನೋ ವರುಣೋ ಮಿತ್ರೋ ನಯತು ವಿದ್ವಾನ್ ।
ಅರ್ಯಮಾ ದೇವೈಃ ಸಜೋಷಾಃ ॥ ೧ ॥

ಸಂಹಿತಪಾಠ

ಋಜುಽನೀತೀ । ನಃ । ವರುಣಃ । ಮಿತ್ರಃ । ನಯತು । ವಿದ್ವಾನ್ ।
ಅರ್ಯಮಾ । ದೇವೈಃ । ಸಽಜೋಷಾಃ ॥ ೧ ॥

ಸಾಯಣಭಾಷ್ಯಂ

ಅಹರಭಿಮಾನೀ ದೇವೋ ಮಿತ್ರೋ ವರುಣೋ ರಾತ್ರ್ಯಭಿಮಾನೀ । ಮಿತ್ರಶ್ಚ ವರುಣಶ್ಚ ವಿದ್ವಾನ್ ನೇತವ್ಯಮುತ್ತಮಂ ಸ್ಥಾನಂ ಜಾನನ್ ನೋಽಸ್ಮಾನ್ ಋಜುನೀತೀ ಋಜುನೀತ್ಯಾ ಋಜುನಯನೇನ ಕೌಟಿಲ್ಯರಹಿತೇನ ಗಮನೇನ ನಯತು । ಅಭಿಮತಂ ಫಲಂ ಪ್ರಾಪಯತು। ತಥಾ ದೇವೈರನ್ಯೈರಿಂದ್ರಾದಿಭಿಃ ಸಜೋಷಾಃ ಸಮಾನಪ್ರೀತಿರರ್ಯಮಾಹೋರಾತ್ರವಿಭಾಗಸ್ಯ ಕರ್ತಾ ಸೂರ್ಯಶ್ಚಾಸ್ಮಾನ್ಸ್ವಜುಗಮನೇನಾಭಿಮತಂ ಸ್ಥಾನಂ ಪ್ರಾಪಯತು ॥ ಋಜುನೀತೀ । ಸುಪಾಂ ಸುಲುಗಿತಿ ತೃತೀಯಾಯಾಃ ಪೂರ್ವಸವರ್ಣದೀರ್ಘತ್ವಂ ॥

ಪ್ರತಿಪದಾರ್ಥ

ಮಿತ್ರಃ—(ಅಹರಭಿಮಾನದೇವತೆಯಾದ) ಮಿತ್ರನೂ । **ವರುಣಃ**—(ರಾತ್ರ್ಯಭಿಮಾನ ದೇವತೆಯಾದ) ವರುಣನೂ । **ವಿದ್ವಾನ್**—(ನಮ್ಮ ಗಮ್ಯಸ್ಥಾನವನ್ನು) ತಿಳಿದುಕೊಂಡು । **ನಃ**—ನಮ್ಮನ್ನು । **ಋಜುನೀತೀ**—ನೇರವಾದ (ಪ್ರಾಮಾಣಿಕವಾದ) ಮಾರ್ಗದಿಂದ ಕರೆದುಕೊಂಡುಹೋಗಿ । **ನಯತು**—(ನಮ್ಮ ಅಭೀಷ್ಟ ಫಲವನ್ನು) ಸೇರಿಸಲಿ (ಹಾಗೆಯೇ) । **ದೇವೈಃ**—ಇತರ ಇಂದ್ರಾದಿದೇವತೆಗಳೊಡನೆ । **ಸಜೋಷಾಃ**—ಸಮಾನವಾದ ಸಂತೋಷವುಳ್ಳ । **ಅರ್ಯಮಾ**—ಅರ್ಯಮದೇವನೂ ಸಹ (ನಮ್ಮ ಅಭೀಷ್ಟಸ್ಥಾನವನ್ನು ಸೇರಿಸಲಿ) ॥

ಭಾವಾರ್ಥ

ಅಹರಭಿಮಾನದೇವತೆಯಾದ ಮಿತ್ರನೂ, ರಾತ್ರ್ಯಭಿಮಾನ ದೇವತೆಯಾದ ವರುಣನೂ ನಮ್ಮ ಗಮ್ಯಸ್ಥಾನವನ್ನು ತಿಳಿದುಕೊಂಡು ನಮ್ಮನ್ನು ಪ್ರಾಮಾಣಿಕವಾದ ಮಾರ್ಗದಿಂದ ಕರೆದುಕೊಂಡುಹೋಗಿ ನಮ್ಮ ಅಭೀಷ್ಟವನ್ನು ಹೊಂದಿಸಲಿ. ಹಾಗೆಯೇ ಇತರ ಇಂದ್ರಾದಿ ದೇವತೆಗಳೊಡನೆ ಸಮಾನವಾದ ಪ್ರೀತಿಯುಳ್ಳ ಮತ್ತು ಅಹೋರಾತ್ರ ವಿಭಾಗಕರ್ತನಾದ ಅರ್ಯಮ ದೇವನೂ ಸಹ ನಮ್ಮ ಅಭೀಷ್ಟ ಸ್ಥಾನವನ್ನು ಸೇರಿಸಲಿ.

English Translation

May Varuna, the wise Mitra and Aryaman accompanied with other gods lead us by straight paths.

ವಿಶೇಷ ವಿಷಯಗಳು

ಋಜುನೀತೀ—ಕೌಟಿಲ್ಯರಹಿತೇನ ಗಮನೇನ। ಮೋಸ, ವಂಚನೆ ಮುಂತಾದವುಗಳಿಲ್ಲದ ನ್ಯಾಯವಾದ ಸನ್ಮಾರ್ಗದಿಂದ

ವಿದ್ವಾನ್—ತಿಳಿವಳಿಕೆಯುಳ್ಳ, ಬುದ್ಧಿವಂತನಾದ

ವರುಣಃ ಮಿತ್ರಃ—ಮಿತ್ರನು ಹಗಲಿಗೆ ಅಭಿಮಾನಿದೇವತೆಯೆಂದೂ ವರುಣನು ರಾತ್ರ್ಯಭಿಮಾನಿದೇವತೆಯೆಂದೂ ಪ್ರಸಿದ್ಧವು. **ಮೈತ್ರಂ ವಾ ಅಹಃ। ವಾರುಣೀ ರಾತ್ರಿಃ** ಎಂದು ತೈ. ಬ್ರಾ ಶ್ರುತಿವಚನವಿರುವುದು.

ಅರ್ಯಮಾ—ದ್ವಾದಶಾದಿತ್ಯರಲ್ಲಿ ಒಬ್ಬನು. ಈ ದೇವತೆಯು ಅಹೋರಾತ್ರಿಗಳನ್ನು ವಿಭಾಗಮಾಡುವನೆಂದು ಹೇಳುವರು.

ಸಜೋಷಾಃ—ಸಮಾನಪ್ರೀತಿಃ ಅಥವಾ ದೇವೈಃ ಸಹ ಸಂಪ್ರಿಯಮಾಣಃ। ದೇವತೆಗಳೊಡನೆ ಸಮನಾದ ಪ್ರೀತಿಯುಳ್ಳವನು

ವ್ಯಾಕರಣಪ್ರಕ್ರಿಯಾ

ಋಜುನೀತೀ—ಋಜುನೀತಿ ಶಬ್ದ ಇಕಾರಾಂತ ಸ್ತ್ರೀಲಿಂಗ. ಇದಕ್ಕೆ ತೃತೀಯಾವಿಕವಚನ ಪರವಾದಾಗ **ಸುಪಾಂ ಸುಲುಕ್**—ಎಂಬುದರಿಂದ ವಿಭಕ್ತಿಗೆ ಪೂರ್ವಸವರ್ಣದೀರ್ಘ ಬರುತ್ತದೆ.

ನಯೆತು—ಣೀಞ್ ಪ್ರಾಪಣೇ ಧಾತು. **ಣೋನಃ** ಎಂಬುದರಿಂದ ಣಕಾರಕ್ಕೆ ನಕಾರಾದೇಶ. ಲೋಟ್ ಪ್ರಥಮಪುರುಷ ಏಕವಚನದಲ್ಲಿ **ತಿರುಃ**—ಎಂಬುದರಿಂದ ತಿಗೆ ತು ಆದೇಶ. **ಶಪ್** ವಿಕರಣ. ತನ್ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ಅಯಾದೇಶ. **ತಿಜ್ಜಿತಿಜಿಃ**—ಎಂಬುದರಿಂದ ಅತಿಜಂತಗ ಪರವಲ್ಲಿರುವುದರಿಂದ ನಿಘಾತ ಸ್ವರ ಬರುತ್ತದೆ.

ವಿದ್ವಾನ್—ವಿದ ಜ್ಞಾನೇ ಧಾತು. ಇದಕ್ಕೆ ಶತೃಪ್ರತ್ಯಯ ಪರವಾದಾಗ **ವಿದೇಃಶತುರ್ವಸುಃ** (ಪಾ. ಸೂ. ೭-೧-೩೬) ಎಂಬುದರಿಂದ ಶತೃವಿಗೆ ವಸು ಆದೇಶ. ವಿದ್ವಸ್ ಶಬ್ದವಾಗುತ್ತದೆ. ಇದಕ್ಕೆ ಸು ಪರವಾದಾಗ **ಅತ್ವಸಂತಸ್ಯ ಚಾ**—ಸೂತ್ರದಿಂದ ಉಪಧಾದೀರ್ಘ. **ಉಗಿದಚಾಂ ಸೆ**—ಎಂಬುದರಿಂದ ನುಮಾಗಮ **ಹಲ್ಙ್ಯಾಭ್ಯೋ**—ಸೂತ್ರದಿಂದ ಸುಲೋಪ. **ಸಂಯೋಗಾಂತಸ್ಯಲೋಪಃ**—ಎಂಬುದರಿಂದ ಅಂತ್ಯಸಕಾರ ಲೋಪ. ಪ್ರತ್ಯಯಸ್ವರದಿಂದ ವಕಾರೋತ್ತರಾಕಾರ ಉದಾತ್ತವಾಗುತ್ತದೆ.

ಸಜೋಷಾಃ— ಜುಷೀ ಪ್ರೀತಿಸೇವನಯೋಃ ಧಾತು. ಇದಕ್ಕೆ ಅಸನ್ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ. ಪ್ರತ್ಯಯ ನಿತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ ಸಮಾನಃ ಜೋಷಃ

(ಪ್ರೀತಿಃ) ಯಸ್ಯ ಸಃ ಸಜೋಷಾಃ **ಗತಿಕಾರಕೋಪಪದಾತ್ ಕೃತ್**—ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ. ॥ ೧ ॥

॥ ಸಂಹಿತಾಪಾಠಃ ॥

ತೇ ಹಿ ವಸ್ವೋ ವಸವಾನಾಸ್ತೇ ಅಪ್ರಮೂರಾ ಮಹೋಭಿಃ।
ವ್ರತಾ ರಕ್ಷಂತೇ ವಿಶ್ವಾಹಾ ॥ ೨ ॥

ಪದಪಾಠಃ

ತೇ । ಹಿ । ವಸ್ವಃ । ವಸವಾನಾಃ । ತೇ । ಅಪ್ರಮೂರಾಃ। ಮಹಃಭಿಃ ।
ವ್ರತಾ । ರಕ್ಷಂತೇ । ವಿಶ್ವಾಹಾ ॥ ೨ ॥

॥ ಸಾಯಣಭಾಷ್ಯಂ ॥

ತೇ ಹಿ ಪೂರ್ವೋಕ್ತಾ ಮಿತ್ರಾದಯೋ ವಸ್ವೋ ವಸುನೋ ಧನಸ್ಯ ವಸವಾನಾ ವಾಸಕಾ ಆಚ್ಛಾದಯಿತಾರಃ। ಸರ್ವಂ ಜಗದ್ಪೋನಾಚ್ಛಾದಯಂತೀತ್ಯರ್ಥಃ। ಅತಸ್ತೇ ಮಿತ್ರಾದಯೋಽಪ್ರಮೂರಾ ಅಪ್ರಮೂರ್ಭಿರ್ಹತಾ ಅಮೂಢಾಃ ಪ್ರಾಜ್ಞಾಃ ಸಂತೋ ಮಹೋಭಿರಾತ್ಮೀಯೈಸ್ತೇಜೋಭಿರ್ವಿಶ್ವಾಹಾ ಸರ್ವಾಣ್ಯಹಾನಿ। ಆತ್ಯಂತಸಂಯೋಗೇ ದ್ವಿತೀಯಾ। ಸರ್ವೇಷ್ವಪ್ಯಹಸ್ಸು ವ್ರತಾ ವ್ರತಾನಿ ಜಗನ್ನಿರ್ವಾಹರೂಪಾಣಿ ಸ್ವಕೀಯಾನಿ ಕರ್ಮಾಣಿ ರಕ್ಷಂತೇ। ಪಾಲಯಂತಿ ॥ ವಸ್ವಃ । ಅಗಮಾನುಶಾಸನಸ್ಯಾನಿತ್ಯತ್ವಾನ್ನುಮಭಾವೇ ಜಸಾದಿಷು ಛಂದಸಿ ವಾವಚನಮಿತಿ ಘೇರ್ಙಿತೀತಿ ಗುಣಸ್ಯ ವಿಕಲ್ಪನಾದಭಾವೇ ಯಣಾದೇಶಃ। ವಸವಾನಾಃ । ವಸ ಆಚ್ಛಾದನೇ। ಅಸ್ಮಾದಂತರ್ಭಾವಿತೇಣ್ಯರ್ಥಾಲ್ಲುಟಃ ಶಾನಚ್ । ಬಹುಲಂ ಛಂದಸೀತಿ ಶಪೋ ಲುಗಭಾವಃ। ವರ್ಣವ್ಯಾಪತ್ತ್ಯಾ ಮಕಾರಸ್ಯ ವಕಾರಃ। ಅಪ್ರಮೂರಾಃ। ಮುಹ್ಯಾ ಮೋಹಸಮುಚ್ಛ್ರಾಯಯೋಃ। ಅಸ್ಮಾತ್ಸಂಪದಾದಿಲಕ್ಷಣೋ ಭಾವೇ ಕ್ವಿಪ್ । ರಾಲ್ಲೋಪ ಇತಿ ಭಕಾರಲೋಪಃ। ಪ್ರಕೃಷ್ಟಾ ಮೂಃ ಪ್ರಮೂಃ। ತತೋ ಮತ್ವರ್ಥೀಯೋ ರಃ। ರೋ ರಿ। ಪಾ. ೮-೩-೧೪। ಇತಿ ರೇಫಲೋಪಃ। ನ ಪ್ರಮೂರಾ ಅಪ್ರಮೂರಾಃ। ಅವ್ಯಯಪೂರ್ವಪದಪ್ರಕೃತಿಸ್ವರತ್ವಂ। ರಕ್ಷಂತೇ। ರಕ್ಷ ಪಾಲನೇ। ವ್ಯತ್ಯಯೇನ ತಜ್ ॥೨

॥ ಪ್ರತಿಪದಾರ್ಥ ॥

ತೇ ಹಿ—ಆ ಮಿತ್ರಾದಿದೇವತೆಗಳಾದರೋ, । **ವಸ್ವಃ**—ಧನದ (ಧನವನ್ನು) । **ವಸವಾನಾಃ**—(ಪ್ರಪಂಚಕ್ಕೆಲ್ಲಾ) ಆಚ್ಛಾದನಮಾಡುವವರಾಗಿ (ಹರಡುವವರಾಗಿ)ದ್ದಾರೆ. । **ತೇ**—ಆ ಮಿತ್ರಾದಿಗಳು । **ಅಸ್ರೇಮೂರಾಃ**—ಆನಾದರಣೆಯಿಲ್ಲದೇ, । **ಮಹೋಭಿಃ**—ತಮ್ಮ ತೇಜಸ್ಸುಗಳಿಂದ । **ವಿಶ್ವಾಹಾ**—ಎಲ್ಲಾ ದಿನಗಳಲ್ಲೂ । **ವ್ರತಾ**—(ಜಗತ್ತಿನ ನಿರ್ವಹಣರೂಪನಾದ) ಕರ್ಮಗಳನ್ನು । **ರಕ್ಷಂತಿ**—ಪಾಲಿಸುತ್ತಾರೆ. ।

ಭಾವಾರ್ಥ

ಮಿತ್ರಾವರುಣಾದಿದೇವತೆಗಳು ಪ್ರಪಂಚಕ್ಕೆಲ್ಲಾ ಧನವನ್ನು ಹಂಚುವವರಾಗಿದ್ದಾರೆ. ಅವರು ಸ್ವಲ್ಪವೂ ಕರ್ತವ್ಯಲೋಪವಿಲ್ಲದೇ ತಮ್ಮ ಜಗತ್ತಿನ ನಿರ್ವಹಣರೂಪದ ಕರ್ತವ್ಯವನ್ನು ಪ್ರತಿದಿನದಲ್ಲೂ ಶ್ರದ್ಧೆಯಿಂದ ಪಾಲಿಸಿ ತಮ್ಮ ತೇಜಸ್ಸಿನಿಂದ ಬೆಳಗುತ್ತಾರೆ.

English Translation

For, they are the distributors of wealth over the world; and never heedless, discharge their duties every day.

ವಿಶೇಷವಿಷಯಗಳು.

ತೇ—ಹಿಂದಿನ ಋಕ್ಕಿನಲ್ಲಿ ಹೇಳಿದ ಮಿತ್ರ ವರುಣ, ಅರ್ಯಮಾ ಎಂಬ ದೇವತೆಗಳು.

ವಸ್ವಃ ವಸವಾನಾಃ—**ವಸ ಆಚ್ಛಾದನೇ** । ವಸಧಾತುವಿಗೆ ಹರಡುವುದು ಎಂದರ್ಥವು. ಧನಗಳನ್ನು ಎಲ್ಲರಲ್ಲಿಯೂ ಹರಡುವವರು ಎಂದರೆ ಸ್ತೋತ್ರಮಾಡುವ ಯಜಮಾನರಾದಿಜನರಿಗೆ ಧನವನ್ನು ಅವರವರ ಕರ್ಮಕ್ಕೆ ತಕ್ಕಂತೆ ಕೊಡುವವರು ಎಂದಭಿಪ್ರಾಯವು.

ಅಸ್ರೇಮೂರಾಃ—**ಮುಚ್ಛ್ಯ ನೋಹಸನಮುಚ್ಛ್ರಯೆಯೋಃ** । ಮೋಹವಿಲ್ಲದೆ, ಮೂಢರಲ್ಲದೆ, ಎಂದರೆ ಪ್ರಾಜ್ಞರಾಗಿ

ಮಹೋಭಿಃ—**ಆತ್ಮೀಯೈಸ್ತೇಜೋಭಿಃ** । ತಮ್ಮ ತೇಜಸ್ಸುಗಳಿಂದ ಅಥವಾ ಮಹಿಮೆಯಿಂದ.

ವ್ರತಾ—ತಮ್ಮ ಕರ್ತವ್ಯಕರ್ಮಗಳನ್ನು.

ವಿಶ್ವಾಹಾ—ಎಲ್ಲಾ ದಿನಗಳಲ್ಲಿಯೂ.

॥ ಸ್ಕಾಕರಣಾಸ್ವರೂಪಾ ॥

ವಸ್ವಃ ವಸು ಶಬ್ದ ಉಕಾರಾಂತ ನಪುಂಸಕಲಿಂಗ. ವಸುನಃ ಎಂದು ರೂಪವಾಗಬೇಕಾಗುತ್ತದೆ ಆದರೆ **ಆಗಮಶಾಸ್ತ್ರಮನಿತ್ಯಮ್** ಎಂಬ ವಚನದಿಂದ **ಇತೋಽಚಿ ವಿಭಕ್ತೌ** ಸೂತ್ರದಿಂದ ನುಮಾಗಮ ಬರುವುದಿಲ್ಲ. **ಜಸಾದಿಷು ಛಂದಸಿ ವಾ ವಚನಮ್** ಎಂಬುದರಿಂದ ಇಲ್ಲಿ **ಷ್ಟೇರ್ಜುಃ** (ಪಾ. ಸೂ. ೭-೩-೧೦೧) ಎಂಬುದರಿಂದ ಬರುವ ಗುಣವೂ ವಿಕಲ್ಪವೆಂಬುದರಿಂದ ಬರುವುದಿಲ್ಲ. ಆಗ **ಇಕೋಯಣಚಿ** ಸೂತ್ರದಿಂದ ಯಣಾದೇಶ.

ವಸವಾನಾಃ—ವಸ ಆಚ್ಛಾದನೇ ಧಾತು. ಪ್ರೇರಣಾ ತೋರುವುದರಿಂದ ಅಂತರ್ಭಾವಿತಣ್ಯರ್ಥಕವಾದ ಈ ಧಾತುವಿಗೆ **ಲಡರ್ಥ**ನಲ್ಲಿ ಶಾನಚ್ ಪ್ರತ್ಯಯ. ಇದು ಆದಾದಿಯಲ್ಲಿರುವುದರಿಂದ ಶಪಿಗೆ **ಲುಕ್** ಪ್ರಾಪ್ತವಾದರೆ **ಬಹುಲಂ ಛಂದಸಿ**—ಎಂಬುದರಿಂದ ಲುಕ್ ಬರುವುದಿಲ್ಲ. ವಸ+ಆನ ಎಂದಿರುವಾಗ **ಆನೇಮುಕ್** (ಪಾ. ಸೂ. ೭-೩-೮೪) ಎಂಬುದರಿಂದ ಅಜಂತಾಂಗಕ್ಕೆ ಮುಕಾಗಮ. ವರ್ಣವ್ಯತ್ಯಯದಿಂದ ಮುಕಾರಕ್ಕೆ ನಕಾರಾದೇಶ. ಪ್ರತ್ಯಯ ಚಿತ್ವಾದುದರಿಂದ **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ಪ್ರಥಮಾಬಹುವಚನಾಂತವಾಯಿತು.

ಅಪ್ರಮೂರಾಃ—ಮುರ್ಛಾ ಮೋಹಸಮುಚ್ಛ್ರಾಯಯೋಃ ಧಾತು. ಇದಕ್ಕೆ ಭಾವಾರ್ಥದಲ್ಲಿ **ಸಂಪದಾದಿಭ್ಯಃ ಕ್ವಿಪ್**—ಎಂಬುದರಿಂದ ಕ್ವಿಪ್. **ರಾಲ್ಲೋಪಃ** (ಪಾ. ಸೂ. ೬-೪-೨೧) ರೇಫದ ಪರದ ಭಕಾರವಕಾರಗಳಿಗೆ ಕ್ವಿವ್, ಝಲಾದಿಯಾದ, ಅನುನಾಸಿಕಾದಿಯಾದ ಪ್ರತ್ಯಯ ಪರವಾದಾಗ ಲೋಪ ಎಂಬುದರಿಂದ ಇಲ್ಲಿ ಕ್ವಿಪ್ ಪರವಲ್ಲಿರುವುದರಿಂದ ಭಕಾರಕ್ಕೆ ಲೋಪ. ಪ್ರಕೃಷ್ಟಾ ಮೂಃ ಪ್ರಮೂಃ ಪ್ರಮೂ ಶಬ್ದದಮೇಲೆ ಮತ್ತರ್ಥದಲ್ಲಿ ಛಾಂದಸವಾದ ರ ಪ್ರತ್ಯಯ. ರೇಫಕ್ಕೆ ರೇಫ ಪರವಾದುದರಿಂದ **ರೋರಿ** (ಪಾ. ಸೂ. ೮-೩-೧೪) ಎಂಬುದರಿಂದ ರೇಫಕ್ಕೆ ಲೋಪ. ನ ಪ್ರಮೂರಾ ಅಪ್ರಮೂರಾಃ ಎಂದು ನಞ್‌ತತ್ಪುರುಷಸಮಾಸವಾದಾಗ **ತತ್ಪುರುಷೇ ತುಲ್ಯಾರ್ಥ**–ಸೂತ್ರದಿಂದ ಅವ್ಯಯಸ್ವರ್ವಪದಪ್ರಕೃತಿಸ್ವರ ಬರುತ್ತದೆ.

ವೃತಾ—ನಪುಂಸಕದಲ್ಲಿ ಶಸಿಗೆ ಶಿ ಆದೇಶ. **ಶೇಶ್ಛಂದಸಿ ಬಹುಲಂ**—ಎಂಬುದರಿಂದ ಶಿಗೆ ಲೋಪ.

ರಕ್ಷಂತೇ—ರಕ್ಷ ಪಾಲನೇ ಧಾತು. ಲಟ್ ಪ್ರಥಮಪುರುಷಬಹುವಚನದಲ್ಲಿ **ವ್ಯತ್ಯಯೋ ಬಹುಲಮ್** ಎಂಬುದರಿಂದ ಆತ್ಮನೇಪದಪ್ರತ್ಯಯ ಬರುತ್ತದೆ. ಅತಿಙಂತದ ಪರವಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ವಿಶ್ವಾಹಾ—ವಿಶ್ವಾನಿ ತಾನಿ ಅಹಾನಿ ಚ ವಿಶ್ವಾಹಾ. **ಶೇಶ್ಛಂದಸಿ ಬಹುಲಮ್**—ಎಂಬುದರಿಂದ ಶಿಗೆ ಲೋಪ. ॥ ೬ ॥

॥ ಸಂಹಿತಾಪಾಠಃ ॥

ತೇ ಅಸ್ಮಭ್ಯಂ ಶರ್ಮ ಯಂಸನ್ನಮೃತಾ ಮರ್ತ್ಯೇಭ್ಯಃ ।
ಬಾಧಮಾನಾ ಅಪ ದ್ವಿಷಃ ॥ ೭ ॥

॥ ಪದಪಾಠಃ ॥

ತೇ । अस्मभ्यं । शर्म । यंसन् । अमृताः । मर्त्येभ्यः ।

बाधमानाः । अप । द्विषः ॥ ७ ॥

ಸಾಯಣಭಾಷ್ಯಂ

अमृता अमरणधर्माणस्ते विश्वे देवा मर्त्येभ्यो मरणधर्मभ्योऽस्मभ्यमनुष्यात्मभ्यः शर्म्ममृतलक्षणं सुखं यंसन् । यच्छंतु । प्रयच्छंतु । किं कुर्वंतः । द्विषोऽस्मदीयान्पापलक्षणान् शत्रूनपबाधमानाः विनाशं प्रापयंतः ॥ यंसन् । यमु उपरमे । लेट्यडागमः । सिब्बहुलं लेटीति सिप् । अमृताः । मृतं मरणं येषां नास्तीत्यमृताः । नञिवो जरमरमित्रमृता इत्युत्तरपदादुदात्तत्वं ॥

॥ ಪ್ರತಿಪದಾರ್ಥ ॥

ಅಮೃತಾಃ—ಮರಣರಹಿತರಾದ । **ತೇ**—ಆ ದೇವತೆಗಳು । **ದ್ವಿಷಃ**— (ನಮ್ಮ ಪಾಪಿಷ್ಠರಾದ) ಶತ್ರುಗಳನ್ನು । **ಅಪ ಬಾಧಮಾನಾಃ**—ನಾಶಗೊಳಿಸುತ್ತ । **ಮರ್ತ್ಯೇಭ್ಯಃ**—ಮರಣ ಧರ್ಮವುಳ್ಳ । **ಅಸ್ಮಭ್ಯಂ**—ನಮಗೆ । **ಶರ್ಮ**—(ಮರಣರಹಿತವಾದ) ಸುಖವನ್ನು । **ಯಂಸನ್**—ಕೊಡಲಿ. ।

॥ ಭಾವಾರ್ಥ ॥

ಮಿತ್ರಾವರುಣಾದಿ ದೇವತೆಗಳು ಮರಣರಹಿತರು. ನಾನೆಲ್ಲಾ ಮರಣ ಧರ್ಮವುಳ್ಳವರು. ಆದರೆ ದುಷ್ಟರಾದ ನಮ್ಮ ಶತ್ರುಗಳನ್ನು ಮಾತ್ರ ನಾಶಗೊಳಿಸಿ ಯಜ್ಞಕರ್ತರಾದ ನಮಗೆ ಮರಣರಹಿತವಾದ ಸೌಖ್ಯವನ್ನು ಅನುಗ್ರಹಿಸಲಿ.

English Translation

May they, who are immortal, bestow upon us mortals, happiness driving away our enemies

ವಿಶೇಷವಿಷಯಗಳು.

ಈ ಋಕ್ಕಿನ ಅರ್ಥವು ಸುಲಭವಾಗಿರುವುದು. ಯಾವ ವಿಧವಾದ ತೊಡಕುಗಳೂ ಇಲ್ಲ. ಅಭಿಪ್ರಾಯವು ಸ್ಪಷ್ಟವಾಗಿರುವುದು.

ಶರ್ಮ—ಸುಖ ಅಥವಾ ಗೃಹ.

ಅಮೃತಾಃ—ಮರಣರಹಿತರಾದ ಮಿತ್ರಾದಿದೇವತೆಗಳು.

ಮರ್ತ್ಯೇಭ್ಯಃ ಅಸ್ಮಭ್ಯಂ—ಮರಣವನ್ನು ಹೊಂದುವ ಸ್ವಭಾವವುಳ್ಳ ಮನುಷ್ಯರಾದ ನಮಗೆ.

ಅಸೆ ಬಾಧಮಾನಾಃ—ನಾಶಮಾಡುವವರು, ಓಡಿಸುವವರು, ಹಿಂಸಿಸುವವರು.

ವ್ಯಾಕರಣಪ್ರಕ್ರಿಯಾ

ಯೆಂಸನ್—ಯಮ ಉಪರಮೇ ಧಾತು. ಲೇಟ್ ಪ್ರಥಮಪುರುಷಬಹುವಚನದಲ್ಲಿ ಝಿ ಪ್ರತ್ಯಯ. **ಇತಶ್ಚ ಲೋಪಃ ಪ**—ಎಂಬುದರಿಂದ ಇಕಾರಲೋಪ. **ಲೇಟೋಽಡಾಟೌ**–ಎಂಬುದರಿಂದ ಆಡಾಗಮ. **ಸಿಬ್ಬಹುಲಂ ಲೇಟಿ** (ಪಾ. ಸೂ. ೩-೧-೩೪) ಎಂಬುದರಿಂದ ಸಿಪ್. ಸಂಯೋಗಾಂತಲೋಪದಿಂದ ಅಂತ್ಯತಕಾರ ಲೋಪ. **ನಶ್ಚಾಪದಾಂತಸ್ಯ ಝಲಿ** ಸೂತ್ರದಿಂದ ಮಕಾರಕ್ಕೆ ಅನುಸ್ವಾರ. ಅತಿಜಂತನ ಪರವಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅಮೃತಾಃ—ಮೃಙ್ ಪ್ರಾಣತ್ಯಾಗೇ ಧಾತು. **ಕ್ತ**ಪ್ರತ್ಯಯ. ಮೃತಂ ಮರಣಂ ಯೇಷಾಂ ನಾಸ್ತೀತಿ ಅಮೃತಾಃ **ನಞೋ ಜರಮರಮಿತ್ರ ಮೃತಾಃ** (ಪಾ. ಸೂ. ೬-೨-೧೧೬) ಎಂಬುದರಿಂದ ಉತ್ತರ ಪದಾದ್ಯುದಾತ್ತಸ್ವರ ಬರುತ್ತದೆ.

ದ್ವಿಷಃ—ದ್ವಿಷ ಅಪ್ರೀತೌ ಧಾತು. **ಸತ್ಸೂದ್ವಿಷ**-(ಪಾ. ಸೂ. ೩-೨-೬೧) ಎಂಬುದರಿಂದ ಕ್ವಿಪ್ ಪ್ರತ್ಯಯ. ದ್ವಿತೀಯಾಬಹುವಚನಾಂತರೂಪ. ॥ ೩ ॥

ಸಂಹಿತಾಪಾಠಃ

ವಿ ನ॑ಃ ಪ॒ಥಃ ಸು॒ವಿ॒ತಾಯ॑ ಚಿಯನ್ತ್ವಿ॒ಂದ್ರೋ॑ ಮ॒ರುತ॑ಃ ।
ಪೂ॒ಷಾ ಭಗೋ॑ ವಂ॒ದ್ಯಾ॒ಸ॒ಃ ॥ ೪ ॥

ಪದಪಾಠಃ

ವಿ । ನ॒ಃ । ಪ॒ಥಃ । ಸು॒ವಿ॒ತಾಯ॑ । ಚಿ॒ಯ॒ನ್ತು॒ । ಇ॒ಂದ್ರ॑ಃ । ಮ॒ರುತ॑ಃ ।
ಪೂ॒ಷಾ । ಭಗ॑ಃ । ವಂ॒ದ್ಯಾ॒ಸ॒ಃ ॥ ೪ ॥

ಸಾಯಣಭಾಷ್ಯಂ

ವಂದ್ಯಾಸಃ ಸರ್ವೈರ್ವಂದನೀಯಾಃ ಸ್ತೋತವ್ಯಾ ನಮಸ್ಕರ್ತವ್ಯಾ ವೇಂದ್ರಾದಯೋ ದೇವಾ ನೋಽಸ್ಮಾಕಂ ಪಥೋ ಮಾರ್ಗಾನ್ನಿ ಜಿಯಂತು । ವಿಚಿನ್ವಂತು । ಅಶೋಭನೇಭ್ಯೋ ಮಾರ್ಗೇಭ್ಯಃ ಸಕಾಶಾತ್ಪೃಥಕ್ಕುರ್ವಂತು । ಕಿಮರ್ಥಂ । ಸುವಿತಾಯ ಸುಷ್ಠು ಪ್ರಾಪ್ತವ್ಯಾಯೈ ಸ್ವರ್ಗಾದಿಫಲಾಯ ॥ ಪಥಃ । ಶಸಿ ಭಸ್ಯ ಟೇರ್ಲೋಪಃ ಇತಿ ಟಿಲೋಪಃ । ಉದಾತ್ತನಿವೃತ್ತಿಸ್ವರೇಣ ಶಸ ಉದಾತ್ತತ್ವಂ । ಸುವಿತಾಯ । ಇಣ್ ಗತಾವಿತ್ಯಸ್ಮಾತ್ಕರ್ಮಣಿ ನಿಷ್ಠಾ । ತನ್ಪ್ರದೀನಾಂ ಛಂದಸಿ ಬಹುಲಮುಪಸಂಖ್ಯಾನಮಿತ್ಯುವಙ್ । ಗತಿರನಂತರ ಇತಿ ಪೂರ್ವಪದಪ್ರಕೃತಿಸ್ವರತ್ವೇ ಪ್ರಾಪ್ತೇ ಸೂಪಮಾನಾತ್ ಕ್ತ ಇತ್ಯುತ್ತರಪದಾಂತೋದಾತ್ತತ್ವಂ । ಜಿಯಂತು। ಜಿಙ್ ಚಯನೇ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಇಯಙ್ । ಪಾದಾದಿತ್ವಾನ್ನಿಘಾತಾಭಾವಃ । ವಂದ್ಯಾಸಃ । ವದಿ ಅಭಿವಾದನಸ್ತುತ್ಯೋಃ । ಋಹಲೋರ್ಣ್ಯತ್ । ಈಡನಂದನ್ಯಶಂಸದುಹಾಂ ಣ್ಯತ ಇತ್ಯಾದ್ಯುದಾತ್ತತ್ವಂ । ಆಜ್ಜಸೇರಸುಕ್ ॥

ಪ್ರತಿಪದಾರ್ಥ

ವಂದ್ಯಾಸಃ—(ಸಕಲರಿಂದಲ್ಲೂ) ವಂದಿಸಲ್ಪಡಲು ಅರ್ಹರಾದ । **ಇಂದ್ರಃ**—ಇಂದ್ರನೂ । **ಮರುತಃ**—ಮರುತ್ತುಗಳೂ । **ಪೂಷಾ**—ಪೂಷದೇವನೂ । **ಭಗಃ**—ಭಗದೇವನೂ ಸಹ । **ಸುವಿತಾಯೈ**—(ನಮ್ಮ ಅಭೀಷ್ಟವಾದ) ಸ್ವರ್ಗಾದಿಫಲಸಾಧನೆಗಾಗಿ । **ನಃ**—ನಮಗೆ । **ಪಥಃ ವಿಚಿಯಂತು**—(ಕೆಟ್ಟ ದಾರಿಯಿಂದ ತಪ್ಪಿಸಿ) ಸನ್ಮಾರ್ಗಪ್ರವರ್ತಕರಾಗಲಿ. ।

॥ ಭಾವಾರ್ಥ

ಸಕಲ ಲೋಕಕ್ಕೂ ಪೂಜ್ಯರಾದ ಇಂದ್ರನೂ, ಮರುತ್ತುಗಳೂ, ಪೂಷನೂ, ಭಗದೇವನೂ ಸಹ ನಮ್ಮ ಇಷ್ಟಾರ್ಥವಾದ ಸ್ವರ್ಗಾದಿಫಲಸಾಧನೆಗಾಗಿ ನಮ್ಮನ್ನು ಕೆಟ್ಟದಾರಿಯಿಂದ ತಪ್ಪಿಸಿ ನಮಗೆ ಸನ್ಮಾರ್ಗದರ್ಶಕರಾಗಲಿ.

English Translation

May the adorable Indra, the Maruts, Pushan, and Bhaga, so direct our path that they may lead to the attainment of our welfare.

॥ ವಿಶೇಷವಿಷಯಗಳು ॥

ವಂದ್ಯಾಸಃ—ವಂದ್ಯಾಃ ಎಂಬ ಶಬ್ದವ ಪ್ರಾಚೀನಪ್ರಯೋಗವು. ಎಲ್ಲರಿಂದಲೂ ನಮಸ್ಕರಿಸಲ್ಪಡುವವರು.

ಸುವಿತಾಯ—ಸುಷ್ಠು ಪ್ರಾಪ್ತವ್ಯಾಯ ಸ್ವರ್ಗಾದಿಫಲಾಯ । ನಮಗೆ ಒಳ್ಳೆಯದಾಗುವುದಕ್ಕೆ ಸ್ವರ್ಗಾದಿ ಫಲಪ್ರಾಪ್ತಿಗಾಗಿ.

ವಿಚಿಯಂತು—ಜಿಙ್ ಚಯನೇ । ವಿಚಿನ್ವಂತು । ಅಶೋಭನೇಭ್ಯೋ ಮಾರ್ಗೇಭ್ಯಃ ಸಕಾಶಾತ್ಪೃಥಕ್ಕುರ್ವಂತು । ಬೇರ್ಪಡಿಸಲಿ ಎಂದರೆ ಕೆಟ್ಟದಾರಿಗಳಲ್ಲಿ ಹೋಗದಿರುವಂತೆಯೂ ಪ್ರತ್ಯೇಕವಾದ ಒಳ್ಳೆಯದಾರಿಯಲ್ಲಿ ಹೋಗುವಂತೆಯೂ ಮಾಡಲಿ.

॥ ವ್ಯಾಕರಣಪ್ರಕ್ರಿಯಾ ।

ಪಥಃ—ಪಥಿನ್ ಶಬ್ದ. ದ್ವಿತೀಯಾ ಬಹುವಚನ ಶಸ್‌ಪರವಾದಾಗ **ಭಸ್ಯಟೇರ್ಲೋಪಃ** (ಪಾ. ಸೂ. ೬-೧-೬೮) ಎಂಬುದರಿಂದ ಟಿಗೆ (ಇನ್) ಲೋಪ. ಅನುದಾತ್ತವಾದ ಶಸ್ ನಿಮಿತ್ತವಾಗಿ ಉದಾತ್ತ (ಇಕಾರ)

ಲೋಪನಾಮದಿಂದ **ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ**—ಎಂಬುದರಿಂದ ಶಸಿಗೆ ಉದಾತ್ತಸ್ವರ ಬರುತ್ತದೆ.

ಸುವಿತಾಯೆ—ಇಙ್ ಗತೌ ಧಾತು ಇದಕ್ಕೆ ಕರ್ಮಣಿಯಲ್ಲಿ ಕ್ತಪ್ರತ್ಯಯ. ಸುಷ್ಠು ಇತಃ ಸುವಿತಃ **ತನ್ಯಾದೀನಾಂ ಥಂದಸಿ ಬಹುಲಮುಪಸಂಖ್ಯಾನಮ್**—ಎಂಬ ವಚನದಿಂದ ಸುವಿನ ಉಕಾರಕ್ಕೆ ಉವಙಾದೇಶ ಬರುತ್ತದೆ. **ಗತಿರನಂತರಃ** (ಪಾ. ಸೂ. ೬-೨-೪೯) ಎಂಬುದರಿಂದ ಪೂರ್ವಪದಪ್ರಕೃತಿಸ್ವರವು ಪ್ರಾಪ್ತವಾದರೆ **ಸೂಪಮಾನಾತ್ ಕ್ತಃ** (ಪಾ ಸೂ. ೬-೨-೧೪೫) ಎಂಬುದರಿಂದ ಉತ್ತರಪದಾಂತೋದಾತ್ತ ಸ್ವರ ಬರುತ್ತದೆ.

ಚಿಯಂತು—ಚಿಙ್ ಚಯನೇ ಧಾತು. ಸ್ವಾದಿ. ಲೋಟ್ ಪ್ರಥಮಪುರುಷಬಹುವಚನದಲ್ಲಿ **ಏರುಃ** ಎಂಬುದರಿಂದ ಇಕಾರಕ್ಕೆ ಉತ್ವ. ಅಂತಾದೇಶ. **ಬಹುಲಂ ಛಂದಸಿ**—ಎಂಬುದರಿಂದ ವಿಕರಣಕ್ಕೆ (ಶ್ನು) ಲುಕ್. **ಸಾರ್ವಧಾತುಕಮಪಿತ್**—ಎಂಬುದರಿಂದ ಪ್ರತ್ಯಯ ಪಿತ್ತಾಗುವುದರಿಂದ ಗುಣ ಬರುವುದಿಲ್ಲ. **ಅಚಿ ಶ್ನುಧಾತುಭ್ರುವಾಮ್**—ಎಂಬುದರಿಂದ ಧಾತುವಿನ ಇಕಾರಕ್ಕೆ ಇಯಙಾದೇಶ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಮಧ್ಯೋದಾತ್ತವಾಗುತ್ತದೆ.

ವಂದ್ಯಾಸಃ—ವದಿ ಅಭಿವಾದನಸ್ತುತ್ಯೋಃ ಧಾತು. **ಋಹಲೋಣ್ಯತ್**— ಎಂಬುದರಿಂದ ಣ್ಯತ್ ಪ್ರತ್ಯಯ. **ಇದಿತೋ ನುಮ್ ಧಾತೋಃ**—ಎಂಬುದರಿಂದ ಧಾತುವಿಗೆ ನುಮಾಗಮ. ವಂದ್ಯ ಎಂದು ರೂಪವಾಗುತ್ತದೆ. **ಈಡವಂದವೃಶಂಸದುಹಾಂ ಣ್ಯತಃ** (ಪಾ. ಸೂ. ೬-೧-೬೫) ಎಂಬುದರಿಂದ ಸ್ವರಿತಸ್ವರಕ್ಕೆ ಆಪವಾದವಾಗಿ ಆದ್ಯುದಾತ್ತಸ್ವರ ಬರುತ್ತದೆ. ಪ್ರಥಮಾಬಹುವಚನ ಜಸ್ ಪರವಾದಾಗ **ಅಜ್ಜಸೇರಸುಕ್**—ಎಂಬುದರಿಂದ ಜಸಿಗೆ ಅಸುಕಾಗಮ. ಸಕಾರಕ್ಕೆ ರುತ್ವವಿಸರ್ಗ. ವಂದ್ಯಾಸಃ ಎಂದು ರೂಪವಾಗುತ್ತದೆ. ॥೪॥

———— :೦: ————

ಸಂಹಿತಾಪಾಠಃ

ಉತ ನ್ವೋ ಧಿಯೋ ಗೋಅಗ್ರಾಃ ಪೂಷನ್ವಿಷ್ಣವೇವಯಾವಃ ।
ಕರ್ತಾ ನಃ ಸ್ವಸ್ತಿಮತಃ ॥ ೫ ॥

ಪದಪಾಠಃ

ಉತ । ನಃ । ಧಿಯಃ । ಗೋಽಅಗ್ರಾಃ । ಪೂಷನ್ । ವಿಷ್ಣೋ ಇತಿ । ಏವಽಯಾವಃ ।
ಕರ್ತ । ನಃ । ಸ್ವಸ್ತಿ ಽಮತಃ ॥ ೫ ॥

ಸಾಯಣಭಾಷ್ಯಂ

ಆಪ್ರೋ೦ರ್ಯಾಮೇ ಸಂತಿ ಚತ್ವಾರ್ಯೇತಿರಿಕ್ತೋಕ್ಥಾನಿ । ತತ್ರ ಚತುರ್ಥೇ೨ಚ್ಛಾವಾಕಾತಿರಿಕ್ತೋಕ್ಥ ಉತ ನೋ ಧಿಯ ಇತ್ಯೇಷಾನುರೂಪತ್ವಚಸ್ಯ ವೈಕಲ್ಪಿಕೀ ತೃತೀಯಾ । ಸೂತ್ರಿತಂ ಚ । ಉತ ನೋ ಧಿಯೋ ಗೋಅಗ್ರಾ ಇತಿ ವಾನುರೂಪಸ್ಯೋತ್ತಮಾ । ಅ. ೯-೧೧ । ಇತಿ ॥

ಹೇ ಪೂರ್ಷ ಪೋಷಕ ದೇವ ಹೇ ವಿಷ್ಣೋ ವ್ಯಾಪನಶೀಲ ದೇವ ಹೇ ಏವಯಾವಃ । ಏವೈರ್ಗಂತೃಭಿರಶ್ವೈರ್ಯಾತಿ ಗಚ್ಛತೀತ್ಯೇವಯಾವಾ ಮರುದ್ಗಣಃ । ಹೇ ಮರುದ್ಗಣ ತೇ ಸರ್ವೇ ಯೂಯಂ ನೋ೨ಸ್ಮಾಕಂ ಧಿಯೋ೨ಪ್ರೋರ್ಯಾಮಲಕ್ಷಣಾನಿ ಕರ್ಮಾಣಿ ಗೋಅಗ್ರಾಃ ಪಶ್ವಗ್ರಾಣಿ ಪಶುಪ್ರಮುಖಾನ್ಯಸ್ಮತ್ಸಕಾಶಾದ್ಭ್ರಷ್ಟಾಃ ಪಶುಭಿರ್ಯುಕ್ತಾನಿ ಕರ್ತ । ಕುರುತ । ಆಪ್ರೋರ್ಯಾಮಕರ್ಮಣಶ್ಚ ಪಶುಪ್ರಾಪ್ತಿಹೇತುತ್ವಮಾಮ್ನಾಯತೇ । ಯಸ್ಮಾತ್ಪಶವಃ ಪ್ರಪ್ರೈವ ಭ್ರೈಶೀರನ್ ಸ ಏತೇನ ಯಜೇತ । ತೈ. ಬ್ರಾ. ೨-೭-೧೪-೨ । ಇತಿ । ಉತಾಪಿ ಚ ನೋ೨ಸ್ಮಾನ್ಪಸ್ತಿಮತೋ೨ವಿನಾಶಿನಃ ಕುರುತ ॥ ಏವಯಾವಃ । ಇಣ್ ಗತೌ । ಇಣ್ಶೀಜ್ಭ್ಯಾಂ ವನ್ನಿತಿ ವನ್ಪ್ರತ್ಯಯಃ । ಅಸ್ಮಿನ್ಪಪದೇ ಯಾ ಪ್ರಾಪಣೇ ಇತ್ಯಸ್ಮಾದಾತೋ ಮನಿನ್ನಿತಿ ವನಿಪ್ । ಸಂಬುದ್ಧೌ ವನ ಉಪಸಂಖ್ಯಾನಂ । ಪಾ. ೮-೩-೧೦-೧ । ಇತಿ ವಕಾರಸ್ಯ ರುತ್ವಂ ॥

॥ ಪ್ರತಿಪದಾರ್ಥ ।

ಪೂರ್ಷ— ಎಲೈ ಪೂಷದೇವನೇ । **ವಿಷ್ಣೋ**— ಎಲೈ ವಿಷ್ಣುವೇ । **ಏವಯಾವಃ**— ಅಶ್ವವಾಹಕರಾದ ಮರುತ್ತುಗಳೇ । **ನಃ**—ನಮ್ಮ । **ಧಿಯಃ**—(ಅಪ್ರೋರ್ಯಾಮರೂಪವಾದ) ಕರ್ಮಗಳನ್ನು । **ಗೋಅಗ್ರಾಃ**—(ನಮ್ಮಿಂದ ತಪ್ಪಿಸಿಕೊಂಡಿರುವ) ಪಶುಗಳನ್ನು ಪುನಃ ಸೇರಿಸಿಕೊಡುವುದುಗಳನ್ನಾಗಿ । **ಕರ್ತ**— ಮಾಡಿರಿ । **ಉತ**— ಮತ್ತು । **ನಃ**— ನಮ್ಮನ್ನು । **ಸ್ಮಸ್ತಿಮತಃ**—ಸೌಭಾಗ್ಯವಂತರನ್ನಾಗಿ (ಮಾಡಿ)

ಭಾವಾರ್ಥ

ಎಲೈ ಪೂಷದೇವನೇ, ಎಲೈ ವಿಷ್ಣುವೇ, ಎಲೈ ಮರುತ್ತುಗಳೇ, ನಿಮ್ಮೆಲ್ಲರ ಅನುಗ್ರಹದಿಂದ ನಮ್ಮ ಅಪ್ರೋರ್ಯಾಮ ರೂಪವಾದ ಕರ್ಮಗಳು ಸಾರ್ಥಕಗಳಾಗಬೇಕು. ಆ ಕರ್ಮಗಳನ್ನು ಅನುಗ್ರಹಿಸಿ ಅವುಗಳನ್ನು ನಮ್ಮ ಕಳೆದುಹೋಗಿರುವ ಹಸುಗಳನ್ನು ಹಿಂದಕ್ಕೆ ತಂದು ಸೇರಿಸುವ ಸಾಮರ್ಥ್ಯವುಳ್ಳವುಗಳನ್ನಾಗಿ ಮಾಡಿರಿ. ಮತ್ತು ನಮ್ಮನ್ನೆಲ್ಲ ಸೌಭಾಗ್ಯವಂತರನ್ನಾಗಿ ಮಾಡಿರಿ.

English Translation

Pushan, Vishnu, Maruts, make our rites restorative of our cattle; make us prosperous.

ವಿಶೇಷವಿಷಯಗಳು

ಆಪ್ರೋರ್ಯಾಮವೆಂಬ ಯಾಗದಲ್ಲಿ ನಾಲ್ಕು ಅತಿರಿಕ್ತೋಕ್ಥ ಮಂತ್ರಗಳನ್ನು ಪಠಿಸಬೇಕು. ಅವುಗಳಲ್ಲಿ ನಾಲ್ಕನೆಯ ಮಂತ್ರವನ್ನು ಅಚ್ಛಾವಾಕನೆಂಬ ಋತ್ವಿಜನು ಪಠಿಸುವಾಗ **ಉತ ನೋ ಧಿಯ** ಎಂಬ ಋಕ್ಕನ್ನು ಆ

ಋತ್ವಿಜನು ಪಠಿಸುವ ಅನುರೂಪವಾದ ತೃಚದಲ್ಲಿ ಮೂರನೆಯ ಋಕ್ಕನ್ನಾಗಿ ವೈಕಲ್ಪಿಕವಾಗಿ ಪಠಿಸಬಹುದೆಂದು ಆಶ್ವಲಾಯನಶ್ರೌತಸೂತ್ರದ **ಉತ ನೋ ಧಿಯೋ ಗೋಅಗ್ರಾ ಇತಿ ವಾನುರೂಪಸ್ಯೋತ್ತಮಾ** ಎಂಬ ಸೂತ್ರವು ನಿರ್ದೇಶಿಸುವುದು (ಆ. ೯-೧೧).

ಧಿಯಃ—ಇಲ್ಲಿ ಧೀಶಬ್ದವು ಕರ್ಮಾರ್ಥವನ್ನು ಸೂಚಿಸುವುದು (ನಿ. ೩-೯) ಧಿಯಃ ಎಂದರೆ ಕರ್ಮಗಳು, ಯಜ್ಞಾನಿಕರ್ಮಗಳು.

ಗೋಅಗ್ರಾಃ— **ಗಾವೋಽಗ್ರೇ ಯಾಸಾಂ ತಾ ಗೋ ಅಗ್ರಾಃ ಧಿಯಃ । ಗೋಲಾಭಫಲಾ ಇತ್ಯರ್ಥಃ । ಅಶ್ವ್ಯೋರ್ಯಾಮಕರ್ಮಣಶ್ಚ ಪಶುಪ್ರಾಪ್ತಿಹೇತುತ್ವಮಾಮ್ನಾಯತೇ । ಯಸ್ಮಾತ್ಪಶವಃ ಪ್ರಪ್ರೈವ ಭ್ರಗ್ಂಶೀರನ್ । ಸ ಏತೇನ ಯಜೇತ** (ತೈ. ಬ್ರಾ. ೨-೭-೧೪-೨) ಗೋಲಾಭವೇ ಮುಖ್ಯ ಫಲವಾಗಿ ವುಳ್ಳ ಕರ್ಮ ಎಂದರೆ ಅಶ್ವ್ಯೋರ್ಯಾಮ ಮೊದಲಾದ ಯಜ್ಞಕರ್ಮಗಳು ಎಂದರ್ಥವು **ಈ** ಅಶ್ವ್ಯೋರ್ಯಾಮವೆಂಬ ಯಜ್ಞವನ್ನು ಪಶುಗಳನ್ನು ಅಪೇಕ್ಷಿಸುವವನು ಮಾಡಬೇಕೆಂದು ತೈ. ಬ್ರಾ. ವಚನವು ನಿರ್ದೇಶಿಸುವುದು. ಆದುದರಿಂದ ಪೂಷನೇ ಮೊದಲಾದ ದೇವತೆಗಳು ನಾವು ಪಶುಲಾಭಕ್ಕಾಗಿ ಮಾಡುತ್ತಿರುವ ಅಶ್ವ್ಯೋರ್ಯಾಮ ಮೊದಲಾದ ಯಜ್ಞಗಳನ್ನು ಸಾಂಗವಾಗಿ ನೆರವೇರಿಸಲಿ ಎಂದಭಿಪ್ರಾಯವು.

ಪೂಷನ್, ವಿಷ್ಣೋ—**ಪೋಷಕ, ವ್ಯಾಪನಶೀಲ** । ಸರ್ವರನ್ನು ಪೋಷಿಸುವವನಾದ್ದರಿಂದ ಈ ದೇವನನ್ನು (ದ್ವಾದಶಾದಿತ್ಯರಲ್ಲಿ ಒಬ್ಬನು) ಪೂಷನೆಂದೂ, ವಿಷ್ಣುವು ಸರ್ವವನ್ನು ವ್ಯಾಪಿಸಿ ಇರುವವನಾದ್ದರಿಂದ ವಿಷ್ಣುವೆಂದೂ ಹೇಳುವರು

ಏವಯಾವಃ—**ಇಣ್ ಗತೌ** । **ಏವೈರ್ಗಂತೃಭಿರಶ್ವ್ಯೋರ್ಯಾತಿ ಗಚ್ಛತ್ಯೇವಯಾವಾ ಮರುದ್ಗಣಃ** । ಗಮನಶೀಲವಾದ ಪೃಷತ್ಯಃ ಎಂಬ ಅಶ್ವಗಳಿಂದ ರಥವಲ್ಲಿ ಸಂಚರಿಸುವವರಾದ್ದರಿಂದ ಏವಯಾವಃ ಎಂದರೆ ಮರುದ್ಗಣವು ಎಂದು ಭಾಷ್ಯಕಾರರು ಈ ಶಬ್ದಕ್ಕೆ ಅರ್ಥವಿವರಣೆ ಮಾಡಿರುವರು.

ಸ್ವಸ್ತಿಮತಃ—ಒಳ್ಳೆಯದನ್ನು. ಆಘವನ್ನಿಲ್ಲದಿರುವುದನ್ನು, ಮಂಗಳವನ್ನು ಹೊಂದುವಂತೆ. ಈ ಶಬ್ದವು ನಃ ಎಂಬ ಶಬ್ದಕ್ಕೆ ವಿಶೇಷಣವು.

ವ್ಯಾಕರಣಪ್ರಕ್ರಿಯಾ

ಗೋಅಗ್ರಾಃ— **ಸರ್ವತ್ರ ವಿಭಾಷಾ ಗೋಃ** (ಪಾ. ಸೂ. ೬-೧-೧೨೮) ಎಂಬುದರಿಂದ ಪ್ರಕೃತಿಭಾವ ಬರುತ್ತದೆ.

ಏವಯಾವಃ—ಇಣ್ ಗತೌ ಧಾತು. ಇದಕ್ಕೆ **ಇಣ್ಶೀಜ್ಭ್ಯಾಂ ವನ್** (ಉ ಸೂ. ೧-೧೫೦)—ಎಂಬುದರಿಂದ ವನ್ಪ್ರತ್ಯಯ. ತನ್ನಿಮಿತ್ತವಾಗಿ **ಸಾರ್ವಧಾತುಕಾರ್ಧಧಾತುಕಯೋಃ**—ಎಂಬುದರಿಂದ ಧಾತುವಿಗೆ ಗುಣ. ಏವ ಎಂದು ರೂಪವಾಗುತ್ತದೆ. ಇದು ಉಪಪದವಾಗಿರುವಾಗ, **ಯಾ** ಪ್ರಾಪಣೇ, ಈ ಧಾತುವಿಗೆ **ಅತೋ ಮನಿನ್ವನಿಪ್** ಎಂಬುದರಿಂದ ವನಿಪ್ ಪ್ರತ್ಯಯ. ಏವಯಾವನ್ ಶಬ್ದವಾಗುತ್ತದೆ. ಸಂಬುದ್ಧಿ ಸುಪರವಾದಾಗ **ವನ ಉಪಸಂಖ್ಯಾನಮ್** (ಪಾ. ಸೂ ೮-೩-೧೭) ಎಂಬ ವಚನದಿಂದ ನಕಾರಕ್ಕೆ ರುತ್ವ. **ಹಲ್ಙ್ಯಾಭ್ಯೋ**—ಸೂತ್ರದಿಂದ ಸುಲೋಪ. **ಖರವಸಾನಯೋಃ**—ಸೂತ್ರದಿಂದ ರೇಫಕ್ಕೆ ವಿಸರ್ಗ. **ಅಮಂತ್ರಿತಸ್ಯ** (ಪಾ. ಸೂ ೬-೧-೧೯೮) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ

ಕರ್ತಾ—ಡುಕೃಞ್ ಕರಣೇ ಧಾತು. ಕರ್ತ್ರರ್ಥದಲ್ಲಿ ತೃನ್‌ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ಗುಣ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಪ್ರಥಮಾವಿಭಕ್ತಿ ಏಕವಚನಾಂತರೂಪ. ॥ ೫ ॥

ಜೀವಾತುಂ—**ಜೀವನೌಷಧಂ** । ಜೀವಾತು ಶಬ್ದಕ್ಕೆ ಪ್ರಾಣಧಾರಣೆಗೆ ಬೇಕಾದ ಸತ್ತ್ವವನ್ನೊಳಗೊಂಡ ಆಹಾರವೆಂದೂ ಅಥವಾ ಚಿರಕಾಲದ ಜೀವನವೆಂದೂ ಅರ್ಥವಾಗುತ್ತದೆ. ನಿರುಕ್ತಕಾರರು ಋಕ್ಸಂಹಿತೆಯ—

ಅಸುನೀತೇ ಮನೋ ಅಸ್ಮಾಸು ಧಾರಯ ಜೀವಾತವೇ ಸು ಪ್ರ ತಿರಾ ನ ಆಯುಃ ।
(ಋ. ಸಂ. ೧೦-೫೯-೫)

ಎಂಬ ಋಕ್ಕನ್ನು ಉಗಹೆರಿಸಿ ಜೀವಾತವೇ ಎನ್ನುವುದಕ್ಕೆ **ಚಿರಂ ಜೀವನಾಯ** । (ನಿ. ೧೦-೪೦) ದೀರ್ಘಕಾಲ ಜೀವಿಸುವುಗಕ್ಕಾಗಿ ಎನ್ನುವ ಅರ್ಥವನ್ನು ಮಾಡಿರುತ್ತಾರೆ. ಇಲ್ಲಿ ಸಾಯಣರು **ಜೀವನೌಷಧಂ** ಎಂಬ ವ್ಯಾಖ್ಯಾನವನ್ನು ಮಾಡಿದ್ದಾರೆ. ಇಲ್ಲಿ ಯಾವ ಅರ್ಥವನ್ನಾದರೂ ಹೇಳಬಹುದು.

ವಶಃ—ವಶ ಕಾಂತೌ । ವಶಃ ಕಾಮಯೇಥಾಃ । ನೀನು ಇಚ್ಛಿಸಿದ್ದೇ ಆದರೆ ಎಂದು ಕರ್ತರ್ಯರ್ಥದಲ್ಲಿ ಸಾಯಣರೂ ; **ಕಾಮ್ಯಃ, ಪ್ರಾರ್ಥಯಿತವ್ಯಃ ಯಾಚ್ಯಃ ।** ನೀನು ಪ್ರಾರ್ಥಿಸಲ್ಪಡುವವನು ಎಂಬರ್ಥದಲ್ಲಿ ಸ್ಕಂದ ಸ್ವಾಮಿಗಳೂ ವ್ಯಾಖ್ಯಾನ ಮಾಡಿರುವರು. ಸನ್ನಿವೇಶಕ್ಕೆ ಹೊಂದಿಕೊಳ್ಳಬೇಕಾದರೆ ಮೊದಲನೆಯ ಅರ್ಥವೇ ಸರಿಯಾಗಿ ಕಾಣುತ್ತದೆ.

ನ ಮರಾಮಹೇ—ಮೃಜ್ ಪ್ರಾಣತ್ಯಾಗೇ । ಸೋಮನು ನಮಗೆ ಅನುಗ್ರಹಿಸಿದ್ದೇ ಆದರೆ ನಾವು ಸಾಯುವುದೇ ಇಲ್ಲವೆಂದು ಅರ್ಥವು.

ಮೋ ಷು ಣಃ ಸೋಮ ಮೃತ್ಯವೇ ಪರಾದಾಃ ಪಶ್ಯೇಮ ನು ಸೂರ್ಯಮುಚ್ಚರಂ ತಂ ।
(ಋ ಸಂ. ೧೦-೫೯-೪)

ಸೋಮ ರಾರ್ಜ ಪ್ರ ಣ ಆಯುಂಷಿ ತಾರೀರಹಾನೀವ ಸೂರ್ಯೋ ವಾಸರಾಣಿ ।
(ಋಂ ಸಂ. ೮-೪೮-೭)

ಹೀಗೆ ನಾನಾ ಕಡೆಗಳಲ್ಲಿ ಮೃತ್ಯುವಿನಿಂದ ನಮ್ಮನ್ನು ತಪ್ಪಿಸು ಎಂದು ಸೋಮನಲ್ಲಿ ಪೊರೆಯಿಟ್ಟು ಪ್ರಾರ್ಥಿಸುವುದು ಕಂಡುಬರುವುದು. ಸೋಮನ ಅನುಗ್ರಹವಿದ್ದರೆ ದೀರ್ಘಕಾಲದ ಜೀವನವು ಸಿದ್ಧವೆಂಬ ನಂಬಿಕೆ.

ವ್ಯಾಕರಣಪ್ರಕ್ರಿಯಾ

ವಶಃ—ವಶ ಕಾಂತೌ. ಧಾತು. ಲೇಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. **ಇತಶ್ಚ ಲೋಪಃ ಪರಸ್ಮೈಪದೇಷು**—ಎಂಬುದರಿಂದ ಇಕಾರಲೋಪ. **ಲೇಟೋಽಡಾಟೌ**—ಎಂಬುದರಿಂದ ಅಡಾಗಮ. ಸಕಾರಕ್ಕೆ ರುತ್ವವಿಸರ್ಗ. **ಆಗಮಾ ಅನುದಾತ್ತಾಃ**—ಎಂಬುದರಿಂದ ಧಾತುಸ್ವರ ಉಳಿಯುತ್ತದೆ. ಇಲ್ಲಿ ತ್ಸಂ ಚ ಎಂಬಲ್ಲಿರುವ ಚಶಬ್ದವು ಚಿಣ್ ಎಂಬ ನಿಪಾತಾರ್ಥಕವಾಗಿರುವುದರಿಂದ ತದ್ಯೋಗವು ವಶಃ ಎಂಬ ತಿಙಂತಕ್ಕೆ ಇರುವುದರಿಂದ **ನಿಪಾತೈರ್ಯದ್ಯದಿಹಂತ**--(ಪಾ ಸೂ. ೮-೧-೩೦) ಎಂಬುದರಿಂದ ನಿಘಾತ ಪ್ರತಿಷೇಧ ಬರುತ್ತದೆ.

ಜೀವಾತುಮ್—ಜೀವ ಪ್ರಾಣಧಾರಣೇ ಧಾತು. ಇದಕ್ಕೆ **ಜೀವೇ ರಾತುಃ** (ಉ.ಸೂ. ೧-೯೯) ಎಂಬುದರಿಂದ ಅತು ಪ್ರತ್ಯಯ. ದ್ವಿತೀಯಾ ಏಕವಚನಾಂತರೂಪ ಪ್ರತ್ಯಯಸ್ವರದಿಂದ ಆಕಾರ ಉದಾತ್ತವಾಗುತ್ತದೆ.

ಮರಾಮಹೇ—ಮೃಜ್ ಪ್ರಾಣತ್ಯಾಗೇ. ಧಾತು. ಲಟ್ ಉತ್ತಮಪುರುಷ ಬಹುವಚನದಲ್ಲಿ ಮಹಿಙ್ ಪ್ರತ್ಯಯ. **ಟಿತ ಆತ್ಮನೇ**—ಸೂತ್ರದಿಂದ ಕೊನೆಗೆ ಏತ್ವ. **ವ್ಯತ್ಯಯೋ ಬಹುಲಮ್**-ಎಂಬುದರಿಂದ ಶಪ್

ವಿಕರಣ. **ಅತೋ ದೀಘೋ ಯಞಿ**-ಎಂಬುದರಿಂದ ಅದಂತಾಂಗಕ್ಕೆ ದೀರ್ಘ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಪ್ರಿಯಸ್ತೋತ್ರಃ—ಪ್ರಿಯಾಣಿ ಸ್ತೋತ್ರಾಣಿ ಯಸ್ಯ ಸಃ ಪ್ರಿಯಸ್ತೋತ್ರಃ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್**-ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

ವನಸ್ಪತಿಃ—**ಉಭೇ ವನಸ್ಪತ್ಯಾದಿಷು** (ಪಾ. ಸೂ. ೬-೨-೧೪೬) ಎಂಬುದರಿಂದ ಪೂರ್ವೋತ್ತರಪದಗಳಿಗೆ ಏಕಕಾಲದಲ್ಲಿ ಪ್ರಕೃತಿಸ್ವರ ಬರುತ್ತದೆ. ವನಾನಾಂ ಪತಿಃ ವನಸ್ಪತಿಃ ಪಾರಸ್ಕರ ಗಣದಲ್ಲಿ ಸೇರಿರುವುದರಿಂದ ಸುಡಾಗಮ ಬರುತ್ತದೆ. ॥ ೬ ॥

——:o:——

ಸಂಹಿತಾಪಾಠಃ

ತ್ವಂ ಸೋಮ ಮಹೇ ಭಗಂ ತ್ವಂ ಯೂನ ಋತಾಯತೇ ।
ದಕ್ಷಂ ದಧಾಸಿ ಜೀವಸೇ ॥ ೭ ॥

ಪದಪಾಠಃ

ತ್ವಂ । ಸೋಮ । ಮಹೇ । ಭಗಂ । ತ್ವಂ । ಯೂನೇ । ಋತ ಽ ಯತೇ ।
ದಕ್ಷಂ । ದಧಾಸಿ । ಜೀವಸೇ ॥ ೭ ॥

ಸಾಯಣಭಾಷ್ಯಂ

ಆಯುಷ್ಕಾಮೇಷ್ವಾಖ್ಯಂ ದ್ವಿತೀಯಸ್ಯಾಜ್ಯಭಾಗಸ್ಯ ತ್ವಂ ಸೋಮ ಮಹೇ ಭಗಮಿತ್ಯೇಷಾನುವಾಕ್ಯಾ। ಅಥ ಕಾಮ್ಯಾ ಇತಿ ಖಂಡೇ ಸೂತ್ರಿತಂ । ಆ ನೋ ಅಗ್ನೇ ಸುಚೇತನಾ ತ್ವಂ ಸೋಮ ಮಹೇ ಭಗಂ । ಅ.-೨-೧೦. । ಇತಿ ॥

ಹೇ ಸೋಮ ತ್ವಂ ಮಹೇ ಮಹತೇ ವೃದ್ಧಾಯ ಋತಾಯತೇ ಋತಂ ಯಜ್ಞಮಾತ್ಮನ ಇಚ್ಛತೇ ಪುರುಷಾಯ ಜೀವಸೇ ಜೀವನಿತುಂ ದಕ್ಷಮುಪಭೋಗಸಮರ್ಥಂ ಭಗಂ ಧನಂ ದಧಾಸಿ । ವಿದಧಾಸಿ ।

ಕರೋಷಿ । ತಥಾ ತ್ವಂ ಯೂನೇ ತರುಣಾಯ ಚ ಋತಾಯತೇ ಜೀವಿತುಂ ಧನಂ ಕರೋಷಿ ॥ ಮಹೇ । ಮಹತೇ । ಅಚ್ಛಾಬ್ಲೋಪೇಶ್ಛಾಂದಸಃ । ಬೃಹನ್ಮಹತೋರುಪಸಂಖ್ಯಾನಮಿತಿ ವಿಭಕ್ತೇರುದಾತ್ತತ್ವಂ । ಯೂನೇ । ಶ್ಯುಯುವಮಘೋನಾಮತದ್ಧಿತ ಇತಿ ಸಂಪ್ರಸಾರಣಂ । ಋತಾಯತೇ । ಋತಮಾತ್ಮನ ಇಚ್ಛತಿ । ಸುಪ ಆತ್ಮನಃ ಕ್ಯಚ್ । ನ ಚ್ಛಂದಸ್ಯಪುತ್ರಸ್ಯೇತೀತ್ವದೀರ್ಘಯೋರ್ನಿಷೇಧಃ । ಅನ್ಯೇಷಾಮಪಿ ದೃಶ್ಯತ ಇತಿ ಸಾಂಹಿತಿಕೋ ದೀರ್ಘಃ । ಕ್ಯಜಂತಾಲ್ಲಟಃ ಶತೃ । ಶತುರನುಮೋ ನದ್ಯಜಾದೀ ಇತಿ ವಿಭಕ್ತೇರುದಾತ್ತತ್ವಂ । ಜೀವಸೇ । ಜೀವ ಪ್ರಾಣಧಾರಣೇ । ತುಮರ್ಥೇ ಸೇಸೇನಿತ್ಯಸೇ ಪ್ರತ್ಯಯಃ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । **ತ್ವಂ**— ನೀನು । **ಋತಾಯತೇ**— ಯಜ್ಞಮಾಡಲಿಚ್ಛಿಸುವ । **ಮಹೇ**—ವೃದ್ಧನಿಗೂ । **ಜೀವಸೇ**—ಜೀವಿಸಲು । **ದಕ್ಷಂ**—ಅನುಭವಿಸಲು ಯೋಗ್ಯವಾದ । **ಭಗಂ**—ಧನವನ್ನು । **ದಧಾಸಿ**—ಅನುಗ್ರಹಿಸಿಕೊಡುತ್ತೀಯೆ (ಹಾಗೆಯೇ) । **ತ್ವಂ**—ನೀನು । **ಯೂನೇ**—(ಯಜ್ಞಮಾಡಲಿಚ್ಛಿಸುವ) ತರುಣನಿಗೂ ಸಹ (ಜೀವಿಸಲು ಧನವನ್ನು ಕೊಡುತ್ತೀಯೆ)

। ಭಾವಾರ್ಥ ॥

ಎಲೈ ಸೋಮದೇವನೇ, ನೀನು ಯಜ್ಞಕಾರ್ಯಗಳನ್ನು ನೆರವೇರಿಸಬೇಕೆಂದು ಆಸೆಪಡುವ ವೃದ್ಧನಿಗೂ ಅದೇ ರೀತಿ ಆ ಇಚ್ಛೆಯಿರುವ ತರುಣನಿಗೂ ಸಹ ಅವರವರು ಜೀವಿಸುವ ಸಲುವಾಗಿ ಬೇಕಾಗುವ ಮತ್ತು ಅವರು ಅನುಭವಿಸಲು ಯೋಗ್ಯವಾದ ಧನವನ್ನು ಅನುಗ್ರಹಿಸಿ ಕೊಡುತ್ತೀಯೆ.

English Translation

Soma, you bestow upon him who worships you whether old or young, wealth that he may enjoy and live.

ವಿಶೇಷವಿಷಯಗಳು

ಆಯುಷ್ಕಾಮೇಷ್ಟಿಯಲ್ಲಿ ಎರಡನೆಯ ಆಜ್ಯಭಾಗಹೋಮಮಾಡುವಾಗ **ತ್ವಂ ಸೋಮ ಮಹೇ ಭಗಂ** ಎಂಬ ಮಂತ್ರವನ್ನು ಪುರೋನುವಾಕ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ ಅಥ ಕಾಮ್ಯಾ ಎಂಬ ಖಂಡದ **ಆ ನೋ ಅಗ್ನೇ ಸುಚೇತುನಾ ತ್ವಂ ಸೋಮ ಮಹೇ ಭಗಂ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೨-೧೦)

ಋತಾಯತೇ— ಯಜ್ಞಂ ಆತ್ಮನ ಇಚ್ಛತೇ ಪುರುಷಾಯ । ಯಜ್ಞವನ್ನು ನೆರವೇರಿಸಿ ಅದರ ಫಲವನ್ನು ಅಪೇಕ್ಷಿಸುವ ಯಜಮಾನನಿಗೆ ಮಾತ್ರ ಧನವೂ ಶಕ್ತಿಯೂ ಲಭಿಸುತ್ತದೆ. ಇಲ್ಲದವನಿಗೆ ಇಲ್ಲ ಎಂದರ್ಥವು. ಇಲ್ಲಿ **ಋತಾಯತೇ ಮಹೇ, ಋತಾಯತೇ ತರುಣಾಯ ಚ ದಕ್ಷಂ ಉಪಭೋಗಸಮರ್ಥಂ ಧನಂ ವಿದಧಾಸಿ** ಯಜ್ಞಮಾಡುವವನು ವೃದ್ಧನಾಗಲಿ ಅಥವಾ ತರುಣನಾಗಲಿ ಅವನಿಗೆ ಅನುಭವಿಸಲು ಯೋಗ್ಯವಾದ ಧನವನ್ನು ಅನುಗ್ರಹಿಸಿಕೊಡುತ್ತೀಯೆ ಎಂಬರ್ಥವನ್ನು ಸಾಯಣರೂ ; **ಮಹೇ ಭಗಂ, ಋತಾಯತೇ ಯೂನೇ ಬಲಂ**

ವೃದ್ಧಿಂ ವಾ ದದಾಸಿ । ವೃದ್ಧನಿಗೆ ಧನವನ್ನು, ಯಜ್ಞಮಾಡಲಿಚ್ಛಿಸುವ ತರುಣನಿಗೆ ಬಲ ಅಥವಾ ವೃದ್ಧಿಯನ್ನು ಅನುಗ್ರಹಿಸಿಕೊಡುತ್ತೀಯೆ ಎಂದು ಸ್ಕಂದ ಸ್ವಾಮಿಗಳೂ ವ್ಯಾಖ್ಯಾನವನ್ನು ಮಾಡಿರುವರು. **ವೃದ್ಧಾಯ ಧನಂ ದಧಾಸಿ । ಯೂನೇ ಚ ಬಲಂಚ ಯಚ್ಛಸಿ ।** ಎಂದು ಮಾಧವರೂ ಸಹ ಸ್ಕಂದಸ್ವಾಮಿಗಳಂತೆಯೇ ವಿವರಿಸಿ ದಕ್ಷ ಶಬ್ದವನ್ನು ಭಗ ಶಬ್ದಕ್ಕೆ ವಿಶೇಷಣವನ್ನಾಗಿ ಮಾಡದೇ ಬೇರೆಬೇರೆಯಾಗಿ ಅರ್ಥವನ್ನು ಹೇಳಿರುವರು.

ಜೀವಸೇ—ಜೀವಿಸುವುದಕ್ಕಾಗಿ. for long life.

ವ್ಯಾಕರಣಪ್ರಕ್ರಿಯಾ

ಮಹೇ—ಮಹತ್ ಶಬ್ದ. ಚತುರ್ಥೀ ಏಕವಚನದಲ್ಲಿ ಮಹತೇ ಎಂದು ರೂಪವಾಗುತ್ತದೆ. ಸಂಹಿತಾದಲ್ಲಿ ಮಹತ್ ಎಂಬಲ್ಲಿರುವ ಅತಿಗೆ ಛಾಂದಸವಾಗಿ ಲೋಪ. **ಬೃಹನ್ಮಹತೋರುಪಸಂಖ್ಯಾನಮ್**—ಎಂಬುದರಿಂದ **ವಿಭಕ್ತಿ**ಗೆ ಉದಾತ್ತಸ್ವರ ಬರುತ್ತದೆ.

ಯೂನೇ—ಯುವನ್ ಶಬ್ದ. ಚತುರ್ಥೀಏಕವಚನ ಪರವಾದಾಗ **ಶ್ಯಯುವಮಘೋನಾಮತದ್ಧಿತೇ** ಎಂಬುದರಿಂದ ಸಂಪ್ರಸಾರಣವನ್ನುಹೊಂದುವ **ವ**ಕಾರವು ಪರದಲ್ಲಿರುವುದರಿಂದ ಯಕಾರಕ್ಕೆ ಸಂಪ್ರಸಾರಣವು ಬರುವುದಿಲ್ಲ. ವಕಾರಕ್ಕೆ ಉಕಾರರೂಪ ಸಂಪ್ರಸಾರಣ. **ಸಂಪ್ರಸಾರಣಾಚ್ಚ**—ಎಂಬುದರಿಂದ ಪೂರ್ವರೂಪ. ಯೂನೇ ಎಂದು ರೂಪವಾಗುತ್ತದೆ.

ಋತಾಯತೇ — ಋತಮಾತ್ಮನಃ ಇಚ್ಛತಿ ಋತಾಯತೇ. **ಸುಪ ಆತ್ಮನಃ ಕ್ಯಚ್** (ಪ್ರಾ. ಸೂ ೩-೧-೮) ಎಂಬುದರಿಂದ ಇಚ್ಛಾರ್ಥದಲ್ಲಿ ಋತ ಎಂಬ ಸುಬಂತದ ಮೇಲೆ ಕ್ಯಚ್. **ನ ಛಂದಸ್ಯಪುತ್ರಸ್ಯ** (ಪಾ. ಸೂ. ೭-೪-೩೫) ಎಂಬುದರಿಂದ ಕ್ಯಚ್ ನಿಮಿತ್ತವಾಗಿ ಬರುವ ಈತ್ವವೂ ದೀರ್ಘವೂ ಬರುವುದಿಲ್ಲ. **ಅನ್ಯೇಷಾಮಪಿ ದೃಶ್ಯತೇ**—ಎಂಬುದರಿಂದ ಋತ ಎಂಬುದಕ್ಕೆ ಸಂಹಿತಾದಲ್ಲಿ ದೀರ್ಘ. **ಸನಾದ್ಯಂತಾ ಧಾತವಃ**—ಎಂಬುದರಿಂದ ಋತಾಯ ಎಂಬ ಕ್ಯಜಂತಕ್ಕೆ ಧಾತುಸಂಜ್ಞಾ. ಇದಕ್ಕೆ ಲಡರ್ಥದಲ್ಲಿ ಶತೃ ಪ್ರತ್ಯಯ ಋತಾಯತ್ ಶಬ್ದವಾಗುತ್ತದೆ. ಚತುರ್ಥೀಏಕವಚನಾಂತರೂಪ. ನುಮ್‌ರಹಿತವಾದ ಶತೃವಿನ ಪರದಲ್ಲಿ ವಿಭಕ್ತಿ ಬಂದುದರಿಂದ **ಶತುರನುನೋನದ್ಯಜಾದೀ** (ಪಾ. ಸೂ. ೬-೧-೧೭೩) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ದಧಾಸಿ—ಡುಧಾಞ್ ಧಾರಣಪೋಷಣಯೋಃ ಧಾತು. ಲಟ್‌ಮಧ್ಯಮಪುರುಷಏಕವಚನಾಂತರೂಪ. ತಿಙಂತನಿಘಾತಸ್ವರ ಬರುತ್ತದೆ.

ಜೀವಸೇ—ಜೀವ ಪ್ರಾಣಧಾರಣೇ ಧಾತು. ತುಮುನರ್ಥ ತೋರುವಾಗ **ತುಮರ್ಥೇ ಸೇಸೇನಸೇ**- (ಪಾ. ಸೂ. ೩-೪-೯) ಎಂಬುದರಿಂದ ಅಸೇ ಪ್ರತ್ಯಯ. ಏದಂತವಾದುದರಿಂದ **ಕೃತ್ಯೈಜಂತಃ**—ಎಂಬುದರಿಂದ ಅವ್ಯಯಸಂಜ್ಞಾ ಬರುತ್ತದೆ. ಪ್ರತ್ಯಯಸ್ವರದಿಂದ ಮಧ್ಯೋದಾತ್ತವಾದ ಪದವಾಗುತ್ತದೆ. ॥ ೬ ॥

ಸಂಹಿತಾಪಾಠಃ

ತ್ವಂ ನ॑ಃ ಸೋಮ ವಿಶ್ವತೋ ರಕ್ಷಾ ರಾಜನ್ನಘಾಯತಃ ।
ನ ರಿ॑ಷ್ಯೇತ್ತಾ॒ವ॑ತ॒ಃ ಸಖಾ ॥ ೮ ॥

ಪದಪಾಠಃ

ತ್ವಂ । ನ॒ಃ । ಸೋ॒ಮ॒ । ವಿ॒ಶ್ವ॑ತಃ । ರ॒ಕ್ಷ॒ । ರಾ॒ಜ॒ನ್ । ಅ॒ಘ॒ಽಆ॒ಯ॒ತಃ ।
ನ । ರಿ॒ಷ್ಯೇ॒ತ್ । ತ್ವ॒ಽಆ॒ವ॑ತಃ । ಸಖಾ ॥ ೮ ॥

ಸಾಯಣಭಾಷ್ಯಂ

ಸ್ವಸ್ಯೈಯನ್ಯಾಂ ದ್ವಿತೀಯಸ್ಯಾಜ್ಯಭಾಗಸ್ಯ ತ್ವಂ ನಃ ಸೋಮೇತ್ಯೇಷಾನುವಾಕ್ಯಾ । ಸೂತ್ರಿತಂ ಚ । ಸ್ವಸ್ಯೈಯನ್ಯಾಂ ರಕ್ಷಿತವಂತಾವಗ್ನೀ ರಕ್ಷಾಣೋ ಅಂಹಸಸ್ತ್ವಂ ನಃ ಸೋಮ ವಿಶ್ವತಃ । ಆ ೨-೧೦ । ಇತಿ ॥

ಹೇ ಸೋಮ ರಾಜನ್ ರಾಜನಶೀಲ ತ್ವಮಘಾಯತಃ । ಅಘಂ ಪಾಪಂ ।ತದ್ಧೇತುಕಂ ದುಃಖಮಸ್ಮಾಕಂ ಕರ್ತುಮಿಚ್ಛತೋ ವಿಶ್ವತಃ ಸರ್ವಸ್ಮಾದಪಿ ಪುರುಷಾನ್ನೋ೭ಸ್ಮಾನ್ರಕ್ಷ । ಪಾಲಯ । ತ್ವಾವತ-ಸ್ತ್ವತ್ಸದೃಶಸ್ಯ ಸಖಾ ಸಖ್ಯಂ ಪ್ರಾಪ್ತಃ ಪುರುಷೋ ನ ರಿಷ್ಯೇತ್ । ನಹಿ ವಿನಶ್ಯೇತ್ । ಕಿಮು ವಕ್ತವ್ಯಂ ತ್ವತ್ಸಖಾ ನ ವಿನಶ್ಯತೀತಿ ॥ ಅಘಾಯತಃ । ಅಘಂ ಪಾಪಂ ಪರೇಷಾಮಿಚ್ಛತೀತ್ಯಘಾಯನ್ । ಛಂದಸಿ ಪರೇಚ್ಛಾಯಾಮಪೀತಿ ಕ್ಯಚ್ । ಅಶ್ವಾಘಸ್ಯಾದಿತ್ಯಾತ್ವಂ । ರಿಷ್ಯೇತ್ । ರುಷ ರಿಷ ಹಿಂಸಾಯಾಂ । ತ್ವಾವತಃ । ವತುಪ್ಪ್ರಕರಣೇ ಯುಷ್ಮದಸ್ಮದ್ಭ್ಯಾಂ ಛಂದಸಿ ಸಾದೃಶ್ಯ ಉಪಸಂಖ್ಯಾನಮಿತಿ ವತುಪ್ । ಪ್ರತ್ಯಯೋತ್ತರಪದಯೋಶ್ಚೇತಿ ಮಪರ್ಯಂತಸ್ಯ ತ್ವಾದೇಶಃ । ಆ ಸರ್ವನಾಮ್ನ ಇತ್ಯಾತ್ವಂ ॥

ಪದಾರ್ಥ

ಸೋಮ—ಎಲೈ ಸೋಮದೇವನೇ । ರಾಜನ್ ಪ್ರಕಾಶಮಾನನಾದ । ತ್ವಂ—ನೀನು । ಅಘಾಯತಃ—ನಮಗೆ ಕೆಡಕನ್ನು ಬಯಸಿ ಹಿಂಸಿಸತಕ್ಕ । ವಿಶ್ವತಃ—ಸಕಲವಾದ ಶತ್ರುವಿನಿಂದಲೂ । ನಃ—ನಮ್ಮನ್ನು । ರಕ್ಷ—ಕಾಪಾಡು । ತ್ವಾವತಃ - ನಿನಗೆ ಸದೃಶನಾದ ದೇವತೆಯ । ಸಖಾ—ಸ್ನೇಹಿತನಾದ ಪುರುಷನೂ । ನ ರಿಷ್ಯೇತ್—ಹಿಂಸೆಗೆ ಒಳಗಾಗುವುದಿಲ್ಲ (ನಾಶಹೊಂದುವುದಿಲ್ಲ ಅಂದರೆ ಸಾಕ್ಷಾತ್ ನಿನ್ನ ಸ್ನೇಹಿತರೇ ಆದ ನನಗೆ ನಾಶವೇ ಇಲ್ಲ.)

ಭಾವಾರ್ಥ

ಎಲೈ ಸೋಮದೇವನೇ, ಪ್ರಕಾಶಮಾನನಾದ ನೀನು ನಿನ್ನ ಶಕ್ತಿಯಿಂದ ನಮಗೆ ಕೆಡಕನ್ನು ಬಯಸಿ ಹಿಂಸಿಸತಕ್ಕ ಸಕಲ ಶತ್ರುವನ್ನೂ ನಾಶಮಾಡಿ ನಮ್ಮನ್ನು ರಕ್ಷಿಸು ನಿನಗೆ ಸಮಾನವಾದ ಗುಣವುಳ್ಳ ಯಾವ ದೇವತೆಯ ಸ್ನೇಹಿತನೂ ನಾಶವಾಗಲಾರನು. ಹಾಗಿರುವಾಗ ಸಾಕ್ಷಾತ್ತಾಗಿ ನಿನ್ನ ಸ್ನೇಹಿತರೇ ಆದ ನಮಗೆ ನಾಶ ವೆಂಬುದಿಲ್ಲವೇ ಇಲ್ಲ.

English Translation

O King Soma, defend us from every one seeking to harm us; the friend of one like you can never perish.

ವಿಶೇಷ ವಿಷಯಗಳು

ಸ್ವಸ್ತ್ಯಯನದಲ್ಲಿ ಎರಡನೆಯ ಆಜ್ಯಭಾಗಹೋಮದ ಪುರೋನುವಾಕ್ಯಾ ಮಂತ್ರಕ್ಕಾಗಿ **ತ್ವಂ ನಃ ಸೋಮ** ಎಂಬ ಈ ಋಕ್ಕಿನ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಸ್ವಸ್ತ್ಯಯನ್ಯಾಂ ರಕ್ಷಿತವಂತಾವಗ್ನೇ ರಕ್ಷಾಣೋ ಅಂಹಸಸ್ತ್ವಂ ನಃ ಸೋಮ ವಿಶ್ವತಃ** ಎಂಬ ಸೂತ್ರವು ನಿರ್ದೇಶಿಸುವುದು. (ಆ. ೨-೧೦)

ಅಘಾಯತಃ—**ಅಘಂ ಪಾಪಂ ತದ್ಧೇತುಕಂ ದುಃಖಂ ಅಸ್ಮಾಕಂ ಕರ್ತುಮಿಚ್ಛತಃ**। ಪಾಪ ಹೇತುಕವಾದ ದುಃಖವನ್ನು ನಮಗೆ ಉಂಟುಮಾಡಿ ನಮ್ಮನ್ನು ಹಿಂಸಿಸಲು ಇಚ್ಛಿಸುವ.

ವಿಶ್ವತಃ—ಸಮಸ್ತ ಶತ್ರುಗಳಿಂದಲೂ (ನಮ್ಮನ್ನು ರಕ್ಷಿಸು)

ತ್ವಾವತಃ ಸಖಾ—**ತ್ವಾವತಃ**। ನಿನಗೆ ಸಮಾನನಾದವನ **ಸಖಾ**— ಸ್ನೇಹಿತನೂ (ಹಿಂಸೆಗೆ ಒಳಗಾಗುವುದಿಲ್ಲ) **ಕಿಮು ವಕ್ತವ್ಯಂ ತ್ವತ್ಸಖಾ ನ ವಿನಶ್ಯತೀತಿ**। ಯಾವಾಗ ನಿನಗೆ ಸದೃಶನಾದ ದೇವತೆಯ ಸ್ನೇಹಿತನೂ ಕೂಡ ಹಿಂಸಿತನಾಗುವುದಿಲ್ಲವೋ ಆಗ ಸಾಕ್ಷಾತ್ ನಿನ್ನ ಸ್ನೇಹಿತರೇ ಆದ ನಮಗೆ ಶತ್ರುಗಳಿಂದ ಹಿಂಸೆಯೇ ಇಲ್ಲವೆಂದರ್ಥವು.

ನ ರಿಷ್ಯೇತ್—**ರಿಷ ಹಿಂಸಾಯಾಂ**। ಹಿಂಸೆಗೆ ಒಳಗಾಗುವ ಸಂಭವವೇ ಇಲ್ಲವೆಂದರ್ಥವು. ಆದುದರಿಂದಲೇ-

ವೃಣೇಮಹೇ ಸಖ್ಯಾಯ ವೃಣೇಮಹೇ ಯುಜ್ಯಾಯ।

(ಋ. ಸಂ. ೯-೬೬-೧೮)

ಎಂಬುದಾಗಿ ಅನೇಕ ಕಡೆಗಳಲ್ಲಿ ಸೋಮನ ಸಖ್ಯಕ್ಕೂ ಅವನ ಸಹಾಯಕ್ಕಾಗಿಯೂ ಪ್ರಾರ್ಥನೆಗಳಿರುತ್ತವೆ.

ವ್ಯಾಕರಣಪ್ರಕ್ರಿಯಾ

ರಕ್ಷ—ರಕ್ಷ ಪಾಲನೇ ಧಾತು ಲೋಟ್ ಮಧ್ಯಮಪುರುಷಏಕವಚನದಲ್ಲಿ ಸಿಪ್. **ಸೇರ್ಧ್ಯಪಿಚ್ಚೆ** ಎಂಬುದರಿಂದ ಅನಕ್ಕೆ ಹಿ ಆದೇಶ. ಶಪ್‌ವಿಕರಣ **ಅತೋ ಹೇಃ**—ಸೂತ್ರದಿಂದ ಹಿಗೆ ಲುಕ್. **ದ್ವ್ಯಚೋಽತಸ್ತಿಙಃ** (ಪಾ. ಸೂ. ೬-೩-೧೩೫) ಎಂಬುದರಿಂದ ದ್ವ್ಯಚ್ಕವಾಗಿ ಉಳಿಯುವುದರಿಂದ ಸಂಹಿತಾದಲ್ಲಿ ದೀರ್ಘ.

ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಶಪ್ ಪಿತ್ತಾದುದರಿಂದ ಅನುದಾತ್ತ. ಆಗ ಧಾತುಸ್ವರ ಉಳಿಯುತ್ತದೆ.

ಅಘಾಯತಃ—ಅಘಂ ಪಾಪಂ ಪರೇಷಾಂ ಇಚ್ಛತಿ ಇತಿ ಅಘಾಯನ್ **ಛಂದಸಿ ಪರೇಚ್ಛಾಯಾಮಪಿ** ಎಂಬ ವಚನದಿಂದ ಪರೇಚ್ಛಾ ತೋರುವಾಗಲೂ ಅಘ ಎಂಬ ಸುಬಂತದ ಮೇಲೆ ಕ್ಯಚ್‌ಪ್ರತ್ಯಯ. **ಕ್ಯಚಿಚ**—ಸೂತ್ರದಿಂದ ಈತ್ವ ಪ್ರಾಪ್ತವಾದರೆ **ನ ಚ್ಛಂದಸ್ಯಪುತ್ರಸ್ಯ**—ಎಂಬುದರಿಂದ ನಿಷೇಧ. **ಅಕ್ಷ್ನಾಶ್ಚಸ್ಯಾತ್** (ಪಾ. ಸೂ ೭-೪-೩೭) ಎಂಬುದರಿಂದ ಕ್ಯಚ್‌ಪರವಾದಾಗ ಅಘ ಶಬ್ದಕ್ಕೆ ಆತ್ವ. ಅಘಾಯತ್ ಶಬ್ದವಾಗುತ್ತದೆ. ಪಂಚಮೀ ಏಕವಚನಾಂತ ರೂಪ. **ಶತುರನುನೋ ನದ್ಯಜಾದೀ** (ಪಾ. ಸೂ. ೬-೧-೧೭೩) ಎಂಬುದರಿಂದ ಶತೃವಿನ ಪರದಲ್ಲಿರುವ ಅಜಾದಿವಿಭಕ್ತಿಗೆ (ಆಸ್) ಉದಾತ್ತಸ್ವರ ಬರುತ್ತದೆ.

ರಿಷ್ಯೇತ್—ರುಷ **ರಿಷ** ಹಿಂಸಾಯಾಮ್. ಧಾತುಃ ವಿಧಿಲಿಙ್ ಪ್ರಥಮಪುರುಷದಲ್ಲಿ **ಇತಶ್ಚ**—ಸೂತ್ರದಿಂದ ತಿಪಿನ ಇಕಾರಕ್ಕೆ ಲೋಪ. ಯಾಸುಟಾಗಮ. ಶ್ಯನ್‌ವಿಕರಣ. **ಅತೋ ಯೇಯಃ**—ಎಂಬುದರಿಂದ ಇಯಾದೇಶ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ತ್ವಾವತಃ—ತ್ವತ್ ಸದೃಶಃ ತ್ವಾವಾನ್. **ವತುಪ್ ಪ್ರಕರಣೇ ಯುಷ್ಮದಸ್ಮದ್ಭ್ಯಾಂ ಛಂದಸಿ ಸಾದೃಶ್ಯೇ ಉಪಸಂಖ್ಯಾನಮ್**—ಎಂಬ ವಚನದಿಂದ ಇಲ್ಲಿ ಸಾದೃಶ್ಯಾರ್ಥದಲ್ಲಿ ಮತುಪ್‌ಪ್ರತ್ಯಯ. ಯುಸ್ಮದ್+ ಮತುಪ್ ಎಂದಿರುವಾಗ **ಪ್ರತ್ಯಯೋತ್ತರಪದಯೋಶ್ಚ**–(ಪಾ. ಸೂ. ೭-೨-೯೮) ಎಂಬುದರಿಂದ ಯುಸ್ಮದಿನ ಮಸರ್ಯಂತಕ್ಕೆ ತ್ವ ಆದೇಶ. **ಆಸರ್ವನಾಮ್ನಃ**–(ಪಾ. ಸೂ. ೬-೩-೯೧) ದೃಗ್‌ಸದೃಶ ವತು ಇವು ಪರವಾದಾಗ ಸರ್ವನಾಮ ಶಬ್ದಗಳಿಗೆ ಆತ್ವ ಎಂಬುದರಿಂದ ಇಲ್ಲಿ ವತುಪ್ ಪರವಾದುದರಿಂದ ಆತ್ವ. ತ್ವಾವತ್ ಶಬ್ದವಾಗುತ್ತದೆ. ಷಷ್ಠೀಏಕವಚನಾಂತರೂಪ. ವತುಪ್ ಪಿತ್ತಾದುದರಿಂದ ಅನುದಾತ್ತವಾಗುತ್ತದೆ. ॥ ೮ ॥

ಸಂಹಿತಾಪಾಠಃ

ಸೋಮ॑ ಯಾಸ್ತೇ ಮ॒ಯೋಭು॑ವ ಊ॒ತಯ॑ಃ ಸಂ॒ತಿ ದಾ॒ಶುಷೇ॑।
ತಾಭಿ॑ರ್ನೋ॑ऽವಿತಾ ಭವ ॥ ೯ ॥

ಪದಪಾಠಃ

ಸೋಮ॑ । ಯಾಃ । ತೇ॒ । ಮ॒ಯಃ॑ऽ ಭುವ॑ಃ । ಊ॒ತಯ॑ಃ । ಸಂ॒ತಿ । ದಾ॒ಶುಷೇ॑।
ತಾಭಿ॑ಃ । ನ॒ಃ । ಅ॒ವಿ॒ತಾ । ಭ॒ವ॒ ॥ ೯ ॥

ಸಾಯಣಭಾಷ್ಯಂ

ಸೋಮಪ್ರವಹಣೇ ಸೋಮ ಯಾಸ್ತ ಇತಿ ತೈಚೋ೭ನುವಕ್ತವ್ಯಃ । ಸೂತ್ರಿತಂ ಚ । ಸೋಮ ಯಾಸ್ತೇ ಮಯೋಭುವ ಇತಿ ತಿಸ್ರಃ । ಆ ೪-೪ ಇತಿ ॥ ಆಗ್ರಯಣೇ ಸೌಮ್ಯಸ್ಯ ಸೋಮ ಯಾಸ್ತ, ಇತ್ಯೇಷಾನುವಾಕ್ಯಾ । ಸೂತ್ರಿತಂ ಚ । ಸೋಮ ಯಾಸ್ತೇ ಮಯೋಭುವೋ ಯಾ ತೇ ಧಾಮಾನಿ ದಿವಿ ಯಾ ಪೃಥಿವ್ಯಾಂ । ೨-೯ । ಇತಿ ॥ ಆಶ್ವಮೇಧೇ೭ಪಿ ಪೌಷ್ಣ್ಯಾಮಿಷ್ಟ್ಯಾಂ ದ್ವಿತೀಯಸ್ಯಾಜ್ಯಭಾಗಸ್ಯೈಷಾನುವಾಕ್ಯಾ । ಸೂತ್ರಿತಂ ಚ । ತ್ವಮಗ್ನೇ ಸಪ್ರಥಾ ಅಸಿ ಸೋಮ ಯಾಸ್ತೇ ಮಯೋಭುವ ಇತಿ ಸದ್ಯಂತೌ । ಆ. ೧೦-೬. । ಇತಿ ॥

ಹೇ ಸೋಮ ತೇ ತವ ಸಂಬಂಧಿನ್ಯೋ ದಾಶುಷೇ ಚರುಪುರೋಡಾಶಾದೀನಿ ದತ್ತವತೇ ಯಜಮಾನಾಯ ಮಯೋಭುವೋ ಮಯಸಃ ಸುಖಸ್ಯ ಭಾವಯಿತ್ರ್ಯೋ ಯಾ ಊತಯೋ ರಕ್ಷಾಃ ಸಂತಿ ವಿದ್ಯಂತೇ ತಾಭೀ ರಕ್ಷಾಭಿರ್ಭೂ೭ಸ್ಮಾಕಮವಿತಾ ರಕ್ಷಿತಾ ಭವ ॥ ಮಯೋಭುವಃ । ಅಸ್ಯೇತಿವಿಶೇಷಣತ್ವೇನ ಸ್ತ್ರೀಲಿಂಗತ್ವೇ ಭುವಶ್ಚ । ಪಾ. ೪-೧-೪೬ । ಇತಿ ಙೀಷ್ ಪ್ರಾಪ್ನೋತಿ । ತದ್ಧೋತೋ ಗುಣವಚನಾದಿತ್ಯಸ್ಮಾದುತ ಇತಿ ತಪರಕರಣಸ್ಯಾನುವರ್ತನಾನ್ನ ಭವತಿ ॥

ಪ್ರತಿಪದಾರ್ಥ

ಸೋಮ—ಎಲ್ಲೆ ಸೋಮದೇವನೇ । **ತೇ**—ನಿನಗೆ ಸೇರಿದ । **ದಾಶುಷೇ**—ಹವಿಸ್ಸನ್ನು ಅರ್ಪಿಸುವ ಯಜಮಾನನಿಗೆ । **ಮಯೋಭುವಃ**—ಸುಖಹೇತುಕಗಳಾದ । **ಯಾಃ ಊತಯಃ**—ಯಾವ ಯಾವ ರಕ್ಷಣಾ ಸಾಧನಗಳು । **ಸಂತಿ**—ಇವೆಯೋ । **ತಾಭಿಃ**—ಆ ರಕ್ಷಣಾ ಸಾಧನಗಳೊಂದಿಗೆ । **ನಃ**—ನಮ್ಮ । **ಅವಿತಾ**—ರಕ್ಷಕನಾಗಿ । **ಭವ**—ಆಗು ॥

ಭಾವಾರ್ಥ

ಎಲ್ಲೆ ಸೋಮದೇವನೇ, ನಿನಗೆ ಹವಿಸ್ಸನ್ನು ಅರ್ಪಿಸಿ ನಿನ್ನ ಭಕ್ತನಾದ ಯಜಮಾನನು ತನ್ನ ರಕ್ಷಣೆಗೆ ನಿನ್ನನ್ನೇ ನಂಬಿದ್ದಾನೆ. ಅವನಿಗೆ ಸುಖ ಹೇತುಗಳಾದ ಯಾವ ಯಾವ ರಕ್ಷಣಾ ಸಾಧನಗಳಿವೆಯೋ ಅವುಗಳೊಂದಿಗೆಲ್ಲಾ ನಮ್ಮ ರಕ್ಷಕನಾಗಿರು.

English Translation

Soma, be our protector with these assistances which are sources of happiness to the offerer of oblations.

॥ ವಿಶೇಷವಿಷಯಗಳು ॥

ಸೋಮಪ್ರವಹಣದಲ್ಲಿ **ಸೋಮ ಯಾಸ್ತೇ** ಎಂದು ಮೊದಲಾಗುವ ಮೂರು ಋಕ್ಕುಗಳು ಪುರೋನುವಾಕ್ಯಾಮಂತ್ರಗಳೆಂದು ಆಶ್ವಲಾಯನ ಶ್ರೌತಸೂತ್ರದ **ಸೋಮ ಯಾಸ್ತೇ ಮಯೋಭುವ ಇತಿ ತಿಸ್ರಃ** ಎಂಬ ಸೂತ್ರವು ನಿರ್ದೇಶಿಸುವುದು. ಮತ್ತು ಆಗ್ರಯಣೇಷ್ಟಿಯಲ್ಲಿ ಸೋಮದೇವತಾಕವಾದ ಹೋಮದಲ್ಲಿ **ಸೋಮ**

ಯಾಸ್ತೇ ಎಂಬ ಋಕ್ಕು ಪುರೋನುವಾಕ್ಯಾ ಮಂತ್ರವೆಂದು ಆಶ್ವಲಾಯನ ಶ್ರೌತಸೂತ್ರದ **ಸೋಮ ಯಾಸ್ತೇ ಮಯೋಭುವೋ ಯಾ ತೇ ಧಾಮಾನಿ ದಿವಿ ಯಾ ಪೃಥಿವ್ಯಾಂ** ಎಂಬ ಸೂತ್ರವು ನಿರ್ದೇಶಿಸುವುದು. (ಆ. ೨-೯) ಅಶ್ವಮೇಧಯಾಗದಲ್ಲಿಯೂ ಕೂಡ ಪೂಷದೇವತಾಕವಾದ ಇಷ್ಟಿಯಲ್ಲಿ ಎರಡನೆಯ ಆಜ್ಯಭಾಗಹೋಮದ ಪುರೋನುವಾಕ್ಯಾಮಂತ್ರಕ್ಕಾಗಿ ಈ ಋಕ್ಕನ್ನು ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ತ್ವಮಗ್ನೇ ಸಪ್ರಥಾ ಅಸಿ ಸೋಮ ಯಾಸ್ತೇ ಮಯೋಭುವ ಇತಿ ಸದ್ಯೆಂತೌ** ಎಂಬ ಸೂತ್ರದಿಂದ ವಿವೃತವಾಗಿರುವುದು (೪ ೧೦-೬)

ದಾಶುಷೇ—ದಾಶೃ ದಾನೇ । ಹವಿಸ್ಸನ್ನು ಆರ್ಪಿಸುವ ಯಜ್ಞಕರ್ತನಿಗೆ

ಊತಯೇ—ಊತಿರವನಾತ್ । (ನಿ. ೫-೩) ರಕ್ಷಣೆ ಎಂಬ ಅರ್ಥವನ್ನು ಕೊಡುವ **ಅವ** ಧಾತುವಿನಿಂದ **ಊತಿ** ಶಬ್ದದ ನಿಷ್ಪತ್ತಿಯಾಗಿದೆಯೆಂದು ನಿರುಕ್ತಕಾರರು ವಿವರಿಸಿ **ಆ ತ್ವಾ ರಥಂ ಯಥೋತಯೇ** (ಋ. ಸಂ. ೪-೬೮-೧) ಎಂಬ ಋಕ್ಕನ್ನು ಉದಹರಿಸುತ್ತಾರೆ. **ಊತಯೇ** ಎಂದರೆ ರಕ್ಷಣೆಗಳು ಎಂದರ್ಥವು. ಎಂತಹ ರಕ್ಷಣೆಗಳೆಂದರೆ ,—

ಮಯೋಭುವಃ—ಮಯಸಃ ಸುಖಸ್ಯ ಭಾವಯಿತ್ರ್ಯಃ। ಸುಖಹೇತುಕಗಳಾದ ರಕ್ಷಣೆಗಳು ಎಂದರ್ಥವು. ಸೋಮನಿಂದ ಲಭಿಸತಕ್ಕ ಸುಖದ ಸ್ವರೂಪನನ್ನು ಋ.ಸಂ.೯-೧೧೩-೭ ರಿಂದ ೧೧೮ ವರೆಗಿನ ಋಕ್ಕುಗಳಲ್ಲಿ ವಿವರಿಸಿದೆ. ಪ್ರಾಯಶಃ ಋಕ್ಸಂಹಿತೆಯಲ್ಲೆಲ್ಲಾ ದೇವತೆಗಳನ್ನು ಉದ್ದೇಶಿಸಿ ಮಾಡುವ ಪ್ರಾರ್ಥನೆಗಳೆಲ್ಲವೂ ಸುಖವನ್ನು ನಿರೀಕ್ಷಿಸಿಯೇ ನಡೆದರೂ ಕೂಡ ಸೋಮದೇವತಾಪ್ರಾರ್ಥನೆಯಲ್ಲಿ ವಿವರಿಸುವ ಸುಖದ ಸ್ವರೂಪವು ಅತ್ಯಂತ ಶ್ರೇಷ್ಠತರಗತಿಗೆ ಸೇರಿದುದಾಗಿದೆ.

ಯತ್ರ ಜ್ಯೋತಿರಜಸ್ರಂ ಯಸ್ಮಿನ್ ಲೋಕೇ ಸ್ವರ್ಹಿತಂ ।
ತಸ್ಮಿನ್ಮಾಂ ಧೇಹಿ ಪವಮಾನಾಮೃತೇ ಲೋಕೇ ಅಕ್ಷಿತ ಇಂದ್ರಾಯೇಂದೋ ಪರಿ ಸ್ರವ ॥
(ಋ. ಸಂ. ೯-೧೧೩-೭)

ಯತ್ರ ಕಾಮಾ ನಿಕಾಮಾಶ್ಚ ಯತ್ರ ಬ್ರಧ್ನಸ್ಯ ವಿಷ್ಟಪಂ ।
ಸ್ವಧಾ ಚ ಯತ್ರ ತೃಪ್ತಿಶ್ಚ ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥
(ಋ. ಸಂ. ೯-೧೧೩-೧೦)

ಯತ್ರಾನಂದಾಶ್ಚ ಮೋದಾಶ್ಚ ಮುದಃ ಪ್ರಮುದ ಆಸತೇ ।
ಕಾಮಸ್ಯ ಯತ್ರಾಪ್ತಾಃ ಕಾಮಾಸ್ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥
(ಋ. ಸಂ. ೯-೧೧೩-೧೧)

ಈ ಋಕ್ಕುಗಳಲ್ಲಿ ವಿವರಿಸುವ ಸುಖದ ಸ್ವರೂಪವು ಸಾಧಾರಣವಾಗಿ ವರ್ಣಿತವಾಗಿರುವ ಸ್ವರ್ಗ ಸುಖಕ್ಕಿಂತಲೂ ವಿಶಾಲವುದಾಗಿದೆ ನಿಕಾಮವಾದಂತಪ ಆನಂದ, ಮೋದ, ಪ್ರಮೋದಗಳು ಅತ್ಯಂತ ಶ್ರೇಷ್ಠವಾದ ಸುಖಗಳಾಗಿವೆ.

ವ್ಯಾಕರಣಸ್ಯ ಕ್ರಿಯಾ

ಸೋಮ—ಸಂಬುದ್ಧಿ ಏಕವಚನಾಂತರೂಪ. ಪಾದಾದಿಯಲ್ಲಿರುವುದರಿಂದ ಅಮಂತ್ರಿತಸಿಘಾತಸ್ವರ ಬರುವುದಿಲ್ಲ. **ಆಮಂತ್ರಿತಸ್ಯ** (ಪಾ. ಸೂ. ೬-೧-೯೯) ಎಂಬುದರಿಂದ ಆದ್ಯುದಾತ್ತವಾಗುತ್ತದೆ.

ಮಯೋಭುವಃ—ಮಯಸಃ ಭಾವಯಿತ್ರ್ಯಃ ಮಯೋಭುವಃ. ಮಯಸ್ ಉಪಪದವಾಗಿರುವಾಗ ಭೂ ಧಾತುವಿಗೆ ಕ್ವಿಪ್. ಯದ್ಯಪಿ ಇಲ್ಲಿ ಊತಿ ಶಬ್ದಕ್ಕೆ ವಿಶೇಷಣವಾದುದರಿಂದ ಇದಕ್ಕೆ ಸ್ತ್ರೀತ್ವದಲ್ಲಿ **ಭುವಶ್ಚ** (ಪಾ. ಸೂ. ೪-೧-೪೭) ಎಂಬುದರಿಂದ ಜಸ್ ಬರಬೇಕಾಗುತ್ತದೆ ಆದರೆ ಅಲ್ಲಿ **ವೋತೋಗುಣವಚನಾತ್** (ಪಾ. ಸೂ. ೪-೧-೪೪) ಎಂಬುದರಿಂದ ಉತಃ ಎಂದು ತಪರವಿಶಿಷ್ಟವಾದ ಪದವು ಅನುವೃತ್ತವಾಗುವುದರಿಂದ ಇಲ್ಲಿ ದೀರ್ಘವಿರುವುದರಿಂದ ಒರುವುದಿಲ್ಲ. **ಅಚಿಶ್ನುಧಾತುಭ್ರುವಾಂ**—(ಪಾ. ಸೂ. ೬-೪-೭೭) ಎಂಬುದರಿಂದ ಜಸ್‌ಪರವಾದಾಗ ಉವಙಾದೇಶ.

ಸಂತಿ—ಅಸ ಭುವಿ ಧಾತು. ಲಟ್ ಪ್ರಥಮಪುರುಷಬಹುವಚನದಲ್ಲಿ **ಶ್ನಸೋರಲ್ಲೋಪಃ**—ಎಂಬುದರಿಂದ ಅಸನಿನ ಅಕಾರಕ್ಕೆ ಲೋಪ. ಯಾಃ ಎಂದು ಹಿಂದೆ ಯಚ್ಛಬ್ದ ಸಂಬಂಧವಿರುವುದರಿಂದ ತಿಙಂತನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಆದ್ಯುದಾತ್ತವಾಗುತ್ತದೆ

ದಾಶುಷೇ—ಡುದಾಞ್ ದಾನೇ ಧಾತು. **ದಾಶ್ವಾನ್ ಸಾಹ್ವಾನ್** — (ಪಾ. ಸೂ. ೬-೧-೧೨) ಎಂಬುದರಿಂದ ಕ್ವಸು ಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ಚತುರ್ಥ್ಯೇಕವಚನದಲ್ಲಿ **ವಸೋಃ ಸಂಪ್ರಸಾರಣಮ್**—ಎಂಬುದರಿಂದ ಸಂಪ್ರಸಾರಣ. **ಸಂಪ್ರಸಾರಣಾಚ್ಚ**—ಎಂಬುದರಿಂದ ಪೂರ್ವರೂಪ. **ಶಾಸಿವಸಿಘಸೀನಾಂ ಚ**—ಎಂಬುದರಿಂದ ವಸುವಿನ ಸಕಾರಕ್ಕೆ ಷತ್ವ. ದಾಶುಷೇ ಎಂದು ರೂಪವಾಗುತ್ತದೆ.

ಅವಿತಾ—ಅವ ರಕ್ಷಣೇ ಧಾತು. ಕರ್ತ್ರರ್ಥದಲ್ಲಿ ತೃಚ್‌ಪ್ರತ್ಯಯ. **ಆರ್ಧಧಾತುಕಸ್ಯೇಡ್ವಲ್ಯಾದೇಃ**—ಎಂಬುದರಿಂದ ಇಡಾಗಮ. ಅವಿತೃಶಬ್ದವಾಗುತ್ತದೆ. ಪ್ರಥಮಾವಿಭಕ್ತಿ ಸುಪರವಾದಾಗ ಅನಙಾದೇಶ. **ಅಸ್-ತೃನ್**—ಸೂತ್ರದಿಂದ ಉಪಧಾದೀರ್ಘ ಸುಲೋಪ ನಲೋಪ. **ಚಿತಃ**—ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ॥ ೯ ॥

ಸಂಹಿತಾಪಾಠಃ

ಇಮಂ ಯಜ್ಞಮಿದಂ ವಚೋ ಜುಜುಷ್ಟಾಣ ಉಪಾಗಹಿ ।
ಸೋಮು ತ್ವಂ ನೋ ವೃಧೇ ಭವ ॥ ೧೦ ॥

॥ ಪದಪಾಠಃ ॥

ಇಮಂ । ಯಜ್ಞಂ । ಇದಂ । ವಚಃ । ಜುಜುಷ್ಟಾಣಃ । ಉಪ ೩ ಆಗಹಿ ।
ಸೋಮು । ತ್ವಂ । ನಃ । ವೃಧೇ । ಭವ ॥ ೧೦ ॥

ಸಾಯಣಭಾಷ್ಯಂ

ಹೇ ಸೋಮ ತ್ವಮಿಮಮಸ್ಮಾಭಿಃ ಕ್ರಿಯಮಾಣಂ ಯಜ್ಞಮಿದಂ ವಚ ಇದಾನೀಂ ಕ್ರಿಯಮಾಣಂ ಸ್ತುತಿಲಕ್ಷಣಂ ವಚನಂ ಜುಜುಷಾಣಃ ಸೇವಮಾನಃ ಸನ್ ಉಪಾಗಹಿ । ಉಪಾಗಚ್ಛ । ಪ್ರಾಚೀನ ವಂಶಲಕ್ಷಣಂ ಗೃಹಂ ಪ್ರಾಪ್ನುಹಿ । ಪ್ರಾಪ್ಯಚ ನೋಽಸ್ಮಾಕಂ ವೃಧೇ ಯಜ್ಞಸ್ಯ ವರ್ಧನಾಯ ಭವ ॥ ಜುಜುಷಾಣಃ । ಜುಷೀ ಪ್ರೀತಿಸೇವನಯೋಃ । ಛಂದಸಿ ಲಿಟ್ । ಲಿಟಃ ಕಾನಚ್ । ಚಿತ ಇತ್ಯಂತೋದಾತ್ತತ್ವಂ । ಉಪಾಗಹಿ । ಗಮೇರ್ಲೋಟಿ ಬಹುಲಂ ಛಂದಸೀತಿ ಶಪೋ ಲುಕ್ । ಅಸುದಾತ್ತೋಪದೇಶೇತ್ಯಾದಿನಾ ಮಕಾರಲೋಪಃ । ಅಸಿದ್ಧವದತ್ರಾ ಭಾದಿತ್ಯಸ್ಯಾಸಿದ್ಧತ್ವಾದ್ಧೇರ್ಲುಗಭಾವಃ। ಗತಿರ್ಗತೌ । ಪಾ. ೮-೧-೭೦ । ಇತಿ ಪೂರ್ವಸ್ಯ ಗತೇರ್ನಿಘಾತಃ ॥

ಸ್ತುತಿಪದಾರ್ಥ

ಸೋಮ—ಎಲೈ ಸೋಮದೇವನೇ, । **ತ್ವಂ**—ನೀನು । **ಇಮಂ ಯಜ್ಞಂ**—(ನಾವು ನೆರವೇರಿಸತಕ್ಕ) ಈ ಯಜ್ಞವನ್ನೂ । **ಇದಂ ವಚಃ**—ಈ ಸ್ತೋತ್ರರೂಪವಾದ ವಾಕ್ಯವನ್ನೂ । **ಜುಜುಷಾಣಃ**—(ಸ್ವೀಕರಿಸಿ) ಸೇವಿಸುತ್ತಾ । **ಉಪಾಗಹಿ** — (ನಮ್ಮ ಈ ಯಜ್ಞಗೃಹಕ್ಕೆ) ದಯಮಾಡು. । **ನಃ**—ನಮ್ಮ । **ವೃಧೇ**—(ಯಜ್ಞದ) ಅಭಿವೃದ್ಧಿಗಾಗಿ । **ಭವ**—(ಅನುಗ್ರಹವುಳ್ಳವನಾಗಿ) ಆಗು. ।

ಭಾವಾರ್ಥ

ಎಲೈ ಸೋಮದೇವನೇ, ನಾವು ನೆರವೇರಿಸತಕ್ಕ ಈ ಯಜ್ಞವನ್ನೂ ಮತ್ತು ಈ ಸ್ತೋತ್ರರೂಪವಾದ ವಾಕ್ಯವನ್ನೂ ಸ್ವೀಕರಿಸಿ ಸೇವಿಸುತ್ತಾ ನಮ್ಮ ಈ ಯಜ್ಞಗೃಹಕ್ಕೆ ದಯಮಾಡು. ಮತ್ತು ನಮ್ಮ ಯಜ್ಞದ ಬೆಳೆವಣಿಗೆಗೆ ಸಹಾಯಕನಾಗಿರು.

English Translation

O Soma, accepting this our sacrifice, and this our praise, approach us and be to us as the augmenter of our rite.

ವಿಶೇಷವಿಷಯಗಳು

ಜುಜುಷಾಣಃ—ಜುಷೀ ಪ್ರೀತಿಸೇವನಯೋಃ । ಸೇವಿಸುವವನಾಗಿ ಎಂದರೆ ನಮ್ಮ ಯಜ್ಞವನ್ನೂ ನಮ್ಮ ಸ್ತೋತ್ರವಾಕ್ಯವನ್ನೂ ಅಭಿಮಾನದಿಂದ ಸೇವಿಸುತ್ತಾ

ವೃಧೇ—ವೃಧು ವೃದ್ಧೌ । ಅಭಿವೃದ್ಧಿಗಾಗಿ ನಮ್ಮ ಯಜ್ಞದ ಬೆಳೆವಣಿಗೆಗಾಗಿ.

ಮಿತ್ರಿ ಸೋಮ ವರುಣಂ ಮಿತ್ರಿ ಮಿತ್ರಂ ಮಿತ್ರೀಂದ್ರಮಿಂದೋ ಪವಮಾನ ವಿಷ್ಣುಂ ।
ಮಿತ್ರಿ ಶರ್ಧೋ ಮಾರುತಂ ಮಿತ್ರಿ ದೇವಾ೯ ಮಿತ್ರಿ ಮಹಾಮಿಂದ್ರಮಿಂದೋ ಮದಾಯ ॥
(ಋ. ಸಂ. ೯-೯೦-೫)

ಇತ್ಯಾದಿ ಋಕ್ಕುಗಳಲ್ಲಿ ಹೇಳಿರುವಂತೆ ಯಜ್ಞನ ಚರಮಪ್ರಯೋಜನಕ್ಕೆ ಸಾಧನವಾದ ಸಕಲ ದೇವತೆಗಳ ತೃಪ್ತಿಯೂ ಸೋಮಪಾನದಿಂದ ಸಂಭವಿಸುವಾಗ ಸೋಮವೇ ಯಜ್ಞದ ಅಭಿವೃದ್ಧಿಗೆ ಮುಖ್ಯವಾದ ಕಾರಣವು. ಆದ್ದುದರಿಂದ ನಮ್ಮ ಯಜ್ಞವು ವೃದ್ಧಿಯಾಗುವಂತೆ ಮಾಡು ಎಂಬ ಪ್ರಾರ್ಥನೆಯಿರುವುದು. ಅದೂ ಅಷ್ಟಲ್ಲದೇ ಋ. ಸಂ. ೯-೨-೧೦, ೯-೬-೪ ; ಮುಂತಾವ ಋಕ್ಕುಗಳಲ್ಲಿ ವರ್ಣಿತನಾಗಿರುವಂತೆ ಸೋಮನೇ **ಯಜ್ಞಾತ್ಮ**ನಾಗಿರುವನು. ಆದುದರಿಂದ ಯಜ್ಞದ ಬೆಳೆವಣಿಗೆಗೆ ಅವನೇ ಕಾರಣನು

ವ್ಯಾಕರಣಪ್ರಕ್ರಿಯಾ

ಜುಜುಷಾಣಃ—ಜುಷೀ ಪ್ರೀತಿಸೇವನಯೋಃ ಧಾತು. ವರ್ತಮಾನಾರ್ಥದಲ್ಲಿ **ಛಂದಸಿ ಲುಙ್‌ಲಙ್‌ಲಿಟಃ**—ಎಂಬುದರಿಂದ ಲಿಟ್. **ಲಿಟಃ ಕಾನಜ್ವಾ** (ಪಾ. ಸೂ. ೩-೨-೧೦೬) ಎಂಬುದರಿಂದ ಲಿಟ್ ಗೆ ಕಾನಚ್. ತನ್ನಿಮಿತ್ತವಾಗಿ ಧಾತುವಿಗೆ ದ್ವಿತ್ವ, ಅಭ್ಯಾಸಕ್ಕೆ ಹಲಾದಿಶೇಷ. **ಆಟ್ಕುಪ್ವಾಙ್**—ಸೂತ್ರದಿಂದ ನಕಾರಕ್ಕೆ ಣತ್ವ. **ಚಿತಃ** (ಪಾ. ಸೂ. ೬-೧ ೧೬೩) ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ಉಪಾಗಹಿ—ಉಪ+ಆ ಉಪಸರ್ಗಗಳು. (ಗತಿಶ್ಚ) ಗಮ್‌ಲೃ ಗತೌ ಧಾತು. ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್‌ಪ್ರತ್ಯಯ. **ಸೇರ್ಹ್ಯಪಿಚ್ಚೆ**—ಎಂಬುದರಿಂದ ಅದಕ್ಕೆ ಹಿ ಆದೇಶ. **ಬಹುಲಂ ಛಂದಸಿ**—ಎಂಬುದರಿಂದ ಶಪಿಗೆ ಲುಕ್. ಹಿಗೆ ಅಪಿತ್ವವಿಧಾನದಿಂದ ಙಿತ್ತಾಗುವುದರಿಂದ **ಅನುದಾತ್ತೋಪದೇಶ**-(ಪಾ. ಸೂ. ೬-೪-೩೭) ಎಂಬುದರಿಂದ ಧಾತುವಿನ ಅನುನಾಸಿಕವಾದ ಮಕಾರಕ್ಕೆ ಲೋಪ. **ಅಸಿದ್ಧವದತ್ರಾಭಾತ್** (ಪಾ. ಸೂ. ೬-೪-೨೨) ಎಂಬುದರಿಂದ ಮಲೋಪವು ಅಸಿದ್ಧವಾಗುವುದರಿಂದ **ಆತೋ ಹೇಃ**—ಸೂತ್ರದಿಂದ ಹಿಗೆ ಲೋಪ ಬರುವುದಿಲ್ಲ. ಇಲ್ಲಿ ಉಪ ಎಂಬುದಕ್ಕೆ ಗತಿಸಂಜ್ಞೆಯುಳ್ಳ ಆ ಎಂಬುದು ಪರದಲ್ಲಿರುವುದರಿಂದ **ಗತಿರ್ಗತೌ** (ಪಾ. ಸೂ. ೮-೧-೭೦) ಎಂಬುದರಿಂದ ಪೂರ್ವದ ಗತಿಗೆ (ಉಪ) ನಿಘಾತಸ್ವರ ಬರುತ್ತದೆ.

ವೃಧೇ—ವೃಧು ವೃದ್ಧೌ ಧಾತು. ಕ್ವಿಪ್‌ಪ್ರತ್ಯಯ ಮಾಡಿದಾಗ ವೃಧ್ ಶಬ್ದವಾಗುತ್ತದೆ. ಚತುರ್ಥೀ ಏಕವಚನಾಂತರೂಪ. **ಸಾವೇಕಾಚಃ ತೃತೀಯಾದಿಃ**—(ಪಾ. ಸೂ. ೬-೧-೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ. ॥ ೧೦ ॥

॥ ಸಂಹಿತಾಪಾಠಃ ॥

ಸೋ॑ಮ ಗೀರ್ಭಿಷ್ಟ್ವಾ ವ॒ಯಂ ವ॒ರ್ಧಯಾ॑ಮೋ ವಚ॒ೋವಿ॑ದಃ ।
ಸು॒ಮೃ॒ಳೀ॒ಕೋ ನ॒ ಆ ವಿ॑ಶ ॥ ೧೧ ॥

ಪದಪಾಠ ॥

ಸೋಮ । ಗೀಃಽಭಿಃ । ತ್ವಾ । ವಯಂ । ವರ್ಧಯಾಮಃ । ವಚಃಽವಿದಃ ।
ಸುಽಮೃಳೀಕಃ । ನಃ । ಆ । ವಿಶ ॥ ೧೧ ॥

॥ ಸಾಯಣಭಾಷ್ಯಂ ॥

ದರ್ಶಯಾಗೇ ಸೌಮ್ಯಸ್ಯಾಜ್ಯಭಾಗಸ್ಯ ಸೋಮ ಗೀರ್ಭಿರಿತ್ಯೇಷಾನುವಾಕ್ಯಾ । ಸೂತ್ರಿತಂ ಚ । ಅಗ್ನಿಃ ಪ್ರತ್ನೇನ ಮನ್ಮನಾ ಸೋಮ ಗೀರ್ಭಿಷ್ಟ್ವಾ ವಯಂ । ಆ. ೧-೫ । ಇತಿ । ಅನ್ಯತ್ರಾಪಿ ಯತ್ರ ವೃಥನ್ಸಂತಾವಾಜ್ಯಭಾಗೌ ತತ್ರೈಷಾ ದ್ವಿತೀಯಾಜ್ಯಭಾಗಾನುವಾಕ್ಯಾ ॥

ಹೇ ಸೋಮ ತ್ವಾ ತ್ವಾಂ ವಚೋವಿದಃ ಸ್ತುತಿಲಕ್ಷಣಾನಾಂ ವಚಸಾಂ ವೇದಿತಾರೋ ವಯಮನುಷ್ಠಾತಾರೋ ಗೀರ್ಭಿಃ ಸ್ತುತಿಲಕ್ಷಣೈರ್ವಚೋಭಿರ್ವರ್ಧಯಾಮಃ । ಪ್ರವೃದ್ಧಂ ಕುರ್ಮಃ । ತಾದೃಶಸ್ತ್ವಂ ಚ ನೋಽಸ್ಮಾಕಂ. ಸುಮೃಳೀಕಃ ಶೋಭನಂ ಸುಖಂ ಕುರ್ವನ್ ಸನ್ ಆ ವಿಶ । ಆಗಚ್ಛ ॥ ಸುಮೃಳೀಕಃ । ಮೃಡ ಸುಖನೇ । ಮೃಡೇಃ ಕೀಕನ್ಕಕನೌ । ಉ. ೪-೨೪ । ಇತಿ ಭಾವೇ ಕೀಕನ್ಪ್ರತ್ಯಯಃ । ಶೋಭನಂ ಮೃಡೀಕಂ ಯಸ್ಯೇತಿ ಬಹುವ್ರೀಹೌ ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ ॥

ಪ್ರತಿಪದಾರ್ಥ

ಸೋಮ— ಎಲೈ ಸೋಮದೇವನೇ । ತ್ವಾ— ನಿನ್ನನ್ನು । ವಚೋವಿದಃ— ಸ್ತೋತ್ರವಾಕ್ಯಗಳ ಪರಿಚಯವುಳ್ಳ । ವಯಂ—ನಾವು । ಗೀರ್ಭಿಃ—ಸ್ತೋತ್ರವಾಕ್ಯಗಳಿಂದ । ವರ್ಧಯಾಮಃ—ವೃದ್ಧಿಯಾಗುವಂತೆ ಮಾಡುತ್ತೇವೆ । ನಃ—ನಮಗೆ । ಸುಮೃಳೀಕಃ—ಶ್ರೇಷ್ಠವಾದ ಸುಖಕಾರಿಯಾಗಿ । ಆ ವಿಶ—ದಯಮಾಡು ॥

ಭಾವಾರ್ಥ

ಎಲೈ ಸೋಮದೇವನೇ, ನಿನ್ನನ್ನು ಸ್ತೋತ್ರಮಾಡುವ ಕ್ರಮವು ನಮಗೆ ಚೆನ್ನಾಗಿ ಗೊತ್ತಿದೆ. ನಾವು ಪವಿತ್ರವಾದ ಸ್ತೋತ್ರ ವಾಕ್ಯಗಳಿಂದ ನಿನ್ನನ್ನು ಸ್ತುತಿಸಿ ನೀನು ವೃದ್ಧಿಯಾಗುವಂತೆ ಮಾಡುತ್ತೇವೆ. ನಮಗೆ ಅತ್ಯುತ್ತಮವಾದ ಸುಖವನ್ನು ಉಂಟುಮಾಡುವವನಾಗಿ ಇಲ್ಲಿಗೆ ದಯಮಾಡು.

English Translation

Acquainted with hymns we elevate you with praises ; do you who are benignant approach.

ವಿಶೇಷವಿಷಯಗಳು

ದರ್ಶಯಾಗದಲ್ಲಿ ಸೋಮದೇವತಾಕವಾದ ಆಜ್ಯಭಾಗಹೋಮದಲ್ಲಿ **ಸೋಮ ಗೀರ್ಭಿಃ** ಎಂಬ ಮಂತ್ರವು ಪುರೋನುವಾಕ್ಯಾ ಮಂತ್ರವಾಗಿರುವುದೆಂದು ಆಶ್ವಲಾಯನ ಶ್ರೌತಸೂತ್ರದ **ಅಗ್ನಿಃ ಪ್ರತ್ನೇನ ಮನ್ಮನಾ ಸೋಮ**

गीर्भिष्ट्वा वयं ಎಂಬ ಸೂತ್ರದಲ್ಲಿ ಹೇಳಲ್ಪಟ್ಟಿರುವುದು. (ಅ ೧–೫) ಇತರ ಸ್ಥಳಗಳಲ್ಲಿಯೂ ಎಂದರೆ ವೈಧನ್ವತೀ ಆಜ್ಯಭಾಗಹೋಮಗಳು ಎಲ್ಲೆಲ್ಲಿವೆಯೋ ಅಲ್ಲೆಲ್ಲಾ ಈ ಮಂತ್ರವು ಎರಡನೇ ಆಜ್ಯಭಾಗದ ಪುರೋನು ವಾಕ್ಯಾಮಂತ್ರವಾಗಿರುವುದೆಂದು ತಿಳಿಯಬೇಕು.

वचोविदः—वचसां स्तुतीनां ज्ञातारः । ಸ್ತುತಿವಾಕ್ಯಗಳ ಸ್ವರೂಪವನ್ನು ಚೆನ್ನಾಗಿ ತಿಳಿದು ದೇವತೆಗಳನ್ನು ಸ್ತೋತ್ರಮಾಡುವವರೆಂದರ್ಥ. **वचस्** ಎಂಬ ಪದಕ್ಕೆ ಸ್ತುತಿಯೆಂದೇ ಅರ್ಥವಾಗುತ್ತದೆ. ಉದಾಹರಣೆಗೆ ಋ. ಸಂ. ೯–೯೧–೩ ; ೯–೬೪–೨೩ ಇತ್ಯಾದಿ ಋಕ್ಕುಗಳಲ್ಲೂ ಮತ್ತು ನಿರುಕ್ತಕಾರರು ಉದಹರಿಸಿರುವ ಋ. ಸಂ. ೪–೩೮–೧೦ ನೇ ಋಕ್ಕಿನಲ್ಲೂ (ನಿ. ೧೦–೩೧) ಸಹ **वचस्** ಶಬ್ದಕ್ಕೆ ಸ್ತುತಿಯೆಂದೇ ಅರ್ಥವು. ಆದುದರಿಂದ **वचोविदः** ಎಂದರೆ ಸ್ತುತಿಯ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡು ಸರಿಯಾದ ಕ್ರಮದಲ್ಲಿ ದೇವತೆಗಳನ್ನು ಸ್ತೋತ್ರಮಾಡುವವರೆಂದರ್ಥವಾಗುತ್ತದೆ.

गीर्भिः—स्तुतयोः गिरः । गृणातेः (ನಿ. ೧–೧೧) ಶಬ್ದಮಾಡು ಎಂಬ ಅರ್ಥವಿರುವ **गृ** ಧಾತುವಿನಿಂದ **गिर्** ಶಬ್ದವು ನಿಷ್ಪನ್ನವಾಗಿದೆಯೆಂದೂ, **तमिद्वर्धन्तु नो गिरः** (ಋ ಸಂ. ೮–೧೩–೧೮) ಎಂಬ ಋಕ್ಕಿನಲ್ಲಿರುವ **गिरः** ಎಂಬ ಶಬ್ದಕ್ಕೆ ಸ್ತುತಿಗಳೆಂದೂ ನಿರುಕ್ತಕಾರರು ನಿರ್ವಚನವನ್ನು ಮಾಡಿರುತ್ತಾರೆ. ಋ. ಸಂ. ೬–೧೫–೬ ; ೮–೧೩–೧೯ ಮುಂತಾದ ಋಕ್ಕುಗಳಲ್ಲೆಲ್ಲಾ ಇದೇ ಅರ್ಥವಿರುವುದರಿಂದ ಇಲ್ಲೂ ಸಹ **गीर्भिः** ಎಂದರೆ ಸ್ತುತಿಗಳಿಂದ ಎಂದಾಗುತ್ತದೆ. ದೇವತೆಗಳೆಲ್ಲರೂ ಸಹ ಸ್ತುತಿಪ್ರಿಯರಾದ್ದರಿಂದಲೂ, ಸ್ತುತಿಗಳಿಂದ ಪಡೆಯ ತಕ್ಕ ಸಂತೋಷದಿಂದ ವೃದ್ಧಿಯಾಗತಕ್ಕವರಾದ್ದರಿಂದಲೂ ಸಹ ಇಲ್ಲಿಯೂ ಸ್ತೋತ್ರರೂಪವಾದ ವಾಕ್ಯಗಳಿಂದ ಎಂದರ್ಥವು.

वर्धयामः—स्तुवद्भिः कुर्मः । ವೃದ್ಧಿಯಾಗುವಂತೆ ಸ್ತೋತ್ರವನ್ನು ಮಾಡುತ್ತೇನೆ ಎಂದು ಋ. ಸಂ. ೧೩–೧೪–೪ ನೆಯ **तमिद्वर्धन्तु नो गिरः** ಎಂಬ ಋಕ್ಕಿನಂತೆಯೇ ಅಭಿಪ್ರಾಯವು.

सुमृळीकः—मृळ सुखने । शोभनं सुखं कुर्वन् सन् । ಅತ್ಯಂತ ಶ್ರೇಷ್ಠವಾದ ಸುಖವನ್ನು ಉಂಟುಮಾಡುವನನಾಗಿ ದಯಮಾಡು. ಋ. ಸಂ. ೯–೧೧೩ನೇ ಸೂಕ್ತದ ೭ರಿಂದ ೧೧ನೇ ಋಕ್ಕುಗಳಲ್ಲಿ ವರ್ಣಿತವಾಗಿರುವ ಸುಖಸ್ವರೂಪವನ್ನು ೧೦–೯೧–೯ನೇ ಋಕ್ಕಿನ ವಿವರಣ ಸಂದರ್ಭದಲ್ಲಿ ವಿವರಿಸಲಾಗಿದೆ.

ವ್ಯಾಕರಣಪ್ರಕ್ರಿಯಾ

गीर्भिः—ಗಿರ್ ಶಬ್ದ. ತೃತೀಯಾಬಹುವಚನ ಭಿಸ್‌ಪರವಾದಾಗ **वोरुपधायादीर्घः** (ಪಾ. ಸೂ. ೮-೨-೭೬) ಎಂಬುದರಿಂದ ಉಪಧಾಭೂತವಾದ ಇಕಿಗೆ ದೀರ್ಘ.

वर्धयामः—ವೃಧು ವೃದ್ಧೌ ಧಾತು. ಪ್ರೇರಕವ್ಯಾಪಾರತೋರುವುದರಿಂದ ಣಿಚ್. **पुगन्त लघूपधस्य च**—ಎಂಬುದರಿಂದ ಲಘೂಪಧಗುಣ. **सनाद्यन्ता धातवः**—ಎಂಬುದರಿಂದ ವರ್ಧಿ ಎಂಬ ಣಿಜಂತಕ್ಕೆ ಧಾತುಸಂಜ್ಞೆ ಬರುತ್ತದೆ. ಇದರ ಮೇಲೆ ಲಟ್. ಉತ್ತಮಪುರುಷಬಹುವಚನದಲ್ಲಿ ಮಸ್ ಪ್ರತ್ಯಯ. ಶಪ್‌ವಿಕರಣ. ತನ್ನಿಮಿತ್ತವಾಗಿ ಣಿಚಿಗೆ ಗುಣ. ಅಯಾದೇಶ. **अतोदीर्घो यञि**—ಎಂಬುದರಿಂದ ಅಪಂತಾಂಗಕ್ಕೆ ದೀರ್ಘ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಣಿಚ್‌ಸ್ವರ ಬರುತ್ತದೆ.

ವಚೋವಿದಃ—ವಚಾಂಸಿ ವಿದಂತಿ ಇತಿ ವಚೋವಿದಃ ವಿದ ಜ್ಞಾನೇ ಧಾತು. ಇದಕ್ಕೆ ಕ್ವಿಪ್ ಪ್ರತ್ಯಯ. ಪ್ರಥಮಾಬಹುವಚನಾಂತರೂಪ. **ಗತಿಕಾರಕೋಪಪದಾತ್ ಕೃತ್**—ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ಸುಮೃಳೀಕಃ—ಮೃಡ ಸುಖನೇ ಧಾತು. ಇದಕ್ಕೆ **ಮೃಡೇಃ ಕೀಕನ್ ಕಕನೌ** (ಉ. ಸೂ. ೪-೪೬೪) ಎಂಬುದರಿಂದ ಭಾವಾರ್ಥದಲ್ಲಿ ಕೀಕನ್ ಪ್ರತ್ಯಯ. ಮೃಡೀಕಃ ಎಂದು ರೂಪವಾಗುತ್ತದೆ. ಶೋಭನಂ ಮೃಡೀಕಂ ಯಸ್ಯಸಃ ಸುಮೃಳೀಕಃ. ಬಹುವ್ರೀಹಿ ಸಮಾಸದಲ್ಲಿ **ನಞ್ ಸುಭ್ಯಾಮ್**-(ಪಾ ಸೂ. ೬-೨-೧೭೨) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

ವಿಶ—ವಿಶ ಪ್ರವೇಶನೇ ಧಾತು. ಲೋಣ್ಮ್ಯಧ್ಯಮಪುರುಷಏಕವಚನರೂಪ. ಅತಿಬಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೮ ॥

॥ ಸಂಹಿತಾಪಾಠಃ ॥

ಗಯಸ್ಫಾನೋ ಅಮೀವಹಾ ವಸುವಿತ್ಪುಷ್ಟಿವರ್ಧನಃ ।
ಸುಮಿತ್ರಃ ಸೋಮ ನೋ ಭವ ॥ ೧೨ ॥

॥ ಪದಪಾಠಃ ॥

ಗಯಽಸ್ಫಾನಃ । ಅಮೀವಽಹಾ । ವಸುಽವಿತ್ । ಪುಷ್ಟಿಽವರ್ಧನಃ ।
ಸುಽಮಿತ್ರಃ। ಸೋಮ । ನಃ । ಭವ ॥ ೧೨ ॥

ಸಾಯಣಭಾಷ್ಯಂ

ಸಂತಿ ಪವಮಾನೇಷ್ವಯಸ್ತಿಸ್ರಃ । ತತ್ರ ತೃತೀಯಸ್ಯಾಮಿಷ್ಟಾವುತ್ತರಸ್ಯಾಜ್ಯಭಾಗಸ್ಯ ಗಯಸ್ಫಾನ ಇತ್ಯೇಷಾನುವಾಕ್ಯಾ । ಸೂತ್ರಿತಂ ಚ । ಪುಷ್ಟಿಮಂತಾವಗ್ನಿನಾ ರಯಿಮಶ್ನವದ್ಗಯಸ್ಫಾನೋ ಅಮೀವಹಾ । ಆ. ೨-೧ । ಇತಿ ॥ ಏಷೈವ ಪ್ರಾತಃಕಾಲೀನೋಪಸದಿ ಸೌಮ್ಯಯಾಗಸ್ಯ ಯಾಜ್ಯಾ ಸಾಯಂಕಾಲೀನಾಯಾಂ ತ್ವನುವಾಕ್ಯಾ । ಸೂತ್ರಿತಂ ಚಾಥೋಪಸದಿತಿ ಖಂಡೇ । ತ್ವಂ ಸೋಮಾಸಿ ಸತ್ಪತಿರ್ಗಯಸ್ಫಾನೋ ಅಮೀವಹಾ । ಆ. ೪-೮ । ಇತಿ ॥

ಗಯೇಸ್ಫಾನಃ । ಗಯ ಇತಿ ಧನನಾಮ । ಧನಸ್ಯ ವರ್ಧಯಿತಾ ಅಮೀವಹಾ ೨ಮೀವಾನಾಂ ರೋಗಾಣಾಂ ಹಂತಾ ವಸುವಿತ್ ಸ್ತೋತ್ರಾಣಾಂ ಧನಸ್ಯ ಲಂಭಯಿತಾ ಪ್ರಾಪಯಿತಾ ಪುಷ್ಟಿವರ್ಧನಃ ಪುಷ್ಟೇಃ ಸಂಪದೋ ವರ್ಧಯಿತಾ ಸುಮಿತ್ರಃ। ಶೋಭನಾನಿ ಮಿತ್ರಾಣಿ ಸಖಾಯೋ ಯಸ್ಯ ಸ ತಥೋಕ್ತಃ । ಹೇ ಸೋಮ ತ್ವಂ ನೋ೨ಸ್ಮಾಕಮೇವಂಗುಣವಿಶಿಷ್ಟೋ ಭವ ॥ ಗಯೇಸ್ಫಾನಃ । ಸ್ಫಾಯಿಾ ವೃದ್ಧೌ । ಆಂತರ್ಭಾವಿತಣ್ಯರ್ಥಾತ್ ಲ್ಯುಟಿ ವ್ಯತ್ಯಯೇನ ಯಲೋಪಃ । ಇಪಮಾದಿಷು ಚತುರ್ಷು ಪದೇಷು ಕೃದುತ್ತರಪದಪ್ರಕೃತಿಸ್ವರತ್ವಂ । ಸುಮಿತ್ರಃ । ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । **ನಃ**—ನಮಗೆ । **ಗಯೇಸ್ಫಾನಃ**—ಧನವನ್ನು ವೃದ್ಧಿಯಾಗುವಂತೆ ಮಾಡುವವನಾಗಿಯೂ । **ಅಮೀವಹಾ**—ರೋಗನಾಶಕನಾಗಿಯೂ । **ವಸುವಿತ್**—ಧನವನ್ನು (ಅರಿತು) ಹೊಂದಿಸುವನಾಗಿಯೂ । **ಪುಷ್ಟಿವರ್ಧನಃ**—ಆಹಾರ ಸಂಪತ್ತನ್ನು ಬೆಳೆಸುವವನಾಗಿಯೂ । **ಸುಮಿತ್ರಃ**—ಶ್ರೇಷ್ಠನಾದ ಸ್ನೇಹಿತನಾಗಿಯೂ । **ಭವ**—ಆಗು ॥

॥ ಭಾವಾರ್ಥ ॥

ಎಲೈ ಸೋಮದೇವನೇ, ನಮ್ಮ ಐಶ್ವರ್ಯವನ್ನು ಬೆಳೆಸುವವನಾಗಿಯೂ, ರೋಗನಾಶಕನಾಗಿಯೂ, ಧನದಾತನಾಗಿಯೂ, ಪುಷ್ಟಿಸಂಪತ್ತನ್ನು ಬೆಳೆಸುವವನಾಗಿಯೂ ಮತ್ತು ಶ್ರೇಷ್ಠನಾದ ಸ್ನೇಹಿತನಾಗಿಯೂ ಆಗಿರು.

English Translation

O Soma, be unto us, the bestower of wealth, the remover of desease, the cognizant of riches, the augmenter of nourishment and an excellent friend.

ವಿಶೇಷವಿಷಯಗಳು.

ಪವಮಾನೇಷ್ಟಿ ಎಂಬ ಹೆಸರಿನ ಮೂರು ಇಷ್ಟಿಗಳಿರುವವು. ಅವುಗಳಲ್ಲಿ ಮೂರನೆಯ ಇಷ್ಟಿಯಲ್ಲಿ ಕೊನೆಯ ಆಜ್ಯಭಾಗ ಹೋಮಕ್ಕಾಗಿ ಗಯಸ್ಫಾನ ಎಂಬ ಈ ಋಕ್ಕನ್ನು ಪುರೋನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಪುಷ್ಟಿಮಂತಾವಗ್ನಿನಾ ರಯಿಮಶ್ನವದ್ಗಯೇಸ್ಫಾನೋ ಅಮೀವಹಾ** ಎಂಬ ಸೂತ್ರವು ನಿರ್ದೇಶಿಸುವುದು. (ಆ. ೨-೧) ಮತ್ತು ಪ್ರಾತಃಕಾಲದಲ್ಲಿ ಮಾಡಲ್ಪಡುವ ಉಪಸತ್ ಎಂಬ ಇಷ್ಟಿಯಲ್ಲಿ ಸೋಮ ಸಂಬಂಧವಾದ ಯಾಗದಲ್ಲಿ ಸಾಯಂಕಾಲದಲ್ಲಿ ಈ ಮಂತ್ರವು ಪುರೋನುವಾಕ್ಯಾಮಂತ್ರವಾಗಿರುವುದೆಂದು ಆಶ್ವಲಾಯನ ಶ್ರೌತಸೂತ್ರದ ಅಧೋಪಸತ್ ಎಂಬ ಖಂಡದಲ್ಲಿ **ತ್ವಂ ಸೋಮಾಸಿ ಸತ್ಪತಿರ್ಗಯೇಸ್ಫಾನೋ ಅಮೀವಹಾ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ ೪-೮).

ಗಯೇಸ್ಫಾನಃ—**ಗಯ ಇತಿ ಧನನಾಮ । ಧನಸ್ಯ ವರ್ಧಯಿತಾ ।** ಧನವನ್ನು ವೃದ್ಧಿಮಾಡತಕ್ಕವನೆಂದರ್ಥವು. **ಗಯ** ಶಬ್ದಕ್ಕೆ ಅಪತ್ಯ, ಗೃಹ ಮತ್ತು ಧನ ಎಂಬ ಮೂರು ಅರ್ಥವೂ ಆಗುವುದು. **ತುಕ್, ತೋಕಂ,**

ತನಯಃ ಇತ್ಯಾದಿ **ಅಪತ್ಯ** ನಾಮಗಳಲ್ಲಿ ಗಯಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೨) ಗಯಃ ಶಬ್ದಕ್ಕೆ ಅಪತ್ಯವೆಂದೂ ; **ಮಘಂ, ರೇಕ್ಣಃ** ಇತ್ಯಾದಿ ಧನನಾಮಗಳಲ್ಲಿ ಪಠಿತವಾಗಿರುವುದರಿಂದ (೩-೯) ಧನವೆಂದೂ ; ಗಯಃ, ಕೃದರಃ, ಹರ್ಮ್ಯಂ ಇತ್ಯಾದಿ ಗೃಹನಾಮಗಳಲ್ಲಿ ಪಠಿತವಾಗಿರುವುದರಿಂದ (೧೨.-೩) ಗೃಹವೆಂದೂ ಅರ್ಥವಿರುವುದು. **ಗಮ್ಯತೇ ನಿವಾಸಾಯೇ ಇತಿ ಗಯಂ ಗೃಹಂ, ಗೀಯತೇ ಸ್ತೂಯತೇ ಇತಿ ವಾ ಗಯಂ ಧನಂ।** ಎಂಬುದಾಗಿ ಸಾಯಣಾಚಾರ್ಯರು ಋಕ್ಸಂಹಿತೆಯ ೫-೧೦-೩ನೆಯ ಋಕ್ಕನ್ನು ವಿವರಿಸುವಾಗ ಹೇಳಿರುವರು. ಅಲ್ಲದೇ, ಋ. ಸಂ. ೬-೭೪-೨ನೇ ಋಕ್ಕಿನಲ್ಲಿ ಬರುವ **ಗಯೇ** ಶಬ್ದಕ್ಕೆ **ಗೃಹಂ ಗೃಹಗತಂ ಪ್ರಾಣಿಜಾತಂ ವಾ ।** ಎಂದು ಅರ್ಥವನ್ನು ಹೇಳಿರುವರು. ಇಲ್ಲಿ ಈ ಮೂರು ಅರ್ಥಗಳಲ್ಲಿ ಯಾವುದನ್ನು ಬೇಕಾದರೂ ಹೇಳಬಹುದು. ಸ್ಕಂದ ಸ್ವಾಮಿಗಳ ಭಾಷ್ಯದಲ್ಲಿಯೂ ಸಹ, **ಸ್ಥಾಯಿರ್ವ್ಯದ್ಧ್ಯರ್ಥಃ । ಅಪತ್ಯಸ್ಯ ಧನಸ್ಯ ಗೃಹಸ್ಯ ವಾ ವರ್ಧಯಿತಾ ಗಯಸ್ಫಾನಃ** ಎಂದಿರುತ್ತದೆ. ಸೋಮನಿಗೆ ಗಯಸಾಧನ ಎಂಬ ವಿಶೇಷಣವೂ ಉಂಟು ಉದಾಹರಣೆಗೆ —

ಸಖೀ ನತ್ಸಂ ನ ಮಾತೃಭಿಃ ಸೃಜತಾ ಗಯಸಾಧನಂ ।

(ಋ. ಸಂ. ೯-೧೦೪-೨)

ಎಂಬ ಋಕ್ಕಿನಲ್ಲೂ ಸಹ ಈ ಮೂರು ಅರ್ಥವನ್ನೂ ಹೇಳಿರುವರು

ಅಮೀವಹಾ—ಅಮ-ರೋಗೇ । ರೋಗವೆಂದು ಅರ್ಥವನ್ನು ಕೊಡುವ **ಅಮ** ಶಬ್ದದಿಂದ **ಅಮೀವ** ಶಬ್ದವು ನಿಷ್ಪನ್ನವಾಗಿದೆ. ಇದನ್ನು ನಾಶಮಾಡುವವನು **ಅಮೀವಹ**ನೆಂದು ಪ್ರಸಿದ್ಧವಾಗಿದೆ. ರೋಗವನ್ನು ನಾಶ ಮಾಡಬೇಕೆಂಬ ಪ್ರಾರ್ಥನೆಯು ಸೋಮನನ್ನುದ್ದೇಶಿಸಿ ಅನೇಕ ಕಡೆಗಳಲ್ಲಿವೆ. ಉದಾಹರಣೆಗೆ—

ಇಂದ್ರಾಯ ಸೋಮ ಸುಷುತಃ ಪರಿ ಸ್ರವಾಪಾಮೀವಾ ಭವತು ರಕ್ಷಸಾ ಸಹ ।

(ಋ. ಸಂ ೯-೪೫-೧)

ಸೋಮಾರುದ್ರಾ ವಿ ವೃಹತಂ ವಿಷೂಚೀಮಮೀವಾ ಯಾ ನೋ ಗಯೆಮಾವಿವೇಶ ।

(ಋ. ಸಂ ೬-೭೪-೨)

ಎಂಬ ಋಕ್ಕುಗಳಲ್ಲಿ ರೋಗವನ್ನು ನಾಶಮಾಡಲು ಸಹಾಯಕನಾಗಬೇಕೆಂದು ಸೋಮನನ್ನು ಪ್ರಾರ್ಥಿಸಲಾಗಿದೆ. **ಅಮೀವಹಾ** ಎಂದರೆ ಹಿಂಸಕರಾದ ಶತ್ರುನಾಶಕನೆಂದೂ ಅರ್ಥವಾಗುವುದು.

ವಸುವಿತ್—ಧನಸ್ಯ ಪ್ರಾಪಯಿತಾ । ಧನವನ್ನು ಒದಗಿಸಿಕೊಡುವವನೆಂದರ್ಥವು. **ವಸು** ಶಬ್ದಕ್ಕೆ ಅನ್ನವೆಂದೂ ಅರ್ಥವು. (ನಿ. ೫-೧೯) ಆದುದರಿಂದ ಅನ್ನದಾತನೆಂದಾದರೂ ಆಗಬಹುದು. ಸೋಮನಿಗೆ **ವಸುವಿತ್ । ಹಿರಣ್ಯವಿತ್ । ಗೋವಿತ್ ।** ಎಂಬ ಹೆಸರುಗಳು ಪ್ರಸಿದ್ಧವಾದವು. ಉದಾಹರಣೆಗೆ—

ಗೋವಿತ್ಸವಸ್ಯ ವಸುವಿದ್ಧಿರಣ್ಯವಿದ್ರೇತೋಧಾ ಇಂದೋ ಭುವನೇಷ್ವರ್ಪಿತಃ ।

(ಋ ಸಂ. ೯-೪೬-೨೯)

ಎಂಬ ಋಕ್ಕಿನಲ್ಲಿ ಈ ಮೂರು ವಿಶೇಷಣಗಳೂ ಇವೆ. ಋ ಸಂ. ೨-೪೦ ೬ನೆಯ ಋಕ್ಕಿನಲ್ಲಿ **ರಯಿಪತಿಃ** ಎಂದು ಕರೆಯುತ್ತಾರೆ.

पुष्टिवर्धनः—पुष्टेः संपदो वर्धयिता। सकल रोगगळन्नु नाशमाडि धन संपत्तन्नोदगिसुवुदरिंद सकलविधवाद पुष्टियन्नू वृद्धिमाडुववनु एंदर्थवु

सुमित्रः—शोभनानि मित्राणि यस्य सः। श्रेष्ठवाद मित्ररुळ्ळवनु एंदर्थवु. अथवा **शोभनानां मित्राणां कर्ता** ऒळ्ळेय स्नेहितरन्नोदगिसि कॊडुववनु एंदू आगबहुदु.

व्याकरणप्रक्रियाः

गयस्फानः—स्फायी वृद्धौ धातु. इदु अंतर्भावित ण्यर्थकवाद धातु. (धात्वर्थवु प्रेरणार्थवन्नु ऒळकॊंडिदे) इदक्के ल्युट् प्रत्ययः विवक्षानुसारवाडिदागः **वृत्तेर्योः बहुलम्**—एंबुदरिंद धातुविन यकारक्के लोपः. गयस्य स्फानः गयस्फानः **गतिकारकोपपदात् कृत्**-(पा सू ६-२-१३९) एंबुदरिंद कृदुत्तरपद प्रकृतिस्वर बरुत्तदे. ई मंत्रदल्लि इदे आदियाद नालकु शब्दगळल्लियू कृदंत उत्तरपदवागिरुवुदरिंद हिंदे हेळिद सूत्रदिंद एल्ला कडेयल्लियूं कृदुत्तरपद प्रकृतिस्वर बरुत्तदे.

अमीवहा—अमीवानां हंता अमीवहा. हन हिंसागत्योः **अन्येभ्योऽपि दृश्यते**—एंबुदरिंद क्विप् प्रत्ययः अमीवहन् शब्दवागुत्तदे. प्रथमाएकवचनांतपद

वसुवित्—विद्लृ लाभे धातु. अंतर्भावितण्यर्थकवाद इदक्के क्विप् प्रत्ययः

पुष्टिवर्धनः—पुष्टेः वर्धयिता पुष्टिवर्धनः वृधु वृद्धौ धातु. इल्लि अंतर्भावित ण्यर्थकद मेले ल्युट् प्रत्ययः **युवोरनाकौ**-(पा. सू. ७-१-१) एंबुदरिंद अदक्के अनादेशः

सुमित्रः—शोभनानि मित्राणि यस्य सः सुमित्रः **नञ्सुभ्याम्**-(पा सू. ६-२-१७२) एंबुदरिंद उत्तरपदांतोदात्तस्वर बरुत्तदे. ॥ ८७ ॥

॥ संहितापाठः ॥

सोमꣳ रारन्धि नो हृदि गावो न यवसेष्वा।
मर्य इव स्व ओक्ये ॥ ८७ ॥

॥ ಪದಪಾಠಃ ॥

ಸೋಮ । ರರಂಧಿ । ನಃ । ಹೃದಿ । ಗಾವಃ । ನ । ಯವಸೇಷು । ಆ ।

ಮರ್ಯಃ ನ ಇವ । ಸ್ವೇ । ಓಕ್ಯೇ ॥ ೧೩ ॥

ಸಾಯಣಭಾಷ್ಯಂ

ಹೇ ಸೋಮ ತ್ವಂ ನೋಽಸ್ಮಾಕಂ ಹೃದಿ ಹೃದಯೇ ರರಂಧಿ । ರಮಸ್ವ ! ತತ್ರ ನಿದರ್ಶನಗ್ವೇಯ ಮುಚ್ಯತೇ । ಗಾವೋ ನ । ಯಥಾ ಗಾವೋ ಯವಸೇಷು ಶೋಭನತೃಣೇಷ್ವಾಭಿಮುಖ್ಯೇನ ರಮಂತೇ । ಮರ್ಯ ಇವ । ಯಥಾ ವಾ ಮರ್ಯೋ ಮರಣಧರ್ಮಾ ಮನುಷ್ಯಃ ಸ್ವ ಓಕ್ಯೇ ಸ್ವಕೀಯ ಓಕಸಿ ಗೃಹೇ ಪುತ್ರಾದಿಭಿಃ ಸಹ ರಮತೇ ತದ್ವದಸ್ಮಾಭಿರ್ದತ್ತೇನ ಹವಿಷಾ ತೃಪ್ತಃ ಸನ್ ಅಸ್ಮಾಸ್ವೇವಾವತಿಷ್ಠಸ್ವ । ನಾನ್ಯತ್ರ ಗಚ್ಛೇತಿ ನಿದರ್ಶನದ್ವಯಸ್ಯ ತಾತ್ಪರ್ಯಾರ್ಥಃ ॥ ರರಂಧಿ । ರಮು ಕ್ರೀಡಾಯಾಂ । ವ್ಯತ್ಯಯೇನ ಪರಸ್ಮೈಪದಂ । ಬಹುಲಂ ಛಂದಸೀತಿ ಶಪಃ ಶ್ಲುಃ । ಛಂದಸ್ಯುಭಯಥೇತಿ ಹೇರಾರ್ಧಧಾತುಕತ್ವೇನ ಙಿತ್ತ್ವಾಭಾವಾದಙಿತಶ್ಚೇತಿ ಹೇರ್ಧಿಃ । ಅತ ಏವಾಙಿತ್ತ್ವಾದನುನಾಸಿಕಲೋಪಾಭಾವಃ । ಸೇರ್ಹ್ಯಪಿಚ್ಚೇತಿ ಹೇರಪಿತ್ತ್ವಾತ್ತಸ್ಯೈವ ಸ್ವರಃ ಶಿಷ್ಯತೇ । ಛಾಂದಸಮಭ್ಯಾಸದೀರ್ಘತ್ವಂ । ಅಮಂತ್ರಿತಂ ಪೂರ್ವಮವಿದ್ಯಮಾನವದಿತಿ ಪೂರ್ವಸ್ಯಾಮಂತ್ರಿತಸ್ಯಾವಿದ್ಯಮಾನವತ್ತ್ವಾತ್ಪ್ರದಾದಪರತ್ವೇನ ನಿಘಾತಾಭಾವಃ । ಮರ್ಯ ಇವ । ಛಂದಸಿ ನಿಷ್ಪ್ಯರ್ಕ್ಯೇತ್ಯಾದೌ ಮರ್ಯಶಬ್ದೋ ಯತ್ಪ್ರತ್ಯಯಾಂತೋ ನಿಪಾತ್ಯತೇ । ಯತೋಽನಾವ ಇತ್ಯಾದ್ಯುದಾತ್ತತ್ವಂ । ಓಕ್ಯೇ । ಉಚ ಸಮವಾಯೇ । ಉಚ್ಯತೇ ಸಮವೈಯತೇ ಸ್ವಾಪ್ಯತ ಇತ್ಯೋಕ್ಯಂ ಗೃಹಂ । ಋಹಲೋರ್ಣ್ಯತ್ । ಚಚ್ಛೋಃ ಕು ಘಿಣ್ಯತೋರಿತಿ ಕುತ್ವಂ । ತಿತ್ಸ್ವರಿತಃ ॥

ಸ್ವರಿತಪದಾರ್ಥ

ಸೋಮ—ಎಲೈ ಸೋಮದೇವನೇ । **ಯವಸೇಷು**—ಹಸರು ಹುಲ್ಲುಗಾವಲುಗಳಲ್ಲಿ । **ಆ**—ಸುತ್ತಲೂ **ಗಾವೋ ನ**—ಹಸುಗಳು ರಮಿಸುವಂತೆಯೂ । **ಸ್ವೇ ಓಕ್ಯೇ**—ತಮ್ಮ ಸ್ವಂತ ಗೃಹದಲ್ಲಿ । **ಮರ್ಯ ಇವ**—ಮಾನವನು (ಪುತ್ರಾದಿಗಳೊಡನೆ) ಸಂತೋಷದಿಂದ ರಮಿಸುವಂತೆಯೂ । **ತ್ವಂ**—ನೀನು । **ನಃ**—ನಮ್ಮ । **ಹೃದಿ**—ಹೃದಯದಲ್ಲಿ । **ರರಂಧಿ (ರಾರಂಧಿ)**—ರಮಿಸು ॥

ಭಾವಾರ್ಥ

ಎಲೈ ಸೋಮದೇವನನೇ, ಪುಷ್ಟವಾದ ಹಸರು ಹುಲ್ಲುಗಾವಲನ್ನು ಸೇರಿ ಹೊರಕ್ಕೆ ಹೋಗದೇ ಹಸುಗಳು ಅಲ್ಲೇ ರಮಿಸುವಂತೆಯೂ, ಪುತ್ರಪೌತ್ರಾದಿಗಳಿಂದ ಕೂಡಿದ ತನ್ನ ಸ್ವಗೃಹದಲ್ಲಿ ಮಾನವನು ಇತರ ಗಮನವಿಲ್ಲದೇ ಸಂತೋಷದಿಂದ ರಮಿಸುವಂತೆಯೂ ನೀನು ನಮ್ಮ ಹೃದಯದಲ್ಲಿದ್ದುಕೊಂಡು ಬೇರೆ ಗಮನವಿಲ್ಲದವನಾಗಿ ಸಂತೋಷದಿಂದ ರಮಿಸುತ್ತಿರು

English Translation

Soma, dwell happy in our hearts, like cattle in fresh pastures, like men in their own abodes.

॥ ವಿಶೇಷವಿಷಯಗಳು ॥

ಓಕ್ಯೇ— ಓಕ ಇತಿ ನಿವಾಸನಾಮೋಚ್ಯತೇ। (ನಿ. ೩-೩) ನಿವಾಸಸ್ಥಾನಕ್ಕೆ **ಓಕ** ವೆಂಬುದಾಗಿ ಹೆಸರು. **ಸ್ವೇ ಓಕ್ಯೇ।** ಅಂದರೆ ಸ್ವಗೃಹದಲ್ಲಿ ಎಂದರ್ಥವು. ಮಾನವನಿಗೆ ಸ್ವಗೃಹದಲ್ಲಿಯೇ ಸಂಪೂರ್ಣವಾದ ಅಭಿಮಾನವಿರುವುದು ಎಂಬುದನ್ನು ತೋರಿಸಲು ನಿರುಕ್ತಕಾರರು ಸ್ವಾರಸ್ಯವಾದ ಉದಾಹರಣೆಯನ್ನು ಕೊಡುತ್ತಾರೆ. (ಋ. ಸಂ ೭-೪-೮) **ಅಥ ಸ ಓಕಃ ಪುನರೇವ ತದೇತಿ ಯತ ಆಗತೋ ಭವತಿ।** (ನಿ. ೩-೩) ಸ್ವೀಕೃತಪುತ್ರನಿಗೆ ಎಂದಿದ್ದರೂ ಸ್ವಗೃಹದಲ್ಲಿಯೇ ಅಭಿಮಾನವಿದ್ದು ಅಲ್ಲಿಗೇ ವಾಪಸ್ಸು ಹೋಗುತ್ತಾನಾದ್ದರಿಂದ ಸ್ವಗೃಹವು ಪೂರ್ಣವಾದ ಅಭಿಮಾನಕ್ಕೆ ಪಾತ್ರವು. ಅದೇ ಅಭಿಮಾನವನ್ನೂ, ಸ್ವಾತಂತ್ರ್ಯವನ್ನೂ ನಮ್ಮ ಹೃದಯದಲ್ಲಿಯೂ ಇಟ್ಟು ಆದರವನ್ನು ತೋರಿಸಬೇಕೆಂದು ಋಷಿಯು **ಈ** ಋಕ್ಕಿನಲ್ಲಿ ಸೋಮನನ್ನು ಪ್ರಾರ್ಥಿಸುತ್ತಾರೆ

ಮರ್ಯಃ — ಮರ್ತ್ಯೋ ಮನುಷ್ಯೋ ಮರಣಧರ್ಮಾ। (ನಿ. ೩-೧೫) ಮರಣ ಧರ್ಮವುಳ್ಳವನಾದುದರಿಂದ ಮರ್ತ್ಯನೆಂಬ ಹೆಸರು.

ರರಂಧಿ (ರಾರಂಧಿ)— ರಮು ಕ್ರೀಡಾಯಾಂ। ಕ್ರೀಡಿಸಿ ಆನಂದವನ್ನನುಭವಿಸು ಎಂದರ್ಥವು. ಗೋವುಗಳಿಗೆ ಹುಲ್ಲುಗಾವಲುಗಳಲ್ಲಿ ಯಾವ ಆನಂದವು ಲಭಿಸುವುದೋ, ಮಾನವನಿಗೆ ಸ್ವಗೃಹದಲ್ಲಿ ಯಾವ ಆನಂದವು ಲಭಿಸುವುದೋ ಅದೇ ಆನಂದವನ್ನು ನಮ್ಮ ಹೃದಯದಲ್ಲಿಯೂ ಹೊಂದುವೆ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ರರಂಧಿ—ರಮು ಕ್ರೀಡಾಯಾಂ. ಧಾತು. **ವ್ಯತ್ಯಯೋ ಬಹುಲಮ್**—ಎಂಬುದರಿಂದ ಪರಸ್ಮೈಪದಿಯಾಗುತ್ತದೆ. ಲೋಣ್ಮಧ್ಯಮಪುರುಷ ಏಕವಚನದಲ್ಲಿ ಸಿಪ್. ಅದಕ್ಕೆ ಹಿ ಆದೇಶ. **ಬಹುಲಂ ಛಂದಸಿ**—ಎಂಬುದರಿಂದ ಶಪಿಗೆ ಶ್ಲುವಿಕರಣ. **ಶ್ಲೌ** (ಪಾ. ಸೂ. ೬-೧-೧೦) ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸದಲ್ಲಿ ಆದಿಹೆಲ್ ಶೇಷ. ರರಮ್+ಹಿ ಎಂದಿರುವಾಗ **ಛಂದಸ್ಯುಭಯಥಾ** (ಪಾ ಸೂ. ೩-೪-೧೧೭) ಎಂಬುದರಿಂದ ಹಿಗೆ ಆರ್ಧಧಾತುಕಸಂಜ್ಞೆ ಇರುವುದರಿಂದ ಬಿತ್ತ್ವ **ಬಾರಾದಿರುವುದರಿಂದ ಆಙಾತೆಶ್ಚ** (ಪಾ. ಸೂ. ೬-೪-೧೧೩) ಎಂಬುದರಿಂದ ಹಿಗೆ ಧಿ ಆದೇಶ ಆದುದರಿಂದಲೇ **ಜುತ್ವನಿಮಿತ್ತವಾಗಿ** ಧಾತುವಿನ ಅನುನಾಸಿಕ ಮಕಾರಕ್ಕೂ **ಅನುದಾತ್ತೋಪದೇಶ**—ಸೂತ್ರದಿಂದ ಲೋಪ ಬರುವುದಿಲ್ಲ. **ನಶ್ಚಾಪದಾಂತಸ್ಯ ಝಲಿ**—ಎಂಬುದರಿಂದ ಮಕಾರಕ್ಕೆ ಅಪದಾಂತದಲ್ಲಿ ಅನುಸ್ವಾರಾದೇಶ. ರರಂಧಿ ಎಂದು ರೂಪವಾಗುತ್ತದೆ ಹಿಂದೆ ಸೋಮ ಎಂಬ ಆಮಂತ್ರಿತವಿರುವುದರಿಂದ **ಆಮಂತ್ರಿತಂ ಪೂರ್ವಮವಿದ್ಯಮಾನವತ್**—ಎಂಬುದರಿಂದ ಅದಕ್ಕೆ ಅವಿದ್ಯಮಾನವದ್ಭಾವವಿರುವುದರಿಂದ **ತಿಙ್ಙತಿಙಃ**–ಸೂತ್ರದಿಂದ ನಿಘಾತಸ್ವರ ಬರುವುದಿಲ್ಲ. ಹಿಗೆ ಅಪಿತ್ವವಿಧಾನಮಾಡಿರುವುದರಿಂದ ಪ್ರತ್ಯಯಸ್ವರ ಬರುತ್ತದೆ. ಆಗ ರರಂಧಿ ಎಂಬುದು ಅಂತೋದಾತ್ತವಾದ ಪದವಾಗುತ್ತದೆ. ಸಂಹಿತಾದಲ್ಲಿ ಛಾಂದಸವಾಗಿ ಅಭ್ಯಾಸ ದೀರ್ಘ ಬರುತ್ತದೆ

ಹೃದಿ—ಹೃದಯ ಶಬ್ದಕ್ಕೆ ಸಪ್ತಮೀವಿಕರವಚನ ಪರವಾದಾಗ **ಪೆದ್ವನ್ನೋಮಾಸ್ ಹೃತ್**—ಎಂಬುದರಿಂದ ಹೃದಾದೇಶ. **ಊಡಿದಂ ಪದಾದಿ**–(ಪಾ. ಸೂ. ೬-೧-೧೬೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಮರ್ಯ ಇವ—ಛಂದಸಿ ನಿಷ್ಯರ್ಕ್ಯದೇವ–(ಪಾ. ಸೂ. ೩-೧-೧೩೩) ಎಂಬುದರಿಂದ ಮರ್ಯ ಶಬ್ದವು ಯತ್‌ಪ್ರತ್ಯಯಾಂತವಾಗಿ ನಿಪಾತಿತವಾಗಿದೆ. **ಯತೋಽನಾವಃ** (ಪಾ. ಸೂ. ೬-೧-೨೧೩)–ಎಂಬುದರಿಂದ ಸ್ವರಿತ ಸ್ವರವು ಬಾಧಿತವಾಗಿ ಆದ್ಯುದಾತ್ತಸ್ವರ ಬರುತ್ತದೆ.

ಓಕ್ಯೇ—ಉಚ ಸಮವಾಯೇ ಧಾತು ಉಚ್ಯತೇ ಸಮವೇಯತೇ **ಪ್ರಾಪ್ಯತೇ** ಇತಿ ಓಕ್ಯಂ ಗೃಹಮ್ (ಸೇರುವ ಸ್ಥಳ ಮನೆ) **ಋಹಲೋರ್ಣ್ಯತ್**–(ಪಾ. ಸೂ. ೩-೧-೧೨೪) ಎಂಬುದರಿಂದ ಣ್ಯತ್ ಪ್ರತ್ಯಯ.. **ಪುಗಂತ-ಲಘೂಪಧಸ್ಯ ಚ** — ಎಂಬುದರಿಂದ ಪ್ರತ್ಯಯನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ. **ಚಜೋಃ ಕು ಘಿಣ್ಯತೋಃ** (ಪಾ. ಸೂ. ೭-೩-೫೨) ಎಂಬುದರಿಂದ ಧಾತುವಿನ ಚಕಾರಕ್ಕೆ ಣಿತ್‌ಪ್ರತ್ಯಯನಿಮಿತ್ತವಾಗಿ ಕುತ್ವ. ಓಕ್ಯ ಎಂದು ರೂಪವಾಗುತ್ತದೆ. ಪ್ರತ್ಯಯ ತಿತ್ವಾದುದಿಂದ **ತಿತ್‌ಸ್ವರಿತಮ್**–(ಪಾ. ಸೂ. ೬-೧-೧೮೪) ಎಂಬುದರಿಂದ ಸ್ವರಿತಸ್ವರ ಬರುತ್ತದೆ. ಸಪ್ತಮೀವಿಕರವಚನಾಂತರೂಪ. ॥ ೧೩ ॥

ಸಂಹಿತಾಪಾಠಃ

ಯಃ ಸೋಮ ಸಖ್ಯೇ ತವ ರಾರಣದ್ದೇವ ಮರ್ತ್ಯಃ।
ತಂ ದಕ್ಷಃ ಸಚತೇ ಕವಿಃ ॥ ೧೪ ॥

॥ ಪದಪಾಠಃ ॥

ಯಃ । ಸೋಮ । ಸಖ್ಯೇ । ತವ । ರರಣತ್ । ದೇವ । ಮರ್ತ್ಯಃ ।
ತಂ । ದಕ್ಷಃ । ಸಚತೇ । ಕವಿಃ ॥ ೧೪ ॥

॥ ಸಾಯಣಭಾಷ್ಯಂ ॥

ಹೇ ದೇವ ದ್ಯೋತಮಾನ ಸೋಮ ತವ ಸಖ್ಯೇ ತ್ವದೀಯೇ ಸಖಿತ್ವೇ ನಿಮಿತ್ತಭೂತೇ ಸತಿ ಯೋ ಮರ್ತ್ಯೋ ಮರಣಧರ್ಮಾ ಯಾಜಮಾನೋ ರಾರಣತ್ ರಣತಿ ಏತತ್ಸೋಕ್ತರೂಪೇಣ ತ್ವಾಂ

स्तौति तं यजमानं कविः क्रान्तदर्शी दक्षः सर्वकार्यसमर्थस्त्वां सचते। सेवसे। अनुगृह्णासीत्यर्थः॥ ररणत्। रणशब्दार्थः। लेट्यडागमः। बहुलं छन्दसीति शपः श्लुः। इतश्च लोप इतीकारलोपः। छन्दस्युभयथेत्यार्धधातुकत्वादच्यनिटि लसार्वधातुके विधीयमानस्याभ्यस्तादुदात्तत्वस्याभावे धातुस्वरः शिष्यते। सचते। षच समवाये। पुरुषव्यत्ययः॥

॥ ಪ್ರತಿಪದಾರ್ಥ ॥

ದೇವ—ಪ್ರಕಾಶಮಾನನಾದ। **ಸೋಮ**—ಎಲೈ ಸೋಮದೇವನೇ। **ತವ**—ನಿನ್ನ। **ಸಖ್ಯೆ**—ಸ್ನೇಹ ಸಂಬಂಧವಿರಲಾಗಿ। **ಯಃ ಮರ್ತ್ಯಃ**—ಯಾವ ಯಜಮಾನನು। **ರಾರಣತ್**—ಸೂಕ್ತರೂಪವಾದ ಸ್ತೋತ್ರದಿಂದ ನಿನ್ನನ್ನು ಸ್ತುತಿಸುತ್ತಾನೋ। **ತಂ**—ಆ ಯಜಮಾನನನ್ನು। **ಕವಿಃ**—ದಿವ್ಯಚಕ್ಷುಸ್ಸುಳ್ಳವನೂ। **ದಕ್ಷಃ**—(ಸರ್ವ ಕಾರ್ಯಕ್ಕೂ) ಸಮರ್ಥನೂ ಆದ ನೀನು। **ಸಚತೇ**—ಸೇವಿಸುತ್ತೀಯೆ. (ಅನುಗ್ರಹಿಸುತ್ತೀಯೆ)।

ಭಾವಾರ್ಥ

ಪ್ರಕಾಶಮಾನನಾದ ಎಲೈ ಸೋಮದೇವನೇ, ನಿನಗೆ ಮಾಡತಕ್ಕ ಸೇವೆಯು ವ್ಯರ್ಥನಾಗುವುದಿಲ್ಲ. ನಿನ್ನ ಸ್ನೇಹದ ನಿಮಿತ್ತವಾಗಿ ಯಾವ ಯಜಮಾನನು ಸೂಕ್ತರೂಪವಾದ ಸ್ತೋತ್ರದಿಂದ ನಿನ್ನನ್ನು ಸ್ತುತಿಸುತ್ತಾನೋ ಆ ಯಜಮಾನನನ್ನು ದಿವ್ಯಚಕ್ಷುಸ್ಸುಳ್ಳವನೂ, ಸರ್ವಕಾರ್ಯಕ್ಕೂ ಸಮರ್ಥನೂ ಆದ ನೀನು ಖಂಡಿತವಾಗಿಯೂ ಅನುಗ್ರಹಿಸುತ್ತೀಯೆ.

English Translation

The experienced sage commends the mortal who, divine Soma, praises you through affection.

ವಿಶೇಷವಿಷಯಗಳು

ರಾರಣತ್—**ರಣತಿ ಏತತ್ಸೂಕ್ತರೂಪೇಣ ತ್ವಾಂ ಸ್ತೌತಿ।** ಈ ಸೂಕ್ತರೂಪದಲ್ಲಿ ನಿನ್ನನ್ನು ಸ್ತುತಿಸುತ್ತಾನೆ ಎಂಬರ್ಥವನ್ನು ಸಾಯಣರು ಮಾಡುತ್ತಾರೆ. **ರಣ-ಶಬ್ದೇ** ಎಂಬ ಧಾತುವಿನಿಂದ ಶಬ್ದವೆಂಬ ಅರ್ಥವನ್ನು ಕೊಡತಕ್ಕದ್ದಾಗಿ ಈ ರೂಪನಿಷ್ಪತ್ತಿಯನ್ನು ತೋರಿಸಿ ಸ್ತೋತ್ರರೂಪವಾದ ಶಬ್ದವೆಂದು ತೋರಿಸುತ್ತಾರೆ. ಆದರೆ ಈ ಅರ್ಥಕ್ಕಿಂತಲೂ ಸ್ವಂದಸ್ವಾಮಿಗಳ ಅರ್ಥವೇ ಸಮಂಜಸವಾಗಿ ಕಾಣುವುದು. ಅವರು **ರಾರಣತ್**—**ಅತ್ಯಂತಂ ರಮತೇ।** ಅತಿಯಾಗಿ ಹರ್ಷಿಸುತ್ತಾನೆ ಎಂಬ ವ್ಯಾಖ್ಯಾನವನ್ನು ಮಾಡುತ್ತಾರೆ. ಸನ್ನಿವೇಶವನ್ನು ನೋಡಿದರೂ ಸಹ, ನಿನ್ನ ಸಖಿತ್ವದ ಫಲವಾದ ಸಂತೋಷವನ್ನು ನಾವು ಅನುಭವಿಸುತ್ತೇವೆ ಎನ್ನುವುದೇ ಸಹಜವಾಗಿರುತ್ತದೆ. ಋ. ಸಂ. ೧೦-೮೬-೧೭ ಮುಂತಾದ ಋಕ್ಕುಗಳಲ್ಲೂ ಸಹ ಸಂತೋಷಪಡು ಎನ್ನುವ ಅರ್ಥವು ಇರುತ್ತದೆ.

नाहमिन्द्राणि रारण सख्युर्वृषाकपेरृते।

(ಋ. ಸಂ. ೧೦-೮೬-೧೭)

ಎಂಬ ಋಕ್ಕಿಗೆ ಭಾಷ್ಯಕಾರರು **ನ ರರಾಣ ನ ರಮೆ** ಎಂದು ವ್ಯಾಖ್ಯಾನವನ್ನು ಮಾಡುತ್ತಾರೆ.

ಕವಿಃ—ಕ್ರಾಂತದರ್ಶೀ, ಮೇಧಾವಿ ಎಂಬ ಅರ್ಥಗಳಿರುವುದನ್ನೂ ಈ ಪದದ ವೈಶಿಷ್ಟ್ಯವನ್ನೂ ಹಿಂದೆ ಅನೇಕ ಸಲ ಹೇಳಿದೆ.

ಮರ್ತ್ಯಃ—**ಮರ್ಯಃ** ಎಂಬ ಪದದಂತೆಯೇ ಮರಣ ಧರ್ಮವುಳ್ಳ ಮಾನವನೆಂದರ್ಥವು.

ಸಚತೇ—ಸೇವಿಸುತ್ತಾನೆ.

ತಂ ದಕ್ಷಃ ಸಚತೇ ಕವಿಃ—ಋಕ್ಕಿನ ಉತ್ತರಾರ್ಧವಾದ ಈ ಭಾಗಕ್ಕೆ ಸಾಯಣರ ಅನ್ವಯವೇ ಒಂದು ವಿಧವಾಗಿಯೂ ಸ್ಕಂದಸ್ವಾಮಿಗಳ ಅನ್ವಯವು ಮತ್ತೊಂದು ವಿಧವಾಗಿಯೂ ಇರುತ್ತದೆ. **ಕವಿಃ**—ಮೇಧಾವಿಯೂ ಅಥವಾ ಕ್ರಾಂತದರ್ಶಿಯೂ, **ದಕ್ಷಃ**—ಸರ್ವಕಾರ್ಯಸಮರ್ಥನೂ ಆದ ನೀನು **ತಂ**—ಯಜಮಾನನನ್ನು **ಸಚತೇ**—ಸೇವಿಸುತ್ತೀಯೆ, ಅಂದರೆ ಅನುಗ್ರಹಿಸುತ್ತೀಯೆ ಎಂದು ಸಾಯಣರೂ, **ಕವಿಃ**—ಮೇಧಾವಿಯಾದ ಯಜಮಾನನು **ತಂ ದಕ್ಷಃ**—ಆ ಬಲವನ್ನಾಗಲಿ ಅಥವಾ ವೃದ್ಧಿಯನ್ನಾಗಲೀ **ಸಚತೇ**—ಸೇವಿಸುತ್ತಾನೆ ಅಂದರೆ ಅನುಭವಿಸುತ್ತಾನೆ ಎಂದು ಸ್ಕಂದಸ್ವಾಮಿಗಳೂ ಅರ್ಥಮಾಡುತ್ತಾರೆ

॥ ವ್ಯಾಕರಣಪ್ರಕ್ರಿಯಾ ॥

ಸಖ್ಯೇ—ಸಖ್ಯುಃ ಭಾವಃ ಸಖ್ಯುನ್. **ಸಖ್ಯುರ್ಯಃ** (ಪಾ. ಸೂ. ೫-೧-೧೨೬) ಎಂಬುದರಿಂದ ಯ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ರರಣತ್—ರಣ ಶಬ್ದೇ ಧಾತು. ಲೇಟ್ ಪ್ರಥಮಪುರುಷಏಕವಚನದಲ್ಲಿ ತಿಪ್. **ಇತಶ್ಚ ಲೋಪಃ**-(ಪಾ. ಸೂ. ೩-೪-೯೭) ಎಂಬುದರಿಂದ ಇಕಾರಲೋಪ. **ಬಹುಲಂ ಛಂದಸಿ**—ಎಂಬುದರಿಂದ ಶಪಿಗೆ ಶ್ಲು ಆದೇಶ. **ಶ್ಲೌ**—ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಆದಿಹಲ್ ಕೇಷ. **ಲೇಟೋಡಾಟೌ**—ಎಂಬುದರಿಂದ ಪ್ರತ್ಯಯಕ್ಕೆ ಅಡಾಗಮ. ಯಃ ಎಂದು ಹಿಂದೆ ಸಂಬಂಧವಿರುವುದರಿಂದ **ಯಮ್ಯರ್ತ್ತಾನ್ನಿತ್ಯಮ್**—ಎಂಬುದರಿಂದ ನಿಘಾತಸ್ವರ ಪ್ರತಿಷೇಧ. **ಛಂದಸ್ಯುಭಯಥಾ**—ಎಂಬುದರಿಂದ ಪ್ರತ್ಯಯಕ್ಕೆ ಆರ್ಧಧಾತುಕ ಸಂಜ್ಞೆ ಇರುವುದರಿಂದ ಇಟ್ ಭಿನ್ನ ಅಜಾದಿಯಾದ ಲಸಾರ್ವಧಾತುಕಕ್ಕೆ ವಿಧೀಯಮಾನವಾದ **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೮೯) ಎಂಬುದರಿಂದ ಬರುವ ಆದ್ಯುದಾತ್ತಸ್ವರವು ಬಾರದಿರುವಾಗ ಧಾತುಸ್ವರ ಉಳಿಯುತ್ತದೆ. ಅಭ್ಯಾಸಕ್ಕೆ ಛಾಂದಸವಾಗಿ ಹ್ರಸ್ವ.

ಸಚತೇ—ಷ ಚ ಸಮವಾಯೇ ಧಾತು. **ಧಾತ್ವಾದೇಃ ಷಃ ಸಃ**—ಎಂಬುದರಿಂದ ಆದಿಗೆ ಸತ್ವ. **ವ್ಯತ್ಯಯೋ ಬಹುಲಮ್**-ಎಂಬುದರಿಂದ ಮಧ್ಯಮಪುರುಷಏಕವಚನಕ್ಕೆ ಪ್ರಥಮಪುರುಷಏಕವಚನ ಪ್ರತ್ಯಯ ಬರುತ್ತದೆ. **ಟಿತಆತ್ಮನೇಪದಾನಾಂ**-ಎಂಬುದರಿಂದ ಏತ್ವ. **ಕರ್ತರಿ ಶಪ್**—ಎಂಬುದರಿಂದ ಶಪ್ ವಿಕರಣ. ಅತಿ ಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೪ ॥

संहितापाठः

उरुष्या णो अभिशस्तेः सोम नि पाह्यंहसः ।
सखा सुशेव एधि नः ॥ ८॥

पदपाठः

उरुष्य । नः । अभिऽशस्तेः । सोम । नि । पाहि । अंहसः ।
सखा । सुऽशेवः । एधि । नः ॥ ८॥

सायणभाष्यं

हे सोम त्वं नोस्मानभिशस्तेरभिशंसनादभिशापरूपान्निंदनादुरुष्य । रक्ष । उरुष्यतीति रक्षाकर्मसु पाठात् । नि. ५-२३ । तथांहसोऽस्मत्तो तात्पापाच्चै नि पाहि । नितरां पालय । एवमस्मदीयं पापं परिहृत्य सुशेवोऽस्मभ्यं दातव्येनशोभनेन सुखेन युक्तः सन्सखैधि । हितकारी भव ॥ अभिशस्तेः । शंसु स्तुतौ । अस्माद्भावे क्तिन् । तादौ चेति गतेः प्रकृतिस्वरत्वं । एधि । असे भुवि । लोटि सेर्हिः । तस्य ब्बात्त्वात् श्नसोरल्लोपे इत्यकारलोपः । ष्टुत्वसोरेद्भावभ्यासलोपश्चेति सकारस्यैकत्वं । तस्यासिद्धवदत्राभादित्यसिद्धत्वात् हुरुष्वेत्यस्य हेर्धिरिति हेर्धिरादेशः ॥

स्वरितपदार्थ

सोम—ಎಲೈ ಸೋಮದೇವನೇ । **नः**—ನಮ್ಮನ್ನು । **अभिशस्तेः**—ಅಪವಾದ ರೂಪವಾದ ಕಳಂಕದಿಂದ । **उरुष्य**—ಕಾಪಾಡು । **अंहसः**—(ನಾವು ಮಾಡಬಹುದಾದ ಅಥವಾ ಮಾಡಿದ) ಪಾಪದಿಂದ । **नि पाहि**— ಸಂಪೂರ್ಣವಾಗಿ ರಕ್ಷಿಸು । **सुशेवः**— ನಮ್ಮಿಂದ ಅರ್ಪಿತವಾಗುವ ಸುಖದೊಡನೆ ಕೂಡಿ । **नः**—ನಮಗೆ । **सखा एधि**—ಸ್ನೇಹಿತನಂತೆ ನಮಗೆ ಸುಖಕಾರಿಯಾಗು ॥

॥ भावार्थ ॥

ಎಲೈ ಸೋಮದೇವನೇ, ನಮ್ಮನ್ನು ಅಪವಾದ ರೂಪವಾದ ಕಳಂಕದಿಂದ ಕಾಪಾಡು ನಾವು ಮಾಡಿದ ಅಥವಾ ಮಾಡಬಹುದಾದ ಪಾಪದಿಂದ ಸಂಪೂರ್ಣವಾಗಿ ರಕ್ಷಿಸು. ನಮ್ಮಿಂದ ಅರ್ಪಿತವಾಗುವ ಸುಖಸಾಧನಗಳೊಡನೆ ಕೂಡಿಕೊಂಡು ನಮಗೆ ಸ್ನೇಹಿತನಂತೆ ಸುಖಕಾರಿಯಾಗು.

English Translation

Soma, protect us from calumny, preserve us from Sin ; pleased with our service, be our friend.

॥ ವಿಶೇಷವಿಷಯಗಳು ॥

ಅಭಿಶಸ್ತೇಃ—**ಅಭಿಶಸ್ತಿ** ಶಬ್ದಕ್ಕೆ ಶಾಪ, ಆಪತ್ತು, ನಿಂದೆ ಮುಂತಾದ ಅನೇಕ ಅರ್ಥಗಳಿರುತ್ತವೆ. ಇಲ್ಲಿ **ಅಭಿಶಾಪೆರೂಪಾನ್ನಿಂದನಾತ್ ।** ಅಂದರೆ ಅಪವಾದ ರೂಪವಾದ ಕಳಂಕದಿಂದ ಅಥವಾ ನಿಂದೆಯಿಂದ. ಎಂಬರ್ಥವನ್ನು ಭಾಷ್ಯಕಾರರು ಹೇಳಿರುತ್ತಾರೆ.

ಉರುಷ್ಯ—**ಉರುಷ್ಯತೀ ರಕ್ಷಾಕರ್ಮ । (ನಿ. ೫-೨೩) ಉರುಷ್ಯ** ಅಂದರೆ ರಕ್ಷಿಸು ಎಂದರ್ಥವು. ಋ. ಸಂ. ೫-೨೪-೩ ; ೧-೫೮-೯ ಮುಂತಾದ ಅನೇಕ ಋಕ್ಕುಗಳಲ್ಲಿ ಈ ಪದವು ರಕ್ಷಿಸು ಎಂದರ್ಥದಲ್ಲಿ ಬಂದಿದೆ.

ಅಂಹಸಃ—**ಅಂಹತಿಶ್ಚಾಂಹಂಶ್ಚಾಂಹುಶ್ಚ ಹಂತೇಃ ।** (ನಿ. ೪-೨೫) ಹಿಂಸಿಸು ಎಂಬರ್ಥವನ್ನು ಕೊಡುವ **ಹನ್** ಧಾತುವಿನಿಂದ **ಅಂಹಸ್** ಎಂಬ ಶಬ್ದವು ನಿಷ್ಪನ್ನವಾಗಿದ್ದರೂ ಸಹ **ಈ** ಶಬ್ದಕ್ಕೆ ಸಾಧಾರಣವಾಗಿ ಹಿಂಸೆ ಎಂಬರ್ಥಕ್ಕಿಂತಲೂ ಪಾಪವು ಎನ್ನುವ ಅರ್ಥವೇ ಹೆಚ್ಚು ಬಳಕೆಯಲ್ಲಿರುವುದು. ಇಲ್ಲಿ ಪಾಪದಿಂದ ಎಂದರ್ಥವು.

ಸುಶೇವಃ—ಶ್ರೇಷ್ಠವಾದ ಸುಖದಾತನಾಗಿ ಎಂದರ್ಥವು.

ವ್ಯಾಕರಣಪ್ರಕ್ರಿಯಾ

ಉರುಷ್ಯಾ—ಉರುಷ್ಯ ಎಂಬುದು ರಕ್ಷಣಾರ್ಥಕವಾದ ಧಾತು. ಲೋಣ್ಮ್ಯಧ್ಯಮಪುರುಷ ಏಕವಚನರೂಪ **ಆನ್ಯೇಷಾಮಪಿ ದೃಶ್ಯತೇ**—ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಅಭಿಶಸ್ತೇಃ ಶಂಸು ಸ್ತುತೌ ಧಾತು. ಇದಕ್ಕೆ ಭಾವಾರ್ಥದಲ್ಲಿ **ಸ್ತ್ರಿಯಾಂ ಕ್ತಿನ್**–(ಪಾ.ಸೂ.೩-೩-೯೪) ಎಂಬುದರಿಂದ ಕ್ತಿನ್ ಪ್ರತ್ಯಯ. **ಅನಿದಿತಾಂ ಹಲಉ**—ಎಂಬುದರಿಂದ ಉಪಧಾನಕಾರಕ್ಕೆ ಲೋಪ. ಶಸ್ತಿ ಶಬ್ದವಾಗುತ್ತದೆ. ಇದು ಪರವಾದಾಗ ಅಘಿಗೆ **ತಾದೌ ಚ ನಿತಿ**–(ಪಾ. ಸೂ. ೬-೪-೬೦) ಎಂಬುದರಿಂದ ನಿತ್ತಾದ ತಕಾರಾದಿ ಪ್ರತ್ಯಯಾಂತವು ಪರವಾಗುವುದರಿಂದ ಪ್ರಕೃತಿಸ್ವರ ಬರುತ್ತದೆ. ಪಂಚಮೀ ಏಕವಚನಾಂತರೂಪ.

ಪಾಹಿ—ಪಾ ರಕ್ಷಣೇ ಧಾತು. ಅದಾದಿ. ಲೋಣ್ಮ್ಯಧ್ಯಮಪುರುಷ ಏಕವಚನಾಂತರೂಪ. ತಿಙಂತ ನಿಘಾತಸ್ವರ ಬರುತ್ತದೆ.

ಏಧಿ—ಆಸ ಭುವಿ ಧಾತು. ಅದಾದಿ. ಲೋಣ್ಮ್ಯಧ್ಯಮಪುರುಷ ಏಕವಚನದಲ್ಲಿ ಸಿಪಿಗೆ **ಸೇರ್ಹ್ಯಪಿಚ್ಚ** (ಪಾ. ಸೂ. ೩-೪-೮೭) ಎಂಬುದರಿಂದ ಹಿ ಆದೇಶ. **ಸಾರ್ವಧಾತುಕಮಪಿತ್**—ಎಂಬುದರಿಂದ ಅಪಿತ್ವ ಹೇಳಿರುವುದರಿಂದ ಹಿಗೆ ಜಿತ್ವ ಬರುತ್ತದೆ. ಆಗ **ಶ್ನಸೋರಲ್ಲೋಪಃ** (ಪಾ. ಸೂ. ೬-೪-೧೧೧) ಎಂಬುದರಿಂದ ಅಸಿನ ಅಕಾರಕ್ಕೆ ಲೋಪ. **ಹ್ಲಿಸೋರೇದ್ಧಾವಭ್ಯಾಸಲೋಪಶ್ಚ**–(ಪಾ. ಸೂ. ೬-೪-೧೧೯) ಎಂಬುದರಿಂದ ಅಸ್‌ಧಾತುವಿನ ಸಕಾರಕ್ಕೆ ಹಿಪರವಾದಾಗ ಏತ್ವ. ಅದಕ್ಕೆ **ಅಸಿದ್ಧವದತ್ರಾಭಾತ್**—ಎಂಬುದರಿಂದ ಅಸಿದ್ಧವದ್ಭಾವ ಬರುವುದ

ರಿಂದ ಸಕಾರವಿದ್ದಂತೇ ಆಗುವುದರಿಂದ **ಹುರುಲ್ಭ್ಯೋ ಹೇರ್ಧಿಃ** (ಪಾ. ಸೂ. ೬-೪-೧೦೧) ಎಂಬುದರಿಂದ ಝಲಂತದ ಪರದಲ್ಲಿರುವುದರಿಂದ ಹಿಗೆ ಧಿತ್ವ. ಏಧಿ ಎಂದು ರೂಪವಾಗುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೫ ॥

॥ ಸಂಹಿತಾಪಾಠಃ ॥

ಆ ಪ್ಯಾಯಸ್ವ ಸಮೇತು ತೇ ವಿಶ್ವತಃ ಸೋಮ ವೃಷ್ಣ್ಯಂ ।
ಭವಾ ವಾಜಸ್ಯ ಸಂಗಥೇ ॥ ೧೬ ॥

ಪದಪಾಠಃ

ಆ । ಪ್ಯಾಯಸ್ವ । ಸಂ । ಏತು । ತೇ । ವಿಶ್ವತಃ । ಸೋಮ । ವೃಷ್ಣ್ಯಂ ।
ಭವ । ವಾಜಸ್ಯ । ಸಂಽಗಥೇ ॥ ೧೬ ॥

ಸಾಯಣಭಾಷ್ಯಂ

ಗ್ರಾವಸ್ತೋತ್ರ ಆ ಪ್ಯಾಯಸ್ವ ಸಮೇತು ತ ಇತಿ ತೃಚೋ ಏನಿಯುಕ್ತಃ । ಸೂತ್ರಿತಂ ಚ । ಆ ಪ್ಯಾಯಸ್ವ ಸಮೇತು ತ ಇತಿ ತಿಸ್ರೋ ಮೃಜಂತಿ ತ್ವಾ ದಶ ಕ್ಷಿಪಃ । ಆ. ೫-೧೨ । ಇತಿ ॥ ಪತ್ನೀಸಂಯಾಜೇಷು ಸೌಮ್ಯಸ್ಯಾ ಪ್ಯಾಯಸ್ವೇತ್ಯೇಷಾನುವಾಕ್ಯಾ । ಸೂತ್ರಿತಂ ಚ । ಆ ಪ್ಯಾಯಸ್ವ ಸಮೇತು ತೇ ಸಂತೇ ಪಯಾಂಸಿ ಸಮು ಯಂತು ವಾಜಾಃ । ಆ. ೧-೧೦ । ಇತಿ ॥ ಚಮಸಾಪ್ಯಯನೇಽಪ್ಯೇಷಾ ಏನಿಯುಕ್ತಾ । ಸೂತ್ರಿತಂ ಚ । ಆ ಪ್ಯಾಯಸ್ವ ಸಮೇತು ತೇ ಸಂ ತೇ ಪಯಾಂಸಿ ಸಮು ಯಂತು ವಾಜಾ ಇತಿ ಚಮಸಾನಾದ್ಯೋಪಾದ್ಯಾನ್ । ಆ ೫-೬ । ಇತಿ ॥

ಹೇ ಸೋಮ ತ್ವಮಾ ಪ್ಯಾಯಸ್ವ । ವರ್ಧಯಸ್ವ । ತೇ ತವ ವೃಷ್ಣ್ಯಂ ವೃಷತ್ವಂ ವೀರ್ಯಂ ಸಾಮರ್ಥ್ಯಂ ವಿಶ್ವತಃ ಸರ್ವತಃ ಸಮೇತು । ಸಂಗಚ್ಛತಾಂ । ತ್ವಯಾ ಸಂಯುಕ್ತಂ ಭವತು । ಏವಂಭೂತಸ್ತ್ವಂ ವಾಜಸ್ಯಾನ್ನಸ್ಯ ಸಂಗಥೇ ಸಂಗಮನೇ ಭವ । ಅಸ್ಮಾಕಮನ್ನಪ್ರದೋ ಭವೇತ್ಯರ್ಥಃ ॥ ವೃಷ್ಣ್ಯಂ । ವೃಷ ಸೇಚನೇ । ಕನಿನ್ಯುವೃಷೀತ್ಯಾದಿನಾ ಕನಿನ್ । ವೃಷ್ಣಿ ಭವಂ ವೃಷ್ಣ್ಯಂ । ಭವೇ ಛಂದ-

ಸೀತಿ ಯತ್ । ಆಲ್ಲೋಪೋ೭ನ ಇತ್ಯಕಾರಲೋಪಃ । ಯೇ ಚಾಭಾವಕರ್ಮಣೋರಿತಿ ಪ್ರಕೃತಿಭಾವಸ್ತು ವೃತ್ಯಯೇನ ನ ಪ್ರವರ್ತತೇ । ಯತೋ೭ನಾವ ಇತ್ಯಾದ್ಯುದಾತ್ತತ್ವಂ । ಭವ । ದ್ವ್ಯಚೋ೭ತಸ್ತಿಙ ಇತಿ ಸಂಹಿತಾಯಾಂ ದೀರ್ಘತ್ವಂ । ಸಂಗಥೇ । ಪಾತ್ಯತುದಿವಚೀತ್ಯಾದಿನಾ ವಿಧೀಯಮಾನಸ್ಥಕ್ಪ್ರತ್ಯಯೋ ಬಹುಲವಚನಾದ್ಗಮೇರಪಿ ಭವತಿ । ಥಾಥಾದಿನೋತ್ತರಪದಾಂತೋದಾತ್ತತ್ವಂ ॥

ಪ್ರತಿಪದಾರ್ಥ

ಸೋಮ—ಎಲೈ ಸೋಮದೇವನೇ, । **ಆ ಪ್ಯಾಯಸ್ವ**—ಸಂಪೂರ್ಣವಾಗಿ ವೃದ್ಧಿಯನ್ನು ಹೊಂದು. **ತೇ**—ನಿನ್ನ । **ವೃಷ್ಣ್ಯಂ**—ವೀರ್ಯವು । **ವಿಶ್ವತಃ**—ನಾನಾದಿಕ್ಕುಗಳಿಂದಲೂ । **ಸಮೇತು**—ಬಂದು (ನಿನ್ನನ್ನು) ತುಂಬಿಕೊಳ್ಳಲಿ । **ವಾಜಸ್ಯ**—(ನಮಗೆ ಹೆಂಚಬೇಕಾದ) ಅನ್ನದ । **ಸಂಗಥೇ**—ಶೇಖರಣೆಯಲ್ಲಿ । **ಭವ**—ನಿರತನಾಗು.

ಭಾವಾರ್ಥ

ಎಲೈ ಸೋಮದೇವನೇ, ನೀನು ಸಂಪೂರ್ಣವಾಗಿ ವೃದ್ಧಿಯನ್ನು ಹೊಂದು. ನಿನ್ನ ವೀರ್ಯವು ನಾನಾದಿಕ್ಕುಗಳಿಂದಲೂ ಬಂದು ನಿನ್ನನ್ನು ತುಂಬಿಕೊಳ್ಳಲಿ. ನಮಗೆ ಹೆಂಚಬೇಕಾದ ಅನ್ನದ ಶೇಖರಣೆಯಲ್ಲಿ ನಿರತನಾಗು.

English Translation

Increase Soma ; may vigour come to you from every side ; be deligent in the supply of food to us.

ವಿಶೇಷವಿಷಯಗಳು

ಆ ಪ್ಯಾಯಸ್ವ ಸಮೇತು ತೇ ಎಂದು ಮೊದಲಾದ ಮೂರು ಋಕ್ಕುಗಳದುವು ಗ್ರಾವಸ್ತೋತ್ರದಲ್ಲಿ ಎಂದರೆ ಸೋಮಲತೆಯನ್ನು ಜಜ್ಜುವ ಕಲ್ಲುಗಳನ್ನು ಸ್ತೋತ್ರಮಾಡುವಾಗ ಉಪಯೋಗಿಸಲ್ಪಡುವುವು ಎಂದು ಆಶ್ವಲಾಯನ ಶ್ರೌತಸೂತ್ರದ **ಆ ಪ್ಯಾಯಸ್ವ ಸಮೇತು ತೇ ಸಂ ತೇ ಪಯಾಂಸಿ ಸಮು ಯಂತು ವಾಜಾ** ಎಂಬ ಸೂತ್ರದಲ್ಲಿ ಹೇಳಿರುವುದು (ಆ. ೧-೧೦) ಚಮಸಪಾತ್ರವನ್ನು ಸೋಮರಸದಿಂದ ತುಂಬುವಾಗಲೂ ಈ ಋಕ್ಕಿನ ವಿನಿಯೋಗ ವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಆ ಪ್ಯಾಯಸ್ವ ಸಮೇತು ತೇ ಸಂ ತೇ ಪಯಾಂಸಿ ಸಮು ಯಂತು ವಾಜಾ ಇತಿ ಚಮಸಾನಾದ್ಯೋಪಾದ್ಯಾನ್** ಎಂಬ ಸೂತ್ರದಿಂದ ನಿರ್ದೇಶಿಸಲ್ಪಟ್ಟಿರುವುದು.

ವೃಷ್ಣ್ಯಂ—ಉಕ್ಕಿಬರತಕ್ಕ ಬಲ ಅಥವಾ ವೀರ್ಯವೆಂದರ್ಥವು.

ವಾಜಸ್ಯ— ವಾಜ ಶಬ್ದವು ಅನ್ನನಾಮಗಳಲ್ಲಿಯೂ ಸಂಗ್ರಾಮಗಳಲ್ಲಿಯೂ ನಿರುಕ್ತದಲ್ಲಿ ಪಠಿತವಾಗಿದೆ. ಈ ವಿಷಯವನ್ನು ಈ ಪದದ ವೈಶಿಷ್ಟ್ಯವನ್ನೂ ಹಿಂದೆ ಹೇಳಿದೆ. ಇಲ್ಲಿ **ವಾಜಸ್ಯ** ಅಂದರೆ ಅನ್ನವೆಂದರ್ಥವು.

ಸಂಗಥೇ—ಈ ಶಬ್ದವು ನಿರುಕ್ತದಲ್ಲಿ (೩.೯) ಸಂಗ್ರಾಮ ನಾಮಗಳಲ್ಲಿ ಪಠಿತವಾಗಿದೆ. **ಸಂಗಮನ**ವೆಂದರೆ ಒಟ್ಟಿಗೆ ಸೇರುವುದೆಂಬ ಅರ್ಥದನ್ವೇರೆ ಸಂಗ್ರಾಮವೆಂದು ಒಂದು ಮತ. ಆದರೆ ಇಲ್ಲಿ **ಸಂಗಥೇ** ಅಂದರೆ ಶೇಖರಣೆಯಲ್ಲಿ ಅಥವಾ ನಮಗೆ ತಂದು ಸೇರಿಸುವುದರಲ್ಲಿ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಪ್ಯಾಯಸ್ಸ—ಓಪ್ಯಾಯೀ. ವೃದ್ಧೌ. ಧಾತು. ಭ್ವಾದಿ. ಆತ್ಮನೇಪದಿ. ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಧಾಸ್ ಪ್ರತ್ಯಯ. **ಥಾಸಃ ಸೇ**—ಎಂಬುದರಿಂದ ಸೇ ಆದೇಶ. **ಸವಾಭ್ಯಾಂ ವಾಮೌ** (ಪಾ. ಸೂ. ೩-೪-೯೧) ಎಂಬುದರಿಂದ ಏತ್ವಕ್ಕೆ ವ ಆದೇಶ. ಶಪ್ ವಿಕರಣ. ನಿಘಾತಸ್ವರ ಬರುತ್ತದೆ.

ಏತು — ಇಣ್ ಗತೌ ಧಾತು. ಲೋಟ್ ಪ್ರಥಮಪುರುಷ ಏಕವಚನರೂಪ. ತಿಙಂತನಿಘಾತಸ್ವರ ಬರುತ್ತದೆ.

ವೃಷ್ಣ್ಯಮ್—ವೃಷ ಸೇಚನೇ. ಧಾತು. ಇದಕ್ಕೆ **ಕನಿನ್ಯು ವೃಷಿ**–(ಉ. ಸೂ. ೧-೧೫೪) ಎಂಬುದರಿಂದ ಕನಿನ್ ಪ್ರತ್ಯಯ. ವೃಷನ್ ಶಬ್ದವಾಗುತ್ತದೆ. ವೃಷ್ಣಿ ಭವಂ ವೃಷ್ಣ್ಯಮ್. **ಭವೇ ಛಂದಸಿ** (ಪಾ. ಸೂ. ೪-೪-೧೧೦) ಎಂಬುದರಿಂದ ಯತ್ ಪ್ರತ್ಯಯ. ಯಾದಿಪ್ರತ್ಯಯವಾದುದರಿಂದ ಭಸಂಜ್ಞಾ ಇರುವುದರಿಂದ **ಅಲ್ಲೋಪೋ೽ನಃ**—ಎಂಬುದರಿಂದ ವೃಷನ್ ಶಬ್ದದ ಅನಿನ ಆಕಾರಕ್ಕೆ ಲೋಪ. ವಾಸ್ತವವಾಗಿ ಇಲ್ಲಿ **ಯೇಚಾ-ಭಾವಕರ್ಮಣೋಃ** – (ಪಾ. ಸೂ. ೬-೪-೧೬೪) ಎಂಬುದರಿಂದ ಪ್ರಕೃತಿಭಾವ ಬರಬೇಕಾಗುತ್ತದೆ. ಆದರೆ **ವ್ಯತ್ಯಯೋ ಬಹುಲಮ್**—ಎಂಬುದರಿಂದ ಇಲ್ಲಿ ವ್ಯತ್ಯಯದಿಂದ ಬರುವುದಿಲ್ಲ. **ಯತೋ೽ನಾವಃ**—ಎಂಬುದರಿಂದ ಯತ್ ಪ್ರತ್ಯಯಾಂತನಾದುದರಿಂದ ಆದ್ಯುದಾತ್ತಸ್ವರವು ಬರುತ್ತದೆ.

ಭವ—ಭೂ ಸತ್ತಾಯಾಂ ಧಾತು. ಲೋಣ್ಮಧ್ಯಮಪುರುಷ ಏಕವಚನರೂಪ. ಎರಡು ಅಚ್ ಇರುವುದರಿಂದ **ದ್ವ್ಯಚೋ೽ತಸ್ತಿಙಿ**–(ಪಾ. ಸೂ. ೬-೩-೧೩೫) ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ಸಂಗಥೇ—ಗಮ್ಲೃ ಗತೌ. ಧಾತು. **ಹಾತ್ಸ್ಯಾತುದಿವಚಿ**— (ಉ. ಸೂ. ೨-೧೬೪) ಎಂಬುದರಿಂದ ವಿಧಿಸಲ್ಪಡುವ ಥಕ್ ಪ್ರತ್ಯಯವು ಉಣಾದಿಯಲ್ಲಿ ಬಹುಲವಚನವಿರುವುದರಿಂದ ಗಮ್ ಧಾತುವಿಗೂ ಬರುತ್ತದೆ. ಕಿತ್ವಾದುದರಿಂದ **ಅನುದಾತ್ತೋಪದೇಶ**—(ಪಾ. ಸೂ. ೬-೪-೩೭) ಎಂಬುದರಿಂದ ಧಾತುವಿನ ಆನುನಾಸಿಕ ಮಕಾರಕ್ಕೆ **ಲೋಪ. ಥಾಥಘಞ್**—(ಪಾ. ಸೂ. ೬-೩-೧೪೪) ಎಂಬುದರಿಂದ ಸಮ್ ಎಂಬುದರೊಡನೆ ಸಮಾಸವಾದಾಗ ಉತ್ತರಪದಾಂತೋದಾತ್ತಸ್ವರ ಬರುತ್ತದೆ. ಸಪ್ತಮೀ ಏಕವಚನಾಂತರೂಪ. ॥ ೧೬ ॥

ಸಂಹಿತಾಪಾಠಃ

ಆ ಪ್ಯಾಯಸ್ಸ ಮದಿಂತಮ ಸೋಮ ವಿಶ್ವೇಭಿರಂಶುಭಿಃ ।
ಭವಾ ನಃ ಸುಶ್ರವಸ್ತಮಃ ಸಖಾ ವೃಧೇ ॥ ೧೬ ॥

ಪದಪಾಠಃ

ಆ । ಪ್ಯಾಯಸ್ವ । ಮದಿನ್ತಮ । ಸೋಮ । ವಿಶ್ವೇಭಿಃ । ಅಂಶುಭಿಃ ।
ಭವ । ನಃ । ಸುಶ್ರವಃತಮಃ । ಸಖಾ । ವೃಧೇ ॥ ೧೭ ॥

ಸಾಯಣಭಾಷ್ಯಂ

ಹೇ ಮಂದಿತಮಾತಿಶಯೇನ ಮದವನ್ ಸೋಮ ವಿಶ್ವೇಭಿಃ ಸರ್ವೈರಂಶುಭಿರ್ಲತಾವಯವೈರಾ ಪ್ಯಾಯಸ್ವ । ಆ ಸಮಂತಾದ್ವೃದ್ಧೋ ಭವ । ಸ ತ್ವಂ ಸುಶ್ರವಸ್ತಮೋಽತಿಶಯೇನ ಶೋಭನಾನ್ನ-ಯುಕ್ತಃ ಸನ್ ನೋಽಸ್ಮಾಕಂ ವೃಧೇ ವರ್ಧನಾಯ ಸಖಾ ಭವ । ಮಿತ್ರೀಭವ ॥ ಮದಿಂತಮ ಮದೋ ಹರ್ಷಃ । ತದ್ವಾನ್ ಮದೀ । ಅತಿಶಯೇನ ಮದೀ ಮದಿಂತಮಃ । ನಾದ್ಧಸ್ಯ । ಪಾ. ೮-೨-೧೯ ಇತಿ ತಮಪೋ ನುಟ್ । ಸುಶ್ರವಸ್ತಮಃ ಶ್ರವ ಇತ್ಯನ್ನನಾಮ । ಶ್ರೂಯತ ಇತಿ ಶ್ರವಃ । ನಿ ೧೦-೩ । ಇತಿ ಯಾಸ್ಕಃ । ಶೋಭನಂ ಶ್ರವೋ ಯಸ್ಯ ಸ ತಥೋಕ್ತಃ । ಅತಿಶಯೇನ ಸುಶ್ರವಾಃ ಸುಶ್ರವಸ್ತಮಃ । ತಮಪಃ ಪಿತ್ತ್ವಾದನುದಾತ್ತತ್ವೇ ಸೋರ್ಮನಸೀ ಅಲೋಮೋಷಸೀ ಇತ್ಯುತ್ತರಪದಾದ್ಯುದಾತ್ತತ್ವನೇವ ಶಿಷ್ಯತೇ ॥

॥ ಪ್ರತಿಪದಾರ್ಥ ॥

ಮದಿಂತಮ— ಅತಿಶಯವಾದ ಹರ್ಷದಿಂದ ಕೂಡಿದ । **ಸೋಮ**— ಎಲೈ ಸೋಮದೇವನೇ । **ವಿಶ್ವೇಭಿಃ**—ಸಕಲವಾದ । **ಅಂಶುಭಿಃ**—ಲತೆಗಳ ಸುರುಳಿಗಳೊಡನೆ । **ಆಪ್ಯಾಯಸ್ವ**—ಸುತ್ತಲೂ ವೃದ್ಧಿಯನ್ನು ಹೊಂದು । **ಸುಶ್ರವಸ್ತಮಃ**—ಶ್ರೇಷ್ಠವಾದ ಅನ್ನದೊಡನೆ ಅತಿಶಯವಾಗಿ ಕೂಡಿಕೊಂಡು । **ನಃ**— ನಮ್ಮ । **ವೃಧೇ**— ಬೆಳವಣಿಗೆಗೆ (ಕಾರಣನಾದ) । **ಸಖಾ ಭವ**—ಸ್ನೇಹಿತನಾಗಿ ಆಗು ॥

ಭಾವಾರ್ಥ

ಎಲೈ ಸೋಮದೇವನೇ, ನೀನು ಯಾವಾಗಲೂ ಅತಿಶಯವಾದ ಹರ್ಷದಿಂದ ಕೂಡಿರುವೆ. ಸುಂದರವಾಗಿರುವ ಸಮಸ್ತಲತಾಸುರಳಿಗಳೊಡನೆ ನೀನು ಸುತ್ತಲೂ ವೃದ್ಧಿಯನ್ನು ಹೊಂದು. ಶ್ರೇಷ್ಠವಾದ ಅನ್ನದೊಡನೆ ಅತಿಶಯವಾಗಿ ಕೂಡಿಕೊಂಡು ನಮ್ಮ ಬೆಳೆವಣಿಗೆಗೆ ಕಾರಣನಾದ ನಮ್ಮ ಸ್ನೇಹಿತನಾಗಿ ಆಗು.

English Translation

Exulting Soma, increase with all twining plants; be a friend to us; well supplied with food we may prosper.

ವಿಶೇಷವಿಷಯಗಳು

ಮದಿಂತಮ—ಅತ್ಯಂತ ಅತಿಶಯವಾದ ಮದವುಳ್ಳವನು ಅಂದರೆ ಹರ್ಷವುಳ್ಳವನೆಂದು ಸಾಯಣರೂ, ಅತ್ಯಂತ ಅತಿಶಯವಾಗಿ ಮದವನ್ನುಂಟುಮಾಡುವವನೆಂದು ಸ್ಕಂದಸ್ವಾಮಿಗಳೂ ಅರ್ಥಮಾಡಿರುತ್ತಾರೆ ಋಕ್ಸಂಹಿತೆಯ ೯-೯೧-೫ನೆಯ

ಮತ್ಸಿ ಶರ್ಧೋ ಮಾರುತಂ ಮತ್ಸಿ ದೇವಾ೯ ಮತ್ಸಿ ಮಹಾವಿಂದ್ರ ವಿಂದೋ ಮದಾಯ ।
(ಋ. ಸಂ. ೯-೯೧-೫)

ಎಂಬ ಋಕ್ಕಿನಲ್ಲಿ ಹೇಳಿರುವಂತೆ ಸಕಲ ದೇವತೆಗಳಿಗೂ ಮದವನ್ನುಂಟುಮಾಡುವವನು ಸೋಮನಾದ್ದರಿಂದ ಮದಕಾರಿಯೆಂಬ ಅರ್ಥವೇ ಸರಿಯಾಗುವುದು.

ಅಂಶುಭಿಃ—ಅಂಶುವೆಂದರೆ ಕಿರಣವೆಂದರ್ಥವು. ಆದರೆ ಇಲ್ಲಿ ಸೋಮಲತೆಯ ಅವಯವಗಳು ಪ್ರಕಾಶಮಾನವಾಗಿಯೂ, ಸೂಕ್ಷ್ಮವಾಗಿಯೂ ಕಿರಣಗಳಂತೆ ನಾನಾದಿಕ್ಕುಗಳಿಗೂ ಹರಡಿರುವುದರಿಂದ ಈ ಅವಯವಗಳಿಗೇ ಅಂಶುಗಳೆಂದು ಹೇಳಿರುತ್ತಾರೆ.

ಸುಶ್ರವಸ್ತಮಃ—**ಶ್ರವಃ** ಶಬ್ದವು ಒಲನಾಮಗಳಲ್ಲಿಯೂ ಧನನಾಮಗಳಲ್ಲಿಯೂ ಅನ್ನನಾಮಗಳಲ್ಲಿಯೂ (ನಿ. ೩-೯) ಪಠಿತವಾಗಿದೆ. ಇಲ್ಲಿ ಅನ್ನವೆಂದು ಅರ್ಥಮಾಡಿರುತ್ತಾರೆ. ಅತ್ಯಂತ ಶ್ರೇಷ್ಠವಾದ ಅನ್ನವುಳ್ಳವನೆಂದರ್ಥವು. ಸ್ಕಂದಸ್ವಾಮಿಗಳು **ಸುಧನತೆಮಃ ಸುಕೀರ್ತಿತಮೋ ವಾ** ಎಂದು ವ್ಯಾಖ್ಯಾನವನ್ನು ಮಾಡಿರುತ್ತಾರೆ

ವ್ಯಾಕರಣಪ್ರಕ್ರಿಯಾ

ಮದಿಂತಮ—ಮದೋ ಹರ್ಷಃ. ಮದಃ ಅಸ್ಯ ಅಸ್ತೀತಿ ಮದೀ. **ಅತ ಇನಿಠನೌ**—ಎಂಬುದರಿಂದ ಇನಿ ಪ್ರತ್ಯಯ. ಅತಿಶಯೇನ ಮದೀ ಮದಿಂತಮಃ. **ಅತಿಶಾಯನೇ ತಮಬಿಷ್ಠನೌ**—ಎಂಬುದರಿಂದ ತಮಪ್. **ನಾಧ್ಬಸ್ಯ** (ಪಾ. ಸೂ. ೮-೪-೧೭) ನಕಾರಾಂತದ ಪರದಲ್ಲಿರುವ ತರಪ್ ತಮಪ್ ಪ್ರತ್ಯಯಗಳಿಗೆ ನುಟಾಗಮ ಎಂಬುದರಿಂದ ಛಂದಸ್ಸಿನಲ್ಲಿ ನುಟ್. ನಕಾರಕ್ಕೆ ಅನುಸ್ವಾರ ಪರಸವರ್ಣ. ಮದಿಂತಮ ಎಂಬುದು ಸಂಬುದ್ಧಿಯ ರೂಪವಾದುದರಿಂದ **ಅಮಂತ್ರಿತಸ್ಯ ಚಿ**--(ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ.

ವಿಶ್ವೇಭಿಃ—ವಿಶ್ವ ಶಬ್ದಕ್ಕೆ ಭಿಸ್ ಪರವಾದಾಗ **ಬಹುಲಂ ಛಂದಸಿ**-(ಪಾ. ಸೂ. ೭-೧-೧೦) ಎಂಬುದರಿಂದ ಐಸಾದೇಶ ಬರುವುದಿಲ್ಲ. **ಬಹುವಚನೇ ಝಲ್ಯೇತ್**—ಸೂತ್ರದಿಂದ ಏತ್ವ. ಸಕಾರಕ್ಕೆ ರುತ್ವವಿಸರ್ಗ.

ಭವ—ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಶಪ್ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ.

ಸುಶ್ರವಸ್ತಮಃ—ಶ್ರವಃ ಇತಿ ಅನ್ನನಾಮ ಶ್ರೂಯತೆ ಇತಿ ಶ್ರವಃ (ನಿರು. ೧೦-೩) **ಇತಿ** ಯಾಸ್ಕಃ ಅಭಿಜ್ಞರು ಶ್ರವ ಎಂಬುದು ಅನ್ನದ ಹೆಸರೆಂದು ಹೇಳುತ್ತಾರೆ. ಶೋಭನಂ ಶ್ರವಃ ಯಸ್ಯಸಃ **ಸುಶ್ರವಾಃ**. ಅತಿಶಯೇನ ಸುಶ್ರವಾಃ ಸುಶ್ರವಸ್ತಮಃ. **ಅತಿಶಾಯನೇ ತಮಬಿಷ್ಠನೌ**—ಎಂಬುದರಿಂದ **ತಮಪ್**ಪ್ರತ್ಯಯ.

ತಮಪ್ ಪಿತ್ವಾದುದರಿಂದ **ಅನುದಾತ್ತೌ ಸುಪ್ಪಿತೌ**—ಎಂಬುದರಿಂದ ಅನುದಾತ್ತ. ಆಗ **ಸೋರ್ಮನಸೀ ಅಲೋಪೋಷಸೀ**—ಎಂಬುದರಿಂದ ಶ್ರವಸ್ ಅಸಂತವಾದುದರಿಂದ ಉತ್ತರಪದ ಆದ್ಯುದಾತ್ತಸ್ವರ ಬಂದಿರುವುದು ಉಳಿಯಿತ್ತದೆ. ॥ ೧೭ ॥

———:o:———

ಸಂಹಿತಾಪಾಠಃ

ಸಂ ತೇ ಪಯಾಂಸಿ ಸಮು ಯಂತ್ವಾಜಾಃ ಸಂ ವೃಷ್ಣ್ಯಾನ್ಯ-
ಭಿಮಾತಿಷಾಹಃ ।
ಆಪ್ಯಾಯಮಾನೋ ಅಮೃತಾಯ ಸೋಮ ದಿವಿ ಶ್ರವಾಂಸ್ಯು-
ತ್ತಮಾನಿ ಧಿಷ್ವ ॥ ೧೮ ॥

ಪದಪಾಠಃ

ಸಂ । ತೇ । ಪಯಾಂಸಿ । ಸಂ । ಊಂ ಇತಿ । ಯಂತು । ವಾಜಾಃ । ಸಂ । ವೃಷ್ಣ್ಯಾನಿ । ಅಭಿಮಾತಿ ಽ ಸಹಃ ।
ಆ ಽ ಪ್ಯಾಯಮಾನಃ । ಅಮೃತಾಯ । ಸೋಮ । ದಿವಿ । ಶ್ರವಾಂಸಿ । ಉತ್ ಽ-
ತ್ತಮಾನಿ । ಧಿಷ್ವ ॥ ೧೮ ॥

॥ ಸಾಯಣಭಾಷ್ಯಂ ॥

ಪತ್ನೀಸಂಯಾಜೇಷು ಸೌಮ್ಯಸ್ಯ ಸಂ ತೇ ಪಯಾಂಸೀತಿ ಯಾಜ್ಯಾ । ಸೂತ್ರಿತಂ ಚ । ಸಂ ತೇ ಪಯಾಂಸಿ ಸಮು ಯಂತು ವಾಜಾ ಇಹ ತ್ವಷ್ಟಾರಮಗ್ರಿಯಂ । ಆ. ೧-೧೦ । ಇತಿ ॥ ಚಮಸಾಸ್ಯಾಯ-

ನೇ೨ಸ್ಯೇಷಾ । ಸೂತ್ರಿತಂ ಚ । ಸಂ ತೇ ಪಯಾಂಸಿ ಸಮು ಯಂತು ವಾಜಾ ಇತಿ ಚೆಮಸಾನಾದ್ಯೋಪಾದ್ಯಾನ್ । ಅ. ೫-೬ । ಇತಿ ॥

ಹೇ ಸೋಮ ಅಭಿಮಾತಿಷಾಹೋ೨ಭಿಮಾತೀನಾಂ ಶತ್ರೂಣಾಂ ಹಂತುಸ್ತೇ ತವ ಏವಂಭೂತಂ ತ್ವಾಂ ಪಯಾಂಸಿ ಶ್ರಯಣಾರ್ಥಾನಿ ಕ್ಷೀರಾಣಿ ಸಂ ಯಂತು । ಸಂಗಚ್ಛಂತಾಂ । ತಥಾ ವಾಜಾ ಉ ಹವಿರ್ಲಕ್ಷಣಾನ್ಯನ್ನಾನಿ ಚ ತ್ವಾಂ ಸಂಗಚ್ಛಂತಾಂ । ವೃಷ್ಣ್ಯಾನಿ ವೀರ್ಯಾಣಿ ಚ ಸಂಗಚ್ಛಂತಾಂ । ಹೇ ಸೋಮ। ತ್ವಮಮೃತಾಯಾಸ್ಮಾಕಮಮೃತತ್ವಾಯೋಮರತ್ವಾಯೋಪ್ಯಾಯಮಾನ ಆ ಸಮಂತಾದ್ವರ್ಧಮಾನಃ ಸನ್ದಿವಿ ನಭಸಿ ಸ್ವರ್ಗ ಉತ್ತಮಾನ್ಯುದ್ಗತತಮಾನ್ಯುತ್ಕೃಷ್ಟಾನಿ ಶ್ರವಾಂಸ್ಯನ್ನಾನ್ಯಸ್ಮಾಭಿರ್ಭೋಕ್ತವ್ಯಾನಿ ಹವಿರ್ಲಕ್ಷಣಾನಿ ವಾ ಧಿಷ್ವ । ಧಾರಯ ॥ ತೇ । ಕ್ರಿಯಾಗ್ರಹಣಂ ಕರ್ತವ್ಯಮಿತಿ ಕರ್ಮಣಃ ಸಂಪ್ರದಾನತ್ವಾಚ್ಚತುರ್ಥ್ಯರ್ಥೇ ಷಷ್ಠೀ । ಅಭಿಮಾತಿಷಾಹಃ । ಸಹ ಅಭಿಭವನೇ । ಛಂದಸಿ ಸಹ ಇತಿ ಣ್ವಿಪ್ರತ್ಯಯಃ । ಸುಷಾಮಾದಿತ್ವಾತ್ ಷತ್ವಂ । ಅಮೃತಾಯ । ನಞಿೋ ಜರಮರಮಿತ್ರಮೃತಾ ಇತ್ಯುತ್ತರಪದಾದ್ಯುದಾತ್ತತ್ವಂ । ಉತ್ತಮಾನಿ । ಉಚ್ಚೈರ್ದಾತ್ತಸಾಧನಕ್ರಿಯಾವಚನಾದಾತಿಶಾಯಿನಿಕಸ್ತಮಪ್ । ಉತ್ತಮಶಶ್ವತ್ತಮೌ ಸರ್ವತ್ರ । ಪಾ. ೬-೧-೧೬೦ । ಇತ್ಯುಂಛಾದಿಷು ಪಾಠಾದಂತೋದಾತ್ತತ್ವಂ । ಧಿಷ್ವ । ಸುಧಿತ ವಸುಧಿತ ನೇಮಧಿತ ಧಿಷ್ವ ಧಿಷೀಯ ಚ । ಪಾ. ೭-೪-೪೫ । ಇತಿ ಧಿಭಾವೋ ನಿಪಾತ್ಯತೇ ॥

ಪದಾರ್ಥ

ಅಭಿಮಾತಿಷಾಹಃ—ಎಲೈ ಸೋಮದೇವನೇ, ಶತ್ರುನಾಶಕನಾದ । **ತೇ**—ನಿನ್ನ (ನಿನ್ನನ್ನು ಕುರಿತು) । **ಪಯಾಂಸಿ**—(ಸಂರಕ್ಷಕಗಳಾದ) ಕ್ಷೀರಗಳು । **ಸಂ ಯಂತು**—ಸುತ್ತಲೂ ಹರಿದುಬಂದು ಸೇರಲಿ । **ವಾಜಾಃ ಉ ಸಂ**—ಹವಿಸ್ಸಿನರೂಪದ ಅನ್ನಗಳೂ ಸಹ ಬಂದು ನಿನ್ನನ್ನು ಸೇರಿಕೊಳ್ಳಲಿ । **ವೃಷ್ಣ್ಯಾನಿ ಸಂ**—ವೀರ್ಯಗಳೂ ಸಹ ನಿನ್ನನ್ನು ತುಂಬಿಕೊಳ್ಳಲಿ । **ಸೋಮ**—ಎಲೈ ಸೋಮದೇವನೇ । **ಅಮೃತಾಯ**—(ನಮ್ಮ) ಮರಣವಿಲ್ಲದಿರುವಿಕೆಗಾಗಿ । **ಆಪ್ಯಾಯಮಾನಃ**—ಸುತ್ತಲೂ ವೃದ್ಧಿಯನ್ನು ಹೊಂದುತ್ತಾ । **ದಿವಿ**—ಸ್ವರ್ಗದಲ್ಲಿ । **ಉತ್ತಮಾನಿ**—ಉತ್ಕೃಷ್ಟಗಳಾದ । **ಶ್ರವಾಂಸಿ**—ಅನ್ನಗಳನ್ನು । **ಧಿಷ್ವ**—ಹೊಂದಿರು ॥

ಭಾವಾರ್ಥ

ಎಲೈ ಸೋಮದೇವನೇ, ಸಂರಕ್ಷಕಗಳಾದ ಕ್ಷೀರಪ್ರವಾಹಗಳು ಶತ್ರುನಾಶಕನಾದ ನಿನ್ನನ್ನು ಕುರಿತು ಸುತ್ತಲೂ ಹರಿದು ಬಂದುಸೇರಲಿ, ಹವಿಸ್ಸಿನ ರೂಪದ ಅನ್ನಗಳೂ ಮತ್ತು ವೀರ್ಯಗಳೂ ಸಹ ನಿನ್ನನ್ನು ಬಂದು ತುಂಬಿಕೊಳ್ಳಲಿ. ನಾವು ಮರಣರಹಿತರಾಗಿರುವುದಕ್ಕಾಗಿ ನೀನು ಸುತ್ತಲೂ ವೃದ್ಧಿಯನ್ನು ಹೊಂದುತ್ತಾ ನಮಗಾಗಿ ಸ್ವರ್ಗದಲ್ಲಿ ಉತ್ಕೃಷ್ಟಗಳಾದ ಅನ್ನವನ್ನೂ ಹೊಂದಿರು.

English Translation

May the milky uices flow around you ; may sacrificial offerings and vigour be concentrated in the destroyer of foes ; and, being fully nourished, Soma, provide excellent foods in heaven for our immortality.

ವಿಶೇಷವಿಷಯಗಳು

ಪತ್ನೀಸಂಯಾಜವೆಂಬ ಹೋಮಗಳಲ್ಲಿ ಸೋಮದೇವತಾಕವಾದ ಹೋಮವನ್ನು ಮಾಡುವಾಗ **ಸಂ ತೇ ಪಯಾಂಸಿ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **'ಸಂ ತೇ ಪಯಾಂಸಿ ಸಮು ಯಂತು ವಾಜಾ ಇಹ ತ್ವಷ್ಟಾರಮಗ್ರಿಯಂ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೧-೧೦) ಚಮಸಾಧ್ವರ್ಯನದಲ್ಲಿಯೂ **ಈ** ಋಕ್ಕಿನ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ **ಸಂ ತೇ ಪಯಾಂಸಿ ಸಮು ಯಂತು ವಾಜಾ ಇತಿ ಚಮಸಾನಾದ್ಯೋಪಾದ್ಯಾನ್** ಎಂಬ ಸೂತ್ರದಿಂದ ನಿರ್ದೇಶಿಸಲ್ಪಟ್ಟಿರುವುದು. (ಆ. ೫-೬).

ಅಭಿಮಾತಿಷಾಹಃ— **ಅಭಿತಃ ಹಿಂಸಂತೀತ್ಯಭಿಮಾತಯಃ । ತೇಷಾಂ ಅಭಿಭವಿತಾ ।** ಸುತ್ತಲೂ ಹಿಂಸಿಸತಕ್ಕ ಶತ್ರುಗಳನ್ನು ನಾಶಮಾಡತಕ್ಕವನೆಂದರ್ಥವು.

ಸಾಸ್ಮಾ ವಾ ಅಭಿಮಾತಿಃ ।
(ತೈ. ಸಂ. ೨-೧-೩-೫)

ಎಂಬ ಶ್ರುತಿ ವಾಕ್ಯದಿಂದ ಪಾಪಿಷ್ಠನಿಗೂ ಅಭಿಮಾತಿಯೆಂದಾಗುತ್ತದೆ. ಶತ್ರುವೂ ಸಹ ಯಜ್ಞಯಾಗಾದಿಗಳನ್ನು ಮಾಡದೇ ಇರುವುದರಿಂದ ಅವನೂ ಪಾಪಿಷ್ಠನೇ ಆಗುತ್ತಾನೆ.

ಪಯಾಂಸಿ—ಸಂರಕ್ಷಕಗಳಾದ ಕ್ಷೀರಗಳು ಅಥವಾ ವೃಷ್ಟಿರೂಪವಾದ ಉದಕಗಳು.

ಅಮೃತಾಯ—ಮರಣವಿಲ್ಲದಿರುವಿಕೆಗಾಗಿ. ಅಥವಾ **ಅಮೃತಶಬ್ದೋ ದೇವತಾವಚನಃ । ದೇವತಾರ್ಥಮಿತ್ಯರ್ಥಃ ।** (ಸ್ಕ. ಭಾ.) ದೇವತೆಗಳಿಗೋಸ್ಕರವಾಗಿ ಎಂದೂ ಅರ್ಥಮಾಡಿರುವರು.

ವ್ಯಾಕರಣಪ್ರಕ್ರಿಯಾ

ತೇ—ಸಂಪ್ರದಾನ ಸಂಜ್ಞಾವಿಧಾಯಕ ಸೂತ್ರದಲ್ಲಿ **ಕ್ರಿಯಾಗ್ರಹಣಂ ಕರ್ತವ್ಯಮ್**—ಎಂಬ ವಚನದಿಂದ ಇಲ್ಲಿ ಸಂಪ್ರದಾನ ಸಂಜ್ಞೆ ಬರುವುದರಿಂದ ಚತುರ್ಥ್ಯರ್ಥದಲ್ಲಿ ಷಷ್ಠೀ ಬಂದಿದೆ **ತೇ ಮಯಾವೇಕವಚನಸ್ಯ**—ಎಂಬುದರಿಂದ ಷಷ್ಠೀ ಏಕವಚನಾಂತ ಯುಷ್ಮದ್ಗೆ ತೇ ಎಂಬ ಆದೇಶ.

ಯಂತು—ಇಣ್ ಗತೌ. ಧಾತು ಲೋಟ್ ಪ್ರಥಮಪುರುಷಬಹುವಚನದಲ್ಲಿ ಝಿಗೆ ಅಂತಾದೇಶ. ಉತ್ವ. **ಇಣೋ ಯಣ್**—ಎಂಬುದರಿಂದ ಯಣಾದೇಶ. ತಿಜಂತಸಿಘಂತಸ್ವರ ಬರುತ್ತದೆ.

ವೃಷ್ಣ್ಯಾನಿ—ಇದೇ ಸೂಕ್ತದ ಹದಿನಾರನೇ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ.

ಅಭಿಮಾತಿಷಾಹಃ—ಪಹ ಅಭಿ ಭನೇ. ಧಾತು. **ಛಂದಸಿ ಸಹಃ**-(ಪಾ. ಸೂ. ೩-೨-೬೩) ಎಂಬುದರಿಂದ ಇದಕ್ಕೆ ಣ್ವಿ ಪ್ರತ್ಯಯ. ಣ್ವಿಯಲ್ಲಿ ಸರ್ವಲೋಪವಾಗುತ್ತದೆ. ನಿತ್ತಾದುದರಿಂದ **ಅತಉಪಧಾಯಾಃ**—ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ. ಸಾಹ್ ಶಬ್ದವಾಗುತ್ತದೆ. ಅಭಿಮಾತೀನಾಂ ಸಾಟ್. ಅಭಿಮಾತಿಷಾಟ್. ಸುಷಾಮಾದಿಯಲ್ಲಿ ಪಠಿತವಾದುದರಿಂದ ಸಕಾರಕ್ಕೆ ಷತ್ವ ಬರುತ್ತದೆ ಷಷ್ಠೀಏಕವಚನಾಂತರೂಪ.

ಆಸ್ಯಾಯಮಾನಃ—ಓ ವ್ಯಾಯೀ ವೃದ್ಧೌ. ಧಾತು. ಲಡರ್ಥದಲ್ಲಿ ಶಾನಚ್ ಪ್ರತ್ಯಯ. ಶಪ್‌ವಿಕರಣ. **ಆನೇಮುಕ್**-(ಪಾ. ಸೂ. ೭-೨-೮೨) ಎಂಬುದರಿಂದ ಅಜಂತಾಂಗಕ್ಕೆ ಮುಕಾಗಮ. ಅದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು **ತಾಸ್ಯನುದಾತ್ತೇತ್**--ಎಂಬುದರಿಂದ ಅನುದಾತ್ತ. ಶಪ್‌ಪಿತ್ತಾದುದರಿಂದ್ ಅನುದಾತ್ತ. ಆಗ ಧಾತುಸ್ವರ ಉಳಿಯುತ್ತದೆ.

ಅಮೃತಾಯ—ಮೃಙ್ ಪ್ರಾಣತ್ಯಾಗೇ ಧಾತು. ಕ್ತಪ್ರತ್ಯಯ ನ ಮೃತಂ ಅಮೃತಮ್. **ನಞೋ ಜರಮರಮಿತ್ರ ಮೃತಾಃ** (ಪಾ. ಸೂ. ೬-೨-೧೧೬) ಎಂಬುದರಿಂದ ಉತ್ತರಪದಾದ್ಯುದಾತ್ತಸ್ವರ ಬರುತ್ತದೆ.

ದಿವಿ—ಊಡಿದಂ ಪದಾದಿ—(ಪಾ. ಸೂ. ೬-೧-೧೭೧) ಎಂಬುದರಿಂದ ಸಪ್ತಮಿಗೆ ಉದಾತ್ತಸ್ವರ ಬರುತ್ತದೆ.

ಉತ್ತಮಾನಿ—ಉತ್ ಎಂಬುದು ಸಸಾಧನಕ್ರಿಯಾವಾಚಕ ಶಬ್ದ. ಇದಕ್ಕೆ ಅತಿಶಯಾರ್ಥದಲ್ಲಿ ತಮಪ್ ಪ್ರತ್ಯಯ. ತಮಪಿಗೆ ಅನುದಾತ್ತವು ಪ್ರಾಪ್ತವಾದರೆ **ಉತ್ತಮ ಶಶ್ವತ್ತಮ್ ಸರ್ವತ್ರ** (ಪಾ. ಸೂ. ೬-೧-೧೬೦) ಎಂದು ಉಞ್ಛಾದಿಗಳಲ್ಲಿ ಪಾಠಮಾಡಿರುವುದರಿಂದ ಅಂತೋದಾತ್ತಸ್ವರ ಬರುತ್ತದೆ. ದ್ವಿತೀಯಾಬಹುವಚನಾಂತರೂಪ.

ಧಿಷ್ಣ—ಡುಧಾಞ್ ಧಾರಣಪೋಷಣಯೋಃ ಧಾತು. ಟೋಟ್ ಮಧ್ಯಮಪುರುಷಏಕವಚನದಲ್ಲಿ **ಸುಧಿತ ವಸುಧಿತ ನೇಮಧಿತ ಧಿಷ್ಣಧಿಷೀಯ ಚ** (ಪಾ. ಸೂ. ೭-೪-೪೫) ಎಂಬುದರಿಂದ ಧಿಭಾವವು ನಿಪಾತಿತವಾಗಿದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೪ ॥

॥ ಸಂಹಿತಾಪಾಠಃ ॥

ಯಾ ತೇ ಧಾಮಾನಿ ಹವಿಷಾ ಯಜಂತಿ ತಾ ತೇ ವಿಶ್ವಾ ಪರಿ-
ಭೂರಸ್ತು ಯಜ್ಞಂ ।
ಗಯಸ್ಫಾನಃ ಪ್ರತರಣಃ ಸುವೀರೋ ವೀರಹಾ ಪ್ರ ಚರಾ ಸೋ-
ಮ ದುರ್ಯಾನ್ ॥ ೧೫ ॥

॥ ಪದಪಾಠಃ ॥

ಯಾ । ತೇ । ಧಾಮಾನಿ । ಹವಿಷಾ । ಯಜಂತಿ । ತಾ । ತೇ । ವಿಶ್ವಾ । ಪರಿ೬-
ಭೂಃ । ಅಸ್ತು । ಯಜ್ಞಂ ।

ಗಯ೬ಸ್ಫಾನಃ । ಪ್ರ೬ತರಣಃ। ಸು೬ವೀರಃ। ಅವೀರ೬ಹಾ । ಪ್ರ । ಚರ । ಸೋ-
ನು । ದುರ್ಯಾನ್ ॥ ೧೯ ॥

ಸಾಯಣಭಾಷ್ಯಂ

ಸೋಮಪ್ರವಹಣೇ ಯಾ ತೇ ಧಾಮಾನೀತ್ಯೇಷಾ । ಸೂತ್ರಿತಂ ಚ । ಯಾತೇ ಧಾಮಾನಿ ಹವಿಷಾ ಯಜಂತೀಮಾಂ ಧಿಯಂ ಶಿಕ್ಷಮಾಣಸ್ಯ ದೇವೇತಿ ನಿಹಿತೇ ಪರಿದಧ್ಯಾತ್ । ಆ. ೪-೪ । ಇತಿ ॥ ಏಕಾದಶಿನಸ್ಯ ಸೌಮ್ಯಸ್ಯ ಪಶೋರ್ಹವಿಷ ಏಷೈವ ಯಾಜ್ಯಾ । ಪ್ರದಾನಾನಾಮಿತಿ ಖಂಡೇ ಸೂತ್ರಿತಂ । ಆಷಾಳ್ಹಂ ಯುತ್ಸು ಪೃತನಾಸು ಪಪ್ರಿಂ ಯಾ ತೇ ಧಾಮಾನಿ ಹವಿಷಾ ಯಜಂತಿ। ಆ. ೩-೭ । ಇತಿ ॥

ಹೇ ಸೋಮ ತೇ ತ್ವದೀಯಾನಿ ಯಾ ಯಾನಿ ಧಾಮಾನಿ ದ್ಯುಪ್ರಭೃತಿಷ್ವವಸ್ಥಿತಾನಿ ತೇಜಾಂಸಿ ಹವಿಷಾ ಚರುಪುರೋಡಾಶಾದಿನಾ ಯಜಂತಿ ಯಜಮಾನಾಃ ಪೂಜಯಂತಿ ತಾ ತೇ ವಿಶ್ವಾ ತ್ವದೀಯಾನಿ ತಾನಿ ಸರ್ವಾಣಿ ಧಾಮಾನಿ ಯಜ್ಞಮಸ್ಮದೀಯಮಧ್ವರಂ ಪರಿಭೂರಸ್ತು । ಪರಿತೋ ಭಾವಯಿತ್ರ್ಯಾಣಿ ಪರಿತಃ ಪ್ರಾಪ್ತಾನಿ ಸಂತು । ಯದ್ವಾ । ತ್ವದೀಯಾನಾಂ ತೇಷಾಂ ಸರ್ವೇಷಾಂ ಧಾಮ್ನಾಮಸ್ಮದೀಯೋ ಯಜಮಾನಃ ಪರಿಭೂರ್ಯಜ್ಞಂ ಪ್ರತಿಪರಿಗೃಹೀತಾ ಯೋಗೇನ ಸ್ವೀಕರ್ತಾಸ್ತು । ಭವತು । ಪರಿಪೂರ್ವೋ ಭವತಿಃ ಪರಿಗ್ರಹಾರ್ಥಃ । ತಾದೃಶೈರ್ಧಾಮಭಿರುಪೇತಸ್ತ್ವಂ ದುರ್ಯಾನ್ ಪ್ರಾಚೀನವಂಶಾದಿಲಕ್ಷಣಾನಸ್ಮದೀಯಾನ್ ಗೃಹಾನ್ ! ಗೃಹಾ ವೈ ದುರ್ಯಾ ಇತಿ ಶ್ರುತೇಃ । ಪ್ರ ಚರ । ಪ್ರಕರ್ಷೇಣ ಗಚ್ಛ । ಕೀದೃಶಸ್ತ್ವಂ । ಗಯಸ್ಫಾನೋ ಗಯಸ್ಯ ಗೃಹಸ್ಯ ಧನಸ್ಯ ವಾ ವರ್ಧಯಿತಾ ಪ್ರತರಣಃ ಪ್ರಕರ್ಷೇಣ ದುರಿತಾತ್ತಾರಯಿತಾ ಸುವೀರಃ ಶೋಭನೈರ್ವೀರ್ಯೈಃ ಪುರುಷೈರುಪೇತಃ ಅವೀರಹಾ। ವೀರ್ಯಾಜ್ಜಾಯಂತ ಇತಿ ವೀರಾಃ ಪುತ್ರಾಃ । ತೇಷಾಮಹಂತಾ ॥ ಪರಿಭೂಃ । ಭೂ ಸ್ರಾಪ್ತೌ । ಅಸ್ಮಾತ್ಕ್ವಿಪ್ಪ್ರತ್ಯಯೇ ಕ್ವಿಪ್ । ವ್ಯತ್ಯಯೋ ಬಹುಲಂ । ಪಾ. ೩-೧-೮೫ । ಇತಿ ಲಿಂಗವಚನವ್ಯತ್ಯಯೌ । ಅಸ್ತು । ವ್ಯತ್ಯಯೇನೈಕವಚನಂ । ಗಯಸ್ಫಾನಃ । ಗಯ ಇತಿ ಗೃಹಸ್ಯ ಧನಸ್ಯ ಚ ನಾಮಧೇಯಂ । ತೇಷಾಂ ಸ್ಫಾಯಿತಾ । ವರ್ಧಯಿತಾ । ಕೃತ್ಯಲ್ಯುಟೋ ಬಹುಲಮಿತಿ ಕರ್ತರಿ ಲ್ಯುಟಿ ಛಾಂದಸೋ ಯಲೋಪಃ । ಅವೀರಹಾ । ವೀರಾಣಾಂ ಹಂತಾ ವೀರಹಾ । ನ ವೀರಹಾ ಅವೀರಹಾ ॥

ಪ್ರತಿಪದಾರ್ಥ

ಸೋಮ—ಎಲೈ ಸೋಮದೇವನೇ । **ತೇ**—ನಿನ್ನ । **ಯಾ ಧಾಮಾನಿ**—(ದ್ಯುಲೋಕಾದಿಗಳಲ್ಲಿಲ್ಲಾ ಹರಡಿರತಕ್ಕ) ಯಾವಯಾವ ತೇಜಸ್ಸುಗಳನ್ನು । **ಹವಿಷಾ**—ಚರುಪುರೋಡಾಶಾದಿಗಳಿಂದ । **ಯಜಂತಿ**—(ಯಜ

ಮಾನರು) ಪೂಜಿಸುತ್ತಾರೆಯೋ । **ತಾ ತೇ ವಿಶ್ವಾ**— ಆ ಸಕಲವಿಧವಾದ ತೇಜಸ್ಸುಗಳೂ । **ಯೆಜ್ಞಂ**— ನಮ್ಮ ಯಜ್ಞವನ್ನು । **ಪರಿಭೂಃ ಅಸ್ತು**—ಸುತ್ತುವರಿದು ತುಂಬಿಕೊಳ್ಳಲಿ । **ಗಯಸ್ಫಾನಃ**—ಗೃಹದ ಅಥವಾ ಧನದ ವೃದ್ಧಿಕಾರಕನೂ । **ಪ್ರತರಣಃ**—ಪೂರ್ಣವಾಗಿ ದಾಟಿಸುವವನೂ । **ಸುವೀರಃ**—ಶ್ರೇಷ್ಠರಾದ ವೀರರೊಡನೆ ಕೂಡಿದವನೂ । **ಅವೀರಹಾ**—ವೀರರಾದ (ನಮ್ಮ) ಪುತ್ರರನ್ನು ಹಿಂಸಿಸದಿರುವವನೂ ಆದ ನೀನು (ಅಂತಹ ತೇಜಸ್ಸುಗಳೊಡನೆ ಕೂಡಿದವನಾಗಿ) । **ದುರ್ಯಾ**— ನಮ್ಮ (ಪ್ರಾಚೀನವಾದ) ಗೃಹಗಳನ್ನು । **ಪ್ರ ಚರ** - ಅತಿಶಯವಾಗಿ ಬಂದು ಸೇರು ॥

ಭಾವಾರ್ಥ

ಎಲೈ ಸೋಮದೇವನನೇ, ದ್ಯುಲೋಕಾದಿಗಳಲ್ಲೆಲ್ಲಾ ಹರಡಿರತಕ್ಕ ನಿನ್ನ ಯಾವ ಯಾವ ತೇಜಸ್ಸುಗಳನ್ನು ಯಜ್ಞಕರ್ತರು ಚರುಪುರೋಡಾಶಾದಿಗಳಿಂದ ಪೂಜಿಸುತ್ತಾರೆಯೋ ಆ ಸಕಲವಿಧವಿವಾದ ತೇಜಸ್ಸುಗಳೂ ನಮ್ಮ ಯಜ್ಞವನ್ನು ಸುತ್ತುವರಿದು ತುಂಬಿಕೊಳ್ಳಲಿ. ನಮ್ಮ ಧನದ ವೃದ್ಧಿಕಾರಕನೂ, ನಮ್ಮನ್ನು ಪಾಪದಿಂದಲೂ, ಕಷ್ಟದಿಂದಲೂ ದಾಟಿಸುವವನೂ ಶ್ರೇಷ್ಠರಾದ ವೀರರೊಡನೆ ಕೂಡಿದವನೂ ಮತ್ತು ನಮ್ಮ ವೀರರಾದ ಪುತ್ರರನ್ನು ಹಿಂಸಿಸದಿರುವವನೂ ಆದ ನೀನು ನಿನ್ನ ಆ ಸಕಲವಾದ ತೇಜಸ್ಸುಗಳೊಡನೆ ಕೂಡಿದವನಾಗಿ ನಮ್ಮ ಪ್ರಾಚೀನವಾದ ಈ ಗೃಹಗಳನ್ನು ಬಂದುಸೇರು.

English Translation

Whichever of your glories, men worship with oblations, may our sacrifice be invested with them all; Soma, come to our houses, you are the bestower of wealth, the transporter of difficulties; you are attended by valiant heroes, the non-destroyer of progeny.

॥ ವಿಶೇಷವಿಷಯಗಳು ॥

ಸೋಮಪ್ರವಹಣವೆಂಬ ಕರ್ಮದಲ್ಲಿ **ಯಾ ತೇ ಧಾಮಾನಿ** ಎಂಬ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಯಾ ತೇ ಧಾಮಾನಿ ಹವಿಷಾ ಯಜಂತೀಮಾಂ ಧಿಯಂ ಶಿಕ್ಷಮಾಣಸ್ಯ ದೇವೇತಿ ನಿಹಿತೇ ಪರಿದಧ್ಯಾತ್** ಎಂಬ ಸೂತ್ರದಿಂದ ವಿವೃತವಾಗಿರುವುದು (ಅ.೪-೪) ಏಕಾದಶಿನವೆಂಬ ಯಾಗದಲ್ಲಿ ಸೋಮದೇವತಾಕವಾದ ಪಶುಹೋಮದಲ್ಲಿ ಈ ಋಕ್ಕನ್ನು ಯಾಜ್ಯಾ ಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತ ಸೂತ್ರದ **ಪೃದಾನಾನಾಂ** ಎಂಬ ಖಂಡದಲ್ಲಿ **ಆಷಾಳ್ಹಂ ಯುತ್ಸು ಪೃತನಾಸು ಪಪ್ರಿಂ ಯಾ ತೇ ಧಾಮಾನಿ ಹವಿಷಾ ಯಜಂತಿ** ಎಂಬ ಸೂತ್ರವು ನಿರ್ದೇಶಿಸುವುದು (ಆ. ೩-೭).

ಧಾಮಾನಿ—ಧಾಮಶಬ್ದಕ್ಕೆ ಸ್ಥಾನ, ನಾಮ, ಜನ್ಮ, ತೇಜಸ್ಸು ಮುಂತಾದ ಅರ್ಥಗಳಿವೆ. ಇವುಗಳ ವಿವರಣೆಯನ್ನು ಋ. ಸಂ. ೧-೯೧-೪ನೆಯ ಋಕ್ಕನ್ನು ವಿವರಿಸುವಾಗ ವಿಶದವಾಗಿ ತಿಳಿಯಪಡಿಸಿದೆ.

ಪರಿಭೂಃ ಅಸ್ತು—ಸುತ್ತುವರಿದು ತುಂಬಿಕೊಳ್ಳಲಿ. ಎಂದರೆ ನಿನ್ನ ಸಕಲ ಪ್ರಭಾವಗಳೂ ಸಹ ನಮ್ಮ ಯಜ್ಞಭೂಮಿಯನ್ನು ಸುತ್ತುವರಿದು ತುಂಬಿಕೊಳ್ಳಲಿ ಎಂದರ್ಥವು. **ಪರಿಭೂಃ** ಎನ್ನುವುದಕ್ಕೆ ಇದೊಂದರ್ಥವು.

ಇದಲ್ಲದೆ, **ಪರಿಪೂರ್ವೋ ಭವತಿಃ ಸರ್ವತ್ರ ಪರಿಗ್ರಹಾರ್ಥೇ।** ಎನ್ನುವ ನಿಯಮದ ಪ್ರಕಾರ ಸ್ವೀಕರಿಸಲಿ ಎಂದರ್ಥವಾಗುತ್ತದೆ. ಎಂದರೆ ನೀನು ನಿನ್ನ ಸಕಲಪ್ರಭಾವಗಳೊಡನೆ ಬಂದು ನಮ್ಮ ಈ ಯಜ್ಞವನ್ನು ಸ್ವೀಕರಿಸು ಎಂದಭಿಪ್ರಾಯವು. **ಯಾನಿ ತವ ಯೆಷ್ವಾಯಾನಿ ಧಾಮಾನಿ ತೈಃ ಸರ್ವೈಃ ಇಮಂ ಯೆಜ್ಞಂ ಪರಿಗೃಹಾಣೇ–ತ್ಯರ್ಥಃ।** (ಸ್ಕ. ಭಾ.) ಇಷ್ಟೇ ಅಲ್ಲದೆ ಸಾಯಣರು **ಪರಿಗ್ರಹ** ಎಂಬ ಅರ್ಥದಲ್ಲಿಯೇ ಬೇರೊಂದು ಅನ್ವಯವನ್ನು ಮಾಡಿ **ಸರ್ವೇಷಾಂ ಧಾಮ್ನಾಂ ಯೆಜಮಾನಃ ಸ್ವೀಕರ್ತಾ ಅಸ್ತು।** ಎಂದರೆ ಆ ನಿನ್ನ ಸಕಲ ಪ್ರಭಾವಗಳನ್ನು ಈ ಯಜಮಾನನು ಯಾಗದಿಂದ ಸ್ವೀಕರಿಸಲಿ ಎಂದು ವಿವರಿಸಿರುವರು. ಈ ಶಬ್ದದ ವಿಸ್ತಾರವಾದ ವಿವರಣೆಗಾಗಿ ಋ. ಸಂ. ಭಾಗ ೧ ಪೇಜು 633–634ಗಳನ್ನು ನೋಡಿ.

ಗಯೆಸ್ಫಾನಃ— ಗೃಹದ ಅಥವಾ ಧನದ ವೃದ್ಧಿಕಾರಕನು ; ಈ ಪದದ ವಿವರಣೆಯನ್ನು ಋ. ಸಂ. ೧–೯೧–೧೨ನೆಯ ಋಕನ್ನು ವಿವರಿಸುವಾಗ ವಿಶದವಾಗಿ ತಿಳಿಸಿದೆ.

ಪ್ರತರಣಃ--**ಪ್ರಕರ್ಷೇಣ ದುರಿತಾತ್ ತಾರಯಿತಾ।** ಪಾಪದಿಂದ ಪೂರ್ಣವಾಗಿ ದಾಟಿಸುವವನೆಂಬ ಅರ್ಥವನ್ನು ಸಾಯಣರು ಹೇಳಿರುವರು. ಸ್ಕಂದಸ್ವಾಮಿಗಳು **ತರತಿರತ್ರ ವೃದ್ಧ್ಯರ್ಥಃ। ವರ್ಧಯಿತಾ ಚ ಸರ್ವಾರ್ಥಾನಾಂ।** ಸಕಲ ಇಷ್ಟಾರ್ಥಗಳನ್ನೂ ವೃದ್ಧಿಯಾಗುವಂತೆ ಮಾಡುವವನು ಎಂದು ವಿವರಿಸುತ್ತಾರೆ. ಈ ಅರ್ಥವೇ ಹೆಚ್ಚಾಗಿ ಒಪ್ಪಿಕೊಳ್ಳುತ್ತದೆ. ಏತಕ್ಕೆಂದರೆ ಉಳಿದ ಕಡೆಗಳಲ್ಲಿಯೂ ಸಹ **ಪ್ರ** ಎಂಬ ಉಪಸರ್ಗವು **ತೃ** ಧಾತುವಿನೊಡನೆ ಸೇರುವಾಗಲೆಲ್ಲಾ ವೃದ್ಧಿಯಾಗು ಎಂಬ ಅರ್ಥವೇ ಸಾಧಾರಣವಾಗಿ ಕಾಣುತ್ತದೆ. ಉದಾಹರಣೆಗೆ—

ಸೋಮ ರಾಜ್ಞ ಪ್ರ ಣ ಆಯೂಂಷಿ ತಾರೀರಹಾನೀವ ಸೂರ್ಯೋ ನಾಸರಾಣಿ।
(ಋ. ಸಂ. ೮–೪೮–೭)

ಕೃತ್ವೇ ದಕ್ಷಾಯ ನೋ ಹಿ ನು ಪ್ರಣು ಆಯೂಂಷಿ ತಾರಿಷಃ।
(ವಾ. ಸಂ. ೩೪–೮)

ಇತ್ಯಾದಿ ಸ್ಥಳಗಳಲ್ಲೆಲ್ಲಾ **ಪ್ರವರ್ಧಯ**— ವೃದ್ಧಿಯಾಗುವಂತೆ ಮಾಡು ಎಂಬರ್ಥವೇ ಇರುತ್ತದೆ (ನಿ ೧೧-೩೦)

ಮುರ್ಯಾನ್—**ಗಯೆಃ, ಕೈದರಃ, ಗರ್ತಃ** ಇತ್ಯಾದಿ ಗೃಹನಾಮಗಳಲ್ಲಿ ಪಠಿತವಾಗಿರುವುದರಿಂದ ಈ ಶಬ್ದಕ್ಕೆ ಗೃಹಗಳು ಎಂದರ್ಥವು. (ನಿ ೩–೧೩)

ವ್ಯಾಕರಣಪ್ರಕ್ರಿಯಾ

ಯೆಜಂತಿ — ಯಜ ದೇವಪೂಜಾಸಂಗತಿಕರಣದಾನೇಷು ಧಾತು. ಲಟ್ ಪ್ರಥಮಪುರುಷಬಹುವಚನಾಂತರೂಪ. ಯಾ ಎಂದು ಸಂಬಂಧವಿರುವುದರಿಂದ **ಯಜ್ಞೃತ್ತಾನ್ನಿತ್ಯಮ್**—ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಧಾತುಸ್ವರದಿಂದ ಆದ್ಯುದಾತ್ತವಾಗುತ್ತದೆ.

ತಾ—ತಚ್ಛಬ್ದ. **ನಪುಂಸಕದಲ್ಲಿ ಶೇಶ್ಛಂದಸಿ ಬಹುಲಮ್**—ಎಂಬುದರಿಂದ ಶಿಗೆ ಲೋಪ. ಇದರಂತೆ ವಿಶ್ವಾ ಎಂಬುದು.

ಪರಿಭೂಃ—ಭೂ ಪ್ರಾಪ್ತೌ ಧಾತು. ಇದಕ್ಕೆ **ಕ್ವಿಪ್ ಚ** (ಪಾ. ಸೂ ೩-೨-೭೬) ಎಂಬುದರಿಂದ ಕ್ವಿಪ್. **ವ್ಯತ್ಯಯೋ ಬಹುಲಮ್**-(ಪಾ. ಸೂ. ೩-೧-೮೫) ಎಂಬುದರಿಂದ ವಿಶೇಷ್ಯದ ಲಿಂಗವಚನ ವ್ಯತ್ಯಾಸ ಬಂದಿದೆ. ನಪುಂಸಕ ಬಹುವಚನಕ್ಕೆ ಬದಲಾಗಿ ಸ್ತ್ರೀಲಿಂಗ **ಪುಲ್ಲಿಂಗಸಾಧಾರಣ** ಏಕವಚನ ಬಂದಿದೆ. **ಗತಿಕಾರಕೋಪಪದಾತ್ ಕೃತ್**—ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಅಸ್ತು—ಅಸ ಭುವಿ. ಧಾತು. ಲೋಟ್ ಪ್ರಥಮಪುರುಷದಲ್ಲಿ **ವ್ಯತ್ಯಯೋ ಬಹುಲಮ್**—ಎಂಬುದರಿಂದ ಬಹುವಚನಕ್ಕೆ ಏಕವಚನ ಪ್ರತ್ಯಯ ಬರುತ್ತದೆ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಗಯಸ್ಫಾನಃ—ಗಯ ಎಂಬುದು ಮನೆ ಅಥವಾ ಧನದ ಹೆಸರು. ಗಯಸಾಂ ಸ್ಫಾಯಿತಾ ವರ್ಧಯಿತಾ. ಓ ಸ್ಫಾಯೀ ವೃದ್ಧೌ ಧಾತು. **ಕೃತ್ಯಲ್ಯುಟೋ ಬಹುಲಮ್**-(ಪಾ. ಸೂ. ೩-೩-೧೧೩) ಎಂಬುದರಿಂದ ಲ್ಯುಟ್ ಪ್ರತ್ಯಯ. ಛಾಂದಸವಾಗಿ ಧಾತುವಿನ ಯಕಾರಕ್ಕೆ ಲೋಪ. **ಯುವೋರನಾಕೌ**—ಎಂಬುದರಿಂದ ಅನಾದೇಶ **ಗತಿಕಾರಕೋಪಪದಾತ್ ಕೃತ್**—ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಸುವೀರಃ—**ನಞ್‌ಸುಭ್ಯಾಂ**—ಸೂತ್ರದಿಂದ ಉತ್ತರಪದಾಂತೋದಾತ್ತಸ್ವರವು ಪ್ರಾಪ್ತವಾದರೆ **ವೀರ-ವೀರ್ಯೌ ಚ**-(ಪಾ. ಸೂ ೬-೨-೧೨೦) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

ಅವೀರಹಾ—ವೀರಾಣಾಂ ಹಂತಾ ವೀರಹಾ. ವೀರಶಬ್ದ ಉಪಪದವಾಗಿರುವಾಗ ಹನ್ ಧಾತುವಿಗೆ ಕ್ವಿಪ್ ಪ್ರತ್ಯಯ. ನ ವೀರಹಾ ಅವೀರಹಾ **ತತ್ಪುರುಷೇ ತುಲ್ಯಾರ್ಥ**—(ಪಾ. ಸೂ. ೬-೨-೨) ಎಂಬುದರಿಂದ ಪೂರ್ವಪದ (ನಞ್) ಪ್ರಕೃತಿಸ್ವರ ಬರುತ್ತದೆ.

ಚರ—ಚರ ಗತಿಭಕ್ಷಣಯೋಃ ಧಾತು. ಲೋಣ್ಮಧ್ಯಮಪುರುಷಏಕವಚನರೂಪ. ತಿಜಂತನಿಘಾತಸ್ವರ ಬರುತ್ತದೆ. ॥ ೯೯ ॥

॥ ಸಂಹಿತಾಪಾಠಃ ॥

ಸೋಮೋ ಧೇನುಂ ಸೋಮೋ ಅರ್ವಂತಮಾಶುಂ ಸೋಮೋ
ವೀರಂ ಕರ್ಮಣ್ಯಂ ದದಾತಿ ।
ಸಾದನ್ಯಂ ವಿದಥ್ಯಂ ಸಭೇಯಂ ಪಿತೃಶ್ರವಣಂ ಯೋ ದದಾಶದ-
ಸ್ಮೈ ॥ ೨೦ ॥

॥ ಪದಪಾಠಃ ॥

ಸೋಮಃ । ಧೇನುಂ। ಸೋಮಃ । ಅರ್ವಂತಂ । ಆಶುಂ । ಸೋಮಃ । ವೀರಂ ।
ಕರ್ಮಣ್ಯಂ।ದದಾತಿ ।
ಸದನ್ಯಂ । ವಿದಥ್ಯಂ । ಸಭೇಯಂ । ಪಿತೃಶ್ರವಣಂ । ಯಃ । ದದಾಶತ್ ।
ಅಸ್ಮೈ ॥ ೨೦ ॥

ಸಾಯಣಭಾಷ್ಯಂ

ಮಹಾಪಿತೃಯಜ್ಞೇ ಸೋಮಸ್ಯ ಪಿತೃಮತೋ ಯಾಗೇ ಸೋಮೋ ಧೇನುಮಿತ್ಯೇಷಾ ದ್ವಿತೀಯಾನುವಾಕ್ಯಾ । ತತ್ರ ಹ್ಯೇಕೈಕಸ್ಯ ಹವಿಷೋ ದ್ವೇ ದ್ವೇ ಅನುವಾಕ್ಯೇ ಸಮುಚ್ಚಯೇನ ವಿಹಿತೇ । ತಥೈವ ದಕ್ಷಿಣಾಗ್ನೇರಿತಿ ಖಂಡೇ ಸೂತ್ರಿತಂ । ಸೋಮೋ ಧೇನುಂ ಸೋಮೋ ಅರ್ವಂತಮಾಶುಂ ತ್ಯಂ ಸೋಮ ಪಿತೃಭಿಃ ಸಂವಿದಾನಃ । ಆ. ೨-೧೯ । ಇತಿ ॥

ಯೋ ಯಜಮಾನೋ ದದಾಶತ್ ಸೋಮಾಯ ಹವಿರ್ಲಕ್ಷಣಾನ್ಯನ್ನಾನಿ ದದ್ಯಾತ್ ತಸ್ಮೈ ಯಜಮಾನಾಯ ಸೋಮೋ ಧೇನುಂ ಸವತ್ಸಾಂ ದೋಗ್ಧ್ರೀಂ ಗಾಂ ದದಾತಿ । ತಥಾಶುಂ ಶೀಘ್ರಗಾಮಿನಮರ್ವಂತಮಶ್ವಂ ದದಾತಿ । ಪ್ರಯಚ್ಛತಿ । ತಥಾ ವೀರಂ ಪುತ್ರಮಸ್ಮೈ ಯಜಮಾನಾಯ ದದಾತಿ । ಕೀದೃಶಂ ಪುತ್ರಂ । ಕರ್ಮಣ್ಯಂ ಲೌಕಿಕಕರ್ಮಸು ಕುಶಲಂ ಸದನ್ಯಂ । ಸದನಂ ಗೃಹಂ । ತದರ್ಹಂ । ಗೃಹಕಾರ್ಯೆಕುಶಲಮಿತ್ಯರ್ಥಃ । ವಿದಥ್ಯಂ । ವಿದಂತ್ಯೇಷು ದೇವಾನಿತಿ ವಿದಥಾ ಯಜ್ಞಾಃ । ತದರ್ಹಂ । ದರ್ಶಪೂರ್ಣಮಾಸಾದಿಯಾಗಾನುಷ್ಠಾನಪರಮಿತ್ಯರ್ಥಃ । ಸಭೇಯಂ ಸಭಾಯಾಂ ಸಾಧುಂ । ಸಕಲಶಾಸ್ತ್ರಾಭಿಜ್ಞಮಿತ್ಯರ್ಥಃ । ಪಿತೃಶ್ರವಣಂ ಪಿತಾ ಶ್ರೂಯತೇ ಪ್ರಖ್ಯಾಯತೇ ಯೇನ ಪುತ್ರೇಣ ತಾದೃಶಂ ॥ ಕರ್ಮಣ್ಯಂ । ಕರ್ಮಸು ಸಾಧುಃ ಕರ್ಮಣ್ಯಃ । ತತ್ರ ಸಾಧುಃ । ಪಾ. ೪-೪-೯೮ । ಇತಿ ಯತ್ । ಯೇ ಚಾಭಾವಕರ್ಮಣೋರಿತಿ ಪ್ರಕೃತಿಭಾವಃ । ತಿತ್ಸ್ವರಿತಮಿತಿ ಸ್ವರಿತತ್ವಂ । ಏವಮುತ್ತರತ್ರಾಪಿ ಯತ್ಪ್ರತ್ಯಯಃ। ಸಭೇಯಂ । ಢಶ್ಛಂದಸಿ। ಪಾ. ೪-೪-೧೦೬ । ಇತಿ ತತ್ರ ಸಾಧುರಿತ್ಯರ್ಥೇ ಢಪ್ರತ್ಯಯಃ । ದದಾಶತ್ । ದಾಶೃ ದಾನೇ । ಲೇಟ್ಯಡಾಗಮಃ । ಬಹುಲಂ ಛಂದಸೀತಿ ಶಪಃ ಶ್ಲುಃ ॥

ಪ್ರತಿಪದಾರ್ಥ

ಯಃ—ಯಾವ ಯಜಮಾನನು । **ದದಾಶತ್**— (ಹವಿಸ್ಸನ್ನು) ಅರ್ಪಿಸುತ್ತಾನೆಯೋ । **ಅಸ್ಮೈ (ತಸ್ಮೈ)**— ಆ ಯಜಮಾನನಿಗೆ । **ಸೋಮಃ**—ಸೋಮದೇವನು । **ಧೇನುಂ**—(ಕರುವಿನೊಂದಿಗೆ ಕೂಡಿದ) ಕರೆಯುವ ಹಸುವನ್ನು । **ದದಾತಿ**— ಕೊಡುತ್ತಾನೆ । **ಸೋಮಃ**— ಸೋಮದೇವನು । **ಆಶುಂ**— ವೇಗವಾಗಿ ಓಡತಕ್ಕ । **ಅರ್ವಂತಂ**— ಕುದುರೆಯನ್ನು (ಕೊಡುತ್ತಾನೆ) । **ಸೋಮಃ**— ಸೋಮದೇವನು ।

ಕರ್ಮಣ್ಯಂ—(ಲೌಕಿಕವಾದ) ಕೆಲಸಗಳಲ್ಲಿ ಕುಶಲನೂ । **ಸದನ್ಯಂ**—ಗೃಹಕೃತ್ಯಗಳಲ್ಲಿ ನಿಪುಣನೂ । **ವಿದಥ್ಯಂ**—(ದರ್ಶಪೂರ್ಣಮಾಸಾದಿ) ಯಜ್ಞಕಾರ್ಯಪರನೂ । **ಸಭೇಯಂ**—(ಸಕಲ ಶಾಸ್ತ್ರಗಳ ಜ್ಞಾನದಿಂದ)ಸಭೆಗೆ ಭೂಷಣನೂ **ಪಿತೃಶ್ರವಣಂ**— ತಂದೆಯ ಹೆಸರನ್ನು ಪ್ರಸಿದ್ಧಪಡಿಸುವವನೂ ಆದ । **ವೀರಂ**— ಯೋಗ್ಯನಾದ ಪುತ್ರನನ್ನೂ, ಕೊಡುತ್ತಾನೆ.

ಭಾವಾರ್ಥ

ಯಾವ ಯಜಮಾನನು ಹವಿಸ್ಸನ್ನು ಅರ್ಪಿಸುತ್ತಾನೆಯೋ ಆ ಯಜಮಾನನಿಗೆ ಸೋಮದೇವನು ಕರುವಿನೊಂದಿಗೆ ಕೂಡಿದ ಕರೆಯುವ ಹಸುವನ್ನೂ, ವೇಗವಾಗಿ ಓಡತಕ್ಕ ಕುದುರೆಯನ್ನೂ, ಮತ್ತು ಲೌಕಿಕವಾದ ಕೆಲಸಗಳಲ್ಲಿ ಕುಶಲನೂ, ಗೃಹ ಕೃತ್ಯಗಳಲ್ಲಿ ನಿಪುಣನೂ, ದರ್ಶಪೂರ್ಣಮಾಸಾದಿ ಯಜ್ಞಕಾರ್ಯಪರನೂ, ಸಕಲ ಶಾಸ್ತ್ರಗಳ ಜ್ಞಾನದಿಂದ ವಿದ್ವಾಂಸರ ಸಭೆಗೆ ಭೂಷಣನೂ ಮತ್ತು ತಂದೆಯಹೆಸರನ್ನು ಪ್ರಸಿದ್ಧಪಡಿಸಿ ತಂದೆಗೆ ಗೌರವವನ್ನು ತರುವವನೂ ಆದ ಯೋಗ್ಯನಾದ ಪುತ್ರನನ್ನೂ ಸಹ ಅನುಗ್ರಹಿಸುತ್ತಾನೆ.

English Translation

To him who presents offerings, Soma gives a milch-cow, a swift horse, and a son who is able in affairs, skilful in domestic concerns, diligent in worships, eminent in Society and who is an honour to his father.

ವಿಶೇಷವಿಷಯಗಳು

ಮಹಾಪಿತೃಯಜ್ಞದಲ್ಲಿ ಸೋಮಃ ಪಿತೃಮಾನ್ ಎಂಬ ದೇವತೆಯನ್ನುದ್ದೇಶಿಸಿ ಹೋಮಮಾಡುವಾಗ **ಸೋಮೋ ಧೇನುಂ** ಎಂಬ ಈ ಋಕ್ಕನ್ನು ಪುರೋನುವಾಕ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದೂ ಮತ್ತು ಆ ಹೋಮದಲ್ಲಿ ಒಂದೊಂದು ಹೋಮಕ್ಕೂ ಎರಡೆರಡು ಪುರೋನುವಾಕ್ಯಾ ಮಂತ್ರಗಳನ್ನು ಒಟ್ಟಾಗಿ ಪರಿಸಬೇಕೆಂದೂ ಆಶ್ವಲಾಯನ ಶ್ರೌತಸೂತ್ರದ **ತಥೈವ ದಕ್ಷಿಣಾಗ್ನೇೀ** ಎಂಬ ಖಂಡದಲ್ಲಿ **ಸೋಮೋ ಧೇನುಂ ಸೋಮೋ ಅರ್ವಂತಮಾಶುಂ ತ್ವಂ ಸೋಮ ಪಿತೃಭಿಃ ಸಂವಿದಾನಃ** ಎಂಬ ಸೂತ್ರವು ನಿರ್ದೇಶಿಸುವುದು (ಆ. ೨-೧೯).

ಅರ್ವಂತಂ—ಕುದುರೆಯನ್ನು **ಅತ್ಯಃ, ಹಯಃ, ಅರ್ವಾ** ಎಂದು ಅಶ್ವನಾಮಗಳಲ್ಲಿ (ನಿ. ೨ ೨೭) ಪಠಿತವಾಗಿದೆ.

ವಿದಥ್ಯಂ - **ವಿದಂತ್ಯೇಷು ದೇವಾ ಇತಿ ವಿದಥಾಃ** । ಯಜ್ಞಗಳಲ್ಲಿ ದೇವತೆಗಳ ಸ್ವರೂಪನನ್ನು ಚೆನ್ನಾಗಿ ತಿಳಿಯತ್ತಾರಾದ್ದರಿಂದ ವಿದಥವೆಂದರೆ ಯಜ್ಞವು. ಇಂತಹ ದರ್ಶಪೂರ್ಣಮಾಸಾದಿಯಾಗಗಳಲ್ಲಿ ನಿರತನಾಗಿರುವವನಿಗೆ **ವಿದಥ್ಯನೆಂದು** ಹೆಸರು. **ವಿದಥಾನಿ ಪ್ರಚೋವೆರ್ಯ** (ಋ. ಸಂ. ೨-೨೭-೭) ಎಂಬ ಋಕ್ಕಿಗೆ ನಿರ್ವಚನವನ್ನು ಮಾಡುವಾಗ ನಿರುಕ್ತಕಾರರು **ವಿದಥಾನಿ ವೇದನಾನಿ** । (ನಿ. ೭-೮) ಎಂದರೆ ತಿಳಿವಳಿಕೆ ಎಂಬರ್ಥವನ್ನು ಹೇಳಿರುತ್ತಾರೆ. ಆದುದರಿಂದ ಇಂತಹ ಜ್ಞಾನಸಾಧನವಾದ ಯಜ್ಞಗಳಲ್ಲಿ ನಿರತನಾಗನನಿಗೆ **ವಿದಥ್ಯನೆಂದು** ಹೇಳುತ್ತಾರೆ.

ಸಭೇಯಂ—ವಿದ್ವತ್ಸಭೆಯಲ್ಲಿ ಯೋಗ್ಯನು ಎಂದರೆ ಸಕಲಶಾಸ್ತ್ರನಿಪುಣನೆಂದರ್ಥವು.

ವಿದಥ್ಯಂ ಸಭೇಯಂ— ಈ ಎರಡು ಪದಗಳನ್ನು ಸಹ ಸ್ಕಂದಸ್ವಾಮಿಗಳು ವಿಶೇಷಣ ಮತ್ತು ವಿಶೇಷ್ಯ ವನ್ನಾಗಿಮಾಡಿ ವಿದ್ವಾಂಸರುಗಳಿರುವ ಸಭೆಗೆ ಯೋಗ್ಯನಾದ ಎಂದರೆ ಶಾಸ್ತ್ರಜ್ಞನಾದವನು ಎಂದು ಅರ್ಥವಿವರಣೆ ಮಾಡಿರುವರು.

ಪಿತೃಶ್ರವಣಂ—ತಂದೆಯ ಹೆಸರನ್ನು ಎಲ್ಲರೂ ಕೇಳುವಂತೆ ಮಾಡುವವನು ಎಂದರೆ ತಂದೆಯ ಹೆಸರನ್ನು ಪ್ರಸಿದ್ಧಿಗೆ ತರುವವನು ಎಂದು ಭಾಷ್ಯಕಾರರೂ, ಪಿತೃಗಳು ಹೇಳಿದಂತೆ ಕೇಳುವವನಾದ್ದರಿಂದ ವಿನೀತನು ಎಂದು ಸ್ಕಂದಸ್ವಾಮಿಗಳೂ ಅರ್ಥಮಾಡಿರುವರು.

ವ್ಯಾಕರಣಪ್ರಕ್ರಿಯಾ

ಅರ್ವಂತಮ್—ಋ ಗತೌ ಧಾತು. ವನಿಪ್ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ಗುಣ. ಅರ್ವನ್ ಶಬ್ದವಾಗುತ್ತದೆ. ದ್ವಿತೀಯಾಏಕವಚನ ಪರವಾದಾಗ **ಅರ್ವಣಸ್ತ್ರಸಾವನಞ್ಞಃ**—ಎಂಬುದರಿಂದ ತೃ ಅಂತಾದೇಶ. ಉಗಿತ್ತಾದುದರಿಂದ ನುಮಾಗಮ ಅನುಸ್ವಾರ ಪರಸವರ್ಣ. ಅರ್ವನ್ತಮ್ ಎಂದು ರೂಪವಾಗುತ್ತದೆ.

ಕರ್ಮಣ್ಯಮ್—ಕರ್ಮಸು ಸ್ಥಾಧುಃ ಕರ್ಮಣ್ಯಃ **ತತ್ರ ಸಾಧುಃ**-(ಪಾ.ಸೂ. ೪-೪-೯೮) ಎಂಬುದರಿಂದ ಸಾಧ್ವರ್ಥದಲ್ಲಿ ಯತ್ ಪ್ರತ್ಯಯಃ ಕರ್ಮನ್+ಯ ಎಂದಿರುವಾಗ **ಯೇಚಾಭಾವ ಕರ್ಮಣೋಃ**—ಎಂಬುದರಿಂದ ಅನ್ನಿಗೆ ಪ್ರಕೃತಿಭಾವ ಬರುತ್ತದೆ. **ತಿತ್ಸ್ವರಿತಮ್**-(ಪಾ. ಸೂ. ೬-೧-೧೮೫) ಎಂಬುದರಿಂದ ಸ್ವರಿತಸ್ವರ ಬರುತ್ತದೆ. ಹೀಗೆಯೇ ಸನ್ಯಂ ವಿದಥ್ಯಮ್ ಎಂಬಲ್ಲಿಯೂ ಯತ್ ಪ್ರತ್ಯಯ. ಸ್ವರಿತಸ್ವರ.

ದದಾತಿ—ಡುದಾಞ್ ದಾನೇ ಧಾತು. ಜುಹೋತ್ಯಾದಿ. ಲಟ್ ಪ್ರಥಮಪುರುಷ ಏಕವಚನಾಂತ ರೂಪ. ತಿಬಂತನಿಘಾತಸ್ವರ ಬರುತ್ತದೆ.

ಸಭೇಯಮ್—ಸಭಾಯಾಂ ಸಾಧುಃ ಸಭೇಯಃ **ಢಶ್ಛಂದಸಿ**-(ಪಾ. ಸೂ. ೪-೪-೧೦೬) ಎಂಬುದರಿಂದ ಸಾಧ್ವರ್ಥದಲ್ಲಿ ಛಂದಸಿನಲ್ಲಿ ಢ ಪ್ರತ್ಯಯ. **ಆಯನೇಯೀ**—ಸೂತ್ರದಿಂದ ಢ ಎಂಬುದಕ್ಕೆ ಏಯಾದೇಶ. **ಯಸ್ಯೇತಿ ಚ**—ಸೂತ್ರದಿಂದ ಸಭಾ ಎಂಬಲ್ಲಿರುವ ಆಕಾರಕ್ಕೆ ಲೋಪ. ಪ್ರತ್ಯಯಸ್ವರದಿಂದ ಏಕಾರ ಉದಾತ್ತ ವಾಗುತ್ತದೆ.

ದದಾಶತ್—ದಾಶೃ ದಾನೇ ಧಾತು. ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್. **ಇತಶ್ಚಲೋಪಃ**—ಎಂಬುದರಿಂದ ಇಕಾರಲೋಪ. **ಲೇಟೋಽಡಾಟೌ**—ಎಂಬುದರಿಂದ ಆಡಾಗಮ. **ಬಹುಲಂ ಛಂದಸಿ**—ಎಂಬುದರಿಂದ ಶಪಿಗೆ ಶ್ಲು ಆದೇಶ. **ಶ್ಲೌ**—ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸದಲ್ಲಿ ಆದಿಹಲ್‌ಶೇಷ. ಹ್ರಸ್ವ. ಯಃ ಎಂದು ಹಿಂದೆ ಸಂಬಂಧವಿರುವುದರಿಂದ **ಯೋದ್ಭ್ಯೋತ್ಸ್ನಾನ್ನಿತ್ಯಮ್**-(ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಸ್ವರ ಪ್ರತಿಷೇಧ. **ಅಭ್ಯಸ್ತಾನಾಮಾದಿಃ**-(ಪಾ. ಸೂ. ೬-೧-೧೮೯) ಎಂಬುದರಿಂದ ಆದ್ಯುದಾತ್ತ ಸ್ವರ ಬರುತ್ತದೆ. ॥ ೨೦ ॥

ಸಂಹಿತಾಪಾಠಃ

ಅಷಾಳ್ಹಂ ಯುತ್ಸು ಪೃತನಾಸು ಪಪ್ರಿಂ ಸ್ವರ್ಷಾಮಪ್ಸಾಂ
ವೃಜನಸ್ಯ ಗೋಪಾಂ।
ಭರೇಷುಜಾಂ ಸುಕ್ಷಿತಿಂ ಸುಶ್ರವಸಂ ಜಯಂತಂ ತ್ವಾಮನು ಮ-
ದೇಮ ಸೋಮ ॥ ೨೧॥

ಪದಪಾಠಃ

ಅಷಾಳ್ಹಂ । ಯುತ್ಸು । ಪೃತನಾಸು । ಪಪ್ರಿಂ । ಸ್ವರ್ಷಾಂ । ಅಪ್ಸಾಂ ।
ವೃಜನಸ್ಯ । ಗೋಪಾಂ ।
ಭರೇಷುಜಾಂ । ಸುಕ್ಷಿತಿಂ । ಸುಶ್ರವಸಂ । ಜಯಂತಂ । ತ್ವಾಂ । ಅನು ।
ಮದೇಮ । ಸೋಮ ॥ ೨೧ ॥

ಸಾಯಣಭಾಷ್ಯಂ

ಏಕಾದಶಿನಸ್ಯ ಸೌಮ್ಯಸ್ಯ ಪಶೋಃ ಪುರೋಡಾಶಸ್ಯಾಷಾಳ್ಹಂ ಯುತ್ಸ್ವಿತ್ಯೇಷಾ ಯಾಜ್ಯಾ। ಸ್ರದಾನಾನಾಮಿತಿ ಖಂಡೇ ಸೂತ್ರಿತಂ। ಅಷಾಳ್ಹಂ ಯುತ್ಸು ಪೃತನಾಸು ಪಪ್ರಿಂ ಯಾ ತೇ ಧಾಮಾನಿ ಹವಿಷಾ ಯಜಂತಿ। ಆ. ೩-೭। ಇತಿ ॥

ಯುತ್ಸು ಯುದ್ಧೇಷ್ವಷಾಳ್ಹಂ। ಶತ್ರುಭಿರನಭಿಭವನೀಯಂ ತಥಾ ಪೃತನಾಸು ಸೇನಾಸು ಪಪ್ರಿಂ ಜಯಸ್ಯ ಪೂರಯಿತಾರಂ ಸ್ವರ್ಷಾಂ ಸ್ವರ್ಗಸ್ಯ ಸನಿತಾರಂ ದಾತಾರಂ ಅಪ್ಸಾಮಪಾಂ ವೃಷ್ಟಿಲಕ್ಷಣಾನಾಮುದಕಾನಾಂ ದಾತಾರಂ। ಯದ್ವಾ। ಅಪ್ಸಾಮಪ್ಸಾತ್ಮಕಂ ಭಕ್ಷಕರಹಿತಂ। ಸರ್ವೇಷಾಮನುಗ್ರಾಹಕಮಿತ್ಯರ್ಥಃ। ವೃಜನಸ್ಯ ಗೋಪಾಂ। ವೃಜ್ಯತೇಽನೇನೇತಿ ವೃಜನಂ ಬಲಂ। ತಸ್ಯ ಗೋಪಾಂ ಗೋಪಯಿತಾರಂ ರಕ್ಷಿತಾರಂ ಭರೇಷುಜಾಂ। ಭ್ರಿಯಂತ ಏಷು ಹವೀಂಷೀತಿ ಭರಾ ಯಾಗಾಃ। ತೇಷು ಪ್ರಾದುರ್ಭವಂತಂ ಸುಕ್ಷಿತಿಂ ಶೋಭನನಿವಾಸಸ್ಥಾನಂ ಸುಶ್ರವಸಂ ಶೋಭನಯಶಸ್ಕಂ ಜಯಂತಂ ಶತ್ರೂನಭಿಭ-

ವಂತಂ। ಹೇ ಸೋಮ ಈದೃಗ್ಭೂತಂ ತ್ವಾಮನುಲಕ್ಷ್ಯ ಮದೇಮ ಹರ್ಷಯುಕ್ತಾ ಭವೇಮ ॥ ಅಷಾಳ್ಹಂ। ಸಹ ಅಭಿಭವೇ । ಸಾಢ್ಯಾ ಸಾಢ್ವಾ ಸಾಢೇತಿ ನಿಗಮೇ। ಪಾ. ೬-೩-೧೦೩ । ಇತಿ ನಿಪಾತನಾತ್ ಸಹಿವಹೋರೋದವರ್ಣಸ್ಯ। ಪಾ. ೬-೩-೧೧೨ । ಇತ್ಯೋತ್ವಾಭಾವಃ। ಸಹೇಃ ಸಾಡಃ ಸ ಇತಿ ಷತ್ವಂ। ಪಪ್ರಿಂ। ಪ್ಯಾ ಪಾಲನಪೂರಣಯೋಃ। ಆದೃಗಮಹನಜನ ಇತಿ ಕಿನ್ಪ್ರತ್ಯಯಃ। ಸ್ವರ್ಷಾಂ। ಸ್ವಃ ಸ್ವರ್ಗಂ ಸನೋತೀತಿ ಸ್ವರ್ಷಾಃ। ಷಣು ದಾನೇ। ಜನಸನಖನೇತಿ ವಿಟ್। ವಿಡ್ವನೋರನುನಾಸಿಕಸ್ಯಾದಿತ್ಯಾತ್ವಂ। ಅಸ್ಮಾಂ । ಅಸ್ಮಬ್ಭ್ಯೋಪಪದಾತ್ಸನೋತೇಃ ಪೂರ್ವವದ್ವಿಟ್ । ಯದ್ವಾ । ಪ್ಸಾ ಭಕ್ಷಣೇ । ಪ್ಸಾತಿ ಭಕ್ಷಯತೀತಿ ಪ್ಸಾಃ। ಕ್ವಿಪ್ಸೇತಿ ಕ್ವಿಪ್ । ನ ವಿದ್ಯತೇ ಪ್ಸಾ ಅಸ್ಯೇತಿ ಬಹುವ್ರೀಹೌ ನಞ್ಸ್ನಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಭರೇಷುಜಾಂ । ಜನೀ ಪ್ರಾದುರ್ಭಾವೇ । ಪೂರ್ವವದ್ವಿಟ್ ಆತ್ವಂ ಚ। ಮದೇಮ। ಮದೀ ಹರ್ಷೇ। ವ್ಯತ್ಯಯೇನ ಶಪ್ ॥

ಸ್ವರಿತಾರ್ಥ

ಸೋಮ—ಎಲೈ ಸೋಮದೇವನೇ। **ಯುತ್ಸು**—ಯುದ್ಧಗಳಲ್ಲಿ। **ಅಷಾಳ್ಹಂ**—(ಶತ್ರುಗಳಿಂದ) ಸೋಲಿಸಲ್ಪಡದಿರುವವನೂ। **ಪೃತನಾಸು**—ಸೇನೆಗಳಲ್ಲಿ। **ಪಪ್ರಿಂ**— (ಜಯವನ್ನು) ತುಂಬುವವನೂ। **ಸ್ವರ್ಷಾಂ**—ಸ್ವರ್ಗವನ್ನು ಸೇರಿಸುವವನೂ। **ಅಪ್ಸಾಂ**— ವೃಷ್ಟಿರೂಪವಾದ ಜಲವನ್ನು ಕೊಡುವವನೂ (ಅಥವಾ ಎಲ್ಲರನ್ನು ಅನುಗ್ರಹಿಸುವವನೂ)। **ವೃಜನಸ್ಯ**—ಬಲಕ್ಕೆ। **ಗೋಪಾಂ**—ರಕ್ಷಕನೂ । **ಭರೇಷುಜಾಂ**—ಯಜ್ಞಗಳಲ್ಲಿ ಉತ್ಪನ್ನನಾಗುವವನೂ। **ಸುಕ್ಷಿತಿಂ**—ಶ್ರೇಷ್ಠವಾದ ನಿವಾಸಗೃಹಗಳುಳ್ಳವನೂ। **ಸುಶ್ರವಸಂ**—ಪ್ರಸಿದ್ಧವಾದ ಹೆಸರುಳ್ಳವನೂ। **ಜಯಂತಂ**—(ಶತ್ರುಗಳನ್ನು) ಜಯಿಸುವವನೂ ಆದ। **ತ್ವಾಂ ಅನು**—ನಿನ್ನನ್ನು (ಧ್ಯಾನಿಸುತ್ತಾ)। **ಮದೇಮ**—ನಾವು ಹರ್ಷಪಡುತ್ತೇವೆ ॥

ಭಾವಾರ್ಥ

ಎಲೈ ಸೋಮದೇವನೇ, ಯುದ್ಧಗಳಲ್ಲಿ ಶತ್ರುಗಳಿಂದ ಸೋಲಿಸಲ್ಪಡದಿರುವವನೂ, ನಿನ್ನ ಸೇನೆಗಳಿಗೆ ಜಯವನ್ನು ಗಳಿಸುವವನೂ, ನಮ್ಮನ್ನೆಲ್ಲಾ ಸ್ವರ್ಗಕ್ಕೆ ಸೇರಿಸುವವನೂ, ವೃಷ್ಟಿರೂಪವಾದ ಜಲವನ್ನು ಕೊಡತಕ್ಕವನೂ ನಮ್ಮ ಬಲದ ರಕ್ಷಕನೂ, ಯಜ್ಞಗಳ ನಡುವೆ ಉತ್ಪನ್ನನಾಗುವವನೂ, ಶ್ರೇಷ್ಠವಾದ ನಿವಾಸಗೃಹಗಳುಳ್ಳವನೂ, ಪ್ರಸಿದ್ಧವಾದ ಯಶಸ್ಸುಳ್ಳವನೂ ಮತ್ತು ಶತ್ರುಗಳನ್ನು ಜಯಿಸುವವನೂ ಆದ ನಿನ್ನನ್ನು ಕುರಿತು ಧ್ಯಾನಿಸುತ್ತಾ ನಾವು ಹರ್ಷಪಡುತ್ತೇವೆ.

English Translation

O Soma, we rejoice contemplating you invincible in battle, triumphant amongst hosts, the granter of heaven, the giver of rain, the preserver of strength, born amidst sacrifices, occupying a brilliant dwelling, renowned and victorious.

ವಿಶೇಷ ವಿಷಯಗಳು

ಏಕಾದಶಿನವೆಂಬ ಯಾಗವಲ್ಲಿ ಸೋಮದೇವತಾಕವಾದ ಪಶುಪುರೋಡಾಶಹೋಮವನ್ನು ಮಾಡುವಾಗ **ಅಷಾಳ್ಹಂ ಯುತ್ಸು** ಎಂಬ ಈ ಋಕ್ಕನ್ನು ಯಾಜ್ಯಾನುಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ

ಶ್ರೌತಸೂತ್ರದ **ಪೃದಾನಾನಾಂ** ಎಂಬ ಖಂಡದಲ್ಲಿ **ಅಷಾಳ್ಹಂ ಯುತ್ಸು ಪೃತನಾಸು ಪಪ್ರಿಂ ಯಾ ತೇ ಧಾಮಾನಿ ಸವಿಷಾ ಯಜಂತಿ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೩-೭).

ಅಷಾಹ್ಹಂ—ಷಹ ಅಭಿಭವೇ । ಷಾಳ್ಹಂ ಅಂದರೆ ಸೋಲಿಸಲ್ಪಡುವವನು ಎಂದೂ ಅಷಾಹ್ಯಂ ಎಂದರೆ ಸೋಲಿಸಲ್ಪಡದವನು ಎಂದರೆ ಅಪ್ರತಿಪತನಾದವನೂ ಎಂದರ್ಥವು.

ಪೃತನಾಸು—ರಣಃ, ವಿನಾಕ್ ವಿಖಾದಃ ಇತ್ಯಾದಿ ಸಂಗ್ರಾಮನಾಮಗಳಲ್ಲಿ (ನಿ. ೩-೯) ಪಠಿತವಾಗಿರುವುದರಿಂದ **ಪೃತನಾಃ** ಅಂದರೆ ಸಂಗ್ರಾಮವೆಂದರ್ಥವು. **ಪೃತನಾಸು**—ಯುದ್ಧಗಳಲ್ಲಿ ; ಈ ಶಬ್ದವು ಯಾವಾಗಲೂ ಬಹುವಚನದಲ್ಲಿಯೇ ಉಪಯೋಗಿಸಲ್ಪಡುವುದು.

ಪಪ್ರಿಂ—ಪೃ ಪಾಲನಪೂರಣಯೋಃ ಎಂಬ ಪೂರಣಾರ್ಥವನ್ನು ಕೊಡುವ **ಪೃ** ಧಾತುವಿನಿಂದ **ಪಪ್ರಿಃ** ಎಂಬ ಶಬ್ದವಾಗಿ ಪೂರಕನು ಅಂದರೆ ತುಂಬಿಕೊಡುವವನು ಎಂದರ್ಥವಾಗುತ್ತದೆ. ಸಾಯಣರು ಈ ಶಬ್ದಕ್ಕೆ **ಜಯಸ್ಯ ಪೂರಯಿತಾರಂ ।** ಅಂದರೆ ಜಯನನ್ನು ತುಂಬಿಸಿಕೊಡುವವನು ಎಂದೂ ಸ್ಕಂದಸ್ವಾಮಿಗಳು ಮೊದಲನೆಯ ಅರ್ಥವನ್ನು ತೆಗೆದುಕೊಂಗು, **ಸಂಗ್ರಾಮೇಷು ಯಷ್ಟೄಣಾಂ ಸ್ತೋತೄಣಾಂ ಚ ಪಾಲಯಿತಾರಂ ।** ಯುದ್ಧಗಳಲ್ಲಿ ಭಕ್ತರನ್ನು ಪಾಲಿಸುವವನು ಎಂದೂ ವಿವರಿಸುತ್ತಾರೆ. ಋಗರ್ಥದೀಪಿಕೆಯಲ್ಲಿಯೂ ಸಹ ಪಾಲಯಿತಾರಂ ಎಂದೇ ಇದೆ. ಇಲ್ಲಿ ಯಾವ ಅರ್ಥವನ್ನು ಹೇಳಿದರೂ ವ್ಯತ್ಯಾಸವಿಲ್ಲ. (ಋ. ಸಂ. ೧-೫೨-೩) ಇತ್ಯಾದಿ ಸ್ಥಳಗಳಲ್ಲಿ **ಪಪ್ರಿರಂಧಸಃ** ಅನ್ನುವುದಕ್ಕೆ **ಅನ್ನಸ್ಯ ದಾತಾ** ಎಂದೂ ಆಗುತ್ತದೆ.

ಸ್ವರ್ಷಾಂ—ಸ್ವರ್ಗಸ್ಯ ಸನಿತಾರಂ ದಾತಾರಂ । ಸ್ವರ್ಗವು ಲಭಿಸುವಂತೆ ಮಾಡುವ, ಸ್ವರ್ಗದಾತೃವನ್ನು.

ಅಸ್ಸಾಂ—ಅಸಾಂ ವೃಷ್ಟಿಲಕ್ಷಣಾನಾಂ ಉದಕಾನಾಂ ದಾತಾರಂ । ವೃಷ್ಟ್ಯುದಕಗಳನ್ನು ಒದಗಿಸುವವನನ್ನು ಎಂದೂ ಅಥವಾ **ಪ್ಸಾ ಭಕ್ಷಣೇ ಪ್ಸಾತಿ ಭಕ್ಷಯತೀತಿ ಪ್ಸಾಃ ನ ವಿದ್ಯತೇ ಪ್ಸಾ ಅಸ್ಯೇತಿ.** ಭಕ್ಷಕರ ಹಿತನಾಗುವರಿಂದ ಸರ್ವರ ಅನುಗ್ರಾಹಕನನ್ನು ಎಂಬರ್ಥವನ್ನು ಮಾಡುತ್ತಾರೆ. ಸಾಧಾರಣವಾಗಿ **ಅಪ್ಸಾಃ** ಎಂಬ ವಿಶೇಷಣವು ಬರುವ ಋ. ಸಂ. ೯-೬೫-೨೦ ; ೯-೭೧-೪ ; ೯-೪೪-೧ ಮುಂತಾದ ಋಕ್ಕುಗಳಲೆಲ್ಲಾ **ಅಪ್ಸಾಃ** ಅಂದರೆ **ಅಪಾಂ-ದಾತಾ** ಎಂದೇ ಆಗುತ್ತದೆ. ಆದುದರಿಂದ ಇಲ್ಲಿಯೂ ಅದೇ ಅರ್ಥವು ಸಹಜವಾಗಿರುತ್ತದೆ.

ವೃಜನಸ್ಯ ಗೋಪಾಂ—ವೃಜನವೆಂದರೆ ಬಲವು (ನಿ. ೩-೯) ಬಲದ ರಕ್ಷಕನನ್ನು.

ಭರೇಷುಜಾಂ—ಭರ ಶಬ್ದವು **ಸಂಗ್ರಾಮ** ನಾಮಗಳಲ್ಲಿ ಪಠಿತವಾಗಿದೆ (ನಿ. ೩-೯) **ಭರೇಷು** ಅಂದರೆ ಯುದ್ಧಗಳಲ್ಲಿ. **ಜನಿರತ್ರೆ ಸಾಮರ್ಥ್ಯಾಜ್ಜಯತೇರರ್ಥೇ । ಸಂಗ್ರಾಮೇಷು ಜೇತಾರಂ ।** ಯುದ್ಧಗಳಲ್ಲಿ ಜಯಿಸುವವನನ್ನು ಎಂಬರ್ಥವನ್ನು ಸ್ಕಂದಸ್ವಾಮಿಗಳೂ, **ಭ್ರಿಯಂತೇ ಏಷು ಹವೀಂಷೀತಿ ಭರಾಃ ಯಾಗಾಃ। ತೇಷು ಪ್ರಾದುರ್ಭವಂತಂ ।** ಅಂದರೆ ಹವಿಸ್ಸುಗಳನ್ನು ಭರಣ ಮಾಡುವುದರಿಂದ **ಭರಾಃ** ಎಂದರೆ ಯಾಗಗಳು ಎಂದೂ ಅವುಗಳಲ್ಲಿ ಉತ್ಪತ್ತಿಯಿರುವುದರಿಂದ **ಭರೇಷುಜಾಂ** ಎಂದೂ ವಿವರಿಸಿ ಇಲ್ಲಿ ಯಜ್ಞಗಳಲ್ಲಿ ಪ್ರಾದುರ್ಭವಿಸಿದವನನ್ನು ಎಂಬರ್ಥವನ್ನು ಸಾಯಣರೂ ಮಾಡುತ್ತಾರೆ.

ವ್ಯಾಕರಣಪ್ರಕ್ರಿಯಾ

ಅಷಾಹ್ಯಮ್—ಷಹ ಅಭಿಭವೇ ಧಾತು. ಇದಕ್ಕೆ ಕ್ತ್ವಪ್ರತ್ಯಯ ಪರವಾದಾಗ **ಸಾಢ್ಯೈ ಸಾಢ್ವಾ ಸಾಢೇತಿ ನಿಗಮೇ**-(ಪಾ. ಸೂ. ೯-೩-೧೧೩) ಎಂಬುದರಿಂದ ನಿಪಾತಮಾಡಿರುವುದರಿಂದ **ಸಹಿವಹೋರೋದವರ್ಣಸ್ಯ** (ಪಾ.ಸೂ. ೬-೩-೧೧೨) ಎಂಬುದರಿಂದ ಓತ್ವ ಬರುವುದಿಲ್ಲ. **ಸಹೇಃಸಾಢಃಸಃ**—ಎಂಬುದರಿಂದ ಸಕಾರಕ್ಕೆ ಷತ್ವ. ನಞ್‌ತತ್ಪುರುಷ ಸಮಾಸ. **ತತ್ಪುರುಷೇ ತುಲ್ಯಾರ್ಥ**—ಎಂಬುದರಿಂದ ಅವ್ಯಯಪೂರ್ವಪದ ಪ್ರಕೃತಿ ಸ್ವರ|ಬರುತ್ತದೆ.

ಯುತ್ಸು—ಸಪ್ತಮೀಬಹುವಚನರೂಪ. **ಸಾನೇಕಾಚಸ್ತೃತೀಯಾದಿಃ**—ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಪಸ್ಪಿಮ್—ಸ್ಫಾ ಪಾಲನಪೂರಣಯೋಃ ಧಾತು. ಇದಕ್ಕೆ **ಅದ್ಯೈಗಮಹನ ಜನಃ ಕಿಕಿನೌಲಿಟ್‌ಚ** (ಪಾ. ಸೂ. ೩-೨-೧೭೧) ಎಂಬುದರಿಂದ ಕಿನ್‌ಪ್ರತ್ಯಯ. ಲಿಡ್ವದ್ಭಾವವಿರುವುದರಿಂದ ಧಾತುವಿಗೆ ದ್ವಿತ್ವ. ಆಭ್ಯಾಸಕ್ಕೆ ಉರದತ್ವ. ಹಲಾದಿಶೇಷ. ಪ್ರತ್ಯಯನಿಮಿತ್ತವಾಗಿ ಯಣಾದೇಶ. ಪ್ರತ್ಯಯನಿತ್ತಾದುದರಿಂದ **ಘ್ನಿತ್ಯಾದಿರ್ನಿತ್ಯಮ್**—ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ದ್ವಿತೀಯಾಏಕವಚನಾಂತರೂಪ.

ಸ್ವರ್ಷಾಮ್—ಸ್ವಃ ಸ್ವರ್ಗಂ ಸನೋತೀತಿ ಸ್ವರ್ಷಾಃ. ಷಣು ದಾನೇ ಧಾತು. **ಜನಸನಖನ**-(ಪಾ. ಸೂ. ೩-೨-೬೭) ಎಂಬುದರಿಂದ ವಿಟ್. ಇದು ಪರವಾದಾಗ **ವಿಡ್ವನೋರನುನಾಸಿಕಸ್ಯಾತ್** (ಪಾ. ಸೂ. ೬-೪-೪೧) ಎಂಬುದರಿಂದ ಸನಿನ ಅನುನಾಸಿಕನಕಾರಕ್ಕೆ ಆತ್ವ. ದ್ವಿತೀಯಾಏಕವಚನಾಂತರೂಪ. **ಗತಿಕಾರಕೋಪಪದಾತ್‌ಕೃತ್**—ಸೂತ್ರದಿಂದ ಕೃದುತ್ತರಪದಪ್ರಕೃತಿಸ್ವರ ಬರುತ್ತದೆ.

ಅಪ್ಸಾಮ್—ಅಪ್‌ಶಬ್ದ ಉಪಪದವಾಗಿರುವಾಗ ಹಿಂದೆ ಹೇಳಿದಂತೆ ಷಣು ಧಾತುವಿಗೆ ವಿಟ್. ಹಿಂದಿನಂತೆ ಆತ್ವಾದಿ ಪ್ರಕ್ರಿಯಾ. ಅಥವಾ ಪ್ಸಾ ಭಕ್ಷಣೇ ಧಾತು. ಪ್ಸಾತಿ ಭಕ್ಷಯತಿ ಇತಿ ಪ್ಸಾಃ. **ಕ್ವಿಪ್‌ಚ**—ಎಂಬುದರಿಂದ ಕ್ವಿಪ್ ಪ್ರತ್ಯಯ. ನ ವಿದ್ಯತೇ ಪ್ಸಾ ಅಸ್ಯ ಇತಿ ಅಪ್ಸಾಃ. ಬಹುವ್ರೀಹಿಸಮಾಸ. **ನಞ್‌ಸುಭ್ಯಾಮ್**-(ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದಾಂತೋದಾತ್ತಸ್ವರ ಬರುತ್ತದೆ.

ಭರೇಷುಜಾಮ್—ಜನೀ ಪ್ರಾದುರ್ಭಾವೇ ಧಾತು. ಹಿಂದೆ ಹೇಳಿದಂತೆ ವಿಟ್. ಆತ್ವ. ಭರೇಷು ಜಾಯತೇ ಪ್ರಾದುರ್ಭವತಿ ಇತಿ ಭರೇಷುಜಾಃ **ತತ್ಪುರುಷೇ ಕೃತಿ ಬಹುಲಮ್**—ಎಂಬುದರಿಂದ ಸಪ್ತಮಿಗೆ ಸಮಾಸದಲ್ಲಿ ಅಲುಕ್, ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಸುಕ್ಷಿತಿಮ್—ಕ್ಷಿ ನಿವಾಸಗತ್ಯೋಃ ಧಾತು. **ಕ್ತಿಚ್‌ಕ್ತ್ವಾಚಸಂಜ್ಞಾಯಾಂ**(ಪಾ.ಸೂ.—ಎಂಬುದರಿಂದ ಕ್ತಿಚ್‌ಪ್ರತ್ಯಯ. **ಚಿತಃ**—ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ಸಮಾಸದಲ್ಲಿ ಕೃದುತ್ತರಪದ ಪ್ರಕೃತಿಸ್ವರ.

ಜಯೆಂತಮ್—ಜಿ ಜಯೇ ಧಾತು. ಲಡರ್ಥದಲ್ಲಿ ಶತೃಪ್ರತ್ಯಯ. ಶಪ್‌ವಿಕರಣ. ತನ್ನಿಮಿತ್ತವಾಗಿ ಧಾತುವಿಗೆ ಗುಣ. ಅಯಾದೇಶ. ಜಯತ್ ಶಬ್ದವಾಗುತ್ತದೆ. ದ್ವಿತೀಯಾ ಏಕವಚನದಲ್ಲಿ ಉಗಿತ್ತಾದುದರಿಂದ ನುಮಾಗಮ. ಧಾತುಸ್ವರ ಉಳಿಯುತ್ತದೆ.

ಮದೇಮ—ಮದೀ ಹರ್ಷೇ. ಧಾತು. ದಿವಾದಿ. ವಿಧಿಲಿಙ್ ಉತ್ತಮಪುರುಷದಲ್ಲಿ ಮಸ್‌ಪ್ರತ್ಯಯ. **ನಿತ್ಯಂಙಿತಃ**—ಎಂಬುದರಿಂದ ಸಕಾರಕ್ಕೆ ಲೋಪ **ವ್ಯತ್ಯಯೋಬಹುಲಮ್**—ಎಂಬುದರಿಂದ ಶ್ಯನ್ನಿಗೆ ಶಪ್. ಯಾಸುಟಿಗೆ **ಅತೋಯೇಯಃ** — ಎಂಬುದರಿಂದ ಇಯಾದೇಶ. **ಲೋಪೋವ್ಯೋರ್ವಲಿ** — ಎಂಬುದರಿಂದ ಯಲೋಪ. ಅತಿಜಂತವು ಪರವಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸೋಮ—**ಆಮಂತ್ರಿತಸ್ಯ ಚ**—ಎಂಬುದರಿಂದ ನಿಘಾತಸ್ವರ ಬರುತ್ತದೆ ॥ ೬೧ ॥

———— :o: ————

॥ ಸಂಹಿತಾಪಾಠಃ ॥

ತ್ವಮಿಮಾ ಓಷಧೀಃ ಸೋಮ ವಿಶ್ವಾಸ್ತ್ವಮಪೋ ಅಜನಯ-
ಸ್ತ್ವಂ ಗಾಃ।
ತ್ವಮಾ ತತಂಥೋರ್ವಂತರಿಕ್ಷಂ ತ್ವಂ ಜ್ಯೋತಿಷಾ ವಿ ತಮೋ
ವವರ್ಥ ॥ ೬೨॥

ಪದಪಾಠಃ

ತ್ವಂ । ಇಮಾಃ । ಓಷಧೀಃ । ಸೋಮ । ವಿಶ್ವಾಃ । ತ್ವಂ । ಅಪಃ । ಅಜನಯಃ ।
ತ್ವಂ । ಗಾಃ ।
ತ್ವಂ । ಆ । ತತಂಥ । ಉರು । ಅಂತರಿಕ್ಷಂ । ತ್ವಂ । ಜ್ಯೋತಿಷಾ । ವಿ । ತಮಃ ।
ವವರ್ಥ ॥ ೬೨ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಮಿಮಾ ಭೂಮ್ಯಾಂ ವರ್ತಮಾನಾ ವಿಶ್ವಾಃ ಸರ್ವಾ ಓಷಧೀರಜನಯಃ । ಉತ್ಪಾದಿತವಾನಸಿ । ತಥಾ ತ್ವಮಪಸ್ತಾಸಾಮೋಷಧೀನಾಂ ಕಾರಣಭೂತಾನಿ ವೃಷ್ಟ್ಯುದಕಾನ್ಯಜನಯಃ ।

ತಥಾ ತ್ವಂ ಗಾಃ ಸರ್ವಾನ್ಸ್ರೋತೂನುದಸಾದಯೋಃ । ಉರು ವಿಸ್ತೀರ್ಣಮಂತರಿಕ್ಷಂ ತ್ವಮಾ ತತಂಥ । ವಿಸ್ತಾರಿತವಾನಸಿ । ತಸ್ಮಿನ್ನಂತರಿಕ್ಷೇ ಯತ್ತ್ವಮೋ೭ಸ್ಮದ್ವೃಷ್ಟಿನಿರೋಧಕಮಂಧಕಾರಂ ತದಪಿ ತ್ವಂ ಜ್ಯೋತಿಷಾತ್ಮೀಯೇನ ಪ್ರಕಾಶೇನ ವಿ ವವರ್ಥ । ವಿವೃತಂ ವಿಶ್ಲಿಷ್ಟಂ ವಿನಷ್ಟಂ ಕೃತವಾನಸಿ ॥ ತತಂಥ । ತನು ವಿಸ್ತಾರೇ । ವವರ್ಥ । ವೃಞ್ ವರಣೇ । ಉಭಯತ್ರ ಲಿಟಸ್ಥಲಿ ಬಭೂಥಾ ತತಂಥ ಜಗೃಮ್ಭ ವವರ್ಥೇತಿ ನಿಗಮೇ । ಪಾ. ಸೂ. ೬-೪-೬೪ । ಇತಿ ನಿಪಾತ್ಯತೇ ॥

ಪ್ರತಿಪದಾರ್ಥ

ಸೋಮ—ಎಲೈ ಸೋಮದೇವನೇ । **ತ್ವಂ**—ನೀನು । **ಇಮಾಃ ವಿಶ್ವಾಃ ಓಷಧೀಃ**—(ಭೂಮಿಯ ಮೇಲಿರತಕ್ಕ) ಈ ಸಕಲವಾದ ಮೂಲಿಕೆಗಳನ್ನೂ। **ಅಜನಯೋಃ**—ಸೃಷ್ಟಿಸಿರುವೆ। **ತ್ವಂ**—ನೀನು। **ಅಪಃ**—(ಇವುಗಳ ಬೆಳವಣಿಗೆಗೆ ಬೇಕಾದ) ನೀರುಗಳನ್ನು (ಸೃಷ್ಟಿಸಿರುವೆ) । **ತ್ವಂ**—ನೀನು । **ಗಾಃ**—ಪಶುಗಳನ್ನೆಲ್ಲಾ ಸೃಷ್ಟಿಸಿರುವೆ । **ಉರು**—ವಿಸ್ತಾರವಾದ । **ಅಂತರಿಕ್ಷಂ**—ಅಂತರಿಕ್ಷವನ್ನು । **ತ್ವಂ**—ನೀನು । **ಆತತಂಥ**—(ಇನ್ನು ಹೆಚ್ಚಾಗಿ) ವಿಸ್ತಾರವಾಗುವಂತೆ ಮಾಡಿದ್ದೀಯೆ । **ತಮಃ**— ಅಂಧಕಾರವನ್ನು । **ತ್ವಂ**—ನೀನು । **ಜ್ಯೋತಿಷಾ**— (ನಿನ್ನ) ಪ್ರಕಾಶದಿಂದ । **ವಿ ವವರ್ಥ**—ದೂರಕ್ಕೆಹರಡಿ ನಾಶಮಾಡಿದ್ದೀಯೆ.

॥ ಭಾವಾರ್ಥ ॥

ಎಲೈ ಸೋಮದೇವನೇ, ನೀನು ಈ ಭೂಮಿಯಮೇಲಿರುವ ಸಕಲವಾದ ಮೂಲಿಕೆಗಳನ್ನು ಸೃಷ್ಟಿಸಿರುವೆ ಇವುಗಳ ಬೆಳವಣಿಗೆಗೆ ಬೇಕಾದ ನೀರುಗಳನ್ನು ಸೃಷ್ಟಿಸಿರುವೆ. ಪಶುಗಳನ್ನು ಸೃಷ್ಟಿಮಾಡಿದ್ದೀಯೆ. ವಿಸ್ತಾರವಾದ ಅಂತರಿಕ್ಷವನ್ನು ಇನ್ನು ಹೆಚ್ಚಾಗಿ ವಿಸ್ತಾರವಾಗುವಂತೆ ಮಾಡಿದ್ದೀಯೆ. ನಿನ್ನ ಸ್ವಪ್ರಕಾಶದಿಂದ ಅಂತರಿಕ್ಷಾದಿ ಲೋಕಗಳಲ್ಲಿರುವ ಅಂಧಕಾರವನ್ನೆಲ್ಲಾ ನಾಶಮಾಡಿದ್ದೀಯೆ.

English Translation

O Soma, you have created these herbs, the water and the cows ; you have spread out the spacious firmament ; you have dispelled the darkness with your light.

॥ ವಿಶೇಷವಿಷಯಗಳು ॥

ಓಷಧೀಃ—ಓಷಧಯ ಓಷದ್ಧ್ಯೆಯಂತೀತಿ ವಾ । ಓಷತ್ಯೇನಾಧಯೆಯಂತೀತಿ ವಾ ದೋಷಂ ಧಯೆಯಂತೀತಿ ವಾ । (ನಿ. ೯-೨೭), ಎಂದು ನಿರುಕ್ತಕಾರರು ಮೂರು ವಿಧವಾದ ಅವಯವಾರ್ಥಗಳನ್ನು ಹೇಳಿರುವರು ಮೊದಲನೆಯದಾಗಿ ದಹಿಸು ಎಂಬರ್ಥವನ್ನು ಕೊಡುವ **ಉಷ್ (ಓಷ್)** ಧಾತುವಿನೊಡನೆ ಕುಡಿ ಎಂದಾಗುವ **ಧೇ (ಟ್) ಪಾನೇ** ಎಂಬುದು ಸೇರಿಕೊಂಡು **ಓಷಧೀಃ** ಅಂದರೆ ದೇಹದ ಒಳಗಡೆ ದಾಹಾತ್ಮಕವಾದ ರೋಗಗಳನ್ನು ಹೀರುವುದು ಅಥವಾ ರೋಗದ ದಾಹವಿರುವಾಗ ಪ್ರಾಣಿಗಳು ಕುಡಿಯುತ್ತಾರೆ **(ಓಷತ್ಯೇನಾ ಧಯಂತಿ)** ಎಂದಾಗುತ್ತದೆ. ಮತ್ತು **ದೋಷಂ ಧಯಂತೀತಿ ವಾ ।** ವಾತಾದಿದೋಷಗಳನ್ನು ಹಿಂಡುತ್ತಾನೆ ಆದುದರಿಂದ ಇವಕ್ಕೆ ಓಷಧ್ಯಃ ಎಂದು ಹೆಸರು.

ಋಕ್ಸಂಹಿತೆಯ ೧೦ನೆಯ ಮಂಡಲದ ೯೭ನೆಯ ಸೂಕ್ತದಲ್ಲಿ ಓಷಧಿಗಳ ಉತ್ಪತ್ತಿ, ಸ್ವರೂಪ, ಪ್ರಯೋಜನ ಇವುಗಳನ್ನೆಲ್ಲಾ ವಿವರಿಸಿ ಮುಖ್ಯವಾಗಿ ಸೋಮನಿಗೂ ಓಷಧಿಗಳಿಗೂ ಇರುವ ಪರಸ್ಪರಸಂಬಂಧವು ವಿವರಿಸಲ್ಪಟ್ಟಿರುವುದು. **ಯಾ ಓಷಧೀಃ ಸೋಮರಾಜ್ಞೀಃ** ಎಂದು ೧೫ ಮತ್ತು ೧೯ನೆಯ ಋಕ್ಕುಗಳಲ್ಲಿ ಹೇಳುವಂತೆ ಸೋಮನು ಓಷಧಿಗಳಿಗೆಲ್ಲಾ **ರಾಜಾ** ಅಂದರೆ ಸ್ವಾಮಿಯಾಗಿರುತ್ತಾನೆ. ಓಷಧಿಗಳ ಬೆಳೆವಣಿಗೆಗಳಿಗೆಲ್ಲಾ ಸೋಮನೇ ಕಾರಣನಾಗಿರುವುದರಿಂದ ಅನೇಕಕಡೆ ಓಷಧಿ ಶಬ್ದಪ್ರಯೋಗಮಾಡುವಾಗಲೂ ಸಹ ಅದರ ಕಾರಣನಾದ ಸೋಮನೆಂದೇ ಅರ್ಥವಿರುವುದು. ಉದಾಹರಣೆಗೆ—

ಸೋಮಂ ಮನ್ಯತೇ ಪಪಿವಾ᳕ ಯತ್ಸಂಪಿಂಷಂತ್ಯೋಷಧಿಂ ।
(ಋ.ಸಂ. ೧೦-೮೫-೩)

ಇತ್ಯಾದಿ ಋಕ್ಕುಗಳಲ್ಲಿ ಓಷಧಿ ಮತ್ತು ಸೋಮನಿಗಿರುವ ಪರಸ್ಪರವಾದ ನಿಕಟಸಂಬಂಧವು ಸೂಚಿತವಾಗಿರುವುದು. ಸಮಸ್ತವಾದ ಸಸ್ಯ ಮತ್ತು ಓಷಧಿಗಳ ಬೆಳೆವಣಿಗೆಗಳಿಗೆಲ್ಲಾ ಸೋಮನೇ ಕಾರಣನು. ಮತ್ತು ಓಷಧಿಗಳಲ್ಲಿ ರಸವನ್ನು ನಿರ್ಮಿಸಿರುವಂತೆಯೇ ಗೋವುಗಳಲ್ಲಿಯೂ ಕ್ಷೀರವನ್ನು ತುಂಬಿದನೆಂದೂ ಸಹ ಋ. ಸಂ. ೬-೪೪-೨ರಲ್ಲಿ ಹೇಳಿದೆ.

ತ್ವಂ ಅಹಃ ಅಜನಯಃ—ಸೋಮನನ್ನು ವೃತ್ರಹಂತನೆಂದು ಸಂಬೋಧಿಸಿ, ಪ್ರವಹಿಸುವ ನೀರನ್ನು ಆಕ್ರಮಿಸುತ್ತಲೂ ಮೇಘಗಳನ್ನು ತಡೆದು ಮಳೆಯನ್ನು ಹುಯ್ಯುವಂತೆ ಮಾಡುತ್ತಲೂ ಇರುವ ವೃತ್ರನನ್ನು ಸಂಹಾರ ಮಾಡಿ ವೃಷ್ಟ್ಯುದಕಗಳನ್ನು ಸುರಿಸಿದನು ಎಂದು ವರ್ಣನೆಗಳಿವೆ. ಓಷಧಿಗಳ ಬೆಳೆವಣಿಗೆಗೆ ಬೇಕಾದ ಉದಕಗಳನ್ನು ಸುರಿಸಿದನೆಂದರ್ಥವು.

ಪವಸ್ವ ವೃತ್ರಹಂತಮೋಕ್ಷೀಭಿರನುಮಾದ್ಯಃ ।
(ಋ. ಸಂ. ೯-೩೪-೬)

ಸಂ ದೇವೈಃ ಶೋಭತೇ ವೃಷಾ ಕವಿರ್ಯೋನಾವಧಿ ಶ್ರಿತಃ ।
ವೃತ್ರಹಾ ದೇವವೀತಮಃ ॥
(ಋ. ಸಂ. ೯-೩೫-೩)

ಇತ್ಯಾದಿ ಋಕ್ಕುಗಳಲ್ಲಿ ಸೋಮನನ್ನು ವೃತ್ರಸಂಹಾರಕನನ್ನಾಗಿ ವರ್ಣಿಸಲಾಗಿದೆ. ಈ ಸ್ಥಳಗಳಲ್ಲಿ ವೃತ್ರಶಬ್ದಕ್ಕೆ ಸಾಧಾರಣವಾಗಿ ಮೇಘವೆಂಬ ಅರ್ಥವನ್ನೇ ಹೇಳಬೇಕು (ನಿ. ೨-೧೬).

ಉರು ಅಂತರಿಕ್ಷಂ ಆತತಂಥ—ನೀನು ಅಂತರಿಕ್ಷವನ್ನು ವಿಸ್ತಾರವಾಗುವಂತೆ ಮಾಡಿದೆ ಎಂದರ್ಥವು. ಋಕ್ಸಂಹಿತೆಯ

ಅಯಂ ಪೀಯೂಷಂ ತಿಸೃಷು ಪವತ್ಸ ಸೋಮೋ ದಾಧಾರೋರ್ವ ೦ ತರಿಕ್ಷಂ ।
(ಋ. ಸಂ. ೬-೪೭-೪)

ಅಯಂ ದ್ಯಾವಾಪೃಥಿವೀ ವಿ ಷ್ಕಭಾಯದಯಂ ರಥಮಯುನಕ್ಪ್ತರಶ್ಮಿಂ ।
ಅಯಂ ಗೋಷು ಶಚ್ಯಾ ಪಕ್ವಮಂತಃ ಸೋಮೋ ದಾಧಾರ ದಶಯಂತ್ರಮುತ್ಸಂ ॥
(ಋ. ಸಂ. ೬-೪೪-೨)

ಇತ್ಯಾದಿ ಋಕ್ಕುಗಳಲ್ಲಿ ಸೋಮನು ಅಂತರಿಕ್ಷಾದಿ ಲೋಕಗಳನ್ನೆಲ್ಲಾ ಎತ್ತಿಹಿಡಿದು ಅವೆಲ್ಲವನ್ನೂ ವಿಸ್ತಾರವಾಗುವಂತೆ ಮಾಡಿದನು ಎಂಬ ವಿವರಣೆಯಿದೆ. ಆ ಅಂಶವನ್ನೇ ಇಲ್ಲಿಯೂ ಹೇಳಲಾಗಿದೆ.

ತಮಃ(ವಿ) ವವರ್ಥ— ಅಂಧಕಾರವನ್ನು ನಾಶಮಾಡಿದೆಯೆಂದರ್ಥವು. ಅಂತರಿಕ್ಷದ ಅಂಧಕಾರವನ್ನು ನಾಶಮಾಡಿ ಜ್ಯೋತಿಯನ್ನು ಬೀರಿದನು ಎಂದು ಸೋಮನನ್ನು ಅನೇಕ ಕಡೆಗಳಲ್ಲಿ ಹೊಗಳುವ ಶ್ರುತಿವಾಕ್ಯಗಳಿವೆ.—

ಪವಮಾನ ಯತಂ ಬೃಹಚ್ಛುಕ್ರಂ ಜ್ಯೋತಿರಜೀಜನತ್ ।
ಕೃಷ್ಣಾ ತಮಾಂಸಿ ಜಂಘನತ್ ॥
(ಋ. ಸಂ. ೯-೬೭-೨೪)

ಇತ್ಯಾದಿ ಋಕ್ಕುಗಳು ಈ ವಿಷಯವನ್ನು ಸಮರ್ಥಿಸುವುವು.

। ಸ್ಯಾಕರಣಸ್ಯಕ್ರಿಯಾ ॥

ಅಪಃ—ಅಪ್‌ಶಬ್ದ ದ್ವಿತೀಯಾಬಹುವಚನಾಂತರೂಪ. **ಊಡಿದಂ ಪದಾದಿ**— ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ

ಅಜನಯಃ— ಜನೀ ಪ್ರಾದುರ್ಭಾವೇ ಧಾತು. ಪ್ರಯೋಜಕವ್ಯಾಪಾರತೋರುವುದರಿಂದ **ಹೇತುಮತಿ ಚ** (ಪಾ. ಸೂ. ೩-೧-೨೬) ಎಂಬುದರಿಂದ ಣಿಚ್. **ಜನೀಜೃಷ್**— ಸೂತ್ರದಿಂದ ಧಾತುವಿಗೆ ಮಿತ್ ಸಂಜ್ಞಾ ಬರುವುದರಿಂದ **ಮಿತಾಂ ಹ್ರಸ್ವಃ**-(ಪಾ. ಸೂ. ೬-೪-೯೨) ಎಂಬುದರಿಂದ ಣಿಚ್‌ನಿಮಿತ್ತವಾಗಿ ಬಂದ ವೃದ್ಧಿಗೆ ಹ್ರಸ್ವ. ಲಙ್ ಮಧ್ಯಮಪುರುಷ ಏಕವಚನರೂಪ. ತಿಙಂತನಿಘಾತಸ್ವರ ಬರುತ್ತದೆ.

ತತನ್ಥ—ತನು ವಿಸ್ತಾರೇ ಧಾತು. ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪಿಗೆ ಥಲಾದೇಶ. ಭಾಂದಸವಾಗಿ ಇಡಭಾವ. ಲಿನ್ಮಿತ್ತವಾಗಿ ಧಾತುವಿಗೆ ದ್ವಿತ್ವ. ಅಭ್ಯಾಸದ ಆದಿಹಲ್‌ಶೇಷ. ಧಾತುನಕಾರಕ್ಕೆ ಅನುಸ್ವಾರ ಪರಸವರ್ಣ. ತಿಙಂತನಿಘಾತಸ್ವರ ಬರುತ್ತದೆ. ಇದು ಮುಂದೆ ಹೇಳುವ ನಿಪಾತದಿಂದಲೂ ಸಿದ್ಧವಾಗುತ್ತದೆ.

ವವರ್ಥ—ವೃಞ್ ವರಣೇ ಧಾತು. ಲಿಟಿನಲ್ಲಿ ಧಲಾದೇಶ ಬಂದಾಗ **ಬಭೂಥಾ ತತನ್ಥ ಜಗ್ಮಂಥ ವವರ್ಥೇತಿ ನಿಗಮೇ** (ಪಾ. ಸೂ. ೬-೪-೬೪) ಎಂಬುದರಿಂದ ನಿಪಾತಿತವಾಗಿದೆ. ॥ ೨೨ ॥

ಸಂಹಿತಾಪಾಠಃ

ದೇವೇನ ನೋ ಮನಸಾ ದೇವ ಸೋಮ ರಾಯೋ ಭಾಗಂ ಸಹಸಾವನ್ನಭಿ ಯುಧ್ಯ ।

ಮಾ ತ್ವಾ ತನದೀಶಿಷೇ ವೀರ್ಯಸ್ಯೋಭಯೇಭ್ಯಃ ಪ್ರ ಚಿಕಿ-
ತ್ವಾ ಗವಿಷ್ಟ್ವಾ ॥ ೨೩ ॥

ಪದಪಾಠಃ

ದೇವೇನ । ನಃ । ಮನಸಾ । ದೇವ । ಸೋಮ । ರಾಯಃ । ಭಾಗಂ । ಸಹಸಾವನ್ । ಅಭಿ । ಯುಧ್ಯ ।

ಮಾ । ತ್ವಾ । ಆ । ತನತ್ । ಈಶಿಷೇ । ವೀರ್ಯಸ್ಯ । ಉಭಯೇಭ್ಯಃ । ಪ್ರ । ಚಿಕಿತ್ಸ । ಗೋಽಇಷ್ಟ್ವಾ ॥ ೨೩ ॥

ಸಾಯಣಭಾಷ್ಯಂ

ಹೇ ದೇವ ದ್ಯೋತಮಾನ ಸಹಸಾವನ್ ಬಲವನ್ ಸೋಮ ದೇವೇನ ಮನಸಾ ದ್ಯೋತಮಾನಯಾ ತ್ವದೀಯಯಾ ಬುದ್ಧ್ಯಾ ರಾಯೋ ಭಾಗಂ ಧನಸ್ಯಾಂಶಂ ನೋಽಸ್ಮಾನಭಿಲಕ್ಷ್ಯ ಯುಧ್ಯ । ಪ್ರೇರಯೇತ್ಯರ್ಥಃ । ಯದ್ವಾ । ನೋಽಸ್ಮಾಕಂ ರಾಯೋ ಧನಸ್ಯ ಭಾಗಂ ಭಕ್ತಾರಮುಪಹರ್ತಾರಂ ಶತ್ರುಮಭಿ ಯುಧ್ಯ । ಅಭಿಮುಖ್ಯೇನ ಸಮ್ಯಕ್ ಪ್ರಹರ । ತ್ವಾ ತಾದೃಶಂ ತ್ವಾಂ ಕಶ್ಚಿದಪಿ ಶತ್ರುರ್ಮಾ ಆ ತನತ್ । ಕ್ಲೇಶೇನಾತತಂ ಮಾ ಕಾರ್ಷೀತ್ । ಮಾ ಹಿಂಸೀದಿತ್ಯರ್ಥಃ । ಉಭಯೇಭ್ಯ ಉಭಯೇಷಾಂ ಯುಧ್ಯಮಾನಾನಾಂ ಸಂಬಂಧಿನೋ ವೀರ್ಯಸ್ಯ ಬಲಸ್ಯ ತ್ವಮೀಶಿಷೇ । ಈಶ್ವರೋ ಭವಸಿ । ಸ ತ್ವಂ ಗವಿಷ್ಟ್ವಾ ಸಂಗ್ರಾಮೇ ಪ್ರ ಚಿಕಿತ್ಸ । ಅಸ್ಮದೀಯಮುಪದ್ರವಂ ಪರಿಹರ ॥ ರಾಯಃ । ಊಡಿದಮಿತಿ ವಿಭಕ್ತೇರುದಾತ್ತತ್ವಂ । ಭಾಗಂ । ಭಜತೇಃ ಕರ್ಮಣಿ ಘಞ್ । ಕೃತ್ಯಲ್ಯುಟೋ ಬಹುಲಮಿತಿ ಬಹುಲವಚನಾತ್ಕರ್ತರಿ ವಾ । ಕರ್ಷಾತ್ವತ ಇತ್ಯಂತೋದಾತ್ತತ್ವಂ । ಸಹಸಾವನ್ । ಸಹಃಶಬ್ದಾನ್ಮತುಪಿ ಚ್ಛಾಂದಸ ಅಕಾರೋಪಜನಃ । ಯುಧ್ಯ । ಯುಧ ಸಂಪ್ರಹಾರೇ । ವ್ಯತ್ಯಯೇನ ಪರಸ್ಮೈಪದಂ । ತನತ್ । ತನು ವಿಸ್ತಾರೇ । ವ್ಯತ್ಯಯೇನ ಶಪ್ । ನಮಾಙ್ಯೋಗ ಇತ್ಯಡಭಾವಃ । ಈಶಿಷೇ । ಈಶಃ ಸೇ । ಪಾ. ೭-೨-೭೭ । ಇತೀಡಾಗಮಃ । ಚಿಕಿತ್ಸ । ಕಿತ ಜ್ಞಾನೇ । ಗುಪ್ತಿಜ್ಕಿದ್ಭ್ಯಃ ಸನ್ । ಪಾ. ೩-೧-೫ । ಗವಿಷ್ಟ್ವಾ । ಗವಾಂ ಬಾಣಾನಾಮಿಷ್ಟಯ ಏಷಣಾನಿ ಗಮನಾನಿ ಯೇಷ್ವಿತಿ ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ದೇವ—ಪ್ರಕಾಶಮಾನನೂ । ಸಹಸಾವ—ಬಲಶಾಲಿಯೂ ಆದ । ಸೋಮ—ಎಲೈ ಸೋಮದೇವನೇ। ದೇವೇನ ಮನಸಾ—ಪ್ರಭಾಯುತವಾದ ನಿನ್ನ ಮನಸ್ಸಿನಿಂದ (ಮನಃಪೂರ್ವಕವಾಗಿ) । ರಾಯಃ—ಧನದ ।

ಭಾಗಂ—ಅಂಶವನ್ನು । **ನಃ** —ನಮ್ಮಲ್ಲಿಗೂ । **ಅಭಿ ಯುಧ್ಯ**—ಕಳುಹಿಸಿಕೊಡು । [**ರಾಯಃ**—ಧನದ । **ಭಾಗಂ**—ಅಂಶವನ್ನು ಅಪಹರಿಸುವ । **ನಃ (ಅಭಿ)**– ನಮ್ಮ (ಶತ್ರುವನ್ನು) । **ಅಭಿ ಯುಧ್ಯ**—ಯುದ್ಧಮಾಡಿ ಕೊಲ್ಲು] **ತ್ವಾ**— (ಅಂತಹ) ನಿನ್ನನ್ನು । **ಮಾ ಅ ತನತ್**— (ನಿನ್ನ ಯಾವ ಶತ್ರುವೂ) ಹಿಂಸಿಸದಿರಲಿ, ಪ್ರತಿಬಂಧಿಸದಿರಲಿ । **ಉಭಯೇಭ್ಯಃ**—(ಯುದ್ಧದಲ್ಲಿ ನಿರತರಾಗಿರುವ) ಎರಡು ಪಂಗಡಗಳಿಗೂ । **ವೀರ್ಯಸ್ಯ**— ಬಲ (ವನ್ನು ಕೊಡುವುದ)ಕ್ಕೆ । **ಈಶಿಷೇ** (ನೀನೇ) ಸಮರ್ಥನಾದ ಪ್ರಭುವಾಗಿದ್ದೀಯೆ । **ಗವಿಷ್ಟೌ**— ಯುದ್ಧದಲ್ಲಿ **ಪ್ರಚಿಕಿತ್ಸ**—(ನಮ್ಮನ್ನು) ಕಾದು ರಕ್ಷಿಸು

ಭಾವಾರ್ಥ

ಪ್ರಕಾಶಮಾನನೂ ಬಲಶಾಲಿಯೂ ಆದ ಎಲೈ ಸೋಮದೇವನೇ, ಪ್ರಭೆಯಿಂದ ಕೂಡಿದ ನಿನ್ನ ಧನದ ಕೊಂಚ ಅಂಶವನ್ನು ಮನಃಪೂರ್ವಕವಾಗಿ ನಮ್ಮಲ್ಲಿಗೂ ಕಳುಹಿಸಿಕೊಡು. ನಿನ್ನನ್ನು ಯಾವ ಶತ್ರುವೂ ತಡೆಯದಿರಲಿ ಯುದ್ಧದಲ್ಲಿ ನಿರತರಾಗಿರುವ ಎರಡು ಪಂಗಡಗಳಿಗೆ ಶಕ್ತಿಯನ್ನು ಅನುಗ್ರಹಿಸಲು ನೀನೇ ಸಮರ್ಥನಾದ ಪ್ರಭುವಾಗಿದ್ದೀಯೆ. ಆದ್ದರಿಂದ ಯಜ್ಞಕರ್ತರಾದ ನಮಗೆ ಬೆಂಬಲವಾಗಿ ನಿಂತು ನಮ್ಮನ್ನು ರಕ್ಷಿಸಿ ಯುದ್ಧದಲ್ಲಿ ಶತ್ರುವನ್ನು ನಾಶಮಾಡು.

English Translation

Divine and powerful Soma, gracefully give us our portion of wealth ; may none annoy you ; you are superior to two foes combined. Defend us in battle.

॥ ವಿಶೇಷವಿಷಯಗಳು ॥

ಸಹಸಾವನ್—ಓಜಃ ಪಾಜಃ ಶರಃ ಇತ್ಯಾದಿ ಇಪ್ಪತ್ತು ಬಲನಾಮಗಳಲ್ಲಿ ಸಹಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೯) **ಸಹಸ್** ಶಬ್ದಕ್ಕೆ ಬಲವೆಂದರ್ಥವು ಸಹಸಾವಾನ್ ಎಂದರೆ ಬಲಶಾಲಿಯೆಂದರ್ಥವು. ಸಹಸಾವನ್ ಎಂಬುವುದು ಸಂಬೋಧನಪ್ರಥಮೈಕವಚನವು.

ದೇವೇನ ಮನಸಾ–ದ್ಯೋತಮಾನಯಾ ತ್ವದೀಯಯಾ ಬುದ್ಧ್ಯಾ । ಅಂದರೆ ಪ್ರಭಾಯುತವಾದ ನಿನ್ನ ಮನಸ್ಸಿನಿಂದ (ಮನಃಪೂರ್ವಕವಾಗಿ) ಎಂದು ಸಾಯಣರು ವಿವರಿಸುತ್ತಾರೆ. ಆದರೆ ಸ್ಕಂದಸ್ವಾಮಿಗಳು **ದೀವ್ಯತಿಃ ದಾನಾರ್ಥಃ ದಾನಾಭಿಮುಖೇನ ಮನಸಾ** । ಅಂದರೆ ದಾನಾಭಿಮುಖವಾದ ಮನಸ್ಸಿನೊಡಗೂಡಿ ಎಂದರ್ಥವನ್ನು ಪಾಡುತ್ತಾರೆ. ನಿರುಕ್ತಕಾರರ ನಿರ್ವಚನದ ಪ್ರಕಾರ ಎರಡರ್ಥವನ್ನೂ ಮಾಡಬಹುದು. ಏತಕ್ಕೆಂದರೆ **ದೇವ** ಶಬ್ದಕ್ಕೆ **ದೇವೋ ದಾನಾದ್ವಾ, ದೀಪನಾದ್ವಾ, ದ್ಯೋತನಾದ್ವಾ, ದ್ಯುಸ್ಥಾನೋ ಭವತೀತಿ ವಾ** । ಎಂದರೆ (ನಿ. ೭-೧೫) ದಾನವಾಗಿಲೀ, ಪ್ರಕಾಶಮಾನವೆಂದಾಗಿಲೀ, ಬೆಳಗಿಸುವುದು ಎಂದಾಗಿಲೀ ದೇವಶಬ್ದಕ್ಕೆ ಅರ್ಥವಾಗುವುದರಿಂದ ಇಲ್ಲಿ ಯಾವ ಅರ್ಥವನ್ನು ಬೇಕಾದರೂ ಹೇಳಬಹುದು.

ಅಭಿ ಯುಧ್ಯ—**ಅಭಿ ಯುಧ್ಯ** ಎಂದರೆ ಯುದ್ಧಮಾಡಿ ಸಂಹರಿಸು ಎಂದರ್ಥವು ಅಥವಾ **ಅಭಿಯುಧತ್ಯಿಃ ಗತಿಕರ್ಮಾ,** ಎಂಬ ನಿರ್ವಚನವಿರುವುದರಿಂದ **ಅಭಿಗಮಯ** । ಅಂದರೆ ನಮ್ಮಲ್ಲಿಗೆ ಬರಮಾಡು ಎಂದಾಗುತ್ತದೆ.

ಇಲ್ಲಿ ಎರಡರ್ಥವೂ ಒಂದೇ ಆಗುತ್ತದೆ. ಹೇಗೆಂದರೆ **ರಾಯಃ ಭಾಗಂ ನಃ ಅಭಿಯುಧ್ಯ** । ಎನ್ನುವುದಕ್ಕೆ ಧನದ ಅಂಶವನ್ನು ಅಪಹರಿಸಿರುವ ನಮ್ಮ ಶತ್ರುವನ್ನು ಕೊಂದು ಆ ಧನವನ್ನು ನಮ್ಮಲ್ಲಿಗೆ ಬರಮಾಡು ಎಂದರ್ಥವು.

ಮಾ ಆ ತನತ್—ಸಾಧಾರಣವಾಗಿ **ಆತನಿಃ**—ಎಂಬ ಪದಕ್ಕೆ ವಿಸ್ತಾರಮಾಡುವವನು ಎಂದರ್ಥವಾದರೂ ಇಲ್ಲಿ **ಆತನತ್** ಪ್ರತಿಬಂಧನೆಂದಾಗುವುದರಿಂದ ನೀನು ನಮಗೆ ಧನದ ದಾನವನ್ನು ಮಾಡುತ್ತಿರುವಾಗ ಯಾರೂ ನಿನ್ನನ್ನು ಪ್ರತಿಬಂಧಿಸದಿರಲಿ ಅಥವಾ ಶತ್ರುಗಳಾರೂ ತಡೆಯದಿರಲಿ ಎಂದರ್ಥವು.

ವೀರ್ಯಸ್ಯ ಈಶಿಷೇ—ಇಲ್ಲಿ **ಉಭಯೇಭ್ಯಃ ವೀರ್ಯಸ್ಯ** ಎಂದು ಒಂದು ವಿಧವಾದ ಅನ್ವಯವಾದರೆ ಯುದ್ಧದಲ್ಲಿ ನಿರತರಾಗಿರುವ ಎರಡು ಸಂಗಡಗಳ ವೀರ್ಯಕ್ಕೂ ನೀನೇ ಒಡೆಯನಾಗಿರುವುದರಿಂದ ನಿನಗೆ ಇಷ್ಟ ಬಂದವರಿಗೆ ಜಯವನ್ನು ಒದಗಿಸಬಹುದು ಎಂದರ್ಥವಾಗುತ್ತದೆ. ಸಕಲ ಶೂರರಿಗಿಂತಲೂ ಅಧಿಕವಾದ ಶೂರನಾಗಿರುವುದರಿಂದ ಇವನನ್ನು ಜಯಿಸಲು ಯಾರಿಂದಲೂ ಶಕ್ಯವಿಲ್ಲ. ಋಕ್ಸಂಹಿತೆಯ ೯-೬೬-೧೬ ಮತ್ತು ೧೭ ನೇ ಋಕ್ಕುಗಳಲ್ಲಿ ವರ್ಣಿತವಾಗಿರುವಂತೆ—

ಮಹಾಁ ಅಸಿ ಸೋಮ ಜ್ಯೇಷ್ಠ ಉಗ್ರಾಣಾಮಿಂದ ಓಜಿಷ್ಠಃ । ಯುಧ್ವಾ ಸಞ್ಛಶ್ವಜ್ಜಿಗೇಥ ॥
(ಋ. ಸಂ. ೯-೬೬-೧೬)

ಯ ಉಗ್ರೇಭ್ಯಶ್ಚಿದೋಜೀಯಾಞ್ಛೂರೇಭ್ಯಶ್ಚಿಚ್ಛೂರತರಃ । ಭೂರಿದಾಭ್ಯಶ್ಚಿನ್ಮಂಹೀಯೋ ॥
(ಋ. ಸಂ. ೯-೬೬-೧೭)

ಎಂದು ಸೋಮನ ವೀರ್ಯವೂ, ಸಾಮರ್ಥ್ಯವೂ ಅತ್ಯಧಿಕವಾಗಿದ್ದು. ಇದೇ ರೀತಿ ಇತರೇಯಬ್ರಾಹ್ಮಣದಲ್ಲಿಯೂ ಸಹ ಸೋಮನ ಮಹಿಮೆಯನ್ನು ವರ್ಣಿಸುತ್ತಾ ದೇವಾಸುರರ ಯುದ್ಧಕಾಲದಲ್ಲಿ ದೇವತೆಗಳಿಗೆ ಪರಾಜಯವೂ ಸುತ್ತಲೂ ಸಂಭವಿಸಿದ ಕಾಲದಲ್ಲಿ ಅವರು ಸೋಮನನ್ನು ರಾಜನನ್ನಾಗಿ ಮಾಡಿಕೊಂಡ ಮೇಲೆ ಸಕಲ ದಿಕ್ಕುಗಳಲ್ಲಿಯೂ ಜಯವನ್ನು ಪಡೆದರೆಂಬ ಅಂಶವನ್ನು ತಿಳಿಸಿದೆ.

ತೇ ಸೋಮಂ ರಾಜಾನಮಕುರ್ವನ್ । ತೇ ಸೋಮೇನ ರಾಜ್ಞಾ ಸರ್ವಾದಿಶೋಽಜಯನ್ ॥
(ಐ. ಬ್ರಾ. ೧-೧೪)

ಸ್ಕಂದಸ್ವಾಮಿಗಳು **ಉಭಯೇಭ್ಯಃ** ಎನ್ನುವ ಪದಕ್ಕೆ **ಅತ್ಮೀಯೇಭ್ಯೋಽಸ್ಮದೀಯೇಭ್ಯಶ್ಚ ಉಭಯೇಭ್ಯೋಪಿ ಶತ್ರುಭ್ಯೋ ಧನಾನ್ಯಾಹೃತ್ಯ** । ಅಂದರೆ ನಿನ್ನ ಶತ್ರುಗಳಿಂದಲೂ ನಮ್ಮ ಶತ್ರುಗಳಿಂದಲೂ ಈ ರೀತಿ ಎರಡು ಸಂಗಡಗಳ ಶತ್ರುಗಳಿಂದಲೂ ಧನವನ್ನು ಅಪಹರಿಸಿ ತಂದು ಕೊಡು ಎಂದು ಒಂದು ವಿಧವಾಗಿಯೂ, ಅಲ್ಲದೇ, **ಅಥವಾ ಉಭಯಶಬ್ದಃ ಪ್ರಯೋಜನವಚನಃ ಯಾನಿ ಚಾಸ್ಮಾಕಮಿಹ ಲೋಕೇ ಪ್ರಯೋಜನಾನಿ ಯಾನಿ ಚ ಪರತ್ರ ತೇಭ್ಯಃ ಉಭಯೇಭ್ಯಃ** । ಎಂದರೆ ನಮಗೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಯಾವ ಪ್ರಯೋಜನವು ಲಭಿಸಬೇಕೋ ಆ ಎರಡುವಿಧವಾದ ಪ್ರಯೋಜನಗಳಿಗೂ ನೀನೇ ಒಡೆಯನು ಮತ್ತು ನಮಗೆ ಒದಗಿಸಲು ಸಮರ್ಥನು ಎಂದೂ ಸಹ ಅರ್ಥವಿವರಣೆಮಾಡಿರುವರು.

ಗವಿಷ್ಟೌ—**ಗವಾಂ ಬಾಣಾನಾಂ ಇಷ್ಟಯಃ ಏಷಣಾನಿ ಗಮನಾನಿ ಯೇಷು** । ಎಂದರ್ಥ ಬಾಣಗಳ ಸಂಚಾರಗಳು ಇರತಕ್ಕ ಯುದ್ಧದಲ್ಲಿ ಎಂದು **ಗವಿಷ್ಟಿ** ಶಬ್ದಕ್ಕೆ ಸಂಗ್ರಾಮವೆಂದು ಸಾಯಣರೂ, **ಗಾವಃ ಇಷ್ಯಂತೇ**

ಯತ್ರ ಸ್ರಾಪ್ತುಂ ಸಾ ಗವಿಷ್ಟಿರಿಷ್ಟಿಃ । ತತ್ರ ಯಜ್ಞೇ ಇತ್ಯರ್ಥಃ । ಎಂದರೆ ಗೋವುಗಳನ್ನು ಪಡೆಯಲಿಚ್ಛಿಸಿ ನೆರವೇರಿಸುವ ಯಜ್ಞದಲ್ಲಿ ಎಂದು ಸ್ಕಂದಸ್ವಾಮಿಗಳು ಅರ್ಥವನ್ನು ಮಾಡಿರುವರು

(ಪ್ರ) ಚಿಕಿತ್ಸಾ—ಗವಿಷ್ಟ ಶಬ್ದಕ್ಕೆ ಯುದ್ಧವೆಂದು ಅರ್ಥಮಾಡಿದರೆ ಆಗ **ಪ್ರ ಚಿಕಿತ್ಸ** ಎನ್ನುವುದಕ್ಕೆ **ಅಸ್ಮದೀಯಮುಪದ್ರವಂ ಪರಿಹರ।** ಎಂದರೆ ನಮ್ಮ ಉಪದ್ರವಗಳನ್ನು ನಾಶಮಾಡು ಎಂಬುದಾಗಿಯೂ, ಯಜ್ಞವೆಂದು ಅರ್ಥಮಾಡಿದರೆ **ಕಿತ ಜ್ಞಾನೇ । ಜ್ಞಾನೇನ ಚಾತ್ರ ತತ್ಪೂರ್ವಕಂ ದಾನಂ ಲಕ್ಷ್ಯತೇ । ಪ್ರಕರ್ಷೇಣ ದೇಹೀತ್ಯರ್ಥಃ ।** ಎಂದರೆ ನಮಗೆ ಯಜ್ಞದಲ್ಲಿ ಉದಾರವಾಗಿ ದಾನವನ್ನು ಮಾಡು ಎಂದೂ ಅರ್ಥವಾಗುತ್ತದೆ.

॥ ವ್ಯಾಕರಣಪ್ರಕ್ರಿಯಾ ॥

ರಾಯಃ—ರೈ ಶಬ್ದ. ಷಷ್ಠ್ಯೇಕವಚನದಲ್ಲಿ ರಾಯಃ ಎಂದು ರೂಪವಾಗುತ್ತದೆ. **ಊಡಿದಂ ಪದಾದಿ**-(ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಭಾಗಮ್—ಭಜ ಸೇವಾಯಾಮ್. ಧಾತು. ಇದಕ್ಕೆ ಕರ್ಮಣಿಯಲ್ಲಿ ಘಞ್. **ಅತ ಉಪಧಾಯಾಃ**—ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ. **ಚಜೋಃ ಕು ಘಿ ಣ್ಯತೋಃ**-(ಪಾ. ಸೂ. ೭-೩-೫೨) ಎಂಬುದರಿಂದ ಜಕಾರಕ್ಕೆ ಕುತ್ವ. ಅಥವಾ **ಕೃತ್ಯಲ್ಯುಟೋ ಬಹುಲಮ್** (ಪಾ. ಸೂ. ೩-೩-೧೧೩) ಎಂಬಲ್ಲಿ ಬಹುಲ ಗ್ರಹಣಮಾಡಿರುವುದರಿಂದ ಕರ್ತರಿಯಲ್ಲಿ ಘಞ್ ಪ್ರತ್ಯಯ. **ಕರ್ಷಾತ್ವತಃ**-(ಪಾ. ಸೂ. ೬-೧-೧೯೯) ಎಂಬುದರಿಂದ ಙಿತ್ ಸ್ವರವು ಬಾಧಿತವಾಗಿ ಅಂತೋದಾತ್ತಸ್ವರ ಬರುತ್ತದೆ.

ಸಹಸಾವನ್—ಸಹಃ ಬಲಂ ಅಸ್ಯ ಅಸ್ತಿ ಎಂಬರ್ಥದಲ್ಲಿ **ತದಸ್ಯಾಸ್ತಿ**—ಎಂಬುದರಿಂದ ಮತುಪ್ ಪ್ರತ್ಯಯ. ಸಹಸ್ ಶಬ್ದಕ್ಕೆ ಛಾಂದಸವಾಗಿ ಆಕಾರ ಅಂತಾಗಮವಾಗಿ ಬರುತ್ತದೆ. ಆಕಾರದ ಪರದಲ್ಲಿ ಮತುಪ್ ಬಂದುದರಿಂದ **ಮಾದುಪಧಾಯಾಶ್ಚ**—ಎಂಬುದರಿಂದ ಮಕಾರಕ್ಕೆ ವಕಾರಾದೇಶ. ಸಂಬುದ್ಧಿಯಲ್ಲಿ **ಆಮಂತ್ರಿತಸ್ಯ ಚ** (ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ.

ಯುಧ್ಯ—ಯುಧ ಸಂಪ್ರಹಾರೇ. ಧಾತು. ದಿವಾದಿ. **ವ್ಯತ್ಯಯೋ ಬಹುಲಮ್**—ಎಂಬುದರಿಂದ ಪರಸ್ಮೈಪದಿಯಾಗುತ್ತದೆ. ಲೋಣ್ಮಧ್ಯಮಪುರುಷಏಕವಚನದಲ್ಲಿ ಸಿಪಿಗೆ ಹಿ ಆದೇಶ. **ದಿವಾದಿಭ್ಯಃ ಶ್ಯನ್**—ಎಂಬುದರಿಂದ ಶ್ಯನ್ ವಿಕರಣ. **ಅತೋ ಹೇಃ**—ಎಂಬುದರಿಂದ ಹಿಗೆ ಲುಕ್. ಅತಿಙಂತವ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ತನತ್ - ತನು ವಿಸ್ತಾರೇ ಧಾತು. ಲಙ್ ಪ್ರಥಮ ಪುರುಷಏಕವಚನದಲ್ಲಿ ತಿಪ್. **ಇತಶ್ಚ**—ಎಂಬುದರಿಂದ ಇಕಾರಕ್ಕೆ ಲೋಪ. **ವ್ಯತ್ಯಯೋ ಬಹುಲಮ್**—ಎಂಬುದರಿಂದ ವಿಕರಣಕ್ಕೆ ಶಪ್. **ನ ಮಾಙ್ ಯೋಗೇ** (ಪಾ. ಸೂ. ೬-೪-೭೪) ಎಂಬುದರಿಂದ ಮಾಙ್ ಸಂಬಂಧವಿರುವುದರಿಂದ ಅಂಗಕ್ಕೆ ಆಡಾಗಮ ಬರುವುದಿಲ್ಲ. ತಿಙಂತನಿಘಾತಸ್ವರ ಬರುತ್ತದೆ.

ಈಶಿಷೇ—ಈಶ ಐಶ್ವರ್ಯೇ ಧಾತು. ಲಟ್ ಮಧ್ಯಮ ಪುರುಷಏಕವಚನದಲ್ಲಿ ಥಾಸ್ ಪ್ರತ್ಯಯ. **ಥಾಸಃ ಸೇ**—ಎಂಬುದರಿಂದ ಅದಕ್ಕೆ ಸೇ ಆದೇಶ. **ಈಶಃ ಸೇ**-(ಪಾ ಸೂ. ೭-೪-೭೭) ಎಂಬುದರಿಂದ ಇದರ

ಪರದಲ್ಲಿರುವ ಸೇ ಎಂಬುದಕ್ಕೆ ಇಡಾಗಮ. **ಆದೇಶಪ್ರತ್ಯಯಯೋಃ**—ಎಂಬುದರಿಂದ ಪ್ರತ್ಯಯಕ್ಕೆ ಷತ್ವ. ತಿಙಂತದ ಪರದಲ್ಲಿರುವುದರಿಂದ ಸೂತ್ರದಲ್ಲಿ **ತಿಙಿತಃ**—ಎಂದು ನಿಷೇಧಮಾಡಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಧಾತುಸ್ವರ ಉಳಿಯುತ್ತದೆ.

ಚಿಕಿತ್ಸೆ—ಕಿತ ಜ್ಞಾನೇ ಧಾತು. **ಗುಪ್‌ತಿಜ್‌ಕಿದ್ಭ್ಯಃಸನ್** – (ಪಾ. ಸೂ. ೩-೧-೫) ಎಂಬುದರಿಂದ ಸ್ವಾರ್ಥದಲ್ಲಿ ಸನ್. ಕಿತ್ಸ ಎಂಬುದು **ಸನಾದ್ಯಂತಾ ಧಾತವಃ**—ಎಂಬುದರಿಂದ ಧಾತುಸಂಜ್ಞೆಯನ್ನು ಹೊಂದುತ್ತದೆ. ಲೋಟ್ ಮಧ್ಯಮಪುರುಷಏಕವಚನದಲ್ಲಿ ಸಿಪಿಗೆ ಹಿ ಆದೇಶ. **ಸನ್ಯಙಾಃ**–(ಪಾ. ಸೂ. ೬-೧-೯) ಎಂಬುದರಿಂದ ಸನ್ನಂತದ ಪ್ರಥಮ ಏಕಾಚಿಗೆ ದ್ವಿತ್ವ. ಅಭ್ಯಾಸಕ್ಕೆ ಚುತ್ವ. **ಅತೋಹೇಃ**—ಎಂಬುದರಿಂದ ಹಿಗೆ ಲುಕ್. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಗವಿಷ್ಟೌ—ಗವಾಂ ಬಾಣಾನಾಮಿಷ್ಟಯಃ ಏಷಣಾನಿ ಗಮನಾನಿ ಏಷು ಇತಿ ಗವಿಷ್ಟಿಃ. ಜಹುವ್ರೀಹಿ ಸನಾಸ. **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್**–(ಪಾ. ಸೂ. ೬-೩-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ ಸಪ್ತಮೀ ಏಕವಚನರೂಪ ॥ ೩೩ ॥

ತೊಂಭತ್ತೈರಡನೆಯ ಸೂಕ್ತವು

ಏತಾ ಉ ತ್ಯಾ ಇತ್ಯಷ್ಟಾವಶರ್ಚಮಷ್ಟಮಂ ಸೂಕ್ತಂ ಗೋತಮಸ್ಯಾರ್ಷಂ । ಆದಿತಶ್ಚತಸ್ರೋ ಜಗತ್ಯಃ । ತ್ರಯೋದಶ್ಯಾದ್ಯಾಃ ಸದ್ಮಚ ಉಷ್ಣಿಹಃ ಶಿಷ್ಟಾ ಅಷ್ಟೌ ತ್ರಿಷ್ಟುಭಃ । ಉಷಾ ದೇವತಾ । ಅಶ್ವಿನಾ ವರ್ತಿರಿತ್ಯಂತ್ಯಸ್ತೃಚೋಽಶ್ವಿದೇವತಾಕಃ । ತಥಾ ಚಾನುಕ್ರಾಂತಂ । ಏತಾ ಉ ತ್ಯಾ.ದ್ಯೋ ನೋಷಸ್ಯಂ ಚತುರ್ಜಗತ್ಯಾದಿ ಷಳುಷ್ಣಿಗಂತಂ ತೃಚೋಽಂತ್ಯ ಆಶ್ವಿನ ಇತಿ ॥ ಸೂಕ್ತವಿನಿಯೋಗೋ ಲೈಂಗಿಕಃ ॥ ಪ್ರಾತರನುವಾಕ ಉಷಸ್ಯೇ ಕ್ರತೌ ಜಾಗತೇ ಛಂದಸ್ಯಾಶ್ವಿನಶಸ್ತ್ರೇ ಚೈತಾ ಉ ತ್ಯಾ ಇತಿ ಚತಸ್ರೋ ವಿನಿಯುಕ್ತಾಃ । ಸೂತ್ರಿತಂ ಚ । ಏತಾ ಉ ತ್ಯಾ ಇತಿ ಚತಸ್ರೋ ಜಾಗತಂ । ಆ. ೪-೧೪ । ಇತಿ ॥

ಅನುವಾದವು—**ಏತಾ ಉತ್ಯಾ** ಎಂಬ ಸೂಕ್ತವು ಹದಿನಾಲ್ಕನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಹದಿನೆಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಗೋತಮನು ಋಷಿಯು ಮೊದಲಿಂದ ನಾಲ್ಕು ಋಕ್ಕುಗಳು ಜಗತೀ ಛಂದಸ್ಸಿನವು. ಹದಿಮೂರರಿಂದ ಆರು ಋಕ್ಕುಗಳು ಉಷ್ಣಿಕ್ ಛಂದಸ್ಸಿನವು. ಉಳಿದ ಎಂಟು ಋಕ್ಕುಗಳು ತ್ರಿಷ್ಟುಪ್ ಛಂದಸ್ಸಿನವು. ಈ ಸೂಕ್ತಕ್ಕೆ ಉಷಸ್ಸು ದೇವತೆಯು. **ಅಶ್ವಿನಾ ವರ್ತಿಃ** ಎಂಬ ಕೊನೆಯ ಮೂರು ಋಕ್ಕುಗಳು ಅಶ್ವಿನೀದೇವತಾಕವು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಉಷಸ್ಯಕ್ರತು ಸಂಬಂಧವಾದ ಮಂತ್ರಗಳಲ್ಲಿ

ಜಗತೀಛಂದಸ್ಸಿನ ಮಂತ್ರಗಳಿಗಾಗಿಯೂ ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ **ಏತಾ ಉತ್ಯಾ** ಎಂಬನಾಲ್ಕು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಏತಾ ಉತ್ಯಾ ಇತಿ ಚತಸ್ರೋ ಜಾಗತಂ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೪-೧೪).

ಸೂಕ್ತ—೯೨

ಮಂಡಲ—೧ ॥ ಅನುವಾಕ—೧೪ ॥ ಸೂಕ್ತ—೯೨ ॥

ಅಷ್ಟಕ—೧ ॥ ಅಧ್ಯಾಯ—೬ ॥ ವರ್ಗ— ೨೪, ೫೫, ೨೬, ೨೭, ॥

ಸೂಕ್ತದಲ್ಲಿರುವ ಋಕ್ಸಂಖ್ಯೆ— ೧೮

॥ ಋಷಿಃ—ಗೋತಮೋ ರಾಹೂಗಣಃ ॥

॥ ದೇವತಾ— ೧-೧೫, ಉಷಾಃ । ೧೬-೧೮. ಅಶ್ವಿನೌ ॥

॥ ಛಂದಃ—೧-೪. ಜಗತೀ । ೫-೧೨ ತ್ರಿಷ್ಟುಪ್ । ೧೩-೧೮ ಉಷ್ಣಿಕ್ ॥

॥ ಸಂಹಿತಾಪಾಠಃ ॥

ಏತಾ ಉ ತ್ಯಾ ಉಷಸಃ ಕೇತುಮಕ್ರತ ಪೂರ್ವೇ ಅರ್ಧೇ ರಜಸೋ ಭಾನುಮಂಜತೇ ।
ನಿಷ್ಕೃಣ್ವಾನಾ ಆಯುಧಾನೀವ ಧೃಷ್ಣವಃ ಪ್ರತಿ ಗಾವೋ ರುಷೀರ್ಯಂತಿ ಮಾತರಃ ॥ ೧

ಪದಪಾಠಃ

ಏತಾಃ । ಊಂ ಇತಿ । ತ್ಯಾಃ । ಉಷಸಃ । ಕೇತುಂ । ಅಕ್ರತ । ಪೂರ್ವೇ । ಅರ್ಧೇ । ರಜಸಃ । ಭಾನುಂ । ಅಂಜತೇ ।

निꣳ ऽकृण्वानाः । अयुधानिꣳ इव । धृष्णवः । प्रति । गावः। अरुषीः।

यंति । मातरः ॥ ८ ॥

सायणभाष्य-

उ इत्येतत्पादपूरणं । त्याꣳस्ता एता उषसः प्रभातकालाभिमानिन्यो देवताः केतुमंधकारावृतस्य सर्वस्य जगतः प्रज्ञापकं प्रकाशमकृत । अकृषत । कृत वत्यः । यस्मादेवं तस्मादुषसो रजसोऽन्तरिक्षलोकस्य पूर्वेऽर्धे प्राचीनदिग्भागे भानुं प्रकाशमजंतेः । व्यक्तीकुर्वंति । धृष्णवो धर्षणशीला योद्धार अयुधानीव यथासिप्रभृतीन्यायुधानि संस्कुर्वंति एवं निष्पन्नानाः स्वभासा जगत्संस्कुर्वाणा गावो गमनस्वभावा अरुषीरारोचमाना मातरः सूर्यप्रकाशस्य निर्मात्र्यो जगज्जननिन्यो वोषसः प्रति यंति । प्रतिदिवसं गच्छंति । एवंविधा उषसोऽस्मान्रक्षंत्विति शेषः । अत्र निरुक्तं । एतास्ता उषसः केतुमकृषत प्रज्ञानमेव । कस्या एव पूजनार्थं बहुवचनं स्यात् पूर्वेऽर्धेऽन्तरिक्षलोकस्य समंजतेः भानुना निष्पन्नाना अयुधानीव धृष्णवः । निरित्येष समित्येतस्य स्थाने । एमाद्देषां निष्पन्नं जारिणेवेत्यपि निगमो भवति । प्रति यंति गावो गमनादरुषीरारोचनान्मातरो भासो निर्मात्र्यः । नि ०।१-६ । इति ॥ अकृत । करोतेर्लुङ्यडं मंत्रे घसेति च्लेर्लुक् । निष्पन्नानाः । कृवि हिंसाकरणयोश्च । आस्माात्क्तेलिकशान्नेश् । धिन्विकृण्व्योरच्छेत्युप्रत्ययः । इदुदुपधस्य चाप्रत्ययेस्येति विसर्जनीयस्य षत्वं कृदुत्तरपदप्रकृतिस्वरत्वं ॥

॥ पदार्थ ॥

त्याꣳ एता उषसः— प्रसिद्धवाद (मत्तु प्रातःकालाभिमानिदेवतगळ) ಆ ಉಷೋದೇವತೆಗಳು । **केतुं**— (अंधकारदिंद आवरिसिद लोकक्के) प्रकाशवन्नु अथवा ज्ञानवन्नु । **अकृत**—ಉಂಟುಮಾಡಿದರು । **रजसः**—अंतरिक्ष मंडलद । **पूर्वे अर्धे**—पूर्वार्ध दिक्किनल्लि । **भानुं**— प्रभेयन्नु । **अंजते**—प्रकाशपडिसुत्तारे । **धृष्णवः**—(होराडतक्क) योधरु । **अयुधानि इव**— (तम्म) आयुधगळन्नु मसेदु ह्रुळिपिसुवंते । **निष्कृण्वानाः**—(तम्म प्रभेयिंद जगत्तन्नु) बेळगिसुत्ता । **गावः**— गमन स्वभाववुळ्ळवरू । **अरुषीः**— प्रातःसंध्या रागवुळ्ळवरू । **मातरः**— सूर्यप्रभेय उत्पादकरू अथवा जगज्जननिगळू आद उषोदेवतेगळु । **प्रति यंति**— प्रतिदिनवू संचरिसुत्तारे ॥

ಭಾವಾರ್ಥ

ಕಗ್ಗತ್ತಿಲಿನಿಂದ ಆವರಿಸಿದ್ದ ಲೋಕಕ್ಕೆ ಆ ಉಷೋದೇವತೆಗಳು ಪ್ರಕಾಶವನ್ನು ಹರಡಿದರು. ಅವರು ಅಂತರಿಕ್ಷದ ಪೂರ್ವಾರ್ಧದ ದಿಕ್ಕಿನಲ್ಲಿ ತಮ್ಮ ಪ್ರಭೆಯನ್ನು ಪ್ರಕಾಶಪಡಿಸುತ್ತಾರೆ. ಯೋಧರು ತಮ್ಮ ಆಯುಧಗಳನ್ನು ಮಸೆದು ಝಳಪಿಸುವಂತೆ ಉಷೋದೇವತೆಗಳು ತಮ್ಮ ಪ್ರಭೆಯಿಂದ ಜಗತ್ತನ್ನು ಬೆಳಗಿಸುತ್ತಾ ಗಮನಸ್ವಭಾವವುಳ್ಳವರೂ, ಪ್ರಾತಃ ಸಂಧ್ಯಾರಾಗವುಳ್ಳವರೂ ಸೂರ್ಯಪ್ರಭೆಯ ಉತ್ಪಾದಕರೂ ಆದ ಅವರು ಪ್ರತಿದಿನವೂ ತಮ್ಮ ನಿಯಮದ ಪ್ರಕಾರ ಸಂಚರಿಸುತ್ತಾರೆ.

English Translation

The celebrated dawn has spread the banner ; In the eastern half of the firmament, light is made manifest, making all things bright, like warriors brandishing their bright weapons. Thus the mother, radiant and advancing, travels daily;

ವಿಶೇಷವಿಷಯಗಳು

ತ್ಯಾಃ ಉಷಸಃ—ಹಿಂದಿನ ಪ್ರಭಾತಗಳಲ್ಲೆಲ್ಲಾ ಆವಿರ್ಭವಿಸಿ ಪ್ರಸಿದ್ಧರಾದ ಆ ಉಷಸ್ಸುಗಳೇ, ಅಥವಾ **ವಿಕಸ್ಯಾ ಏವ ಪೂಜನಾರ್ಥೇ ಬಹುವಚನಂ ಸ್ಯಾತ್** । (ನಿ. ೧೨-೭) ಎಂದು ನಿರುಕ್ತಕಾರರು ಹೇಳುವಂತೆ ಪೂಜಾರ್ಥದಲ್ಲಿ ಬಹುವಚನವಿರುತ್ತದೆ. ಒಂದೇ ಉಷಸ್ಸೇ ಪ್ರತಿದಿನವೂ ಆವಿರ್ಭವಿಸುವುದರಿಂದ ಅನೇಕ ಉಷಸ್ಸುಗಳೆಂದು ಭಾವಿಸಿ ಬಹುವಚನಪ್ರಯೋಗವನ್ನು ಮಾಡಲಾಗಿದೆ.

ಉಷೋದೇವತೆಯ ಸ್ವರೂಪ ಮತ್ತು ಮಹಿಮೆಗಳ ವಿಷಯದ ವಿವರಣೆಯನ್ನು ಋ. ಸಂ. ಭಾಗ ೫ ಸೇಜು 32-33 ಗಳಲ್ಲಿ ವಿಶದವಾಗಿ ತಿಳಿಸಿದೆ.

ಕೇತುಂ— **ಕೇತಃ, ಕೇತುಃ ಚೇತಃ** ಇತ್ಯಾದಿ ಪ್ರಜ್ಞಾನಾಮಗಳಲ್ಲಿ ಪಠಿತವಾಗಿರುವುದರಿಂದ(ನಿ- ೩-೧೫) **ಕೇತುಂ** ಎಂದರೆ ಜಗತ್ತಿನ ಪ್ರಜ್ಞೆಯನ್ನು ಎಂದಾಗುತ್ತದೆ. ಅಥವಾ **ಕೇತು** ಶಬ್ದಕ್ಕೆ ಧ್ವಜವೆಂದರ್ಥಮಾಡಿದರೆ ಧ್ವಜವಂತಿರುವ ದೀಪ್ತಿಯನ್ನು ಹರಡಿದರು ಎಂದಾಗುತ್ತದೆ.

ಭಾನುಂ ಅಂಜತೇ—ಪ್ರಕಾಶವನ್ನು ವ್ಯಕ್ತಪಡಿಸುತ್ತಾರೆಂದರ್ಥವು. ಇಲ್ಲಿ ಎರಡು ವಿಧವಾದ ಅನ್ವಯವು ಸಾಧ್ಯವಾಗುತ್ತದೆ. **ರಜಸಃ ಪೂರ್ವೇ ಅರ್ಧೇ ಭಾನುಂ ಅಂಜತೇ** । ಎಂದರೆ ಅಂತರಿಕ್ಷದ ಪೂರ್ವ ದಿಗ್ಭಾಗದಲ್ಲಿ ಪ್ರಭೆಯನ್ನು ಹರಡಿ ವ್ಯಕ್ತಪಡಿಸುತ್ತಾರೆ ಎಂದು ಸಾಯಣರೂ ; **ರಜಸಃ ಪೂರ್ವೇ ಅರ್ಧೇ ಸ್ಥಿತಾ ಭಾನುನಾ ಆಂಜತೇ** । ಎಂದರೆ ಅಂತರಿಕ್ಷದ ಪೂರ್ವಭಾಗದಲ್ಲಿದ್ದುಕೊಂಡು ತಮ್ಮ ಪ್ರಭೆಯಿಂದ ಸಮಸ್ತವನ್ನೂ ವ್ಯಕ್ತಪಡಿಸುತ್ತಾರೆ ಎಂದು ಸ್ಕಂದಸ್ವಾಮಿಗಳೂ ವಿವರಿಸುತ್ತಾರೆ. ಇಷ್ಟೇ ಅಲ್ಲದೆ, ಮುಂದಿನ **ನಿಷ್ಕೃಣ್ವಾನಾ ಧೃಷ್ಣವ ಇವ** । ಎಂಬ ಉಪಮಾನವನ್ನೂ ಸಹ ಸ್ಕಂದಸ್ವಾಮಿಗಳು **ಅಂಜತೇ** ಎನ್ನುವುದರೊಂದಿಗೆ ಸೇರಿಸುತ್ತಾರೆ. ಯೋಧರು ತಮ್ಮ ಆಯುಧಗಳನ್ನು ಮಸೆಯುವುದೇ ಮೊದಲಾದ ಸಂಸ್ಕಾರಗಳಿಂದ ಪ್ರಕಾಶಿಸುವಂತೆ ಹೇಗೆ ಮಾಡುತ್ತಾರೋ

ಆ ರೀತಿ ಉಷಸ್ಸುಗಳು ಸಹ ತಮ್ಮ ಪ್ರಭೆಗಳಿಂದ ಅಂತರಿಕ್ಷವನ್ನೆಲ್ಲಾ ಪ್ರಕಾಶಗೊಳಿಸುತ್ತಾರೆಂದು ಅನ್ವಯವನ್ನು ಮಾಡುತ್ತಾರೆ. ಸಾಯಣರು ಈ ಉಪಮಾನವನ್ನು ಉತ್ತರಾರ್ಧದೊಡನೆ ಸೇರಿಸಿ **ಯೋದ್ಧಾರಃ ಯಥಾ ಳಯು-ಧಾನಿ ಸಂಸ್ಕುರ್ವಂತಿ ಏವಂ ನಿಷ್ಕೃಣ್ವಾನಾಃ ಉಷಸಃ** । ಅಂದರೆ ಯೋಧರು ತಮ್ಮ ಆಯುಧಗಳನ್ನು ಸಂಸ್ಕರಿಸುವಂತೆ ಉಷಸ್ಸುಗಳೂ ಸಹ ತಮ್ಮ ಪ್ರಭೆಯಿಂದ ಜಗತ್ತನ್ನು ಸಂಸ್ಕರಿಸುತ್ತಾ ಪ್ರತಿದಿನವೂ ಸಂಚರಿಸುತ್ತಾರೆ ಎಂದು ಅನ್ವಯವನ್ನು ಮಾಡುತ್ತಾರೆ.

ನಿಷ್ಕೃಣ್ವಾನಾಃ—ನಿರಿತ್ಯೇಷ ಸಮಿತ್ಯೇತಸ್ಯ ಸ್ಥಾನೇ । (ನಿ ೧೨-೭) ಎಂದರೆ **ನಿರ್** ಎಂಬ ಉಪಸರ್ಗವು **ಸಂ** ಎಂಬದರ ಸ್ಥಾನದಲ್ಲಿ ಬಂದಿದೆಯೆಂದೂ **ಸಂಸ್ಕುರ್ವಾಣಾಃ** ಅಂದರೆ ಇಲ್ಲಿ ಮೆರಗುವಂತೆ ನಯವಾಗಿ ಮಾಡುತಾ ಎಂದರ್ಥವೆಂದೂ ನಿರುಕ್ತಕಾರರು ವಿವರಿಸುತ್ತಾರೆ.

ಗಾವಃ—ಗಾವೋ ಗಮನಾತ್ । (ನಿ. ೧೨-೭) ಸಂಚಾರ ಸ್ವಭಾವವುಳ್ಳವಾದ್ದರಿಂದ **ಗಾವಃ** ಎಂದೂ ;

ಅರುಷೀಃ— ಅರುಷೀರಾರೋಚನಾತ್ । (ನಿ. ೧೨-೭) ಆಕರ್ಷಕವಾಗಿ ಪ್ರಕಾಶಿಸುವುದರಿಂದ **ಅರುಷೀಃ** ಎಂದೂ ;

ಮಾತರಃ—ಭಾಸೋ ನಿರ್ಮಾತೃಕಾಃ (ನಿ.೧೨-೭) ಪ್ರಭೆಗಳ ನಿರ್ಮಾತೃಗಳಾದ್ದರಿಂದ **ಮಾತರಃ** ಎಂದೂ ಸಹ ಕಿರಣಗಳಿಗೆ ಎಶೇಷಣಗಳಿರುತ್ತವೆಯೆಂದು ನಿರುಕ್ತಕಾರರು ವಿವರಿಸುತ್ತಾರೆ. ಈ ಭಾವಗಳನ್ನೇ ಮುಂದೆಯೂ ಸಹ—

ಪೂರ್ವೇ ಅರ್ಧೇ ರಜಸೋ ಅಸ್ಯ ಯವಾಂ ಜನಿತ್ರ್ಯಕೃತ ಪ್ರ ಕೇತುಂ ।
ವ್ಯು ಪ್ರಥತೇ ವಿತರಂ ವರೀಯ ಓಭಾ ಪೃಣಂತೀ ಪಿತ್ರೋರುಪಸ್ಥಾ ॥
(ಋ. ಸಂ. ೧-೧೪೪-೫)

ಎಂಬ ಋಕ್ಕಿನಲ್ಲಿ ವಿವರಿಸಿದೆ.

ವ್ಯಾಕರಣಪ್ರಕ್ರಿಯಾ

ಅಕೃತ—ಡುಕೃಞ್ ಕರಣೇ ಧಾತು. ಲುಙ್ ಪ್ರಥಮಪುರುಷ ಬಹುವಚನದಲ್ಲಿ ಯಪ್ರತ್ಯಯ **ಮಂತ್ರೇ ಘಸಹ್ವ**—(ಪಾ. ಸೂ. ೨-೪-೮೦) ಎಂಬುದರಿಂದ ಲುಙಿನಲ್ಲಿ ಪ್ರಾಪ್ತವಾದ ಚ್ಲಿಗೆ ಲುಕ್. ಅನಕಾರದ ಪರದಲ್ಲಿರುವುದರಿಂದ **ಅತ್ಮನೇಪದೇಷ್ವನತೇಃ**—ಎಂಬುದರಿಂದ ಝ ಪ್ರತ್ಯಯಕ್ಕೆ ಅತಾದೇಶ. ಧಾತುವಿನ ಋಕಾರಕ್ಕೆ ಯಣಾದೇಶ. ಅಂಗಕ್ಕೆ ಅಡಾಗಮ. ಆತಿಙಿತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅಂಜತೇ—ಅಂಜೂ ವ್ಯಕ್ತಿಮ್ರಕ್ಷಣಕಾಂತಿಗತಿಷು. ಧಾತು. ಲಟ್ ಪ್ರಥಮಪುರುಷಬಹುವಚನರೂಪ. ತಿಙಂತನಿಘಾತಸ್ವರ ಬರುತ್ತದೆ.

ನಿಷ್ಕೃಣ್ವಾನಾಃ—ಕೃವಿ ಹಿಂಸಾಕರಣಯೋಶ್ಚ. ಧಾತು ಇದಕ್ಕೆ ತಚ್ಛೀಲಾರ್ಥದಲ್ಲಿ ಚಾನಶ್ ಪ್ರತ್ಯಯ. ಶಿತ್ತಾಗುವುದರಿಂದ **ಧಿನ್ವಿಕೃನ್ವ್ಯೋರಚ್** (ಪಾ. ಸೂ ೩-೧-೮೦) ಎಂಬುದರಿಂದ ಉ ಪ್ರತ್ಯಯ ಇದಿತ್ತಾಗುವುದರಿಂದ

इदितो नुम् धातोः— ಎಂಬುದರಿಂದ ನುಮಾಗಮ. ಉಕಾರಕ್ಕೆ ಯಣಾದೇಶ. ಕೃಣ್ವಾನ ಎಂದು ರೂಪವಾಗುತ್ತದೆ. ನಿಃ ಎಂಬಲ್ಲಿರುವ ವಿಸರ್ಗಕ್ಕೆ **इदुदुपधस्य चाप्रत्ययस्य**-(ಪಾ. ಸೂ. ೮-೩-೪೧) ಎಂಬುದರಿಂದ ಕಕಾರಪರದಲ್ಲಿರುವುದರಿಂದ ಷತ್ವ. ಶಾನಚ್ ಚಿತ್ವಾದುದರಿಂದ **चितेः**—ಎಂಬುದರಿಂದ ಕೃಣ್ವಾನ ಶಬ್ದವು ಅಂತೋದಾತ್ತವಾಗುತ್ತದೆ. ನಿರಿನೊಡನೆ ಗತಿಸಮಾಸವಾದಾಗ **गतिकारकोपपदात् कृत्**— ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

यंति—ಇಣ್ ಗತೌ ಧಾತು ಲಟ್ ಪ್ರಥಮಪುರುಷ ಬಹುವಚನದಲ್ಲಿ ಝಿಗೆ ಅಂತಾದೇಶ. **आदिः प्रत्ययः टित्**—ಎಂಬುದರಿಂದ ಶಪಿಗೆ ಲುಕ್. **इणो यण्**-(ಪಾ. ಸೂ. ೬-೪-೮೧) ಎಂಬುದರಿಂದ ಧಾತುವಿನ ಇಕಾರಕ್ಕೆ ಯಣಾದೇಶ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧ ॥

——:o:——

ಸಂಹಿತಾಪಾಠಃ

उदप॑प्तन्नरु॒णा भा॒नवो॑ वृ॒था स्वा॒युजो॑ अरु॒षीर्गा अ॑युक्षत ।
अक्र॑न्नु॒षासो॑ वयु॒नानि॑ पू॒र्वथा॑ रु॒शंतं॑ भा॒नुम॑रु॒षीर॑शिश्रयुः ॥ ३ ॥

ಪದಪಾಠಃ

उत् । अ॒प॒प्त॒न् । अ॒रु॒णाः । भा॒नवः॑ । वृ॒था । सु॒ऽआ॒युजः॑ । अरु॒षीः॑ । गाः॑ । अ॒यु॒क्ष॒त॒ ।
अक्र॑न् । उ॒षसः॑ । व॒यु॒नानि॑ । पू॒र्वऽथा॑ । रु॒शंत॑म् । भा॒नुम् ।
अ॒रु॒षीः॑ । अ॒शि॒श्र॒युः॒ ॥ ३ ॥

॥ ಸಾಯಣಭಾಷ್ಯಂ ॥

ಅರುಣಾ ಅರೋಚಮಾನಾ ಭಾನವ ಊಷಸ್ಯೋ ದೀಪ್ತ್ಯೋ ವ್ಯಥಾನಾಯಾಸೇನ ಸ್ವಯೋಮೇ-ವೋದಪಪ್ತನ್ । ಉದಗಮನ್ । ತದನಂತರಮುಷಸಶ್ಚ ಸ್ವಾಯುಜಃ ಸುಖೇನ ರಥ ಆಯೋಕ್ತುಂ ಶಕ್ಯಾ ಅರುಷೀಃ ಶುಭ್ರವರ್ಣಾ ಗಾಃ ಪೂರ್ವಮುತ್ಥಿತಾನ್ ರಶ್ಮೀನ್ ಈದೃಶೀಃ ಸ್ವವಾಹನಭೂತಾಶ್ಚತು ಷ್ಪದೀರ್ಗಾ ಏವ ವಾಯುಕ್ಷತೇ । ಸ್ವರಥೇ೪ಯೋಜಯನ್ । ಉಕ್ತಂಚ । ಅರುಷ್ಯೋ ಗಾವ ಉಷಸಃ-ಮಿತಿ । ಏವಂ ಗೋಭಿರ್ಯುಕ್ತಂ ರಥಮಾರುಹ್ಯೋಷಸಃ ಪೂರ್ವಥಾ ಪೂರ್ವೇಷ್ವಹಃಸ್ವಿವ ವಯೆನಾನಿ ಸರ್ವೇಷಾಂ ಪ್ರಾಣಿನಾಂ ಜ್ಞಾನಾನ್ಯಕ್ರನ್ । ಅಕಾಸುಃ । ಉಷಃಕಾಲೇ ಜಾತೇ ಹಿ ಸರ್ವೇ ಪ್ರಾಣಿನೋ ಜ್ಞಾನಯೆುಕ್ತಾ ಭವಂತಿ । ತದನಂತರಮುರುಷೀರಾರೋಚಮಾನಾಸ್ತಾ ಉಷಸೋ ರುಶಂತಂ । ರುಶದಿತಿ ವರ್ಣನಾಮ ರೋಚತೇರ್ಜ್ವಲತಿಕರ್ಮಣಃ । ನಿ. ೨-೨೦ । ಇತಿ ಯಾಸ್ಕಃ । ಶುಭ್ರವರ್ಣಂ ಭಾನುಂ । ಸೂರ್ಯಮಶಿಶ್ರಯುಃ । ಅಸೇವಂತ । ತೇನ ಸಹೈಕೀಭವಂತೀತ್ಯರ್ಥಃ ॥ ಅಪಪ್ತನ್ । ಪತ್ಲೃ ಗತೌ । ಲುಙ್ ಲೃದಿತ್ವಾತ್ ಚ್ಲ್ಲೇರಜಾದೇಶಃ । ಪತಃ ಪುಮ್ । ೭-೪-೧೯ । ಇತಿ ಧಾತೋಃ ಪುಮಾಗಮಃ । ಅಕ್ರನ್ । ಮಂತ್ರೇ ಘಸೇತ್ಯಾದಿನಾ ಚ್ಲ್ಲೇರ್ಲುಕ್ । ಪೂರ್ವಥಾ । ಪ್ರತ್ನ ಪೂರ್ವವಿಶ್ವೇಮಾತ್ಥಾಲ್ ಥಂದಸಿ । ಪಾ. ೫-೩-೧೧೧ । ಇತಿವಾರ್ಥೇ ಥಾಲ್ಪ್ರತ್ಯಯಃ । ಅಶಿಶ್ರಯುಃ । ಶ್ರಿಞ್ ಸೇವಾಯಾಂ । ಬಹುಲಂ ಥಂದಸೀತಿ ಶಪಃ ಶ್ಲುಃ । ಸಿಜಭ್ಯಸ್ತವಿದಿಭ್ಯಶ್ಚೇತಿ ಝೇರ್ಜುಸ್ । ಜುಸಿ ಚ । ಪಾ. ೭-೩-೮೩ । ಇತಿ ಗುಣಃ ॥

ಪ್ರತಿಪದಾರ್ಥ

ಅರುಣಾಃ—ಹೊಂಬಣ್ಣದ । **ಭಾನವಃ**—(ಉಷೋದೇವತೆಗಳ) ಪ್ರಭೆಗಳು । **ವ್ಯಥಾ**—ಅಯತ್ನಪೂರ್ವಕವಾಗಿ **ಉದಪಪ್ತನ್**—ಊರ್ಧ್ವಮುಖವಾಗಿ ಹೊರಚಿಮ್ಮಿದವು. (ಅನಂತರ)। **ಉಷಸಃ**—ಉಷೋದೇವತೆಗಳು । **ಸ್ವಾಯುಜಃ**—ಸುಖವಾಗಿ ಸೇರಿಸಲು ಯೋಗ್ಯವಾದವೂ । **ಅರುಷೀಃ**—ಹೊಂಬಣ್ಣವುಳ್ಳವೂ ಆದ । **ಗಾಃ**—(ಹಿಂದೆ ಅವಿರ್ಭವಿಸಿದ) ತಮ್ಮ ರಶ್ಮಿಗಳನ್ನು ಅಥವಾ (ತಮ್ಮ ರಥದ) ಗೋವುಗಳನ್ನು । **ಅಯುಕ್ಷತ**—(ತಮ್ಮ ರಥಕ್ಕೆ) ಯೋಜಿಸಿದರು. (ಮತ್ತು) । **ಪೂರ್ವಥಾ**—ಹಿಂದಿನ ಪ್ರಭಾತಗಳಲ್ಲೆಲ್ಲಾ ನಡೆಸಿದಂತೆ । **ವಯುನಾನಿ** ಸಕಲ ಪ್ರಾಣಿಗಳಿಗೂ ಚೈತನ್ಯವನ್ನು । **ಅಕ್ರನ್**—ಉಂಟುಮಾಡಿದರು. (ಆಮೇಲೆ)। **ಅರುಷೀಃ**—ಹೊಂಬಣ್ಣದ ಉಷೋದೇವತೆಗಳು । **ರುಶಂತಂ**—ಶುಭ್ರವರ್ಣವುಳ್ಳ । **ಭಾನುಂ**—ಸೂರ್ಯನನ್ನು । **ಅಶಿಶ್ರಯುಃ**—ಸೇವಿಸಿದರು. (ಅವನೊಂದಿಗೆ ಒಂದಾದರು)

ಭಾವಾರ್ಥ

ಉಷೋ ದೇವತೆಗಳ ಹೊಂಬಣ್ಣದ ಪ್ರಭೆಗಳು ಪ್ರಯತ್ನವಿಲ್ಲದೇನೇ ಊರ್ಧ್ವಮುಖವಾಗಿ ಹೊರಚಿಮ್ಮಿದವು. ಅನಂತರ ಉಷೋದೇವತೆಗಳು ಸುಖವಾಗಿ ಸೇರಿಸತಕ್ಕವೂ ಸಂಧ್ಯಾರಾಗವುಳ್ಳವೂ ಆದ ತಮ್ಮ ರಶ್ಮಿಗಳನ್ನು ಅಥವಾ ಗೋವುಗಳನ್ನು ತಮ್ಮ ರಥಕ್ಕೆ ಸೇರಿಸಿದರು. ಮತ್ತು ಹಿಂದಿನ ದಿನಗಳ ಪ್ರಾತಃಕಾಲಗಳಲ್ಲೆಲ್ಲಾ ನಡೆಸಿದಂತೆ ಸಕಲ ಪ್ರಾಣಿಗಳಿಗೂ ಚೈತನ್ಯವನ್ನುಂಟುಮಾಡಿದರು. ಆಮೇಲೆ ಅವರು ತಮ್ಮ ಕಾಂತಿಯೊಡಗೂಡಿ ಶುಭ್ರವರ್ಣವುಳ್ಳ ಸೂರ್ಯನೊಡನೆ ಒಂದಾದರು.

English Translation

The purple rays fly up quickly ; easy to be yoked, the cows are harnessed ; as of yore, the dieties of the dawn have restored consciousness ; and bright-rayed have attended upon the glorious Sun.

ವಿಶೇಷವಿಷಯಗಳು

ಅರುಣಃ— ಅರುಣ ಆರೋಚನಃ । (ನಿ. ೫-೨೧) ಎಂದರೆ ಆಕರ್ಷಕವಾದ ಹೊಂಬಣ್ಣವೆಂದರ್ಥವು.

ವೃಥಾ—ವೃಥಾ ಇತಿ ಅನಾಯಾಸವಚನಃ । ಎಂದು ಸಾಯಣರು ಋ. ಸಂ. ೧-೫೮-೪ ; ೧-೬೩-೭ ಇತ್ಯಾದಿ ಋಕ್ಕುಗಳನ್ನು ವಿವರಿಸುವಾಗ ಸಾಮಾನ್ಯವಾಗಿ ಹೇಳಿರುತ್ತಾರೆ. ಇಲ್ಲಿಯೂ ಸಹ ಅಯತ್ನಪೂರ್ವಕವಾಗಿಯೇ ಎಂದರೆ ಸ್ವಸಂತೋಷದಿಂದಲೇ ಪ್ರಸರಿಸಿದವು ಎಂದು ಹೇಳಬಹುದು.

ಸ್ವಾಯುಜಃ—ಸುಕೇನ ರಥೇ ಆಯೋಕ್ತುಂ ಶಕ್ಯಾಃ ಎಂದರೆ ರಥದಲ್ಲಿ ಸುಲಭವಾಗಿ ಸೇರಿಸಿ ಕಟ್ಟಲು ಸಾಧ್ಯವಾದವು ಎಂದರ್ಥ.

ಅರುಷೀಃ ಗಾಃ—ಅರುಷೀರಾರೋಚನಾತ್ । (ನಿ. ೧೨-೭) ಎಂದೂ **ಅರುಷೋ ಗಾವ ಉಷಸಾಂ** (ನಿ. ೨-೨೮)ಅರುಣ ಆರೋಚನಃ (ನಿ. ೫-೨೧)ಎಂದೂ ನಿರುಕ್ತಕಾರರು ವಿವರಿಸುತ್ತಾರೆ. ಇದರ ಅರ್ಥವು ಉಷಸ್ಸುಗಳ ವಾಹನವು ಆರೋಚಕಗಳಾದ ರಶ್ಮಿಗಳು. ಅಥವಾ ಕೆಂಪು ಬಣ್ಣದ ಗೋವುಗಳು ಎಂದರ್ಥವು.

ವಯುನಾನಿ—ಕೇತಃ, ಕೇತುಃ (ನಿ. ೩-೧೩) ಇತ್ಯಾದಿ **ಪ್ರಜ್ಞಾ** ನಾಮಗಳಲ್ಲಿ ಪಠಿತವಾಗಿರುವುದರಿಂದ ಪ್ರಜ್ಞೆಯೆಂದರ್ಥವಾಗುತ್ತದೆ. ಪ್ರಕಾಶವನ್ನುಂಟುಮಾಡುವುದರಿಂದ ಸಕಲ ಪ್ರಾಣಿಗಳಿಗೂ ಪ್ರಬೋಧವನ್ನು ಚೈತನ್ಯವನ್ನು ಉಂಟುಮಾಡಿದವು ಎಂದಭಿಪ್ರಾಯವು.

ರುಶಂತಂ— ರುಶದಿತಿ ವರ್ಣನಾಮ । ರೋಚತೇರ್ವ್ಯಲಿತಿಕರ್ಮಣಃ । (ನಿ. ೨-೨೦) ಎಂದರೆ ಪ್ರಕಾಶಿಸು ಎಂಬರ್ಥವನ್ನು ಕೊಡುವ **ರುಚ್** ಎಂಬ ಧಾತುವಿನಿಂದ **ರುಚಕ್** ಎಂದರೆ ಶುಭ್ರವರ್ಣನೆಂಬ ಅರ್ಥವನ್ನು ಕೊಡುವ ಪದವು ನಿಷ್ಪನ್ನವಾಗಿದೆಯೆಂದು ನಿರುಕ್ತಕಾರರು ವಿವರಿಸುತ್ತಾರೆ. ಶಭ್ರವರ್ಣನೆಂದಾಗುತ್ತದೆ.

ಭಾನುಂ ಅಶಿಶ್ರಯುಃ—ಸೂರ್ಯನನ್ನು ಸೇವಿಸಿದರು. ಅವನೊಂದಿಗೆ ಒಂದಾಗಿ ತಲ್ಲೀನರಾದರು ಎಂದರೆ ಸೂರ್ಯೋದಯವಾಗುವುದಕ್ಕೆ ಮೊದಲು ತಮ್ಮ ಕಾಂತಿಯನ್ನು ಬೀರುತ್ತಾ ಸೂರ್ಯೋದಯವಾದನಂತರ ಅವನ ಕಾಂತಿಯೊಡನೆ ಸೇರಿಸಿಕೊಂಡರು ಎಂದರ್ಥ.

ವ್ಯಾಕರಣಪ್ರಕ್ರಿಯಾ

ಅಸಪ್ತನ್—ಪತ್ಲೃ ಗತೌ ಧಾತು. ಲುಙ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ. **ಝೋಂತೇಃ** ಸೂತ್ರದಿಂದ ಅಂತಾದೇಶ **ಇತಶ್ಚ** ಎಂಬುದರಿಂದ ಇಕಾರಕ್ಕೆ ಲೋಪ. ಧಾತುವು ಲೃದಿತ್ತಾದುರಿಂದ

पुषादिद्युताद्यृतः— (पा. सू. ३-१-५५९) एंबुदरिंद लुङ्नल्लि प्राप्तवाद च्लिगे अङादेश. **सतः पुम्**— (पा. सू ६-४-१९) एंबुदरिंद अङ् निमित्तवागि धातुविगे पुमागमु. **मिदचोऽन्त्यात्परः** एंबुदरिंद अन्त्याचिन परवागि बरुत्तदे. संयोगान्तलोपदिंद प्रत्ययद 'अन्त्य तकारक्के लोप. अंगक्के अडागमु. अतिङन्तद परदल्लिरुवुदरिंद निघातस्वर बरुत्तदे.

स्वायुजः—युजिर् योगे धातु. सु+उ पूर्वदल्लिरुवाग क्विप् प्रत्ययः. कृदुत्तर पद प्रकृतिस्वर बरुत्तदे. प्रथमा बहुवचनान्त रूप.

अक्रन्— डुकृञ् करणे धातु. लुङ्नल्लि ङिगे अन्तादेश. अन्त्य इकारलोप. **मन्त्रेघसह्वरण**— (पा. सू ७-४-९०) एंबुदरिंद च्लिगे लुक् धातुविन ऋकारक्के यणादेश. अंगक्के अडागमु. पादादियल्लिरुवुदरिंद निघातस्वर बरुवुदिल्ल. अडागमु. उदात्तवादुदरिंद आद्युदात्तवागुत्तदे.

पूर्वथा— पूर्वेषु इव पूर्वथा. **प्रश्नपूर्वविश्वेमात्थाल् थंदसि**—(पा. सू. ५-३-२८८) एंबुदरिंद इवार्थदल्लि थाल् प्रत्ययः. **लिति**— (पा. सू. ६-१-१९३) एंबुदरिंद प्रत्ययद पूर्वक्के उदात्तस्वर बरुत्तदे.

अशिश्रयुः— श्रिञ् सेवायाम् धातु. **बहुलं थंदसि**—एंबुदरिंद शपिगे श्लु विकरण. **श्लौ** एंबुदरिंद धातुविगे द्वित्व. बहुवचनदल्लि व्याप्तवाद ङिगे. **सिजभ्यस्तविदिभ्यश्च**— (पा. सू. ३-४-१०९) एंबुदरिंद अभ्यस्तद परदल्लिरुवुदरिंद जुसादेश. **जुसि च**—(पा. सू ७-३-८३) एंबुदरिंद जुस् निमित्तवागि इगंतांगक्के गुण. अंगक्के अडागमु. अतिङन्तद परदल्लिरुवुदरिंद निघातस्वर बरुत्तदे. ॥ ७ ॥

॥ संहितापाठः ॥

अर्चन्ति नारीरपसो न विष्टिभिः समानेन योजनेना परावतः।

ಇಷ್ಟಂ ವಹಂತೀಃ ಸುಕೃತೇ ಸುದಾನವೇ ವಿಶೇದಹ ಯಜಮಾ-
ನಾಯ ಸುನ್ವತೇ ॥ ೩ ॥

ಪದಪಾಠಃ

ಅರ್ಚಂತಿ । ನಾರೀಃ । ಅಪಸಃ । ನ । ವಿಷ್ಟಿ ೨ ಭಿಃ । ಸಮಾನೇನ । ಯೋಜನೇನ ।
ಆ । ಪರಾ ೨ ವತಃ ।
ಇಷಂ । ವಹಂತೀಃ । ಸು ೨ ಕೃತೇ । ಸು ೨ ದಾನವೇ । ವಿಶ್ವಾ । ಇತ್ । ಅಹ ।
ಯಜಮಾನಾಯ । ಸುನ್ವತೇ ॥ ೩ ॥

ಸಾಯಣಭಾಷ್ಯಂ

ನಾರೀರ್ನೇತ್ರ್ಯ ಉಷಸೋ ವಿಷ್ಟಿಭಿರ್ನಿವೇಶಕೈಃ ಸ್ವಕೀಯೈಸ್ತೇಜೋಭಿಃ ಸಮಾನೇನ ಯೋಜನೇ-
ನೈಕೇನೈವ ಯೋಜನೇನೋದ್ಯೋಗೇನ ಪರಾವತ ಆ ದೂರದೇಶಾದಾ ಪಶ್ಚಿಮದಿಗ್ಭಾಗಾದರ್ಚಂತಿ ।
ನಭಃಪ್ರದೇಶಂ ಪೂಜಯಂತಿ । ಕೃತ್ಸ್ನಂ ಜಗದ್ಯುಗಪದೇವ ವ್ಯಾಪ್ನುವಂತೀತ್ಯರ್ಥಃ । ತತ್ರ ದೃಷ್ಟಾಂತಃ ।
ಅಪಸೋ ನ । ಯುದ್ಧಕರ್ಮಣ್ಯುಪೇತಾಃ ಪುರುಷಾ ಯಥಾ ಸ್ವಕೀಯೈರಾಯುಧೈರ್ಹಾಟೇಮುಖೇನ
ಸರ್ವಂ ದೇಶಂ ವ್ಯಾಪ್ನುವಂತಿ ತದ್ವತ್ । ಕಿಂ ಕುರ್ವತ್ಯಃ । ಸುಕೃತೇ ಶೋಭನಸ್ಯ ಕರ್ಮಣಃ
ಕರ್ತ್ರೇ ಸುನ್ವತೇ ಸೋಮಾಭಿಷವಂ ಕುರ್ವತೇ ಸುದಾನವೇ ಕಲ್ಯಾಣೇರ್ದಕ್ಷಿಣಾ ಋತ್ವಿಗ್ಭ್ಯೋ ದದತೇ
ಯಜಮಾನಾಯ ವಿಶ್ವೇದಹ ಸರ್ವಮೇವೇಷಮನ್ನಂ ವಹಂತೀರಾವಹಂತ್ಯಃ । ಪ್ರಯಚ್ಛಂತ್ಯ
ಇತ್ಯರ್ಥಃ॥ ನಾರೀಃ ! ನೃ ನಯೇ । ಋದೋರಪ್ । ನೃನರಯೋರ್ವೃದ್ಧಿಶ್ಚ । ಪಾ. ೪-೧-೭೩ ।
ಇತಿ ಶಾರ್ಙ್ಗರವಾದಿಷು ಪಾಠಾತ್ ಙೀನ್ । ಜಸಿ ವಾ ಛಂದಸೀತಿ ಪೂರ್ವಸವರ್ಣದೀರ್ಘತ್ವಂ ।
ಅಪಸಃ । ಅಪಶ್ಚಾಚ್ಚಾದರ್ಶಾದಿಭ್ಯೋ ೨ಜಿತ್ಯಚ್ । ಸುಪಾಂ ಸುಲುಗಿತಿ ಜಸಃ ಸುಃ । ವ್ಯತ್ಯಯೇನ
ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ । ವಿಷ್ಟಿಭಿಃ । ವಿಶ ಪ್ರವೇಶನೇ । ವಿಶಂತಿ ಪ್ರವಿಶಂತೀತಿ ವಿಷ್ಟಯಃ
ಕಿರಣಾಃ । ಕ್ತಿಚ್ಕ್ತೌ ಚ ಸಂಜ್ಞಾಯಾಮಿತಿ ಕ್ತಿಚ್ । ವಿಶ್ವಾ । ಸುಪಾಂ ಸುಲುಗಿತ್ಯಮೋ ಡಾದೇಶಃ॥

ಪ್ರತಿಪದಾರ್ಥ

ನಾರೀಃ— ಮಾರ್ಗದರ್ಶಕರಾದ ಉಷೋದೇವತೆಗಳು । ಸುಕೃತೇ— ಪವಿತ್ರಗಳಾದ ಕರ್ಮಗಳನ್ನು
ಮಾಡುವವನೂ । ಸುನ್ವತೇ—ಸೋಮರಸವನ್ನು ಹಿಂಡುವವನೂ । ಸುದಾನವೇ—(ಋತ್ವಿಕ್ಕುಗಳಿಗೆ) ಉದಾರ

ವಾಗಿ ದಾನಮಾಡತಕ್ಕವನೂ ಆದ । **ಯಜಮಾನಾಯ**— ಯಜ್ಞಕರ್ತನಿಗೆ । **ವಿಶ್ವೇದಹ**— ಸಕಲವೂ ಆದ । **ಇಷಂ**—ಅನ್ನವನ್ನು । **ವಹಂತೀಃ**—ಹೊತ್ತುಕೊಂಡುಬಂದು (ಕೊಡುತ್ತಾ) । **ವಿಷ್ಪಿಭಿಃ**—(ತಮ್ಮ ನೈಸರ್ಗಿಕವಾದ) ಕಿರಣಗಳೊಡನೆ। **ಸಮಾನೇನ ಯೋಜನೇನ**—ಏಕಕಾಲದ ಪ್ರಯತ್ನದಿಂದ । **ಅಪಸೋ ನ**—ಯುದ್ಧ ನಿರತರಾದ ಪುರುಷರು ತಮ್ಮ ಆಯುಧಗಳೊಡನೆ ಯುದ್ಧಭೂಮಿಯ ಸಕಲ ಪ್ರದೇಶಗಳನ್ನು ವ್ಯಾಪಿಸುವಂತೆ । **ಆ ಪರಾವತಃ**—(ಅಂತರಿಕ್ಷದ) ಅತ್ಯಂತ ದೂರದ ಪ್ರದೇಶಗಳಲ್ಲೂ ಸಹ । **ಆರ್ಚಂತಿ**—ವ್ಯಾಪಿಸುತ್ತಾರೆ ॥

ಭಾವಾರ್ಥ

ಉಷೋದೇವತೆಗಳು ಸಕಲರಿಗೂ ಮಾರ್ಗದರ್ಶಕರು. ಅವರು ಪವಿತ್ರಗಳಾದ ಕರ್ಮಗಳನ್ನು ಆಚರಿಸುವವನೂ, ಯಜ್ಞಗಳಲ್ಲಿ ಸೋಮರಸವನ್ನು ಹಿಂಡುವವನೂ, ಋತ್ವಿಕ್ಕುಗಳಿಗೆ ಉದಾರವಾಗಿ ದಾನ ಮಾಡತಕ್ಕವನೂ ಆದ ಯಜ್ಞಕರ್ತನಿಗೆ ಸಕಲವಾದ ಅನ್ನವನ್ನು ಹೊತ್ತುಕೊಂಡು ಬಂದುಕೊಡುತ್ತಾ ಯೋಧರು ಯುದ್ಧಭೂಮಿಯನ್ನೆಲಾ, ವ್ಯಾಪಿಸುವಂತೆ ಅವರೂ ಸಹ ತಮ್ಮ ನೈಸರ್ಗಿಕವಾದ ಕಿರಣಗಳೊಡನೆ ಅಂತರಿಕ್ಷದ ಅತ್ಯಂತ ದೂರ ಪ್ರದೇಶಗಳಲ್ಲೂ ಸಹ ಏಕಕಾಲದಲ್ಲಿ ವ್ಯಾಪಿಸುತ್ತಾರೆ.

English Translation

The female leaders of the morning illuminate with their inherent radiance, the remotest parts of the heaven, with a sumultaneous effort, like warriors with their shining arms in the van of the battle, bringing every kind of food to the performer of good works, to the bountiful, and to the worshipper who presents libations.

॥ ವಿಶೇಷವಿಷಯಗಳು ॥

ನಾರೀಃ—ನೇತ್ರ್ಯಃ । ಮಾರ್ಗದರ್ಶಕರಾದ ಎಂದರೆ ಸಕಲ ಜೀವರಾಶಿಗಳನ್ನು ಕತ್ತಲಿನಿಂದ ಬಿಡಿಸಿ ಬೆಳಕನ್ನೂ ಚೈತನ್ಯವನ್ನೂ ಕೊಟ್ಟು ಅವರವರ ಕರ್ಮಗಳನ್ನು ಮಾಡುವಂತೆ ದಾರಿಯನ್ನು ತೋರಿಸಿ ಕೊಡುವ ರೆಂದರ್ಥವು.

ಇಷಂ—ಅಂಧಃ, ವಾಜಃ ಇತ್ಯಾದಿ ಅನ್ನನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೯) **ಇಷಂ** ಎಂದರೆ ಅನ್ನವನ್ನು ಎಂದರ್ಥವು.

ವಿಷ್ಪಿಭಿಃ— ಅಪಃ, **ಅಪ್ನಃ** ಇತ್ಯಾದಿ ಕರ್ಮನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೧) ಕರ್ಮಗಳಿಂದ ಎಂದರ್ಥ. ಆದರೆ ಇಲ್ಲಿ ಸಾಯಣರು ತೇಜಸ್ಸುಗಳಿಂದ ಎಂದು ಅರ್ಥವನ್ನು ಮಾಡುತ್ತಾರೆ. **ವಿಶಂತಿ ಪ್ರವಿಶಂತೀತಿ ವಿಷ್ಪಯಃ ಕಿರಣಾಃ** । ಜಗತ್ತನ್ನೆಲ್ಲಾ ಪ್ರವೇಶಿಸಿ ಹರಡುವುದರಿಂದ ಕಿರಣವೆಂದರ್ಥವಾಗುತ್ತದೆ. ಈ ಎರಡು ವಿಧವಾದ ಅರ್ಥಗಳಿಗೂ ಇಲ್ಲಿ ಅನ್ವಯವಿರುತ್ತದೆ. **ಅಪಸೋ ನ ವಿಷ್ಪಿಭಿಃ** ಎಂದು ಸ್ವಂದಸ್ವಾಮಿಗಳ ಮಾಡುವ ಅನ್ವಯವಂತೆ ಉಪಲೇಪನಾದಿಗೃಹಕರ್ಮಗಳಿಂದ ಕೂಡಿದ ಕಾರ್ಯಕುಶಲರಾದ ನಾರಿಯರಂತೆ ಎಂದಾಗುತ್ತದೆ.

ಅಪಸೋ ನ—**ಅಪಸ್** ಶಬ್ದಕ್ಕೆ ಕರ್ಮ ಅಥವಾ ಕರ್ಮಕೌಶಲ್ಯವೆಂದು ಅರ್ಥ (ನಿ. ೭-೨೮) ಗೃಹಕರ್ಮಗಳಲ್ಲಿ ಕುಶಲರಾದ ನಾರಿಯರಂತೆ ಎಂದಾಗುತ್ತದೆ. ಆದರೆ ಸಾಯಣರು ಆಯುಧಕರ್ಮಗಳಲ್ಲಿ ಕುಶಲರಾದ ಯೋಧರಂತೆ ಎಂದು ವಿವರಿಸುತ್ತಾರೆ. **ಅಪಸೋ ನ** ಎನ್ನುವ ಉಪಮಾನಕ್ಕೆ ಗೃಹಾಲಂಕಾರಾದಿ ಕಾರ್ಯಗಳಲ್ಲಿ ಕುಶಲರಾದ ನಾರಿಯರು ಎಂದು ಸ್ಕಂದಸ್ವಾಮಿಗಳು ಮಾಡುವ ವಿವರಣೆಯೇ ಹೆಚ್ಚು ಒಪ್ಪಿಕೊಳ್ಳುತ್ತದೆ. ಅಲಂಕಾರಾದಿಗಳಿಂದ ನಾರಿಯರು ಗೃಹವನ್ನು ಯಾವ ವಿಧದಲ್ಲಿ ಅಂದವಾಗಿರುವಂತೆಯೂ ಪ್ರಕಾಶಿಸುವಂತೆಯೂ ಮಾಡುತ್ತಾರೆಯೋ ಅದೇ ರೀತಿ ಉಷಸ್ಸುಗಳೂ ಸಹ ಅಂತರಿಕ್ಷವನ್ನೆಲ್ಲಾ ಪ್ರಕಾಶಯುಕ್ತವನ್ನಾಗಿ ಮಾಡುತ್ತಾ ತಮ್ಮ ಕಿರಣಗಳೊಡನೆ ಸಕಲ ಪ್ರದೇಶಗಳಲ್ಲೂ ವ್ಯಾಪಿಸುತ್ತಾರೆ ಎಂಬುದು ಸಹಜವಾಗಿದೆ.

ಪರಾವತಃ—**ಅರ್ಕೇ, ಪರಾರ್ಕೇ** ಇತ್ಯಾದಿ ದೂರ ನಾಮಗಳಲ್ಲಿ ಪಠಿತವಾಗಿದೆ (ನಿ. ೩-೨೦) **ಆ ಪರಾವತಃ** ಅಂದರೆ ಅತ್ಯಂತ ದೂರ ಪ್ರದೇಶಳಲ್ಲಿಯೂ ಎಂದಾಗುತ್ತದೆ

॥ ಪ್ಯಾಕರಣಸಕಿಯಾ ॥

ಆರ್ಚಂತಿ— ಅರ್ಚ ಪೂಜಾಯಾಂ ಧಾತು. ಲಟ್ ಪ್ರಥಮಪುರುಷ ಬಹುವಚನರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಶಪ್ ಪಿತ್ತಾದ್ದರಿಂದ ಅನುದಾತ್ತ. ಅದುಪದೇಶದ ಪರದಲ್ಲಿ ಲಸಾರ್ವಧಾತುಕವು (ಅಂತಿ) ಬರುವುದರಿಂದ **ತಾಸ್ಯನುದಾತ್ತೇಙ್**— (ಪಾ. ಸೂ. ೬-೧-೧೮೬) ಎಂಬುದರಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

ನಾರೀಃ— ನೃ ನಯೇ ಧಾತು. **ಋದೋರಪ್**— (ಪಾ. ಸೂ. ೩-೩-೫೭) ಎಂಬುದರಿಂದ ಅಪ್ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ಗುಣ. ನರ ಶಬ್ದವಾಗುತ್ತದೆ. **ನೃ ನರಯೋರ್ವೃದ್ಧಿಶ್ಚ**—(ಪಾ. ಸೂ. ೪-೧-೬೩.ಗ) ಎಂದು ಶಾರ್ಙರವಾದಿಯಲ್ಲಿ ಪಾಠಮಾಡಿರುವುದರಿಂದ ಸ್ತ್ರೀತ್ವದಲ್ಲಿ ಙೀಪ್ ಮತ್ತು ಪ್ರಕೃತಿಗೆ ವೃದ್ಧಿ ನಾರೀ ಶಬ್ದವಾಗುತ್ತದೆ. ಪ್ರಥಮಾ ಜಸ್ ಪರವಾದಾಗ **ವಾ ಛಂದಸಿ** ಎಂಬುದರಿಂದ ಸಂಹಿತಾದಲ್ಲಿ ಪೂರ್ವಸವರ್ಣದೀರ್ಘ ಬರುತ್ತದೆ.

ಅಪಸಃ— ಅಪಸ್ ಶಬ್ದ. ಅಪಃ ಕರ್ಮ ಅಸ್ತಿ ಎಂಬರ್ಥದಲ್ಲಿ **ಅರ್ಶ ಆದಿಭ್ಯೋಽಚ್**—(ಪಾ ಸೂ. ೫-೨-೧೨೭) ಎಂಬುದರಿಂದ ಅಚ್ ಪ್ರತ್ಯಯ. ಅಪಸ ಶಬ್ದವಾಗುತ್ತದೆ. ಇದಕ್ಕೆ ಜಸ್ ಪರವಾದಾಗ **ಸುಪಾಂ ಸುಲುಕ್** ಎಂಬುದರಿಂದ ಜಸಿಗೆ ಸು ಆದೇಶ. ಸುವಿಗೆ ರುತ್ವವಿಸರ್ಗ. ಅಪಸಃ ಎಂದು ರೂಪವಾಗುತ್ತದೆ. ವ್ಯತ್ಯಯದಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ.

ವಿಷ್ಟಿಭಿಃ— ವಿಶ ಪ್ರವೇಶನೇ ಧಾತು. ವಿಶಂತಿ ಪ್ರವಿಶಂತಿ ಇತಿ ಪ್ರವಿಷ್ಟಯಃ ಕಿರಣಾಃ **ಕ್ತಿಚ್ ಕ್ತೌ ಚ ಸಂಜ್ಞಾಯಾಂ**— (ಪಾ. ಸೂ. ೩-೩-೧೭೪) ಎಂಬುದರಿಂದ ಸಂಜ್ಞೆ ತೋರುವುದರಿಂದ ಕ್ತಿಚ್ ಪ್ರತ್ಯಯ ಕಿತ್ತಾದುದರಿಂದ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. **ವೃಶ್ಚಭ್ರಸ್ಜ** ಎಂಬುದರಿಂದ ಧಾತುವಿನ ಶಕಾರಕ್ಕೆ ಷಕಾರಾದೇಶ. ಷ್ಟುತ್ವದಿಂದ ಪ್ರತ್ಯಯತಕಾರಕ್ಕೆ ಚಕಾರಾದೇಶ. **ಚಿತಃ** ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ತೃತೀಯಾ ಬಹುವಚನಾಂತರೂಪ.

ವಹಂತೀಃ— ವಹ ಪ್ರಾಪಣೇ ಧಾತು. ಲಡರ್ಥದಲ್ಲಿ ಶತೃಪ್ರತ್ಯಯ. ಶಪ್ ವಿಕರಣ ಸ್ತ್ರೀತ್ವದಲ್ಲಿ **ಉಗಿತಶ್ಚ** ಎಂಬುದರಿಂದ ಙೀಪ್ ಜಸಿನಲ್ಲಿ **ವಾ ಛಂದಸೀ** ಎಂಬುದರಿಂದ ಪೂರ್ವಸವರ್ಣದೀರ್ಘ.

ನಿಶ್ಪಾ—**ಸುಪಾಂ ಸುಲುಕ್**— ಎಂಬುದರಿಂದ ದ್ವಿತೀಯಾ ಏಕವಚನ. ಅಮಿಗೆ ಡಾದೇಶ. ॥ ೩ ॥

ಸಂಹಿತಾಪಾಠಃ

ಅಧಿ ಪೇಶಾಂಸಿ ವಪತೇ ನೃತೂರಿವಾಪೋರ್ಣುತೇ ವಕ್ಷ ಉಸ್ರೇ-
ವ ಬರ್ಜಹಂ ।
ಜ್ಯೋತಿರ್ವಿಶ್ವಸ್ಮೈ ಭುವನಾಯ ಕೃಣ್ವತೀ ಗಾವ್ಯೋ ನ-
ವ್ರಜಂ ವ್ಯುಷಾ ಆವರ್ತಮಃ ॥ ೪ ॥

॥ ಪದಪಾಠಃ ॥

ಅಧಿ । ಪೇಶಾಂಸಿ । ವಪತೇ । ನೃತೂಃ ಽಇವ । ಅಪ । ಊರ್ಣುತೇ । ವಕ್ಷಃ ।
ಉಸ್ರಾ ಽಇವ । ಬರ್ಜಹಂ ।
ಜ್ಯೋತಿಃ । ವಿಶ್ವಸ್ಮೈ । ಭುವನಾಯ । ಕೃಣ್ವತೀ । ಗಾವ್ಯಃ । ನ । ವ್ರಜಂ । ವಿ ।
ಉಷಾಃ । ಆವರಿತ್ಯಾವಃ । ತಮಃ ॥ ೪ ॥

ಸಾಯಣಭಾಷ್ಯಂ

ವಿ ಽ ಊರ್ಣ್ವತೀ । ದಿವಃ । ಅಂತಾನ್ । ಅಬೋಧಿ । ಅಪ । ಸ್ವಸಾರಂ । ಸನುತಃ । ಯುಯೋತಿ ।

ಪ್ರ ಽ ಮಿನತೀ । ಮನುಷ್ಯಾ । ಯುಗಾನಿ । ಯೋಷಾ । ಜಾರಸ್ಯ । ಚಕ್ಷಸಾ । ವಿ । ಭಾತಿ ॥ ೧೧ ॥

ಸಾಯಣಭಾಷ್ಯಂ

ದಿವೋ ನಭಸೋ೨ಽಂತಾನ್ ಪ್ರಾಂತಾನ್ವ್ಯೂರ್ಣ್ವತೀ ವಿವೃತಾಂಸ್ತಮಸಾ ವಿಯುಕ್ತಾನ್ ಕುರ್ವತ್ಯುಷಾ ಅಬೋಧಿ । ಸರ್ವೈಃ ಪ್ರಾಣಿಭಿರಜ್ಞಾಯಿ । ಜ್ಞಾತಾ೨ಭೂತ್ । ತದನಂತರಂ ಸ್ವಸಾರಮುಷಸಃ ಪ್ರಾದುರ್ಭಾವೇ ಸತಿ ಸ್ವಯಮೇವ ಸರಂತೀಂ ನಿಶಾಂ ಸನುತಃ । ಆಂತರ್ಹಿತನಾಮೈತತ್ । ಅಂತರ್ಹಿತಪ್ರದೇಶೇ೨ಪ ಯುಯೋತಿ । ಅಪಗಮಯ್ಯ ಪೃಥಕ್ಕರೋತಿ । ಮನುಷ್ಯಾ ಮನುಷ್ಯಾಣಾಂ ಸಂಬಂಧೀನಿ ಯುಗಾನಿ ಕೃತತ್ರೇತಾದೀನಿ ಪ್ರಮಿನತೀ ಸ್ವಗಮನಾಗಮನಾಭ್ಯಾಂ ಪ್ರಕರ್ಷೇಣ ಹಿಂಸಂತೀ ಜಾರಸ್ಯ ರಾತ್ರೇರ್ಜರಯಿತುಃ ಸೂರ್ಯಸ್ಯ ಯೋಷಾ ಜಾಯೋಷಾಶ್ಚಕ್ಷಸಾತ್ಮೀಯೇನ ಪ್ರಕಾಶೇನ ವಿ ಭಾತಿ । ವಿಶೇಷೇಣ ಪ್ರಕಾಶತೇ ॥ ವ್ಯೂರ್ಣ್ವತೀ । ಊರ್ಣುಞ್ ಆಚ್ಛಾದನೇ । ವಿಪೂರ್ವಾದಸ್ಮಾಲ್ಲಟಃ ಶತೃ । ಉಗಿತಶ್ಚೇತಿ ಙೀಪ್ । ಶತುರನುಮ ಇತಿ ನದ್ಯಾ ಉದಾತ್ತತ್ವಂ । ಸನುತಃ । ಏತದಂತೋದಾತ್ತಂ ಸ್ವರಾದಿಷು ನಿಪಾತಿತಂ । ಅತೋ೨ವ್ಯಯಸಂಜ್ಞಾಯಾಮವ್ಯಯಾದಾಪ್ಸುಪ ಇತಿ ಸಪ್ತಮ್ಯಾ ಲುಕ್ । ಯುಯೋತಿ । ಯು ಮಿಶ್ರಣಾಮಿಶ್ರಣಯೋಃ । ಬಹುಲಂ ಛಂದಸೀತಿ ಶಪಃ ಶ್ಲುಃ । ಮನುಷ್ಯಾ । ಸುಪಾಂ ಸುಲುಗಿತಿ ಷಷ್ಠ್ಯಾ ಡಾದೇಶಃ । ಯುಗಾನಿ । ಯುಜೇಃ ಕರಣೇ ಕರ್ಮಣಿ ವಾ ಘಞ್ । ಚಜೋಃ ಕು ಘಿಣ್ಯತೋರಿತಿ ಕುತ್ವಂ । ಉಂಛಾದಿಷು ಕಾಲವಿಶೇಷೇ ರಥಾದ್ಯುಪಕರಣೇ ಚ ಯುಗಶಬ್ದಪಾಠಾತ್ ಲಘೂಪಧಗುಣಾಭಾವಃ । ಕಾ. ೬-೧-೧೬೦ । ಉಂಛಾದೀನಾಂ ಚೇತ್ಯಂತೋದಾತ್ತತ್ವಂ । ಜಾರಸ್ಯ । ದಾರಜಾರೌ ಕರ್ತರಿ ಣಿಲುಕ್ಣೌ । ಪಾ ೩-೩-೨೦-೪ । ಘಞಂತೋ ನಿಪಾತ್ಯತೇ ॥

॥ ಪ್ರತಿಪದಾರ್ಥ ॥

ದಿವಃ—ಅಂತರಿಕ್ಷದ । **ಅಂತಾನ್**—ಕೊನೆಯ ಭಾಗಗಳನ್ನೆಲ್ಲಾ । **ವ್ಯೂರ್ಣ್ವತೀ**—(ಕತ್ತಲೆಯಿಂದ) ಬಿಡಿಸಿ ಪ್ರಕಾಶಗೊಳಿಸುತ್ತಾ ಇರುವ (ಉಷೋದೇವಿಯು) । **ಅಬೋಧಿ**—(ಎಲ್ಲರಿಂದಲೂ) ತಿಳಿಯಲ್ಪಟ್ಟಳು (ಅನಂತರ) । **ಸ್ವಸಾರಂ**—ತಾನಾಗಿಯೇ ಕಳೆದುಹೋಗತಕ್ಕ ರಾತ್ರಿಯನ್ನು । **ಸನುತಃ**—ಮರೆಯಾದ ಪ್ರದೇಶಕ್ಕೆ **ಅಪ ಯುಯೋತಿ**—ಅದೃಶ್ಯವಾಗುವಂತೆ ಓಟ್ಟುತ್ತಾಳೆ । **ಮನುಷ್ಯಾ**—ಮಾನವರ । **ಯುಗಾನಿ**—ಕೃತತ್ರೇತಾದಿ ಯುಗಗಳನ್ನು । **ಪ್ರಮಿನತೀ**—ಸವೆಯುವಂತೆ ಮಾಡುತ್ತಾ । **ಜಾರಸ್ಯ**—(ರಾತ್ರಿಯನ್ನು) ಕೊನೆಗಾಣಿಸುವ ಸೂರ್ಯನ ಅಥವಾ ತನ್ನ ಪ್ರಿಯನಾದ ಸೂರ್ಯನ । **ಯೋಷಾ**—ಪತ್ನಿಯಾಗಿ । **ಚಕ್ಷಸಾ**—ತನ್ನ ಕಾಂತಿಯೊಡನೆ । **ವಿ ಭಾತಿ**—ಪ್ರಕಾಶಿಸುತ್ತಾಳೆ ॥

ಭಾವಾರ್ಥ

ಉಷೋದೇವಿಯು ಅಂತರಿಕ್ಷದ ಕೊನೆಯ ಭಾಗಗಳನ್ನೆಲ್ಲಾ ಕತ್ತಲೆಯಿಂದ ಬಿಡಿಸಿ ಪ್ರಕಾಶಗೊಳಿಸುತ್ತಾ ಇರುವಾಗ ಎಲ್ಲರೂ ಅವಳ ಸ್ವರೂಪವನ್ನು ತಿಳಿದುಕೊಂಡರು. ಅವಳು ತಾನಾಗಿಯೇ ಕಳೆದುಹೋಗತಕ್ಕ ರಾತ್ರಿಯನ್ನು ಮರೆಯಾದ ಪ್ರದೇಶಕ್ಕೆ ಅದೃಶ್ಯವಾಗುವಂತೆ ಓಟ್ಟುತ್ತಾಳೆ. ಮಾನವರ ಕಾಲಮಾನಗಳಾದ ಕೃತ ತ್ರೇತಾದಿ ಯುಗಗಳನ್ನು ಸವೆಯುವಂತೆ ಮಾಡುತ್ತಾ ರಾತ್ರಿಯನ್ನು ಕೊನೆಗಾಣಿಸುವ ಸೂರ್ಯನ ಪತ್ನಿಯಾಗಿ ತನ್ನ ಕಾಂತಿಯೊಡನೆ ಪ್ರಕಾಶಿಸುತ್ತಾಳೆ ॥

English Translation

She has been seen illuminating the boundaries of the sky, and driving into disappearance the spontaneously night; wearing away the ages of the human race, she shines with light like the bride of the Sun.

ವಿಶೇಷನಿಷಯಗಳು ॥

ವ್ಯೂರ್ಣ್ವತೀ—**ಊರ್ಣೂಞ್ ಆಚ್ಛಾದನೇ** । ಮರೆಸು, ಹೊದ್ದಿಸು ಎಂಬ ಅರ್ಥದ **ಊರ್ಣು** ಧಾತುವು **ಊರ್ಣ್ವತೀ** ಎಂದಾಗುತ್ತದೆ. ಇಲ್ಲಿ **ವಿ** ಎಂಬ ಉಪಸರ್ಗದೊಡನೆ ಸೇರಿ ವಿಗತವಾದ **ಆಚ್ಛಾದನೆ** ಎಂದರೆ ಕತ್ತಲುರೂಪವಾದ ಮರೆಯನ್ನು ತಪ್ಪಿಸುವುದು ಎಂದರ್ಥ. **ವಿವೃತಾಂಸ್ತಮಸಾ ವಿಯುಕ್ತಾನ್ ಕುರ್ವಂತ್ಯುಷಾಃ** ।ಸುತ್ತಲೂ ಆವರಿಸಿರುವ ಕತ್ತಲೆಯಿಂದ ಜಗತ್ತನ್ನು ಬಿಡಿಸಿ ಪ್ರಕಾಶಗೊಳಿಸುತ್ತಿರುವ ಉಷಸ್ಸು ಎಂದರ್ಥ.

ಕೆಲವು ಕಡೆಗಳಲ್ಲಿ ಉಷಸ್ಸಿಗೇ ವಿಶೇಷಣವಾಗಿ ಉಪಯೋಗಿಸಿದಾಗ **ವ್ಯೂರ್ಣ್ವತೀ** ಎಂಬ ಪದಕ್ಕೆ ಕೊಡುವುದು ಎಂಬ ಅರ್ಥವೂ ಇದೆ. ಉದಾಹರಣೆಗೆ—

ವ್ಯೂರ್ಣ್ವತೀ ದಾಶುಷೇ ವಾರ್ಯಾಣಿ ಪುನರ್ಜ್ಯೋತಿರ್ಯುವತಿಃ ಪೂರ್ವಥಾಕಃ ।

ಋ. ಸಂ. ೫-೮೦-೬.

ಎಂಬ ಈ ಋಕ್ಕಿನಲ್ಲಿ **ಪ್ರಯಚ್ಛಂತೀ** । ಕೊಡುವವಳಾಗಿ ಎಂದು ವಿವರಿಸಿದೆ. ಇಲ್ಲೂ ಸಹ ಪ್ರಕಾಶಪಡಿಸಿ ಕೊಡುವುದು ಎಂದಾಗುತ್ತದೆ. ಋ. ಸಂ. ೯-೯೪-೨. ಮುಂತಾದ ಋಕ್ಕುಗಳಲ್ಲಿ **ಸ್ವತೇಜಸಾ ಆಚ್ಛಾದಯನ್** ಎಂದು ವಿವರಿಸುತ್ತಾರೆ. ಅಲ್ಲೆಲ್ಲಾ **ವಿ** ಎನ್ನುವ ಉಪಸರ್ಗಕ್ಕೆ ವಿಶೇಷವಾದ ಎಂದಾಗಿ ವಿಶೇಷವಾದ **ಊರ್ಣವನೆ** ಎಂದರೆ ಸಂಪೂರ್ಣವಾಗಿ ತೇಜಸ್ಸನ್ನು ಹರಡಿ ಆವರಿಸುವುದು ಎಂದಭಿಪ್ರಾಯವು.

ಸ್ವಸಾರಂ—**ಉಷಸಃ ಪ್ರಾದುರ್ಭಾವೇ ಸತಿ ಸ್ವಯಮೇವ ಸರಂತೀಂ ನಿಶಾಂ** । ಉಷಸ್ಸಿನ ಉದಯವಾದೊಡನೆಯೇ ತಾನಾಗಿಯೇ ಕಳೆಮಹೋಗತಕ್ಕ ರಾತ್ರಿಯನ್ನು ಎಂದು ವಿವರಿಸಿದೆ ಇಲ್ಲಿ **ಸ್ವಸಾರಂ** ಎಂಬ ಪದಕ್ಕೆ ಸಹೋದರಿಯನ್ನು ಎಂದೂ ಅರ್ಥಮಾಡಬಹುದು. ರಾತ್ರಿಯೂ ಉಷಸ್ಸೂ ಸಹೋದರಿಯರೆಂದು ರಾತ್ರಿಯು

ತನ್ನ ಕಾಲವಾದೊಡನೆ ತನ್ನ ಸಹೋದರಿಯಾದ ಉಷಸ್ಸಿಗೆ ದಾರಿಯನ್ನು ಬಿಟ್ಟುಕೊಡುವಳೆಂದೂ ಸಹ ಅನೇಕ ಕಡೆ ಇವರಿಬ್ಬರ ಸಂಬಂಧವನ್ನೂ ವಿವರಿಸಿದೆ.

ಸಮಾನೋ ಅಧ್ವಾ ಸ್ವಸ್ರೋರನಂತಸ್ತಮನ್ಯಾನ್ಯಾ ಚರತೋ ದೇವಶಿಷ್ಟೇ ।
(ಋ ಸಂ. ೧-೧೧೩-೩)

ಸ್ವಸ್ರಾ ಸಸ್ರೇ ಜ್ಯಾಯಸ್ಯೈ ಯೋನಿಮಾರೈಗಪೈತ್ಯಸ್ಯಾಃ ಪ್ರತಿಚಕ್ಷ್ಯೈವ ।
(ಋ. ಸಂ. ೧-೧೨೪-೮)

ಅರುಷಸ್ಯ ದುಹಿತರಾ ವಿರೂಪೇ ಸ್ತೃಭಿರನ್ಯಾ ಪಿಪಿಶೇ ಸೂರೋ ಅನ್ಯಾ ।
ಮಿಥಸ್ತುರಾ ವಿಚರಂತೀ ಪಾವಕೇ ಮನ್ಮ ಶ್ರುತಂ ನಕ್ತಯತ ಋಚ್ಯಮಾನೇ ।
(ಋ. ಸಂ. ೬-೪೯-೩)

ಇತ್ಯಾದಿ ಅನೇಕ ಋಕ್ಕುಗಳಲ್ಲಿ ರಾತ್ರಿಯ ಮತ್ತು ಉಷಸ್ಸಿನ ಸಹೋದರಿ ಸಂಬಂಧವನ್ನು ವರ್ಣಿಸಿ ಯಾವ ರೀತಿ ಅವರಿಬ್ಬರೂ ಸಹ ತಮ್ಮ ಸತತವಾದ ಮತ್ತು ನಿಯಮಿತವಾದ ಸಂಚಾರದಿಂದ ಲೋಕಯಾತ್ರೆಗೆ ಕಾರಣರಾಗಿರುವವರೆಂದು ವಿವರಿಸಿದೆ. ಆದುದರಿಂದ ಇಲ್ಲಿಯೂ ಸಹ **ಸ್ವಸಾರಂ** ಎನ್ನುವುದಕ್ಕೆ ಸಹೋದರಿಯನ್ನು ಎಂದು ಹೇಳಬಹುದು

ಸನುತಃ—ಸನ್ಯಂ, ಸ್ವಸಃ, ಸನುತಃ ಇತ್ಯಾದಿ ಆರು ಅಂತರ್ಹಿತ ನಾಮಗಳಲ್ಲಿ ಪಠಿತವಾಗಿರುವುದರಿಂದ (ಸಿ. ೩-೧೯) ಗೂಢವಾದುದು, ಕಣ್ಣಿಗೆ ಕಾಣದಿರುವುದು ಎಂದರ್ಥ. ಈಪದಕ್ಕೆ ಉದಾಹರಣೆಯಾಗಿ ನಿರುಕ್ತಕಾರರು

ಸ ಸುತ್ರಾಮಾ ಸ್ವವಾ ಇಂದ್ರೋ ಅಸ್ಮೇ ಆರಾಚ್ಚಿದ್ದ್ವೇಷಃ ಸನುತರ್ಯುಯೋತು ।
(ಋ. ಸಂ. ೬-೪೭-೧೩)

ಎಂಬ ಋಕ್ಕನ್ನು ಉದಹರಿಸಿರುತ್ತಾರೆ. ಹೀಗೆಯೇ, ಋಂ. ಸಂ. ೨-೨೯-೨ , ೫-೪೫-೪೫ ; ೮-೯೭-೩ ; ೧೦-೬೭-೬ ಇತ್ಯಾದಿ ಅನೇಕ ಋಕ್ಕುಗಳಲ್ಲಿ **ಈ** ಪದವು ರಹಸ್ಯ, ಮರೆಯಾಗಿ, ಕಣ್ಣಿಗೆ ಕಾಣದಿರುವ ಪ್ರದೇಶ ಎಂಬ ಅರ್ಥಗಳಲ್ಲಿ ಉಪಯೋಗಿಸಲ್ಪಟ್ಟಿದೆ ಈ ಸಂದರ್ಭದಲ್ಲೂ ಉಷಸ್ಸು ತನ್ನ ಸಹೋದರಿಯಾದ ನಿಶೆಯನ್ನು ಯಾರಿಗೂ ಕಾಣದಿರುವ ಮರೆಯಾದ ಪ್ರದೇಶಕ್ಕೆ ಅಟ್ಟುತ್ತಾತ್ತಳೆಂದರ್ಥ.

ಯುಗಾನಿ ಪ್ರಮಿನತೀ—**ಯುಗ ಶಬ್ದಃ ಕಾಲವಚನಃ । ಮನುಷ್ಯಾಣಾಂ ಜೀವಿತಾದಿಕಾಲಾನ್ ।** **ಯುಗ** ಶಬ್ದವು ಮಾನವರ ಜೀವಿತದ ಕಾಲವೆಂದರ್ಥ. (ಇದರ ವಿವರಣೆಯನ್ನು ಬಾಲಗಂಗಾಧರ ತಿಲಕರವರ The Arctic Home in the Vedas ಎಂಬ ಪುಸ್ತಕದ ೧೭೬ ನೆಯ ಪುಟದಲ್ಲಿ ನೋಡಬಹುದು) ಮಾನವರ ಜೀವಿತದ ಕಾಲವನ್ನೆಲ್ಲಾ ಸವೆಯುವಂತೆ ಮಾಡುತ್ತಾ)

ಚಕ್ಷಸಾ ವಿಭಾತಿ—ತನ್ನ ಕಾಂತಿಯೊಡನೆಯೂ ಸೊಬಗಿನೊಡನೆಯೂ ಸಹ ತನ್ನ ಪ್ರಿಯನಾದ ಸೂರ್ಯನೊಡನೆ ಪ್ರಕಾಶಿಸುತ್ತಾಳೆ. ಈ ಭಾವದಲ್ಲಿ ಸತ್ಯಾನುಭವವೂ ಸೌಂದರ್ಯದರ್ಶನವೂ ಒಟ್ಟಿಗೆ ಸೇರಿಕೊಂಡಿದೆ. ಉಷಸ್ಸು ಮಾನವರ ಜೀವಿತದ ಕಾಲವನ್ನೆಲ್ಲಾ ಸವೆಸುತ್ತಾಳೆ ಎಂಬ ಸತ್ಯದರ್ಶನದ ಭಾವವು ಸಾಧಾರಣವಾಗಿ ಉಷಸ್ಸಿನ ವರ್ಣನೆಯು ಎಂದಿಗೆಲ್ಲಾ ವ್ಯಕ್ತವಾಗಿದೆ. ಉದಾಹರಣೆಗೆ—

ಈಯುಷ್ಟೇ ಯೇ ಪೂರ್ವತರಾಮಪಶ್ಯನ್ವ್ಯಚ್ಛಂತೀಮುಷಸಂ ಮರ್ತ್ಯಾಸಃ ।
(ಋ. ಸಂ. ೧-೧೧೩-೧೯)

ಅಮಿನತೀ ದೈವ್ಯಾನಿ ವ್ರತಾನಿ ಪ್ರಮಿನತೀ ಮನುಷ್ಯಾ ಯುಗಾನಿ ।
(ಋ. ಸಂ. ೧-೧೨೪-೨)

ಇತ್ಯಾದಿ ನಾನಾ ಕಡೆಗಳಲ್ಲಿ ಮಾನವನ ಅಲ್ಪಕಾಲ ಜೀವನದ ಚಿತ್ರವು— ಶಾಶ್ವತವಾದ ಈ ಉಷಸ್ಸಿನ ಸೊಬಗನ್ನು ಹಿಂದೆ ನೋಡಿ ಸಂತೋಷಪಟ್ಟವರೆಲ್ಲರೂ ಗತರಾದರು. ಮುಂದಿನವರ ಪಾಡೂ ಹೀಗೆಯೇ, ಆದರೆ ಉಷಸ್ಸು ಮಾತ್ರ ನಿತ್ಯಳೂ, ನಿತ್ಯ ತರುಣಳೂ ಆಗಿರುತ್ತಾಳೆ ಎಂಬ ಭಾವದಿಂದ ವ್ಯಕ್ತಪಡುತ್ತದೆ.

ಜಾರಸ್ಯೇ—ರಾತ್ರೇರ್ಜರಯಿತುಃ ಸೂರ್ಯಸ್ಯ । ರಾತ್ರಿಯನ್ನು ಕೊನೆಗಾಣಿಸತಕ್ಕ ಸೂರ್ಯನ ಎಂದಾಗಲಿ, ಅಥವಾ ಪ್ರಿಯನಾದ ಸೂರ್ಯನ ಎಂದಾಗಲಿ ಅರ್ಥವಾಗುತ್ತದೆ. ಎರಡನೆಯ ಅರ್ಥವೇ ಹೆಚ್ಚು ಒಪ್ಪುತ್ತದೆ. **ಯೋಷಾ**— ಪತ್ನಿಯಾಗಿ ಎಂದು ಮುಂದಕ್ಕೆ ಪತಿಪತ್ನೀಸಂಬಂಧವು ಇರುವುದರಿಂದ ಪ್ರಿಯನೆಂಬ ಅರ್ಥವು ಸಮುಂಜಸವಾಗಿದೆ. ಉಷಸ್ಸಿಗೂ ಸೂರ್ಯನಿಗೂ ಈ ದಾಂಪತ್ಯಸಂಬಂಧವು ಅನೇಕ ಕಡೆಗಳಲ್ಲಿ ವರ್ಣಿತವಾಗಿದೆ. ಉದಾಹರಣೆಗೆ—

ಸೂರ್ಯೋ ದೇವೀಮುಷಸಂ ರೋಚಮಾನಾಂ ಮರ್ಯೋ ನ ಯೋಷಾಮಭ್ಯೇತಿ ಪಶ್ಚಾತ್ ।
(ಋ. ಸಂ. ೧-೧೧೫-೨)
ವಾಜಿನೀವತೀ ಸೂರ್ಯಸ್ಯ ಯೋಷಾ ಚಿತ್ರಾಮಘಾ ರಾಯೇ ಈಶೇ ವಸೂನಾಂ ।
(ಋ. ಸಂ. ೭-೭೫-೫)

ಇತ್ಯಾದಿ ಅನೇಕ ಸಂದರ್ಭಗಳಲ್ಲಿ ಸೂರ್ಯನಿಗೂ ಉಷಸ್ಸಿಗೂ ಇರುವ ಪತಿಪತ್ನಿಯರ ಸಂಬಂಧವು ಸೂಚಿತವಾಗಿದೆ. ನಿರುಕ್ತಕಾರರೂ ಸಹ—**ಸೂರ್ಯಾ ಸೂರ್ಯಸ್ಯ ಪತ್ನೀ ।** ಎಂದು ವಿವರಿಸಿ ಋ. ಸಂ. ೧೦-೮೫-೨೦ನೇ ಋಕ್ಕನ್ನು ಉದಹರಿಸುತ್ತಾರೆ. (ನಿ. ೧೨-).

ಚಕ್ಷಸಾ—ಆತ್ಮೀಯೇನ ಪ್ರಕಾಶಾತ್ಮೇನ। ದರ್ಶನೇನ ತನ್ನ ಕಾಂತಿರೂಪವಾದ ದರ್ಶನದಿಂದ ಸೂರ್ಯನೊಂದಿಗೆ ಲೀನಳಾಗಿ ಪ್ರಕಾಶಿಸುತ್ತಾಳೆಂದರ್ಥ.

॥ ವ್ಯಾಕರಣಪ್ರಕ್ರಿಯಾ ॥

ವ್ಯೂರ್ಣ್ವತೀ—ಊರ್ಣುಞ್ ಆಚ್ಛಾದನೇ. ಧಾತು. ವಿ ಉಪಸರ್ಗ ಪೂರ್ವದಲ್ಲಿರುವಾಗ ಇದಕ್ಕೆ ಲಟ್ ಸ್ಥಾನದಲ್ಲಿ ಶತೃ ಪ್ರತ್ಯಯ. **ವ್ಯೂರ್ಣ್ವತ್** ಶಬ್ದವಾಗುತ್ತದೆ. ಸ್ತ್ರೀತ್ವದಲ್ಲಿ ಶತೃ ಉಗಿತ್ತಾದುದರಿಂದ **ಉಗಿತಶ್ಚ** ಎಂಬುದರಿಂದ ಙೀಪ್. ನುಮ್ ರಹಿತವಾದ ಶತೃವಿನ ಪರದಲ್ಲಿ ನದೀಸಂಜ್ಞೆಯುಳ್ಳ **ಈ**ಕಾರ ಬಂದುದರಿಂದ **ಶತುರನುನೋ ನದ್ಯಜ್ಯಾದೀ** ಎಂಬುದರಿಂದ ಙೀಪಿಗೆ ಉದಾತ್ತಸ್ವರ ಬರುತ್ತದೆ.

ದಿವಃ—ಊಡಿದಂ ಪದಾದಿ—ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಅಂತಾನ್—ದೀರ್ಘಾದಟಿ ಸಮಾನಪಾದೇ—ಎಂಬುದರಿಂದ ನಕಾರಕ್ಕೆ ರುತ್ವ. **ಅತೋಟಿ ನಿತ್ಯಮ್** ಎಂಬುದರಿಂದ ಹಕಾರಪರವಲ್ಲಿರುವುದರಿಂದ ಆಕಾರಕ್ಕೆ ಅನುನಾಸಿಕತ್ವ.

ಅಬೋಧಿ—ಬುಧ ಅವಗಮನೇ ಧಾತು. ಕರ್ಮಣಿಯಲ್ಲಿ ಲುಙ್ ಪ್ರಥಮಪುರುಷ ಏಕವಚನದಲ್ಲಿ **ತಪ್ರತ್ಯಯ**. **ಚಿಣ್ ಭಾವಕರ್ಮಣೋಃ**—ಎಂಬುದರಿಂದ ಚ್ಲಿಗೆ ಚಿಣಾದೇಶ. ಧಾತುವಿನ ಲಘೂಪಧೆಗೆ ತನ್ನಿಮಿತ್ತವಾಗಿ ಗುಣ. **ಚಿಣೋ ಲುಕ್** (ಪಾ. ಸೂ. ೬-೪-೧೦೪) ಎಂಬುದರಿಂದ ತಶಬ್ದಕ್ಕೆ ಲುಕ್. ಅಂಗಕ್ಕೆ ಅಡಾಗಮ. ತಿಙಂತನಿಘಾತಸ್ವರ ಬರುತ್ತದೆ.

ಸನುತಃ— ಸ್ವರಾದಿಯಲ್ಲಿ ಇದು ಅಂತೋದಾತ್ತವಾಗಿ ಪಠಿತವಾದುದರಿಂದ **ಸ್ವರಾದಿನಿಷಾತಮವ್ಯಯಮ್** ಎಂಬುದರಿಂದ ಅವ್ಯಯಸಂಜ್ಞಾ ಬರುವುದರಿಂದ **ಅವ್ಯಯಾದಾಪ್ಸುಪಃ** (ಪಾ. ಸೂ. ೨-೪-೮೨) ಎಂಬುದರಿಂದ ಇದರ ಪರದಲ್ಲಿರುವ ಸಪ್ತಮೀ ವಿಭಕ್ತಿಗೆ ಲುಕ್.

ಯುಯೋತಿ—ಯು ವಿಶ್ರಣಾಮಿಶ್ರಣಯೋಃ ಧಾತು. ಲಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಬಹುಲಂ ಛಂದಸಿ**—ಸೂತ್ರದಿಂದ ಶಪಿಗೆ ಶ್ಲು ಆದೇಶ. **ಶ್ಲೌ**—ಎಂಬುದರಿಂದ ಧಾತುವಿಗೆ ದ್ವಿತ್ವ. **ಸಾರ್ವಧಾತುಕಾರ್ಧಧಾತುಕಯೋಃ**—ಎಂಬುದರಿಂದ ತಿಪ್‌ನಿಮಿತ್ತವಾಗಿ ಧಾತುವಿನ ಉಕಾರಕ್ಕೆ ಗುಣ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಮನುಷ್ಯಾ—ಮನುಷ್ಯ ಶಬ್ದಕ್ಕೆ ಷಷ್ಠೀವಿಭಕ್ತಿ ಪರವಾದಾಗ **ಸುಪಾಂ ಸುಲುಕ್**—ಸೂತ್ರದಿಂದ ವಿಭಕ್ತಿಗೆ ಡಾದೇಶ.

ಯುಗಾನಿ—ಯುಜಿರ್ ಯೋಗೇ ಧಾತು. ಕರಣಾರ್ಥದಲ್ಲಿ ಅಥವಾ ಕರ್ಮಣಿಯಲ್ಲಿ ಘಞ್ ಪ್ರತ್ಯಯ. **ಚಜೋಃ ಕುಘಿಣ್ಯತೋಃ**—(ಪಾ. ಸೂ. ೭-೩-೫೨) ಎಂಬುದರಿಂದ ಘಿತ್ತಾದಪ್ರತ್ಯಯ ಪರದಲ್ಲಿರುವುದರಿಂದ ಜಕಾರಕ್ಕೆ ಕುತ್ವದಿಂದ ಜಕಾರಾದೇಶ. ಲಘೂಪಧಗುಣವು ಪ್ರಾಪ್ತವಾದರೆ ಉಂಛಾದಿಗಣದಲ್ಲಿ ಕಾಲವಿಶೇಷಾರ್ಥದ ಯುಗಶಬ್ದವನ್ನು ಪಾಠಮಾಡಿರುವುದರಿಂದ (ಪಾ. ಸೂ. ೬-೧-೧೬೦) ಲಘೂಪಧಗುಣ ಬರುವುದಿಲ್ಲ. **ಉಂಛಾದೀನಾಂ ಚ**—ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ಜಾರಸ್ಯ—**ದಾರ ಜಾರೌ ಕರ್ತರಿ ಣಿಲುಕ್ಚ** (ಪಾ ಸೂ. ೩-೩-೨೦-೪) ಎಂಬುದರಿಂದ ಘಞಂತವಾಗಿ ನಿಪಾತಿತವಾಗಿದೆ. ॥ ೧೧ ॥



ಸಂಹಿತಾಪಾಠಃ

ಪ್ರಶೂನ್ನ ಚಿತ್ರಾ ಸುಭಗಾ ಪ್ರಥಾನಾ ಸಿಂಧುರ್ನ ಕ್ಷೋದ ಉರ್ವಿಯಾ ವ್ಯಶ್ವ್ಯತ್ ।

अमिनतीदैव्यानि व्रतानि सूर्यस्य चेति रश्मिभिर्दृ-
शानाः ॥ ८३ ॥

॥ पदपाठः ॥

पशून् । न । चित्राः । सुऽभगाः । प्रथानाः । सिंधुः । न । क्षोदः ।
उर्विया । वि । अश्वैत् ।
अमिनती । दैव्यानि । व्रतानि । सूर्यस्य । चेति । रश्मिऽभिः । दृशानाः ॥

सायणभाष्यं

सुभगाः शोभनधनाः चित्राः चायनीया पूजनीयोषाः पशून्न यथा पशून् गोपालकोऽरण्ये विस्तारयति तथा प्रथानाः तेजांसि विस्तारयंत्युर्विया उर्वी महती एवंभूता सा व्यश्वैत् । सर्वं जगद्व्याप्नोत् । तत्र दृष्टांतः । सिंधुर्न क्षोदः । यथा स्यंदनशीलमुदकं निम्नदेशेऽचिरादेव व्याप्नोति तद्वत् । सैवोषाः सूर्यस्य रश्मिभिः किरणैः सह दृशानाः दृश्यमानाः सती चेति । प्रज्ञातासीत् । किं कुर्वती । दैव्यानि देवसंबंधीनि व्रतानि दर्शपूर्णमासादीनि कर्माण्यमिनती अहिंसती । अनुष्ठानेन यजमानान्वर्तयंतीत्यर्थः । उषसः प्रादुर्भावानंतरं हव्याग्निहोत्रादीनि सर्वाणि कर्माण्यनुष्ठीयंते न रात्रौ । न सायमस्ति देवता अजुष्टं । ऋग्वे. ७-८८-३ । इति श्रुतेः ॥ प्रथानाः । प्रथ प्रख्यानेन । अस्मादंतर्भावितण्यर्थात्तुट्चेलिकश्चानट् । बहुलं छंदसीति शपो लुक् । सिंधुः । स्यंदू प्रस्रवणे । स्यंदेः संप्रसारणं धश्च । उ. १-७३ । इत्युप्रत्ययः । निदित्यनुवृत्तेरामुदात्तत्वं । अश्वैत् । टुओश्वि गतिवृद्ध्योः । लुङ्यङ्चिण्कृदेकल्पितत्वात् । सा ३-१-४-३अ । च्लेः सिच् । अगमानुशासनस्यानित्यत्वादिडभावः । सिचि वृद्धिः । पा. ७-३-१ । अनिडादित्वात् ह्म्यंतक्षणेति वृद्धिप्रतिषेधाभावः । बहुलं छंदसि । पा ६-४-७५ । इतीडागमाभावः । स्फोटः । संयोगाद्योरिति सलोपः । चेति । चिती संज्ञाने । कर्मणि लुङ् बहुलं छंदस्यमाङ्योगेऽप्यडभावः । दृशानाः । दृशेः कर्मणि लटः शानच् । बहुलं छंदसीति विकरणस्य लुक् ॥

ಪ್ರತಿಪದಾರ್ಥ

ಸುಭಗಾ—ಶ್ರೇಷ್ಠವಾದ ಧನವುಳ್ಳವಳೂ । **ಚಿತ್ರಾ**— ಪೂಜ್ಯಳೂ ಆದ ಉಷೋದೇವಿಯು । **ಪಶೂನ್ ನ**—(ಗೋಪಾಲಕನು ಮೇಯುವುದಕ್ಕೆ) ಹಸುಗಳನ್ನು ಚದುರಿಸುವಂತೆಯೂ । **ಸಿಂಧುಃ ನ ಕ್ಷೋದಃ**— ಪ್ರವಹಿಸುವ ನದಿಯು ನೀರನ್ನು ಹರಡುವಂತೆಯೂ । **ಪ್ರಥಾನಾ**— ತನ್ನ ತೇಜಸ್ಸುಗಳನ್ನು ಹರಡಿಕೊಂಡು । **ಉರ್ವಿಯಾ**— ವಿಸ್ತೃತಳಾಗಿ । **ವ್ಯಶ್ವೈತ್**— ಜಗತ್ತನ್ನು ವ್ಯಾಪಿಸಿದಳು । **ದೈವ್ಯಾನಿ**— ದೇವಸಂಬಧವಾದ । **ವ್ರತಾನಿ**— ಯಜ್ಞ ಕರ್ಮಗಳನ್ನು । **ಅಮಿನತೀ**— ಹಿಂಸಿಸದೇ । **ಸೂರ್ಯಸ್ಯ**—ಸೂರ್ಯನ । **ರಶ್ಮಿಭಿಃ**—ಕಿರಣಗಳೊಡನೆ ಕೂಡಿ । **ದೃಶಾನಾ**—ಕಾಣಿಸಿಕೊಂಡು । **ಚೇತಿ**—ತಿಳಿಯಲ್ಪಟ್ಟಳು ।'

ಭಾವಾರ್ಥ

ಶ್ರೇಷ್ಠವಾದ ಧನವುಳ್ಳವಳೂ ಮತ್ತು ಪೂಜ್ಯಳೂ ಆದ ಉಷೋ ದೇವಿಯು ಗೋಪಾಲಕನು ಹುಲ್ಲನು ಮೇಯಿಸುವಾಗ ಹಸುಗಳನ್ನು ಹುಲ್ಲುಗಾವಲಿನಲ್ಲಿ ನಾನಾದಿಕ್ಕಿಗೂ ಚದುರಿಸುವಂತೆಯೂ ಪ್ರವಹಿಸುವ ನದಿಯು ತನ್ನ ನೀರನ್ನು ಹರಡುವಂತೆಯೂ ತನ್ನ ತೇಜಸ್ಸುಗಳನ್ನು ಹರಡಿಕೊಂಡು ವಿಸ್ತೃತಳಾಗಿ ಜಗತ್ತನ್ನು ವ್ಯಾಪಿಸಿದಳು. ಮತ್ತು ದೇವಸಂಬಂಧವಾದ ಯಜ್ಞ ಕರ್ಮಗಳನ್ನು ಹಿಂಸಿಸದೇ ಸೂರ್ಯನ ಕಿರಣಗಳೊಡನೆ ಕಾಣಿಸಿಕೊಂಡು ಎಲ್ಲರಿಗೂ ಗೋಚರವಾದಳು.

English Translation

The affluent and adorable Ushas has sent her rays as a cowherd drives the cattle to pasture, and spreads expansive like flowing water ; She is seen associated with the rays of the Sun, unimpeding sacred ceremonies.

ವಿಶೇಷವಿಷಯಗಳು

ಚಿತ್ರಾ—ಪೂಜನೀಯಾ । ಪೂಜ್ಯಳಾದ ಉಷೋದೇವಿಯು. **ಚಿತ್ರ**—ಎನ್ನುವ ಪದಕ್ಕೆ ಸಾಧರಣವಾಗಿ **ಚಾಯನೀಯ ।** ರಮ್ಯವಾದ, ಆಶ್ಚರ್ಯಕರವಾದ, ಅಥವಾ ಆಕರ್ಷಕವಾದ ಎಂದರ್ಥವೇ ಪ್ರಸಿದ್ಧಿಯಲ್ಲಿರುವುದು. ಆದರೆ ಇಲ್ಲಿ ಮಾತ್ರ ಪೂಜ್ಯಳು ಎಂದರ್ಥವಾಗುತ್ತದೆ ನಿರುಕ್ತಕಾರರು ಇದರ ಮುಂದಿನ ಋಕ್ಕನ್ನು ಉದಹರಿಸಿ ಅಲ್ಲಿ ಬರುವ **ಚಿತ್ರ** ಶಬ್ದಕ್ಕೆ **ಚಿತ್ರಂ-ಮಂಹನೀಯಂ** (Respectable) ಪೂಜ್ಯವಾದ ಎಂದು ವಿವರಿಸಿದ್ದಾರೆ ಅದರಂತೆಯೇ ಇಲ್ಲಿಯೂ ಅರ್ಥಮಾಡಬೇಕು.

ಸಿಂಧುಃ ನ ಕ್ಷೋದಃ—ಅವನಯಃ, ಯಪ್ಲಯಃ, ಖಾಃ ಇತ್ಯಾದಿ ೩೭ **ನದೀನಾಮ**ಗಳಲ್ಲಿ ಪಠಿತವಾಗಿರುವುದರಿದ (ನಿ. ೩–೨೪) ಸಿಂಧುವೆಂದರೆ ನದಿಯೆಂದೂ ; ಅರ್ಣಃ, ಕ್ಷೋದಃ, ಇತ್ಯಾದಿ ೧೦೧ **ಉದಕನಾಮ**ಗಳಲ್ಲಿ ಪಠಿತವಾಗಿರುವುದರಿಂದ **ಕ್ಷೋದವೆಂದರೆ** ಉದಕವೆಂದೂ ಅರ್ಥ. ಇಲ್ಲಿ ಉಪಮಾನವು ಉಚಿತವಾಗಿದೆ. ನದಿಯು ತನ್ನ ನೀರನ್ನು ತಡೆಯಿಲ್ಲದೆಯೂ ವಿಸ್ತಾರವಾಗಿ ಹರಡುವಂತೆ ಉಷಸ್ಸೂ ಸಹ ತನ್ನ ಪ್ರಭೆಯನ್ನು ವಿಸ್ತಾರವಾಗಿ ಹರಡುತ್ತಾಳೆ.

ವ್ಯಶ್ನೈತ್—**ಶ್ನವತಿರ್ಗತ್ಯರ್ಥಃ । ವಿವಿಧಂ ಗಚ್ಛತಿ ತ್ರೀನಪಿ ಲೋಕಾನ್ ಪ್ರತಿ ।** ಮೂರು ಲೋಕಗಳಿಗೂ ವಿಧವಿಧವಾಗಿ ತನ್ನ ಕಿರಣಗಳನ್ನು ಹರಡುತ್ತಾಳೆ.

ಉರ್ವಿಯಾ ಪ್ರಥಾನಾ—ಅತ್ಯಂತ ವಿಸ್ತಾರವಾಗಿ ಹರಡಿಕೊಂಡು ಎಂದರ್ಥ. **ಪ್ರಥಾನಾ** ಎಂಬ ವಿಶೇಷಣವು ಗಗನದಲ್ಲಿ ವಿಸ್ತಾರವಾಗಿ ಹರಡಿ ತನ್ನ ಕಾಂತಿಯನ್ನು ಪ್ರಸರಿಸುವ ಉಷಸ್ಸಿಗೆ ವಿಶೇಷಣವಾಗಿರುವುದು.

ವಹಂತಿ ಸೀಮರುಣಾಸೋ ರುಶಂತೋ ಗಾವಃ ಸುಭಗಾಮುರ್ವಿಯಾ ಪ್ರಥಾನಾಂ ।
(ಋ. ಸಂ. ೬-೬೪-೩)

ದೈವ್ಯಾನಿ ವ್ರತಾನಿ ಅಮಿನತೀ—ದೇವಸಂಬಂಧವಾದ ಯಾಗಾದಿ ವ್ರತಗಳನ್ನು ಹಿಂಸಿಸದೇ ಎಂದರ್ಥ. ಹಿಂದಿನ ಋಕ್ಕಿನಲ್ಲಿ **ಪ್ರಮಿನತೀ ಮನುಷ್ಯಾ ಯುಗಾನಿ** ಎನ್ನುವ ಭಾವವನ್ನೂ ಈ ಋಕ್ಕಿನ **ಅಮಿನತೀ ದೈವ್ಯಾನಿ ವ್ರತಾನಿ** ಎನ್ನುವ ಭಾವವನ್ನೂ ಒಟ್ಟಿಗೆ ಸೇರಿಸಿ ಋ. ಸಂ. ೧-೧೨೪-೨ನೆಯ ಋಕ್ಕಿನಲ್ಲಿ ಹೇಳಿದೆ.

ಅಮಿನತೀ ದೈವ್ಯಾನಿ ವ್ರತಾನಿ ಪ್ರಮಿನತೀ ಮನುಷ್ಯಾ ಯುಗಾನಿ ।
ಈಯುಷಿಣಾಮುಪಮಾ ಶಶ್ವತೀನಾಮಾಯತೀನಾಂ ಪ್ರಥಮೋಷಾ ನ್ಯದ್ಯೌತ್ ।
(ಋ. ಸಂ. ೧-೧೨೪-೨)

ಈ ಋಕ್ಕಿನ ಕಾವ್ಯಾತ್ಮಕವಾದ ಭಾವವನ್ನು ರಚನಾಶೈಲಿಯನ್ನು ವಿವರಿಸುತ್ತಾ **ಬ್ಲೂಂ ಫೀಲ್ಡ್** ಎಂಬ ವಿಮರ್ಶಕನು ಇದನ್ನು ಅತಿಶಯವಾಗಿ ಹೊಗಳಿದ್ದಾನೆ. ಅವನ ಭಾಷೆಯಲ್ಲಿಯೇ ಈ ಋಕ್ಕಿನ ಸ್ವಾರಸ್ಯವನ್ನು ವರ್ಣಿಸುವುದಾದರೆ,

" Stanza I. 124-2. is the high-water mark of Vedic composition. The relation of the two pairs of words may be expressed in the proportion. ಅಮಿನತೀಃ ಆಯತೀನಾಂ=ಪ್ರಮಿನತೀಃ ಈಯುಷೀಣಾಂ That is to say : The dawns preserve the laws of the Gods. ಅಮಿನತೀ by their regular appearance ಆಯತೀನಾಂ the ages of men waste away ಪ್ರಮಿನತೀ as the dawns fade day by day ಈಯುಷೀಣಾಂ ಎಂದು ಹೇಳಬಹುದು. ಈ ರೀತಿ ೧-೯೨-೧೧ ಮತ್ತು ೧-೯೨-೧೨. ಈ ಎರಡು ಋಕ್ಕುಗಳ ಒಟ್ಟಿನ ಭಾವವನ್ನು ಈ ಒಂದೇ ಋಕ್ಕಿನಲ್ಲಿ ಸೇರಿಸಿ ಉತ್ತಮವಾದ ಕಾವ್ಯಶೈಲಿಯಲ್ಲಿರುವ ವಿರೋಧನ್ಯಾಸದ ರಚನಾಕ್ರಮವನ್ನೂ ಭಾವಾಭಿವ್ಯಕ್ತಿಯನ್ನೂ ಬಹಳವಾಗಿ ಶ್ಲಾಘಿಸುತ್ತಾರೆ.

(Rig-Veda Repetitions I. P. 108)

ವ್ಯಾಕರಣಪ್ರಕ್ರಿಯಾ

ಪ್ರಥಾನಾ—ಪ್ರಥ ಪ್ರಖ್ಯಾನೇ ಧಾತು. ಣಿಜರ್ಥವು ಧಾತ್ವರ್ಥದಲ್ಲಿ ಅಂತರ್ಭೂತವಾದುದರಿಂದ ಅಂತರ್ಭಾವಿತಣ್ಯರ್ಥದ ಮೇಲೆ ತಾಚ್ಛೀಲಾರ್ಥದಲ್ಲಿ ಚಾನಶ್. **ಬಹುಲಂ ಛಂದಸಿ**—ಎಂಬುದರಿಂದ ಶಪಿಗೆ ಲುಕ್. ಚಿತ್ತಾದುದರಿಂದ **ಚಿತಃ**—ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ಸಿಂಧುಃ—ಸ್ಯಂದೂ ಪ್ರಸ್ರವಣೇ ಧಾತು. ಇದಕ್ಕೆ **ಸ್ಯಂದೇಃ ಸಂಪ್ರಸಾರಣಂ ಧಶ್ಚ**–(ಉ. ಸೂ. ೧-೧೧) ಎಂಬುದ್ದರಿಂದ ಉ ಪ್ರತ್ಯಯ. ತತ್ಪನ್ನಿಯೋಗದಿಂದ ಧಾತುವಿನ ದಕಾರಕ್ಕೆ ಧಕಾರಾದೇಶ. ಯಕಾರಕ್ಕೆ ಸಂಪ್ರಸಾರಣ. **ಸಂಪ್ರಸಾರಣಾಚ್ಚ**—ಎಂಬುದರಿಂದ ಪೂರ್ವರೂಪ. ನಿತ್ ಎಂದು ಪೂರ್ವಸೂತ್ರದಿಂದ ಅನುವೃತ್ತವಾಗುವುದರಿಂದ ಉಪ್ರತ್ಯಯಕ್ಕೆ ನಿವ್ವದ್ಭಾವವಿರುವುದರಿಂದ **ಞ್ನಿತ್ಯಾದಿರ್ನಿತ್ಯಮ್**—ಎಂಬುದರಿಂದ ಆದ್ಯುದಾತ್ತ ಸ್ವರ ಬರುತ್ತದೆ.

ಉರ್ವಿಯಾ—ಇದೇ ಸೂಕ್ತದ ೯ ನೇ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ.

ಅಶ್ವಿತ್—ಟುಓಶ್ವಿ ಗತಿವೃದ್ಧ್ಯೋಃ ಧಾತು. ಲುಙ್ ಪ್ರಥಮಪುರುಷ ಏಕವಚನದಲ್ಲಿ ತಿಪ್. **ಇತಶ್ಚ** ಎಂಬುದರಿಂದ ಇಕಾರಲೋಪ **ವಿಭಾಷಾಶ್ವೀಃ**—ಎಂಬುದರಿಂದ ಅಙ್. ಚಙ್ ವಿಕಲ್ಪವೆಂದುದರಿಂದ (ಪಾ. ಸೂ. ೩-೧-೫೮, ೪೯) **ಚ್ಲೇಃ ಸಿಚ್**—ಎಂಬುದರಿಂದ ಚ್ಲಿಗೆ ಸಿಚಾದೇಶ **ಅಗಮಶಾಸ್ತ್ಯಮನಿತ್ಯಮ್**—ಎಂಬುದರಿಂದ ಸಿಚಿಗೆ **ಆರ್ಧಧಾತುಕಸ್ಯೇಡ್ವಲಾದೇಃ**—ಎಂಬುದರಿಂದ ಇಡಾಗಮ ಬರುವುದಿಲ್ಲ. ಇಡಾದಿಯಾದ ಸಿಚ್ ಇಲ್ಲದಿರುವುದರಿಂದ **ಹ್ಯಂತಕ್ಷಣ**–(ಪಾ. ಸೂ. ೭-೨-೫) ಎಂಬುದರಿಂದ ವೃದ್ಧಿನಿಷೇಧ ಬರುವುದಿಲ್ಲ. **ಸಿಚಿವೃದ್ಧಿಃ ಪರಸ್ಮೈಪದೇಷು** (ಪಾ ಸೂ. ೭-೨-೧) ಎಂಬುದರಿಂದ ಧಾತುವಿನ ಇಕಿಗೆ ವೃದ್ಧಿ. **ಬಹುಲಂ ಛಂದಸಿ** (ಪಾ. ಸೂ. ೭-೩-೯೭) ಎಂಬುದರಿಂದ ಅಪೃಕ್ತವಾದ ತಿಪಿಗೆ ಈಡಾಗಮ ಬರುವುದಿಲ್ಲ. ಆಗ ಸಕಾರಾದಿಯಾದ ಸಂಯೋಗವಿರುವುದರಿಂದ **ಸ್ಕೋಸಂಯೋಗಾದ್ಯೋರಂತೇಚ**— ಎಂಬುದರಿಂದ ಆದಿಸಕಾರಕ್ಕೆ ಲೋಪ. ಅಂಗಕ್ಕೆ ಅಡಾಗಮ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಆಮಿನತೀ—ಮೀಙ್ ಹಿಂಸಾಯಾಂ ಧಾತು. ಕ್ರ್ಯಾದಿ. ಲಡರ್ಥದಲ್ಲಿ ಶತೃಪ್ರತ್ಯಯ. ಶ್ನಾವಿಕರಣ ಪ್ವಾದಿಯಲ್ಲಿ ಸೇರಿರುವುದರಿಂದ ಧಾತುವಿಗೆ ಹ್ರಸ್ವ. ಶತೃವಿಗೆ ಜುಂತ್ವದ್ಭಾವವಿರುವುದರಿಂದ **ಶ್ನಾಭ್ಯಸ್ತಯೋರಾತಃ** (ಪಾ. ಸೂ. ೬-೪-೧೧೨) ಎಂಬುದರಿಂದ ವಿಕರಣದ ಆಕಾರಕ್ಕೆ ಲೋಪ. ಸ್ತ್ರೀತ್ವದಲ್ಲಿ **ಉಗಿತಶ್ಚ**—ಎಂಬುದರಿಂದ ಙೀಪ್. ನಞ್ತತ್ಪುರುಷಸಮಾಸವಾದಾಗ ಅವ್ಯಯಪೂರ್ವಪದಪ್ರಕೃತಿಸ್ವರ ಬರುತ್ತದೆ.

ಚೇತಿ—ಚಿತೀ ಸಂಜ್ಞಾನೇ ಧಾತು. ಕರ್ಮಣಿಯಲ್ಲಿ ಲುಙ್ ಪ್ರಥಮಪುರುಷದಲ್ಲಿ ತಪ್ರತ್ಯಯ. ಚ್ಲಿಗೆ ಚಿಣ್ ಆದೇಶ. ತನ್ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ. **ಚಿಣೋ ಲುಕ್**—ಎಂಬುದರಿಂದ ಚಿಣಿನ ಪರದಲ್ಲಿರುವ ತ ಶಬ್ದಕ್ಕೆ ಲುಕ್. **ಬಹುಲಂ ಛಂದಸ್ಯಮಾಙ್ಯೋಗೇಽಪಿ**—ಎಂಬುದರಿಂದ ಅಂಗಕ್ಕೆ ಅಡಾಗಮ ಬರುವುದಿಲ್ಲ ತಿಙಂತನಿಘಾತಸ್ವರ ಬರುತ್ತದೆ.

ದೈಶಾನಾ—ದೃಶಿರ್ ಪ್ರೇಕ್ಷಣೇ ಧಾತು. ಕರ್ಮಣಿಯಲ್ಲಿ ಲಡರ್ಥದಲ್ಲಿ ಶಾನಚ್ ಪ್ರತ್ಯಯ. **ಬಹುಲಂ ಛಂದಸಿ**—ಎಂಬುದರಿಂದ ವಿಕರಣಕ್ಕೆ (ಶಪ್) ಲುಕ್. ಸ್ತ್ರೀತ್ವದಲ್ಲಿ ಅದಂತವಾದುದರಿಂದ ಟಾಪ್. **ಚಿತಃ**—ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ. ॥ ೧೨ ॥

॥ ಸಂಹಿತಾಪಾಠಃ ॥

ಉಷಸ್ತಚ್ಚಿತ್ರಮಾ ಭರಾಸ್ಮಭ್ಯಂ ವಾಜಿನೀವತಿ ।
ಯೇನ ತೋಕಂ ಚ ತನಯಂ ಚ ಧಾಮಹೇ ॥ ೧೩ ॥

ಪದಪಾಠಃ

ಉಷಃ । ತತ್ । ಚಿತ್ರಂ । ಆ । ಭರ । ಅಸ್ಮಭ್ಯಂ । ವಾಜಿನೀ ಽವತಿ ।
ಯೇನ । ತೋಕಂ । ಚ । ತನಯಂ । ಚ । ಧಾಮಹೇ ॥ ೧೩ ॥

॥ ಸಾಯಣಭಾಷ್ಯಂ ॥

ಪ್ರಾತರನುವಾಕಸ್ಯೋಷಸ್ಯೇ ಕ್ರತಾವೌಷ್ಣಿಹೇ ಛಂದಸ್ಯುಷಸ್ತಚ್ಚಿತ್ರಮಿತಿ ತೃಚೋ ಏನಿಯುಕ್ತಃ । ಆಶ್ವಿನಶಸ್ತ್ರೇ ಚ । ಅಥೋಷಸ್ಯ ಇತಿ ಖಂಡೇ ಸೂತ್ರಿತಂ । ಉಷಸ್ತಚ್ಚಿತ್ರಮಾ ಭರೇತಿ । ತಿಸ್ರ ಔಷ್ಣಿಹಂ । ಆ. ೪-೧೪ । ಇತಿ ॥

ಹೇ ವಾಜಿನೀವತಿ । ವಾಜೋ ಹವಿರ್ಲಕ್ಷಣಮನ್ನಂ । ತದ್ಯುಕ್ತಾ ಕ್ರಿಯಾ ವಾಜಿನೀ । ತಯಾ ಕ್ರಿಯಯಾ ಯುಕ್ತ ಉಷ ಉಷೋದೇವತೇಽಸ್ಮಭ್ಯಂ ಚಿತ್ರಂ ಚಾಯನೀಯಂ ತದ್ಧನಮಾ ಭರ । ಆಹರ। ಪ್ರಯಚ್ಛ । ಯೇನ ಧನೇನ ತೋಕಂ ಪುತ್ರಂ ತನಯಂ ತತ್ಪುತ್ರಂ ಚ ಧಾಮಹೇ ದಧ್ಮಹೇ ಧಾರಯಾಮಃ । ಅತ್ರ ನಿರುಕ್ತಂ । ಉಷಸ್ತಚ್ಚಿತ್ರಂ ಚಾಯನೀಯಂ ಧನಮಾಹರಾಸ್ಮಭ್ಯಮನ್ನವತಿ ಯೇನ ಪುತ್ರಾಂಶ್ಚ ಪೌತ್ರಾಂಶ್ಚ ದಧೀಮಹಿ । ನಿ. ೧೨-೬ । ಇತಿ ॥ ಧಾಮಹೇ । ದಧಾತೇರ್ಲಟಿ ಬಹುಲಂ ಛಂದಸೀತಿ ಶಪೋ ಲುಕ್ । ವ್ಯತ್ಯಯೇನಾದ್ಯುದಾತ್ತತ್ವಂ । ಯದ್ವಾ । ತೋಟ್ಯಾಡುತ್ತಮಸ್ಯ ಪಿಚ್ಚೇತ್ಯಾಡಾಗಮಃ ಪ್ರತ್ಯಯಸ್ಯ ಪಿದ್ವದ್ಭಾವಶ್ಚ । ಅತಃ ಪ್ರತ್ಯಯಸ್ಯ ಪಿತ್ತ್ವಾದನುದಾತ್ತತ್ವೇ ಧಾತುಸ್ವರಃ ಶಿಷ್ಯತೇ । ಅಸ್ಮಿನ್ಪಕ್ಷ ಏತ ಐ । ಪಾ. ೩-೪-೯೩ । ಇತ್ಯೈತ್ವಾಭಾವೋ ವ್ಯತ್ಯಯೇನ ದ್ರಷ್ಟವ್ಯಃ । ಯದ್ವೃತ್ತಯೋಗಾದನಿಘಾತಃ ॥

॥ ಪ್ರತಿಪದಾರ್ಥ ॥

ವಾಜಿನೀವತಿ—ಹವಿಸ್ಸನ್ನುಳ್ಳ ಕ್ರಿಯಾಯುಕ್ತಳಾದ । **ಉಷಃ**—ಎಲ್ಲೆ ಉಷೋದೇವಿಯೇ । **ಯೇನ**—ಯಾವುದರಿಂದ । **ತೋಕಂ ಚ**—ಮಗನನ್ನೂ । **ತನಯಂ ಚ**—ಅವನ ಮಗನನ್ನೂ (ಪೌತ್ರನನ್ನೂ ಕೂಡ । **ಧಾಮಹೇ**—(ನಾವು) ಭರಣಮಾಡಬಲ್ಲೆವೋ ಅಂತಹ । **ಚಿತ್ರಂ**—ನಾನಾವಿಧವಾದ (ಅಭಿಮತವಾದ) । **ತತ್**—ಧನವನ್ನು । **ಅಸ್ಮಭ್ಯಂ**—ನಮಗೆ । **ಆ ಭರ**—ತಂದುಕೊಡು ।

ಭಾವಾರ್ಥ

ಹವಿಸ್ಸನ್ನು ಅರ್ಪಿಸುವ ಯಜ್ಞಕರ್ಮಗಳೊಡನೆ ಕೂಡಿರುವ ಎಲೈ ಉಷೋದೇವಿಯೇ, ಯಾವ ಧನದಿಂದ ನಾವು ನಮ್ಮ ಮಕ್ಕಳನ್ನೂ ಮೊಮ್ಮಕ್ಕಳನ್ನೂ ಸಲಹುವೆವೋ ಅಂತಹ ಅಭಿಮತವಾದ ಧನವನ್ನು ನಮಗೆ ನಾನಾ ವಿಧದಲ್ಲಿ ತಂದೊದಗಿಸು.

English Translation

Ushas, possessor of food, bring us that various wealth by which we may sustain sons and grandsons.

॥ ವಿಶೇಷನಿಷಯಗಳು ॥

ಪ್ರಾತರನುವಾಕಮಂತ್ರಪಠನ ಕಾಲದಲ್ಲಿ ಉಷಸ್ಯಕ್ರತು ಸಂಬಂಧವಾದ ಉಷ್ಣಿಕ್ ಛಂದಸ್ಸಿನ ಋಕ್ಕುಗಳನ್ನು ಪಠಿಸುವಾಗ **ಉಷಸ್ತುಚ್ಚಿತ್ರಂ** ಎಂದು ಮೊದಲಾಗುವ **ಈ** ಮೂರು ಋಕ್ಕುಗಳನ್ನು ಪಠಿಸಬೇಕೆಂದೂ ಆಶ್ವಿನಶಸ್ತ್ರ ಮಂತ್ರಪಠನಕಾಲದಲ್ಲಿಯೂ ಈ ಋಕ್ಕುಗಳ ವಿನಿಯೋಗವಿರುವುದೆಂದೂ ಆಶ್ವಲಾಯನ ಶ್ರೌತಸೂತ್ರದ **ಅಥೋಷಸ್ಯ** ಎಂಬ ಖಂಡದ **ಉಷಸ್ತುಚ್ಚಿತ್ರಹಾ ಭರ** ಎಂಬ ಸೂತ್ರದಲ್ಲಿ ಹೇಳಿರುವುದು. (ಆ. ೪-೧೪)

ತೋಕಂ ಚ ತನಯಂ ಚ । ತುಕ್, ತೋಕಂ, ತನಯಃ, ಇತ್ಯಾದಿ ಹೆದಿನೈದು ಅಪತ್ಯನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೨) ಎರಡು ಶಬ್ದಗಳಿಗೂ ಪುತ್ರನೆಂದೇ ಅರ್ಥವು ಸ್ಥೂಲವಾಗಿ ನೋಡಿದರೆ ಈ ಎರಡು ಶಬ್ದಗಳ ಅರ್ಥವೂ ಒಂದೇ ಆದರೂ ವ್ಯವಹಾರದಲ್ಲಿ ಪುತ್ರಪೌತ್ರಾದಿಗಳೆಂದು ಒಟ್ಟಿಗೆ ಹೇಳುವ ರೂಢಿಯಿದೆ. ಅದೂ ಅಲ್ಲದೆ **ತೋಕಂ ತುದ್ಯತೇಃ । ತನಯಂ ತನೋತೇಃ ।** ಎಂದು ನಿರುಕ್ತಕಾರರು ಇವುಗಳ ಸೂಕ್ಷ್ಮವಾದ ವ್ಯತ್ಯಾಸವನ್ನು ತೋರಿಸಿರುವರು. ಇದನ್ನೇ ವ್ಯಾಖ್ಯಾಕಾರರು ವಿವರಿಸುತ್ತಾ **ತೋಕಂ ಇತಿ ಪುತ್ರಃ ಸ ಹಿ ನಿತ್ಯಂ ಪಿತ್ರಾ ನಿಯತಾ ತುದ್ಯತೇ ಇದಂ ಕುರ್ವಿದಂ ಮಾ ಕಾರ್ಷೀರಿತಿ । ತನಯಂ—ತನೋತೇಃ ಪೌತ್ರಂ । ತದ್ಪ್ರೀತಿತರಾಂ ಪಿತುಃ ಸಕಾಶಾತ್ ತತಂ ಭವತಿ ।** ಶಿಕ್ಷಣವನ್ನು ಕೊಡತಕ್ಕ ತಂದೆಯು ಯಾವಾಗಲೂ ಇದನ್ನು ಮಾಡು, ಇದನ್ನು ಮಾಡಬೇಡ ಎಂಬ ನಿರ್ಬಂಧವನ್ನಿಟ್ಟು ನಿಯಮದ ಜೀವನವನ್ನು ನಡೆಸುತ್ತಿರುವುದರಿಂದ ಅಂತಹ ಮಗನಿಗೆ **ತೋಕಂ** ಎಂದೂ, ಸಂತತಿಯನ್ನು ವಿಸ್ತರಿಸಿ ಬೆಳೆಸಲು ಸಾಧನವಾಗಿರುವುದರಿಂದ ಪೌತ್ರನಿಗೆ **ತನಯ**ನೆಂದೂ ಅರ್ಥವಾಗುತ್ತದೆಂದು ವಿವರಿಸುತ್ತಾರೆ. (ನಿ. ೧೦-೭).

ಧಾಮಹೇ—ದಧೀಮಹಿ (ನಿ. ೧೨-೬) ಭರಣ ಮಾಡಲು ಎಂದರೆ ಸಂರಕ್ಷಿಸುವೆವು. ಯಾವ ಧನದಿಂದ ನಾವು ನಮ್ಮ ಪುತ್ರಪೌತ್ರಾದಿಗಳನ್ನು ಸಂರಕ್ಷಿಸಲು ಸಮರ್ಥರಾಗುತ್ತೇವೆಯೋ ಅಂತಹ,

ಚಿತ್ರಂ—ಮಂಹನೀಯಂ । (ನಿ. ೧೨-೬) ಪೂಜ್ಯವಾದ ಧನವನ್ನು ನಮಗೆ ತಂದುಕೊಡು ಎಂದು ಪ್ರಾರ್ಥನೆಯ ಅರ್ಥ.

ಇದೇ ಆನುಪೂರ್ವಿಯುಳ್ಳ ಪ್ರಾರ್ಥನೆಯ ಮುಂದೆ ನಾಮದೇವ ಋಷಿವಿರಚಿತವಾದ ಋಕ್ಕಿನಲ್ಲಿ ಉಷಸ್ಸನ್ನುದ್ದೇಶಿಸಿದೆ.

ಉಷೋ ಮಘೋನ್ಯಾ ವಹ ಸೂನೃತೇ ವಾರ್ಯಾ ಕುರು ।
ಅಸ್ಮಭ್ಯಂ ವಾಜಿನೀವತಿ ।
(ಋ. ಸಂ. ೪-೫೫-೯)

। ವ್ಯಾಕರಣಪ್ರಕ್ರಿಯಾ ।।

ಭರ—ಹೃಞ್ ಹರಣೇ ಧಾತು. ಲೋಣ್ಮ್ಯಧ್ಯಮಪುರುಷ ಏಕವಚನದಲ್ಲಿ ಸಿಪಿಗೆ **ಸೇರ್ಹ್ಯಪಿಚ್ಚೆ**—ಎಂಬುದರಿಂದ ಹಿ ಆದೇಶ. ಶಪ್ ವಿಕರಣ· **ಅತೋ ಹೇಃ**—ಎಂಬುದರಿಂದ ಹಿಗೆ ಲುಕ್. **ಹೃಗ್ರಹೋರ್ಭ-ಶ್ಛಂದಸಿ**—ಎಂಬುದರಿಂದ ಹೆಕಾರಕ್ಕೆ ಭಕಾರಾದೇಶ. **ತಿಙಂತನಿಘಾತಸ್ವರ** ಬರುತ್ತದೆ.

ವಾಜಿನೀವತಿ—**ಆಮಂತ್ರಿತಸ್ಯ ಚೆ**-(ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ.

ಧಾಮಹೇ—ಡುಧಾಞ್ ಧಾರಣಪೋಷಣಯೋಃ ಧಾತು. ಇದಕ್ಕೆ ಲಟ್ ಉತ್ತಮಪುರುಷ ಬಹು ವಚನದಲ್ಲಿ ಮಹಿಙ್ ಪ್ರತ್ಯಯ. **ಟಿತಆತ್ಮನೇಪದಾ**—ಎಂಬುದರಿಂದ ಅದಕ್ಕೆ ಏತ್ವ. **ಬಹುಲಂ ಛಂದಸಿ**—ಎಂಬುದರಿಂದ ಶಪಿಗೆ ಲುಕ್. ಅಥವಾ ಲೋಟಿನಲ್ಲಿ **ಆಡುತ್ತಮಸ್ಯ ಪಿಚ್ಚೆ** (ಪಾ. ಸೂ. ೩-೪-೯೨) ಎಂಬುದರಿಂದ ಪ್ರತ್ಯಯಕ್ಕೆ ಆಡಾಗಮ. ಪ್ರತ್ಯಯಕ್ಕೆ ಪಿತ್ವದ್ಭಾವ. ಆಗ **ಅನುದಾತ್ತೌ ಸುಪ್ಪಿತೌ**—ಎಂಬುದರಿಂದ ಪ್ರತ್ಯಯವು ಅನುದಾತ್ತವಾಗುತ್ತದೆ. ಧಾತುಸ್ವರ ಉಳಿಯುತ್ತದೆ ಲೋಟಿನ ರೂಪವೆಂದು ಸ್ವೀಕರಿಸುವುದಾದರೆ **ಏತಐ** (ಪಾ. ಸೂ. ೩-೪-೯೩) ಎಂಬುದರಿಂದ ಏತ್ವವು ವ್ಯತ್ಯಯದಿಂದ ಬರುವುದಿಲ್ಲವೆಂದು ಸ್ವೀಕರಿಸಬೇಕು. **ಯ್ವೃದ್ಭ್ಯೋ ನ್ನಿತ್ಯಮ್**—ಎಂಬುದರಿಂದ ಯೇನ ಎಂದು ಹಿಂದೆ ಸಂಬಂಧವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ॥ ೧೩ ॥

ಸಂಹಿತಾಪಾಠಃ

ಉಷೋ ಅದ್ಯೇಹ ಗೋಮತ್ಯಶ್ವಾವತಿ ವಿಭಾವರಿ ।

ರೇವದಸ್ಮೇ ವ್ಯುಚ್ಛ ಸೂನೃತಾವತಿ ॥ ೧೪ ॥

॥ ಪದಪಾಠಃ ॥

ಉಷಃ । ಅದ್ಯ । ಇಹ । ಗೋಽಮತಿ । ಅಶ್ವಽವತಿ । ವಿಭಾಽವರಿ ।

ರೇವತ್ । ಅಸ್ಮೇ ಇತಿ । ವಿ । ಉಚ್ಛ । ಸೂನೃತಾಽವತಿ ॥ ೧೪ ॥

ಸಾಯಣಭಾಷ್ಯಂ

ಹೇ ಗೋಮತ್ಯಶ್ವವತ್ಯಸ್ಮಭ್ಯಂ ದಾತವ್ಯೈರ್ಗೋಭಿರ್ಯುಕ್ತೇ ತಥಾಶ್ವಾವತ್ಯಶ್ವೈರ್ಯುಕ್ತೇ ವಿಭಾವರಿ ವಿಶಿಷ್ಟಪ್ರಕಾಶೋಪೇತೇ ಸೂನೃತಾವತಿ। ಪ್ರಿಯಸತ್ಯಾತ್ಮಿಕಾ ವಾಕ್ ಸೂನೃತಾ। ತಾದೃಶ್ಯಾ ವಾಚಾ ಯುಕ್ತೇ ಏವಂಭೂತೇ ಹೇ ಉಷ ಉಷೋದೇವತೇಽದ್ಯೇದಾನೀಂ ಪ್ರಭಾತಸಮಯೇ ಇಹಾಸ್ಮಿನ್ಸೇ-ಶೇಽಸ್ಮೇ ಅಸ್ಮಾಕಂ ರೇವತ್ ಧನಯುಕ್ತಂ ಕರ್ಮ ಯಥಾ ಭವತಿ ತಥಾ ವ್ಯುಚ್ಛ। ನೈಶಂ ತಮೋ ನಿವಾರಯ॥ ಅಶ್ವಾವತಿ। ಮಂತ್ರೇ ಸೋಮಾರ್ಶೀಂದ್ರಿಯೇತಿ ಮತ್ತೌ ದೀರ್ಘತ್ವಂ। ಸಾದಾದಿತ್ವಾದಾಮಂತ್ರಿತ-ಸ್ಯಾಪ್ಯಮಿಕನಿಘಾತಾಭಾವಃ। ರೇವತ್। ರಯೇರ್ಮತೌ ಬಹುಲಂ। ಪಾ. ೬-೧-೩೭-೬। ಇತಿ ಸಂಪ್ರ-ಸಾರಣಂ। ಛಂದ ಸೀರ ಇತಿ ಮತುಪೋ ವತ್ವಂ। ರೇಶದ್ವಾಚ್ಛ ಮತುಪ ಉದಾತ್ತತ್ವಂ ವಕ್ತವ್ಯಂ। ಕಾ. ೬-೧-೧೭೬-೧। ಇತಿ ಮತುಪ ಉದಾತ್ತತ್ವಂ। ಉಚ್ಛ। ಉಚ್ಛೀ ವಿವಾಸೇ। ವಿವಾಸೋ ವರ್ಜನಂ॥

ಪ್ರತಿಪದಾರ್ಥ

ಗೋಮತಿ—ಗೋವುಗಳಿಂದ ಕೂಡಿದವಳೂ। **ಅಶ್ವಾವತಿ** — ಕುದುರೆಗಳಿಂದ ಕೂಡಿದವಳೂ। **ವಿಭಾವರಿ**— ಪ್ರಭಾಶಾಲಿನಿಯೂ। **ಸೂನೃತಾವತಿ**— ಪ್ರಿಯವಾದುದೂ ಮತ್ತು ಸತ್ಯಾತ್ಮಕವಾದುದೂ ಆದ ವಾಕ್ಕುಳ್ಳವಳೂ ಆದ। **ಉಷಃ**—ಎಲೈ ಉಷೋದೇವಿಯೇ। **ಅದ್ಯ**—ಈ (ಪ್ರಭಾತ)ಕಾಲದಲ್ಲಿ। **ಇಹ**— ಈ (ಯಜ್ಞ) ಪ್ರದೇಶದಲ್ಲಿ। **ಅಸ್ಮೇ**—ನಮಗೆ। **ರೇವತ್**—ನಮ್ಮ ಕರ್ಮಗಳು ಧನಯುಕ್ತವಾಗಿ ಆಗುವಂತೆ ಮಾಡು। **ವ್ಯುಚ್ಛ**—(ಕತ್ತಲನ್ನು) ನಿವಾರಿಸಿ ನಾಶಮಾಡು॥

॥ ಭಾವಾರ್ಥ ॥

ಗೋವುಗಳಿಂದಲೂ, ಕುದುರೆಗಳಿಂದಲೂ ಕೂಡಿಯೂ, ಪ್ರಭಾಶಾಲಿನಿಯೂ, ಪ್ರಿಯವಾದ ಮತ್ತು ಸತ್ಯಾತ್ಮಕವಾದ ವಾಕ್ಕುಳ್ಳವಳೂ ಆದ ಎಲೈ ಉಷೋದೇವಿಯೇ, ಈ ಪ್ರಭಾತಕಾಲದಲ್ಲಿ ನಮ್ಮ ಈ ಯಜ್ಞಪ್ರದೇಶದಲ್ಲಿ ನಮಗೆ ನಮ್ಮ ಕರ್ಮಗಳೆಲ್ಲಾ ಧನಯುಕ್ತವಾಗಿ ಆಗುವಂತೆ ಆವಿರ್ಭವಿಸಿ ಕತ್ತಲನ್ನು ನಿವಾರಿಸಿ ನಾಶಮಾಡು

English Translation

Luminous Ushas, possessor of cows and horses, true of speech, dawn here to day upon this (ceremoney) that is to bring us wealth.

॥ ವಿಶೇಷವಿಷಯಗಳು ॥

ವಿಭಾವರಿ, ಸೂನೃತಾವತಿ—**ವಿಭಾವರೀ, ಸೂನರೀ, ಭಾಸ್ವತೀ,** ಇತ್ಯಾದಿ ಪದಿನಾರು **ಉಷೋನಾಮ**ಗಳಲ್ಲಿ ಪಠಿತವಾಗಿವೆ. (ನಿ. ೨-೧೪) **ವಿಭಾವರಿಯೆಂದರೆ** ವಿಶಿಷ್ಟವಾದ ಪ್ರಕಾಶದಿಂದ ಕೂಡಿದವಳೆಂದೂ, ಸೂನೃತಾವತಿಯೆಂದರೆ ಪ್ರಿಯವಾದುದೂ ಸತ್ಯಾತ್ಮಿಕವಾದದೂ ಆದ ವಾಕ್ಕುಳ್ಳವಳೆಂದೂ ಅರ್ಥವು. ಇಲ್ಲಿ ಅವೆರಡನ್ನು ಸಂಬೋಧನೆಯಲ್ಲುಪಯೋಗಿಸಿದೆ. **ಸೂನೃತಾವತೀ, ಸೂನೃತಾನಾಂ ನೇತ್ರೀ** ಎಂಬ ವಿಶೇಷಣಗಳ ವಿವರಣೆಯನ್ನು ಇದೇ ಸೂಕ್ತದ ೭ನೇ ಋಕ್ಕನ್ನು ವಿವರಿಸುವಾಗ ವಿಶದವಾಗಿ ತಿಳಿಸಿದೆ. **ವಿಭಾವರಿಯೆನ್ನುವುದಕ್ಕೆ ವಿವಿಧಾ ಭಾ ವಿಭಾಃ। ವಿಭಾಯುಕ್ತಾ ವಿಭಾವರೀ।** ವಿಧವಿಧವಾದ ತೇಜಸ್ಸುಗಳ ಪುಂಜವು ವಿಭಾಃ, ಅಂತಹ

कान्तिसमूपदिंद कूडिदवळु विभावरियेंदु विवरिसुत्त्तारे. ऋक्संहितेयल्लि साधारणवागि विभावरि येंब पदवु बरुव कडेयुल्लेल्ला उषस्सिगे संबोधिसिदे अथवा विशेषणवागिदे. **गोमति, अश्वावति** एंब विशेषणगळु साधारणवागि इतर देवतेगळिगू अल्लिय संदर्भानुसारवागि विशेषण रूपदल्लि उपयोगिसिद्दारे.

रेवत्—**धननामगळल्लि** सेरिरुव (नि. ३-९) **रयि** शब्ददिंद **रेवत्** एंदागिदे. धनयुक्त वाद, धनदिंद तुंबिद एंदर्थ.

वृञ्चे— **विविधं उच्चे** । संपूर्णवागि कत्तलन्नु नाशमाडु एंदर्थ.

व्याकरणप्रक्रियां

अश्वावति—अश्वः अस्या अस्ति एंबर्थदल्लि **तदस्या**—सूत्रदिंद मतुप् प्रत्ययं. अकारद परदल्लिरुवुदरिंद **मादुपधायोश्च**—एंबुदरिंद मकारक्के वकारादेश. **मन्त्रेसोमाश्वेन्द्रिय**-(पा. सू. ६-३-१३१) एंबुदरिंद मतुप् परवादागि अश्वशब्दक्के दीर्घ. पादादियल्लिरुवुदरिंद **अपादादाद्**—एंदु निषेधमाडिरुवुदरिंद निघातस्वर बरुवुदिल्ल. **आमंत्रितस्य** (पा. सू. ६-१-१९८) एंबुदरिंद आद्युदात्तस्वर बरुत्तदे.

रेवत्—रयिः अस्या अस्ति एंबर्थदल्लि हिंदिनंते मतुप् प्रत्ययं **रयेर्मतौ बहुलम्**-(पा. सू. ६-१-३७-६) एंबुदरिंद मतुप् परवादाग संप्रसारण. **संप्रसारणाच्च**—एंबुदरिंद पूर्वरूप. र+इ+मत् एंदिरुवाग गुण. **छंदसीरः**-(पा. सू. ८-३-१५) एंबुदरिंद मतुपिन मकारक्के वत्वं. रेवत् शब्दवागुत्तदे. **रेशब्दाच्छ मतुप उदात्तत्वं वक्तव्यं** (का. ६-१-१७६-१) एंबुदरिंद मतुपिगे पित्त्वादरू उदात्तस्वर बरुत्तदे.

उच्चे—उछीं विवासे धातु. विवासनेंदरे वर्जन. लोट् मध्यमपुरुष एकवचन दल्लि सिपिगे हि आदेश. शप्विकरण. **अतोहेः**—एंबुदरिंद हिगे लुक्. **छेच**—एंबुदरिंद उ एंब ह्रस्वक्के तुकागमं. अतिजंतद परदल्लिरुवुदरिंद निघातस्वर बरुत्तदे. ॥ ८४ ॥

——:o:——

॥ संहितापाठः ॥

युष्ट्वा हि वाजिनीवत्यश्वा अद्यारुणा उषः ।
अथा नो विश्वा सौभगान्या वह ॥ ८५ ॥

॥ पदपाठः ॥

यु॒ङ्क्ष्व । हि । वा॒जि॒नी॒ऽव॒ति । अश्वा॑न् । अ॒द्य । अ॒रु॒णान् । उ॒ष॒रुषः ।
अथ । नः । विश्वा । सौ॒भगानि । आ । व॒ह ॥ ८॥

सायणभाष्यं

हे वाजिनीवति हविर्लक्षणान्नवत्युषः उषोदेवतेऽरुणानरुणवर्णानश्वान्स्वस्थानेयोन् गोविशेषानद्यास्मिन्नाकृतौ युङ्क्ष्व हि । योजयैव । हिरवधारणे । अथानंतरं रथमारुह्य विश्वा सौभगानि सर्वाणि सौभाग्यानि नोऽस्मभ्यमा वह। आनय॥ अश्वान् । दीर्घादटि समानपादे इति संहितायां नकारस्य रुत्वं । आतोऽटि नित्यमिति सानुनासिक आकारः । सौभगानि । सुभगान्मंत्रे इत्युदात्तादिषु पाठाद्भावकर्मणोरर्थयोः स्त्राणभ्रूणेति वचनाद्ण्यन्तात्त्र्यादिभ्योऽञ्ञ्यङ्ञ्यञः । हृद्भगसिंध्वंतेपूर्वपदस्य चेत्युभयपदवृद्धौ प्राप्तायां सर्वविधीनां छंदसि विकल्पितत्वादत्रोत्तरपदवृद्धिर्न भवतीत्युक्तं । का. ८-३-८८ ॥

प्रतिपदार्थ

वाजिनीवति—(हविस्सिनरूपपद) अन्नदिंद कूडिद । उषः—ऎलै उषोदेवियेे, । अरुणान्—हॊंबण्णद । अश्वान्—अश्वगळ स्थानदल्लि वाहकगळाद गोवुगळन्नु । अद्य—ई यज्ञकालदल्लि । युङ्क्ष्व हि—खंडितवागियू (रथक्के) कट्टु । अथ—अनंतर । विश्वा सौभगानि—सकल सौभाग्यगळन्नू । नः— नमगे । आ वह—तंदॊदगिसु. ।

भाषार्थ

हविस्सिनरूपद अन्नदिंद कूडिद ऎलै उषोदेवियेे, अश्वगळ स्थानदल्लि वाहकगळाद निन्न हॊंबण्णद गोवुगळन्नु ई यज्ञप कालदल्लि खंडितवागियू निन्न रथक्के कट्टु. अनंतर आ रथदल्लि नमगे सकल सौभाग्यगळन्नू तंदॊदगिसु.

English Translation

Possessor of food, Ushas, yoke today your reddish horses and bring to us all good things.

विशेष विषयगळु

अरुणान् अश्वान्—अरुणा गाव उषसाम् । ऎंदु देवतेगळ वाहनगळ नामधेयगळल्लि पठितवागिदे. (सै. ३-३ल) उषस्सिन वाहनगळु हॊंबण्णद गोवुगळु. इवे अश्वस्थान

ಗಳಲ್ಲಿದ್ದು ಉಷಸ್ಸಿನ ರಥಕ್ಕೆ ಕಟ್ಟಲ್ಪಡುತ್ತವೆ. ಈ ವಾಹನಗಳಿಗೆ ಗೋವುಗಳು ಎಂದೂ ಕೆಲವು ಕಡೆಗಳಲ್ಲಿ ಅಶ್ವಗಳು ಎಂದೂ ಪ್ರಯೋಗಗಳಿವೆ. ಕೆಲವು ಋಕ್ಕುಗಳಲ್ಲಿ **ಅಪ್ಸೆವಃ** ಎಂದೂ ಕರೆಯುತ್ತಾರೆ. ಉದಾಹರಣೆಗೆ—

ವಹಂತ್ವರುಣಪ್ಸವ ಉಪ ತ್ವಾ ಸೋಮಿನೋ ಗೃಹಂ ।
(ಋ. ಸಂ. ೧-೪೯-೧)

ಆ ತ್ವಾ ವಹಂತು ಸುಯಮಾಸೋ ಅಶ್ವಾ ಹಿರಣ್ಯವರ್ಣಾಂ ಪೃಥುಪಾಜಸೋ ಯೇ ।
(ಋ. ಸಂ. ೩-೬೧-೨)

ಪ್ರತಿ ದ್ಯುತಾನಾಮರುಷಾಸೋ ಅಶ್ವಾಶ್ಚಿತ್ರಾ ಅದೃಶ್ರನ್ನುಷಸಂ ವಹಂತಃ ।
(ಋ. ಸಂ. ೭-೭೫-೬)

ಆಸೇಯಮುಶ್ಮೈದ್ಯುವತಿಃ ಪುರಸ್ತಾದ್ಯುಂಕ್ತೇ ಗವಾಮರುಣಾನಾಮನೀಕಂ ।
(ಋ. ಸಂ. ೧-೧೪೪-೧೧)

ಇತ್ಯಾದಿ ನಾನಾ ಸಂದರ್ಭಗಳಲ್ಲಿ ಉಷಸ್ಸಿನ ವಾಹನಗಳ ವರ್ಣನೆಯಿದೆ.

ವಿಶ್ವಾ ಸೌಭಗಾನಿ—ಭಗ ಇತಿ ಧನನಾಮ । ಶೋಭನಾನಿ ಧನಾನಿ ಸುಭಗಾನಿ । ಸುಭಗಾನ್ಯೇವ ಸೌಭಗಾನಿ । ಧನನಾಮಗಳಲ್ಲಿ **ಭಗ** ಶಬ್ದವು ಪಠಿತವಾಗಿದೆ. ಶ್ರೇಷ್ಠವಾದ ಧನಗಳೆಂದರ್ಥ. ನಮಗೆ ಪುತ್ರಪೌತ್ರಾದಿ ರೂಪವಾದ ಸಕಲ ಶ್ರೇಷ್ಠವಾದ ಧನವನ್ನೂ ತಂದೊದಗಿಸು ಎಂಬ ಪ್ರಾರ್ಥನೆ. ೧-೩೦-೨೨ ; ೧-೪೮-೧ ; ೯-೧೧೧-೫ ; ೪-೫೧-೭. ಇತ್ಯಾದಿ ಅನೇಕ ಸ್ಥಳಗಳಲ್ಲಿ ಉಷಸ್ಸನ್ನುದ್ದೇಶಿಸಿ ಆಯುರ್ವೃದ್ಧಿಯನ್ನೂ ಪುತ್ರ ಪೌತ್ರಾದಿ ಧನಗಳನ್ನೂ ಬೇಡುವ ಪ್ರಾರ್ಥನೆ ಇರುವುದು.

ವ್ಯಾಕರಣಪ್ರಕ್ರಿಯಾ

ಯುಕ್ಷ್ವ—ಯುಜಿರ್ ಯೋಗೇ ಧಾತು. ಲೋಟಿನಲ್ಲಿ **ಥಾಸಃ ಸೇ**—ಎಂಬುದರಿಂದ ಸೇ ಆದೇಶ ಬಂದಾಗ **ಸವಾಭ್ಯಾಂವಾಮೌ**–(ಪಾ. ಸೂ. ೩-೪-೯೧) ಎಂಬುದರಿಂದ ಏಕಾರಕ್ಕೆ ವಕಾರಾದೇಶ. **ಚೋಃ ಕುಃ**–ಎಂಬುದರಿಂದ ಜಕಾರಕ್ಕೆ ಕುತ್ವ. **ಖರಿ ಚ**—ಸೂತ್ರದಿಂದ ಚರ್ತ್ವ. **ಆದೇಶಪ್ರತ್ಯಯಯೋಃ**—ಸೂತ್ರದಿಂದ ಸಕಾರಕ್ಕೆ ಷತ್ವ. ಯುಕ್ಷ್ವ ಎಂದು ರೂಪವಾಗುತ್ತದೆ. ಪಾದಾದಿಯಲ್ಲಿ ಬಂದಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಅಶ್ವಾನ್—ದೀರ್ಘಾದಟಿ ಸಮಾನಪಾದೇ–(ಪಾ. ಸೂ. ೮-೩-೯) ಎಂಬುದರಿಂದ ಸಂಹಿತಾವಲ್ಲಿ ನಕಾರಕ್ಕೆ ರುತ್ವ. **ಆತೋಟಿ ನಿತ್ಯಮ್**–(ಪಾ. ಸೂ. ೮-೩-೩) ಎಂಬುದರಿಂದ ಆಕಾರಕ್ಕೆ ಅನುನಾಸಿಕತ್ವ. ಹೀಗೆಯೇ ಅರುಣಾನ್ ಎಂಬಲ್ಲಿಯೂ ಅಟ್ ಪರವಾದುದರಿಂದ ರುತ್ವಾನುನಾಸಿಕತ್ವ ಬರುತ್ತದೆ.

ಸೌಭಗಾನಿ—ಸುಭಗಾನ್ಮಂತ್ರೇ — ಎನ್ನದು ಉದ್ಗಾತ್ರಾದಿಯಲ್ಲಿ ಪಾಠಮಾಡಿರುವುದರಿಂದ ಭಾವ, ಕರ್ಮಾರ್ಥ ತೋರುತ್ತಿರುವಾಗ **ಪ್ರಾಣಭೃತ್ಜಾತಿ ವಯೋವಚನೋದ್ಗಾತ್ರಾದಿಭ್ಯೋ೭ಞ್**—ಎಂಬುದರಿಂದ ಅಞ್ ಪ್ರತ್ಯಯ. **ಹೃದ್ಭಗ ಸಿಂಧ್ವಂತೇ ಪೂರ್ವಪದಸ್ಯ ಚ**–(ಪಾ. ಸೂ. ೭-೩-೧೯) ಎಂಬುದರಿಂದ ಭಗೋ

ತ್ತರಪದವಾಗಿರುವುದರಿಂದ ಉಭಯಪದವೃದ್ಧಿಯು ಪ್ರಾಪ್ತವಾದರೆ **ಸರ್ವೇ ವಿಧಯಃ ಛಂದಸಿ ವಿಕಲ್ಪ್ಯಂತೇ** -(**ಕಾ. ೭-೩-೧೯**) ಎಂಬ ವಚನದಿಂದ ಉತ್ತರಪದವೃದ್ಧಿ ಬರುವುದಿಲ್ಲ.

ವಹ—ವಹ ಪ್ರಾಪಣೇ. ಧಾತು. ಲೋಣ್ಮ್ಯಧ್ಯಮಪುರುಷ ಏಕವಚನರೂಪ. ತಿಙಂತನಿಘಾತಸ್ವರ ಬರುತ್ತದೆ. ॥ ೧೫ ॥

ಸಂಹಿತಾಪಾಠಃ

ಅಶ್ವಿನಾ ವರ್ತಿರಸ್ಮದಾ ಗೋಮದ್ದಸ್ರಾ ಹಿರಣ್ಯವತ್ ।
ಅರ್ವಾಗ್ರಥಂ ಸಮನಸಾ ನಿ ಯಚ್ಛತಂ ॥ ೧೬ ॥

ಪದಪಾಠಃ

ಅಶ್ವಿನಾ । ವರ್ತಿಃ । ಅಸ್ಮತ್ । ಆ । ಗೋಽಮತ್ । ದಸ್ರಾ । ಹಿರಣ್ಯಽವತ್ ।
ಅರ್ವಾಕ್ । ರಥಂ । ಸಽಮನಸಾ । ನಿ । ಯಚ್ಛತಂ ॥ ೧೬ ॥

ಸಾಯಣಭಾಷ್ಯಂ

ಪ್ರಾತರನುವಾಕಸ್ಯಾಶ್ವಿನೇ ಕೃತಾವೌಷ್ಣಿಹೇ ಛಂದಸ್ಯಶ್ವಿನಾ ವರ್ತಿರಿತ್ಯಯಂ ತೃಚಃ । ಅಶ್ವಿನ-ಶಸ್ತೇ ಚ । ತಥಾ ಚ ಸೂತ್ರಿತಂ । ಅಶ್ವಿನಾ ವರ್ತಿರಸ್ಮದಾಶ್ವಿನಾವೇಹ ಗಚ್ಛತಮಿತಿ ತೃಚೌ । ಅ. ೪-೧೫ । ಇತಿ ॥

ಉಷಃಸಾಹಚರ್ಯಾದ್ಬುದ್ಧಿಸ್ಥಾವಶ್ವಿನಾವಿದಮಾದಿಕೇನ ತೃಚೇನ ಸ್ತೂಯೇತೇ । ಹೇ ಅಶ್ವಿನಾ-ಶ್ವವಂತೌ ವ್ಯಾಪನಶೀಲೌ ನಾ ದೇವೌ ದಸ್ರಾ ಶತ್ರೂಣಾಮುಪಕ್ಷಪಯಿತಾರೌ ಅಸ್ಮದಸ್ಮಾಕಂ ವರ್ತಿ-ರ್ವರ್ತನಹೇತುಭೂತಂ ಗೃಹಮಾ ಸಮಂತಾದ್ಗೋಮದ್ಬಹುಭಿರ್ಗೋಭಿರ್ಯುಕ್ತಂ । ಹಿರಣ್ಯವದ್ಧಿತ-ರಮಣೀಯಧನಯುಕ್ತಂ ಚ ಯಥಾ ಭವತಿ ತಥಾ ಸಮನಸಾ ಸಮಾನಮನಸ್ಕೌ ಸಂತೌ ಯುವಾಂ ಯುಷ್ಮದೀಯಂ ರಥಮರ್ವಾಗರ್ವಾಚೀನಮಸ್ಮದೀಯೇಗೃಹಮಭಿಮುಖಂ ನಿ ಯಚ್ಛತಂ । ಆವರ್ತ-

ಯತಂ ॥ ಅಶ್ವಿನಾ । ಸುಪಾಂ ಸುಲುಗಿತ್ಯಾಕಾರಃ ಽ । ವರ್ತಿಃ । ವರ್ತತೇಽಸ್ಮಿನ್ನಿತಿ ವರ್ತಿರ್ಗೃಹಂ । ಔಣಾದಿಕ ಇಸಿಪ್ರತ್ಯಯಃ । ಅಸ್ಮತ್ । ಸುಪಾಂ ಸುಲುಗಿತಿ ಷಷ್ಠ್ಯಾ ಲುಕ್ । ಸಮನಸಾ । ಸಮಾನಂ ಮನೋ ಯಯೋಸ್ತೌ । ಸಮಾನಸ್ಯ ಛಂದಸೀತಿ ಸಭಾವಃ ॥

ಪ್ರತಿಪದಾರ್ಥ

ದಸ್ರಾ—ಶತ್ರುನಾಶಕರಾದ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಅಸ್ಮತ್**—ನಮ್ಮ । **ವರ್ತಿಃ**—ವಾಸಸ್ಥಾನವಾದ ಗೃಹವು । **ಆ**—ಸುತ್ತಲೂ । **ಗೋಮತ್**—ಗೋವುಗಳಿಂದ ಕೂಡಿದ್ದಾಗಿ ಇರುವಂತೆಯೂ । **ಹಿರಣ್ಯವತ್**—ಹಿತವಾದುದೂ, ರಮಣೀಯವಾದುದೂ ಆದ ಧನದಿಂದ ತುಂಬಿರುವಂತೆಯೂ (ಆಗುವುದಕ್ಕಾಗಿ) । **ಸಮನಸಾ**—ಅನುಗ್ರಹ ಬುದ್ಧಿಯುಳ್ಳವರಾಗಿ । **ರಥಂ**—ನಿಮ್ಮ ರಥವನ್ನು । **ಆವರ್ವಾಕ್**—(ನಮ್ಮ ಗೃಹದ) ಅಭಿಮುಖವಾಗಿ । **ನಿ ಯಚ್ಛತಂ**—ತಿರುಗಿಸಿ ಹೊಡೆಯಿರಿ ॥

॥ ಭಾವಾರ್ಥ ॥

ಶತ್ರುನಾಶಕರಾದ ಎಲೈ ಅಶ್ವಿನೀ ದೇವತೆಗಳೇ, ನಮ್ಮ ಗೃಹವು ಸುತ್ತಲೂ ಗೋವುಗಳಿಂದ ತುಂಬಿರವಂತೆಯೂ ಪ್ರಭೂತವಾದ ಧನದಿಂದ ತುಂಬಿರುವಂತೆ ಆಗುವುದಕ್ಕಾಗಿಯೂ ಸ್ಥಿರ ನಮ್ಮಲ್ಲಿ ಅನುಗ್ರಹಬುದ್ಧಿಯುಳ್ಳವರಾಗಿ ನಿಮ್ಮ ರಥವನ್ನು ನಮ್ಮ ಗೃಹದ ಅಭಿಮುಖವಾಗಿ ತಿರುಗಿಸಿ ಹೊಡೆಯಿರಿ.

English Translation

Aswins, destroyers of foes, turn your chariot towards our abode, so that with your favour it may become full of cattle and gold.

॥ ವಿಶೇಷವಿಷಯಗಳು ॥

ಪ್ರಾತರನುವಾಕಮಂತ್ರಪಠನ ಕಾಲದಲ್ಲಿ ಆಶ್ವಿನಕ್ರತು ಸಂಬಂಧವಾದ ಉಷ್ಣಿಕ್ ಛಂದಸ್ಸಿನ ಋಕ್ಕುಗಳನ್ನು ಪಠಿಸುವಾಗ **ಅಶ್ವಿನಾ ವರ್ತಿಃ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ಪಠಿಸಬೇಕೆಂದೂ ಆಶ್ವಿನ ಶಸ್ತ್ರಮಂತ್ರ ಪಠನದಲ್ಲಿಯೂ ಈ ಋಕ್ಕುಗಳನ್ನು ಪಠಿಸಬೇಕೆಂದೂ ಆಶ್ವಲಾಯನ ಶ್ರೌತಸೂತ್ರದ **ಅಶ್ವಿನಾ ವರ್ತಿರಸ್ಮದಾಶ್ವಿನಾ-ನೇಹ ಗಚ್ಛತಮಿತಿ ತೃಚೌ** ಎಂಬ ಸೂತ್ರದಿಂದ ವಿನೃತವಾಗಿರುವುದು (ಅ. ೪–೧೫).

ಅಶ್ವಿನೀದೇವತೆಗಳ ಉತ್ಪತ್ತಿ, ಅವರ ಸ್ವರೂಪ, ಮತ್ತು ಸ್ಥಾನ ಇವುಗಳ ವಿಷಯವನ್ನು ಹಿಂದೆ ವಿಶದವಾಗಿ ತಿಳಿಸಿದೆ, ಭಾಗ 4 ಪೇಜು 75 ನೋಡಿ.

ದಸ್ರಾ—**ದಸು-ಉಪಕ್ಷಯೇ**—**ಶತ್ರೂಣಾಂ ಉಪಕ್ಷಪಯಿತಾರೌ** । **ಯದ್ವಾ** । **ದೇವವೈದ್ಯತ್ವೇನ ರೋಗಾಣಾಂ ಉಪಕ್ಷಪಯಿತಾರೌ** । ಶತ್ರುನಾಶಕರು ಅಥವಾ ದೇವವೈದ್ಯರಾದ್ದರಿಂದ ರೋಗನಾಶಕರು ಎಂದರ್ಥ **ದಸ್ರಾ** ಅನ್ನುವುದಕ್ಕೆ **ದರ್ಶನೀಯೌ** । ಸುಂದರವಾದ ರೂಪವುಳ್ಳವರು ಎಂದೂ ಆಗುತ್ತದೆ. ಈ ಋಕ್ಕಿನಲ್ಲಿ ಶತ್ರು ನಾಶಕರೆಂದು ಭಾಷ್ಯಕಾರರು ಅರ್ಥಮಾಡುತ್ತಾರೆ ಸರಣ್ಯುಪುತ್ರರಾದ ಅಶ್ವಿಗಳಲ್ಲಿ ಒಬ್ಬನಿಗೆ **ದಸ್ರ** ಇನ್ನೊಬ್ಬನಿಗೆ **ನಾಸತ್ಯ** ಎಂದು ಹೆಸರಿದ್ದರೂ ಸಹ ಸಾಧಾರಣವಾಗಿ **ದಸ್ರಾ** ಎಂದು ಇಬ್ಬರನ್ನೂ ಸೇರಿಸಿ ಹೇಳುವುದು ಪ್ರಸಿದ್ಧವಾಗಿದೆ.

ವರ್ತಿಃ— ವರ್ತನಹೇತುಭೂತಂ ಗೃಹಂ । ವಾಸಮಾಡಲು ಆಧಾರಭೂತವಾದ ಮನೆಯೆಂದು ಸಾಯಣರೂ **ವರ್ತನ್ಯಾ ।** **ಪ್ರಸಿದ್ಧೇನ ಪಥಾ ।** ಪ್ರಸಿದ್ಧವಾದ ಮಾರ್ಗದಿಂದ ಎಂದು ಸ್ಕಂದಸ್ವಾಮಿಗಳೂ ವಿವರಿಸುತ್ತಾರೆ. ಸಾಧರಣವಾಗಿ **ವರ್ತಿ** ಶಬ್ದವು ಬಂದಾಗಲೆಲ್ಲಾ ಸಾಯಣರು ಗೃಹವೆಂದೂ, ಸ್ಕಂದಸ್ವಾಮಿಗಳು ಪ್ರಸಿದ್ಧವಾದ ಅಥವಾ ಶ್ರೇಷ್ಠವಾದ ಮಾರ್ಗವೆಂದೂ ವಿವರಿಸಿರುವರು. ಉದಾಹರಣೆಗೆ ೧-೩೪-೪ ; ೧-೧೧೬-೧೪ ; ೧-೧೧೭-೨; ೧-೧೧೯-೪ ಇತ್ಯಾದಿ ಋಕ್ಕುಗಳಲ್ಲೆಲ್ಲಾ ಇದೇ ರೀತಿ ಇಬ್ಬರೂ ಬೇರೆ ಬೇರೆ ಅರ್ಥಮಾಡಿರುತ್ತಾರೆ. ಈ ಋಕ್ಕುಗಳು ಇರುವ ಸೂಕ್ತಗಳೆಲ್ಲವೂ ಅಶ್ವಿನೀದೇವತೆಗಳ ಪರವಾದವೇ ಎಂಬುದೂ ಒಂದು ವಿಶೇಷವಿಷಯ.

ಅರ್ವಾಗ್ರಥಂ ಸಮನಸಾ ನಿ ಯಚ್ಛತಂ - ನಮ್ಮಲ್ಲಿ ಅನುಗ್ರಹ ಬುದ್ಧಿಯುಳ್ಳವರಾಗಿ ನಮ್ಮ ಗೃಹದ ಅಭಿಮುಖವಾಗಿ ನಿಮ್ಮ ರಥವನ್ನು ತಿರುಗಿಸಿಕೊಂಡು ಬನ್ನಿರಿ. ಅಶ್ವಿನೀದೇವತೆಗಳ ರಥವು ವೈಚಿತ್ರ್ಯದಲ್ಲಿಯೂ ಸೊಬಗಿನಲ್ಲಿಯೂ ಅತ್ಯಂತ ಪ್ರಸಿದ್ಧವಾದುದರಿಂದ ಈ ದೇವತೆಗಳನ್ನು ಪ್ರಾರ್ಥಿಸುವಾಗ ಅವರ ಮಹಿಮೆಯಿಂದ ಯುಕ್ತವಾದ ರಥದ ಸಂಬಂಧದೊಂದಿಗೇ ಅವರ ವರ್ಣನೆಯೂ ಅವರನ್ನು ಕುರಿತು ಪ್ರಾರ್ಥನೆಯೂ ಇರುತ್ತದೆ. ಉದಾಹರಣೆಗೆ— ಏಳನೆಯ ಮಂಡಲದಲ್ಲಿ ವಸಿಷ್ಠರಿಂದಲೂ ಎಂಟನೆಯದರಲ್ಲಿ ಶ್ಯಾವಾಶ್ವ ಆತ್ರೇಯರಿಂದಲೂ ಸಹ ಈ ಋಕ್ಕಿನ ಅನುಪೂರ್ವಿಯಲ್ಲಿಯೇ ಅಶ್ವಿನೀದೇವತೆಗಳು ಈ ರೀತಿ ಪ್ರಾರ್ಥಿಸಲ್ಪಟ್ಟಿರುವರು—

ಅರ್ವಾಗ್ರಥಂ ಸಮನಸಾ ನಿ ಯೆಚ್ಛತಂ ಪಿಬತಂ ಸೋಮ್ಯಂ ಮಧು ।
(ಋ. ಸಂ. ೭-೭೪-೨)

ಅರ್ವಾಗ್ರಥಂ ನಿ ಯೆಚ್ಛತಂ ಪಿಬತಂ ಸೋಮ್ಯಂ ಮಧು ।
(ಋ. ಸಂ. ೮-೩೫-೨೨)

ಹೀಗೆ ಅವರನ್ನು ಕುರಿತು ಪ್ರಾರ್ಥಿಸುವ ಕಾಲವಲ್ಲೆಲ್ಲಾ ಅವರ ರಥದ ಮಹಿಮೆಯೂ ಹೊಗಳಲ್ಪಟ್ಟಿದೆ

॥ ವ್ಯಾಕರಣಪ್ರಕ್ರಿಯಾ ॥

ಅಶ್ವಿನಾ—ದ್ವಿವಚನ ಔ ಪರವಾದಾಗ **ಸುಪಾಂ ಸುಲುಕ್**—ಎಂಬುದರಿಂದ ಅದಕ್ಕೆ ಆಕಾರಾದೇಶ.

ವರ್ತಿಃ—ವರ್ತತೇ(ಽಸ್ಮಿನ್ ಇತಿ ವರ್ತಿಃ ಗೃಹಮ್. ವೃತು ವರ್ತನೇ ಧಾತು. ಇದಕ್ಕೆ ಔಣಾದಿಕ ಇಸಿ ಪ್ರತ್ಯಯ ವರ್ತಿಸ್ ಶಬ್ದವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತ.

ಅಸ್ಮತ್—ಅಸ್ಮತ್ ಶಬ್ದ. ಇದಕ್ಕೆ ಷಷ್ಠೀವಿಭಕ್ತಿ ಪರವಾದಾಗ ಅದಕ್ಕೆ **ಸುಪಾಂಸುಲುಕ್**—ಎಂಬುದರಿಂದ ಲುಕ್.

ದಸ್ರಾ—ಇಲ್ಲಿಯೂ ಔಕಾರವಿಭಕ್ತಿಗೆ ಹಿಂದಿನಂತೆ **ಸುಪಾಂ ಸುಲುಕ್**—ಸೂತ್ರದಿಂದ ಆಕಾರಾದೇಶ.

ಸಮನಸಾ—ಸಮಾನಂ ಮನಃ ಯಯೋಸ್ತೌ ಸಮನಸೌ. **ಸಮಾನಸ್ಯ ಛಂದಸಿ-** (ಪಾ ಸೂ. ೬-೩-೮೪) ಎಂಬುದರಿಂದ ಸಮಾನ ಶಬ್ದಕ್ಕೆ ಸಭಾವ. **ಸುಪಾಂ ಸುಲುಕ್**—ಸೂತ್ರದಿಂದ ವಿಭಕ್ತಿಗೆ ಆಕಾರಾದೇಶ.

ಯಚ್ಛತಮ್—ದಾಣ್ ದಾನೇ. ಧಾತು. ಲೋಣ್ಮ್ಯಧ್ಯಮಪುರುಷ ದ್ವಿವಚನದಲ್ಲಿ ಥಸಿಗೆ ಲಜ್ವದ್ಭಾವ ವಿರುವುದರಿಂದ **ತಸ್ಥಸ್ಥ**— ಸೂತ್ರದಿಂದ ತಮಾದೇಶ. **ಸಾಘ್ವಾಧ್ಮಾ**—ಎಂಬುದರಿಂದ ಧಾತುವಿಗೆ ಯಚ್ಛ ಎಂಬ ಆದೇಶ. ತಿಙಂತ ನಿಘಾತಸ್ವರ ಬರುತ್ತದೆ. ॥ ೧೬ ॥



ಸಂಹಿತಾಪಾಠಃ

ಯಾವಿತ್ಥಾ ಶ್ಲೋಕಮಾ ದಿವೋ ಜ್ಯೋತಿರ್ಜನಾಯ ಚಕ್ರಥುಃ।
ಆ ನ ಊರ್ಜಂ ವಹತಮಶ್ವಿನಾ ಯುವಂ ॥ ೧೭ ॥

ಪದಪಾಠಃ

ಯೌ। ಇತ್ಥಾ। ಶ್ಲೋಕಂ। ಆ। ದಿವಃ। ಜ್ಯೋತಿಃ। ಜನಾಯ। ಚಕ್ರಥುಃ।
ಆ। ನಃ। ಊರ್ಜಂ। ವಹತಂ। ಅಶ್ವಿನಾ। ಯುವಂ ॥ ೧೭ ॥

ಸಾಯಣಭಾಷ್ಯಂ

ಹೇ ಅಶ್ವಿನೌ ಯೌ ಯುವಾಂ ದಿವೋ ದ್ಯುಲೋಕಾತ್ ಶ್ಲೋಕಮುಪಶ್ಲೋಕನೀಯಂ ಪ್ರಶಂಸನೀಯಂ ಜ್ಯೋತಿಸ್ತೇಜ ಇತ್ಥೇತ್ಥಮಸ್ಮಾಭಿರನುಭೂಯಮಾನೇನ ಪ್ರಕಾರೇಣ ಚಕ್ರಥುಃ ಕೃತವಂತೌ। ಕೇಷಾಂಚಿನ್ಮತೇನ ಸೂರ್ಯಾಚಂದ್ರಮಸಾವಶ್ವಿನಾವುಚ್ಯೇತೇ। ತದುಕ್ತಂ ಯಾಸ್ಕೇನ। ತತ್ಕಾವಶ್ವಿನೌ ದ್ಯಾವಾಪೃಥಿವ್ಯಾವಿತ್ಯೇಕೇ೭ಹೋರಾತ್ರಾವಿತ್ಯೇಕೇ ಸೂರ್ಯಾಚಂದ್ರಮಸಾವಿತ್ಯೇಕೇ। ನಿ. ೧೨-೧। ಇತಿ। ತಥಾ ಚ ಪ್ರಕಾಶಕತ್ವಂ ತಯೋರುಪಪನ್ನಂ। ತೌ ಯುವಂ ಯುವಾಂ ನೋ೭ಸ್ಮಭ್ಯ-ಮೂರ್ಜಂ ಬಲಪ್ರದಮನ್ನಮಾ ವಹತಂ। ಆನಯೇತಂ। ಪ್ರಯಚ್ಛತಂ ॥ ಶ್ಲೋಕಂ। ಶ್ಲೋಕೃ ಸಂಘಾತೇ। ಅಯಂ ಸ್ತುತ್ಯರ್ಥೋ೭ಪಿ। ಕರ್ಮಣಿ ಘಞ್। ಞಿತ್ತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಅಶ್ವಿನಾ— ಎಲೈ ಅಶ್ವಿನೀದೇವತೆಗಳೇ। **ಯೌ**— ಯಾವ ನೀವು। **ಆ ದಿವಃ**—ದ್ಯುಲೋಕದಿಂದ। **ಶ್ಲೋಕಂ**—ಪ್ರಶಂಸನೀಯವಾದ। **ಜ್ಯೋತಿಃ**—ತೇಜಸ್ಸನ್ನು। **ಜನಾಯ**—ಮಾನವರಾದ ನಮಗೆ। **ಇತ್ಥಾ**—

(ನಾವು) ಈರೀತಿ (ಅನುಭವಿಸುವಂತೆ) । **ಚಕೃಥುಃ**—ಮಾಡಿದಿರೋ । **ಯುವಂ**—ಅದೇ ನೀವು । **ನಃ**—ನಮಗೆ । **ಊರ್ಜಂ**—ಶಕ್ತಿಯುತವಾದ ಅನ್ನವನ್ನು । **ಆ ವಹತಂ**—ತಂದುಕೊಡಿ ॥

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ನೀವು ದ್ಯುಲೋಕದಿಂದ ಪ್ರಶಂಸನೀಯವಾದ ತೇಜಸ್ಸನ್ನು ತಂದೊದಗಿಸಿ ಮಾನವರಾದ ನಾವು ಈ ರೀತಿ ಸುಖವನ್ನನುಭವಿಸುವಂತೆ ಮಾಡಿದಿರಿ. ಅದೇ ಉದಾರಸ್ವಭಾವವುಳ್ಳ ನೀವು ನಮಗೆ ಶಕ್ತಿಯುತವಾದ ಅನ್ನವನ್ನು ತಂದುಕೊಡಿ.

English Translation

Aswins, you have sent adorable light from heaven to man ; bring us strength.

ವಿಶೇಷವಿಷಯಗಳು

ಶ್ಲೋಕಂ—ಶ್ಲೋಕಃ, ಧಾರಾ, ಇಳಾ ಇತ್ಯಾದಿ ೫೭ **ವಾಙ್** ನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೨-೩೩) ಸ್ತುತಿರೂಪವಾದ ವಾಕ್ಯ,ಎಂದರ್ಥ. **ಶ್ಲೋಕಂ ಜ್ಯೋತಿಃ** ಎನ್ನುವುದಕ್ಕೆ ಸ್ತುತ್ಯವಾದ ಅಥವಾ ಪ್ರಶಂಸನೀಯವಾದ ತೇಜಸ್ಸೆಂದಾಗುತ್ತದೆ.

ಯಸ್ಯ ಯೋಗೇ ದುಹಿತಾ ಜಾಯತೇ ದಿವ ಉಭೇ ಅಹನೀ ಸುದಿನೇ ವಿವಸ್ವತಃ ।

(ಋ. ಸಂ ೧೮-೩೯-೧೨)

ಎಂದು ಅಶ್ವಿನೀದೇವತೆಗಳೇ ಉಷಸ್ಸಿನ ಆವಿರ್ಭಾವಕ್ಕೂ, ಸೂರ್ಯನ ಉದಯಕ್ಕೂ ಮೂಲಕಾರಣರಾದುದರಿಂದ ಅವರೇ ಜ್ಯೋತಿಯನ್ನು ಕೊಟ್ಟು ಲೋಕಕ್ಕೆ ಪ್ರಕಾಶನನ್ನುಂಟುಮಾಡಿದರೆಂದು ಹೊಗಳಿದೆ.

ಆ ನ ಊರ್ಜಂ ವಹತಂ—ಅಂಧಃ, ವಾಜಃ, ಪಯಃ ಇತ್ಯಾದಿ ೨೮ ಅನ್ನನಾಮಗಳಲ್ಲಿ ಪಠಿವಾಗಿರುವುದರಿಂದ (ನಿ ೩-೯) **ಊರ್ಜ** ಶಬ್ದಕ್ಕೆ ಅನ್ನವೆಂದಾಗುತ್ತದೆ. ಕೆಲವುಕಡೆ ಶಕ್ತಿಯುತವಾದ ಅಥವಾ ಶಕ್ತಿಯನ್ನು ಕೊಡತಕ್ಕ ಅನ್ನವೆಂದೂ ಆಗುತ್ತದೆ. ಇಲ್ಲಿ **ಬಲಪ್ರದಂ ಅನ್ನಂ** । ಶಕ್ತಿದಾಯಕವಾದ ಅನ್ನವೆಂದು ವಿವರಿಸುತ್ತಾರೆ. **ನಃ** ನಮಗೆ **ಆ ವಹತಂ** ಒದಗಿಸಿ ಕೊಡಿ—ಮುಂದೆಯೂ ೧-೧೫೭-೪ನೇ ಋಕ್ಕಿನಲ್ಲಿ ಇದೇ ಅನುಪೂರ್ವಿಯಿಂದ ಅಶ್ವಿನೀದೇವತೆಗಳನ್ನು ಕುರಿತ ಪ್ರಾರ್ಥನೆಯಿದೆ.

ಆ ನ ಊರ್ಜಂ ವಹತಮಶ್ವಿನಾ ಯುವಂ ಮಧುಮತ್ಯಾ ನಃ ಕಶಯಾ ಮಿಮಿಕ್ಷತಂ ।

(ಋ. ಸಂ. ೧-೧೫೭-೪)

ವ್ಯಾಕರಣಪ್ರಕ್ರಿಯಾ

ದಿವಃ—ಊಡಿದಂ ಪದಾದಿ—ಸೂತ್ರದಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಚಕೃಥುಃ—ಡುಕೃಞ್ ಕರಣೇ. ಧಾತು. ಲಿಣ್ಮಧ್ಯಮವುರುಷ ದ್ವಿವಚನದಲ್ಲಿ **ಪರಸ್ಮೈಪದಾನಾಂ**—ಎಂಬುದರಿಂದ ಥಸಿಗೆ ಅಥುಸ್ ಆದೇಶ. ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಉರದತ್ವ. ಚುತ್ವ. ಯಣಾದೇಶ.

ಯೌ ಎಂದು ಹಿಂದೆ ಸಂಬಂಧವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಮಧ್ಯೋದಾತ್ತ ವಾಗುತ್ತದೆ.

ಶ್ಲೋಕಮ್—ಶ್ಲೋಕ್ಲೃ ಸಂಘಾತೇ ಧಾತು. ಧಾತುಗಳಿಗೆ ಅನೇಕಾರ್ಥವಿದೆಯೆಂದು ಸ್ವೀಕರಿಸಿರುವುದ ರಿಂದ ಇಲ್ಲಿ ಸ್ತುತ್ಯರ್ಥದಲ್ಲಿ ಗೃಹೀತವಾಗಿದೆ. ಶ್ಲೋಕ್ಯತೇ ಇತಿ ಶ್ಲೋಕಃ. ಕರ್ಮಣಿಯಲ್ಲಿ ಘಞ್ ಪ್ರತ್ಯಯ. **ಞ್ನಿತ್ಯಾದಿರ್ನಿತ್ಯಮ್**–(ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ವಹತಮ್—ವಹ ಪ್ರಾಪಣೇ ಧಾತು. ಲೋಣ್ಮ್ಯಧ್ಯಮಪುರುಷ ದ್ವಿವಚನರೂಪ. ಅತಿಙಂತದ ಪರ ದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅಶ್ವಿನಾ—**ಸುಪಾಂ ಸುಲುಕ್**—ಸೂತ್ರದಿಂದ ಔ ವಿಭಕ್ತಿಗೆ ಆಕಾರಾದೇಶ.

ಯುವಮ್—ಯುಷ್ಮಚ್ಛಬ್ದ ದ್ವಿವಚನದಲ್ಲಿ **ಪ್ರಥಮಾಯಾಶ್ಚ ದ್ವಿವಚನೇ ಭಾಷಾಯಾಮ್** (ಪಾ. ಸೂ. ೭-೨-೮೮) ಎಂಬಲ್ಲಿ ಲೋಕದಲ್ಲಿ ಮಾತ್ರ ಆತ್ವಹೇಳಿರುವುದರಿಂದ ಛಂದಸ್ಸಿನಲ್ಲಿ ಆತ್ವ ಬರುವುದಿಲ್ಲ. **ಙೀ ಪ್ರೈಥಮ-ಯೋರಮ್**—ಎಂಬುದರಿಂದ ವಿಭಕ್ತಿಗೆ ಅಮಾದೇಶ. ಪ್ರಕೃತಿಗೆ **ಯುವಾವೌ ದ್ವಿವಚನೇ**—ಎಂಬುದರಿಂದ ಯುವಾದೇಶ. **ಶೇಷೇ ಲೋಪಃ**—ಸೂತ್ರದಿಂದ ಮಪರ್ಯಂತದ ಪರಕ್ಕೆ (ಅದ್) ಲೋಪ. ॥ ೧೭ ॥

ಸಂಹಿತಾಪಾಠಃ

ಏಹ ದೇವಾ ಮಯೋಭುವಾ ದಸ್ರಾ ಹಿರಣ್ಯವರ್ತನೀ।
ಉಷರ್ಬುಧೋ ವಹಂತು ಸೋಮಪೀತಯೇ ॥ ೧೮ ॥

॥ ಪದಪಾಠಃ ॥

ಆ । ಇಹ । ದೇವಾ । ಮಯಃ ಭುವಾ । ದಸ್ರಾ । ಹಿರಣ್ಯವರ್ತನೀ ಇತಿ ಹಿರ-ಣ್ಯ ವರ್ತನೀ ।

ಉಷಃ ಬುಧಃ । ವಹಂತು । ಸೋಮ ಪೀತಯೇ ॥ ೧೮ ॥

॥ ಸಾಯಣಭಾಷ್ಯಂ ॥

ಉಷರ್ಬುಧ ಉಷಸಿ ಪ್ರಬುದ್ಧಾ ಅಶ್ವಾ ಇಹಾಸ್ಮನ್ಯಾಗೇ ಸೋಮಪೀತಯೇ ಸೋಮಪಾನಾಯ ದಸ್ರಾ ಶತ್ರೂಣಾಮುಪಕ್ಷಪಯಿತಾರಾವಶ್ವಿನಾವಾ ವಹಂತು। ಆನಯಂತು। ಕೀದೃಶೌ। ದೇವಾ ದೇವನಶೀಲೌ ದಾನಾದಿಗುಣಯುಕ್ತೌ ವಾ ಮಯೋಭುವಾ ಮಯಸ ಆರೋಗ್ಯಪ್ರದಸ್ಯ ಸುಖಸ್ಯ ಭಾವಯಿತಾರೌ। ಅಶ್ವಿನೌ ವೈ ದೇವಾನಾಂ ಭಿಷಜೌ। ಐ. ಬ್ರಾ. ೧.೧೪। ಇತಿ ಶ್ರುತೇಃ। ಹಿರಣ್ಮಯವರ್ತನೀ। ವರ್ತತೇಽನೇನೇತಿ ವ್ಯುತ್ಪತ್ತ್ಯಾ ವರ್ತನಿಶಬ್ದೇನ ರಥ ಉಚ್ಯತೇ। ಸುವರ್ಣಮಯೋ ವರ್ತನಿರ್ಯಯೋಸ್ತೌ॥ ದೇವೇತ್ಯಾದಿಷು ತ್ರಿಷು ಸುಪಾಂ ಸುಲುಗಿತ್ಯಾಕಾರಃ। ಸೋಮಪೀತಯೇ। ಪಾ ಪಾನೇ। ಭಾವೇ ಕ್ತಿನಿ ಷುಮಾಸ್ಥೇತೀತ್ವಂ। ಸೋಮಸ್ಯ ಪೀತಿಃ ಸೋಮಪೀತಿಃ। ದಾಸೀಭಾರಾದಿತ್ವಾತ್ಪೂರ್ವಪದಪ್ರಕೃತಿಸ್ವರತ್ವಂ॥

ಪ್ರತಿಪದಾರ್ಥ

ಉಷರ್ಬುಧಃ—ಉಷಃಕಾಲದಲ್ಲಿ ಎಚ್ಚರಗೊಂಡ ಅಶ್ವಗಳು। **ಇಹ**—ಈ (ನಮ್ಮ) ಯಾಗಭೂಮಿಗೆ। **ಸೋಮಪೀತಯೇ**—ಸೋಮರಸ ಪಾನಾರ್ಥವಾಗಿ। **ದೇವಾ**—ಉದಾರವಾದ ದಾನಶೀಲರೂ। **ಮಯೋಭುವಾ**—ಸುಖಪ್ರದಾತರೂ। **ಹಿರಣ್ಮಯವರ್ತನೀ**—ಚಿನ್ನದ ರಥಾರೂಢರೂ। **ದಸ್ರಾ**—ಶತ್ರುನಾಶಕರೂ ಆದ ಅಶ್ವಿನೀದೇವತೆಗಳನ್ನು। **ಆ ವಹಂತು**—ಕರೆತರಲಿ॥

ಭಾವಾರ್ಥ

ಅಶ್ವಿನೀದೇವತೆಗಳು ಉದಾರವಾದ ದಾನಶೀಲರೂ, ಸುಖಪ್ರದರೂ ಚಿನ್ನದ ರಥಾರೂಢರೂ ಮತ್ತು ಶತ್ರುನಾಶಕರೂ ಆಗಿದ್ದಾರೆ. ಅಂತಹ ಮಹಿಮೆಯುಳ್ಳ ಅಶ್ವಿನೀದೇವತೆಗಳನ್ನು ಉಷಃಕಾಲದಲ್ಲಿ ಎಚ್ಚರಗೊಂಡ ಅಶ್ವಗಳು ನಮ್ಮ ಈ ಯಾಗಭೂಮಿಗೆ ಸೋಮರಸಪಾನಾರ್ಥವಾಗಿ ಕರೆತರಲಿ.

English Translation

May the horses awakened at dawn bring hither, to drink the Soma-juice, the divine Aswins, who are the givers of happiness, the destroyers of foes, seated in a golden chariot.

ವಿಶೇಷವಿಷಯಗಳು

ಉಷರ್ಬುಧಃ—**ಉಷಸಿ ಪ್ರಬುದ್ಧಾ ಅಶ್ವಾಃ**। ಉಷಃಕಾಲದಲ್ಲಿ ಎಚ್ಚರಗೊಂಡ ಅಶ್ವಗಳು. ಪದವು ಸಾಧಾರಣವಾಗಿ ಉಷಃ ಕಾಲದಲ್ಲಿ ಯಜ್ಞಕ್ಕಾಗಿ ಎಚ್ಚರಗೊಳ್ಳತಕ್ಕ ಯಜಮಾನರಿಗೂ, ಹವಿಸ್ಸಿನ ಸ್ವೀಕಾರಕ್ಕಾಗಿ ಏಳತಕ್ಕ ದೇವತೆಗಳಿಗೂ ಅದರಲ್ಲೂ ಮುಖ್ಯವಾಗಿ ಅಗ್ನಿಗೂ ವಿಶೇಷಣವಾಗಿ ಉಪಯೋಗಿಸಲ್ಪಟ್ಟಿದೆ. ಒಟ್ಟು ಋಕ್ಸಂಹಿತೆಯಲ್ಲೆಲ್ಲಾ ಎರಡು ಸ್ಥಳಗಳಲ್ಲಿ ಮಾತ್ರ ಅಶ್ವಿನೀದೇವತೆಗಳ ಕುದುರೆಗಳು ಎಂಬರ್ಥವಿದೆ. ಈ ಋಕ್ಕಿನಲ್ಲಿಯೂ ಋ. ಸಂ. ೪-೪೫-೪ ನೇ ಋಕ್ಕಿನಲ್ಲಿಯೂ ಅಶ್ವಿನೀದೇವತೆಗಳ ಕುದುರೆಗಳೆಂದರ್ಥ.

ದೇವಾ—ಪ್ರಕಾಶಮಾನರು ಅಥವಾ ದಾನಾದಿಗುಣಶೀಲರು.

ಮಯೋಭುವಾ— ಶಂಬಾತಾ, ಶತೆರಾ, ಇತ್ಯಾದಿ ಇಪ್ಪತ್ತು **ಸುಖ**ನಾಮಗಳಲ್ಲಿ ಪಠಿತವಾಗಿರುವುದರಿಂದ **ಮಯಸ್** ಎಂದರೆ ಸುಖವೆಂದರ್ಥ (ನಿ ೩–೧೧) **ಮಯೋಭುವಃ** ಎಂಬ ಪದವು ಸಾಧಾರಣವಾಗಿ ಇತರ ದೇವತೆಗಳಿಗೂ ವಿಶೇಷಣವಾಗಿದೆ. ಎಲ್ಲರೂ ಒಂದಲ್ಲ ಒಂದು ವಿಧದಲ್ಲಿ ಯಜಮಾನರಿಗೆ ಸುಖದಾತೃಗಳು. ಆದರೂ ಸಹ **ಅಶ್ವಿನೀದೇವತೆ**ಗಳಲ್ಲಿ ಒಂದು ವೈಶಿಷ್ಟ್ಯವಿದೆ-

ಅಶ್ವಿನೌ ವೈ ದೇವಾನಾಂ ಭಿಷಜೌ ।
(ಐ. ಬ್ರಾ। ೧-೧೪)

ಇತ್ಯಾದಿ ಶ್ರುತಿವಾಕ್ಯಗಳಿಂದ ಅಶ್ವಿನೀದೇವತೆಗಳು ದೇವವೈದ್ಯರೆಂದೂ ದೇವತೆಗಳ ಅನುಗ್ರಹವನ್ನು ಸಂಪಾದಿಸಿದ ಯಜ್ಞಕರ್ತರಿಗೂ ಸಹ ಆರೋಗ್ಯರೂಪವಾದ ಸುಖವನ್ನು ಅನುಗ್ರಹಿಸುವರೆಂದೂ ಪ್ರಸಿದ್ಧವಾಗಿದೆ. ಆದುದರಿಂದ ಇಲ್ಲಿ **ಮಯಸಃ ಆರೋಗ್ಯಪ್ರದಸ್ಯ ಸುಖಸ್ಯ ಭಾವಯಿತಾರೌ ।** ಆರೋಗ್ಯರೂಪವಾದ ಸುಖವನ್ನು ಕೊಡುವವರು ಎಂದರ್ಥ.

ಹಿರಣ್ಯವರ್ತನೀ— ವರ್ತನಿಯೆಂದರೆ ರಥವೆಂದೂ ರಥದ ಚಕ್ರದ ನೇಮಿಯೆಂದೂ (ಹೊರವಲಯ) ಅಥವಾ ರಥದ ಮಾರ್ಗವೆಂದೂ ಅರ್ಥವಾಗಬಹುದು. **ಹಿರಣ್ಯವರ್ತನಿ**ಯೆಂದರೆ ಸಾಧಾರಣವಾಗಿ ಸ್ವರ್ಣಮಯವಾದ ರಥವೆಂದೇ ಹೆಚ್ಚು ಕಡೆಗಳಲ್ಲಿ ಅರ್ಥಮಾಡಿದೆ- ಇಲ್ಲಿ ಸ್ವರ್ಣಮಯವಾದ ರಥವುಳ್ಳವರೆಂದರ್ಥ. ಈ ವಿಶೇಷಣವು ಋಕ್ಸಂಹಿತೆಯಲ್ಲಿ ೬-೬೧-೭ ನೇ ಋಕ್ಕನ್ನು ಬಿಟ್ಟರೆ ಉಳಿದೆಡೆಗಳಲ್ಲೆಲ್ಲಾ ಅಶ್ವಿನೀದೇವತೆಗಳ ಪರವಾಗಿಯೇ ಇದೆ. ಕೆಲವೆಡೆಗಳಲ್ಲಿ **ದಸ್ರಾ ಹಿರಣ್ಯವರ್ತನೀ** ಎಂಬ ಎರಡು ವಿಶೇಷಣಗಳೂ ಸೇರಿಕೊಂಡು ಬರುತ್ತವೆ ಉದಾಹರಣೆಗೆ—

ದಸ್ರಾ ಹಿರಣ್ಯವರ್ತನೀ ಸುಷುಮ್ಣಾ ಸಿಂಧುವಾಹಸಾ ಮಾಧ್ವೀ ಮಮ ಶ್ರುತಂ ಹವಂ ।
(ಋ. ಸಂ. ೫ ೭೫-೨)

ವಾವೃಧಾನಾ ಶುಭಸ್ಪತೀ ದಸ್ರಾ ಹಿರಣ್ಯವರ್ತನೀ ।
(ಋ. ಸಂ ೮-೫-೧೧)

ದಸ್ರಾ ಹಿರಣ್ಯವರ್ತನೀ ಪಿಬತಂ ಸೋಮ್ಯಂ ಮಧು ।
(ಋ. ಸಂ. ೮-೮-೧)

ದಸ್ರಾ ಹಿರಣ್ಯವರ್ತನೀ ಶುಭಸ್ಪತೀ ಸಾತಂ ಸೋಮಮೃತಾವೃಧಾ ।
(ಋ. ಸಂ. ೮-೮೭-೫)

ಇತ್ಯಾದಿ ಋಕ್ಕುಗಳಲ್ಲೆಲ್ಲಾ **ದಸ್ರಾ ಹಿರಣ್ಯವರ್ತನೀ** ಎಂಬ ಎರಡು ವಿಶೇಷಣಗಳೂ ಒಟ್ಟಿಗೆ ಸೇರಿಕೊಂಡು **ಅಶ್ವಿನೀದೇವತೆ**ಗಳ ಸ್ವರೂಪವನ್ನೂ ಸೌಂದರ್ಯವನ್ನೂ ವರ್ಣಿಸುತ್ತವೆ.

ವ್ಯಾಕರಣಪ್ರಕ್ರಿಯಾ

ದೇವಾ—ಈ ಮಂತ್ರದಲ್ಲಿ ಇದೇ ಮೊದಲಾದ ಮೂರು ಶಬ್ದಗಳಲ್ಲಿಯೂ **ಸುಪಾಂ ಸುಲುಕ್**—ಎಂಬುದರಿಂದ ವಿಭಕ್ತಿಗೆ ಆಕಾರಾದೇಶ.

ಸೋಮಪೀತಯೇ — ಸೋಮಸ್ಯ ಪೀತಿಃ ಸೋಮಪೀತಿಃ ಪಾ ಪಾನೇ. ಧಾತು. ಭಾವಾರ್ಥದಲ್ಲಿ **ಸ್ತ್ರಿಯಾಂ ಕ್ತಿನ್**-(ಪಾ. ಸೂ. ೩-೩-೯೪) ಎಂಬುದರಿಂದ ಕ್ತಿನ್ ಪ್ರತ್ಯಯ. ಕಿತ್ತಾದುದರಿಂದ ಇದು ಪರವಾದಾಗ **ಘುಮಾಸ್ಥಾಗಾಪಾಜಹಾತಿಸಾಂ ಹಲಿ** (ಪಾ. ಸೂ. ೬-೪-೬೬) ಎಂಬುದರಿಂದ ಧಾತುವಿಗೆ ಈತ್ವ. ಪೀತಿಃ ಎಂದು ರೂಪವಾಗುತ್ತದೆ. ದಾಸೀಭಾರಾದಿಯಲ್ಲಿ ಪಠಿತವಾದುದರಿಂದ ಪೂರ್ವಪದಪ್ರಕೃತಿಸ್ವರ ಬರುತ್ತದೆ.

ವಹಂತು—ವಹೆ ಪ್ರಾಪಣೇ ಧಾತು. ಲೋಟ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ. **ಝೋಂತಃ**—ಎಂಬುದರಿಂದ ಅಂತಾದೇಶ. **ಏರುಃ**—ಎಂಬುದರಿಂದ ಉತ್ವ. ಶಪ್ ವಿಕರಣ. **ಅತೋಗುಣೇ**—ಎಂಬುದರಿಂದ ಪೂರ್ವರೂಪ. ಅತಿಜಂತದ ಪರದಲ್ಲಿರುವುದರಿಂದ **ತಿಜ್ಜಿತಿಜಿಃ** (ಪಾ. ಸೂ. ೮-೧-೭೮) ಎಂಬುದರಿಂದ ನಿಘಾತಸ್ವರ ಬರುತ್ತದೆ. ॥ ೧೮ ॥

ತೊಂಭತ್ತನೂರನೆಯ ಸೂಕ್ತವು

ಅಗ್ನೀಷೋಮಾವಿತಿ ದ್ವಾದಶರ್ಚಂ ನವಮಂ ಸೂಕ್ತಂ ಗೋತಮಸ್ಯಾರ್ಷಂ । ಆದಿತಸ್ತಿಸ್ರೋ ಽನುಷ್ಟುಭಃ । ನವಮ್ಯಾದ್ಯಾಸ್ತಿಸ್ರೋ ಗಾಯತ್ರ್ಯಃ । ಅಷ್ಟಮೀ ಜಗತೀ ತ್ರಿಷ್ಟುಬ್ವಾ । ಶಿಷ್ಟಾಃ ಪಂಚ ತ್ರಿಷ್ಟುಭಃ । ಅಗ್ನೀಷೋಮೌ ದೇವತಾ । ತಥಾ ಚಾನುಕ್ರಾಂತಂ । ಅಗ್ನೀಷೋಮೌ ದ್ವಾದಶಾಗ್ನೀಷೋಮೀಯಮಾದ್ಯಾಸ್ತಿಸ್ರೋ ಽನುಷ್ಟುಭ ಉಸಾಂತ್ಯಾಸ್ತಿಸ್ರೋ ಗಾಯತ್ರ್ಯೋ ಽಷ್ಟಮೀ ಜಗತೀ ವೇತಿ ॥ ಅಗ್ನೀಷೋಮೀಯಸ್ಯ ಪಶೋರ್ವಪಾಪುರೋಡಾಶಹವಿಷಾವಾದಿತಸ್ತಿಸ್ರ ಋಚಃ ಕ್ರಮೇಣಾನುವಾಕ್ಯಾಃ । ಸೂತ್ರಿತಂ ಚ । ಅಗ್ನೀಷೋಮಾವಿಮಂ ಸು ಮೇ ಯುವಮೇತಾನಿ ದಿವಿ ರೋಚನಾನೀತಿ ತೃಚೌ । ಆ ೩-೮ । ಇತಿ ॥

ಅನುವಾದವು— **ಅಗ್ನೀಷೋಮೌ** ಎಂಬ ಸೂಕ್ತವು ಹದಿನಾಲ್ಕನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ಗೋತಮನು ಋಷಿಯು. ಮೊದಲಿನ ಮೂರು ಋಕ್ಕುಗಳು ಅನುಷ್ಟುಪ್ ಛಂದಸ್ಸಿನವು. ಒಂಭತ್ತರಿಂದ ಮೂರು ಋಕ್ಕುಗಳು ಗಾಯತ್ರೀ ಛಂದಸ್ಸಿನವು. ಎಂಟನೆಯ ಋಕ್ಕು ಜಗತೀ ಅಥವಾ ತ್ರಿಷ್ಟುಪ್ ಛಂದಸ್ಸಿನದು. ಉಳಿದ ಐದು ಋಕ್ಕುಗಳು ತ್ರಿಷ್ಟುಪ್ ಛಂದಸ್ಸಿನವು. ಅಗ್ನಿ ಮತ್ತು ಸೋಮನು ಈ ಸೂಕ್ತಕ್ಕೆ ದೇವತೆಗಳು. ಅನುಕ್ರಮಣಿಕೆಯಲ್ಲಿ **ಅಗ್ನೀಷೋಮೌ ದ್ವಾದಶಾಗ್ನೀಷೋಮೀಯಮಾದ್ಯಾಸ್ತಿಸ್ರೋ ಽನುಷ್ಟುಭ ಉಸಾಂತ್ಯಾಸ್ತಿಸ್ರೋ ಗಾಯತ್ರ್ಯೋ ಽಷ್ಟಮೀ ಜಗತೀ ವೇತಿ** ಎಂದುಹೇಳಿರುವುದು. ಅಗ್ನೀಷೋಮೀಯ ಸಂಬಂಧವಾದ ಪಶುಯಾಗದಲ್ಲಿ ನಪಾಪುರೋಡಾಶಹವಿಸ್ಸುಗಳನ್ನು ಹೋಮಮಾಡುವಾಗ ಈ ಸೂಕ್ತದ ಮೊದಲನೆಯ ಮೂರು ಋಕ್ಕುಗಳು ಕ್ರಮವಾಗಿ ಪುರೋನುವಾಕ್ಯಾ ಮಂತ್ರಗಳನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಅಗ್ನೀಷೋಮಾವಿಮಂ ಸು ಮೇ ಯುವಮೇತಾನಿ ದಿವಿ ರೋಚನಾನೀತಿ ತೃಚೌ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೩-೮).

ಸೂಕ್ತ—೯೩

ಮಂಡಲ—೧ ॥ ಅನುವಾಕ—೧೪ ॥ ಸೂಕ್ತ—೯೩ ॥

ಅಷ್ಟಕ—೧ ॥ ಅಧ್ಯಾಯ—೬ ॥ ವರ್ಗ—೨೮, ೨೯, ॥

ಸೂಕ್ತದಲ್ಲಿರುವ ಋಕ್ಸಂಖ್ಯೆ— ೧೨

॥ ಋಷಿಃ—ಗೋತಮೋ ರಾಹೂಗಣಃ ॥

॥ ದೇವತಾ— ಅಗ್ನೀಷೋಮೌ ॥

॥ ಛಂದಃ—೧-೩ ಅನುಷ್ಟುಪ್ । ೪-೬, ೧೨. ತ್ರಿಷ್ಟುಪ್ । ೮. ಜಗತೀ ತ್ರಿಷ್ಟುಬ್ವಾ । ೯-೧೧. ಗಾಯತ್ರೀ ॥

॥ ಸಂಹಿತಾಪಾಠಃ ॥

ಅಗ್ನೀಷೋಮಾವಿಮಂ ಸು ಮೇ ಶೃಣುತಂ ವೃಷಣಾ ಹವಂ।
ಪ್ರತಿ ಸೂಕ್ತಾನಿ ಹರ್ಯತಂ ಭವತಂ ದಾಶುಷೇ ಮಯಃ ॥ ೧ ॥

ಪದಪಾಠಃ

ಅಗ್ನೀಷೋಮೌ । ಇಮಂ । ಸು । ಮೇ । ಶೃಣುತಂ । ವೃಷಣಾ । ಹವಂ ।
ಪ್ರತಿ । ಸೂ ಽ ಉಕ್ತಾನಿ । ಹರ್ಯತಂ । ಭವತಂ । ದಾಶುಷೇ । ಮಯಃ ॥೧॥

ಸಾಯಣಭಾಷ್ಯಂ

ವೃಷಣಾ ವೃಷಣೌ ಕಾಮಾನಾಂ ವರ್ಷಿತಾರೌ ಹೇ ಅಗ್ನೀಷೋಮೌ ಇಮಮಿದಾನೀಂ ಪ್ರಯುಜ್ಯಮಾನಂ ಮೇ ಮದೀಯಂ ಹವಮಾಹ್ವಾನಂ ಸು ಶೃಣುತಂ । ಸಮ್ಯಗವಗಚ್ಛತಂ । ಸೂಕ್ತಾನಿ ಶೋಭನಾನಿ ಸ್ತುತಿಲಕ್ಷಣಾನ್ಯಸ್ಮಾಭಿಃ ಕೃತಾನಿ ವಚಾಂಸಿ ಪ್ರತಿ ಹರ್ಯತಂ । ಪ್ರತ್ಯೇಕಂ ಕಾಮಯೇಥಾಂ । ತದನಂತರಂ ದಾಶುಷೇ ಚರುಪುರೋಡಾಶಾದೀನಿ ದತ್ತವತೇ ಯಜಮಾನಾಯ ಮಯೋ ಮಯಸಃ ಸುಖಸ್ಯ ದಾತಾರೌ ಭವತಂ ॥ ಅಗ್ನಿಷೋಮೌ । ಅಗ್ನಿಶ್ಚ ಸೋಮಶ್ಚ । ದ್ವಂದ್ವಃ ಈದಗ್ನೇಃ ಸೋಮವರುಣಯೋಃ । ಪಾ. ೬-೩-೨೬ । ಇತೀತ್ವಂ । ಅಗ್ನೇಃ ಸ್ತುತ್ಸ್ತೋಮಸೋಮಾಃ । ಪಾ.-

ಲ-೩-೮೨ । ಇತಿ ಷತ್ವಂ । ದೇವತಾದ್ವಂದ್ವೇ ಚೇತ್ಯುಭಯಪದಪ್ರಕೃತಿಸ್ವರೇ ಪ್ರಾಪ್ತೇ ಆಮಂತ್ರಿತಸ್ಯ ಚೇತ್ಯಾದ್ಯುದಾತ್ತತ್ವಂ । ವೃಷಣಾ । ಸುಪಾಂ ಸುಲುಗಿತ್ಯಾಕಾರಃ । ವಾ ಷಪೂರ್ವಸ್ಯೇತಿ ವಿಕಲ್ಪನಾದು-ಪಧಾಯಾ ದೀರ್ಘಾಭಾವಃ । ಹವಂ । ಭಾವೇ೨ನುಪಸರ್ಗಸ್ಯೇತಿ ಹ್ವಯತೇರಪ್ ಸಂಪ್ರಸಾರಣಂ ಚ । ಸೂಕ್ತಾನಿ । ಸುಪೂರ್ವಾದ್ವಚ್ಕ್ತೇಃ ಕರ್ಮಣಿ ನಿಷ್ಠಾ । ಸೂಪಮಾನಾತ್ ಕ್ತ ಇತ್ಯುತ್ತರಪದಾಂತೋ-ದಾತ್ತತ್ವಂ । ಹರ್ಯತಂ । ಹರ್ಯ ಗತಿಕಾಂತ್ಯೋಃ । ಭ್ವಾದಿಕಃ ॥

॥ ಪ್ರತಿಪದಾರ್ಥ ॥

ವೃಷಣಾ—ಇಷ್ಟಾರ್ಥಗಳನ್ನು ಸುರಿಸತಕ್ಕ । **ಅಗ್ನೀಷೋಮಾ**—ಅಗ್ನಿ ಮತ್ತು ಸೋಮದೇವತೆಗಳೇ **ಮೇ**—ನನ್ನ । **ಇಮಂ ಹವಂ**—ಈ ಆಹ್ವಾನವನ್ನು । **ಸು ಶೃಣತಂ**—ಚೆನ್ನಾಗಿ ಆಲಿಸಿ ಕೇಳಿರಿ । **ಸೂಕ್ತಾನಿ**—(ನಮ್ಮಿಂದ ಪಠಿತವಾದ) ಸ್ತೋತ್ರವಾಕ್ಯಗಳನ್ನು । **ಪ್ರತಿಹರ್ಯತಂ**— ಪ್ರತ್ಯೇಕವಾಗಿ ಅಪೇಕ್ಷಿಸಿರಿ (ಅನಂತರ) । **ದಾಶುಷೇ**—(ಚರುಪುರೋಡಾಶಾದಿಗಳನ್ನು) ಅರ್ಪಿಸುವ ಯಜಮಾನನಿಗೆ । **ಮಯಃ**— ಸುಖದಾತರಾಗಿ । **ಭವತಂ**—ಆಗಿರಿ ॥

ಭಾವಾರ್ಥ

ಎಲ್ಲೆ ಅಗ್ನೀಷೋಮದೇವತೆಗಳೇ, ನೀವು ಭಕ್ತರಿಗೆಲ್ಲಾ ಇಷ್ಟಾರ್ಥಗಳನ್ನು ತುಂಬಿಸುವವರು. ಅದೇ ಅಭಿಮಾನದಿಂದ **ಈ** ನನ್ನ ಆಹ್ವಾನವನ್ನು ಲಾಲಿಸಿ ಕೇಳಿರಿ. ನಮ್ಮಿಂದ ಪಠಿತವಾದ ಸ್ತೋತ್ರವಾಕ್ಯಗಳನ್ನು ಪ್ರತ್ಯೇಕವಾಗಿ ಸ್ವೀಕರಿಸಿ. ಅನಂತರ ಚರುಪುರೋಡಾಶಾದಿಗಳನ್ನು ಅರ್ಪಿಸುವ ಯಜಮಾನನಿಗೆ ಸುಖದಾತರಾಗಿರಿ.

English Translation

Agni and Soma, showerers of desires, favourably hear this my invocation, graciously accept my hymns, and bestow happiness on the donor of the oblation.

ವಿಶೇಷವಿಷಯಗಳು

ವೃಷಣಾ—ಈ ವಿಶೇಷಣವು ಇತರ ದೇವತೆಗಳ ವಿಷಯದಲ್ಲೂ ಅನೇಕ ಸಲ ಉಪಯೋಗಿಸಿದ್ದರೂ ಸಹ ಅಗ್ನೀಷೋಮಗಳನ್ನು **ವೃಷಣಾ** ಎನ್ನುವುದರಲ್ಲಿ ವಿಶೇಷವಾದ ಅರ್ಥವಿದೆ. **ದಧದ್ರತ್ನಾನಿ ದಾಶುಷೇ ; ಪರ್ಷಿ ರಾಧೋ ಮಘೋನಾಂ** ಇತ್ಯಾದಿ ಒಂದೇ ಆನುಪೂರ್ವಿಯುಳ್ಳ ಪ್ರಾರ್ಥನೆಯು ಅನೇಕ ಸಂದರ್ಭಗಳಲ್ಲಿರುತ್ತದೆ. ಋ. ಸಂ. ೪-೧೫-೩ ; ೮-೧೦೩-೭ ಮುಂತಾದ ಋಕ್ಕುಗಳಲ್ಲಿ ಅಗ್ನಿಗೂ ೯-೩-೬ ; ೯-೧-೩ ಇತ್ಯಾದಿ ಋಕ್ಕುಗಳಲ್ಲಿ ಅಗ್ನಿಗೂ ಸೋಮನಿಗೂ ಲಕ್ಷಿಸಿರುವ ಕ್ರಮವು ಒಂದೇ ವಿಧವಾಗಿರುತ್ತದೆ. ವಿಶೇಷವಾದ ಧನಗಳ ದಾತರೆಂಬರ್ಥವು.

ಹರ್ಯತಂ—ವಶ್ಮಿ, ಉಶ್ಮಸಿ ಇತ್ಯಾದಿ ಕಾಂತಿಕರ್ಮಗಳಲ್ಲಿ **ಹರ್ಯತಿ** ಎಂಬುದು ಪಠಿತವಾಗಿರುವುದರಿಂದಲೂ (ನಿ. ೩-೯) **ಹರ್ಯತಿಃ ಪ್ರೇಪ್ಸಾಕರ್ಮ** ಎಂಬ ನಿರ್ವಚನವಿರುವುದರಿಂದಲೂ ಸಹ (ನಿ. ೭-೧೭) **ಹರ್ಯತಂ** ಎಂದರೆ

इच्छिसिरि, अपेक्षिसि एन्दर्थवु **ई** ऋक्किनल्लि इब्बरिगू ऒट्टिगे सेरिसि **इमं हवं शृणुतं सूक्तानि प्रति हर्यतं** एन्दु माडिरुव प्रार्थनेयन्तेयें प्रत्येकवागियू सह ऒन्दे आनु पूर्वियुळ्ळ प्रार्थनेयु बेरे बेरे स्थळगळल्लिवे. उदाहरणेगे—

इमं यज्ञमिदं वचोऽ जुजुषाण उपागहि ।

(ऋ. सं. ८-८४८-३)

इमं यज्ञमिदं वचोऽ जुजुषाण उपागहि ।

(ऋ. सं. ८-९८-८०)

एन्दु अग्निगे माडिरुव प्रार्थनेयन्तेयें स्वल्पवू व्यत्यासविल्लदे ऋ. सं. ८-९८-८०नेय ऋक्किनल्लि सोमनन्नु कुरित प्रार्थनेयिदे. ई ऋक्किनल्लि इब्बरन्नू सेरिसिदे. नम्म यज्ञवन्नु नम्म प्रार्थनेयन्नू अत्यन्त अभिमानदिन्द इच्छिसिरि एन्दर्थवु.

मयोः—शर्म, स्योमकं इत्यादि **सुख**नामगळल्लि पठितवागिरुवुदरिन्द (नि. ३-८३) **मयोः** एन्दरे सुखवेन्दर्थवु. इल्लि सुखदातृवेन्दागुत्तदे. इदरिन्द लभिसतक्क सुखद स्वरूपवेनेन्बुदन्नु ऋ. सं. ८-९८-९नेय ऋक्किन विवरणेयल्लि विशदवागि तिळिसिदे.

व्याकरणप्रक्रियां

अग्नीषोमौ—अग्निश्च सोमश्च अग्नीषोमौ. द्वन्द्वसमास. **ईदग्नेः सोमवरुणयोः**-(पा. सू. ६-३-१३) एम्बुदरिन्द सोम शब्द परदल्लिरुवुदरिन्द अग्नि शब्दक्के ईत्व. **अग्नेः स्तुत्स्तोम सोमाः** (पा. सू. ८-३-८३) एम्बुदरिन्द सोमशब्दद सकारक्के षत्व. संबोधनाद्विसंज्ञकनान्तरूप. **देवताद्वंद्वे च** (पा. सू. ६-३-२९८) एम्बुदरिन्द उभयपद प्रकृतिस्वरवु प्राप्तवानरे **आमंत्रितस्य च**-(पा. सू. ६-८-१९८) एम्बुदरिन्द आद्युदात्तस्वर बरुत्तदे.

शृणुतम्—श्रु श्रवणे धातु. लोणाद्यमपुरुषद्विवचनदल्लि लब्धद्वावविरुवुदरिन्द तमादेश. **श्रुवः शृ च**-(पा. सू. ३-८-३९) एम्बुदरिन्द धातुविगे शृ आदेश शपिगे श्नु विकरण अपित् सार्वधातुकवादुदरिन्द ङिद्वद्भावविरुवुदरिन्द गुण बरुवुदिल्ल.

वृषणा—सुपां सुलुक्—एम्बुदरिन्द ऊकार विभक्तिगे आकारादेश. **सर्वनामस्थाने चाऽसंबुद्धौ**—एम्बुदरिन्द यद्यपि उपधादीर्घ बरबेकागुत्तदे. आदरे **वाऽषपूर्वस्य निगमे** (पा. सू. ६-४-८) एम्बुदरिन्द विकल्पवेन्दुदरिन्द उपधादीर्घ बरुवुदिल्ल.

हवम्—ह्वेञ् स्पर्धायाम् शब्दे च. धातु. इदक्के **भावेऽनुपसर्गस्य** (पा. सू. ३-३-५९) एम्बुदरिन्द अप् प्रत्यय; तस्यन्निर्योगदिन्द संप्रसारण. **संप्रसारणाच्च**—सूत्रदिन्द पूर्वरूप. हु+अ एन्दिरुवाग **सार्वधातुके**—एम्बुदरिन्द गुण. अवादेश. अप् पित्तादुदरिन्द धातुस्वर उळियुत्तदे.

सूक्ष्मानि—वच परिभाषणे धातु. सुपूर्ववागिरुवाग इदक्के निष्ठा क्त प्रत्यय. कित्त्वादुदरिंद **वचिस्वपियजादीनां किति** (पा. सू. ६-१-१५) एंबुदरिंद संप्रसारण. पूर्वरूप. सूक्त ಎंदु रूपवागुत्तदे. **सूपमानात् क्तः**—एंबुदरिंद उत्तरपदान्तोदात्तस्वर बरुत्तदे.

हर्यतम्—हर्य गतिकान्त्योः धातु. भ्वादि. कान्तियेंदरे इच्छे. लोण्म्. द्वयमुपुरुष द्विवचनरूप. अतिङन्तद परदल्लिरुवुदरिंद निघातस्वर बरुत्तदे.

भवतम्—हिंदिनंतेये लोण्म्द्वयमुपुरुषद्विवचनरूप. तिङन्तद परदल्लिरुवुदरिंद निघातस्वर बरुवुदिल्ल. शप् पित्त्वादुदरिंद अनुदात्त. आदुपदेशद परदल्लिरुवुदरिंद **लसार्वधातुकवु** (तमप्) **तास्यनुदात्तेत्** (पा. सू. ६-१-१७९) एंबुदरिंद अनुदात्त. आग धातुस्वर उळियुत्तदे. ॥ ८ ॥

———— :o: ————

॥ संहितापाठः ॥

अग्नीषोमा यो अद्य वामिदं वचः सपर्यति ।
तस्मै धत्तं सुवीर्यं गवां पोषं स्वश्व्यं ॥ ७ ॥

पदपाठः

अग्नीषोमा । यः । अद्य । वां । इदं । वचः । सपर्यति ।
तस्मै । धत्तं । सु ऽ वीर्यं । गवां । पोषं । सु ऽ अश्व्यं ॥७॥

सायणभाष्यं

यदा पौर्णमास्यामग्नीषोमावुपांशुयाजस्य देवता तदानीमग्नीषोमा यो अद्येति तस्यानुवाक्या । सूक्तिकं चोक्ता देवता इति खण्डे । अग्नीषोमा यो अद्य वामान्यं दिवो मातरिश्वा जभार । अ. ०-६ । इति ॥

ಹೇ ಅಗ್ನಿಷೋಮೌ ಯೋ ಯಜಮಾನೋಽದ್ಯಾಸ್ಮಿನ್ಕರ್ಮಣಿ ವಾಂ ಯುವಾಭ್ಯಾಂ ಯುಷ್ಮದರ್ಥಮಿದಂ ಸ್ತುತಿಲಕ್ಷಣಂ ವಚೋ ವಾಕ್ಯಂ ಸಪರ್ಯತಿ ಪೂಜಿತಂ ಕರೋತಿ ತಸ್ಮೈ ಯಜಮಾನಾಯ ಗವಾಂ ಪಶೂನಾಂ ಪೋಷಮಭಿವೃದ್ಧಿಂ ಧತ್ತ । ಪ್ರಯಚ್ಛತಂ । ಕೀದೃಶಂ ಪೋಷಂ । ಸುವೀರ್ಯಂ ಶೋಭನೇನ ವೀರ್ಯೇಣ ಸಾಮರ್ಥ್ಯೇನೋಪೇತಂ ಸ್ವಶ್ವ್ಯಂ ಶೋಭನೈರಶ್ವೈರ್ಯುಕ್ತಂ ॥ ಗವಾಂ । ಸಾವೇಕಾಚೇ ಇತಿ ಪ್ರಾಪ್ತಸ್ಯ ವಿಭಕ್ತ್ಯುದಾತ್ತತ್ವಸ್ಯ ನ ಗೋಶ್ವನ್ಸಾವವರ್ಣೇತಿ ಪ್ರತಿಷೇಧಃ ॥

ಪ್ರತಿಪದಾರ್ಥ

ಅಗ್ನೀಷೋಮಾ—ಎಲೈ ಅಗ್ನಿ ಮತ್ತು ಸೊಮದೇವತೆಗಳೇ। **ಯಃ**—ಯಾವ ಯಜಮಾನನು । **ಅದ್ಯ**—ಈ ಯಾಗಕರ್ಮದಲ್ಲಿ । **ವಾಂ**— ನಿಮ್ಮನ್ನು ಉದ್ದೇಶಿಸಿ (ನಿಮಗೆ) **ಇದಂ ವಚಃ**—ಈ ಸ್ತೋತ್ರರೂಪವಾದ ವಾಕ್ಯನ್ನು । **ಸಪರ್ಯತಿ**— ಉಪಚಾರ ಪೂರ್ವಕವಾಗಿ ಪೂಜಾರೂಪದಿಂದ ಅರ್ಪಿಸುತ್ತಾನೆಯೋ। **ತಸ್ಮೈ**— ಆ ಯಜಮಾನನಿಗೆ । **ಸುವೀರ್ಯಂ**— ಶ್ರೇಷ್ಠವಾದ ಸಾಮರ್ಥ್ಯದಿಂದ ಕೂಡಿದವೂ ।**ಸ್ವಶ್ವ್ಯಂ**— ಉತ್ತಮವಾದ ಕುದುರೆಗಳಿಂದ ಕೂಡಿದವೂ ಆದ । **ಗವಾಂ**—ಪಶುಗಳ । **ಪೋಷಂ**—ಸಮೃದ್ಧಿಯನ್ನು । **ಧತ್ತಂ**—ಕೊಡಿ ॥

ಭಾವಾರ್ಥ

ಎಲೈ ಅಗ್ನೀಷೋಮದೇವತೆಗಳೇ, ನಿಮ್ಮನ್ನು ಉದ್ದೇಶಿಸಿ ಈ ಯಜ್ಞಕರ್ಮದಲ್ಲಿ ನಿಮಗೆ ಈ ಸ್ತೋತ್ರವನ್ನು ಅರ್ಪಿಸುವ ಯಜಮಾನನಿಗೆ ಶ್ರೇಷ್ಠವಾದ ಸಾಮರ್ಥ್ಯದಿಂದ ಕೂಡಿದವೂ, ಉತ್ತಮವಾದ ಕುದುರೆಗಳಿಂದ ಕೂಡಿದವೂ ಆದ ಪಶುಗಳ ಸಮೃದ್ಧಿಯನ್ನು ಕೊಡಿ.

English Translation

Agni and Soma, grant to him who addresses this prayer to you both, store of cattle with sound strength and good horses

ವಿಶೇಷ ವಿಷಯಗಳು

ಪೌರ್ಣಮಾಸ್ಯೇಷ್ಟಿಯಲ್ಲಿ ಅಗ್ನೀಷೋಮದೇವತೆಗಳನ್ನುದ್ದೇಶಿಸಿ ಉಪಾಂಶು ಯಾಜದ ದೇವತೆಗಳನ್ನು ಆಹ್ವಾನಮಾಡುವುದಕ್ಕಾಗಿ **ಅಗ್ನೀಷೋಮಾ ಯೋ ಅದ್ಯ** ಎಂಬ ಋಕ್ಕನ್ನು ಪುರೋನುವಾಕ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಉಕ್ತಾ ದೇವತಾ** ಎಂಬ ಖಂಡದಲ್ಲಿ **ಅಗ್ನೀಷೋಮಾ ಯೋ ಅದ್ಯ ವಾಮಾನ್ಯಂ ದಿವೋ ಮಾತರಿಶ್ವಾ ಜಭಾರ** ಎಂಬ ಸೂತ್ರದಿಂದ ನಿರ್ದೇಶಿಸಲ್ಪಟ್ಟಿರುವುದು (ಶ. ೧-೬).

ಸಪರ್ಯತಿ – ಇರಜ್ಯತಿ, ವಿಧಮೇ, ಸಪರ್ಯತಿ ಇತ್ಯಾದಿ ಪರಿಚರಣ ಕರ್ಮನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೧೩) ಉಪಚಾರಪೂರ್ವಕವಾದ ಪೂಜೆಯೆಂದರ್ಥವು. **ರೋದಸೀ ಸಪರ್ಯತಃ** (ಋ.ಸಂ. ೧೦-೫೦-೧) ಎಂಬ ಉದಾಹರಣೆಯನ್ನು ಕೊಟ್ಟು ನಿರುಕ್ತಕಾರರು (ನಿ ೧೦-೧೦) **ಪರಿಚರತಃ** ಅಂದರೆ **ಪೂಜಯತಃ** ಎಂದು ವಿವರಿಸುತ್ತಾರೆ ಹಾಗೆಯೇ ಇಲ್ಲಿಯೂ ಸಹ ಉಪಚಾರಪೂರ್ವಕವಾದ ಪೂಜೆಯು, ಅರ್ಪಣೆಯೆಂದು ಅರ್ಥವು

ಸುವೀರ್ಯಂ ಸ್ವಶ್ವ್ಯಂ ಗವಾಂ ಪೋಷಂ—ಅಗ್ನಿ ಮತ್ತು ಸೋಮ ಈ ಎರಡು ದೇವತೆಗಳೂ ಸಹ ಸಕಲ ಧನಕ್ಕೂ ಒಡೆಯರೆಂದು ಅನೇಕ ಕಡೆ ವರ್ಣಿತವಾಗಿದೆ. **ದಧದ್ರತ್ನಾನಿ ದಾಶುಷೇ** (ಋ. ಸಂ. ೧-೧೫೫-೩) ಎಂದು ಅಗ್ನಿಗೆ* ಹೇಳುವಂತೆಯೇ ಸೋಮನಿಗೂ (ಋ. ಸಂ. ೯-೩-೬) ಸಂಬೋಧಿಸಿದೆ. ಅದು ಎಂತಹ ರತ್ನಗಳು ಎಂಬುದನ್ನು ವಿವರಿಸುತ್ತಾ.

ಗೋಜಿನ್ನಃ ಸೋಮೋ ರಥಜಿದ್ಧಿರಣ್ಯಜಿತ್ಸ್ವರ್ಜಿದಬ್ಜಿತ್ಪವತೇ ಸಹಸ್ರಜಿತ್ ।

(ಋ. ಸಂ. ೯-೬೮-೪)

ಎಂಬ ಋಕ್ಕಿನಲ್ಲಿ ವಿವರಿಸುವಂತೆ ಯಜ್ಞಕರ್ತರಿಗೆ ನಾನಾವಿಧವಾದ ಎಂದರೆ ಗೋವುಗಳು, ರಥ, ಚಿನ್ನ, ಮುಂತಾದ ಧನಗಳನ್ನು ಒದಗಿಸಿ ಕೊಡುವವನೆಂದು ಸೋಮನ ಶಕ್ತಿಯನ್ನೂ, ಔದಾರ್ಯವನ್ನು ವರ್ಣಿಸಿರುವುದು.

ವಸುರ್ವಸೂನಾಂ ಕ್ಷಯಸಿ ತ್ವಮೇಕ ಇದ್ಯಾ ವಾ ಚ ಯಾನಿ ಪೃಥಿವೀ ಚ ಪುಷ್ಯತಃ ।

(ಋ. ಸಂ. ೧೦-೯೧-೩)

ಎಂಬ ಋಕ್ಕಿನಲ್ಲಿ ವರ್ಣಿಸುವಂತೆ ಅನೇಕ ಕಡೆಗಳಲ್ಲಿ ಅಗ್ನಿಯೇ ಸಕಲವಿಧವಾದ ಧನಕ್ಕೂ ಒಡೆಯನು ಮತ್ತು ದ್ಯಾವಾಪೃಥಿವಿಗಳೆರಡೂ ಸಹ ಈ ದಾತೃವಿನ ಧನದಿಂದಲೇ ಪುಷ್ಟವಾಗುತ್ತವೆ ಎಂದು ಅಗ್ನಿಯನ್ನು ಸ್ತುತಿಸುತ್ತಾರೆ. ಹೀಗೆ ಸಕಲ ಧನಕ್ಕೂ ಒಡೆಯರಾದ ಅಗ್ನೀಸೋಮ ದೇವತೆಗಳನ್ನು ಉತ್ತಮವಾದುದೂ ಪಶ್ವಾದಿರೂಪವಾದುದೂ ಆದ ಧನಗಳ ದಾನಕ್ಕಾಗಿ ಪ್ರಾರ್ಥಿಸುವುದು ರೂಢಿಯಾಗಿರುವುದು.

ವ್ಯಾಕರಣಪ್ರಕ್ರಿಯಾ

ಅಗ್ನೀಷೋಮಾ—ಇದರ ಪರದಲ್ಲಿರುವ ಔಕಾರ ವಿಭಕ್ತಿಗೆ **ಸುಪಾಂ ಸುಲುಕ್**—ಸೂತ್ರದಿಂದ ಆಕಾರಾದೇಶ. ರೂಪಸಿದ್ಧಿಯು ಹಿಂದಿನ ಮಂತ್ರದಲ್ಲಿ ಉಕ್ತವಾಗಿದೆ.

ವಚಃ—ವಚ ಪರಿಭಾಷಣೇ. ಧಾತು. **ಸರ್ವಧಾತುಭ್ಯ ಅಸುನ್**—ಎಂಬುದರಿಂದ ಅಸುನ್‌ಪ್ರತ್ಯಯ. ನಿತ್ತಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಸಪರ್ಯತಿ—ಸಪರ ಪೂಜಾಯಾಂ ಧಾತು. ಕಂಡ್ವಾದಿಯಲ್ಲಿ ಸೇರಿರುವುದರಿಂದ **ಕಂಡ್ವಾದಿಭ್ಯೋ ಯಕ್** (ಪಾ. ಸೂ. ೩-೧-೨೭) ಎಂಬುದರಿಂದ ಸ್ವಾರ್ಥದಲ್ಲಿ ಯಕ್. **ಸನಾದ್ಯಂತಾಧಾತವಃ**—ಎಂಬುದರಿಂದ ಧಾತು ಸಂಜ್ಞಾ. ಲಟ್ ಪ್ರಥಮಪುರುಷ ಏಕವಚನರೂಪ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಯಕ್‌ಸ್ವರ ಉಳಿಯುತ್ತದೆ.

ಧತ್ತಮ್—ಡುಧಾಞ್ ಧಾರಣಪೋಷಣಯೋಃ ಧಾತು. ಜುಹೋತ್ಯಾದಿ. ಲೋಣ್ಮಧ್ಯಮಪುರುಷ ದ್ವಿವಚನದಲ್ಲಿ ತಮಾದೇಶ. ಶ್ಲುವಿಕರಣ. ಧಾತುವಿಗೆ ದ್ವಿತ್ವ. **ಶ್ನಾಭ್ಯಸ್ತಯೋರಾತಃ**—ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. **ಖರಿ ಚ**—ಎಂಬುದರಿಂದ ಧಕಾರಕ್ಕೆ ತಕಾರಾದೇಶ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಗವಾಮ್—ಗೋ ಶಬ್ದದ ಷಷ್ಠೀ ಬಹುವಚನಾಂತರೂಪ. **ಸಾಪೇಕಾಚಸ್ತೃತೀಯಾದಿಃ** (ಪಾ. ಸೂ. ೬-೧-೧೬೮) ಎಂಬುದರಿಂದ ಪ್ರಾಪ್ತವಾಗುವ ವಿಭಕ್ತ್ಯುದಾತ್ತಕ್ಕೆ **ನ ಗೋಶ್ವನ್ ಸಾವನರ್ಣ**-(ಪಾ.ಸೂ.೬-೧-೧೭೨) ಎಂಬುದರಿಂದ ನಿಷೇಧ ಬರುವುದರಿಂದ ಪ್ರಕೃತಿಸ್ವರ ಉಳಿಯುತ್ತದೆ. ॥ ೨ ॥

ಸಂಹಿತಾಪಾಠಃ

ಅಗ್ನೀಷೋಮಾ ಯ ಆಹುತಿಂ ಯೋ ವಾಂ ದಾಶಾದ್ಧವಿಷ್ಕೃ-
ತಿಂ।
ಸ ಪ್ರಜಯಾ ಸುವೀರ್ಯಂ ವಿಶ್ವಮಾಯುರ್ವ್ಯಶ್ನವತ್ ॥ ೩ ॥

॥ ಪದಪಾಠಃ ॥

ಅಗ್ನೀಷೋಮಾ । ಯಃ । ಆಽಹುತಿಂ । ಯಃ । ವಾಂ । ದಾಶಾತ್ । ಹವಿಃಽಕೃ-
ತಿಂ ।
ಸಃ । ಪ್ರಽಜಯಾ । ಸುಽವೀರ್ಯಂ । ವಿಶ್ವಂ । ಆಯುಃ । ವಿ । ಅಶ್ನವತ್ ॥ ೩ ॥

ಸಾಯಣಭಾಷ್ಯಂ

ಹೇ ಅಗ್ನೀಷೋಮೌ ಯೋ ಯಜಮಾನ ಆಹುತಿಮಾಜ್ಯಾಹುತಿಂ ವಾಂ ಯುವಾಭ್ಯಾಂ ದಾಶಾತ್ ದದ್ಯಾತ್ । ಅಥವಾ ಹವಿಷ್ಕೃತಿಂ ಹವಿಷಾ ಚರುಪುರೋಡಾಶಾದಿನಾ ಕೃತಾಮಾಹುತಿಂ ಯೋ ಯಜಮಾನೋ ದದ್ಯಾತ್ । ಸ ಯಜಮಾನಃ ಪ್ರಜಯಾ ಪುತ್ರಪೌತ್ರಾದಿನಾ ಯುಕ್ತಂ ಸುವೀರ್ಯಂ ಶೋಭನವೀರ್ಯಯುಕ್ತಂ ವಿಶ್ವಂ ಸರ್ವಮಾಯುರ್ಜೀವನಂ ವ್ಯಶ್ನವತ್ । ವ್ಯಾಪ್ನೋತು ॥ ಆಹುತಿಂ । ಜುಹೋತೇಃ ಕ್ತಿನಿ ತಾದೌ ಚೇತಿ ಗತೇಃ ಪ್ರಕೃತಿಸ್ವರತ್ವಂ । ದಾಶಾತ್ । ದಾಶೃ ದಾನೇ । ಲೇಟ್ಯಾಡಾಗಮಃ । ಯದ್ವೃತ್ತೇಯೋಗಾವದನಿಘಾತಃ । ಹವಿಷ್ಕೃತಿಂ । ಹವಿಷಃ ಕೃತಿಃ ಕರಣಂ ಯಸ್ಯಾಮಾಹುತೌ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ನಿತ್ಯಂ ಸಮಾಸೇಽನುತ್ತರಪದಸ್ಥಸ್ಯೇತಿ ವಿಸರ್ಜನೀಯಸ್ಯ ಸತ್ವಂ । ಅಶ್ನವತ್ । ಅಶ್ನೋತೇರ್ವ್ಯತ್ಯಯೇನ ಪರಸ್ಮೈಪದಂ । ಲೇಟ್ಯಡಾಗಮಃ ॥

॥ ಪ್ರತಿಪದಾರ್ಥ ॥

ಅಗ್ನೀಷೋಮಾ— ಎಲೈ ಅಗ್ನಿ ಮತ್ತು ಸೋಮದೇವತೆಗಳೇ । **ಯಃ**—ಯಾವ ಯಜಮಾನನು । **ಆಹುತೀಃ**—ಆಜ್ಯಾಹುತಿಯನ್ನೂ (ಮತ್ತು) । **ಯಃ**—ಯಾವ ಯಜಮಾನನು । **ಹವಿಷ್ಕೃತಿಂ**—ಚರುಪುರೋಡಾಶಾದಿಗಳ ಆಹುತಿಯನ್ನು । **ದದಾತ್**— ಅರ್ಪಿಸುವನೋ । **ಸಃ**— ಆ ಯಜಮಾನನು । **ಪ್ರಜಯಾ**— ಪುತ್ರಪೌತ್ರಾದಿಗಳಿಂದ ಕೂಡಿದ । **ಸುವೀರ್ಯಂ**— ಉತ್ತಮವಾದ ಶಕ್ತಿಯನ್ನು । **ವಿಶ್ವಂ ಆಯುಃ**— (ಅವನ) ಪೂರ್ಣಾಯುಸ್ಸನ್ನು (ಅಥವಾ ಸಕಲವಾದ ಅನ್ನವನ್ನು) । **ವ್ಯಶ್ನವತ್**—ಹೊಂದಲಿ ॥

॥ ಭಾವಾರ್ಥ ॥

ಎಲೈ ಅಗ್ನೀಷೋಮದೇವತೆಗಳೇ, ಯಾವ ಯಜಮಾನನು ನಿಮಗೆ ಆಜ್ಯಾಹುತಿಯನ್ನು ಮತ್ತು ಚರುಪುರೋಡಾಶಾದಿಗಳ ಆಹುತಿಯನ್ನು ಅರ್ಪಿಸುವನೋ ಆ ಯಜಮಾನನು ಪುತ್ರಪೌತ್ರಾದಿಗಳಿಂದ ಕೂಡಿದ ಉತ್ತಮವಾದ ಶಕ್ತಿಯನ್ನೂ, ಪೂರ್ಣಾಯುಸ್ಸನ್ನೂ ಹೊಂದಲಿ.

English Translation

Agni and Soma, may he who offers you the oblation of clarified butter, enjoy sound strength with progeny, through all his life.

॥ ವಿಶೇಷವಿಷಯಗಳು ॥

ಹವಿಷ್ಕೃತಿಂ—ಚರುಪುರೋಡಾಶಾದಿಗಳ ರೂಪವಾದ ಆಹುತಿಯನ್ನು.

ವಿಶ್ವಂ ಆಯುಃ— **ಅಂಧಃ ವಾಜಃ** ಇತ್ಯಾದಿ **ಅನ್ನ** ನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೯) ಇಲ್ಲಿ ಸಮಸ್ತವಾದ ಅನ್ನವನ್ನು ಎಂದಾಗಲೀ ಅಥವಾ **ಪ್ರ ಣ ಆಯೂಂಷಿ ತಾರಿಷತ್**, (ಋ. ಸಂ. ೧೦-೧೪೬-೧) ಇತ್ಯಾದಿ ಸ್ಥಳಗಳಲ್ಲಿ ಹೇಳಿರುವಂತೆ ಆಯಸ್ಸು ಎಂಬ ಅರ್ಥವನ್ನು ಮಾಡಿದರೆ ನಮ್ಮ ಜೀವಿತಕಾಲದಲ್ಲಿ ಸಂಪೂರ್ಣವಾಗಿ ಅಥವಾ ನಮ್ಮ ಸಂಪೂರ್ಣವಾದ ಜೀವಿತಕಾಲದಲ್ಲೆಲ್ಲಾ ಎಂದಾಗಲೀ ಆಗುತ್ತದೆ. ಅಥವಾ ಪೂರ್ಣವಾದ ಆಯಸ್ಸನ್ನು ನಾವು ಹೊಂದೋಣ ಎಂಬ ಅರ್ಥವನ್ನೂ ಹೇಳಬಹುದು.

ಪ್ರಜಯಾ ಸುವೀರ್ಯಂ ವಿಶ್ವಮಾಯುಃ—ಸೋಮನೂ ಮತ್ತು ಅಗ್ನಿಯೂ ಸಹ ಆಯುರ್ವರ್ಧಕರೆಂದೂ ಸತ್ಪ್ರಜೆಗಳನ್ನು ಅನುಗ್ರಹಿಸುವವರೆಂದೂ ಅನೇಕ ಕಡೆಗಳಲ್ಲಿ ಅವರ ಔದಾರ್ಯವು ವರ್ಣಿತವಾಗಿದೆ. ಉದಾಹರಣೆಗೆ—

ವಯೋವಂತಂ ಪುಷ್ಯತಿ ಪ್ಲವಮಗ್ನೇ ಶತಾಯುಷಂ ।

(ಋ. ಸಂ. ೬-೨-೫)

ಅತೋರ್ತಂ ಶ್ರಾವಯತ್ಪತಿಂ ಪುತ್ರಂ ದದಾತಿ ದಾಶುಷೇ ।

(ಋ. ಸಂ. ೫-೬೫-೫)

ತ್ವಂ ಚ ಸೋಮ ನೋ ವಶೋ ಜೀವಾತುಂ ನ ಮರಾಮಹೇ ।

(ಋ. ಸಂ. ೧-೯೧-೬)

ಇತ್ಯಾದಿ ಸ್ಥಳಗಳಲ್ಲೆಲ್ಲಾ ಅಗ್ನಿಯೂ ಸೋಮನೂ ಸಹ ಪುತ್ರಪೌತ್ರಾದಿ ರೂಪವಾದ ಕವಲುಗಳಿಂದ ಕೂಡಿದ ಸಂತಾನ ಸಂಪತ್ತನ್ನೂ, ದೀರ್ಘವಾದ ಆಯುಸ್ಸನ್ನೂ, ಮರಣರಾಹಿತ್ಯವನ್ನೂ ಹವಿರ್ದಾತೃವಾದ ಯಜಮಾನನಿಗೆ ಅನುಗ್ರಹಿಸುತ್ತಾರೆ ಎಂಬ ಭರವಸೆಯನ್ನು ತೋರಿಸಿ ಇಲ್ಲಿ ಅಂತಪ ಹವಿರ್ದಾತನಿಗೆ ಈ ಎಲ್ಲಾ ಸಂಪತ್ತನ್ನೂ ಒದಗಿಸ ಬೇಕೆಂದು ಬೇಡುತ್ತಾರೆ.

(೨) **ಅಶ್ನವತ್**—ವಿಧವಿಧವಾಗಿ ಹೊಂದಲಿ ಎಂದರ್ಥವು.

ಈ ಋಕ್ಕಿನಲ್ಲಿ ಪಠಿತವಾಗಿರುವಂತೆಯೇ **ವಿಶ್ವಮಾಯುರ್ವ್ಯಶ್ನುತೇ** ಎಂಬ ಅನುಪೂರ್ವಿಯು ಋಗ್ವೇದದಲ್ಲಿ ಇನ್ನು ಕೆಲವುಕಡೆ ಇರುತ್ತದೆ. ಉದಾಹರಣೆಗೆ—

ಪುತ್ರಿಣಾ ತಾ ಕುಮಾರಿಣಾ ವಿಶ್ವಮಾಯುರ್ವ್ಯಶ್ನುತೇ ।
(ಋ. ಸಂ. ೮-೩೧-೫)

ಇಹೈವ ಸ್ತಂ ಮಾ ವಿ ಯೌಷ್ಟಂ ವಿಶ್ವಮಾಯುರ್ವ್ಯಶ್ನುತಂ ।
ಕ್ರೀಳಂತೌ ಪುತ್ರೈರ್ನಪ್ತೃಭಿರ್ಮೋದಮಾನೌ ಸ್ವೇ ಗೃಹೇ ॥
(ಋ. ಸಂ. ೧೦-೮೫-೪೨)

ಇತ್ಯಾದಿ ಋಕ್ಕುಗಳಲ್ಲಿ ಹೇಳಿರುವಂತೆ ಹವಿರ್ದಾತನಿಗೆ ಸಕಲ ಪುತ್ರಪೌತ್ರಾದಿಲಾಭವೂ ಅದರಿಂದಂಟಾದ ಆನಂದವೂ ದೀರ್ಘವಾದ ಆಯುಸ್ಸೂ ಲಭಿಸುತ್ತದೆ ಎಂದು ಅನೇಕಕಡೆಗಳಲ್ಲಿ ವರ್ಣಿತವಾಗಿದೆ..

॥ ವ್ಯಾಕರಣಪ್ರಕ್ರಿಯಾ ।

ಆಹುತಿಮ್—ಹು ದಾನಾದನಯೋಃ ಧಾತು. ಆಙ್ ಉಪಸರ್ಗ. ಇದಕ್ಕೆ ಭಾವಾರ್ಥದಲ್ಲಿ **ಸ್ತ್ರಿಯಾಂ ಕ್ತಿನ್**—ಎಂಬುದರಿಂದ ಕ್ತಿನ್ ಪ್ರತ್ಯಯ. ಹುತಿ ಎಂದು ರೂಪವಾಗುತ್ತದೆ. **ತಾದೌಚ ನಿತಿ** (ಪಾ. ಸೂ ೬-೩ ೫೦) ಎಂಬುದರಿಂದ ಗತಿಗೆ (ಆಙ್) ಪ್ರಕೃತಿಸ್ವರ ಬರುತ್ತದೆ.

ದಾಶಾತ್—ದಾಶೃ ದಾನೇ ಧಾತು. ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್ ಪ್ರತ್ಯಯ. **ಇತಶ್ಚ-ಲೋಪಃ ಪರಸ್ಮೈಪದೇಷು** ಎಂಬುದರಿಂದ ಇಕಾರಕ್ಕೆ ಲೋಪ **ಲೇಟೋಽಡಾಟೌ** (ಪಾ. ಸೂ. ೩-೪-೯೪) ಎಂಬುವರಿಂದ ಅದಕ್ಕೆ ಆಡಾಗಮ. ಯಃ ಎಂದು ಹಿಂದೆ ಯಚ್ಛಬ್ದ ಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ

ಹವಿಷ್ಕೃತಿಮ್—ಹವಿಷಃ ಕೃತಿಃ ಕರಣಂ ಯಸ್ಯಾಂ ಆಹುತೌ ಹವಿಷ್ಕೃತಿಃ. **ನಿತ್ಯಂ ಸಮಾಸೇ ಽನುತ್ತರಪದಸ್ಥಸ್ಯ** (ಪಾ. ಸೂ. ೮-೩-೪೫) ಎಂಬುದರಿಂದ ಹವಿಃ ಎಂಬಲ್ಲಿರುವ ವಿಸರ್ಗಕ್ಕೆ ಸಮಾಸದಲ್ಲಿ ನಿತ್ಯವಾಗಿ ಷತ್ವ. **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್**—ಎಂಬುದರಿಂದ ಸಮಾಸದಲ್ಲಿ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ಸುವೀರ್ಯಮ್—ಶೋಭನಂ ವೀರ್ಯಂ ಯಸ್ಯ. ಬಹುವ್ರೀಹಿ ಸಮಾಸದಲ್ಲಿ **ವೀರವೀರ್ಯೌಚ**—(ಪಾ ಸೂ. ೬-೨-೧೨೦) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

ಅಶ್ನವತ್—ಅಶೂ ವ್ಯಾಪ್ತೌ ಧಾತು. **ವ್ಯತ್ಯಯೋ ಬಹುಲಮ್**—ಎಂಬುದರಿಂದ ಪರಸ್ಮೈಪದಿ ಯಾಗುತ್ತದೆ. ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪಿನ ಇಕಾರಕ್ಕೆ ಲೋಪ. **ಲೇಟೋಽಡಾಟೌ**—ಎಂಬುದರಿಂದ ಅಡಾಗಮ. **ಸ್ವಾದಿಭ್ಯಃ ಶ್ನುಃ**—ಎಂಬುದರಿಂದ ಶ್ನು ವಿಕರಣ. ಪ್ರತ್ಯಯನಿಮಿತ್ತವಾಗಿ ಅದಕ್ಕೆ ಗುಣ. ಅವಾದೇಶ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೩ ॥

॥ ಸಂಹಿತಾಪಾಠಃ ॥

ಅಗ್ನೀಷೋಮಾ ಚೇತಿ ತದ್ವೀರ್ಯಂ ವಾಂ ಯದಮುಷ್ಣೀತಮವಸಂ ಪಣೇಂ ಗಾಃ ।
ಅವಾತಿರತ್ತಂ ಬೃಸಯಸ್ಯ ಶೇಷೋಽವಿಂದತ್ತಂ ಜ್ಯೋತಿರೇಕಂ ಬಹುಭ್ಯಃ ॥ ೪ ॥

॥ ಪದಪಾಠಃ ॥

ಅಗ್ನೀಷೋಮಾ । ಚೇತಿ । ತತ್ । ವೀರ್ಯಂ । ವಾಂ । ಯತ್ । ಅಮುಷ್ಣೀತಂ । ಅವಸಂ । ಪಣೇಂ । ಗಾಃ ।
ಅವ । ಅತಿರತ್ತಂ । ಬೃಸಯಸ್ಯ । ಶೇಷಃ । ಅವಿಂದತಂ । ಜ್ಯೋತಿಃ । ಏಕಂ । ಬಹುಽಭ್ಯಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನಿಷೋಮೌ ವಾಂ ಯುವಯೋಸ್ತದ್ವೀರ್ಯಮಾಣಂ ವೀರ್ಯಂ ಸಾಮರ್ಥ್ಯಂ ಚೇತಿ । ಅಸ್ಮಾಭಿರ್ಜ್ಞಾತಮಭೂತ್ । ಯದ್ಯೇನ ವೀರ್ಯೇಣ ಗಾ ಅವಸಂ ಗೋರೂಪಮನ್ನಂ ಪಣೇಂ ಪಣೇಃ ।

ವಿಭಕ್ತಿವ್ಯತ್ಯಯಃ । ಏತನ್ನಾಮ್ನೋಽಸುರಾದಮುಷ್ಣೀತಂ ಅಪಾಹಾರ್ಷ್ಟಂ । ತಥಾ ಬೃಸಯಸ್ಯ । ವೃಸಿರ್ವೇಷ್ಟನಾರ್ಥಃ । ವೃಸಯತಿ ಸರ್ವಂ ವೇಷ್ಟಯತೀತಿ ಬೃಸಯೋಽಸುರಸ್ತ್ವಷ್ಟಾ । ತಸ್ಯಾಸುರಸ್ಯ ಶೇಷೋಽಪತ್ಯಂ । ಶೇಷ ಇತ್ಯಪತ್ಯನಾಮ । ಶಿಷ್ಯತೇ ಪ್ರಯತ ಇತಿ ಯಾಸ್ಕಃ । ನಿ. ೩-೨ । ತ್ವಷ್ಟೃ-ಸಕಾಶಾದುತ್ಪನ್ನಂ ವೃತ್ರಮವಾತಿರತಂ । ಅವಧಿಷ್ಟಂ । ಅವತಿರತಿರ್ವಧಕರ್ಮಾ । ಪ್ರಾಣಾಪಾನರೂಪ-ಯೋರ್ಯುವಯೋರ್ವೃತ್ರೇಽನವಸ್ಥಾನಾತ್ಸ ಮರಣಂ ಪ್ರಾಪ್ತಃ । ತಥಾ ಚಾಮ್ನಾಯತೇ । ತಸ್ಮಾ-ಜ್ಜಂಜಭ್ಯಮಾನಾದಗ್ನೀಷೋಮೌ ನಿರಕ್ರಾಮತಾಂ ಪ್ರಾಣಾಪಾನೌ ವಾ ಏನಂ ತದಜಹತಾಂ । ತೈ. ಸಂ. ೨-೫-೨-೪। ಇತಿ । ತತೋ ವೃತ್ರವಧಾನಂತರಂ ಜ್ಯೋತಿರ್ದ್ಯೌರ್ಯತೇವಮಾನಂ ಸೂರ್ಯಮೇಕಂ ನಭಸಿ ಗಚ್ಛಂತಂ ಬಹುಭ್ಯೋ ಜನೇಭ್ಯೋ ಬಹೂನಾಮರ್ಥಾಯೋಪಿಂದತಂ । ಅಲಪ್ಸಾಥಾಂ । ಏತತ್ಸರ್ವಂ ಯೇನ ವೀರ್ಯೇಣ ಕ್ರಿಯತೇ ತದಸ್ಮಾಭಿರ್ಜ್ಞಾತಮಿತ್ಯರ್ಥಃ ॥ ಚಿತೇ । ಚತೇ ಸಂಜ್ಞಾನೇ । ಲುಙಿ ಚಿಣ್ ಭಾವಕರ್ಮಣೋಃ । ಪಾ. ೩-೧-೬೬ । ಇತಿ ಚ್ಲೇಶ್ಚಿಣಾದೇಶಃ । ಚಿಣೋ ಲುಗಿತಿ ತಶಬ್ದಸ್ಯ ಲುಕ್ । ಅಮುಷ್ಣೀತಂ । ಮುಷ ಸ್ತೇಯೇ । ಕ್ರೈಯಾದಿಕಃ । ಅವಸಂ । ಅವತೇರೌಣಾದಿಕೋಽಸಚ್ । ಶೇಷಃ । ಸುಪಾಂ ಸುಲುಗಿತಿ ದ್ವಿತೀಯೌಯಾಃ ಸುಃ । ಏಕಂ । ಇಣ್ ಗತೌ । ಇಣ್ಭ್ಯೋಕಾಸಾಶಲ್ಯತಿ-ಮರ್ಚಿಭ್ಯಃ ಕನ್ । ಉ. ೩-೪೩ । ಇತಿ ಕನ್ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತತ್ವಂ ॥

ಪ್ರತಿಪದಾರ್ಥ

ಅಗ್ನೀಷೋಮಾ—ಎಲೈ ಅಗ್ನಿ ಮತ್ತು ಸೋಮದೇವತೆಗಳೇ। **ವಾಂ**—ನಿಮ್ಮ। **ಯೆತ್**—ಯಾವ ವೀರ್ಯದಿಂದ । **ಗಾಃ ಆವಸಂ**—ಗೋರೂಪವಾದ ಅನ್ನವನ್ನು । **ಪಣಿಂ**—ಪಣಿಯೆಂಬ ರಾಕ್ಷಸನಿಂದ । **ಅಮುಷ್ಣೀತಂ**—ಅಪಹರಿಸಿಕೊಂಡುಬಂದಿರೋ , (ಮತ್ತು)। **ಬೃಸಯಸ್ಯ**—ಬೃಸಯನೆಂಬ ರಾಕ್ಷಸನ (ತ್ವಷ್ಟೃವಿನ)। **ಶೇಷಃ**— ಮಗನಾದ;ವೃತ್ರನನ್ನು। **ಅವಾತಿರತಂ**—ಕೊಂದಿರೊ ; (ಅಲ್ಲದೇ) । **ಜ್ಯೋತಿಃ ಏಕಂ**—ಪ್ರಕಾಶಮಾನನಾದ ಸೂರ್ಯನೊಬ್ಬನನ್ನು । **ಬಹುಭ್ಯಃ**— ಬಹುಜನಗಳ ಉಪಕಾರಕ್ಕಾಗಿ । **ಅವಿಂದತಂ**— ಹೊಂದಿದಿರೋ । **ತತ್ ವೀರ್ಯಂ**—ಆ ಸಾಮರ್ಥ್ಯವು । **ಚೇತಿ**— (ನಮ್ಮಿಂದ) ತಿಳಿಯಲ್ಪಟ್ಟಿತು.

ಭಾವಾರ್ಥ

ಎಲೈ ಅಗ್ನಿ ಮತ್ತು ಸೋಮದೇವತೆಗಳೇ, ಯಾವ ನಿಮ್ಮ ವೀರ್ಯದಿಂದ ಗೋರೂಪವಾದ ಅನ್ನವನ್ನು ಪಣಿಯೆಂಬ ರಾಕ್ಷಸನಿಂದ ಅಪಹರಿಸಿಕೊಂಡು ಬಂದಿರೋ, ಮತ್ತು ಬೃಸಯನೆಂಬ ರಾಕ್ಷಸನ ಮಗನಾದ ವೃತ್ರಾಸುರನನ್ನು ಕೊಂದಿರೋ, ಅಲ್ಲದೇ ಪ್ರಕಾಶಮಾನನಾದ ಸೂರ್ಯನನ್ನು ಸಕಲ ಮಾನವರ ಉಪಕಾರಕ್ಕಾಗಿ ಅಂತರಿಕ್ಷದಲ್ಲಿ ಸಂಚರಿಸುವಂತೆ ಮಾಡಿದಿರೋ, ಆ ನಿಮ್ಮ ಸಾಮರ್ಥ್ಯವನ್ನು ನಾವೆಲ್ಲಾ ಜೆನ್ನಾಗಿ ಅರಿತಿದ್ದೇವೆ.

English Translation

Agni and Soma. that prowess of yours by which you have carried of the cows that were the food of Pani, is well known to us ; you have slain the offspring of Brisaya, and you have acquired the one luminary (the Sun) for the benefit of the many.

॥ ವಿಶೇಷವಿಷಯಗಳು ॥

ಅವಸಂ— ಗತ್ಯರ್ಥಕವಾದ **ಅವ** ಧಾತುವಿನಿಂದ **ಅವಸಂ** ಎಂದಾಗಿದೆಯೆಂದು ನಿರುಕ್ತಕಾರರು (೧೧೭) **ತೋರಿಸಿ ಋ. ಸಂ ೧೦-೧೬೮-೧ನೇ ಋಕ್ಕಿನ ಕೊನೆಯ ಪಾದವಾದ ಅವಸಾಯ ಪದ್ವತೇ ರುದ್ರ ಮೃಳ ।** ಎಂಬ ಉದಾಹರಣೆಯನ್ನು ಕೊಟ್ಟು **ಪದ್ವದವಸಂ ಗಾವಃ** ಎಂದರೆ ಗೋವುಗಳ ಸಂಚಾರಕಾಲದ ಅನ್ನವು ಎಂದು ವಿವರಿಸುತ್ತಾರೆ. ಅದರಂತೆ ಇಲ್ಲಿಯೂ ಸಹ ಗೋರೂಪವಾದ ಅನ್ನವೆಂದರ್ಥ.

ಪಣಿಂ— ಪಣಿಯೆಂಬ ರಾಕ್ಷಸನ ಅಥವಾ ರಾಕ್ಷಸ ಗುಂಪಿನ ದುಷ್ಟಸ್ವಭಾವವನ್ನು ಅವರಿಂದ ಯಜ್ಞಾನುಷ್ಠಾನಪರರಾದ ವೈದಿಕರಿಗೆ ಯಾವ ವಿಧವಾದ ಕೆಡಕಾಗುತ್ತಿತ್ತೆಂಬುದನ್ನು, ಮುಖ್ಯವಾಗಿ ಇಂದ್ರನೇ **ಈ** ರಾಕ್ಷಸರ ಹಾವಳಿಯನ್ನು ತಪ್ಪಿಸಲು ಸಹಾಯಕನಾಗಿ ಅಪಹೃತವಾದ ಗೋವುಗಳನ್ನು ಹಿಂದಕ್ಕೆ ತಂದುಕೊಟ್ಟು ಯಜ್ಞಕರ್ತರಿಗೆ ಸಹಾಯಮಾಡುತ್ತಿದ್ದ ವಿಷಯವನ್ನೂ ಹಿಂದಿನ ಸಂಪುಟದಲ್ಲಿ ವಿಶದವಾಗಿ ವಿವರಿಸಿದೆ. ಅಗ್ನಿಯೂ ಸಹ ಈ ಸಂದರ್ಭಗಳಲ್ಲಿ ಸಹಾಯಮಾಡುತ್ತಿದ್ದನೆಂಬ ವಿಷಯವನ್ನು

ನ್ಯಕ್ರತೂನ್ ಗ್ರಥಿನೋ ಮೃಧ್ರವಾಚಃ ಪಣೇರಶ್ರದ್ಧಾಂ ಅವೃಧಂ ಅಯಜ್ಞಾನ್ ।
ಪಪ್ರ ತಾನ್ ದಸ್ಯೂರಗ್ನಿರ್ವಿವಾಯ ಪೂರ್ವಶ್ಚಕಾರಾಪರಂ ಅಯಜ್ಯೂನ್ ॥
(ಋ. ಸಂ. ೭.೬-೩)

ತ್ವಂ ದಸ್ಯೂಂ ಕೋಕಸೋ ಅಗ್ನ ಆಜ ಉರು ಜ್ಯೋತಿರ್ಜನಯನ್ನಾರ್ಯಾಯ ।
(ಋ. ಸಂ. ೭-೫-೬)

ಇತ್ಯಾದಿ ಋಕ್ಕುಗಳಲ್ಲಿ ವಿವರಿಸಿರುವಂತೆ ಅಗ್ನಿಯೂ ಸಹ ಪಣಿಯೆಂಬ ಅಸುರರ ಹಿಂಸೆಯಿಂದ ಆರ್ಯರನ್ನು ಬಿಡಿಸಿ ಅವರಿಗೆ ಜ್ಯೋತಿಯನ್ನು ಒದಗಿಸಿದನು ಎಂದು ತಿಳಿಯಬರುತ್ತದೆ.

ಬೃಸಯಸ್ಯ— **ಬೃಸಿಃ ವೇಷ್ಟನಾರ್ಥಃ ಬೃಸಯತಿ ಸರ್ವಂ ವೇಷ್ಟಯತೀತಿ ಬೃಸಯಃ ಅಸುರಃ ತ್ವಷ್ಟಾ ।** ಸರ್ವವನ್ನು ಆವರಿಸು, ಸುತ್ತುವರಿದು ಮುಚ್ಚು ಎನ್ನುವ ಅರ್ಥವನ್ನು ಕೊಡುವ **ಬೃಸಿ** ಎಂಬ ಪದದಿಂದ ಬೃಸಯ ಎಂದಾಗಿದೆಯೆಂದೂ ಮತ್ತು ಆವರಿಸಿ ಮುಚ್ಚುವ ರಾಕ್ಷಸನ ಹೆಸರೆಂದೂ ಇದು ತ್ವಷ್ಟಾ ಎಂಬ ಅಸುರನ ನಾಮಧೇಯವೆಂದೂ ಸಾಯಣರು ವಿವರಿಸುತ್ತಾರೆ.

ಬೃಸಯಸ್ಯ ಶೇಷಃ— ತುತ್ ತೋಕಂ, ತನಯಃ ಇತ್ಯಾದಿ ಅಪತ್ಯ (ಸಂತಾನ) ನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೨) ಶೇಷಃ ಎಂದರೆ ಮಗನೆಂದರ್ಥವು. **ಶೇಷ ಇತ್ಯಪತ್ಯನಾಮ ಶಿಷ್ಯತೇ ಪ್ರಯತಃ ।** (ನಿ. ೩-೩) ವೃತ್ರನು ಬೃಸಯನ ಮಗನೆಂದು ಪ್ರಸಿದ್ಧವಾಗಿದೆ.

ಅವಾತಿರತಂ— ದಭ್ನೋತಿ, ಶ್ನಥತಿ ಇತ್ಯಾದಿ ವಧಕರ್ಮದ ನಾಮಗಳಲ್ಲಿ (ನಿ. ೩-೧೦) ಪಠಿತವಾಗಿರುವುದರಿಂದ ವಧಮಾಡಿದರು ಎಂದರ್ಥವು. ಅಗ್ನಿ ಮತ್ತು ಸೋಮ **ಈ** ಎರಡು ದೇವತೆಗಳೂ ಸಹ ಪ್ರಾಣಾಪಾನ ರೂಪವಾದ ಮುಖ್ಯಸತ್ತ್ವಗಳ ಅಭಾವವನ್ನುಂಟುಮಾಡಿ ವೃತ್ರನನ್ನು ಕೊಂದರು ಎಂದು ತೈತ್ತಿರೀಯ ಸಂಹಿತೆಯ.

ತಸ್ಮಾಜ್ಜಂಜಭ್ಯಮಾನಾದಗ್ನೀಷೋಮೌ ನಿರಕ್ರಾಮತಾಂ ಪ್ರಾಣಾಪಾನೌ ವಾ ಏನಂ ತದಜಹಿತಾಂ ।

(ತೈ. ಸಂ. ೨-೫-೨೪)

ಎಂಬ ಭಾಗದಲ್ಲಿ ವಿವರಿಸಿದೆ- ಅದೂ ಅಲ್ಲದೇ ಋಕ್ಸಂಹಿತೆಯಲ್ಲಿಯೂ ಸಹ ನಾನಾ ಕಡೆಗಳಲ್ಲಿ ಅಗ್ನಿ ಮತ್ತು ಸೋಮ ದೇವತೆಗಳು ವೃತ್ರಸಂಹಾರಮಾಡಿ ಲೋಕಕ್ಕೆ ಜ್ಯೋತಿಯನ್ನು ಬೀರಿದರು ಎಂದು ವಿವರಿಸಿದೆ. ಉದಾಹರಣೆಗೆ—

ಪ್ರ ನೂ ಮಹಿತ್ವಂ ವೃಷಭಸ್ಯ ವೋಚಂ ಯಂ ಪೂರವೋ ವೃತ್ರಹಣಂ ಸಚಂತೇ ।

(ಋ ಸಂ- ೧-೫೯-೬)

ತಮು ತ್ವಾ ವೃತ್ರಹಂತಮಂ ಯೋ ದಸ್ಯೋರವಧೂನುಷೇ ।

(ಋ. ಸಂ. ೧-೭೮-೪)

ಇತ್ಯಾದಿ ಋಕ್ಕುಗಳಲ್ಲಿ ಅಗ್ನಿಯು ವೃತ್ರನನ್ನು ಸಂಹರಿಸಿ ತಮಸ್ಸನ್ನು ನಿವಾರಿಸಿದನೆಂದೂ, ಅಲ್ಲದೇ,

ಪವಸ್ವ ವೃತ್ರಹಂತಮೋಕ್ಥೇಭಿರನುಮಾದ್ಯಃ ।

(ಋ. ಸಂ. ೯-೨೪-೬)

ಸಂ ದೇವೈಃ ಶೋಭತೇ ವೃಷಾ ಕವಿರ್ಯೋನಾವಧಿ ಪ್ರಿಯೇ ।
ವೃತ್ರಹಾ ದೇವವೀತಮಃ ।

(ಋ. ಸಂ.-೯-೨೫-೩)

ಇತ್ಯಾದಿ ಋಕ್ಕುಗಳಲ್ಲಿ ಸೋಮನು ವೃತ್ರಹನೆಂದೂ ಸಂಬೋಧಿಸಿದೆ. ಈ ರೀತಿ ಕಗ್ಗತ್ತಲೆಯನ್ನುಂಟುಮಾಡತಕ್ಕ ವೃತ್ರಾಸುರನನ್ನು ಸಂಹರಿಸಿ ಲೋಕಕ್ಕೆ ಬೆಳಕನ್ನು ತಂದರು ಎಂದೂ ಸಹ ಅನೇಕ ಕಡೆ ವರ್ಣಿತವಾಗಿದೆ-

ಜ್ಯೋತಿಃ ಏಕಂ ಬಹುಭ್ಯಃ ಅವಿಂದತಂ—ಲೋಕದ ಎಲ್ಲಾ ಪ್ರಾಣಿಗಳಿಗೂ ಸಹ ಸೂರ್ಯರೂಪವಾಮದೂ ನಕ್ಷತ್ರರೂಪವಾಮದೂ ಆದ ಜ್ಯೋತಿಯನ್ನು ಒದಗಿಸಿದಿರಿ ಎಂದು ಇಲ್ಲಿ ಅಗ್ನಿ ಮತ್ತು ಸೋಮ ಎರಡು ದೇವತೆಗಳನ್ನೂ ಉದ್ದೇಶಿಸಿ ಹೇಳಿದೆ. ಇಲ್ಲೇ ಅಲ್ಲದೆ ಋಕ್ಸಂಹಿತೆಯ ಉಳಿದ ಅನೇಕ ಕಡೆಗಳಲ್ಲಿಯೂ ಸಹ ಅಗ್ನಿಯೂ ಮತ್ತು ಸೋಮನೂ ಸಹ ಜ್ಯೋತಿಯನ್ನು ತಂದೊದಗಿಸಿದರು ಎಂಬ ವರ್ಣನೆಯಿದೆ. ಉದಾಹರಣೆಗೆ-

ಅಗ್ನೇ ನಕ್ಷತ್ರಮಜರಮಾ ಸೂರ್ಯಂ ರೋಹಯೋ ದಿವಿ ।
ದಧಜ್ಜ್ಯೋತಿರ್ಜನೇಭ್ಯಃ ।

(ಋ. ಸಂ. ೧೦-೧೫೬-೪)

ಏ ಯೋ ರಜಾಂಸ್ಯಮಿಮೀತ ಸುಕ್ರತುರ್ವೈಶ್ವಾನರೋ ಏ ದಿವೋ ರೋಚನಾ ಕವಿಃ

(ಋ. ಸಂ ೬-೭-೭)

ಮುಂತಾದ ಅನೇಕ ಕಡೆಗಳಲ್ಲಿ ಅಗ್ನಿಯು ಜ್ಯೋತಿರ್ಮಂಡಲಗಳನ್ನು ನಿರ್ಮಿಸಿದನೆಂದೂ, ಅಲ್ಲದೇ—

ಪವಮಾನೋ ಅಜೀಜನದ್ದಿವಶ್ಚಿತ್ರಂ ನ ತನ್ಯತುಂ । ಜ್ಯೋತಿರ್ವೈಶ್ವಾನರಂ ಬೃಹತ್ ।

(ಋ. ಸಂ. ೯-೬೧-೫)

ಅಯಮಕೃಣೋದುಷಸಃ ಸುಪತ್ನೀರಯಂ ಸೂರ್ಯೇ ಅದಧಾಜ್ಜ್ಯೋತಿರಂತಃ ।

(ಋ. ಸ. ೬-೪೪-೨೩)

ಇತ್ಯಾದಿ ನಾನಾ ಕಡೆಗಳಲ್ಲಿ ಸೋಮನು ತಮೋನಿವಾರಣೆಯನ್ನು ಮಾಡಿ ಅನಂತರ ತೇಜಸ್ಸನ್ನು ನಿರ್ಮಿಸಿ ಲೋಕ ಕ್ಕೆಲ್ಲಾ ಒದಗಿಸಿದನೆಂದೂ ವಿವರಿಸಿದೆ. ಅಗ್ನೀಷೋಮರ ಆ ಮಹಿಮೆಯನ್ನೂ ಲೋಕೋಪಕಾರವನ್ನೂ ಸ್ಮರಿಸಿ ಇಲ್ಲಿ **ಜ್ಯೋತಿಃ ಏಕಂ ಬಹುಭ್ಯಃ ಅವಿದಂತಂ** ಎಂದು ಉಪಕಾರಸ್ಮರಣೆಯನ್ನು ತೋರಿಸುತ್ತಾರೆ.

ತತ್ ವೀರ್ಯಂ ಚೇತಿ—ಚಿತೀ ಸಂಜ್ಞಾನೇ । ಜ್ಞಾನಾರ್ಥವಲ್ಲಿ **ಚೇತಿ** ಎಂದು ಉಪಯೋಗಿಸಿ ಅಗ್ನೀಷೋಮರ ಲೋಕೋಪಕಾರವೂ ಪರಾಕ್ರಮಾತ್ಮಕವಾದುದೂ ಆದ ಆ ಜ್ಯೋತಿರ್ನಿರ್ಮಾಣಕಾರ್ಯವು ಸಕಲ ರಿಂದಲೂ ತಿಳಿಯಲ್ಪಟ್ಟಿದೆ ಎಂದು ಕೃತಜ್ಞತಾ ಸೂಚಕವಾದ ಅಭಿಪ್ರಾಯವನ್ನು ತಿಳಿಸುತ್ತಾರೆ.

ವ್ಯಾಕರಣಪ್ರಕ್ರಿಯಾ

ಚೇತಿ—ಚಿತೀ ಸಂಜ್ಞಾನೇ ಧಾತು. ಕರ್ಮಣಿಯಲ್ಲಿ ಲುಙ್ ಪ್ರಥಮಪುರುಷ ಏಕವಚನದಲ್ಲಿ ತಪ್ರತ್ಯಯ **ಚಿಣ್ ಭಾವಕರ್ಮಣೋಃ**–(ಪಾ. ಸೂ. ೩-೧-೬೬) ಎಂಬುದರಿಂದ ಚ್ಲಿಗೆ ಚಿಣಾದೇಶ. **ಚಿಣೋ ಲುಕ್** (ಪಾ. ಸೂ ೬-೪-೧೦೪) ಎಂಬುದರಿಂದ ಚಿಣಿನ ಪರದಲ್ಲಿರುವ ತಶಬ್ದಕ್ಕೆ ಲುಕ್. ಪೂರ್ವದಲ್ಲಿ ಆಮಂತ್ರಿತವಿರುವುದರಿಂದ **ಆಮಂತ್ರಿತಂ ಪೂರ್ವಮವಿದ್ಯಮಾನವತ್**—ಎಂಬುದರಿಂದ ಅದಕ್ಕೆ ಅವಿದ್ಯಮಾನವದ್ಭಾವವಿರುವುದರಿಂದ ಆತಿ ಜಂತದ ಪರದಲ್ಲಿ ಬಂದಂತೆ ಆಗಲಿಲ್ಲ. ಆದುದರಿಂದ **ತಿಙ್ಙತಿಙಃ**—ಎಂಬುದರಿಂದ ನಿಘಾತಸ್ವರ ಬರುವುದಿಲ್ಲ ಧಾತುಸ್ವರ ಉಳಿಯುತ್ತದೆ. **ಬಹುಲಂ ಛಂದಸ್ಯಮಾಙ್ಯೋಗೇಽಪಿ**—ಎಂಬುದರಿಂದ ಅಡಾಗಮ ಬರುವುದಿಲ್ಲ.

ಅಮುಷ್ಮೀತಮ್ -- ಮುಷ ಸ್ತೇಯೇ. ಧಾತು. ಕ್ರ್ಯಾದಿ. ಲಙ್ ಮಧ್ಯಮಪುರುಷ ದ್ವಿವಚನದಲ್ಲಿ ಧಸಿಗೆ ತಮಾದೇಶ. **ಕ್ರ್ಯಾದಿಭ್ಯಃ ಶ್ನಾ**—ಎಂಬುದರಿಂದ ಶ್ನಾವಿಕರಣ. **ಈಹಲ್ಯಘೋಃ**– (ಪಾ. ಸೂ. ೬-೪-೧೧೩) ಎಂಬುದರಿಂದ ಶ್ನಾ ಪ್ರತ್ಯಯದ ಆಕಾರಕ್ಕೆ ಈಕಾರಾದೇಶ. ಷಕಾರದ ಪರದಲ್ಲಿರುವುದರಿಂದ ಪ್ರತ್ಯಯ ನಕಾರಕ್ಕೆ **ರಷಾಭ್ಯಾಂ ನೋ ಣಃ ಸಮಾನಪದೇ**—ಎಂಬುದರಿಂದ ಣತ್ವ. ಅಂಗಕ್ಕೆ ಅಡಾಗಮ. **ಯಸ್ಪ್ರತ್ಯಾ-ಸ್ನಿತ್ಯಮ್**—ಎಂಬುದರಿಂದ ಹಿಂದೆ ಯತ್ ಎಂಬುದರ ಸಂಬಂಧವಿರುವುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ

ಅವಸಮ್—ಅವ ರಕ್ಷಣೇ ಧಾತು. ಇದಕ್ಕೆ ಔಣಾದಿಕವಾದ ಅಸಚ್ ಪ್ರತ್ಯಯ. **ಚಿತಃ**—ಎಂಬುದ ರಿಂದ ಅಂತೋದಾತ್ತಸ್ವರ ಬರುತ್ತದೆ.

ಅತಿರತಮ್—ಅವ ಉಪಸರ್ಗಪೂರ್ವಕವಾದ ತಿರಧಾತುವು ಹೆನನ ಕ್ರಿಯಾವಾಚಿಯಾಗಿದೆ. ಲಙ್ ಮಧ್ಯಮಪುರುಷ ದ್ವಿವಚನರೂಪ. ತಿಙಂತನಿಘಾತಸ್ವರ ಬರುತ್ತದೆ.

ಶೇಷಃ—ಇದರ ಪರದಲ್ಲಿರುವ ದ್ವಿತೀಯಾವಿಭಕ್ತಿ ಏಕವಚನದ ಅಮಿಗೆ **ಸುಪಾಂ ಸುಲುಕ್** ಎಂಬುದ ರಿಂದ ಸು ಆದೇಶ.

ಅವಿಂದತಮ್—ವಿದ್ಲೃ ಲಾಭೇ ಧಾತು. **ಶೇ ಮುಚಾದೀನಾಮ್** (ಪಾ. ಸೂ. ೭-೧-೫೯)ಎಂಬುದ ರಿಂದ ನುಮಾಗಮ. ಲಙ್ ಮಧ್ಯಮಪುರುಷ ದ್ವಿವಚನರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರು ವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

ಏಕಮ್—ಇಣ್ ಗತೌ ಧಾತು. ಇದಕ್ಕೆ ಇಣ್‌ಭೀಕಾಪಾಶಲ್ಯತಿಮರ್ಜ್ಯಃ ಕನ್ (ಉ- ಸೂ. ೩-೩೫) ಎಂಬುದರಿಂದ ಕನ್ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ಗುಣ. ಜ್ಞ್ಯಾತ್ಯಾದಿರ್ನಿತ್ಯಮ್— ಎಂಬುದರಿಂದ ಪ್ರತ್ಯಯ ನಿತ್ವಾದುದರಿಂದ ಆದ್ಯುದಾತ್ತಸ್ವರ ಬರುತ್ತದೆ. ॥ ೪ ॥

——:೦:——

ಸಂಹಿತಾಪಾಠಃ

ಯುವಮೇತಾನಿ ದಿವಿ ರೋಚನಾನ್ಯಗ್ನಿಶ್ಚ ಸೋಮ ಸಕ್ರತೂ
ಅಧತ್ತಂ ।
ಯುವಂ ಸಿಂಧೂರಭಿಶಸ್ತೇರವದ್ಯಾದಗ್ನೀಷೋಮಾವಮುಂಚತಂ
ಗೃಭೀತಾನ್ ॥ ೫ ॥

ಪದಪಾಠಃ

ಯುವಂ । ಏತಾನಿ । ದಿವಿ । ರೋಚನಾನಿ । ಅಗ್ನಿಃ । ಚ । ಸೋಮ । ಸಕ್ರತೂ ಇತಿ ಸಕ್ರತೂ । ಅಧತ್ತಂ ।
ಯುವಂ । ಸಿಂಧೂನ್ । ಅಭಿಶಸ್ತೇಃ । ಅವದ್ಯಾತ್ । ಅಗ್ನೀಷೋಮೌ । ಅಮುಂಚತಂ । ಗೃಭೀತಾನ್ ॥ ೫ ॥

ಸಾಯಣಭಾಷ್ಯಂ

ಅಗ್ನೀಷೋಮಾಯಸ್ಯ ಪಶೋರ್ವಪಾಪುರೋಡಾಶಹವಿಷಾಂ ಯುವಮೇತಾನಿತ್ಯಾದ್ಯಾಸ್ತಿಸ್ರ ಋಚಃ ಕ್ರಮೇಣ ಯಾಜ್ಯಾಃ । ಸೂತ್ರಂತು ಪೂರ್ವಮೇವೋದಾಹೃತಂ । ಆ. ೩-೮ ॥ ಪೌರ್ಣಮಾಸಯಾಗೇಽಗ್ನೀಷೋಮಾಯಸ್ಯ ಪುರೋಡಾಶಸ್ಯ ಯುವಮೇತಾನೀತ್ಯೇಷಾ ಯಾಜ್ಯಾ । ಉಕ್ತಾ ದೇವತಾ ಇತಿ ಖಂಡೇ ಸೂತ್ರಿತಂ। ಯುವಮೇತಾನಿ ದಿವಿ ರೋಚನಾನೀಂದ್ರಾಗ್ನೀ ಅವಸಾ ಗತಂ । ಆ. ೧-೬ । ಇತಿ ॥

ಹೇ ಸೋಮ ತ್ವಮಗ್ನಿಶ್ಚ ಸಕೃತೂ ಸಮಾನಕರ್ಮಾಣೌ ಸಂತೌ ಯುವಂ ಯುವಾಂ ರೋಚನಾನಿ ರೋಚಮಾನಾನಿ ದೀಪ್ಯಮಾನಾನ್ಯೇತಾನ್ಯಸ್ಮಾಭಿರ್ನಿಶಿ ದೃಶ್ಯಮಾನಾನಿ ತಾರಾಗ್ರಹಾದೀನಿ ಜ್ಯೋತೀಂಷಿ ದಿವಿ ದ್ಯೌಲೋಕೇ೨ಧತ್ತಂ । ಅಧಾರಯತಂ । ಉತ್ತರಾರ್ಧಸ್ಯೇಯಮಾಖ್ಯಾಯಿಕಾ । ಇಂದ್ರೋ ವೃತ್ತಂ ಹತ್ವಾ ಬ್ರಹ್ಮಹತ್ಯಾಯಾ ಭೀತಃ ಸನ್ ಪೃಥಿವ್ಯಾಂ ವೃಕ್ಷೇಷು ಸ್ತ್ರೀಷ್ವಪ್ಸು ಚ ತಾಂ ಬ್ರಹ್ಮಹತ್ಯಾಂ ನ್ಯಮಾರ್ಷ್ಟೀತ್ ತಾಸಾಮಪಾಂ ಶುದ್ಧಿರಗ್ನೀಸೋಮಾಭ್ಯಾಂ ಜಾತೇತಿ । ಬ್ರಹ್ಮಹತ್ಯಾಂಶೇನ ಸಾಪೇನ ಗೃಭೀತಾನ್ ಗೃಹೀತಾನಾಕ್ರಾಂತಾನ್ ಸಿಂಧೂನ್ ನದೀವಿಶೇಷಾನ್ ಹೇ ಅಗ್ನೀಸೋಮೌ ಯುವಾಮಭಿಶಸ್ತೇರಭಿಶಸ್ಯಮಾನಾದಭಿತಃ ಪ್ರಕಟಿತಾದವದ್ಯಾತ್ತಸ್ಮಾತ್ಪಾಪಾದಮುಂಚತಂ । ಮುಕ್ತವಂತೌ । ಯದ್ವಾ । ವೃತ್ರ ಇಂದ್ರೇಣ ಹತಃ ಸನ್ ನದೀಷು ಪಪಾತ । ತತೋ ಮೃತೇನ ವೃತ್ರಶರೀರೇಣ ನದ್ಯಃ ಸರ್ವಾ ದುಷ್ಟಾ ಬಭೂವುಃ । ತಥಾ ಚ ತೈತ್ತಿರೀಯಕಂ । ಇಂದ್ರೋ ವೃತ್ರಮಹನ್ ಸೋ೨ಪೋ೨ಭ್ಯವ್ರಿಯತ ತಾಸಾಂ ಯನ್ಮೇಧ್ಯಂ ಯಜ್ಞಿಯಂ ಸದೇವಮಾಸೀತ್ತದಪೋದಕ್ರಾಮತ್ । ತೈ. ಬ್ರಾ. ೩-೨-೫-೧ । ಇತಿ । ತೇನ ದೋಷೇಣ ಗೃಹೀತಾ ನದೀಸ್ತಸ್ಮಾದ್ದೋಷಾದಗ್ನೀಸೋಮೌ ಮುಕ್ತವಂತೌ ॥ ರೋಚನಾನಿ । ರುಚ ದೀಪ್ತೌ । ಅನುದಾತ್ತೇತಶ್ಚ ಹಲಾದೇರಿತಿ ಯುಚ್ । ಸಿಂಧೂನ್ । ದೀರ್ಘಾದಟಿ ಸಮಾನಪಾದ ಇತಿ ನಕಾರಸ್ಯ ರುತ್ವಂ । ಅತ್ರಾನುನಾಸಿಕ ಇತ್ಯನುನಾಸಿಕಃ । ಗೃಭೀತಾನ್ । ಹೃಗ್ರಹೋರ್ಭ ಇತಿ ಭತ್ವಂ ॥

ಪ್ರತಿಪದಾರ್ಥ

ಸೋಮ—ಎಲೈ ಸೋಮದೇವತೆಯೇ । **ಅಗ್ನಿಶ್ಚ**—ಮತ್ತು ಎಲೈ ಅಗ್ನಿದೇವನೇ । **ಸಕೃತೂ**—ಒಂದೇ ವಿಧವಾದ ಕ್ರಿಯೆಯಳ್ಳವರಾದ । **ಯುವಂ**—ನೀವಿಬ್ಬರೂ । **ರೋಚನಾನಿ**—ಪ್ರಕಾಶಮಾನಗಳಾದ । **ಏತಾನಿ**—ಈ (ಈ ನಮ್ಮ ಕಣ್ಣಿಗೆ ಗೋಚರವಾಗುವ) ನಕ್ಷತ್ರ ಮಂಡಲಗಳನ್ನು । **ದಿವಿ**—ದ್ಯುಲೋಕದಲ್ಲಿ । **ಅಧತ್ತಂ**—ಎತ್ತಿ ಹಿಡಿದಿದ್ದೀರಿ । **ಅಗ್ನೀಸೋಮೌ**—ಎಲೈ ಅಗ್ನಿ ಮತ್ತು ಸೋಮದೇವತೆಗಳೇ ನೀವು । [ವೃತ್ರವಧದಿಂದ ಉಂಟಾದ ಬ್ರಹ್ಮಹತ್ಯಾದೋಷದಿಂದ] । **ಗೃಭೀತಾನ್**—ಆವರಿಸಲ್ಪಟ್ಟ । **ಸಿಂಧೂನ್**—ನದೀವಿಶೇಷಗಳನ್ನು । **ಅಭಿಶಸ್ತೇಃ**— ಸುತ್ತಲೂ ಹರಡಿರುವ (ಅಥವಾ ಅಪವಾದ ರೂಪವಾದ) । [**ಅವದ್ಯಾತ್**— ಪಾಪದಿಂದ **ಗೃಭೀತಾನ್**— (ವೃತವಾದ ವೃತ್ರನ ಶರೀರವು ಬಿದ್ದುದರಿಂದ ಕಲುಷಿತವಾಗಿ) ಕಲ್ಮಷದಿಂದ ಆವರಿಸಲ್ಪಟ್ಟ] **ಸಿಂಧೂನ್**—ನದೀ ವಿಶೇಷಗಳನ್ನು । **ಅಭಿಶಸ್ತೇಃ**—ಸುತ್ತಲೂ ಹರಡಿರುವ । **ಅವದ್ಯಾತ್**—ಕಲ್ಮಷದಿಂದ ।] **ಅಮುಂಚತಂ**—ಬಿಡಿಸಿ (ಶುದ್ಧಿಮಾಡಿ)ದಿರಿ ॥

ಭಾವಾರ್ಥ

ಎಲೈ ಅಗ್ನಿ ಮತ್ತು ಸೋಮದೇವತೆಗಳೇ ನೀವಿಬ್ಬರೂ ಸಮಾನವಾದ ಕ್ರಿಯೆ ಯುಳ್ಳವರು. ನಮ್ಮ ಕಣ್ಣಿಗೆ ಗೋಚರವಾಗುವ ಈ ಪ್ರಕಾಶಮಾನಗಳಾದ ನಕ್ಷತ್ರಮಂಡಲಗಳನ್ನು ನೀವಿಬ್ಬರೂ ಒಟ್ಟಿಗೆ ದ್ಯುಲೋಕದಲ್ಲಿ ಎತ್ತಿಹಿಡಿದಿದ್ದೀರಿ. ಮತ್ತು ವೃತ್ರವಧದಿಂದ ಉಂಟಾದ ಹತ್ಯಾದೋಷದಿಂದಲೂ ಕಲ್ಮಷದಿಂದಲೂ ಆವರಿತವಾದ ನದೀ ವಿಶೇಷಗಳನ್ನು ಆ ದೋಷದಿಂದ ಬಿಡಿಸಿ ಶುದ್ಧಿಮಾಡಿದ್ದೀರಿ.

English Translation

Agni and Soma, you two acting together have sustained these constellations in the sky; you have liberated the rivers that had been defied from the notorious imputation.

ಶೇಷವಿಷಯಗಳು

ಅಗ್ನೀಷೋಮೀಯದೇವತಾ ಸಂಬಂಧವಾದ ಪಶುಯಾಗದಲ್ಲಿ ವಪಾಪುರೋಡಾಶ ಹವಿಸ್ಸುಗಳನ್ನು ಹೋಮ ಮಾಡುವಾಗ **ಯುವಮೇತಾನಿ** ಎಂದು ಮೊದಲಾಗುವ ಮೂರು ಋಕ್ಕುಗಳು ಕ್ರಮವಾಗಿ ಯಾಜ್ಯಾಮಂತ್ರಗಳಾಗಿರುವವು. ಈ ವಿಷಯದಲ್ಲಿ ಸೂತ್ರವು ಹಿಂದೆಯೇ ಹೇಳಲ್ಪಟ್ಟಿರುವುದು (ಆ. ೩-೮) ಮತ್ತು ಪೌರ್ಣಮಾಸ್ಯಯಾಗದಲ್ಲಿಯೂ ಅಗ್ನೀಷೋಮೀಯ ದೇವತಾ ಸಂಬಂಧವಾದ ಪುರೋಡಾಶದ ಹೋಮಕ್ಕಾಗಿ **ಯುವಮೇತಾನಿ** ಎಂಬ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಉಕ್ಥಾ ದೇವತಾ** ಎಂಬ ಖಂಡದ **ಯುವಮೇತಾನಿ ದಿವಿ ರೋಚನಾನೀಂದ್ರಾಗ್ನೀ ಅವಸಾ ಗತಂ** ಎಂಬ ಸೂತ್ರದಿಂದ ವಿವೃತವಾಗಿರುವುದು (ಶ್ರೌ. ೧-೬).

ಸಕೃತೂ—ಸಮಾನಕರ್ಮಾಣೌ। ಯಾಗಾದಿ ಕ್ರಿಯೆಗಳಲ್ಲಿ ಸಮಾನವಾದ ಮುಖ್ಯಪಾತ್ರವನ್ನು ವಹಿಸುವುದೂ, ಮೇಲಿನ ಋಕ್ಕುಗಳಲ್ಲಿ ವಿವರಿಸುವಂತೆ ಇಂದ್ರಾದಿದೇವತೆಗಳಿಗೆ ಹವಿಸ್ಸನ್ನು ಹಂಚುವುದರ ಮೂಲಕ ತೃಪ್ತಿಯನ್ನುಂಟುಮಾಡುವುದೂ, ಅವರ ಅನುಗ್ರಹವನ್ನು ಯಜ್ಞಕರ್ತರಿಗೆ ಒದಗಿಸುವುದೂ, ಲೋಕವನ್ನೆಲ್ಲಾ ಆವರಿಸುವ ತಮಸ್ಸನ್ನು ನಾಶಮಾಡಿ ಬೆಳಕನ್ನು ಹರಡುವುದೂ ಇತ್ಯಾದಿ ನಾನಾ ವಿಧನಾದ ಲೋಕೋಪಕಾರವಾದ ಕರ್ಮಗಳಲ್ಲಿ ಸಮಾನವಾದ ಭಾಗವಹಿಸಿ ಕಾರ್ಯವನ್ನು ಸಾಧಿಸುವವರೆಂದರ್ಥವು.

ರೋಚನಾಗಿ ಏತಾನಿ ದಿವಿ ಅಧತ್ತಂ—ಪ್ರಕಾಶಮಾನಗಳಾದ ನಕ್ಷತ್ರಮಂಡಲಗಳನ್ನು ದ್ಯುಲೋಕದಲ್ಲಿ ಎತ್ತಿಹಿಡಿದು ಲೋಕಕ್ಕೆ ಬೆಳಕನ್ನು ಬೀರುವ ಇವರ ಉಪಕಾರಕ ಕರ್ಮವು ಪ್ರಸಿದ್ಧವಾಗಿದೆ. ಉದಾಹರಣೆಗೆ—

ನಿಷತ್ತಮಸ್ಯ ಚರತೋ ಧ್ರುವಸ್ಯ ನಿಶ್ಚಾ ದಿವೋ ರೋಚನಾಪಪ್ರಿವಾಂಸಂ।

(ಋ. ಸಂ ೧-೧೪೬-೧)

ಅಧಿ ದ್ಯಾಮಸ್ಥಾದ್ವೃಷಭೋ ವಿಚಕ್ಷಣೋಽರೂರುಚದ್ವಿ ದಿವೋ ರೋಚನಾ ಕವಿಃ।

(ಋ. ಸಂ. ೯-೮೬-೯)

ಹೀಗೆಯೇ, (ಋ. ಸಂ. ೬-೭-೭; ೬-೮-೨; ೬-೪೪-೨೩; ೯-೯೭-೪೧ ಇತ್ಯಾದಿ) ನಾನಾ ಸ್ಥಳಗಳಲ್ಲಿ ಅಗ್ನೀಷೋಮರಿಬ್ಬರೂ ಸಹ ದ್ಯುಲೋಕದ ತೇಜೋಮಂಡಲಗಳೆಲ್ಲವನ್ನೂ ಸಹ ಎತ್ತಿಹಿಡಿದು ಅವುಗಳ ಪ್ರಕಾಶವನ್ನು ಅತ್ಯಧಿಕವಾಗಿ ಹೆಚ್ಚುಮಾಡಿದ್ದಾರೆ ಎಂದು ವರ್ಣಿತವಾಗಿದೆ.

ಗೃಭೀತಾನ್—ಹಿಡಿಯಲ್ಪಟ್ಟು ಅಂದರೆ ಸುತ್ತಲೂ ವ್ಯಾಪ್ತವಾಗಿ ತಡೆಯಲ್ಪಟ್ಟ ಎಂದರ್ಥವು.

ಸಿಂಧೂನ್—ಅವನಯಃ, ಯಹ್ವಯಃ ಸೀರಾಃ ಇತ್ಯಾದಿ ನದೀನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೨-೨೪) **ಸಿಂಧೂನ್** ಅಂದರೆ ಪ್ರವಹಿಸುವ ನದಿಗಳೆಂದರ್ಥವಾಗುತ್ತದೆ.

ಅಭಿಶಸ್ತೇಃ—ಸುತ್ತಲೂ ಪ್ರಕಟವಾಗಿರತಕ್ಕ.

ಅವದ್ಯಾತ್—ವೃತ್ರಹನನರೂಪವಾದ ಪಾಪದಿಂದ. ವೃತ್ರಹನನರೂಪವಾದ ದೋಷದಿಂದ ನದಿಗಳೆಲ್ಲವೂ ಆವೃತವಾಗಿ ಕಲ್ಮಷಪೂರಿತವಾದ ಕಾಲದಲ್ಲಿ ಆ ದೋಷವನ್ನು ನಿವಾರಿಸಿದಿರಿ ಎಂದರ್ಥವು.

ಇಲ್ಲಿ **ಸಿಂಧೂನ್** ಎಂದರೆ ಪ್ರವಾಹರೂಪವಾದ ನದಿಗಳನ್ನು ಎಂದು ಸಾಯಣರು ಅರ್ಥಮಾಡಿ ವೃತ್ರಹನನವಾದಾಗ ವೃತ್ರನ ಮೃತಶರೀರವು ನದಿಗಳಲ್ಲಿ ಬಿದ್ದಿತೆಂದೂ, ಆಗ ಎಲ್ಲಾ ನದಿಗಳೂ ದೋಷದಿಂದ ಪೂರಿತವಾದವೆಂದೂ —

ಇಂದ್ರೋ ವೃತ್ರಮಹ ಸೋ೨ಪೋ೨ಭ್ಯಮ್ರಿಯತ ತಾಸಾಂ ಯನ್ಮೇಧ್ಯಂ ಯಜ್ಞಿಯಂ ಸದೇವ-ಮಾಸೀತ್ತದಪೋದಕ್ರಾಮತ್ ।

ಎಂಬ ತೈತ್ತಿರೀಯ ಬ್ರಾಹ್ಮಣದ ೩-೨-೫೧ನೆಯ ವಾಕ್ಯವನ್ನು ಉದಹರಿಸುತ್ತಾ ವಿವರಿಸಿ ಆಗ ಆ ದೋಷದಿಂದ ಒಡಿಯಲ್ಪಟ್ಟ ನದಿಗಳನ್ನು ಅಗ್ನಿಷೋಮರು ದೋಷ ನಿವಾರಣಾಪೂರ್ವಕವಾಗಿ ಶುದ್ಧಿಮಾಡಿದರು ಎಂದು ವಿಶದಪಡಿಸುತ್ತಾರೆ.

ಆದರೆ ಸ್ಕಂದಸ್ವಾಮಿಗಳು ಇಲ್ಲಿ **ಸಿಂಧೂನ್** ಎಂಬ ಪದಕ್ಕೆ **ಸ್ಯಂದನಾತ್ ಸಿಂಧವೋ ರಶ್ಮಯೆ ಇಹೋಚ್ಯಂತೇ ।** ಎಂದರೆ ಪ್ರಸರಿಸುವ ರಶ್ಮಿಗಳೆಂದು ಅರ್ಥಮಾಡಿ **ನ ಸಿಂಧವೋ ರಜಸೋ ಅಂತಮಾನಶುಃ** (ಋ. ಸಂ. ೧-೫೨-೧೪) ಎಂಬ ವಾಕ್ಯವನ್ನು ಉದಹರಿಸಿ ಅದರಂತೆಯೇ ಇಲ್ಲಿಯೂ ರಶ್ಮಿಗಳೆಂಬ ಅರ್ಥವನ್ನು ಹೇಳಬೇಕೆನ್ನುತ್ತಾರೆ. ಹಾಗೆಮಾಡಿದರೆ ಅಗ್ನಿಷೋಮರು ವೃತ್ರಾಸುರನಿಂದ ಆವೃತವಾದ ಈ ರಶ್ಮಿಗಳನ್ನು ವೃತ್ರಹನನವನ್ನು ಮಾಡುವುದರ ಮೂಲಕ ಸುತ್ತಲೂ ಪ್ರಕಟವಾದ ಮತ್ತು ವೃತ್ರರೂಪವಾದ ಪಾಪದಿಂದ ಬಿಡಿಸಿದರು ಎಂದು ವಿವರಿಸುತ್ತಾರೆ.

ವ್ಯಾಕರಣಪ್ರಕ್ರಿಯಾ

ಯುವಮ್—ಯುಷ್ಮಚ್ಛಬ್ದಕ್ಕೆ ಪ್ರಥಮಾದ್ವಿವಚನದಲ್ಲಿ ಅಮಾದೇಶ. **ಪ್ರಥಮಾಯಾಶ್ಚ ದ್ವಿವಚನೇ ಭಾಷಾಯಾಮ್**—ಎಂಬುದರಿಂದ ಸಂಹಿತಾದಲ್ಲಿ ಆತ್ವ ಬರುವುದಿಲ್ಲ.

ದಿವಿ—**ಊಡಿದಂ ಪದಾದಿ**—ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ರೋಚನಾನಿ—ರುಚ ದೀಪ್ತೌ ಧಾತು. ಇದು ಅನುದಾತ್ತೇತ್ತಾದುದರಿಂದ **ಅನುದಾತ್ತೇತಶ್ಚ ಹಲಾದೇಃ** (ಪಾ. ಸೂ. ೩-೨-೧೪೯) ಎಂಬುದರಿಂದ ಯುಚ್ ಪ್ರತ್ಯಯ. **ಯುವೋರನಾಕೌ**—ಎಂಬುದರಿಂದ ಅದಕ್ಕೆ ಅನಾದೇಶ. ತನ್ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ. ದ್ವಿತೀಯಾಬಹುವಚನಾಂತರೂಪ. **ಚಿತಃ**—ಎಂಬುದರಿಂದ ಅಂತೋದಾತ್ತಸ್ವರ ಬರುತ್ತದೆ.

ಅಧತ್ತಮ್— ಡುಧಾಞ್ ಧಾರಣಪೋಷಣಯೋಃ ಧಾತು. ಲಙ್ ಮಧ್ಯಮಪುರುಷ ದ್ವಿವಚನದಲ್ಲಿ

ತಮಾದೇಶ. ಶ್ಲುವಿಕರಣ. **ಶ್ಲಾ**—ಎಂಬುದರಿಂದ ಧಾತುವಿಗೆ ದ್ವಿತ್ವ. **ಶ್ನಾಭ್ಯಸ್ತಯೋರಾತಃ**—ಎಂಬುದರಿಂದ ಧಾತುವಿನ ಆಕಾರಕ್ಕೆ ಲೋಪ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಸಿಂಧೂನ್—ಇದಕ್ಕೆ ಅಟ್ ಪರದಲ್ಲಿರುವುದರಿಂದ **ದೀರ್ಘಾದಟಿ ಸಮಾನಪಾದೇ** (ಪಾ. ಸೂ. ೮-೩-೯)„ ಎಂಬುದರಿಂದ ನಕಾರಕ್ಕೆ ರುತ್ವ. **ಅತ್ರಾನುನಾಸಿಕಃ ಪೂರ್ವಸ್ಯ ತು ವಾ**—ಎಂಬುದರಿಂದ ರುವಿನ ಪೂರ್ವಕ್ಕೆ ಅನುನಾಸಿಕ.

ಗೃಭೀತಾನ್—ಗ್ರಹ ಉಪಾದಾನೇ. ಧಾತು. ಇದಕ್ಕೆ ಕ್ತಪ್ರತ್ಯಯ ಪರವಾದಾಗ **ಆರ್ಧಧಾತುಕಸ್ಯೇಡ್ವಲಾದೇಃ**—ಎಂಬುದರಿಂದ ಇಡಾಗಮ. ಆದಕ್ಕೆ **ಗ್ರಹೋऽಲಿಟಿ ದೀರ್ಘಃ**-(ಪಾ. ೬-೧-೩೭) ಎಂಬುದರಿಂದ ದೀರ್ಘ. **ಗ್ರಹಿಜ್ಯಾವಯಿ**—ಎಂಬುದರಿಂದ ಸಂಪ್ರಸಾರಣ. **ಹೃಗೃಹೋರ್ಭಶ್ಛಂದಸಿ**— ಎಂಬುದರಿಂದ ಹೆಕಾರಕ್ಕೆ ಭಕಾರಾದೇಶ. ಪ್ರತ್ಯಯಸ್ವರದಿಂದ ಅಂತೋದಾತ್ತ. ದ್ವಿತೀಯಾಬಹುವಚನಾಂತರೂಪ. ॥ ೫ ॥

ಸಂಹಿತಾಪಾಠಃ

ಆನ್ಯಂ ದಿವೋ ಮಾತರಿಶ್ವಾ ಜಭಾರಾಮಥ್ನಾದನ್ಯಂ ಪರಿಶ್ಯೇನೋ ಅದ್ರೇಃ ।
ಅಗ್ನೀಷೋಮಾ ಬ್ರಹ್ಮಣಾ ವಾವೃಧಾನೋರುಂ ಯಜ್ಞಾಯ ಚಕ್ರಥುರು ಲೋಕಂ ॥ ೬ ॥

॥ ಪದಪಾಠಃ ॥

ಆ । ಅನ್ಯಂ । ದಿವಃ । ಮಾತರಿಶ್ವಾ । ಜಭಾರ । ಅಮಥ್ನಾತ್ । ಅನ್ಯಂ । ಪರಿ-ಶ್ಯೇನಃ । ಅದ್ರೇಃ ।

ಪದಪಾಠಃ

ಅಗ್ನೀಷೋಮಾ । ಬ್ರಹ್ಮಣಾ । ವವೃಧಾನಾ । ಉರುಂ । ಯಜ್ಞಾಯ । ಚಕ್ರಥುಃ । ಊಂ ಇತಿ । ಲೋಕಂ ॥ ೬ ॥

ಸಾಯಣಭಾಷ್ಯಂ

ಅಗ್ನೀಷೋಮಿಮಾಯೆಸ್ಯೋಪಾಂಶುಯಾಜಸ್ಯಾನ್ಯಂ ದಿವ ಇತ್ಯೇಷಾ ಯಾಜ್ಯಾ । ಅಗ್ನೀಷೋಮಾ ಯೋ ಅದ್ಯ ವಾಮಿತ್ಯತ್ರ ಸೂತ್ರಮುದಾಹೃತಂ ॥

ಹೇ ಅಗ್ನೀಷೋಮೌ ಯುವಯೋರ್ಮಧ್ಯೇ೨ನ್ಯಮೇಕಮಗ್ನಿಂ ಮಾತರಿಶ್ವಾ ವಾಯುರ್ದಿವೋ ದ್ಯುಲೋಕಾದಾ ಜಭಾರ ಭೃಗವೇ ಯೆಜಮಾನಾಯಾಜಹಾರ । ತಥಾ ಚ ಮಂತ್ರಾಂತರಂ । ದ್ವಿಜನ್ಮಾನಂ ರಯಿಮಿವ ಪ್ರಶಸ್ತಂ ರಾತಿಂ ಭಥದ್ಭೃಗವೇ ಮಾತರಿಶ್ವಾ । ಋಗ್ವೇ. ೧-೬೦-೧ । ಇತಿ । ಶ್ಯೇನಃ ಶಂಸನೀಯಗತಿಮಾನ್ಪಕ್ಷೀ ಪಕ್ಷ್ಯಾಕಾರಾ ಗಾಯತ್ರ್ಯನ್ಯಂ ಸೋಮಮದ್ರೇಃ ಪರಿ ಮೇರೋರುಪರ್ಯವಸ್ಥಿತಾತ್ಸ್ವರ್ಗಾದಮಥ್ನಾತ್ । ಬಲಾದಾಹೃತವತೀ । ಏವಂ ಮಹಾನುಭಾವೌ ಯುವಾಂ ಬ್ರಹ್ಮಣಾ ಸ್ತುತ್ಯಾ ಮಂತ್ರರೂಪೇಣ ಸ್ತೋತ್ರೇಣ ಹವಿರ್ಲಕ್ಷಣೇನಾನ್ನೇನ ವಾ ವವೃಧಾನಾ ವರ್ಧಮಾನೌ ಯುವಾಂ ಯಜ್ಞಾಯಾನ್ಯೇಷಾಂ ದೇವಾನಾಂ ಯಾಗಾಯೋರುಂ ವಿಸ್ತೀರ್ಣಂ ಲೋಕಂ ಸ್ಥಾನಂ ಚಕ್ರಥುಃ । ಕೃತವಂತೌ । ಉ ಇತ್ಯೇತತ್ಪದಪೂರಣಂ । ಆಜ್ಯಭಾಗದೇವತಯೋರಗ್ನೀಷೋಮಯೋರುತ್ತರಾರ್ಧದಕ್ಷಿಣಾರ್ಧಯೋರ್ಹೂಯತೇ । ತನ್ಮಧ್ಯೇ೨ನ್ಯದೇವತ್ಯಾನಿ ಸರ್ವಾಣಿ ಹವೀಂಷಿ ಹೂಯಂತೇ । ತನ್ಮಧ್ಯಮಂ ಸ್ಥಾನಮಗ್ನೀಷೋಮಕೃತಂ । ತಥಾ ಚ ಶೈತ್ತಿರೀಯಕಂ । ರಾಜಾನೌ ವಾ ಏತೌ ದೇವಾನಾಂ ಯದಗ್ನೀಷೋಮಾವಂತರಾ ದೇವತಾ ಇಜ್ಯೇತೇ ದೇವತಾನಾಂ ವಿಧೃತ್ಯಾ ಇತಿ ॥ ವವೃಧಾನಾ । ವೃಧೇರ್ಲಿಟಃ ಕಾನಚ್ । ಛಾಂದಸಮಭ್ಯಾಸಸ್ಯ ದೀರ್ಘತ್ವಂ । ಸುಪಾಂ ಸುಲುಗಿತ್ಯಾಕಾರಃ ॥

॥ ಪ್ರತಿಪದಾರ್ಥ ॥

ಅಗ್ನೀಷೋಮಾ—ಎಲೈ ಅಗ್ನಿ ಮತ್ತು ಸೋಮದೇವತೆಗಳೇ । **ಅನ್ಯಂ**—ನಿಮ್ಮಿಬ್ಬರಲ್ಲಿ ಒಬ್ಬನಾದ ಅಗ್ನಿಯನ್ನು । **ಮಾತರಿಶ್ವಾ**—ವಾಯುವು । **ದಿವಃ**—ದ್ಯುಲೋಕದಿಂದ । **ಆಜಭಾರ**—(ಯಜ್ಞಕರ್ತನಾದ ಭೃಗುವಿಗಾಗಿ) ತಂದುಕೊಟ್ಟನು. । **ಶ್ಯೇನಃ**—ಶ್ಯೇನರೂಪದಲ್ಲಿ ಗಾಯತ್ರಿಯು । **ಅನ್ಯಂ**—ಇನ್ನೊಬ್ಬನಾದ ಸೋಮದೇವನನ್ನು । **ಅದ್ರೇಃ ಪರಿ**— ಮೇರುಪರ್ವತದ ಶಿಖರದ ಸ್ವರ್ಗದಿಂದ । **ಅಮಥ್ನಾತ್** — ಅಪಹರಿಸಿ ಕೊಂಡು ಬಂದಳು. (ಇಂತಹ ಮಹಾನುಭಾವರಾದ ನೀವು) । **ಬ್ರಹ್ಮಣಾ**—ಮಂತ್ರರೂಪವಾದ ಸ್ತೋತ್ರದಿಂದ ಅಥವಾ ಹವಿಸ್ಸಿನ ರೂಪದ ಅನ್ನದಿಂದ । **ವವೃಧಾನಾ** — ವರ್ಧಿತರಾಗಿ । **ಯಜ್ಞಾಯ**—ಇತರ ದೇವತೆಗಳ ಯಾಗಕ್ಕಾಗಿ । **ಉರುಂ**—ವಿಸ್ತಾರವಾದ । **ಲೋಕಂ**—(ಯಜ್ಞ) ಪ್ರದೇಶವನ್ನು । **ಚಕ್ರಥುಃ**—ನಿರ್ಮಿಸಿದಿರಿ.

ಭಾವಾರ್ಥ

ಎಲೈ ಅಗ್ನಿ ಮತ್ತು ಸೋಮದೇವತೆಗಳೇ, ನಿಮ್ಮಿಬ್ಬರಲ್ಲಿ ಒಬ್ಬನಾದ ಅಗ್ನಿಯನ್ನು ಯಜ್ಞಕರ್ತನಾದ ಭೃಗುವಿಗಾಗಿ ವಾಯುವು ದ್ಯುಲೋಕದಿಂದ ತಂದುಕೊಟ್ಟನು. ಇನ್ನೊಬ್ಬನಾದ ಸೋಮದೇವನನ್ನು ಶ್ಯೇನರೂಪದ ಗಾಯತ್ರಿಯು ಮೇರುಪರ್ವತದ ಶಿಖರವಾದ ಸ್ವರ್ಗದಿಂದ ಅಪಹರಿಸಿಕೊಂಡು ಬಂದಳು. ಇಂತಹ ಮಹಾನುಭಾವರಾದ ನೀವು ಮಂತ್ರರೂಪವಾದ ಸ್ತೋತ್ರದಿಂದ ವರ್ಧಿತರಾಗಿ ಇತರ ದೇವತೆಗಳ ಯಾಗಕ್ಕಾಗಿ ಯಜ್ಞಪ್ರದೇಶವನ್ನು ವಿಸ್ತಾರವಾಗಿ ನಿರ್ಮಿಸಿದಿರಿ

English Translation

Agni and Soma, the wind brought one of you from heaven, a hawk carried off the other by force from the summit of the mountain ; growing vast by praise you have made the world wide for sacrifice

ವಿಶೇಷವಿಷಯಗಳು

ಮಾತರಿಶ್ವಾ—ಮಾತರಿಶ್ವಾ ವಾಯುರ್ಮಾತರ್ಯಂತರಿಕ್ಷೇ ಶ್ವಸಿತಿ ಮಾತರ್ಯಾಶ್ವಸಿತೀತಿ ವಾ। ಅಂತರಿಕ್ಷದಲ್ಲಿ ಶ್ವಾಸಮಾಡುವುದರಿಂದ ಅಥವಾ ಸಂಚರಿಸುವುದರಿಂದ ವಾಯುವಿಗೆ **ಮಾತರಿಶ್ವನೆಂದು** ಹೆಸರು ಬಂದಿದೆ. ಋ. ಸಂ. ೧-೯೬-೪ ನೇ ಋಕ್ಕಿನಲ್ಲಿ ಈ ಪದಕ್ಕೆ ಅಗ್ನಿಯೆಂದೂ ೧-೧೪೧-೩ನೆಯದರಲ್ಲಿ ಯಜಮಾನನೆಂದೂ ಅರ್ಥಮಾಡುತ್ತಾರೆ. ಆದರೆ ಇಂತಹ ಒಂದೆರಡು ಕಡೆಗಳಲ್ಲಿ ಬಿಟ್ಟು ಉಳಿದೆಡೆಗಳಲ್ಲೆಲ್ಲಾ **ಮಾತರಿಶ್ವಾ** ಎಂದರೆ ವಾಯುವೆಂದೇ ಅರ್ಥವು.

ಅನ್ಯಂ ಮಾತರಿಶ್ವಾ ದಿವ ಆ ಜಭಾರ–ಯಜ್ಞಾತ್ಮನಾದ ಅಗ್ನಿಯ ಅಲೌಕಿಕವಾದ ಆವಿರ್ಭಾವವೂ ಲೌಕ್ಕಿಕವಾದ ಉತ್ಪತ್ತಿಯೂ ಅನೇಕ ವಿಧಗಳಲ್ಲಿ ವರ್ಣಿತವಾಗಿದೆ. ಯಜ್ಞಗಳಿಗೆ ಕೇತುವೂ, ವಿದಥಕ್ಕೆ ಸಾಧನವೂ, ಯಾಗಾದಿಗಳ ಪಿತೃವೂ, ಅಧ್ವರಗಳ ರಾಜನೂ (ಋ. ಸಂ. ೩-೩-೩ ; ೩-೧೧-೨ ; ೪-೨-೩ ಇತ್ಯಾದಿ ಋಕುಗಳಲ್ಲಿರುವ ವರ್ಣನೆಗಳನ್ನು ನೋಡಿ) ಆದ ಅಗ್ನಿಯ ಆವಿರ್ಭಾವವು ವಿದ್ಯುದ್ರೂಪದಲ್ಲಿ ಮೊದಲು ವಾಯುವಿಗಾಯಿತೆಂದು ಋಕ್ಸಂಹಿತೆಯ

ತ್ವಮಗ್ನೇ ಪ್ರಥಮೋ ಮಾತರಿಶ್ವನ ಆವಿರ್ಭವ ಸುಕ್ರತೂಯಾ ವಿವಸ್ವತೇ ।
(ಋ. ಸಂ. ೧-೩೧-೩)

ಸ ಜಾಯಮಾನಃ ಪರಮೇ ವ್ಯೋಮನ್ಯಾವಿರಗ್ನಿರಭವನ್ಮಾತರಿಶ್ವನೇ ।
(ಋ. ಸಂ. ೧-೪೩-೨)

ಮುಂತಾದ ಋಕ್ಕುಗಳಲ್ಲಿ ಹೊಗಳಿದೆ. ಈ ವಾಯುವು ಯಜ್ಞಕರ್ತರಾದ ಭೃಗುವಿಗಾಗಿಯೂ ಮನುವಿಗಾಗಿಯೂ ಅತ್ಯಂತ ದೂರಪ್ರದೇಶದಲ್ಲಿ ಗೂಢವಾಗಿದ್ದ ಅಗ್ನಿಯನ್ನು ಕರೆತಂದು ಇವರಿಗೆ ಸಹಾಯಮಾಡಿದನು ಎಂದು ಅನೇಕ ಶ್ರುತಿವಾಕ್ಯಗಳಿವೆ. ಉದಾಹರಣೆಗೆ—

ದ್ವಿಜನ್ಮಾನಂ ರಯಿಮಿವ ಪ್ರಶಸ್ತಂ ರಾತಿಂ ಭರದ್ಭೃಗವೇ ಮಾತರಿಶ್ವಾ ।
(ಋ. ಸಂ. ೧-೬೦-೧)

ಯಂ ಮಾತರಿಶ್ವಾ ಮನವೇ ಪರಾವತೋ ದೇವಂ ಭಾಃ ಪರಾವತಃ ।
(ಋ. ಸಂ. ೧-೧೨೮-೨)

ಏನಂ ನಯನ್ಮಾತರಿಶ್ವಾ ಪರಾವತೋ ದೇವೇಭ್ಯೋ ಮಥಿತಂ ಪರಿ ।
(ಋ. ಸಂ. ೩-೯-೫)

ಆ ದೂತೋ ಅಗ್ನಿಭರದ್ವಿವಸ್ವತೋ ವೈಶ್ವಾನರಂ ಮಾತರಿಶ್ವಾ ಪರಾವತಃ ।
(ಋ. ಸಂ ೬-೮-೪)

ಈಳೇನ್ಯಂ ಪ್ರಥಮಂ ಮಾತರಿಶ್ವಾ ದೇವಾಸ್ತತಕ್ಷುರ್ಮನವೇ ಯಜತ್ರಂ ।
(ಋ. ಸಂ. ೧೦-೪೬-೯)

ಇತ್ಯಾದಿ ನಾನಾ ಋಕ್ಕುಗಳಲ್ಲಿ ಮಾತರಿಶ್ವನು ಯಜ್ಞಕರ್ತರಾದ ಭೃಗು ಮತ್ತು ಮನು ಇವರ ಪ್ರಯೋಜನಕ್ಕಾಗಿ ದೂರದೇಶದಲ್ಲಿ ಗುಪ್ತವಾಗಿದ್ದ ಅಗ್ನಿಯನ್ನು ಪೃಥ್ವಿಗೆ ಕರೆತಂದು ಪೃಥ್ವಿಯಲ್ಲಿ ಎಲ್ಲಾ ಪ್ರಜೆಗಳಿಗೂ ಉಪಕಾರ ಮಾಡಿದನೆಂದು ಶ್ರುತಿಪ್ರಸಿದ್ಧವಾಗಿದೆ. ಈ ಕಥೆಯು ಮುಂದೆ ವಿಶದವಾಗಿ ವಿವರಿಸಲಾಗುತ್ತದೆ.

ಶ್ಯೇನಃ ಅನ್ಯಂ ಅದ್ರೇಃ ಪರಿ ಅಮಥ್ನಾತ್—ಶ್ಯೇನರೂಪದಲ್ಲಿ ಗಾಯತ್ರಿಯು ಪರ್ವತ ಶಿಖರದಿಂದ ಅಪಹರಿಸಿಕೊಂಡು ಬಂದಳು. ಬಹುದೂರಪ್ರದೇಶದಲ್ಲಿದ್ದ ಅಗ್ನಿಯನ್ನು ಮಾತರಿಶ್ವನು ತಂದಂತೆಯೇ ಶ್ಯೇನಪಕ್ಷಿಯೂ ಕೂಡ ಸೋಮನನ್ನು ಪೃಥ್ವಿಗೆ ತಂದ ಕಥಾವರ್ಣನೆಯು ನಾನಾ ಶ್ರುತಿಗಳಲ್ಲಿ ವರ್ಣಿತವಾಗಿದೆ.

ಮುಂದ್ರಸ್ಯ ರೂಪಂ ವಿವಿದುರ್ಮನೀಷಿಣಃ ಶ್ಯೇನೋ ಯದಂಧೋ ಅಭರತ್ಪರಾವತಃ ।
(ಋ. ಸಂ. ೯-೬೮-೬)

ಯಂ ಸುಪರ್ಣಃ ಪರಾವತಃ ಶ್ಯೇನಸ್ಯ ಪುತ್ರ ಆಭರತ್ ।
(ಋ. ಸಂ. ೮೦ ೧೪೪-೪)

ಈ ಕಥೆಯ ಮುಖ್ಯವಾದ ಭಾಗವು ಋಕ್ಸಂಹಿತೆಯಲ್ಲಿ ನಾಲ್ಕನೆಯ ಮಂಡಲದ ೨೬ ಮತ್ತು ೨೭ನೇ ಸೂಕ್ತಗಳಲ್ಲಿ ಸಂಭಾಷಣಾರೂಪದಲ್ಲಿ ವರ್ಣಿತವಾಗಿದೆ. ಆದರೆ **ಶ್ಯೇನ, ಸುಪರ್ಣ, ಗಾಯತ್ರೀ** ಎಂಬ ಬೇರೆ ಬೇರೆ ಪದಗಳನ್ನು ಈ ಸಂದರ್ಭಗಳಲ್ಲಿ ಉಪಯೋಗಿಸಿರುವುದರಿಂದ ಈ ಕಥಾ ವಿವರಣೆಯನ್ನು ತಿಳಿದ ಹೊರತು ಈ ಸಂದರ್ಭಗಳು ಅರ್ಥವಾಗುವುದಿಲ್ಲ.

ಈ ಋಕ್ಕನ್ನು ವಿವರಿಸುವಾಗ ಸ್ಕಂದಸ್ವಾಮಿಗಳು ಐತರೇಯ ಬ್ರಾಹ್ಮಣದಲ್ಲಿ ಉಕ್ತವಾಗಿರುವ ಕಥೆಯನ್ನು ಉಪಹರಿಸುತ್ತಾರೆ. ಅದರ ಪ್ರಕಾರ (ಐ.ಬ್ರಾ. ೩-೪೫ರಿಂದ ೨೬), ದ್ಯುಲೋಕದಲ್ಲಿದ್ದ **ಸೋಮನನ್ನು** ರಾಜನನ್ನಾಗಿ ಪಡೆಯಬೇಕೆಂದು ಋಷಿಗಳು ಆಶಿಸಿ ಆ ಸೋಮರಾಜನನ್ನು ತಮ್ಮಲ್ಲಿಗೆ ಕರೆದುಕೊಂಡು ಬರಬೇಕೆಂದು **ಛಂದಸ್ಸು ಗಳನ್ನು** ಪ್ರಾರ್ಥಿಸಿದರು ಆಗ ಅವು ಒಪ್ಪಿಕೊಂಡು ಈ ಕಾರ್ಯಸಾಧನೆಗೆ **ಸುಪರ್ಣ** (ಪಕ್ಷಿ) ರೂಪದಲ್ಲಿ ಪರಿವರ್ತನೆಯನ್ನು ಹೊಂದಿದುದರಿಂದ ಈ ಸಂದರ್ಭವು **ಸೌಪರ್ಣಾಖ್ಯಾನವೆಂದು** ಪ್ರಸಿದ್ಧವಾಗಿದೆ. ಅನಂತರ ಪಕ್ಷಿರೂಪದ

ಛಂದಸ್ಸುಗಳು ಪ್ರಯತ್ನಪಟ್ಟಾಗ **ಜಗತಿಯು** ಅರ್ಧದಾರಿಯಲ್ಲಿಯೇ ಸೋತುಹೋದುದರಿಂದ **ತ್ರಿಷ್ಟುಪ್** ಛಂದಸ್ಸು ಪ್ರಯತ್ನಿಸಿತು. ಇದೂ ಸಹ ಅರ್ಧದಾರಿಗಿಂತ ಮೀರಿಹೋದರೂ ಪೂರ್ಣವಾದ ದಾರಿಯನ್ನು ದಾಟಲಾಗದೆ ಹಿಂತಿರುಗ ಬೇಕಾಯಿತು. **ಆಗ ಗಾಯತ್ರಿಯು** ಮೇಲಕ್ಕೆ ಹಾರಿ **ಸೋಮರಕ್ಷಕರನ್ನು** ಬೆದರಿಸಿ ಕೊಕ್ಕಿಂದಲೂ ಕಾಲುಗಳಿಂದಲೂ ಸೋಮನನ್ನು ಹಿಡಿದುಕೊಂಡಿತು. ಆಗ ಸೋಮರಕ್ಷಕರಲ್ಲೊಬ್ಬನಾದ ಕೃಶಾನುವು ಒಂದು ಬಾಣವನ್ನು ಬಿಟ್ಟಾಗ **ಈ** ಪಕ್ಷಿಯ ಪಾಲಿನ ಒಂದು ಚೂಪಾದ ಉಗುರು **ಕತ್ತರಿಸಿ**ಹೋಯಿತು. ಆದರೂ ಸಹ **ಗಾಯತ್ರಿಯು** ತನ್ನ ಕೆಲಸವನ್ನು ಸಾಧಿಸಿತು. ಅದು ತನ್ನ ಬಲಗಾಲಿನಲ್ಲಿ ಹಿಡಿದ ಭಾಗವು **ಪ್ರಾತಸ್ಸವನವಾಗಿಯೂ,** ಎಡಗಾಲಿನಲ್ಲಿ ಹಿಡಿದ ಭಾಗವು **ಮಾಧ್ಯಂದಿನಸವನವಾಗಿಯೂ** ಕೊಕ್ಕಿನಲ್ಲಿ ಹಿಡಿದ ಭಾಗವು **ತೃತೀಯಸವನವಾಗಿಯೂ** ಪ್ರಸಿದ್ಧವಾದವು.

ಇದೇ ರೀತಿ **ಶತಸಥಬ್ರಾಹ್ಮಣದಲ್ಲಿಯೂ** ಸಹ (೧೪-೨-೧೦) **ತದ್ವೈ ಕನಿಷ್ಠಂ ಛಂದಃ ಸದ್ಗಾಯತ್ರೀ ಪ್ರಥಮಾ ಛಂದಸಾಂ ಯುಜ್ಯತೇ ತದು ತದ್ವೀರ್ಯೇಣೈವ ಯಚ್ಛ್ಯೇನೋ ಭೂತ್ವಾ ದಿವಃ ಸೋಮಮಾ-ಭರತ್ ।** ಛಂದಸ್ಸುಗಳಲ್ಲೆಲ್ಲಾ ಆಕಾರದಲ್ಲಿ ಅತ್ಯಂತ ಚಿಕ್ಕದಾದರೂ ಸಹ **ಗಾಯತ್ರಿಯು** ಎಲ್ಲಾ ಛಂದಸ್ಸುಗಳಿಗಿಂತ ಪ್ರಥಮ ಸ್ಥಾನವನ್ನು ಪಡೆಯುತ್ತದೆ. ತನ್ನ ಸ್ವಶಕ್ತಿಯಿಂದ ಶ್ಯೇನರೂಪವಾಗಿ ಪರಿವರ್ತನವನ್ನು ಹೊಂದಿ ದೇವಲೋಕದಿಂದ ಸೋಮನನ್ನು ತಂದಿತು. ಆಹುತಿಕಾಲದಲ್ಲೂ ಸಹ ಶ್ಯೇನರೂಪದ ಗಾಯತ್ರಿಯ ಸ್ತುತಿಯು ಪ್ರಸಿದ್ಧವಾಗಿದೆ. (ಶ. ಬ್ರಾ. ೩-೪-೧ ೧೨; ೩-೯-೪-೧೦). ಇದೇ ಸಂದರ್ಭದಲ್ಲಿ **ಅಗ್ನಿರ್ವೈ ಗಾಯತ್ರೀ ತದ್ಗಾಯತ್ರೈ ಕೃತ್ತಿಮಿಮೀತೇ ಸ ಯದ್ಗಾಯತ್ರೀ ಶ್ಯೇನೋ ಭೂತ್ವಾ** ಎಂದು ಅಗ್ನಿಗೂ ಗಾಯತ್ರಿಗೂ ತಾದಾತ್ಮ್ಯವನ್ನು ಹೇಳಿರುವ ವಿಷಯವನ್ನು ಮುಂದೆ ವಿವರಿಸಲಾಗುತ್ತೆ.

ಇದೇ ಆಖ್ಯಾನವು ಕೊಂಚ ಬದಲಾವಣೆಯನ್ನು ಹೊಂದಿ **ತೈತ್ತಿರೀಯ ಸಂಹಿತೆ**ಯಲ್ಲಿ ಪಠಿತವಾಗಿದೆ. **(**ತೈ. ಸಂ. ೬-೧-೬-೧) ಒಂದು ಸಲ **ಕದ್ರುವಿಗೂ ಸುಪರ್ಣಿಗೂ** ವಾಜ್ಯವಾದಾಗ **ಕದ್ರುವು** ಜಯಿಸಿದ್ದರಿಂದ ಸುಪರ್ಣಿಯು ಅವಳ ಅಧೀನಳಾಗಬೇಕಾಯಿತು. ಆಗ ಕದ್ರುವು ಸುಪರ್ಣಿಯನ್ನು ಕುರಿತು ಅಂತರಿಕ್ಷದಲ್ಲಿರುವ ಸೋಮನನ್ನು ತಸ್ಕರ ರೂಪದಿಂದ ತಂದು ಪ್ರತಿಫಲವಾಗಿ ಕೊಟ್ಟರೆ ಆಗ ಅವಳ ಬಿಡುಗಡೆಯಾಗಬಹುದೆಂದಳು. ಆಗ ಸುಪರ್ಣಿಯು ತನ್ನ ಮಕ್ಕಳಾದ ಛಂದಸ್ಸುಗಳ ಸಹಾಯವನ್ನು ಬೇಡಲಾಗಿ **ಜಗತೀ, ತ್ರಿಷ್ಟುಪ್ ಈ** ಎರಡು ಛಂದಸ್ಸುಗಳ ಪ್ರಯತ್ನವೂ ವಿಫಲವಾಗಿ **ಗಾಯತ್ರಿಯು** ಆಕಾರ್ಯವನ್ನು ಸಾಧಿಸಿತೆಂದು ತೈತ್ತಿರೀಯ ಸಂಹಿತೆಯ ಕಥೆಯಿದೆ.

ಬ್ರಹ್ಮಣಾ ವವೃಧಾನಾ—ಅಂಧಃ, ವಾಜಃ, ಪಯಃ (ನಿ. ೩-೯) ಇತ್ಯಾದಿ **ಅನ್ನನಾಮ**ಗಳಲ್ಲಿ ಪಠಿತವಾಗಿರುವುದರಿಂದ ಇಲ್ಲಿ ಹವಿಸ್ಸಿನ ರೂಪದ ಅನ್ನದಿಂದ ಎಂದಾಗಲಿ, ಅಥವಾ **ಬ್ರಹ್ಮ**ಶಬ್ದಕ್ಕೆ **ಕರ್ಮ** ಅಥವಾ **ಮಂತ್ರ**ವೆಂದು ಅರ್ಥಮಾಡಿರುವುದರಿಂದ (ನಿ. ೧೨-೩೪) ಯಾಗಾದಿ ಕರ್ಮದಿಂದ ಅಥವಾ ಮಂತ್ರದಿಂದ ಎಂದಾಗಲಿ ಅರ್ಥವಾಗಬಹುದು. ಇವುಗಳಿಂದ ವೃದ್ಧಿಯನ್ನು ಹೊಂದಿದವರಾಗಿ ಎಂದಾಗುತ್ತದೆ. ಅಥವಾ ವೃಧ್ ಧಾತುವು ಸಾಧಾರಣವಾಗಿ ಋಕ್ಸಂಹಿತೆಯಲ್ಲಿ ಪ್ರಶಂಸೆ ಎನ್ನುವ ಅಭಿಪ್ರಾಯದಲ್ಲಿ ಉಪಯೋಗಿಸಲ್ಪಡುವುದರಿಂದ ಪ್ರಶಂಸಿಸಲ್ಪಟ್ಟವರಾಗಿ ಎಂದಾದರೂ ಆಗಬಹುದು.


ಯಜ್ಞಾಯ ಉರು ಲೋಕಂ ಚಕೃಥುಃ—ಇತರ ದೇವತೆಗಳನ್ನು ಉದ್ದೇಶಿಸಿ ಮಾಡುವ ಯಾಗಕ್ಕಾಗಿ ವಿಸ್ತಾರವಾದ ಯಜ್ಞಭೂಮಿಯನ್ನು ನಿರ್ಮಿಸಿದಿರಿ ಎಂದರ್ಥ.

ವ್ಯಾಕರಣಪ್ರಕ್ರಿಯಾ

ಜಭಾರ—ಹೃಞ್ ಹರಣೇ ಧಾತು. ಲಿಟ್ ಪ್ರಥಮಪುರುಷ ಏಕವಚನದಲ್ಲಿ ತಿಪಿಗೆ **ಪರಸ್ಮೈಪದಾನಾಂ**—ಎಂಬುದರಿಂದ ಣಲಾದೇಶ. ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಉರದತ್ವ. ಚುತ್ವ. **ಅತ ಉಪಧಾಯಾಃ**—ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ. **ಹೃಗ್ರಹೋರ್ಛ್ಛಂದಸಿ**—ಎಂಬುದರಿಂದ ಹಕಾರಕ್ಕೆ ಭಕಾರಾದೇಶ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅಮಥ್ನಾತ್—ಮಂಥ ವಿಲೋಡನೇ. ಧಾತು. ಲಙ್ ಪ್ರಥಮಪುರುಷ ಏಕವಚನದಲ್ಲಿ **ಇತಶ್ಚ**—ಎಂಬುದರಿಂದ ಇಕಾರಲೋಪ. **ಕ್ರ್ಯಾದಿಭ್ಯಃ ಶ್ನಾ**—ಎಂಬುದರಿಂದ ಶ್ನಾವಿಕರಣ. **ಸಾರ್ವಧಾತುಕಮಪಿತ್**—ಎಂಬುದರಿಂದ ಇದು ಙಿತ್ತಾದುದರಿಂದ **ಅನಿದಿತಾಂ ಹಲಃ**—ಎಂಬುದರಿಂದ ಉಪಧಾ ನಕಾರಲೋಪ ಅಂಗಕ್ಕೆ ಅಡಾಗಮ. ತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತಪದವಾಗುತ್ತದೆ.

ವವೃಧಾನಾ—ವೃಧು ವೃದ್ಧೌ. ಧಾತು. ಇದಕ್ಕೆ ಲಿಟ್ ಬಂದಾಗ **ಲಿಟಃ ಕಾನಜ್ವಾ**—(ಪಾ. ಸೂ ೩-೨-೧೦೬) ಎಂಬುದರಿಂದ ಕಾನಚ್. ಧಾತುವಿಗೆ ತನ್ನಿಮಿತ್ತವಾಗಿ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಉರದತ್ವ. ಪುನಃ ಹಲಾದಿಶೇಷ. ಕಾನಚ್ ಕಿತ್ತಾದುದರಿಂದ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. ಛಾಂದಸವಾಗಿ ಅಭ್ಯಾಸಕ್ಕೆ ದೀರ್ಘ ಬರುತ್ತದೆ. ಇದಕ್ಕೆ ದ್ವಿವಚನ ಔ ಪರವಾದಾಗ **ಸುಪಾಂ ಸುಲುಕ್**—ಎಂಬುದರಿಂದ ಅದಕ್ಕೆ ಆಕಾರಾದೇಶ. ॥ ೬ ॥



ಸಂಹಿತಾಪಾಠಃ

अग्नीषोमा हविषः प्रस्थितस्य वीतं हर्यतं वृषणा जुषेथाम् ।
सुशर्माणा स्ववसा हि भूतमथा धत्तं यजमानाय शं योः ॥ ७ ॥

ಛಂದಸ್ಸುಗಳು ಪ್ರಯತ್ನಪಟ್ಟಾಗ **ಜಗತಿಯು** ಅರ್ಧದಾರಿಯಲ್ಲಿಯೇ ಸೋತುಹೋದುದರಿಂದ **ತ್ರಿಷ್ಟುಪ್** ಛಂದಸ್ಸು ಪ್ರಯತ್ನಿಸಿತು. ಇದೂ ಸಹ ಅರ್ಧದಾರಿಗಿಂತ ಮೀರಿಹೋದರೂ ಪೂರ್ಣವಾದ ದಾರಿಯನ್ನು ದಾಟಲಾಗದೆ ಹಿಂತಿರುಗ ಬೇಕಾಯಿತು. **ಆಗ ಗಾಯತ್ರಿಯು** ಮೇಲಕ್ಕೆ ಹಾರಿ **ಸೋಮರಕ್ಷಕರನ್ನು** ಬೆದರಿಸಿ ಕೊಕ್ಕಿಂದಲೂ ಕಾಲುಗಳಿಂದಲೂ ಸೋಮನನ್ನು ಹಿಡಿದುಕೊಂಡಿತು. ಆಗ ಸೋಮರಕ್ಷಕರಲ್ಲೊಬ್ಬನಾದ ಕೃಶಾನುವು ಒಂದು ಬಾಣವನ್ನು ಬಿಟ್ಟಾಗ **ಈ** ಪಕ್ಷಿಯ ಪಾಲಿನ ಒಂದು ಚೂಪಾದ ಉಗುರು ಕತ್ತರಿಸಿಹೋಯಿತು. ಆದರೂ ಸಹ **ಗಾಯತ್ರಿಯು** ತನ್ನ ಕೆಲಸವನ್ನು ಸಾಧಿಸಿತು. ಅದು ತನ್ನ ಬಲಗಾಲಿನಲ್ಲಿ ಹಿಡಿದ ಭಾಗವು **ಸ್ಯಾತಸ್ಸವನವಾಗಿಯೂ,** ಎಡಗಾಲಿನಲ್ಲಿ ಹಿಡಿದ ಭಾಗವು **ಮಾಧ್ಯಂದಿನಸವನವಾಗಿಯೂ** ಕೊಕ್ಕಿನಲ್ಲಿ ಹಿಡಿದ ಭಾಗವು **ತೃತೀಯಸವನವಾಗಿಯೂ** ಪ್ರಸಿದ್ಧವಾದವು.

ಇದೇ ರೀತಿ **ಶತಪಥಬ್ರಾಹ್ಮಣದಲ್ಲಿಯೂ** ಸಹ (೧-೪-೨-೧೦) **ತದ್ವೈ ಕನಿಷ್ಠಂ ಛಂದಃ ಸದ್ಗಾಯತ್ರೀ ಪ್ರಥಮಾ ಛಂದಸಾಂ ಯುಜ್ಯತೇ ತದು ತದ್ವೀರ್ಯೇಣೈವ ಯಚ್ಛ್ಯೇನೋ ಭೂತ್ವಾ ದಿವಃ ಸೋಮಮಾಹರತ್ ।** ಛಂದಸ್ಸುಗಳಲ್ಲೆಲ್ಲಾ ಅಕಾರದಲ್ಲಿ ಅತ್ಯಂತ ಚಿಕ್ಕದಾದರೂ ಸಪ್ತ **ಗಾಯತ್ರಿಯು** ಎಲ್ಲಾ ಛಂದಸ್ಸುಗಳಿಗಿಂತ ಪ್ರಥಮ ಸ್ಥಾನವನ್ನು ಪಡೆಯುತ್ತದೆ. ತನ್ನ ಸ್ವಶಕ್ತಿಯಿಂದ ಶ್ಯೇನರೂಪವಾಗಿ ಪರಿವರ್ತನವನ್ನು ಹೊಂದಿ ದೇವಲೋಕದಿಂದ ಸೋಮನನ್ನು ತಂದಿತು. ಆಹುತಿಕಾಲದಲ್ಲೂ ಸಹ ಶ್ಯೇನರೂಪದ ಗಾಯತ್ರಿಗು ಸ್ತುತಿಯು ಪ್ರಸಿದ್ಧವಾಗಿದೆ. (ಶ. ಬ್ರಾ. ೩-೪-೧ ೧೨; ೩-೯-೪-೧೦). ಇದೇ ಸಂದರ್ಭದಲ್ಲಿ **ಅಗ್ನಿರ್ವೈ ಗಾಯತ್ರೀ ತದ್ಗಾಯತ್ರೈ ಕೃಮಮೀತೇ ಸ ಯದ್ಗಾಯತ್ರೀ ಶ್ಯೇನೋ ಭೂತ್ವಾ** ಎಂದು ಅಗ್ನಿಗೂ ಗಾಯತ್ರಿಗೂ ತಾದಾತ್ಮ್ಯವನ್ನು ಹೇಳಿರುವ ವಿಷಯವನ್ನು ಮುಂದೆ ವಿವರಿಸಲಾಗುತ್ತೆ.

ಇದೇ ಆಖ್ಯಾನವು ಕೊಂಚ ಬದಲಾವಣೆಯನ್ನು ಹೊಂದಿ **ತೈತ್ತಿರೀಯ ಸಂಹಿತೆ**ಯಲ್ಲಿ ಪಠಿತವಾಗಿದೆ. **(**ತೈ. ಸಂ. ೬-೧-೬-೧) ಒಂದು ಸಲ **ಕದ್ರುವಿಗೂ ಸುಪರ್ಣಿಗೂ** ವಾಜ್ಯವಾದಾಗ **ಕದ್ರುವು** ಜಯಿಸಿದ್ದರಿಂದ ಸುಪರ್ಣಿಯು ಅವಳ ಅಧೀನಳಾಗಬೇಕಾಯಿತು. ಆಗ ಕದ್ರುವು ಸುಪರ್ಣಿಯನ್ನು ಕುರಿತು ಅಂತರಿಕ್ಷದಲ್ಲಿರುವ ಸೋಮನನ್ನು ತಸ್ಕರ ರೂಪದಿಂದ ತಂದು ಪ್ರತಿಫಲವಾಗಿ ಕೊಟ್ಟರೆ ಆಗ ಅವಳ ಬಿಡುಗಡೆಯಾಗಬಹುದೆಂದಳು. ಆಗ ಸುಪರ್ಣಿಯು ತನ್ನ ಮಕ್ಕಳಾದ ಛಂದಸ್ಸುಗಳ ಸಹಾಯವನ್ನು ಬೇಡಲಾಗಿ **ಜಗತೀ, ತ್ರಿಷ್ಟುಪ್ ಈ** ಎರಡು ಛಂದಸ್ಸುಗಳ ಪ್ರಯತ್ನವೂ ವಿಫಲವಾಗಿ **ಗಾಯತ್ರಿಯು** ಆಕಾರ್ಯವನ್ನು ಸಾಧಿಸಿತೆಂದು ತೈತ್ತಿರೀಯ ಸಂಹಿತೆಯ ಕಥೆಯಿದೆ.

ಬ್ರಹ್ಮಣಾ ವವೃಧಾನಾ—ಅಂಧಃ, ವಾಜಃ, ಪಯಃ (ನಿ. ೩-೯) ಇತ್ಯಾದಿ **ಅನ್ನನಾಮ**ಗಳಲ್ಲಿ ಪಠಿತವಾಗಿರುವುದರಿಂದ ಇಲ್ಲಿ ಹವಿಸ್ಸಿನ ರೂಪದ ಅನ್ನದಿಂದ ಎಂದಾಗಲಿ, ಅಥವಾ **ಬ್ರಹ್ಮ**ಶಬ್ದಕ್ಕೆ **ಕರ್ಮ** ಅಥವಾ **ಮಂತ್ರ**ವೆಂದು ಅರ್ಥಮಾಡಿರುವುದರಿಂದ (ನಿ. ೧೨-೩೪) ಯಾಗಾದಿ ಕರ್ಮದಿಂದ ಅಥವಾ ಮಂತ್ರದಿಂದ ಎಂದಾಗಲಿ ಅರ್ಥವಾಗಬಹುದು. ಇವುಗಳಿಂದ ವೃದ್ಧಿಯನ್ನು ಹೊಂದಿದವರಾಗಿ ಎಂದಾಗುತ್ತದೆ. ಅಥವಾ ಮೃಧ್ ಧಾತುವು ಸಾಧಾರಣವಾಗಿ ಋಕ್ಸಂಹಿತೆಯಲ್ಲಿ ಪ್ರಶಂಸೆ ಎನ್ನುವ ಅಭಿಪ್ರಾಯದಲ್ಲಿ ಉಪಯೋಗಿಸಲ್ಪಡುವುದರಿಂದ ಪ್ರಶಂಸಿಸಲ್ಪಟ್ಟವರಾಗಿ ಎಂದಾದರೂ ಆಗಬಹುದು.

ಯಜ್ಞಾಯ ಉರು ಲೋಕಂ ಚಕೃಥುಃ—ಇತರ ದೇವತೆಗಳನ್ನು ಉದ್ದೇಶಿಸಿ ಮಾಡುವ ಯಾಗಕ್ಕಾಗಿ ವಿಸ್ತಾರವಾದ ಯಜ್ಞಭೂಮಿಯನ್ನು ನಿರ್ಮಿಸಿದಿರಿ ಎಂದರ್ಥ.

ವ್ಯಾಕರಣಪ್ರಕ್ರಿಯಾ

ಜಭ್ರಾರ—ಹೃಞ್ ಹರಣೇ ಧಾತು. ಲಿಟ್ ಪ್ರಥಮಪುರುಷ ಏಕವಚನದಲ್ಲಿ ತಿಪಿಗೆ **ಪರಸ್ಮೈಪದಾನಾಂ**—ಎಂಬುದರಿಂದ ಣಲಾದೇಶ. ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಉರದತ್ವ. ಚುತ್ವ. **ಅತೆ ಉಪಧಾಯಾಃ**—ಎಂಬುದರಿಂದ ಧಾತುವಿನ ಉಪಧೆಗೆ ವೃದ್ಧಿ. **ಹೃಗ್ರಹೋರ್ಛಂದಸಿ**—ಎಂಬುದರಿಂದ ಹಕಾರಕ್ಕೆ ಭಕಾರಾದೇಶ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಅಮಥ್ನಾತ್—ಮಂಥ ವಿಲೋಡನೇ. ಧಾತು. ಲಙ್ ಪ್ರಥಮಪುರುಷ ಏಕವಚನದಲ್ಲಿ **ಇತಶ್ಚ**—ಎಂಬುದರಿಂದ ಇಕಾರಲೋಪ. **ಕ್ರ್ಯಾದಿಭ್ಯಃ ಶ್ನಾ**—ಎಂಬುದರಿಂದ ಶ್ನಾವಿಕರಣ. **ಸಾರ್ವಧಾತುಕಮಪಿತ್**—ಎಂಬುದರಿಂದ ಇದು ಙಿತ್ತಾದುದರಿಂದ **ಅನಿದಿತಾಂ ಹಲಃ**—ಎಂಬುದರಿಂದ ಉಪಧಾ ನಕಾರಲೋಪ ಅಂಗಕ್ಕೆ ಅಡಾಗಮ. ತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತಪದವಾಗುತ್ತದೆ.

ವವೃಧಾನಾ—ವೃಧು ವೃದ್ಧೌ. ಧಾತು. ಇದಕ್ಕೆ ಲಿಟ್ ಬಂದಾಗ **ಲಿಟಃ ಕಾನಜ್ವಾ**—(ಪಾ. ಸೂ ೩-೨-೧೦೬) ಎಂಬುದರಿಂದ ಕಾನಚ್. ಧಾತುವಿಗೆ ತನ್ನಿಮಿತ್ತವಾಗಿ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ಉರದತ್ವ. ಪುನಃ ಹಲಾದಿಶೇಷ. ಕಾನಚ್ ಕಿತ್ತಾದುದರಿಂದ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. ಛಾಂದಸವಾಗಿ ಅಭ್ಯಾಸಕ್ಕೆ ದೀರ್ಘ ಬರುತ್ತದೆ. ಇದಕ್ಕೆ ದ್ವಿವಚನ ಔ ಪರವಾದಾಗ **ಸುಸಾಂ ಸುಲುಕ್**—ಎಂಬುದರಿಂದ ಅದಕ್ಕೆ ಆಕಾರಾದೇಶ. ॥ ೬ ॥

ಸಂಹಿತಾಪಾಠಃ

ಅಗ್ನೀಷೋಮಾ ಹವಿಷಃ ಪ್ರಸ್ಥಿತಸ್ಯ ವೀತಂ ಹರ್ಯತಂ ವೃಷಣಾ ಜುಷೇಥಾಂ ।
ಸುಶರ್ಮಾಣಾ ಸ್ವವಸಾ ಹಿ ಭೂತಮಥಾ ಧತ್ತಂ ಯಜಮಾನಾಯ ಶಂ ಯೋಃ ॥ ೭ ॥

ಪದಪಾಠಃ

ಅಗ್ನೀಷೋಮಾ । ಹವಿಷಃ । ಪ್ರ ऽ ಸ್ಥಿತಸ್ಯ । ವೀತಂ । ಹರ್ಯತಂ । ವೃಷಣಾ ।
ಜುಷೇಥಾಂ ।
ಸು ऽ ಶರ್ಮಾಣಾ । ಸು ऽ ಅವಸಾ । ಹಿ । ಭೂತಂ । ಅಥ । ಧತ್ತಂ । ಯಜಮಾ-
ನಾಯ । ಶಂ । ಯೋಃ ॥ ೭ ॥

ಸಾಯಣಭಾಷ್ಯಂ

ಹೇ ಅಗ್ನಿಷೋಮೌ ಪ್ರಸ್ಥಿತಸ್ಯ ಹೋಮಾರ್ಥಮಾಹವನೀಯಸಮೀಪಂ ಪ್ರಾಪ್ತಂ ಹವಿಷ ಇದಂ ಹವಿರ್ವೀತಂ ಭಕ್ಷಯತಂ । ತದನಂತರಂ ಚ ಹರ್ಯತಂ । ಅಸ್ಮಾನ್ಕಾಮಯೇಥಾಂ । ಹೇ ವೃಷಣಾ ಕಾಮಾನಾಂ ವರ್ಷಿತಾರೌ ಜುಷೇಥಾಂ । ಅಸ್ಮದೀಯಂ ಪರಿಚರಣಂ ಸೇವೇಥಾಂ । ತದನಂತರಂ ಸುಶರ್ಮಾಣಾ ಶೋಭನಸುಖೌ ಸ್ವವಸಾ ಹಿ ಶೋಭನರಕ್ಷಣೌ ಚ ಭೂತಂ । ಅಸ್ಮಾಕಂ ಭವತಂ । ಅಥಾನಂತರಂ ಹವಿರ್ದತ್ತವತೇ ಯಜಮಾನಾಯ ಶಂ ಶಮನೀಯಾನಾಂ ರೋಗಾಣಾಂ ಶಮನಂ ಯೋಃ ಪೃಥಕ್ಕರ್ತನ್ಯಾನಾಂ ಭಯಾನಾಂ ಯಾವನಂ ಪೃಥಕ್ಕರಣಂ ಚ ಧತ್ತಂ। ವಿಧತ್ತಂ। ಕುರುತಂ। ಉಕ್ತಂ ಚ ಯಾಸ್ಕೇನ। ಶಮನಂ ಚ ರೋಗಾಣಾಂ ಯಾವನಂ ಚ ಭಯಾನಾಂ । ನಿ. ೪-೨೧ । ಇತಿ ॥ ಹವಿಷಃ । ಕ್ರಿಯಾಗ್ರಹಣಂ ಕರ್ತವ್ಯಮಿತಿ ಕರ್ಮಣಃ ಸಂಪ್ರದಾನತ್ವಾಚ್ಚತುರ್ಥ್ಯರ್ಥೇ ಷಷ್ಠೀ । ವೀತಂ । ವೀ ಗತಿಪ್ರಜನಕಾಂತ್ಯಶನಖಾದನೇಷು । ಥಸಸ್ತಂ । ಅದಾದಿತ್ವಾಚ್ಛಪೋ ಲುಕ್ । ವೀತಂ ಚ ಹರ್ಯತಂ ಚೇತಿ ಚಾರ್ಥಪ್ರತೀತೇಶ್ಚಾದಿಲೋಪೇ ವಿಭಾಷೇತಿ ಹ್ರಥಮಾಯಾಸ್ತಿಙ್ವಿಭಕ್ತೇರ್ನಿಘಾತಪ್ರತಿಷೇಧಃ । ಹರ್ಯತಂ । ಪಾದಾದಿತ್ವಾನ್ನಿಘಾತಾಭಾವಃ। ಜುಷೇಥಾಂ । ವೃಷಣೇತ್ಯಾಮಂತ್ರಿತಸ್ಯಾಮಂತ್ರಿತಂ ಪೂರ್ವಮಿತ್ಯವಿದ್ಯಮಾನವತ್ತ್ವೇ ಸತಿ ತಿಙಃ ಪರತ್ವಾನ್ನಿಘಾತಾಭಾವಃ । ಸುಶರ್ಮಾಣಾ ಸ್ವವಸಾ । ಉಭಯತ್ರ ಬಹುವ್ರೀಹೌ ಸೋರ್ಮನಸೀ ಅಲೋಮೋಷಸೀ ಇತ್ಯುತ್ತರಪದಾಗ್ಯುದಾತ್ತತ್ವಂ । ಭೂತಂ । ಲೋಟಿ ಬಹುಲಂ ಛಂದಸೀತಿ ಶಪೋ ಲುಕ್ ॥ ೭

॥ ಪ್ರತಿಪದಾರ್ಥ ॥

ಅಗ್ನಿಷೋಮಾ—ಎಲೈ ಅಗ್ನಿ ಮತ್ತು ಸೋಮ ದೇವತೆಗಳೇ । **ಪ್ರಸ್ಥಿತಸ್ಯ**—(ಆಹವಪ್ರೀಯಾಗ್ನಿಯನ್ನು) ಸೇರಿದ । **ಹವಿಷಃ**—ಹವಿಸ್ಸನ್ನು । **ವೀತಂ**—ಭಕ್ಷಿಸಿರಿ । **ಹರ್ಯತಂ**—(ನಮ್ಮಮೇಲೆ) ಕೃಪೆನೂಡಿ. ಅಥವಾ ಈ ಹವಿಸ್ಸನ್ನು ಇಚ್ಛಿಸಿ ಭಕ್ಷಿಸಿರಿ । **ವೃಷಣಾ**—ಇಷ್ಟಾರ್ಥಗಳನ್ನು ಸುರಿಸುವವರಾಗಿ । **ಜುಷೇಥಾಂ**—(ನಮ್ಮ ಸೇವೆಯನ್ನು) ಸ್ವೀಕರಿಸಿ ಸೇವಿಸಿ । **ಸುಶರ್ಮಾಣಾ**— ಶ್ರೇಷ್ಠವಾದ ಸುಖದಾತರೂ । **ಸ್ವವಸಾ ಹಿ**—ಉತ್ತಮವಾದ ರಕ್ಷಣೆಯನ್ನು ಕೊಡುವವರೂ । **ಭೂತಂ**—(ನಮ್ಮ ವಿಷಯದಲ್ಲಿ) ಆಗಿರಿ । **ಅಥ**—ಅನಂತರ । **ಯಜಮಾನಾಯ**

ಯೆಜ್ಞಕರ್ತನಿಗೆ । **ಶಂ**—(ರೋಗರಹಿತವಾದ) ಸುಖವನ್ನೂ । **ಯೋಃ** -- ಭಯರಾಹಿತ್ಯರೂಪವಾದ ಸುಖವನ್ನು । **ಧತ್ತಂ**—ಉಂಟುಮಾಡಿರಿ ॥

॥ ಭಾವಾರ್ಥ ॥

ಎಲೈ ಅಗ್ನೀಷೋಮದೇವತೆಗಳೇ, ಆಹವನೀಯಾಗ್ನಿಯಲ್ಲಿ ಅರ್ಪಿಸಿದ ನಮ್ಮ ಹವಿಸ್ಸುಗಳನ್ನು ಭಕ್ಷಿಸಿರಿ. ನಮ್ಮಮೇಲೆ ಕೃಪೆಮಾಡಿ ನಮ್ಮ ಇಷ್ಟಾರ್ಥಗಳನ್ನು ಸುರಿಸುವವರಾಗಿ ನಮ್ಮ ಉಪಚಾರಗಳನ್ನು ಸ್ವೀಕರಿಸಿ ನಮಗೆ ಶ್ರೇಷ್ಠವಾದ ಸುಖದಾತರೂ, ಉತ್ತಮವಾದ ರಕ್ಷಣೆಯನ್ನು ಕೊಡುವವರಾಗಿ ಮತ್ತು ಹವಿಸ್ಸನ್ನು ಅರ್ಪಿಸುವ ಯಜ್ಞಕರ್ತನಿಗೆ ರೋಗರಹಿತವೂ ಮತ್ತು ಭಯರಹಿತವೂ ಆದ ಸುಖವನ್ನು ಉಂಟುಮಾಡಿರಿ ॥

English Translation

Agni and Soma, partake of the proffered oblations ; be gracious to us ; showerers of desires, be pleased ; prosperous and deligent protectors, be propitious and grant to the sacrificer health exemption from ill.

॥ ವಿಶೇಷವಿಷಯಗಳು ॥

ಪ್ರಸ್ಥಿತಸ್ಯ—ಆಹವನೀಯಾಗ್ನಿಯನ್ನು ಸೇರಿದ ಅಂದರೆ ಅದರಲ್ಲಿ ಅರ್ಪಿಸಲ್ಪಟ್ಟ ಎಂದರ್ಥವು.

ವೀತಂ—ವೀತಂ-ಅಶ್ನೀತಂ । (ನಿ. ೪-೧)ಕ್ಷ ಭಕ್ಷಿಸಿರಿ.

ಶಂಯೋಃ—ಸುಖಂ ಯುಃ (ನಿ. ೪-೨೧) **ಶಮನಂ ಚ ರೋಗಾಣಾಂ ಯಾವನಂ ಚ ಭಯಾನಾಂ** । ಅಂದರೆ ರೋಗಗಳ ಶಮನರೂಪವಾದ ಸುಖವೂ ಭಯದ ನಿವಾರಣಾರೂಪವಾದ ಸುಖವೂ ಎಂದರ್ಥವು ನಮ್ಮ ರೋಗಗಳನ್ನು ಶಮನಮಾಡಿ ಭಯವನ್ನು ನಿವಾರಿಸು ಎಂದಭಿಪ್ರಾಯವು. ತಚ್ಛಂಯೋರಾವೃಣೀಮಹೇ (ತೈ.ಸಂ. ೨-೬-೧೦-೨) ಎಂಬಲ್ಲಿ ಶಂಯುವೆಂದರೆ ಬೃಹಸ್ಪತಿ ಪುತ್ರನೆಂದರ್ಥವು ಆದರೆ ಇಲ್ಲಿ ಮಾತ್ರ ಸುಖದಾತರೆಂದಾಗುತ್ತದೆ.

ವ್ಯಾಕರಣಪ್ರಕ್ರಿಯಾ

ಹವಿಷಃ - ಸಂಪ್ರದಾನ ಸಂಜ್ಞಾಸೂತ್ರದಲ್ಲಿ **ಕ್ರಿಯಾಗ್ರಹಣಂ ಕರ್ತವ್ಯಮ್**—ಎಂಬ ವಚನವಿರುವುದರಿಂದ ಕರ್ಮಕ್ಕೆ ಸಂಪ್ರದಾನ ಸಂಜ್ಞಾ ಬರುವುದರಿಂದ **ಚತುರ್ಥ್ಯರ್ಥೇ ಷಷ್ಠೀ** ಬಂದಿದೆ.

ವೀತಮ್—ವೀ ಗತಿಪ್ರಜನಕಾಂತ್ಯಶನಖಾದನೇಷು. ಧಾತು. ಅದಾದಿ. ಲೋಟ್ ಮಧ್ಯಮ ಪುರುಷ ದ್ವಿವಚನದಲ್ಲಿ ಲಬ್ಧಾದ್ಯಾವವಿರುವುದರಿಂದ **ತಸ್ಥಸ್ಥ**—ಎಂಬುದರಿಂದ ತಮಾದೇಶ **ಅದಿಪ್ರಭೃತಿಭ್ಯಃ ಶಪಃ** ಎಂಬುದರಿಂದ ಶಪಿಗೆ ಲುಕ್. ವೀತಂ ಚ ಹರ್ಯತಂ ಚ ಎಂದು ಅನ್ವಯಮಾಡುವಾಗ ಚಾರ್ಧ ತೋರುವುದರಿಂದ **ಚಾದಿಲೋಪೇ ವಿಭಾಷಾ** (ಪಾ. ಸೂ ೪-೧-೬೩) ಎಂಬುದರಿಂದ ಮೊದಲಿನಲ್ಲಿರುವುದರಿಂದ ನಿಘಾತಸ್ವರ ಪ್ರತಿಷೇಧ ಬಂತ್ತದೆ. ಆಗ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ಹರ್ಯತಮ್—ಹರ್ಯ ಗತಿಕಾಂತ್ಯೋಃ ಧಾತು. ಭ್ವಾದಿ. ಕಾಂತಿಯೆಂದರೆ ಇಚ್ಛಾ. ಹಿಂದಿನಂತೆ ಲೋಣ್ಮಧ್ಯಮಪುರುಷ ದ್ವಿವಚನರೂಪ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. **ಶಪ್** ಪಿತ್ತಾದುದರಿಂದ ಅನುದಾತ್ತ. ಅದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು **ತಾಸ್ಯನುದಾತ್ತೇತ್**—ಸೂತ್ರದಿಂದ ಅನುದಾತ್ತವಾಗುವುದರಿಂದ ಧಾತುಸ್ವರ ಉಳಿಯುತ್ತದೆ.

ವೃಷಣಾ—ಇದಕ್ಕೆ ಪ್ರಥಮಾ ದ್ವಿವಚನ ಔ ಪರವಾದಾಗ ಅದಕ್ಕೆ **ಸುಸಾಂ ಸುಲುಕ್**—ಸೂತ್ರದಿಂದ ಆಕಾರಾದೇಶ. **ಬಹುಲಂ ಛಂದಸಿ**—ಎಂಬುದರಿಂದ ಉಪಧಾದೀರ್ಘ ಬರುವುದಿಲ್ಲ.

ಜುಷೇಥಾಮ್—ಜುಷೀ ಪ್ರೀತಿಸೇವನಯೋಃ ಧಾತು ಅನುದಾತ್ತೇತ್ತಾದುದರಿಂದ ಆತ್ಮನೇಪದಿ ಲೋಣ್ಮಧ್ಯಮಪುರುಷ ದ್ವಿವಚನರೂಪ. ಇದರ ಪೂರ್ವದಲ್ಲಿ ಆಮಂತ್ರಿತಸಂಜ್ಞೆ ಇರುವ ವೃಷಣಾ ಎಂಬ ಪದ ವಿರುವುದರಿಂದ **ಆಮಂತ್ರಿತಂ ಪೂರ್ವಮವಿದ್ಯಮಾನವತ್**—ಎಂಬುದರಿಂದ ಅವಿದ್ಯಮಾನವದ್ಭಾವವಿರುವುದರಿಂದ ಅದರ ಹಿಂದೆ ತಿಙಂತವಿರುವುದರಿಂದ **ಆತಿಙಃ**—ಎಂದು ನಿಷೇಧಮಾಡಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಮಧ್ಯೋದಾತ್ತವಾಗುತ್ತದೆ.

ಸುಶರ್ಮಣಾ, ಸ್ವವಸಾ— ಈ ಎರಡುಶಬ್ದಗಳೂ ಬಹುವ್ರೀಹಿಸಮಾಸದಿಂದ ನಿಷ್ಪನ್ನವಾದುದರಿಂದ ಮನ್ನಂತ, ಅಸಂತವಾಗಿರುವುದರಿಂದಲೂ **ಸೋರ್ಮನಸೀ ಅಲೋಪೋಷಸೀ** — (ಪಾ. ಸೂ. ೬-೨-೧೧೭) ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

ಭೂತಮ್—ಭೂ ಸತ್ತಾಯಾಂ ಧಾತು. ಲೋಣ್ಮಧ್ಯಮಪುರುಷದ್ವಿವಚನದಲ್ಲಿ ತಮಾದೇಶ. **ಬಹುಲಂ ಛಂದಸಿ** ಎಂಬುದರಿಂದ ಶಪ್‌ವಿಕರಣಕ್ಕೆ ಲುಕ್. **ಸಾರ್ವಧಾತುಕಮಪಿತ್**—ಎಂಬುದರಿಂದ ಪ್ರತ್ಯಯಕ್ಕೆ ಜಿತ್ವವಿರುವುದರಿಂದ ಧಾತುವಿನ ಇಕಿಗೆ ತನ್ನಿಮಿತ್ತವಾಗಿ ಗುಣ ಬರುವುದಿಲ್ಲ. ಹಿ ಎಂಬುದರ ಯೋಗವಿರುವುದರಿಂದ **ಹಿಚ** (ಪಾ. ಸೂ. ೮-೧-೩೪) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ॥ ೭ ॥

———:೦:———

॥ ಸಂಹಿತಾಪಾಠಃ ॥

ಯೋ ಅಗ್ನೀಷೋಮಾ ಹವಿಷಾ ಸಪರ್ಯಾದ್ದೇವದ್ರೀಚಾ ಮನಸಾ ಯೋ ಘೃತೇನ।

ತಸ್ಯ ವ್ರತಂ ರಕ್ಷತಂ ಪಾತಮಂಹಸೋ ವಿಶೇ ಜನಾಯ ಮಹಿ ಶರ್ಮ ಯಚ್ಛತಂ ॥ ೮ ॥

ಪದಪಾಠಃ

ಯಃ । ಅಗ್ನೀಷೋಮಾ । ಹವಿಷಾ । ಸಪರ್ಯಾತ್ । ದೇವದ್ರೀಚಾ । ಮನಸಾ ।
ಯಃ । ಘೃತೇನ ।
ತಸ್ಯ । ವ್ರತಂ । ರಕ್ಷತಂ । ಪಾತಂ । ಅಂಹಸಃ । ವಿಶೇ । ಜನಾಯ । ಮಹಿ ।
ಶರ್ಮ । ಯಚ್ಛತಂ ॥ ೮ ॥

॥ ಸಾಯಣಭಾಷ್ಯಂ ॥

ಯೋ ಯಜಮಾನೋಽಗ್ನೀಷೋಮಾ ಅಗ್ನೀಷೋಮೌ ದೇವದ್ರೀಚಾ ದೇವಾನಂಚತಾ ದೇವತಾಪರಾಯಣೇನ ಶ್ರದ್ಧಾಯುಕ್ತೇನ ಮನಸಾಂತಃಕರಣೇನ ಯುಕ್ತಃ ಸನ್ ಹವಿಷಾ ಚರುಪುರೋಡಾಶಾದಿನಾ ಸಪರ್ಯಾತ್ ಸಪರ್ಯತಿ ಪರಿಚರತಿ । ಯಶ್ಚ ಯಜಮಾನೋ ಘೃತೇನಾಜ್ಯೇನಾಗ್ನೀಷೋಮೌ ಪರಿಚರತಿ । ತಸ್ಯ ಯಜಮಾನಸ್ಯ ವ್ರತಂ ಕರ್ಮ ರಕ್ಷತಂ । ಅಂಹಸಃ ಪಾಪಾತ್ತ್ವಂ ಚ ಯಜಮಾನಂ ಪಾತಂ । ರಕ್ಷತಂ । ವಿಶೇ ಯಾಗೇಷು ಪ್ರವಿಶತೇ ತಸ್ಮೈ ಜನಾಯ ಯಜಮಾನಾಯ ಮಹಿ ಮಹತ್ತ್ವಭೂತಂ ಶರ್ಮ ಸುಖಂ ಯಚ್ಛತಂ । ದತ್ತಂ ॥ ಅಗ್ನಿಷೋ ಮಾ । ದೇವತಾದ್ವಂದ್ವೇ ಚೇತ್ಯುಭಯಪದಪ್ರಕೃತಿಸ್ವರತ್ವಂ । ಸಪರ್ಯಾತ್ । ಸಪರ ಪೂಜಾಯಾಂ । ಕಂಡ್ವಾದಿಃ । ಲೇಟ್ಯಾಡಾಗಮಃ । ದೇವದ್ರೀಚಾ । ಸೇವಾನಂಚತೀತಿ ಸೇವದ್ರ್ಯಙ್ । ಅಂಚತೇರ್ಗತ್ಯರ್ಥಗ್ರಹಣಾದಿನಾ ಕ್ವಿನ್ । ಅನಿದಿತಾಮಿತಿ ನಲೋಪಃ । ವಿಷಗ್ದೇವಯೋಶ್ಚ ಟೇರದ್ರ್ಯಂಚತಾವಪ್ರತ್ಯಯೇ । ಪಾ.-೬-೩-೯೨ । ಇತಿ ದೇವಶಬ್ದಸ್ಯ ಟೇರದ್ರ್ಯಾದೇಶಃ । ತೃತೀಯೈಕವಚನೇಽಚ ಇತ್ಯಾಕಾರಲೋಪೇ ಚಾವಿತಿ ದೀರ್ಘತ್ವಂ । ಕೃದುತ್ತರಪದಪ್ರಕೃತಿಸ್ವರತ್ವೇ ಪ್ರಾಪ್ತೇಽದ್ರಿಸಧ್ರ್ಯೇರಂತೋದಾತ್ತನಿಪಾತನಂ ಕೃತ್ಸ್ವರನಿವೃತ್ತ್ಯರ್ಥಂ । ಪಾ. ೬-೩-೫೫-೧ । ಇತಿ ವಚನಾದದ್ರ್ಯಾದೇಶೋಽಂತೋದಾತ್ತಃ । ವಿಶೇ । ಸಾನೇಕಾಚ ಇತಿ ವಿಭಕ್ತೇರುದಾತ್ತತ್ವಂ ॥

ಪ್ರತಿಪದಾರ್ಥ

ಅಗ್ನೀಷೋಮಾ – ಎಲೈ ಅಗ್ನಿ ಮತ್ತು ಸೋಮದೇವತೆಗಳೇ, । ಯಃ—ಯಾವ ಯಜಮಾನನು । ದೇವದ್ರೀಚಾ—ದೇವತಾಪರನಾದ ಭಕ್ತಿಶ್ರದ್ಧೆಯುಳ್ಳ । ಮನಸಾ—ಅಂತಃಕರಣದೊಡನೆ ಕೂಡಿ । ಹವಿಷಾ—

ಚರುಪುರೋಡಾಶಾದಿಗಳಿಂದ । ಸಪರ್ಯಾತ್—ಪೂಜಿಸುತ್ತಾನೋ, (ಮತ್ತು) । **ಯಃ**—ಯಾವ ಯಜಮಾನನು । **ಘೃತೇನ**—ಆಜ್ಯಾಹುತಿಯಿಂದ (ಪೂಜಿಸುತ್ತಾನೋ) । **ತಸ್ಯ**—ಅಂತಹ (ಎಲ್ಲಾ) ಯಜಮಾನರ । **ವ್ರತಂ**—ಕರ್ಮವನ್ನು । **ರಕ್ಷತಂ**—ರಕ್ಷಿಸಿರಿ. । **ಅಂಹಸಃ**—ಪಾಪದಿಂದ । **ಪಾತಂ**—(ಅವನನ್ನು) ರಕ್ಷಿಸಿ. । **ನಿಶೇ**—ಯಜ್ಞಕರ್ಮದಲ್ಲಿ ಪ್ರವೇಶಿಸಿದ । **ಜನಾಯ**—ಯಜಮಾನನಿಗೆ । **ಮಹಿ**—ಪ್ರಭೂತವಾದ । **ಶರ್ಮ**—ಸುಖವನ್ನು । **ಯಚ್ಛತಂ**—ಕೊಡಿರಿ. ।

ಭಾವಾರ್ಥ

ಎಲೈ ಅಗ್ನೀಷೋಮದೇವತೆಗಳೇ, ಯಾವ ಯಜಮಾನನು ದೇವತೆಗಳಲ್ಲಿ ಅತ್ಯಂತವಾಗಿ ಭಕ್ತಿಶ್ರದ್ಧೆಯನ್ನಿಟ್ಟು ಚರುಪುರೋಡಾಶಾದಿಗಳಿಂದ ಪೂಜಿಸುತ್ತಾನೋ ಮತ್ತು ಯಾವ ಯಜಮಾನನು ದೇವತೆಗಳನ್ನು ಆಜ್ಯಾಹುತಿಯಿಂದ ಪೂಜಿಸುತ್ತಾನೆಯೋ ಆ ಎಲ್ಲಾ ಯಜಮಾನರ ಕರ್ಮಗಳನ್ನು ರಕ್ಷಿಸಿ ಅವರನ್ನು ಪಾಪದಿಂದ ಬಿಡುಗಡೆಮಾಡಿ. ಯಜ್ಞಕರ್ಮದಲ್ಲಿ ಪ್ರವೇಶಿಸಿದ ಆ ಯಜಮಾನನಿಗೆ ಪ್ರಭೂತವಾದ ಸುಖವನ್ನು ಕೊಡಿರಿ.

English Translation

Agni and Soma, protect his sacrifice and defend him from ill, who with a mind devoted to the gods, worships you with clarified butter and oblations ; grant to the man engaged in devotion extreme happiness.

ವಿಶೇಷವಿಷಯಗಳು

ದೇವದ್ರೀಚಾ—**ದೇವಾನ್ ಅಂಚತಾ ದೇವತಾಪರಾಯಣೇನ ಶ್ರದ್ಧಾಯುಕ್ತೇನ** । ಅನನ್ಯಮನಸವಾಗಿ ದೇವತೆಗಳಲ್ಲಿಯೇ ಶ್ರದ್ಧಾಭಕ್ತಿಗಳನ್ನಿಟ್ಟು ಅವರ ಸೇವೆಯಲ್ಲಿಯೇ ತತ್ಪರವಾಗಿ ಅವರನ್ನೇ ಸೇರುವ ಮನಸ್ಸಿನಿಂದ ಎಂದರ್ಥವು.

ವ್ರತಂ ರಕ್ಷತಂ—ಯಾಗಾದಿ-ಕರ್ಮಗಳನ್ನು ಅಸುರರ ಹಿಂಸೆಯಿಂದ ರಕ್ಷಿಸಿ ಯಾಗವು ಪೂರ್ಣವಾಗಿ ನೆರವೇರುವಂತೆ ಮಾಡಿರಿ

ಪಾತಂ ಅಂಹಸಃ—ಅನೇಕ ವಿಧವಾದ ನ್ಯೂನತೆಗಳು ಯಾಗದಲ್ಲಾಗಲೀ ಅಥವಾ ಇತರ ಕಾಲಗಳಲ್ಲಾಗಲಿ ಕಂಡುಬಂದರೆ ಅವೆಲ್ಲವೂ ಪಾಪಕಾರ್ಯಗಳಾದುದರಿಂದ ತಮ್ಮನ್ನು ವಿಾರಿ ಪ್ರಾಪ್ತವಾಗುವ ಇಂತಹ ನ್ಯೂನತೆಗಳನ್ನು ತಪ್ಪಿಸಿ ಪಾಪದಿಂದ ತಪ್ಪಿಸಿರಿ ಎಂದರ್ಥವು. ಯಜ್ಞಕರ್ತರಿಗೆ ಇಂತಹ ಪಾಪಭೀತಿಯು ಬಹಳವಾಗಿದ್ದುದರಿಂದ ಅಗ್ನಿಯನ್ನೂ ಮತ್ತು ಸೋಮನನ್ನೂ ಈ ರೀತಿ ಪದೇ ಪದೇ ಪ್ರಾರ್ಥಿಸುವ ಉದಾಹರಣೆಗಳು ಅನೇಕವಿವೆ—

ಯಚ್ಛಿದ್ರಿ ತೇ ಪುರುಷತ್ರಾ ಯವಿಷ್ಠಾಚಿತ್ತಿಭಿಶ್ಚಕೃಮಾ ಕಚ್ಚಿದಾಗಃ ।
ಕೃಧೀ ಷ್ವಸ್ಮಾ ಅದಿತೇರನಾಗಾನ್ವೈನಾಂಸಿ ಶಿಶ್ರಥೋ ವಿಷ್ವಗಗ್ನೇ ॥
(ಋ. ಸಂ. ೪-೧೨-೪)

ಯತ್ತೇ ವಯಂ ಪ್ರಮಿನಾಮ ವ್ರತಾನಿ ಸ ನೋ ಮೃಳ ಸುಷಖಾ ದೇವ ವಸ್ಯಃ ।
(ಋ. ಸಂ- ೮-೪೮-೯)

ಇತ್ಯಾದಿ ಋಕ್ಕುಗಳಲ್ಲಿ ವ್ರತಲೋಪದಿಂದಲಾಗಲೀ ಇತರ ವಿಧದಿಂದಾಗಲೀ ಸಂಭವಿಸುವ ಪಾಪದಿಂದ ರಕ್ಷಿಸ ಬೇಕೆಂದು ಅಗ್ನೀಷೋಮರನ್ನು ಪ್ರಾರ್ಥಿಸಿರುವುದು ಕಂಡುಬರುವುದು.

ವಿಶೇ ಜನಾಯೈ—ಇಲ್ಲಿ ಎರಡು ವಿಧವಾದ ಅರ್ಥಕ್ಕೆ ಅವಕಾಶವಿದೆ. **ವಿಶೇ ಯೋಗೇಷು ಪ್ರವಿಶತೇ । ಜನಾಯೈ ಯಜಮಾನಾಯೈ ।** ಎಂದರೆ ಯಾಗಕರ್ಮಗಳಲ್ಲಿ ಪ್ರವೇಶಿಸಿ ದೇವತೆಗಳನ್ನು ಪೂಜಿಸುತ್ತಿರುವ ಯಜ ಮಾನನಿಗೆ (ಸುಖವನ್ನು ಕೊಡಿರಿ) ಎಂದು ಸಾಯಣರು ವಿವರಿಸುತ್ತಾರೆ. ಆದರೆ ಸ್ವಂದಸ್ವಾಮಿಗಳು, **ವಿಶೇ । ಮನುಷ್ಯನಾಮೈತತ್ । ಪುತ್ರಾದಿಮನುಷ್ಯಜಾತಸ್ಯಭೂತಾಯ ಯಜಮಾನಾಯ ।** ಎಂದರೆ **ವಿಶ** ಶಬ್ದವ್ಕು **ಮನುಷ್ಯಾಃ, ನರಃ, ಧನಾಃ** ಇತ್ಯಾದಿ ಮನುಷ್ಯನಾಮಗಳಲ್ಲಿ ಪಠಿತವಾಗಿರುವುನರಿಂದ (ನಿ.೩-೭) **ವಿಶೇ** ಎಂಬುದಕೆ ಪುತ್ರಪೌತ್ರಾದಿಗಳಿಂದ ಕೂಡಿದ **ಜನಾಯೈ ।** ಯಜಮಾನನಿಗೆ ಎಂದು ಅರ್ಥಮಾಡುತ್ತಾರೆ.

॥ ವ್ಯಾಕರಣಪ್ರಕ್ರಿಯಾ ॥

ಅಗ್ನೀಷೋಮಾ — ಸುಪಾಂ ಸುಲುಕ್—ಎಂಬುದರಿಂದ ದ್ವಿತೀಯಾದ್ವಿವಚನಕ್ಕೆ ಆಕಾರಾದೇಶ. **ದೇವತಾದ್ವಂದ್ವೇ ಚ**—(ಪಾ. ಸೂ. ೬-೩-೧೪೧) ಎಂಬುದರಿಂದ ಉಭಯಪದ ಪ್ರಕೃತಿಸ್ವರ ಬರುತ್ತದೆ.

ಸಪರ್ಯಾತ್—ಸಪರ ಪೂಜಾಯಾಂ. ಧಾತು. ಕಂಡ್ವಾದಿ. ಲೇಟ್ ಪ್ರಥಮಪುರುಷ ಏಕವಚನದಲ್ಲಿ ತಿಪಿನ ಇಕಾರಕ್ಕೆ **ಇತಶ್ಚ ಲೋಪಃ**—ಎಂಬುದರಿಂದ ಲೋಪ. **ಲೇಟೋ ಡಾಟೌ**—ಎಂಬುದರಿಂದ ಅದಕ್ಕೆ ಆಡಾ ಗಮ. **ಕಂಡ್ವಾದಿಭ್ಯೋ ಯಕ್**–(ಪಾ. ಸೂ. ೩-೧-೨೭) ಎಂಬುದರಿಂದ ಸ್ವಾರ್ಥದಲ್ಲಿ **ಯಕ್. ಸನಾದ್ಯಂತಾ ಧಾತವಃ**—ಎಂಬುದರಿಂದ ಯಗಂತಕ್ಕೆ ಧಾತುಸಂಜ್ಞೆ ಬರುವುದರಿಂದ ಇದರ ಮೇಲೆ ಲೇಟ್ ಲಕಾರವನ್ನು ಹೇಳ ಬೇಕು. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಯಕ್‌ಸ್ವರ ಉಳಿಯುತ್ತದೆ.

ದೇವದ್ರೀಚಾ—ದೇವಾನ್ ಅಂಚತಿ ಇತಿ ದೇವದ್ರ್ಯಙ್. ಅಂಚು ಗತಿಪೂಜನಯೋಃ ಧಾತು. ಇದಕ್ಕೆ ದೇವರೂಪ ಸುಬಂತವು ಉಪಪದವಾಗಿರುವಾಗ **ಋತ್ವಿಕ್‌ದಧೃಕ್**—ಎಂಬುದರಿಂದ ಕ್ವಿನ್‌ಪ್ರತ್ಯಯ. **ಅನಿದಿತಾಂ ಹಲ ಉಪಧಾಯಾಃ**—ಎಂಬುದರಿಂದ ಉಪಧಾನ ಕಾರಕ್ಕೆ ಲೋಪ. ಅಪ್ರತ್ಯಯಾಂತ ಅಂಚುಧಾತುವು ಪರದಲ್ಲಿರು ವುದರಿಂದ ದೇವ ಶಬ್ದಕ್ಕೆ **ವಿಷ್ವಕ್‌ದೇವಯೋಶ್ಚ , ಟೇರದ್ರ್ಯಂಚತಾವಪ್ರತ್ಯಯೇ** (ಪಾ. ಸೂ. ೬-೩-೯೨) ಎಂಬುದರಿಂದ ಅದ್ರ್ಯಾದೇಶ. (ಟಗೆ ಮಾತ್ರ) ತೃತೀಯಾವಿಕವಚನದಲ್ಲಿ ಟಾಪ್ರತ್ಯಯ. ದೇವದ್ರ್ಯಙ್+ಆ ಎಂದಿರುವಾಗ **ಅಚಿಃ** (ಪಾ. ಸೂ. ೬-೪-೧೩೮) ಎಂಬುದರಿಂದ ಧಾತುವಿನ ಅಕಾರಕ್ಕೆ **ಟೇಃ** ಲೋಪ (ಪಾ. ಸೂ. ೬-೩-೧೩೮) ಲುಪ್ತಾಕಾರ ನಕಾರವುಳ್ಳ ಅಂಚುಧಾತುವು ಪರವಾದಾಗ ಪೂರ್ವಪದಕ್ಕೆ ದೀರ್ಘ ಎಂಬುದರಿಂದ ದೇವದ್ರಿ ಎಂಬುದಕ್ಕೆ ದೀರ್ಘ. ದೇವದ್ರೀಚಾ ಎಂದು ರೂಪನಾಗುತ್ತದೆ. **ಗತಿಕಾರಕೋಪಪದಾತ್ ಕೃತ್**—ಎಂಬುದ ರಿಂದ ಕೃದುತ್ತರಪದ ಪ್ರಕೃತಿಸ್ವರವು ಪ್ರಾಪ್ತವಾದರೆ **ಆದ್ಯುದಾತ್ತೋ ಯೋರಂತೋದಾತ್ತನಿಪಾತನಂ ಕೃತ್‌ಸ್ವರ ನಿವೃತ್ತ್ಯರ್ಥಮ್**–(ಪಾ. ಸೂ. ೬-೩-೯೫-೧) ಎಂಬ ವಚನದಿಂದ ಅದ್ರ್ಯಾದೇಶವು ಅಂತೋದಾತ್ತವಾಗುತ್ತದೆ

ಪಾತಮ್—ಪಾ ರಕ್ಷಣೇ ಧಾತು. ಲೋಣ್ಮಧ್ಯಮಪುರುಷದ್ವಿವಚನರೂಪ. ಅದಾದಿ. ತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

ವಿಶೇ—ವಿಶ ಪ್ರವೇಶನೇ. ಧಾತು. ಕ್ವಿಪ್ ಪ್ರತ್ಯಯ. ಚತುರ್ಥೀವಿಭಕ್ತಿವಚನಾಂತರೂಪ. **ಸಾವೇಕಾಚಸ್ತೃತೀಯಾದಿಃ**–(ಪಾ. ಸೂ. ೬-೧-೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಯಚ್ಛತಮ್—ದಾಣ್ ದಾನೇ ಧಾತು. ಲೋಣ್ಮಧ್ಯಮಪುರುಷದ್ವಿವಚನರೂಪ. **ಸಾಘ್ವಾದ್ಧಾ**–(ಪಾ. ಸೂ. ೭-೩-೭೮) ಎಂಬುದರಿಂದ ಧಾತುವಿಗೆ ಯಚ್ಛ ಎಂಬ ಆದೇಶ ಬರುತ್ತದೆ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೮ ॥

ಸಂಹಿತಾಪಾಠಃ

ಅಗ್ನೀಷೋಮಾ ಸವೇದಸಾ ಸಹೂತೀ ವನತಂ ಗಿರಃ।
ಸಂ ದೇವತ್ರಾ ಬಭೂವಥುಃ ॥ ೯ ॥

॥ ಪದಪಾಠಃ ॥

ಅಗ್ನೀಷೋಮಾ । ಸಽವೇದಸಾ । ಸಹೂತೀ ಇತಿ ಸಽಹೂತೀ । ವನತಂ । ಗಿರಃ ।
ಸಂ । ದೇವಽತ್ರಾ । ಬಭೂವಥುಃ ॥ ೯ ॥

॥ ಸಾಯಣಭಾಷ್ಯಂ ॥

ಪೌರ್ಣಮಾಸಯಾಗೇಽಗ್ನೀಷೋಮೀಯಸ್ಯ ಯಾಗಸ್ಯಾಗ್ನೀಷೋಮೇತ್ಯೇಷಾನುವಾಕ್ಯಾ । ತಥಾ ಚ ಸೂತ್ರಿತಮುಕ್ತಾ ದೇವತಾ ಇತಿ ಖಂಡೇ । ಅಗ್ನೀಷೋಮಾ ಸವೇದಸಾ ಯುವಮೇತಾನಿ ದಿವಿ ರೋಚನಾನಿ । ಆ॥ - ೧-೬ । ಇತಿ

ಹೇ ಅಗ್ನೀಷೋಮೌ ಯುವಾಂ ಸವೇದಸಾ ಸಮಾನೇನೈಕೇನ ವೇದಸಾ ಹವಿರ್ಲಕ್ಷಣೇನ ಧನೇನ ಯುಕ್ತೌ ಸಹೂತೀ ಸಮಾನಹ್ವಾನೌ ಚ ಸಂತೌ ಗಿರೋಽಸ್ಮದೀಯಾಃ ಸ್ತುತೀರ್ವನತಂ । ಸಂಭ–

ಜೇಥಾಂ । ದೇವತ್ರಾ ದೇವೇಷು ಸರ್ವೇಷು ಯೌ ಯುವಾಂ ಸಂ ಬಭೂವಥುಃ ಸಂಭೂತೌ ಸಂಭಾವಿತೌ ಪ್ರಶಸ್ತೌ ಸ್ಥಃ । ರಾಜಾನೌ ವಾ ಏತೌ ದೇವತಾನಾಂ ಯದಗ್ನೀಷೋಮಾವಿತಿ ಶ್ರುತೇಃ ॥ ಸನೇದಸಾ । ಸಮಾನ್ಯಂ ವೇದೋ ಯಯೋಃ । ಸಮಾನಸ್ಯ ಚ್ಛಂದಸೀತಿ ಸಭಾವಃ । ವನತಂ । ವನ ಷಣ ಸಂಭಕ್ತೌ । ದೇವತ್ರಾ । ದೇವಮನುಷ್ಯಪುರುಷಪುರುಮರ್ತ್ಯೇತ್ಯಾದಿನಾ ಸಪ್ತಮ್ಯರ್ಥೇ ತ್ರಾಪ್ರತ್ಯಯಃ ॥

ಪ್ರತಿಪದಾರ್ಥ

ಅಗ್ನೀಷೋಮಾ—ಎಲೈ ಅಗ್ನಿ ಮತ್ತು ಸೋಮದೇವತೆಗಳೇ । **ಸನೇದಸಾ**—ಒಂದೇ ವಿಧವಾದ (ಹವಿಸ್ಸಿನರೂಪದ) ಧನವುಳ್ಳವರಾಗಿಯೂ । **ಸ ಹೂತೀ**—ಒಂದೇ ವಿಧವಾದ ಆಹ್ವಾನವುಳ್ಳವರಾಗಿಯೂ । **ಗಿರಃ**—ನಮ್ಮ ಸ್ತೋತ್ರವಾಕ್ಯಗಳನ್ನು । **ವನತಂ**—ಸ್ವೀಕರಿಸಿ ಸೇವಿಸಿರಿ । **ದೇವತ್ರಾ**—ದೇವತೆಗಳಲ್ಲಿ । **ಸಂ ಬಭೂವಥುಃ**—(ನೀವು) ಅತ್ಯಂತ ಪೂಜ್ಯರಾಗಿದ್ದೀರಿ ॥

ಭಾವಾರ್ಥ

ಎಲೈ ಅಗ್ನೀಷೋಮ ದೇವತೆಗಳೇ, ನಿಮ್ಮಿಬ್ಬರಿಗೂ ಒಂದೇವಿಧವಾದ ಹವಿಸ್ಸು ಅರ್ಪಿಸಲ್ಪಡುತ್ತದೆ. ಒಂದೇ ವಿಧವಾದ ಆಹ್ವಾನವಿರುತ್ತದೆ. ಒಟ್ಟಿಗೆ ನಮ್ಮ ಸ್ತೋತ್ರವಾಕ್ಯಗಳನ್ನು ಸ್ವೀಕರಿಸಿ ಸೇವಿಸಿರಿ. ನೀವಿಬ್ಬರೂ ದೇವತೆಗಳೆಲ್ಲೆಲ್ಲಾ ಅತ್ಯಂತ ಪೂಜ್ಯರಾಗಿದ್ದೀರಿ.

English Translation

Agni and Soma, endowed with the like wealth, and invoked by a common invocation, share our praises, for you have ever been the chief of the Gods,

॥ ವಿಶೇಷವಿಷಯಗಳು ॥

ವೌರ್ಣಮಾಸ್ಯೇಷ್ಟಿಯ ಅಗ್ನೀಷೋಮ ಸಂಬಂಧವಾದ ಯಾಗದಲ್ಲಿ **ಅಗ್ನೀಷೋಮಾ ಸನೇದಸಾ** ಎಂಬ ಈ ಋಕ್ಕನ್ನು ಪುರೋನುವಾಕ್ಯಾ ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಉಕ್ತಾ ದೇವತಾ** ಎಂಬ ಖಂಡದ **ಅಗ್ನೀಷೋಮಾ ಸನೇದಸಾ ಯುವಮೇತಾನಿ ದಿವಿ ರೋಚನಾನಿ** ಒಂಬ ಸೂತ್ರದಿಂದ ವಿವೃತವಾಗಿರುವುದು (ಆ. ೧-೬).

ಗಿರಃ—ಸ್ತುತಯೋ ಗಿರಃ ಗೃಣಾತೇಃ । (ನಿ. ೧-೧೧) ಎಂಬ ವಿವರಣೆಯನ್ನು ಹಿಂದೆಯೇ ಹೇಳಿರುವಂತೆ ಇಲ್ಲಿ **ಗಿರಃ** ಎಂದರೆ ಸ್ತೋತ್ರಗಳನ್ನು ಎಂದರ್ಥವು.

ವನತಂ—ವಶ್ಮಿ, ಉಶ್ಮಸಿ ಇತ್ಯಾದಿ ಕಾಂತಿಕರ್ಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೭) ಇಚ್ಛಿಸಿರಿ, ಅಂದರೆ ನಮ್ಮ ಸ್ತುತಿಗಳನ್ನು ಅಭಿಮಾನಪೂರ್ವಕವಾಗಿ ಸ್ವೀಕರಿಸಿ ಸೇವಿಸಿರಿ ಎಂದರ್ಥವು.

ದೇವತ್ರಾ ಸಂಬಭೂವಥುಃ ಸರ್ವೇಷು ದೇವೇಷು ಯುವಾಂ ಸಂಭಾವಿತೌ ಪ್ರಶಸ್ತೌ ಸ್ಥಃ । ಸಕಲ ದೇವತೆಗಳ ನಡುವೆಯೂ ನೀನೇ ಅತ್ಯಂತ ಗೌರವಕ್ಕೆ ಅರ್ಹರಾಗಿದ್ದೀರಿ ಎಂಬುದಾಗಿ ಸಾಯಣರು ಅರ್ಥವಾಡುತ್ತಾರೆ,

ಆದರೆ ಸ್ಕಂದಸ್ವಾಮಿಗಳು ಸಕಲ ದೇವತೆಗಳಲ್ಲಿ ಒಂದಾಗಿ ಈ ಪುರೋಡಾಶರೂಪದ ಹವಿಸ್ಸಿಗೆ ಭಾಗಿಗಳಾಗಿ ಎಂದು ಅರ್ಥವನ್ನು ಮಾಡಿರುವರು.

॥ व्याकरणप्रक्रिया ॥

सवेदसा—समानं वेदः ययोः तौ सवेदसौ. **समानस्य छंदसि**–(पा. सू. ६-३-८४) ಎಂಬುದರಿಂದ ಸಮಾನಕ್ಕೆ ಸಭಾವ. ದ್ವಿವಚನದ ಔಕಾರವಿಭಕ್ತಿಗೆ **सुसाम् सुलुक्**—ಸೂತ್ರದಿಂದ ಆಕಾರಾದೇಶ.

सहूतीः—समाना हूतिः ययोः तौ. ಹಿಂದಿನಂತೆ ಸಭಾವ. ದ್ವಿವಚನಾಂತರೂಪ.

वनेतम्—वन ಷಣ. संभक्तौ धातु. ಲೋಣ್ಮಧ್ಯಮಪುರುಷದ್ವಿವಚನಾಂತರೂಪ. ಅತಿ ಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

देवत्रा-–ದೇವ ಶಬ್ದಮೇಲೆ ಸಪ್ತಮ್ಯರ್ಥದಲ್ಲಿ **देवमनुष्य पुरुष पुरुमर्त्य**—(पा. सू. ५-४-५६) ಎಂಬುದರಿಂದ ತ್ರಾ ಪ್ರತ್ಯಯ. ಪ್ರತ್ಯಯಸ್ವರದಿಂದೆ ಅಂತೋದಾತ್ತವಾಗುತ್ತದೆ. ॥ ९ ॥

॥ संहिताक्रमः ॥

अग्नीषोमावनेन वां यो वां घृतेन दाशति ।
तस्मै दीदयतं बृहत् ॥ १० ॥

॥ पदक्रमः ॥

अग्नीषोमौ । अनेन । वां । यः । वां । घृतेन । दाशति ।
तस्मै । दीदयतं । बृहत् ॥ १० ॥

ಸಾಯಣಭಾಷ್ಯಂ

हे अग्नीषोमौ वां युवयोः संबन्धि यो यजमानोऽनेन घृतेनोत्पवनादिभिः संस्कृतेनाज्येन युक्तं हविर्वां युवाभ्यां दाशति प्रयच्छति तस्मै यजमानाय बृहत्प्रभूतं धनं दीदयतं। प्रकाशयतं। प्रयच्छतमित्यर्थः॥ दाशति। दाशृ दाने। शप्तिपोः पित्त्वादनुदात्तत्वे धातुस्वरः। यद्वृत्तयोगान्निघातः। दीदयतं। दीदयतिर्दीप्तिकर्मा॥

॥ ಪ್ರತಿಪದಾರ್ಥ ॥

ಅಗ್ನೀಷೋಮೌ — ಎಲೈ ಅಗ್ನಿ ಮತ್ತು ಸೋಮದೇವತೆಗಳೇ। **ವಾಂ**—ನಿಮ್ಮಿಬ್ಬರಿಗೂ ಸೇರಿದ। **ಯಃ**—ಯಾವ ಯಜಮಾನನು। **ಆನೇನ ಘೃತೇನ**—ಈ ಆಜ್ಯಾಹುತಿಯಿಂದ ಕೂಡಿದ ಹವಿಸ್ಸನ್ನು। **ವಾಂ**—ನಿಮಗೆ। **ದಾಶತಿ**—ಅರ್ಪಿಸುತ್ತಾನೆಯೋ। **ತಸ್ಮೈ**—ಆ ಯಜಮಾನನಿಗೆ। **ಬೃಹತ್**—ಪ್ರಭೂತವಾದ ಧನವನ್ನು। **ದೀದಯತಂ**—ಕೊಡಿರಿ.

ಭಾವಾರ್ಥ

ಎಲೈ ಅಗ್ನೀಷೋಮದೇವತೆಗಳೇ, ನಿಮ್ಮಿಬ್ಬರಿಗೂ ಸೇರಿದ ಯಾವ ಯಜಮಾನನು ಈ ಆಜ್ಯಾಹುತಿಯಿಂದ ಕೂಡಿದ ಹವಿಸ್ಸನ್ನು ನಿಮ್ಮಿಬ್ಬರಿಗೂ ಅರ್ಪಿಸುತ್ತಾನೆಯೋ, ಆ ಯಜಮಾನನಿಗೆ ಪ್ರಭೂತವಾದ ಧನವನ್ನು ಕೊಡಿರಿ.

English Translation

Agni and Soma, give ample recompense to him who presents to you both, this clarified butter.

॥ ವಿಶೇಷವಿಷಯಗಳು ॥

ಘೃತೇನ—ಉತ್ಪವನಾದಿಗಳಿಂದ ಸಂಸ್ಕೃತವಾದ ಆಜ್ಯದಿಂದ ಕೂಡಿದ ಹವಿಸ್ಸು ಎಂದರ್ಥವು.

ದೀದಯತಂ—ಭ್ರಾಜತೇ, ಭ್ರಾಶತೇ ಇತ್ಯಾದಿ ಜ್ವಲನ ಕರ್ಮುಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೨೮) ಇಲ್ಲಿ ಪ್ರಭೂತವಾದ ಧನವನ್ನು ಪ್ರಕಾಶಪಡಿಸಿ ಎಂದರೆ ಒದಗಿಸಿಕೊಡಿ ಎಂದರ್ಥವಾಗುತ್ತದೆ. **ಮಾಧನರು ವರ್ಧಯತಂ।** ಎಂದರೆ ವೃದ್ಧಿಯಾಗುವಂತೆ ಮಾಡಿರಿ ಎಂದಭಿಪ್ರಾಯವು.

ವ್ಯಾಕರಣಪ್ರಕ್ರಿಯಾ

ದಾಶತಿ—ದಾಶೃ ದಾನೇ ಧಾತು. ಲಟ್ ಪ್ರಥಮಪುರುಷಏಕವಚನರೂಪ. ಶಪ್ ಪಿತ್ತಾದುದರಿಂದಲೂ, ತಿಪ್‌ಪ್ರತ್ಯಯವೂ ಅದರಂತೆ ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ. ಯಃ ಎಂದು ಹಿಂದೆ ಇರುವುದರಿಂದ-**ಯದ್ವೃತ್ತಾನ್ನಿತ್ಯಮ್** (ಪಾ. ಸೂ. ೮-೧ ೬೬) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ.

ದೀದಯತಮ್—ದೀದಯ ಎಂಬ ಧಾತುವು ದೀಪ್ತ್ಯರ್ಥದಲ್ಲಿದೆ. ಲೋಣ್ಮ್ಯಧ್ಯನುಪುರುಷ ದ್ವಿವಚನ ರೂಪ. ಅತಿಬಿಂತಗ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೦ ॥

ಸಂಹಿತಾಪಾಠಃ

ಅಗ್ನೀಷೋಮಾವಿಮಾನಿ ನೋ ಯುವಂ ಹವ್ಯಾ ಜುಜೋಷತಂ।
ಆ ಯಾತಮುಪ ನಃ ಸಚಾ ॥೧೧॥

ಪದಪಾಠಃ

ಅಗ್ನೀಷೋಮೌ । ಇಮಾನಿ । ನಃ । ಯುವಂ । ಹವ್ಯಾ । ಜುಜೋಷತಂ ।
ಆ । ಯಾತಂ । ಉಪ । ನಃ । ಸಚಾ ॥ ೧೧ ॥

ಸಾಯಣಭಾಷ್ಯಂ

ಹೇ ಅಗ್ನೀಷೋಮೌ ಯುವಂ ಯುವಾಂ ನೋಽಸ್ಮದೀಯಾನೀಮಾನಿ ಹವ್ಯಾ ಹವೀಂಷಿ ಜುಜೋಷತಂ। ಸೇವೇಥಾಂ। ತದರ್ಥಂ ನೋಽಸ್ಮಾನ್ ಸಚಾ ಸಹ ಯುವಾಮುಪಾ ಯ್ಯಾತಂ। ಉಪಾಗಚ್ಛತಂ॥ ಜುಜೋಷತಂ। ಜುಷೀ ಪ್ರೀತಿಸೇವನಯೋಃ। ಲೋಟಿ ವ್ಯತ್ಯಯೇನ ಶಪ್। ಛಾಂದಸಂ ದ್ವಿರ್ವಚನಂ। ಯದ್ವಾ। ವಿಕರಣಸ್ಯ ಬಹುಲಂ ಛಂದಸೀತಿ ಶ್ಲುಃ। ತತೋ ವ್ಯತ್ಯಯೇನ ಶಪ್। ಬಹುಲಂ ಛಂದಸೀತಿ ವಕ್ತವ್ಯಮಿತಿ ವಚನಾನ್ನಾಭ್ಯಸ್ತಸ್ಯಾಚಿ ಪಿತೀತಿ ಲಘೂಪಧಗುಣಪ್ರತಿಷೇಧಾಭಾವಃ॥

ಸ್ಮೃತಿಪದಾರ್ಥ

ಅಗ್ನೀಷೋಮೌ—ಎಲೈ ಅಗ್ನಿ ಮತ್ತು ಸೋಮ ದೇವತೆಗಳೇ। ಯುವಂ—ನೀವಿಬ್ಬರೂ ಸಹ। ನಃ—ನಮ್ಮ। ಇಮಾನಿ ಹವ್ಯಾ—ಈ ಹವಿಸ್ಸುಗಳನ್ನು। ಜುಜೋಷತಂ— ಸೇವಿಸಿ (ಅದಕ್ಕಾಗಿ)। ನಃ—ನಮ್ಮನ್ನು ಲಕ್ಷಿಸಿ। ಸಚಾ—ಇಬ್ಬರೂ ಒಟ್ಟಿಗೆ। ಉಪ ಆ ಯಾತಂ—ಸೇರಿಕೊಂಡು ಬನ್ನಿರಿ॥

॥ ಭಾವಾರ್ಥ ॥

ಎಲೈ ಅಗ್ನಿ ಮತ್ತು ಸೋಮದೇವತೆಗಳೇ, ನೀವಿಬ್ಬರೂ ನಮ್ಮ ಈ ಹವಿಸ್ಸುಗಳನ್ನು ಸೇವಿಸುವುದಕ್ಕಾಗಿ ನಮ್ಮ ಯಜ್ಞಪ್ರದೇಶಕ್ಕೆ ಒಟ್ಟಿಗೆ ಸೇರಿಕೊಂಡು ಜೊತೆಯಾಗಿ ಬನ್ನಿರಿ.

English Translation

Agni and Soma, be pleased with these our oblations and come to us together.

ಹವ್ಯಾ—ಹವೀಂಷಿ । ಹವಿಸ್ಸುಗಳನ್ನು ; ದ್ವಿತೀಯಾ ಬಹುವಚನಾಂತ ಪದವು.
ಸಚಾ—ಸಹ । ನೀವಿಬ್ಬರೂ ಒಟ್ಟಾಗಿ ಸೇರಿ (ಬನ್ನಿ) ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಹವ್ಯಾ—ನಪುಂಸಕ ಬಹುವಚನದಲ್ಲಿ ಶಿ ಆದೇಶ ಬಂದಾಗ **ಶೇಶ್ಛಂದಸಿ ಬಹುಲಮ್**—ಎಂಬುದರಿಂದ ಶಿಗೆ ಲೋಪ.

ಜುಜೋಷತಮ್—ಜುಷೀ ಪ್ರೀತಿಸೇವನಯೋಃ ಧಾತು. ಲೋಟ್ ಮಧ್ಯಮಪುರುಷದ್ವಿವಚನದಲ್ಲಿ ತಮಾದೇಶ. **ವ್ಯತ್ಯಯೋ ಬಹುಲಮ್**—ಎಂಬುದರಿಂದ ಶಪ್‌ವಿಕರಣ. ಛಾಂದಸವಾಗಿ ಧಾತುವಿಗೆ ದ್ವಿತ್ವ ಅಭ್ಯಾಸಕ್ಕೆ ಆದಿಹಲ್‌ಶೇಷ. ಶಪ್ ನಿಮಿತ್ತವಾಗಿ ಧಾತುವಿನ ಲಘೂಪಧಗೆ ಗುಣ. ಅಥವಾ ವಿಕರಣಕ್ಕೆ **ಬಹುಲಂ ಛಂದಸಿ**—ಎಂಬುದರಿಂದ ಶ್ಲು ಆದೇಶ ಆಮೇಲೆ ವ್ಯತ್ಯಯದಿಂದ ಶಪ್. ಯದ್ಯಪಿ ಇಲ್ಲಿ ಧಾತುವಿಗೆ ದ್ವಿತ್ವ ಬಂದುದರಿಂದ ಅಭ್ಯಸ್ತಸಂಜ್ಞೆ ಇರುವುದರಿಂದ **ನಾಭ್ಯಸ್ತಸ್ಯಾಚಿ ಪಿತಿ ಸಾರ್ವಧಾತುಕೇ** (ಪಾ. ಸೂ. ೬-೪-೭೭) ಎಂಬುದರಿಂದ ಲಘೂಪಧಗುಣ ನಿಷೇಧ ಬರಬೇಕಾಗುತ್ತದೆ. ಆದರೆ **ಬಹುಲಂ ಛಂದಸೀತಿ ವಕ್ತವ್ಯಮ್**—ಎಂಬ ವಚನವಿಂದ ನಿಷೇಧ ಬರುವುದಿಲ್ಲ. ಅತಿಙಂತದ ಪರವಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಯಾತಮ್—ಯಾ ಪ್ರಾಪಣೇ. ಧಾತು. ಲೋಣ್ಮ್ಯಧ್ಯಮಪುರುಷ ದ್ವಿವಚನರೂಪ. ತಿಙಂತನಿಘಾತ ಸ್ವರ ಬರುತ್ತದೆ. ॥ ೧೮ ॥

॥ ಸಂಹಿತಾಪಾಠಃ ॥

ಅಗ್ನೀಷೋಮಾ ಪಿವ್ಯತಮರ್ವತೋ ನ ಆ ಪ್ಯಾಯಂತಾಮು-
ಸ್ರಿಯಾ ಹವ್ಯಸೂದಃ ।
ಅಸ್ಮೇ ಬಲಾನಿ ಮಘವತ್ಸು ಧತ್ತಂ ಕೃಣುತಂ ನೋ ಅಧ್ವರಂ
ಶ್ರುಷ್ಟಿಮಂತಂ ॥ ೧೨ ॥

ಪದಪಾಠಃ

ಅಗ್ನೀಷೋಮಾ । ಪಿಪೃತಂ। ಅರ್ವತಃ। ನಃ । ಆ । ಪ್ಯಾಯಂತಾಂ । ಉಸ್ರಿ-
ಯಾಃ । ಹವ್ಯ ಸೂದಃ ।
ಅಸ್ಮೇ ಇತಿ । ಬಲಾನಿ । ಮಘವತ್ ಸು । ಧತ್ತಂ । ಕೃಣುತಂ । ನಃ । ಅ-
ಧ್ವರಂ । ಶ್ರುಷ್ಟಿ ಮಂತಂ ॥ ೧೨ ॥

ಸಾಯಣಭಾಷ್ಯಂ

ಹೇ ಅಗ್ನೀಷೋಮೌ ನೋ ಽಸ್ಮಾಕಮರ್ವತೋ ಽಶ್ವಾನ್ಪಿಪೃತಂ । ಪಾಲಯತಂ । ಹವ್ಯಸೂದಃ ಕ್ಷೀರಾದಿಹವಿಷ ಉತ್ಪಾದಯಿತ್ರ್ಯ ಉಸ್ರಿಯಾ ಅಸ್ಮದೀಯಾ ಗಾವಶ್ಚ ' ಪ್ಯಾಯಂತಾಂ । ಆಪ್ಯಾ-ಯಿತಾಃ ಪ್ರವೃದ್ಧಾಃ ಸಂತು । ಮಘವತ್ಸು ಹವಿರ್ಲಕ್ಷಣಧನಯುಕ್ತೇಷ್ವಸ್ಮೇ ಅಸ್ಮಾಸು ಬಲಾನಿ ಧತ್ತಂ । ಸ್ಥಾಪಯೇತಂ । ತಥಾ ನೋ ಽಸ್ಮಾಕಮಧ್ವರಂ ಯಾಗಂ ಶ್ರುಷ್ಟಿಮಂತಂ ಧನಯುಕ್ತಂ ಕೃಣುತಂ । ಕುರುತಂ ॥ ಪಿಪೃತಂ । ಪ್ಯಾ ಪಾಲನಪೂರಣಯೋಃ। ಪ್ಯಾ ಇತ್ಯೇಕೇ । ಜುಹೋತ್ಯಾದಿತ್ವಾಚ್ಛಪಃ ಶ್ಲುಃ । ಆರ್ತಿಪಿಪರ್ತ್ಯೋರ್ಶ್ಚೇತ್ಯಭ್ಯಾಸಸ್ಯೇತ್ವಂ । ಹವ್ಯಸೂದಃ । ಹವ್ಯಂ ಸೂದಂತೇ ಕ್ಷರಂತೀತಿ ಹವ್ಯಸೂದಃ । ಸೂದ ಕ್ಷರಣೇ । ಕ್ವಿಪ್ಚೇತಿ ಕ್ವಿಪ್ । ಅಸ್ಮೇ । ಸುಪಾಂ ಸುಲುಗಿತಿ ಸಪ್ತಮ್ಯಾಃ ಶೇ ಆದೇಶಃ । ಶ್ರುಷ್ಟಿ-ಮಂತಂ । ಶ್ರುಷ್ಟೀತಿ ಧನನಾಮ । ಶು ಆಶ್ವಶ್ಯತೇ ವ್ಯಾಪ್ಯತ ಇತಿ ಶ್ರುಷ್ಟಿಃ । ಪೃಷೋದರಾದಿಃ । ಹ್ರಸ್ವನುಡ್ಭ್ಯಾಂ ಮತುಬಿತಿ ಮತುಪ ಉದಾತ್ತತ್ವಂ ॥

ಪದಪದಾರ್ಥ

ಅಗ್ನೀಷೋಮಾ—ಎಲೈ ಅಗ್ನಿ ಮತ್ತು ಸೋಮದೇವತೆಗಳೇ । **ನಃ**— ನಮ್ಮ । **ಅರ್ವತಃ**—ಕುದುರೆಗಳನ್ನು । **ಪಿಪೃತಂ**—ಕಾಪಾಡಿರಿ । **ಹವ್ಯಸೂದಃ**—ಹವಿಸ್ಸಿಗೆ ಬೇಕಾದ ಕ್ಷೀರಾದಿಗಳನ್ನು ಒದಗಿಸುವ । **ಉಸ್ರಿ-ಯಾಃ**—ನಮ್ಮ ಗೋವುಗಳು । **ಆಪ್ಯಾಯಂತಾಂ**—ಪುಷ್ಟವಾಗಿ ಬೆಳೆದು ವೃದ್ಧಿಯಾಗಲಿ । **ಮಘವತ್ಸು**—ಹವಿಸ್ಸಿನ ರೂಪದ ಧನವುಳ್ಳ । **ಅಸ್ಮೇ**—ನಮ್ಮಲ್ಲಿ । **ಬಲಾನಿ**—ಶಕ್ತಿಗಳನ್ನು । **ಧತ್ತಂ**—ಇಟ್ಟು ತುಂಬಿಸಿರಿ । **ನಃ**—ನಮ್ಮ । **ಅಧ್ವರಂ**—ಯಾಗವನ್ನು । **ಶ್ರುಷ್ಟಿಮಂತಂ**—ಧನಯುಕ್ತವನ್ನಾಗಿ । **ಕೃಣುತಂ**—ಮಾಡಿರಿ ॥

ಭಾವಾರ್ಥ

ಎಲೈ ಅಗ್ನಿ ಮತ್ತು ಸೋಮದೇವತೆಗಳೇ, ನಮ್ಮ ಕುದುರೆಗಳನ್ನು ಕಾಪಾಡಿರಿ ಹವಿಸ್ಸಿಗೆ ಬೇಕಾದ ಕ್ಷೀರಾದಿಗಳನ್ನು ಒದಗಿಸುವ ನಮ್ಮ ಗೋವುಗಳು ಪುಷ್ಟವಾಗಿ ಬೆಳೆದು ವೃದ್ಧಿಯಾಗಲಿ. ನಾವು ಹವಿಸ್ಸಿನ ರೂಪದ ಧನವುಳ್ಳವ

ರಾಗಿದ್ದೇವೆ ನಮ್ಮಲ್ಲಿ ನಾನಾ ವಿಧವಾದ ಶಕ್ತಿಗಳನ್ನು ತುಂಬಿರಿ. ನಮ್ಮ ಯಾಗವನ್ನು ಧನಯುಕ್ತವನ್ನಾಗಿ ಮಾಡಿರಿ

English Translation

Agni and Soma, cherish our horses, and may our cows, affording milk that yields butter for oblations be well nourished; give to us who are affluent, strength to perform religious rites and make our sacrfice productive of wealth.

ವಿಶೇಷವಿಷಯಗಳು

ಅರ್ವತಃ—ಅತ್ಯಃ, ಹಯಃ ಇತ್ಯಾದಿ ಅಶ್ವನಾಮಗಳಲ್ಲಿ ಪಠಿತವಾಗಿ (ನಿ. ೨-೨೭) ರುವುದರಿಂದ **ಅರ್ವಾ** ಅಂದರೆ ಅಶ್ವವೆಂದರ್ಥವು. **ಅರ್ತಿ ಗಚ್ಛತೀತ್ಯರ್ವಾ** ಎಂದಾಗಲಿ ಅಥವಾ **ಅರ್ವೇರಣರ್ವಾ** (ನಿ.೧೧-೩೧) ಎಂದಾಗಲಿ ಆಗುತ್ತದೆ. ಶೀಘ್ರವಾಗಿ ಸಂಚಾರಮಾಡಬಲ್ಲ ಪ್ರಾಣಿಯಾದುದರಿಂದ **ಅರ್ವಾ** ಎಂಬ ಹೆಸರು ಬಂದಿದೆ **ಅರ್ವತಃ** ಅಂದರೆ ನಮ್ಮ ಅಶ್ವಗಳನ್ನು ಎಂದರ್ಥವು.

ಪಿಪ್ಯತಂ —ಪ್ಯಾ ಪ್ಯಾಲನಪೂರಣಯೋಃ । ಇಲ್ಲಿ ಪಾಲನಾರ್ಥದಲ್ಲಿ ಪ್ಯಾ ಧಾತುವನ್ನು ಪಯೋಗಿಸಿದೆ ನಮ್ಮ ಅಶ್ವಗಳನ್ನು ಪಾಲಿಸಿ ಎಂದರ್ಥವು.

ಉಸ್ರಿಯಾಃ—ಅಘ್ನ್ಯಾಃ, ಉಸ್ರಾ, ಉಸ್ರಿಯಾ ಇತ್ಯಾದಿ ಗೋನಾಮಗಳಲ್ಲಿ ಪಠಿತವಾಗಿದೆ. **(ನಿ.೩-೪) ಉಸ್ರಿಯೇತಿ ಗೋನಾಮ । ಉಸ್ರಾವಿಣೋ೨ಸ್ಯಾಂ ಭೋಗಾಃ** । ಸುಖಸಾಧನವಾದ ಕ್ಷೀರವು ಹರಿಯುವುದರಿಂದ **ಊಸ್ರಿಯಾಃ** ಎಂಬ ಹೆಸರು ಬಂದಿದೆಯೆಂದು **ವೀತಂ ಪಾತಂ ಪಯಸ ಉಸ್ರಿಯಾಃ** । (ಋ. ಸಂ. ೧-೧೫೩-೪) ಎಂಬ ಉದಾಹರಣೆಯನ್ನು ಕೊಟ್ಟು ನಿರುಕ್ತಕಾರರು ವಿವರಿಸುತ್ತಾರೆ **(ನಿ. ೪-೧೯)**.

ಶುಷ್ಮಿಮಂತಂ—ಧನಯುಕ್ತಂ। ಧನದಿಂದ ಕೂಡಿದುದು ಎಂದು ಸಾಯಣರೂ, **ಅಪರಿಮಿತಮಪಿ ಸುಖನಾಮ ಏತದ್ವ್ರಷ್ಟವ್ಯಂ। ಫಲಭೂತೇನ ಸುಖೇನ ಸುಖವಂತಂ।** ಎಂದರೆ ಸುಖನಾಮಗಳಲ್ಲಿ ಪಠಿತವಾಗಿಲ್ಲದಿದ್ದರೂ ಸಹ **ಶುಷ್ಮಿ** ಶಬ್ದಕ್ಕೆ ಸುಖವೆಂಬ ಅರ್ಥವೆಂದೂ, ಫಲಭೂತವಾದ ಸುಖದಿಂದ ಕೂಡಿದುದು ಎಂಬುದಾಗಿಯೂ ಸ್ಕಂದಸ್ವಾಮಿಗಳೂ ಅರ್ಥಮಾಡುತ್ತಾರೆ. ಅವರು ಇನ್ನೂ ಮುಂದುವರಿಸಿ **ಅಥವಾ ಶುಷ್ಮೀತಿ ಕ್ಷಿಪ್ರನಾಮ । ಕ್ಷಿಪ್ರವಂತಂ ।** ಎಂದರೆ ಶೀಘ್ರವಾಗಿ ಫಲವನ್ನು ಕೊಡತಕ್ಕದ್ದು ಎಂದೂ ಆಗಬಹುದು ಎಂಬರ್ಥವನ್ನು ಮಾಡುತ್ತಾರೆ, ನಮ್ಮ ಅಧ್ವರವನ್ನು ಶೀಘ್ರವಾದ ಫಲಕೊಡುವಂತೆ ಮಾಡಿರಿ ಎಂದರ್ಥವು.

ವ್ಯಾಕರಣಪ್ರಕ್ರಿಯಾ

ಪಿಪ್ಯತಮ್— ಪ್ಯಾ ಪಾಲನಪೂರಣಯೋಃ ಧಾತು. ಕೆಲವರು ಪೃ ಎಂದು ಹ್ರಸ್ವಾಂತವಾಗಿ ಸ್ವೀಕರಿಸುತ್ತಾರೆ. ಜುಹೋತ್ಯಾದಿ ಲೋಣ್ಮ್ಯಧ್ಯಮ ಪುರುಷ ದ್ವಿವಚನದಲ್ಲಿ ತಮಾದೇಶ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. **ಅರ್ತಿಪಿಪರ್ತ್ಯೋರ್ಲಿ**— (ಪಾ. ಸೂ. ೭-೪-೭೭) ಎಂಬುದರಿಂದ ಅಭ್ಯಾಸಕ್ಕೆ ಇತ್ವ. **ಸಾರ್ವಧಾತುಕಮಪಿತ್** ಎಂಬುದರಿಂದ ಪ್ರತ್ಯಯಕ್ಕೆ ಜಿದ್ವದ್ಭಾವವಿರುವುದರಿಂದ ಧಾತುವಿನ ಇತಿಗೆ ತನ್ನಿಮಿತ್ತವಾಗಿ ಗುಣ [illegible] ಹಿಂದೆ ಜಗಿ ಣಿಲೋಮಾ ಎಂದು ಆಮಂತ್ರಿತವಿರುವುದರಿಂದ **ಆಮಂತ್ರಿತಂ ಪೂರ್ವಮವಿದ್ಯಮಾನವತ್**

ಎಂಬುದರಿಂದ ಅವಿದ್ಯಮಾನವದ್ಭಾವವಿರುವುದರಿಂದ ಅತಿಙಂತದ ಪರದಲ್ಲಿ ಬಾರದಿರುವುದರಿಂದ ಇದಕ್ಕೆ ನಿಘಾತಸ್ವರ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ

ಆರ್ವತಃ— ಅರ್ವನ್ ಶಬ್ದಕ್ಕೆ ದ್ವಿತೀಯಾ ಬಹುವಚನ ಪರವಾದಾಗ **ಅರ್ವಣಸ್ತ್ರಸಾವನಡ್ಹಃ** ಎಂಬುದರಿಂದ ತ್ರ ಎಂಬುದು ಅಂತಾದೇಶವಾಗಿ ಬರುತ್ತದೆ.

ಹವ್ಯಸೂದಃ— ಹವ್ಯಂ ಸೂದಂತೇ ಕ್ಷರಂತೀತಿ ಹವ್ಯಸೂನಃ ಷೂದ ಕ್ಷರಣೇ ಧಾತು **ಕ್ವಿಪ್ ಚ** ಎಂಬುದರಿಂದ ಇದಕ್ಕ ಕ್ವಿಪ್. **ಗತಿಕಾರಕೋಪಪದಾತ್ ಕೃತ್** ಎಂಬುದರಿಂದ ಕಾರಕಪೂರ್ವಪದವಾಗಿರುವುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ. ದ್ವಿತೀಯಾ ಬಹುವಚನಾಂತರೂಪ.

ಅಸ್ಮೇ—ಅಸ್ಮತ್ ಶಬ್ದ. ಇದಕ್ಕೆ ಸಪ್ತಮೀವಿಭಕ್ತಿ ಪರವಾದಾಗ **ಸುಪಾಂ ಸುಲುಕ್**— ಎಂಬುದರಿಂದ ಅದಕ್ಕೆ ಶೀ ಆದೇಶ. **ಶೇಷೇ ಲೋಪಃ** ಎಂಬುದರಿಂದ ಮಪರ್ಯಂತದ ಪರಕ್ಕೆ ಲೋಪ.

ಶ್ರುಷ್ಟಿಮಂತಮ್— ಶ್ರುಷ್ಟಿ ಎಂಬುದು ಧನದ ಹೆಸರು. ಶು=ಆಶು ಅಶ್ನುತೇ ವ್ಯಾಪ್ನುತೇ ಇತಿ ಶ್ರುಷ್ಟಿಃ (ಬೇಗ ವ್ಯಾಪಿಸುವುದು) **ಸೃಷೋದರಾದೀನಿ ಯಥೋಪದಿಷ್ಟಮ್** ಎಂಬುದರಿಂದ ಸೃಷೋದರಾದಿಯಲ್ಲಿ ಪಠಿತವಾದುದರಿಂದ ಅಭಿಮತರೂಪ ಸಿದ್ಧಿಯಾಗುತ್ತದೆ. ಶ್ರುಷ್ಟಿಃ ಅಸ್ಯ ಅಸ್ತಿ ಇತಿ, ಶ್ರುಷ್ಟಿನಾನ್ **ತದಸ್ಯಾಸ್ತಿ**— ಎಂಬುದರಿಂದ ಮತುಪ್ ಪ್ರತ್ಯಯ. **ಹ್ರಸ್ವನುಡ್ಭ್ಯಾಂ ಮತುಪ್**— (ಪಾ. ಸೂ. ೬-೧-೧೭೬) ಎಂಬುದರಿಂದ ಮತುಪಿಗೆ ಉದಾತ್ತ ಸ್ವರ ಬರುತ್ತದೆ. ದ್ವಿತೀಯಾ ಏಕವಚನಾಂತರೂಪ.

ಕೃಣುತಮ್—ಕೃಞ್ ಹಿಂಸಾಯಾಂ ಧಾತು. ಸ್ವಾದಿ ಲೋಣ್ಮಧ್ಯಮಪುರುಷ ದ್ವಿವಚನದಲ್ಲಿ ತಮಾದೇಶ. **ಸ್ವಾದಿಭ್ಯಃ ಶ್ನುಃ**— (ಪಾ. ಸೂ. ೩-೧-೭೩) ಎಂಬುದರಿಂದ ಶ್ನು ವಿಕರಣ. ಪ್ರತ್ಯಯಕ್ಕೆ ಜುಇವ್ವದ್ಭಾವವಿರುವುದರಿಂದ ಗುಣ ಬರುವುದಿಲ್ಲ. ಘಾದಾದಿಯಲ್ಲಿರುವುದರಿಂದ ನಿಘಾತ ಸ್ವರ ಬರುವುದಿಲ್ಲ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ. ಧಾತುಗಳಿಗೆ ಅನೇಕಾರ್ಥವಿರುವುದರಿಂದ ಇಲ್ಲಿ ಕೇವಲ ಕರಣಾರ್ಥ ಸ್ವೀಕೃತವಾಗಿದೆ. ಅಥವಾ ಡುಕೃಞ್ ಕರಣೇ ಈ ಧಾತುವಿಗೆ ಲೋಟಿನಲ್ಲಿ **ವ್ಯತ್ಯಯೋ ಬಹುಲಮ್** ಎಂಬುದರಿಂದ ಉ ವಿಕರಣಕ್ಕೆ ಬದಲಾಗಿ ಶ್ನು ವಿಕರಣ ಬರುತ್ತದೆ ಆಗ ಅಭಿಮತರೂಪ ಸಿದ್ಧಿಯಾಗುತ್ತದೆ. ॥ ೧೬ ॥

ಇಲ್ಲಿಗೆ ೯೩ನೇ ಸೂಕ್ತವು ಮುಗಿದಿದೆ.

ತೊಂಭತ್ತನಾಲ್ಕನೆಯ ಸೂಕ್ತವು

ಪಂಚದಶೇಽನುವಾಕೇ ದ್ವಾದಶ ಸೂಕ್ತಾನಿ । ತತ್ರೇಮಂ ಸ್ತೋಮಮಿತಿ ಷೋಡಶರ್ಚಂ ಪ್ರಥಮಂ ಸೂಕ್ತಂ । ಆಂಗಿರಸಸ್ಯ ಕುತ್ಸಸ್ಯಾರ್ಷಂ । ಪಂಚದಶೀಷೋಡಶ್ಯೌ ತ್ರಿಷ್ಟುಭೌ ಶಿಷ್ಟಾ ಜಗತ್ಯಃ । ಅಗ್ನಿರ್ದೇವತಾ । ಪೂರ್ವೋಽಽ ದೇವಾ ಭವತು ಸುನ್ವತೋ ರಥ ಇತಿ ತೃಯಃ ಪಾದಾ ದೇವದೇವತ್ಯಾಃ । ತನ್ನೋ ಮಿತ್ರೋ ವರುಣ ಇತ್ಯರ್ಧರ್ಚೋಽ ಲಿಂಗೋಕ್ತಮಿತ್ರಾವರುಣಾದಿಷದ್ದೇವತ್ಯಃ । ಅಥವಾ ತಸ್ಯಾಪ್ಯಗ್ನಿರೇವ ದೇವತಾ ಮಿತ್ರಾವರುಣಾದಯಸ್ತು ನಿಪಾತಭಾಕ್ತ್ವೇನಾಪ್ರಧಾನಾಃ । ಏತತ್ಸರ್ವಮನುಕ್ರಾಂತಂ । ಇಮಂ ಷೋಳಶ ಕುತ್ಸ ಆಗ್ನೇಯಂ ತದ್ದ್ವಿತ್ರಿಷ್ಟುಬಂತಂ ಪೂರ್ವೋಽ ದೇವಾಸ್ತ್ರಯಃ ಪಾದಾ ದೈವಾಸ್ತನ್ನೋ ಮಿತ್ರೋಽರ್ಧರ್ಚೋಽ ಲಿಂಗೋಕ್ತದೇವತೋ ಯದ್ದೇವತ್ಯಂ ವಾ ಸೂಕ್ತಮಿತಿ ॥ ಪ್ರಾತರನುವಾಕಸ್ಯಾಗ್ನೇಯೇ ಕೃತೌ ಜಾಗತೇ ಛಂದಸ್ಯೇತತ್ಸೂಕ್ತಂ । ಆಶ್ವಿನಶಸ್ತ್ರೇ ಚ । ತಥಾ ಚ ಸೂತ್ರಿತಂ । ಇಮಂ ಸ್ತೋಮಮರ್ಹತೇ ಸಂ ಜಾಗೃವದ್ಭಿಃ । ಆ. ೪-೧೩ । ಇತಿ ॥ ಅಭಿಪ್ಲವೇಽಹನ್ಯಾಗ್ನಿಮಾರುತೇಽಸ್ಯೇತತ್ಸೂಕ್ತಂ ಜಾತವೇದಸಃ ನಿವಿದ್ಧಾನಂ । ಸೂತ್ರಿತಂ ಚ । ಪ್ರಯಜ್ಯವ ಇಮಂ ಸ್ತೋಮಮಿತ್ಯಾಗ್ನಿಮಾರುತಂ । ಆ. ೭-೭ । ಇತಿ ॥ ತೃತೀಯಸವನ ಇಮಂ ಸ್ತೋಮಮಿತ್ಯೇಷಾಗ್ನೇಧಃ ಪೈಸ್ಥಿತಯೋಜ್ಯಾ । ಸೂತ್ರಿತಂ ಚ । ಇಮಂ ಸ್ತೋಮಮರ್ಹತೇ ಜಾತವೇದಸ ಇತಿ ತಾರ್ತೀಯಸವನಿಕ್ಯಃ । ಆ. ೪-೫ । ಇತಿ ॥

ಅನುವಾದವು—ಈ ಸೂಕ್ತದಿಂದ ಪ್ರಥಮಮಂಡಲದ ಹದಿನೈದನೆಯ ಅನುವಾಕವು ಪ್ರಾರಂಭವಾಗುವುದು. ಈ ಅನುವಾಕದಲ್ಲಿ ಹನ್ನೆರಡು (೯೪–೧೦೫) ಸೂಕ್ತಗಳಿರುವವು. ಆವುಗಳಲ್ಲಿ **ಇಮಂ ಸ್ತೋಮಂ** ಎಂಬ ಮೊದಲನೆಯ ಸೂಕ್ತದಲ್ಲಿ ಹದಿನಾರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಆಂಗಿರಸ ಪುತ್ರನಾದ ಕುತ್ಸನೆಂಬುವನು ಋಷಿಯು. ಅಗ್ನಿಯು ದೇವತೆಯು. ಈ ಸೂಕ್ತದ ಹದಿನೈದು ಮತ್ತು ಹದಿನಾರನೆಯ ಋಕ್ಕುಗಳು ತ್ರಿಷ್ಟುಪ್ ಛಂದಸ್ಸಿನವು. ಉಳಿದ ಋಕ್ಕುಗಳು ಜಗತೀ ಛಂದಸ್ಸಿನವು. ಅನುಕ್ರಮಣಿಕೆಯಲ್ಲಿ **ಇಮಂ ಷೋಳಶ ಕುತ್ಸ ಆಗ್ನೇಯಂ ತದ್ದ್ವಿತ್ರಿಷ್ಟುಬಂತಂ ಪೂರ್ವೋಽ ದೇವಾಸ್ತ್ರಯಃ ಪಾದಾ ದೈವಾಸ್ತನ್ನೋ ಮಿತ್ರೋಽರ್ಧರ್ಚೋಽ ಲಿಂಗೋಕ್ತದೇವತೋ ಯದ್ದೇವತ್ಯಂ ವಾ ಸೂಕ್ತಮಿತಿ** ಎಂದು ಹೇಳಿರುವುದು. ಈ ಸೂಕ್ತದ ಎಂಟನೆಯ ಋಕ್ಕಿನಲ್ಲಿ ಮೊದಲಿನ ಮೂರು ಪಾದಗಳಿಗೆ ದೇವತೆಗಳೇ ದೇವತೆಗಳು. ಕೊನೆಯ ಪಾದಕ್ಕೆ ಅಗ್ನಿಯು ದೇವತೆಯು. ಹದಿನಾರನೆಯ ಋಕ್ಕಿನ ಉತ್ತರಾರ್ಧಕ್ಕೆ ಮಿತ್ರ, ವರುಣ ಅದಿತಿ, ಸಿಂಧು ಪೃಥಿವಿ, ದ್ಯೌಃ ಎಂದು ಆರು ಮಂದಿ ದೇವತೆಯರು. ಅಥವಾ ಅಗ್ನಿಯೇ ಪ್ರಧಾನ ದೇವತೆಯೆಂದು ಹೇಳಬಹುದು. ವರುಣಾದಿಗಳು ಅಷ್ಟು ಮುಖ್ಯರಲ್ಲ. ಪ್ರಾತರನುವಾಕ ಮಂತ್ರಪಠನದಲ್ಲಿ ಆಗ್ನೇಯಕ್ರತು ಸಂಬಂಧವಾದ ಜಗತೀ ಛಂದಸ್ಸಿನ ಮಂತ್ರಗಳಿಗಾಗಿಯೂ ಆಶ್ವಿನ ಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ **ಇಮಂ ಸ್ತೋಮಮರ್ಹತೇ ಸಂಜಾಗೃವದ್ಭಿಃ** ಎಂಬ ಸೂತ್ರವು ನಿರ್ದೇಶಿಸುವುದು. (ಆ- ೪-೧೩) ಮತ್ತು ಅಭಿಪ್ಲವವೆಂಬ ಯಾಗದ ಆರನೆಯ ದಿನವಸದಲ್ಲಿ ಆಗ್ನಿಮಾರುತ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತವನ್ನು ಜಾತವೇದಸಸಂಬಂಧವಾದ ನಿವಿತ್ಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಪ್ರಯಜ್ಯವ ಇಮಂ ಸ್ತೋಮಮಿತ್ಯಾಗ್ನಿಮಾರುತಂ** ಎಂಬ ಸೂತ್ರದಿಂದ ವಿನ್ಯತವಾಗಿರುವುದು (ಆ. ೭-೭) ತೃತೀಯಸವನದಲ್ಲಿಯೂ ಆಗ್ನೇಧ್ರನೆಂಬ ಋತ್ವಿಜನು **ಇಮಂ**

ಸ್ತೋಮಂ ಎಂಬ ಈ ಸೂಕ್ತದ ಮೊದಲನೆಯ ಋಕ್ಕನ್ನು ಪ್ರಸ್ಥಿತಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಇಮಂ ಸ್ತೋಮಮರ್ಹತೇ ಜಾತವೇದಸ ಇತಿ ತಾರ್ತೀಯೆಸವನಿಕ್ಯಃ** ಎಂಬ ಸೂತ್ರವು ನಿರ್ದೇಶಿಸುವುದು (ಆ. ೫–೫).

ಸೂಕ್ತ—೯೪

ಮಂಡಲ—೧ ॥ ಅನುವಾಕ—೧೫ ॥ ಸೂಕ್ತ—೯೪ ॥

ಅಷ್ಟಕ—೧ ॥ ಅಧ್ಯಾಯ—೬ ॥ ವರ್ಗ— ೩೦, ೩೧, ೩೨ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ— ೧೬

॥ ಋಷಿಃ—ಕುತ್ಸ ಆಂಗಿರಸಃ ॥

॥ ದೇವತಾ— ೧–೬, ೮ ರಲ್ಲಿ ೪ ನೆಯ ಪಾದ, ೯–೧೫, ೧೬ ೧ ಮತ್ತು ೨ ನೆಯ ಪಾದಗಳು ಅಗ್ನಿಃ । ೮ ರಲ್ಲಿ ೧, ೨, ೩, ನೆಯ ಪಾದಗಳು, ದೇವಾಃ । ೧೬ ರಲ್ಲಿ ೩ ಮತ್ತು ೪ ಪಾದಗಳು, ಮಿತ್ರೋ ವರುಣೋ೬ದಿತಿಃ ಸಿಂಧುಃ ಪೃಥಿವೀ ದ್ಯೌರಗ್ನಿರ್ವಾ ॥

॥ ಛಂದಃ—೧–೧೪ ಜಗತೀ । ೧೫–೧೬ ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಇಮಂ ಸ್ತೋಮಮರ್ಹತೇ ಜಾತವೇದಸೇ ರಥಮಿವ ಸಂ ಮಹೇಮಾ
ಮನೀಷಯಾ।
ಭದ್ರಾ ಹಿ ನಃ ಪ್ರಮತಿರಸ್ಯ ಸಂಸದ್ಯಗ್ನೇ ಸಖ್ಯೇ ಮಾ ರಿಷಾಮಾ
ವಯಂ ತವ ॥ ೧ ॥

ಪದಪಾಠಃ

ಇನುಃ । ಸ್ತೋಮಂ । ಅರ್ಹತೇ । ಜಾತವೇದಸೇ । ರಥಂ ಇವ । ಸಂ ।
ಮಹೇಮ । ಮನೀಷಯಾ ।
ಭದ್ರಾ । ಹಿ । ನಃ । ಪ್ರಮತಿಃ । ಅಸ್ಯ । ಸಂ ಸದಿ । ಅಗ್ನೇ । ಸಖ್ಯೇ ।
ಮಾ । ರಿಷಾಮ । ವಯಂ । ತವ ॥ ೧ ॥

ಸಾಯಣಭಾಷ್ಯಂ

ಅರ್ಹತೇ ಪೂಜ್ಯಾಯ ಜಾತವೇದಸೇ ಜಾತಾನಾಮುತ್ಪನ್ನಾನಾಂ ವೇದಿತ್ರೇ ಜಾತಪ್ರಜ್ಞಾಯ ಜಾತಧನಾಯ ವಾಗ್ನಯೇ ಮನೀಷಯಾ ನಿಶಿತಯಾ ಬುದ್ಧ್ಯೇಮಮೇತತ್ಸೂಕ್ತರೂಪಂ ಸ್ತೋಮಂ ಸ್ತೋತ್ರಂ ರಥಮಿವ ಯಥಾ ತಕ್ಷಾ ರಥಂ ಸಂಸ್ಕರೋತಿ ತಥಾ ಸಂ ಮಹೇಮ । ಸಮ್ಯಕ್ ಪೂಜಿತಂ ಕುರ್ಮಃ । ಅಸ್ಯಾಗ್ನೇಃ ಸಂಸದಿ ಸಂಭಜನೇ ನೋಽಸ್ಮಾಕಂ ಪ್ರಮತಿಃ ಪ್ರಕೃಷ್ಟಾ ಬುದ್ಧಿರ್ಭದ್ರಾ ಹಿ ಕಲ್ಯಾಣೀ ಸಮರ್ಥಾ ಖಲು । ಅತಸ್ತಯಾ ಬುದ್ಧ್ಯಾ ಸ್ತುಮ ಇತ್ಯರ್ಥಃ । ಹೇ ಅಗ್ನೇ ತವ ಸಖ್ಯೇಽಸ್ಮಾಕಂ ತ್ವಯಾ ಸಹ ಸಖಿತ್ವೇ ಸತಿ ವಯಂ ಮಾ ರಿಷಾಮ । ಹಿಂಸಿತಾ ನ ಭವಾಮ । ಅಸ್ಮಾನ್ರಕ್ಷೇತ್ಯರ್ಥಃ ॥ ಅರ್ಹತೇ । ಅರ್ಹ ಪೂಜಾಯಾಂ । ಅರ್ಹಃ ಪ್ರಶಂಸಾಯಾಂ । ಪಾ- ೩-೨-೧೩೩ । ಇತಿ ಲಟಃ ಶತ್ರಾದೇಶಃ । ಶಪಃ ಪಿತ್ತ್ವಾದನುದಾತ್ತತ್ವಂ । ಶತುಶ್ಚಾದುಪದೇಶಾಲ್ಲಸಾರ್ವಧಾತುಕಸ್ವರೇಣ ಧಾತುಸ್ವರಃ ಶಿಷ್ಯತೇ । ಮಹೇಮ । ಮಹ ಪೂಜಾಯಾಂ । ರಿಷಾಮ । ರಿಷ ಹಿಂಸಾಯಾಂ । ವ್ಯತ್ಯಯೇನ ಶಃ । ತವ । ಯುಷ್ಮದಸ್ಮದೋರ್ಜಸೀತ್ಯಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಅರ್ಹತೇ—ಪೂಜ್ಯನೂ । **ಜಾತವೇದಸೇ**—ಉತ್ಪನ್ನವಾದ ಸಕಲವನ್ನು ತಿಳಿಯುವವನೂ ಅಥವಾ ಧನ ಅಥವಾ ಪ್ರಜ್ಞೆಯುಳ್ಳವನೂ ಆದ ಅಗ್ನಿಗೆ । **ಮನೀಷಯಾ**—ನಮ್ಮ (ಚುರುಕಾದ) ಬುದ್ಧಿಯಿಂದ । **ಇಮಂ ಸ್ತೋಮಂ**— ಈ ಸೂಕ್ತರೂಪವಾದ ಸ್ತೋತ್ರವನ್ನು । **ರಥಮಿವ** (ರಥಕಾರನು) ರಥವನ್ನು ನಿರ್ಮಿಸುವಂತೆ । **ಸಂ ಮಹೇಮ**—ಬಹಳ ಕುಶಲತೆಯಿಂದ ಸೃಷ್ಟಿಸುತ್ತೇನೆ । **ಅಸ್ಯ**—ಈ ಅಗ್ನಿಯ । **ಸಂಸದಿ**—ಸಾಂಘಿಕವಾದ ಪೂಜೆಯಲ್ಲಿ । **ನಃ**—ನಮ್ಮ । **ಪ್ರಮತಿಃ**— ಶ್ರೇಷ್ಠವಾದ ಬುದ್ಧಿಯು । **ಭದ್ರಾ ಹಿ**— ಕಲ್ಯಾಣಾತ್ಮಕವಾಗಿದೆ । **ಅಗ್ನೇ**—ಎಲೈ ಅಗ್ನಿಯೇ । **ತವ**—ನಿನ್ನ । **ಸಖ್ಯೇ**— ಸ್ನೇಹದ ನಿಮಿತ್ತವಾಗಿ । **ವಯಂ**—ನಾವು । **ಮಾ ರಿಷಾಮ**—ಹಿಂಸಿತರಾಗದೇ ಇರುವಂತೆ (ಅನುಗ್ರಹಿಸು) ॥

ಭಾವಾರ್ಥ

ಪೂಜ್ಯನೂ, ಸಕಲವನ್ನೂ ತಿಳಿಯುವ ಜ್ಞಾನವುಳ್ಳವನೂ ಆದ ಅಗ್ನಿಗೆ ರಥಕಾರನು ನಾಜೋಕಾಗಿ ರಥವನ್ನು ಸೃಷ್ಟಿಸುವಂತೆ ನಾವೂ ಸಹ ನಮ್ಮ ಚುರುಕಾದ ಬುದ್ಧಿಯಿಂದ ಈ ಸೂಕ್ತರೂಪವಾದ ಸ್ತೋತ್ರವನ್ನು ಕುಶಲತೆಯಿಂದ ಸೃಷ್ಟಿಸುತ್ತೇನೆ. ಈ ಅಗ್ನಿದೇವನ ಪೂಜೆಯಲ್ಲಿ ನಮ್ಮ ಬುದ್ಧಿಯು ಕಲ್ಯಾಣಾತ್ಮಕವಾಗಿದೆ. ಎಲೈ ಅಗ್ನಿಯೇ, ನಿನ್ನೊಡನೆ ನನ್ಮುನ್ನೇಹವಿರುವ ಕಾರಣ ನಾವು ಶತ್ರುಗಳಿಂದ ಹಿಂಸಿತರಾಗದೇ ಇರುವಂತೆ ಅನುಗ್ರಹಿಸು

English Translation

To him who is worthy of praise, and all-knowing, we constuct, with our minds, this hymn, as (a workman makes) a car; happy is our understading when engaged in his adoration ; O Agni, let us not suffer injury through your friendship.

ವಿಶೇಷವಿಷಯಗಳು

ಜಾತವೇದಸೇ— ಜಾತಾನಿ ವೇದ ; ಜಾತಾನಿ ವೈನಂ ವಿದುಃ ; ಜಾತೇ ಜಾತೇ ವಿದ್ಯತ ಇತಿ ವಾ ; ಜಾತವಿತ್ತೋ ವಾ ಜಾತಧನಃ ; ಜಾತವಿದ್ಯೋ ವಾ ಜಾತಜ್ಞಾನಃ । ಉತ್ಪನ್ನವಾದ ಸಕಲವನ್ನು ತಿಳಿಯುವವನೆಂದಾಗಲಿ, ಅಥವಾ ಉತ್ಪನ್ನವಾದ ಸಕಲವೂ ಇವನನ್ನು ತಿಳಿಯುವುವು ಎಂದಾಗಲಿ, ಅಥವಾ ಉತ್ಪನ್ನವಾದ ಸಕಲ ವಸ್ತುಗಳಲ್ಲಿಯೂ ಆವರಿಸಿಕೊಂಡಿರುತ್ತಾನೆಂದಾಗಲಿ, ಅಥವಾ ಉತ್ಪನ್ನವಾದ ಸಕಲ ಧನವುಳ್ಳವನೆಂದೂ ಅಥವಾ ಸಮಸ್ತವನ್ನೂ ತಿಳಿಯುವ ಪ್ರಜ್ಞೆಯುಳ್ಳವನೆಂದಾಗಲಿ ಅರ್ಥಮಾಡಬಹುದೆಂದು ನಿರುಕ್ತಕಾರರು ವಿವರಿಸುತ್ತಾರೆ (ನಿ. ೭-೧೯) ಬೃಹದ್ದೇವತೆಯಲ್ಲಿಯೂ ಸಹ ಜಾತವೇದಸ್ಸಿನ ಸ್ವರೂಪ ಮತ್ತು ಸ್ಥಾನಗಳನ್ನು ವಿಶದವಾಗಿ ವಿವರಿಸಿದ್ದಾರೆ.

ಇಹಾಗ್ನಿಭೂತಸ್ತ್ವೃಷಿಭಿರ್ಲೋಕೇ ಸ್ತುತಿಭಿರೀಳಿತಃ ।
ಜಾತವೇದಾಸ್ತತೋ ಮಧ್ಯೇ ಸ್ತುತೋ ವೈಶ್ವಾನರೋ ದಿವಿ ।
(ಬೃ. ದೇ. ೧-೬೭)

ಋಷಿಗಳು ಪೃಥ್ವಿಯಮೇಲಿರುವ ಅಗ್ನಿಯನ್ನು **ಅಗ್ನಿ**ಯೆಂದೂ, ಮಧ್ಯಲೋಕದಲ್ಲಿರುವ ಅಗ್ನಿಯನ್ನು **ಜಾತವೇದ**ಸ್ಸೆಂದೂ ದ್ಯುಲೋಕದಲ್ಲಿರುವವನನ್ನು ವೈಶ್ವಾನರನೆಂದೂ ಹೊಗಳುತ್ತಾರೆಂದು ಈ ಶ್ಲೋಕದಲ್ಲಿ ಹೇಳಿ ಇದೇ ಭಾವವನ್ನು ಮುಂದುವರಿಸುತ್ತಾ.

ವೈಶ್ವಾನರಂ ಶ್ರಿತೋ ಹ್ಯಗ್ನಿರಗ್ನಿಂ ವೈಶ್ವಾನರಃ ಶ್ರಿತಃ ।
ಅನಯೋರ್ಜಾತವೇದಾಸ್ತು ತಥೈತೇ ಜಾತವೇದಸೀ ॥
(ಬೃ. ದೇ. ೧-೬೭)

ಅಗ್ನಿಯು ವೈಶ್ವಾನರನಲ್ಲಿಯೂ ವೈಶ್ವಾನರನು ಅಗ್ನಿಯಲ್ಲಿಯೂ ಅಡಕವಾಗಿ **ಜಾತವೇದಸ್ಸು** ಇವೆರಡರಲ್ಲಿಯೂ ಅಡಕವಾಗಿದ್ದಾನೆಂದೂ ಇವೆರಡೂ ಜಾತವೇದಸ್ಸಿನ ಎರಡು ಅಂಶಗಳೆಂದೂ ವಿವರಿಸಿದೆ. ಹೀಗೆ ಮೊದಲನೇ ಅಧ್ಯಾಯದಲ್ಲಿ ಜಾತವೇದಸ್ಸಿನ ಸ್ಥಾನಗಳನ್ನು ಹೇಳಿ ಎಂಡನೇ ಅಧ್ಯಾಯದಲ್ಲಿ ಸ್ವರೂಪ ನಿರ್ವಚನವನ್ನು ಮಾಡಿದೆ;

ಭೂತಾನಿ ವೇದ ಯೆಜ್ಞಾತೋ ಜಾತವೇದಾಥ ಕಥ್ಯತೇ ।

ಯಚ್ಛೈಷ ಜಾತವಿದ್ಯೋಽಭೂತ್ ವಿತ್ತಂ ಜಾತೋಽಧಿವೇತ್ತಿ ವಾ ॥
(ಬೃ. ದೇ. ೨-೩೦)

ವಿದ್ಯತೇ ಸರ್ವಭೂತೈರ್ಹಿ ಯದ್ಯಾ ಜಾತಃ ಪುನಃ ಪುನಃ ।
ತೇನೈಷ ಮಧ್ಯಭಾಗೇಂದ್ರೋ ಜಾತವೇದಾ ಇತಿ ಸ್ತುತಃ ॥
(ಬೃ. ದೇ. ೨-೩೧)

ಉತ್ಪನ್ನವಾಗುವಾಗಲೇ ಸಕಲವನ್ನೂ ತಿಳಿಯುವುದರಿಂದಲೂ ಅಥವಾ ಜ್ಞಾನವು ಅವನಲ್ಲೇ ಉತ್ಪನ್ನವಾದುದರಿಂದಲೂ, ಅಥವಾ ಉತ್ಪನ್ನವಾದಾಗಲೇ ಸಕಲಧನವನ್ನು ತಿಳಿದು ಹೊಂದುವುದರಿಂದಲೂ, ಅಥವಾ ಪುನಃ ಪುನಃ ಉತ್ಪನ್ನನಾದಾಗಲೆಲ್ಲಾ ಸಕಲ ಭೂತಗಳಿಂದಲೂ ತಿಳಿಯಲ್ಪಡುವನಾದುದರಿಂದಲೂ ಮಧ್ಯಲೋಕವಾಸಿಯಾದ **ಇಂದ್ರನಂತೆ ಜಾತವೇದಸ್ಸೆಂದು ಅಗ್ನಿಯು** ಸ್ತುತನಾಗಿದ್ದಾನೆಂದು **ಬೃಹದ್ದೇವತೆಯ** ನಿರ್ವಚನವಿದೆ. **ಜಾತವೇದಸೇ** ಎಂದರೆ ಇಂತಹ ಸ್ವರೂಪವುಳ್ಳ ಅಗ್ನಿಗೆ ಎಂದರ್ಥ.

ಇಮಂ ಸ್ತೋಮಂ ರಥಮಿವ ಸಂ ಮಹೇಮ—**ಯಥಾ ತಕ್ಷಾ ರಥಂ ಸಂಸ್ಕರೋತಿ ತಥಾ ಸಮ್ಯಕ್ ಪೂಜಿತಂ ಕುರ್ಮಃ ।** ರಥಕಾರನು ರಥವನ್ನು ನಾಜೂಕಾಗಿಯೂ ಸಂಚಾರಕಾಲದಲ್ಲಿ ಆಹ್ಲಾದವನ್ನುಂಟುಮಾಡುವಂತೆಯೂ ಇರುವಹಾಗೆ ಮಾಡುವ ರೀತಿಯಲ್ಲಿ ನಾವೂ ಸಹ ಸುಸಂಸ್ಕೃತವಾದ ಭಾಷೆಯಿಂದ ಶ್ರಾವ್ಯವಾಗಿರುವುದೂ ಶ್ರದ್ಧಾಯುಕ್ತವಾದ ಭಾವದಿಂದ ನಿನಗೆ ಆಹ್ಲಾದವನ್ನುಂಟುಮಾಡುವುದೂ ಆದ ಸ್ತೋತ್ರಗಳನ್ನು ನಿನಗೆ ಅರ್ಪಿಸಲು ಯೋಗ್ಯವಾದ ರೀತಿಯಲ್ಲಿ ನಿರ್ಮಿಸುವೆವು ಎಂದರ್ಥ. ಎಲ್ಲಾ ದೃಷ್ಟಿಯಿಂದಲೂ ಕಾವ್ಯಾತ್ಮಕವಾದ ಸ್ತೋತ್ರದ ರಚನೆಯನ್ನು ಅನೇಕಸಲ ರಥದ ನಿರ್ಮಾಣಕ್ಕೆ ಹೋಲಿಸಿ ಈ ಸ್ತೋತ್ರದ ಸೃಷ್ಟಿಗೆ ಕೌಶಲ್ಯವು ಎಷ್ಟು ಪ್ರಧಾನವೆಂಬುದನ್ನು ತೋರಿಸುವ ಉದಾಹರಣೆಗಳು ಕೆಲವಿವೆ—

ಅಸ್ಮಾ ಇದು ಸ್ತೋಮಂ ಸಂ ಹಿನೋಮಿ ರಥಂ ನ ತಷ್ಟೇವ ತತ್ಸಿನಾಯೇ ।
(ಋ. ಸಂ. ೧-೬೧-೪)

ವಸ್ತ್ರೇವ ಭದ್ರಾ ಸುಕೃತಾ ವಸೂಯೂ ರಥಂ ನ ಧೀರಃ ಸ್ವಪಾ ಅತಕ್ಷಂ ।
(ಋ. ಸಂ. ೫-೭೯-೧೫)

ಏವೇದಿಂದ್ರಾಯ ವೃಷಭಾಯ ವೃಷ್ಣೇ ಬ್ರಹ್ಮಾಕರ್ಮ ಭೃಗವೋ ನ ರಥಂ ।
(ಋ. ಸಂ. ೪-೧೬-೨೦)

ಏತಂ ವಾಂ ಸ್ತೋಮಮಶ್ವಿನಾವಕರ್ಮಾತಕ್ಷಾಮ ಭೃಗವೋ ನ ರಥಂ ।
(ಋ. ಸಂ. ೧೦-೩೯-೧೪)

ಇತ್ಯಾದಿ ಋಕ್ಕುಗಳಲ್ಲಿ ಕಾವ್ಯರೂಪವಾದ ಸ್ತೋತ್ರದ ನಿರ್ಮಾಣ ಕೌಶಲ್ಯಕ್ಕೂ ರಥದ ನಿರ್ಮಾಣ ಕೌಶಲ್ಯಕ್ಕೂ ಸಾದೃಶ್ಯವನ್ನು ತೋರಿಸಿ ಸ್ತೋಮಗಳ ಮಹಿಮೆಯನ್ನು ಕೊಂಡಾಡಿದೆ.

ತವ ಸಖ್ಯೇ ವಯಂ ಮಾ ರಿಷಾಮ—ಅಗ್ನಿಯ ಸ್ನೇಹವನ್ನು ಬೆಳೆಸಿ ಅವನನ್ನು ಉದ್ದೇಶಿಸಿ ಶ್ರದ್ಧೆಯಿಂದ ಯಾಗಮಾಡಿದರೆ ಅಗ್ನಿಯ ಸಹಾಯವು ಸಿದ್ಧವಾದುದರಿಂದ ಯಾವ ಶತ್ರುವೂ ಹಿಂಸಿಸಲಾರನು ಅಥವಾ ಇನ್ನು ಯಾವ ವಿಧವಾದ ಹಿಂಸೆಯೂ ಆಗಲಾರದು.

ನ ತಸ್ಯ ಮಾಯಯಾ ಚನ ರಿಪುರೀಶೀತ ಮರ್ತ್ಯಃ।
ಯೋ ಅಗ್ನಯೇ ದದಾಶ ಹವ್ಯದಾತಿಭಿಃ ॥

(ಋ. ಸಂ. ೮–೨೩–೧೫)

ಮಾ ತೇ ಸಖಾಯಃ ಸದಮಿದ್ರಿಷಾಮ ಯಚ್ಛಾ ತೋಕಾಯ ತನಯಾಯ ಶಂ ಯೋಃ।

(ಋ. ಸಂ. ೪–೧೨–೫)

ಇತ್ಯಾದಿ ಪ್ರಾರ್ಥನಾ ಕಾಲಗಳಲ್ಲೆಲ್ಲಾ ಅಗ್ನಿಯ ಸಖ್ಯವನ್ನು ಪಡೆದ ಯಜಮಾನನಿಗೆ ಯಾವ ಹಿಂಸೆಯೂ ಒದಗಲಾರದೆಂಬ ಭರವಸೆಯು ಕಾಣುತ್ತದೆ. ಈ ಸೂಕ್ತದ ಕೊನೆಯವರೆಗೂ ಈ ಆನುಪೂರ್ವಿಯು ಪಲ್ಲವಿಯಂತೆ ಪ್ರತಿಯೊಂದು ಋಕ್ಕಿನಲ್ಲಿಯೂ ನಾಲ್ಕನೆಯ ಪಾದವಾಗಿ ಪಠಿತವಾಗಿರುವುದು.

ವ್ಯಾಕರಣಪ್ರಕ್ರಿಯಾ

ಅರ್ಹತೇ— ಅರ್ಹ ಪೂಜಾಯಾಂ ಧಾತು. ಇದಕ್ಕೆ **ಅರ್ಹಃ ಪ್ರಶಂಸಾಯಾಮ್**— (ಪಾ. ಸೂ. ೩–೩–೧೩೩) ಎಂಬುದರಿಂದ ಪ್ರಾಶಸ್ತ್ಯತೋರುವಾಗ ಲಟ್‌ಗೆ ಶತೃ ಆದೇಶ. ಶಪ್ ವಿಕರಣ ಅರ್ಹತ್ ಶಬ್ದ ವಾಗುತ್ತದೆ. ಶಪ್ ಪಿತ್ತಾದುದರಿಂದ ಅನುದಾತ್ತ. ಅದುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು (ಶತೃ) **ತಾಸ್ಯನುದಾತ್ತೇತ್**— (ಪಾ. ಸೂ. ೬ ೧–೧೮೬) ಎಂಬುದರಿಂದ ಅನುದಾತ್ತ. ಆಗ ಧಾತುಸ್ವರ ಉಳಿಯುತ್ತದೆ. ಚತುರ್ಥೀಏಕವಚನಾಂತರೂಪ.

ಮಹೇಮ—ಮಹ ಪೂಜಾಯಾಂ ಧಾತು. ವಿಧಿಲಿಙ್. ಉತ್ತಮ ಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ. **ನಿತ್ಯಂಙಿತಃ** ಎಂಬುದರಿಂದ ಸಕಾರಲೋಪ. ಯಾಸುಟ್‌ಆಗಮ. ಶಪ್ ವಿಕರಣ. **ಅತೋಯೇಯಃ** ಎಂಬುದರಿಂದ ಯಾಸಿಗೆ ಇಯಾದೇಶ. ಯಲೋಪ. ತಿಙಂತಸಿಘಾತಸ್ವರ ಬರುತ್ತದೆ.

ಸಖ್ಯೇ—ಸುಖ್ಯುಃ ಭಾವಃ ಸಖ್ಯಮ್. **ಸಖ್ಯುರ್ಯಃ** ಎಂಬುದರಿಂದ ಯ ಪ್ರತ್ಯಯ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ಸಪ್ತಮಿ ಏಕವಚನಾಂತರೂಪ.

ರಿಷಾಮ— ರಿಷ ಹಿಂಸಾಯಾಮ್ ಧಾತು ದಿವಾದಿ ಲೋಡುತ್ತಮ ಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ. ಲಜ್ವದ್ಭಾವವಿರುವುದರಿಂದ ಸಲೋಪ. **ವ್ಯತ್ಯಯೋ ಬಹುಲಮ್** ಎಂಬುದರಿಂದ ಶವಿಕರಣ ಬರುತ್ತದೆ, **ಆಡುತ್ತಮಸ್ಯಪಿಚ್ಚ**— (ಪಾ. ಸೂ. ೩–೪–೯೨) ಎಂಬುದರಿಂದ ಆಡಾಗಮ. ಅತಿಙಂತದ ಪರದಲ್ಲಿರುವುದರಿಂದ ಸಿಘಾತಸ್ವರ ಬರುತ್ತದೆ. **ಅನ್ಯೇಷಾಮಪಿದೃಶ್ಯತೇ** ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ.

ತವ— ಯುಷ್ಮತ್ ಶಬ್ದ. ಷಷ್ಠೀ ಏಕವಚನ ಪರವಾದಾಗ ಮಪರ್ಯಂತಕ್ಕೆ **ತವಮಮೌಙಸಿ** ಎಂಬುದರಿಂದ ತವ ಆದೇಶ. ಙಸ್ ಪ್ರತ್ಯಯಕ್ಕೆ ಅಾದೇಶ ಮಪರ್ಯಂತಕ್ಕೆ ಲೋಪ. **ಯುಷ್ಮದಸ್ಮದೋರ್ಙಸಿ**— (ಪಾ. ಸೂ. ೬ ೧–೨೧೧) ಎಂಬುದರಿಂದ ಉದ್ಯುದಾತ್ತ ಸ್ವರ ಬರುತ್ತದೆ. ॥ ೧ ॥

संहितापाठः

यस्मै᳡ त्वमायजसे स साधत्यनर्वा क्षेति दधते
सुवीर्यं ।
स तूताव नैनमश्नोत्यंहतिरग्ने सख्ये मा रिषामा
वयं तव ॥ ७ ॥

पदपाठः

यस्मै᳡ । त्वं । आऽयजसे । सः । साधति । अनर्वा । क्षेति । दधते ।
सुवीऽर्यं ।
सः । तूताव । न । एनं । अश्नोति । अंहतिः । अग्ने । सख्ये ।
मा । रिषाम । वयं । तव ॥ ७ ॥

सायणभाष्यं

यस्मै᳡ यजमानाय हे अग्ने त्वमायजसे देवानाभिमुख्येन यजसि स यजमानः साधति । स्वाभिलषितं साधयति । प्राप्नोतीत्यर्थः । किंच स यजमानोऽनर्वा शत्रुभिरप्रत्यृतः सन् क्षेति । निवसति । तथा सुवीर्यं शोभनवीर्योपेतं धनं दधते । धारयति । प्राप्नोतीत्यर्थः । धृत्वा च स यजमानस्तूताव । वर्धते । एनं यजमानमंहतिरार्तिर्दार्यरिद्र्यं नाश्नोति । न प्राप्नोति । अन्यत्पूर्ववत् ॥ साधति ॥ षिधु संराद्धौ । णिचि सिद्ध्यतेरपारलौकिके । पा- ६.१-५५ । इत्यात्वं । धंदस्युभयथेति शप अर्धधातुकत्वान्ण्णेरनिटेति णि लोपः । क्षेति । क्षि निवासगत्योः । बहुलं धंदसीति विकरणस्य लुक् । दधतेः दध धारणे । भ्वादिकः । तूताव । तु इति वृद्ध्यर्थः सौत्रो धातुः । अस्माच्चंदसो लिट् । तुजादित्वा दभ्यासस्य दीर्घत्वं । अश्नोति । व्यत्ययेन परस्मैपदं । अंहतिः हंतेरंहि च उ ४-६३ । इत्यतिप्रत्ययः । चिदित्यनुवृत्तेरंतोदात्तत्वं ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ, । **ತ್ವಂ**—ನೀನು । **ಯಸ್ಮೈ**—ಯಾವ ಯಜಮಾನನಿಗಾಗಿ । **ಆಯಜಸೇ**—(ದೇವತೆಗಳನ್ನು ಉದ್ದೇಶಿಸಿ) ಯಾಗ ಮಾಡುತ್ತೀಯೋ । **ಸಃ**—ಆ ಯಜಮಾನನು । **ಸಾಧತಿ**—(ತನ್ನ ಇಷ್ಟಾರ್ಥಗಳನ್ನು)ಪಡೆಯುತ್ತಾನೆ. । **ಅನರ್ವಾ**—(ಶತ್ರುಗಳಿಂದ ಸಂಭವಿಸುವ) ಮುತ್ತಿಗೆಯ ಭಯದಿಂದ ರಹಿತನಾಗಿ, ಶತ್ರುಗಳ ಆಧೀನನಾಗುವುದನ್ನು ತಪ್ಪಿಸಿಕೊಂಡು, **ಕ್ಷೇತಿ**—(ನಿಶ್ಚಿಂತೆಯಿಂದ) ಜೀವಿಸುತ್ತಾನೆ. । **ಸುವೀರ್ಯಂ**—ಶ್ರೇಷ್ಠವಾದ ವೀರ್ಯಕ್ಕೆ ಸಾಧನನಾದ ಧನವನ್ನು । **ದಧತೇ**—ಹೊಂದುತ್ತಾನೆ । (ಅನಂತರ) । **ಸಃ**—ಆ ಯಜಮಾನನು । **ತೋಕಾವ**—ಅಭಿವೃದ್ಧಿಯನ್ನು ಹೊಂದುತ್ತಾನೆ. । **ಏನಂ ಈ** ಯಜಮಾನನನ್ನು । **ಅಂಹತಿಃ**—ದಾರಿದ್ರ್ಯವು । **ನ ಆಶ್ನೋತಿ**—ಅಂಟುವುದಿಲ್ಲ. । **ಅಗ್ನೇ**—ಎಲೈ ಅಗ್ನಿಯೇ, । **ತವ ಸಖ್ಯೇ**—ನಿನ್ನೊಡನೆ ಸ್ನೇಹವಿರುವ ಕಾರಣ । **ವಯಂ**—ನಾವು । **ಮಾ ರಿಷಾಮ**—ಹಿಂಸಿತರಾಗದಿರುವಂತೆ (ಅನುಗ್ರಹಿಸು) ।

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಯಾವ ಯಜಮಾನನಿಗಾಗಿ ದೇವತೆಗಳನ್ನು ಉದ್ದೇಶಿಸಿ ಯಾಗಮಾಡುತ್ತೀಯೋ ಆ ಯಜಮಾನನು ತನ್ನ ಇಷ್ಟಾರ್ಥಗಳನ್ನು ಪಡೆಯುತ್ತಾನೆ. ಶತ್ರುಗಳ ಮುತ್ತಿಗೆಯ ಭಯವಿಲ್ಲದೇ ನಿಶ್ಚಿಂತೆಯಿಂದ ಜೀವಿಸುತ್ತಾನೆ. ಶ್ರೇಷ್ಠವಾದ ವೀರ್ಯಕ್ಕೆ ಸಾಧನವಾದ ಧನವನ್ನು ಹೊಂದುತ್ತಾನೆ. ಅಭಿವೃದ್ಧಿಯನ್ನು ಪಡೆಯುತ್ತಾನೆ. ಅವನಿಗೆ ದಾರಿದ್ರ್ಯದ ಸಂಪರ್ಕವೇ ಇರುವುದಿಲ್ಲ ಎಲೈ ಅಗ್ನಿಯೇ, ನಿನ್ನೊಡನೆ ಸ್ನೇಹವಿರುವ ಕಾರಣ ನಾವು ಹಿಂಸಿತರಾಗದಿರುವಂತೆ ಅನುಗ್ರಹಿಸಿ ರಕ್ಷಿಸು.

English Translation

He for whom you sacrifice, accomplishes (his objects), abides free from aggression, and enjoys (wealth, the source of) strength ; he prospers and poverty never approaches him ; let us not suffer injury, through your friendship.

ವಿಶೇಷವಿಷಯಗಳು

ತ್ವಂ ಯಸ್ಮೈ ಆಯಜಸೇ ಸಃ ಸಾಧತಿ— ನೀನು ಯಾವ ಯಜಮಾನನಿಗಾಗಿ ದೇವತೆಗಳನ್ನು ಉದ್ದೇಶಿಸಿ ಯಾಗಮಾಡುತ್ತೀಯೋ ಆ ಯಜಮಾನನು ತನ್ನ ಇಷ್ಟಾರ್ಥಗಳನ್ನು ಪಡೆಯುತ್ತಾನೆಂದರ್ಥ. ಅಗ್ನಿಯು ಉತ್ಪನ್ನನಾದೊಡನೆಯೆ ಯಜ್ಞವನ್ನು ನಿರ್ಮಿಸಿ ಮಾನವರಿಗಾಗಿ ದೇವತೆಗಳನ್ನುದ್ದೇಶಿಸಿ ಯಜ್ಞಮಾಡುತ್ತಾನೆ. ಅವನೇ ಗೃಹಪತಿಯ ಪ್ರಾರ್ಥನೆಯನ್ನು ಅಂಗೀಕರಿಸಿ ಸಂದರ್ಭಾನುಸಾರವಾಗಿ ಪುರೋಹಿತನಾಗಿಯೂ ಋತ್ವಿಕ್ಕಾಗಿಯೂ, ಹೋತೃವಾಗಿಯೂ, ಬ್ರಹ್ಮನಾಗಿಯೂ ಇದ್ದುಕೊಂಡು ದೇವತೆಗಳಿಗೆ ಆಹುತಿಗಳನ್ನು ಅರ್ಪಿಸಿ ಅವರ ಅನುಗ್ರಹವು ಮನೆಯ ಯಜಮಾನನಿಗೆ ಲಭಿಸುವಂತೆ ಮಾಡುತ್ತಾನೆ. ಋ. ಸಂ. ೧-೧-೧ ; ೧-೧೨-೧ ; ೧-೧೩-೧ ; ೧-೧೪೪-೨ ; ಇತ್ಯಾದಿ ಅಗ್ನಿಪರವಾದ ಋಕ್ಕುಗಳು ಪರಿತವಾಗುವ ಸುಮಾರು ಇನ್ನೂರು ಸಂದರ್ಭಗಳಲ್ಲಿ ಯಜ್ಞಗಳಲ್ಲಿ ಅಗ್ನಿಯು ಮುಖ್ಯಪಾತ್ರವು ವರ್ಣಿತವಾಗಿದೆ. ಇವನೇ ಯಜ್ಞಾತ್ಮನಾದುದರಿಂದಲೂ ದೇವತೆಗಳ ತೃಪ್ತಿಗೆ ಪೂರ್ಣವಾವ ಕಾರಣನಾದುದರಿಂದಲೂ ಸಕಲವಿಧವಾದ ದೇವತೆಗಳ ಅನುಗ್ರಹವೂ ಇವನ ಮೂಲಕವಾಗಿ ಸಾಧಿಸಬಹುದೆಂದು ಅಭಿಪ್ರಾಯವು.

ಅನರ್ವಾ— ಅನರ್ವಾऽಪ್ರತ್ಯೃತೋऽನ್ಯಸ್ಮಿನ್ (ನಿ. ೬-೨೩) ಇತರರ ಆಶ್ರಯವೂ ಅಧೀನವೂ ಇಲ್ಲದಿರುವುದು ಎಂಬರ್ಥದಲ್ಲಿ **ಈ** ಪದವು ಅನೇಕ ಸಂದರ್ಭಗಳಲ್ಲಿ ಉಪಯೋಗಿಸಲ್ಪಟ್ಟಿದೆ ಋ. ಸಂ. ೨-೪೦-೬ ; ೪-೧೭-೪೦ ; ೫-೪೯-೪ ; ೭-೨೦-೩ ; ೧೦-೬೧-೫ ಇತ್ಯಾದಿ ಋಕ್ಕುಗಳಲ್ಲಿ ವರ್ಣಿತಗಳಾದ ದೇವತೆಗಳು ಶತ್ರುಗಳಿಂದ ಅಪ್ರತಿಹತರಾಗಿ, ಅವರ ಅಧೀನರಾಗದೇ ತಮ್ಮ ಪರಾಕ್ರಮವನ್ನು ತೋರಿಸುವವರು ಎಂಬರ್ಥವನ್ನು ಕೊಡುತ್ತದೆ. ಅದರಂತೆಯೇ ಇಲ್ಲಿಯೂ ಸಹ ಅಗ್ನಿಯ ಅನುಗ್ರಹವನ್ನು ಪಡೆದ ಯಜಮಾನನು ಶತ್ರುಗಳಿಂದ ಜಿತನಾಗದೆಯೂ, ಅವರ ಅಧೀನನಾಗದೆಯೂ ಸ್ವತಂತ್ರವಾಗಿ ಜೀವಿಸುತ್ತಾನೆಂದರ್ಥವು

ಕ್ಷೇತಿ—ಸ್ವತಂತ್ರವಾಗಿ ತನ್ನ ನಿವಾಸಸ್ಥಾನದಲ್ಲಿಯೇ ವಾಸವಾಗಿರುತ್ತಾ ಸುಖದಿಂದಿರುತ್ತಾನೆಂದಭಿಪ್ರಾಯ.

ತೂತಾವ—ವೃದ್ಧಿಯಾಗು ಅಥವಾ ಶಕ್ತಿಯನ್ನು ಹೊಂದು ಎಂದರ್ಥವನ್ನು ಕೊಡುವ **ತು** ಎಂಬ ಧಾತುವಿನಿಂದ **ತೂತಾವ** ಎಂದಾಗಿದೆ. ವೃದ್ಧಿಯನ್ನು ಪಡೆದನು ಅಥವಾ ಶಕ್ತಿಯನ್ನು ಪಡೆದನು ಎಂದಭಿಪ್ರಾಯವು.

ಅಂಹತಿಃ— ಅಂಹತಿಶ್ಚಾಂಹುಶ್ಚಾಂಹಶ್ಚ ಹಂತೇಃ (ನಿ.೪-೨೬) ಹನ್ ಧಾತುವಿನಿಂದ ಅಂಹತಿ ಶಬ್ದದ ನಿಷ್ಪತ್ತಿಯು ಆಗಿದೆ. ಹಿಂಸೆಮಾಡು, ದುಃಖಪಡಿಸು ಎಂದಾಗುತ್ತದೆ. ಇಲ್ಲಿ ದಾರಿದ್ರ್ಯರೂಪವಾದ ದುಃಖವು ಎಂದಭಿಪ್ರಾಯವು. ಅಗ್ನಿಯ ಅನುಗ್ರಹವನ್ನು ಪಡೆದ ಯಜಮಾನನಿಗೆ **ಅಂಹತಿಃ ನಾಶ್ನೋತಿ** ದಾರಿದ್ರ್ಯವು ಅಂಟುವುದೇ ಇಲ್ಲ ಎಂದರ್ಥ.

ವ್ಯಾಕರಣಪ್ರಕ್ರಿಯಾ

ಯಜಸೇ—ಯಜ ದೇವಪೂಜಾಸಂಗತಿಕರಣದಾನೇಷು ಧಾತು. ಲಟ್ ಮಧ್ಯಮಪುರುಷ ಏಕವಚನ ರೂಪ. ಯಜ್ಞೋಪಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅನುಪದೇಶದ ಪರದಲ್ಲಿರುವುದರಿಂದ ಪ್ರತ್ಯಯವು ಅನುದಾತ್ತವಾಗುತ್ತದೆ. ಆಗ ಧಾತುಸ್ವರ ಉಳಿಯುತ್ತದೆ.

ಸಾಧತಿ—ಷಿದು ಸಂಸಾದ್ಧೌ ಧಾತು. ಇದಕ್ಕೆ **ಹೇತುಮತಿ ಚ** ಎಂಬುದರಿಂದ ಪ್ರಯೋಜಕವ್ಯಾಪಾರ ತೋರುವುದರಿಂದ ಣಿಚ್ ಬರುತ್ತದೆ. ಣಿಚ್ ಪರವಾದಾಗ **ಸಿದ್ಧ್ಯತೇರಪಾರಲೌಕಿಕೇ**— (ಪಾ. ಸೂ ೬-೧-೪೯) ಎಂಬುದರಿಂದ ಆತ್ವ. **ಛಂದಸ್ಯುಭಯಥಾ** ಎಂಬುದರಿಂದ ಶಪಿಗೆ ಆರ್ಧಧಾತುಕ ಸಂಜ್ಞೆ ಬರುವುದರಿಂದ ತಸ್ಮಿನಿತ್ತವಾಗಿ ಣಿಚಿಗೆ **ಣೇರನಿಟಿ** ಎಂಬುದರಿಂದ ಲೋಪ ತಿಜಂತನಿಘಾತಸ್ವರ ಬರುತ್ತದೆ.

ಕ್ಷೇತಿ ಕ್ಷಿ ನಿವಾಸಗತ್ಯೋಃ ಧಾತು ಭ್ವಾದಿ. ಲಿಟ್ ಪ್ರಥಮಪುರುಷ ಏಕವಚನದಲ್ಲಿ ತಿಪ್. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ (ಶಪಿಗೆ) ಲುಕ್ ಪ್ರತ್ಯಯ ನಿಮಿತ್ತವಾಗಿ ಧಾತುವಿನ ಇಕಿಗೆ ಗುಣ. ಅತಿಜಂತದ ಪರದಲ್ಲಿ ರುವುದರಿಂದ ನಿಘಾತಸ್ವರ ಬರುತ್ತದೆ.

ಧಧತೇ— ದಧ ಧಾರಣೇ ಧಾತು. ಭ್ವಾದಿ ಅನುದಾತ್ತೇತ್ತಾದುದರಿಂದ ಆತ್ಮನೇಪದೀ. ಲಟ್ ಪ್ರಥಮ ಪುರುಷ ಏಕವಚನರೂಪ. ತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಶಪ್ ಪಿತ್ತಾದುದರಿಂದ ಅನುದಾತ್ತ. ಅನುಪದೇಶದ ಪರದಲ್ಲಿರುವುದರಿಂದ ಲಸಾರ್ವಧಾತುಕವು (ತೇ) **ತಾಸ್ಯನುದಾತ್ತೇತ್** ಸೂತ್ರದಿಂದ ಅನುದಾತ್ತವಾಗುವುದರಿಂದ ಧಾತು ಸ್ವರ ಉಳಿಯುತ್ತದೆ.

सुवीर्यम्— बहुव्रीहियल्लि सुविन स्वरवु बाधितवागि **वीरवीर्यौ च** एंबुदरिंद उत्तरपद आद्युदात्तस्वर बरुत्तदे.

तोतावा— तु एंबुदु सूत्रपठितवाद धातु. वृद्ध्यर्थदल्लिदे. वर्तमानार्थदल्लि **भ्वंदसि लुङ्लङ्लिटः** एंबुदरिंद लिट् तन्निमित्तवागि धातुविगे द्वित्व. णित् प्रत्यय परवागुदरिंद **अत उपधायाः** एंबुदरिंद उपधावृद्धि. तुजादियल्लि सेरिरुवुदरिंद **तुजादीनां दीर्घोऽभ्यासस्य**—(पा. सू. ६-१-७) एंबुदरिंद अभ्यासक्के दीर्घ. अतिङन्तद परदल्लिरुवुद रिंद निघातस्वर बरुत्तदे.

आश्नोति— अशू व्याप्तौ धातु. स्वादि **व्यत्ययो बहुलं** एंबुदरिंद परस्मैपदि यागुत्तदे लट् प्रथमपुरुष एकवचनरूप. तिङन्त निघातस्वर बरुत्तदे.

अंहतिः— हन हिंसागत्योः धातु. इदक्के **हंतेरंहच्** (उ. सू. ४-३०७) एंबुदरिंद अति प्रत्ययवु. तत्सन्नियोगदिंद धातुविगे अंह एंब आदेश. **वहिवस्य**—(उ सू. ४-३००) एंबुदरिंद चित् एंदु अनुवृत्तनागुवुदरिंद **चितः** सूत्रदिंद अंतोदात्तवागुत्तदे.

॥ संहितापाठः ॥

शकेमं त्वा समिधं साधया धियस्त्वे देवा हविरदन्त्याहुतं ।
त्वमादित्यै आ वह तान्प्रयक्ष्यग्ने सख्ये मा रिषामा वयं तव ॥ ४ ॥

ಪದಪಾಠಃ

ಶಕೇಮ। ತ್ವಾ। ಸಂ ಇಧಂ। ಸಾಧಯ। ಧಿಯಃ। ತ್ವೇ ಇತಿ। ದೇವಾಃ।

ಹವಿಃ। ಅದಂತಿ। ಆ ಹುತಂ।

ತ್ವಂ। ಆದಿತ್ಯಾನ್। ಆ। ವಹ। ತಾನ್। ಹಿ। ಉಶ್ಮಸಿ। ಅಗ್ನೇ। ಸಖ್ಯೇ। ಮಾ।

ರಿಷಾಮ। ವಯಂ। ತವ। ॥ ೩ ॥

ಸಾಯಣಭಾಷ್ಯಂ

ಹೇ ಅಗ್ನೇ ತ್ವಾತ್ವಾಂ ಸಮಿಧಂ ಸಮ್ಯಗಿದ್ಧಂ ಕರ್ತುಂ ಶಕೇಮ। ಶಕ್ತಾ ಭೂಯಾಸ್ಮ। ತ್ವಂ ಚ ಧಿಯೋಽಸ್ಮದೀಯಾನಿ ದರ್ಶಪೂರ್ಣಮಾಸಾದೀನಿ ಕರ್ಮಾಣಿ ಸಾಧಯ। ನಿಷ್ಪಾದಯ। ತ್ವಯಾ ಹಿ ಸರ್ವೇ ಯಾಗಾ ನಿಷ್ಪಾದ್ಯಂತೇ। ಯಸ್ಮಾತ್ತ್ವೇ ತ್ವಯ್ಯಗ್ನಾವಾಹುತಂ ಋತ್ವಿಗ್ಭಿಃ ಪ್ರಕ್ಷಿಪ್ತಂ ಚರು-ಪುರೋಡಾಶಾದಿಕಂ ಹವಿರ್ದೇವಾ ಅದಂತಿ ಭಕ್ಷಯಂತಿ। ತಸ್ಮಾತ್ತ್ವಂ ಸಾಧಯೇತ್ಯರ್ಥಃ। ಅಪಿ ಚ ತ್ವಮಾದಿತ್ಯಾನದಿತೇಃ ಪುತ್ರಾನ್ ಸರ್ವಾನ್ದೇವಾನಾ ವಹ। ಅಸ್ಮದ್ಯಜ್ಞಾರ್ಥಮಾನಯ। ತಾನ್ದೇ-ವಾನೇವೇಮೇ ವಯಮುಶ್ಮಸಿ। ಕಾಮಯಾಮಹೇ। ಅನ್ಯತ್ಪೂರ್ವವತ್ ॥ ಶಕೇಮ। ಶಕ್ಲೃ ಶಕ್ತೌ। ಲಿಙ್ಯಾಶಿಷ್ಯಙ್। ಅದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವೇಽಪಿ ಏವ ಸ್ವರಃ ಶಿಷ್ಯತೇ। ಸಮಿಧಂ। ಞಾಽಇನ್ಧೀ ದೀಪ್ತೌ। ಅಸ್ಮಾತ್ಸಂಪದಾದಿಲಕ್ಷಣಃ ಕರ್ಮಣಿ ಕ್ವಿಪ್। ತ್ವೇ। ಸುಪಾಂ ಸುಲುಗಿತಿ ಸಪ್ತ-ಮ್ಯೇಕವಚನಸ್ಯ ಶೇ ಆದೇಶಃ। ಉಶ್ಮಸಿ। ವಶ ಕಾಂತೌ। ಇಂದತೋ ಮಸಿಃ। ಅದಾದಿತ್ವಾಚ್ಚಪೋ ಲುಕ್। ಗ್ರಹಿಜ್ಯೇತ್ಯಾದಿನಾ ಸಂಪ್ರಸಾರಣಂ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ, । **ತ್ವಾ**—ನಿನ್ನನ್ನು । **ಸಮಿಧಂ**- ಪ್ರಜ್ವಲಿತನನ್ನಾಗಿ ಮಾಡಲು । **ಶಕೇಮ**-ನಾವು ಶಕ್ತರಾಗುವಂತಾಗಲಿ. । **ಧಿಯಃ**—ನಮ್ಮ (ದರ್ಶಪೂರ್ಣಮಾಸಾದಿ) ಕರ್ಮಗಳನ್ನು । **ಸಾಧಯ**—ಸಂಪಾದಿಸು. [ನೆರವೇರಿಸು] (ಏತಕ್ಕೆಂದರೆ) । **ತ್ವೇ**—ನಿನ್ನಲ್ಲಿ । **ಆಹುತಂ**—(ಋತ್ವಿಗಳಿಂದ) ಆಹುತಿಪಾಡಿದ । **ಹವಿಃ**—(ಚರುಪುರೋಡಾಶಾದಿ) ಹವಿಸ್ಸುಗಳನ್ನು । **ದೇವಾಃ**—ದೇವತೆಗಳು । **ಅದಂತಿ**—ಸೇವಿಸುತ್ತಾರೆ । **ತ್ವಂ**—ನೀನು । **ಆದಿತ್ಯಾ**—ಅದಿತಿ ಪುತ್ರರಾದ ಸಕಲ ದೇವತೆಗಳನ್ನು । **ಅ ವಹ**—(ಯಜ್ಞಕ್ಕೆ) ಕರೆದುಕೊಂಡು ಬಾ । **ಹಿ**—ಏತಕ್ಕೆಂದರೆ । **ತಾ**—ಅವರನ್ನು । **ಉಶ್ಮಸಿ**—ನಾವು ಬಯಸುತ್ತೇವೆ । **ಅಗ್ನೇ**—ಎಲೈ ಅಗ್ನಿಯೇ । **ತವ**—ನಿನ್ನೊಡನೆ । **ಸಖ್ಯೇ**—ಸ್ನೇಹವಿರಲಾಗಿ । **ವಯಂ**—ನಾವು । **ಮಾರಿ ಷಾಮ**—(ಯಾವ) ಹಿಂಸೆಯನ್ನು ಅನುಭವಿಸದಿರುವಂತಾಗಲಿ ॥

ಭಾವಾರ್ಥ

ಎಲೈ ಅಗ್ನಿಯೇ, ನಿನ್ನನ್ನು ಪ್ರಜ್ವಲಿಸುವಂತೆ ಮಾಡುವ ಶಕ್ತಿಯನ್ನು ನಮಗೆ ಕೊಡು. ನಿನ್ನಲ್ಲಿ ಹೋಮ ಮಾಡಿದ ಚರುಪುರೋಡಾಶಾದಿಗಳನ್ನೇ ದೇವತೆಗಳು ಸೇವಿಸುವುದರಿಂದ ನಮ್ಮ ದರ್ಶಪೂರ್ಣಮಾಸಾದಿಯಾಗಕರ್ಮ ಗಳನ್ನು ನೆರವೇರಿಸು. ನಾವು ಪ್ರೀತಿಸಿ ಬಯಸುವ ಸಕಲವಾದ ಅದಿತಿಪುತ್ರರಾದ ದೇವತೆಗಳನ್ನೂ ನಮ್ಮ ಯಾಗಕ್ಕೆ ಕರೆದುಕೊಂಡು ಬಾ. ಎಲೈ ಅಗ್ನಿಯೇ, ನಿನ್ನೊಡನೆ ನಮ್ಮ ಸ್ನೇಹವಿರುವುದರಿಂದ ನಮಗೆ ಯಾವ ಹಿಂಸೆಯೂ ಉಂಟಾಗದಿರಲಿ.

English Translation

May we be able to kindle you ; make the rite perfect, for through you the gods partake of the offered oblations ; bring hither the Aditayas, for we love them ; let us not suffer injury, through your friendship.

॥ ವಿಶೇಷವಿಷಯಗಳು ॥

ಧಿಯಃ—ಅಪಃ, ಅಪ್ಸಃ, ದಂಸಃ— ಇತ್ಯಾದಿ ಕರ್ಮನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೧) **ಧಿಯಃ** ಎಂದರೆ ಕರ್ಮಗಳನ್ನು ಎಂದರ್ಥ. ಪ್ರಕೃತದಲ್ಲಿ ನಮ್ಮ ದರ್ಶಪೂರ್ಣಮಾಸಾದಿ ಕರ್ಮಗಳು ನೆರೆವೇರುವಂತೆ ಸಹಾಯಮಾಡು ಎಂಬ ಪ್ರಾರ್ಥನೆ.

ಉಶ್ಮಸಿ—ವಶ್ಮಿ ; ಉಶ್ಮಸಿ, ವೇತಿ ಇತ್ಯಾದಿ ಹದಿನೆಂಟು ಕಾಂತಿಕರ್ಮನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೯) ಇಲ್ಲಿ ಆಸೇಕ್ಷಿಸುತ್ತೇವೆ ಎಂದರ್ಥ.

ಆದಿತ್ಯಾ—ಆದಿತ್ಯಃ ಕಸ್ಮಾದಾದತ್ತೇ ರಸಾನಾದತ್ತೇ ಭಾಸಂ ಜ್ಯೋತಿಷಾಮಾದೀಪ್ತೋ ಭಾಸಾ ಇತಿ ವಾದಿತೇಃ ಪುತ್ರ ಇತಿ ವಾ । (ನಿ. ೨-೧೩) ರಸಗಳನ್ನು ಸ್ವೀಕರಿಸುತ್ತಾನೆ (ಹಿಂಡುತ್ತಾನೆ) ಎಂದಾಗಲಿ, ಜ್ಯೋತೀರ್ಮಂಡಲಗಳ ಪ್ರಕಾಶವನ್ನು ಸ್ವೀಕರಿಸುತ್ತಾನೆ (ತನ್ನಕಾಂತಿಯಿಂದ ಮರೆಸುತ್ತಾನೆ) ಎಂದಾಗಲಿ, ತನ್ನಕಾಂತಿಯಿಂದ ಪ್ರಕಾಶಿಸುತ್ತಾನೆ ಎಂದಾಗಲಿ, ಅಥವಾ ಅದಿತಿಪುತ್ರನೆಂದಾಗಲಿ **ಆದಿತ್ಯ** ಶಬ್ದಕ್ಕೆ ಅರ್ಥವಾಗುತ್ತದೆ. ಸೂರ್ಯನಿಗೆ ಸರ್ವಾಯ ಶಬ್ದವಾಗುವುದರಿಂದ ಇವುಗಳಲ್ಲಿ ಯಾವ ಅರ್ಥವನ್ನಾದರೂ ಹೇಳಬಹುದು ಆದರೆ ಈ ಋಕ್ಕಿನಲ್ಲಿ **ಆದಿತ್ಯಾನ್** ಎಂದು ಬಹುವಚನವಿರುವುದರಿಂದ **ಆದಿತ್ಯ** ಶಬ್ದವು ಸೂರ್ಯನಿಗೇ ಅಲ್ಲದೆ ಇತರ ದೇವತೆಗಳಿಗೂ ಅನ್ವಯಿಸುತ್ತದೆ ಎಂದು ತಿಳಿಯಬೇಕು. ನಿರುಕ್ತಕಾರರೇ ಇದನ್ನು ವಿವರಿಸುತ್ತಾ **ವಿವನುನ್ಯಾಸಾಮಪಿ ದೇವತಾನಾಮಾದಿತ್ಯಪ್ರವಾದಾಃ ಸ್ತುತಯೋ ಭವಂತಿ ತದ್ಯಥೈತನ್ಮಿತ್ರಸ್ಯ ವರುಣಸ್ಯಾರ್ಯಮ್ಣೋ ದಕ್ಷಸ್ಯ ಭಗಸ್ಯಾಂಶಸ್ಯೇತಿ ।** (ನಿ. ೩-೧೩) ಆದಿತ್ಯಪರವಾದ ಸ್ತುತಿಗಳು ಮಿತ್ರನಿಗೂ, ವರುಣನಿಗೂ, ಅರ್ಯಮನಿಗೂ, ದಕ್ಷನಿಗೂ, ಭಗನಿಗೂ, ಅಂಶನಿಗೂ ಅನ್ವಯಿಸುತ್ತವೆಂದು ತಿಳಿಸಿ ಉದಾಹರಣೆಗಳನ್ನು ಕೊಡುತ್ತಾರೆ. ಋಕ್ಸಂಹಿತೆಯಲ್ಲಿ ಆದಿತ್ಯಪರವಾದ—

ಇಮಾ ಗಿರ ಆದಿತ್ಯೇಭ್ಯೋ ಘೃತಸ್ನೂಃ ಸನಾದ್ರಾಜಭ್ಯೋ ಜುಹ್ವಾ ಜುಹೋಮಿ ।
ಶೃಣೋತು ಮಿತ್ರೋ ಅರ್ಯಮಾ ಭಗೋ ನಸ್ತುವಿಜಾತೋ ವರುಣೋ ದಕ್ಷೋ ಅಂಶಃ ॥

(ಋ. ಸಂ. ೨-೨೭-೧)

ಎಂಬ ಈ ಋಕ್ಕಿನಲ್ಲಿ ಮಿತ್ರ, ಅರ್ಯಮ, ಭಗ, ವರುಣ, ದಕ್ಷ ಮತ್ತು ಅಂಶ ಎಂಬುದಾಗಿ ಆದಿತ್ಯರು ೩ರುಮಂದಿಯೆಂದು ವಿವರಿಸಿದೆ ಆದರೆ,

ದೇವಾ ಆದಿತ್ಯಾ ಯೇ ಸಪ್ತ ತೇಭಿಃ ಸೋಮಾಭಿ ರಕ್ಷ ನ ಇಂದ್ರಾಯೇಂದೋ ಪರಿಸ್ರವ ।

(ಋ ಸಂ ೯-೧೧೪-೩)

ಅಷ್ಟೌ ಪುತ್ರಾಸೋ ಅದಿತೇರ್ಯೇ ಜಾತಾಸ್ತನ್ವಃಸ್ಪರಿ ।

(ಋ. ಸಂ. ೧೦-೭೨-೮)

ಎಂಬ ಋಕ್ಕಿನಲ್ಲಿ ಅದಿತಿಪುತ್ರರು ಎಂಟುಮಂದಿಯೆಂದು ಸೂಚಿಸಿದೆ. ಈಗ ರೂಢಿಯಲ್ಲಿರುವ **ದ್ವಾದಶಾದಿತ್ಯರ** ಸಂಖ್ಯೆಯು ಹನ್ನೆರಡಕ್ಕೆ ಹೇಗೆ ಬೆಳೆಯಿತೆಂದು ಉದಾಹರಣೆಗಳೊಡನೆ ಮುಂದೆ ತಿಳಿಸಲಾಗುತ್ತದೆ.

ವ್ಯಾಕರಣಪ್ರಕ್ರಿಯಾ

ಶಕೇಮ— ಶಕ್ಲೃಲ್ಲೃ ಶಕ್ತೌ ಧಾತು. ಆಶೀರ್ಲಿಙ್. ಉತ್ತಮ ಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ. **ನಿತ್ಯಂ ಙಿತಃ** ಎಂಬುದರಿಂದ ಸಕಾರಕ್ಕೆ ಲೋಪ. **ಲಿಙ್ಸಿಚಾವಾಶಿಷ್ಯಙ್**— (ಪಾ. ಸೂ. ೩-೧-೪೬) ಎಂಬುದರಿಂದ ಧಾತುವಿಗೆ ಆಙ್, ಆಗುಪದೇಶದ ಪರವಲ್ಲಿರುವುದರಿಂದ **ತಾಸ್ಯನುದಾತ್ತೇತ್** ಸೂತ್ರದಿಂದ ಲಸಾರ್ವಧಾತುಕವು ಅನುದಾತ್ತವಾಗುತ್ತದೆ. ಆಗ ಆಙ್ ಸ್ವರ ಉಳಿಯುವುದರಿಂದ ಮಧ್ಯೋದಾತ್ತವಾಗುತ್ತದೆ. ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ.

ಸಮಿಧಂ— ಇಞಇಂಧೀ ದೀಪ್ತೌ ಧಾತು. **ಸಂಪದಾದಿಭ್ಯಃಕ್ವಿಪ್** ಎಂಬುದರಿಂದ ಸಂಪದಾದಿಯಲ್ಲಿ ಸೇರುವುದರಿಂದ ಕರ್ಮಣಿಯಲ್ಲಿ ಕ್ವಿಪ್. **ಆನಿದಿತಾಂ** ಸೂತ್ರದಿಂದ ಉಪಧಾ ನ ಕಾರಕ್ಕೆ ಲೋಪ. ಧಕಾರಾಂತ ಶಬ್ದವಾಗುತ್ತದೆ. ದ್ವಿತೀಯಾ ಏಕವಚನಾಂತರೂಪ.

ಅದಂತಿ— ಅದ ಭಕ್ಷಣೇ ಧಾತು. ಲಟ್. ಪ್ರಥಮ ಪುರುಷ ಬಹುವಚನರೂಪ. ಅತಿಙಂತನ ಪರವಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಆದಿತ್ಯಾನ್—**ದೀರ್ಘಾದಟಿ ಸಮಾನಪಾದೇ** ಎಂಬುದರಿಂದ ನಕಾರಕ್ಕೆ ರುತ್ವ. **ಅತೋಽಟಿ ನಿತ್ಯಮ್** ಎಂಬುದರಿಂದ ಆಕಾರಕ್ಕೆ ಅನುನಾಸಿಕತ್ವ.

ತ್ವೇ— ಯುಷ್ಮದ್ ಶಬ್ದ. ಸಪ್ತಮೀಏಕವಚನದಲ್ಲಿ ಮಪರ್ಯಂತಕ್ಕೆ ತ್ವಾದೇಶ. **ಶೇಷೇ ಲೋಪಃ** ಎಂಬುದರಿಂದ ಅದಿಗೆ ಲೋಪ. **ಸುಪಾಂ ಸುಲುಕ್**— ಎಂಬುದರಿಂದ ವಿಭಕ್ತಿಗೆ ಶೇ ಆದೇಶ.

ಉಶ್ಮಸಿ— ವಶ ಕಾಂತೌ ಧಾತು. ಅದಾದಿ ಲಟ್ ಉತ್ತಮ ಪುರುಷ ಬಹುವಚನದಲ್ಲಿ ಮಸ್ ಪ್ರತ್ಯಯ **ಅದಿಪ್ರಭೃತಿಭ್ಯಃಶಪಃ** ಎಂಬುದರಿಂದ ಶಪಿಗೆ ಲುಕ್ ಪ್ರತ್ಯಯಕ್ಕೆ ಬಿನ್ನದ್ಧಾವವಿರುವುದರಿಂದ **ಗ್ರಹಿಜ್ಯಾವಯಿ**— (ಪಾ. ಸೂ. ೬-೧-೧೬) ಎಂಬುದರಿಂದ ಸಂಪ್ರಸಾರಣ. ಪೂರ್ವರೂಪ. **ಇದಂತೋರ್ಮಸಿ**— (ಪಾ.ಸೂ. ೭-೧-೪೬)

ಎಂಬುದರಿಂದ ಮಸಿಗೆ ಇಕಾಗಮ. ಹಿಂಚೆ—(ಪಾ. ಸೂ. ೮-೧-೩೪) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಪ್ರತ್ಯಯಸ್ವರದಿಂದ ಮಧ್ಯೋದಾತ್ತವಾಗುತ್ತದೆ. ॥ ೩ ॥

——:o:——

ಸಂಹಿತಾಪಾಠಃ

ಭರಾಮೇಧ್ಮಂ ಕೃಣವಾಮಾ ಹವೀಂಷಿ ತೇ ಚಿತಯಂತಃ ಪರ್ವ-
ಣಾಪರ್ವಣಾ ವಯಂ।
ಜೀವಾತವೇ ಪ್ರತರಂ ಸಾಧಯಾ ಧಿಯೋಽಗ್ನೇ ಸಖ್ಯೇ ಮಾ
ರಿಷಾಮಾ ವಯಂ ತವ ॥ ೪ ॥

ಪದಪಾಠಃ

ಭರಾಮ। ಇಧ್ಮಂ। ಕೃಣವಾಮ। ಹವೀಂಷಿ। ತೇ। ಚಿತಯಂತಃ। ಪರ್ವ-
ಣಾಽಪರ್ವಣಾ। ವಯಂ।
ಜೀವಾತವೇ। ಪ್ರಽತರಂ। ಸಾಧಯ। ಧಿಯಃ। ಅಗ್ನೇ। ಸಖ್ಯೇ। ಮಾ। ರಿ-
ಷಾಮ। ವಯಂ। ತವ ॥೪॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವದ್ಯಾಗಾರ್ಥಮಿಧ್ಮಮಿಂಧನಸಾಧನಮೇಕವಿಂಶತಿದಾರ್ವಾತ್ಮಕಂ ಸಮಿತ್ಸಮೂಹಂ ಭರಾಮ। ಸಂಪಾದಯಾಮ। ತದನಂತರಂ ತೇ ತುಭ್ಯಂ ಹವೀಂಷಿ ಚರುಪುರೋಡಾಶಾದೀನ್ಯನ್ನಾನಿ ವಯಂ ಕೃಣವಾಮ। ಕರವಾಮ। ಕಿಂ ಕುರ್ವಂತಃ। ಪರ್ವಣಾ ಪರ್ವಣಾ ಪ್ರತಿಪಚ್ಚಮಾವೃತ್ತಾಭ್ಯಾಂ ದರ್ಶಪೂರ್ಣಮಾಸಾಭ್ಯಾಂ ಚಿಂತಯಂತಸ್ತ್ವಾಂ ಪ್ರಜ್ಞಾಪಯಂತಃ। ಸ ತ್ವಂ ಜೀವಾತವೇಽಸ್ಮಾಕಂ

जीवनौषधाय चिरकालावस्थानाय धियः कर्मान्यग्निहोत्रादीनि प्रतरं प्रकृष्टतरं साधय। निष्पादय। अन्यत्सामानं॥ चितयेऽन्तः। चिती संज्ञाने। संज्ञापूर्वकस्य विधेरनित्यत्वाल्लघूपधगुणाभावः। पर्वणा पर्वणा। नित्यवीप्सयोरिति वीप्सायां द्विर्भावः। तस्य परमाम्रेडितमिति परस्यामेडितसंज्ञायामनुदात्तं चेत्यनुदात्तत्वं। प्रतरं तरबन्तात्प्रशब्दात्प्रकृत्यादिभ्य उपसंख्यानमिति वर्तमानादमु च च्छन्दसि। पा. ७-४-०३। इत्यमुप्रत्ययः॥

ಪ್ರತಿಪದಾರ್ಥ

(**अग्ने**—ಎಲೈ ಅಗ್ನಿಯೇ) । **इध्मम्**— (ನಿನ್ನನ್ನು ಪ್ರಜ್ವಲಿತನನ್ನಾಗಿ ಮಾಡುವುದಕ್ಕೆ) ಸಮಿತ್ತುಗಳ ಕಟ್ಟನ್ನು । **भरामः**—ಸಂಪಾದಿಸುತ್ತೇವೆ । **ते**—ನಿನಗೆ। **पर्वणा पर्वणा**—ದರ್ಶಪೂರ್ಣಮಾಸಾದಿ ಕರ್ಮಗಳಿಂದ (ಪಕ್ಷಕಾಲಗಳನ್ನು) । **चितयेऽन्तः**—ಜ್ಞಾಪಿಸುತ್ತಾ । **हवीꣳषि**—ಚರುಪುರೋಡಾಶಾದಿ ಹವಿಸ್ಸುಗಳನ್ನು । **वयं**—ನಾವು । **कृणवामः**—ಅರ್ಪಿಸುತ್ತೇವೆ । **जीवातवे**—(ನಾವು) ಚಿರಕಾಲ ಬದುಕುವುದಕ್ಕಾಗಿ। **धियः**—(ನಮ್ಮ ಅಗ್ನಿಹೋತ್ರಾದಿ) ಕರ್ಮಗಳನ್ನು । **प्रतरं**—ಅತ್ಯುತ್ಕೃಷ್ಟತರವಾಗಿ । **साधय**—ಸಂಪಾದಿಸು । **अग्ने**—ಎಲೈ ಅಗ್ನಿಯೇ । **तव सख्ये**—ನಿನ್ನೊಡನೆ ಸ್ನೇಹವಿರುವುದರಿಂದ । **वयं**—ನಾವು । **मा रिषाम**—ಯಾವ ಹಿಂಸೆಯನ್ನೂ ಅನುಭವಿಸದಿರುವಂತಾಗಲಿ॥

ಭಾವಾರ್ಥ

ಎಲೈ ಅಗ್ನಿಯೇ ನಿನ್ನನ್ನು ಹೊತ್ತಿಸುವುದಕ್ಕಾಗಿ ನಾವು ಸಮಿತ್ತುಗಳ ಕಟ್ಟನ್ನು ಸಂಪಾದಿಸುತ್ತೇವೆ. ನಿನಗೆ ದರ್ಶಪೂರ್ಣಮಾಸಾದಿಕರ್ಮಗಳಿಂದ ಪಕ್ಷಕಾಲಗಳನ್ನು ಜ್ಞಾಪಿಸುತ್ತಾ ಚರುಪುರೋಡಾಶಾದಿ ಹವಿಸ್ಸುಗಳನ್ನು ಅರ್ಪಿಸುತ್ತೇವೆ. ನಾವು ಚಿರಕಾಲ ಬದುಕುವುದಕ್ಕಾಗಿ ನಮ್ಮ ಅಗ್ನಿಹೋತ್ರಾದಿ ಕರ್ಮಗಳನ್ನು ಉತ್ಕೃಷ್ಟತರವಾಗಿ ಸಂಪಾದಿಸು. ನಿನ್ನೊಡನೆ ನಮಗೆ ಸ್ನೇಹವಿರುವುದರಿಂದ ನಮಗೆ ಯಾವ ಹಿಂಸೆಯೂ ಆಗದಿರುವಂತೆ ಅನುಗ್ರಹಿಸು.

English Translation

We bring fuel, we offer oblations, reminding you of the successive seasons (of worship); thoroughly complete the rite in order to prolong our lives; Agni, let us not suffer injury through four freindship.

ವಿಶೇಷ ವಿಷಯಗಳು

इध्मम्— इध्मः समिन्धनात्। (ನಿ. ೮-೪) ಉರಿಸು. ಹೊತ್ತಿಸು ಎಂಬರ್ಥವನ್ನು ಕೊಡುವ **इन्ध्** ಧಾತುವಿನಿಂದ **इध्मः** ಎಂದಾಗಿದೆ. ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುವ ಸಮಿತ್ತು ಎಂದರ್ಥ.

पर्वणापर्वणा— पर्व पुनः पृणातेः प्रीणातेर्वा—अर्धमासपर्व देवानस्मिन् प्रीणन्तीति। (ನಿ. ೮-೨೦) ಎಂಬ ಅರ್ಥವನ್ನು ಕೊಡುವ **पॄ** ಧಾತುವಿನಿಂದಾಗಲಿ ಅಥವಾ **तृप्ति**

ಗೊಳಿಸು ಎಂದರ್ಥವನ್ನು ಕೊಡುವ **ಪ್ರೀಞ್** ಧಾತುವಿನಿಂದಾಗಲೀ **ಪರ್ವ** ಶಬ್ದದ ನಿಷ್ಪತ್ತಿಯನ್ನು ಹೇಳಬಹುದು. ದೇವತೆಗಳನ್ನು ಹವಿಸ್ಸುಗಳಿಂದ ಅಥವಾ ಸ್ತೋತ್ರಗಳಿಂದ ಹರ್ಷಗೊಳಿಸತಕ್ಕ ಎಂಬುದು ಒಂದು ಪಕ್ಷಕಾಲ. ಅಮಾವಾಸ್ಯಾ ಪೌರ್ಣಮೀ ಕಾಲಗಳಲ್ಲಿ ನಿಯತವಾಗಿ ನೆರವೇರಿಸಬೇಕಾದ ದರ್ಶ ಪೂರ್ಣಮಾಸಾದಿ ಕರ್ಮಗಳಿಂದ ಎಂಬುವುದು ಇನ್ನೊಂದರ್ಥ

ಚಿಂತಯಂತಃ— **ಪ್ರಜ್ಞಾಪಯಂತಃ** ಜ್ಞಾಪಿಸುತ್ತಾ; ಆಯಾ ಪಕ್ಷಕಾಲಗಳಲ್ಲಿ ನೆರವೇರಿಸಬೇಕಾದ ಕರ್ಮಗಳಿಂದ ನಿಮಗೆ ಪಕ್ಷಕಾಲಗಳನ್ನು ಜ್ಞಾಪಿಸುತ್ತಾ ಎಂದು ಒಂದು ವಿಧವಾದ ಅರ್ಥವನ್ನೂ ಅಥವಾ ಸ್ವಂದಸ್ವಾಮಿಗಳು ಹೇಳುವಂತೆ **ಯಜ್ಞಕರ್ಮ ತ್ವನ್ಮಾಹಾತ್ಮ್ಯಂ ವಾ ಜ್ಞಾತವಂತಃ** । ಆಯಾಕಾಲಗಳಲ್ಲಿ ನಡೆಯಬೇಕಾದ ಯಜ್ಞಕರ್ಮವನ್ನೂ ನಿನ್ನ ಮಾಹಾತ್ಮ್ಯವನ್ನೂ ಒಟ್ಟಿಗೆ ತಿಳಿದವರಾಗಿ ಎಂದು ಇನ್ನೊಂದು ಅರ್ಥವನ್ನೂ ಹೇಳಬಹುದು.

ವ್ಯಾಕರಣಪ್ರಕ್ರಿಯಾ

ಭರಾಮ— ಡುಭೃಞ್ ಭರಣೇ ಧಾತು. ಲಡುತ್ತಮಪುರುಷ ಬಹುವಚನರೂಪ ಪಾದಾದಿಯಲ್ಲಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಶಪ್, ಲಸಾರ್ವಧಾತುಕವು ಅನುದಾತ್ತವಾದುದರಿಂದ ಧಾತುಸ್ವರ ಉಳಿಯುತ್ತದೆ

ಚಿತಯಂತಃ— ಚಿತೀ ಸಂಜ್ಞಾನೇ ಧಾತು. ಚುರಾದಿ. **ಸತ್ಯಾಪಪಾಶ**— (ಪಾ. ಸೂ. ೩-೧-೨೫) ಎಂಬುದರಿಂದ ಇದಕ್ಕೆ ಸ್ವಾರ್ಥದಲ್ಲಿ ಣಿಚ್. **ಸಂಜ್ಞಾಪೂರ್ವಕೋವಿಧಿರನಿತ್ಯಃ** ಎಂಬ ಪರಿಭಾಷೆಯಿಂದ ಣಿಚ್ ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ ಬರುವುದಿಲ್ಲ. **ಸನಾದ್ಯಂತಾ ಧಾತವಃ** ಎಂಬುದರಿಂದ ಸನ್ನಂತಕ್ಕೆ ಧಾತುಸಂಜ್ಞಾ. ಇವರ ಮೇಲೆ ಲಡರ್ಥದಲ್ಲಿ ಶತೃ ಪ್ರತ್ಯಯ. ತನ್ನಿಮಿತ್ತವಾಗಿ ಣಿಚಿಗೆ ಗುಣ ಆಯಾದೇಶ. ಚಿತಯತ್ ಶಬ್ದವಾಗುತ್ತದೆ. ಪ್ರಥನಾ ಬಹುವಚನಾಂತರೂಪ. ಣಿಚ್ ಸ್ವರ ಉಳಿಯುತ್ತದೆ.

ಪರ್ವಣಾಪರ್ವಣಾ— **ನಿತ್ಯವೀಪ್ಸಯೋಃ**— (ಪಾ. ಸೂ. ೮-೧-೪) ಎಂಬುದರಿಂದ ವೀಪ್ಸಾ ತೋರುವಾಗ ದ್ವಿತ್ವ. **ತಸ್ಯಪರಮಾಮ್ರೇಡಿತಮ್**— (ಪಾ. ಸೂ. ೮-೧-೨) ಎಂಬುದರಿಂದ ದ್ವಿತ್ವ ಬಂದಾಗ ಪರರೂಪಕ್ಕೆ ಆಮ್ರೇಡಿತಸಂಜ್ಞೆ ಬರುತ್ತದೆ. **ಅನುದಾತ್ತಂ ಚ**— (ಪಾ. ಸೂ. ೮-೧-೩) ಎಂಬುದರಿಂದ ಆ ಆಮ್ರೇಡಿತಕ್ಕೆ ಅನುದಾತ್ತಸ್ವರ ಬರುತ್ತದೆ.

ಪ್ರತರಮ್— ಕ್ರಿಯಾ ಪ್ರಕರ್ಷ ತೋರುವಾಗ ಪ್ರಶಬ್ದದ ಮೇಲೆ ತರಪ್ ಪ್ರತ್ಯಯ. ಪ್ರತರ ಎಂಬ ತರಬಂತದ ಮೇಲೆ **ಆಮುಚ ಚ್ಛಂದಸಿ**— (ಪಾ. ಸೂ. ೫-೪-೧೯) ಎಂಬುದರಿಂದ ಸಂಹಿತಾವಲ್ಲಿ ಅಮು ಪ್ರತ್ಯಯ.

ಸಾಧಯ— ಷಿಧು ಸಂರಾದ್ಧೌ ಧಾತು ಇದಕ್ಕೆ ಪ್ರೇರಣಾ ತೋರುವಾಗ ಣಿಚ್ ಬಂದಾಗ **ಸಿಧ್ಯತೇರಪಾರಲೌಕಿಕೇ** (ಪಾ ಸೂ ೬-೧-೪೯) ಎಂಬುದರಿಂದ ಣಿಚ್ ನಿಮಿತ್ತವಾಗಿ ಧಾತುವಿಗೆ ಆತ್ವ ಲೋಣ್ಮಧ್ಯಮ ಪುರುಷ ಏಕವಚನರೂಪ ಆತಿಬಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ ॥ ೪ ॥

———— :o: ————

ಸಂಹಿತಾಪಾಠಃ

ವಿಶಾಂ ಗೋಪಾ ಅಸ್ಯ ಚರಂತಿ ಜಂತವೋ ದ್ವಿಪಚ್ಚ ಯದುತ
ಚತುಷ್ಪದಕ್ತುಭಿಃ ।
ಚಿತ್ರಃ ಪ್ರಕೇತ ಉಷಸೋ ಮಹಾ ಅಸ್ಯಗ್ನೇ ಸಖ್ಯೇ ಮಾ ರಿ-
ಷಾಮಾ ವಯಂ ತವ ॥ ೫ ॥

ಪದಪಾಠಃ

ವಿಶಾಂ । ಗೋಪಾಃ । ಅಸ್ಯ । ಚರಂತಿ । ಜಂತವಃ । ದ್ವಿಪತ್ । ಚ । ಯತ್ ।
ಉತ । ಚತುಃಪತ್ । ಅಕ್ತುಭಿಃ ।
ಚಿತ್ರತಃ । ಪ್ರಕೇತಃ । ಉಷಸಃ । ಮಹಾನ್ । ಅಸಿ । ಅಗ್ನೇ । ಸಖ್ಯೇ । ಮಾ ।
ರಿಷಾಮ । ವಯಂ । ತವ ॥ ೫ ॥

॥ ಸಾಯಣಭಾಷ್ಯಂ ॥

ಅಸ್ಯಾಗ್ನೇರ್ಜಂತವೋ ಜಾತಾ ರಶ್ಮಯೋ ವಿಶಾಂ ಸರ್ವೇಷಾಂ ಪ್ರಾಣಿನಾಂ ಗೋಪಾ ಗೋಪಾ-
ಯಿತಾರೋ ರಕ್ಷಕಾಃ ಸಂತಶ್ಚರಂತಿ । ಉದ್ಗಚ್ಛಂತಿ । ತದನಂತರಂ ಯಚ್ಚ ದ್ವಿಪತ್ ದ್ವಿಪಾತ್ ಮನುಷ್ಯಾ-
ದಿಕಮಸ್ತಿ ಉತಾಪಿ ಚ ಚತುಷ್ಪತ್ ಚತುಷ್ಪಾತ್ ಗವಾದಿಕಂ ಯದಸ್ತಿ ತದುಭಯಮಕ್ತುಭಿರಂಜಕೈರಸ್ಯ
ರಶ್ಮಿಭಿರಕ್ತಮಾಶ್ಲಿಷ್ಟಮಭೂತ್ । ಹೇ ಅಗ್ನೇ ಚಿತ್ರೋ ವಿಚಿತ್ರದೀಪ್ತಿಯುಕ್ತಃ ಪ್ರಕೇತೋ ರಾತ್ರ್ಯಾಂಧ-
ಕಾರಾವೃತಾನಾಂ ಸರ್ವೇಷಾಂ ಪ್ರಜ್ಞಾಪಯಿತಾ ಪ್ರದರ್ಶಯಿತೋಷಸ ಉಷೋದೇವತಾಯಾ ಅಪಿ
ಮಹಾನ್ ಗುಣೈರಧಿಕೋಽಸಿ । ಭವಸಿ । ಉಷಾಸ್ತು ರಾತ್ರೇಃ ಕ್ಷರಮಭಾಗೇ ಪ್ರಕಾಶಯತಿ । ಅಗ್ನಿಸ್ತು
ಸರ್ವಸ್ಯಾಂ ರಾತ್ರೌ ಪ್ರಕಾಶಯತೀತಿ ತಸ್ಯ ಗುಣಾಧಿಕ್ಯಂ ॥ ಗೋಪಾಃ । ಗುಪೂ ರಕ್ಷಣೇ । ಗುಪೂ-
ಧೂಪವಿಚ್ಛೀತ್ಯಾಯಪ್ರತ್ಯಯಃ । ಪಾ. ೩-೧-೨೮ । ಅಸ್ಮಾತ್ಛಿಸ್ । ಆತೋ ಲೋಪಃ । ವೇರಪೃಕ್ತ-
ಲೋಪಾದ್ಯಲಿ ಲೋಪೋ ಬಲೀಯಾನಿತಿ ಪೂರ್ವಂ ವಲಿ ಲೋಪಃ । ನ ಚಾತೋ ಲೋಪಸ್ಯ ಸ್ಥಾನಿ-

वत्त्वं । न पदान्तेत्यादिना यलोपं प्रति तन्निषेधात् । द्विपत् । द्वौ पादावस्येति बहुव्रीहौ संख्यासुपूर्वस्य । सा. अ-४-७४० । इति सादशब्दस्यान्त्यलोपः समासान्तः । अयस्मयादित्वेन भत्वे सादः सत् । सा. ६-४-७४० । इति पदाभावः । अकृतदेशविकृतस्यानन्यवत्त्वात् ! परि. ३६ । द्व्यृचभ्यां सादनूर्ध्वसु । सा ६-३-८६६ । इत्युत्तरपदान्तोदात्तत्वं । चतुष्पत् । पूर्ववत्सुमासान्तः पदाभावश्च । इदुदुपधस्य चाप्रत्ययस्येति विसर्जनीयस्य षत्वं । नृः संख्यायाः । फि. ३-४ । इति चतुर्शब्द आद्युदात्तः । स एव बहुव्रीहिस्वरेण शिष्यते ॥ ४

॥ प्रतिपदार्थ ॥

अस्य—ई अग्नियं । **जन्तवः**—रश्मिगळु । **विशाः**— (सकल) प्राणिगळ । **गोपाः**—रक्षकगळागि । **चरन्ति**—हरडुत्तवे. । **यत्**—यावा यावा । **द्विपत्**—मनुष्यादि द्विपादिगळू । **उत**—मत्तु । **चतुष्पत्** च—गवादिचतुष्पादिगळू सह । **अक्तुभिः**—(ई अग्नियं) किरणगळिंद (चैतन्यवन्नु हॊंदुत्तवे.) । **अग्ने**- एलै अग्नियें (नीनु) । **चित्रैः**—नानाविधवाद कान्तियुळ्ळवनागि । **प्रकेतैः**—(अंधकारावृतवाद सकलवन्नू) बेळगिसुत्ता । **उषसः**—उषोदेवतेगिंतलू । **महान् असि**—उत्कृष्टनागिद्दीयॆ. । **तव**—निन्न । **सख्ये**—स्नेहविरुवुदरिंद । **वयं**—नावु । **मारिषाम**—हिंसेयिंद पीडितरागदे इरुवंतागलि ।

भावार्थ

ई अग्नियं रश्मिगळु सकल प्राणिगळ रक्षकगळागि सुत्तलू हरडुत्तवे. मनुष्यादिद्विपादिगळू मत्तु गवादि चतुष्पादिगळू सह ई अग्नियं किरणगळिंद चैतन्यवन्नु हॊंदुत्तवे. एलै अग्नियें, नीनु नानाविधवाद कान्तियुळ्ळवनागि अंधकारदिंद आवृतवाद सकललोकवन्नू बेळगिसुत्ता हगलिनल्लि मात्र कान्तियन्नु बीरुत्तिक्क उषोदेवतेगिंतलू अधिकवाद महिमेयुळ्ळवनागिद्दीयॆ. निन्नॊडने नमगे स्नेहविरुवुदरिंद नावु यावा विधवाद हिंसेयिंदलू पीडितरागदे इरुवंतागलि.

English Translation

His genial (flames), the preservers of mankind, spread around and both bipeds and quadrupeds are enlivened by his rays ; Shining with various lustre, and illuminating (the world by night) you are superior to the dawn ; Agni, let us not suffer injury through your friendship.

विशेषविषयगळु

विशाम—मनुष्याः, नरः इत्यादि ३० मनुष्यनामगळल्लि (नि. ३-६) पठितवागिद्दरू इल्लि **सर्वेषां प्राणिनां** । सकल प्राणिगळ एंदु अर्थमाडबेकु.

ಜಂತವಃ—ಜಾತಾಃ ರಶ್ಮಯಃ ಅಗ್ನಿಯಿಂದ ಉತ್ಪನ್ನವಾದ ಅಗ್ನಿಯ ಕಿರಣಗಳು. ಉತ್ಪನ್ನವಾದ. ವಸ್ತುಗಳಲ್ಲಿ ಯಾವುದಕ್ಕೆ ಬೇಕಾದರೂ ಸಂದರ್ಭಾನುಸಾರವಾಗಿ ಅರ್ಥಕೊಡುವಂತೆ ಈ ಪದವು ವಿಶೇಷಣವಾಗಿರುತ್ತದೆ ಋಕ್ಸಂಹಿತೆಯಲ್ಲಿ **ಜಂತು, ಜಂತವಃ, ಜಂತುಭಿಃ** ಎಂಬ ಪದಗಳಿಗೆ ಋತ್ವಿಕ್ಕುಗಳು, ಯಜಮಾನರು, ಶತ್ರುಗಳು, ಸಕಲ ಪ್ರಾಣಿಗಳು ಇತ್ಯಾದಿ ಜನ್ಮವುಳ್ಳ ವಸ್ತುಗಳಿಗೆಲ್ಲಾ ಅನ್ವಯವಾಗುವಂತೆ ಬೇರೆಬೇರೆ ಸಂದರ್ಭಗಳಲ್ಲಿ ಆಯಾ ಪ್ರಕರಣಗಳಿಗೆ ತಕ್ಕಂತೆ ಅರ್ಥವಾಗುತ್ತದೆ. (ಋ. ಸಂ. ೧–೪೫–೬ ; ೧–೭೪–೩ ; ೫–೭–೨ ; ೬–೬೭ ೧೩ ; ೧೦–೧೪೦–೪ ಇತ್ಯಾದಿ ಋಕ್ಕುಗಳನ್ನು ನೋಡಿ.

ಅಕ್ತುಭಿಃ—ಶ್ಯಾವೀ, ಕ್ಷಪಾ, ಶರ್ವರೀ, ಅಕ್ತುಃ ಇತ್ಯಾದಿ ೨೩ ರಾತ್ರಿನಾಮಗಳಲ್ಲಿ ಪಠಿತವಾಗಿದೆ. (ನಿ. ೧–೧೪) ಅನೇಕ ಕಡೆಗಳಲ್ಲಿ ಅಕ್ತು ಶಬ್ದಕ್ಕೆ ರಾತ್ರಿಯೆಂದೇ ಅರ್ಥವಾಗುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಕಿರಣ, ಆಯುಧ, ಕತ್ತಲು ಇತ್ಯಾದಿ ಅರ್ಥಗಳಲ್ಲೂ ಈ ಶಬ್ದದ ಪ್ರಯೋಗವಿದೆ. **ಅಂಜ್** ಧಾತುವಿಗೆ, ಆವರಿಸು, ಮುಚ್ಚು, ಬಳಿ ಇತ್ಯಾದಿ ಅರ್ಥಗಳಿರುವುದರಿಂದ ಛಾಯೆಯಿಂದ ಮುಚ್ಚುವ ಕತ್ತಲೆಯೆಂದೂ, ಸುತ್ತಲೂ ಆವರಿಸತಕ್ಕ ಕಿರಣವೆಂತಲೂ, ಕತ್ತಲೆಯಿಂದ ಮುಚ್ಚುವ ರಾತ್ರಿಯೆಂದೂ, ದೇಹವನ್ನು ಆವರಿಸುವ ಆಯುಧವೆಂದೂ ಅರ್ಥಗಳು ಆಗುತ್ತವೆ. ಉದಾಹರಣೆಗೆ, ಋ. ಸಂ. ೧–೩೬–೧೬ನೇ ಋಕ್ಕಿನ ಬರುವ ಅಕ್ತು ಶಬ್ದಕ್ಕೆ ಆಯುಧವೆಂದು ಅರ್ಥ ಮಾಡುತ್ತಾರೆ. ೫–೧೦–೩ನೇ ಋಕ್ಕಿನಲ್ಲಿ ಬರುವ ಶಬ್ದಕ್ಕೆ ಕತ್ತಲೆಂದರ್ಥ. ಆದರೆ ರಾತ್ರಿಪರ್ಯಾಯವೇ ಹೆಚ್ಚುಕಡೆಗಳಲ್ಲಿ ಇರುತ್ತದೆ.

ಈ ಋಕ್ಕಿನಲ್ಲಿ ರಾತ್ರಿಯೆಂದು ಅರ್ಥಮಾಡಿದರೆ ಒಂದು ವಿಧವಾದ ಅನ್ವಯವೂ, ಕಿರಣಗಳೆಂದು ಮಾಡಿದರೆ ಇನ್ನೊಂದು ವಿಧವಾದ ಅನ್ವಯವೂ ಆಗುತ್ತದೆ. ಸ್ಕಂದಸ್ವಾಮಿಗಳ ವಿವರಣೆಯಂತೆ : **ಅಕ್ತುಭಿಃ—ರಾತ್ರಿನಾಮೈಃ ತತ್ । ಇಹ ತು ಸಾಸಚರ್ಯಾನ್ನಕ್ತಂಚರೇಷು ರಕ್ಷಃಪಿಶಾಚಾದಿಷು ವರ್ತತೇ । ರಾತ್ರಿಚರೈಃ ಸಹ ಇತ್ಯರ್ಥಃ।** ಅಕ್ತು ಶಬ್ದವು ರಾತ್ರಿನಾಮಗಳಲ್ಲಿ ಪಠಿತವಾಗಿರುವುದರಿಂದ ರಾತ್ರಿಯೆಂದರ್ಥವಾಗಬೇಕು. ಆದರೆ ಇಲ್ಲಿ ಸಾಹಚರ್ಯದಿಂದ ರಾತ್ರಿಕಾಲದಲ್ಲಿ ಸಂಚರಿಸುವ ರಕ್ಷಃಪಿಶಾಚಾದಿಗಳೊಡನೆ ಮಾನವಾದಿ ಸಕಲಪ್ರಾಣಿಗಳೂ ಗುರ್ತಿಸಲ್ಪಡುತ್ತವೆ. ಆದುದರಿಂದಲೇ, **ಉಷಸಃ (ಉಪಿ) ಮಹಾ ಅಸಿ** ಉಷೋ ದೇವತೆಗಿಂತಲೂ ಅಧಿಕನಾಗಿದ್ದೀಯೆ. ಉಷಸ್ಸು ರಾತ್ರಿಯ ಕೊನೆಯ ಭಾಗದಲ್ಲಿ ಮಾತ್ರ ಪ್ರಕಾಶಿಸುತ್ತಾ ಜಗತ್ತಿನ ಭೂತಗಳನ್ನೂ ಪ್ರಕಾಶಿಸುವಂತೆ ಮಾಡಿದರೆ ನೀನು ರಾತ್ರಿಕಾಲದಲ್ಲೆಲ್ಲಾ ಸಂಪೂರ್ಣವಾಗಿ ಎಲ್ಲವನ್ನು ಪ್ರಕಾಶಿಸುವಂತೆ ಮಾಡುತ್ತೀಯೆ. ಆದುದರಿಂದಲೇ ನೀನು ಉಷಸ್ಸಿಗಿಂತಲೂ ಅಧಿಕನು. ಸಾಯಣರ ವಿವರಣೆಯಂತೆ:—ಸಕಲವಾದ **ದ್ವಿಪತ್** ಮನುಷ್ಯಾದಿಗಳೂ; ಚತುಷ್ಪತ್-ಗವಾದಿಗಳೂ ಸಹ, **ಅಕ್ತುಭಿಃ** ಆವರಿಸತಕ್ಕ ಕಿರಣಗಳಿಂದ ತಿಳಿಯಲ್ಪಟ್ಟಿವೆ ಎಂದಾಗುತ್ತದೆ.

ವ್ಯಾಕರಣಪ್ರಕ್ರಿಯಾ

ಗೋಪಾಃ— ಗುಪೂ ರಕ್ಷಣೇ ಧಾತು. **ಗುಪೂಧೂಪವಿಚ್ಛಿಪಣಿಭ್ಯ ಆಯಃ**—(ಪಾ. ಸೂ. ೩–೧–೨೮) ಎಂಬುದರಿಂದ ಇದಕ್ಕೆ ಸ್ವಾರ್ಥದಲ್ಲಿ ಆಯ ಪ್ರತ್ಯಯ. **ಸನಾದ್ಯಂತಾ ಧಾತವಃ** ಎಂಬುದರಿಂದ ಆಯಪ್ರತ್ಯಯವು ಸನಾದಿಯಲ್ಲಿ ಸೇರಿರುವುದರಿಂದ ಗೋಪಾಯ ಎಂಬ ಆಯ ಪ್ರತ್ಯಯಾಂತವಾದುದಕ್ಕೆ ಧಾತು ಸಂಜ್ಞಾ ಬರುತ್ತದೆ ಇದರಮೇಲೆ ಕ್ವಿಪ್ ಪ್ರತ್ಯಯ **ಅತೋಲೋಪಃ** ಎಂಬುದರಿಂದ ತನ್ನಿಮಿತ್ತವಾಗಿ ಧಾತುವಿನ ಅಕಾರಕ್ಕೆ ಲೋಪ.

क्विपिनल्लिरुव अपृक्तवाद वकारक्के **लोप** बरबेकादरे मोदलु **वेरपृक्तलोपाप्वलि लोपो-बलीयोन्** एंब वचनदिंद वल् निमित्तवागि **लोपो व्योर्वलि** एंबुदरिंद यकारक्के लोप. इल्लि यकार लोपमाडुवाग अकारक्के स्थानिवद्भाव बरुवुदिल्लवे एंदु आशंके बरुत्तदे. आदरे **नपदान्तवरेयलोपे**— (पा. सू. ८-८-४८) एंबुदरिंद यलोपविषयदल्लि स्थानिवद्भाव प्रतिषेध बरुत्तदे. आ मेले **वेरपृक्तस्य**— (पा. सू. ६-८-६२) एंबुदरिंद क्विपिन वकारक्के लोप. गोपा एंदु आकारान्त शब्दवागुत्तदे.

चरंती— चर गतिभक्षणयोः धातु. लट् प्रथम पुरुष बहुवचनरूप. अतिबंतद परदल्लिरुवुदरिंद निघातस्वर बरुत्तदे.

द्विपत्— द्वौ पादौ अस्य. बहुव्रीहिसमासदल्लि **संख्यासुपूर्वस्य**— (पा. सू. ५-४-८४) एंबुदरिंद संख्यापूर्वदल्लिरुवुदरिंद पाद शब्दद अंत्यक्के लोपवु समासांतवागि बरुत्तदे. **आयस्मयादीनि च्छंदसि**— (पा. सू. ८-४-२०) एंबुदरिंद इदक्के भसंज्ञे बरुवुदरिंद **पादः पत्**— (पा. सू. ६-४-१३०) एंबुदरिंद पद्भावे बरुत्तदे. पाद् एंबल्लि केवल ह्रस्व बंदिरुवुदरिंद **एकदेशविकृतमनन्यवत्** एंब परिभाषेयिंद पाद् इद्दंते. आगुवुदरिंद **द्वित्रिभ्यां पाद्दन्मूर्धसु**—(पा. सू. ६-३-८८) एंबुदरिंद उत्तरपदांतोदात्तस्वर बरुत्तदे

चतुष्पत्— हिंदिनंतें समासवादाग समासांतलोपवू पद्भाववू बरुत्तवे चतुः+पत् एंदिरुवाग **इदुदुपधस्य चाप्रत्ययस्य** एंबुदरिंद विसर्गक्के सत्व बरुत्तदे.

त्रयः संख्यायाः—(पि. सू. ४८) नाम्त, रेफांत संख्यावाचकगळु आद्युदात्तवागुत्तवे एंबुदरिंद चतुर्शब्दवु रेफांतवादुदरिंद आद्युदात्तवागुत्तदे. **बहुव्रीहौ प्रकृत्या पूर्वपदम्** एंबुदरिंद समासदल्लि आ स्वरवे उळियुत्तदे. ॥ ४ ॥

संहितापाठः

त्वमध्वर्युरुत होतासि पूर्व्यः प्रशास्ता पोता जनुषा पुरोहितः ।
विश्वा विद्वाँ आर्त्विज्या धीर पुष्यस्यग्ने सख्ये मा रिषामा वयं तव ॥ ६ ॥

॥ पदपाठः ॥

त्वं । अध्वर्युः । उत । होता । असि । पूर्व्यः । प्रऽशास्ता ।
पोता । जनुषा । पुरःऽहितः ।
विश्वा । विद्वान् । आर्त्विज्या । धीर । पुष्यसि । अग्ने । सख्ये । मा ।
रिषाम । वयं । तव ॥ ६ ॥

सायणभाष्यं

हे अग्ने त्वमध्वर्युरध्वरस्य यागस्य नेता देवान्प्रति प्रेरयिता यद्वा यागं अध्वर्यवस्य कर्ता भवसि । अध्वर्यौ मनुष्ये जाग्रदूरूपेण वागिन्द्रियाधिष्ठातृत्वेन वावस्थाय यागनिष्पादकोऽसि । उताऽपि च पूर्व्यो मुख्यो होता देवानामाह्वाता पूर्ववद्धोतर्यवस्थाय हौत्रस्य कर्मणः कर्ता वासि । भवसि । मानुषो होतामुख्यः । तदपेक्षयाऽस्य मुख्यत्वं । तथा प्रशास्ता प्रकर्षेण शास्ता सर्वेषां शिक्षकोऽसि । यद्वा । होतर्यज पोतर्यजेत्यादिना स्त्रैयेण शास्त्रेति नैयात्र्यावरुणः प्रशास्ता । पूर्ववत्तस्मिन्नवस्थाय यागनिष्पादकोऽसि । पोता यज्ञस्य पावयिता शोधयितासि । यद्वा । पोतृनामकस्यर्त्विजः पूर्ववदधिष्ठाय यागनिष्पादकोऽसि । तथा जनुषा जन्मना स्वाभाव्येन पुरोहितः पुरस्तादागामिनि स्वर्गादौ

ಹಿತೋಽನುಕೂಲಾಚರಣೋಽಸಿ। ಯದ್ವಾ। ಸರ್ವೇಷು ಕರ್ಮಸು ಪೂರ್ವಸ್ಯಾಂ ದಿಶ್ಯಾಹವನೀಯೇ ಸ್ಥಾಪಿತೋಽಸಿ। ಅಥವಾ ಪುರೋಹಿತೋ ಬ್ರಹ್ಮಾ ದೇವಪುರೋಹಿತಸ್ಯ ಬೃಹಸ್ಪತೇಃ ಪ್ರತಿನಿಧಿತ್ವಾತ್। ತಥಾ ಚ ಮಂತ್ರಾಂತರಂ। ಬೃಹಸ್ಪತಿರ್ದೇವಾನಾಂ ಬ್ರಹ್ಮಾಽಹಂ ಮನುಷ್ಯಾಣಾಮಿತಿ। ಅತಸ್ತಸ್ಮಿನ್ಬ್ರಹ್ಮಣಿ ಪೂರ್ವವದವಸ್ಥಾಯ ತದ್ರೂಪಃ ಸನ್ವಿಶ್ವಾ ಸರ್ವಾಣ್ಯಾರ್ತ್ವಿಜ್ಯಾ ಋತ್ವಿಜಃ ಕರ್ಮಾಣ್ಯಾಧ್ವರ್ಯವಾದೀನಿ ವಿದ್ವಾನ್ ಜಾನಂಸ್ತ್ವಂ ಹೇ ಧೀರ ಪ್ರಾಜ್ಞಾಗ್ನೇ ಪುಷ್ಯಸಿ। ನ್ಯೂನಾಧಿಕಭಾವರಾಹಿತ್ಯೇನ ಸಂಪೂರ್ಣಾನಿ ಕರೋಷಿ। ಅನ್ಯತ್ಸಮಾನಂ॥ ಜುನುಷಾ। ಜನೇರುಸಿಃ। ಪುರೋಹಿತಃ। ದಧಾತೇಃ ಕರ್ಮಣಿ ನಿಷ್ಠಾ ಪೂರ್ವಾಧರೇತ್ಯಾದಿನಾಸಿಪ್ರತ್ಯಯಾಂತಃ ಪುರಸ್ಶಬ್ದೋಽಂತೋದಾತ್ತಃ। ತದ್ಧಿತಶ್ಚಾಸರ್ವವಿಭಕ್ತಿರಿತ್ಯವ್ಯಯಸಂಜ್ಞಾಯಾಂ ಪುರೋಽವ್ಯಯಮಿತಿ ಗತಿತ್ವಾದ್ಗತಿರನಂತರ ಇತಿ ಪೂರ್ವಪದ ಪ್ರಕೃತಿಸ್ವರತ್ವಂ। ಆರ್ತ್ವಿಜ್ಯಾ। ಬ್ರಾಹ್ಮಣಾದಿತ್ವಾತ್ ಷ್ಯಞ್। ಞಿತ್ತ್ವಾದಾದ್ಯುದಾತ್ತತ್ವಂ॥

ಪ್ರತಿಪದಾರ್ಥ

(**ಅಗ್ನೇ**—ಎಲೈ ಅಗ್ನಿಯೇ) **ತ್ವಂ**— ನೀನು। **ಅಧ್ವರ್ಯುಃ**—(ಯಜ್ಞದಲ್ಲಿ) ಅಧ್ವರ್ಯುವಾಗಿಯೂ ಅಥವಾ ನಿಶ್ಚಿತವಾದ ಕರ್ಮಗಳ ಕರ್ತನಾಗಿಯೂ। **ಉತ**— ಮತ್ತು। **ಪೂರ್ವ್ಯಃ**— ಮುಖ್ಯನಾದ। **ಹೋತಾ**— ಹೋತೃವಾಗಿಯೂ (ಅಥವಾ ದೇವತೆಗಳಿಗೆ ಆಹ್ವಾನವನ್ನು ಕೊಡುವವನಾಗಿಯೂ)। **ಅಸಿ**— ಆಗಿದ್ದೀಯೆ। **ಶಾಸ್ತಾ**— (ಯಜ್ಞಕ್ರಿಯೆಯಲ್ಲಿ) ಎಲ್ಲರಿಗೂ ಶಿಕ್ಷಣವನ್ನು ಕೊಡುವವನಾಗಿಯೂ ಅಥವಾ ಮೈತ್ರಾವರುಣಸ್ಥಾನದಲ್ಲಿರುವವನೂ ಮತ್ತು। **ಪೋತಾ**—(ಯಜ್ಞವ। ಶುದ್ಧಿಕರ್ತನೂ ಅಥವಾ (ಪೂಗ ನಿಷ್ಪಾದಕನಾದ) ಪೋತೃವಾಗಿಯೂ ಆಗಿದ್ದೀಯೆ। **ಜನುಷಾ**— ಸ್ವಭಾವವಾಗಿಯೇ। **ಪುರೋಹಿತಃ**— ಮುಂದೆ ಸ್ವರ್ಗಾದಿಲಾಭಗಳಿಗೆ ಅನುಕೂಲವಾದ ಆಚರಣೆಯುಳ್ಳವನಾಗಿಯೂ ಅಥವಾ ದೇವಪುರೋಹಿತನಾಗಿಯೂ ಆಗಿದ್ದೀಯೆ (ಆದ್ದರಿಂದ) **ವಿಶ್ವಾ**— ಸಕಲವಾದ। **ಆರ್ತ್ವಿಜ್ಯಾ**— ಋತ್ವಿಕ್ಕುಗಳ ಕರ್ತವ್ಯಗಳನ್ನೂ। **ವಿದ್ವಾನ್**— ತಿಳಿದವನಾಗಿದ್ದು। **ಧೀರ**—ಪ್ರಾಜ್ಞನಾದ। **ಅಗ್ನೇ**— ಎಲೈ ಅಗ್ನಿಯೇ। **ಪುಷ್ಯಸಿ**— (ಕೊಂಚವೂ ನ್ಯೂನಾಧಿಕ್ಯಗಳಿಲ್ಲದೇ) ಯಜ್ಞವನ್ನು ಸಾಂಗವಾಗಿ ನೆರವೇರಿಸುತ್ತೀಯೆ। **ತವ**— ನಿನ್ನ। **ಸಖ್ಯೇ**— ಸ್ನೇಹವಿರುವುದರಿಂದ। **ವಯಂ**—ನಾವು। **ಮಾ ರಿಷಾಮ**— ಹಿಂಸೆಯನ್ನು ಅನುಭವಿಸದಂತಾಗಲಿ

ಭಾವಾರ್ಥ

ಎಲೈ ಅಗ್ನಿಯೇ, ನೀನು ಯಜ್ಞದಲ್ಲಿ ಅಧ್ವರ್ಯುವಾಗಿಯೂ, ಮುಖ್ಯನಾದ ಹೋತೃವಾಗಿಯೂ, ಮೈತ್ರಾವರುಣ ಸ್ಥಾನಗಳಲ್ಲಿರುವವನಾಗಿಯೂ, ಪೋತೃಸ್ಥಾನಗಳಲ್ಲಿರುವವನಾಗಿಯೂ, ಸ್ವಾಭಾವಿಕವಾಗಿಯೇ ಪುರೋಹಿತನಾಗಿಯೂ ಆಗಿದ್ದೀಯೆ. ಪ್ರಾಜ್ಞನಾದ ನೀನು ಸಕಲ ಋತ್ವಿಕ್ಕುಗಳ ಕರ್ತವ್ಯವನ್ನೂ ತಿಳಿದವನಾಗಿ ಯಜ್ಞವನ್ನು ಸ್ವಲ್ಪವೂ ಲೋಪದೋಷಗಳಿಲ್ಲದೇ ಸಾಂಗವಾಗಿ ನೆರವೇರಿಸುತ್ತೀಯೆ. ನಿನ್ನೊಡನೆ ಇರುವ ಸ್ನೇಹದ ನಿಮಿತ್ತ ನಾವು ಯಾವ ಹಿಂಸೆಯನ್ನೂ ಅನುಭವಿಸದಂತಾಗಲಿ.

English Translation

You are the sacrificing or the invoking priest, you are the principal (presenter of the offering) the director (of the ceremonies), their performer

or by birth the family priest ; thus conversant with all the priestly functions, you make the rite perfect ; Agni, let us not suffer injury through your friendship.

॥ ವಿಶೇಷವಿಷಯಗಳು ॥

ಅಧ್ವರ್ಯು, ಹೋತೃ, ಪ್ರಶಾಸ್ತೃ, ಪುರೋಹಿತ— ಇತ್ಯಾದಿ ಋತ್ವಿಕ್ಕುಗಳ ಪ್ರಭೇದಗಳನ್ನು ಹಿಂದಿನ ಸಂಚಿಕೆಗಳಲ್ಲಿ ವಿಶದವಾಗಿ ವಿವರಿಸಿದೆ. ಅಗ್ನಿದೇವನೇ ಅಧ್ವರಗಳ ರಾಜನಾದುದರಿಂದಲೂ, ಹೋತೃವಾದುದರಿಂದಲೂ ಸಕಲವಾದ ನಿರ್ವಹಣಭಾರವನ್ನು ವಹಿಸಿರುವುದರಿಂದಲೂ, ದೇವತೆಗಳನ್ನು ಯಜ್ಞಕ್ಕೆ ಬರಮಾಡುವಂತೆ ಆಹ್ವಾನ ಕೊಡುವುದರಿಂದಲೂ. ಹವಿಸ್ಸನ್ನು ಅರ್ಪಿಸಿ ಪಂಚುವುದರಿಂದಲೂ ಸಂಪೂರ್ಣವಾಗಿ ದೇವತೆಗಳಿಗೂ ಯಜ್ಞಕರ್ತರಿಗೂ ಅವರವರ ಅಭೀಷ್ಟಕ್ಕೆ ತಕ್ಕಂತೆ ತೃಪ್ತಿಯನ್ನು ಫಲಗಳನ್ನು ಒದಗಿಸುವುದರಿಂದಲೂ ಸಹ **ವಿಶ್ವಾ ಆತ್ರಿಜ್ಯಾ ವಿದ್ವಾನ್ ಧೀರ ಅಗ್ನೇ ಪುಷ್ಯಸಿ**—ಎಂಬುದಾಗಿ ಸಕಲವಾದ ಋತ್ವಿಕ್ಕುಗಳ ಕರ್ತವ್ಯವನ್ನು ಚೆನ್ನಾಗಿ ತಿಳಿದವನಾಗಿದ್ದು ಕೊಂಚವೂ ನ್ಯೂನಾಧಿಕ್ಯಗಳಿಲ್ಲದೆ ಯಜ್ಞವನ್ನು ಸಾಂಗವಾಗಿ ನೇರವೇರಿಸುತ್ತಾನೆಂದು ಹೊಗಳಿದೆ.

ಕೇತುಂ ಯಜ್ಞಾನಾಂ ವಿದಥಸ್ಯ ಸಾಧನಂ ವಿಪ್ರಾಸೋ ಅಗ್ನಿಂ ಮಹಯಂತ ಚಿತ್ತಿಭಿಃ ।
(ಋ. ಸಂ. ೩-೩-೩)

ಸ ಕೇತುರಧ್ವರಾಣಾಮಗ್ನಿರ್ದೇವೇಭಿರಾ ಗಮತ್ ।
(ಋ. ಸಂ ೩-೧೦-೪)

ಆ ವೋ ರಾಜಾನಮಧ್ವರಸ್ಯ ರುದ್ರಂ ಹೋತಾರಂ ಸತ್ಯಯಜಂ ರೋದಸ್ಯೋಃ ।
(ಋ. ಸಂ. ೪-೩-೧)

ಹೋತಾರಂ ಚಿತ್ರರಥಮಧ್ವರಸ್ಯ ಯಜ್ಞಸ್ಯ ಯಜ್ಞಸ್ಯ ಕೇತುಂ ರುಶಂತಂ ।
(ಋ. ಸಂ ೧೦-೧-೫)

ಸದ್ಯೋ ಜಾತೋ ವ್ಯಮಿಮೀತ ಯಜ್ಞಮಗ್ನಿರ್ದೇವಾನಾಮಭವತ್ಪುರೋಗಾಃ ।
(ಋ. ಸಂ. ೧೦-೧೧೦-೧೧)

ಹೀಗೆ ಋಕ್ಸಂಹಿತೆಯಲ್ಲಿ ನೂರಾರು ಸಂದರ್ಭಗಳಲ್ಲಿ ಅಗ್ನಿಯೇ ಅಧ್ವರಗಳ ರಾಜನೆಂದೂ, ಸಕಲ ಋತ್ವಿಕ್ಕುಗಳ ಕಾರ್ಯವನ್ನು ನೆರವೇರಿಸುವವನೆಂದೂ ಸಾಂಗವಾಗಿ ಯಜ್ಞವು ನೆರವೇರುವಂತೆ ಮಾಡಲು ಸಹಾಯಕನಾಗುವನೆಂದೂ ನಾನಾವಿಧವಾಗಿ ಹೊಗಳಿದೆ

ಜನುಷಾ—**ಜನ್ಮನಾ** ಹುಟ್ಟಿದಾಗಿನಿಂದ ಎಂದರೆ ಸ್ವಭಾವವಾಗಿಯೇ. ಋ. ಸಂ. ೧೦-೧೧೦-೧೧ನೇ ಋಕ್ಕಿನಲ್ಲಿ ವರ್ಣಿಸುವಂತೆ ಅಗ್ನಿಯು ಉತ್ಪನ್ನನಾದೊಡನೆಯೇ ಯಜ್ಞನಿರ್ವಹಣ ಶಕ್ತಿಯನ್ನು ಪ್ರಕಟಿಸಿ ದೇವತೆಗಳ ಪುರೋಹಿತನಾದನೆಂದು ಶ್ರುತಿವಾಕ್ಯವಿದೆ

ಪ್ರಶಾಸ್ತಾ- **ಪ್ರಕರ್ಷೇಣ ಶಾಸ್ತಾ ಶಿಕ್ಷಕಃ ಅಸಿ** ಋತ್ವಿಕ್ಕುಗಳಿಗೂ ಯಜಮಾನರಿಗೂ ಅತ್ಯುತ್ತಮವಾದ ಶಿಕ್ಷಣವನ್ನು ಕೊಡುವವನೆಂದು ಎಂದರ್ಥ. ಅಥವಾ **ಪ್ರಶಾಸ್ತೃವು ಹೋತೃವಿಗೆ** ಸಹಾಯಕನಾದ ಮೈತ್ರಾವರುಣ ಸ್ಥಾನದಲ್ಲಿರುವ ಋತ್ವಿಕ್ಕು.

ಪೋತಾ—ಯಜ್ಞಸ್ಯ ಸಾವಯಿತಾ. ಯಜ್ಞವನ್ನು ಶುದ್ಧಿಮಾಡುವವನು ಅಥವಾ ಬ್ರಹ್ಮಸ್ಥಾನದ ಋತ್ವಿಕ್ಕಿಗೆ ಸಹಾಯಕನು.

॥ ವ್ಯಾಕರಣಪ್ರಕ್ರಿಯಾ ॥

ಹೋತಾ—ಹು ದಾನಾದನಯೋಃ ಧಾತು. ಕರ್ತೃರ್ಥದಲ್ಲಿ ತೃನ್ ಪ್ರತ್ಯಯ. ತನ್ನಿಮಿತ್ತವಾಗಿ ಧಾತುವಿಗೆ ಗುಣ. **ಘ್ನಾತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ.

ಪ್ರಶಾಸ್ತಾ—ಶಾಸು ಅನುಶಿಷ್ಟೌ. ಧಾತು. ತೃಚ್ ಪ್ರತ್ಯಯ. ಚಿತ್ತಾದುದರಿಂದ ಅಂತೋದಾತ್ತವಾಗುತ್ತದೆ.

ಜನುಷಾ—ಜನೀ ವ್ಯಾದುರ್ಭಾವೇ ಧಾತು. ಇದಕ್ಕೆ ಔಣಾದಿಕವಾದ ಉಸಿ ಪ್ರತ್ಯಯ. ಪ್ರತ್ಯಯಸ್ವರದಿಂದ ಉಕಾರ ಉದಾತ್ತವಾಗುತ್ತದೆ.

ಪುರೋಹಿತಃ—ಪುರಸ್ತಾತ್ (ಆಗಾಮಿನಿ ಸ್ವರ್ಗಾದೌ) ಹಿತಃ (ಅನುಕೂಲಾಚರಣಃ) ಪುರೋಹಿತಃ ಡುಧಾಞ್ ಧಾರಣಪೋಷಣಯೋಃ ಧಾತು. ಇದಕ್ಕೆ **ಕ್ತ**ಪ್ರತ್ಯಯ ಪರವಾದಾಗ **ದಧಾತೇರ್ಹಿಃ** (ಪಾ. ಸೂ. ೭-೪-೪೭) ಎಂಬುದರಿಂದ ಹಿ ಆದೇಶ **ಪೂರ್ವಾಧರಾವರಾಣಾಮಸಿಪುರಧವಶ್ಚೈಷಾಮ್** (ಪಾ. ಸೂ ೫-೩-೩೯) ಎಂಬುದರಿಂದ ಪೂರ್ವಶಬ್ದಕ್ಕೆ ಅಸ್ತಾತ್ಯರ್ಥದಲ್ಲಿ ಅಸಿ ಪ್ರತ್ಯಯ ಬರುತ್ತದೆ. ಅಸಿಪ್ರತ್ಯಯ ಸನ್ನಿಯೋಗದಿಂದ ಪ್ರಕೃತಿಗೆ ಪುರ್ ಎಂಬ ಆದೇಶ ಆಗ ಪುರಸ್ ಎಂಬುದು ಅಂತೋದಾತ್ತವಾದ ಶಬ್ದವಾಗುತ್ತದೆ. **ತದ್ಧಿತಶ್ಚಾಸರ್ವವಿಭಕ್ತಿಃ** (ಪಾ. ಸೂ. ೧-೪-೪೪) ಎಂಬುದರಿಂದ ಪುರಸ್ ಎಂಬುದಕ್ಕೆ ಅವ್ಯಯಸಂಜ್ಞಾ ಬರುತ್ತದೆ. **ಪುರೋಽವ್ಯಯೇಮ್** (ಪಾ. ಸೂ ೧-೪-೬೭) ಅವ್ಯಯಸಂಜ್ಞೆಯುಳ್ಳ ಪುರಃ ಎಂಬುದು ಗತಿಸಂಜ್ಞೆಯನ್ನು ಹೊಂದುತ್ತದೆ. ಎಂಬುದರಿಂದ ಇದಕ್ಕೆ ಗತಿ ಸಂಜ್ಞಾ ಬಂದಾಗ **ಗತಿರನಂತರಃ**—(ಪಾ ಸೂ.೬-೨-೪೯) ಎಂಬುದರಿಂದ ಸೂರ್ವಪದಪ್ರಕೃತಿಸ್ವರ ಬರುತ್ತದೆ. ಪುರೋಹಿತಃ ಎಂಬಲ್ಲಿ ಓಕಾರ ಉದಾತ್ತವಾಗುತ್ತದೆ

ವಿಶ್ವಾ— ನಪುಂಸಕದಲ್ಲಿ ಶಪಿಗೆ ಶಿ ಆದೇಶ ಬಂದಾಗ **ಶೇಶ್ಛಂದಸಿ ಬಹುಲಮ್** ಎಂಬುದರಿಂದ ಶಿಗೆ ಲೋಪ.

ಆರ್ತ್ವಿಜ್ಯಾ— ಋತ್ವಿಜಃ ಇಮಾನಿ (ಕರ್ಮಾಣಿ) ಆರ್ತ್ವಿಜ್ಯಾನಿ. ಬ್ರಾಹ್ಮಣಾದಿಯಲ್ಲಿ ಸೇರಿರುವುದರಿಂದ **ಗುಣವಚನಬ್ರಾಹ್ಮಣಾದಿಭ್ಯಃ ಷ್ಯಞ್ಚ**— (ಪಾ. ಸೂ. ೫-೧-೧೨೪) ಎಂಬುದರಿಂದ ಷ್ಯಞ್ ಪ್ರತ್ಯಯ ಞಿತ್ತಾದುದರಿಂದ **ತದ್ಧಿತೇಷ್ವಚಾಮಾದೇಃ** ಎಂಬುದರಿಂದ ಆದಿವೃದ್ಧಿ. **ಉರಣ್ರಪರಃ** ಎಂಬುದರಿಂದ ರಪರವಾಗಿ ಬರುತ್ತದೆ. **ಘ್ನಾತ್ಯಾದಿರ್ನಿತ್ಯಮ್** ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ನಪುಂಸಕದಲ್ಲಿ ಶಿ ಆದೇಶ ಬಂದಾಗ **ಶೇಶ್ಛಂದಸಿ ಬಹುಲಮ್** ಎಂಬುದರಿಂದ ಶಿಗೆ **ಲೋಪ**.

ವಿದ್ವಾನ್— ವಿದ ಜ್ಞಾನೇ ಧಾತು. ಲಡರ್ಥದಲ್ಲಿ ಶತೃ ಬಂದಾಗ **ವಿದೇಶ್ಶತುರ್ವಸುಃ**—(ಪಾ ಸೂ. ೭-೧-೩೬) ಎಂಬುದರಿಂದ ಅದಕ್ಕೆ ವಸು ಆದೇಶ. ವಿದ್ವಸ್ ಶಬ್ದವಾಗುತ್ತದೆ. ಪ್ರಥಮಾ ಸು ಪರವಾದಾಗ **ಅತ್ವಸಂತ** ಎಂಬುದರಿಂದ ಉಪಧಾ ಧೀರ್ಘ. ಉಗಿತ್ತಾದುದರಿಂದ ನುಮಾಗಮ **ಹಲ್ಙ್ಯಾದಿ** ಸೂತ್ರದಿಂದ ಸಂಯೋಗ ಸಂಯೋಗಾಂತಲೋಪದಿಂದ ಅಂತ್ಯ ಸಕಾರ ಲೋಪ.

ಪುಷ್ಯಸಿ—ಪುಷ ಪುಷ್ಟೌ ಧಾತು. ದಿವಾದಿ ಲಟ್ ಮಧ್ಯಮಪುರುಷ ಏಕವಚನ ರೂಪ. ತಿಙಂತನಿಘಾತ ಸ್ವರ ಬರುತ್ತದೆ. ॥ ೬ ॥



ಸಂಹಿತಾಪಾಠಃ

ಯೋ ವಿಶ್ವತಃ ಸುಪ್ರತೀಕಃ ಸದೃಙ್ಙಸಿ ದೂರೇ ಚಿತ್ಸಂತಳಿದಿವಾತಿ
ರೋಚಸೇ।
ರಾತ್ರ್ಯಶ್ಚಿದಂಧೋ ಅತಿ ದೇವ ಪಶ್ಯಸ್ಯಗ್ನೇ ಸಖ್ಯೇ ಮಾ ರಿ-
ಷಾಮಾ ವಯಂ ತವ ॥ ೭ ॥

ಪದಪಾಠಃ

ಯಃ । ವಿಶ್ವತಃ । ಸು ಽ ಪ್ರತೀಕಃ । ಸ ಽ ದೃಙ್ । ಅಸಿ । ದೂರೇ। ಚಿತ್। ಸನ್ ।
ತಳಿತ್ ಽ ಇವ । ಅತಿ । ರೋಚಸೇ ।
ರಾತ್ರ್ಯಾಃ । ಚಿತ್ । ಅಂಧಃ । ಅತಿ । ದೇವ । ಪಶ್ಯಸಿ । ಅಗ್ನೇ। ಸಖ್ಯೇ । ಮಾ।
ರಿಷಾಮ । ವಯಂ । ತವ ॥ ೭ ॥

ಸಾಯಣಭಾಷ್ಯಂ

ಹೇ ಅಗ್ನೇ ಯಸ್ತ್ವಂ ಸುಪ್ರತೀಕಃ ಶೋಭನಾಂಗಃ ಸನ್ ವಿಶ್ವತಃ ಸರ್ವಸ್ಮಾದಪಿ ಸದೃಙ್ಙಸಿ ಅನ್ಯೋನಃ ಸದೃಶೋ ಭವಸಿ ಸ ತ್ವಂ ದೂರೇ ಚಿತ್ಸನ್ ದೂರೇ ಽಪಿ ವರ್ತಮಾನಃ ಸನ್ ತಳಿದಿವ । ಅಂತಿಕನಾಮೈತತ್ । ಅಂತಿಕೇ ವರ್ತಮಾನ ಇವೇತಿ ರೋಚಸೇ । ಅತಿಶಯೇನ ದೀಪ್ಯಸೇ। ತದುಕ್ತಂ

ಯಾಸ್ಕೇನ । ದೂರೇ೨ಪಿ ಸನ್ನಂತಿಕ ಇವ ಸನ್ದೃಶ್ಯಸೇ । ನಿ. ೩-೧೧ । ಇತಿ । ರಾತ್ರ್ಯಾಶ್ಚಿತ್ ರಾತ್ರೇರಪಿ ರಾತ್ರೇಃ ಸಂಬಂಧಿನಮಂಧೋ ಬಹುಲಮಂಧಕಾರಮಪಿ ಹೇ ದೇವ ದ್ಯೋತಮಾನಾಗ್ನೇ೨ತಿ ಪಶ್ಯಸಿ । ಅತೀತ್ಯ ಪ್ರಕಾಶಸೇ । ಅನ್ಯತ್ಪೂರ್ವವತ್ ॥ ಸುಪ್ರತೀಕಃ । ಶೋಭನಂ ಪ್ರತೀಕೋ೨ಂಗಂ ಯಸ್ಯ । ಕೃತ್ವಾದಯಶ್ಚೇತ್ಯುತ್ತರಪದಾದ್ಯುದಾತ್ತತ್ವಂ । ಸದೃಙ್ । ಸಮಾನಾನ್ಯೋರ್ಚೇತಿ ವಕ್ತವ್ಯಂ । ಪಾ. ೩-೨-೬೦-೧ । ಇತಿ ಸಮಾನೋಪಪದಾದ್ದೃಶೇಃ ಕ್ವಿನ್ । ದೃಕ್ದೃಶವತುಷು । ಪಾ. ೬-೩ ೮೪ । ಇತಿ ಸಮಾನಸ್ಯ ಸಭಾವಃ । ದೃಕ್ಸ್ಪೃವಃಸ್ತವಸಾಂ ಛಂದಸಿ । ಪಾ. ೬-೧-೮೩ । ಇತಿ ಸುಮ್ । ಸಂಯೋಗಾಂತಲೋಪಃ । ಕ್ವಿನ್ಪ್ರತ್ಯಯಸ್ಯ ಕುರಿತಿ ಕುತ್ವಂ । ಕೃದುತ್ತರಪದಪ್ರಕೃತಿಸ್ವರತ್ವಂ । ರಾತ್ರ್ಯಾಃ । ರಾತ್ರೇಶ್ಛಾಜಸೌ । ಪಾ. ಸೂ ೪-೧-೩೧ । ಇತಿ ಙೀಪ್ ॥

ಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ಯಃ**—ಯಾವ ನೀನು । **ಸುಪ್ರತೀಕಃ**—ರಮ್ಯವಾದ ದೇಹವುಳ್ಳವನಾಗಿ । **ವಿಶ್ವತಃ**—ಎಲ್ಲಾ ಕಡೆಗಳಲ್ಲಿಯೂ । **ಸದೃಙ್ ಅಸಿ**—(ಕೊಂಚವೂ ವ್ಯತ್ಯಾಸವಿಲ್ಲದೇ) ಒಂದೇ ಸಮನಾಗಿದ್ದೀಯೆ। (ಅಂತಹ ನೀನು) । **ದೂರೇ ಚಿತ್ ಸನ್**—ದೂರದಲ್ಲಿದ್ದರೂ ಸಹ । **ತಳ್ಕಿದಿವ**—ಹತ್ತಿರದಲ್ಲಿರುವಂತೆಯೇ । **ಅತಿರೋಚಸೇ**—ಅತಿಶಯನಾಗಿ ಪ್ರಕಾಶಿಸುತ್ತೀಯೆ । **ದೇವ**—ಪ್ರಕಾಶಮಾನನಾದ ಅಗ್ನಿಯೇ, (ನೀನು)। **ರಾತ್ರ್ಯಾಶ್ಚಿತ್ ಅಂಧಃ**—ರಾತ್ರಿಕಾಲದ ಕಗ್ಗತ್ತಲೆಯನ್ನೂ ಸಹ । **ಅತಿ ಪಶ್ಯಸಿ**—ಭೇದಿಸಿಕೊಂಡು ಪ್ರಕಾಶಿಸುತ್ತೀಯೆ । **ತವ**—ನಿನ್ನ । **ಸಖ್ಯೇ**—ಸ್ನೇಹವಿರುವುದರಿಂದ । **ವಯಂ**—ನಾವು । **ಮಾ ರಿಷಾಮ**—ಹಿಂಸಿತರಾಗದಿರುವಂತಾಗಲಿ

ಭಾವಾರ್ಥ

ಎಲೈ ಅಗ್ನಿಯೇ, ನೀನು ರಮ್ಯವಾದ ದೇಹವುಳ್ಳವನಾಗಿ ಎಲ್ಲಾ ಕಡೆಗಳಲ್ಲಿಯೂ ಒಂದೇ ಸಮನಾಗಿ ಯಾವ ವ್ಯತ್ಯಾಸವೂ ಇಲ್ಲದೇ ಪ್ರಕಾಶಿಸುತ್ತೀಯೆ. ನೀನು ಅತಿದೂರದಲ್ಲಿದ್ದರೂ ಹತ್ತಿರದಲ್ಲಿರುವಂತೆಯೇ ಬೆಳಗುತ್ತೀಯೆ. ನಿನ್ನ ಪ್ರಭೆಯಿಂದ ರಾತ್ರಿಕಾಲದ ಕಗ್ಗತ್ತಲೆಯನ್ನೂ ಸಹ ಭೇದಿಸಿ ಪ್ರಕಾಶಿಸುತ್ತೀಯೆ. ನಿನ್ನ ಸ್ನೇಹವಿರುವುದರಿಂದ ನಾವು ಯಾವ ವಿಧವಾದ ಹಿಂಸೆಯನ್ನೂ ಅನುಭವಿಸದಿರುವಂತಾಗಲಿ.

English Translation

You are of graceful form and alike on every side, and although remote, shine as if near ; O divine Agni, you can see beyond the darkness of night ; Agni, let us not suffer jinury through your friendship.

ವಿಶೇಷ ವಿಷಯಗಳು

ಸುಪ್ರತೀಕಃ—**ಶೋಭನಮುಖಃ** । ರಮ್ಯವಾದ ಮುಖವುಳ್ಳವನಾಗಿ ; ಈ ವಿಶೇಷಣವು ಸಾಧಾರಣವಾಗಿ ಅಗ್ನಿ, ಸೂರ್ಯ,ಉಷಸ್ಸು, ಇವರ ಪರವಾಗಿಯೇ ಹೆಚ್ಚಾಗಿ ಉಪಯೋಗಿಸಲ್ಪಟ್ಟಿದೆ ಕಾಂತಿಯಿಂದ ಕೂಡಿದ ರೂಪವುಳ್ಳ

ವರಾಗಿದ್ದರಿಂದ, **ಸುಪ್ರತೀಕಃ, ಸುಸಂದೃಶಃ** ಎಂಬ ವಿಶೇಷಣಗಳು ಇವರ ವಿಷಯದಲ್ಲಿ ಅಧಿಕವಾಗಿ ಉಪಯುಕ್ತವಾಗಿವೆ

ತಳಿತ್—ತಳಿತ್, ಆಸಾತ್, ಅಂಬರಂ—ಇತ್ಯಾದಿ ಹನ್ನೊಂದು **ಅಂತಿಕ** ನಾಮಗಳಲ್ಲಿ ಪರಿತವಾಗಿರುವು ದರಿಂದ (ನಿ. ೩-೯) ಹತ್ತಿರದಲ್ಲಿ ಎಂಬರ್ಥ. ಅಗ್ನಿಯು ಅತಿಶಯವಾದ ಪ್ರಕಾಶವು ನೂರದಲ್ಲಿದ್ದರೂ ಹತ್ತಿರ ನಲ್ಲಿರುವಂತೆಯೇ ಶೋಭಿಸುತ್ತದೆ.

ಅಂಧಃ—ತಮೋಽಸ್ಯಂಧ ಉಚ್ಯತೇ ನಾಸ್ಮಿ ಧ್ಯಾನಂ ಭವತಿ। ನ ದರ್ಶನಮಂಧಂತಮ ಇತ್ಯಭಿ-**ಧಾಷಂತೇ ।** (ನಿ. ೫-೧) ಅವಧಾನದಿಂದ ಅಥವಾ ಗಮನವಿಟ್ಟು ನೋಡಲಾಗದಿರುವುದು. ಅಂಧ ಶಬ್ದಕ್ಕೆ ಕತ್ತಲು ಎಂಬರ್ಥ. ಕುರುಡಾಗಿಸುವ ಕತ್ತಲೆಯೆಂದು ಜನಗಳು ಆಡುವ ಭಾಷೆಯು ಪ್ರಸಿದ್ಧವಾಗಿದೆ.

॥ ವ್ಯಾಕರಣಪ್ರಕ್ರಿಯಾ ॥

ವಿಶ್ವತಃ—ವಿಶ್ವ ಶಬ್ದಕ್ಕೆ ಪಂಚಮ್ಯರ್ಥದಲ್ಲಿ **ಪೆಂಚಮ್ಯಾಸ್ತಸಿಲ್** ಎಂಬುದರಿಂದ ತಸಿಲ್ ಪ್ರತ್ಯಯ. **ಲಿತಿ** ಎಂಬುದರಿಂದ ಪ್ರತ್ಯಯದ ಸ್ಫೂರ್ನಕ್ಕೆ ಉದಾತ್ತಸ್ವರ ಬರುತ್ತದೆ.

ಸುಪ್ರತೀಕಃ—ಶೋಭನಂ ಪ್ರತೀಕಃ ಅಂಗಂ ಯಸ್ಯ ಸಃ ಸುಪ್ರತೀಕಃ ಸುಸ್ವರವು ಪ್ರಾಪ್ತವಾಗಲಿ **ಕೃತ್ಯಾ-ದಯೆಷ್ಟ** ಎಂಬುದರಿಂದ ಉತ್ತರಪದ ಆದ್ಯುದಾತ್ತಸ್ವರ ಬರುತ್ತದೆ.

ಸದೃಙ್— ದೃಶಿರ್ ಪ್ರೇಕ್ಷಣೇ ಧಾತು. ಇದಕ್ಕೆ ಸಮಾನವೆಂಬ ಪದವು ಉಪಪದವಾಗಿರುವಾಗ **ಸಮಾ-ನಾನ್ಯಯೋಶ್ಚೇತಿ ವಕ್ತವ್ಯಮ್**— (ಪಾ. ಸೂ. ೩-೨-೧) ಎಂಬುದರಿಂದ ಕ್ವಿನ್ ಪ್ರತ್ಯಯ. ದೃಶ್ ಧಾತುವು ಪರದಲ್ಲಿರುವಾಗ **ದೃಗ್‌ದೃಶ ವತುಷು**—(ಪಾ. ಸೂ. ೬-೩-೯೦) ಎಂಬುದರಿಂದ ಸಮಾನ ಶಬ್ದಕ್ಕೆ ಸಭಾವ. ಸದೃಶ್ ಶಬ್ದವಾಗುತ್ತದೆ. ಇದಕ್ಕೆ ಸು ಪರವಾದಾಗ **ದೃಕ್‌ಸ್ವವಃಸ್ತತವಸಾಂ ಧಂದಸಿ**— (ಪಾ. ಸೂ. ೬-೧-೯೩) ಎಂಬು ದರಿಂದ ನುಮಾಗಮ ಬರುತ್ತದೆ. ಸದೃನ್‌ಶಸ್ ಎಂದಿರುವಾಗ **ಸಂಯೋಗಾಂತಸ್ಯಲೋಪಃ** ಎಂಬುದರಿಂದ ಶಕಾರಕ್ಕೆ ಲೋಪ. ಮೊದಲು **ಹಲ್‌ಙ್ಯಾಭ್ಯೋ** ಸೂತ್ರದಿಂದ ಸುವಿಗೆ ಲೋಪ ಹೇಳಬೇಕು. **ಕ್ವಿನ್‌ಪ್ರತ್ಯಯಸ್ಯ ಕುಃ**— (ಪಾ. ಸೂ. ೮-೨-೬೨) ಎಂಬುದರಿಂದ ನಕಾರಕ್ಕೆ ಕುತ್ವದಿಂದ ಜಕಾರಾದೇಶ. ಸದೃಜ್ ಎಂದು ರೂಪವಾಗುತ್ತದೆ. **ಗತಿಕಾರಕೋಪಪದಾತ್‌ಕೃತ್** ಸೂತ್ರದಿಂದ ಕೃದುತ್ತರಪದ ಪ್ರಕೃತಿಸ್ವರ ಬರುತ್ತದೆ.

ಆಸಿ— ಅಸ ಭುವಿ ಧಾತು. ಅದಾದಿ. ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪರವಾದಾಗ **ತಾಸಸ್ತ್ಯೋರ್ಲೋಪಃ** ಎಂಬುದರಿಂದ ಧಾತುವಿನ ಸಕಾರಕ್ಕೆ ಲೋಪ. ಯಮ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಸಿಪ್ ಪಿತ್ತಾದುದರಿಂದ ಅನುದಾತ್ತ. ಧಾತುಸ್ವರ ಉಳಿಯುತ್ತದೆ.

ರಾತ್ರ್ಯಾಃ— ರಾತ್ರಿ ಶಬ್ದ ಇಕಾರಾಂತ ಸ್ತ್ರೀಲಿಂಗ. ಇದಕ್ಕೆ **ರಾತ್ರೇಶ್ಚಾಜಸೌ**—(ಪಾ. ಸೂ. ೪-೧-೦೧) ಎಂಬುದರಿಂದ ಙೀಪ್. ಷಷ್ಠೀಏಕವಚನಾಂತರೂಪ. ॥ ೭ ॥

——:o:——

संहितापाठः

पूर्वो॑ देवा भवतु सुन्व॒तो॑ रथो॑ऽस्माक॒ꣳ शं-
सो॑ अभ्य॑स्तु दू॒ढ्यः॑।
तदा जा॑नीतो॒त पु॑ष्यता॒ वचो॑ऽग्ने॒ सख्ये॑ मा रि॑-
षामा व॒यं तव॑ ॥ ल ॥

पदपाठः

पूर्व॑ः। दे॒वाः॒। भ॒व॒तु॒। सु॒न्व॒तः॑। रथ॑ः। अ॒स्माक॑म्। शं॒स॑ः। अ॒-
भि। अ॒स्तु॒। दुः॒ऽध्यः॑।
तत्। आ। जा॒नी॒त॒। उ॒त। पु॒ष्य॒त॒। वचः॑। अग्ने॑। सख्ये॑।
मा। रि॒षा॒म॒। व॒यम्। तव॑ ॥ ल ॥

। सायणभाष्यं ।

हे देवा अग्न्यवयेवभूताः सर्वे देवाः सुन्वतः सोमाभिषवं कुर्वतोयजमानस्य रथः पूर्व अस्मेत्पामयेजमानानानां रथेभ्यो मुख्यो भवतु। अपि चास्माकं शंसः शंसनीयमभिशापरूपं पापं दुष्टो दुर्धियः पापबुद्धिनस्य-दनिष्टाचरणपरा इत्यर्थः। अभ्यस्तु। अभिभवतु। तान्बाधताम्। तदिदं मदीयं हे देवा आ जानीत। आभिमुख्येनावगच्छत। उतापि च तद्वचोऽस्मदीयं वचनं तदर्थाचरणेन पुष्यत। प्रवर्धयत। हे सर्वदेवात्मकाग्ने सख्य इत्यादि पूर्ववत्॥ सुन्वतः। शकुरनुमु इति विभक्तेरुदात्तत्वं। शंसः। शंस्यते कीर्त्यते इति शंसोऽभि-शापः। कर्मणि घञ्। ञ्नित्त्वादाद्युदात्तत्वं। दूढ्यः। दुष्टं ध्यायंतीति दुर्धियः। ध्यै चिंतायामित्यस्मात् क्विप्पूर्वेति क्विप्। वृशिग्रहणानुवृत्तेरस्यस्य च

ವಿಧ್ಯಂತರೋಪಸಂಗ್ರಹಾರ್ಥತ್ವಾತ್ಸಂಸ್ಪಸಾರಣಂ । ಪೃಷೋದರಾದಿಷು ಧ್ಯೈ ಚೇತಿ ಪಾಠಾದ್ಬುರೋ ರೇಫಸ್ಯೋತ್ವಂ ಉತ್ತರಪದಾದೇಃ ಷ್ಟುತ್ವಂ ಚ ॥

॥ ಪ್ರತಿಪದಾರ್ಥ ॥

ದೇವಾಃ—(ಅಗ್ನಿಯ ಅವಯವಗಳಾದ) ಸಕಲ ದೇವತೆಗಳೇ । **ಸುನ್ವತಃ**—ಸೋಮರಸವನ್ನು ಹಿಂಡುವ ಯಜಮಾನನ । **ರಥಃ**—ರಥವು । **ಪೂರ್ವಃ**—(ಇತರ ಎಲ್ಲರ ರಥಕ್ಕಿಂತಲೂ) ಮುಂದಾಗಿ । **ಭವತು**—ಇರಲಿ । **ಅಸ್ಮಾಕಂ**—ನಮ್ಮ । **ಶಂಸಃ**—ನಿಂದಾರೂಪವಾದ ಅನಿಷ್ಟವು । **ದೂಢ್ಯಃ**—ಪಾಪ ಬುದ್ಧಿಗಳುಳ್ಳ ಶತ್ರುಗಳನ್ನು । **ಅಭ್ಯಸ್ತು**—ಹಿಂಸಿಸಲಿ । **ತತ್**—(ನನ್ನ) ಈ ಸ್ತೋತ್ರವನ್ನು । **ಆ ಜಾನೀತ**—ಚೆನ್ನಾಗಿ ಅರ್ಥಮಾಡಿಕೊಳ್ಳಿರಿ । **ಉತ**—ಮತ್ತು । **ವಚಃ**—ನನ್ನ ಪ್ರಾರ್ಥನೆಯನ್ನು । **ಪುಷ್ಯತ**—ನೆರವೇರಿಸಿರಿ । **ಅಗ್ನೇ**—ಎಲೈ ಅಗ್ನಿಯೇ । **ತವ**—ನಿನ್ನ । **ಸಖ್ಯೇ**—ಸ್ನೇಹವಿರಲಾಗಿ। **ವಯಂ** - ನಾವು । **ಮಾ:ರಿಷಾಮ**—ಹಿಂಸಿತರಾಗದೇ ಇರುವಂತಾಗಲಿ॥

॥ ಭಾವಾರ್ಥ ॥

ಎಲೈ ದೇವತೆಗಳೇ, ನೀವೆಲ್ಲಾ ಅಗ್ನಿಯ ಅವಯವಗಳೇ ಆಗಿದ್ದೀರಿ. ನಿಮ್ಮ ದಯೆಯಿಂದ ಸೋಮರಸವನ್ನು ಹಿಂಡುವ ಯಜಮಾನನ ರಥವು ಇತರ ಎಲ್ಲರ ರಥಕ್ಕಿಂತಲೂ ಮುಂದಾಗಿರಲಿ ನಮ್ಮ ನಿಂದಾರೂಪವಾದ ಅನಿಷ್ಟವು ಪಾಪಬುದ್ಧಿಗಳುಳ್ಳ ಶತ್ರುಗಳನ್ನು ಹಿಂಸಿಸಲಿ. ನನ್ನ ಈ ಸ್ತೋತ್ರವನ್ನು ನೀವೆಲ್ಲರೂ ಚೆನ್ನಾಗಿ ಅರ್ಥಮಾಡಿಕೊಳ್ಳಿರಿ ಮತ್ತು ನನ್ನ ಪ್ರಾರ್ಥನೆಯನ್ನು ನೆರವೇರಿಸಿರಿ ಎಲೈ ಅಗ್ನಿಯೇ, ನಿನ್ನೊಡನೆ ಇರುವ ಸ್ನೇಹದಿಂದ ನಾವು ಯಾವ ವಿಧದಲ್ಲಿಯೂ ಹಿಂಸಿತರಾಗದೇ ಇರುವಂತಾಗಲಿ.

English Translation

Gods, let the chariot of the offerer of the libation be foremost ; let our denunciations overwhelm the wicked ; understand and fulfil my words ; Agnil let us not suffer injury through your friendship.

ವಿಶೇಷವಿಷಯಗಳು

ದೂಢ್ಯಃ—ದುರ್ಧಿಯಃ ಪಾಪಬುದ್ಧಯಃ (ನಿ. ೫–೨) ದುಷ್ಟವಾದವೂ ಪಾಪಾತ್ಮಕವಾದವೂ ಆದ ಬುದ್ಧಿಗಳುಳ್ಳ ನಮ್ಮ ಶತ್ರುಗಳನ್ನು ಎಂದರ್ಥ.

ಶಂಸಃ—ಅಭಿಶಾಪರೂಪಂ ಪಾಪಂ । ನಿಂದಾತ್ಮಕವಾದ ನಮ್ಮ ಪಾಪವು ನಮ್ಮ ಶತ್ರುಗಳನ್ನು ಆಕ್ರಮಿಸಿ ಹಿಂಸಿಸಲಿ.

ಪುಷ್ಯತ—ಪ್ರವರ್ಧಯತ । ತುಂಬಿ ಬೆಳೆಯುವಂತೆ ಮಾಡಿರಿ.

ವ್ಯಾಕರಣಪ್ರಕ್ರಿಯಾ

ಸುನ್ವತಃ— ಷುಞ್ ಅಭಿಷವೇ ಧಾತು. ಇದಕ್ಕೆ ಲಡರ್ಥದಲ್ಲಿ ಶತೃ ಪ್ರತ್ಯಯ. **ಸ್ವಾದಿಭ್ಯಃ ಶ್ನುಃ** ಎಂಬುದರಿಂದ ಶ್ನು ವಿಕರಣ. ಧಾತುವಿನ ಆದಿಗೆ ಸಕಾರಾದೇಶ. **ಸಾರ್ವಧಾತುಕಮಪಿತ್** ಎಂಬುದರಿಂದ ವಿಕರ

ಣಕ್ಕೂ ಪ್ರತ್ಯಯಕ್ಕೂ ಜುತ್ವದ್ಭಾವವಿರುವುದರಿಂದ ಇತಿಗೆ ಗುಣ ಬರುವುದಿಲ್ಲ. ಸುನ್ವತ್ ಶಬ್ದವಾಗುತ್ತದೆ. ಚತುರ್ಥೀ ಏಕವಚನಾಂತರೂಪ. ನುಮ್‌ರಹಿತವಾದ ಶತೃವಿನ ಪರದಲ್ಲಿ ವಿಭಕ್ತಿ ಬಂದುದರಿಂದ ಅದು ಅಜಾದಿಯಾದುದರಿಂದ **ಶತುರನುಮೋ ನದ್ಯಜಾದೀ—(**ಪಾ. ಸೂ. ೬-೧-೧೭೩) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಬರುತ್ತದೆ.

ಶಂಸಃ— ಶಂಸು ಸ್ತುತೌ ಧಾತು. ಶಂಸ್ಯತೇ ಕೀರ್ತ್ಯತೇ ಇತಿ ಶಂಸಃ ಅಭಿಶಾಪಃ ಕರ್ಮಣಿಯಲ್ಲಿ ಘಞ್ ಪ್ರತ್ಯಯ. **ಜ್ಞಾತ್ಯಾದಿರ್ನಿತ್ಯಮ್** ಎಂಬುದರಿಂದ ಪ್ರತ್ಯಯ ಜ್ಞಾತ್ಯಾದುದರಿಂದ ಆದ್ಯುದಾತ್ತ ಸ್ವರ ಬರುತ್ತದೆ.

ದೂಢ್ಯಃ—ದುಷ್ಟಂ ಧ್ಯಾಯಂತಿ ಇತಿ ದುರ್ಧಿಯಃ ಧ್ಯೈ ಚಿಂತಾಯಾಂ ಧಾತು. ಇದಕ್ಕೆ **ಕ್ವಿಪ್‌ಚ** ಎಂಬುದರಿಂದ ಕ್ವಿಪ್ ಪ್ರತ್ಯಯ. **ಆನ್ಯೇಭ್ಯೋಽಪಿ ದೃಶ್ಯಂತೇ**— (ಪಾ. ಸೂ. ೩-೨-೭೫) ಎಂಬುದರಿಂದ ಈ ಸೂತ್ರದಲ್ಲಿ ದೃಶಿಗ್ರಹಣವು ಆನುವೃತ್ತವಾಗುವುದರಿಂದ ಅದು (ದೃಶಿ) ಕಾರ್ಯಾಂತರವನ್ನು ಬೋಧಿಸುವುದರಿಂದ ಈ ಧಾತುವಿಗೆ ಕ್ವಿಪ್ ಪರವಾದಾಗ ಸಂಪ್ರಸಾರಣ ಬರುತ್ತದೆ. **ಪೃಷೋದರಾದೀನಿ ಯಥೋಪದಿಷ್ಟಮ್** ಎಂಬಲ್ಲಿ ಪೃಷೋದರಾದಿಯಲ್ಲಿ **ಧ್ಯೈಚ** ಎಂದು ಪಾಠಮಾಡಿರುವುದರಿಂದ ಇದರ ಪೂರ್ವದಲ್ಲಿರುವ ದುರಿನ ರೇಫಕ್ಕೆ ಉತ್ತ್ವವೂ ಉತ್ತರಪಾದಾದಿಯಾದ ಧಾತುವಿನ ಧಕಾರಕ್ಕೆ ಷ್ಟುತ್ವವೂ ಬರುತ್ತವೆ.

ಜಾನೀತ - ಜ್ಞಾ ಅವಬೋಧನೇ ಧಾತು ಲೋಟ್ ಮಧ್ಯಮಪುರುಷ ಬಹುವಚನದಲ್ಲಿ ಲಜ್ವದ್ಭಾವವಿರುವುದರಿಂದ ತಆದೇಶ. **ಜ್ಞಾಜನೋರ್ಜಾ—** (ಪಾ ಸೂ. ೭-೩-೭೯) ಎಂಬುದರಿಂದ ಧಾತುವಿಗೆ ಜಾದೇಶ. **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ. ಹಲಾದಿ ಜ್ಞಾತ್ಯಾದಪ್ರತ್ಯಯ ಪರದಲ್ಲಿರುವುದರಿಂದ **ಈಹಲ್ಯಘೋಃ-** (ಪಾ. ಸೂ. ೬-೪-೧೧೩) ಎಂಬುದರಿಂದ ವಿಕರಣಕ್ಕೆ ಈತ್ವ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಪುಷ್ಯತಃ— ಪುಷ ಪುಷ್ಟೌ ಧಾತು. ದಿವಾದಿ ಲೋಣ್ಮಧ್ಯಮಪುರುಷ ಬಹುವಚನ ರೂಪ. ತಿಙಂತ ನಿಘಾತಸ್ವರ ಬರುತ್ತದೆ. **ಅನ್ಯೇಷಾಮಪಿ ದೃಶ್ಯತೇ** ಎಂಬುದರಿಂದ ಸಂಹಿತಾದಲ್ಲಿ ದೀರ್ಘ ಬರುತ್ತದೆ. ॥ ೮ ॥

॥ ಸಂಹಿತಾಪಾಠಃ ॥

ವಧೈರ್ದುಃಶಂಸಾಁ ಅಪ ದೂಢ್ಯೋ ಜಹಿ ದೂರೇ ವಾ ಯೇ
ಅಂತಿ ವಾ ಕೇ ಚಿದತ್ರಿಣಃ ।

अथा यज्ञाय गृणते सुगं कृध्यग्ने सख्ये मा रिषामा वयं तव ॥ ९ ॥

पदपाठः

वध्यैः । दुःशंसान् । अप । दुःध्यः । जहि । दूरे । वा । ये । अन्ति । वा । के । चित् । अत्रिणः ।

अथ । यज्ञाय । गृणते । सुगं । कृधि । अग्ने । सख्ये । मा । रिषामा । वयं । तव ॥ ९ ॥

॥ सायणभाष्यं ॥

हे अग्ने त्वं वध्यैर्हननसाधनैरायुधैर्दुःशंसान्दुःशब्देन कुत्सितकर्तृनीयान्प्रोथ्यो दुर्धियः पापबुद्धीनप जहि । वधं प्रापय । ये केचित् ये केचन दूरे विप्रकृष्टदेशे वान्तिके समीपदेशे वा वर्तमाना अत्रिणोऽत्तारो राक्षसादयोविद्यन्ते तान्दुर्धियोऽप जहीत्यर्थः ॥ अथानंतरं यज्ञाय यज्ञपतये गृणते त्वां स्तुवते यजमानाय सुगं शोभनं मार्गं कृधि । कुरु । अन्यत्पूर्ववत् ॥ वध्यैः । हनश्च वध इति हंतेः करणेऽप् वधादेशश्च । स चादंतोऽन्तोदात्तः । तस्यातो लोपे सत्युदात्तनिवृत्तिस्वरेण प्रत्ययस्योदात्तत्वं । दुःशंसान् । ईषद्दुःसुष्विति कर्मणि खल् । लिति प्रत्ययात्पूर्वस्योदात्तत्वं । जहि । लोटि हिः । हंतेर्ज इति जादेशः । तस्यासिद्धवदत्राभादित्यसिद्धत्वाद्धेर्लुगभावः । अंति । अंतिकस्य कादिलोपो बहुलमिति कलोपेऽपि । अत्रिणः । अदेः स्त्रिन् च्छेति त्रिनिप्रत्ययः । इकारो नकारपरित्राणार्थः । गृणते । शतुरनुम इति विभक्तेरुदात्तत्वं । सुगं । सुदुरोरधिकरणे । पा. ३-२-४५ । इति गमेर्डः । कृधि । श्नुश्नसोः क्रियायां श्लौ छंदसीति हेर्धिः । बहुलं छंदसीति विकरणस्य लुक् ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ವಧೈಃ**—ಸಾವನ್ನುಂಟುಮಾಡುವ ಆಯುಧಗಳಿಂದ । **ದುಃಶಂಸಾನ್**—ದುಷ್ಟರೆಂದು ಪ್ರಸಿದ್ಧರಾಗಿರುವವರೂ । **ದೂಢ್ಯಃ**— ಪಾಪಬುದ್ಧಿಯುಳ್ಳವರೂ ಆದ ಶತ್ರುಗಳನ್ನು । **ಅಪ ಜಹಿ**—ಸಾಯಿಸಿಬಿಡು । **ಯೋ ಕೇಚಿತ್**—ಯಾವ ಶತ್ರುವಾಗಲಿ । **ದೂರೇ**—ದೂರದಲ್ಲಿ । **ವಾ**—ಅಥವಾ ಹತ್ತಿರದಲ್ಲಿ । **ವಾ**—ಇದ್ದರೂ । **ಅತ್ರಿಣಃ**—ಅಂತಹ ರಾಕ್ಷಸಾದಿದುಷ್ಟ ಶತ್ರುಗಳನ್ನು (ಸಾಯಿಸು) । **ಅಥ**—ಆಮೇಲೆ । **ಯಜ್ಞಾಯ**—ಯಜ್ಞಕರ್ತನೂ । **ಗೃಣತೇ**—(ನಿನ್ನನ್ನು) ಸ್ತೋತ್ರಮಾಡುವವನೂ ಆದ ಯಜಮಾನನಿಗೆ । **ಸುಗಂ**—ಶೋಭನವಾದ ಮಾರ್ಗವನ್ನು । **ಕೃಧಿ**—ಉಂಟುಮಾಡು । **ಅಗ್ನೇ**—ಎಲೈ ಅಗ್ನಿಯೇ । **ತವ**--ನಿನ್ನ । **ಸಖ್ಯೇ**—ಸ್ನೇಹವಿರುವುದರಿಂದ । **ವಯಂ**—ನಾವು । **ಮಾ ರಿಷಾಮ**—ಹಿಂಸೆಯನ್ನು ಅನುಭವಿಸದೇ ಇರೋಣ ॥

ಭಾವಾರ್ಥ

ಎಲೈ ಅಗ್ನಿಯೇ, ದುಷ್ಟರೆಂದು ಪ್ರಸಿದ್ಧರಾಗಿರುವವರೂ, ಪಾಪ ಬುದ್ಧಿಯುಳ್ಳವರೂ ಆದ ಶತ್ರುಗಳನ್ನು ವಧಕಾರಿಗಳಾದ ನಿನ್ನ ಆಯುಧಗಳಿಂದ ಸಾಯಿಸಿಬಿಡು. ದೂರದಲ್ಲಿರಲಿ ಅಥವಾ ಹತ್ತಿರದಲ್ಲಿರಲಿ. ರಾಕ್ಷಸಾದಿಗಳಾದ ನಮ್ಮ ದುಷ್ಟಶತ್ರುಗಳನ್ನು ಸಾಯಿಸು. ಯಜ್ಞಕರ್ತನೂ, ನಿನ್ನನ್ನು ಸ್ತೋತ್ರಮಾಡುವವನೂ ಆದ ಯಜಮಾನನಿಗೆ ಶೋಭನಕಾರಿಯಾದ ಮಾರ್ಗವನ್ನುಂಟುಮಾಡು. ನಿನ್ನ ಸ್ನೇಹದ ನಿಮಿತ್ತವಾಗಿ ಯಾವ ಹಿಂಸೆಯನ್ನೂ ನಾವು ಅನುಭವಿಸದಿರುವಂತೆ ಅನುಗ್ರಹಿಸು.

English Translation

Overcome with your fatal (weapons) the wicked and the impicus, all who are enemies whether distant or near, and then provide an easy (path) for the sacrficer who praises you ; Agni, let us not suffer injury through your friendship.

ವಿಶೇಷವಿಷಯಗಳು.

ವಧೈಃ—**ಹನನಸಾಧನೈರಾಯುಧೈಃ** । ಕೊಲ್ಲಲು ಸಾಧನಗಳಾದ ಆಯುಧಗಳಿಂದ ಎಂದರ್ಥ. ಸಾಧಾರಣವಾಗಿ ಋಕ್ಸಂಹಿತೆಯಲ್ಲಿ **ವಧೈಃ** ಎನ್ನುವ ಪದವನ್ನು **ವಧಸಾಧನೈರುಸಾಯ್ಯೈಃ**, ಎಂಬ ಅರ್ಥದಲ್ಲಿಯೇ ಉಪಯೋಗಿಸಿದ್ದಾರೆ. ಉದಾಹರಣೆಗೆ –

ಕುತ್ಸಾಯ ಯತ್ರ ಪುರುಹೂತ ವನ್ವತಿಷ್ಣುಮನಂತೈಃ ಪರಿಯಾಸಿ ವಧೈಃ ।

(ಋ. ಸಂ. ೧-೧೩೧-೪)

ಸ್ವಯಂ ಸೋ ಅಸ್ಮದಾ ನಿದೋ ವಧೈರಜೇತ ದುರ್ಮತಿಂ ।

(ಋ. ಸಂ. ೧-೧೮೯-೬)

ಹೀಗೆಯೇ, ೧-೧೩೩-೬ ; ೨-೨೮-೭ ; ೬-೨೦-೪ ಇತ್ಯಾದಿ ಋಕ್ಕುಗಳಲ್ಲೆಲ್ಲಾ **ವಧೈಃ** ಎನ್ನುವ ಪದವನ್ನು ವಧಸಾಧನವೆಂಬ ಅರ್ಥದಲ್ಲಿಯೇ ಉಪಯೋಗಿಸಿದೆ.

अत्रिणः—अत्तारः, भक्षिसतक्क नरभक्षकराद अथवा हॊट्टिबाकराद राक्षसरन्नु.

सुगं—शोभनं मार्गं । संचारद दृष्टियिंद सुलभवागि संचरिसबहुदाद मार्ग वेंदू,, नैतिकदृष्टियिंद श्रेष्ठवाद मार्गवेंदू अर्थवागुत्तदॆ. ई एरडु अर्थगळल्लियू ई पदद प्रयोगविदॆ. उदाहरणॆगॆ—

देवयानान् सुगान् पथः कुरुष्व सुमनाः स्वयं ।

(बृहद्देवता. ६-६-३)

ऎंब श्लोकदल्लि देवतॆगळु सुलभवागि संचरिसतक्क मार्गगळिंदागुत्तदॆ. इदे अर्थदल्लि ऋक्संहितॆयल्लियू सहा

शं नः करत्यर्वतॆ सुगं मेषायं मेष्यॆ ।
नृभ्यो नारिभ्यो गवॆ ॥

(ऋ. सं. ८-४३-६)

ई ऋक्किनल्लियू, ४-५३-८०; ८०-४६-३. इत्यादि ऋक्कुगळल्लियू सहा सुलभवागि संचरिसबहुदाद मार्गवेंदू,

बृहस्पतॆ अप तं वर्तयाऽ पथः सुगं नो अस्यै देवगीतयॆ कृधि ।

(ऋ. सं. ४-५३-६)

इत्यादि ऋक्कुगळल्लि बरुव **सुगं** शब्दक्कॆ नैतिकवाद दृष्टियल्लि **सुष्ठु गंतव्यं । यॆज्ञानुष्ठानाय सुमतिं दॆहि ।** यज्ञानुष्ठानादिगळन्नु माडतक्क सद्बुद्धियॆंदू अर्थवागुत्तदॆ. इदू अल्लदॆ, ८-८०३-४; ६-८०४-६; इत्यादि स्थळगळल्लि **सुगं** ऎंब शब्दक्कॆ सुखवॆंदू विवरिसिदॆ.

ई कॊनॆय अर्थवन्नॆ ई ऋक्किनल्लियू यॆळबॆकॆंदु स्कंदस्वामिगळु विवरिसुत्ता **अपतितमपि सुखनाम्नैतत् ; इह द्रष्टव्यं ;** ऎंदु

अस्मभ्यमिंद्र वरिवः सुगं कृधि प्र शत्रूणाम मघवन् वृष्ण्या रुज ।

(ऋ. सं. ८-८०३-४)

ऎंब ऋक्कन्नु उदहरिसि अल्लि अर्थवागुवंतॆयॆ इल्लियू सहा **सुग** शब्दवु **सुख**नामगळल्लि सरितनाग्गल्लदिद्दरू सहा **सख**वॆंदे अर्थवागुत्तदॆ ऎंबु विवरिसुत्तारॆ.

॥ व्याकरणप्रक्रिया ॥

वधैः— हॆस हिंसागर्त्योः धातु. इदक्कॆ **हनश्च वधः**—(पा सू. ३-३-७६) ऎंबुदरिंद करणार्थदल्लि क्विप् प्रत्ययवु. धातुविगॆ वधादॆश. वध ऎंबुदु अकारांतवागियू अंतॊ दात्तवागियू बरुत्तदॆ. आग **अतॊ लोपः** ऎंबुदरिंद क्विप् सन्नित्तवाग अवर अकारक्कॆ लोप.

ಆಪ್‌ಪಿತ್ವಾನುದರಿಂದ ಅನುದಾತ್ತ. ಅನುದಾತ್ತ ನಿಮಿತ್ತವಾಗಿ ಉದಾತ್ತ ಆಕಾರ ಲೋಪವಾಮುದರಿಂದ **ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ**— (ಪಾ. ಸೂ. ೬-೧-೧೬೧) ಎಂಬುದರಿಂದ ಪ್ರತ್ಯಯಕ್ಕೆ ಉದಾತ್ತಸ್ವರ ಬರುತ್ತದೆ.

ದುಃಶಂಸಾನ್— ಶಂಸು ಸ್ತುತೌ ಧಾತು. ಇದಕ್ಕೆ ಕೃಚ್ಛ್ರಾರ್ಥತೋರುತ್ತಿರುವಾಗ ದುಸ್ ಉಪಪದವಾಗಿರುವಾಗ **ಈಷದ್ದುಃ ಸುಷು**— (ಪಾ. ಸೂ. ೩-೩-೧೨೬) ಎಂಬುದರಿಂದ ಕರ್ಮಣಿಯಲ್ಲಿ ಖಲ್ ಪ್ರತ್ಯಯ. ದುಃಶಂಸ ಶಬ್ದವಾಗುತ್ತದೆ. **ಲಿತಿ**— (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯವು ಲಿತ್ತಾದುದುರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ದ್ವಿತೀಯಾ ಬಹುವಚನದಲ್ಲಿ ದುಃಶಂಸಾನ್ ಎಂಬ ರೂಪವಾಗುತ್ತದೆ. ಇದಕ್ಕೆ ಆಟ್ ಪರದಲ್ಲಿರುವುದರಿಂದ **ದೀರ್ಘಾದಟಿ ಸಮಾನಪಾದೇ** ಎಂಬುದರಿಂದ ನಕಾರಕ್ಕೆ ರುತ್ವವೂ **ಆತೋಟಿ ನಿತ್ಯಮ್** ಎಂಬುದರಿಂದ ಪೂರ್ವದಲ್ಲಿರುವ ಆಕಾರಕ್ಕೆ ಅನುನಾಸಿಕತ್ವವೂ ಬರುತ್ತದೆ.

ಜಹಿ— ಹನ ಹಿಂಸಾಗತ್ಯೋಃ ಧಾತು. ಲೋಟ್ ವ.ಧ್ಯಮಪುರುಷ ಏಕವಚನದಲ್ಲಿ ಸಿಪಿಗೆ ಹಿ ಆದೇಶ. ಓ ಪರವಾದಾಗ **ಹಂತೇರ್ಜಃ**— (ಪಾ ಸೂ. ೬-೪-೩೬) ಎಂಬುದರಿಂದ ಧಾತುವಿಗೆ ಜಾದೇಶ. **ಅಸಿದ್ಧವದತ್ರಾಭಾತ್**— (ಪಾ. ಸೂ ೬-೪-೨೨) ಎಂಬುದರಿಂದ ಜಾದೇಶ ಬಂದುದು ಅಸಿದ್ಧವಾದುದರಿಂದ **ಆತೋ ಹೇಃ** ಎಂಬುದರಿಂದ ಹಿಗೆ ಲುಕ್ ಬರುವುದಿಲ್ಲ. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬೆರುತ್ತದೆ

ಅಂತಿ— ಅಂತಿಕ ಶಬ್ದ. ಇದಕ್ಕೆ **ಕಾದಿಲೋಸ್ಸೋ ಬಹುಲಮ್** ಎಂಬುದರಿಂದ ಅಂತ್ಯಕಾರಕ್ಕೆ ಲೋಪ ಬರುತ್ತದೆ.

ಅತ್ರಿಣಃ—ಅದ ಭಕ್ಷಣೇ ಧಾತು ಇದಕ್ಕೆ **ಅದೇಸ್ತ್ರಿನಿಚ್**— (ಉ. ಸೂ. ೪-೫೦೮) ಎಂಬುದರಿಂದ ತ್ರಿನಿ ಪ್ರತ್ಯಯ. ಪ್ರತ್ಯಯದಲ್ಲಿ ನಕಾರೋತ್ತರ ಇಕಾರವು ನಕಾರವು ಲೋಪವಾಗದಂತೆ ಇರಲಿ ಎಂದು ಪರಿತವಾಗಿದೆ ಇಕಾರವು ಅಂತ್ಯದಲ್ಲಿ ಇಲ್ಲದಿದ್ದರೆ **ಹಲಂತ್ಯಮ್** ಎಂಬುದರಿಂದ ನಕಾರವು ಲೋಪವಾಗಬೇಕಾಗುತ್ತದೆ. ಅತ್ರಿನ ಶಬ್ದವಾಗುತ್ತದೆ. ಪ್ರಥಮಾ ಬಹುವಚನದಲ್ಲಿ ಅತ್ರಿಣಃ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಇಕಾರ ಉದಾತ್ತವಾಗುತ್ತದೆ.

ಗೃಣತೇ—ಗೃ ಧಾತುವು ಇಲ್ಲಿ ಸ್ತುತ್ಯರ್ಥದಲ್ಲಿ ಇದೆ. ಲಡರ್ಥದಲ್ಲಿ ಇದಕ್ಕೆ ಶತೃ ಪ್ರತ್ಯಯ **ಕ್ರ್ಯಾದಿಭ್ಯಃ ಶ್ನಾ** ಎಂಬುದರಿಂದ ಶ್ನಾ ವಿಕರಣ **ಸಾರ್ವಧಾತುಕಮಪಿತ್** ಎಂಬುದರಿಂದ ಶತೃ ಪ್ರತ್ಯಯಕ್ಕೆ ಪಿತ್ವದ್ಭಾವ ವಿರುವುದರಿಂದ ಇದು ಪರವಾದಾಗ **ಶ್ನಾಭ್ಯಸ್ತಯೋರಾತಃ**— (ಪಾ ಸೂ. ೬-೪-೧೧೨) ಎಂಬುದರಿಂದ ಶ್ನಾ ವಿಕರಣವಾದ ಆಕಾರಕ್ಕೆ ಲೋಪ. ಗೃಣತ್ ಶಬ್ದವಾಗುತ್ತದೆ. **ಚತುರ್ಥೀಏಕವಚನಾಂತರೂಪ**. ನುಮ್‌ರಹಿತವಾದ ಶತೃವಿನ ಪರದಲ್ಲಿರುವುದರಿಂದ **ಚತುರ್ಥೀವಿಭಕ್ತಿಗೆ ಶತುರನುಮೋ ನದ್ಯಜಾದೀ** ಎಂಬುದರಿಂದ ಉದಾತ್ತಸ್ವರ ಬರುತ್ತದೆ.

ಸುಗಮ್— ಗಮ್‌ಲೃ ಗತೌ ಧಾತು. ಇದಕ್ಕೆ ಸು ಉಪಪದವಾಗಿರುವಾಗ **ಸುದುರೋರಧಿಕರಣೇ**— (ಪಾ. ಸೂ. ೩-೨-೪೬) ಎಂಬುದರಿಂದ ಅಧಿಕರಣಾರ್ಥದಲ್ಲಿ ಡ ಪ್ರತ್ಯಯ. ಡಿತ್ತಾದುದರಿಂದ ಧಾತುವಿನ ಟಿಗೆ

ಲೋಪ. ಸುಗ ಎಂದು ರೂಪವಾಗುತ್ತದೆ. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ. ದ್ವಿತೀಯಾ ಏಕವಚನಾಂತರೂಪ.

ಕೃಧಿ— ಡುಕೃಞ್ ಕರಣೇ ಧಾತು. ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪಿಗೆ ಹಿ ಆದೇಶ. **ಶ್ರುಶೃಣಿಪ್ಯಾಕೃವೃಭ್ಯಶ್ಚಂದಸಿ**—(ಪಾ. ಸೂ. ೬-೪-೧೦೨) ಎಂಬುದರಿಂದ ಹಿಗೆ ಧಿ ಆದೇಶ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ ಲುಕ್. ಅತಿಬಂತನ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೯ ॥



ಸಂಹಿತಾಪಾಠಃ

ಯದಯುಕ್ಥಾ ಅರುಷಾ ರೋಹಿತಾ ರಥೇ ವಾತಜೂತಾ ವೃಷಭ-
ಸ್ಯೇವ ತೇ ರವಃ ॥
ಆದಿನ್ವಸಿ ವನಿನೋ ಧೂಮಕೇತುನಾಗ್ನೇ ಸಖ್ಯೇ ಮಾ ರಿಷಾಮಾ
ವಯಂ ತವ ॥ ೧೦ ॥

॥ ಪದಪಾಠಃ ॥

ಯತ್ । ಅಯುಕ್ಥಾಃ । ಅರುಷಾ । ರೋಹಿತಾ । ರಥೇ । ವಾತಽಜೂತಾ।
ವೃಷಭಸ್ಯ ಽ ಇವ । ತೇ । ರವಃ ।
ಆತ್ । ಇನ್ವಸಿ । ವನಿನಃ । ಧೂಮಽಕೇತುನಾ । ಅಗ್ನೇ । ಸಖ್ಯೇ । ಮಾ ।
ರಿಷಾಮ । ವಯಂ । ತವ । ॥ ೧೦ ॥

ಹೇ ಅಗ್ನೇ ಅರುಷಾರೋಚಮಾನೌ ರೋಹಿತಾ ಲೋಹಿತವರ್ಣೌ । ರೋಹಿತೇ ಇತ್ಯಗ್ನೇರಶ್ವ-ಸ್ಯಾಖ್ಯಾ । ರೋಹಿತೋಽಗ್ನೇರಿತಿ ದರ್ಶನಾತ್ । ರೋಹಿತೇನ ತ್ವಾಗ್ನಿರ್ದೇವತಾಂ ಗಮಯತೆತು । ತೈ. ಸಂ. ೧-೩-೪-೩ । ಇತಿ ಮಂತ್ರವರ್ಣಾಚ್ಚೈ । ಏತೇ ವೈ ದೇವಾಶ್ವಾಃ । ತೈ. ಸಂ. ೧-೩-೪-೩ । ಇತಿ ಹಿ ತತ್ರ ವ್ಯಾಖ್ಯಾತಂ । ವಾತಜೂತಾ ವಾತಸ್ಯ ವಾಯೋರ್ಜೂತಂ ಜವೋ ವೇಗ ಇವ ವೇಗೋ ಯೇಯೋಸ್ತೌ । ಈದೃಶಾವಶ್ವೌ ರಥೇ ಯದ್ಯದಾಯುಕ್ಷ್ವಾಃ ಆಯೋಜಯಸಿ ತದಾನೀಂ ವನಾನಿ ದಹ-ತಸ್ತೇ ತವ ರವಃ ಶಬ್ದೋ ವೃಷಭಸ್యేವ ದೃಪ್ತಸ್య ಮಹೋಕ್ಷಸ್య ಶಬ್ದ ಇವ ಗಂಭೀರೋ ಭವತಿ । ಆದನಂತರಂ ವನಿನೋ ವನಸಂಬದ್ಧಾನ್ವೃಕ್ಷಾನ್ಧೂಮಕೇತುನಾ ಧೂಮಃ ಕೇತುಃ ಪ್ರಜ್ಞಾಪಕೋ ಯಸ್ಯ ತಾದೃಶೇನ ರಶ್ಮಿನೇನ್ವಸಿ । ವ್ಯಾಪ್ನೋಷಿ । ಅನ್ಯತ್ಪೂರ್ವವತ್ ॥ ಆಯುಕ್ಷ್ವಾಃ । ಯುಜಿರ್ ಯೋಗೇ । ಲುಙಿ ಝಲೋ ಝಲೀತಿ ಸಕಾರಲೋಪಃ । ಅರುಷೇತ್ಯಾದಿದ್ವಿವಚನೇಷು ಸುಪಾಂ ಸುಲುಗಿತ್ಯಾ-ಕಾರಃ । ರವಃ । ರು ಶಬ್ದೇ । ಋದೋರಬಿತಿ ಭಾನೇಽಪ್ । ಇನ್ವಸಿ । ಇನಿ ವ್ಯಾಪ್ತೌ । ಭೌವಾದಿಕಃ । ಇದಿತ್ತ್ವಾನ್ನುಮ್ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । ಅರುಷಾ—ಪ್ರಕಾಶಮಾನವಾದವೂ । ರೋಹಿತಾ—ಹೊಂಬಣ್ಣವುಳ್ಳವೂ । ವಾತಜೂತಾ—ವಾಯುವೇಗವುಳ್ಳವೂ ಆದ (ನಿನ್ನ) ಕುದುರೆಗಳು । ರಥೇ—ರಥದಲ್ಲಿ । ಯತ್—ಯಾವಾಗ ಆಯುಕ್ಷ್ವಾಃ—ಕಟ್ಟಲ್ಪಡುವುವೋ (ಆಗ) । ತೇ—(ಕಾಡನ್ನು ದಹಿಸುವ) ನಿನ್ನ । ರವಃ—ಶಬ್ದವು । ವೃಷಭ-ಸ್యేವ—ಗೂಳಿಯಗುಟುರಿನಂತೆ (ಗಂಭೀರವಾಗಿರುತ್ತದೆ) । ಆತ್—ಅನಂತರ । ವನಿನಃ—ವನದಲ್ಲಿರುವ ಸಕಲ ವೃಕ್ಷಗಳನ್ನೂ । ಧೂಮಕೇತುನಾ—ಧ್ವಜದಂತಿರುವ ಹೊಗೆಯಿಂದ ಸೂಚಿತವಾಗುವ ಜ್ವಾಲೆಯಿಂದ । ಇನ್ವಸಿ—ಆವರಿಸಿಕೊಳ್ಳುತ್ತೀಯೆ । ತವ—ನಿನ್ನ । ಸಖ್ಯೇ—ಸ್ನೇಹದ ನಿಮಿತ್ತವಾಗಿ । ವಯಂ—ನಾವು । ಮಾ ರಿಷಾಮ—ಹಿಂಸೆಯನ್ನು ಅನುಭವಿಸದೇ ಇರುವಂತಾಗಲಿ ॥

ಭಾವಾರ್ಥ

ಎಲೈ ಅಗ್ನಿಯೇ, ಪ್ರಕಾಶಮಾನವಾದವೂ, ಹೊಂಬಣ್ಣವುಳ್ಳವೂ ವಾಯುವೇಗವುಳ್ಳವೂ ಆದ ನಿನ್ನ ಕುದುರೆ ಗಳನ್ನು ನೀನು ರಥಕ್ಕೆ ಕಟ್ಟಿದ ಕೂಡಲೇ ಕಾಡನ್ನು ದಹಿಸುವ ನಿನ್ನ ಶಬ್ದವು ಗೂಳಿಯ ಗುಟುರಿನಂತೆ, ಗಂಭೀರವಾಗಿ ರುತ್ತದೆ. ಅನಂತರ ನೀನು ವನದಲ್ಲಿರುವ ಸಕಲ ವೃಕ್ಷಗಳನ್ನೂ ಸಹ ಧ್ವಜದಂತಿರುವ ಹೊಗೆಯಿಂದ ಕೂಡಿದ ಜ್ವಾಲೆಯಿಂದ ಆವರಿಸಿಕೊಳ್ಳುತ್ತೀಯೆ. ನಿನ್ನ ಸ್ನೇಹದ ನಿಮಿತ್ತವಾಗಿ ನಾವು ಯಾವಹಿಂಸೆಯನ್ನೂ ಅನುಭವಿಸದೇ ಇರುವಂತಾಗಲಿ.

When you have yoked the bright red horses, swift as the wind to your car, your roar is like that of a bull, and you envelope the forest trees with a banner of smoke ; Agni, let us not suffer injury, through your friendship.

ವಿಶೇಷವಿಷಯಗಳು

ಆರುಷಾ—ಅರುಷ ಶಬ್ದಕ್ಕೆ ಕೆಂಪುಬಣ್ಣ ಎಂದು ಸಾಧಾರಣವಾದ ಅರ್ಥವಿದ್ದರೂ ಸಹ ಇಲ್ಲಿ ಮಾತ್ರ ಪುನಃ **ರೋಹಿತಾ** ಎಂಬ ವಿಶೇಷಣವಿರುವುದರಿಂದ ಪ್ರಕಾಶಮಾನವಾದ ಎಂದು ಅರ್ಥಮಾಡಿರುವರು.

ರೋಹಿತಾ—ರೋಹಿತೇ೨ಗ್ನೇಃ (ನಿ. ೭-೨೮) ಎಂದು ನಿರುಕ್ತಕಾರರು ಅಗ್ನಿಯ ಕುದುರೆಯ ಸ್ವರೂಪವನ್ನು ತಿಳಿಸುತ್ತಾರೆ. ಹೊಂಬಣ್ಣವುಳ್ಳವೆಂದರ್ಥ.

ವಾತಜೂತಾ—ವಾತಸ್ಯ ವಾಯೋಃ ಜೂತಂ ಜವಃ ವೇಗ ಇವ ವೇಗಃ ಯೆಯೋಃ ತೌ । ವಾಯುವಿನ ವೇಗದಂತೆ ವೇಗವುಳ್ಳ ಕುದುರೆಗಳೆಂದರ್ಥ, ಇಲ್ಲಿ **ವಾತಜೂತ**ವೆಂಬ ಪದವು ಅಗ್ನಿಯ ಕುದುರೆಗಳಿಗೆ ವಿಶೇಷಣವಾಗಿದೆ. ಕೆಲವು ಕಡೆಗಳಲ್ಲಿ ಅಗ್ನಿಗೇ ವಿಶೇಷಣವಾಗಿ ಉಪಯೋಗಿಸಿರುವುದೂ ಉಂಟು.

ವಿ ವಾತಜೂತೋ ಅತಸೇಷು ತಿಷ್ಠತೇ ವೃಥಾ ಜುಹೂಭಿಃ ಸೃಣ್ಯಾ ತುವಿಷ್ವಣಿಃ ।

(ಋ ಸಂ. ೧-೫೮-೪)

ಯದ್ವಾತಜೂತೋ ವನಾ ವ್ಯಸ್ಥಾದಗ್ನಿರ್ಹ ದಾತಿ ರೋಮಾ ಪೃಥಿವ್ಯಾಃ ।

(ಋ. ಸಂ. ೧-೬೫-೪)

ಇತ್ಯಾದಿಸ್ಥಳಗಳಲ್ಲಿ ಅಗ್ನಿಗೆ ವಿಶೇಷಣವಾಗಿ **ವಾತೇನ ಪ್ರೇರಿತಃ** ವಾಯುವಿನಿಂದ ಪ್ರೇರಿತನಾದ ಅಗ್ನಿಯು ಎಂದರ್ಥಗುತ್ತದೆ.

ವನಿನಃ— ವನಸಂಬಧಾನ್ ವೃಕ್ಷಾನ್ ।

ಇನ್ವಸಿ—ಇನ್ವತಿ, ನಕ್ಷತಿ, ಇತ್ಯಾದಿಹತ್ತು ವ್ಯಾಪ್ತಿಕರ್ಮವನ್ನು ಹೇಳುವ ಧಾತುಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೧೦) **ಇನ್ವಸಿ** ಎಂದರೆ ವ್ಯಾಪಿಸುತ್ತೀಯೆ ಎಂದರ್ಥ.

ಧೂಮಕೇತುನಾ—ಧೂಮಕೇತುವೆಂಬ ಶಬ್ದಕ್ಕೆ ಎರಡು ವಿಧವಾಗಿ ಅರ್ಥಮಾಡುತ್ತಾರೆ. **ಕೇತುಃ ಪತಾಕಾಃ ; ಕೇತುಃ ಪತಾಕಾಸ್ಥಾನೀಯೋ ಯೆಸ್ಯ ಸಃ** । ಕೇತುವೆಂದರೆ ಧ್ವಜ. ಧೂಮವೇ ಧ್ವಜವಾಗಿರತಕ್ಕ ಅಗ್ನಿಯೆಂದು ಒಂದು ವಿಧವಾಗಿಯೂ, **ಕೇತುಃ ಜ್ಞಾನಂ ವಾ । ಧೂಮೇನ ಯಃ ಜ್ಞಾಯತೇ ಸ** ಇತಿ ವಾ ಕೇತುವೆಂದರೆ ಜ್ಞಾನ. ಧೂಮದಿಂದ ಯಾವನು ತಿಳಿಯಲ್ಪಡುವನೋ ಆ ಅಗ್ನಿಯೆಂದು ಇನ್ನೊಂದು ವಿಧವಾಗಿಯೂ ಅರ್ಥವಾಗಬಹುದೆಂದು ವ್ಯಾಖ್ಯಾನಕಾರರು ವಿವರಿಸುತ್ತಾರೆ.

॥ ವ್ಯಾಕರಣಪ್ರಕ್ರಿಯಾ ॥

ಅಯುಕ್ಥಾಃ—ಯುಜಿರ್ ಯೋಗೇ ಧಾತು ಲುಙ್ ಮಧ್ಯಮಪುರುಷ ಏಕವಚನದಲ್ಲಿ ಥಾಸ್ ಪ್ರತ್ಯಯ **ಚ್ಲೇಃ ಸಿಚ್** ಎಂಬುದರಿಂದ ಚ್ಲಿಗೆ ಸಿಚ್ ಆದೇಶ. **ಝಲೋ ಝಲಿ**—(ಪಾ ಸೂ. ೮-೨-೨೬) ಎಂಬುದರಿಂದ ಸಿಚಿಗೆ ಲೋಪ **ಚೋಃ ಕುಃ** ಎಂಬುದರಿಂದ ಜಕಾರಕ್ಕೆ ಕುತ್ವದಿಂದ ಗಕಾರಾದೇಶ. **ಖರಿ ಚ** ಎಂಬುದರಿಂದ

ಗಕಾರಕ್ಕೆ ಕಕಾರಾದೇಶ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ. ಅಡಾಗಮ ಉದಾತ್ತವಾಗುವುದರಿಂದ ಆದ್ಯುದಾತ್ತವಾದಪದವಾಗುತ್ತದೆ.

ಅರುಷಾ—ಅರುಷಾ, ರೋಹಿತ್ಯಾ ವಾತಭೂತಾ, ಈ ಶಬ್ದಗಳಿಗೆ ದ್ವಿವಚನ ಪರವಾದಾಗ (ಔ) **ಸುಪಾಂ ಸುಲುಕ್** ಸೂತ್ರದಿಂದ ವಿಭಕ್ತಿಗೆ ಆಕಾರಾದೇಶ.

ರವಃ— ರು ಶಬ್ದೇ ಧಾತು. ಇದಕ್ಕೆ **ಋದೋರಪ್** ಎಂಬುದರಿಂದ ಭಾವಾರ್ಥದಲ್ಲಿ ಅಪ್ ಪ್ರತ್ಯಯ. **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿಗೆ ಗುಣ. ಅವಾದೇಶ. ಅಪ್ ಪಿತ್ವಾದುದರಿಂದ ಅನುದಾತ್ತ. ಧಾತುಸ್ವರ ಉಳಿಯುತ್ತದೆ.

ಇನ್ವಸಿ— ಇವಿ ವ್ಯಾಪ್ತೌ ಧಾತು. ಭ್ವಾದಿ. **ಇದಿತೋ ನುಮ್ ಧಾತೋಃ** ಎಂಬುದರಿಂದ ನುಮಾಗಮ ಬರುತ್ತದೆ. ಶಪ್ ವಿಕರಣ. ಲಟ್ ಮಧ್ಯಮಪುರುಷದಲ್ಲಿ ಸಿಪ್. ಅತಿಜಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ವನಿನಃ—ವನ ಮೇಷಾಮಸ್ತಿ ಇತಿ ವನಿನಃ **ಅತ ಇನಿ ಠನ್** ಎಂಬುದರಿಂದ ಮತ್ವರ್ಥದಲ್ಲಿ ಇನಿ ಪ್ರತ್ಯಯ. ವನಿನ್ ಶಬ್ದವಾಗುತ್ತದೆ. ದ್ವಿತೀಯಾ ಬಹುವಚನಾಂತರೂಪ. ಪ್ರತ್ಯಯಸ್ವರದಿಂದ ಇಕಾರ ಉದಾತ್ತವಾಗುತ್ತದೆ.

———— :o: ————

ಸಂಹಿತಾಪಾಠಃ

ಅಧ ಸ್ವನಾದುತ ಬಿಭ್ಯುಃ ಪತತ್ರಿಣೋ ದ್ರುಪ್ಸಾ ಯತ್ತೇ ಯವ-
ಸಾದೋ ವ್ಯಸ್ಥಿರನ್ ।
ಸುಗಂ ತತ್ತೇ ತಾವಕೇಭ್ಯೋ ರಥೇಭ್ಯೋಽಗ್ನೇ ಸಖ್ಯೇ ಮಾ
ರಿಷಾಮಾ ವಯಂ ತವ ॥೧೧॥

ಪದಪಾಠಃ

ಅಧ । ಸ್ವನಾತ್ । ಉತ । ಬಿಭ್ಯುಃ । ಪತತ್ರಿಣಃ । ದ್ರಪ್ಸಾಃ । ಯತ್ । ತೇ ।
ಯವಸಾದಃ । ವಿ । ಅಸ್ಥಿರನ್ ।
ಸುಗಂ । ತತ್ । ತೇ । ತಾವಕೇಭ್ಯಃ । ರಥೇಭ್ಯಃ । ಅಗ್ನೇ । ಸಖ್ಯೇ ।
ಮಾ । ರಿಷಾಮ । ವಯಂ । ತವ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಅಧ ದಗ್ಧುಂ ವನಪ್ರವೇಶಾನಂತರಂ ಸ್ವನಾತ್ತ್ವದೀಯಾತ್ಪೂರ್ವೋಕ್ತಗಂಭೀರಶಬ್ದಾತ್ । ಉತಶಬ್ದೋಽಪ್ಯರ್ಥಃ। ಪತತ್ರಿಣಃ ಪಕ್ಷಿಣೋಽಪಿ ಬಿಭ್ಯುಃ । ಬಿಭ್ಯತಿ । ಭಯಂ ಪ್ರಾಪ್ನುವಂತಿ । ಉತ್ಪತನೇನ ದೇಶಾಂತರಂ ಗಂತುಂ ಸಮರ್ಥಾಃ ಪಕ್ಷಿಣೋಽಪಿ ಯದಾ ಭಯಂ ಪ್ರಾಪ್ನುವಂತಿ ಕಿಮು ವಕ್ತವ್ಯಮನ್ಯೇಷಾಂ ತತ್ರತ್ಯಾನಾಂ ವೃಕಾದೀನಾಂ ಭೀತಿರ್ಜಾಯತ ಇತಿ । ಅತಸ್ತ್ವಯಿ ವನಂ ಪ್ರವಿಶತಿ ಸರ್ವೇ ಪ್ರಾಣಿನೋ ಭಯಂ ಪ್ರಾಪ್ನುವಂತೀತ್ಯರ್ಥಃ । ತಾದೃಶಸ್ಯ ತೇ ತವ ದ್ರಪ್ಸಾ ಜ್ವಾಲೈಕದೇಶಾ ಯೇವಸಾದೋ ಯೇವಸಾನಾಮರಣ್ಯೇ ವರ್ತಮಾನಾನಾಂ ತೃಣಾನಾಮತ್ತಾರಃ ಸಂತೋ ಯದ್ಯದಾ ವ್ಯಸ್ಥಿರನ್ ವಿವಿಧಮವತಿಷ್ಠಂತೇ ತತ್ತದಾ ತೇ ತವ ಸರ್ವಮರಣ್ಯಂ ಸುಗಂ ಸುಖೇನ ಗಂತುಂ ಶಕ್ಯಂ । ಅತಸ್ತಾವಕೇಭ್ಯಸ್ತ್ವದೀಯೇಭ್ಯೋ ರಥೇಭ್ಯಶ್ಚ ತದರಣ್ಯಂ ಸುಗಂ ಭವತಿ । ಪೂರ್ವಂ ಪ್ರವೃತ್ತೈರ್ಜ್ವಾಲಾಗ್ರೈಸ್ತೃಣಾದಿಷು ದಗ್ಧೇಷು ಸತ್ಸು ತ್ವದೀಯಾ ರಥಾಃ ಪ್ರತಿಬಂಧಮಂತರೇಣ ಹಶ್ಚಾದ್ಗಚ್ಛಂತೀತಿ ಭಾವಃ । ಅನ್ಯತ್ಸಮಾನಂ ॥ ಬಿಭ್ಯುಃ । ಞಾಭೀ ಭಯೇ । ಛಾಂದಸೋ ಲಿಟ್ । ಏರನೇಕಾಚ ಇತಿ ಯಣ್ । ವ್ಯಸ್ಥಿರನ್ । ಸಮವಪ್ರವಿಭ್ಯ ಇತಿ ತಿಷ್ಠತೇರಾತ್ಮನೇಪದಂ । ಲುಙಿ ವ್ಯತ್ಯಯೇನ ಝಸ್ಯ ರನ್ । ಸ್ಥಾಘ್ವೋರಿಚ್ಚೇತೀತ್ವಂ । ಹ್ರಸ್ವಾದಂಗಾತ್ । ಪಾ. ೮-೨-೨೭ । ಇತಿ ಸಲೋಪಃ । ತಾವಕೇಭ್ಯಃ । ತವಕಮಮಕಾವೇಕವಚನೇ ।ಪಾ. ಸೂ. ೪-೩-೩ । ಇತಿ ಯುಷ್ಮದಸ್ತವಕಾದೇಶಃ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ಅಥ**—ನೀನು ವನಕ್ಕೆ ಪ್ರವೇಶಿಸಿದನಂತರ। **ಸ್ವನಾತ್**—(ನಿನ್ನ) ಶಬ್ದದಿಂದ । **ಪತತ್ರಿಣಃ ಉತ**— ಪಕ್ಷಿಗಳೂ ಕೂಡ । **ಬಿಭ್ಯುಃ**— ಭಯಪಡುತ್ತವೆ । **ತೇ**— ನಿನ್ನ । **ದ್ರಪ್ಸಾಃ**— ಜ್ವಾಲೆಯ ಅಂಶಗಳು । **ಯವಸಾದಃ** - ಹುಲ್ಲುಗಳನ್ನೆಲ್ಲಾ ದಹಿಸುತ್ತಾ । **ಯತ್**—ಯಾವಾಗ । **ವ್ಯಸ್ಥಿರನ್**— ಎಲ್ಲಾ ದಿಕ್ಕುಗಳಲ್ಲೂ ಹರಡುತ್ತವೆಯೋ । **ತತ್**—ಆಗ । **ತೇ**—ನಿನಗೆ । **ಸುಗಂ**—(ಸಕಲ ಅರಣ್ಯವೂ) ಸುಲಭವಾಗಿ ಪ್ರವೇಶಿಸಲು ಸಾಧ್ಯವಾಗುತ್ತದೆ । **ತಾವಕೇಭ್ಯಃ**—ನಿನ್ನ । **ರಥೇಭ್ಯಃ**—ರಥಗಳಿಗೂ (ಸುಲಭವಾಗಿ ಪ್ರವೇಶಿಸಲು ಸಾಧ್ಯ

ವಾಗುತ್ತದೆ । **ತವ**—ನಿನ್ನ । **ಸಖ್ಯೇ**—ಸ್ನೇಹದ ನಿಮಿತ್ತವಾಗಿ । **ವಯಂ**—ನಾವು । **ಮಾ ರಿಷಾಮ**—(ಯಾವ) ಹಿಂಸೆಯನ್ನು ಅನುಭವಿಸದೇ ಇರುವಂತಾಗಲಿ ॥

ಭಾವಾರ್ಥ

ಎಲೈ ಅಗ್ನಿಯೇ, ನೀನು ವನಕ್ಕೆ ಪ್ರವೇಶಿಸಿದ ಕೂಡಲೇ ನಿನ್ನ ಶಬ್ದದಿಂದ ಪಕ್ಷಿಗಳೂ ಕೂಡ ಭಯಪಡುತ್ತವೆ. ನಿನ್ನ ಜ್ವಾಲೆಯ ಅಂಶಗಳು ಹುಲ್ಲುಗಳನ್ನೆಲ್ಲಾ ದಹಿಸುತ್ತಾ ಎಲ್ಲಾ ದಿಕ್ಕುಗಳಲ್ಲಿಯೂ ಹರಡಿದಾಗ ನಿನಗೂ ಮತ್ತು ನಿನ್ನ ರಥಕ್ಕೂ ಅರಣ್ಯ ಪ್ರವೇಶವು ಬಹಳ ಸುಲಭವಾಗಿ ಆಗುತ್ತದೆ. ನಿನ್ನ ಸ್ನೇಹದ ನಿಮಿತ್ತವಾಗಿ ನಾವು ಯಾವ ಹಿಂಸೆಯನ್ನೂ ಅನುಭವಿಸದೇ ಇರುವಂತಾಗಲಿ.

English Translation

At your roaring even the birds are terrified ; when your flames, consuming the grass, have spread in all directions, (the wood) is easy of access to you and to your chariots ; Agni, let us not suffer injury through your friendship.

ವಿಶೇಷವಿಷಯ.ಗಳು

ದ್ರಪ್ಸಾಃ—**ದ್ರಪ್ಸ** ಶಬ್ದವು ಸಾಧಾರಣವಾಗಿ **ದ್ರವಣ** ಶೀಲವಾದುದು ಎಂದರೆ ಹರಿಯತಕ್ಕದ್ದು ಅಥವಾ ನೀರಿನ ತೊಟ್ಟುಗಳಂತಿರುವ ಸೋಮರಸದ ಬಿಂದುಗಳು ಎಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಆದರೆ ಕೆಲವು ಸಂದರ್ಭಗಳಲ್ಲಿ ಅಗ್ನಿಕಿರಣವೆಂದೂ, ಪತಾಕೆಯೆಂದೂ, ಚಂದ್ರನೆಂದೂ, ಅರ್ಥವಾಗುತ್ತದೆ. ಈ ಋಕ್ಕಿನಲ್ಲಿ ಬರುವ **ದ್ರಪ್ಸಾಃ**:ಎಂಬುದಕ್ಕೆ **ಜ್ವಾಲೈಕದೇಶಾಃ** ಜ್ವಾಲೆಯ ಭಾಗಗಳು ಎಂದರ್ಥವನ್ನು ಮಾಡುತ್ತಾರೆ. ಸ್ಕಂದಸ್ವಾಮಿಗಳು **ದ್ರಪ್ಸಶಬ್ದಃ ಕಠಿನವಚನಃ ಕಠಿನಾಃ ಬಹುಳರೂಪಾಃ** । ದ್ರಪ್ಸಶಬ್ದವು ಕಠಿನವೆಂದು ಅರ್ಥವನ್ನು ಕೊಡುತ್ತದೆಂದೂ, ಇಲ್ಲಿ ಕಠಿನವಾಗಿಯೂ ಬಹುಳವಾಗಿಯೂ ಇರತಕ್ಕ ಅಗ್ನಿಯಜ್ವಾಲೆಯೆಂದು ತಿಳಿಯಬೇಕೆಂದೂ ಹೇಳುತ್ತಾರೆ.

ವ್ಯಸ್ಥಿರನ್—**ತಿಷ್ಠತೇರಿದಂ ರೂಪಂ । ವಿತಿಷ್ಠಂತೇ । ಸರ್ವಂ ವ್ಯಾಪ್ನುವಂತೀತ್ಯರ್ಥಃ** । ಸಕಲವನ್ನೂ ಆಕ್ರಮಿಸಿ ಇರು. ಅಥವಾ ವ್ಯಾಪಿಸು ಎಂದಾಗುತ್ತದೆ. ಅಗ್ನಿಯ ಜ್ವಾಲೆಯು ಸಕಲವನ್ನೂ ವ್ಯಾಪಿಸಿ ಹರಡುತ್ತದೆ ಎಂದರ್ಥ.

ಸುಗಂ—ಈ ಶಬ್ದದ ನಾನಾರ್ಥಗಳನ್ನು ಇದೇ ಸೂಕ್ತದ ೯ನೇ ಋಕ್ಕನ್ನು ವಿವರಿಸುವಾಗ ತಿಳಿಸಿದೆ.

ವ್ಯಾಕರಣಪ್ರಕ್ರಿಯಾ

ಆಧ— ಅಥ ಎಂಬಲ್ಲಿ ಥಕಾರಕ್ಕೆ ಛಾಂದಸವಾಗಿ ಧಕಾರಾದೇಶ ಬರುತ್ತದೆ.

ಬಿಭ್ಯುಃ—ಞಿಭೀ ಭಯೇ ಧಾತು. ವರ್ತಮಾನಾರ್ಥದಲ್ಲಿ **ಭಂದಸಿ ಲುಙ್‌ಲಙ್‌ಲಿಟಃ** ಎಂಬುದರಿಂದ ಲಿಟ್. ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಜಸ್ತ್ವ. ಶ್ರುತನುಪುರುಷಬಹುವಚನದಲ್ಲಿ ಉಸಾದೇಶ. **ಅಸಂಯೋ-**

ಗಾಲ್ಲಿಟ್‌ಕಿತ್ ಎಂಬುದರಿಂದ ಇದು ಕಿತ್ತಾದುದರಿಂದ ಧಾತುವಿನ ಇಕಿಗೆ ಗುಣಬರುವುದಿಲ್ಲ. **ಏರನೇಕಾಚೋಽಸಂಯೋಗಪೂರ್ವಸ್ಯ** ಎಂಬುದರಿಂದ ಯಣ್. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ.

ಽವ್ಯಸ್ಥಿರನ್—ಷ್ಠಾ ಗತಿನಿವೃತ್ತೌ ಧಾತು. ಇದು ಪರಸ್ಮೈಪದಿಯಾದರೂ **ಸಮವಪ್ರವಿಭ್ಯಃ ಸ್ಥಃ**—(ಪಾ. ಸೂ. ೧-೩-೨೨) ಎಂಬುದರಿಂದ ಆತ್ಮನೇಪದಿಯಾಗುತ್ತದೆ. ಲುಙ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ. **ವ್ಯತ್ಯಯೋ ಬಹುಲಮ್** ಎಂಬುದರಿಂದ ಝಿ ಪ್ರತ್ಯಯಕ್ಕೆ ರನ್ ಆದೇಶ ಬರುತ್ತದೆ. **ಸ್ಥಾಘ್ವೋರಿಚ್ಚ**-(ಪಾ. ಸೂ. ೧-೨-೧೭) ಎಂಬುದರಿಂದ ಲುಙಿನಲ್ಲಿ ಧಾತುವಿಗೆ ಇತ್ವ ಬರುತ್ತದೆ ಆಗ ಹ್ರಸ್ವನ ಪರದಲ್ಲಿ ಸಿಚ್ ಬಂದುದರಿಂದ **ಹ್ರಸ್ವಾದಂಗಾತ್**—(ಪಾ. ಸೂ. ೮-೨-೨೭) ಎಂಬುದರಿಂದ ಸಿಚಿಗೆ ಲೋಪ. ಅಂಗಕ್ಕೆ ಅಡಾಗಮ. ಯತ್ ಎಂದು ಹಿಂದೆ ಸಂಬಂಧವಿರುವುದರಿಂದ **ಯದ್ವೃತ್ತಾನ್ನಿತ್ಯಮ್** ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುತ್ತದೆ. ಅಡಾಗಮ ಉದಾತ್ತವಾದುದರಿಂದ ಆದ್ಯುದಾತ್ತವಾಗುತ್ತದೆ.

ತಾವಕೇಭ್ಯಃ—ತವ ಇಮಾಃ ತಾವಕಾಃ ಸಂಬಂಧಾರ್ಥವಿನಕ್ಪ್ರತ್ಯಯವಾಡಿದಾಗ **ಯುಷ್ಮದಸ್ಮದೋರನ್ಯತರಸ್ಯಾಂ ಖಞಚ** ಎಂಬುದರಿಂದ ಆಣ್ ಪರವಾದಾಗ **ತವಕಮಮಕಾವೇಕವಚನೇ**—(ಪಾ. ಸೂ. ೪-೩-೩) ಎಂಬುದರಿಂದ ಯುಷ್ಮಚ್ಛಬ್ದಕ್ಕೆ ತವಕ ಎಂಬ ಆದೇಶ. **ತದ್ಧಿತೇಷ್ವಚಾಮಾದೇಃ** ಎಂಬುದರಿಂದ ಆದಿವೃದ್ಧಿ. ಪ್ರತ್ಯಯ ಸ್ವರದಿಂದ ಅಂತೋದಾತ್ತವಾಗುತ್ತದೆ •ಚತುರ್ಥೀ ಬಹುವಚನಾಂತರೂಪ. ॥ ೧೧ ॥



ಸಂಹಿತಾಪಾಠಃ

ಅಯಂ ಮಿತ್ರಸ್ಯ ವರುಣಸ್ಯ ಧಾಯಸೇಽವಯಾತಾಂ ಮರುತಾಂ ಹೇಳೋ ಅದ್ಭುತಃ।
ಮೃಳಾ ಸು ನೋ ಭೂತ್ವೇಷಾಂ ಮನಃ ಪುನರಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೧೨॥

॥ ಪದಪಾಠಃ ॥

ಅಯಂ । ಮಿತ್ರಸ್ಯ । ವರುಣಸ್ಯ । ಧಾಯಸೇ । ಅವ ಽ ಯಾತಾಂ । ಮರುತಾಂ ।

ಹೇಳಃ । ಅದ್ಭುತಃ ।

ಮೃಳ । ಸು । ನಃ । ಭೂತು । ಏಷಾಂ । ಮನಃ । ಅಗ್ನೇ । ಸಖ್ಯೈ । ಮಾ ।

ರಿಷಾಮ । ವಯಂ । ತವ ॥೧೭॥

ಸಾಯಣಭಾಷ್ಯಂ

ಅಯಮಗ್ನೇಃ ಸ್ತೋತಾ ಮಿತ್ರಸ್ಯಾಹರಭಿಮಾನಿನೋ ದೇವಸ್ಯ ವರುಣಸ್ಯ ರಾತ್ರ್ಯಭಿಮಾನಿನಶ್ಚ ಸಂಬಂಧಿನೇ ಧಾಯಸೇ ಧಾರಣಾಯಾವಸ್ಥಾಪನಾಯ ಭವತು । ಮಿತ್ರಾವರುಣಾವಿಮಮಗ್ನೇಃ ಸ್ತೋತಾರಂ ಧಾರಯಿತಾಮಿತ್ಯರ್ಥಃ । ಅವಯಾತಾಮವಸ್ತಾದ್ಗಚ್ಛತಾಂ ಸ್ವರ್ಗಲೋಕಸ್ಯಾಧಸ್ತಾದಂತರಿಕ್ಷೇ ವರ್ತಮಾನಾನಾಂ ಮರುತಾಮೇತತ್ಸಂಜ್ಞಾನಾಂ ದೇವಾನಾಂ ಹೇಳಃ ಕ್ರೋಧೋ ಽದ್ಭುತೋ ಮಹಾನ್ಭವತಿ । ಅದ್ಭುತ ಇತ್ಯೇತನ್ಮಹನ್ನಾಮ । ತಸ್ಮಾತ್ಕ್ರೋಧಾದಿಮಮಗ್ನೇಃ ಸ್ತೋತಾರಂ ಮಿತ್ರಾವರುಣೌ ರಕ್ಷತಾಮಿತಿ ಶೇಷಃ । ಅಪಿ ಚ ನೋ ಽಸ್ಮಾನ್ ಹೇ ಅಗ್ನೇ ಸು ಮೃಳ । ಸುಷ್ಠು ಮೃಡಯ । ಸುಖಯ । ಏಷಾಂ ಮರುತಾಂ ಮನಶ್ಚ ಪುನರ್ಭೂತು । ಪುನರಪಿ ಪ್ರಸನ್ನಂ ಭವತು । ಅನ್ಯತ್ಸಮಾನಂ ॥ ಧಾಯಸೇ ವಹಿಹಾಧಾಞ್ಭ್ಯಶ್ಛಂದಸೀತಿ ಭಾವೇ ಽಸುನ್ । ಣಿದಿತ್ಯನುವೃತ್ತೇರಾತೋ ಯುಕ್ ಚಿಣ್ಣಿತೋರಿತಿ ಯುಕ್ । ಅವಯಾತಾಂ । ಯಾ ಪ್ರಾಪಣೇ । ಅಸ್ಮಾದವಪೂರ್ವಾಲ್ಲಟಃ ಶತ್ರ । ಶತುರನುಮ ಇತಿ ವಿಭಕ್ತೇರುದಾತ್ತತ್ವಂ । ಮೃಳ । ಮೃಡ ಸುಖನೇ । ಛಂದಸ್ಯುಭಯಥೇತಿ ಶಪ ಆರ್ಧಧಾತುಕತ್ವಾನ್ಣೇರನಿಟೀತಿ ಣಿಲೋಪಃ । ದ್ಯ್ಯಚೋ ಽತಸ್ತಿಙ ಇತಿ ಸಂಹಿತಾಯಾಂ ದೀರ್ಘತ್ವಂ । ಭೂತು । ಬಹುಲಂ ಛಂದಸೀತಿ ಶಪೋ ಲುಕ್ ॥

ಕ್ರಿಯಾಪದಾರ್ಥ

ಅಯಂ—(ಅಗ್ನಿಯನ್ನು ಸ್ತೋತ್ರನಾಡುವ) ಈ ಯಜಮಾನನು । **ಮಿತ್ರಸ್ಯ**— (ಅಪರಭಿನಾಸಿದೇವನಾದ) ಮಿತ್ರನ (ಮತ್ತು) **ವರುಣಸ್ಯ**—(ರಾತ್ರ್ಯಭಿಮಾನಿದೇವನಾದ) ವರುಣನ । **ಧಾಯಸೇ**—ಬೆಂಬಲವನ್ನು ಪಡೆಯುವುದಕ್ಕೆ (ಯೋಗ್ಯನಾಗಿ) । **ಅವಯಾತಾಂ**— ಆಗಲಿ । (ಸ್ವರ್ಗಲೋಕದ) ಕೆಳಭಾಗದಲ್ಲಿ ಸಂಚರಿಸುವ **ಮರುತಾಂ**—ಮರುದ್ದೇವತೆಗಳ ! **ಹೇಳಃ**—ಕ್ರೋಧವು । **ಅದ್ಭುತಃ**—ಮಹತ್ತಾಗಿರುತ್ತದೆ । (ಅಗ್ನಿಯನ್ನು ಸ್ತುತಿಸುವ ಯಜಮಾನನನ್ನು ಮಿತ್ರಾವರುಣರು ಈ ಕ್ರೋಧದಿಂದ ರಕ್ಷಿಸಲಿ) । **ಅಗ್ನೇ**—ಎಲೈ ಅಗ್ನಿಯೇ । **ನಃ**—ನಮ್ಮನ್ನು । **ಸುಮೃಳ**—ಚೆನ್ನಾಗಿ ಸುಖಪಡಿಸು । **ಏಷಾಂ**—ಈ ಮರುತ್ತುಗಳ । **ಮನಃ**—ಮನಸ್ಸು । **ಪುನಃ**—

ತಿರುಗಿಯೂ । **ಭೂತು**—(ಪ್ರಸನ್ನವಾಗಿ) ಆಗಲಿ । **ತವ**—ನಿನ್ನ । **ಸಖ್ಯೇ**—ಸ್ನೇಹದ ನಿಮಿತ್ತವಾಗಿ । **ವಯಂ**—ನಾವು । **ಮಾ ರಿಷಾಮ**—(ಯಾವ) ಹಿಂಸೆಯನ್ನೂ ಅನುಭವಿಸದೇ ಇರುವಂತಾಗಲಿ ॥

॥ ಭಾವಾರ್ಥ ॥

ಅಗ್ನಿಯನ್ನು ಸ್ತೋತ್ರವಾಡುವ ಈ ಯಜಮಾನನು ಮಿತ್ರಾವರುಣರ ಬೆಂಬಲವನ್ನು ಪಡೆಯುವುದಕ್ಕೆ ಯೋಗ್ಯನಾಗಿದ್ದು ಅವರ ರಕ್ಷಣೆಯನ್ನು ಪಡೆಯಲಿ. ಸ್ವರ್ಗಲೋಕದ ಕೆಳಭಾಗದಲ್ಲಿ ಸಂಚರಿಸುವ ಮರುತ್ತುಗಳ ಕ್ರೋಧವು ಭಯಜನಕವಾಗಿರುತ್ತದೆ ಮಿತ್ರಾವರುಣರು ಯಜಮಾನನನ್ನು ಈ ಕ್ರೋಧದಿಂದ ರಕ್ಷಿಸಲಿ. ಎಲೈ ಅಗ್ನಿಯೇ ನಮ್ಮನ್ನು ಚೆನ್ನಾಗಿ ಸುಖಪಡಿಸು- ಈ ಮರುತ್ತುಗಳ ಮನಸ್ಸು ಪುನಃ ಪ್ರಸನ್ನವಾಗಿ ಆಗಲಿ. ನಿನ್ನ ಸ್ನೇಹದ ನಿಮಿತ್ತವಾಗಿ ನಾವು ಹಿಂಸೆಯನ್ನೂ ಅನುಭವಿಸದೇ ಇರುವಂತಾಗಲಿ.

English Translation

May this (your adorer) enjoy the support of Mitra and of Varuna; wonderful is the fury of the Maruts; (dwellers in the region) below (the heavens) encourage us; Agni, let us not suffer injury through your friendship.

ವಿಶೇಷ ವಿಷಯಗಳು

ಧಾಯಸೇ—ಈ ಪದವು ಧರಿಸು, ಧಾರಣೆಮಾಡು ಎಂಬ ಅರ್ಥವನ್ನು ಕೊಡುವ **ಧಾ** ಧಾತುವಿನಿಂದಾಗಲಿ ಅಥವಾ ಕುಡಿ ಎಂಬ ತರ್ಥವನ್ನು ಕೊಡುವ **ಧೇಟ್ ಪಾನೇ** ಎಂಬ ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು. **ಧಾಯಸೇ** ಎಂದರೆ ಇಲ್ಲಿ ಯಜಮಾನರನ್ನು ರಕ್ಷಣಾದಿಗಳಿಂದ ಧಾರಣೆಮಾಡುವುದಕ್ಕೋಸ್ಕರ ಎಂದಾಗಲೀ ಅಥವಾ ಸೋಮರಸದ ಪಾನಕ್ಕೋಸ್ಕರ ಎಂದಾಗಲೀ ಅರ್ಥ ವಾಗುತ್ತದೆ. ಇತರ ಕಡೆಗಳಲ್ಲೂ ಸಪ ಈ ಎರಡರ್ಥಗಳಲ್ಲೂ ಈ ಶಬ್ದಪ್ರಯೋಗವಿರುವುದು ಋ ಸಂ ೧-೩೧-೧೩ , ೧-೭೨-೯ ಇತ್ಯಾದಿ ಸ್ಥಳಗಳಲ್ಲಿ **ಪೋಷಕಾಯ । ಜಗತಃ ಧಾರಣಾಯ ।** ಜಗತ್ತನ್ನು ಧಾರಣೆ ಮಾಡುವುದಕ್ಕೆ ಎಂದೂ ; ೧-೧೩೦-೨ ; ೨-೧೭-೨ ಇತ್ಯಾದಿ ಸ್ಥಳಗಳಲ್ಲಿ **ಸೋಮಪಾನಾಯ ।** ಸೋಮರಸವನ್ನು ಪಾನಮಾಡುವುದಕ್ಕೆ ಎಂದೂ ವಿವರಿಸುತ್ತಾರೆ. ಅದರಂತೆ ಇಲ್ಲಿಯೂ ಎರಡರಲ್ಲಿ ಯಾವ ಅರ್ಥವನ್ನಾದರೂ ಹೇಳಬಹುದು. ಸಾಯಣರು **ಧಾರಣಾಯ, ಅವಸ್ಥಾಪನಾಯ ಭವತು** ಎಂದೂ ಸ್ಕಂದಸ್ವಾಮಿಗಳು **ಸೋಮಪಾನಾಯ** ಎಂದೂ ವಿವರಿಸುತ್ತಾರೆ.

ಸ್ಕಂದಸ್ವಾಮಿಗಳು ಈ ಋಕ್ಕಿನ ಸನ್ನಿವೇಶವನ್ನು ವಿವರಿಸುವುದಕ್ಕಾಗಿ ಒಂದು ಕಥೆಯನ್ನು ಉದಪರಿಸು ತ್ತಾರೆ. ಅದೇನೆಂದರೆ —

ಮಿತ್ರೋ ಮರುತೋ ಮರುತಶ್ಚ ಕುತ್ಸಸ್ಯ ಯಜ್ಞಮಾಜಗ್ಮುಃ । ಸೋಽಗ್ನಿಸ್ತುತ್ಯಾ ಕ್ಷಿಪ್ತಮನಾಃ ತಾನ್ನತುಷ್ಟಾವ । ತಸ್ಮೈ ಕ್ರುದ್ಧಾ ಯಜ್ಞಾದ್ದೇವಾ ಜಗ್ಮುಃ । ತತ್ಪ್ರಸಕ್ತಯೇ ಕುತ್ಸೋಽಗ್ನಿಮುವಾಚ ।

ಒಂದುಸಲ ಮಿತ್ರನೂ, ಮರುಣನೂ ಮರುತ್ತುಗಳೂ ಒಟ್ಟಿಗೆ ಕುತ್ಸನ ಯಜ್ಞಗೃಹಕ್ಕೆ ಬಂದಾಗ ಕುತ್ಸನು ಅಗ್ನಿಸ್ತುತಿಯಲ್ಲೇ ಮಗ್ನನಾಗಿದ್ದು ಅವರನ್ನು ಗಮನಿಸಲಿಲ್ಲವಾದ್ದರಿಂದ ಅವರು ಕೋಪಿಸಿಕೊಂಡು ಹೊರಟುಹೋದರು. ಆಗ ಅವನು ಅಗ್ನಿಯನ್ನು **ಈ** ಋಕ್ಕಿನಿಂದ ಪ್ರಾರ್ಥಿಸುತ್ತಾನೆ. ಇದರ ಅರ್ಥವು ಕೋಪಿಸಿಕೊಂಡು ಹೊರಟುಹೋದ ದೇವತೆಗಳ ಕ್ರೋಧವು ಅತಿ ಪ್ರಬಲವಾದುದೆಂದೂ, ಅಗ್ನಿಯು ಸೋಮಪಾನಕ್ಕಾಗಿ ಅವರನ್ನು ಸನ್ಮಾಧಾನಗೊಳಿಸಿ ಕರೆತರಬೇಕೆಂದೂ ಆಗುತ್ತದೆ.

ಅವಯೋತಾಂ—ಅಪಗಚ್ಛತಾಂ। ಕೋಪಿಸಿಕೊಂಡು ಹೊರಟುಹೋಗುತ್ತಿರುವ.

ಹೇಳಃ—ಕ್ರೋಧಃ। ರೇಳತೇ, ಹೇಳತೇ ಭಾಮತೇ ಇತ್ಯಾದಿ ಕೋಪಗೊಳ್ಳು ಎನ್ನುವ ಅರ್ಥದಲ್ಲಿ ಉಪಯೋಗಿಸಿರುವ ಹೆತ್ತು **ಕ್ರುಧ್ಯುತಿಕರ್ಮಧಾತು**ಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೯) ಕ್ರೋಧವೆಂದು ಅರ್ಥ. ಋ. ಸಂ. ೧-೨೪-೧೪; ೧-೧೧೪-೪; ೧-೧೭೧-೧ ಇತ್ಯಾದಿ ಅನೇಕ ಋಕ್ಕುಗಳಲ್ಲಿ ಕ್ರೋಧನೆಂಬ ಅರ್ಥದಲ್ಲಿ **ಈ** ಶಬ್ದದ ಪ್ರಯೋಗವಿದೆ.

ಸುಮೃಳ—ಚೆನ್ನಾಗಿ ಸುಖಪಡಿಸು.

ವ್ಯಾಕರಣಪ್ರಕ್ರಿಯಾ

ಧಾಯಸೇ—ಡುಧಾಞ್ ಧಾರಣಪೋಷಣಯೋಃ ಧಾತು ಇದಕ್ಕೆ **ವಹಿಹಾಧಾಞ್ಭ್ಯೋ ಭಾವೇ**—(ಉ. ಸೂ. ೪-೬೬) ಎಂಬುದರಿಂದ ಭಾವಾರ್ಥದಲ್ಲಿ ಅಸುನ್ ಪ್ರತ್ಯಯ. **ವಸೇರ್ಣಿತ್**— (ಉ. ಸೂ. ೪-೬೮೭) ಎಂಬುದರಿಂದ ಣಿತ್ ಎಂದು ಅನುವೃತ್ತವಾಗುವುದರಿಂದ **ಅತೋಯ್ಲುಕ್ ಚಿಣ್ಕೃತೋಃ**—(ಪಾ. ಸೂ. ೭-೩-೩೫) ಎಂಬುದರಿಂದ ಧಾತುವಿಗೆ ಯುಕಾಗಮ. **ಧಾಯಸ್** ಎಂದು ಸಾಂತಶಬ್ದವಾಗುತ್ತದೆ. ಚತುರ್ಥೀ ಏಕವಚನಾಂತ ರೂಪ. **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಪ್ರತ್ಯಯ ನಿತ್ವಾಗುವುದರಿಂದ ಆದ್ಯುದಾತ್ತ ಸ್ವರ ಬರುತ್ತದೆ.

ಅವಯೋತಾಮ್—ಯಾ ಪ್ರಾಪಣೇ ಧಾತು. ಅದಾದಿ. ಅವ ಎಂಬ ಉಪಸರ್ಗವು ಪೂರ್ವದಲ್ಲಿರುವಾಗ ಇದಕ್ಕೆ ಲಡರ್ಥದಲ್ಲಿ ಶತೃ ಪ್ರತ್ಯಯ. ಅವಯಾತ್ ಶಬ್ದವಾಗುತ್ತದೆ. ಷಷ್ಠೀಬಹುವಚನಾಂತರೂಪ. ನುಮ್ ರಹಿತವಾದ ಶತೃವಿನ ವಿಭಕ್ತಿಗೆ **ಶತುರನುನೋ ನದ್ಯಜ್ಯಾದೀ**— ಪಾ. ಸೂ. ೬-೧-೧೭೩)ಎಂಬುದರಿಂದ ಉದಾತ್ತ ಸ್ವರಬರುತ್ತದೆ.

ಮೃಳ—ಮೃಡ ಸುಖನೇ ಧಾತು. ಪ್ರಯೋಜಕವ್ಯಾಪಾರ ತೋರುವುದರಿಂದ **ಹೇತುಮತಿ ಚ** ಎಂಬುದರಿಂದ ಣಿಚ್. ಣಿಜಂತದ ಮೇಲೆ ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್. ಅದಕ್ಕೆ **ಸೇರ್ಹ್ಯಪಿಚ್ಚೆ** ಎಂಬುದರಿಂದ ಹಿ ಆದೇಶ. ಶಪ್ ವಿಕರಣ. **ಛಂದಸ್ಯುಭಯಥಾ** ಎಂಬುದರಿಂದ ಶಪಿಗೆ ಆರ್ಧಧಾತುಕ ಸಂಜ್ಞೆ ಬರುವುದರಿಂದ **ಣೇರನಿಟಿ**— (ಪಾ. ಸೂ. ೬-೪-೫೧) ಎಂಬುದರಿಂದ ಶಪ್ ನಿಮಿತ್ತವಾಗಿ ಣಿಚಿಗೆ ಲೋಪ **ಅತೋ ಹೇಃ** ಎಂಬುದರಿಂದ ಹಿಗೆ ಲೋಪ. **ವ್ಯಚೋ ಽತಸ್ತಿಙಃ**— (ಪಾ. ಸೂ. ೬-೩-೧೩೫) ಎಂಬುದರಿಂದ ವ್ಯಚ್ಧಾತುವಾಗಿ ಉಳಿಯುವುದರಿಂದ ಸಂಹಿತಾವಲ್ಲಿ ದೀರ್ಘ ಬರುತ್ತದೆ.

ಭೂತು— ಭೂ ಸತ್ತಾಯಾಂ ಧಾತು. ಲೋಟ್ ಪ್ರಥಮಪುರುಷ ಏಕವಚನದಲ್ಲಿ **ತಿಙುಃ** ಎಂಬುದರಿಂದ ಪ್ರತ್ಯಯಕ್ಕೆ ಉತ್ವ. **ಬಹುಲಂ ಛಂದಸಿ** ಎಂಬುದರಿಂದ ವಿಕರಣಕ್ಕೆ (ಶಪ್) ಲುಕ್. **ಭೂಸುವೋಸ್ತಿಙ್** ಎಂಬುದರಿಂದ ಗುಣ ನಿಷೇಧ. ಭೂತು ಎಂದು ರೂಪವಾಗುತ್ತದೆ. ॥ ೧೨ ॥

॥ ಸಂಹಿತಾಪಾಠಃ ॥

ದೇವೋ ದೇವಾನಾಮಸಿ ಮಿತ್ರೋ ಅದ್ಭುತೋ ವಸುರ್ವಸೂ-
ನಾಮಸಿ ಚಾರುರಧ್ವರೇ ।
ಶರ್ಮನ್ತ್ಸ್ಯಾಮ ತವ ಸಪ್ರಥಸ್ತಮೇಽಗ್ನೇ ಸಖ್ಯೇ ಮಾ
ರಿಷಾಮಾ ವಯಂ ತವ ॥ ೧೩ ॥

ಪದಪಾಠಃ

ದೇವಃ । ದೇವಾನಾಂ । ಅಸಿ । ಮಿತ್ರಃ । ಅದ್ಭುತಃ । ವಸುಃ । ವಸೂನಾಂ ।
ಅಸಿ । ಚಾರುಃ । ಅಧ್ವರೇ ।
ಶರ್ಮನ್ । ಸ್ಯಾಮ । ತವ । ಸಪ್ರಥಃ । ತಮೇ । ಅಗ್ನೇ । ಸಖ್ಯೇ । ಮಾ ।
ರಿಷಾಮ । ವಯಂ । ತವ । ॥ ೧೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ದೇವೋ ದ್ಯೋತಮಾನಸ್ತ್ವಂ ದೇವಾನಾಂ ಸರ್ವೇಷಾಮದ್ಭುತೋ ಮಹಾನ್ಮಿತ್ರೋಽಸಿ ಪ್ರೀಥಃ ಸಖಾ ಭವಸಿ । ತಥಾ ಚಾರುಃ ಶೋಭಸ್ತ್ವಮಧ್ವರೇ ಯಜ್ಞೇ ವಸೂನಾಂ ಸರ್ವೇಷಾಂ ಧನಾನಾಂ ವಸುರಸಿ । ನಿವಾಸಯಿತಾ ಭವಸಿ । ಅತೋಽಸ್ಮಾಕಂ ವಸೂನಿ ದೇಹೀತ್ಯರ್ಥಃ । ಕಿಂಚ ಸಪ್ರಥಸ್ತಮೇ ಸರ್ವತಃ ಪೃಥುತಮೇಽತಿಶಯೇನ ವಿಸ್ತೀರ್ಣೇ ತವ ತ್ವತ್ಸಂಬಂಧಿನಿ ಶರ್ಮಣಿ ಯಜ್ಞಗೃಹೇ ಸ್ಯಾಮ । ವರ್ತಮಾನಾ ಭವೇಮ । ಅನ್ಯತ್ಪೂರ್ವವತ್ ॥ ಶರ್ಮನ್ । ಸುಪಾಂ ಸುಲುಗಿತಿ ಸಪ್ತಮ್ಯಾ ಲುಕ್ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ದೇವಃ—ಪ್ರಕಾಶಮಾನನಾದ ನೀನು । ದೇವಾನಾಂ—(ಸಕಲ)ದೇವತೆಗಳಿಗೂ । ಅದ್ಭುತಃ—ಮಹಾಮಹಿಮನಾಗ । ಮಿತ್ರಃ ಅಸಿ—ಸಖನಾಗಿದ್ದೀಯೆ. । ಚಾರುಃ—ಮನೋಹರ

ರೂಪವುಳ್ಳ ನೀನು । **ಅಧ್ವರೇ**—ಯಜ್ಞದಲ್ಲಿ । **ವಸೂನಾಂ**-(ಸಕಲ) ಧನಗಳಿಗೂ । **ವಸುಃ ಅಸಿ**--ಸ್ಥಾಪಕನಾಗಿದ್ದೀಯೆ. । **ಸಪ್ರಥಸ್ತಮೇ**—ಅತಿಶಯವಾಗಿ ವಿಸ್ತಾರವಾಗಿರುವ । **ತವ**—ನಿನ್ನ । **ಶರ್ಮನ್**—ಯಜ್ಞಗೃಹದಲ್ಲಿ । **ಸ್ಯಾಮ**—(ನಾವು) ಇರುವಂತಾಗಲಿ. । **ತವ**—ನಿನ್ನ ।**ಸಖ್ಯೇ**—ಸ್ನೇಹದ ನಿಮಿತ್ತವಾಗಿ । **ಮಯೇಂ**—ನಾವು । **ಮಾ ರಿಷಾಮ**--ಹಿಂಸಿತರಾಗದೇ ಇರುವಂತಾಗಲಿ. ।

ಭಾವಾರ್ಥ

ಎಲೈ ಅಗ್ನಿಯೇ, ಪ್ರಕಾಶಮಾನನಾದ ನೀನು ಸಕಲದೇವತೆಗಳಿಗೂ ಮಹಾಮಹಿಮನಾದ ಸಖನಾಗಿದ್ದೀಯೆ. ಮನೋಹರವಾದ ರೂಪವುಳ್ಳ ನೀನು ಯಜ್ಞದಲ್ಲಿ ಸಕಲಧನಗಳಿಗೂ ಸ್ಥಾಪಕನಾಗಿದ್ದೀಯೆ. ಅತಿಶಯವಾಗಿ ವಿಸ್ತಾರವಾಗಿರುವ ನಿನ್ನ ಯಜ್ಞಗೃಹದಲ್ಲಿ ನಾವು ನಿಶ್ಚಿಂತೆಯಿಂದ ಇರುವಂತೆಯೂ ನಿನ್ನ ಸ್ನೇಹದ ನಿಮಿತ್ತವಾಗಿ ಯಾವ ಹಿಂಸೆಯನ್ನೂ ಅನುಭವಿಸದಿರುವಂತೆಯೂ ಅನುಗ್ರಹಿಸು.

English Translation

You brilliant (Agni) are the especial friend of the gods ; you who are graceful in the sacrifice are the confirmer of all riches-may we be present in your most spacious chamber of sacrfice ; Agni, let us not suffer injury through your friendship.

॥ ವಿಶೇಷವಿಷಯಗಳು ॥

ದೇವಾನಾಂ ಅದ್ಭುತಃ ಮಿತ್ರಃ ಅಸಿ—ದೇವತೆಗಳಿಗೆಲ್ಲಾ ದೊಡ್ಡ ಮಿತ್ರನಾಗಿದ್ದೀಯೆ, ಎಂದು ಅಗ್ನಿಗೂ ಇತರ ದೇವತೆಗಳಿಗೂ ಇರುವ ಸಂಬಂಧವನ್ನೂ ತಿಳಿಸುತ್ತದೆ. ಹವಿಸ್ಸಿಗಾಗಿ ಆಸೆಪಡುತ್ತಿರುವ ಸಕಲ ದೇವತೆಗಳಿಗೂ ಯಜ್ಞದ ಮೂಲಕವಾಗಿ ಹವಿಸ್ಸುಗಳನ್ನು ಹಂಚುವುದರಿಂದ ಅಗ್ನಿಯು ಅವರೆಲ್ಲರ ಮಿತ್ರನು. ಅದರಲ್ಲೂ ಮಹತ್ತಾದ ಮಿತ್ರನು.

ತ್ವೇ ಅಗ್ನೇ ವಿಶ್ವೇ ಅಮೃತಾಸೋ ಅದ್ರುಹ ಆಸಾ ದೇವಾ ಹವಿರದಂತ್ಯಾಹುತಂ ।

(ಋ. ಸಂ. ೨-೧-೧೪)

ತಾಂ೭ ದೂತಮಗ್ನೇ ಅಮೃತಂ ಯುಗೇಯುಗೇಹವ್ಯವಾಹಂ ದಧಿರೇ ಪಾಯುಮೀಡ್ಯಂ ।
ದೇವಾಸಶ್ಚ ಮರ್ತಾಸಶ್ಚ ಜಾಗೃವಿಂ ವಿಭುಂ ವಿಶ್ಪತಿಂ ನಮಸಾ ನಿ ಷೇದಿರೇ ।

(ಋ. ಸಂ. ೬-೧೫-೮)

ಇತ್ಯಾದಿ ನಾನಾ ಸಂದರ್ಭಗಳಲ್ಲಿ ಅಗ್ನಿಗೂ ದೇವತೆಗಳಿಗೂ ಇರುವ ನಿಕಟಸಂಬಂಧವನ್ನು ತಿಳಿಸಿ ಸಕಲ ದೇವತೆಗಳ ತೃಪ್ತಿಯೂ ಅಗ್ನಿಯೊಬ್ಬನಿಂದಲೇ ಸಾಧ್ಯವೆಂದೂ ಆದುದರಿಂದಲೇ ಅಗ್ನಿಯು ಅವರೆಲ್ಲರ ಮಿತ್ರನೆಂದೂ ಹೊಗಳಿದೆ.

ವಸೂನಾಂ ವಸುಃ ಅಸಿ—ಸಕಲಧನಗಳಿಗೂ ಸ್ಥಾಪಕನಾಗಿದ್ದೀಯೆ.

ವಸುರ್ವಸೂನಾಂ ಕ್ಷಯಸಿ ತ್ವಮೇಕ ಇದ್ಯಾವಾ ಚ ಯಾನಿ ಪೃಥಿವೀ ಚ ಪುಷ್ಯತಃ ।

(ಋ. ಸಂ, ೧೦-೯೧-೩)

ಇತ್ಯಾದಿ ಮಂತ್ರಗಳಲ್ಲಿ ಹೊಗಳುವಂತೆ ಅಗ್ನಿಯು ದ್ಯುಲೋಕದ ಸಂರಕ್ಷಣೆಗೂ ಪೃಥ್ವಿಯ ಬೆಳವಣಿಗೆಗೂ ಬೇಕಾದ ಸಕಲ ವಿಧವಾದ ಧನಗಳಿಗೂ ಒಬ್ಬನೇ ಅಧಿಪತಿಯಾದುದರಿಂದ **ವಸೂನಾಂ ವಸುಃ ಅಸಿ** ಎಂದು ಹೊಗಳಿದೆ.

ಸಪ್ರಥಸ್ತಮೇ—ಸರ್ವತಃ ಪೃಥುತಮೇ । ಸುತ್ತಲೂ ಅತ್ಯಂತ ವಿಸ್ತಾರವಾಗಿರತಕ್ಕ ಎಂದರ್ಥ. ಈ ಅರ್ಥದಲ್ಲಿ ಬರುವ ಈ ಪದವನ್ನು ೫-೬೫-೫ ಇತ್ಯಾದಿ ಅನೇಕ ಸಂದರ್ಭಗಳಲ್ಲಿ ಉಪಯೋಗಿಸಿದೆ.

ಶರ್ಮನ್—ಯಜ್ಞಗೃಹದಲ್ಲಿ. **ಗಯಃ, ಕೃದರಃ, ಗರ್ತಃ** ಇತ್ಯಾದಿ ೨೨ **ಗೃಹನಾಮ**ಗಳಲ್ಲಿ ಪಠಿತವಾಗಿರುವುದರಿಂದ (ನಿ. ೩-೧೩) ಇಲ್ಲಿ ಗೃಹವೆಂದರ್ಥ. ಅನೇಕ ಸಂದರ್ಭಗಳಲ್ಲಿ **ಶರ್ಮ** ಶಬ್ದಕ್ಕೆ ಸಂರಕ್ಷಣೆ, ಆಶ್ರಯ ಎಂಬ ಅರ್ಥವೂ ಉಂಟು. ನಿರುಕ್ತಕಾರರು ಆಶ್ರಯ, ರಕ್ಷಣೆ ಎಂಬ ಅರ್ಥವಿರುವ—

ಯಚ್ಛಾ ನಃ ಶರ್ಮ ಸಪ್ರಥಃ ।

(ಋ. ಸಂ. ೧-೩೬-೧೫)

ಎಂಬ ಋಕ್ಕನ್ನು ಉದಹರಿಸಿ **ಶರ್ಮ** ಶಬ್ದಕ್ಕೆ **ಶರಣಂ** ಎಂದು ಅರ್ಥವನ್ನು ಮಾಡಿರುವರು. ಹೀಗೆ ಈ ಪದಕ್ಕೆ ಎರಡು ಅರ್ಥಗಳಲ್ಲಿಯೂ ಈ ಪದವನ್ನು ಹೇರಳವಾಗಿ ಉಪಯೋಗಿಸಿದೆ. ಇಲ್ಲಿ ಅತ್ಯಂತ ವಿಸ್ತಾರವಾದ ಗೃಹದಲ್ಲಿ ಎಂದರ್ಥ.

॥ ಸ್ಯಾಕರಣಸ್ಯಕ್ರಿಯಾ ॥

ಅಸಿ— ಅಸ ಭುವಿ ಲಿಟ್ ಮಧ್ಯಮಪುರುಷ ಏಕವಚನ ಪರವಾದಾಗ **ತಾಸಸ್ತ್ಯೋರ್ಲೋಪಃ** ಎಂಬುದರಿಂದ ಧಾತುವಿನ ಸಕಾರಕ್ಕೆ ಲೋಪ. ಅತಿಜಂತನ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ

ಶರ್ಮನ್—ಇದು ನಾಂತವಾದ ಶಬ್ದ. ಇದಕ್ಕೆ ಸಪ್ತಮಿಯ ಙಿ ವಿಭಕ್ತಿ ಪರವಾದಾಗ **ಸುಪಾಂ ಸುಲುಕ್** ಎಂಬುದರಿಂದ ಅದಕ್ಕೆ ಲುಕ್ ಬರುತ್ತದೆ-

ಸ್ಯಾಮ—ಅಸ ಭುವಿ. ಧಾತು. ಅದಾದಿ ವಿಧಿಲಿಙ್ ಉತ್ತಮಪುರುಷಬಹುವಚನದಲ್ಲಿ ಮಸ್ ಪ್ರತ್ಯಯ. **ನಿತ್ಯಂ ಙಿತಃ**—(ಪಾ. ಸೂ. ೩-೪-೯೯) ಎಂಬುದರಿಂದ ಮಸಿನ ಸಕಾರಕ್ಕೆ ಲೋಪ. **ಯಾಸುಟ್-ಪರಸ್ಮೈ**—(ಪಾ. ಸೂ. ೩-೪-೧೦೩) ಎಂಬುದರಿಂದ ಯಾಸುಟಾಗಮ. ಅದಕ್ಕೆ ಜಿತ್ವವಿಧಾನ ಮಾಡಿರುವುದರಿಂದ

ಶ್ನಸೋರಲ್ಲೋಪಃ— (ಪಾ. ಸೂ. ೬-೪-೧೧೧) ಎಂಬುದರಿಂದ ಧಾತುವಿನ ಅಕಾರಕ್ಕೆ ಲೋಪ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೩ ॥



ಸಂಹಿತಾಪಾಠಃ

ತತ್ತೇ ಭದ್ರಂ ಯತ್ಸಮಿದ್ಧಃ ಸ್ವೇ ದಮೇ ಸೋಮಾಹುತೋ ಜ-
ರಸೇ ಮೃಳಯತ್ತಮಃ ।
ದಧಾಸಿ ರತ್ನಂ ದ್ರವಿಣಂ ಚ ದಾಶುಷೇಽಗ್ನೇ ಸಖ್ಯೇ ಮಾ
ರಿಷಾಮಾ ವಯಂ ತವ ॥ ೧೪ ॥

ಪದಪಾಠಃ

ತತ್ । ತೇ । ಭದ್ರಂ । ಯತ್ । ಸಂಽಇದ್ಧಃ । ಸ್ವೇ । ದಮೇ । ಸೋ-
ಮಽಆಹುತಃ । ಜರಸೇ । ಮೃಳಯತ್ತಮಃ ।
ದಧಾಸಿ । ರತ್ನಂ । ದ್ರವಿಣಂ । ಚ । ದಾಶುಷೇ । ಅಗ್ನೇ । ಸಖ್ಯೇ ।
ಮಾ । ರಿಷಾಮ । ವಯಂ । ತವ ॥ ೧೪ ॥

ಸಾಯಣಭಾಷ್ಯಂ

ಹೇ ಅಗ್ನೇ ತೇ ತ್ವತ್ಸಂಬಂಧಿ ತತ್ಪಲು ಭದ್ರಂ ಭಜನೀಯಂ । ಪ್ರಶಸ್ತಮಿತ್ಯರ್ಥಃ । ಕಿಂ ಪುನ-
ಸ್ತತ್ । ಸ್ವೇ ದಮೇ ಸ್ವಕೀಯೇ ಉತ್ತರವೇದಿಲಕ್ಷಣೇ ನಿವಾಸಸ್ಥಾನೇ । ತಸ್ಯೈಷ ಸ್ವೋಲೋಕೋ

ಯದುತ್ತರವೇದೀ ನಾಭಿಃ । ಐ. ಬ್ರಾ. ೧–೨೮ ॥ ಇತಿ ಶ್ರುತೇಃ । ತಸ್ಯಾಮುತ್ತರವೇದ್ಯಾಂ ಸಮಿದ್ಧಃ ಸಮ್ಯಗಿದ್ಧಃ ಪ್ರಜ್ವಲಿತಃ ಸೋಮಾಹುತೋ ಹುತೇನ ಸೋಮರಸೇನ ಸಂತರ್ಪಿತಃ ಸನ್ ಜರಸೇ । ಋತ್ವಿಗ್ಭಿಃ ಸ್ತೂಯಸ ಇತಿ ಯದಸ್ತಿ ತದ್ಭವಾನಿತ್ಯರ್ಥಃ । ಏವಂ ಪ್ರಶಸ್ತಸ್ತ್ವಂ ಮೃಳಯತ್ತಮೋ೭ತಿಶಯೇನಾಸ್ಮಾಕಂ ಸುಖಯಿತಾ ಭೂತ್ವಾ ರತ್ನಂ ರಮಣೀಯಂ ಕರ್ಮಫಲಂ ದ್ರವಿಣಂ ಧನಂ ಚ ದಾಶುಷೇ ಹವಿರ್ದತ್ತವತೇ ಯಜಮಾನಾಯ ದಧಾಸಿ । ಪ್ರಯಚ್ಛಸಿ । ಅನ್ಯತ್ಸಮಾನಂ ॥ ಸಮಿದ್ಧಃ । ಇಂಇನ್ಧೀ ದೀಪ್ತೌ । ಕರ್ಮಣಿ ನಿಷ್ಠಾ । ಶ್ವೀದಿತೋ ನಿಷ್ಠಾಯಾಮಿತೀಟ್ಪ್ರತಿಷೇಧಃ । ಗತಿರನಂತರ ಇತಿ ಗತೇಃ ಪ್ರಕೃತಿಸ್ವರತ್ವಂ । ಸೋಮಾಹುತಃ । ಸೋಮೇನಾಹುತಃ । ತೃತೀಯಾ ಕರ್ಮಣೀತಿ ಪೂರ್ವಪದಪ್ರಕೃತಿಸ್ವರತ್ವಂ । ಜರಸೇ । ಜರತಿಃ ಸ್ತುತಿಕರ್ಮಾ । ವ್ಯತ್ಯಯೇನ ಕರ್ಮಣಿ ಕರ್ತೃಪ್ರತ್ಯಯಃ । ಯದ್ವೃತ್ತಯೋಗಾದನಿಘಾತಃ । ದಧಾಸಿ । ಅನುದಾತ್ತೇ ಚೇತ್ಯಭ್ಯಸ್ತಸ್ಯಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ತ್ವೇ ದಮೇ**—(ಶಾಸ್ತ್ರವಿಹಿತವಾದ) ನಿನ್ನ ನಿವಾಸಸ್ಥಾನದಲ್ಲಿ। **ಸ ಮಿದ್ಧಃ**—ಚೆನ್ನಾಗಿ ಪ್ರಜ್ವಲಿತನಾಗಿಯೂ (ಮತ್ತು) । **ಸೋಮಾಹುತಃ**—ಸೋಮರಸವನ್ನು ಅರ್ಪಿಸಲ್ಪಟ್ಟು । **ಜರಸೇ**—(ಋತ್ವಿಕ್ಕುಗಳಿಂದ) ಸ್ತುತಿಸಲ್ಪಟ್ಟವನಾಗಿಯೂ ಇರುವ । **ತೇ**—ನಿನ್ನ । **ತತ್**—ಆ ಪ್ರಜ್ವಲನವೂ ಮತ್ತು ಸ್ತೋತ್ರವೂ ಸಹ । **ಭದ್ರಂ**—(ನಿನಗೆ) ಶ್ರೇಷ್ಠವಾದ ತೃಪ್ತಿದಾಯಕವಾಗಿವೆ (ಇಂತಹ ತೃಪ್ತಿಯನ್ನು ಪಡೆದ ನೀನು) । **ಮೃಳಯೆತ್ತಮಃ**—(ನಮ್ಮನ್ನು) ಅತಿಶಯವಾಗಿ ಸುಖಪಡಿಸುತ್ತಾ । **ರತ್ನಂ**—ರಮಣೀಯವಾದ ಕರ್ಮಫಲವನ್ನೂ । **ದ್ರವಿಣಂ ಚ**— ಧನವನ್ನೂ ಸಹ । **ದಾಶುಷೇ**— ಹವಿಸ್ಸನ್ನು ಅರ್ಪಿಸಿದ ಯಜಮಾನನಿಗೆ । **ದಧಾಸಿ**—ಕೊಡುತ್ತೀಯೆ । **ತವ**—ನಿನ್ನ । **ಸಖ್ಯೇ**— ಸ್ನೇಹದ ನಿಮಿತ್ತವಾಗಿ । **ವಯಂ**— ನಾವು । **ಮಾ ರಿಷಾಮ**—ಹಿಂಸಿತರಾಗದೇ ಇರುವಂತಾಗಲಿ ॥

ಭಾವಾರ್ಥ

ಎಲೈ ಅಗ್ನಿಯೇ, ಶಾಸ್ತ್ರವಿಹಿತವಾದ ನಿನ್ನ ನಿವಾಸಸ್ಥಾನದಲ್ಲಿ ನೀನು ಚೆನ್ನಾಗಿ ಪ್ರಜ್ವಲಿತನಾಗಿಯೂ ಮತ್ತು ಸೋಮರಸದ ಅರ್ಪಣಾನಂತರ ಋತ್ವಿಕ್ಕುಗಳಿಂದ ಸ್ತುತಿಸಲ್ಪಟ್ಟವನಾಗಿಯೂ ಇರುವ ನಿನ್ನ ಆ ಪ್ರಜ್ವಲನವೂ ಮತ್ತು ಸ್ತೋತ್ರವೂ ನಿನಗೆ ಶ್ರೇಷ್ಠವಾದ ತೃಪ್ತಿದಾಯಕವಾಗಿವೆ. ಇಂತಹ ತೃಪ್ತಿಯನ್ನು ಪಡೆದ ನೀನು ನಮ್ಮನ್ನು ಅತಿಶಯವಾಗಿ ಸುಖಪಡಿಸುತ್ತಾ ರಮಣೀಯವಾದ ಕರ್ಮಫಲವನ್ನೂ ಧನವನ್ನೂ ಸಹ ನಿನಗೆ ಹವಿಸ್ಸನ್ನು ಅರ್ಪಿಸಿದ ಯಜಮಾನನಿಗೆ ಕೊಡುತ್ತೀಯೆ. ನಿನ್ನ ಸ್ನೇಹದ ನಿಮಿತ್ತವಾಗಿ ನಮಗೆ ಯಾವ ಹಿಂಸೆಯ ಅನುಭವವೂ ಇಲ್ಲದಿರಲಿ.

English Translation

It is pleasant to you when you are lighted in your own abode and propitiated by libations are praised (by the priests) ; then, much delighted, you give rewards and riches to the worshipper ; Agni, let us not suffer injury through your friendship.

ವಿಶೇಷವಿವರಣೆಗಳು.

ಸ್ವೇ ದಮೇ—ಗಯಃ, ಕೃದರಃ, ಗರ್ತಃ ಇತ್ಯಾದಿ ೨೨ ಗೃಹನಾಮಗಳಲ್ಲಿ ಪಠಿತವಾಗಿರುವುದರಿಂದ (ನಿ ೩-೧೩) **ದಮೇ** ಎಂದರೆ ಮನೆಯಲ್ಲಿ ಎಂದರ್ಥ. ಇಲ್ಲಿ **ಸ್ವೇ ದಮೇ** ಎಂದರೆ ಅಗ್ನಿಯ ಶಾಸ್ತ್ರವಿಹಿತವಾದ ನಿವಾಸ ಸ್ಥಾನದಲ್ಲಿ ಎಂದರ್ಥ. ಐತರೇಯ ಬ್ರಾಹ್ಮಣದಲ್ಲಿ ವರ್ಣಿಸಿರುವಂತೆ **ತಸ್ಯೈಷ ಸ್ವೋ ಲೋಕೋ ಯದುತ್ತರವೇದೀ ನಾಭಿಃ (೧-೨೮)** ಉತ್ತರವೇದಿರೂಪವಾದ ವಾಸಸ್ಥಾನವು ಅಗ್ನಿಯ **ಸ್ವಗೃಹ** ಅಥವಾ **ಸ್ವಲೋಕ**ವೆಂದು ಪ್ರಸಿದ್ಧವಾಗಿದೆ.

ಜರಸೇ—ಜರತಿಃ ಸ್ತುತಿಕರ್ಮವಾದುದರಿಂದ **ಜರಸೇ** ಎಂದರೆ ದೇವತೆಗಳನ್ನು ಸ್ತುತಿಸುವುದಕ್ಕೆ ಎಂದಾಗಲಿ, ಅಥವಾ ಋತ್ವಿಕ್ಕುಗಳಿಂದ ನೀನು ಸ್ತುತಿಸಲ್ಪಡಲು ಎಂದಾಗಲೀ ಆಗುತ್ತದೆ.

ರತ್ನಂ ದ್ರವಿಣಂ ಚ ದಾಶುಷೇ ದಧಾಸಿ—ಹವಿರ್ದಾತನಾದ ಯಜಮಾನನಿಗೆ ನೀನು ಸಕಲವಿಧವಾದ ಧನವನ್ನೂ ಕೊಡುತ್ತೀಯೆ ಎಂದು ಹೊಗಳಿದೆ. **ವಸುರ್ವಸೂನಾಂ** ಎಂದು ಅಗ್ನಿಯು ಐಶ್ವರ್ಯಕ್ಕೆಲ್ಲಾ ಕ್ಷೇತ್ರವೆಂದೂ ಅಧಿಪತಿಯೆಂದೂ—

ವಿಶ್ವಂ ಸೋ ಅಗ್ನೇ ಜಯತಿ ತ್ವಯಾ ಧನಂ ಯಸ್ತೇ ದದಾಶ ಮರ್ತ್ಯಃ ।
(ಋ. ಸಂ ೧-೩೬-೪)

ಪೀಪಾಯ ಸ ಶ್ರವಸಾ ಮರ್ತ್ಯೇಷು ಯೋ ಅಗ್ನಯೇ ದದಾಶ ವಿಪ್ರ ಉಕ್ಥ್ಯೈಃ ।
(ಋ. ಸಂ ೬-೧೦ ೩)

ಯೋ ಅಗ್ನಿಂ ತನ್ವೋ ೩ ದಮೇ ದೇವಂ ಮರ್ತಃ ಸಪರ್ಯತಿ ।
ತಸ್ಮಾ ಇದ್ವೀದಯದ್ವಸು ।
(ಋ. ಸಂ. ೮-೪೪-೧೫)

ಇತ್ಯಾದಿ ಅನೇಕ ಸನ್ನಿವೇಶಗಳಲ್ಲಿ ಅಗ್ನಿಗೆ ಶಾಸ್ತ್ರೋಕ್ತವಾಗಿ ಆಹುತಿಯನ್ನರ್ಪಿಸತಕ್ಕ ಯಜಮಾನನು ಸಕಲ ವಿಧವಾದ ಸಂಪತ್ತನ್ನೂ ಅಗ್ನಿಯಿಂದ ಪಡೆಯುತ್ತಾನೆಂದು ವರ್ಣಿಸಿದೆ.

ವ್ಯಾಕರಣಪ್ರಕ್ರಿಯಾ

ಸಮಿದ್ಧಃ— ಞಿಇಂಧೀ ದೀಪ್ತೌ ಧಾತು. ಇದಕ್ಕೆ ಕರ್ಮಣಿಯಲ್ಲಿ ಕ್ತ ಪ್ರತ್ಯಯ. ಧಾತುವು ಈದಿತ್ತಾದುದರಿಂದ **ಶ್ವೀದಿತೋನಿಷ್ಠಾಯಾಮ್**—(ಪಾ. ಸೂ. ೭-೨-೧೪) ಎಂಬುದರಿಂದ ಪ್ರತ್ಯಯಕ್ಕೆ ಇಡಾಗಮ ಬರುವುದಿಲ್ಲ. ಪ್ರತ್ಯಯ ಕಿತ್ತಾದುದರಿಂದ **ಅನಿದಿತಾಂ ಹಲ ಉಪಧಾಯಾಃ** ಎಂಬುದರಿಂದ ಧಾತುವಿನ ಉಪಧಾನಕಾರಕ್ಕೆ ಲೋಪ. **ಝುಷಸ್ತಥೋರ್ಧೋ ಧಃ**— (ಪಾ ಸೂ. ೮-೨-೪೦) ಎಂಬುದರಿಂದ ಧಕಾರನಿಮಿತ್ತವಾಗಿ ಪ್ರತ್ಯಯ ತಕಾರಕ್ಕೆ ಧಕಾರಾದೇಶ. **ಝಲಾಂ ಜಶ್ ಝಶಿ** ಎಂಬುದರಿಂದ ಪೂರ್ವಧಕಾರಕ್ಕೆ ಜಶ್ತ್ವ. **ಗತಿರನಂತರಃ**— (ಪಾ. ಸೂ. ೬-೨-೪೯) ಎಂಬುದರಿಂದ ಗತಿಗೆ (ಸಮ್) ಪ್ರಕೃತಿಸ್ವರ ಬರುತ್ತದೆ.

ಸೋಮಾಹುತಃ— ಸೋಮೇನ ಆಹುತಃ ಸೋಮಾಹುತಃ ತೃತೀಯಾತತ್ಪುರುಷಸಮಾಸದಲ್ಲಿ **ತೃತೀಯಾ ಕರ್ಮಣಿ**— (ಪಾ. ಸೂ. ೬-೨-೪೮) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ.

ಜರಸೇ— ಜ್ವಾಷ್ ವಯೋಹಾನೌ ಧಾತು. ಧಾತುಗಳಿಗೆ ಅನೇಕಾರ್ಥವಿರುವುದರಿಂದ ಇಲ್ಲಿ ಸ್ತುತ್ಯರ್ಥದಲ್ಲಿ ಪ್ರಯುಕ್ತವಾಗಿದೆ. **ವ್ಯತ್ಯಯೋ ಬಹುಲಮ್** ಎಂಬುದರಿಂದ ಕರ್ಮಣಿಯಲ್ಲಿ ಕರ್ತೃಪ್ರತ್ಯಯ ಬಂದಿದೆ. ಲಟ್ ಮಧ್ಯಮಪುರುಷ ಏಕವಚನದಲ್ಲಿ ಥಾಸ್ ಪ್ರತ್ಯಯ. **ಥಾಸಃ ಸೇ** ಎಂಬುದರಿಂದ ಇದಕ್ಕೆ ಸೇ ಆದೇಶ. ಶಪ್ ಶ್ಲುಕರಣ. **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಧಾತುವಿನ ಇಕಿಗೆ ಗುಣ. ಜರಸೇ ಎಂದು ರೂಪವಾಗುತ್ತದೆ. ಯತ್ ಎಂದು ವ್ಯವಹಿತವಾನ ಸಂಬಂಧವಿದ್ದರೂ **ಯದ್ವೃತ್ತಾನ್ನಿತ್ಯಮ್**—(ಪಾ. ಸೂ. ೮-೧-೬೬) ಎಂಬುದರಿಂದ ನಿಘಾತಸ್ವರ ಪ್ರತಿಷೇಧ ಬರುವುದರಿಂದ ಧಾತುಸ್ವರ ಉಳಿಯುತ್ತದೆ.

ದಧಾಸಿ—ಡುಧಾಞ್ ಧಾರಣಪೋಷಣಯೋಃ ಧಾತು. ಜುಹೋತ್ಯಾದಿ. ಲಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. **ಜುಹೋತ್ಯಾದಿಭ್ಯಃ ಶ್ಲು** ಎಂಬುದರಿಂದ ಶ್ಲು ವಿಕರಣ. **ಶ್ಲೌ** ಎಂಬುದರಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹ್ರಸ್ವ. **ಅನುದಾತ್ತೇ ಚ**—(ಪಾ. ಸೂ. ೬-೧-೧೮೦) ಅಭ್ಯಾಸಕ್ಕೆ ಆದ್ಯುದಾತ್ತ ಸ್ವರ ಬರುತ್ತದೆ.

ದಾಶುಷೇ— ದಾಶೃ ದಾನೇ ಧಾತು. **ದಾಶ್ವಾನ್ ಸಾಹ್ವಾನ್**—(ಪಾ. ಸೂ ೬-೧-೧೨) ಎಂಬುದರಿಂದ ಕ್ವಸುಪ್ರತ್ಯಯಾಂತವಾಗಿ ನಿಪಾತಿತವಾಗಿದೆ. ಚತುರ್ಥೀವಿಭಕ್ತಿ ಪರವಾದಾಗ ಭಸಂಜ್ಞಾ ಇರುವುದರಿಂದ **ವಸೋಃ ಸಂಪ್ರಸಾರಣಮ್** ಎಂಬುದರಿಂದ ವ್ಕಸುವಿನ ವಕಾರಕ್ಕೆ ಸಂಪ್ರಸಾರಣ. **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ. **ಶಾಸಿ ವಸಿ ಘಸೀನಾಂ ಚ** ಎಂಬುದರಿಂದ ಷಿತ್ವ ದಾಶುಷೇ ಎಂದು ರೂಪವಾಗುತ್ತದೆ. ॥ ೧೪

ಸಂಹಿತಾಪಾಠಃ ।

ಯಸ್ಯೈ ತ್ವಂ ಸುದ್ರವಿಣೋ ದದಾಶೋಷಾಗಾಸ್ತ್ವಮದಿತೇ ಸರ್ವತಾತಾ ।
ಯಂ ಭದ್ರೇಣ ಶವಸಾ ಚೋದಯಾಸಿ ಪ್ರಜಾವತಾ ರಾಧಸಾ ತೇ ಸ್ಯಾಮ ॥ ೧೫ ॥

ಪದಪಾಠ

ಯಸ್ಮೈ । ತ್ವಂ । ಸುಽದ್ರವಿಣಃ । ದದಾಶಃ । ಅನಾಗಾಃಽತ್ವಂ । ಅದಿತೇ । ಸರ್ವಽತಾತಾ ।

ಯಂ । ಭದ್ರೇಣ । ಶವಸಾ । ಚೋದಯಾಸಿ । ಪ್ರಜಾಽವತಾ । ರಾಧಸಾ । ತೇ । ಸ್ಯಾಮ

ಸಾಯಣಭಾಷ್ಯಂ

ಹೇ ಸುದ್ರವಿಣಃ ಶೋಭನಧನಾದಿತೇಽಖಂಡನೀಯೋಗ್ನೇ ಸರ್ವತಾತಾ ಸರ್ವಾಸು ಕರ್ಮತತಿಷು । ಯದ್ವಾ ಸರ್ವೇಷು ಯೆಜ್ಞೇಷು ವರ್ತಮಾನಾಯ ಯಸ್ಮೈ ಯಜಮಾನಾಯಾನಾಗಾಸ್ತ್ವಮಪಾಪಶ್ಚಂ ಪಾಪರಾಹಿತ್ಯೇನ ಕರ್ಮಾರ್ಹತಾಂ ತ್ವಂ ದದಾಶಃ ಪ್ರಯಚ್ಛಸಿ ಸ ಯಜಮಾನಃ ಸಮೃದ್ಧೋ ಭವತಿ । ಯಂ ಚ ಯಜಮಾನಂ ಭದ್ರೇಣ ಭಜನೀಯೇನ ಕಲ್ಯಾಣೇನ ಶವಸಾ ಬಲೇನ ಚೋದಯಾಸಿ ಸಂಯೋಜಯಸಿ ಸೋಽಪಿ ಸಮೃದ್ಧೋ ಭವತಿ । ವಯಂ ಚ ಸ್ತೋತಾರಃ ಪ್ರಜಾವತಾ ಪ್ರಜಾಭಿಃ ಪುತ್ರಪೌತ್ರೈರ್ಯುಕ್ತೇನ ತೇ ರಾಧಸಾ ತ್ವಯಾ ದತ್ತೇನ ಧನೇನ ಯುಕ್ತಾಃ ಸ್ಯಾಮ । ಭವೇಮ ॥ ಸುದ್ರವಿಣಃ । ಶೋಭನಾನಿ ದ್ರವಿಣಾನಿ ಧನಾನಿ ಯಸ್ಯ । ದ್ರು ಗತೌ । ದ್ರುದಕ್ಷಿಭ್ಯಾಮಿನನ್ । ಉ. ೨.೫೦ । ದ್ರವಿಣಶಬ್ದಸ್ಯಾಂತೇ ಮಕಾರೋಪಜನಶ್ಚಾಂದಸಃ । ದದಾಶಃ । ದಾಶೃ ದಾನೇ । ಲೇಟ್ಯಡಾಗಮಃ । ಬಹುಲಂ ಛಂದಸೀತಿ ಶಪಃ ಶ್ಲುಃ । ಅಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ । ಸರ್ವತಾತಾ । ಸರ್ವದೇವಾತ್ತಾತಿಲಿತಿ ಸ್ವಾರ್ಥೇ ತಾತಿಲ್ಪ್ರತ್ಯಯಃ । ಯಾಸ್ಯಪಸ್ಪೃತೇತು ಸರ್ವಾಃ ಸ್ತುತಯೋ ಯೇಷು ಯಾಗೇಷ್ವಿತಿ ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ವರ್ಣವ್ಯಾಪತ್ತ್ಯಾತ್ವೇಂ । ಉಭಯತ್ರಾಪಿ ಸುಪಾಂ ಸುಲಗಿತಿ ಸಪ್ತಮ್ಯಾ ಡಾದೇಶಃ । ಚೋದಯಾಸಿ । ಚುದ ಸ್ರೇರಣೇ। ಲೇಟ್ಯಾಡಾಗಮಃ ॥

ಪ್ರತಿಪದಾರ್ಥ

ಸುದ್ರವಿಣಃ— ಶ್ರೇಷ್ಠವಾದ ಧನವುಳ್ಳವನೂ । **ಅದಿತೇ**—ಅಖಂಡನೀಯನೂ ಆದ ಅಗ್ನಿಯೇ । **ಸರ್ವತಾತಾ**—ಸಕಲ ಕರ್ಮಗಳ ಗುಂಪಿನಲ್ಲೂ ಅಥವಾ (ಶ್ರದ್ಧೆಯಿಂದ) ಸಕಲ ಯಜ್ಞಗಳಲ್ಲಿಯೂ ಶ್ರದ್ಧೆಯಿಂದ ಇರತಕ್ಕ। **ಯಸ್ಮೈ**–ಯಾವ ಯಜಮಾನನಿಗೆ। **ಅನಾಗಾಸ್ತ್ವಂ**—ಪಾಪರಹಿತವಾದ (ಕರ್ಮಾರ್ಹತೆಯನ್ನು)। **ತ್ವಂ**—ನೀನು। **ದದಾಶಃ**— ಕೊಡುತ್ತೀಯೋ ಅವನೂ (ಮತ್ತು) । **ಯಂ**— ಯಾವ ಯಜಮಾನನನ್ನು । **ಭದ್ರೇಣ**—ಕಲ್ಯಾಣಾತ್ಮಕವಾದ । **ಶವಸಾ**— ಶಕ್ತಿಯಿಂದ । **ಚೋದಯಾಸಿ**—ಸೇರಿಸುತ್ತೀಯೋ ಅವನೂ (ಅಭಿವೃದ್ಧಿಯನ್ನು ಹೊಂದುವುದು ಖಂಡಿತ. ನಾವೂ ಸಹ) । **ಪ್ರಜಾವತಾ**— ಪುತ್ರಪೌತ್ರಾದಿಗಳಿಂದ ತುಂಬಿದ । **ತೇ ರಾಧಸಾ**—ನಿನ್ನಿಂದ ಕೊಡಲ್ಪಟ್ಟ ಧನದೊಂದಿಗೆ । **ಸ್ಯಾಮ**— (ಕೂಡಿಕೊಂಡು) ಇರುವಂತಾಗಲಿ.

ಭಾವಾರ್ಥ

ಶ್ರೇಷ್ಠವಾದ ಧನವುಳ್ಳವನೂ ಅಖಂಡನೀಯನೂ ಆದ ಎಲೈ ಅಗ್ನಿಯೇ, ಸಕಲ ಯಜ್ಞಕರ್ಮಗಳಲ್ಲೂ ಶ್ರದ್ಧೆಯಿಂದ ಇರತಕ್ಕ ಯಾವ ಯಜಮಾನನಿಗೆ ನೀನು ಪಾಪರಹಿತವಾದ ಕರ್ಮಾರ್ಹತೆಯನ್ನು ಕೊಡುತ್ತೀಯೋ ಅವನೂ, ಮತ್ತು ಯಾವ ಯಜಮಾನನನ್ನು ನೀನು ಕಲ್ಯಾಣಾತ್ಮಕವಾದ ಶಕ್ತಿಯಿಂದ ಸೇರಿಸುತ್ತೀಯೋ ಅವನೂ ಸಹ ಅಭಿವೃದ್ಧಿಯನ್ನು ಹೊಂದುವುದು ಖಂಡಿತ. ನಾವೂ ಸಹ ನಿನ್ನ ಅನುಗ್ರಹದಿಂದ ಪುತ್ರಪೌತ್ರಾದಿಗಳಿಂದ ಕೂಡಿದ ಧನದೊಂದಿಗೆ ಕೂಡಿಕೊಂಡು ಇರುವಂತಾಗಲಿ.

English Translation

Fortunate is the worshipper to whom (assiduous) in all pious works, you possessor of riches, indivisible Agni, grant exemption from sin, whom you associate with auspicious strength, may he be (enriched) by you with wealth that comprehends progeny.

॥ ವಿಶೇಷವಿಷಯಗಳು ॥

ಸುದ್ರವಿಣಃ—ಶೋಭನಧನಃ। ಶ್ರೇಷ್ಠವಾದ ಧನವುಳ್ಳವನೆಂದರ್ಥ. ಈ ವಿಶೇಷಣವು ಋಕ್ಸಂಹಿತೆಯಲ್ಲಿ ಅಗ್ನಿಪರ್ಯಾಯವಾಗಿ ಮಾತ್ರ ಉಪಯೋಗಿಸಲ್ಪಟ್ಟಿದೆ. ಈ ಋಕ್ಕಿಲ್ಲದೇ ಋ. ಸಂ- ೧೦-೬೧-೨೧ ನೇ ಋಕ್ಕಿನಲ್ಲಿಯೂ **ಈ** ವಿಶೇಷಣವು ಅಗ್ನಿಯ ಧನದ ವೈಶಿಷ್ಟ್ಯವನ್ನು ತೋರಿಸುತ್ತದೆ.

ಅದಿತೇ—ಅಖಂಡನೀಯಾಗ್ನೇ ಅಥವಾ **ಅದಿತೇಃ ಪುತ್ರ ಅಗ್ನೇ**। ಎಂದು ಎರಡು ವಿಧವಾದ ಅರ್ಥವನ್ನೂ ಮಾಡಬಹುದು. ಮೊದಲನೆಯದಾಗಿ **ಅದಿತಿ**ಯೆನ್ನುವುದಕ್ಕೆ **ಅದೀನಾ** ಎಂದು ಅರ್ಥಮಾಡಿದರೆ ದೀನವಲ್ಲದ್ದು, ಕ್ಷಯಿಸದಿರುವುದು ಎಂದಾಗುತ್ತದೆ. ಅಗ್ನಿಯು ಕ್ಷಯರಹಿತನು, ಮರಣರಹಿತನು ಎಂದು ಅನೇಕ ಕಡೆಗಳಲ್ಲಿ ಹೇಳಿದೆ.

ಅಗ್ನೇ ತ್ರಾತಾರಮಮೃತಂ ಮಿಯೇಧ್ಯ ಯಜಿಷ್ಠಂ ಹವ್ಯವಾಹನ।

(ಋ. ಸಂ. ೧-೪೪-೫)

ನೂ ಚಿತ್ಸಹೋಜಾ ಅಮೃತೋ ನಿ ತುಂದತೇ ಹೋತಾ ಯದ್ಪೂತೋ ಅಭವದ್ವಿವಸ್ವತಃ।

(ಋ. ಸಂ. ೧-೫೮-೧)

ಇತ್ಯಾದಿ ಅನೇಕಸನ್ನಿವೇಶಗಳಲ್ಲಿ ಅಗ್ನಿಯನ್ನು ಮರಣರಹಿತನೆಂದು ಹೇಳಿದೆ. ಆದ್ದರಿಂದಲೇ **ಅದಿತಿ**ಯೆಂದೂ ಹೇಳಬಹುದು. ಎರಡನೆಯದಾಗಿ ಅದಿತಿಯು **ದೇವಮಾತಾ** (ನಿ. ೪-೨೬) ದೇವತೆಗಳ ತಾಯಿ ಎಂದು ಹೇಳಿರುವುದರಿಂದ ಅಗ್ನಿಯೂ ಅದಿತಿಪುತ್ರನಾದನು. ಆದುದರಿಂದ **ಅದಿತೇ** ಎಂದರೆ ಅದಿತಿಪುತ್ರನೇ ಎಂದು ತಿಳಿಯಬೇಕೆಂದು ಸ್ಕಂದಸ್ವಾಮಿಗಳು ಹೇಳುತ್ತಾರೆ. ಅಥವಾ **ಅಗ್ನಿರಸ್ಯೆದಿತಿರುಚ್ಯತೇ** ಎಂದು ನಿರುಕ್ತಕಾರರು (ನಿ.೧೧-೨೪) **ಅದಿತಿ**

ಯೆಂಬುದು ಅಗ್ನಿಪರ್ಯಾಯ ಶಬ್ದವೆಂದೇ ಹೇಳಿ ಈ ಋಕ್ಕನ್ನೇ ಉದಹರಿಸುತ್ತಾರೆ. **ಅದಿತೇ** ಎಂದರೆ ಎಲೈ ಅಗ್ನಿಯೇ ಎಂದಾಗುತ್ತದೆ.

ಸರ್ವತಾತಾ—ನಿರುಕ್ತಕಾರರು ಈ ಋಕ್ಕನ್ನೇ ಉದಹರಿಸಿ **ಸರ್ವತಾತಾ** ಎಂಬ ಶಬ್ದವನ್ನು ವಿವರಿಸುವಾಗ **ಸರ್ವಾಸು ಕರ್ಮತಿಥಿಷು** ಸಕಲ ಯಜ್ಞಕರ್ಮಗಳ ಸಮೂಹದಲ್ಲಿ ಎಂದು ಅರ್ಥವನ್ನು ಮಾಡುತ್ತಾರೆ. (ನಿ.೧೧–೨೪) **ಸರ್ವತಾತಾ** ಎನ್ನುವ ಪದವು ಸಾಧಾರಣವಾಗಿ ಯಜ್ಞಪರ್ಯಾಯವಾಗಿ ಉಪಯೋಗಿಸಲ್ಪಟ್ಟಿದೆ. ಉದಾಹರಣೆಗೆ—

ದೇವಾನಾಂ ದೂತಃ ಪುರುಧ ಪ್ರಸೂತೋ೭ನಾಗಾನ್ನೋ ವೋಚತು ಸರ್ವತಾತಾ ।

(ಋ. ಸಂ. ೩–೫೪–೧೯)

ಶತತಮಂ ನೇಶ್ಯಂ ಸರ್ವತಾತಾ ದಿವೋದಾಸಮತಿಥಿಗ್ವಂ ಯದಾವಂ ।

(ಋ. ಸಂ. ೪-೨೬-೩)

ರಾಯೇ ಮಿತ್ರಾವರುಣಾ ಸರ್ವತಾತೇಳೇ ತೋಕಾಯ ತನಯಾಯ ಶಂ ಯೋಃ ।

(ಋ. ಸಂ. ೫-೬೯-೩)

ಎಂಬ ಋಕ್ಕುಗಳಲ್ಲಿಯೂ ಹೀಗೆಯೇ ೬–೧೫–೧೮ ; ೬–೧೮ ೧೯ ಇತ್ಯಾದಿ ಅನೇಕ ಋಕ್ಕುಗಳಲ್ಲಿಯೂ **ಸರ್ವತಾತಾ** ಶಬ್ದವು ಯಜ್ಞಪರ್ಯಾಯವಾಗಿ ಉಪಯೋಗಿಸಲ್ಪಟ್ಟಿದೆ. ಈ ಸಂದರ್ಭದಲ್ಲಿ ಸಕಲಕರ್ಮಗಳ ನಡುವೆಯೂ ಎಂದು ಅರ್ಥಮಾಡಬಹುದು.

ಅನಾಗಾಸ್ತ್ವಂ—ಪಾಪರಾಹಿತ್ಯವನ್ನು ಅಥವಾ ಪಾಪರಹಿತವಾದ ಕರ್ಮಾರ್ಹತೆಯನ್ನು ಎಂದರ್ಥವು. ಅಜ್ಞಾನದಿಂದ ಯಾವ ವಿಧವಾದ ಕರ್ಮಲೋಪಬಂದರೂ ಅಥವಾ ಇನ್ನು ಬೇರೆ ರೀತಿಯಾದ ನ್ಯೂನತೆಯಿದ್ದರೂ ಸಹ ಅಗ್ನಿಯು ಈ ದೋಷದಿಂದ ಬಿಡುಗಡೆಮಾಡಿಸುತ್ತಾನೆಂಬ ಶ್ರದ್ಧೆಯಿಂದ ಪದೇ ಪದೇ ಇಂತಹ ಪ್ರಾರ್ಥನೆಯು ಅಗ್ನಿಯನ್ನು ಕುರಿತು ಮಾಡಲ್ಪಟ್ಟಿದೆ. ಉದಾಹರಣೆಗೆ—

ಯಚ್ಚಿದ್ಧಿ ತೇ ಪುರುಷತ್ರಾ ಯವಿಷ್ಠ್ಯಾಚಿತ್ತಿಭಿಶ್ಚಕೃಮಾ ಕಚ್ಚಿದಾಗಃ ।
ಕೃಧೀ ಷ್ವಸ್ಮಾ ಅದಿತೇರನಾಗಾನ್ವೈತಾನಂಸಿ ಶಿಶ್ರಥೋ ವಿಷ್ವಗಗ್ನೇ ॥

(ಋ. ಸಂ. ೪-೧೨-೪)

ಯತ್ಸೀಮಾಗಶ್ಚಕೃಮಾ ತತ್ಸು ಮೃಳ ತದರ್ಯಮಾದಿತಿಃ ಶಿಶ್ರಥಂತು ।

(ಋ. ಸಂ ೭-೯೩-೭)

ಇತ್ಯಾದಿ ನಾನಾಸಂದರ್ಭಗಳಲ್ಲಿ ಸಕಲ ಪಾಪಗಳನ್ನು ನಾಶಮಾಡಬೇಕೆಂದು ಅಗ್ನಿಯನ್ನು ಕುರಿತು ಪ್ರಾರ್ಥನೆಯು ಅತ್ಯಂತ ಪಶ್ಚಾತ್ತಾಪ ಪೂರಿತವಾಗಿಯೂ ಶ್ರದ್ಧಾಯುಕ್ತವಾಗಿಯೂ ಇದೆ.

॥ ವ್ಯಾಕರಣಪ್ರಕ್ರಿಯಾ ॥

ಸುದ್ರವಿಣಃ—ಶೋಭನಾನಿ ದ್ರವಿಣಾನಿ ಧನಾನಿ ಯಸ್ಯ ಸಃ ಸುದ್ರವಿಣಃ. ದ್ರು ಗತೌ ಧಾತು. ಇದಕ್ಕೆ **ದ್ರುದಕ್ಷಿಭ್ಯಾಮಿನನ್**— (ಉ. ಸೂ. ೨-೨೦೪) ಎಂಬುದರಿಂದ ಇನನ್ ಪ್ರತ್ಯಯ. ದ್ರು ಎಂಬುದಕ್ಕೆ ಪ್ರತ್ಯಯ

ನಿಮಿತ್ತವಾಗಿ ಗುಣ, ಅವಾದೇಶ. ರೇಫನಿಮಿತ್ತವಿರುವುದರಿಂದ **ಅಟ್‌ಕುಪ್ವಾಙ್**—ಸೂತ್ರದಿಂದ ಪ್ರತ್ಯಯ, ನಕಾರಕ್ಕೆ ಣತ್ವ. ದ್ರವಿಣ ಎಂದು ರೂಪವಾಗುತ್ತದೆ. ಸಂಹಿತಾದಲ್ಲಿ ದ್ರವಿಣ ಶಬ್ದದ ಅಂತ್ಯದಲ್ಲಿ ಸಕಾರಾಗಮವು ಛಾಂದಸವಾಗಿ ಬರ್ಲುತ್ತದೆ. ಸಂಬುದ್ಧಿಯಲ್ಲಿ ಆಮಂತ್ರಿತಸಂಜ್ಞೆ ಬರುವುದರಿಂದ **ಆಮಂತ್ರಿತಸ್ಯ ಚ**—(ಪಾ. ಸೂ. ೮-೧-೧೯) ಎಂಬುದರಿಂದ ನಿಘಾತಸ್ವರ ಬರುತ್ತದೆ.

ದದಾಶಃ— ದಾಶೃ ದಾನೇ ಧಾತು. ಲೇಟ್ ಮಧ್ಯಮಪುರುಷ ಏಕವಚನದಲ್ಲಿ ಸಿಪ್ ಪ್ರತ್ಯಯ. **ಇತಶ್ಚ-ಲೋಪಃ ಪರಸ್ಮೈಪದೇಷು** ಎಂಬುದರಿಂದ ಇಕಾರ ಲೋಪ. **ಲೇಟೋಽಡಾಟೌ** ಎಂಬುದರಿಂದ ಅಡಾಗಮ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲು ಆದೇಶ **ಶ್ಲೌ** ಸೂತ್ರದಿಂದ ಧಾತುವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿ ಶೇಷ. ಹ್ರಸ್ವ. ದದಾಶಸ್ ಎಂದಿರುವಾಗ ರುತ್ವ ವಿಸರ್ಗ. **ಆಭ್ಯಸ್ತಾನಾಮಾದಿಃ** (ಪಾ ಸೂ. ೬-೧-೧೮೯) ಎಂಬುದರಿಂದ ಆದ್ಯುದಾತ್ತಸ್ವರ ಬರುತ್ತದೆ. ಯದ್ಯೋಗವಿರುವುದರಿಂದ ನಿಘಾತಸ್ವರ ಬರುವುದಿಲ್ಲ

ಸರ್ವತಾತಾ—**ಸರ್ವದೇವಾತಾತ್ತಿಲ್**— (ಪಾ. ಸೂ. ೪-೪-೧೪೨) ಎಂಬುದರಿಂದ ಸರ್ವಶಬ್ದದಮೇಲೆ ತಾತಿಲ್ ಪ್ರತ್ಯಯ. **ಲಿತಿ**— (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಪೂರ್ವಕ್ಕೆ ಉದಾತ್ತಸ್ವರ ಬರುತ್ತದೆ. ಯಾಸ್ಕ ಪಕ್ಷದಲ್ಲಿ ಸರ್ವಾಃ ಸ್ತುತಯಃ ಯೇಷು ಯಾಗೇಷು ಇತಿ ಸರ್ವತಾತಾ ಎಂದು ಬಹುವ್ರೀಹಿ ಸಮಾಸ. ಛಂದಸ್ಸಿನಲ್ಲಿ ವರ್ಣ ವ್ಯತ್ಯಯದಿಂದ ಲಿತ್ವ ಬರುತ್ತದೆ. **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುತ್ತದೆ. ಎರಡು ಪಕ್ಷಗಳಲ್ಲಿಯೂ **ಸುಪಾಂ ಸುಲುಕ್**– ಎಂಬುದರಿಂದ ಸಪ್ತಮಿಗೆ ಡಾದೇಶ ಬರುತ್ತದೆ.

ಚೋದಯಾಸಿ— ಚುದ ಪ್ರೇರಣೇ ಧಾತು. ಲೇಟ್ ಮಧ್ಯಮಪುರುಷಏಕವಚನದಲ್ಲಿ ಸಿಪ್ ಪ್ರತ್ಯಯ. ಚುರಾದಿಯಲ್ಲಿ ಸೇರಿರುವುದರಿಂದ **ಸತ್ಯಾಪಪಾಶ**—(ಪಾ. ಸೂ. ೩-೧-೨೫) ಎಂಬುದರಿಂದ ಸ್ವಾರ್ಥದಲ್ಲಿ ಣಿಚ್ ಪ್ರತ್ಯಯ. **ಪುಗಂತಲಘೂಪಧಸ್ಯ ಚ** ಎಂಬುದರಿಂದ ಣಿಚ್ ನಿಮಿತ್ತವಾಗಿ ಧಾತುವಿನ ಲಘೂಪಧೆಗೆ ಗುಣ. **ಲೇಟೋಽಡಾಟೌ** ಎಂಬುದರಿಂದ ಅಡಾಗಮ. ಪ್ರತ್ಯಯನಿಮಿತ್ತವಾಗಿ ಣಿಚಿಗೆ ಗುಣ. ಆಯಾದೇಶ. ಯಮ್ ಎಂದು ಹಿಂದೆ ಯಚ್ಛಬ್ದಸಂಬಂಧವಿರುವುದರಿಂದ ನಿಘಾತ ಸ್ವರ ಬರುವುದಿಲ್ಲ. ಸ್ವರದಿಂದ ದಕಾರೋತ್ತರಾಕಾರವು ಉದಾತ್ತವಾಗುತ್ತದೆ.

ಪ್ರಜಾವತಾ— ಪ್ರಜಾಃ ಅಸ್ಯ ಸಂತಿ ಇತಿ ಪ್ರಜಾವಾನ್. **ತದಸ್ಯಾಸ್ತೀ**—ಸೂತ್ರದಿಂದ ಮತುಪ್ ಅಕಾರದ ಪರದಲ್ಲಿ ಮತುಪ್ ಬಂದುದರಿಂದ **ಮಾದುಪಧಾಯಾಶ್ಚ**—ಎಂಬುದರಿಂದ ಮಕಾರಕ್ಕೆ ವಕಾರಾದೇಶ. ತೃತೀಯಾ ಏಕವಚನಾಂತರೂಪ.

संहिताऽऽर्षः

स त्वमग्ने सौभगत्वस्य विद्वानस्माकमायुः प्र तिरेह देव।
तन्नो मित्रो वरुणो ममहन्तामदितिः सिन्धुः पृथिवी उत द्यौः ॥८६॥

॥ पदपाठः ॥

सः। त्वं। अग्ने। सौभगऽत्वस्य। विद्वान्। अस्माकं। आयुः।
प्र। तिर। इह। देव।
तत्। नः। मित्रः। वरुणः। ममहन्ताम्। अदितिः। सिन्धुः। पृथिवी। उत। द्यौः ॥ ८६ ॥

सायणभाष्यं

हे देव दानादिगुणयुक्ताग्ने स पूर्वोक्तगुणविशिष्टस्त्वं सौभगत्वस्य सुभगत्वं सौभाग्यं विद्वान् जानन् इहास्मिन्कर्मण्यस्माकमायुः प्र तिर। प्रवर्धय। प्रपूर्वस्तिरतिर्वर्धनार्थः। त्वया प्रवर्धितं नोऽस्माकं तदायुर्मित्रादयः षड्देवता ममहन्ताम्। पूजयन्तां। रक्षन्त्वित्यर्थः। मित्रः प्रमीतेस्त्रायता वरुणोऽनिष्टानां निवारयिता अदितिरदीनाखण्डनीया वा देवमाता सिन्धुः स्यन्दनशीलोदकात्मा देवता पृथिवी प्रथिता भूदेवता। उतेति समुच्चये। द्यौः प्रकाशमाना द्युलोकात्मा देवता। एताश्च सर्वा अग्निना प्रवर्धितमायुर्ममहन्तामिति पूर्वत्रान्वयः॥ सौभगत्वस्य। सुभगस्य भावः सौभगं। सुभगात्मन्त्र इत्यद्गात्त्र्यादिषु पाठाद्भावेऽञ्। पुनरपि भावस्यैत्योत्पत्तिश्छान्दसी। ममहन्ताम्। मह पूजायां। भौवादिकः। लोटि बहुलं छन्दसीति शपः श्लुः। तुजादित्वादभ्यासस्य दीर्घत्वं॥

ಪ್ರತಿಪದಾರ್ಥ ॥

ದೇವ—ದಾನಾದಿಗುಣಗಳಿಂದ ಕೂಡಿದ **ಅಗ್ನೇ**—ಎಲೈ ಅಗ್ನಿಯೇ । **ಸಃ**—ಸಕಲಗುಣಪೂರಿತನಾದ । **ತ್ವಂ**—ಳ ನೀನು । **ಸೌಭಗತ್ವಸ್ಯ**— ಸೌಭಾಗ್ಯದ ಸ್ವರೂಪವನ್ನು । **ವಿದ್ವಾನ್**— ತಿಳಿದುಕೊಂಡು । **ಇಹ**—ಈ **ಯಜ್ಞಕರ್ಮದಲ್ಲಿ । ಅಸ್ಮಾಕಂ ಆಯುಃ**—ನಮ್ಮ ಆಯಸ್ಸನ್ನು । **ಪ್ರ ತಿರ**—ಬೆಳೆಸು । **ನಃ**—(ಅಂತಹ) ನಮ್ಮ । **ತತ್**—ಆ ಆಯುಸ್ಸನ್ನು । **ಮಿತ್ರಃ**—(ರಕ್ಷಕನಾದ) ಮಿತ್ರನೂ । **ವರುಣಃ**—(ಅನಿಷ್ಟಗಳನ್ನು ನಾಶಮಾಡುವ) । ವರುಣನೂ । **ಅದಿತಿಃ**— ಅಖಂಡಳಾದ ದೇವಮಾತೆಯೂ । **ಸಿಂಧುಃ**— ಪ್ರವಹಿಸುವ ನದೀ ದೇವತೆಯೂ । **ಪೃಥಿವೀ**—ವಿಸ್ತಾರವಾದ ಭೂಮಾತೆಯೂ । **ಉತ**—ಮತ್ತು । **ದ್ಯೌಃ**—ಪ್ರಕಾಶಮಾನವಾದ ದ್ಯುಲೋಕಾಧಿದೇವತೆಯೂ । **ಮಮಹಂತಾಂ**—ರಕ್ಷಿಸಲಿ ॥

॥ ಭಾವಾರ್ಥ ॥

ದಾನಾದಿಗುಣಗಳಿಂದ ಕೂಡಿದ ಎಲೈ ಅಗ್ನಿಯೇ, ಸಕಲಗುಣಪೂರಿತನಾದ ನೀನು ಸೌಭಾಗ್ಯದ ಸ್ವರೂಪವನ್ನು ತಿಳಿದುಕೊಂಡು ಈ ಯಜ್ಞಕರ್ಮದಲ್ಲಿ ನಮ್ಮ ಆಯಸ್ಸನ್ನು ಬೆಳೆಸು. ನಮ್ಮ ಆಯಸ್ಸನ್ನು ಮಿತ್ರನೂ, ವರುಣನೂ, ಅದಿತಿಯೂ ಸಾಗರಾಧಿದೇವತೆಯೂ, ಭೂಮಾತೆಯೂ ಮತ್ತು ದ್ಯುಲೋಕಾಧಿದೇವತೆಯೂ ಸಹ ವೃದ್ಧಿಪಡಿಸಿ ರಕ್ಷಿಸಲಿ.

English Translation

Divine Agni, do you who know what is good fortune on this occasion, prolong our existence, and may Mitra, Varuna, Aditi, ocean, earth and heaven preserve it to us.

॥ ವಿಶೇಷವಿಷಯಗಳು ॥

ಸ ತ್ವಮಗ್ನೇ—ಅಂತಹ ನೀನು ಎಂದು ಹೇಳಿರುವುದರಿಂದ ಹಿಂದೆ ಹೇಳಿದ ಗುಣಗಳಿಂದ ಕೂಡಿದ ನೀನು ಎಂದರ್ಥ. ಎಂದರೆ ಹಿಂದಿನ ಋಕ್ಕುಗಳಲ್ಲಿ

ದೇವೋ ದೇವಾನಾಮಸಿ ಮಿತ್ರೋ ಅದ್ಭುತೋ ವಸುರ್ವಸೂನಾಮಸಿ ಚಾರುರಧ್ವರೇ ।

(ಋ. ಸಂ. ೧-೯೪-೧೩)

ತತ್ತೇ ಭದ್ರಂ ಯತ್ಸಮಿದ್ಧಃ ಸ್ವೇ ದಮೇ ಸೋಮಾಹುತೋ ಜರಸೇ ಮೃಳಯೇತ್ತಮಃ ।
ದಧಾಸಿ ರತ್ನಂ ದ್ರವಿಣಂ ಚ ದಾಶುಷೇ ತ್ವಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥

(ಋ. ಸಂ. ೧-೯೪-೧೪)

ಎಂಬುದಾಗಿ ದೇವತೆಗಳ ಮತ್ತು ಮಾನವರ ಸಕಲಸೌಭಾಗ್ಯಕ್ಕೂ ಕಾರಣನಾದ ಅಗ್ನಿಯೇ ಎಂದು ಸಂಬೋಧನೆ ಮಾಡಲಾಗಿದೆ.

ಸೌಭಗತ್ವಸ್ಯ ವಿದ್ವಾನ್—**ಸುಭಗಸ್ಯ ಭಾವಃ ಸೌಭಗಂ । ತಸ್ಯ ಭಾವಃ ।** ಎಂದರೆ ಸಕಲಸೌಭಾಗ್ಯ ಸಂಪತ್ತುಗಳನ್ನೂ ತಿಳಿದವನಾಗಿ ; **ಜಾತವೇದಾಃ** ಇತ್ಯಾದಿ ತೃತೀಯಪಾದದಲ್ಲಿ ಶೇಷಣಗಳಿಂದ ಅಗ್ನಿಯ ಸರ್ವಜ್ಞತ್ವವನ್ನು ವರ್ಣಿಸಿರುವುದರಿಂದ ಯಜ್ಞಕರ್ತರಶ್ರದ್ಧಾ ಭಕ್ತಿಗಳನ್ನೂ, ಅವರ ಕರ್ತವ್ಯತತ್ಪರತೆಯನ್ನೂ ಆಯಾ ಸತ್ಕರ್ಮಗಳಿಗೆ ತಕ್ಕ ಫಲಗಳನ್ನೂ ಸಂಪೂರ್ಣವಾಗಿ ತಿಳಿದು ಸಕಲ ಸೌಭಾಗ್ಯ ಸಂಪತ್ತುಗಳನ್ನು ಅವರಿಗೆ ಒದಗಿಸುತ್ತಾ.

ಅಸ್ಮಾಕಮಾಯುಃ ಪ್ರ ತಿರ— ನಮ್ಮ ಆಯುಸ್ಸನ್ನು ವೃದ್ಧಿಯಾಗುವಂತೆ ಮಾಡು. **ಪ್ರ ತಿರ** ಶಬ್ದಕ್ಕೆ **ಪ್ರವರ್ಧಯ** ಎಂದು ನಿರುಕ್ತಕಾರರು ವಿವರಿಸಿ (ನಿ. ೧೦-೪೦) ಋಕ್ಸಂಹಿತೆಯ —

ಅಸುನೀತೇ ಮನೋ ಅಸ್ಮಾಸು ಧಾರಯ ಜೀವಾತವೇ ಸು ಪ್ರ ತಿರಾ ನ ಆಯುಃ ।

(ಋ. ಸಂ. ೧೦-೫೯-೫)

ಎಂಬ ಋಕ್ಕನ್ನು ಉದಹರಿಸಿ ತೋರಿಸುತ್ತಾರೆ. ಇದರಂತೆಯೇ ಅನೇಕಸಂದರ್ಭಗಳಲ್ಲಿ ನಮ್ಮ ಆಯುಸ್ಸನ್ನು ಬೆಳೆಸು, ನಾವು ದೀರ್ಘಕಾಲ ಜೀವಿಸುವಂತಾಗಲಿ ಎಂದರ್ಥವನ್ನು ಕೊಡುತ್ತದೆ. ಅದರಂತೆ ಇಲ್ಲಿಯೂ **ಅಸ್ಮಾಕಮಾಯುಃ ಪ್ರ ತಿರ** ಎಂದರೆ ನಮ್ಮ ಆಯುಸ್ಸು ವೃದ್ಧಿಯಾಗುವಂತೆ ಮಾಡು ಎಂದರ್ಥ.

ತನ್ನೋ ಮಿತ್ರೋ ವರುಣೋ ಮಾಮಹಂತಾಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥ ಈ ದೇವತೆಗಳೆಲ್ಲರೂ ಸಪ ಅಗ್ನಿಯಿಂದ ಅನುಗೃಹೀತವಾದ ನಮ್ಮ ಸೌಭಾಗ್ಯಸಂಪತ್ತುಗಳನ್ನು ಬೆಳೆಸಲಿ, ಪೂಜ್ಯವಾಗುವನ್ನಾಗಿ ಮಾಡಲಿ. ಅವು ನಮ್ಮ ಭಾಗಕ್ಕೆ ಶ್ರೇಯಸ್ಕರಗಳಾಗುವಂತೆ ಮಾಡಲಿ. ಇದು ಈ ಸೂಕ್ತದ ಕೊನೆಯ ಪ್ರಾರ್ಥನೆ. ಸೂಕ್ತದ ಆದಿಯಿಂದ ಇಲ್ಲಿಯ ವರೆಗೆ ಅಗ್ನಿದೇವತಾಕವಾಗಿದ್ದು, ಸೂಕ್ತದ ಕೊನೆಯ ಅರ್ಧದಲ್ಲಿ ಈ ವಿಧವಾಗಿ ಸರ್ವದೇವತಾಕವಾದ ಪ್ರಾರ್ಥನೆಯು ಕುತ್ಸಋಷಿಗಳ ಕೃತಿಯ ವೈಶಿಷ್ಟ್ಯವು. ಈ ವೈಶಿಷ್ಟ್ಯವು ಭಾರದ್ವಾಜ, ಗೃತ್ಸಮದ ಇತ್ಯಾದಿ ಋಷಿಗಳ ಕೃತಿಗಳಲ್ಲೂ ಕಂಡು ಬರುತ್ತದೆ. ಇದಕ್ಕೆ **ಉದರ್ಕ**ನೆಂದು ಪಾರಿಭಾಷಿಕ ವಚನವು ಪ್ರಸಿದ್ಧವಾಗಿದೆ. ಕುತ್ಸಋಷಿಗಳ **ಉದರ್ಕ**ವನ್ನು ಬೃಹದ್ದೇವತೆಯು ಈ ರೀತಿ ಪ್ರಶಂಸಿಸಿದೆ

ಇಮಂ ಕುತ್ಸ ಆಂಗಿರಸೋ ದದರ್ಶ ಜಾತವೇದಸ್ಯಂ ಜಗಾದ ಸೋಳಶರ್ಚಂ ।
ಪೂರ್ವೋ ದೇವಾ ಇತ್ಯೃಚೋ ದೇವದೇವಾಸ್ತ್ರಯಃ ಪಾದಾ ಉತ್ತಮಾಯಾ ಸ್ತತೋಽರ್ಧಂ ॥

ತಸ್ಯೈವ ನಾ ಯಸ್ಯ ತತ್ಪೂರ್ವಸೂಕ್ತಂ ಮಿತ್ರಾದಿಭ್ಯೋ ವಾತ್ರ ಷಡ್ಭಿಃ ಪ್ರಕೃತಾಭ್ಯಃ ।
ಅಂತ್ಯೋಽರ್ಧರ್ಚಸ್ತು ವಾ ಷಣ್ಣಾಂ ಸ್ತುತಾನಾಂ ಪೂರ್ವೋ ದೇವಾಃ ಪಾದೈಸ್ತು ದ್ರಿಭಿಃ ಸ್ತುತಾಃ॥

ಭರದ್ವಾಜೇ ಗೃತ್ಸಮದೇ ವಸಿಷ್ಠೇ ನೋಧಸ್ಯೇಗಸ್ತ್ಯೇ ವಿಮದೇ ನಭಾಕೇ ।
ಕುತ್ಸೇ ನೋದರ್ಕಾ ಬಹುದೈವತೇಷು ತಥಾ ದ್ವಿದೇವೇಷು ಸಮಾನಧರ್ಮಾಣಃ ॥

(ಬೃಹದ್ದೇವತಾ III. 126—128)

ಕುತ್ಸ ಆಂಗಿರಸನು ಈ ಸೂಕ್ತದ (೧–೪ಳ) ನವನ್ನು ಪಡೆದು ಹದಿನಾರು ಋಕ್ಕುಗಳುಳ್ಳ ಈ ಸೂಕ್ತವನ್ನು ಜಾತವೇದಸ್ಸಿನ ಪರವಾಗಿ ಪಠಿಸಿದನು. **ಪೂರ್ವೋ ದೇವಃ** ಎಂಬ ಎಂಟನೇ ಋಕ್ಕಿನ ಮೊದಲು ಮೂರು ಪಾದಗಳೂ, ಕೊನೆಯ ಋಕ್ಕಿನ ಉತ್ತರಾರ್ಧವೂ ಬಹುದೇವತಾಕವಾಗಿದೆ. ಭರದ್ವಾಜ, ಗೃತ್ಸಮದ. ವಸಿಷ್ಠ, ನೋಧಾಃ, ಅಗಸ್ತ್ಯ, ವಿಮದ, ನಭಾಕ ಇವರ ಸೂಕ್ತಗಳಲ್ಲಿಯೂ **ಉದರ್ಕ**ಗಳಿದ್ದರೂ ಸಹ ಅವು ಬಹುದೇವತಾಕವಾಗಿರಲಿ, ದ್ವಿದೇವತಾಕವಾಗಿರಲಿ ಕುತ್ಸಋಷಿಯ **ಉದರ್ಕ**ದಲ್ಲಿರುವ ಪಲ್ಲವಿಯ ಸಮಾನ ಧರ್ಮವನ್ನು ಹೊಂದಿರುವುದಿಲ್ಲ, ಎಂದು ಕುತ್ಸಋಷಿಯ ಕೃತಿಯಲ್ಲಿ ವೈಶಿಷ್ಟ್ಯವನ್ನು ತೋರಿಸಲಾಗಿದೆ.

ಒಟ್ಟಿನಲ್ಲಿ ಎಂಟು ಋಷಿಗಳ ಕೃತಿಗಳಲ್ಲಿ ಈ ವಿಧವಾದ ಉದರ್ಕವು ಸೂಕ್ತಗಳ ಕೊನೆಯಲ್ಲಿ ಪಠಿತವಾಗಿವೆ. ಆದರೆ ಯಾವ ಋಷಿಯ ಸೂಕ್ತದ ಕೊನೆಯ ಅರ್ಧವೂ ಬಹುದೇವತಾಕವಾಗಿಲ್ಲ. ಈ ಅಂಶವನ್ನು ಉದಾಹರಣೆಗಳೊಂದಿಗೆ ಮುಂದಿನ ಸೂಕ್ತದ ವಿವರಣೆಯಲ್ಲಿ ವಿಶದವಾಗಿ ವಿಮರ್ಶಿಸಲಾಗುವುದು

ವ್ಯಾಕರಣಸ್ಯ ಕ್ರಿಯಾ

ಸೌಭಗತ್ವಸ್ಯ—ಸುಭಗಸ್ಯ ಭಾವಃ ಸೌಭಗಮ್. **ಸುಭಗಾನ್ಮಂತ್ರೇ**—ಎಂದು ಉದ್ಗಾತ್ರಾದಿಯಲ್ಲಿ ಪಾಠ ಮಾಡಿರುವುದರಿಂದ ಭಾವಾರ್ಥದಲ್ಲಿ ಫಞ್ ಪ್ರತ್ಯಯ. ಞಿತ್ತಾದುದರಿಂದ ಆದಿವೃದ್ಧಿ ಬರುತ್ತದೆ. ಸೌಭಗವೆಂದರೇ ಭಾವಾರ್ಥ ತೋರುತ್ತಿರುವಾಗ ತಿರುಗಿ ಭಾವಾರ್ಥಕ ತ್ವಪ್ರತ್ಯಯವನ್ನು ಸೌಭಗ ಶಬ್ದದ ಮೇಲೆ ಛಾಂದಸವಾಗಿ ಸ್ವೀಕರಿಸಬೇಕು. ಪ್ರತ್ಯಯಸ್ವರದಿಂದ ಅಂತೋದಾತ್ತವಾಗುತ್ತದೆ.

ತಿರ—ಪ್ರ ಪೂರ್ವವಾದ ತಿರ ಧಾತುವು ವೃದ್ಧ್ಯರ್ಥದಲ್ಲಿದೆ. ಲೋಟ್. ಮಧ್ಯಮಪುರುಷ, ಏಕವಚನರೂಪ. ತಿಙಂತನಿಘಾತಸ್ವರ ಬರುತ್ತದೆ.

ಮಮಹಂತಾಮ್—ಮಹ ಪೂಜಾಯಾಂ ಧಾತು. ಭ್ವಾದಿ. ಲೋಟ್ ಪ್ರಥಮಪುರುಷ ಬಹುವಚನದಲ್ಲಿ ಝಿ ಪ್ರತ್ಯಯ. **ಝೋಂತೇಃ** ಎಂಬುದರಿಂದ ಅಂತಾದೇಶ **ಅಮೇತಃ** (ಪಾ.ಸೂ·೩.೪-೯೦) ಎಂಬುದರಿಂದ ಲೋಟನಲ್ಲಿ ಬಂದ ಏತ್ವಕ್ಕೆ ಅನಾದೇಶ. **ಬಹುಲಂ ಛಂದಸಿ** ಎಂಬುದರಿಂದ ಶಪಿಗೆ ಶ್ಲು ಆದೇಶ. **ಶ್ಲೌ** ಎಂಬುದರಿಂದ ಧಾತು ವಿಗೆ ದ್ವಿತ್ವ. ಅಭ್ಯಾಸಕ್ಕೆ ಹಲಾದಿಶೇಷ. ತುಜಾದಿಯಲ್ಲಿ ಸೇರಿರುವುದರಿಂದ **ತುಜಾದೀನಾಂ ದೀರ್ಘೋಽಭ್ಯಾಸಸ್ಯ** (ಪಾ. ಸೂ. ೬–೧–೭) ಎಂಬುದರಿಂದ ಅಭ್ಯಾಸಕ್ಕೆ ದೀರ್ಘ. ಅತಿಙಂತದ ಪರದಲ್ಲಿರುವುದರಿಂದ ನಿಘಾತಸ್ವರ ಬರುತ್ತದೆ. ॥ ೧೬ ॥

೯೪ ನೇ ಸೂಕ್ತವು ಸಮಾಪ್ತವಾಗಿದೆ.

वेदार्थस्य प्रकाशेन तमोऽहार्दं निवारयेत् ।
पुमर्थांश्चतुरो देयाद्विद्यातीर्थमहेश्वरः ॥

इति श्रीमद्राजाधिराजपरमेश्वरवैदिकमार्गप्रवर्तकश्रीवीरबुक्कमहीपालसाम्राज्य-

धुरंधरेण सायणाचार्येण विरचिते माधवीये वेदार्थप्रकाशे

ऋक्संहिताभाष्ये प्रथमाष्टके षष्ठोऽध्यायः समाप्तः

श्रीः

॥ ॐ तत्सत् ॥

ಇಲ್ಲಿಗೆ ಶ್ರೀಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ

ಋಗ್ವೇದಸಂಹಿತೆಯ ಪ್ರಥಮಾಷ್ಟಕದಲ್ಲಿ

ಆರನೆಯ ಅಧ್ಯಾಯವು ಸಮಾಪ್ತವಾದುದು.

——:o:——

यदक्षरपदभ्रष्टं मात्राहीनं तु यद्भवेत् ।
तत्सर्वं क्षम्यतां देव वागीश्वर नमोऽस्तु ते ॥

॥ शुभं भूयात् ॥

॥ मंगळं ॥